
# ಫ್ಯೋದರ್ ದಸ್ತ್ಯಯೇವ್‌ಸ್ಕಿ

## ನೀಳ್ಗತೆಗಳು





ಫ್ಯೋದರ್ ದಸ್ತಯೇವ್‌ಸ್ಕಿ.

# ಫ್ಯೋದರ್ ದಸ್ತ್ಯೆಯೇವ್‌ಸ್ಕಿ

# ನೀಳ್ಗತೆಗಳು

ರಾದುಗ ಪ್ರಕಾಶನ

ಮಾಸ್ಕೋ

Федор Достоевский

ПОВЕСТИ И РАССКАЗЫ

*на языке каннада*

**Fyodor Dostoyevsky**
STORIES
***in Kannada***

ಅನುವಾದ: ಕೆ. ಎಲ್. ಗೋಪಾಲಕೃಷ್ಣರಾವ್

© ಕನ್ನಡ ಭಾಷಾಂತರ ರಾದುಗ ಪ್ರಕಾಶನ, 1983

ಸೋವಿಯತ್ ಒಕ್ಕೂಟದಲ್ಲಿ ಮುದ್ರಿತವಾದುದು

$Д \frac{70301-287}{031(01)-83} 283-83$ 4702010100

# ಪರಿವಿಡಿ

# ದಸ್ತಯೇವ್‌ಸ್ಕಿ
# (ಲೇಖಕರ ಕುರಿತು)

I

ಈ ಲೇಖಕರು ತಮ್ಮ ಕೃತಿಗಳಲ್ಲಿ ಮಾನವಕುಲದ ಎಲ್ಲ ಅಪಾರ ನೋವು ಸಂಕಟಗಳನ್ನೂ ವ್ಯಕ್ತಪಡಿಸಲು ಸಾಧ್ಯ ಮಾಡಿಕೊಡಲೆಂದು ವಿಧಿಯೇ ಈ ಲೇಖಕರ ಜೀವನದ ಅಸಾಧಾರಣ ಪರಿಸ್ಥಿತಿಗಳನ್ನು ಸಿದ್ಧಪಡಿಸಿಕೊಟ್ಟಿದ್ದಿತೆಂದೇ ಹೇಳಬಹುದು.

ರಷ್ಯನ್ ಸಾಹಿತ್ಯದ ಪ್ರತಿಭಾನ್ವಿತ ಬರಹಗಾರ ಫ್ಯೋದರ್ ದಸ್ತಯೇವ್‌ಸ್ಕಿಯುವರ ಜೀವನದ ಹಿನ್ನೆಲೆ ಹೀಗಿದ್ದಿತು. ರಷ್ಯನ್ ಸಾಹಿತ್ಯ ಚರಿತ್ರೆಯು ಅನೇಕ ಸಾಹಿತಿಗಳ ದುರಂತ ಬಾಳುವೆಗಳನ್ನು ತಿಳಿದಿದ್ದಿತು. ಬೇರೆ ಯಾವುದೇ ಸಾಹಿತ್ಯ ತಿಳಿದಿದ್ದುದಕ್ಕಿಂತ ಹೆಚ್ಚಾಗಿಯೇ ತಿಳಿದಿದ್ದಿತು. ಅದರ ಇಬ್ಬರು ಮಹೋನ್ನತ ಕವಿಗಳು – ಪೂಷ್ಕಿನ್ ಹಾಗೂ ಲೇರ್ಮಂತೊವ್ – ದ್ವಂದ್ವಯುದ್ಧದಲ್ಲಿ ಸಾವಿಗೀಡಾದರು. ಕವಿ ರ್‍ಯಿಲೇಯೆವ್‌ನನ್ನು ಗಲ್ಲಿಗೇರಿಸಲಾಯಿತು. ಕ್ರಾಂತಿಕಾರಿ ಸಾಹಿತಿ ಚೆರ್ನಿಷೇವ್‌ಸ್ಕಿ ಸೈಬೀರಿಯಾದಲ್ಲಿ ಇಪ್ಪತ್ತು ವರ್ಷಗಳ ಕಾಲ ದೇಶಾಂತರ ವಾಸ ಮಾಡುತ್ತ ಸೊರಗಬೇಕಾಯಿತು; ಹೆರ್ತ್ಸೆನ್, ಸಾಲ್ತ್ಯಿಕೋವ್-ಷೆದ್ರಿನ್, ಕರಲೆಂಕೊ – ಇವರೆಲ್ಲ ಗಡೀಪಾರು ಶಿಕ್ಷೆಗೊಳಗಾಗಿದ್ದರು. ಆದರೂ ಈ ಹಿನ್ನೆಲೆಯಲ್ಲೂ ದಸ್ತಯೇವ್‌ಸ್ಕಿಯುವರ ಜೀವನವು ದುರಂತ ಪರಿಸ್ಥಿತಿಗಳ ಸಂಕಲನವಾಗಿ ಎದ್ದು ಕಾಣುತ್ತದೆ. ಫ್ಯೋದರ್ ದಸ್ತಯೇವ್‌ಸ್ಕಿಯುವರು ಹುಟ್ಟಿದ್ದು **1821**ರಲ್ಲಿ, ಮಾಸ್ಕೋದ ಬಡ ಜನರಿಗಾಗಿದ್ದ ಮಾರಿಯಿನ್‌ಸ್ಕಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ಸಾಮಾನ್ಯ ವೈದ್ಯರೊಬ್ಬರ ಕುಟುಂಬದಲ್ಲಿ. ಆ ಕುಟುಂಬದಲ್ಲಿ ಏಳು ಮಕ್ಕ

ದರು. ದಸ್ತಯೇವ್‌ಸ್ಕಿಯವರ ತಾಯಿ ಸೂಕ್ಷ್ಮ ದೇಹಪ್ರಕೃತಿಯ, ಧಾರ್ಮಿಕ ಸ್ವಭಾವದ, ಕೋಮಲ ಹೃದಯದ ಹೆಂಗಸು, 33ನೆಯ ವಯಸ್ಸಿನಲ್ಲೇ, 1837ರಲ್ಲಿ. ಕ್ಷಯರೋಗದಿಂದ ತೀರಿಹೋದರು. ಪತಿಯ ನಿಷ್ಠುರತೆ, ಕೃಪಣತನ ಹಾಗೂ ಪಾಶವೀ ಅಸೂಯೆಯ ಫಲವಾಗಿ ಆಕೆಯ ಜೀವನ ಸಂಕಟ ಯಾತನೆ ಹಾಗೂ ಕಾತುರಗಳಿಂದ ತುಂಬಿದ್ದಿತು. ದಸ್ತಯೇವ್‌ಸ್ಕಿಯವರ ತಂದೆ ತಮ್ಮ ಜೀವನದ ಕೊನೆಯ ಭಾಗದಲ್ಲಿ ತೂಲಾ ಪ್ರಾಂತದಲ್ಲಿ ಒಂದು ಸಣ್ಣ ಎಸ್ಟೇಟನ್ನು ಕೊಂಡರು. ಅಲ್ಲಿ ಕೆಲವು ವರ್ಷಗಳನಂತರ ಅವರು 1839ರಲ್ಲಿ ನಿರ್ದಯ ವರ್ತನೆಯಿಂದಾಗಿ ತಮ್ಮ ಜೀತದಾಳುಗಳಿಂದಲೇ ಕೊಲ್ಲಲ್ಪಟ್ಟರು. ಆಗ ಈ ಭಾವಿ ಸಾಹಿತಿಗೆ ಹದಿನೆಂಟು ವರ್ಷ ವಯಸ್ಸು. ಅವರಿಗೆ ಮೂರ್ಛೆರೋಗ ತಗುಲಿದುದಕ್ಕೆ ಇದೇ ಕಾರಣವಾಗಿದ್ದಿತೆಂದು ಅವರ ಜೀವನಕಥೆ ರಚಿಸಿರುವವರಲ್ಲಿ ಕೆಲವರು ನಂಬಿದ್ದಾರೆ.

'ಕಿಶೋರ' ಎಂಬ ಕಾದಂಬರಿಯ ಹಸ್ತಪ್ರತಿಯಿಂದ ಈ ಕೆಳಗಿನ ಉದ್ಧೃತ ಭಾಗ ಯುವ ದಸ್ತಯೇವ್‌ಸ್ಕಿಯ ಮನಸ್ತತ್ವದ ಬಗೆಗೆ ನಮಗೆ ಸ್ವಲ್ಪ ತಿಳಿಸುತ್ತದೆ: "ಕೆಲವು ಮಕ್ಕಳಿರುತ್ತಾರೆ, ಅವರು ಎಳೆಯ ವಯಸ್ಸಿನಿಂದಲೇ ತಮ್ಮ ಕುಟುಂಬಗಳ ಬಗೆಗೆ ಚಿಂತಿಸತೊಡಗುತ್ತಾರೆ, ಕೊರಗತೊಡಗುತ್ತಾರೆ, ತಮ್ಮ ತಂದೆಯರ ಹಾಗೂ ತಮ್ಮ ಸುತ್ತಮುತ್ತ ಇರುವ ಕುಟುಂಬಗಳ ತಂದೆಯರ ಅನುಚಿತ ವರ್ತನೆಯನ್ನು ಕಂಡು ಆಘಾತಕ್ಕೊಳಗಾಗುತ್ತಾರೆ. ಎಲ್ಲಕ್ಕೂ ಮಿಗಿಲಾಗಿ ಅವರು ಬಾಲ್ಯದಿಂದಲೇ ತಮ್ಮ ಜೀವನದ ಅಡಿಪಾಯ ಅವ್ಯವಸ್ಥಿತವಾದುದು, ಆಕಸ್ಮಿಕಕ್ಕೆ ಒಳಗಾದುದು ಎಂದೂ, ಅದು ಕೌಟುಂಬಿಕ ಪರಂಪರೆಯಾಗಲೀ ಸುಸ್ಥಾಪಿತ ಪದ್ಧತಿಗಳಾಗಲೀ ಇಲ್ಲದುದೆಂದೂ ಭಾವಿಸಲು ಪ್ರಾರಂಭಿಸುತ್ತಾರೆ."

ತಮ್ಮ ಬಾಲ್ಯದಲ್ಲಿ ತಾವು ಒಳಗಾದ ಈ ಸಂಕಟಭರಿತ ಗೌರವರಹಿತ ಅನುಭವವನ್ನಾಗಲೀ ಅನಂತರ ಯೌವನದಲ್ಲಿ ಎಂಜಿನಿಯರಿಂಗ್ ಶಾಲೆಯಲ್ಲಿ ಅಭ್ಯಸಿಸಿದ ಆರು ವರ್ಷಗಳಲ್ಲಿ ತಾವು ಅನುಭವಿಸಿದ ಕಷ್ಟಕೋಟಲೆಗಳನ್ನಾಗಲೀ, ಲೇಖಕರು ತಮ್ಮ ಕೊನೆಯ ದಿನದವರೆಗೂ ಮರೆಯಲಾಗದಿದ್ದರು.

ದಸ್ತಯೇವ್‌ಸ್ಕಿಯವರು ಇಡೀ ಜೀವನ ಮೂರ್ಛೆರೋಗದಿಂದ ಬಾಧಿತರಾಗಿದ್ದರು. ಅದನ್ನು ತಪ್ಪಿಸುವುದಾಗಲೀ, ಅದು ಯಾವಾಗ ಕೆರಳಲಿದ್ದಿತೆಂದು ಮುನ್ಸೂಚಿಸುವುದಾಗಲೀ ಸಾಧ್ಯವಿರಲಿಲ್ಲ. ಅದು ಭೌತಿಕವಾಗಿಯೂ ಮಾನಸಿಕವಾಗಿಯೂ ಅವರ ಇಡೀ ಅಸ್ತಿತ್ವವನ್ನು ಭಂಗಗೊಳಿಸಿದ್ದಿತು. ಈ ಮೂರ್ಛೆರೋಗ ಲೇಖಕರ ಜೀವನದ ಯಾವುದೇ ಘಳಿಗೆಯಲ್ಲೂ. ಅವರು ಎಲ್ಲಿಯೇ ಇದ್ದರೂ,

ಅವರನ್ನು ವಶಪಡಿಸಿಕೊಳ್ಳಬಹುದಿತ್ತು. ಅಪಸ್ಮಾರರೋಗ ಬರುವುದಕ್ಕೆ ಸೂಚನೆಯಾಗಿ ದೇಹದ ಒಂದು ಭಾಗದಿಂದ ಶೀತವಾಯು ಪ್ರವಾಹವು ಹರಿಯುತ್ತಿರುವಂತೆ ಮನಸ್ಸಿಗೆ ತೋರುವ ಘಳಿಗೆಯಲ್ಲಿ ತೀವ್ರವಾದ ಮಾನಸಿಕ ತುಯ್ತ ಉಂಟಾಗುತ್ತದೆ. ಅದರ ಜೊತೆಗೆ ಮನೋವಿಕಲ್ಪಗಳೂ (ಸಾಂಗೀತಿಕ, ವಾಚಕ ಹಾಗೂ ನಾಸಿಕ ಮನೋವಿಕಲ್ಪಗಳೂ) ಉಂಟಾಗುತ್ತವೆ. ಈ ಮೂರ್ಛೆ ರೋಗ ಕೆರಳಿದ ಸಮಯದಲ್ಲಿ ರೋಗಿ ತನ್ನ ಅನುಭವವನ್ನು ಎಷ್ಟು ಮಾತ್ರವೂ ನೆನಪಿಸಲ್ಲಿಡುವುದಿಲ್ಲ, ಎಂದು ವೈದ್ಯಕೀಯ ಕಾರ್ಯಕರ್ತರು ಹೇಳುತ್ತಾರೆ. ಆದರೆ ದಸ್ತಯೇವ್‌ಸ್ಕಿಯವರ ಮಿದುಳು ಎಲ್ಲವನ್ನೂ ನೆನಪಿನಲ್ಲಿಟ್ಟಿದ್ದಿತು.'ಹೆಡ್ಡ' ಕಾದಂಬರಿಯಲ್ಲಿ ಅವರು ಈ ರೋಗ ಕೆರಳಿದಾಗ ಆಗುವ ಅನುಭವವನ್ನು ವಿಶದವಾಗಿ ವರ್ಣಿಸಿರುವುದು ನಮಗೆ ಇದನ್ನು ತಿಳಿಸಿಕೊಡುತ್ತದೆ. ಅವರು ನಿರ್ಮಿಸಿರುವ ಅತ್ಯಂತ ಆಕರ್ಷಕ ಪಾತ್ರ ರಾಜಕುಮಾರ ಮಿಷ್ಕಿನ್ ಅಪಸ್ಮಾರ ರೋಗಕ್ಕೆ ತುತ್ತಾದವ. ಅವನು ಈ ರೋಗ ಕೆರಳಿದ ಸಮಯದಲ್ಲಿ ತನ್ನ ಮಾನಸಿಕ ಪರಿಸ್ಥಿತಿಯನ್ನು ವಿವರಿಸುವ ಸಾಮರ್ಥ್ಯ ಹೊಂದಿರುತ್ತಾನೆ.

ಶಾಲಾಧ್ಯಯನ ಮುಗಿಸಿದನಂತರ ದಸ್ತಯೇವ್‌ಸ್ಕಿಯವರು ಮಿಲಿಟರಿ ಎಂಜಿನಿಯರರ ವೃತ್ತಿಯನ್ನು ಹಿಡಿಯಬೇಕಾಗಿದ್ದಿತು. ಆದರೆ ಅದನ್ನು ಬಿಟ್ಟುಕೊಟ್ಟು ಸಾಹಿತ್ಯ ವೃತ್ತಿಯನ್ನು ಹಿಡಿಯಬೇಕೆಂದು ನಿರ್ಧರಿಸಿದರು.

ಅವರ ಮೊದಲ ಕಾದಂಬರಿ 'ಬಡ ಜನರು' (1845) ಶೀಘ್ರವೇ ಯಶಸ್ಸು ಗಳಿಸಿದುದು ಅವರಿಗೆ ಆ ಕಾಲದ ಖ್ಯಾತ ಸಾಹಿತಿಗಳ ನಿಕಟ ಸಂಪರ್ಕ ತಂದುಕೊಟ್ಟಿತು. ಅದರಲ್ಲೂ ವಿಶೇಷವಾಗಿ ಅವರು 1840ರ ವರ್ಷಗಳ ಖ್ಯಾತ ಸಾಹಿತ್ಯ ವಿಮರ್ಶಕ, ಕ್ರಾಂತಿಕಾರಿ ಪ್ರಜಾಪ್ರಭುತ್ವವಾದಿ ಹಾಗೂ ಸಮಾಜವಾದಿ ವಿಸ್ಸಾರಿಯೋನ್ ಬೆಲೀನ್‌ಸ್ಕಿಯವರ ನಿಕಟ ಪರಿಚಯ ಪಡೆದರು. ಆ ವರ್ಷಗಳಲ್ಲಿ ದಸ್ತಯೇವ್‌ಸ್ಕಿ ಸಮಾಜವಾದಿ ವಿಚಾರಗಳಿಂದ ತುಂಬ ಆಕರ್ಷಿತರಾದರು (ಅವರು ಆಕರ್ಷಿತರಾದ ಯಾವುದೇ ವಿಷಯವನ್ನೂ ಹೀಗೆಯೇ ಭಾವೋದ್ರಿಕ್ತತೆಯಿಂದ ಕೈಗೊಳ್ಳುತ್ತಿದ್ದರು). ಬೆಲೀನ್‌ಸ್ಕಿಯವರೊಂದಿಗೆ ಅವರು ನಡೆಸಿದ ಚರ್ಚೆಗಳು, ಫ್ರೆಂಚ್ ಅಸಾಧ್ಯಾದರ್ಶವಾದಿ ಸಮಾಜವಾದಿಗಳ, ಅದರಲ್ಲೂ ವಿಶೇಷವಾಗಿ ಫ್ಯೂರ್ಯೇರವರ ಬರಹಗಳನ್ನು ಓದಿದುದು, ರಷ್ಯನ್ ಸಾಹಿತಿಗಳು (ಪೂಷ್ಕಿನ್, ಗ್ರಿಬಯೇದೊವ್, ಲೇರ್ಮಂತೊವ್, ಗೋಗೊಲ್, ಹೆರ್ತ್ಸೆನ್ ಹಾಗೂ ನೆಕ್ರಾಸವ್) ಹಾಗೂ ಪಶ್ಚಿಮ ಯೂರೋಪಿನ ಲೇಖಕರು (ಷೇಕ್ಸ್‌ಪಿಯರ್, ವಾಲ್ಟೇರ್, ಷಿಲ್ಲೆರ್, ಸೆರ್ವಾಂತೆಸ್, ಡಿಕನ್ಸ್, ಝೊ. ಸಾಂದ್, ಬಾಲ್ಜಾಕ್) ಪ್ರತಿಪಾದಿಸಿದ ವಿಚಾರಗಳನ್ನು ಮನನ ಮಾಡಿದುದು, ಕೊನೆಯದಾಗಿ ಬೈಬಲ್ಲನ್ನು ಸತತವಾಗಿ ಅಭ್ಯಸಿಸಿದುದು – ಇವೆಲ್ಲವೂ ಈ ಯುವ ಲೇಖಕರ ಜಾಡ್ಯ ತಗುಲಿದ್ದ,

ಪ್ರಭಾವಗಳಿಗೆ ಪಕ್ಕಾಗುತ್ತಿದ್ದ ಮನಸ್ಸಿನ ಮೇಲೆ ಗಾಢವಾದ ಪ್ರಭಾವ ಬೀರಿ ಅವರ ಆತ್ಮಿಕ ಜಗತ್ತು ರೂಪುಗೊಳ್ಳುವುದಕ್ಕೆ ನೆರವಾದವು. ಮೇಲೆ ತಿಳಿಸಿದ ಪ್ರತಿಯೊಬ್ಬ ಲೇಖಕರೂ ದಸ್ತಯೇವ್‌ಸ್ಕಿಯವರ ಪ್ರಜ್ಞೆಯ ಮೇಲೆ ತಮ್ಮ ಪ್ರಭಾವ ಮೂಡಿಸಿದರು. ತದನಂತರ ದಸ್ತಯೇವ್‌ಸ್ಕಿಯವರ ಬರವಣಿಗೆಗಳಲ್ಲೂ ಪಾತ್ರಗಳಲ್ಲೂ ಈ ಪ್ರಭಾವಗಳು ಪ್ರತಿಬಿಂಬಿತವಾದವು. ಅವರ ಬಹುಮಟ್ಟಿಗೆ ಎಲ್ಲ ಕೃತಿಗಳಲ್ಲೂ, ಅವರ ಮರಣಕ್ಕೆ ಕೆಲವು ತಿಂಗಳುಗಳ ಮುನ್ನ 1880ರಲ್ಲಿ ಮಾಸ್ಕೋದಲ್ಲಿ ಪೂಷ್ಕಿನ್ ಸ್ಮಾರಕ ಅನಾವರಣ ಸಮಯದಲ್ಲಿ ಅವರು ರಚಿಸಿದ ಅಸಾಧಾರಣವಾಗಿ ಪ್ರಗಾಢವಾದ 'ಪೂಷ್ಕಿನ್ ಭಾಷಣ'ದಲ್ಲೂ, ಆದ್ಯಂತ ಪೂಷ್ಕಿನ್ ಅಂತರ್ಭಾವವನ್ನು ಕಾಣಬಹುದಾಗಿದೆ. ವಾಲ್ಟೇರ್‌ರ 'ಕಾಂದೀದ್' ಹಾಗೂ ಷಿಲ್ಲೆರ್‌ರ 'ಕಳ್ಳರು' ಇವರ 'ಕರಮಾಜೊವ್ ಸೋದರರ' ಪಾತ್ರಗಳಲ್ಲಿ ಪರಿ ವರ್ತಿತವಾಗಿವೆ; ಸೆರ್ವಾಂತೆಸ್‌ರ ದಾನ್ ಕ್ವಿಕ್ಸೋತ್ ಇವರ 'ಹೆಡ್ಡ' ಕಾದಂಬರಿಯ ನಾಯಕನೊಂದಿಗೆ ನಿಲ್ಲುತ್ತಾನೆ. ಡಿಕನ್ಸ್‌ರ ಬಾಲ ಪಾತ್ರಗಳು ದಸ್ತಯೇವ್‌ಸ್ಕಿ ಯವರ ಕೃತಿಗಳಲ್ಲಿನ ಹಿಂಸೆಗೊಳಗಾದ ಮಕ್ಕಳ ಸುತ್ತಮುತ್ತವೇ ಅಡ್ಡಾಡುತ್ತವೆ. ದಸ್ತಯೇವ್‌ಸ್ಕಿಯವರೇ ಮೊದಲು ರಷ್ಯನ್‌ಗೆ ಭಾಷಾಂತರಿಸಿ 1894ರಲ್ಲಿ ಪ್ರಕಟಿ ಸಿದ ಬಾಲ್ಜಾಕ್‌ರ 'ಎವ್ಗೇನಿಯಾ ಗ್ರಾಂದೇ' ಕಾದಂಬರಿಯು ದಸ್ತಯೇವ್‌ಸ್ಕಿ ಯವರ ಸೈದ್ಧಾಂತಿಕ ಹಾಗೂ ಕಲಾತ್ಮಕ ಕಲ್ಪನೆಗಳಿಗೇ ನಿಕಟವಾಗಿ ಸಮೀಪವಾಗಿ ದ್ದಿತು. ಕ್ರಿಸ್ತನ ಮೂರ್ತಿಯನ್ನು ದಸ್ತಯೇವ್‌ಸ್ಕಿಯವರು ಸತ್ಯದ ಸರ್ವೋಚ್ಚ ಮಾನದಂಡವನ್ನಾಗಿ ಕಾಣುತ್ತಾರೆ ('ಕರಮಾಜೊವ್ ಸೋದರರು' ಕಾದಂಬರಿ ಯಲ್ಲಿ 'ಪಾಷಂಡ ವಿಚಾರಣಾಧಿಕಾರಿಯ ಆಖ್ಯಾಯಿಕೆ').

ತಮ್ಮ ಕಲಾ ಸೃಷ್ಟಿಯ ಈ ಕಾಲಾವಧಿಯಲ್ಲೇ, ಬೌದ್ಧಿಕ ಚಟುವಟಿಕೆಯಿಂದ ತುಂಬಿದ್ದ ಈ ಕಾಲಾವಧಿಯಲ್ಲೇ, ದಸ್ತಯೇವ್‌ಸ್ಕಿಯವರು ತಮ್ಮ ಮೊದಲ ಕಾದಂಬರಿ 'ಬಡ ಜನರು' ಅನ್ನೂ, 'ದ್ವಂದ್ವ', 'ಶ್ವೇತ ರಾತ್ರಿಗಳು', 'ಒಡತಿ' ಇತ್ಯಾದಿ ಕಿರುಕಾದಂಬರಿಗಳನ್ನೂ ಸೃಜಿಸಿದುದು.

'ಬಡ ಜನರು' ಕಾದಂಬರಿಯು ಬಡತನದ ಬವಣೆಗೆ ಸಿಕ್ಕಿದ ಮರ್ದಿತನಾದ ಅಲ್ಪ ಕಾರಕೂನನೊಬ್ಬನ ಸಾಮಾಜಿಕ ದುರಂತದ ವಾಸ್ತವಿಕ ಚಿತ್ರಣವಾಗಿದೆ. ಆಘಾತಕ್ಕೊಳಗಾದ ಮಾನವ ಘನತೆಯ ಬಗೆಗೆ ಇದು ಗಾಢ ಸಹಾನುಭೂತಿ ವ್ಯಕ್ತಪಡಿಸುತ್ತದೆಂದು ಬೆಲೀನ್‌ಸ್ಕಿಯವರು ಇದನ್ನು ಶ್ಲಾಘಿಸಿದರು. ಇದು ರಷ್ಯನ್ ಕ್ಲಾಸಿಕಲ್ ಸಾಹಿತ್ಯದ ಪರಂಪರೆಗೆ ಮಾದರಿಯಾದ ಪ್ರಜಾಸತ್ತಾತ್ಮಕ ಹಾಗೂ ಮಾನವೀಯ ವಿಚಾರಗಳ ಅಭಿವ್ಯಕ್ತಿಯಾಗಿದ್ದಿತು. ಶ್ರೀಮಂತರ ಹಾಗೂ ಪ್ರಬಲ ರಾದವರ ವಿರುದ್ಧ ಬಂಡಾಯವೇಳುವುದಕ್ಕೂ, ಒದಗಿಬಂದ ದುರ್ಗತಿಯನ್ನು

ಕೊಂಡು ಸುಮ್ಮನಿರುವುದಕ್ಕೂ ನಡುವಿನ ಡೋಲಾಯಮಾನವನ್ನು ಯುವ ...ವ್‌ಸ್ಕಿ ಪ್ರಗಾಢವಾದ ಮಾನಸಿಕ ಒಳನೋಟದೊಂದಿಗೆ ತೋರಿಸಿ ...ದ್ದಾರೆ. ಪರಸ್ಪರ ಪ್ರೀತಿಸುವ ಇಬ್ಬರ ನಡುವೆ ಪತ್ರ ವ್ಯವಹಾರದ ರೂಪದಲ್ಲಿ ... 'ಬಡ ಜನರು' ಕಾದಂಬರಿಯು ಇಬ್ಬರು ದುರವಸ್ಥೆಗೀಡಾದ, ಹಾಗೂ ಒಂಟಿ ...ಕರಾದ ಕನಸುಗಾರರ ಭಾವಗೀತಾತ್ಮಕ ನಿವೇದನೆಯಾಗಿದೆ.

ಇದೇ ಕಾಲಾವಧಿಯಲ್ಲಿ ರಚಿಸಿದ 'ಶ್ವೇತ ರಾತ್ರಿಗಳು' ಎಂಬ ಮತ್ತೊಂದು ...ಯು ಸೇಂಟ್ ಪೀಟರ್ಸ್‌ಬರ್ಗ್ ಜೀವನದ ಒಂದು ವರ್ಣರಂಜಿತ ಸ್ವರೂಪ ...ನ್ನು ಚಿತ್ರಿಸುತ್ತದೆ. ಅದು "ದಸ್ತಯೇವ್‌ಸ್ಕಿಯವರ ಪೀಟರ್ಸ್‌ಬರ್ಗ್" ...ಬ ಹೆಸರುವಾಸಿಯಾಯಿತು. ಈ ಕಥೆಯ ಮುಖ್ಯ ಪಾತ್ರವಾದ ಯುವ ...ನಸುಗಾರ ತಾನು ಪ್ರೀತಿಸುವ ಯುವತಿಯ ಮುಂದೆ ಈ ನಗರವನ್ನು ಹೀಗೆ ...ರ್ಣಿಸುತ್ತಾನೆ:

"....ಪೀಟರ್ಸ್‌ಬರ್ಗ್‌ನಲ್ಲಿ ಕೆಲವು ವಿಚಿತ್ರವೇ ಅನ್ನುವಂಥ ಮೂಲೆಗಳಿವೆ. ...ಗರದ ಉಳಿದ ಭಾಗಗಳಿಗೆಲ್ಲ ಬೆಳಕು ನೀಡುವ ಸೂರ್ಯ ಈ ಸ್ಥಳಗಳಲ್ಲಿ ಇಣಿಕಿ ...ೋಡುವುದೂ ಇಲ್ಲ ಎಂದು ಕಂಡುಬರುತ್ತೆ. ಇಲ್ಲಿಗೆ ಬರುವುದು ಬೇರೊಂದು ...ೂರ್ಯ. ಹೊಸತಾದುದು. ಈ ದೂರ ಮೂಲೆಗಳಿಗಾಗೆಂದೇ ವಿಶೇಷವಾಗಿ ...ಜ್ಞೆ ನೀಡಿ ಏರ್ಪಡಿಸಿದಂಥ ಸೂರ್ಯ. ಅದು ಪ್ರತಿಯೊಂದರ ಮೇಲೂ ಒಂದು ...ಚಿತ್ರವಾದ ವಿಭಿನ್ನವಾದ ಬೆಳಕು ಬೀರುತ್ತೆ. ಅಲ್ಲದೆ ಆ ದೂರ ಮೂಲೆಗಳಲ್ಲಿ ...ವ ಜೀವನಕ್ಕೂ ಹೊರ ಜೀವನಕ್ಕೂ ಮಧ್ಯೆ ಅಜಗಜಾಂತರ. ಹೊರಗೆ ನಮ್ಮ ...ತ್ತಮುತ್ತ ತುಂಬಿ ತುಳುಕುತ್ತಿರುವ ಜೀವನಕ್ಕೂ ಅಲ್ಲಿನ ಜೀವನಕ್ಕೂ ಏನೇನೂ ...ೋಲಿಕೆ ಇಲ್ಲ. ಅದು ನಮ್ಮ ಈ ಭೂಮಂಡಲದ ಮೇಲಲ್ಲ, ನಮ್ಮ ಈ ಅತ್ಯಂತ ...ನವಾದ ಕಾಲಗಳಲ್ಲಲ್ಲ, ಆದರೆ ಯಾವುದೋ ಕಾಲ್ಪನಿಕ ವಿಚಿತ್ರ ಪ್ರಪಂಚದಲ್ಲಿ ...ಯಬಹುದಾದಂಥ ಜೀವನವಾಗಿರುತ್ತದೆ. ಮತ್ತೆ ಈ ಜೀವನವೂ ಶುದ್ಧ ...ಕಾಲ್ಪನಿಕವಾದ, ಅತ್ಯಂತ ಉತ್ಸಾಹಿತ ಆದರ್ಶವಾದಿಯಾದ, ಅದೇ ಹೊತ್ತಿ... (ಇದೇ ದುಃಖದ ಸಂಗತಿ, ನಾಸ್ತೆಂಕ) ತೀರ ನೀರಸವಾದ ಹಾಗೂ ಸಾಧಾರಣ ...ನ. ನಂಬಲಸಾಧ್ಯವೆನ್ನುವಷ್ಟು ನಿಸ್ಸಾರವಾದ, ಜೀವನದ ವಿಚಿತ್ರ ಮಿಶ್ರಣ ...ಗಿರುತ್ತದೆ."

ಈ ವಿಲಕ್ಷಣ ವಾತಾವರಣದಲ್ಲಿ ಸುಂದರ ಕನಸುಗಾರರು ಹೇಗೆ ಅನಿವಾರ್ಯ ...ಯೇ ನಾಶವಾಗುತ್ತಾರೆ, ಅದೇ ಹೊತ್ತಿನಲ್ಲಿ ತುಚ್ಛ ವಾಸ್ತವಿಕತೆಯು ...ಯಗೊಳ್ಳುತ್ತದೆ, ಎಂಬುದನ್ನು ದಸ್ತಯೇವ್‌ಸ್ಕಿ ನಮಗೆ ತೋರಿಸಿಕೊಡು... ...ಿ. 'ಶ್ವೇತ ರಾತ್ರಿಗಳ' ನಾಯಕನೂ ನಾಯಕಿಯೂ ತಮ್ಮ ವೈಯಕ್ತಿಕ ಸುಖ

ವನ್ನು ಪರಿತ್ಯಜಿಸುವಂಥ ವಿಚಿತ್ರವಾದ ಹಾಗೂ ಕರುಣಾಜನಕವಾದ ಆನಂದವನ್ನಷ್ಟೆ ಅನುಭವಿಸಬಲ್ಲವರಾಗಿರುತ್ತಾರೆ.

ಆದರೆ ಈ ಲೇಖಕರ ಸಾಹಿತ್ಯಿಕ ಜೀವನದ ಈ ಆರಂಭಿಕ ಕಾಲಘಟ್ಟವು ಅವರ ಜೀವನವನ್ನು ಎರಡು ಪ್ರತ್ಯೇಕ ಭಾಗಗಳನ್ನಾಗಿ ವಿಭಜಿಸಿದಂಥ ಒಂದು ಘಟನೆಯಿಂದ ಕೊನೆಗಂಡಿತು. ದಸ್ತಯೇವ್‌ಸ್ಕಿ ಪ್ರಗತಿಶೀಲ ಅಧ್ಯಯನ ವೃಂದದ ಸಭೆಗಳಿಗೆ ಹೋಗತೊಡಗಿದರು. ಈ ಸಭೆಗಳನ್ನು ಕ್ರಾಂತಿಕಾರಿ-ಸಮಾಜವಾದಿ ಪೆತ್ರಷೇವ್‌ಸ್ಕಿಯವರು ನಡೆಸುತ್ತಿದ್ದರು (ಈ ಸಭೆಗಳಲ್ಲೇ ಅವರು, ಗೋಗೊಲ್‌ರಿಗೆ ಬೆಲೀನ್‌ಸ್ಕಿಯವರು ಬರೆದಿದ್ದ ನಿಷೇಧಿಸಲಾಗಿದ್ದ ಪತ್ರವನ್ನು ಓದಿದುದು). ಅನಂತರ ಅವರು ಸ್ಪೇಷ್ನೆವ್‌ರ ನಾಯಕತ್ವದಲ್ಲಿದ್ದ ಒಂದು ವೃಂದವನ್ನು ಸೇರಿಕೊಂಡರು. ಪೆತ್ರಷೇವ್‌ಸ್ಕಿಯವರ ಅನುಯಾಯಿಯೇ ಆಗಿದ್ದ ಸ್ಪೇಷ್ನೆವ್ ನಿರಂಕುಶಾಧಿಕಾರದ ವಿರುದ್ಧ ಹೋರಾಡಲು ಒಂದು ಗುಪ್ತ ಕ್ರಾಂತಿಕಾರಿ ಸಂಘಟನೆಯನ್ನು ಸ್ಥಾಪಿಸ ಬಯಸಿದ್ದರು. ಈ ವೃಂದದ ಇತರ ಸದಸ್ಯರೊಟ್ಟಿಗೇ ದಸ್ತಯೇವ್‌ಸ್ಕಿಯವರೂ 1849ರ ಏಪ್ರಿಲ್‌ನಲ್ಲಿ ದಸ್ತಗಿರಿ ಮಾಡಲ್ಪಟ್ಟರು. ಅವರನ್ನು ಸೇಂಟ್ ಪೀಟರ್ ಹಾಗೂ ಸೇಂಟ್ ಪಾಲ್ ದುರ್ಗದಲ್ಲಿ ಸುಮಾರು ಎಂಟು ತಿಂಗಳ ಕಾಲ ಏಕಾಂತ ಬಂಧನದಲ್ಲಿರಿಸಲಾಗಿದ್ದಿತು. ವಿಚಾರಣೆ ಎಲ್ಲ ಮುಗಿದ ಮೇಲೆ ಅವರಿಗೆ ಮರಣ ದಂಡನೆಯ ಶಿಕ್ಷೆ ವಿಧಿಸಲಾಯಿತು. 1849ರ ಡಿಸೆಂಬರ್ 22ರಂದು (ಆಗ ಅವರಿಗೆ ಇಪ್ಪತ್ತೆಂಟಷ್ಟೆ ವಯಸ್ಸಾಗಿತ್ತು) ದಸ್ತಯೇವ್‌ಸ್ಕಿಯವರು ಕೆಲವು ನಿಮಿಷಗಳ ಕಾಲ ಅತಿಭಯಂಕರವಾದ ಸ್ಥಿತಿಯಲ್ಲಿ ಕಳೆದರು. ಪ್ರಥಮ ನಿಕೊಲಸ್ ದೊರೆಯು ಈ ಕೈದಿಗಳನ್ನು ಜಗತ್ತಿನಲ್ಲೇ ಅತ್ಯಂತ ಕ್ರೂರವಾದ ಹಿಂಸೆಗೆ – ವಧಿಸಲ್ಪಡುವುದಕ್ಕಾಗಿ ಕಾಯುವ ಹಿಂಸೆಗೆ – ಒಳಪಡಿಸಲು ನಿರ್ಧರಿಸಿದ್ದನು. ಒಂದು ದಿನ ಹಿಮ ಶೈತ್ಯದ ಬೆಳಿಗ್ಗೆ ಮರಣದಂಡನೆ ಶಿಕ್ಷೆಯನ್ನು ಕಾರ್ಯಗತಗೊಳಿಸಲು ಎಲ್ಲ ಪೂರ್ವ ಭಾವೀ ಸಿದ್ಧತೆಗಳನ್ನೂ ಮಾಡಲಾಯಿತು. ಡೋಲುಗಳನ್ನು ಬಡಿಯಲಾಯಿತು. ಗುಂಡು ಹಾರಿಸುವ ತಂಡದವರು ಸಾಲು ನಿಂತರು. ಪಾದ್ರಿಯು ಕೊನೆಯ ಬಾರಿ ಮುತ್ತಿಡಲೆಂದು ಶಿಲುಬೆಯನ್ನು ಕೈದಿಗಳ ಮುಂದೆ ಎತ್ತಿ ಹಿಡಿದನು. ಕೈದಿಗಳ ಕಣ್ಣುಗಳಿಗೆ ಬಟ್ಟೆ ಕಟ್ಟಲಾಯಿತು. ಮೊದಲ ಮೂವರನ್ನು ಕರೆದೊಯ್ದು ಗುಂಡು ಹಾರಿಸುವ ತಂಡದ ಮುಂದಿದ್ದ ಕಂಬಗಳಿಗೆ ಕಟ್ಟಲಾಯಿತು. "ಬಂದೂಕನ್ನು ಗುರಿ ಇಟ್ಟು ಹಿಡಿಯಿರಿ!" ಎಂಬ ಆಜ್ಞೆಯನ್ನೂ ನೀಡಲಾಯಿತು. ಸೈನಿಕರ ಬಂದೂಕಗಳು ಆಗಲೇ ಕೈದಿಗಳತ್ತ ಗುರಿ ಮಾಡಿ ಹಿಡಿಯಲ್ಪಟ್ಟಿದ್ದವು. ದಸ್ತಯೇವ್‌ಸ್ಕಿಯವರು ಎರಡನೆಯ ತಂಡದಲ್ಲಿದ್ದರು. ಅವರಿಗೆ ಜೀವದಿಂದಿರಲು ಇನ್ನೊಂದು ನಿಮಿಷಕ್ಕಿಂತ ಹೆಚ್ಚಿಗೆ ಕಾಲವೇನೂ ಇರಲಿಲ್ಲ. ಹಲವಾರು ಕೊನೆಗಾಣದಂಥ ಸೆಕೆಂಡುಗಳನಂತರ ಮರಣದಂಡನೆಯನ್ನು ನಾಲ್ಕು ವರ್ಷಗಳ ಕಠಿಣ ಸಜೆಗೆ

ಸುವ ತ್ಸಾರನ ಆಜ್ಞೆಯನ್ನು ಓದಿ ತಿಳಿಸಲಾಯಿತು. ಸೈಬೀರಿಯಾದಲ್ಲಿ ನಾಲ್ಕು ವರ್ಷಗಳ ಕಠಿಣ ಸಜೆಯನಂತರ ಅವರು ಅಲ್ಲಿನ ದಳವೊಂದರಲ್ಲೇ ಸೈನಿಕರಾಗಿ ಸೇವೆ ಸಲ್ಲಿಸಬೇಕಿದ್ದಿತು.

ಸೈಬೀರಿಯಾಕ್ಕೆ ಕಳುಹಿಸಲ್ಪಡುವ ಮುನ್ನ ಅದೇ ದಿನ ದಸ್ತಯೇವ್‌ಸ್ಕಿಯವರು ತಮಗೆ ಅತ್ಯಂತ ನಿಕಟವಾಗಿದ್ದ ತಮ್ಮ ಸೋದರ ಮಿಹಯಿಲ್‌ಗೆ ಒಂದು ಪತ್ರವನ್ನು ಬರೆದರು: "ನನ್ನ ಪ್ರೀತಿಯ ಸೋದರ. ಈ ಶಿಕ್ಷೆಯಿಂದ ನಾನೇನೂ ಹತಾಶನಾಗಿಲ್ಲ, ಸ್ಥೈರ್ಯ ಕಳೆದುಕೊಂಡಿಲ್ಲ. ಜೀವನ ಎಲ್ಲಿ ಹೋದರೂ ಜೀವನವೇ... ಅಲ್ಲೂ ನನ್ನ ಸುತ್ತ ಜನ ಇದ್ದೇ ಇರುತ್ತಾರೆ. ಅವರ ಮಧ್ಯೆ ಮಾನವನಾಗಿ ಉಳಿದಿರುವುದು, ಯಾವುದೇ ದೌರ್ಭಾಗ್ಯ ಬಂದರೂ, ಯಾವತ್ತೂ ಮಾನವನಾಗಿಯೇ ಇರುವುದು, ಧೈರ್ಯವನ್ನು ಉಳಿಸಿಕೊಂಡು ಸೋಲದಿರುವುದು – ಇದೇ ಜೀವನ. ಇದೇ ನಮ್ಮ ಮುಂದಿರುವ ದೊಡ್ಡ ಸವಾಲು." ಈ ಭಾವುಕ ಅನುಭವಗಳೇ ಹತ್ತೊಂಬತ್ತು ವರ್ಷಗಳನಂತರ, 'ಹೆಡ್ಡ' ಕಾದಂಬರಿಯಲ್ಲಿ, ವಧಿಸಲ್ಪಡುವ ಮುನ್ನ ಕೈದಿಯೊಬ್ಬನ ಕೊನೆಯ ಘಳಿಗೆಗಳಿಗೆ ಸಂಬಂಧಿಸಿದ ಮಿಾಷ್ಕಿನ್‌ನ ಅದ್ಭುತ ವಿವರಣೆಗಳಿಗೆ ಜನ್ಮವಿತ್ತುದು. ತಮ್ಮ ಕೊನೆಯ ಕಾದಂಬರಿಯಲ್ಲಿ ದಸ್ತಯೇವ್‌ಸ್ಕಿಯವರು ಕರಮಾಜೊವ್ ಸೋದರರಲ್ಲೂ ಇದೇ ಹಿಂಗದ ಅಗಾಧವಾದ ಜೀವನದಾಹವನ್ನು ವ್ಯಕ್ತಪಡಿಸಿದರು. ಈ ಅನುಭವಗಳೇ ಅವರಲ್ಲಿ ಜೀವನಕ್ಕಾಗಿ ಅತೀವ ಪ್ರೀತಿಯನ್ನು ಹೆಚ್ಚಿಸಿದುದು, ಎಂದು ಭಾವಿಸಿಕೊಳ್ಳಬಹುದು. ಇದನ್ನು ದಸ್ತಯೇವ್‌ಸ್ಕಿಯವರೇ ಒಪ್ಪಿಕೊಂಡಿದ್ದಾರೆ.

ಮರಣದಂಡನೆಯನ್ನು ಈಡೇರಿಸುವ ಈ ಅಣಕ ನಾಟಕವು ಲೇಖಕರ ಕಷ್ಟಕೋಟಲೆಗಳ ಆರಂಭವಷ್ಟೇ ಆಗಿದ್ದಿತು. ಅವರು ಓಮ್‌ಸ್ಕ್‌ನ ಕಾರಾಗೃಹದಲ್ಲಿ ನಾಲ್ಕು ವರ್ಷಗಳ ಕಠಿಣ ಸಜೆಯನ್ನು ಕಳೆದರು. ನಾಲ್ಕು ವರ್ಷಗಳೂ ಕೈಗೆ ಹಾಕಿದ್ದ ಸಂಕೋಲೆಗಳನ್ನು ಸ್ವಲ್ಪ ಕಾಲವೂ ತೆಗೆದಿರಲಿಲ್ಲ. ಸ್ನಾನ ಮಾಡುವಾಗಲೂ, ಆಸ್ಪತ್ರೆಯಲ್ಲೂ ಸಹ, ಸಂಕೋಲೆಗಳನ್ನು ತೆಗೆಯಲಿಲ್ಲ. ಕಠಿಣ ಶಿಕ್ಷೆಯ ಕಾಲದಲ್ಲಿ ಅವರು ಇಟ್ಟಿಗೆಗಳನ್ನು ಸುಡುವ ಕಾರ್ಯಮಾಡಬೇಕಿದ್ದಿತು, ನಿರ್ಮಾಣ ಕ್ಷೇತ್ರಗಳಿಗೆ ಕೋಲ್ತೊಟ್ಟಿಗಳನ್ನು ಹೊತ್ತರು, ಇರ್ತೀಷ್ ನದಿಯಲ್ಲಿ ಮಂಜಿನಂತೆ ಕೊರೆಯುತ್ತಿದ್ದ ನೀರಿನಲ್ಲಿ ಅಥವಾ ಉಗ್ರ ಹಿಮಶೈತ್ಯದಲ್ಲಿ ದೋಣಿಗಳಿಂದ ಸರಕುಗಳನ್ನು ಹೊತ್ತು ಇಳಿಸುತ್ತಿದ್ದರು.

'ಸಾವಿನ ಮನೆಯಿಂದ ಬರೆದ ಟಿಪ್ಪಣಿಗಳು' ಕೃತಿಯಲ್ಲಿ ದಸ್ತಯೇವ್‌ಸ್ಕಿಯವರು ಕೈದಿಯ ಜೀವನದ ತಮ್ಮ ವೈಯಕ್ತಿಕ ಅನುಭವವನ್ನೇ ವರ್ಣಿಸಿದ್ದಾರೆ. ಈ ಅನುಭವವೇ ಲೇಖಕರನ್ನು ಅವರ ಆಯುಷ್ಯಪೂರ್ತಿ ಮಾನವ ಸಂಕಟದ

ಹಾಡುಕವಿಯನ್ನಾಗಿ ಪರಿವರ್ತಿಸಲು ಸಾಕಾಗಿದ್ದಿತೆಂದು ಓದುಗರಿಗೆ ತೋರಿಸಿ ಕೊಡುತ್ತದೆ. ಹತ್ತೊಂಬತ್ತನೆಯ ಶತಮಾನದ ಯಾವ ಲೇಖಕರೂ ದಸ್ತಯೇವ್‌ಸ್ಕಿಯವರಷ್ಟು ಸಂಕಟ, ಯಾತನೆ ಹಾಗೂ ತೇಜೋವಧೆಯನ್ನು ಇಷ್ಟು ಹೆಪ್ಪುಗಟ್ಟಿದ ರೀತಿಯಲ್ಲಿ ಅನುಭವಿಸಲಿಲ್ಲ. ಇಂಥ ಸಂಕಟವನ್ನು ಅನುಭವಿಸಿದ ಈ ಕೈದಿ ಒಬ್ಬ ಪ್ರತಿಭಾವಂತನಾಗಿದ್ದ! ಅವರ ಕಾರಾಗೃಹ ವಾಸವು, ಅಪರಾಧ ಹಾಗೂ ಶಿಕ್ಷೆಯ ಸಮಸ್ಯೆಯಲ್ಲೂ, ಕೊಲೆಗಾರನ ಹಾಗೂ ಕೊಲೆಗೀಡಾದವನ ಮನೋವ್ಯಾಪಾರದಲ್ಲೂ ಅವರಿಗಿದ್ದ ಆಸಕ್ತಿಯನ್ನು ಹೆಚ್ಚಿಸಿತು. ಅಲ್ಲೇ 'ಕರಮಾಜೊವ್ ಸೋದರರು' ಕಾದಂಬರಿಯಲ್ಲಿನ ಪಿತೃಘಾತುಕ ಘಟನೆಯನ್ನು ಅವರು ತಮ್ಮ ಮನಸ್ಸಿನಲ್ಲಿ ಕಲ್ಪಿಸಿಕೊಂಡುದು. ದಸ್ತಯೇವ್‌ಸ್ಕಿಯವರ ಕಾದಂಬರಿಗಳಲ್ಲಿ ತುಂಬಿಕೊಂಡಿರುವ ಪಾತಕ ಕೃತ್ಯಗಳು, ಕೊಲೆಗಳು ಹಾಗೂ ಆತ್ಮಹತ್ಯೆಗಳು, ಓದುಗರನ್ನು ಪುಳಕಿತಗೊಳಿಸಲು ಲೇಖಕರ ಸಿರಿವಂತ ವಿಭಾವನೆ ಸೃಜಿಸಿದಂಥ ಕಾಲ್ಪನಿಕ ಘಟನೆಗಳಲ್ಲ. ಆದರೆ, ಅವು ಹೃದಯದಿಂದ ನೇರವಾಗಿ ಹೊರಹೊಮ್ಮಿದಂಥ ಘಟನೆಗಳಾಗಿವೆ. ಅವರ ಸುತ್ತಮುತ್ತ ಕೊಲೆಗಾರರು, ಅಕ್ರಮ ಸಂಭೋಗಿಗಳು, ಕ್ರೌರ್ಯ ಕಾಮವಿಕಾರಿಗಳು ಇವರೇ ಇದ್ದರು. ಇಂಥವರ ಮಧ್ಯಕ್ಕೆ ಕುರುಡು ವಿಧಿಯು, ತ್ಸಾರ್‌ಶಾಹಿಯ ನಿರಂಕುಶಾಡಳಿತವು ಅಥವಾ ಶಾಸನದ ಲೋಪಗಳು, ನಿಸ್ಸಹಾಯಕರಾದ ಮುಗ್ಧರಾದ ಜನರನ್ನು ತಂದು ಹಾಕಿದ್ದವು. ಈ ಜನರಲ್ಲಿ ಅನೇಕರು ಪ್ರತಿಭಾನ್ವಿತರಾಗಿದ್ದರು, ಅನನ್ಯತೆಯ ಗುಣಸಂಪನ್ನರಾಗಿದ್ದರು. ಡಾಂಟೆಯವರ 'ಪಾಪಿಗಳ ಲೋಕ'ವಷ್ಟೆ* 'ಸಾವಿನ ಮನೆಯಿಂದ ಬರೆದ ಟಿಪ್ಪಣಿಗಳಿ'ಗೆ ಹೋಲಿಕೆ ನಿಲ್ಲಬಲ್ಲುದು. ಇಪ್ಪತ್ತನೆಯ ಶತಮಾನದ ಮಧ್ಯಭಾಗದಲ್ಲಿ ನಾಜೀಗಳು ಕೂಡುದೊಡ್ಡಿಗಳಲ್ಲಿ ಕೋಟ್ಯಾಂತರ ಜನರನ್ನು ನಾಶಗೊಳಿಸಿದುದರ ಭೀಕರತೆಯನ್ನು ಅನುಭವಿಸಿ ಕಂಡವರು, ದಸ್ತಯೇವ್‌ಸ್ಕಿಯವರ ಬರಹಗಳಲ್ಲಿ ತಮ್ಮ ಕಷ್ಟಕೋಟಲೆಯ ಪ್ರತಿಧ್ವನಿಯನ್ನು ಕಂಡುಕೊಳ್ಳಬಲ್ಲರು.

---

*ಇಟಲಿಯ ಮಹಾಕವಿ ಡಾಂಟೆ (1265-1321)ಯ 'ಡಿವೈನ್ ಕಾಮೆಡಿ' ('ದಿವ್ಯ ಲೀಲೆ') ಮಹಾಕಾವ್ಯದಲ್ಲಿ ಬರುವ 'ಪಾಪಿಗಳ ಲೋಕ' ('ಇನಫರ್ನೋ'), 'ಪ್ರಾಯಶ್ಚಿತ್ತ ಲೋಕ' ('ಪರ್ಗೆಟೋರಿಯೊ'), 'ಪರಮಾನಂದ ಲೋಕ' ('ಪ್ಯಾರಡೈಸೊ') ಎಂಬ ಮೂರು ಭಾಗಗಳಲ್ಲೊಂದು.




ಮಿಖಯಿಾಲ್ ದಸ್ತಯೇವ್‌ಸ್ಕಿ (1789-1839),
ಲೇಖಕರ ತಂದೆ



ಮರೀಯ ದಸ್ತಯೇವ್‌ಸ್ಕಿ (1800-1837),
ಲೇಖಕರ ತಾಯಿ



**ಡಾ. ಮಿಖಯಿಾಲ್ ದಸ್ತಯೇವ್‌ಸ್ಕಿಯವರ ವಾಸದ ಮನೆ ಇದ್ದ ಆಸ್ಪತ್ರೆಯ ಒಂದು ಭಾಗ. ಫ್ಯೋದರ್ ದಸ್ತಯೇವ್‌ಸ್ಕಿಯವರು ಇಲ್ಲಿ 1823ರಿಂದ 1837ರವರೆಗೆ ವಾಸಿಸುತ್ತಿದ್ದರು. ಈಗ ಇದು ಒಂದು ದಸ್ತಯೇವ್‌ಸ್ಕಿ ವಸ್ತುಸಂಗ್ರಹಾಲಯವಾಗಿದೆ.**



ಮಿಖಯಿಲ್ ದಸ್ತಯೇವ್‌ಸ್ಕಿ (1820-1864),
ಲೇಖಕರ ಅಣ್ಣ

ಕಾರಾಗೃಹ ವಾಸದನಂತರದ ಐದು ವರ್ಷಗಳ ಸೈನ್ಯ ಸೇವಾ ವೃತ್ತಿ – ಮೊದಲು ಒಬ್ಬ ಸಾಮಾನ್ಯ ಸೈನಿಕನಾಗಿ, ಅನಂತರ ಸೈನ್ಯಾಧಿಕಾರಿಯಾಗಿ, ಸೇವಾವೃತ್ತಿ – ಹೆಚ್ಚು ಸುಲಭವಾಗಿದ್ದಿತು. 1859ರಲ್ಲಿ ಪೀಟರ್ಸ್‌ಬರ್ಗ್‌ಗೆ ಹಿಂದಿರುಗಿದ ಮೇಲೆ ದಸ್ತ ಯೇವ್‌ಸ್ಕಿ ಮತ್ತೆ ಬರೆಯತೊಡಗಿದರು. ಈ ನಂತರದ ಇಪ್ಪತ್ತು ವರ್ಷಗಳು ಅವರನ್ನು ಒಬ್ಬ ಪ್ರತಿಭಾನ್ವಿತ ಲೇಖಕನನ್ನಾಗಿ, ರಷ್ಯನ್ ಹಾಗೂ ವಿಶ್ವಸಾಹಿತ್ಯದ ಹೆಮ್ಮೆಯನ್ನಾಗಿ ತೋರಿಸಿಕೊಟ್ಟವು. ಆದರೆ ಈ ವರ್ಷಗಳಲ್ಲಿ ಅವರ ಖಾಸಗಿ ಜೀವನ ಆತ್ಮಿಕ ಮುಗ್ಗಟ್ಟುಗಳಿಂದಲೂ ದಾರುಣ ತಿಕ್ಕಾಟಗಳಿಂದಲೂ ತುಂಬಿ ದ್ದಿತು. ಅಪಸ್ಮಾರ ರೋಗ ಅವರನ್ನು ಕೆಲವು ವೇಳೆ ತಿಂಗಳುಗಟ್ಟಲೆ ಬಾಧಿಸದೆ ಬಿಟ್ಟಿದ್ದರೂ, ಕೆಲವು ವೇಳೆ ದಿನದಿನವೂ ಬರುತ್ತ ಅವರನ್ನು ಬಹುವಾಗಿ ಕಾಡಿ ಸುತ್ತಿದ್ದಿತು. ಅವರು ಖ್ಯಾತಿಯ ಪರಾಕಾಷ್ಠೆಯಲ್ಲಿದ್ದಾಗಲೂ ಅವರ ಬಳಿ ಬಹು ವೇಳೆ ಹಣಕಾಸೂ ಸಾಕಷ್ಟಿರುತ್ತಿರಲಿಲ್ಲ. ಅವರು ಸತತವಾಗಿ ಸಾಲಗಾರರಿಂದಲೂ, ಪ್ರಕಾಶಕರು ಹಾಗೂ ಸಂಪಾದಕರಿಂದಲೂ ಮುತ್ತುವರಿಯಲ್ಪಟ್ಟಿರುತ್ತಿದ್ದರು. ಐವ ತ್ತರ ಹಾಗೂ ಅರವತ್ತರ ವರ್ಷಗಳಲ್ಲಿ ಅವರು ಒಂದು ಹೊಸ ಲಕ್ಷಣವನ್ನು ತೋರತೊಡಗಿದರು. ತಡೆ ಹಿಡಿಯಲಾಗದಂಥ ಭಾವೋದ್ವೇಗಗಳಿಗೆ ಈಡಾಗಿದ್ದ ಅವರು ಹಂಗುತೊರೆದ ಜೂಜುಗಾರರಾದರು. ಜೂಜಾಟದಲ್ಲಿ ತಮಗೆ ಅದೃಷ್ಟ ಒಲಿಯುವುದೆಂದೂ ಆದರಿಂದ ಭಾರಿ ಹಣ ಗಳಿಸಿ ಸಾಲಸೋಲಗಳಿಂದ ಮುಕ್ತ ರಾಗಲು ಸಾಧ್ಯವಾಗುವುದೆಂದೂ ಬಗೆದು ಅವರು ಹೊರ ದೇಶಗಳಿಗೆ ಹೋದಾಗ ಜೂಜಾಟಗಳಲ್ಲಿ ತೊಡಗಿದರು. ಇದರಲ್ಲಿ ಅವರು ಎಷ್ಟು ಆಸಕ್ತಿ ಬೆಳೆಸಿಕೊಂಡ ರೆಂದರೆ ಒಮ್ಮೆ ಬಾಡೆನ್‌ನಲ್ಲಿ ವಾಸ್ತವವಾಗಿ ತಮ್ಮ ಪತ್ನಿಯ ಕಿವಿಯೋಲೆಗಳನ್ನೂ ಉಡುಪುಗಳನ್ನೂ ಪಣವಾಗಿ ಒಡ್ಡಿದರು. ಈ ಜೂಜಾಟಗಳಲ್ಲಿ ಭಾರಿ ಹಣ ಬರುತ್ತಿದ್ದಂತೆಯೇ ಭಾರಿ ನಷ್ಟಗಳೂ ಆಗುತ್ತಿದ್ದವು. ಈ ಅನುಭವವೇ ದಸ್ತ ಯೇವ್‌ಸ್ಕಿಯವರಿಗೆ 'ಜೂಜುಗಾರ' ಎಂಬ ತಮ್ಮ ಕಥೆಯಲ್ಲಿ ಜೂಜುಗಾರರ ಮನಃ ತತ್ತ್ವವನ್ನು ಒಳಹೊಕ್ಕು ಚಿತ್ರಿಸಲು ಸಾಧ್ಯಮಾಡಿಕೊಟ್ಟಿರುವುದು. ದಸ್ತಯೇವ್‌ಸ್ಕಿ ಯವರ ಪ್ರಣಯ ಜೀವನವೂ ಅವರ ಸ್ತ್ರೀವ್ಯಾಮೋಹವೂ ಅಷ್ಟೇ ಪ್ರಗಾಢ ವಾಗಿದ್ದಿತು. 1857ರಲ್ಲಿ ಅವರು ಸೆಮಿಪಲಾತಿನ್‌ಸ್ಕ್ ನಗರದಲ್ಲಿ ತಮ್ಮ ಸಹೋ ದ್ಯೋಗಿಯೊಬ್ಬರ ವಿಧವೆ ಎಂ. ಡಿ. ಇಸಾಯೆವಾರವರನ್ನು ವಿವಾಹವಾದರು. ಆಕೆ ಒಬ್ಬ ರೋಗಿಷ್ಠಳಾದ ಉನ್ಮಾದಕ್ಕೊಳಗಾಗುತ್ತಿದ್ದ ಮಹಿಳೆ. ಈ ವಿವಾಹ

ಸುಖದಾಯಕವಾಗಿರಲಿಲ್ಲ. 1865ರಲ್ಲಿ ಮೊದಲ ಪತ್ನಿಯ ನಿಧನದನಂತರ ಅವರು ಮತ್ತೊಬ್ಬಾಕೆಯನ್ನು ವಿವಾಹವಾದರು. ಈ ವಿವಾಹ ಪ್ರಸಂಗವೂ ಅವರ ಜೀವನದ ಉಳಿದೆಲ್ಲ ಸಂಧಿಕಾಲಗಳಂತೆಯೇ ಅಸಾಧಾರಣ ಲಕ್ಷಣ ಹೊಂದಿದ್ದಿತು. 1866ರಲ್ಲಿ ಪ್ರಕಾಶಕರೊಂದಿಗೆ ಮಾಡಿಕೊಂಡ ಕಠಿಣ ಒಪ್ಪಂದವೊಂದಕ್ಕನುಗುಣವಾಗಿ ದಸ್ತ ಯೇವ್‌ಸ್ಕಿಯವರು ಒಂದು ತಿಂಗಳ ಕಾಲಾವಧಿಯಲ್ಲೇ 160ಪುಟಗಳ ಕಾದಂಬರಿ ಯೊಂದನ್ನು ಬರೆದುಕೊಡಬೇಕಾದ ಕಷ್ಟದ ಪರಿಸ್ಥಿತಿಗೆ ಸಿಕ್ಕಿಬಿದ್ದರು. ಶೀಘ್ರ ಲಿಪಿಕಾರಿಣಿಯೊಬ್ಬಳನ್ನು ನೇಮಿಸಿಕೊಳ್ಳುವಂತೆ ಸ್ನೇಹಿತರೊಬ್ಬರು ಸಲಹೆ ಮಾಡಿ ದರು. ಅವರು ಹಾಗೆಯೇ ಮಾಡಿದರು. 1866ರ ಅಕ್ಟೋಬರ್ 4ರಂದು ತಮ್ಮ 'ಜೂಜುಗಾರ' ಕಥೆಯನ್ನು ಹೇಳಿ ಬರೆಯಿಸತೊಡಗಿ 26ದಿನಗಳೊಳಗೇ ಮುಗಿ ಸಿದರು. ಆನ್ನ ಗ್ರಿಗೋರ್ಯೆವ್ನ ಸ್ನೀತ್ಕಿನ ಎಂಬ ಇಪ್ಪತ್ತರ ಯುವತಿ ಶೀಘ್ರ ಲಿಪಿ ಕಾರಿಣಿಯಾಗಿದ್ದರು. ನಾಲ್ಕು ತಿಂಗಳನಂತರ ದಸ್ತಯೇವ್‌ಸ್ಕಿ ಆಕೆಯನ್ನು ವಿವಾಹ ವಾದರು. ಈ ವಿವಾಹ ಸುಖದಾಯಕವಾಗಿದ್ದಿತು. ಆನ್ನ ಗ್ರಿಗೋರ್ಯೆವ್ನ ಅವರಿಗೆ ಅವರ ಜೀವನದ ಕೊನೆಯ ದಿನಗಳವರೆಗೂ ನಿಷ್ಠಾವಂತ ಪತ್ನಿಯಾಗಿದ್ದರು, ದಸ್ತಯೇವ್‌ಸ್ಕಿಯವರ ಸಾಹಿತ್ಯ ಭಂಡಾರವನ್ನು ಸಂರಕ್ಷಿಸಿ ಇರಿಸಿದರು. ಅಲ್ಲದೆ ಅವರ ಜೀವನದ ಬಗೆಗೆ ಅತ್ಯುತ್ತಮ ಸ್ಮೃತಿಚಿತ್ರಗಳನ್ನು ಬರೆದಿರಿಸಿದರು. ಆಕೆಯೇ ದಸ್ತಯೇವ್‌ಸ್ಕಿ ವಸ್ತುಸಂಗ್ರಹಾಲಯ ಸ್ಥಾಪನೆಗೂ ಅಸ್ತಿವಾರ ಹಾಕಿದವರು. ಆಕೆ 1918ರಲ್ಲಿ ಇಳಿವಯಸ್ಸಿನಲ್ಲಿ ತೀರಿ ಹೋದರು.

ದಸ್ತಯೇವ್‌ಸ್ಕಿಯವರ ಭಾವೋದ್ರಿಕ್ತ ಅಸಾಧಾರಣ ಜೀವನದ ಕಾಲದಲ್ಲಿ ರಷ್ಯದಲ್ಲೂ ಪಶ್ಚಿಮ ಯೂರೋಪಿನಲ್ಲೂ ಪ್ರಕ್ಷುಬ್ಧ ಸಾಮಾಜಿಕ ಘಟನೆಗಳು ಜರುಗುತ್ತಿದ್ದವು. 1848ರಲ್ಲಿ ಅನೇಕ ಯೂರೋಪಿಯನ್ ದೇಶಗಳಲ್ಲಿ ಕ್ರಾಂತಿಯ ಅಲೆ ಹಬ್ಬುತ್ತಿದ್ದಿತು. ರಷ್ಯದಲ್ಲಿ 1861ರಲ್ಲಿ ಜೀತದಾಳು ಪದ್ಧತಿ ರದ್ದಾಗಿ ಹೊಸ ಬೂರ್ಷ್ವಾ ಸಂಬಂಧಗಳು ರೂಪುಗೊಳ್ಳತೊಡಗುವುದರೊಂದಿಗೆ ಸಮಾಜದ ಹಳೆಯ ಸಾಮಂತಶಾಹಿ ಪದ್ಧತಿ ನಾಶಗೊಂಡಿದ್ದಿತು. ರಷ್ಯನ್ ಕ್ರಾಂತಿಕಾರಿ ನರೋ ದ್ನಿಕ್ ಚಳವಳಿಗಾರರು ತ್ಸಾರ್‌ಶಾಹಿಯ ಆಡಳಿತವನ್ನು ಕೊನೆಗಾಣಿಸಿ ರಷ್ಯದ ಕ್ರಾಂತಿಕಾರಿ ಬೆಳವಣಿಗೆಯನ್ನು ಉತ್ಕರ್ಷಿಸುವ ಗುರಿಯಿಂದ ಅನೇಕ ಭಯೋ ತ್ಪಾದಕ ಚರ್ಯೆಗಳನ್ನು ನಡೆಸಿದರು. ಈ ಯತ್ನಗಳು ವಿಫಲಗೊಂಡವಷ್ಟೆ ಅಲ್ಲ, ಪ್ರತಿಗಾಮಿ ಆಡಳಿತವನ್ನು ಮತ್ತಷ್ಟು ದೃಢಪಡಿಸಿದವು, ಏಕೆಂದರೆ, ರಷ್ಯನ್ ರೈತಾಪಿ ಜನರು ಕ್ರಾಂತಿಕಾರಿ ಕಾರ್ಯಾಚರಣೆಗೆ ಇನ್ನೂ ಪಕ್ವವಾಗಿರಲಿಲ್ಲ. ಚಳ ವಳಿಯ ನಾಯಕರನ್ನು ವಿಚಾರಣೆಗೆ ಗುರಿಪಡಿಸಲಾಯಿತು. ಅದರ ಪ್ರತಿಧ್ವನಿ ದೇಶದಾದ್ಯಂತ ಮೊಳಗಿತು.

ಈ ಎಲ್ಲ ಘಟನೆಗಳ ಬಗೆಗೂ ದಸ್ತಯೇವ್‌ಸ್ಕಿಯವರ ಮನೋಧರ್ಮವನ್ನು ನಿರೂಪಿಸುವಾಗ, ಅವರು ಎಂದೂ ಒಬ್ಬ ಪರಿಶುದ್ಧ ಕಲಾವಿದರಾಗಿರಲಿಲ್ಲ ಎಂಬು ದನ್ನು ನೆನಪಿನಲ್ಲಿಟ್ಟಿರಬೇಕು. ರಷ್ಯದಲ್ಲಿ 1859-1861 ಕಾಲಾವಧಿಯ ಕ್ರಾಂತಿ ಕಾರಿ ವಾತಾವರಣದಲ್ಲಿ ಅವರು ಒಬ್ಬ ಸಮರಶೀಲ ಪತ್ರಕರ್ತರಾಗಿದ್ದರು, 'ವ್ರೇಮ್ಯ' ('ಕಾಲ') (1861-1863) ಹಾಗೂ 'ಎಪೋಖಾ' ('ಯುಗ') (1864-1865) ಪತ್ರಿಕೆಗಳ ಪ್ರಕಾಶಕರಾಗಿದ್ದರು, 'ಗ್ರಜ್ದನೀನ್' ('ಪೌರ') ನಿಯತ ಕಾಲಿಕದ ಕ್ರಿಯಾಶೀಲ ಸಂಪಾದಕರಾಗಿದ್ದರು, ತೀವ್ರಾಸಕ್ತಿಯ ಪತ್ರಿಕಾಲೇಖಕರಾ ಗಿದ್ದರು. ಪ್ರತಿ ತಿಂಗಳೂ ಪ್ರಕಟವಾಗುತ್ತಿದ್ದ ತಮ್ಮ 'ಲೇಖಕನ ದಿನಚರಿ'ಯಲ್ಲಿ ಅವರು ದೇಶದ ಹಾಗೂ ಅಂತರರಾಷ್ಟ್ರೀಯ ರಾಜಕೀಯ ಕ್ಷೇತ್ರದ ಎಲ್ಲ ತುರ್ತಿನ ಸಮಸ್ಯೆಗಳ ಬಗೆಗೂ ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸಿದರು. 1862, 1863, 1865 ಹಾಗೂ 1867-71ರಲ್ಲಿ ದಸ್ತಯೇವ್‌ಸ್ಕಿಯವರು ವಿದೇಶಗಳಲ್ಲಿ ಸಂಚಾರ ಕೈಕೊಂಡಿದ್ದರು, ಜರ್ಮನಿ, ಸ್ವಿಟ್ಸರ್ಲೆಂಡ್, ಇಟಲಿ, ಇಂಗ್ಲೆಂಡ್ ಹಾಗೂ ಆಸ್ಟ್ರೋ-ಹಂಗರಿಗಳಿಗೆ ಭೇಟಿ ನೀಡಿದರು. ಈ ವಿದೇಶ ಯಾತ್ರೆಯ ತಮ್ಮ ಭಾವನೆ ಗಳನ್ನು ಅವರು 'ಬೇಸಿಗೆಯ ಭಾವನೆಗಳ ಬಗೆಗೆ ಚಳಿಗಾಲದ ಟಿಪ್ಪಣಿಗಳು' ಎಂಬ ಕೃತಿಯಲ್ಲಿ ವರ್ಣಿಸಿದ್ದಾರೆ. 1871ರಲ್ಲಿ ಡ್ರೆಸ್ಡೆನ್‌ನಲ್ಲಿದ್ದಾಗ ಅವರು ಫ್ರಾಂಕೋ-ಪ್ರಷ್ಯನ್ ಯುದ್ಧವನ್ನೂ ಪ್ಯಾರಿಸ್ ಕಮ್ಯೂನ್ ಘಟನೆಗಳನ್ನೂ ನಿಕಟವಾಗಿ ಗಮನಿಸಿದರು. ಹೀಗೆ ಈ ಲೇಖಕರ ಖಾಸಗಿ ಜೀವನವು ಆ ಕಾಲದಲ್ಲಿ ರಷ್ಯದಲ್ಲೂ ಯೂರೋಪಿನಲ್ಲೂ ಜರುಗುತ್ತಿದ್ದ ಪ್ರಧಾನ ರಾಜಕೀಯ ಹಾಗೂ ಸಾಮಾಜಿಕ ಘಟನೆಗಳೊಂದಿಗೆ ಹಾಸು ಹೊಕ್ಕಾಗಿ ಸೇರಿಕೊಂಡಿದ್ದಿತು. ರಷ್ಯದಲ್ಲಿ ಜೀತದಾಳು ಪದ್ಧತಿಯ ಪತನವಾಗಿ ಬಂಡವಾಳಶಾಹಿ ಬೆಳವಣಿಗೆಯ ಮಾರ್ಗ ಪ್ರಾರಂಭ ವಾದುದು; ಯೂರೋಪಿನಲ್ಲಿ ಬೂರ್ಷ್ವಾ ಸಮಾಜದಲ್ಲಿ ವೈರುಧ್ಯಗಳು ಉಲ್ಬಣ ಗೊಂಡು ಶೋಷಣೆ ತೀವ್ರವಾದುದು; ಕೊನೆಗೆ ಜಗತ್ತಿನಾದ್ಯಂತ ಸಮಾಜವಾದಿ ವಿಚಾರಗಳು ಶೀಘ್ರವಾಗಿ ಹರಡಿ ಕ್ರಾಂತಿಕಾರಿ ಚಳವಳಿಯ ಉತ್ಕರ್ಷ – ಇವು ಆಗಿನ ಪ್ರಧಾನ ಘಟನೆಗಳಾಗಿದ್ದವು.

ಆ ಕಾಲದಲ್ಲಿ ದಸ್ತಯೇವ್‌ಸ್ಕಿಯವರ ಅಭಿಪ್ರಾಯಗಳು ಏನಾಗಿದ್ದವು? ಅನೇಕ ವರ್ಷಗಳ ಕಠಿಣ ಶಿಕ್ಷೆಯ ಅನುಭವ ಅವರಲ್ಲಿ ಜೀವನದ ಬಗೆಗೆ ಪ್ರೇಮವನ್ನೂ ಮಾನವನಲ್ಲಿ ನಂಬಿಕೆಯನ್ನೂ ಏನೂ ನಾಶಮಾಡದಾಗಿದ್ದಿತು, ಅದು ಮಾನವ ವೇದನೆಯ ಬಗೆಗೆ ಅವರ ಗ್ರಹಣಶಕ್ತಿಯನ್ನು ಹೆಚ್ಚಿಸಿದ್ದಿತಷ್ಟೆ. ಅದೇ ಹೊತ್ತಿ ನಲ್ಲಿ ಅವರ ಒಳ ಜೀವನದಲ್ಲಿ ಮುಗ್ಗಟ್ಟು ಉಂಟಾಗಿದ್ದಿತು, ಸಮಾಜವಾದಿ ವಿಚಾರಗಳಲ್ಲಿ ಭ್ರಮೆನಿರಸನವಾಗಿದ್ದಿತು, ಅವರ ಸಿದ್ಧಾಂತದಲ್ಲಿ ದುರಂತ ವೈರುಧ್ಯ ಗಳು ಪರಿಪಕ್ವಗೊಂಡಿದ್ದವು.

ಕಾರಾಗೃಹ ಶಿಕ್ಷೆ ಅನುಭವಿಸುತ್ತಿದ್ದಾಗ ಯುವ ಲೇಖಕ ಸಾಧಾರಣ ಸೈನಿಕರ ಹಾಗೂ ರೈತರ ಸಂಪರ್ಕ ಪಡೆದುಕೊಂಡರು. ಇದು ಅವರಿಗೊಂದು ಅದ್ಭುತ ಅನುಭವವಾಗಿದ್ದಿತು. ಅದೇ ಹೊತ್ತಿನಲ್ಲಿ ಅವರು "ಸಾಮಾನ್ಯ ಜನರ" ಆಂತರಿಕ ಜಗತ್ತಿಗೂ ಕುಲೀನವರ್ಗದವರ ಹಾಗೂ ರಜ್ನೊಚಿನೆತ್ಸ್ ಕ್ರಾಂತಿಕಾರಿಗಳ* ಒಳ ಜಗತ್ತಿಗೂ ಮಧ್ಯೆ ಅವನ್ನು ಪ್ರತ್ಯೇಕಿಸುವ ಖಾಲಿ ಗೋಡೆಯೊಂದು ಇದ್ದುದನ್ನೂ ಅವರು ಗಮನಿಸಿದರು. ರಜ್ನೊಚಿನೆತ್ಸ್ ಕ್ರಾಂತಿಕಾರಿಗಳು ಆ ಶತಮಾನದ ನಲವತ್ತರ ಹಾಗೂ ಐವತ್ತರ ವರ್ಷಗಳಲ್ಲಿ ಇನ್ನೂ ಅಲ್ಪ ಸಂಖ್ಯೆಯಲ್ಲಷ್ಟೆ ಇದ್ದರು. ದಸ್ತಯೇವ್‌ಸ್ಕಿಯವರು ಅವರ ಪರಿಚಯಪಡೆದಿದ್ದರು. ಸುಶಿಕ್ಷಿತ ಜನರಿಗೂ ಸಾಮಾನ್ಯ ಜನರಿಗೂ ಮಧ್ಯೆ ಭಾರಿ ಅಂತರವಿದ್ದುದು ದಸ್ತಯೇವ್‌ಸ್ಕಿಯವರ ವಿಷಾದನೀಯ ಚಿಂತನೆಗಳಿಗೆ ಕಾರಣವಾಯಿತು. ಐವತ್ತರ ವರ್ಷಗಳಲ್ಲಿ ಯೂರೋಪಿನಲ್ಲಿ ರಾಜಕೀಯ ಪ್ರತಿಗಾಮಿ ಶಕ್ತಿಗಳೇ ಮೇಲುಗೈ ಪಡೆದುದನ್ನು ಕಂಡು ದಸ್ತಯೇವ್‌ಸ್ಕಿಯವರು ಕ್ರಾಂತಿಕಾರಿ ಚಳವಳಿಯಲ್ಲೂ ಅದರ ಸಾಧ್ಯತೆಗಳಲ್ಲೂ ನಂಬಿಕೆಯನ್ನು ಕಳೆದುಕೊಂಡರು. ಇದರ ಫಲವಾಗಿ, ಅರವತ್ತರ ವರ್ಷಗಳಲ್ಲಿ ಅವರು ಚೆರ್ನಿಷೇವ್‌ಸ್ಕಿಯವರಿಗೂ ಇತರ ರಷ್ಯನ್ ಕ್ರಾಂತಿಕಾರಿ ಪ್ರಜಾಪ್ರಭುತ್ವವಾದಿಗಳಿಗೂ ವಿರೋಧವಾದರು.

ಪಶ್ಚಿಮ ಯೂರೋಪಿನಲ್ಲಿ ಪ್ರವಾಸ ಕೈಕೊಂಡಿದ್ದಾಗ ಅವರು ಅಲ್ಲಿನ ಹೊಸ ಬೂರ್ಷ್ವಾ ಸಂಬಂಧಗಳ ಋಣಾತ್ಮಕ ಲಕ್ಷಣಗಳನ್ನು ಕಂಡು ತಲ್ಲಣಗೊಂಡರು. ಅಂತಹ ಸಮಾಜವು ರಷ್ಯಕ್ಕೆ ಭಾರಿ ವಿಪತ್ಕಾರಿಯಾಗುವುದೆಂದು ಅವರು ಪರಿಗಣಿಸಿದ್ದರು. ಅದೇ ರೀತಿ 1789ರ ಫ್ರೆಂಚ್ ಕ್ರಾಂತಿಯನಂತರ ಯೂರೋಪಿನಲ್ಲಾದ ಬೆಳವಣಿಗೆಗಳೂ ರಷ್ಯಕ್ಕೆ ಸಲ್ಲವೆಂದು ಅವರು ಭಾವಿಸಿದ್ದರು. ಲೆವ್ ತೊಲ್‌ಸ್ತೋಯ್ ಹಾಗೂ ರಷ್ಯನ್ ನರೋದ್ನಿಕ್‌ರಂತೆ ದಸ್ತಯೇವ್‌ಸ್ಕಿಯವರು ರಷ್ಯವು ಯಾವುದೋ ರೀತಿಯಲ್ಲಿ "ಪಾಶ್ಚಿಮಾತ್ಯ" ಮಾದರಿಯಿಂದ ತಪ್ಪಿಸಿಕೊಳ್ಳುವುದೆಂಬ ಚಾರಿತ್ರಿಕ ಅಸಾಧ್ಯಾದರ್ಶವಾದಿ ಕನಸು ಕಾಣುವುದಕ್ಕೆ ಕಚ್ಚಿ ಕುಳಿತಿದ್ದರು. ರಷ್ಯನ್ ಜನರು ತಮ್ಮದೇ ಆದ ಬೇರೆ ಮಾರ್ಗ ಹಿಡಿಯಬೇಕೆಂದು ವಿಚಾರಶೀಲ ರಷ್ಯನ್ನರಿಗೆ, ಅದರಲ್ಲೂ ವಿಶೇಷವಾಗಿ ದೇಶದ ಯುವ ಪೀಳಿಗೆಯವರಿಗೆ, ಸಾಧಿಸಿತೋರಿಸಲು ಅವರು ಸಾಹಿತಿಯಾಗಿ, ಪತ್ರಿಕಾ ಲೇಖಕರಾಗಿ, ಪತ್ರಕರ್ತರಾಗಿ ತಮ್ಮೆಲ್ಲ ಪ್ರತಿಭೆಗಳನ್ನೂ ಬಳಸಿಕೊಂಡರು. ರಷ್ಯವು, ವಿಶೇಷವಾಗಿ ಎಪ್ಪತ್ತರ ವರ್ಷಗಳಲ್ಲಿ, ಬೂರ್ಷ್ವಾ ಬೆಳವಣಿಗೆಯ ಮಾರ್ಗವನ್ನೇ ಹಿಡಿಯುತ್ತಿದ್ದಿತೆಂದು ಅವರಿಗೆ ಸ್ಪಷ್ಟವಾಗತೊಡಗಿದಂತೆ ಅವರು ಅಂತಹ ಮಾರ್ಗ ಎಷ್ಟು

---

*ಕುಲೀನರಲ್ಲದ ವಿವಿಧ ಸ್ತರಗಳ ಜನರಿಂದ ಕೂಡಿದ ಕ್ರಾಂತಿಕಾರಿಗಳು. – ಸಂ.

ತಪ್ಪಾದುದು ಎಂಬುದನ್ನು ತೋರಿಸಿಕೊಡುವುದೂ, ಯೂರೋಪಿಯನ್ ಮಾದರಿಯ ಭೀಕರ ಲಕ್ಷಣಗಳನ್ನೆಲ್ಲ ಬಿಟ್ಟುಕೊಟ್ಟು ರಷ್ಯವು ತನ್ನದೇ ಮಾರ್ಗ ಹಿಡಿಯುವ ಸಾಧ್ಯತೆ ಖಂಡಿತ ಇದೆಯೆಂದು ಸಾಧಿಸಿ ತೋರಿಸುವುದೂ, ಅಗತ್ಯವೆಂಬ ವಿಚಾರಕ್ಕೆ ಗೀಳು ಹಿಡಿದವರಂತೆ ಕಚ್ಚಿಕೊಂಡರು. ಅವರ ಈ ಭ್ರಾಂತಿ ಅವರ "ಮರಳಿ ಮಣ್ಣಿಗೆ" ಸಿದ್ಧಾಂತದಲ್ಲಿ ಸ್ಪಷ್ಟವಾಗಿ ವ್ಯಕ್ತಪಟ್ಟಿತು. ಈ ಸಿದ್ಧಾಂತವನ್ನು ಅವರು ಮೊದಲು ಪತ್ರಿಕೆಗಳಿಗೆ ಬರೆಯುತ್ತಿದ್ದ ತಮ್ಮ ಲೇಖನಗಳಲ್ಲೂ ಅನಂತರ 'ಲೇಖಕನ ದಿನಚರಿ'ಯಲ್ಲೂ ಪ್ರಕಟಗೊಳಿಸಿದರು. "ಮಣ್ಣಿ"ನಿಂದ ಪ್ರತ್ಯೇಕಗೊಂಡಿದ್ದಂಥ ಕುಲೀನ ಜನರೂ ಬುದ್ಧಿಜೀವಿಗಳೂ ಸಾಮಾನ್ಯ ಜನರೊಂದಿಗೆ ಬೆರೆಯಬೇಕು, ಸಮಾಜದ ಎಲ್ಲ ವರ್ಗಗಳೂ ರಾಜಪ್ರಭುತ್ವದ ಹಾಗೂ ರಷ್ಯನ್ ಆರ್ಥೊಡಾಕ್ಸ್ ಚರ್ಚಿನ ಕೆಳಗೆ ಒಂದುಗೂಡಬೇಕು, ಹಾಗಾದರಷ್ಟೆ ರಷ್ಯವು ಮಾನವಕುಲಕ್ಕೆ ಸಾರ್ವತ್ರಿಕ ಸುಖ ತಂದುಕೊಡುವ ತನ್ನ "ಉದ್ಧಾರಕ" ಪಾತ್ರವನ್ನು ನಿರ್ವಹಿಸಬಲ್ಲುದು, ಎಂದು ದಸ್ತಯೇವ್‌ಸ್ಕಿ ನಂಬಿದ್ದರು. ಈ ವಿಷಯದಲ್ಲೇ ದಸ್ತಯೇವ್‌ಸ್ಕಿಯವರ ವಿಚಾರಗಳು ತೊಲ್‌ಸ್ತೋಯ್‌ರವರ "ಸರಳತೆ"ಯ ಸಿದ್ಧಾಂತದಿಂದಲೂ, ನರೋದ್ನಿಕ್‌ರ ಸಮಾಜವಾದದ ವಿಚಾರಗಳಿಂದಲೂ, ಭಿನ್ನವಾಗಿದ್ದವು.

ಜನರಿಗೂ ಆಳುವ ವರ್ಗಗಳಿಗೂ ನಡುವೆ ಹಿತಗಳ ಘರ್ಷಣೆ ಇದ್ದುದನ್ನು ನಿರಾಕರಿಸಿದುದೂ ಸಾಮಾಜಿಕ ಹೋರಾಟಕ್ಕೆ ಪ್ರತಿಯಾಗಿ ತಮ್ಮದೇ "ವರ್ಗಕ್ಕೂ ಮೇಲಿನ" ಹಾಗೂ ರಾಷ್ಟ್ರೀಯ ಎಂದು ಭಾವಿಸಿಕೊಂಡಿದ್ದಂಥ ಧ್ಯೇಯಗಳನ್ನು ಎತ್ತಿ ಹಿಡಿದುದೂ, ದಸ್ತಯೇವ್‌ಸ್ಕಿಯವರನ್ನು ಪ್ರಜಾಪ್ರಭುತ್ವವಾದಿ ಶಿಬಿರದಿಂದ ತೀವ್ರವಾಗಿ ಪ್ರತ್ಯೇಕಿಸಿತು.

ನೈತಿಕ ನಿಯಮಗಳು ಧಾರ್ಮಿಕ ಆಧಾರದ ಮೇಲಷ್ಟೆ ಹಾಗೂ ವ್ಯಕ್ತಿಯು ನೈತಿಕ ಪರಿಪೂರ್ಣತೆಯನ್ನು ಸಾಧಿಸುವ ಮೂಲಕವಷ್ಟೆ ವಿಜಯಗೊಳ್ಳುವುದು ಸಾಧ್ಯ, ಎಂಬುದು ಅವರ ಅಭಿಪ್ರಾಯವಾಗಿದ್ದಿತು. ತಮ್ಮ 'ಟಿಪ್ಪಣಿಗಳ'ಲ್ಲಿ ಅವರು ಬರೆದರು: "ತನ್ನ ವೈಯಕ್ತಿಕತೆಯನ್ನು ಪ್ರಬಲವಾಗಿ ಬೆಳೆಸಿಕೊಂಡವನೊಬ್ಬ, ತಾನು ಒಬ್ಬ ವ್ಯಕ್ತಿಯಾಗಿರುವ ಹಕ್ಕಿನಲ್ಲಿ ಆತ್ಮವಿಶ್ವಾಸ ಹೊಂದಿರುವವನೊಬ್ಬ, ತನ್ನ ಬಗೆಗೇ ಯಾವುದೇ ರೀತಿಯ ಅಂಜಿಕೆಯನ್ನೂ ಹೊಂದಿರದವನೊಬ್ಬ, ತನ್ನ ವೈಯಕ್ತಿಕ ಗುಣಗಳನ್ನು ಇತರರೆಲ್ಲರಿಗೂ ಹಂಚಿ ಅವರೂ ತನ್ನಂತೆಯೇ ಸ್ವತಂತ್ರರಾದ ಸಂತಸಭರಿತರಾದ ವ್ಯಕ್ತಿಗಳಾಗುವಂತೆ ಮಾಡುವ ರೀತಿಯಲ್ಲಲ್ಲದೆ ಬೇರಾವ ರೀತಿಯಲ್ಲೂ ಅವುಗಳನ್ನು ಬಳಸಲಾರ."

ಅತ್ಯಂತ ಸ್ಥೂಲ ಅರ್ಥದಲ್ಲಿ ಹಾಗೂ ಅಂತಿಮ ಗುರಿಗಳಲ್ಲಿ ಈ ಕನಸು, ದಸ್ತಯೇವ್‌ಸ್ಕಿಯವರು ಸಮಾಜವಾದಿ ವಿಚಾರಗಳಿಗೆ ತುಂಬ ನಿಕಟವಾಗಿದ್ದ

ರೆಂದೇ ತೋರಿಸಿಕೊಡುತ್ತದೆ. ಆದರೆ ಅತ್ಯಂತ ಸ್ಥೂಲ ಅರ್ಥದಲ್ಲಷ್ಟೆ ಹಾಗೂ ಅಂತಿಮ ಗುರಿಗಳಲ್ಲಷ್ಟೆ. ಇತರೆಲ್ಲ ಅಂಶಗಳಿಗೆ ಸಂಬಂಧಿಸಿಯೂ ಅವರು ಪಶ್ಚಿಮ ಯೂರೋಪಿನ ಸಮಾಜವಾದಿ ಸಿದ್ಧಾಂತಗಳಿಂದಲೂ ತಮ್ಮ ಸಹದೇಶೀಯರ – ರಷ್ಯನ್ ಕ್ರಾಂತಿಕಾರಿ ಪ್ರಜಾಪ್ರಭುತ್ವವಾದಿಗಳ – ಸಮಾಜವಾದಿ ವಿಚಾರಗಳಿಂದಲೂ ಸಂಪೂರ್ಣವಾಗಿ ಭಿನ್ನವಾದಂಥ ಅಭಿಪ್ರಾಯಗಳನ್ನು ಹೊಂದಿದ್ದರು. ಅವರ ಕಾಲದಲ್ಲಿದ್ದ ಸಮಾಜವಾದಿ ಚಿಂತನೆ ಪ್ರತಿಪಾದಿಸಿದ ಕ್ರಾಂತಿಕಾರಿ ಹೋರಾಟದ ವಿಚಾರಗಳು, ಅವರು ಅರ್ಥಮಾಡಿಕೊಂಡಿದ್ದಂತೆ ವೈಯಕ್ತಿಕ ಸ್ವಾತಂತ್ರ್ಯದ ಸಮಸ್ಯೆಯನ್ನು ಪರಿಹರಿಸಲಾರವೆಂದು ಅವರು ಅಂಜಿದ್ದರು. ಅವರು ಅರಾಜಕತಾವಾದಿಗಳ ಮೊಂಡುತನದಿಂದಲೂ ಅವರ ಸಮಕಾಲೀನರು – ಅರಾಜಕತಾವಾದಿ ಮಿಖಯಿಲ್ ಬಕೂನಿನ್ ಹಾಗೂ ಭಯೋತ್ಪಾದಕವಾದಿ ಸೆರ್ಗೇಯ್ ನಿಚಾಯೆವ್ ಅನುಸರಿಸಿದ ಭಯೋತ್ಪಾದಕ ಹೋರಾಟ ವಿಧಾನಗಳಿಂದಲೂ ಭಯಭ್ರಾಂತರಾಗಿದ್ದರು. ಈ ಅರಾಜಕತಾವಾದಿಗಳು ನಿಜಕ್ಕೂ ನೈಜ ಕ್ರಾಂತಿಕಾರಿ ಸಮಾಜವಾದಿ ಚಳವಳಿಗೆ ಗಹನವಾದ ಹಾನಿಯನ್ನೇ ಉಂಟು ಮಾಡುತ್ತಿದ್ದರು.

ಲೇಖಕರ ಸೃಜನಾತ್ಮಕ ಕ್ರಿಯೆಗೆ – ಮಾನವ ಯಾತನೆಯ ಜಗತ್ತನ್ನು ಚಿತ್ರಿಸುವ ಕ್ರಿಯೆಗೆ – ಯಾವುದು ಆಧಾರವಾಗಿದ್ದಿತೆಂಬುದನ್ನು ಅವರ ಜೀವನ ಚರಿತ್ರೆಯ ಸ್ಥೂಲ ಪರಿಚಯವೇ ತಿಳಿಸಿಕೊಡುತ್ತದೆ. ಅವರ ಕಾದಂಬರಿಗಳಲ್ಲೂ ಕಿರುಕಾದಂಬರಿಗಳಲ್ಲೂ ಸಣ್ಣ ಕಥೆಗಳಲ್ಲೂ ತುಂಬಿರುವ ಸಂಕೀರ್ಣವಾದ ಹಾಗೂ ವೈವಿಧ್ಯಪೂರ್ಣವಾದ ಪಾತ್ರಗಳಿಗೂ ವಿಚಾರಗಳಿಗೂ ಪರಿಸ್ಥಿತಿಗಳಿಗೂ ಇದೇ ಆಧಾರವಾಗಿದ್ದಿತು. ಅವರ ಕೃತಿಗಳ ಮೈಕಟ್ಟು ಎಷ್ಟೇ ಅಮೂರ್ತವಾಗಿ ವಿಕಟವಾಗಿ ಅಥವಾ ಭ್ರಾಂತ್ಯಾತ್ಮಕವಾಗಿ ಕಂಡುಬಂದರೂ, ಅವರ ಜೀವನಾನುಭವದ ಅಡಿಪಾಯವೇ ಅವುಗಳಿಗೆ ದೃಢವಾದ ಹಾಗೂ ವಾಸ್ತವಿಕವಾದ ಆಧಾರವನ್ನು ಒದಗಿಸಿಕೊಟ್ಟಿದೆ.

ದಸ್ತಯೇವ್‌ಸ್ಕಿಯವರ ಬರಹಗಳನ್ನು ನಾನು ಒಂದು ಭಾರಿ ಪಿರಮಿಡ್‌ನ ರೂಪದಲ್ಲಿ ಕಲ್ಪಿಸಿಕೊಳ್ಳುತ್ತೇನೆ. ಅದರ ಅಗಲವಾದ ಅಡಿಪಾಯ ಮಾನವ ಸಂಕಷ್ಟದ ಚಿತ್ರಣಗಳಿಂದ ತುಂಬಿದೆ. ಈ ಅಡಿಪಾಯದ ಮೇಲೆ ಬಂಡಾಯ ಹಾಗೂ ಶರಣಾಗತಿ, ಅಂಜಿಕೆ ಹಾಗೂ ರೌದ್ರ, ಇವುಗಳ ಭಾರಿ ಹಾಗೂ ತೊಡಕಾದ ಸಮಸ್ಯೆಗಳ ಕಟ್ಟಣೆ ನಿಂತಿದೆ. ಅಲ್ಲಿ ನೈತಿಕ ಹಾಗೂ ರಾಜಕೀಯ ವಿಚಾರಗಳೂ ಹೆಚ್ಚು ಕ್ರಿಯಾಶೀಲವಾಗುತ್ತವೆ. ಈ ಪಿರಮಿಡಿನ ತುಟ್ಟತುದಿಯಲ್ಲಿ, ಜೀವನದ ಹಾಗೂ ಸಾವಿನ, ಬ್ರಹ್ಮಾಂಡದಲ್ಲಿ ಮನುಷ್ಯನ ಸ್ಥಾನದ, ಒಳಿತು ಕೆಡಕುಗಳ

ನಡುವಿನ ಹಾಗೂ ಧರ್ಮ ನಾಸ್ತಿಕತೆಗಳ ನಡುವಿನ ಹೋರಾಟದ ತತ್ವಶಾಸ್ತ್ರೀಯ ಸಮಸ್ಯೆಗಳು ಎದ್ದು ನಿಂತಿವೆ.

## II

ಮಾನವ ವೇದನೆಯ ಇಡೀ ನಿಷ್ಠುರ ಶ್ರೇಣಿಯನ್ನು – ಮಾನವ ಆತ್ಮದ ಹಾಗೂ ಮಾನವ ಚೈತನ್ಯದ ಅಳಲನ್ನು, ಭೌತಿಕ, ಮಾನಸಿಕ ಹಾಗೂ ನೈತಿಕ ಸಂಕಟವನ್ನು – ಚಿತ್ರಿಸುವುದರಲ್ಲಿ ದಸ್ತಯೇವ್‌ಸ್ಕಿ ಸಿದ್ಧಹಸ್ತರು. ಕೈದಿಗಳಿಗೆ ನೀಡು ತ್ತಿದ್ದ ದೈಹಿಕ ಶಿಕ್ಷೆ, ಸ್ತ್ರೀಯರ ಘನತೆಯ ಉಲ್ಲಂಘನೆ ಹಾಗೂ ತೇಜೋಭಂಗ, ಪುಟ್ಟ ಮಕ್ಕಳನ್ನು ತಾಯಿತಂದೆಯರು ಹಿಂಸಿಸುವುದು, ಕೊನೆಯದಾಗಿ ನಿಸ್ಸಹಾ ಯಕ ಪ್ರಾಣಿಗಳನ್ನು ಥಳಿಸುವುದು – ಇವನ್ನೆಲ್ಲ ದಸ್ತಯೇವ್‌ಸ್ಕಿಯವರ ಕೃತಿ ಗಳಲ್ಲಿ ಓದಿದ ಯಾರೇ ಆಗಲಿ, ಹುಟ್ಟಿನಿಂದಲೇ ಕಲ್ಲೆದೆಯವರಾಗಿರದಿದ್ದಲ್ಲಿ, ಸಿಟ್ಟಿನಿಂದ ರೊಚ್ಚಿಗೇಳದೆ ಇರುವುದು ಸಾಧ್ಯವಿಲ್ಲ. 'ಸಾವಿನ ಮನೆಯಿಂದ ಬರೆದ ಟಿಪ್ಪಣಿಗಳ'ಲ್ಲಿ ಚಡಿ ಹೊಡೆತದ ದೃಶ್ಯಗಳು; 'ಅಪಮಾನಿತರು ಹಾಗೂ ತೇಜೋ ಭಂಗಗೊಂಡವರು' ಕೃತಿಯಲ್ಲಿ ಪುಟ್ಟ ನೆಲ್ಲಿಯ ಬವಣೆ; 'ಅಪರಾಧ ಮತ್ತು ಶಿಕ್ಷೆ'ಯಲ್ಲಿ ಸೋನ್ಯಾ ಮರ್ಮೆಲಾದೊವಾಳ ತೇಜೋಭಂಗ (ಅವಳು ತನ್ನ ತಂದೆ ಹಾಗೂ ಮಲತಾಯಿಯ ಕುಟುಂಬ ಪೋಷಣೆಗಾಗಿ ಹದಿನೇಳರ ವಯಸ್ಸಿ ನಲ್ಲೇ ಹಾದರಗಿತ್ತಿಯಾಗಬೇಕಾಗುತ್ತದೆ); 'ಹೆಡ್ಡ' ಕಾದಂಬರಿಯಲ್ಲಿ ಸುಂದರ ಳಾದ ನಸ್ತಾಸಿಯ ಫಿಲೀಪ್ಪೊವ್ನಳನ್ನು ವಸ್ತುಗಳಿಗೆ ವಿನಿಮಯ ಮಾಡಿ ಕೊಳ್ಳುವುದು; 'ಸಾಧು ಸ್ವಭಾವದವಳು' ಕಥೆಯಲ್ಲಿ ಪತಿಯೊಬ್ಬ ತನ್ನ ಪತ್ನಿಯನ್ನು ಒಳಪಡಿಸುವ ಮಾನಸಿಕ ಚಿತ್ರಹಿಂಸೆ – ಇವೆಲ್ಲವನ್ನೂ ನೆನಪಿಸಿಕೊಂಡರೆ ಸಾಕು. ಮಾನವ ವೇದನೆಯ ಈ ಸಂಚಯ ಲೇಖಕರಿಗೆ ಅಪರಿಮಿತ ಅಳಲಿನ ಆಕರ ವಾಗುತ್ತದೆ, ಅವರ ಚಿತ್ತಶಾಂತಿಯನ್ನು ಕದಡುತ್ತದೆ, ಅವರ ಪ್ರಧಾನ ಪಾತ್ರ ಗಳನ್ನು ಕ್ರಿಯಾಶೀಲರಾಗುವಂತೆ ಪ್ರೇರಿಸುತ್ತದೆ.

ಇವಾನ್ ಕರಮಾಜೊವ್ ತನ್ನ ಸೋದರ ಅಲ್ಯೋಷನಿಗೆ ಹೇಳುತ್ತಾನೆ: "ನಾನು ಒಟ್ಟಿನ ಮೇಲೆ ಮಾನವ ವೇದನೆಯ ಬಗೆಗೆ ಹೇಳಲು ಹೊರಟಿದ್ದೆ. ಆದರೆ ಮಕ್ಕಳ ವೇದನೆಯ ಬಗೆಗಷ್ಟೆ ಹೇಳುವುದು ಉತ್ತಮ. ಅದು ನನ್ನ ವಾದದ ಪ್ರಮಾಣವನ್ನು ಹತ್ತನೇ ಒಂಬತ್ತರಷ್ಟು ಕಮ್ಮಿಮಾಡುವುದು. ಆದರೆ ನಾನು ಮಕ್ಕಳ ಬಗೆಗಷ್ಟೆ ಹೇಳುವುದು ಉತ್ತಮ... ನಾನು ಪುಟ್ಟ ಮಕ್ಕಳನ್ನಷ್ಟೆ ತೆಗೆದುಕೊಂಡೆ, ಏಕೆಂದರೆ, ಅದರಿಂದ ನಾನು ನನ್ನ ವಿವರಣೆಯನ್ನು ಸ್ಪಷ್ಟ

ಗೊಳಿಸಬಹುದು. ಮಾನವಕುಲದ ಉಳಿದ ಜನರ ಕಣ್ಣೀರಿನ ಬಗೆಗೆ ನಾನು ಒಂದು ಮಾತನ್ನೂ ಹೇಳುವುದಿಲ್ಲ. ಈ ಕಣ್ಣೀರು ಭೂಮಿಯನ್ನು ಹೊರ ಪದರದಿಂದ ಒಳಕೇಂದ್ರದವರೆಗೆ ಪೂರ್ಣವಾಗಿ ತೋಯಿಸಿದೆ." ಇವಾನನು ಕೆಲವು ನಿದರ್ಶನಗಳನ್ನು ನೀಡುತ್ತಾನೆ. ಬುದ್ಧಿಶಾಲಿಯಾದ ಸುಶಿಕ್ಷಿತನಾದ ವ್ಯಕ್ತಿಯೂ ಆತನ ಹೆಂಗಸೂ ತಮ್ಮ ಏಳು ವರ್ಷ ವಯಸ್ಸಿನ ಮಗಳನ್ನು ಅವಳು ಪ್ರಜ್ಞೆ ತಪ್ಪುವವರೆಗೂ ಥಳಿಸುತ್ತಾರೆ. ಆದರೆ ಅವರ ವಕೀಲನು ತಂದೆಯನ್ನು ಸಮರ್ಥಿಸುತ್ತಾನೆ, ಏಕೆಂದರೆ, ಅದೊಂದು "ಸಾಮಾನ್ಯ ಕುಟುಂಬ ವ್ಯವಹಾರ." ಯಾವುದೋ ತಪ್ಪಿಗೆ ಶಿಕ್ಷೆಯಾಗಿ ಐದು ವರ್ಷ ವಯಸ್ಸಿನ ಮಗುವೊಂದನ್ನು ಇಡೀ ರಾತ್ರಿ ಕಕ್ಕಸಿನಲ್ಲಿ ಬೀಗ ಹಾಕಿ ಇರಿಸಲಾಗುತ್ತೆ. ತನ್ನ ಮೆಚ್ಚಿನ ನಾಯಿಯತ್ತ ಒಂದು ಕಲ್ಲು ತೂರಿದುದಕ್ಕಾಗಿ ಜನರಲ್ಲನೊಬ್ಬ ತನ್ನ ಬೇಟೆನಾಯಿಗಳನ್ನು ಬೆತ್ತಲೆ ಮಗುವಿನ ಮೇಲೆ, ಅದರ ತಾಯಿಯ ಮುಂದೆಯೇ, ಛೂ ಬಿಡುತ್ತಾನೆ.

ನಿಕೊಲಾಯ್ ದಬ್ರಲ್ಯೂಬೊವ್ ಬರೆದಂತೆ, ದಸ್ತಯೇವ್‌ಸ್ಕಿಯವರು ಯಾವತ್ತೂ "ಮಾನವನ ಬಗೆಗೆ ಸಂಕಟ ಪಡುತ್ತಾರೆ." ಆದರೂ ದಸ್ತಯೇವ್‌ಸ್ಕಿಯವರು ವಾಸ್ತವಿಕ ಸಂಗ್ಯತಿಗಳನ್ನು ದಾಖಲು ಮಾಡುವತ್ತವೇ ಗಮನ ಕೇಂದ್ರೀಕರಿಸುವ ಪ್ರಕೃತಿವಾದಿ ಪಂಥಕ್ಕೇನೂ ಸೇರಿದವರಲ್ಲ. ಇತರ ಅನೇಕ ಲೇಖಕರಂತಲ್ಲದೆ ಇವರು ಪೀಡಿತ ಜನರಿಗಾಗಿ ಸಹಾನುಭೂತಿ ಉಂಟಾಗುವಂತೆ ಮಾಡುವುದರಲ್ಲಷ್ಟೆ ತೃಪ್ತಿಪಟ್ಟುಕೊಂಡಿರರು. ಇವರು ಕಲಾವಿದರೂ ಹೌದು, ಚಿಂತಕರೂ ಹೌದು. ಮಾನವ ವೇದನೆಯ ದೃಶ್ಯವನ್ನು ಕಂಡು ಇವರು ಪ್ರಮುಖ ದಾರ್ಶನಿಕ ಸಮಸ್ಯೆಗಳನ್ನು ಮಾನವಕುಲದ ಮುಂದಿರಿಸುವ ಬಲವಂತಕ್ಕೊಳಗಾಗುತ್ತಾರೆ.

ಮತ್ತೆ "ಪಿರಮಿಡ್"ನ ಉಪಮಾನಕ್ಕೆ ಹಿಂದಿರುಗೋಣ. ಮಾನವ ವೇದನೆಯೇ ಈ ಪಿರಮಿಡಿನ ಅಡಿಪಾಯ ಎಂದು ಹೇಳಿದೆನಷ್ಟೆ. ಈ ವೇದನೆಯು ಜಗತ್ತಿನ ಮೇಲುಗಡೆ ಒಂದು ವಿಶಿಷ್ಟ ಸ್ತರವಿರುತ್ತದೆ. ಇದನ್ನು ನಾನು ಮನಶ್ಶಾಸ್ತ್ರೀಯ ಸ್ತರ ಎಂದು ಕರೆಯುತ್ತೇನೆ. ಇದು ಪ್ರಧಾನವಾಗಿ ಮಾನವ ಆತ್ಮಿಕ ವಿಶ್ಲೇಷಣೆಗೆ, ಮಾನವನ ಮನಃಸ್ಥಿತಿಯ ಪರಿಶೋಧನೆಗೆ ಸಂಬಂಧಿಸಿದುದು. ಬಾಲ್ಜಾಕ್, ಲೆವ್ ತೊಲ್‌ಸ್ತೋಯ್ ಹಾಗೂ ಥಾಮಸ್ ಮನ್‌ರಂಥ ಅನೇಕ ಇತರ ಲೇಖಕರು ಮಾನವ ಭಾವನೆಗಳ ಒಳಹೊಕ್ಕು ಅಲ್ಲಿನ ವ್ಯಾಪಾರಗಳನ್ನು ಓದುಗರಿಗೆ ಆಶ್ಚರ್ಯವಾಗುವಂಥ ರೀತಿಯಲ್ಲಿ ವಿವರಿಸಿದ್ದಾರೆ. ಮನಸ್ಸಿನ ಒಳಹೊಕ್ಕು ಅದರ ವ್ಯಾಪಾರಗಳನ್ನು ಹೊರತೋರಿಸುವ ಕಲಾವಿದರಾಗಿ ದಸ್ತಯೇವ್‌ಸ್ಕಿಯವರು ಇತರರಿಂದ ಹೇಗೆ ಭಿನ್ನ ? ವೇದನೆಯು ಹೇಗೆ ಮಾನವನ ಆಂತರಿಕ ಜಗತ್ತಿನ ಮೇಲೆ ಪ್ರಭಾವ ಬೀರುತ್ತದೆ, ಅದು ಹೇಗೆ ಮಾನವ ಆತ್ಮದ

ಸ್ವಭಾವವನ್ನೇ ಬದಲಿಸುತ್ತದೆ, ಅದನ್ನು ಭ್ರಷ್ಟಗೊಳಿಸುತ್ತದೆ, ಪತಿತಗೊಳಿಸುತ್ತದೆ ಕೂಡ, ಎನ್ನುವುದನ್ನು ತೋರಿಸುವ ಅವರ ಸಾಮರ್ಥ್ಯವು ಈ ವಲಯದಲ್ಲಿ ಅವರ ಸಾಹಿತ್ಯಿಕ ಪರಿಶೋಧನೆಗಳಲ್ಲೊಂದಾಗಿದೆ.

ತೇಜೋಭಂಗವು ಜನರಲ್ಲಿ ಎರಡು ಪರಸ್ಪರ ನೇರ ವಿರುದ್ಧವಾದ ಪ್ರತಿ ಕ್ರಿಯೆಗಳನ್ನು ಉಂಟುಮಾಡಬಹುದು. ಅದು ಕೆಲವು ಜನರನ್ನು ಮನಕುಗ್ಗಿದ ಪರನ್ನಾಗಿ, ಅಧೀನರನ್ನಾಗಿ ಮಾಡುತ್ತದೆ. ತಾವು ಗಣನೆಗೆ ಬಾರದ ವ್ಯಕ್ತಿ ಎಂದು ಅವರು ವಿಧೇಯತೆಯಿಂದ ಒಪ್ಪಿಕೊಳ್ಳುತ್ತಾರೆ. ಇತರ ಕೆಲವರಲ್ಲಿ ಅದು ತೀವ್ರ ವಾದ ಹಾಗೂ ವಿಕಾರವಾದ ವೈಯಕ್ತಿಕತೆಯ ಭಾವನೆಯನ್ನು, ಕಾಲ ಕೆಳಗೆ ಹಾಕಿ ತುಳಿಯಲ್ಪಟ್ಟಂಥ ಮಾನವ ಘನತೆಯ ಭಾವನೆಯನ್ನು, ಉಂಟುಮಾಡುತ್ತದೆ.

ಮಾನವನ ತೇಜೋಭಂಗವನ್ನು ಚಿತ್ರಿಸುವಾಗ ದಸ್ತಯೇವ್‌ಸ್ಕಿಯವರು ಸಾಮಾನ್ಯರಿಗೆ ಯೋಚಿಸಲೂ ಭೀಕರವಾದಂಥ ಮಾನವ ಆತ್ಮದಲ್ಲಿನ ಅಗಾಧ ಕೂಪಗಳನ್ನು ತೋರಿಸಿ ಕೊಡುತ್ತಾರೆ. ಅವರ ಪಾತ್ರಗಳು ಆತ್ಮಸಮರ್ಥನೆಯ ಎಲ್ಲ ರೀತಿಯ ವಿಕೃತ ರೂಪಗಳನ್ನೂ ಪ್ರದರ್ಶಿಸುತ್ತವೆ. ಅಂತಹ ಮಾನಸಿಕ ಪರಿಸ್ಥಿತಿಗಳು ಅನೇಕ ಜನರಲ್ಲಿ ಸ್ವಲ್ಪ ಕಮ್ಮಿಯಾದ ಹಾಗೂ ದುರ್ಬಲಗೊಳಿಸಿದ ಪ್ರಮಾಣದಲ್ಲಿ ಅಸ್ತಿತ್ವದಲ್ಲಿರಬಲ್ಲವು. ಅವು ಬಹುವೇಳೆ ಹೊರಕ್ಕೆ ಬರುವುದಿಲ್ಲ, ಅಷ್ಟೆ. ಬೂರ್ಷ್ವಾ ಅಥವಾ ಬೂರ್ಷ್ವಾ ಜೀತದಾಳು ಸಮಾಜದಲ್ಲಿ (19ನೆಯ ಶತಮಾನದಲ್ಲಿ ರಷ್ಯದಲ್ಲಿದ್ದಂತಹ ಸಮಾಜದಲ್ಲಿ), ಅದಕ್ಕೂ ಹೆಚ್ಚಾಗಿ ಸಾಮ್ರಾಜ್ಯ ಶಾಹಿಯುಗದ ಬಂಡವಾಳವಾದಿ ಸಮಾಜದಲ್ಲಿ ವ್ಯಕ್ತಿಯ ತೇಜೋಭಂಗ ಅತ್ಯು ನ್ನತ ಘಟ್ಟ ಮುಟ್ಟುತ್ತದೆ. ಅಂತಹ ಸಮಾಜದಲ್ಲಿ ದಸ್ತಯೇವ್‌ಸ್ಕಿಯವರು ಹೊರ ತೋರಿಸಿರುವಂಥ ಮಾನಸಿಕ ಪರಿಸ್ಥಿತಿಗಳು ವಿಶೇಷ ತೀವ್ರವಾಗುತ್ತವೆ. ಇಪ್ಪತ್ತನೆಯ ಶತಮಾನದಲ್ಲಿ ಅನೇಕ ದೇಶಗಳ ಲೇಖಕರು ಇವನ್ನು ವಿವರಿಸಿದ್ದಾರೆ.

ದಸ್ತಯೇವ್‌ಸ್ಕಿಯವರು ಆತ್ಮದ ಈ ಚಲನೆಗಳನ್ನು ಭೂತಗನ್ನಡಿಯ ಮೂಲಕವೋ ಎಂಬಂತೆ ವೀಕ್ಷಿಸಿದರು, ಅನಂತರ ಅವನ್ನು ಸಾರವರ್ಧಿತ ರೂಪ ದಲ್ಲಿ ವಿವರಿಸಿದರು. ಪ್ರತಿಭೆಯುಳ್ಳ ಯಾವುದೇ ಲೇಖಕನೂ ಇದನ್ನು ಮಾಡುವ ಹಕ್ಕು ಹೊಂದಿರುತ್ತಾನೆ. ಅಂತೆಯೇ ದಸ್ತಯೇವ್‌ಸ್ಕಿಯವರು ತಮ್ಮದೇ ಆದ ಮನಶ್ಶಾಸ್ತ್ರೀಯ ಹಾಗೂ ತತ್ವಶಾಸ್ತ್ರೀಯ ವಿಕಟಚಿತ್ರಗಳನ್ನು ಸೃಜಿಸಿದರು. ತಮ್ಮ 'ಲೇಖಕನ ದಿನಚರಿ'ಯಲ್ಲಿ ದಸ್ತಯೇವ್‌ಸ್ಕಿಯವರು ಈ ಕೆಳಗಿನ ವಿಚಾರ ವನ್ನು ವ್ಯಕ್ತಪಡಿಸಿರುವುದು ಮಹತ್ವಪೂರ್ಣವಾಗಿದೆ: "ನಿಜ ಜೀವನದ ಯಾವು ದಾದರೊಂದು ವಾಸ್ತವಾಂಶವನ್ನು, ಮೊದಲ ನೋಟಕ್ಕೆ ಅದು ಅಷ್ಟು ಸ್ಪಷ್ಟವಾಗಿ ಕಾಣದಿದ್ದರೂ, ಅದನ್ನು ಬೆಂಬೆತ್ತಿ ಹೋಗಿ. ನಿಮ್ಮಲ್ಲಿ ಸಾಕಷ್ಟು ಶಕ್ತಿ ಹಾಗೂ

ಭಾವಶೀಲ ಕಲ್ಪನೆ ಇದ್ದಲ್ಲಿ ನೀವು ಷೇಕ್ಸ್‌ಪಿಯರನೂ ಕಾಣದಂಥ ಆಳವನ್ನು ಅದರಲ್ಲಿ ಕಂಡು ಕೊಳ್ಳುವಿರಿ. ಆದರೆ ಮುಖ್ಯ ವಿಷಯುವೆಂದರೆ – ಯಾರು ಅಂತಹ ಭಾವಶೀಲ ಕಲ್ಪನೆ ಹಾಗೂ ಸಾಮರ್ಥ್ಯವನ್ನು ಹೊಂದಿದ್ದಾರೆ? ಕಲಾ ಕೃತಿಗಳನ್ನು ಸೃಜಿಸುವಲ್ಲಿ ಹಾಗೂ ಬರೆಯುವಲ್ಲಿ ಮಾತ್ರವಷ್ಟೆ ಅಲ್ಲ ತನ್ನದೇ ಆದ ರೀತಿಯಲ್ಲಿ ಕಲಾವಿದನಾಗಿರಬೇಕಾದುದು, ವಾಸ್ತವಾಂಶವನ್ನು ಗಮನಿಸುವಲ್ಲೂ ಹಾಗಿರಬೇಕು."

ಘನತೆ ಮಣ್ಣುಪಾಲಾದಂಥ ವ್ಯಕ್ತಿಯೊಬ್ಬನ ಆತ್ಮದ ಒಳಹೊಕ್ಕು ನೋಡುವ ಮೂಲಕ, ಅವನ ಆಸೆ ಆಕಾಂಕ್ಷೆಗಳು ಸತತವಾಗಿ ಭಂಗಗೊಳ್ಳುತ್ತಿದ್ದಾಗ ಅವನ ವರ್ತನೆಯನ್ನು ಅಭ್ಯಸಿಸುವ ಮೂಲಕ ದಸ್ತಯೇವ್‌ಸ್ಕಿಯವರು ರಷ್ಯನ್ ಹಾಗೂ ಜಾಗತಿಕ ಸಾಹಿತ್ಯಕ್ಕೆ ಭಾರಿ ಮಹತ್ವದ ಕಲಾತ್ಮಕ ಹಾಗೂ ನೈತಿಕ ಕೊಡುಗೆಗಳನ್ನು ನೀಡಿದ್ದಾರೆ. ಮೊದಲನೆಯದಾಗಿ, ಅವನು "ದ್ವಿತ್ವ"ದ, ಅಂದರೆ ವಿಚ್ಛಿದ್ರ ವ್ಯಕ್ತಿತ್ವದ, ಘಟನೆಯನ್ನು ಹೊರಗೆಡಹಿದರು. ಇದರಲ್ಲಿ ಎರಡು ಪರಸ್ಪರ ವಿರುದ್ಧ ವಾದ ಶಕ್ತಿಗಳೂ ಬಯಕೆಗಳೂ ಗುಣಗಳೂ ಒಬ್ಬನೇ ಮಾನವನಲ್ಲಿ ಮಿಳಿತ ವಾಗಿರುತ್ತವೆ. ಎರಡನೆಯಹಾಗಿ, ಅವರು "ಭೂಗತ" ಕಲ್ಪನೆಯನ್ನೂ "ಭೂಗತ ಮಾನವ"ನ ಮೂರ್ತಿಚಿತ್ರಣವನ್ನೂ ಓದುಗರ ಮುಂದಿರಿಸಿದರು.

"ದ್ವಿತ್ವ" ಹಾಗೂ "ಭೂಗತ" – ಇವು ನಾನಾಗಲೇ ನೀಡಿದ ರೂಪಕ "ಪಿರ ಮಿಡಿ"ನ ಮುಂದಿನ ಸ್ತರವನ್ನು ರೂಪಿಸುತ್ತವೆ. ವಿಚ್ಛಿದ್ರ ವ್ಯಕ್ತಿತ್ವವುಳ್ಳ ಮನುಷ್ಯನ ಮನಃತತ್ವವನ್ನು ಅವರು ಮೊದಲು 'ದ್ವಂದ್ವ' ಕಥೆಯಲ್ಲಿ **(1846)** ಕೂಲಂಕಶವಾಗಿ ಪರಿಶೋಧಿಸಿದರು. "ಭೂಗತ ಮಾನವ"ನ ಚಿತ್ರಣವು ಮೊದಲು 'ಭೂಗತದಿಂದ ಬರೆದ ಟಿಪ್ಪಣಿಗಳ'ಲ್ಲಿ ಕಾಣಿಸಿಕೊಳ್ಳುತ್ತದೆ **(1864).**

ತನ್ನ ಅಪ್ರಾಮುಖ್ಯತೆಯ ಅರಿವು, ಜೊತೆಗೆ ತನ್ನತನವನ್ನು ಒತ್ತಿ ಹೇಳುವ ಆವಶ್ಯಕತೆ – ಇವುಗಳ ಮೇಳೈಕೆಯೇ ಮನುಷ್ಯನ ಮನಸ್ಸಿನಲ್ಲಿ "ದ್ವಿತ್ವ"ವನ್ನು ಉಂಟುಮಾಡುತ್ತದೆ. 'ದ್ವಂದ್ವ' ಕಥೆಯ ಪ್ರಧಾನ ಪಾತ್ರದಲ್ಲಿ ಇಂತಹ ದ್ವಿತ್ವ ಕಾಣಿಸಿಕೊಳ್ಳುತ್ತದೆ. ಅವನೊಬ್ಬ ಸಣ್ಣ ಅಧಿಕಾರಿ ಗಲ್ಯಾದ್ಕಿನ್. ಇವನು ಹಿರಿಯ ಗಲ್ಯಾದ್ಕಿನ್ ಹಾಗೂ ಕಿರಿಯ ಗಲ್ಯಾದ್ಕಿನ್ ಎಂದು ವಿಕಾರ ಪರಿವರ್ತನೆ ಪಡೆಯು ತ್ತಾನೆ. ಹಿರಿಯ ಗಲ್ಯಾದ್ಕಿನ್ ನಮ್ರನಾಗಿರಲು ಅಧೀನನಾಗಿರಲು ಸಿದ್ಧ, ತನ್ನ ಕೀಳು ಸ್ಥಾನಮಾನವನ್ನು ಒಪ್ಪಿಕೊಳ್ಳಲು ಸಿದ್ಧ. ಆದರೆ ಕಿರಿಯ ಗಲ್ಯಾದ್ಕಿನ್ ತನ್ನ ಮೇಲೆ ಅಧಿಕಾರದಲ್ಲಿರುವವರು ತನ್ನನ್ನು ಕಾಲ ಕೆಳಗಿನ ಚಾಪೆಯನ್ನು ತುಳಿಯುವಂತೆ ತುಳಿಯುಲು ಅವಕಾಶ ನೀಡಲು ಸಿದ್ಧನಿಲ್ಲ. ತನ್ನ ಕಲ್ಪನಾ ವಿಲಾಸ ದಲ್ಲಿ ಅವನು ತನ್ನನ್ನು ಇತರರ ತೇಜೋಭಂಗ ಮಾಡಲು ಸಿದ್ಧನಾದ

ಒಬ್ಬ ಮುಖ್ಯ ಅಧಿಕಾರಿಯನ್ನಾಗಿ ಕಲ್ಪಿಸಿಕೊಳ್ಳುತ್ತಾನೆ, ಅವನು ತನ್ನ ಮೇಲಧಿಕಾರಿಯ ಮಗಳನ್ನೂ ಮದುವೆಯಾಗುತ್ತಾನೆ. ಹಿರಿಯ ಗಲ್ಯಾಡ್ಕಿನ್ ಇದನ್ನು ಕನಸು ಮನಸಿನಲ್ಲೂ ಕಲ್ಪಿಸಿಕೊಳ್ಳಲಾರ, ಅಂತಹ ಸಾಹಸ ಮಾಡಲಾರ. ಈ ದ್ವಿತ್ವವು ಅಧೀನತೆಯ ಹಾಗೂ ಅದರೊಂದಿಗೇ ಬಂಡಾಯದ ಮನಃತತ್ವವನ್ನು ಉಂಟುಮಾಡುತ್ತದೆ. ಈ ರೀತಿಯ ಇಬ್ಬಗೆಯ ಮನೋಸ್ಥಿತಿಗಳನ್ನು ದಸ್ತಯೇವ್‌ಸ್ಕಿಯವರ ಇತರ ಪಾತ್ರಗಳಲ್ಲೂ ನಾವು ಕಾಣಬಹುದು – ಕೆಲವು ವೇಳೆ ಒಂದೇ ಪಾತ್ರದಲ್ಲಿ, ಕೆಲವು ವೇಳೆ ಬೇರೆಬೇರೆ ಪಾತ್ರಗಳಲ್ಲಿ. ಅವರು ಚಿತ್ರಿಸಿರುವ ಪಾತ್ರಗಳಲ್ಲಿ ಬಂಡಾಯಗಾರ ಪಾತ್ರಗಳೂ ಇವೆ, ಸಾಧು ಸ್ವಭಾವದ ಪಾತ್ರಗಳೂ ಇವೆ. 'ಅಪರಾಧ ಹಾಗೂ ಶಿಕ್ಷೆ' ಕಾದಂಬರಿಯಲ್ಲಿ ರಸ್ಕೋಲ್ನಿಕೊವ್ ಬಂಡಾಯವೇಳುವ ವಿಚಾರವನ್ನು, ಸಾಕ್ಷಾತ್ಕರಿಸಿದರೆ ಸೋನ್ಯಾ ಮರ್ಮೆಲಾದೊವಾ ಸಾಧು ಸ್ವಭಾವವನ್ನು ಸಾಕ್ಷಾತ್ಕರಿಸುತ್ತಾಳೆ. 'ಹೆಡ್ಡ' ಕಾದಂಬರಿಯಲ್ಲಿ ಮಿಷ್ಕಿನ್ ಸಾಧು ಸ್ವಭಾವ ತತ್ವದ ಸರ್ವೋಚ್ಚ ಮೂರ್ತಿ ಸ್ವರೂಪನಾದರೆ, ನಸ್ತಾಸಿಯ ಫಿಲೀಪ್ಪೊವ್ನ ಬಂಡಾಯ ಸ್ವಭಾವದ ಮೂರ್ತಿ ಸ್ವರೂಪಳಾಗಿದ್ದಾಳೆ. 'ಕರಮಾಜೊವ್ ಸೋದರರು' ಕಾದಂಬರಿಯಲ್ಲಿ ಇವಾನ್ ಬಂಡಾಯದ ಸಂಕೇತವಾದರೆ ಅಲ್ಯೋಷ ದೈನ್ಯದ ಸಂಕೇತ.

ಆದರೆ ಮಾನವ ಸ್ವಭಾವದ ಈ ಎರಡು ಗುಣಗಳು ಯಾವತ್ತೂ ಪಾತ್ರಗಳ ಮಧ್ಯೆ ಇಷ್ಟು ಸ್ಪಷ್ಟವಾಗಿ ಹಾಗೂ ಸಮರೂಪವಾಗಿ ಹಂಚಲಾಗಿರುತ್ತದೆಂದು ಭಾವಿಸಕೂಡದು. ಇವು ಕೆಲವು ವೇಳೆ, ಹೇಳಲಾಗದಂತೆ, ಒಂದೇ ಪಾತ್ರದಲ್ಲಿ ಮಿಳನಗೊಂಡು ಮಾನವ ವರ್ತನೆಯ ದ್ವಂದ್ವಾತ್ಮಕತೆಯನ್ನು ವ್ಯಕ್ತಪಡಿಸುತ್ತವೆ. ಇದನ್ನು ದಸ್ತಯೇವ್‌ಸ್ಕಿಯವರು ಪ್ರತಿಭಾಪೂರ್ಣವಾಗಿ ಚಿತ್ರಿಸುತ್ತಾರೆ. ದ್ವಿತ್ವವು ಒಂದು ಸ್ಥಿರ ಸ್ಥಿತಿಯಲ್ಲ ಆದರೆ ಒಂದು ದ್ವಂದ್ವಾತ್ಮಕ ಏಕತೆ. ಇದು ಒಂದೇ ವ್ಯಕ್ತಿಯ ಆತ್ಮದಲ್ಲಿನ "ದ್ವಂದ್ವ"ಗಳ ನಡುವಿನ ದುರಂತ ಹೋರಾಟವನ್ನು ವ್ಯಕ್ತಪಡಿಸುತ್ತದೆ. ಇದನ್ನು ತಿಳಿಯಲು ನಸ್ತಾಸಿಯ ಫಿಲೀಪ್ಪೊವ್ನಳು ಮಿಷ್ಕಿನ್‌ನಿಂದ ರಗೋಜಿನ್‌ನ ಕಡೆಗೆ ತಿರುಗಿದಾಗ ಅವಳ ಹೃದಯವನ್ನು ಸಂಕಟಕ್ಕೊಳಪಡಿಸುವ ಬೇಗುದಿಯ ಅನುಮಾನವನ್ನು, ಮಿಷ್ಕಿನ್‌ಗೆ ಸಂಬಂಧಿಸಿ ರಗೋಜಿನ್‌ನ ಪ್ರೇಮ-ಹಗೆತನವನ್ನು, ದಸ್ತಯೇವ್‌ಸ್ಕಿಯವರ ಪಾತ್ರಗಳನ್ನು ಹಿಂಸೆಗೊಳಪಡಿಸುವಂಥ ಸತತವಾದ ಆಕರ್ಷಣೆ ವಿಕರ್ಷಣೆಗಳನ್ನು, ನೆನಪಿಗೆ ತಂದುಕೊಂಡರೆ ಸಾಕು. ಅವರನ್ನು ಬಹುವಾಗಿ ಮೆಚ್ಚಿಕೊಂಡಿದ್ದ ಒಬ್ಬಾಕೆ ತನ್ನಲ್ಲಿಯೇ ಅಂತಹ ದ್ವಿತ್ವವಿದೆಯೆಂಬುದನ್ನು ಒಪ್ಪಿಕೊಂಡು ಬರೆದ ಪತ್ರಕ್ಕೆ ದಸ್ತಯೇವ್‌ಸ್ಕಿ 1880ರಲ್ಲಿ ಹೀಗೆ ಉತ್ತರಿಸಿದರು: "ನೀವು ನಿಮ್ಮ ದ್ವಿತ್ವದ ಬಗೆಗೆ ಬರೆದಿದ್ದೀರಿ. ಅದು ಅನೇಕ ಜನರಲ್ಲಿ ಕಂಡುಬರುವ ತುಂಬ ಸಾಮಾನ್ಯ ಲಕ್ಷಣ... ಆದರೆ ಸಂಪೂರ್ಣ ಸಾಮಾನ್ಯ

ರಲ್ಲದ ಜನರಲ್ಲಷ್ಟೆ ಅದು ಹೆಚ್ಚಾಗಿ ಕಾಣಬರುವುದು. ಅದು ಒಟ್ಟಿನಲ್ಲಿ ಮಾನವ ಸ್ವಭಾವದಲ್ಲಿ ಅಂತರ್ಗತವಾದ ಒಂದು ಲಕ್ಷಣ. ಆದರೆ ಅದು ನಿಮ್ಮಲ್ಲಿ ಕಾಣಿಸಿಕೊಂಡಿರುವಂತೆ ಅಷ್ಟು ಕಸುವಿನೊಂದಿಗೆ ಕಾಣಿಸಿಕೊಳ್ಳುವುದು ತುಂಬ ಅಪರೂಪ. ನೀವು ನನಗೆ ಅಷ್ಟು ಆತ್ಮೀಯವಾಗಿರುವುದಕ್ಕೆ ಕಾರಣವೇನೆಂದರೆ, ನಿಮ್ಮಲ್ಲಿರುವ ದ್ವಿತ್ವವು ನನ್ನ ಜೀವನದುದ್ದಕ್ಕೂ ಇದ್ದುಕೊಂಡು ಬಂದಿರುವ ದ್ವಿತ್ವದೊಂದಿಗೆ ಸರ್ವರೀತಿಯಲ್ಲೂ ಸಮನಾಗಿರುವುದಾಗಿದೆ. ಅದರಲ್ಲಿ ತುಂಬ ಅಳಲಿದೆ, ಆದರೆ ಆನಂದವೂ ಇದೆ." (ಪತ್ರಗಳು, ಸಂ. 4, ಪು. 137.)

ಹೀಗೆ, ಅವರ ಹೆಚ್ಚಿನವುಟ್ಟಿಗಿನ ಬರಹಗಳಲ್ಲಿ ಕಂಡುಬರುವ ದ್ವಿತ್ವದ ಸಮಸ್ಯೆಯು ಅವರ ಇಡೀ ಜೀವನದುದ್ದಕ್ಕೂ ಅವರಿಗೆ ಬೇಗುದಿಯ ಮೂಲವಾಗಿದ್ದಿತು.

ಈ ದ್ವಿತ್ವದ ಸಮಸ್ಯೆಯು ದಸ್ತಯೇವ್‌ಸ್ಕಿಯವರ ಬರಹಗಳಲ್ಲಿ "ಭೂಗತ" ಸಮಸ್ಯೆಯೊಂದಿಗೆ ನಿಕಟವಾಗಿಯೂ ಸಾವಯವವಾಗಿಯೂ ಸಂಬಂಧಿತವಾಗಿದೆ. ದ್ವಂದ್ವ ವ್ಯಕ್ತಿತ್ವದ ಒಂದು ಮುಖವು – ಸ್ವಯಂಸಮರ್ಥನೆಯ ಹಾಗೂ ಬಂಡಾಯದ ಒತ್ತಾಸೆಯ ಮುಖವು – ಯಾವ ರೂಪಗಳಲ್ಲಿ ತೋರ್ಪಡಿಸಿಕೊಳ್ಳುವ ಸಾಧ್ಯತೆ ಇದೆ? "ಭೂಗತ"ವು ಈ ಒತ್ತಾಸೆಯ ಅತ್ಯಂತ ಭೀಕರವಾದ ಹಾಗೂ ಸಾಮಾಜಿಕವಾಗಿ ಅತ್ಯಂತ ಹಾನಿಕರವಾದ ರೂಪವಾಗಿದೆ. ಅದು ಅಹಂಭಾವದ ಹಾಗೂ ವೈಯಕ್ತಿಕತೆಯ ಅತ್ಯಂತ ತೀವ್ರತರವಾದ ರೂಪವಾಗಿದೆ. ಅದೇ ಹೊತ್ತಿನಲ್ಲಿ ಅದು ಅದನ್ನು ಅನುಭವಿಸುವವನಿಗೆ ಒಂದು ಭೀಕರ ದುರಂತವಾಗಿರುತ್ತದೆ. ಅವನು ತನ್ನೊಳಗಿನ "ಭೂಗತ"ದ ಭಾವನೆಯುನ್ನು ತೀವ್ರವಾಗಿ ಮನಗಂಡಿರುತ್ತಾನೆ. ಮಾನಸಿಕ ಸಮಸ್ಯೆಗಳ ಬಗೆಗೆ ದಸ್ತಯೇವ್‌ಸ್ಕಿಯವರ ಮನೋಧರ್ಮವು ತೊಲ್‌ಸ್ತೋಯ್‌ರವರ ಮನೋಧರ್ಮದಿಂದ ಭಿನ್ನವಾಗಿದ್ದಿತೆಂಬುದನ್ನು ಸುಲಭವಾಗಿ ಕಂಡುಕೊಳ್ಳಬಹುದು. ದಸ್ತಯೇವ್‌ಸ್ಕಿಯವರು ಮನೋವಿಶ್ಲೇಷಣೆಯಲ್ಲೇ ಅಷ್ಟಾಗಿ ಆಸಕ್ತಿ ಹೊಂದಿರಲಿಲ್ಲ, ಆದರೆ ಅದು ಕಲೆಯ ವಾಸ್ತವಿಕತೆಗೆ ಒದಗಿಸಿದ ಹೊಸ ಸಾಧ್ಯತೆಗಳಲ್ಲಿ ಅವರಿಗೆ ಅಪಾರ ಆಸಕ್ತಿ ಇದ್ದಿತು. ಒಂದು ಕಡೆ ದಸ್ತಯೇವ್‌ಸ್ಕಿ ಬರೆದಿದ್ದಾರೆ: "ನನ್ನನ್ನು ಮನಶ್ಶಾಸ್ತ್ರಜ್ಞನೆಂದು ಕರೆಯಲಾಗಿದೆ. ಆದರೆ ಅದು ನಿಜವಲ್ಲ. ನಾನು ಅತ್ಯುನ್ನತ ಭಾವನೆಯಲ್ಲಿ ಒಬ್ಬ ವಾಸ್ತವವಾದಿ, ಅಷ್ಟೆ. ಅಂದರೆ, ನಾನು ಮಾನವ ಆತ್ಮದ ಎಲ್ಲ ಒಳ ಆಳಗಳನ್ನೂ ಚಿತ್ರಿಸುತ್ತೇನೆ."

ದಸ್ತಯೇವ್‌ಸ್ಕಿಯವರು ತಮ್ಮ ಕಲಾತ್ಮಕ ಪರಿಶೋಧನೆಯ ಮಹತ್ವವನ್ನು ಸ್ಪಷ್ಟವಾಗಿ ಮನಗಂಡಿದ್ದರು. ಅವರು ಬರೆದರು: "ನಾನಷ್ಟೆ 'ಭೂಗತ'ದ ದುರಂತವನ್ನು ಪ್ರದರ್ಶಿಸಲು ಸಮರ್ಥನಾಗಿದ್ದೇನೆ. ಈ ಭೂಗತವು ಅಪಾರ ವೇದನೆಯಿಂದ, ಆತ್ಮವಿನಾಶದಿಂದ, ಸಾಧಿಸಲು ಅಸಾಧ್ಯವಾದಂಥ ಪರಿಪೂರ್ಣ

ತೆಯ ಮನವರಿಕೆಯಿಂದ ಕೂಡಿರುತ್ತದೆ. ಎಲ್ಲಕ್ಕೂ ಮಿಗಿಲಾಗಿ, ಎಲ್ಲ ಮಾನವರೂ ತಮ್ಮಂತೆಯೇ ಇರುತ್ತಾರೆ, ಆದ್ದರಿಂದ ತಮ್ಮನ್ನು ಗುಣಪಡಿಸಿಕೊಳ್ಳಲು ಯತ್ನಿಸುವುದು ವ್ಯರ್ಥವಷ್ಟೆ ಎಂದು ಭೂಗತದ ಈ ದುಃಖಾರ್ತ ವ್ಯಕ್ತಿಗಳು ಗಾಢವಾಗಿ ನಂಬಿರುತ್ತಾರೆ. ಅವರು ತಮ್ಮನ್ನೇ ಗುಣಪಡಿಸಿಕೊಳ್ಳಲು ಯತ್ನಿಸಿದರೆ ಅವರಿಗೆ ಯಾವ ಉತ್ತೇಜನ ಇರುತ್ತದೆ? ಅದಕ್ಕಾಗಿ ಅವರಿಗೆ ಪ್ರಶಸ್ತಿ ದೊರೆಯುವುದೇ? ನಂಬಿಕೆ ಉಂಟಾಗುವುದೇ? ಆದರೆ ಪ್ರಶಸ್ತಿ ನೀಡಲು ಯಾರೂ ಇರುವುದಿಲ್ಲ, ನಂಬಿಕೆ ಇರಿಸಲು ಯಾರೂ ಇರುವುದಿಲ್ಲ. ಇಂತಹ ಸ್ಥಿತಿಯಲ್ಲಿ ಒಂದು ಹೆಜ್ಜೆ ಮುಂದೆ ಇಟ್ಟರೆ ಆಯಿತು – ತೀವ್ರತರವಾದ ದುರ್ಗುಣ ಹಾಗೂ ಅಪರಾಧ (ಕೊಲೆ)."

ಈ ಘಟನೆಯ ಸಾಮಾಜಿಕ ಮೂಲಗಳನ್ನು ಪರಿಶೀಲಿಸೋಣ. ಅತಿಪ್ರತಿಷ್ಠೆಯ ಹೆಮ್ಮೆ ಇರುವ ಕಡೆ ಭೂಗತ ಕಾಣಿಸಿಕೊಳ್ಳುತ್ತದೆ. ಹೆಮ್ಮೆಯು ವ್ಯಕ್ತಿತ್ವದ ತೀವ್ರತರವಾದ ಭಾವನೆಯಿಂದ ಉಂಟಾಗುತ್ತದೆ. ಆದರೆ ವ್ಯಕ್ತಿತ್ವದ ಹಾಗೂ ಅದರ ಹಕ್ಕುಗಳ ವಿಚಾರವು ಬೂರ್ಷ್ವಾ ಸಮಾಜವು ಸಾಮಂತಶಾಹಿಯ ವಿರುದ್ಧ ಹೋರಾಟದಲ್ಲಿ ಆತ್ಮಪ್ರತಿಷ್ಠಾಪನೆ ಮಾಡಿಕೊಳ್ಳುತ್ತಿದ್ದಾಗಲೇ ನೀಡಿದಂಥ ಆಸ್ತಿಯಾಗಿದೆ. ಬಂಡವಾಳಶಾಹಿ ಸಮಾಜದೊಳಗೇ ವೈರುಧ್ಯಗಳು ಬೆಳೆದು ಅಭಿವೃದ್ಧಿಗೊಂಡಂತೆ ಈ ಮಹತ್ಸಾಧನೆಯು ತನ್ನ ದುರಂತ ಪ್ರತಿಚಿತ್ರವನ್ನು ತೋರಿಸಿಕೊಟ್ಟಿತು. ಪಶ್ಚಿಮ ಯೂರೋಪಿನಲ್ಲಿ ಪ್ರವಾಸಮಾಡಿದನಂತರ ರಚಿಸಿದ ತಮ್ಮ 'ಬೇಸಿಗೆಯ ಭಾವನೆಗಳ ಬಗೆಗೆ ಚಳಿಗಾಲದ ಟಿಪ್ಪಣಿಗಳು' ಕೃತಿಯಲ್ಲಿ ಹೀಗೆ ಬರೆದರು: "ಇದಾದ ಸ್ವಲ್ಪ ಸಮಯದಲ್ಲೇ, (ಅಂದರೆ, ಬೂರ್ಷ್ವಾ ಸಮಾಜವು ಉದಯವಾದನಂತರ – ಎ. ಬಿ.) ಅವರು liberté, egalité, fraternité ಘೋಷಿಸಿದರು. ಸರಿ, ಒಳ್ಳೆಯದೇ! ಆದರೆ liberté ಎಂದರೇನು? ಸ್ವಾತಂತ್ರ್ಯ ಎಂದು ಅದರ ಅರ್ಥ. ಯಾವ ರೀತಿಯ ಸ್ವಾತಂತ್ರ್ಯ? ಕಾನೂನಿನ ಚೌಕಟ್ಟಿನೊಳಗೆ ತಮಗಿಷ್ಟ ಬಂದುದನ್ನು ಮಾಡಲು ಎಲ್ಲರಿಗೂ ಸಮಾನವಾದ ಸ್ವಾತಂತ್ರ್ಯವೇ? ಯಾವಾಗ ಯಾರೇ ಆಗಲಿ ತಮಗಿಷ್ಟ ಬಂದುದನ್ನು ಮಾಡಬಹುದು? ಮಿಲಿಯಾಂತರ ಪ್ರಮಾಣದಲ್ಲಿ ಹಣ ಹೊಂದಿರುವಾಗ. ಸ್ವಾತಂತ್ರ್ಯವು ಪ್ರತಿಯೊಬ್ಬರಿಗೂ ಒಂದೊಂದು ಮಿಲಿಯ ಹಣ ಕೊಡುತ್ತದೆಯೇ? ಇಲ್ಲ. ಮಿಲಿಯ ಇಲ್ಲದಂತಹ ಮನುಷ್ಯ ಯಾರು? ಮಿಲಿಯ ಇಲ್ಲದಿರುವ ಮನುಷ್ಯ ತನಗಿಷ್ಟ ಬಂದುದನ್ನು ಮಾಡುವಂತಹ ಮನುಷ್ಯನಲ್ಲ, ಆದರೆ ಇತರರು ಯಾವನ ಬಗೆಗೆ ತಮಗಿಷ್ಟ ಬಂದಂತೆ ವರ್ತಿಸುವರೋ ಅಂತಹ ಮನುಷ್ಯ ಇವನು." ಉಳಿದೆರಡು ಘೋಷಣೆಗಳ – egalité (ಸಮಾನತೆ) ಹಾಗೂ fraternité (ಭ್ರಾತೃತ್ವ) ಘೋಷಣೆಗಳ – ಪೊಳ್ಳುತನವನ್ನೂ ದಸ್ತಯೇವ್‌ಸ್ಕಿ ಅನಂತರ

ತೋರಿಸಿಕೊಡುತ್ತಾರೆ. ಅವರು ಕಂಡಂತೆ, ವೈಯಕ್ತಿಕತೆಯು ಬಗೆಗೆ ಬೂರ್ಷ್ವಾಸೀಯು ಒತ್ತು ಹಾಕುವುದು ಭ್ರಾತೃತ್ವವನ್ನು ಸಾಧಿಸುವುದನ್ನು ಅಸಾಧ್ಯವನ್ನಾಗಿ ಮಾಡುತ್ತದೆ. "ಭ್ರಾತೃತ್ವದ ಕುರುಹೇ ಇಲ್ಲ, ಏಕೆಂದರೆ ಈಗ ಮೂಡಿ ಬಂದಿರುವುದು ವ್ಯಕ್ತಿಗತ ನಿಯಮ, ಪ್ರತ್ಯೇಕತೆಯ ನಿಯಮ. ಇದು ಸ್ವಂತ ಅಹಮಿನೊಳಗೇ ಕಂಡುಬರುವ ಆತ್ಮಸಂರಕ್ಷಣೆ ಹಾಗೂ ಸ್ವಯಂಚಟುವಟಿಕೆಗಳಿಂದ ಪ್ರಬಲಗೊಳಿಸಲ್ಪಟ್ಟಿರುತ್ತದೆ." 'ಅಪರಾಧ ಹಾಗೂ ಶಿಕ್ಷೆ'ಯಲ್ಲಿ ಪರಕೀಯತೆಯ ವಿಚಾರವನ್ನು ರಸ್ಕೋಲ್ನಿಕೊವ್‌ನಲ್ಲಿ ಮೂರ್ತೀಕರಿಸ ಲಾಗಿದೆ. "ಅವನು ಪ್ರತ್ಯೇಕತೆಯ ಭಾವನೆಯಿಂದ, ಮಾನವಕುಲದೊಂದಿಗೆ ಐಕ್ಯ ಗೊಂಡಿರದ ಭಾವನೆಯಿಂದ, ಪೀಡಿತನಾಗಿದ್ದ. ಅಪರಾಧವನ್ನೆಸಗಿದನಂತರ ಅವನಿಗೆ ಕೂಡಲೇ ಈ ಭಾವನೆ ಉಂಟಾಯಿತು".

ಹೀಗೆ ದಸ್ತಯೇವ್‌ಸ್ಕಿಯವರು ನಿಜಕ್ಕೂ ದುರಂತವಾದ ವಿರೋಧಾ ಭಾಸಕ್ಕೆ – ಬೂರ್ಷ್ವಾ ಸ್ವಾತಂತ್ರ್ಯದ ಪರಿಸ್ಥಿತಿಗಳಲ್ಲಿ ವ್ಯಕ್ತಿಯ ಸಂಪೂರ್ಣ ಬೆಳ ವಣಿಗೆಗೆ ಆತ ತನ್ನನ್ನು ಪ್ರತ್ಯೇಕ ವ್ಯಕ್ತಿಯನ್ನಾಗಿ ಕಂಡುಕೊಳ್ಳುವ ಭಾವನೆಯೇ ಅಡ್ಡಿ ಬರುತ್ತದೆ, ಎಂಬ ವಿರೋಧಾಭಾಸಕ್ಕೆ – ನಿರೂಪಣೆ ನೀಡಿದರು. ಈ ವೈರುಧ್ಯವನ್ನು ಪರಿಹರಿಸುವುದು ಹೇಗೆ ಸಾಧ್ಯ ? ವೈಯಕ್ತಿಕತೆ ಎಂಬ ವಿಚಾರದಲ್ಲೇ ಅಂತರ್ಗತವಾಗಿರುವ ಪ್ರಧಾನ ವೈರುಧ್ಯವನ್ನು – ಬೂರ್ಷ್ವಾ ಕಲೆಯು ಈ ಸಮಸ್ಯೆ ಯೊಂದಿಗೆ ಇನ್ನೂ ಸೆಣಸಾಡುತ್ತಿದೆ – ಹೊರತೋರಿಸುವುದರಲ್ಲಿ ಅವರು ಯಶಸ್ವಿ ಯಾದರು. ದಸ್ತಯೇವ್‌ಸ್ಕಿಯವರು ಅಂತಹ ವ್ಯಕ್ತಿ "ಸ್ವಾತಂತ್ರ್ಯ"ದ ಬಗೆಗೆ ಭಯಭ್ರಾಂತರಾಗಿದ್ದರು, ಏಕೆಂದರೆ, ಅದು ವ್ಯಕ್ತಿತ್ವ ವಿಚಾರದ ಅಣಕವಲ್ಲದೆ ಬೇರೇನೂ ಆಗಿರಲಿಲ್ಲ.

ಆದರೆ ದಸ್ತಯೇವ್‌ಸ್ಕಿಯವರು ತರ್ಕಬದ್ಧ ಯೋಜನೆಗಳನ್ನು ನಿರ್ಮಿಸುವು ದರಲ್ಲಿ ತೊಡಗಿರುವ ತತ್ವಜ್ಞಾನಿಯೇನೂ ಆಗಿರಲಿಲ್ಲ, ಆದರೆ ಒಬ್ಬ ಕಲಾವಿದರಾಗಿದ್ದರು, ವಾಸ್ತವಿಕತಾವಾದಿಯಾಗಿದ್ದರು, ಅವರು ರೂಪಕಗಳ ಮೂಲಕ ಚಿಂತನೆ ನಡೆಸಿದರು, ಎಂಬುದನ್ನು ನೆನಪಿನಲ್ಲಿರಿಸಿರಬೇಕು. ಆದ್ದರಿಂದ ಅವರು ಜೀವಂತ ಮಾನವ ಪಾತ್ರಗಳಲ್ಲಿನ ವ್ಯಕ್ತಿತ್ವದ ಸಮಸ್ಯೆಯನ್ನು ಅಭ್ಯಸಿಸಿದರು.

ಹಾಗಾದರೆ ಈ "ಭೂಗತ"ವನ್ನು ರೂಪಕಗಳ ಮೂಲಕ ಹೇಗೆ ಚಿತ್ರಿಸಲಾಗಿದೆ ? 'ಅಪರಾಧ ಹಾಗೂ ಶಿಕ್ಷೆ'ಯಲ್ಲಿ ಅದು ರಸ್ಕೋಲ್ನಿಕೊವ್‌ನ ಮೂರ್ತಿಯಲ್ಲಿ ಸಾಕ್ಷಾತ್ಕರಿಸಿದೆ. ಇವನು ಬಡ್ಡಿಗೆ ಹಣ ನೀಡುವ ವೃದ್ಧೆಯೊಬ್ಬಳನ್ನು ಕೊಲ್ಲುತ್ತಾನೆ. ತನ್ನ "ಭೂಗತ" ಸಿದ್ಧಾಂತದ ಪರೀಕ್ಷೆಗಾಗಿ ನೆರವೇರಿಸಲಾದ ಈ ಅಪರಾಧದ ನಂತರ, ಲೇಖಕರು ಕರೆದಿರುವಂತೆ, ಅವನ ದುರಂತದ "ಸ್ವಯಂಮರಣದಂಡನೆ" ಬರುತ್ತದೆ. ನ್ಯಾಯಾಲಯದ ಪರಿಶೋಧನಾಧಿಕಾರಿ ಪರ್ಫಿರಿ ಪಿತ್ರೋವಿಚ್

ರೊಂದಿಗೆ ನಡೆಸಿದ ವಾದವಿವಾದದಲ್ಲಿ ರಸ್ಕೋಲ್ನಿಕೊವ್ ತನ್ನ ಸಿದ್ಧಾಂತವನ್ನು ಈ ಕೆಳಗಿನಂತೆ ವಿವರಿಸುತ್ತಾನೆ: "ನಾನು ನನ್ನ ಪ್ರಧಾನ ವಿಚಾರದಲ್ಲಷ್ಟೆ ನಂಬಿಕೆ ಇರಿಸಿದ್ದೇನೆ. ನಿಸರ್ಗ ನಿಯಮದಂತೆ ಜನ ಪ್ರಧಾನವಾಗಿ ಎರಡು ಸಂವರ್ಗಗಳಾಗಿ ವಿಂಗಡಿತರಾಗಿರುತ್ತಾರೆ. ಕೆಳ ಸಂವರ್ಗದವರು (ಸಾಮಾನ್ಯ ಜನರು), ಅಂದರೆ, ತಮ್ಮಂಥವರನ್ನೇ ಸೃಜಿಸುವ ಕಾರ್ಯದಲ್ಲಷ್ಟೆ ತೊಡಗಿರುವ ಜನ. ಎರಡನೆಯ ಸಂವರ್ಗದವರು ನಿಜವಾದ ಜನರು, ಅಂದರೆ, ತಮ್ಮ ಪರಿಸರದಲ್ಲಿ ಏನಾದರೂ ಹೊಸ ಬೆಳವಣಿಗೆಯನ್ನು ಉಂಟುಮಾಡುವ ವರಪ್ರಸಾದ ಅಥವಾ ಪ್ರತಿಭೆಯನ್ನು ಹೊಂದಿರುವ ಜನರು." ಈ ಸಿದ್ಧಾಂತದಲ್ಲಿ ವಿಶೇಷವಾಗಿ ತಪ್ಪುದಾರಿಗೊಯ್ಯುವ ಹಾಗೂ ಸಾಮಾಜಿಕವಾಗಿ ಹಾನಿಕರವಾದ ಅಂಶವೆಂದರೆ, ಅದನ್ನು ಮಾನವೀಯ ತೆಯ ಮಾತುಗಳಲ್ಲಿ ಆಚ್ಛಾದಿಸಿ ಹೇಳಿರುವುದಾಗಿದೆ ಮತ್ತು ಅದು ಮಾನವ ಸಂತೋಷಕ್ಕಾಗಿ ಪ್ರಯತ್ನಿಸುವ ಗುರಿ ಹೊಂದಿರುವುದಾಗಿ ಕಾಣಬರುವುದಾಗಿದೆ. ಈ ವಿಚಾರವನ್ನು ಪ್ರತಿಪಾದಿಸುವವರು ಅದರಲ್ಲಿ ಎಷ್ಟು ಹೆಚ್ಚು ಪ್ರಾಮಾಣಿಕವಾಗಿ ಗೀಳು ಬೆಳೆಸಿಕೊಂಡರೆ ಅದು ಅಷ್ಟು ಹೆಚ್ಚು ಆಕರ್ಷಕವಾಗಿ ಕಂಡುಬರುತ್ತದೆ. ರಸ್ಕೋಲ್ನಿಕೊವ್ ಈ ವಿಚಾರವನ್ನು ಹೀಗೆ ವಿವರಿಸುತ್ತಾನೆ: ಕೆಪ್ಲೆರ್‌ರ ಅಥವಾ ನ್ಯೂಟನ್ನರ ಆವಿಷ್ಕರಣೆಗಳು, ಅವುಗಳ. ಆವಿಷ್ಕರಣೆಯ ಮಾರ್ಗಕ್ಕೆ ಅಡ್ಡಿ ಬಂದ ಅಥವಾ ನಿರ್ಬಂಧ ಹಾಕಿದ ಒಂದು, ಹತ್ತು, ಒಂದು ನೂರು ಅಥವಾ ಇನ್ನೂ ಹೆಚ್ಚು ಜನರ ಜೀವಗಳ ಬೆಲೆ ತೆತ್ತಲ್ಲದೆ ಬೇರೆ ಯಾವ ರೀತಿಯಲ್ಲೂ ಮಾನವಕುಲವನ್ನು ತಲುಪಲಾರವು ಎನ್ನುವುದಾದಲ್ಲಿ ಆಗ ನ್ಯೂಟನ್ನರು.... ಆ ಹತ್ತು ಅಥವಾ ಒಂದು ನೂರು ಜನರನ್ನು ತೊಡೆದು ಹಾಕುವ ಹಕ್ಕು ಹೊಂದಿರುತ್ತಿದ್ದರು, ಅದು ಅವರ ಕರ್ತವ್ಯವಾಗಿರುತ್ತಿದ್ದಿತು, ಎಂಬುದು ನನ್ನ ನಂಬಿಕೆ." ಈ ಕಾಬಂದರಿಯಲ್ಲಿ ಸಾಲ ನೀಡುವ ಮುದುಕಿಯ ಕೊಲೆಯನ್ನು ಈ ಸಿದ್ಧಾಂತದ ಸತ್ವಪರೀಕ್ಷೆಯನ್ನಾಗಿ ಕಲ್ಪಿಸಲಾಗಿದೆ. ಇಂಥ ವಿಚಾರದ ಗೀಳು ಹಿಡಿದಿರುವವನೊಬ್ಬನ ಕೈಯಲ್ಲಿ ರಾಷ್ಟ್ರಗಳ ಭವಿತವ್ಯವನ್ನು ನಿರ್ಧರಿಸುವ ನಿಜವಾದ ಅಧಿಕಾರವೇನಾದರೂ ದೊರೆತಲ್ಲಿ, ಅದು ಎಷ್ಟೊಂದು ರಕ್ತಪಾತವನ್ನು ಸಮರ್ಥಿಸುತ್ತದೆಂಬುದನ್ನು ಊಹಿಸಿಕೊಳ್ಳಬಹುದು.

ಮಾನವಕುಲವು ಇಂತಹ ಅನೇಕ ಪೀಡಕರನ್ನೂ ನಿರಂಕುಶಾಧಿಕಾರಿಗಳನ್ನೂ ಬಲ್ಲುದು. ಅವರು ನೂರಾರು ಸಾವಿರಾರು ಮುಗ್ಧ ಹಾಗೂ (ರಸ್ಕೋಲ್ನಿಕೊವ್‌ನ ಮಾತನ್ನು ಬಳಸುವುದಾದರೆ) "ಸಾಮಾನ್ಯ" ಜನರನ್ನು ನಾಶಗೊಳಿಸುವ ಮೂಲಕ ರಾಷ್ಟ್ರಗಳ ಆಗುಹೋಗುಗಳನ್ನು ಬಲವಂತವಾಗಿ "ನಿರ್ಧರಿಸಿದರು." ಸಾಲೊನ್, ಲಿಕೂರ್ಗ, ಮಹಮದ್, ನೆಪೋಲಿಯನ್ ಇವರುಗಳ ಹೆಸರನ್ನು ರಸ್ಕೋಲ್ನಿಕೊವ್‌ನೇ ನಮೂದಿಸುತ್ತಾನೆ. ಹತ್ತೊಂಬತ್ತನೆಯ ಶತ

ಮಾನದಲ್ಲಿ ಫ್ರಾನ್ಸಿನಲ್ಲಷ್ಟೆ ಅಲ್ಲ ಅನೇಕ ಯೂರೋಪಿಯನ್ ದೇಶಗಳಲ್ಲೂ ನೆಪೋಲಿಯನ್ನನ ವ್ಯಕ್ತಿ ಆರಾಧನಾ ಪಂಥ ವ್ಯಾಪಕವಾಗಿ ಹರಡಿದ್ದಿತು. "ನೆಪೋಲಿಯಾನಿಸಂ" ಎಂಬುದು ವ್ಯಕ್ತಿನಿಷ್ಠ ಬೂರ್ಷ್ವಾ ಚಿಂತನೆಯ ಮೆಚ್ಚಿನ ಪದವಾಗಿದ್ದಿತು. "ಬಂಡಾಯವೆದ್ದ ಸ್ವಾತಂತ್ರ್ಯದ ವಾರಸುದಾರ ಹಾಗೂ ಕೊಲೆಗಾರ" ಎಂದೇ ಪೂಷ್ಕಿನ್ ನೆಪೋಲಿಯನ್ನನನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿ ಕರೆದರು. ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವಗಳನ್ನು ಧ್ಯೇಯಗುರಿಯನ್ನಾಗಿ ಹೊಂದಿದ್ದ ಫ್ರೆಂಚ್ ಬೂರ್ಷ್ವಾ ಮಹಾಕ್ರಾಂತಿಯ ಮಹಾ ಪೂರದ ಮೇಲೆ ತೇಲಿಕೊಂಡು ಮುಂದೆ ಬಂದ ನೆಪೋಲಿಯನ್ ಬೇಗನೆಯೇ ನಿರಂಕುಶ ಪೀಡಕನಾಗಿ, ದಿಗ್ವಿಜಯಕಾರನಾಗಿ ಪರಿವರ್ತಿತನಾದ. ಅವನಿಗೆ ತನ್ನ ಗುರಿ ಸಾಧಿಸಿಕೊಳ್ಳಲು ಸಾವಿರಾರು ಜನರ ಸಾವು ಹೆಚ್ಚಿನ ಬೆಲೆಯೇನೂ ಆಗಿರಲಿಲ್ಲ. ರಸ್ಕೋಲ್ನಿಕೊವ್‌ನ "ಭೂಗತ" ಸಿದ್ಧಾಂತವು ಸ್ಪಷ್ಟವಾಗಿಯೇ ನೆಪೋಲಿಯಾನಿಸಂನ ಅಚ್ಚೊತ್ತು ಹೊಂದಿದೆ.

ಆದರೆ ಇಂತಹ ಪಾತ್ರಗಳಲ್ಲಿ ಕಂಡುಬರುವ "ಭೂಗತ ವಿಚಾರ"ಗಳು ದಸ್ತಯೇವ್‌ಸ್ಕಿಯವರ ಸ್ವಂತ ವಿಚಾರಗಳೆಂದು ಭಾವಿಸುವುದು ಗಹನವಾದ ತಪ್ಪಾಗುತ್ತದೆ. ಈ ಪಾತ್ರಗಳು ಅಂತಿಮವಾಗಿ ಪತನವಾಗುತ್ತವೆ, ಏಕೆಂದರೆ, ನೈತಿಕತೆಯ ವಿರುದ್ಧ ಯಾವುದೇ ಅಪರಾಧವೂ ಅನಿವಾರ್ಯವಾಗಿಯೇ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಮುಖ್ಯಾಂಶವೆಂದರೆ, "ಭೂಗತ"ವು ಯಾರಲ್ಲಿರುವುದೋ ಅವರಿಗೆ ಅದೊಂದು ದುರಂತವಾಗುತ್ತದೆ. ರಸ್ಕೋಲ್ನಿಕೊವ್ ಹಾಗೂ ಇವಾನ್ ಕರಮಾಜೊವ್ ಇಬ್ಬರೂ ತಮ್ಮ ಮಾನವೀಯ ಪರಿಶೋಧನೆಯ ಫಲವಾಗಿ ಪ್ರಬಲವ್ಯಕ್ತಿತ್ವದ ಪರಿಕಲ್ಪನೆಯತ್ತ ಸರಿಯುತ್ತಾರೆ. ಅವರು ಮಾನವ ಸಂಕಷ್ಟಗಳೆಲ್ಲವನ್ನೂ ಕಂಡು ಪ್ರಾಮಾಣಿಕವಾಗಿ ತಪಿಸುತ್ತಾರೆ, ಮಾನವಕುಲವು ನೈಜ ಸ್ವಾತಂತ್ರ್ಯ ಹಾಗೂ ಸುಖ ಪಡೆಯುವ ಮಾರ್ಗವನ್ನು ಹುಡುಕಲು ಭಾವಪೂರ್ಣತೆಯಿಂದ ಶ್ರಮಿಸುತ್ತಾರೆ. ಇವರ ಆಶೋತ್ತರಗಳಿಗೂ ಬಾಲ್ಜಾಕ್‌ರ ರಸ್ತಿನ್ಯಾಕ್‌ನ ಅಥವಾ ಮೊಪಸಾನ್‌ರವರ ಜಾರ್ಜ್ ದ್ಯೂರೂವಾನ ಆಶೋತ್ತರಗಳಿಗೂ ನಡುವೆ ಮೇಲೆಮೇಲೆ ತೋರ್ಕೆ ಕಂಡುಬಂದರೂ ಇವರಿಗೂ ಆ ಪಾತ್ರಗಳಿಗೂ ಇರುವ ಸಾಮ್ಯ ಅಲ್ಪವೇ.


'ಭೂಗತದಿಂದ ಬರೆದ ಟಿಪ್ಪಣಿಗಳು' ಕೃತಿಯಲ್ಲಿ ಪಾತ್ರವೊಂದು ಹೇಳುವ ಈ ಮಾತುಗಳು ಗಮನಾರ್ಹ: "ಆದ್ದರಿಂದ, ಭೂಗತ ಚಿರಾಯುವಾಗಲಿ !... ಆಹ್ ! ಆದರೆ ನಾನಿಲ್ಲೂ ಸುಳ್ಳು ಹೇಳುತ್ತಿದ್ದೇನೆ. ಏಕೆಂದರೆ, ಭೂಗತವಲ್ಲ ಹೆಚ್ಚು ಉತ್ತಮವಾದುದು, ಆದರೆ ತೀರ ತೀರ ಬೇರೆಯಾದ ಯಾವುದೋ, ನಾನು ಹಂಬಲಿಸುವ ಆದರೆ ಕಾಣಲಾಗದ ಯಾವುದೋ ಅದೇ ಹೆಚ್ಚು ಉತ್ತಮ



ಸೈಬೀರಿಯದ ಪದಾತಿ ದಳದ ಸೈನ್ಯಾಧಿಕಾರಿಯ ಸಮವಸ್ತ್ರದಲ್ಲಿ ಫ್ಯೋದರ್
ದಸ್ತಯೇವ್‌ಸ್ಕಿ. ಸೆಮಿಪಲಾತಿನ್‌ಸ್ಕ್, **1858**



ಆನ್ನ ದಸ್ತಯೇವ್‌ಸ್ಕಿ (1846-1918), ಲೇಖಕರ ದ್ವಿತೀಯ
ಪತ್ನಿ, ಡ್ರೆಸ್ಡೆನ್, 1857-1871



ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಕೊನೆಯಲ್ಲಿ ವಾಸವಾಗಿದ್ದ ಗೃಹವಿಭಾಗದಲ್ಲಿ
ಲೇಖಕರ ಅಧ್ಯಯನ ಕೋಣೆ. 1881



ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಸೇಂಟ್ ಅಲೆಕ್ಸಾಂದರ್ ನೆವ್‌ಸ್ಕಿ ಮಠದ ತೀಖ್ವಿನ್ ಸಮಾಧಿಭೂಮಿಯಲ್ಲಿ ದಸ್ತಯೇವ್‌ಸ್ಕಿಯವರ ಸಮಾಧಿ. ಸಮಾಧಿ ಶಿಲೆ ಹಾಗೂ ಶಿಲ್ಪಕೃತಿ ನಿಕೊಲಾಯ್ **ಲಾವ್**ರೇತ್‌ಸ್ಕಿಯವರಿಂದ. 1883ರಲ್ಲಿ ಸ್ಥಾಪಿತವಾದುದು.

**ಛಾಯಾಚಿತ್ರ 1897ರಲ್ಲಿ ತೆಗೆದುಕೊಳ್ಳಲಾದುದು**

ಪಾಪುದು, ಎಂಬುದನ್ನು ನಾನು ಎರಡೆರಡಲ ನಾಲ್ಕು ಎನ್ನುವಷ್ಟು ಖಾತರಿ ಯಾಗಿ ಬಲ್ಲೆ! ಭೂಗತ ಹಾಳಾಗಲಿ!"

ಹೀಗೆ ದ್ವಿತ್ವ ಹಾಗೂ ಭೂಗತ ವಿಚಾರಗಳು ದಸ್ತಯೇವ್‌ಸ್ಕಿಯವರ ಪಾತ್ರ ಗಳ ಹೃನ್ಮನಗಳನ್ನು ವಿಭಜಿಸುತ್ತವೆ. ಬೇರೆ ಮಾರ್ಗವೇ ಇಲ್ಲ. ಈ ಪಾತ್ರಗಳು ನಿಜಕ್ಕೂ ದುರಂತವಾದವು – ಅವುಗಳಲ್ಲಿ ಅಂತರ್ಗತವಾಗಿರುವ ವೈರುಧ್ಯಗಳು ಪರಿಹರಿಸಲಾಗದಂಥವು ಎಂಬರ್ಥದಲ್ಲಿ. ಅವು ವಶವಾಗುವ ರಾಗೋದ್ರೇಕಗಳು ಹೆಚ್ಚು ತೀವ್ರವಾದಂತೆ ಅವು ಅಷ್ಟೂ ಹೆಚ್ಚು ನಿಷ್ಠುರವಾಗಿ ಅನರ್ಥದತ್ತ ಸಾಗಿ ಹೋಗುತ್ತವೆ.

ಹೊರದೇಶಗಳ ಅನೇಕ ಖ್ಯಾತ ಚಲಚ್ಚಿತ್ರ ದಿಗ್ದರ್ಶಕರಂತೆ ಅನೇಕ ಓದುಗರೂ ದಸ್ತಯೇವ್‌ಸ್ಕಿಯವರ ಕಾದಂಬರಿಗಳಲ್ಲಿ ಬರುವ ಅಪರಾಧ ಹಾಗೂ ಅದನ್ನು ಪತ್ತೆ ಹಚ್ಚುವ ವಿಷಯದಿಂದ ಆಕರ್ಷಿತರಾಗಿದ್ದಾರೆ. ನಿಜ, ಅವರ ಕಾದಂಬರಿಗಳಲ್ಲಿ ಕೊಲೆ, ಆತ್ಮಹತ್ಯೆ, ಬುದ್ಧಿಭ್ರಮಣೆ, ಕಾರಾಗೃಹ ಶಿಬಿರಗಳು, ಅಪರಾಧ ತಪಾಸಣೆ, ಇವುಗಳು ಬೇಕಾದಷ್ಟಿವೆ. ಆದರೆ ಅವರ ಬರಹಗಳಲ್ಲಿ ಇವನ್ನಷ್ಟೆ ಕಂಡರೆ ಗುರು ತರವಾದ ತಪ್ಪಾಗುತ್ತದೆ, ಅವುಗಳ ಮಹತ್ವವನ್ನು ತುಚ್ಛವಾದ ರೀತಿಯಲ್ಲಿ ಅತಿಸರಳವಾಗಿಸಿದಂತಾಗುತ್ತದೆ. ದಸ್ತಯೇವ್‌ಸ್ಕಿಯವರು ಕೊಲೆಯ ಕಡೆಗೆ ಗಮನ ಹರಿಸಿದ್ದಾರೇಕೆಂದರೆ ಕೊಲೆ ಮಾಡುವ ಕ್ರಿಯೆಯೇ ಒಂದು ತೀವ್ರ ನೈತಿಕ ನಿಯ ಮೋಲ್ಲಂಘನೆಯ ರೂಪವಾಗಿರುತ್ತದೆ. ಕೊಲೆಗಾರನು ಒಳಿತು ಕೆಡುಕುಗಳ ಮಾನದಂಡಗಳನ್ನು ಕಿತ್ತೊಗೆದಿರುತ್ತಾನೆ, ತನ್ನಲ್ಲಿನ ಮಾನವೀಯ ಗುಣಗಳ ನ್ನೆಲ್ಲ ಕಳೆದುಕೊಂಡಿರುತ್ತಾನೆ. ಸಮಾಜದ ನೈತಿಕ ನಿಯಮಗಳನ್ನು ಪುನರ್‌ಸ್ಥಾಪಿ ಸುವ ಸಲುವಾಗಿಯೇ ದಸ್ತಯೇವ್‌ಸ್ಕಿಯವರು ಕೊಲೆಯ ಮನಸ್ತತ್ವವನ್ನು ಅಭ್ಯಸಿಸುತ್ತಾರೆ ಮತ್ತು ಅಪರಾಧದ ವಿಶ್ಲೇಷಣೆ ನಡೆಸುತ್ತಾರೆ. ರಸ್ಕೋಲ್ನಿ ಕೊವ್‌ನೂ ದ್ಮಿತ್ರಿ ಕರಮಾಜೊವ್‌ನೂ ಕಠಿಣಶ್ರಮದ ಸಜೆಗೆ ಗುರಿಯಾಗುವು ದರಲ್ಲೂ, ಸ್ವಿದ್ರಿಗಾಯ್‌ಲವ್, ಕಿರಿಲ್ಲವ್ ಹಾಗೂ ಸ್ಮೆರ್ದ್ಯಕೋವ್‌ರವರು ಆತ್ಮ ಹತ್ಯೆ ಮಾಡಿಕೊಳ್ಳುವುದರಲ್ಲೂ, ಇವಾನ್ ಕರಮಾಜೊವ್ ಬುದ್ಧಿವಿಕಲ್ಪ ಗೊಳ್ಳುವುರಲ್ಲೂ, ಅವರ ಪಾಪಕೃತ್ಯಗಳಿಗೆ ತಕ್ಕ ಫಲ ದೊರೆತುದನ್ನು ಕಾಣ ಬಹುದು.

ಈ ರೀತಿಯಲ್ಲಿ ದಸ್ತಯೇವ್‌ಸ್ಕಿಯವರು ಬೂರ್ಷ್ವಾ ವೈಯಕ್ತಿಕತೆಯ ದುರಂತ ಸ್ವರೂಪವನ್ನೂ ಅದು ಹೇಗೆ ಮಾನವ ನೈತಿಕತೆಯ ಮೂಲಭೂತ ಅಂಶಗಳಿಗೆ ಅಸಂಗತವಾದುದೆಂಬುದನ್ನೂ ತೋರಿಸಿಕೊಟ್ಟರು. ಅಷ್ಟೇ ಅಲ್ಲ ಅವರು ಆ ಶತಮಾನದ ಈ ರೋಗವನ್ನು ತಮ್ಮ ಸಮಕಾಲೀನರಲ್ಲಿ ಬೇರೆ ಯಾರಿಗಿಂತ ಹೆಚ್ಚು ತೀವ್ರವಾಗಿ ಕಂಡುಕೊಂಡರು. ಎಪ್ಪತ್ತರ ವರ್ಷಗಳ ತಮ್ಮ

ನಲ್ಲಿ ಅದರಲ್ಲಿ ವಿಶ್ವಸನೀಯವಾದಂತಹುದು ಏನೋ, ಆಶ್ಚರ್ಯಗೊಳಿಸುವಷ್ಟು ಸರಳ ಹೃದಯದಂತಹುದು ಏನೋ ಇದ್ದಿತು. ಈ ಲಕ್ಷಣಗಳನ್ನು ಗಮನಿಸಿದಾಗ ಗೊತ್ತಿಗೆ ಬರುವ ಈ ವೈದೃಶ್ಯವು ಒಂದು ರೀತಿಯ ಕರುಣೆಯನ್ನೂ ಹುಟ್ಟಿಸು ವಂತಿದ್ದಿತು."

ದಸ್ತಯೇವ್‌ಸ್ಕಿಯವರ ಕೃತಿಗಳಲ್ಲಿ ಪ್ರತಿಯೊಂದೂ – ಪಾತ್ರಗಳ ಸೃಷ್ಟಿ ಹಾಗೂ ಕಥಾನಕದಲ್ಲಿನ ಘರ್ಷಣೆಗಳಿಂದ ಹಿಡಿದು ಭಾವಚಿತ್ರ ರಚನೆ ಮತ್ತಿತರ ಕಲಾತ್ಮಕ ವಿವರಗಳವರೆಗೆ ಪ್ರತಿಯೊಂದೂ – ಸಾಮಾಜಿಕ, ನೈತಿಕ ಹಾಗೂ ತಾತ್ವಿಕ ಶೋಧನೆಯ ಮುದ್ರೆ ಹೊಂದಿರುತ್ತದೆ. ಹಾಗಾಗಿ ದಸ್ತಯೇವ್‌ಸ್ಕಿಯವರು ಒಬ್ಬ ಮಹಾನ್ ಕಲಾವಿದರಷ್ಟೆ ಅಲ್ಲ ಪ್ರಖ್ಯಾತ ತತ್ವಜ್ಞಾನಿಯೂ ಆಗಿದ್ದರೆಂಬು ದನ್ನು ನಾವು ಕಾಣುತ್ತೇವೆ.

ಈಗ ನಾವು ದಸ್ತಯೇವ್‌ಸ್ಕಿಯವರ ಸೃಜನಾತ್ಮಕ ಕ್ರಿಯೆಯ "ಕೇಂದ್ರ"ಕ್ಕೆ ಬರುತ್ತೇವೆ. ಇದನ್ನು ನಮ್ಮ ಪಿರಮಿಡಿನ ಶಿಖರ ಎಂದು ಪರಿಗಣಿಸಬಹುದು. ಇದೇ ಅವರ ಬರಹಗಳಲ್ಲಿ ಎತ್ತಲಾಗಿರುವ ನೈತಿಕ ಹಾಗೂ ತತ್ವಶಾಸ್ತ್ರೀಯ ಸಮಸ್ಯೆಗಳು.

ಇವಾನ್ ಕರಮಾಜೊವ್‌ನು ತನ್ನ ಸೋದರ ಅಲ್ಯೋಷನಿಗೆ ಬೇಟೆನಾಯಿ ಗಳಿಂದ ಅಟ್ಟಿಸಿಕೊಂಡು ಬಂದು ಓಡಿಓಡಿ ಸತ್ತ ಮಗುವೊಂದರ ಬಗೆಗೆ ಹೇಳುವ ಆ ಸುಪ್ರಸಿದ್ಧ ದೃಶ್ಯದಲ್ಲಿ, ವೇದನೆಯ ವಿಷಯವು ಮಾನವನ ಇರುವಿಕೆಯ ಸಾಮಾಜಿಕ ಹಾಗೂ ದಾರ್ಶನಿಕ ಸಮಸ್ಯೆಯಾಗಿ ನೇರವಾಗಿ ಪರಿವರ್ತನೆಯಾಗುವು ದನ್ನು ನಾವು ಕಾಣುತ್ತೇವೆ. ತಾನು ಹೇಳುತ್ತಿರುವ ವಿಚಾರವು "ಸುಸ್ಪಷ್ಟವಾಗಿ" ತಿಳಿಯುವಂತಾಗಲು ತಾನು ಮಕ್ಕಳ ಸಂಕಟದ ವಿಷಯವನ್ನು ಆಯ್ಕೆ ಮಾಡಿಕೊಂಡಿ ರುವುದಾಗಿ ಇವಾನ್ ವಿವರಿಸುತ್ತಾನೆ. ಆದರೆ "ಸುಸ್ಪಷ್ಟವಾದುದು" ಯಾವುದು? ವಿಚಾರವನ್ನು "ಸುಸ್ಪಷ್ಟಗೊಳಿಸ"ಲೋಸುಗ ಮಕ್ಕಳ ಸಂಕಟದ ವಿಷಯವನ್ನು ಆರಿಸಿಕೊಂಡುದೇಕೆ? ಸುಸ್ಪಷ್ಟವಾಗಿರುವುದು ಜಗತ್ತಿನಲ್ಲಿರುವ ಸಾಮಾಜಿಕ ಅನ್ಯಾಯ, ಅದರಲ್ಲೂ ವಿಶೇಷವಾಗಿ ಮಕ್ಕಳಿಗೆ ಸಂಬಂಧಿಸಿ. ಏಕೆಂದರೆ, "ಚಿರಂತನ ಸಾಮರಸ್ಯಕ್ಕಾಗಿ ಎಲ್ಲರೂ ಸಂಕಟಪಡಬೇಕಾದಲ್ಲಿ, ಮಕ್ಕಳಿಗೂ ಇದಕ್ಕೂ ಏನು ಸಂಬಂಧ, ನಾನು ಕೇಳುತ್ತೇನೆ?" "ಈ ಜಗತ್ತಿನ ಪಾಪಕೃತ್ಯಗಳಲ್ಲಿ" ಪ್ರತ್ಯಕ್ಷ ವಾಗಿಯೋ ಪರೋಕ್ಷವಾಗಿಯೋ ಆಗಲೇ ಸಂಬಂಧಿತರಾಗಿರುವ ವಯಸ್ಕರನ್ನು ಜಗತ್ತಿನ ಸಾಮಾಜಿಕ ಅನ್ಯಾಯದಲ್ಲಿ ಕ್ರಿಯಾಶೀಲರಾಗಿಯೋ ಕ್ರಿಯಾಶೂನ್ಯ ರಾಗಿಯೋ ಸಹಭಾಗಿಗಳೆಂದೇ ನಿಜಕ್ಕೂ ಭಾವಿಸಬಹುದು. ಆದರೆ ಮುಗ್ಧ ಮಕ್ಕಳ ವಿಷಯದಲ್ಲಿ – ತಂದೆಯರ ಪಾಪದ ಫಲವನ್ನು ಮಕ್ಕಳು ಅನುಭವಿಸುವಂತಾಗ ಬೇಕೇಕೆ? "ಇದೆಲ್ಲ ಯಾಕೆ ಹೀಗಿರಬೇಕೆಂಬುದನ್ನು ಅರ್ಥಮಾಡಿಕೊಳ್ಳಲು

ಸಂಪೂರ್ಣವಾಗಿ ವಿಫಲನಾಗಿದ್ದೇನೆಂದು ನಾನು ನಮ್ರತೆಯಿಂದ ಒಪ್ಪಿಕೊಳ್ಳುತ್ತೇನೆ" ಎಂದು ಇವಾನ್ ತನ್ನ ಸೋದರ ಅಲ್ಯೋಷನಿಗೆ ತಿಳಿಸುತ್ತಾನೆ.

ಮಾನವೀಯ ಭಾವನೆಗಳಿಂದ ಪ್ರಚೋದಿತನಾಗಿ ಇವಾನ್ ಕರಮಾಜೊವ್‌ನು ಆಧುನಿಕ ಸಾಮಾಜಿಕ ವ್ಯವಸ್ಥೆಯನ್ನು ನಿರಾಕರಿಸುವ ಸ್ಥಿತಿ ತಲುಪುತ್ತಾನೆ. ಮಾನವ ಕುಲವು ಈ ರೀತಿಯ ಜಗತ್ತನ್ನು ಸ್ಥಾಪಿಸಿಕೊಂಡಿದ್ದರೆ, ಆಗ "ಮಾನವ ನೀಚ." ಆದರೆ ದೇವರು ಮುಗ್ಧ ಮಕ್ಕಳನ್ನು ಸಂಕಟಪಡುವುದಕ್ಕೆ ಬಿಡುತ್ತಾನಾದ್ದರಿಂದ, ಇವಾನ್ ದೈವಾನುಗ್ರಹವನ್ನೂ ಶಂಕಿಸತೊಡಗುತ್ತಾನೆ. ವಾಲ್ಟೇರ್‌ರಂತೆ ಇವಾನ್ ಕರಮಾಜೊವ್ ವಿವರಿಸುತ್ತಾನೆ: "ನಾನು ದೇವರನ್ನು ಒಪ್ಪಿಕೊಳ್ಳುವುದಿಲ್ಲ ಅಂತ ಏನೂ ಅಲ್ಲ, ಅಲ್ಯೋಷಾ. ನಾನು ಸುಮ್ಮನೆ ದೇವರಿಗೆ ಅವನ ಅನುಗ್ರಹವನ್ನು ತುಂಬ ಗೌರವಪೂರ್ವಕವಾಗಿ ಹಿಂದಿರುಗಿಸುತ್ತೇನೆ." ಅಲ್ಯೋಷಾ ಸಕಾರಣವಾಗಿಯೇ ಹೇಳುತ್ತಾನೆ: "ಇದು ಬಂಡಾಯ, ಅಲ್ಲವೇ?" ನಿಜಕ್ಕೂ, ಆತ್ಮಿಕವಾಗಿ ದಸ್ತಯೇವ್‌ಸ್ಕಿಯವರ ಅತ್ಯಂತ ಪ್ರಬಲ ಪಾತ್ರಗಳಾದ ಇವಾನ್ ಕರಮಾಜೊವ್ ಹಾಗೂ ರೊದಿಯೋನ್ ರಸ್ಕೋಲ್ನಿಕೊವ್ ಇಬ್ಬರೂ ಮಾನವಕುಲದ ಪ್ರೀತಿಗಾಗಿ ದೇವರ ಹಾಗೂ ಸಮಾಜದ ವಿರುಧ್ಧ ಬಂಡಾಯವೇಳುತ್ತಾರೆ.

ಆದರೆ ನಾಸ್ತಿಕತೆಯ ಈ ಬಂಡಾಯವು ದಸ್ತಯೇವ್‌ಸ್ಕಿಯವರ ಪಾತ್ರಗಳನ್ನು "ಎಲ್ಲಕ್ಕೂ ಅವಕಾಶವುಂಟು" ಎಂಬ ಮಾನವ ವಿರೋಧಿ ನಿಲುವಿನತ್ತ ಕರೆದೊಯ್ಯುತ್ತದೆ. ನಮ್ಮ ಈ ಜಗತ್ತಿನ ವಿರುದ್ಧ ಬಂಡಾಯವೇಳದೆ ಇರಲು ಸಾಧ್ಯವಿಲ್ಲ, ನಿಜ. ಆದರೆ ಹಾಗೆ ಮಾಡುವಾಗ "ಎಲ್ಲಕ್ಕೂ ಅವಕಾಶವುಂಟು" ಎಂಬ ಸಿನಿಕತನದ ಘೋಷಣೆಯಿಂದ ಮಾರ್ಗದರ್ಶಿತರಾಗಿರಕೂಡದು. ಈ ವೈರುಧ್ಯವನ್ನು ಹೇಗೆ ಪರಿಹರಿಸುವುದು? ದಸ್ತಯೇವ್‌ಸ್ಕಿಯವರ ಬರಹಗಳಲ್ಲಿ ಇದೊಂದು ಪ್ರಧಾನ ಸಮಸ್ಯೆಯಾಗಿದೆ.

ಮಾನವ ಸಂಕಟವನ್ನು ಕಂಡು ಅದನ್ನು ಯಥಾವತ್ತಾಗಿ ಚಿತ್ರಿಸಿದ ದಸ್ತಯೇವ್‌ಸ್ಕಿಯವರು ಜೀವನದ ಅರ್ಥವೇನು, ಈ ಬ್ರಹ್ಮಾಂಡದ ರಹಸ್ಯವೇನು, ಸಮಕಾಲೀನ ಸಮಾಜದ ನೈತಿಕ ಅಡಿಪಾಯಗಳು ಯಾವುವು, ಎಂದು ಚಿಂತಿಸತೊಡಗುತ್ತಾರೆ, ದೇವರಲ್ಲಿ ನ್ಯಾಯ ಉಂಟೆ ಎಂದು ಸಂದೇಹಿಸತೊಡಗುತ್ತಾರೆ.

ಮಾನವಕುಲವು ಯಾವ ಅಡಿಪಾಯಗಳ ಮೇಲೆ ದೃಢವಾದ ನೈತಿಕ ಮಟ್ಟಗಳನ್ನು ನಿರ್ಮಿಸಬಲ್ಲುದು? ಮಾನವನ ಅಂತಸ್ಸಾಕ್ಷಿಯನ್ನು "ಅಂಕೆಯಲ್ಲಿರಿಸುವುದು" ಎಂತು? ಇವು ದಸ್ತಯೇವ್‌ಸ್ಕಿಯವರನ್ನು ಚಿಂತೆಗೀಡು ಮಾಡಿದ ಪ್ರಧಾನ ಸಮಸ್ಯೆಗಳಾಗಿದ್ದವು. ಇಲ್ಲೇ ಆ ಮಹಾನ್ ಲೇಖಕರ ಆಂತರಿಕ ವೈರುಧ್ಯಗಳು

ಅತ್ಯಂತ ಸ್ಪಷ್ಟವಾಗಿ ಕಾಣಿಸಿಕೊಳ್ಳುವುದು. ಅವರು ಈ ಸಮಸ್ಯೆಯನ್ನು ಎಲ್ಲ ತೀಕ್ಷ್ಣತೆ ಹಾಗೂ ಗಭೀರತೆಗಳೊಂದಿಗೇನೋ ಓದುಗರ ಮುಂದಿರಿಸಿದರು, ಆದರೆ ಅದೇ ಹೊತ್ತಿನಲ್ಲಿ ಚಾರಿತ್ರಿಕವಾಗಿ ಅಸಾಧ್ಯಾದರ್ಶವಾದ ಹಾಗೂ ಸಂಪ್ರದಾಯ ಬದ್ಧವಾದ ಪರಿಹಾರಗಳನ್ನು ಸಲಹೆ ಮಾಡಿದರು.

ಇವಾನ್ ಕರಮಾಜೊವ್‌ನು ತನ್ನ ಮಾತುಕತೆಗಳಲ್ಲಿ ಮಧ್ಯೆ ಸೇರಿಸಿ ಹೇಳಿದ ತತ್ವಶಾಸ್ತ್ರಕ್ಕೆ ಸಂಬಂಧಿಸಿದ 'ಪಾಷಂಡ ವಿಚಾರಣಾಧಿಕಾರಿಯ ಆಖ್ಯಾಯಿಕೆ'ಯಲ್ಲಿ, ದಸ್ತಯೇವ್‌ಸ್ಕಿಯವರ ಬರಹಗಳಲ್ಲಿನ ಪ್ರಧಾನ ಸಾಮಾಜಿಕ ಹಾಗೂ ದಾರ್ಶನಿಕ ಸಮಸ್ಯೆಗಳು ಸಾರಸಂಗ್ರಹವಾಗಿ ವ್ಯಕ್ತಪಟ್ಟಿರುವುದನ್ನು ನಾವು ಕಾಣುತ್ತೇವೆ. ಅವರು ಕ್ಯಾಥೊಲಿಸಿಸಂನ ವಿಚಾರಗಳನ್ನು ವಿರೋಧಿಸುತ್ತಾರೆ, ಅವು ಭೌತಿಕವಾದ, ನಿರೀಶ್ವರ ವಾದ ಹಾಗೂ ಸಮಾಜವಾದ ವಿಚಾರಗಳಿಗೆ ಸಮೀಪವೆಂದು ಭಾವಿಸುತ್ತಾರೆ. ಮಾನವಕುಲವನ್ನು ಸುಧಾರಿಸುವ ಕ್ರಾಂತಿಕಾರಿ ವಿಧಾನಗಳಿಗೆ ಪ್ರತಿಯಾಗಿ ಅವರು ಧಾರ್ಮಿಕವಾದ, ಭಾವನಾವಾದಿಯಾದ ಹಾಗೂ ನೈತಿಕವಾದ ಮಟ್ಟಗಳನ್ನು ಗೊತ್ತುಪಡಿಸುತ್ತಾರೆ. ಅವನ್ನು ಆರ್ಥೊಡಾಕ್ಸ್ ಚರ್ಚ್ ಹಾಗೂ ಕ್ರೈಸ್ತವೇದಗಳ ಮೂಲಕ ಸಾಧಿಸಿಕೊಳ್ಳಬೇಕೆಂದು ಸಲಹೆ ಮಾಡುತ್ತಾರೆ. ಬೆಲೀನ್‌ಸ್ಕಿಯವರೂ ಪೆತ್ರಷೇವ್‌ಸ್ಕಿಯವರೂ ರಷ್ಯದಲ್ಲಿ ಪ್ರಚಾರ ಮಾಡತೊಡಗಿದ್ದ ಸಮಾಜವಾದಿ ವಿಚಾರಗಳು ಶೀಘ್ರವಾಗಿ ವ್ಯಾಪಿಸುತ್ತಿದ್ದುದನ್ನು ಕಂಡಾಗ ದಸ್ತಯೇವ್‌ಸ್ಕಿಯವರು ಚಾರಿತ್ರಿಕ ಬೆಳವಣಿಗೆಯ ಮಾರ್ಗಕ್ಕೆ ಪ್ರತಿಯಾಗಿ ತಮ್ಮ ಭರವಸೆಯನ್ನು ರಾಜ ಪ್ರಭುತ್ವದಲ್ಲಿ, ರಷ್ಯನ್ ತ್ಸಾರ್‌ನಲ್ಲಿ ಇರಿಸಿದರು. ಆದರೆ ತಮ್ಮ ಈ ಆಶೋತ್ತರ ಕಾರ್ಯಸಾಧುವಾಗಿರಲಿಲ್ಲವೆಂಬುದನ್ನು ಅವರು ಮನಗಾಣದೆ ಇರದಾದರು. ತಮ್ಮ ಪತ್ರಗಳೊಂದರಲ್ಲಿ ಅವರು ಇದನ್ನು ಒಪ್ಪಿಕೊಂಡರು: "ನನ್ನ ವಿಚಾರ ಏನೆಂಬು ದನ್ನು ನಾನು ಹೇಳುತ್ತೇನೆ. ನಾನಿನ್ನೂ ಕಾಲದ ಕೂಸು, ಅಪನಂಬಿಕೆ ಸಂದೇಹಗಳ ಕೂಸು. ನನ್ನ ಕೊನೆಯ ದಿನದವರೆಗೂ ನಾನು ಹೀಗೆಯೇ ಇರಲಿರುವೆ (ನಾನಿ ದನ್ನು ಬಲ್ಲೆ). ನಂಬಿಕೆಗಾಗಿ ನನ್ನ ದಾಹ ನನಗೆ ಎಂಥ ಭಯಂಕರ ಚಿತ್ರಹಿಂಸೆಯನ್ನು ತಂದಿತ್ತಿದೆ. ಅಪನಂಬಿಕೆಯ ವಿರುದ್ಧ ನಾನು ಹೆಚ್ಚು ಹೆಚ್ಚು ವಾದಗಳನ್ನು ಕಂಡುಕೊಂಡಂತೆ ಅದು ನನ್ನ ಆತ್ಮದಲ್ಲಿ ಇನ್ನೂ ಹೆಚ್ಚು ಪ್ರಬಲವಾಗಿ ಬೇರೂರುತ್ತಿದೆ."

ದಸ್ತಯೇವ್‌ಸ್ಕಿಯವರು ತಮ್ಮ ಧನಾತ್ಮಕ ಧ್ಯೇಯಗಳನ್ನು ಯಾವ ಪಾತ್ರಗಳ ಮೂಲಕ ವ್ಯಕ್ತಪಡಿಸಲು ಯತ್ನಿಸಿದರೋ ಆ ಪಾತ್ರಗಳಲ್ಲೂ ಅವರ ಈ ವೈರುಧ್ಯಗಳು ಕಾಣಿಸಿಕೊಂಡಿವೆ.

'ಹೆಡ್ಡ' ಕಾದಂಬರಿಯಲ್ಲಿ ಅವರ ನೈತಿಕ ಆದರ್ಶವು ರಾಜಕುಮಾರ ಮಿಷ್ಕಿನ್ ನಲ್ಲಿ ಭವ್ಯವಾಗಿ ವ್ಯಕ್ತಪಟ್ಟಿದೆ.

ದಸ್ತಯೇವ್‌ಸ್ಕಿಯವರ ಸಾಧು ಸ್ವಭಾವದ ಪಾತ್ರಗಳು ನೈಜ ನೈತಿಕತೆ, ಒಳ್ಳೆಯತನ ಹಾಗೂ ಮಾನವೀಯತೆಗಳ ಮೂರ್ತಿ ಸ್ವರೂಪಗಳಾಗಿವೆ. ಸಾಧು ಸ್ವಭಾವವನ್ನು ಮಾನವದೌರ್ಬಲ್ಯದೊಂದಿಗೆ ಹಾಗೂ ನೈತಿಕತೆಯ ಅಭಾವ ದೊಂದಿಗೆ ಸಮೀಕರಿಸಕೂಡದು. ಸೋನ್ಯ ಮರ್ಮೆಲಾದೊವಾ, ಅಲ್ಯೋಷಾ ಕರಮಾಜೊವ್ ಹಾಗೂ ಮಿಷ್ಕಿನ್‌ರು ಜಗತ್ತಿನ ಕೆಡುಕುಗಳಿಗೆ ತಮ್ಮನ್ನು ಒಪ್ಪಿಸಿ ಕೊಂಡ ದುರ್ಬಲರೇನೂ ಅಲ್ಲ. ಧಾರ್ಮಿಕ ನೆಲಗಟ್ಟಿರುವ ಅವರ ಮನೋನಂಬಿಕೆ ಗಳಲ್ಲಿ, ಎಲ್ಲ ಮಾನವಕುಲದ ಹಿತಕ್ಕಾಗಿ ಸಂಕಟ ಅನುಭವಿಸಲು ಅವರು ಸಿದ್ಧರಿರುವುದರಲ್ಲಿ, ಮಾನವ ಆತ್ಮ ಅಮರವಾದುದು ಎಂಬ ದೃಢ ನಂಬಿಕೆಯಲ್ಲಿ ಅವರ ಶಕ್ತಿ ಅಡಗಿದೆ. ಅವರೆಲ್ಲರಿಗೂ ಕ್ರಿಸ್ತನೇ ನೈತಿಕತೆಯ ಮಾನದಂಡ.

ರಾಜಕುಮಾರ ಮಿಷ್ಕಿನ್‌ನು – ದಸ್ತಯೇವ್‌ಸ್ಕಿಯವರು ಇವನನ್ನು ಅವರ ದಾನ್ ಕ್ವಿಕ್ಸೋತ್‌ನ ರೂಪಾಂತರವೆಂದು ಕಂಡುಕೊಂಡರು – ತನ್ನ ನೈತಿಕ ಪರಿ ಶುದ್ಧತೆಯಿಂದ, ಜನರಲ್ಲಿ ಇಟ್ಟಿರುವ ವಿಶ್ವಾಸದಿಂದ, ಪ್ರತಿಯೊಬ್ಬ ಸ್ತ್ರೀಪುರುಷನ ಬಗೆಗೂ ಹೊಂದಿರುವ ಗೌರವದಿಂದ, ಜನರ ಅತ್ಯುತ್ತಮ ಗುಣಗಳನ್ನು ಕಂಡು ಕೊಳ್ಳುವ ತನ್ನ ಸಾಮರ್ಥ್ಯದಿಂದ, ಪ್ರತಿಯೊಬ್ಬರನ್ನೂ ಆಕರ್ಷಿಸುತ್ತಾನೆ. ಮಿಷ್ಕಿನ್‌ನ ಮೂರ್ತಿ ದಸ್ತಯೇವ್‌ಸ್ಕಿಯವರಿಗೆ ಅಸಾಧಾರಣ ಮೌಲ್ಯ ದ್ದಾಗಿದ್ದಿತು. ಈ ಕಾದಂಬರಿಗೆ ಸಂಬಂಧಿಸಿ ತಮ್ಮ ಪರಿಕಲ್ಪನೆಯ ಬಗೆಗೆ ಅವರು ಹೀಗೆ ಬರೆದರು: "ಈ ಕಾದಂಬರಿಯ ಮುಖ್ಯ ವಿಚಾರ ಧನಾತ್ಮಕವಾಗಿ ಅತ್ಯುತ್ತಮನಾದ ಒಬ್ಬ ಮಾನವ ವ್ಯಕ್ತಿಯನ್ನು ಚಿತ್ರಿಸುವುದಾಗಿದೆ. ಇದಕ್ಕಿಂತ ಹೆಚ್ಚು ಕಷ್ಟವಾದುದು, ಅದರಲ್ಲೂ ವಿಶೇಷವಾಗಿ ಪ್ರಸ್ತುತದಲ್ಲಿ, ಈ ಭೂಮಿಯ ಮೇಲೆ ಬೇರಾವುದೂ ಇಲ್ಲ."

ಆದರೆ, ದಸ್ತಯೇವ್‌ಸ್ಕಿಯವರ ಇತರ ಎಲ್ಲ "ಸಾಧು ಸ್ವಭಾವ"ದ ಪಾತ್ರ ಗಳಂತೆಯೇ ಮಿಷ್ಕಿನ್‌ನ ದುರಂತವೆಂದರೆ ಅವನ ಆದರ್ಶವು ಜೀವನದ ವಾಸ್ತ ವಿಕತೆಯೊಂದಿಗೆ ಅಸಂಗತವಾದುದಾಗಿದ್ದಿತು. ತಾವು ಸೃಜಿಸಿದ ಎಲ್ಲ ಧಾರ್ಮಿಕ, ಕಾರುಣ್ಯಪೂರಿತ ಹಾಗೂ ಸಾಧು ಸ್ವಭಾವದ ಪಾತ್ರಗಳಿಗೂ ದಸ್ತಯೇವ್‌ಸ್ಕಿ ಯವರು, ಕಾದಂಬರಿಯಲ್ಲಿ ಪಾತ್ರಗಳಲ್ಲೊಂದು ಮಿಷ್ಕಿನ್‌ಗೆ ಹೇಳುವ ಮಾತು ಗಳಲ್ಲೇ, ಉತ್ತರಿಸಬಹುದಿದ್ದಿತು: "ಸ್ವರ್ಗವೆಂಬುದು ಒಂದು ಕಷ್ಟದ ವ್ಯವಹಾರ, ರಾಜಕುಮಾರ, ನಿಮ್ಮ ಕಾರುಣ್ಯಪೂರಿತ ಹೃದಯಕ್ಕೆ ಕಂಡು ಬರುವುದಕ್ಕಿಂತ ತುಂಬ ಹೆಚ್ಚು ಕಷ್ಟಕರವಾದುದು." ಜನರಲ್ಲಿ ಸಂಪೂರ್ಣ ವಿಶ್ವಾಸ, ಅವರ ಬಗೆಗೆ ಗೌರವ, ಅವರ ಅತ್ಯುತ್ತಮ ಗುಣಗಳನ್ನು ಕಂಡುಕೊಳ್ಳುವ ಸಾಮರ್ಥ್ಯ – ಇವುಗಳಿಂದ ಮಿಷ್ಕಿನ್‌ನ ನೈತಿಕ ಪರಿಶುದ್ಧತೆಯ ಮೋಹಕತೆ ಹೊರಹೊಮ್ಮುತ್ತದೆ. ಇದೇ

ಅವನನ್ನು ಸಂಧಿಸಿದ ಎಲ್ಲರನ್ನೂ ಆಕರ್ಷಿಸುವುದು. ಅವನು ತನ್ನ ಹೃದಯದ ಸರಳತೆಯಲ್ಲಿ ಮಗುವಿನಂತಿರುತ್ತಾನೆ. ಆದರೆ ಕೆಲವು ವೇಳೆ ತೀವ್ರ ದೃಷ್ಟಿಯ ವಿವೇಕವನ್ನೂ ತೋರುತ್ತಾನೆ. ಅವನು ಜನರ ಒಳ ಹೊರಗುಗಳನ್ನೆಲ್ಲ ಕಾಣುವ ವರವನ್ನು ಹೊಂದಿರುತ್ತಾನೆ. ಅವನ ಜೊತೆ ಇದ್ದಾಗ ಜನ – ಒಳ್ಳೆಯವರೂ ಕೆಟ್ಟವರೂ – ಕಪಟಿಗಳಾಗಿ ಇರಬಯಸುವುದಿಲ್ಲ. ಅವರು ಅವನಿಗೆ ತಮ್ಮ ಹೃದಯ ಬಿಚ್ಚಿ ತೋರಿಸುತ್ತಾರೆ. ಅವನು ತನ್ನ ಅನಿರ್ಬಂಧಿತ ಹಾಗೂ ಅಪಾರ ವಿಶ್ವಾಸದಿಂದ ಅವರ ಹೃದಯಗಳನ್ನು ಗೆಲ್ಲುತ್ತಾನೆ. ಆದರೆ ಅವನನ್ನು ಪ್ರೀತಿಸುವಂಥ, ಅವನಲ್ಲಿ ನಂಬಿಕೆ ಇರಿಸಿರುವಂಥ ಜನರಿಗೆ ಸುಖ ತಂದುಕೊಡುವುದರಲ್ಲಿ ಅವನು ಅಸಮರ್ಥನಾಗಿರುವುದೇ ಅವನ ದೌರ್ಭಾಗ್ಯವಾಗಿದೆ. ಅವನು ಅವರಲ್ಲಿ ಯಾರನ್ನೂ, ರಗೋಜಿನ್‌ನನ್ನಾಗಲೀ, ಅಗ್ಲಾಯಳನ್ನಾಗಲೀ, ನಸ್ತಾಸಿಯ ಫಿಲೀಪ್ಪೊವ್ನಳನ್ನಾಗಲೀ, ದುಃಖದಿಂದ ಅಥವಾ ಸಾವಿನಿಂದ ಪಾರು ಮಾಡಲಾರ. ಪರಸ್ಪರ ವಿಷಮ ವೈರುಧ್ಯಗಳಿಂದ ಛಿದ್ರವಾದ ಸಮಾಜದಲ್ಲಿ ಅವನು, 'ದಾನ್ ಕ್ವಿಕ್ಸೋತ್' ದ ಲಾಮಾಂಚ್‌ನಂತೆ, ಹಾಸ್ಯಾಸ್ಪದ ವ್ಯಕ್ತಿಯಂತೆ, ಅದೇ ಹೊತ್ತಿನಲ್ಲಿ ದುರಂತ ವ್ಯಕ್ತಿಯಂತೆ, ಕಾಣಬಹುದು. ತಮ್ಮ ಮೋಹಕ ಪಾತ್ರವನ್ನು ಒಬ್ಬ "ಹೆಡ್ಡ"ನನ್ನಾಗಿ, ಮಾನಸಿಕ ರೋಗದ ವ್ಯಕ್ತಿಯನ್ನಾಗಿ ದಸ್ತಯೇವ್‌ಸ್ಕಿಯವರು ಚಿತ್ರಿಸಿರುವುದರಲ್ಲಿ ಒಂದು ಪ್ರಗಾಢವಾದ ಮಹತ್ವವಿದೆ. ಇಲ್ಲಿ ಒಂದು ದುರಂತ ವಿರೋಧಾಭಾಸವಿದೆ: ದುರಾಶೆ, ಸ್ವಾರ್ಥಪರತೆ, ಲಂಚಕೋರತನಗಳಿಂದ ತುಂಬಿರುವ ಈ ಜಗತ್ತಿನಲ್ಲಿ, ಜನರಲ್ಲಿ ವಿಶ್ವಾಸವನ್ನೂ ಒಳಿತಿನಲ್ಲಿ ನಂಬಿಕೆಯನ್ನೂ ಇರಿಸಿಕೊಂಡಿರಬಯಸುವ ವ್ಯಕ್ತಿ ಮತಿವಿಕಲನಾಗಿರಲೇ ಬೇಕು. ಈ ಮಹಾ ಸಾಹಿತಿಯೇ ಅಂತಹ ನಂಬಿಕೆಗಾಗಿ ಹಂಬಲಿಸಿದರು. 'ವಿಚಿತ್ರ ವ್ಯಕ್ತಿಯೊಬ್ಬನ ಕನಸು' ಕಥೆಯಲ್ಲಿ ಪ್ರಧಾನ ಪಾತ್ರ ಸಾರ್ವತ್ರಿಕ ಮಾನವಸುಖಕ್ಕಾಗಿ ಕನಸುತ್ತಾನೆ. ಲೇಖಕರೂ ಈ ಕನಸಿನಲ್ಲಿ ಪಾಲ್ಗೊಳ್ಳುತ್ತಾರೆ. 'ಕಿಶೋರ' ಕಥೆಯಲ್ಲಿ ವೆರ್ಸಿೀಲೊವ್‌ನೂ ಇಂತಹ ಕನಸಿನಲ್ಲಿ ಪಾಲ್ಗೊಳ್ಳುತ್ತಾನೆ: "ಒಂದು ಅದ್ಭುತ ಕನಸು, ಮಾನವಕುಲದ ಸರ್ವೋಚ್ಚ ತಪ್ಪು ತಿಳಿವಳಿಕೆ – ಸುವರ್ಣ ಯುಗ – ಯಾವುದೇ ಕಾಲದಲ್ಲೂ ಅತ್ಯಂತ ಕಾರ್ಯಸಾಧುವಲ್ಲದ ಕನಸು, ಆದರೆ ಯಾವುದಕ್ಕಾಗಿ ಜನ ತಮ್ಮ ಬಾಳನ್ನೂ ಶಕ್ತಿಯನ್ನೂ ತ್ಯಾಗ ಮಾಡಿರುವರೋ, ಪ್ರವಾದಿಗಳು ಸಂಕಟ ಅನುಭವಿಸಿ ಪ್ರಾಣತ್ಯಾಗ ಮಾಡಿರುವರೋ ಅಂತಹ ಕನಸು, ಯಾವ ಕನಸು ಇಲ್ಲದೆ ಜನತೆಗಳು ಜೀವಿಸಬಯಸುವುದಿಲ್ಲವೋ, ಸಾಯಲು ಸಾಧ್ಯವಿಲ್ಲವೋ, ಅಂತಹ ಕನಸು."

ದಸ್ತಯೇವ್‌ಸ್ಕಿಯವರು ಮಾನವನಲ್ಲೂ ಅವನ ಭವಿಷ್ಯತ್ತಿನಲ್ಲೂ ನಂಬಿಕೆ ಹೊಂದಿದ್ದಾರೆ. ಜೀವನದ ಬಗೆಗೆ ಅವರ ಅಪಾರ ಪ್ರೇಮವು 'ಕರಮಾಜೊವ್

ಸೋದರರು' ಕಾದಂಬರಿಯಲ್ಲಿ ಇವಾನ್ ಹಾಗೂ ಅಲ್ಯೋಷಾರ ನಡುವಿನ ಸಂಭಾಷಣೆಯಲ್ಲಿ ಶಕ್ತಿಯುತವಾಗಿ ವ್ಯಕ್ತಪಟ್ಟಿದೆ:

" 'ನನಗೆ ವಸಂತದ ಅಂಟುವ ಎಲೆಗಳೂ ನೀಲ ಗಗನವೂ ತುಂಬ ಇಷ್ಟ! ಅವನ್ನು ನೀನು ಮನಸ್ಸಿನಿಂದಲ್ಲ, ಅಥವಾ ತರ್ಕದ ಮೂಲಕವಲ್ಲ, ಆದರೆ ಅಂತರಾತ್ಮದಿಂದ, ಕರುಳಿನಿಂದ ಪ್ರೀತಿಸುತ್ತೀಯೆ, ನಿನ್ನೆಲ್ಲ ಹಚ್ಚ ಹೊಸತಾಗಿ ಹುಟ್ಟಿದ ಎಳೆಯ ಶಕ್ತಿಯಿಂದ ಪ್ರೀತಿಸುತ್ತೀಯೆ... ನನ್ನ ಈ ಹುಚ್ಚು ಮಾತು ನಿನಗೇನಾದರೂ ಅರ್ಥವಾಯಿತೆ, ಅಲ್ಯೋಷಾ?'

" 'ಚೆನ್ನಾಗಿಯೇ ಅರ್ಥವಾಯಿತು, ಇವಾನ್. ನಿಜಕ್ಕೂ ಅಂತರಾತ್ಮದಿಂದಲೇ, ಕರುಳಿನಿಂದಲೇ, ಪ್ರೀತಿಸಲು ಬಯಸಬೇಕು – ನೀನು ಇದನ್ನು ಎಷ್ಟು ಚೆನ್ನಾಗಿ ಹೇಳಿದೆ: ನೀನು ಬಾಳಲು ಅಷ್ಟೊಂದು ಅಗಾಧ ಬಯಕೆ ಹೊಂದಿರುವುದನ್ನು ಕಂಡು ನನಗೆ ತುಂಬ ಸಂತೋಷವಾಗಿದೆ... ಎಲ್ಲರೂ, ಎಲ್ಲಕ್ಕಿಂತ ಮಿಗಿಲಾಗಿ, ಜೀವನವನ್ನು ಪ್ರೀತಿಸುವುದನ್ನು ಕಲಿಯಬೇಕು, ಎಂಬುದು ನನ್ನ ನಂಬಿಕೆ.'

" 'ಜೀವನವನ್ನು ಅದರ ಅರ್ಥಕ್ಕಿಂತ ಹೆಚ್ಚಾಗಿ ಪ್ರೀತಿಸಬೇಕೆ?'

" 'ಹೌದು, ನಿಜಕ್ಕೂ. ನೀನೇ ಹೇಳಿದಂತೆ, ಅದನ್ನು ತರ್ಕಕ್ಕಿಂತ ಹೆಚ್ಚಾಗಿ ಪ್ರೀತಿಸಬೇಕು. ನಿಸ್ಸಂದೇಹವಾಗಿಯೂ ತರ್ಕಕ್ಕೆ ಮುನ್ನ. ಆಗಲಷ್ಟೆ ನಾನು ಅದರ ನಿಜವಾದ ಅರ್ಥ ಏನು ಅನ್ನುವುದನ್ನು ತಿಳಿಯುವೆ.' "

ಮಾನವ ಸಂಕಟವೆಲ್ಲ ಕೊನೆಗಾಣಬೇಕು, ನ್ಯಾಯ ಪ್ರತಿಷ್ಠಾಪನೆಯಾಗಬೇಕು – ದಸ್ತಯೇವ್‌ಸ್ಕಿಯವರ ಈ ಸರ್ವೋಚ್ಚ ಆಕಾಂಕ್ಷೆ ಅವರು ಸೃಜಿಸಿದ ಪಾತ್ರ ಗಳಲ್ಲೆಲ್ಲ ಅತ್ಯಂತ ಭಾವಪೂರ್ಣನಾದ, ಜೀವನವನ್ನು ಹೆಚ್ಚಾಗಿ ಪ್ರೀತಿಸುವ ದ್ಮಿತ್ರಿ ಕರಮಾಜೊವ್ ಕನಸಿನಲ್ಲಿ ಕಂಡ ಅತ್ಯದ್ಭುತ ಕಾಣ್ಕೆಯಲ್ಲಿ ಸ್ಪಷ್ಟವಾಗಿ ನಿರೂಪಿತ ವಾಗಿದೆ. ತನ್ನ ಕನಸಿನಲ್ಲಿ ದ್ಮಿತ್ರಿ ಸುಟ್ಟು ಸೀದು ಹೋದ ಹಳ್ಳಿಗುಡಿಸಲುಗಳನ್ನೂ ಹಸಿದು ಕಂಗಾಲಾದ ರೈತ ಮಹಿಳೆಯರನ್ನೂ, ಚಳಿಯಿಂದ ನೀಲಿಗಟ್ಟಿದ ದೇಹದ ಹಸಿದ ಕೂಸೊಂದು ತಾಯಿಯ ತೋಳುಗಳಲ್ಲಿ ಅಳುತ್ತಿರುವುದನ್ನೂ ಕಂಡಾಗ, "ಈ ಮಗುವಿನ ಅಳುವನ್ನು ನಿಲ್ಲಿಸುವಂತೆ ಮಾಡಲು, ಕೊಳಕು ಮೆತ್ತಿದ್ದ ಕೃಶ ಳಾದ ತಾಯಿಯ ಅಳುವನ್ನು ನಿಲ್ಲಿಸುವಂತೆ ಮಾಡಲು, ಏನನ್ನಾದರೂ ಮಾಡಲೇ ಬೇಕು. ಮತ್ತೆ ಎಲ್ಲೂ ಎಂದೂ ಕಣ್ಣೀರೇ ಇರಬಾರದು. ಅದನ್ನು ಈಗಲೇ, ಈ ಕ್ಷಣವೇ, ತಡ ಮಾಡದೆಯೇ, ಎಷ್ಟೇ ಕಷ್ಟನಷ್ಟಗಳಾದರೂ ಸರಿಯೆ, ಕೊನೆಗಾಣಿಸಲೇ ಬೇಕು..." ಎಂದು ಭಾವಭರಿತ ಒತ್ತಾಸೆಗೆ ಒಳಗಾಗುತ್ತಾನೆ.

ದಸ್ತಯೇವ್‌ಸ್ಕಿಯವರ ಹೃದಯವೂ ಮನಸ್ಸೂ ಒಂದು ರಣಾಂಗಣ. ಅಲ್ಲಿ ಧರ್ಮಕ್ಕೂ ನಾಸ್ತಿಕತೆಗೂ ನಡುವೆ ಕದನ. ಅಲ್ಲಿ ಸಂಕಟವನ್ನು ಹಾಡಿಹೊಗಳ

ಲಾಗುತ್ತೆ, ಅನಂತರ ಅದನ್ನು ತಿರಸ್ಕರಿಸಲಾಗುತ್ತೆ. ಅಲ್ಲಿ ಅಧೀನತೆಯನ್ನೂ ಬಂಡಾಯಗಾರಿಕೆಯನ್ನೂ ವೈದೃಶ್ಯ ಮಾಡಿ ತೋರಿಸಲಾಗುತ್ತೆ; ಕ್ರಾಂತಿಯ ಬಗೆಗೆ ಅಂಜಿಕೆಯೂ ಸಮಾಜವಾದದ ವಿಚಾರಗಳಲ್ಲಿ ಅಮಿತಾಸಕ್ತಿಯೂ ಜೊತೆಜೊತೆ ಯಾಗಿ ಹೋಗುತ್ತವೆ; ಕೆಡುಕು, ವಕ್ರ ಮಾರ್ಗ ಹಾಗೂ ಸಂಕಟಗಳು ಅನಿವಾರ್ಯ ಎಂಬ ವಿಚಾರಗಳೂ ಅದ್ಭುತವಾದ, ಸಾಮರಸ್ಯ ಬೆಳವಣಿಗೆಯನ್ನು ಪಡೆದ, ಪರಿ ವರ್ತಿತವಾದ ಹಾಗೂ ಸಂತೋಷಭರಿತವಾದ ಭೂಮಿಯ ಮೇಲೆ ಜೀವಿಸುತ್ತಿ ರುವ ಜನರ ಕನಸಿನ ವಿಚಾರಗಳೂ ಜೊತೆಜೊತೆಯಾಗಿ ಹೋಗುತ್ತವೆ.

ಎ. ಬೇಲ್ಕಿನ್



# ಬಡ ಜನರು

ಓಹ್, ಈ ಕಥೆಗಾರರು! ಇವರು ಏನಾದರೂ ಉಪಯುಕ್ತ ವಾದುದನ್ನು, ಸಂತಸಕರವಾದುದನ್ನು, ಆನಂದ ದಾಯಕವಾದುದನ್ನು ಬರೆಯಬಾರದೆ? ಉಹೂಂ! ಇವರು ಕೊಳುಕು ಹೊಲಸುಗಳನ್ನೆಲ್ಲ ಕೆದಕಿ ತೆಗೆಯಲೇ ಬೇಕು. ನಾನು ಇವರನ್ನೆಲ್ಲ ಬರೆಯಲೇ ಬಾರದೆಂದು ನಿಷೇಧಿಸಿಬಿಡುವೆನು. ಇವರು ಬರೆಯುವುದರಿಂದ ಆಗುವ ಒಳಿತೇನು? ಇವರು ಬರೆದುದನ್ನು ನೀವು ಓದುತ್ತೀರ, ವಿಧಿ ಇಲ್ಲದೆ ಯೋಚನೆ ಮಾಡತೊಡಗುತ್ತೀರ. ಎಲ್ಲ ರೀತಿಯ ಅನಿಷ್ಟ ವಿಚಾರಗಳೂ ನಿಮ್ಮ ತಲೆಗೆ ಬರುತ್ತವೆ. ನಾನು ಇವರನ್ನೆಲ್ಲ ಬರೆಯಲೇ ಬಾರದೆಂದು ನಿಷೇಧಿಸಿ ಬಿಡುತ್ತೇನೆ, ನಿಜಕ್ಕೂ ನಿಷೇಧಿಸಿಬಿಡುತ್ತೇನೆ.

ರಾಜಕುಮಾರ ವಿ. ಎಫ್. ಅದಯೆವ್‌ಸ್ಕಿ

## ಏಪ್ರಿಲ್ 8

ನನ್ನ ಅಮೂಲ್ಯ ರತ್ನ ವರ್ವಾರ ಅಲೆಕ್ಸೇಯೆವ್ನ!

ಕಳೆದ ಸಂಜೆ ನನಗೆಷ್ಟು ಸಂತೋಷವಾಯಿತು. ಹಿಂದೆಂದೂ ಆಗದಿದ್ದಷ್ಟು ಸಂತೋಷ! ನನ್ನ ಹಟಮಾರಿ ಮುದ್ದುಹುಡುಗಿ, ನಿಮ್ಮ ಜೀವನದಲ್ಲಿ ಒಮ್ಮೆ ಗಾದರೂ, ಅಂತೂ ನಾನು ಹೇಳಿದಂತೆಯೇ ಮಾಡಿದಿರಲ್ಲ. ನಾನು ಸಂಜೆ ಎದ್ದಾಗ ಎಂಟಾಗಿತ್ತು (ನಿಮಗೆ ಗೊತ್ತಲ್ಲ, ನನ್ನ ಮುದ್ದು, ಕೆಲಸದನಂತರ ಒಂದು ಸಣ್ಣ ನಿದ್ದೆ ಮಾಡುವುದು ನನ್ನ ವಾಡಿಕೆ). ಮೋಂಬತ್ತಿ ಹಚ್ಚಿ, ಬರೆಯಲು ಕಾಗದ ಲೇಖನಿ ಸರಿಪಡಿಸಿಕೊಳ್ಳುತ್ತಿದ್ದೆ. ಆಗ ಸುಮ್ಮನೆ ತಲೆ ಎತ್ತಿ ನೋಡಿದೆ – ನನ್ನ ಹೃದಯ ಹೇಗೆ ಸಂತಸದಿಂದ ಕುಣಿದಾಡಿತು! ಅಂದರೆ, ನನಗೆ ಇಷ್ಟವಾದು ದನ್ನು, ನನ್ನ ಬಡಪಾಯಿ ಹೃದಯ ಬಯಸಿದುದನ್ನು ನೀವು ಅರ್ಥಮಾಡಿಕೊಂಡಿ ದ್ದೀರಿ, ಎಂದಾಯಿತು! ನಿಮ್ಮ ಕಿಟಕಿಗೆ ಹಾಕಿದ್ದ ತೆರೆಯ ಒಂದು ಕೊನೆ ಕರ್ಣಕುಂಡಲು ಗಿಡದ ಕುಂಡಕ್ಕೆ ತಗುಲಿ ಹಾಕಿದ್ದಿತು – ನಾನು ನಿಮಗೆ ಸಲಹೆ ಮಾಡಿದ್ದಂತೆಯೇ. ನಿಮ್ಮ ಮುದ್ದು ಮುಖ ಕಿಟಕಿಯ ಬಳಿ ಕಾಣಿಸಿಕೊಂಡಿತು, ನೀವು ಹೊರಗೆ ಇಣಿಕಿ ನನ್ನ ಕಡೆಗೆ ನೋಡುತ್ತಿದ್ದಿರಿ, ನನ್ನ ಬಗೆಗೇ ಯೋಚಿಸುತ್ತಿದ್ದಿರಿ, ಎಂದೂ ನನಗನಿಸಿತು. ಆದರೆ, ನನ್ನ ಮುದ್ದುಮಣಿ, ನಿಮ್ಮ ಆಪ್ಯಾಯಮಾನವಾದ ಮುಖ ವನ್ನು ನಾನು ಸ್ಪಷ್ಟವಾಗಿ ಕಾಣಲಾಗದಿದ್ದುದು ನನಗೆಷ್ಟು ದುಃಖ ಉಂಟು ಮಾಡಿತು. ನನ್ನ ದೃಷ್ಟಿ ಚೆನ್ನಾಗಿದ್ದ ಕಾಲವೂ ಒಂದಿತ್ತು. ಇಳಿವಯಸ್ಸು ಸಂತಸಕರ ವೇನಲ್ಲ, ನನ್ನ ಚಿನ್ನ. ಎಲ್ಲವೂ ಮಸುಕುಮಸುಕು. ಸಂಜೆ ಸ್ವಲ್ಪ ಬರೆದರೆ ಸಾಕು

ಕಣ್ಣು ಕೆಂಪಗೆ ಊದುತ್ತೆ, ನೀರು ಸುರಿಯುತ್ತೆ. ಬೆಳಿಗ್ಗೆ ಹೊರಗಿನವರಿಗೆ ಮುಖ ತೋರಿಸಲೂ ನಾಚಿಕೆಯಾಗುತ್ತೆ. ಆದರೂ ನಿಮ್ಮ ಮಂದಹಾಸ, ನನ್ನ ಪುಟ್ಟ ದೇವತೆಯೇ, ನಿಮ್ಮ ಮೋಹಕ ಮಂದಹಾಸ ನನ್ನ ಕಲ್ಪನೆಯಲ್ಲೇ ಹೇಗೆ ಕಂಗೊಳಿಸಿತು! ನಾನು ನಿಮ್ಮನ್ನು ಮುದ್ದಿಸಿದಾಗ, ನಿಮಗೆ ಜ್ಞಾಪಕವಿದೆಯೇ, ನನಗಾದ ಭಾವನೆಯೇ ಈಗಲೂ ನನಗಾಯಿತು. ನೀವು ನನ್ನ ಕಡೆಗೆ ಬೆರಳು ತೋರಿಸಿ ತುಸು ಗದರಿಸಿದಿರೆಂದೂ ನಾನು ಕಲ್ಪಿಸಿಕೊಂಡೆ. ನೀವು ಹಾಗೆ ಮಾಡಿದಿರಾ, ನನ್ನ ತುಂಟ ಹುಡುಗಿ? ನಿಮ್ಮ ಮುಂದಿನ ಪತ್ರದಲ್ಲಿ ನೀವು ಇದನ್ನೆಲ್ಲ ವಿವರವಾಗಿ ಬರೆದು ತಿಳಿಸಬೇಕು.

ಈ ಕಿಟಕಿ ತೆರೆಯ ಬಗೆಗೆ ನಮ್ಮ ಹಂಚಿಕೆ ನಿಮಗೆ ಹೇಗೆ ಅನಿಸುತ್ತೆ, ವಾರೆಂಕ? ಸೊಗಸಾದುದು, ಅಲ್ಲವೇ? ನೀವು ಅಲ್ಲಿ ನನ್ನ ಬಗೆಗೇ ಯೋಚಿಸುತ್ತಿದ್ದೀರ, ನನ್ನನ್ನು ಜ್ಞಾಪಿಸಿಕೊಳ್ಳುತ್ತಿದ್ದೀರ, ನೀವು ಚೆನ್ನಾಗಿದ್ದೀರ, ಉಲ್ಲಾಸದಿಂದಿದ್ದೀರ, ಎಂದು ನಾನು ಕೆಲಸ ಮಾಡುವಾಗಾಗಲೀ, ಮಲಗಿದ್ದಾಗಾಗಲೀ, ಎಚ್ಚರವಾಗಿದ್ದಾಗಾಗಲೀ ತಕ್ಷಣವೇ ತಿಳಿಯುವಂತಾಗಿದೆ. ತೆರೆ ಕೆಳಗೆ ಬಿದ್ದಿತೆಂದರೆ "ಗುಡ್ ನೈಟ್, ಮಕಾರ್ ಅಲೆಕ್ಸೇಯೆವಿಚ್!" ಎಂದರ್ಥ. ತೆರೆ ಎತ್ತಿತೆಂದರೆ, "ಗುಡ್ ಮಾರ್ನಿಂಗ್, ಮಕಾರ್ ಅಲೆಕ್ಸೇಯೆವಿಚ್, ಚೆನ್ನಾಗಿ ನಿದ್ದೆ ಬಂತೆ" ಎಂದು, ಅಥವಾ "ಹೇಗಿದ್ದೀರಿ, ಮಕಾರ್ ಅಲೆಕ್ಸೇಯೆವಿಚ್? ನಾನಂತೂ ದೇವರ ದಯದಿಂದ ಚೆನ್ನಾಗಿದ್ದೀನಿ!" ಎಂದು ಅರ್ಥ. ನೋಡಿದಿರಾ, ನನ್ನ ಅತ್ಯಂತ ಪ್ರೀತಿಪಾತ್ರರಾದವರೇ, ಈ ಏರ್ಪಾಟು ಎಷ್ಟು ಚೆನ್ನಾಗಿದೆ. ಇದು ಪತ್ರಗಳನ್ನೂ ಅನವಶ್ಯವನ್ನಾಗಿ ಮಾಡುತ್ತದೆ! ಜಾಣತನದ ಹಂಚಿಕೆ, ಅಲ್ಲವೇ? ಇದನ್ನು ನಾನೇ ಯೋಚಿಸಿದ್ದು! ಇಂಥ ವಿಷಯಗಳಲ್ಲೆಲ್ಲ ನಾನು ಎತ್ತಿದ ಕೈ ಅನಿಸುವುದಿಲ್ಲವೇ ನಿಮಗೆ?

ಆಮೇಲೆ, ನಾನು ನಿಮಗೆ ತಿಳಿಸಬಹುದು, ನನ್ನ ಪ್ರಿಯ ವರ್ವಾರ ಅಲೆಕ್ಸೇಯೆವ್ನ – ನಾನು ಅಂದುಕೊಂಡುದಕ್ಕೆ ವಿರುದ್ಧವಾಗಿ ಇಡೀ ರಾತ್ರಿ ಚೆನ್ನಾಗಿ ನಿದ್ದೆ ಮಾಡಿದೆ. ಇದು ತುಂಬ ತೃಪ್ತಿ ನೀಡಿದೆ. ಹೊಸ ಜಾಗಗಳಲ್ಲಿ ನಿದ್ದೆ ಸಾಮಾನ್ಯವಾಗಿ ಚೆನ್ನಾಗಿ ಬರುವುದೇ ಇಲ್ಲ. ಒಂದಲ್ಲ ಒಂದು ಸಂಗತಿ ನಿಮ್ಮನ್ನು ಎಚ್ಚರವಾಗಿಯೇ ಇರಿಸಿರುತ್ತೆ. ಬೆಳಿಗ್ಗೆ ನಾನು ಎದ್ದಾಗ ಮನಸ್ಸು ಉಲ್ಲಾಸಭರಿತವಾಗಿತ್ತು, ಬಾನಾಡಿಯಂತೆ ಆಹ್ಲಾದಕರವಾಗಿತ್ತು. ಅದೂ ಎಂಥ ಸೊಗಸಾದ ಪ್ರಾತಃಕಾಲ, ನನ್ನ ಪ್ರಿಯೆ! ಕಿಟಕಿ ತೆರೆದಿತ್ತು, ಸೂರ್ಯ ಬೆಳಗುತ್ತಿದ್ದ, ಹಕ್ಕಿಗಳು ಹಾಡುತ್ತಿದ್ದವು, ಗಾಳಿಯಲ್ಲಿ ವಸಂತದ ಅಡರು ತುಂಬಿತ್ತು, ಪ್ರಕೃತಿಯೆಲ್ಲ ಚೇತನಗೊಳ್ಳುತ್ತಿತ್ತು – ಎಲ್ಲವೂ ಸಮರಸದಿಂದ ಕೂಡಿದ್ದವು, ಎಲ್ಲವೂ ವಸಂತದಲ್ಲಿ ಹೇಗೆ ಇರಬೇಕೋ ಹಾಗೆಯೇ, ಇದ್ದವು. ಇಂದು ಬೆಳಿಗ್ಗೆ ನಾನು ಕೆಲವು ಸಂತಸಕರ ಚಿಂತನೆಗಳನ್ನೂ ಮಾಡಿದೆ. ಆ ಚಿಂತನೆಗಳೆಲ್ಲ ನಿಮಗೇ ಮುಡುಪಾಗಿದ್ದವು, ಪ್ರಿಯೆ. ನಿಮ್ಮನ್ನು

ನಾನು ಮಾನವರ ದುಃಖೋಪಶಮನಕ್ಕಾಗಿ, ಪ್ರಕೃತಿಯ ಸೊಬಗನ್ನು ಹೆಚ್ಚಿಸು ವುದಕ್ಕಾಗಿ ಸೃಜಿಸಲಾದ, ಆಕಾಶದಲ್ಲಿ ಹಾರಾಡುತ್ತಿರುವ ಒಂದು ಪುಟ್ಟ ಹಕ್ಕಿಗೆ ಹೋಲಿಸಿದೆ. ಇಲ್ಲಿ, ಭೂಮಿಯ ಮೇಲೆ ಚಿಂತೆ ವ್ಯಸನಗಳಲ್ಲಿ ಮುಳುಗಿರುವ ನಾವು ಮಾನವರು ಆಗಸದಲ್ಲಿ ನಿಶ್ಚಿಂತೆಯಿಂದ ಹಾರಾಡುತ್ತಿರುವ ಮುಗ್ಧ ಪಕ್ಷಿಗಳನ್ನು ಕಂಡು ಅಸೂಯೆಪಡಬೇಕು ಅನಿಸಿತು ನನಗೆ. ಈ ತರಹದಲ್ಲೇ ನಾನು ಚಿಂತನೆ ನಡೆಸಿದೆ, ಅನೇಕ ರೀತಿಯ ಅಮೂರ್ತವಾದ ಹರ್ಷದಾಯಕವಾದ ಹೋಲಿಕೆ ಗಳನ್ನು ಮಾಡಿದೆ. ನನ್ನ ಹತ್ತಿರ ಒಂದು ಪುಸ್ತಕವಿದೆ, ವಾರೆಂಕ. ಅದರಲ್ಲಿ ಇಂತಹುವೇ ಅನೇಕ ವಿಷಯಗಳು ತುಂಬಿವೆ. ತುಂಬ ವಿವರಗಳಿಂದ ಕೂಡಿವೆ. ಕನಸುಗಳು ನಾನಾ ರೀತಿಯವಾಗಿರುತ್ತವೆ, ನನ್ನ ಪ್ರಿಯತಮೆ. ಅವುಗಳ ಬಗೆಗೆ ನಾನು ಬರೆ ಯದೆ ಇರಲಾರೆ. ಅದರಲ್ಲೂ ಈಗ ವಸಂತವಾಗಿರುವುದರಿಂದ ಅವುಗಳು ಎಷ್ಟು ಉತ್ಕರ್ಷಕವಾಗಿವೆ, ಸಂತಸಕರವಾಗಿವೆ, ಕಲ್ಪನಾಪೂರ್ಣವಾಗಿವೆ, ಎಷ್ಟು ಕೋಮಲ ವಾಗಿವೆ ಎಲ್ಲ ಗುಲಾಬಿಯ ವರ್ಣದಿಂದ ರಂಜಿತವಾಗಿವೆ. ಆದ್ದರಿಂದಲೇ ನಾನು ಈ ರೀತಿ ಬರೆಯುತ್ತಿದ್ದೇನೆ. ಆದರೆ ನಿಜ ಹೇಳುವುದಾದರೆ, ನಾನು ಇದನ್ನೆಲ್ಲ ಆ ಪುಸ್ತಕದಿಂದಲೇ ಪಡೆದುಕೊಂಡೆ. ಆ ಗ್ರಂಥಕರ್ತೃವಿನ ಹಂಬಲಿಕೆಯೂ ಹೇಗೆ ನನ್ನ ಹಂಬಲಿಕೆಯಂತೆಯೇ ಇದೆ. ಅದೂ ಎಲ್ಲ ಕವನರೂಪದಲ್ಲಿ –

ನಾನೇಕೆ ಆಗಿಲ್ಲ ಹಕ್ಕಿ, ಹಾರಾಡುವ ಹಿಂಸ್ರ ಪಕ್ಷಿ !

ಹೀಗೇ ಆ ಪುಸ್ತಕದಲ್ಲಿ ಬರುತ್ತೆ, ಅದರಲ್ಲಿ ಇತರ ಅನೇಕ ವಿಚಾರಗಳೂ ಇವೆ. ಹೋಗಲಿ ಅವೆಲ್ಲ ! ಈಗ ನೀವು ಹೇಳಿ, ಇವತ್ತು ಬೆಳಿಗ್ಗೆ ಎಲ್ಲಿಗೆ ಹೋಗಿದ್ದಿರಿ, ವರ್ವಾರ ಅಲೆಕ್ಸೇಯೆವ್ನ. ನಾನು ಕೆಲಸಕ್ಕೆ ಹೋಗಲು ಇನ್ನೂ ಪೂರ್ಣವಾಗಿ ಸಿದ್ಧವಾಗಿರಲಿಲ್ಲ, ಆಗ ನೀವು ನಿಮ್ಮ ಕೋಣೆಯಿಂದ ಎಷ್ಟು ಆನಂದಭರಿತರಾಗಿ ಸಂಭ್ರಮದಿಂದ ಇಳಿದು ಬಂದಿರಿ ! ನಿಮ್ಮನ್ನು ನೋಡುವುದೇ ಆನಂದಕರವಾಗಿತ್ತು ! ಆಹಾ, ವಾರೆಂಕಾ, ವಾರೆಂಕಾ ! ದುಃಖಪಡಬೇಡಿ. ಕಣ್ಣೀರಿನಿಂದ ಪ್ರಯೋಜನವಿಲ್ಲ. ನನ್ನ ನಂಬಿ, ಪ್ರಿಯತಮೆ, ನಾನಿದನ್ನು ಅನುಭವದಿಂದ ಬಲ್ಲೆ. ಅಲ್ಲದೆ ಈಗ ನಿಮ್ಮಲ್ಲಿ ಶಾಂತಿ ನೆಲಸಿದೆ, ನಿಮ್ಮ ಆರೋಗ್ಯವೂ ಉತ್ತಮವಾಗಿದೆ. ಫಿದೋರ ಹೇಗಿದ್ದಾಳೆ ? ಎಂತಹ ಒಳ್ಳೆಯ ಹೆಂಗಸು ಅವಳು ! ನೀವಲ್ಲಿ ಅವಳೊಂದಿಗೆ ಹೇಗೆ ಜೀವಿಸುತ್ತಿ ದ್ದೀರಿ, ಬರೆದು ತಿಳಿಸಿ, ವಾರೆಂಕಾ. ಎಲ್ಲ ತೃಪ್ತಿಕರವೇ ? ಫಿದೋರಳೇನೋ ಸ್ವಲ್ಪ ಗೊಣಗಾಡುತ್ತಾಳೆ. ಆದರೆ ನೀವು ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡಿ. ಅವಳು ತುಂಬ ಒಳ್ಳೆಯ ಹೆಂಗಸು. ದೇವರು ಅವಳನ್ನು ಕಾಪಾಡಲಿ.

ನಾನಾಗಲೇ ನಮ್ಮ ಥೆರೇಸಳ ಬಗೆಗೆ ಬರೆದಿದ್ದೇನೆ. ಅವಳೂ ಒಬ್ಬ ಒಳ್ಳೆಯ ಪ್ರಾಮಾಣಿಕ ಹೆಂಗಸೇ. ನನಗೆ ತುಂಬ ಚಿಂತೆಯಾಗಿತ್ತು, ನಾವು ಒಬ್ಬರ ಪತ್ರವನ್ನು ಒಬ್ಬರಿಗೆ ಹೇಗೆ ತಲುಪಿಸುವುದು ಅಂತ. ದೇವರೇ ನಮಗೆ ಥೆರೇಸಳನ್ನು ಕಳಿಸಿ ಕೊಟ್ಟಿದ್ದಾನೆ. ಅವಳು ತುಂಬ ಕರುಣೆಯುಳ್ಳವಳು, ತುಂಬ ಮೃದು ಹೃದಯಿ, ಮಿತಭಾಷಿ. ಆದರೆ ನಮ್ಮ ಮನೆಯ ಯಜಮಾನಿ ನಿಷ್ಕರುಣಿ. ಥೆರೇಸಳನ್ನು ತೇಯ್ದು ಸವೆಸುತ್ತಿದ್ದಾಳೆ.

ನಾನು ಎಂಥ ಜಾಗಕ್ಕೆ ಬಂದಿದ್ದೇನೆ ಗೊತ್ತೆ, ವರ್ವಾರ ಅಲೆಕ್ಸೇಯೆವ್ನ? ಇದೊಂದು ಶುದ್ಧ ಹೊಲಗೇರಿ! ನನ್ನ ಮನೆಯೋ! ನಾನು, ನಿಮಗೇ ತಿಳಿದಿರುವಂತೆ, ಸನ್ಯಾಸಿಯಂತೆ ಜೀವಿಸುತ್ತಿದ್ದೆ. ಎಷ್ಟು ಶಾಂತಿಯುತವಾಗಿತ್ತು, ಪ್ರಶಾಂತವಾಗಿತ್ತು. ಕೋಣೆಯಲ್ಲಿ ನೊಣ ಹಾರಿಹೋಗುವುದೂ ಕೇಳಿಬರುತ್ತಿತ್ತು. ಇಲ್ಲಿ ಬರೀ ಶಬ್ದ, ಕೂಗಾಟ, ಕೋಲಾಹಲಗಳೇ! ಆದರೆ ಈ ಜಾಗ ಎಂತಹುದು ಎಂದು ನಾನು ಹೇಳಲೇ ಇಲ್ಲವಲ್ಲ. ಕಗ್ಗತ್ತಲು ಕೊಳಕಿನಿಂದ ತುಂಬಿದ ಒಂದು ಉದ್ದವಾದ ಮೊಗಸಾಲೆಯನ್ನು ಊಹಿಸಿಕೊಳ್ಳಿ. ಇದರಲ್ಲಿ ಬಲಭಾಗಕ್ಕೆ ಬರೀಗೋಡೆ. ಎಡಭಾಗದಲ್ಲಿ, ಅನೇಕ ಬಾಗಿಲುಗಳ ಸಾಲು. ಹೋಟಲಿನಲ್ಲಿರುವಂತೆ. ಈ ಕೋಣೆಗಳಲ್ಲಿ ಒಬ್ಬರು, ಇಬ್ಬರು, ಮೂವರು ವ್ಯಕ್ತಿಗಳು ಬಾಡಿಗೆಗೆ ವಾಸ. ಇಲ್ಲಿ ಯಾವ ರೀತಿಯ ವ್ಯವಸ್ಥೆಯನ್ನೂ ನೀವು ನಿರೀಕ್ಷಿಸಬಾರದು. ಇದೊಂದು ನಿಜವಾದ 'ನೋವಾನ ನೌಕೆ'! ಆದರೂ ಇಲ್ಲಿರುವ ಜನರೆಲ್ಲ ಒಳ್ಳೆಯವರಾಗಿಯೇ ಸುಶಿಕ್ಷಿತರಾಗಿಯೇ ಕಾಣುತ್ತಾರೆ. ಅವರಲ್ಲೊಬ್ಬ ಕಾರಕೂನ (ಇವನು ಸಾಹಿತ್ಯದೊಂದಿಗೆ ಸಂಬಂಧ ಹೊಂದಿದ್ದಾನೆ). ಚೆನ್ನಾಗಿ ಓದಿಕೊಂಡಿದ್ದಾನೆ. ಹೋಮರ್, ಬ್ರಾಂಬಿಯಸ್* ಮತ್ತಿತರ ಎಲ್ಲ ರೀತಿಯ ಸಾಹಿತಿಗಳ ಬರಹಗಳ ಬಗೆಗೂ ತುಂಬ ತಿಳಿದಿದ್ದಾನೆ. ಬುದ್ಧಿವಂತ. ಆಮೇಲೆ, ಇಲ್ಲಿ ಇಬ್ಬರು ಸೈನ್ಯಾಧಿಕಾರಿಗಳಿದ್ದಾರೆ. ಇವರು ಯಾವಾಗಲೂ ಇಸ್ಪೀಟು ಆಡುತ್ತಿರುತ್ತಾರೆ. ಒಬ್ಬ ನೌಕಾಧಿಕಾರಿ, ಒಬ್ಬ ಅಧ್ಯಾಪಕ – ಆಂಗ್ಲ ದೇಶೀಯ – ಇವರೂ ಇಲ್ಲಿದ್ದಾರೆ. ಆದರೆ, ನನ್ನ ಪ್ರಿಯತಮೆ, ನನ್ನ ಮುಂದಿನ ಪತ್ರಕ್ಕಾಗಿ ಕಾದಿರಿ. ಅದರಲ್ಲಿ ನಾನು ನಿಮ್ಮ ಸಂತೋಷಕ್ಕಾಗಿ ಇವರನ್ನೆಲ್ಲ ಇವರು ಇರುವಂತೆಯೇ ವ್ಯಂಗ್ಯಾತ್ಮಕವಾಗಿ ವಿವರಿಸುವೆ. ನಮ್ಮ ಮನೆಯ ಯಜಮಾನಿ ಒಬ್ಬ ಕುಳ್ಳ ಹೆಂಗಸು, ಸೋಮಾರಿ ಮುದುಕಿ. ಯಾವಾಗಲೂ ಗೌನ್ ಹಾಗೂ ಸ್ಲಿಪ್ಪರ್‌ಗಳಲ್ಲೇ ಓಡಾಡುತ್ತಾಳೆ. ಇಡೀ ದಿನ ಥೆರೇಸಳನ್ನು ಛೇಡಿಸುತ್ತಿರುತ್ತಾಳೆ. ನನ್ನ ವಾಸ ಅಡಿಗೆಮನೆಯಲ್ಲಿ. ಅಥವಾ ಇದನ್ನು ಹೀಗೆ ಹೇಳಬಹುದು –

---

*ಬೇರನ್ ಬ್ರಾಂಬಿಯಸ್ – ನಲವತ್ತರ ವರ್ಷಗಳಲ್ಲಿ ಜನಪ್ರಿಯನಾಗಿದ್ದ ಒಬ್ಬ ಚಿಲ್ಲರೆ ಲೇಖಕ ಓ. ಐ. ಸೆಂಕೋವ್‌ಸ್ಕಿ ಎಂಬುವನ ಸಾಹಿತ್ಯನಾಮ. – ಸಂ.

ಅಡಿಗೆಮನೆಗೆ ಅಂಟಿಕೊಂಡಿರುವಂತಹ ಒಂದು ಕೋಣೆ. (ನಮ್ಮ ಅಡಿಗೆಮನೆ ತುಂಬ ಚೆನ್ನಾಗಿದೆ, ಶುಭ್ರವಾಗಿದೆ, ಬೆಳಕಿನಿಂದ ಕೂಡಿದೆ, ಅಂತ ನಾನು ಹೇಳಲೇ ಬೇಕು.) ನನ್ನ ಕೋಣೆ ದೊಡ್ಡದೇನೂ ಅಲ್ಲ, ಆದರೆ ಬೆಚ್ಚಗಿನ ಸ್ಥಳ... ಅಥವಾ ಇದನ್ನು ನಾನು ಹೀಗೆ ಹೇಳುವುದೇ ಉತ್ತಮ: ಒಂದು ದೊಡ್ಡ ಅಡಿಗೆಮನೆ, ಅದಕ್ಕೆ ಮೂರು ಕಿಟಕಿಗಳು. ಇದರಲ್ಲೇ ಒಂದು ಅಡ್ಡಗೋಡೆ ಹಾಕಿ ಇನ್ನೊಂದು ಕೋಣೆ ಮಾಡಲಾಗಿದೆ, ಹೆಚ್ಚಿಗೆಯ ವಾಸಸ್ಥಳ ಎನ್ನುವಂತೆ. ಇದೂ ಸಾಕಷ್ಟು ವಿಶಾಲವಾಗಿದೆ, ಸುಖಕರವಾಗಿದೆ. ಇದಕ್ಕೂ ಒಂದು ಕಿಟಕಿ ಇದೆ. ಇದರಲ್ಲೇ ನನ್ನ ವಾಸ. ಸ್ವಲ್ಪದರಲ್ಲಿ ಹೇಳುವುದಾದರೆ, ಎಲ್ಲ ತುಂಬ ತೃಪ್ತಿಕರ. ಈ ವಿವರಣೆ ಗಳಲ್ಲೆಲ್ಲ ನಾನು ಬೇರೇನೋ ಅರ್ಥವನ್ನು ಅಡಗಿಸಿ ಇಟ್ಟಿದ್ದೇನೆಂದು, ಅದು ಅಡಿಗೆಮನೆಯಾದ್ದರಿಂದ ಅದರಲ್ಲಿ ತಲ್ಲಣಗೊಳಿಸುವಂತಹುದು ಏನೋ ಇದೆ ಯೆಂದು, ಭಾವಿಸಬೇಡಿ, ನನ್ನ ಇನಿಯಳೇ ! ನಿಜ, ನಾನು ಅಡ್ಡಗೋಡೆಯ ಹಿಂದಿ ರುವ ಕೋಣೆಯಲ್ಲೇ ವಾಸಿಸುತ್ತಿರುವುದು. ಆದರೂ ಪರವಾಗಿಲ್ಲ, ನನ್ನ ಏಕಾಂತತೆ ನನಗಿದೆ. ಯಾರ ಗೊಡವೆಗೂ ಹೋಗದೆ, ನನ್ನಷ್ಟಕ್ಕೆ ನಾನು ಶಾಂತವಾಗಿ ವಾಸಿಸುತ್ತಿ ದ್ದೇನೆ. ಒಂದು ಮಂಚ, ಒಂದು ಮೇಜು, ಸೆಳೆ ಖಾನೆಗಳುಳ್ಳ ಒಂದು ಪೆಠಾರಿ, ಎರಡು ಕುರ್ಚಿಗಳು – ಇವು ನನ್ನ ಪೀಠೋಪಕರಣಗಳು. ದೇವರ ಚಿತ್ರಫಲಕ ವೊಂದನ್ನೂ ಇರಿಸಿಕೊಂಡಿದ್ದೇನೆ. ನಿಜ, ನನ್ನ ಕೋಣೆಗಿಂತ ಉತ್ತಮವಾದ ಕೋಣೆ ಗಳಿರಬಹುದು, ತುಂಬ ಹೆಚ್ಚು ಉತ್ತಮವಾದವೂ ಇರಬಹುದು. ಆದರೆ ಮುಖ್ಯ ವಿಷಯ, ಅನುಕೂಲ, ಅಲ್ಲವೇ ? ಆದ್ದರಿಂದ ನಾನು ಇದನ್ನು ಅನುಕೂಲಕ್ಕಾಗಿ ಮಾಡಿಕೊಂಡಿದ್ದೇನೆ. ಬೇರೇನೋ ನನ್ನ ಮನಸ್ಸಿನಲ್ಲಿಟ್ಟಿದ್ದೇನೆಂದು ಒಂದು ಘಳಿ ಗೆಯೂ ಯೋಚಿಸಬೇಡಿ. ನಿಮ್ಮ ಕಿಟಕಿ ಅಂಗಳದಿಂದ ನೇರವಾಗಿ ಆಚೆಗಿದೆ. ಅಂಗಳವೂ ಚಿಕ್ಕದಾಗಿರುವುದರಿಂದ ನೀವು ಹೋಗಿಬರುವಾಗಲೆಲ್ಲ ನಾನು ನಿಮ್ಮನ್ನು ನೋಡಲು ಸಾಧ್ಯವಿದೆ. ಅದು ಈ ಒಂಟಿಬಡಕ ವ್ಯಕ್ತಿಯ ನೀರಸ ದಿನಗಳನ್ನು ಉಲ್ಲಾಸಗೊಳಿಸುತ್ತದೆ. ಅಲ್ಲದೆ ಈ ಕೋಣೆಯು ಅಗ್ಗವೂ ಹೌದು ! ಈ ಮನೆ ಯಲ್ಲಿರುವ ಅತ್ಯಂತ ಕೀಳು ಕೋಣೆಗೂ ಊಟದೊಂದಿಗೆ 35ರೂಬಲ್ ಬಾಡಿಗೆ. ಇದು ನನ್ನ ಕೈ ಮೀರಿದ ವೆಚ್ಚ. ಈಗ ನಾನು ನನ್ನ ಕೋಣೆಗೆ, ಊಟ ಸಹಿತ, 24,5 ರೂಬಲ್ ಕೊಡುತ್ತಿದ್ದೇನೆ. ಹಿಂದೆ ಪೂರಾ ಮೂವತ್ತು ಕೊಟ್ಟು ನನಗೆ ಅವಶ್ಯವಾದ ಅನೇಕ ಅನುಕೂಲಗಳನ್ನು ಬಿಟ್ಟುಕೊಟ್ಟಿದ್ದೆ. ಹಿಂದೆ ಬೇಕೆಂದಾಗ ಟೀ ಕುಡಿಯಲು ನನಗೆ ಸಾಧ್ಯವಿರಲಿಲ್ಲ. ಆದರೆ ಈಗ ಟೀಗೂ ಸಕ್ಕರೆಗೂ ಸಾಲು ವಷ್ಟು ಹಣ ಉಳಿಸಿದ್ದೇನೆ. ಯಾಕೋ ಏನೋ ನನಗೆ ಟೀ ಇಲ್ಲದೆ ಇರುವುದು ಅವಮಾನಕರವಾಗಿ ಕಾಣುತ್ತೆ, ನನ್ನ ಚಿನ್ನ, ಇಲ್ಲಿ ಎಲ್ಲರೂ ಸಾಕಷ್ಟು ಹಣ ಇರುವ ವರೇ. ಟೀ ಕುಡಿಯದಿರುವುದು ಮನಸ್ಸಿಗೆ ಸಂಕೋಚ. ಆದ್ದರಿಂದಲೇ ಎಲ್ಲರೂ

ದುಬಾರಿ ಖರ್ಚಿನಲ್ಲಿ ಟೀ ಕುಡಿಯುತ್ತಾರೆ. ಇತರರ ಸಲುವಾಗಿ, ತೋರಿಕೆಗಾಗಿ, ಅಂತಸ್ತಿಗಾಗಿ, ಟೀ ಕುಡಿಯಬೇಕು. ಇಲ್ಲದಿದ್ದರೆ ನಾನು ಅದರ ಬಗೆಗೆ ಯೋಚಿಸುತ್ತಲೇ ಇರಲಿಲ್ಲ. ನಾನೇನೂ ಅಂಥ ಚಪಲಚಿತ್ತನಲ್ಲ. ತುರ್ತಿನ ಆವಶ್ಯಕತೆಗಳಿಗಾಗಿ, ಪಾದರಕ್ಷೆಗಾಗಿ ಅಥವಾ ಒಂದು ತುಂಡು ಉಡುಪಿಗಾಗಿ ಸ್ವಲ್ಪ ಹಣ ತೆಗೆದಿರಿಸಿದರೆ ಇನ್ನು ಉಳಿಯುವುದಾದರೂ ಎಷ್ಟು? ಅಲ್ಲಿಗೆ ನನ್ನ ಇಡೀ ಸಂಬಳ ಮುಗಿಯುತ್ತೆ. ನಾನೇನೂ ದೂರುತ್ತಿಲ್ಲ. ನನಗೆ ಸಾಕು. ಈಗ ಅನೇಕ ವರ್ಷಗಳಿಂದ ನನಗೆ ಬೇಕಾಗುವಷ್ಟು ಹಣ ನಾನು ಸಂಪಾದಿಸುತ್ತಿದ್ದೇನೆ. ಕೆಲವು ಸಲ ನನಗೆ ಬೋನಸ್ಸೂ ಬರುತ್ತೆ.

ಸರಿ, ನಾನು ಮುಗಿಸುತ್ತಿದ್ದೇನೆ, ನನ್ನ ದೇವತೆ. ನಾನು ನಿಮಗಾಗಿ ಕೆಲವು ಕರ್ಣಕುಂಡಲ ಹಾಗೂ ಜರೇನಿಯಂ ಹೂಗಳ ಕುಂಡಗಳನ್ನು ಕೊಂಡಿದ್ದೇನೆ – ಹೆಚ್ಚು ದುಡ್ಡು ತಗುಲಿಲ್ಲ. ಬಹುಶಃ ನಿಮಗೆ ಮಿನ್ಯನೆಟ್ ಹೂಗಿಡಗಳು ಇಷ್ಟವೇನೋ? ಆ ಅಂಗಡಿಯಲ್ಲಿ ಅವೂ ಇವೆ. ನೀವು ಬರೆದು ತಿಳಿಸಿ. ಆದರೆ ದಯವಿಟ್ಟು ಎಲ್ಲವನ್ನೂ ವಿವರವಾಗಿ ಬರೆಯಿರಿ. ಅಂದ ಹಾಗೇ, ನನ್ನ ಅತ್ಯಂತ ಪ್ರಿಯಳೇ, ನಾನು ಇಂತಹ ಕೋಣೆಯನ್ನು ಬಾಡಿಗೆಗೆ ತೆಗೆದುಕೊಂಡಿರುವೆನಲ್ಲ ಎಂದು ನನ್ನ ಬಗೆಗೆ ಎಳ್ಳಷ್ಟೂ ಯೋಚನೆ ಅಥವಾ ಅನ್ಯಥಾ ಭಾವನೆ ಮಾಡದಿರಿ. ಅನುಕೂಲಕ್ಕಾಗಿ ನಾನು ಇದನ್ನು ತೆಗೆದುಕೊಂಡಿದ್ದೇನೆ. ಅನುಕೂಲ ಬಿಟ್ಟು ಬೇರೇನೂ ಅಲ್ಲ. ನಾನು ಹಣ ಉಳಿಸುತ್ತಿದ್ದೇನೆ, ನನ್ನ ಹೃದಯೇಶ್ವರಿ. ಒಂದಷ್ಟು ಹಣವನ್ನು ತೆಗೆದಿರಿಸಿದ್ದೇನೆ. ನಾನು ತುಂಬ ಪುಕ್ಕನ್ನಾಗಿ, ಒಂದು ನೊಣವೂ ತನ್ನ ರೆಕ್ಕೆಯಿಂದ ನನ್ನನ್ನು ಬಡಿದು ಬೀಳಿಸುವ ಹಾಗೆ ದುರ್ಬಲನಾಗಿ ಕಂಡುಬರಬಹುದು, ಆದರೆ ಆ ಬಗೆಗೆ ಯೋಚಿಸಿದರೆ, ನಾನು ನಿಜಕ್ಕೂ ಹಾಗಲ್ಲವೇ ಅಲ್ಲ. ನಾನು ಏನು ಮಾಡುತ್ತಿದ್ದೇನೆಂಬುದು ನನಗೆ ಗೊತ್ತು. ನನ್ನದು ದೃಢವಾದ ನಿರುದ್ವೇಗ ಮನಸ್ಸಿನ ಸ್ವಭಾವ. ನಮಸ್ಕಾರ, ನನ್ನ ಪುಟ್ಟ ದೇವತೆ! ಆಗಲೇ ಎರಡು ಪೂರಾ ಹಾಳೆ ಬರೆದಿರುವಂತೆ ಕಾಣುತ್ತೆ. ಕೆಲಸಕ್ಕೂ ತುಂಬ ತಡವಾಯಿತು. ನಿಮ್ಮ ಬೆರಳುಗಳಿಗೆ ನಾನು ಮುತ್ತಿಡುತ್ತೇನೆ, ನನ್ನ ಪ್ರಿಯತಮೆ.

ನಿಮ್ಮ ಅತ್ಯಂತ ವಿನೀತ ಸೇವಕ ಹಾಗೂ
ಅತ್ಯಂತ ನಚ್ಚಿನ ಗೆಳೆಯ,

ಮಕಾರ್ ದೇವುಷ್ಕಿನ್.

<u>ಮರೆತದ್ದು</u>: ನಾನು ನಿಮ್ಮಲ್ಲಿ ಒಂದು ಅರಿಕೆ ಮಾಡಿಕೊಳ್ಳುತ್ತೇನೆ: ಸಾಧ್ಯವಾದಷ್ಟೂ ವಿವರವಾಗಿ ಪತ್ರ ಬರೆಯಿರಿ, ನನ್ನ ಚಿನ್ನ. ಇದರ ಜೊತೆಗೆ ಒಂದು ಪೌಂಡ್ ಮಿಠಾಯಿ ಕಳಿಸುತ್ತಿದ್ದೇನೆ, ವಾರೆಂಕ. ನಿಮಗೆ ಇದು ತುಂಬ ಇಷ್ಟವಾಗು

ವುದೆಂದು ನಂಬಿದ್ದೇನೆ, ದೇವರ ಆಣೆಯಾಗಿಯೂ ನನ್ನ ಬಗೆಗೆ ನೀವು ಸ್ವಲ್ಪವೂ ಅಶಾಂತರಾಗಬೇಡಿ. ಮತ್ತೊಮ್ಮೆ ನಮಸ್ಕಾರ, ನನ್ನ ಪ್ರಿಯೆ.

ಏಪ್ರಿಲ್ 8

ಪ್ರಿಯ ಮಕಾರ್ ಅಲೆಕ್ಸೇಯೆವಿಚ್,

ನಿಮಗೆ ಗೊತ್ತೇನು, ನಾನು ಕೊನೆಗೂ ನಿಮ್ಮೊಂದಿಗೆ ಜಗಳವಾಡಲೇ ಬೇಕಾಗಿ ಬಂದಿದೆ. ನೀವು ನನಗಾಗಿ ಕಳಿಸಿರುವ ಬಳುವಳಿಗಳಿಗಾಗಿ ನೀವು ಎಷ್ಟೊಂದು ಖರ್ಚು ಮಾಡಿದ್ದೀರಿ, ಎಷ್ಟು ತ್ಯಾಗ ಮಾಡಿದ್ದೀರಿ, ಸ್ವಂತ ಸುಖವನ್ನೇ ಎಷ್ಟು ವರ್ಜಿಸಿದ್ದೀರಿ, ಎಂಬುದನ್ನು ತಿಳಿದು ತಿಳಿದೂ ನಾನು ಆ ಬಳುವಳಿಗಳನ್ನು ಒಪ್ಪಿಕೊಳ್ಳುವುದು ನಿಜಕ್ಕೂ ಕಷ್ಟವಾಗಿದೆ, ಪ್ರಿಯ ಮಕಾರ್ ಅಲೆಕ್ಸೇಯೆವಿಚ್‌ರವರೇ. ನಾನು ಖಂಡಿತ ಹೇಳುತ್ತೇನೆ. ನನಗೇನೂ ಬೇಕಾಗಿಲ್ಲ, ಏನೇನೂ ಬೇಕಾಗಿಲ್ಲ, ಎಂದು ನಾನು ಎಷ್ಟು ಸಾರಿ ನಿಮಗೆ ಹೇಳಬೇಕು? ನೀವು ನನ್ನ ಮೇಲೆ ಸುರಿಸುತ್ತಿರುವ ಈ ಕರುಣೆಯ ವೃಷ್ಟಿಗೆ ನಾನು ಪ್ರತಿ ನೀಡಲಾರೆನೆಂಬುದು ನಿಮಗೆ ಗೊತ್ತಿದೆ. ಆ ಹೂಗಳನ್ನೇಕೆ ಕಳುಹಿಸಿದ್ದೀರಿ? ಕರ್ಣಕುಂಡಲದ ಒಂದು ಕುಂಡ ಸಾಕಾಗಿತ್ತು, ಜರೇನಿಯಂಗಳೇಕೆ? ಯಾರೇ ಸರಿ ಎಚ್ಚರ ತಪ್ಪಿ ಒಂದು ಮಾತನಾಡಿದರೆ ಸಾಕು – ನಾನು ಜರೇನಿಯಂಗಳ ಬಗೆಗೆ ಮಾಡಿದಂತೆ – ನೀವು ಓಡಿ ಹೋಗುತ್ತೀರ, ಅವನ್ನು ಕೊಂಡು ತರುವು ದಕ್ಕೆ! ಅವು ಸಾಕಷ್ಟು ದುಬಾರಿಯವೇ ಆಗಿರಬೇಕು. ಆದರೆ ಹೂಗಳೇನೋ ಬಹು ಸುಂದರವಾಗಿವೆ, ಈ ಪುಟ್ಟ ಕಡುಗೆಂಪು ಅಡ್ಡತಳಿಗಳು. ಎಲ್ಲಿ ಕೊಂಡಿರಿ ಇವನ್ನು? ನಾನು ಅವನ್ನು ಕಿಟಕಿಯ ಬಳಿ ಚೆನ್ನಾಗಿ ಎದ್ದು ಕಾಣುವಂಥ ಸ್ಥಳದಲ್ಲಿ ಇರಿಸಿದ್ದೇನೆ. ಕೆಳಗೆ ಒಂದು ಬೆಂಚ್ ಇರಿಸಿ ಅದರ ಮೇಲೂ ಇನ್ನಷ್ಟು ಹೂಗಳನ್ನು ಇರಿಸಲಿರುವೆನು – ನನಗೆ ಸ್ವಲ್ಪ ಹೆಚ್ಚಿಗೆ ಹಣ ಬರುವವರೆಗೂ ಕಾಯಬೇಕಷ್ಟೆ. ಫಿದೋರಗೆ ಅವುಗಳನ್ನು ಎಷ್ಟು ನೋಡಿದರೂ ತೃಪ್ತಿ ಇಲ್ಲ. ನಮ್ಮ ಕೋಣೆ ಇಲ್ಲಿ ಈಗ ಸ್ವರ್ಗದಂತಿದೆ – ಅಷ್ಟು ಶುಭ್ರವಾಗಿದೆ, ಅಷ್ಟು ಉಜ್ವಲವಾಗಿದೆ. ಆದರೆ ಮಿಠಾಯಿ ಏಕೆ? ನಿಮ್ಮ ಪತ್ರವನ್ನು ಓದಿದ ಕೂಡಲೇ ಏನೋ ತಪ್ಪಾಗಿದೆ ಎಂದು ನನಗೆ ತಕ್ಷಣವೇ ಗೊತ್ತಾಯಿತು – ಪತ್ರದ ತುಂಬ ಸ್ವರ್ಗ, ವಸಂತ, ಪರಿಮಳ, ಹಾಡು ಹಕ್ಕಿಗಳು. ಇಂಥ ಮಾತುಗಳೇ. ಕಾವ್ಯವೂ ಇದ್ದೇ ಇರುತ್ತ ದೆಂಬ ಖಾತರಿ ನನಗಾಯಿತು. ನೀವು ಕೆಲವು ಕಾವ್ಯದ ಸಾಲುಗಳನ್ನೂ ಬರೆಯ ಬೇಕಿತ್ತು, ಮಕಾರ್ ಅಲೆಕ್ಸೇಯೆವಿಚ್! ಉಳಿದವೆಲ್ಲ ಅಲ್ಲಿ ಇದ್ದೇ ಇದ್ದವು – ಕೋಮಲ ಭಾವನೆಗಳು, ಮಧುರ ಕನಸುಗಳು, ಮತ್ತೇನಿಲ್ಲ! ಇನ್ನು ಆ ತೆರೆಯ ವಿಷಯ ಹೇಳುವುದಾದರೆ, ನಾನು ಎಂದೂ ಆ ಅರ್ಥದಿಂದ ಹಾಗೆ ಮಾಡಲಿಲ್ಲ. ನಾನು

ಗಿಡಗಳನ್ನು ಇಡುವಾಗ ಬಹುಶಃ ತೆರೆಯ ಒಂದು ತುದಿ ಮೇಲಕ್ಕೆ ಸಿಕ್ಕಿಕೊಂಡಿರಬೇಕು. ನೋಡಿ, ಅದು ಹಾಗಾದುದು !

ಆಹ್, ಮಕಾರ್ ಅಲೆಕ್ಸೇಯೆವಿಚ್ ! ನೀವು ನಿಮ್ಮೆಲ್ಲ ಹಣವನ್ನೂ ನಿಮ್ಮ ಸ್ವಂತ ಆವಶ್ಯಕತೆಗಳಿಗಾಗಿಯೇ ಖರ್ಚು ಮಾಡುತ್ತಿದ್ದೀರೆಂದು ನನ್ನ ಮನ ನಂಬಿಸಲು ಎಷ್ಟೇ ಯತ್ನ ಮಾಡಿ, ಏನೇ ಹೇಳಿ. ನೀವು ನನ್ನಿಂದ ಏನನ್ನೂ ಬಚ್ಚಿಡಲಾರಿರಿ. ನೀವು ನನ್ನ ಸಲುವಾಗಿ ನಿಮ್ಮ ಸ್ವಂತ ಆವಶ್ಯಕತೆಗಳನ್ನೂ ಬಿಟ್ಟುಕೊಡುತ್ತಿದ್ದೀರೆಂದು ನಾನು ಕಾಣಬಲ್ಲೆ. ಶಾಂತಿ ನೀರವತೆ ಇಲ್ಲದಂಥ, ಇಕ್ಕಟ್ಟಿನಲ್ಲಿ ಅಸುಖದಿಂದ ವಾಸಿಸಬೇಕಾದಂಥ ಆ ಕೋಣೆಯನ್ನು ನೀವು ಬಾಡಿಗೆಗೆ ತೆಗೆದುಕೊಳ್ಳುವಂತೆ ಮಾಡಿದ್ದು ಯಾವುದು ? ನಿಮಗೆ ಏಕಾಂತತೆ ತುಂಬ ಇಷ್ಟ. ಆದರೆ ಅದನ್ನೇ ನೀವಲ್ಲಿ ಕಾಣುವುದಿಲ್ಲ. ನಿಮಗೆ ಬರುವ ಸಂಬಳದಿಂದ ತೀರ್ಮಾನಿಸಿದಲ್ಲಿ, ನೀವು ಇನ್ನೂ ಹೆಚ್ಚು ಉತ್ತಮವಾಗಿ ಬಾಳಬಲ್ಲಿರಿ. ನೀವು ಹಿಂದೆ ಇನ್ನೂ ಹೆಚ್ಚು ಉತ್ತಮವಾಗಿ ಬಾಳುತ್ತಿದ್ದಿರೆಂದು ಫಿದೋರ ಹೇಳುತ್ತಾಳೆ. ನಿಮ್ಮ ಇಡೀ ಜೀವನವನ್ನು ನೀವು ಒಂಟಿಯಾಗಿ, ಕೊರತೆಯಲ್ಲಿ, ವಿಷಣ್ಣತೆಯಲ್ಲಿ, ಎಂದೂ ಒಂದು ಸ್ನೇಹಪರ ನುಡಿಯೂ ಇಲ್ಲದೆ, ಯಾರೋ ಅಪರಿಚಿತರಿಂದ ಬಾಡಿಗೆಗೆ ತೆಗೆದುಕೊಂಡ ಯಾವುದೋ ಮೂಲೆಯಲ್ಲಿ ಕಳೆದಿರುವುದು ಸಾಧ್ಯವೇ ? ನನ್ನ ಕರುಣಾಳು ಮಿತ್ರರೇ, ನಿಮಗಾಗಿ ನನ್ನ ಹೃದಯ ಹೇಗೆ ವಿಲಪಿಸುತ್ತಿದೆ ! ಆದರೆ ಕೊನೆಯ ಪಕ್ಷ ಆರೋಗ್ಯದಿಂದ ಇರಲಾದರೂ ಯತ್ನಿಸಿ, ಮಕಾರ್ ಅಲೆಕ್ಸೇಯೆವಿಚ್. ಮೋಂಬತ್ತಿಯ ಬೆಳಕಿನಲ್ಲಿ ಬರೆಯುವುದು ನಿಮ್ಮ ಕಣ್ಣುಗಳಿಗೆ ನೋವುಂಟು ಮಾಡುತ್ತದೆಂದು ನೀವು ಹೇಳುತ್ತೀರ. ಹಾಗಾದರೆ ಯಾಕೆ ಹಾಗೆ ಮಾಡಬೇಕು ? ಅದಿಲ್ಲದೆಯೇ ನೀವು ಎಂಥ ಶ್ರದ್ಧಾವಂತ ಕೆಲಸಗಾರರೆಂದು ನಿಮ್ಮನ್ನು ಕೆಲಸಕ್ಕಿಟ್ಟುಕೊಂಡಿರುವವರು ಖಂಡಿತ ತಿಳಿದೇ ಇದ್ದಾರೆ.

ನಾನು ಮತ್ತೊಮ್ಮೆ ನಿಮ್ಮನ್ನು ಬೇಡಿಕೊಳ್ಳುತ್ತೇನೆ – ನನ್ನ ಸಲುವಾಗಿ ಹೆಚ್ಚು ಖರ್ಚು ಮಾಡಬೇಡಿ. ನೀವು ನನ್ನನ್ನು ಪ್ರೀತಿಸುತ್ತೀರೆಂದು ನನಗೆ ಗೊತ್ತು, ಆದರೆ ಅಷ್ಟು ಹಣ ಖರ್ಚು ಮಾಡಲು ನೀವು ಶ್ರೀಮಂತರಲ್ಲ. ಈ ಬೆಳಿಗ್ಗೆ ನಾನೂ ಉಲ್ಲಾಸದ ಮನಸ್ಸಿನಿಂದಲೇ ಎದ್ದೆ. ಎಷ್ಟೊಂದು ಆನಂದಭರಿತಳಾಗಿದ್ದೆ. ಫಿದೋರ ಎದ್ದು ಆಗಲೇ ತುಂಬ ಹೊತ್ತಿನಿಂದ ಕೆಲಸ ಮಾಡುತ್ತಿದ್ದಳು. ನನಗೂ ಒಂದಷ್ಟು ಕೆಲಸ ತಂದುಕೊಟ್ಟಳು. ಅದು ನನಗೆ ತುಂಬ ಸಂತೋಷ ನೀಡಿತು. ಹೊರಗೆ ಹೋಗಿ ಒಂದಷ್ಟು ಸಿಲ್ಕ್ ಬಟ್ಟೆ ತಂದು ಕೆಲಸಕ್ಕೆ ಕುಳಿತೆ. ಬೆಳಿಗ್ಗೆಯೆಲ್ಲ ನನ್ನ ಹೃದಯ ಹಗುರವಾಗಿತ್ತು, ನನ್ನ ಮನಸ್ಸು ಮುದದಿಂದ ತುಂಬಿತ್ತು. ಆದರೆ ಈಗ ನಾನು ಮತ್ತೆ ದುಃಖಿಯಾಗಿದ್ದೇನೆ, ನನ್ನ ಹೃದಯ ಭಾರವಾಗಿದೆ.

ನನ್ನ ಮುಂದಿನ ಗತಿ ಏನು ? ಭವಿಷ್ಯತ್ತಿನಲ್ಲಿ ನನಗೇನು ಕಾದಿದೆ ? ಈ

ಅನಿಶ್ಚಯತೆ, ಯಾವ ಪ್ರತೀಕ್ಷೆಗಳೂ ಇಲ್ಲದಿರುವುದು, ಅಥವಾ ಮುಂದೇನಾಗುವುದು ಎಂಬುದರ ಅಸ್ಪಷ್ಟ ಭಾವನೆಯೂ ಇಲ್ಲದಿರುವುದು ಮನಸ್ಸನ್ನು ಕುಗ್ಗಿಸುತ್ತದೆ. ಗತಕಾಲವು ಎಷ್ಟು ಭೀಕರವಾಗಿದ್ದಿತೆಂದರೆ ಅದರ ಬಗೆಗೆ ಯೋಚನೆಯೂ ನನ್ನ ಹೃದಯವನ್ನು ಒಡೆಯುತ್ತದೆ. ನನ್ನ ಜೀವನವನ್ನು ಹಾಳು ಮಾಡಿದ ಆ ನೀಚ ಜನರ ಬಗೆಗೆ ನಾನು ನನ್ನ ಕೊನೆಯ ದಿನಗಳವರೆಗೂ ಕಟು ಭಾವನೆಯನ್ನೇ ಹೊಂದಿರುತ್ತೇನೆ.

ಆದರೆ, ಆಗಲೇ ಕತ್ತಲಾಗುತ್ತಿದೆ. ನಾನು ನನ್ನ ಕೆಲಸ ಪ್ರಾರಂಭಿಸಬೇಕು. ಇನ್ನೂ ಹೆಚ್ಚು ಬರೆಯಬೇಕೆಂದೇನೋ ಇಷ್ಟವಿದೆ, ಆದರೆ ಸಮಯವಿಲ್ಲ – ಕೆಲಸವನ್ನು ತುರ್ತಾಗಿ ಮಾಡಬೇಕಾಗಿದೆ. ನಾನು ಅವಸರಿಸಬೇಕು. ಪತ್ರಗಳನ್ನು ಬರೆಯುವುದೇನೋ ಒಳ್ಳೆಯದೆನ್ನಿ. ಅದರಿಂದ ಒಂಟಿತನದ ಭಾವನೆ ಹೋಗುತ್ತೆ. ಆದರೆ ನೀವೇಕೆ ಎಂದೂ ನಮ್ಮಲ್ಲಿಗೆ ಬರುವುದೇ ಇಲ್ಲ? ಯಾಕೆ ಕೂಡದು ಮಕಾರ್ ಅಲೆಕ್ಸೇಯೆವಿಚ್? ಅದಕ್ಕಾಗಿ ನೀವೇನೂ ದೂರ ಹೋಗಬೇಕಾಗಿಲ್ಲ. ಅದಕ್ಕಾಗಿ ಸಮಯ ಕಂಡುಕೊಳ್ಳುವುದೂ ನಿಮಗೆ ಕಷ್ಟವೇನಿಲ್ಲವೆಂಬ ಖಾತರಿ ನನಗಿದೆ. ದಯವಿಟ್ಟು ಬನ್ನಿ ! ನಾನು ಈಗಷ್ಟೆ ನಿಮ್ಮ ಥೆರೇಸಳನ್ನು ಕಂಡೆ. ಎಷ್ಟು ಅನಾರೋಗ್ಯದಿಂದ ಇರುವವಳಾಗಿ ಕಂಡಳು. ಅವಳ ಬಗೆಗೆ ನನಗೆ ತುಂಬ ಕನಿಕರವಾಯಿತು. ಅವಳಿಗೆ ಇಪ್ಪತ್ತು ಕೊಪೆಕ್ ಕೊಟ್ಟೆ. ಓಹ್, ಇನ್ನೊಂದು ವಿಷಯವನ್ನು ಕೇಳುವುದನ್ನು ಮರೆತೇಬಿಟ್ಟಿದ್ದೆ: ನೀವು ಯಾವ ರೀತಿ ಜೀವಿಸುತ್ತಿದ್ದೀರಿ ಅನ್ನುವುದನ್ನು ದಯವಿಟ್ಟು ವಿವರವಾಗಿ ಬರೆದು ತಿಳಿಸಿ. ನಿಮ್ಮ ಸುತ್ತಮುತ್ತ ಎಂಥ ಜನ ವಾಸಿಸುತ್ತಿದ್ದಾರೆ? ನೀವು ಅವರೊಂದಿಗೆ ಹೇಗೆ ಏಗುತ್ತಿದ್ದೀರ? ಇವನ್ನೆಲ್ಲ ತಿಳಿಯಲು ನನಗೆ ತುಂಬ ಇಷ್ಟವಾಗಿದೆ. ಆದ್ದರಿಂದ ಎಲ್ಲವನ್ನೂ ಬರೆದು ತಿಳಿಸಿ. ಇಂದು ರಾತ್ರಿ ನಾನು ನನ್ನ ಕಿಟಕಿಯ ತೆರೆಯ ಅಂಚನ್ನು ನಿಮಗಾಗಿ ಉದ್ದೇಶಪೂರ್ವಕವಾಗಿಯೇ ಮೇಲೆತ್ತಿ ಕಟ್ಟುತ್ತೇನೆ. ಬೇಗ ಮಲಗಿ. ಕಳೆದ ರಾತ್ರಿ ನಿಮ್ಮ ಕೋಣೆಯಲ್ಲಿ ದೀಪ ಮಧ್ಯರಾತ್ರಿಯವರೆಗೂ ಉರಿಯುತ್ತಿದ್ದುದನ್ನು ಕಂಡೆ. ಒಳ್ಳೆಯದು, ನಮಸ್ಕಾರ ! ಇಂದು ವಿಷಾದನೀಯವಾದ, ನೀರಸವಾದ, ದರಿದ್ರದ ದಿನ. ಹೌದು, ಅಂತಹ ದಿನವೇ. ನಮಸ್ಕಾರ.

ನಿಮ್ಮ ಗೆಳತಿ,
ವರ್ವಾರ ದೊಬ್ರಸ್ಯೋಲೊವ.

ಏಪ್ರಿಲ್ 8

ಪ್ರಿಯ ವರ್ವಾರ ಅಲೆಕ್ಸೇಯೆವ್ನ,

ಹೌದು, ಹೃದಯೇಶ್ವರಿ, ಹೌದು. ನನ್ನ ತುಚ್ಛ ಬಾಳಿನಲ್ಲಿ ನಿನ್ನೆ ಒಂದು

ದುರ್ದಿನವಾಗಿತ್ತು. ನೀವು, ವರ್ವಾರ ಅಲೆಕ್ಸೇಯೆವ್ನ, ಮುದುಕನಾದ, ಹಳೆಯ ಸಂಪ್ರದಾಯದವನಾದ ನನ್ನನ್ನು ಕಂಡು ಖಂಡಿತ ತುಂಬ ನಗಾಡಿರಬೇಕು! ಆದರೆ ತಪ್ಪು ನನ್ನದು, ಇಡೀಯಾಗಿ ನನ್ನದೇ. ಬೊಕ್ಕ ತಲೆಯ ಮೇಲೆ ಹಿಡಿ ಕೂದಲಿರುವ ಮುದುಕನ ಚೆಲ್ಲಾಟ ಪ್ರಣಯ ದೇವತೆಯೊಂದಿಗೆ, ಪ್ರೇಮ ಭಾವನೆ ಗಳೊಂದಿಗೆ! ಆದರೂ ನಾನು ಇದನ್ನು ನಿಮಗೆ ಹೇಳಬೇಕು, ನನಗೆ ಅತ್ಯಂತ ಪ್ರಿಯಳಾದವಳೇ – ಮನುಷ್ಯನು ಕೆಲವು ವೇಳೆ ಒಂದು ವಿಚಿತ್ರ ಪ್ರಾಣಿಯಂತೆ ವರ್ತಿಸುತ್ತಾನೆ; ಅವನು ಎಷ್ಟು ಗಾಬರಿಗೊಳಿಸುವಂಥ ಹುಚ್ಚು ಮಾತನಾಡುತ್ತಾ ನೆಂದರೆ, ಎಷ್ಟು ವಿಪರೀತಕ್ಕೆ ಹೋಗುತ್ತಾನೆಂದರೆ – ದೇವರೇ ಕಾಪಾಡಬೇಕು! ಅದರ ಫಲಿತಾಂಶವೇನು, ಅದರನಂತರ ಆಗುವುದೇನು? ಏನೂ ಇಲ್ಲ, ಅಂಥ ಕಚಡ ಬಿಟ್ಟು ಬೇರೇನೂ ಇಲ್ಲ. ಅದರಿಂದ ನಮ್ಮನ್ನು ದೇವರೇ ಕಾಪಾಡಬೇಕು? ನಾನೇನೂ ಕೋಪಗೊಂಡಿಲ್ಲ, ಪ್ರಿಯೆ. ಆದರೆ ನಿಮಗೆ ಆ ಮೂರ್ಖ ಅಲಂಕಾ ರಿಕ ಶೈಲಿಯಲ್ಲಿ ಪತ್ರ ಬರೆದೆನಲ್ಲಾ ಎಂಬ ಯೋಚನೆಯಿಂದ ವ್ಯಾಕುಲಗೊಂಡಿದ್ದೇ ನಷ್ಟೆ. ಇಂದು ನಾನು ಕೆಲಸಕ್ಕೆ ದೊರೆಯಂತೆ ಸಂತೋಷದಿಂದ ಹೋದೆ. ನನ್ನ ಹೃದಯದಲ್ಲಿ ಎಂತಹ ಕಾಂತಿ ಸ್ಫುರಿಸುತ್ತಿತ್ತು. ನನ್ನ ಆತ್ಮಕ್ಕೆ ಎಂತಹ ಉತ್ಸವ ವಾಗಿತ್ತು. ಸ್ವಲ್ಪದರಲ್ಲಿ ಹೇಳುವುದಾದರೆ, ನಾನು ನಿಜಕ್ಕೂ ಹರ್ಷಭರಿತನಾಗಿದ್ದೆ! ಮೊದಲು ಕಾಗದ ಪತ್ರಗಳನ್ನು ಉತ್ಸಾಹದಿಂದಲೇ ಕೈಕೊಂಡೆ. ಆದರೆ ಅನಂತರ, ಸುತ್ತ ನೋಡಿದಾಗ ಎಲ್ಲವೂ ಹಿಂದಿನಂತೆಯೇ ನೀರಸವಾಗಿ ಉತ್ಸಾಹಶೂನ್ಯವಾಗಿ ಕಂಡುಬಂದಿತು. ಅದೇ ಮಸಿಕುಡಿಕೆ, ಅದೇ ಮೇಜು, ಅದೇ ಕಾಗದಪತ್ರ. ನಾನೂ ಅದೇ ಆಗಿದ್ದೆ. ಹಾಗಾದರೆ ಈ ಕಲ್ಪನಾ ಕುದುರೆಯನ್ನೇರಿ ಯಾಕೆ ಹೊರಟಿದ್ದೆ? ಯಾವುದು ನನ್ನನ್ನು ಹಾಗೆ ಮಾಡುವಂತೆ ಪ್ರೇರಿಸಿದ್ದು? ಸೂರ್ಯನು ತನ್ನ ಹೊಂಬಿಸಿಲನ್ನು ನನ್ನ ಮೇಲೆ ಚೆಲ್ಲಿ ಆಗಸವನ್ನು ನೀಲಿ ಬಣ್ಣಕ್ಕೆ ಬದಲಿಸಿದ್ದನೆಂಬ ಕಾರಣದಿಂದಲೆ? ನಮ್ಮ ಕಿಟಕಿಗಳ ಕೆಳಗೇ ಅಂಗಳದಲ್ಲಿ ಎಲ್ಲ ರೀತಿಯ ಕೊಳಕು ಹೊಲಸುಗಳೂ ರಾಶಿ ಬಿದ್ದಿರುವಾಗ ಯಾವ ರೀತಿಯ ಪರಿಮಳ ಇರಲು ಸಾಧ್ಯ? ಅದು ನನ್ನ ಮೂರ್ಖ ಕಲ್ಪನೆಯಿಂದಲೇ ಬಂದಿರಲಿಕ್ಕೆ ಸಾಕು. ಮೂರ್ಖ ಉತ್ಸಾಹ ಅತಿಹೆಚ್ಚಾದಾಗ ಯಾರೇ ಆಗಲಿ ತಮ್ಮನ್ನು ತಾವೇ ಸಂಪೂರ್ಣವಾಗಿ ಮರೆತು ಅಡ್ಡದಾರಿಯಲ್ಲಿ ಬಹು ದೂರ ಸಾಗುವುದು ಸಹಜ. ಆದರೆ ಇಂದು ಸಂಜೆ ಮನೆಗೆ ಹಿಂದಿರುಗುವಾಗ ನಾನು ನಡೆದು ಬಂದೆ ಎನ್ನುವುದಕ್ಕಿಂತ ನನ್ನ ದೇಹವನ್ನು ಎಳೆದುಕೊಂಡು ಬಂದೆ ಎಂದೇ ಹೇಳಬಹುದು. ಅಲ್ಲದೆ ಯಾವ ಕಾರಣಕ್ಕೋ ನನ್ನ ತಲೆಯೂ ನೋಯತೊಡಗಿತು. ಯಾವಾಗಲೂ ಅಷ್ಟೆ, ತೊಂದರೆ ಒಂದಾದ ಮೇಲೊಂದು ಬರುತ್ತೆ. ಬಹುಶಃ ಬೀಸುಗಾಳಿ ನನ್ನ ಬೆನ್ನನ್ನು ಚಳಿಯಿಂದ ಥರ ಗುಟ್ಟಿಸಿದ್ದಿತೇನೋ. ಬೆಳಿಗ್ಗೆ ಕೆಲಸಕ್ಕೆ ಹೊರಟಾಗ ನಾನು ವಸಂತ ಮಾಸವೆಂದು

ಎಷ್ಟು ಸಂತಸಿತನಾಗಿದ್ದೆನೆಂದರೆ, ಮೂರ್ಖತನದಿಂದ, ತೆಳುವಾದ ಶಿಥಿಲವಾದ ಕೋಟನ್ನಷ್ಟೆ ತೊಟ್ಟು ಹೊರಟಿದ್ದೆ. ನೀವು ನನ್ನ ಭಾವನೆಗಳನ್ನು ತಪ್ಪು ತಿಳಿದಿದ್ದೀರಿ, ಅವುಗಳನ್ನು ಸಂಪೂರ್ಣವಾಗಿ ತಪ್ಪಾಗಿ ಅರ್ಥಮಾಡಿಕೊಂಡಿದ್ದೀರಿ, ಎಂದು ನಿಮಗೆ ತಿಳಿಸಲು ಅವಕಾಶ ನೀಡಿ. ಅದು ತಂದೆಯೊಬ್ಬನ ವಾತ್ಸಲ್ಯವಾಗಿತ್ತು, ಶುದ್ಧ ಪಿತೃವಾತ್ಸಲ್ಯವಾಗಿತ್ತು, ವರ್ವಾರ ಅಲೆಕ್ಸೇಯೆವ್ನ. ನೀವು ಒಂಟಿಯಾಗಿ, ಅನಾಥೆಯಾಗಿದ್ದೀರಿ, ನಾನು ನಿಮ್ಮ ತಂದೆಯ ಸ್ಥಾನ ತೆಗೆದುಕೊಂಡಿದ್ದೇನೆ, ಅಷ್ಟೆ. ನಾನಿದನ್ನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ನಿಜವಾದ ಬಂಧುವೊಬ್ಬ ಹೇಳುವಂತೆ. ನಾನು ಎಷ್ಟೇ ಆಗಲಿ ನಿಮ್ಮ ಒಬ್ಬ ದೂರದ ಬಂಧು, ಅಲ್ಲವೇ? ತುಂಬ ತುಂಬ ದೂರದ ಬಂಧು, ನಿಜ. ಆದರೂ ಬಂಧುವೇ. ಮತ್ತೆ ಈಗ ನಾನು ನಿಮ್ಮ ಅತ್ಯಂತ ನಿಕಟ ಬಂಧುವಂತೆ, ರಕ್ಷಕನಂತೆ ಆಗಿದ್ದೇನೆ. ಏಕೆಂದರೆ ಎಲ್ಲಿ ನೀವು ಸಹಾಯ ರಕ್ಷಣೆ ಪಡೆಯಬೇಕಿದ್ದಿತೋ ಅಲ್ಲಿ ದ್ರೋಹ ಅವಹೇಳನವನ್ನಷ್ಟೆ ಕಂಡುಕೊಂಡಿರಿ. ಇನ್ನು ಕವನ ರಚಿಸುವ ವಿಷಯ ಹೇಳುವುದಾದರೆ, ನನ್ನ ವಯಸ್ಸಿನ ವ್ಯಕ್ತಿ ಕಾವ್ಯರಚನೆಯಲ್ಲಿ ತೊಡಗುವುದು ಅಸಭ್ಯವೆಂದೇ ನಾನು ಹೇಳುತ್ತೇನೆ, ಪ್ರಿಯೆ. ಕಾವ್ಯ ಕೆಲಸಕ್ಕೆ ಬಾರದ್ದು. ಈ ದಿನಗಳಲ್ಲಿ ಪುಟ್ಟ ಮಕ್ಕಳಷ್ಟೆ ಶಾಲೆಯಲ್ಲಿ ಕಾವ್ಯ ರಚಿಸುತ್ತಾರೆ, ಅದಕ್ಕಾಗಿ ಕಿವಿ ಹಿಂಡಿಸಿಕೊಳ್ಳುತ್ತಾರೆ. ಅದರ ಬಗೆಗೆ ನಾನು ಯೋಚಿಸುವುದು ಹೀಗೆಯೇ, ನನ್ನ ಪ್ರಿಯೆ.

ನೀವು ಯಾವಾಗಲೂ ಸುಖ, ಶಾಂತಿ ಎಂದೆಲ್ಲ ಅಂಥವೇ ವಿಷಯಗಳ ಬಗೆಗೆ ಏಕೆ ಬರೆಯುತ್ತೀರಿ, ವರ್ವಾರ ಅಲೆಕ್ಸೇಯೆವ್ನ? ನಾನು ಅತಿಸೂಕ್ಷ್ಮದ ವ್ಯಕ್ತಿಯೇನಲ್ಲ. ನನಗೆ ಬೇಕಾದುದು ತೀರ ಅಲ್ಪ. ನಾನು ಈಗಿಗಿಂತ ಹಿಂದೆಂದೂ ಹೆಚ್ಚು ಉತ್ತಮವಾಗಿರಲಿಲ್ಲ. ನನ್ನ ಈ ಇಳಿ ವಯಸ್ಸಿನಲ್ಲಿ ನಾನು ಏಕೆ ಇದೇ ಬೇಕು, ಅದೇ ಬೇಕು ಎಂದು ಒದ್ದಾಡಬೇಕು? ನನಗೆ ತಿನ್ನಲು ಸಾಕಷ್ಟಿದೆ, ಉಡಲು ಬಟ್ಟೆ ಇದೆ, ಪಾದರಕ್ಷೆ ಇದೆ. ದುಂದು ವೆಚ್ಚ ಬೇಕೆನ್ನುವುದಕ್ಕೆ ನಾನು ಯಾರು? ನಾನೇನೂ ರಾಜ ವಂಶದವನಲ್ಲ. ಉಹೂಂ, ನನ್ನ ತಂದೆ ಕುಲೀನರೇನೂ ಆಗಿರಲಿಲ್ಲ. ಅವರು ನನ್ನ ಆದಾಯಕ್ಕಿಂತಲೂ ಕಮ್ಮಿಯಾದ ಆದಾಯದಲ್ಲಿ ಸಂಸಾರ ಸಾಗಿಸುತ್ತಿದ್ದರು. ಅಲ್ಲದೆ ನಾನು ಅತ್ಯುಪಚಾರಾಪೇಕ್ಷಿಯೂ ಅಲ್ಲ! ಆದರೂ, ನಿಜ ಹೇಳಬೇಕಾದರೆ, ನಾನು ಹಿಂದಿದ್ದ ಜಾಗ ಈಗಿನದಕ್ಕಿಂತ ಹೆಚ್ಚು ಉತ್ತಮವಾಗಿತ್ತು. ಅಲ್ಲಿ, ಪ್ರಿಯೆ, ನಾನು ಹೆಚ್ಚು ಆರಾಮವಾಗಿದ್ದೆ. ನನ್ನ ಈಗಿನ ಕೋಣೆಯೂ ಸಾಕಷ್ಟು ಒಳ್ಳೆಯದೇ ಎನ್ನಿ. ಕೆಲವು ವಿಷಯಗಳಲ್ಲಿ ಇದು ಹೆಚ್ಚು ಆನಂದದಾಯಕವೂ, ಹೀಗೆ ಹೇಳಬಹುದಾದಲ್ಲಿ, ಹೆಚ್ಚು ಉತ್ಸಾಹಪೂರ್ಣವೂ ಆಗಿದೆ. ಈ ಕೋಣೆಗೆ ವಿರುದ್ಧವಾಗಿ ನಾನು ಏನೂ ಹೇಳಲಾರೆ, ಆದರೂ ಹಳೆಯ ಕೋಣೆಯೋಯಿತಲ್ಲ ಎಂಬ ಭಾವನೆ ಇದ್ದೇ ಇದೆ. ನಾವು ವೃದ್ಧರು, ಅಂದರೆ ಇಳಿ

ವಯಸ್ಸಿನವರು, ವಸ್ತುಗಳ ಬಗೆಗೆ ಮಮತೆಯನ್ನು ಬೆಳೆಸಿಕೊಂಡುಬಿಡುತ್ತೇವೆ. ಕೋಣೆ ಚಿಕ್ಕದಾಗಿತ್ತು. ಗೋಡೆಗಳು... ಹುಂ, ಗೋಡೆಗಳು ಎಲ್ಲ ಗೋಡೆಗಳಂತೆಯೇ ಇದ್ದವು. ಗೋಡೆಗಳು ಏನು ಮಹಾ. ಅಲ್ಲಿನ ನೆನಪುಗಳೇ ನನ್ನನ್ನು ಕೊರಗುವಂತೆ ಮಾಡುವುದು. ಆ ನೆನಪುಗಳೇ ಸಂತಸಕರವಾದವುಗಳಾದರೂ, ಅವೇ ಈಗ ನನ್ನನ್ನು ಕೊರಗುವಂತೆ ಮಾಡುತ್ತಿರುವುದು ವಿಚಿತ್ರವೇ ಸರಿ. ಕೆಟ್ಟದಾಗಿದ್ದು ಒಮ್ಮೆ ನನ್ನನ್ನು ಕೆರಳಿಸುತ್ತಿದ್ದಂಥ ವಸ್ತುಗಳೂ ಈಗ ಒಳ್ಳೆಯವಾಗಿ ಶುದ್ಧವಾದವು ಗಳಾಗಿ ಕಂಡುಬರುತ್ತವೆ. ನಾನೂ ಆ ಮುದುಕಿ – ಈಗ ಆಕೆ ಸತ್ತಿದ್ದಾಳೆ – ಅಲ್ಲಿ ನೆಮ್ಮದಿಯಾಗಿ ವಾಸಿಸುತ್ತಿದ್ದೆವು. ಆಕೆಯ ನೆನಪು ಬಂದಾಗ ನನಗೆ ದುಃಖವಾ ಗುತ್ತೆ. ಒಳ್ಳೆಯ ಹೆಂಗಸು. ಎಂದೂ ಕೋಣೆಗೆ ಹೆಚ್ಚು ಬಾಡಿಗೆ ಕೇಳುತ್ತಿರಲಿಲ್ಲ. ಯಾವಾಗಲೂ ಬೇರೆಬೇರೆ ಬಣ್ಣದ ಬಟ್ಟೆ ತುಂಡುಗಳನ್ನಿಟ್ಟುಕೊಂಡು, ಅಂಗಳದ ಉದ್ದ ಹೆಣಿಗೆ ಕಡ್ಡಿಗಳನ್ನು ಹಿಡಿದುಕೊಂಡು ಹಾಸಿಗೆಗೆ ಚೀಲಗಳನ್ನು ಹೆಣೆಯು ತ್ತಿದ್ದಳು. ನಾವಿಬ್ಬರೂ ಒಂದೇ ಮೋಂಬತ್ತಿ ಬೆಳಕಿನಲ್ಲಿ ಒಂದೇ ಮೇಜಿನ ಮೇಲೆ ಕೆಲಸ ಮಾಡುತ್ತಿದ್ದೆವು. ಅವಳ ಪುಟ್ಟ ಮೊಮ್ಮಗಳು ಮಾಷ – ನನಗಿನ್ನೂ ಸಣ್ಣ ಮಗುವಾಗಿ ಅವಳ ನೆನಪಿದೆ – ಈಗ ಹದಿಮೂರರ ಹುಡುಗಿಯಾಗಿರಬೇಕು. ಎಂಥ ತುಂಟಿ ಅವಳು. ಯಾವಾಗಲೂ ಒಂದಲ್ಲ ಒಂದು ಚೇಷ್ಟೆ ಮಾಡುತ್ತಿದ್ದಳು. ನಮ್ಮನ್ನು ಎಷ್ಟು ನಗುವಂತೆ ಮಾಡುತ್ತಿದ್ದಳು. ಹಾಗೆ ನಾವು ಒಟ್ಟಿಗೆ ವಾಸಿ ಸುತ್ತಿದ್ದೆವು, ನಾವು ಮೂವರೂ. ದೀರ್ಘವಾದ ಚಳಿಗಾಲದ ರಾತ್ರಿಗಳಲ್ಲಿ ನಾವು ಆ ದುಂಡು ಮೇಜಿನ ಸುತ್ತ ಕುಳಿತು ಟೀ ಕುಡಿಯುತ್ತಿದ್ದೆವು. ಆಮೇಲೆ ಕೆಲಸದಲ್ಲಿ ತೊಡಗುತ್ತಿದ್ದೆವು. ಮಗುವಿನ ಸಂತೋಷಕ್ಕಾಗಿ, ಅವಳು ಚೇಷ್ಟೆ ಮಾಡದಂತೆ ಮಾಡುವುದಕ್ಕಾಗಿ, ಮುದುಕಿ ಕಥೆ ಹೇಳುತ್ತಿದ್ದಳು. ಎಂಥ ಕಥೆಗಳು ! ಕೇಳು ತ್ತಿದ್ದರೆ ಮಗುವಷ್ಟೇ ಅಲ್ಲ ವಿವೇಕವುಳ್ಳ ವಯಸ್ಸಾದವನೂ ತನ್ನನ್ನು ತಾನೇ ಮರೆಯುತ್ತಿದ್ದ. ನಾನೂ ಅಷ್ಟೆ ಪೈಪ್ ಸೇದುತ್ತ ಕಥೆ ಕೇಳುತ್ತ ಕುಳಿತುಬಿಡುತ್ತಿದ್ದೆ. ಕೆಲಸವೆಲ್ಲ ಮರೆತೇ ಹೋಗುತ್ತಿತ್ತು. ಆ ಮಗು, ತುಂಟುತನದ ತುಂಡು ಅನಿಸಿ ಕೊಂಡಿದ್ದ ಆ ಮಗು, ಕೈಮೇಲೆ ಕೆಂಗುಲಾಬಿ ಮುಖವನ್ನಿರಿಸಿಕೊಂಡು, ಮುದ್ದಾದ ಬಾಯಿಯನ್ನು ಅರ್ಧ ತೆರೆದುಕೊಂಡು, ಕಥೆ ಕೇಳುತ್ತ ಕುಳಿತುಕೊಳ್ಳುತ್ತಿತ್ತು. ಕಥೆಯಲ್ಲಿ ಹೆದರಿಕೆ ಹುಟ್ಟಿಸುವ ಪ್ರಸಂಗ ಬಂದಾಗ ಅವಳು ಅಜ್ಜಿಗೆ ಆತುಕೊಂಡು ಕುಳಿತುಕೊಳ್ಳುತ್ತಿದ್ದಳು. ಆಗ ಅವಳನ್ನು ನೋಡೋಕೆ ಎಷ್ಟು ಚೆನ್ನಾಗಿರುತ್ತಿತ್ತು ! ಹಾಗೆ ನಾವು ಅಲ್ಲಿ ತುಂಬ ಹೊತ್ತು ಕುಳಿತಿರುತ್ತಿದ್ದೆವು – ಮೋಂಬತ್ತಿ ಆರಿಸು ವುದನ್ನೂ ಮರೆತು, ಹೊರಗಡೆಯ ಗಾಳಿಗೆ, ಹುಯಿಲೆಬ್ಬಿಸುತ್ತಿದ್ದ ಬಿರುಗಾಳಿ ಮಳೆಗೆ ಸಂಪೂರ್ಣವಾಗಿ ಕಿವುಡರಾಗಿದ್ದುಕೊಂಡು. ಹೌದು, ಅದೊಂದು ಒಳ್ಳೆಯ ಜೀವನವಾಗಿತ್ತು, ಅತ್ಯಂತ ಪ್ರೀತಿಸುವಂತಹುದಾಗಿತ್ತು. ಹಾಗೆ ನಾವು ಸುಮಾರು

ಇಪ್ಪತ್ತು ವರ್ಷ ಒಟ್ಟಿಗೇ ಇದ್ದೆವು. ಓಹ್, ನಾನು ಏನೇನೋ ಬರೆಯೋದಕ್ಕೆ ಹೊರಟುಬಿಟ್ಟೆ. ಈ ವಿಷಯ ಬಹುಶಃ ನಿಮಗೆ ಎಷ್ಟು ಮಾತ್ರವೂ ಆಸಕ್ತಿಯದಾಗಿ ಇಲ್ಲದಿರಬಹುದು. ನನಗೂ ಅವುಗಳನ್ನೆಲ್ಲ ಜ್ಞಾಪಿಸಿಕೊಳ್ಳುವುದು, ಅದರಲ್ಲೂ ಈಗ, ಕಷ್ಟಕರವೇ. ಆಗಲೇ ಕತ್ತಲಾಗುತ್ತಿದೆ. ಥೆರೇಸ ಒಂದಲ್ಲ ಒಂದು ಕೆಲಸದ ಗಡಿಬಿಡಿಯಲ್ಲಿದ್ದಾಳೆ; ನನ್ನ ತಲೆ ನೋಯುತ್ತಿದೆ, ಬೆನ್ನೂ ಸ್ವಲ್ಪ ನೋಯುತ್ತಿದೆ. ನನ್ನ ಆಲೋಚನೆಗಳೂ ನೋವಿನಿಂದಲೋ ಎಂಬಂತೆ ಅಡ್ಡಾದಿಡ್ಡಿಯಾಗಿವೆ. ನಾನಿಂದು ದುಃಖಿತನಾಗಿದ್ದೇನೆ, ನನ್ನ ಪ್ರಿಯೆ.

ಆದರೆ, ಏನು ನೀವು ಹೇಳುವುದು, ನನ್ನ ಪ್ರಿಯೆ? ನಿಮ್ಮನ್ನು ಭೇಟಿ ಮಾಡಲು ನಾನು ಹೇಗೆ ಬರಲು ಸಾಧ್ಯ? ಜನ ಏನೆಂದಾರು? ನಾನು ಈ ಅಂಗಳ ದಾಟಿದರೇ ಸಾಕು, ನಾನಾ ತರಹೆಯ ಪ್ರಶ್ನೆಗಳು, ಮಾತು, ಹರಟೆ ಹುಟ್ಟಿಕೊಳ್ಳುತ್ತವೆ. ಅವರು ಎಲ್ಲವನ್ನೂ ತಪ್ಪಾಗಿಯೇ ಅರ್ಥಮಾಡುತ್ತಾರೆ. ಇಲ್ಲ, ನನ್ನ ಪುಟ್ಟ ದೇವತೆ, ನಾನು ನಿಮ್ಮನ್ನು ನಾಳೆ ಚರ್ಚ್‌ನಲ್ಲಿ ವೆಸ್ಪೆರ್ಸ್ ಪೂಜೆಯಲ್ಲಿ ಕಾಣುವುದೇ ಒಳಿತು – ಅದು ಇಬ್ಬರಿಗೂ ಹೆಚ್ಚು ಉತ್ತಮ ಹಾಗೂ ಕಮ್ಮಿ ಹಾನಿಕರ. ಪತ್ರವನ್ನು ಈ ರೀತಿಯಲ್ಲಿ ಬರೆದಿರುವುದಕ್ಕಾಗಿ ಕ್ಷಮಿಸಿ, ಪ್ರಿಯೆ. ನಾನೇ ಇದನ್ನು ಮತ್ತೆ ಓದಿದಾಗ, ಯಾವು ಯಾವುದೋ ಅಸಂಬದ್ಧ ವಿಷಯಗಳನ್ನು ಬರೆದಿರುವುದಾಗಿ ಕಂಡುಬರುತ್ತೆ. ನಾನೊಬ್ಬ ವೃದ್ಧ, ಪ್ರಿಯೆ, ವಯಸ್ಸಾದ ತಿಳಿವಿಲ್ಲದ ವ್ಯಕ್ತಿ. ಚಿಕ್ಕವನಾಗಿದ್ದಾಗ ನಾನು ಕಲಿತಿದ್ದೇ ಸ್ವಲ್ಪ. ಈಗ ಮೊದಲಿನಿಂದಲೂ ಕಲಿಯಲು ಯತ್ನಿಸಿದರೂ ಮನಸ್ಸಿನಲ್ಲಿ ಏನೂ ಉಳಿಯುವುದೇ ಇಲ್ಲ. ವಿಷಯಗಳನ್ನು ವಿವರಿಸುವುದರಲ್ಲಿ ನಾನು ಸಿದ್ಧಹಸ್ತನೆಂದು ಹೇಳುವ ಸಾಹಸವನ್ನು ಮಾಡಲಾರೆ. ವಿಷಯಗಳನ್ನು ಹೆಚ್ಚು ಕಾಲ್ಪನಿಕವಾದ ರೀತಿಯಲ್ಲಿ ವಿವರಿಸಲು ಯತ್ನಿಸಿದಾಗಲೆಲ್ಲ ನಾನು ಕೇವಲ ಅರ್ಥರಹಿತ ಮಾತುಗಳ ರಾಶಿಯನ್ನಷ್ಟೆ ಗೀಚುವುದರಲ್ಲಿ ಯಶಸ್ವಿಯಾಗುತ್ತೇನೆ. ಇದು ನನಗೇ ಗೊತ್ತು, ಯಾರೂ ಹೇಳಬೇಕಾಗಿಯೂ ಇಲ್ಲ, ನಗಾಡಬೇಕಾಗಿಯೂ ಇಲ್ಲ. ನಾನಿಂದು ನಿಮ್ಮನ್ನು ಕಿಟಕಿಯ ಬಳಿ ಕಂಡೆ. ನೀವು ಕಿಟಕಿಯ ತೆರೆಯನ್ನು ಮುಚ್ಚುತ್ತಿದ್ದಿರಿ. ನಮಸ್ಕಾರ, ದೇವರು ನಿಮ್ಮನ್ನು ರಕ್ಷಿಸಲಿ. ನಮಸ್ಕಾರ, ವರ್ವಾರ ಅಲೆಕ್ಸೇಯೆವ್ನ.

ನಿಮ್ಮ ನಿಷ್ಠಾವಂತ ಮಿತ್ರ,
ಮಕಾರ್ ದೇವುಷ್ಕಿನ್.

ಮರೆತದ್ದು: ನಾನು ಯಾರ ಬಗೆಗೂ ವ್ಯಂಗ್ಯಾತ್ಮಕವಾಗಿ ಇನ್ನೆಷ್ಟು ಮಾತ್ರವೂ ಬರೆಯಲಾರೆ, ಪ್ರಿಯೆ. ಗೇಲಿ ಮಾಡುವುದಕ್ಕೆ ನನಗಾಗಲೇ ತುಂಬ ವಯಸ್ಸಾಗಿದೆ ವರ್ವಾರ ಅಲೆಕ್ಸೇಯೆವ್ನ! ಜನ ನನ್ನನ್ನು ನೋಡಿ ನಗುತ್ತಾರಷ್ಟೆ. ಪಕ್ಕದ

ವನು ಬೀಳಲೆಂದು ಗುಂಡಿ ತೋಡಿದವನು ತಾನೇ ಆ ಗುಂಡಿಯಲ್ಲಿ ಬೀಳುತ್ತಾನೆ ಅನ್ನುವ ಹಳೆಯ ರಷ್ಯನ್ ಗಾದೆಯನ್ನು ನೆನಪಿಗೆ ತಂದುಕೊಂಡು ನಗುತ್ತಾರಷ್ಟೆ.

ಏಪ್ರಿಲ್ 9

ಪ್ರಿಯ ಮಕಾರ್ ಅಲೆಕ್ಸೇಯೆವಿಚ್,

ನನ್ನ ಮಿತ್ರರೂ ಪೋಷಕರೂ ಆದ ನೀವೇ ಇಂತಹ ಭಾವಗಳಿಗೆ ಹಾಗೂ ಕೋಪೋದ್ರೇಕಗಳಿಗೆ ವಶರಾಗುವುದಕ್ಕೆ ನಿಮಗೆ ನಾಚಿಕೆಯಾಗುವುದಿಲ್ಲವೇ? ನಾನು ನಿಜಕ್ಕೂ ನಿಮ್ಮ ಮನ ನೋಯಿಸಿರುವುದು ಸಾಧ್ಯವೇ? ನಾನು ಬಹುವೇಳೆ ಅವಿಚಾರಿಯಾಗಿರುತ್ತೇನೆಂಬುದು ನನಗೆ ಗೊತ್ತು. ಆದರೆ ನನ್ನ ಮಾತುಗಳನ್ನು ನೀವು ನಾನು ಮಾಡಿದ ಕುತ್ಸಿತ ಪರಿಹಾಸ್ಯವೆಂದು ಭಾವಿಸುತ್ತೀರೆಂದು ನಾನೆಂದೂ ಕಲ್ಪಿಸಿಕೊಂಡಿರಲಿಲ್ಲ. ನಿಮ್ಮ ವಯಸ್ಸಿನ ಬಗೆಗಾಗಲೀ ನಿಮ್ಮ ಸ್ವಭಾವದ ಬಗೆಗಾಗಲೀ ನಾನೆಂದೂ ಪರಿಹಾಸ್ಯಮಾಡಲಾರೆನೆಂದು ನಾನು ನಿಮಗೆ ಖಾತರಿ ನೀಡುತ್ತೇನೆ. ನನ್ನ ಹುಡುಗಾಟಿಕೆ ಮತ್ತು ಅದಕ್ಕೂ ಹೆಚ್ಚಾಗಿ ನಾನು ವಿಪರೀತವಾಗಿ ಬೇಸರಗೊಂಡಿರುವುದೇ ಅದಕ್ಕೆ ಕಾರಣ. ಬೇಸರಗೊಂಡಿದ್ದಾಗ ಯಾರೇ ಆಗಲಿ ಏನು ಮಾಡುವುದಿಲ್ಲ, ಹೇಳಿ? ನಿಜ ಹೇಳುವುದಾದರೆ, ನೀವು ನಿಮ್ಮ ಪತ್ರದಲ್ಲಿ ತಮಾಷೆ ಮಾಡುತ್ತಿದ್ದಿರೆಂದೇ ನಾನು ಭಾವಿಸಿದೆ. ನೀವು ನನ್ನ ವಿಷಯದಲ್ಲಿ ಅಷ್ಟೊಂದು ಅಸಂತುಷ್ಟರಾಗಿದ್ದಿರೆಂಬುದನ್ನು ಕಂಡು ನಾನು ತುಂಬ ಕ್ಷೋಭೆಗೊಂಡೆ. ನನ್ನ ಮಿತ್ರರೇ ಹಾಗೂ ಪೋಷಕರೇ, ನೀವು ನನ್ನಲ್ಲಿ ಆತ್ಮೀಯ ಭಾವನೆಗಳಾಗಲೀ ಕೃತಜ್ಞತೆಯಾಗಲೀ ಇಲ್ಲ ಎಂದು ಸಂದೇಹಿಸಿದಲ್ಲಿ, ನೀವು ನನ್ನನ್ನು ತಪ್ಪು ತಿಳಿದಂತಾಗುತ್ತದೆ. ನನ್ನನ್ನು ನನ್ನ ಶತ್ರುಗಳಿಂದಲೂ ಅವರ ದ್ವೇಷ ಹಾಗೂ ಉಪದ್ರುವದಿಂದಲೂ ರಕ್ಷಿಸಲೋಸುಗ ನೀವು ಎಸಗಿರುವ ಎಲ್ಲ ಮಹತ್ಕಾರ್ಯಗಳನ್ನೂ ನಾನು ಬಹುವಾಗಿ ಮೆಚ್ಚಿಕೊಂಡಿದ್ದೇನೆ. ನಾನು ಯಾವಾಗಲೂ ನಿಮ್ಮ ಒಳಿತಿಗಾಗಿ ಪ್ರಾರ್ಥನೆ ಸಲ್ಲಿಸುತ್ತೇನೆ. ದೇವರು ನನ್ನ ಪ್ರಾರ್ಥನೆಯನ್ನು ಮನ್ನಿಸಿದಲ್ಲಿ, ನೀವು ಸುಖದಿಂದ ಇರಲಿರುವಿರಿ.

ನನಗಿಂದು ಮೈಗೆ ಏನೇನೂ ಚೆನ್ನಾಗಿಲ್ಲ. ಒಂದು ಘಳಿಗೆ ಮೈಯೆಲ್ಲ ಬಿಸಿಯಾಗಿದ್ದರೆ ಇನ್ನೊಂದು ಘಳಿಗೆ ಚಳಿಯಿಂದ ನಡುಗುವಂತಾಗುತ್ತೆ. ಫಿದೋರಳೂ ಚಿಂತೆಗೊಳಗಾಗಿದ್ದಾಳೆ. ನೀವು ನಮ್ಮಲ್ಲಿಗೆ ಬಂದು ನಮ್ಮನ್ನು ಕಾಣುವುದಕ್ಕೆ ನಾಚಿಕೆ ಪಟ್ಟುಕೊಳ್ಳಬೇಕಾದುದಿಲ್ಲ, ಮಕಾರ್ ಅಲೆಕ್ಸೇಯೆವಿಚ್‌ರವರೇ. ಜನ ತಮ್ಮ ವ್ಯವಹಾರಗಳನ್ನು ತಾವು ನೋಡಿಕೊಳ್ಳಲಿ. ಇತರರ ಉಸಾಬರಿ ಅವರಿ

ಗೇಕೆ? ನಾವು ಸಾಕಷ್ಟು ಚೆನ್ನಾಗಿಯೇ ಪರಿಚಿತರಾಗಿದ್ದೇವೆ, ಅಲ್ಲವೇ? ನಮಸ್ಕಾರ, ಮಕಾರ್ ಅಲೆಕ್ಸೇಯೆವಿಚ್ – ನಾನು ಹೇಳಬೇಕಾದುದನ್ನೆಲ್ಲ ಹೇಳಿದ್ದಾಗಿದೆ. ಇನ್ನು ಹೆಚ್ಚಿಗೆ ಬರೆಯಲು ನನಗೆ ಆರೋಗ್ಯವಿಲ್ಲ. ಮತ್ತೆ ಕೇಳಿಕೊಳ್ಳುತ್ತೇನೆ – ನನ್ನ ಮೇಲೆ ಕೋಪಮಾಡಿಕೊಳ್ಳಬೇಡಿ. ನನ್ನ ಸ್ಥಿರವಾದ ಗೌರವ ಮಮತೆಗಳ ಬಗೆಗೆ ಖಾತರಿಯಿಂದಿರಿ.

ನಿಮ್ಮ ಅತ್ಯಂತ ನಿಷ್ಠಾವಂತ ಹಾಗೂ ವಿಧೇಯ
ಸೇವಕಿ,

ವರ್ವಾರ ದೊಬ್ರಸ್ಯೋಲೊವ.

ಏಪ್ರಿಲ್ 12

ಪ್ರಿಯ ವರ್ವಾರ ಅಲೆಕ್ಸೇಯೆವ್ನ,

ಏನು ವಿಷಯ? ಏನು ತಪ್ಪಾಗಿದೆ? ನೀವು ಯಾವಾಗಲೂ ನನ್ನನ್ನು ಗಾಬರಿಗೊಳಿಸುತ್ತೀರ! ತುಂಬ ಎಚ್ಚರದಿಂದಿರಿ, ಚೆನ್ನಾಗಿ ಹೊದ್ದುಕೊಂಡಿರಿ, ಕೆಟ್ಟ ಹವೆಯಲ್ಲಿ ಹೊರ ಹೋಗದೆ ಮನೆಯಲ್ಲೇ ಇದ್ದುಕೊಂಡಿರಿ, ನೀವು ಮಾಡುವ ಎಲ್ಲ ಕಾರ್ಯಗಳಲ್ಲೂ ವಿವೇಕದಿಂದಿರಿ, ಎಂದು ನಾನು ನನ್ನ ಪ್ರತಿಯೊಂದು ಪತ್ರದಲ್ಲೂ ನಿಮ್ಮನ್ನು ಯಾಚಿಸುತ್ತೇನೆ, ಬೇಡುತ್ತೇನೆ. ಆದರೂ ನೀವು ಕೇಳುವುದೇ ಇಲ್ಲ, ನನ್ನ ಮುದ್ದು ದೇವತೆ. ನೀವು ಸಣ್ಣ ಮಗುವಿನಷ್ಟೇ ಹಠ ಸ್ವಭಾವದವರು. ನನಗೆ ಗೊತ್ತು ನೀವು ಹುಲ್ಲಿನ ಗರಿಕೆಯಷ್ಟು ದುರ್ಬಲರು, ಸ್ವಲ್ಪ ಗಾಳಿ ಬೀಸಿದರೆ ಸಾಕು ನಿಮಗೆ ನೆಗಡಿಯಾಗುತ್ತದೆ, ಎಂದು. ನೀವು ಜಾಗರೂಕತೆಯಿಂದ ಇರಬೇಕು, ನನ್ನ ಚಿನ್ನ. ನಿಮ್ಮ ಆರೋಗ್ಯವನ್ನು ನೋಡಿಕೊಳ್ಳಬೇಕು, ಅಪಾಯಕರವಾದುದನ್ನೇನೂ ಮಾಡಲು ಹೋಗಬೇಡಿ. ನಿಮ್ಮ ಮಿತ್ರರು ದುಃಖಪಡುವಂತೆ ಚಿಂತಿಸುವಂತೆ ಮಾಡದಿರಿ.

ನನ್ನ ನಿತ್ಯಜೀವನ ಹೇಗಿದೆ, ನನ್ನ ಪರಿಸರ ಹೇಗಿದೆ, ಎಂಬುದನ್ನೆಲ್ಲ ನೀವು ತಿಳಿಯಬಯಸುತ್ತೀರಿ, ಅಲ್ಲವೇ? ಅತ್ಯಂತ ಸಂತೋಷದಿಂದ ಎಲ್ಲವನ್ನೂ ಹೇಳುತ್ತೇನೆ, ನನ್ನ ಮುದ್ದು ಗೆಳತಿ. ಮೊದಲು ಪ್ರಾರಂಭದಿಂದ ಪ್ರಾರಂಭಿಸುತ್ತೇನೆ. ನಮ್ಮ ಮನೆ ಮುಂದಿರುವ ಮೆಟ್ಟಲು, ಅದರಲ್ಲೂ ಹೆಬ್ಬಾಗಿಲ ಮೆಟ್ಟಲುಗಳು, ಸಾಕಷ್ಟು ಚೆನ್ನಾಗಿವೆ, ಶುಭ್ರವಾಗಿವೆ, ಅಗಲವಾಗಿವೆ. ಕಟಕಟೆಯ ಕಂಬಗಳೆಲ್ಲ ಮಹಾಗನಿ ಮರ ಹಾಗೂ ಲೋಹದಿಂದ ಮಾಡಿದವು. ಆದರೆ ಹಿಂದುಗಡೆ ಇರುವ ಬಾಗಿಲಿನ ಮೆಟ್ಟಲುಗಳ ಬಗೆಗೆ ಎಷ್ಟು ಕಮ್ಮಿ ಹೇಳಿದರೆ ಅಷ್ಟೂ ಉತ್ತಮ. ಈ ಮೆಟ್ಟಲುಗಳು ವಕ್ರವಕ್ರವಾಗಿ ಸುತ್ತಿಕೊಂಡು ಹೋಗಿವೆ, ತೇವದಿಂದ ಕೂಡಿಕೊಳಕಾಗಿವೆ. ಮೆಟ್ಟಲುಗಳೆಲ್ಲ ಮುರಿದು ಬೀಳುವಂತಿವೆ. ಗೋಡೆಗಳಿಗೆ ಎಷ್ಟು

ಮಸಿ ಮೆತ್ತುಕೊಂಡಿದೆಯೆಂದರೆ ಮುಟ್ಟಿದಾಗ ಬೆರಳು ಅಂಟಿಕೊಳ್ಳುತ್ತೆ. ಪ್ರತಿಯೊಂದು ಅಂತಸ್ತಿನಲ್ಲೂ ಕೋಣೆ ಮುಂಭಾಗದಲ್ಲಿ ಇರುವ ಜಾಗಗಳಲ್ಲೆಲ್ಲ ಪೆಟ್ಟಿಗೆ, ಕುರ್ಚಿ, ಹಳೆಯ ಅಲಮಾರು ಮುಂತಾದವುಗಳನ್ನು ಎತ್ತರವಾಗಿ ಪೇರಿಸಲಾಗಿದೆ. ಎಲ್ಲಿ ನೋಡಿದರೂ ಹರಿದ ಬಟ್ಟೆಗಳನ್ನು ಹರವಿರುವುದು ಕಂಡುಬರುತ್ತೆ. ಹೆಚ್ಚಿನ ಕಿಟಕಿಗಳು ಮುರಿದಿವೆ. ಎಲ್ಲೆಲ್ಲೂ ಕಸ, ಕಚಡ, ಮೊಟ್ಟೆ ಚಿಪ್ಪುಗಳು, ಮೀನಿನ ಚೀಲಗಳು ಇವುಗಳಿಂದ ತುಂಬಿದ ಡಬ್ಬಗಳೇ. ವಾಸನೆಯಂತೂ ಸಹಿಸಲಾಗದು.... ಒಂದು ಮಾತಿನಲ್ಲಿ, ಈ ಭಾಗ ಎಷ್ಟು ಮಾತ್ರವೂ ಚೆಂದವಾಗಿಲ್ಲ.

ಇನ್ನು ಕೋಣೆಗಳ ವಿಷಯ ಹೇಳುವುದಾದರೆ, ಅವನ್ನು ಹೇಗೆ ವ್ಯವಸ್ಥೆಗೊಳಿಸಲಾಗಿದೆ ಎನ್ನುವುದನ್ನು ನಾನಾಗಲೇ ಹೇಳಿದ್ದೇನೆ. ಅವು ಸಾಕಷ್ಟು ಅನುಕೂಲವಾಗಿವೆ, ಆದರೆ ಒಂದು ಸ್ವಲ್ಪ – ಹೇಗೆ ಹೇಳೋಣ – ಉಸಿರು ಕಟ್ಟಿಸುವಂತಿವೆ. ಅಂದರೆ ಅವು ನಿಜಕ್ಕೂ ದುರ್ವಾಸನೆಯಿಂದ ಕೂಡಿವೆ ಅಂತೇನೂ ನಾನು ಹೇಳುವುದಿಲ್ಲ. ಅವುಗಳಿಂದ ಓಕರಿಕೆ ಬರಿಸುವಂಥ ವಾಸನೆ ಹೊರ ಹೊಮ್ಮುತ್ತೆ, ಅಷ್ಟೆ. ಮೊದಮೊದಲು ಇದು ಅಸಹನೀಯವಾಗಿರುತ್ತೆ, ಆದರೆ ಇಲ್ಲಿಗೆ ಬಂದು ಎರಡೇ ನಿಮಿಷ ಇದ್ದರೂ ಸಾಕು, ಅಭ್ಯಾಸವಾಗಿ ಹೋಗುತ್ತೆ. ಏಕೆಂದರೆ ಇಲ್ಲಿನ ಪ್ರತಿಯೊಂದು ವಸ್ತುವೂ – ನಮ್ಮ ಬಟ್ಟೆಬರೆ, ನಮ್ಮ ಕೈಗಳೂ ಸಹ – ಅಂಥ ವಾಸನೆಯನ್ನು ಹೊಮ್ಮಿಸುತ್ತವೆ. ಕನೇರಿ ಹಕ್ಕಿಗಳು ಇಲ್ಲಿ ಬೇಗ ಸಾಯುತ್ತವೆ. ಇಲ್ಲಿ ವಾಸಿಸುವ ನೌಕಾಧಿಕಾರಿ ಈಗಷ್ಟೆ ಐದನೆಯ ಹಕ್ಕಿಯನ್ನು ಕೊಂಡು ತಂದಿದ್ದಾನೆ. ಈ ಹಕ್ಕಿಗಳು ಇಲ್ಲಿನ ವಾತಾವರಣವನ್ನು ಸಹಿಸಲಾರವು. ಅಡಿಗೆಮನೆ ಬೆಳಕಿನಿಂದ ಕೂಡಿದೆ, ವಿಶಾಲವಾಗಿದೆ. ಬೆಳಿಗ್ಗೆ ಮೀನನ್ನೂ ಮಾಂಸವನ್ನೂ ಬೇಯಿಸುತ್ತಿದ್ದಾಗ ಇಲ್ಲಿನ ಗಾಳಿ ಸ್ವಲ್ಪ ಹುಳಿಹುಳಿ ವಾಸನೆಯಿಂದ ಕೂಡಿರುತ್ತೆ. ಅಡಿಗೆಮನೆ ಕಸಮುಸುರೆಯ ನೀರಿನಿಂದ ಕೂಡಿರುತ್ತೆ. ಆದರೆ ಸಂಜೆ ಅದೇ ಸ್ವರ್ಗದಂತಿರುತ್ತೆ. ಹಳೆಯ ಬಟ್ಟೆಗಳನ್ನೆಲ್ಲ ಒಗೆದು ಒಣಗಲು ಈ ಅಡಿಗೆ ಮನೆಯಲ್ಲೇ ಹರವಲಾಗಿದೆ. ಅದರಿಂದ ಬರುವ ವಾಸನೆ ಸ್ವಲ್ಪ ತೊಂದರೆ ಕೊಡುತ್ತೆ, ಏಕೆಂದರೆ ನನ್ನ ಕೋಣೆ ಅದಕ್ಕೆ ಲಗತ್ತಾಗಿದೆ. ಆದರೂ ಪರವಾಗಿಲ್ಲ, ತುಂಬ ಕಾಲ ವಾಸಿಸಿದರೆ ಅದಕ್ಕೂ ಹೊಂದಿಕೊಂಡು ಹೋಗಬಹುದು.

ಮುಂಜಾನೆಯಿಂದಲೇ ಮನೆಯಲ್ಲಿ ಚಟುವಟಿಕೆ ಪ್ರಾರಂಭವಾಗುತ್ತದೆ. ಎಲ್ಲರೂ ಏಳುವುದರಲ್ಲಿರುತ್ತಾರೆ, ಓಡಾಡುತ್ತಾರೆ, ದಡಬಡನೆ ಸದ್ದು ಮಾಡುತ್ತಿರುತ್ತಾರೆ. ಕೆಲವರು ಕೆಲಸಕ್ಕೆ ಹೋಗಬೇಕಾಗಿರುತ್ತೆ. ಕೆಲಸಕ್ಕೆ ಹೋಗದವರೂ ಏಳುತ್ತಾರೆ. ಮೊದಲು ನಾವೆಲ್ಲ ಟೀ ಕುಡಿಯುತ್ತೇವೆ. ಬಹುಮಟ್ಟಿಗಿನ ಸಮೋವಾರ್‌ಗಳು (ಚಹಾಗೆ ನೀರು ಕಾಯಿಸುವ ಪಾತ್ರೆ) ಮನೆಯ ಯಜಮಾನಿಗೆ ಸೇರಿದವು. ಅವು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದಿರುವುದರಿಂದ ನಮ್ಮಲ್ಲಿ ಒಬ್ಬೊಬ್ಬರೂ ತಮ್ಮ

ಸರದಿಗಾಗಿ ಕಾಯಬೇಕು. ಯಾರಾದರೂ ಸರದಿ ಬಿಟ್ಟು ತನ್ನ ಕೆಟಲಿನೊಂದಿಗೆ ಮುಂದೆ ಹೋದರೆ ಅಲ್ಲಿ ನಿಂತಿರುವವರೆಲ್ಲ ಅವನ ಮೇಲೆ ಬೀಳುತ್ತಾರೆ. ನನಗೂ ಒಮ್ಮೆ ಹಾಗಾಯಿತು. ಮೊದಲ ಸಾರಿ. ಆದರೆ ಅದೇನೂ ಬರೆಯುವಂತಹ ವಿಷಯ ವಲ್ಲ. ಆ ಸಂದರ್ಭದಲ್ಲೇ ನಾನು ಇಲ್ಲಿ ವಾಸಿಸುತ್ತಿರುವವರೆಲ್ಲರ ಪರಿಚಯ ಪಡೆದದ್ದು. ನೌಕಾಧಿಕಾರಿಯೇ ನನಗೆ ಪರಿಚಯವಾದ ಮೊದಲ ವ್ಯಕ್ತಿ. ಈತ ಇನ್ನೊಬ್ಬರೊಂದಿಗೆ ತನ್ನ ಸುಖದುಃಖಗಳನ್ನೆಲ್ಲ ತೋಡಿಕೊಳ್ಳುವಂತಹ ಸ್ವಭಾ ವದ ವ್ಯಕ್ತಿ. ತನ್ನ ತಂದೆ, ತಾಯಿ, ತಂಗಿ (ಈಕೆಯನ್ನು ತೂಲ ಪಟ್ಟಣದಲ್ಲಿ ಒಬ್ಬ ಅಧಿಕಾರಿಗೆ ಮದುವೆ ಮಾಡಿಕೊಡಲಾಗಿದೆ) ಇವರೆಲ್ಲರ ಬಗೆಗೂ ಕ್ರಾನ್‌ಷ್ಟಾದ್ತ್ ಪಟ್ಟಣದ ಬಗೆಗೂ ನನಗೆ ಎಲ್ಲ ವಿಷಯ ತಿಳಿಸಿದ. ಅವನು ನನಗೆ ರಕ್ಷಣೆ ನೀಡಿದ, ಅಲ್ಲೇ ಆಗಲೇ ಟೀ ಸೇವಿಸಲು ಆಹ್ವಾನಿಸಿದ. ನಾನು ಅವನ ಕೋಣೆಗೆ ಹೋದೆ. ಅಲ್ಲಿ ಇಸ್ಪೀಟು ಆಟ ಕೊನೆ ಇಲ್ಲದಂತೆ ನಡೆಯುತ್ತಿರುತ್ತೆ. ಟೀ ಕೂಡಿದ ಮೇಲೆ ಅವರು ನನ್ನನ್ನೂ ಆಟದಲ್ಲಿ ಸೇರಿಕೊಳ್ಳುವಂತೆ ಒತ್ತಾಯಿಸಿದರು. ನಿಜಕ್ಕೂ ಹಾಗೆ ಹೇಳಿದರೋ ಅಥವಾ ಹಾಸ್ಯಕ್ಕಾಗಿ ಹಾಗೆ ಹೇಳಿದರೋ, ನನಗೆ ತಿಳಿಯದು. ಅವರು ಇಡೀ ರಾತ್ರಿ ಆಡುತ್ತಿದ್ದರು. ನಾನು ಕೋಣೆಯನ್ನು ಪ್ರವೇಶಿಸಿದಾಗಲೂ ಆಡುತ್ತಿದ್ದರು. ಅವರು ತಮ್ಮ ಆಟದಲ್ಲೇ ಮಗ್ನರಾಗಿದ್ದರು. ಅಲ್ಲಿ ಹೊಗೆ ಎಷ್ಟು ದಟ್ಟವಾಗಿ ಕವಿದಿತ್ತೆಂದರೆ ನನ್ನ ಕಣ್ಣು ಉರಿಯುವಂತಾಯಿತು. ನಾನು ಜೂಜಾಟ ಆಡಲು ನಿರಾಕರಿಸಿದಾಗ, ವೇದಾಂತ ಹೇಳುತ್ತಿದ್ದೇನೆಂದು ನನಗೆ ಹೇಳಲಾಯಿತು. ಅದಾದ ಮೇಲೆ ಯಾರೂ ನನ್ನ ಜೊತೆ ಮಾತನಾಡಲೇ ಇಲ್ಲ. ನಿಜ ಹೇಳುವು ದಾದರೆ, ಅದರಿಂದ ನನಗೂ ಸಂತೋಷವೇ. ನಾನು ಮತ್ತೆ ಅಲ್ಲಿಗೆ ಎಂದೂ ಹೋಗುವುದಿಲ್ಲ. ಜೂಜುಕೋರರು, ಹೌದು, ಅವರೆಲ್ಲ ಶುದ್ಧ ಜೂಜುಕೋರರು ! ಈ ಮನೆಯಲ್ಲಿರುವ ಸಾಹಿತ್ಯಾಸಕ್ತ ಕಾರಕೂನನೂ ಆಗಾಗ್ಗೆ ತನ್ನ ಕೋಣೆಯಲ್ಲಿ ಕೂಟಗಳನ್ನು ಏರ್ಪಡಿಸುತ್ತಾನೆ. ಆದರೆ ಇಲ್ಲಿ ಎಲ್ಲ ಸೌಮ್ಯ, ಮುಗ್ಧ, ಗೌರ ವಾರ್ಹವಾದ, ನಯನಾಜೂಕಿನ, ಉನ್ನತ ಮಟ್ಟದ ಕಾರ್ಯಕ್ರಮ.

ಈ ವಿವರಣೆಗೆ ನಾನು ಇನ್ನೂ ಒಂದು ವಿಷಯ ಸೇರಿಸಬೇಕು, ವಾರೆಂಕ – ನಮ್ಮ ಮನೆಯ ಯಜಮಾನಿ ಒಬ್ಬ ಮತ್ಸರದ ಮುದುಕಿ, ನಿಜವಾದ ಪಿಶಾಚಿ. ನೀವೇ ನೋಡಿದ್ದೀರಲ್ಲ ಥೆರೇಸಳನ್ನು. ಎಷ್ಟು ತೆಳ್ಳಗಾಗಿ ಹೋಗಿದ್ದಾಳೆ, ರೆಕ್ಕೆ ಪುಕ್ಕ ಕಿತ್ತ ಕೋಳಿಮರಿಯಂತೆ. ಇಲ್ಲಿ ಇಬ್ಬರೇ ಸೇವಕರು ಇರುವುದು – ಥೆರೇಸ ಹಾಗೂ ಫಾಲ್ಡೋನಿ. ಈ ಫಾಲ್ಡೋನಿಗೆ ಬಹುಶಃ ಬೇರೆ ಏನೋ ಹೆಸರಿರಬೇಕು. ಆದರೆ ಫಾಲ್ಡೋನಿ ಎಂದು ಕೂಗಿದರೆ ಓಗೊಡುತ್ತಾನೆ. ಆದ್ದರಿಂದಲೇ ಎಲ್ಲರೂ ಅವನನ್ನು ಫಾಲ್ಡೋನಿ ಎಂದು ಕರೆಯುತ್ತಾರೆ. ಇವನೊಬ್ಬ ಕೆಂಚು ಕೂದಲಿನ, ಮೆಳ್ಳೆಗಣ್ಣಿನ, ದಪ್ಪನಾದ ಮೊಂಡುಮೂಗಿನ ಹೆಡ್ಡ ಮನುಷ್ಯ. ಯಾವಾಗಲೂ

ಥೆರೇಸಳೊಂದಿಗೆ ಜಗಳವಾಡುತ್ತಿರುತ್ತಾನೆ. ಒಮ್ಮೊಮ್ಮೆ ಅದು ಹೊಡೆದಾಟದ ವರೆಗೂ ಹೋಗುತ್ತೆ. ಒಟ್ಟಿನಲ್ಲಿ, ಜೀವನ ಇಲ್ಲಿ ಅಷ್ಟು ಸಂತಸಕರವಲ್ಲವೆಂದೇ ನಾನು ಹೇಳಬೇಕು. ಇಲ್ಲಿ ಮಲಗುವ ವೇಳೆ ಎಂಬುದೇ ಇಲ್ಲ. ಎಲ್ಲವೂ ನಿಶ್ಶಬ್ದವಾದಾಗ ನಿದ್ರೆ ಹೋಗಬಹುದಷ್ಟೆ. ಒಂದಲ್ಲ ಒಂದು ಕೋಣೆಯಲ್ಲಿ ಖಂಡಿತ ಇಸ್ಪೀಟು ಆಟ ನಡೆಯುತ್ತಲೇ ಇರುತ್ತೆ. ಕೆಲವು ವೇಳೆ ಇನ್ನೂ ಕೆಲವು ಸಂಗತಿಗಳು ಜರುಗುತ್ತವೆ. ಅವುಗಳ ಬಗೆಗೆ ಹೇಳಲು ನನಗೆ ನಾಚಿಕೆಯಾಗುತ್ತೆ. ನಾನೇನೋ ಇವಕ್ಕೆಲ್ಲ ಒಗ್ಗಿಕೊಂಡು ಹೋಗಿದ್ದೇನೆ. ಆದರೆ ಸಂಸಾರಸ್ಥ ಜನರು ಇಂಥ ಹುಚ್ಚರ ಸಂತೆಯಲ್ಲಿ ಹೇಗೆ ವಾಸಮಾಡಿಕೊಂಡಿರಬಲ್ಲರು ಎಂದು ನಾನು ಆಶ್ಚರ್ಯಪಡದೆ ಇರಲಾರೆ. ಹಜಾರದ ಅತ್ತ ಕಡೆಯಲ್ಲಿ ಒಂದು ಕೋಣೆಯಲ್ಲಿ ಒಂದು ಬಡ ಕುಟುಂಬ ವಾಸಿಸುತ್ತಿದೆ. ಅದೊಂದು ಮೂಲೆಯಲ್ಲಿರುವ ಕೋಣೆ, ಉಳಿದವುಗಳಿಂದ ಸ್ವಲ್ಪ ಪ್ರತ್ಯೇಕವಾಗಿದೆ. ಅವರೆಲ್ಲ ಸದ್ದುಗದ್ದಲವಿಲ್ಲದ ಜನ. ಅವರ ಅಡ್ಡಗೋಡೆಗಳ ಹಿಂದೆ ಯಾವುದೇ ಸದ್ದು ಕೇಳಿಬರುವುದಿಲ್ಲ, ಕೋಲಾಹಲ ಕಂಡುಬರುವುದಿಲ್ಲ. ಆ ಕುಟುಂಬದ ಯಜಮಾನ ಒಬ್ಬ ನಿರುದ್ಯೋಗಿ ಕಾರಕೂನ. ಗೊರ್ಷ್ಕೋವ್ ಅಂತ ಅವನ ಹೆಸರು. ಏಳು ವರ್ಷಗಳ ಹಿಂದೆ ಅವನನ್ನು ಯಾವುದೋ ಕಾರಣಕ್ಕೆ ಕೆಲಸದಿಂದ ತೆಗೆದುಹಾಕಿದರಂತೆ. ಇವನೊಬ್ಬ ಪುಟ್ಟ ಬೂದು ಮೈ ಬಣ್ಣದ ಮನುಷ್ಯ. ಇವನ ಬಟ್ಟೆಗಳು ಎಷ್ಟು ಚಿಂದಿಚಿಂದಿಯಾಗಿ ಹರಕುಮುರುಕಾಗಿ ಇವೆಯೆಂದರೆ ಇವನನ್ನು ನೋಡಿದರೇ ಮನಸ್ಸಿಗೆ ನೋವುಂಟಾಗುತ್ತೆ. ಅವನ ಕೋಟು ನನ್ನ ಕೋಟಿಗಿಂತ ಕೀಳು. ಅವನೊಬ್ಬ ದುಃಖಭರಿತನಾದ ಸಣ್ಣ ಕೋಲು ಮನುಷ್ಯ ! (ನಾವು ಆಗಾಗ್ಗೆ ಮೊಗಸಾಲೆಯಲ್ಲಿ ಸಂಧಿಸುತ್ತೇವೆ.) ಯಾವುದೋ ಕಾಯಿಲೆಯೋ ಅಥವಾ ದೇವರೇ ಬಲ್ಲ ಯಾವ ಕಾರಣದಿಂದಾಗಿಯೋ ಅವನ ಮೊಣಕಾಲು ಸದಾ ಅದಿರುತ್ತಿರುತ್ತೆ, ಅವನ ತಲೆ ಕೈಗಳೂ ನಡುಗುತ್ತಿರುತ್ತವೆ ! ಯಾವಾಗಲೂ ಅಂಜುತ್ತಿರುವಂತೆ, ಗಾಬರಿಗೊಂಡವನಂತೆ ಕಾಣುತ್ತಾನೆ, ಎಲ್ಲರಿಂದಲೂ ದೂರವಿರುತ್ತಾನೆ. ನಾನೂ ಕೆಲವೊಮ್ಮೆ ನಾಚುತ್ತೇನೆ, ಆದರೆ ಇವನು ಇನ್ನೂ ಕೀಳು. ಇವನಿಗೆ ಹೆಂಡತಿ ಮೂರು ಮಕ್ಕಳಿದ್ದಾರೆ. ಹಿರಿಯ ಮಗ ತಂದೆಯಂತೆಯೇ ಕೃಶಾಂಗ. ಹೆಂಡತಿ ಒಮ್ಮೆ ಚೆಲುವೆಯಾಗಿದ್ದಿರಬೇಕು – ಈಗಲೂ ಆ ಕುರುಹುಗಳನ್ನು ಅವಳಲ್ಲಿ ಕಾಣಬಹುದು. ಆದರೆ ಅವಳೂ ಚಿಂದಿ ಬಟ್ಟೆಯನ್ನೇ ಉಡುತ್ತಾಳೆ, ಬಡಪಾಯಿ ಹೆಂಗಸು. ಅವರು ತುಂಬ ಕಾಲದಿಂದ ಬಾಡಿಗೆಯನ್ನೇ ಕೊಟ್ಟಿಲ್ಲವೆಂದು ಕೇಳಿದ್ದೇನೆ. ಏನೇ ಆಗಲಿ, ಮನೆಯ ಯಜಮಾನಿಯಂತೂ ಅವರ ಬಗೆಗೆ ಏನೇನೂ ಕರುಣೆ ತೋರುತ್ತಿಲ್ಲ. ಗೊರ್ಷ್ಕೋವ್‌ನು ಯಾವುದೋ ತೊಂದರೆಯಲ್ಲಿ ಸಿಕ್ಕಿಕೊಂಡ, ಆದ್ದರಿಂದಲೇ ಕೆಲಸ ಕಳೆದುಕೊಂಡನೆಂದೂ ನಾನು ಕೇಳಿದ್ದೇನೆ. ಅವನ ಮೇಲೆ ಏನೋ ಆರೋಪ ಹೊರಿಸಲಾಯಿತು. ಅವನನ್ನು

ವಿಚಾರಣೆಗೆ ಗುರಿಪಡಿಸಲಾಯಿತೆಂದು ಕಾಣುತ್ತೆ ಅಥವಾ ಪರೀಕ್ಷೆಗೆ ಒಳಪಡಿಸಲಾಗಿದೆಯೇನೋ, ನನಗೆ ಖಚಿತವಾಗಿ ಗೊತ್ತಿಲ್ಲ. ಆದರೆ ಅವರು ಬಡವರು. ದೇವರೇ, ಎಷ್ಟು ಬಡವರು! ಅವರ ಕೋಣೆಯಿಂದ ಒಂದು ಶಬ್ದವೂ ಹೊರ ಬರುವುದಿಲ್ಲ, ಅಲ್ಲಿ ಯಾವೊಂದು ಜೀವಂತ ಪ್ರಾಣಿಯೂ ವಾಸಿಸುತ್ತಿಲ್ಲವೇನೋ ಎಂಬಂತೆ. ಮಕ್ಕಳ ಸದ್ದುಗದ್ದಲವೂ ಕೇಳಿ ಬರುವುದಿಲ್ಲ. ಅವರು ಓಡಾಡುತ್ತಿರುವುದನ್ನು, ಆಟವಾಡುತ್ತಿರುವುದನ್ನು ನಾನು ಎಂದೂ ಕಂಡಿಲ್ಲ. ಅದು ಕೆಟ್ಟ ಸೂಚನೆಯೇ! ಒಂದು ಸಂಜೆ ನಾನು ಅವರ ಕೋಣೆಯ ಮುಂದೆಯೇ ಹಾದು ಹೋಗುತ್ತಿದ್ದೆ. ಆಗ ಮನೆಯಲ್ಲೆಲ್ಲ ಅಸಾಧಾರಣ ನಿಶ್ಶಬ್ದ ಇದ್ದಿತು. ನನಗೆ ಕೋಣೆಯೊಳಗಿನಿಂದ ಗದ್ಗದ ಕೇಳಿಬಂತು. ಆಮೇಲೆ ಪಿಸುಮಾತು. ಆಮೇಲೆ ಮತ್ತೆ ಗದ್ಗದ. ಯಾರೋ ಎಷ್ಟು ಕರುಣಾಜನಕವಾಗಿ ಅಳುತ್ತಿದ್ದರೆಂದರೆ, ನನ್ನ ಹೃದಯ ಹಿಂಡಿದಂತಾಯಿತು. ಇಡೀ ರಾತ್ರಿ ನಾನು ಅವರ ಬಗೆಗೇ ಯೋಚಿಸುತ್ತಿದ್ದೆ. ನಿದ್ದೆಯೇ ಬರಲಿಲ್ಲ.

ಒಳ್ಳೆಯದು, ನಮಸ್ಕಾರ, ನನ್ನ ಅಮೂಲ್ಯ ಗೆಳತಿ. ನಾನು ಎಲ್ಲವನ್ನೂ ನನ್ನ ಕೈಲಾದಷ್ಟೂ ಚೆನ್ನಾಗಿ ವಿವರಿಸಿದ್ದೇನೆ. ಇಡೀ ದಿನ ನಾನು ನಿಮ್ಮ ಬಗೆಗೇ, ನಿಮ್ಮೊಬ್ಬರ ಬಗೆಗೇ, ಯೋಚಿಸುತ್ತಿದ್ದೇನೆ. ನಿಮ್ಮ ವಿಷಯದಲ್ಲಿ ನನಗೆ ತುಂಬ ಚಿಂತೆಯಾಗಿದೆ. ನಿಮಗೆ ಒಂದು ಬೆಚ್ಚಗಿನ ಕೋಟು ಅವಶ್ಯ ಎಂದು ನಾನು ಬಲ್ಲೆ. ಈ ಪೀಟರ್ಸ್‌ಬರ್ಗ್ ವಸಂತ ಕಾಲದಲ್ಲಿ, ಗಾಳಿ, ಮಳೆ, ಮಂಜು ಜಾಸ್ತಿ. ಈ ಗಾಳಿ ಮಳೆ ಮಂಜುಗಳು ನನಗಂತೂ ಸಾವಿನ ಸಮಾನವೇ, ನನಗೆ ಗೊತ್ತು, ವಾರೆಂಕ. ಈ ಅಸಹ್ಯ ಶೀತ ಹವೆಯಿಂದ ದೇವರೇ ನಮ್ಮನ್ನು ಕಾಪಾಡಬೇಕು! ನಾನು ಬರೆಯುತ್ತಿರುವ ರೀತಿಯಿಂದ ಕೋಪಗೊಳ್ಳಬೇಡಿ, ಹೃದಯೇಶ್ವರಿ. ನನಗೆ ಶೈಲಿ ಇಲ್ಲ, ಯಾವ ಶೈಲಿಯೂ ಇಲ್ಲ. ಇದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. ನನ್ನ ಮನಸ್ಸಿಗೆ ಬಂದದ್ದನ್ನು ಬರೆಯುತ್ತಿದ್ದೇನೆ, ನಿಮ್ಮನ್ನು ಸ್ವಲ್ಪ ಉಲ್ಲಾಸಗೊಳಿಸುವ ಆಸೆಯಿಂದ. ನನಗೆ ಒಳ್ಳೆಯ ಶಿಕ್ಷಣ ದೊರೆತಿದ್ದಿದ್ದರೆ, ಅದು ಬೇರೆಯೇ ಆಗುತ್ತಿತ್ತು. ಆದರೆ ನನಗೆ ಎಂತಹ ಶಿಕ್ಷಣ ಲಭಿಸಿತು? ಒಂದು ಚಿಕ್ಕಾಸಿಗೂ ಹೆಚ್ಚಿನ ಬೆಲೆ ಇಲ್ಲದ್ದು!

ನಿಮ್ಮ ಚಿರ ಹಾಗೂ ನಿಷ್ಠಾವಂತ ಮಿತ್ರ,
ಮಕಾರ್ ದೇವುಷ್ಕಿನ್.

ಏಪ್ರಿಲ್ 25

ಪ್ರಿಯ ಮಕಾರ್ ಅಲೆಕ್ಸೇಯೆವಿಚ್,

ಇಂದು ನಾನು ನನ್ನ ಸೋದರ ಸಂಬಂಧಿ ಸಾಷಳನ್ನು ಸಂಧಿಸಿದ್ದೆ! ಎಷ್ಟು ಘೋರವಾಗಿತ್ತು ಅವಳ ರೂಪ! ಅವಳು ವಿನಾಶದ ಹಾದಿ ಹಿಡಿದಿದ್ದಾಳೆ!

ಆನ್ನ ಫ್ಯೋದೊರೊವ್ನ ನನ್ನ ಬಗೆಗೆ ವಿಚಾರಿಸುತ್ತಿದ್ದಾಳೆಂದೂ ನನಗೆ ವದಂತಿ ಬಂದಿದೆ. ಅವಳು ನನ್ನನ್ನು ಎಂದಿಗೂ ನನ್ನಷ್ಟಕ್ಕೆ ಇರುವುದಕ್ಕೆ ಬಿಡುವುದೇ ಇಲ್ಲವೇ? ಅವಳು ನನ್ನನ್ನು ಕ್ಷಮಿಸ ಬಯಸುತ್ತಾಳಂತೆ. ಹಿಂದೆ ಆದದ್ದನ್ನು ಮರೆತು ಬೇಗನೆಯೇ ನನ್ನನ್ನು ಭೇಟಿಯಾಗಲು ಉದ್ದೇಶಿಸಿದ್ದಾಳಂತೆ. ನೀವು ನನಗೆ ಯಾವ ರೀತಿಯಲ್ಲೂ ಬಂಧುವಲ್ಲ, ತಾನೇ ನನಗೆ ಹೆಚ್ಚು ಹತ್ತಿರದ ಬಂಧು, ನಮ್ಮ ಕುಟುಂಬ ವ್ಯವಹಾರಗಳಲ್ಲಿ ಮಧ್ಯೆ ಬರಲು ನಿಮಗೆ ಹಕ್ಕಿಲ್ಲ, ನಿಮ್ಮ ಔದಾರ್ಯ ಬೆಂಬಲಗಳ ಮೇಲೆ ನಾನು ಜೀವಿಸಿಕೊಂಡಿರುವುದು ನಾಚಿಕೆಗೇಡು, ಎಂದೆಲ್ಲ ಅವಳು ಸಾಧಿಸುತ್ತಿದ್ದಾಳೆ. ತಾನು ಮಾಡಿದ ಉಪಕಾರವನ್ನು ನಾನು ಮರೆತುಬಿಟ್ಟಿದ್ದೇನೆ, ತಾನೇ ನನ್ನ ತಾಯಿಯನ್ನೂ ನನ್ನನ್ನೂ ಹಸಿವಿನಿಂದ ಉಳಿಸಿದುದು, ಎರಡೂವರೆ ವರ್ಷ ನಮಗೆ ಊಟ ಹಾಕಿ ತಾನು ಭಾರಿ ಖರ್ಚಿಗೆ ಒಳಗಾದುದು, ಎಂದೆಲ್ಲ ಅವಳು ಹೇಳುತ್ತಾಳೆ. ಎಲ್ಲಕ್ಕಿಂತ ಮಿಗಿಲಾಗಿ, ತಾನು ನಮ್ಮ ಸಾಲಗಳನ್ನೆಲ್ಲ ಬಿಟ್ಟು ಬಿಟ್ಟಳೆಂದು ಹೇಳುತ್ತಿದ್ದಾಳೆ. ಅವಳು ನನ್ನ ಬಡಪಾಯಿ ತಾಯಿಯನ್ನೂ ತನ್ನ ದೂಷಣೆಯಿಂದ ಹೊರಗಿರಿಸಿಲ್ಲ. ಅವರು ನನಗೆ ಏನು ಮಾಡಿದರೆಂಬುದನ್ನು ಅಮ್ಮ ತಿಳಿಯಲು ಸಾಧ್ಯವಿದ್ದಿದ್ದರೆ! ಆದರೆ ದೇವರು ಎಲ್ಲವನ್ನೂ ನೋಡುತ್ತಾನೆ! ನನ್ನ ಸುಖ ನಷ್ಟವಾದುದಕ್ಕೆ ನಾನೇ ದೂಷಣಾರ್ಹಳೆಂದು ಆನ್ನ ಫ್ಯೋದೊರೊವ್ನ ಹೇಳುತ್ತಾಳೆ. ಅವಳು ನನಗೆ ಸುಖದ ಮಾರ್ಗ ತೋರಿಸಿಕೊಟ್ಟಳಂತೆ. ಆದರೆ ನಾನು ನನ್ನ ಮಾನವನ್ನು ಉಳಿಸಿಕೊಳ್ಳಲು ಅಸಮರ್ಥಳಾದುದು ಅಥವಾ ಬಹುಶಃ ಉಳಿಸಿಕೊಳ್ಳಲು ಇಚ್ಛಿಸದೇ ಇದ್ದುದು, ಅವಳ ತಪ್ಪಲ್ಲ, ಅನ್ನುತ್ತಾಳೆ ಅವಳು. ಹಾಗಾದರೆ ಯಾರ ತಪ್ಪು ಅದು, ದೇವರೇ! ಮಿ. ಬೀಕವ್ ಹೇಳುವುದು ಸರಿ, ... ಕಳೆದು ಕೊಂಡಂಥ ಹೆಂಗಸನ್ನು ಯಾವ ಗಂಡಸು ತಾನೆ ಮದುವೆಯಾಗುವನೆಂದು ನಿರೀಕ್ಷಿಸುವುದು ಸಾಧ್ಯ, ಎಂದವಳು ಹೇಳುತ್ತಾಳೆ. ಇದನ್ನೆಲ್ಲ ಬರೆಯುವುದರಿಂದ ಏನು ಪ್ರಯೋಜನ? ಆ ಸುಳ್ಳು ಮಾತನ್ನು ಕೇಳಿ ನನಗೆ ಅಪಾರ ನೋವಾಯಿತು, ಮಕಾರ್ ಅಲೆಕ್ಸೇಯೆವಿಚ್! ನಾನೀಗ ಭಯಂಕರ ಸ್ಥಿತಿಯಲ್ಲಿದ್ದೇನೆ. ಇಲ್ಲಿ ಕುಳಿತು ನಾನು ನಡುಗುತ್ತಿದ್ದೇನೆ, ಗದ್ಗದಿಸಿ ರೋದಿಸುತ್ತಿದ್ದೇನೆ. ಈ ಪತ್ರವನ್ನು ಬರೆಯಲು ನನಗೆ ಎರಡು ಗಂಟೆಗಳೇ ಹಿಡಿದವು. ನನಗೆ ಎಷ್ಟು ತಪ್ಪು ಮಾಡಿದಳೆಂಬುದನ್ನು ಅವಳು ಕೊನೆಯ ಪಕ್ಷ ಒಪ್ಪಿಕೊಳ್ಳುವಳೆಂದು ನಾನು ಖಚಿತವಾಗಿ ನಂಬಿದ್ದೆ. ಆದರೆ ನೋಡಿ ಅವಳನ್ನು! ಮತ್ತೆ ನೀವು ನನ್ನ ಬಗೆಗೆ ಚಿಂತಿಸಬೇಡಿ, ನನ್ನ ಏಕೈಕ ಹಿತೈಷಿ! ಫಿದೋರ ಯಾವಾಗಲೂ ಉತ್ಪ್ರೇಕ್ಷಿಸಿ ಹೇಳುತ್ತಾಳೆ. ನಾನೇನೂ ಖಾಯಿಲೆ ಬಿದ್ದಿಲ್ಲ. ನಿನ್ನೆ ನಾನು ವೋಲ್ಕೊವೊದಲ್ಲಿ ಅಮ್ಮನ ಶ್ರಾದ್ಧ ಸಂಸ್ಕಾರಕ್ಕೆ ಹೋದಾಗ ಸ್ವಲ್ಪ ಚಳಿಗೆ ಒಳಗಾದೆನಷ್ಟೆ. ನೀವು ನನ್ನೊಂದಿಗೇಕೆ ಬರಲಿಲ್ಲ? ನಾನು ನಿಮ್ಮನ್ನು ಬೇಡಿಕೊಂಡಿ

ದ್ದೇನಲ್ಲ. ಆಹ್, ನನ್ನ ದುರ್ದೈವಿ ಪ್ರಿಯ ಅಮ್ಮ – ನೀನು ನಿನ್ನ ಸಮಾಧಿಯಿಂದ ಎದ್ದು ಬರಲು ಸಾಧ್ಯವಿದ್ದಲ್ಲಿ! ಈ ಜನರು ನನಗೆ ಎಂಥ ಅಪಚಾರ ಎಸಗಿದ್ದಾರೆಂಬುದನ್ನು ನೀನು ತಿಳಿಯಬಲ್ಲೆಯಾದರೆ, ಕಾಣಬಲ್ಲೆಯಾದರೆ!

ವ.ದೊ.

ಮೇ, 20

ವಾರೆಂಕ, ನನ್ನ ಮುದ್ದುಮಣಿ,

ನಾನು ನಿಮಗೆ ಸ್ವಲ್ಪ ದ್ರಾಕ್ಷಿ ಕಳುಹಿಸುತ್ತಿದ್ದೇನೆ, ಪ್ರಿಯೆ. ಏಕೆಂದರೆ, ಖಾಯಿಲೆಯಿಂದ ಚೇತರಿಸಿಕೊಳ್ಳುತ್ತಿರುವವರಿಗೆ ದ್ರಾಕ್ಷಿ ಒಳ್ಳೆಯದು. ವೈದ್ಯರೂ ಇದನ್ನು ಬಾಯಾರಿಕೆ ಹೋಗಲಾಡಿಸಿಕೊಳ್ಳಲು ಸಲಹೆ ಮಾಡುತ್ತಾರೆ. ಅದಕ್ಕಾಗಿಯೇ ನಾನಿದನ್ನು ಕಳುಹಿಸುತ್ತಿರುವುದು – ಸುಮ್ಮನೆ ಬಾಯಾರಿಕೆ ಹೋಗಲಾಡಿಸಿಕೊಳ್ಳಲೋಸುಗವಷ್ಟೆ. ಇತ್ತೀಚೆಗೆ ನೀವು ಸ್ವಲ್ಪ ಗುಲಾಬಿ ಹೂ ಕೇಳಿದ್ದಿರಿ. ಅವನ್ನೂ ಈಗ ಕಳುಹಿಸುತ್ತಿದ್ದೇನೆ. ನಿಮ್ಮ ಹಸಿವು ಹೇಗಿದೆ, ಮುದ್ದು. ಹಸಿವೇ ಮುಖ್ಯವಾದುದು. ಸಧ್ಯಕ್ಕೆ, ದೇವರ ದಯದಿಂದ ನಮ್ಮ ತೊಂದರೆಗಳೆಲ್ಲ ಕೊನೆಗಾಣುತ್ತಿವೆ, ಅದಕ್ಕಾಗಿ ನಾವು ನಮ್ಮ ದೈವವನ್ನು ವಂದಿಸಬೇಕು. ಇನ್ನು ಪುಸ್ತಕಗಳ ವಿಷಯ ಹೇಳುವುದಾದರೆ, ನನಗಿನ್ನೂ ಅವು ಸಿಕ್ಕಿಲ್ಲ. ಇಲ್ಲಿ ಒಂದು ತುಂಬ ಚೆನ್ನಾದ ಪುಸ್ತಕವಿದೆ, ಉನ್ನತ ಶೈಲಿಯಲ್ಲಿ ಬರೆಯಲ್ಪಟ್ಟಿದೆ, ಎಂದು ಇಲ್ಲಿ ಎಲ್ಲ ಹೇಳುತ್ತಾರೆ. ಒಳ್ಳೆಯ ಪುಸ್ತಕ, ಅನ್ನುತ್ತಾರೆ ಅವರು. ನಾನೇ ಅದನ್ನು ಓದಿಲ್ಲ. ಆದರೆ ಎಲ್ಲರೂ ಅದನ್ನು ಹೊಗಳುತ್ತಾರೆ. ನನಗೂ ಅದನ್ನು ಎರವಲು ಕೊಡುವುದಾಗಿ ಮಾತುಕೊಟ್ಟಿದ್ದಾರೆ. ನೀವೂ ಅದನ್ನು ಓದುತ್ತೀರ? ನಿಮ್ಮನ್ನು ತೃಪ್ತಿಗೊಳಿಸುವುದು ಪ್ರಯಾಸದ ಕೆಲಸ – ನಿಮ್ಮ ಅಭಿರುಚಿಗೆ ಹೊಂದಿಸುವುದು ಕಷ್ಟ. ಅದು ನನಗೆ ಚೆನ್ನಾಗಿ ಗೊತ್ತು, ಪ್ರಿಯೆ. ನಿಮಗೆ ಬಹುಶಃ ಕಾವ್ಯಮಯವಾದುದು, ನಿಟ್ಟುಸಿರು ಪ್ರೇಮತಾಪಗಳಿಂದ ತುಂಬಿದುದು, ಯಾವುದಾದರೂ ಬೇಕೇನೋ. ನಾನು ಅಂತಹುದನ್ನೇ ತಂದುಕೊಡುತ್ತೇನೆ, ಹೆದರಬೇಡಿ. ನಕಲು ಮಾಡಿದ ಕವನಗಳ ಒಂದು ನೋಟುಪುಸ್ತಕ ನನ್ನ ಬಳಿ ಇದೆ.

ಇನ್ನು ನನ್ನ ವಿಷಯ ಹೇಳುವುದಾದರೆ, ನಾನು ಚೆನ್ನಾಗಿಯೇ ಇದ್ದೇನೆ. ಆದ್ದರಿಂದ ನೀವು ಚಿಂತಿಸಬೇಡಿ, ನನ್ನ ರನ್ನ. ಫೆದೋರ ಹೇಳುವುದರ ಕಡೆಗೆ ಗಮನ ಕೊಡಲೇ ಬೇಡಿ. ಅವಳೊಬ್ಬ ಮುದಿ ಹರಟೆಮಲ್ಲಿ ಎಂದು ಹೇಳಿ ಅವಳಿಗೆ. ಹೌದು, ಹಾಗೆಯೇ ಹೇಳಿ! ನಾನೇನೂ ನನ್ನ ಹೊಸ ಸಮವಸ್ತ್ರವನ್ನು ಮಾರಿಲ್ಲ. ಅದನ್ನೇಕೆ ಮಾರಬೇಕು? ಯಾತಕ್ಕಾಗಿ ಮಾರಬೇಕು? ನನಗೆ 40 ರೂಬಲ್

ಪ್ರಶಸ್ತಿ ರೂಪದಲ್ಲಿ ಬರಲಿದೆಯೆಂದು ನಾನು ಕೇಳಿದೆ. ಅಂದಮೇಲೆ ನಾನಿದನ್ನೇಕೆ ಮಾರಬೇಕು? ಆದ್ದರಿಂದ ನೀವು ಯೋಚಿಸಬೇಡಿ, ನನ್ನ ಮುದ್ದು. ನಿಮಗೇ ಗೊತ್ತಲ್ಲ, ಫಿದೋರ ತುಂಬ ಕಾತುರದವಳು, ತುಂಬ ಕಾತುರ ನರದೌರ್ಬಲ್ಯ ದವಳು. ನಮಗೆ ಸಂತೋಷದ ದಿನಗಳು ಬರಲಿವೆ! ನೀವು ಆರೋಗ್ಯವನ್ನು ಪುನಃ ಪಡೆಮಕೊಳ್ಳಬೇಕಷ್ಟೆ, ನನ್ನ ದೇವತೆ. ದೇವರ ಮೇಲಿನ ಪ್ರೀತಿಗಾಗಿಯಾದರೂ ಆರೋಗ್ಯವಂತರಾಗಿ. ನಿಮ್ಮ ವೃದ್ಧ ಗೆಳೆಯನನ್ನು ದುಃಖಕ್ಕೆ ಒಳಪಡಿಸಬೇಡಿ. ನಾನು ಸಣಕಲಾಗಿಬಿಟ್ಟಿದ್ದೇನೆಂದು ಯಾರು ನಿಮಗೆ ಹೇಳಿದ್ದು? ಅದೂ ಮತ್ತೆ ವದಂತಿಯೇ. ಕೇವಲ ಅವಹೇಳನ! ನಾನು ಬೇಕಾದಷ್ಟು ಆರೋಗ್ಯವಾಗಿದ್ದೇನೆ, ದಪ್ಪನಾಗಿ ಬೆಳೆದಿದ್ದೇನೆ, ವಾಸ್ತವವಾಗಿ ನನಗೇ ನಾಚಿಕೆಯಾಗುವಷ್ಟು ದಪ್ಪನಾಗಿ ದ್ದೇನೆ. ಸ್ವಲ್ಪದರಲ್ಲಿ ಹೇಳುವುದಾದರೆ, ನಾನು ಭೋಗದಲ್ಲಿ ಜೀವಿಸುತ್ತಿದ್ದೇನೆ. ನೀವು ಆರೋಗ್ಯವಂತರಾಗುವುದಾದರೆ ಎಷ್ಟು ಚೆನ್ನ! ಈಗ ನಮಸ್ಕಾರ, ನನ್ನ ದೇವತೆ. ನಿಮ್ಮ ಒಂದೊಂದೂ ಬೆರಳಿಗೆ ಮುತ್ತಿಡುತ್ತೇನೆ. ನಿಮ್ಮವನೇ ಆದ,

ನಿಮ್ಮ ಚಿರ ಗೆಳೆಯ

ಮಕಾರ್ ದೇವುಷ್ಕಿನ್.

ಮರೆತದ್ದು: ನಿಜಕ್ಕೂ, ನನ್ನ ಮುದ್ದು, ನೀವು ಯಾಕೆ ಮತ್ತೆ ಮತ್ತೆ ಆ ವಿಷಯ ಬರೆಯುತ್ತಿದ್ದೀರಿ? ನೀವು ವಿವೇಕಶಾಲಿಯಾಗಿರಬೇಕು! ಅಷ್ಟು ಆಗಾಗ್ಗೆ ನಾನು ನಿಮ್ಮಲ್ಲಿಗೆ ಭೇಟಿಕೊಡುವುದು ಹೇಗೆ ಸಾಧ್ಯ? ಅಂಥದನ್ನು ನಾನು ಹೇಗಾದರೂ ಮಾಡಲಿ? ಕತ್ತಲಲ್ಲಿ ಬಿಟ್ಟು ಬೇರೆ ಯಾವಾಗಲಾದರೂ ಬರಲೆಂದು ನೀವೇನೂ ನಿರೀಕ್ಷಿಸುತ್ತಿಲ್ಲವಷ್ಟೆ. ಅದು ಹೇಗೆ ಹಾಗೆ ನಿರೀಕ್ಷಿಸಬಲ್ಲಿರಿ, ನನ್ನ ಚಿನ್ನ? ಅಲ್ಲದೆ ಈ ರಾತ್ರಿಗಳಲ್ಲಿ ಪೂರ್ತಿ ಕತ್ತಲೆಯೇ ಇರುವುದಿಲ್ಲ. ಕಾಲ ಹಾಗಿದೆ. ನೀವು ತುಂಬ ಖಾಯಿಲೆ ಮಲಗಿ ನಿಮ್ಮ ಮನಸ್ಸು ಎಲ್ಲೆಲ್ಲೋ ಅಲೆದಾಡುತ್ತಿದ್ದಾಗ, ನಾನು ನಿಮ್ಮ ಹಾಸಿಗೆಯ ಪಕ್ಕ ಬಿಟ್ಟು ಹೋಗಲೇ ಇಲ್ಲ. ಆಗ ಅದನ್ನು ಹೇಗೆ ಮಾಡಿದೆನೋ ನನಗೇ ತಿಳಿಯದು. ಆದರೆ ಈ ಮಾತು ವದಂತಿಗಳ ಕಾರಣದಿಂದಾಗಿ ನಾನು ಬರುವುದನ್ನು ನಿಲ್ಲಿಸಬೇಕಾಯಿತು. ಆದರೂ ಆ ನಾಲಿಗೆಗಳು ಆಗಲೇ ಸಡಿಲವಾ ಗಿವೆ. ನಾನು ಥೆರೇಸಳನ್ನು ಸಂಪೂರ್ಣವಾಗಿ ನಂಬುತ್ತೇನೆ – ಅವಳೇನೂ ಅಂಥ ಒಡಕುಬಾಯಿಯವಳಲ್ಲ. ಅವರು ನಮ್ಮ ವಿಷಯ ಇನ್ನೂ ಹೆಚ್ಚು ತಿಳಿದು ಕೊಳ್ಳುವಂತಾದಲ್ಲಿ ಏನಾಗುತ್ತದೆಂಬುದನ್ನು ಊಹಿಸಿ ನೋಡಿ. ನಮ್ಮ ಬಗೆಗೆ ಅವರು ಏನು ಯೋಚಿಸುತ್ತಾರೆ, ಏನು ಹೇಳುತ್ತಾರೆ! ತಾಳ್ಮೆಯಿಂದಿರಬೇಕು, ಚಿನ್ನ, ನಿಮ್ಮ ಆರೋಗ್ಯ ಸುಧಾರಿಸುವವರೆಗೂ ತಾಳಿರಿ! ಆಮೇಲೆ ಹೊರಗಡೆ ಎಲ್ಲಾದರೂ ನಮ್ಮ ಭೇಟಿಗಳನ್ನು ಏರ್ಪಡಿಸಿಕೊಳ್ಳೋಣ.

ಜೂನ್ 1

ನನ್ನ ಸನ್ಮಿತ್ರ ಮಕಾರ್ ಅಲೆಕ್ಸೇಯೆವಿಚ್,

ನೀವು ನನ್ನ ಬಗೆಗೆ ಎಷ್ಟೊಂದು ವಿಶ್ವಾಸ ತೋರಿದ್ದೀರಿ. ಆದ್ದರಿಂದ ನಿಮ್ಮನ್ನು ಸಂತೋಷಪಡಿಸಲು ಏನಾದರೂ ಮಾಡಬೇಕೆಂಬ ಮಹದಾಸೆಯಾಗಿ ನಾನು ನನ್ನ ಪೆಟ್ಟಿಗೆಯಲ್ಲಿರುವುದನ್ನೆಲ್ಲ ತೆಗೆದು ಹುಡುಕಬೇಕೆಂದು ನಿರ್ಧರಿಸಿ, ಕೊನೆಗೆ ಈ ಹಳೆಯ ನೋಟುಪುಸ್ತಕವನ್ನು ಕಂಡುಹಿಡಿದೆ. ಇದನ್ನು ನಿಮಗೆ ಕಳುಹಿಸು ತ್ತಿದ್ದೇನೆ. ಇದನ್ನು ನನ್ನ ಸಂತಸದ ದಿನಗಳಲ್ಲಿ ಬರೆಯಲು ಪ್ರಾರಂಭಿಸಿ, ಬಿಟ್ಟು ಬಿಟ್ಟು ಮುಂದುವರಿಸಿದೆ. ನೀವು ಬಹುವೇಳೆ ನನ್ನ ಗತ ಜೀವನದ ಬಗೆಗೆ, ನನ್ನ ಅಮ್ಮನ ಬಗೆಗೆ, ಪಕ್ರೋವ್‌ಸ್ಕಿಯ ಬಗೆಗೆ, ಅನ್ನ ಫ್ಯೋದೊರೊವ್ನಳೊಂದಿಗೆ ನನ್ನ ಜೀವನದ ಬಗೆಗೆ, ಕೊನೆಯದಾಗಿ ನನ್ನ ಈಚೆಗಿನ ತೊಂದರೆಗಳ ಬಗೆಗೆ, ಕೇಳಿದಿರಿ. ಈ ನನ್ನ ಟಿಪ್ಪಣಿಗಳನ್ನು ಓದಲು ನೀವು ತುಂಬ ಕುತೂಹಲ ತೋರಿ ದಿರಿ. ಇವುಗಳಲ್ಲಿ, ಯಾವ ಕಾರಣಕ್ಕೋ ನನಗೆ ತಿಳಿಯದು, ನಾನು ಸಮಯ ಸಿಕ್ಕಾಗಲೆಲ್ಲ ನನ್ನ ಗತ ಜೀವನದ ನಾನಾ ಘಳಿಗೆಗಳನ್ನು ವಿವರಿಸಿದ್ದೇನೆ. ಇವನ್ನು ಓದಿದರೆ ನಿಮಗೆ ಸಂತೋಷವಾಗುವುದೆಂಬ ಖಾತರಿ ನನಗಿದೆ. ನನ್ನ ಮಟ್ಟಿಗೆ, ಅದನ್ನು ಓದಿದಾಗ ನನಗೆ ದುಃಖ ಉಮ್ಮಳಿಸಿ ಬರುತ್ತಿತ್ತು. ಅದರಲ್ಲಿನ ಕೊನೆಯ ಸಾಲುಗಳನ್ನು ಬರೆದಾಗಲಿನಿಂದ ನನಗೆಷ್ಟು ವಯಸ್ಸಾಗಿದೆಯೋ ಈಗ ಅದರ ಎರಡರಷ್ಟು ವಯಸ್ಸಾಗಿ ಬಿಟ್ಟಿದೆಯೇನೋ ಎಂದು ನನಗೆ ಕಂಡುಬರುತ್ತೆ. ನಮಸ್ಕಾರ, ಮಕಾರ್, ಅಲೆಕ್ಸೇಯೆವಿಚ್. ನಾನು ತುಂಬ ಬಳಲಿದ್ದೇನೆ, ಒಂಟಿ ತನದ ಭಾವನೆ ಹೊಂದಿದ್ದೇನೆ, ನಿದ್ರೆಯೇ ಬರದ ತೊಂದರೆಗೊಳಗಾಗಿದ್ದೇನೆ. ಎಂಥ ಬೇಸರ ತರಿಸುವಂಥ ಆರ್ಕೈಕೆ ಇದು.

ವ. ದೊ.

## I

ನನ್ನ ತಂದೆ ತೀರಿಹೋದಾಗ ನನಗೆ ಹದಿನಾಲ್ಕು ವಯಸ್ಸು. ನನ್ನ ಬಾಲ್ಯ ನನ್ನ ಜೀವನದಲ್ಲೇ ಅತ್ಯಂತ ಸಂತಸದ ಕಾಲವಾಗಿತ್ತು. ನನ್ನ ತಂದೆ ಒಂದು ಪ್ರಾಂತದಲ್ಲಿ ರಾಜಕುಮಾರ ಪಿರವರ ವಿಶಾಲವಾದ ಜಹಗೀರಿನಲ್ಲಿ ಪಾರುಪತ್ಯ ಗಾರರಾಗಿದ್ದರು. ಅಲ್ಲಿ, ಇಲ್ಲಿಂದ ತುಂಬ ದೂರ ದೂರದಲ್ಲಿ, ಆ ರಾಜಕುಮಾರನ ಹಳ್ಳಿಗಳೊಂದರಲ್ಲಿ ಶಾಂತಿಯಿಂದ ಸುಖ ಜೀವನ ನಡೆಸುತ್ತಿದ್ದೆವು. ನಾನೊಬ್ಬ ತುಂಟ ಮಗುವಾಗಿದ್ದೆ, ಯಾವಾಗಲೂ ತೋಟದಲ್ಲಿ, ಹುಲ್ಲುಗಾವಲಿನಲ್ಲಿ, ತೋಪು ಗಳಲ್ಲಿ ಓಡಾಡುತ್ತಿದ್ದೆ. ಯಾರೂ ನನ್ನನ್ನು ನೋಡಿಕೊಳ್ಳುತ್ತಲೇ ಇರಲಿಲ್ಲ. ಅಪ್ಪ

ಯಾವಾಗಲೂ ಜಹಗೀರಿನ ವ್ಯವಹಾರಗಳಲ್ಲೇ ಮಗ್ನರಾಗಿರುತ್ತಿದ್ದರು, ಅಮ್ಮ ಮನೆಗೆಲಸಗಳಲ್ಲೇ ಮುಳುಗಿರುತ್ತಿದ್ದಳು. ಹಾಗಾಗಿ ನಾನು ಒಂಟಿಯಾಗಿಯೇ ಉಳಿದೆ. ನನಗೆ ಹೇಳಿಕೊಡುವವರು ಯಾರೂ ಇರಲಿಲ್ಲ. ಅದು ನನಗೆ ಸಂತೋಷ ವನ್ನೇ ನೀಡಿತ್ತು. ಬೆಳಿಗ್ಗೆ ಎದ್ದೇಟಿಗೇ ನಾನು ಕೊಳಕ್ಕೋ, ತೋಪಿಗೋ, ಹುಲ್ಲು ಕೀಳುವವರ ಬಳಿಗೋ ಅಥವಾ ಕೊಯ್ಲು ಮಾಡುತ್ತಿರುವವರ ಬಳಿಗೋ ಓಡಿ ಹೋಗುತ್ತಿದ್ದೆ. ಸುಡು ಬಿಸಿಲೂ ನನಗೆ ಲೆಕ್ಕಕ್ಕಿರುತ್ತಿರಲಿಲ್ಲ. ಮನೆಯಿಂದ ದೂರ ಅಲೆದುಕೊಂಡು ಹೋದುದಾಗಲೀ, ಪೊದೆಗಳಲ್ಲಿ ಮೈ ಕೈ ತರಚಿಕೊಂಡು ದಾಗಲೀ, ಬಟ್ಟೆ ಹರಿದುಕೊಂಡುದಾಗಲೀ, ನನ್ನ ಗಮನಕ್ಕೇ ಬರುತ್ತಿರಲಿಲ್ಲ. ಮನೆಗೆ ಹಿಂದಿರುಗಿದ ಮೇಲೆ ಅಪ್ಪ ಅಮ್ಮ ಬಯ್ಯುತ್ತಿದ್ದರು. ಆದರೆ ನಾನು ಲೆಕ್ಕಿಸುತ್ತಲೇ ಇರಲಿಲ್ಲ.

ಆ ಹಳ್ಳಿಯಲ್ಲೇ ಇಡೀ ಜೀವನ ಹೀಗೆ ಕಳೆಯಲು ನನಗೆ ಸಂತೋಷವೇ ಆಗುತ್ತಿದ್ದಿತು. ಆದರೆ ವಿಧಿ ಬೇರೆಯೇ ಬಗೆಯಿತು. ನಾನಿನ್ನೂ ಹನ್ನೆರಡು ವಯಸ್ಸಿನ ಬಾಲಕಿಯಾಗಿದ್ದಾಗ ನಾವು ಸೇಂಟ್ ಪೀಟರ್ಸ್‌ಬರ್ಗ್‌ಗೆ ವಾಸ ಬದಲಿ ಸಿದೆವು. ನಾವು ಈ ಪ್ರಯಾಣಕ್ಕೆ ಹೇಗೆ ಸಿದ್ಧ ಮಾಡಿಕೊಂಡೆವು, ನನಗೆ ತುಂಬ ಪ್ರಿಯವಾಗಿದ್ದ ಆ ಎಲ್ಲವುಗಳಿಂದಲೂ ಬೀಳ್ಕೊಳ್ಳಬೇಕಾದಾಗ ನಾನು ಹೇಗೆ ಅತ್ತೆ, ಇನ್ನೊಂದು ಸ್ವಲ್ಪ ಹೆಚ್ಚು ಹೊತ್ತು ಅಲ್ಲೇ ಇರೋಣವೆಂದು ಹೇಗೆ ನಾನು ಅಪ್ಪನ ಕೊರಳಿಗೆ ತೆಕ್ಕೆ ಬಿದ್ದು ಅಂಗಲಾಚಿದೆ, ಅನ್ನುವುದನ್ನೆಲ್ಲ ಜ್ಞಾಪಿಸಿಕೊಂಡರೆ ಮನಸ್ಸಿಗೆ ಎಷ್ಟು ನೋವಾಗುತ್ತೆ. ಅಪ್ಪನಿಗೆ ಕೋಪ ಬಂದು ನನ್ನನ್ನು ಬಯ್ದು ತಳ್ಳಿದರು. ಅಮ್ಮ ಅಳುತ್ತ, ಅಪ್ಪನ ಕೆಲಸದ ಕಾರಣದಿಂದಾಗಿ ನಾವು ಹೋಗಲೇ ಬೇಕು, ಅಂದಳು. ಹಿರಿಯ ರಾಜಕುಮಾರ ಸತ್ತಿದ್ದನು. ಅವರ ಉತ್ತರಾಧಿಕಾರಿ ಗಳು ನನ್ನ ತಂದೆಯನ್ನು ಕೆಲಸದಿಂದ ತೆಗೆದುಹಾಕಿದರು. ನನ್ನ ತಂದೆ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಕೆಲವು ಖಾಸಗಿ ವ್ಯಕ್ತಿಗಳಿಗೆ ಲೇವಾದೇವಿಗಾಗಿ ಬಡ್ಡಿಯ ಮೇಲೆ ಸ್ವಲ್ಪ ಹಣ ಕೊಟ್ಟಿದ್ದರು. ಈಗ ರಾಜಧಾನಿಗೇ ಹೋದರೆ ನಮ್ಮ ಪರಿ ಸ್ಥಿತಿ ಸುಧಾರಿಸಬಹುದೆಂದು ಅವರು ಭಾವಿಸಿದರು. ನನ್ನ ತಾಯಿ ಅನಂತರ ನನಗೆ ಈ ವಿಷಯ ತಿಳಿಸಿದಳು. ರಾಜಧಾನಿಗೆ ಬಂದವರೇ ನಾವು ಪೀಟರ್ಸ್‌ಬರ್ಗ್ ಸೈಡ್‌ನಲ್ಲಿ ಮನೆ ಮಾಡಿದೆವು. ತಂದೆ ತೀರಿಹೋಗುವವರೆಗೂ ಅಲ್ಲೇ ಇದ್ದೆವು.

ಹೊಸ ಬಾಳಿಗೆ ಹೊಂದಿಕೊಂಡು ಹೋಗುವುದು ಎಷ್ಟು ಕಷ್ಟವಾಗಿದ್ದಿತು. ನಾವು ನಗರಕ್ಕೆ ಶರತ್ಕಾಲದಲ್ಲಿ ಬಂದೆವು. ಹಳ್ಳಿ ಬಿಟ್ಟಾಗ ಸೂರ್ಯ ಬೆಳ್ಳಗೆ ಬೆಳಗುತ್ತಿದ್ದ. ಹವೆ ಬೆಚ್ಚಗಿತ್ತು, ಚೇತೋಹಾರಿಯಾಗಿದ್ದಿತು. ಹೊಲದ ಕೆಲಸ ಬಹುಮಟ್ಟಿಗೆ ಮುಗಿದಿತ್ತು. ಕಣದಲ್ಲಿ ಧಾನ್ಯ ರಾಶಿ ಹಾಕಲಾಗಿತ್ತು. ಹಕ್ಕಿಗಳು ಮೇಲೆ ಚಿಲಿಪಿಲಿ ಗುಟ್ಟುತ್ತ ಹಾರಾಡುತ್ತಿದ್ದವು. ಎಲ್ಲವೂ ಎಷ್ಟು ಉಜ್ವಲವಾಗಿ ಆನಂದದಾಯಕ

ವಾಗಿ ಇದ್ದವು. ಆದರೆ ನಗರಕ್ಕೆ ಬಂದಾಗ ಮಳೆಯೋ ಮಳೆ. ಮೋಡ ಮುಸು ಕಿದ ಆಗಸದ ಕೆಳಗೆ ಶರತ್ಕಾಲದ ಥಂಡಿ, ಚಳಿ ಹಾಗೂ ಕೆಸರು ಬಿಟ್ಟು ಬೇರೇನೂ ಇರಲಿಲ್ಲ. ಎಲ್ಲಿ ನೋಡಿದರೂ ಜನಜಂಗುಳಿ. ಆ ಅಪರಿಚಿತರು ಆದರವಿಲ್ಲದ, ಶತ್ರುತ್ವದ, ಉತ್ಸಾಹರಹಿತವಾದ ಮನೋಭಾವ ತೋರಿದರು. ಆದರೆ ಕೊನೆಗೆ ನಾವು ನೆಲೆಸಿದೆವು. ಹೊಸ ಮನೆ ಹೂಡುವಾಗ ಎಲ್ಲ ಹೇಗೆ ಸಡಗರದಿಂದ ಓಡಾಡಿದ ರೆಂಬುದು ನನಗಿನ್ನೂ ಚೆನ್ನಾಗಿ ಜ್ಞಾಪಕವಿದೆ. ಅಪ್ಪ ಮನೆಯಲ್ಲಿ ಇರುತ್ತಲೇ ಇರಲಿಲ್ಲ. ಅಮ್ಮನಿಗೆ ಒಂದು ಘಳಿಗೆಯೂ ಬಿಡುವು ಇರುತ್ತಿರಲಿಲ್ಲ. ನನ್ನನ್ನು ಸಂಪೂರ್ಣವಾಗಿ ಮರೆತೇ ಬಿಟ್ಟರು. ನಾವು ಇಲ್ಲಿಗೆ ಬಂದನಂತರ ಮೊದಲ ಪ್ರಾತಃಕಾಲವೇ ಎಷ್ಟು ವಿಷಾದಪೂರ್ಣವಾಗಿದ್ದಿತು ! ನಮ್ಮ ಕಿಟಕಿ ತೆರೆದರೆ ಏನೋ ಹಳದಿ ಬಣ್ಣ ಹಚ್ಚಿದ್ದ ಬೇಲಿ ಕಾಣುತ್ತಿತ್ತು. ಬೀದಿಯಲ್ಲಿ ಕೆಸರು ಎಂದೂ ಒಣಗು ತ್ತಲೇ ಇರಲಿಲ್ಲ. ಬೀದಿಯಲ್ಲಿ ಕೆಲವೇ ಮಂದಿ ಹೋಗಿಬರುತ್ತಿದ್ದವರು. ಎಲ್ಲರೂ ಕೋಟುಗಳಲ್ಲಿ ಅವುಚಿಕೊಂಡಿರುತ್ತಿದ್ದರು, ಏಕೆಂದರೆ ಅಷ್ಟು ಚಳಿಯಾಗಿತ್ತು.

ನಮ್ಮ ಮನೆಯೂ ಇಡೀ ದಿನ ಉತ್ಸಾಹಹೀನವಾಗಿದ್ದಿತು, ಮಂಕು ಕವಿದಂತಿ ದ್ದಿತು. ನಮಗೆ ಯಾವೊಬ್ಬ ಬಂಧುವಾಗಲೀ ಮಿತ್ರನಾಗಲೀ ಇರಲಿಲ್ಲ. ಅಪ್ಪನೂ ಆನ್ನ ಫ್ಯೋದೊರೊವ್ನಳೂ ಪರಸ್ಪರ ವೈಮನಸ್ಯದಲ್ಲಿದ್ದರು (ಅಪ್ಪ ಅವಳಿಗೆ ಸ್ವಲ್ಪ ಹಣ ಕೊಡಬೇಕಾಗಿದ್ದಿತು). ನಮ್ಮ ಮನೆಗೆ ಆಗಾಗ್ಗೆ ಬರುತ್ತಿದ್ದವರೆಲ್ಲ ಅಪ್ಪನ ವ್ಯಾಪಾರಕ್ಕೆ ಸಂಬಂಧಿಸಿದವರಷ್ಟೆ ಆಗಿದ್ದರು. ಅವರು ಸಾಮಾನ್ಯವಾಗಿ ಜಗಳವಾಡು ತ್ತಿದ್ದರು, ವಾದಿಸುತ್ತಿದ್ದರು, ಕೂಗಾಡುತ್ತಿದ್ದರು. ಅಂತಹವರು ಬಂದು ಹೋದ ಮೇಲೆ ಅಪ್ಪ ಯಾವಾಗಲೂ ತುಂಬ ನಿರುತ್ಸಾಹಿಯಾಗುತ್ತಿದ್ದರು, ತಾಳ್ಮೆ ಕಳೆದು ಕೊಳ್ಳುತ್ತಿದ್ದರು. ಗಂಟೆಗಟ್ಟಲೆ ಕೋಣೆಯಲ್ಲಿ ಚಿಂತಿಸುತ್ತ ಶತಪಥ ತಿರುಗುತ್ತಿದ್ದರು. ಅಂಥ ಘಳಿಗೆಯಲ್ಲಿ ಅಮ್ಮ ಅವರೊಂದಿಗೆ ಮಾತನಾಡಲೂ ಅಂಜುತ್ತಿದ್ದಳು. ನಾನೂ ಕೈಯಲ್ಲಿ ಒಂದು ಪುಸ್ತಕ ಹಿಡಿದುಕೊಂಡು ಒಂದು ಮೂಲೆಯಲ್ಲಿ ಇಲಿ ಮರಿಯಂತೆ ಮೌನವಾಗಿ ಕುಳಿತುಕೊಂಡಿರುತ್ತಿದ್ದೆ.

ನಾವು ಸೇಂಟ್ ಪೀಟರ್ಸ್‌ಬರ್ಗ್‌ಗೆ ಬಂದ ಮೂರು ತಿಂಗಳನಂತರ ನನ್ನನ್ನು ಒಂದು ಬೋರ್ಡಿಂಗ್ ಶಾಲೆಗೆ ಕಳುಹಿಸಿಕೊಡಲಾಯಿತು. ಅಲ್ಲಿನ ಅಪರಿಚಿತರ ಮಧ್ಯೆ ನಾನು ತುಂಬ ವಿಷಣ್ಣಳಾಗಿದ್ದೆ. ಅಲ್ಲಿ ಯಾರೂ ಸ್ನೇಹಪರರಾಗಿರಲಿಲ್ಲ. ಅಧ್ಯಾಪಕಿಯರಂತೂ ಸದಾಕಾಲವೂ ಕೂಗಾಡುತ್ತಿದ್ದರು. ಅಲ್ಲಿನ ಹೆಣ್ಣು ಮಕ್ಕಳು ನನ್ನನ್ನು ಗೇಲಿ ಮಾಡುತ್ತಿದ್ದರು. ನಾನೇ ವಿಲಕ್ಷಣ ಸ್ವಭಾವದ ಹುಡುಗಿಯಾಗಿದ್ದೆ. ಅಲ್ಲಿ ಎಲ್ಲ ತುಂಬ ಕಟ್ಟುನಿಟ್ಟಾಗಿದ್ದಿತು, ಕಷ್ಟತರವಾಗಿದ್ದಿತು ! ಎಲ್ಲಕ್ಕೂ ಕ್ರಮಬದ್ಧವಾದ ಕಾಲ ಗೊತ್ತುಮಾಡಲಾಗಿತ್ತು. ಎಲ್ಲರೂ ಒಟ್ಟಿಗೇ ಊಟ ಮಾಡುತ್ತಿದ್ದೆವು. ನಮ್ಮ ಅಧ್ಯಾಪಕಿಯರು ನೀರಸ ವ್ಯಕ್ತಿಗಳಾಗಿದ್ದರು. ಇವೆಲ್ಲವುಗಳಿಂದ ಮೊದಲು ನನಗೆ ಚಿತ್ರ

ಹಿಂಸೆಯು, ನಿರ್ಭಾಗ್ಯತೆಯ ಭಾವನೆಯಾಯಿತು. ನನಗೆ ನಿದ್ದೆ ಮಾಡಲೂ ಆಗಲಿಲ್ಲ, ಇಡೀ ರಾತ್ರಿ ಅಳುತ್ತ ಮಲಗಿರುತ್ತಿದ್ದೆ. ಓಹ್, ಆ ಕೊನೆ ಇಲ್ಲದಂಥ, ಶೀತಲ ವಾದ, ಸಂಕಟಕರವಾದ ರಾತ್ರಿಗಳು ! ಸಂಜೆ ಹೊತ್ತು ಎಲ್ಲರೂ ಪಾಠ ಓದಿ ಕೊಳ್ಳುತ್ತಿರುವ ಸಮಯದಲ್ಲಿ ನಾನು ಮಿಸುಕಲೂ ಹೆದರುತ್ತ, ಕಲಿಯಬೇಕಾದ ಫ್ರೆಂಚ್ ಕ್ರಿಯಾಪದಗಳ ಹಾಗೂ ವಾಕ್ಯಗಳ ಬಗೆಗೆ ಓದುತ್ತ ಕುಳಿತಂತೆ ನನ್ನ ಯೋಚನೆಗಳು ಮನೆಯ ಕಡೆಗೆ, ಅಪ್ಪ ಅಮ್ಮನ ಕಡೆಗೆ, ನನ್ನ ಅಜ್ಜಿಯ ಕಡೆಗೆ, ಅವಳು ಹೇಳುತ್ತಿದ್ದ ರಮ್ಯಕಥೆಗಳ ಕಡೆಗೆ, ಅಲೆದುಕೊಂಡು ಹೋಗುತ್ತಿದ್ದವು. ಆಗ ನನಗಾಗುತ್ತಿದ್ದ ಸಂಕಟ ಸಹಿಸಲಸದಳವಾಗಿದ್ದಿತು. ನಮ್ಮ ಮನೆಯಲ್ಲಿನ ಅತ್ಯಂತ ಸಣ್ಣಪುಟ್ಟ ವಸ್ತು ವಿಷಯಗಳ ಬಗೆಗೆ ಯೋಚಿಸುವುದೂ ಹರ್ಷದಾಯಕ ವಾಗಿದ್ದಿತು. ನಾನು ಅಲ್ಲಿಗೆ ಹೋಗಿ, ಆ ನಮ್ಮ ಸಣ್ಣ ಕೋಣೆಯಲ್ಲಿ ಅಪ್ಪ ಅಮ್ಮನ ಜೊತೆ ಕುಳಿತುಕೊಂಡು ಟೀ ಕುಡಿಯುವಂತಾದರೆ ಎಷ್ಟು ಚೆನ್ನ ಎಂದು ಮೇಲಿಂದ ಮೇಲೆ ಬಯಸುತ್ತಿದ್ದೆ. ಅಲ್ಲಿ ಮೇಜಿನ ಮೇಲೆ ಹೊಗೆ ಸೂಸುತ್ತಿದ್ದ ಸಮೊವಾರ್, ಮತ್ತಿತರ ಎಲ್ಲ ವಸ್ತುಗಳೂ ಎಷ್ಟು ಸುಖಕರವಾಗಿ, ಸುಪರಿಚಿತ ವಾಗಿ, ಹಿತಕರವಾಗಿ ಕಾಣಿಸುತ್ತಿದ್ದವು. ಅಯ್ಯೋ, ನನ್ನ ಅಮ್ಮನನ್ನು ಅಪ್ಪಿ ಕೊಳ್ಳುವಂತಾದರೆ, ಅಪ್ಪಿ ಹಿಸುಕುವಂತಾದರೆ ಎಷ್ಟು ಚೆನ್ನ ! ಹೀಗೆ ಆಲೋಚಿ ಸುತ್ತ ಆ ಶಾಲೆಯಲ್ಲಿ ಕುಳಿತಂತೆ ನಾನು ಒಳಗೊಳಗೇ ಅಳುತ್ತಿದ್ದೆ, ಪಾಠಗಳೆಲ್ಲ ಸಂಪೂರ್ಣವಾಗಿ ಮರೆತುಹೋಗುತ್ತಿದ್ದವು. ಇಡೀ ರಾತ್ರಿ ನಾನು ಅಧ್ಯಾಪಕರ ಬಗೆಗೆ, ಮುಖ್ಯೋಪಾಧ್ಯಾಯಿನಿಯ ಬಗೆಗೆ, ಶಾಲಾ ಬಾಲಕಿಯರ ಬಗೆಗೆ ಕೆಟ್ಟ ಕನಸುಗಳನ್ನು ಕಾಣುತ್ತಿದ್ದೆ. ನಿದ್ರೆಯಲ್ಲೇ ನಾನು ಪಾಠಗಳನ್ನು ಬಾಯಿಪಾಠ ಮಾಡುತ್ತಿದ್ದೆ. ಆದರೂ ಬೆಳಿಗ್ಗೆ ಎದ್ದಾಗ ಎಂದೂ ಎಷ್ಟು ಮಾತ್ರವೂ ಅವುಗಳನ್ನು ನೆನಪಿನಲ್ಲಿಟ್ಟುಕೊಳ್ಳುತ್ತಿರಲಿಲ್ಲ. ಇದಕ್ಕೆ ಶಿಕ್ಷೆಯಾಗಿ ಅವರು ನನ್ನನ್ನು ಮೊಣಕಾಲ ಮೇಲೆ ನಿಲ್ಲುವಂತೆ ಮಾಡುತ್ತಿದ್ದರು, ಅರೆಹೊಟ್ಟೆಯಷ್ಟೆ ಊಟ ಹಾಕುತ್ತಿದ್ದರು. ನಾನು ಯಾವಾಗಲೂ ದುಃಖದಿಂದ ಕೂಡಿರುತ್ತಿದ್ದೆ. ಮೊದಲು ಅಲ್ಲಿದ್ದ ಬಾಲಕಿ ಯರೆಲ್ಲ ನನ್ನನ್ನು ಗೇಲಿಮಾಡುತ್ತಿದ್ದರು ರೇಗಿಸುತ್ತಿದ್ದರು, ಅಧ್ಯಾಪಕರ ಪ್ರಶ್ನೆಗೆ ಉತ್ತರ ಹೇಳುತ್ತಿದ್ದಾಗ ಬೇಕಂತಲೇ ತಪ್ಪು ಹೇಳುವಂತೆ ಮಾಡುತ್ತಿದ್ದರು, ಊಟಕ್ಕೋ ಅಥವಾ ಟೀಗೋ ಜೊತೆಜೊತೆಯಾಗಿ ಹೋಗುತ್ತಿದ್ದಾಗ ಗಿಲ್ಲು ತ್ತಿದ್ದರು. ನಿಷ್ಕಾರಣವಾಗಿ ನನ್ನ ವಿಷಯದಲ್ಲಿ ಮುಖ್ಯೋಪಾಧ್ಯಾಯಿನಿ ಯರ ಬಳಿ ಸಲ್ಲದ ಚಾಡಿ ಹೇಳುತ್ತಿದ್ದರು. ಆದರೆ ಶನಿವಾರ ಸಂಜೆಗಳಂದು ಅಜ್ಜಿ ನನ್ನನ್ನು ಕರೆದುಕೊಂಡು ಹೋಗಲು ಬಂದಾಗ ಎಷ್ಟು ಅದ್ಭುತವಾಗಿರುತ್ತಿತ್ತು. ನಾನು ಆನಂದಪರವಶಳಾಗಿ ಅಜ್ಜಿಯನ್ನು ಬಲವಾಗಿ ಅಪ್ಪಿಕೊಳ್ಳುತ್ತಿದ್ದೆ. ಅವಳು ನನ್ನನ್ನು ಬೆಚ್ಚಗೆ ಬಟ್ಟೆಯಲ್ಲಿ ಸುತ್ತುತ್ತಿದ್ದಳು. ನಾವು ಮನೆಯ ಕಡೆಗೆ ಹೊರಡು

ತ್ತಿದ್ದೆವು. ಆದರೆ ನನ್ನ ಜೊತೆಗೆ ಸಮುಹೆಜ್ಜೆ ಹಾಕಿಕೊಂಡು ಹೋಗಲು ಅವಳಿಗೆ ಆಗುತ್ತಲೇ ಇರಲಿಲ್ಲ. ಮನೆ ತಲುಪುವವರೆಗೂ ನಾನು ಒಂದಲ್ಲ ಒಂದು ವಿಷಯದ ಮೇಲೆ ಹರಟುತ್ತಲೇ ಇದ್ದೆ. ಕೊನೆಗೆ ಮನೆ ತಲುಪಿದ ಕೂಡಲೇ ನಾನು ಸಂತೋಷದಿಂದ ಹೃದಯ ಹಗುರವಾದಂತವಳಾಗಿ ಎಲ್ಲರನ್ನೂ ಅಪ್ಪಿಕೊಂಡು ಮುತ್ತಿಡುತ್ತಿದ್ದೆ – ಹತ್ತಾರು ವರ್ಷ ಹೊರಗೆ ಹೋಗಿದ್ದೆನೇನೋ ಎಂಬಂತೆ ! ಆಗ ಮನೆಯಲ್ಲಿ ಎಂಥ ಸಂತಸ ಸಡಗರ ತುಂಬಿರುತ್ತಿತ್ತು ! ನಾನು ಎಲ್ಲರಿಗೂ ಶುಭ ವಂದನೆ ಸಲ್ಲಿಸುತ್ತ ಓಡಾಡುತ್ತಿದ್ದೆ, ನಗುತ್ತಿದ್ದೆ, ಹರಟುತ್ತಿದ್ದೆ, ಎಗರಾಡುತ್ತಿದ್ದೆ. ಆಮೇಲೆ ಅಪ್ಪನ ಜೊತೆಗೆ ನನ್ನ ಪಾಠಗಳ ಬಗೆಗೆ, ಅಧ್ಯಾಪಕರ ಬಗೆಗೆ, ಫ್ರೆಂಚ್ ಭಾಷೆ ಹಾಗೂ ಲೊಮೋಂಡ್ ವ್ಯಾಕರಣದ ಬಗೆಗೆ, ಶ್ರದ್ಧೆಯ ಮಾತುಕತೆ ನಡೆ ಯುತ್ತಿತ್ತು. ಎಲ್ಲರಿಗೂ ಸಂತೋಷವಾಗುತ್ತಿತ್ತು, ತೃಪ್ತಿಯಾಗುತ್ತಿತ್ತು. ಈಗಲೂ ನಾನು ಅದನ್ನೆಲ್ಲ ನೆನಸಿಕೊಂಡು ಮುಗುಳ್ನಗುತ್ತೇನೆ. ನನ್ನ ತಂದೆಯ ಸಲುವಾಗಿ ನಾನು ನನ್ನ ಪಾಠಗಳನ್ನು ಚೆನ್ನಾಗಿಯೇ ಕಲಿಯಲು ಕಷ್ಟಪಟ್ಟು ಯತ್ನಿಸಿದೆ. ಅವರು ತಮ್ಮ ಸಂಪಾದನೆಯ ಕೊನೆಯ ಕೊಪೆಕ್‌ಅನ್ನೂ ನನಗಾಗಿ ಖರ್ಚು ಮಾಡುತ್ತಿದ್ದರು, ಹೇಗೋ ನಿಭಾಯಿಸುತ್ತಿದ್ದರು, ಎಂಬುದನ್ನು ನಾನು ಕಂಡು ಕೊಂಡೆ. ಹೇಗೆ ನಿಭಾಯಿಸುತ್ತಿದ್ದರೋ, ದೇವರಿಗೇ ಗೊತ್ತು. ದಿನದಿನಕ್ಕೂ ಅವರು ಹೆಚ್ಚು ದುಃಖಾಕ್ರಾಂತರಾದರು, ಹೆಚ್ಚು ಅತೃಪ್ತರಾದರು, ಬೇಗ ಕೆರಳುವ ಸ್ವಭಾವದವರಾದರು. ಅವರ ವ್ಯವಹಾರಗಳೆಲ್ಲ ಹೆಚ್ಚು ಹೆಚ್ಚು ಕೆಡತೊಡಗಿದವು. ಮೈ ತುಂಬ ಸಾಲವಾಯಿತು. ಅವರು ಎಷ್ಟು ಬೇಗ ತಾಳ್ಮೆಗೆಡುತ್ತಿದ್ದರೆಂದರೆ, ಅವರನ್ನು ಎಲ್ಲಿ ವ್ಯಗ್ರಗೊಳಿಸುವೆನೋ ಎಂದು ಅಮ್ಮ ಅವರ ಮುಂದೆ ಮಾತ ನಾಡುವ ಅಥವಾ ಅಳುವ ಸಾಹಸವನ್ನೂ ಮಾಡುತ್ತಿರಲಿಲ್ಲ. ಅವಳು ತುಂಬ ಅನಾರೋಗ್ಯದಿಂದಿರುವವಳಾಗಿ ಕಂಡುಬರುತ್ತಿದ್ದಳು. ದಿನದಿನಕ್ಕೆ ಹೆಚ್ಚು ಹೆಚ್ಚು ಸೊಣಕಲಾಗತೊಡಗಿದಳು, ಕೆಟ್ಟುದಾಗಿ ಕೆಮ್ಮತೊಡಗಿದಳು. ಈಗ ಶಾಲೆಯಿಂದ ಹಿಂದಿರುಗಿದಾಗ ನಾನು ಮನೆಯಲ್ಲಿ ಎಲ್ಲರೂ ದುಃಖಾಕ್ರಾಂತರಾಗಿರುವುದನ್ನು, ಅಪ್ಪ ಕೋಪಗೊಂಡಿರುವುದನ್ನು, ಅಮ್ಮ ಒಳಗೊಳಗೇ ಅಳುತ್ತಿರುವುದನ್ನು, ಕಾಣುತ್ತಿದ್ದೆ. ನಿಂದೆ ಬಯ್ಗುಳಗಳಾಗುತ್ತಿದ್ದವು. ನಾನು ತಮಗೆ ಯಾವ ಸಂತೋಷ ಸಂತೃಪ್ತಿಯನ್ನೂ ನೀಡುತ್ತಿರಲಿಲ್ಲವೆಂದು, ತಾವು ತಮ್ಮ ಸಂಪಾದನೆಯ ಕೊನೆಯ ಬಿಲ್ಲೆಯನ್ನೂ ನನ್ನ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಿದರೂ ನಾನು ಫ್ರೆಂಚ್ ಭಾಷೆ ಮಾತನಾಡುವುದನ್ನೂ ಇನ್ನೂ ಕಲಿತಿರಲಿಲ್ಲವೆಂದು, ಅಪ್ಪ ದೂರುತ್ತಿದ್ದರು. ಸ್ವಲ್ಪದರಲ್ಲಿ ಹೇಳುವುದಾದರೆ, ತಮ್ಮೆಲ್ಲ ವೈಫಲ್ಯ ದುರದೃಷ್ಟಗಳಿಗೂ ಅವರು ಅಮ್ಮನನ್ನೂ ನನ್ನನ್ನೂ ದೂಷಿಸಿದರು. ನನ್ನ ಅಮ್ಮನನ್ನು ಅವರು ಅಷ್ಟು ಸಂಕಟಕ್ಕೆ ಈಡುಮಾಡಲು ಹೇಗೆ ಸಾಧ್ಯವಿದ್ದಿತೋ ? ಅವಳನ್ನು ಕಂಡರೇ ನನ್ನ

ಹೃದಯ ಹಿಂಡಿದಂತಾಗುತ್ತಿತ್ತು. ಅವಳ ಮುಖ ನಿಸ್ತೇಜವಾಗಿತ್ತು, ಕಣ್ಣುಗಳು ಗುಳಿ ಬಿದ್ದಿದ್ದವು, ಅವಳ ಕಳೆಗುಂದಿದ ಗಲ್ಲಗಳ ಮೇಲೆ ಕ್ಷಯರೋಗದ ಕುರು ಹುಗಳಿದ್ದವು. ಆದರೆ ನನ್ನ ಮೇಲೆ ಅಪ್ಪನ ರೋಷ ಇನ್ನೂ ಹೆಚ್ಚಾಗಿದ್ದಿತು. ಅವರು ಯಾವುದಾದರೂ ಸಣ್ಣ ವಿಷಯದಿಂದ ಪ್ರಾರಂಭಿಸುತ್ತಿದ್ದರು, ಆಮೇಲೆ ಗೊತ್ತು ಗುರಿ ಇಲ್ಲದಂತೆ ಎರಗಿ ಬೀಳುತ್ತಿದ್ದರು. ಬಹುವೇಳೆ ಅದೆಲ್ಲ ಏತರಿಂದ ಪ್ರಾರಂಭ ವಾಯಿತೆಂಬುದನ್ನೇ ನಾನು ಗೊತ್ತು ಹಿಡಿಯದಾಗುತ್ತಿದ್ದೆ. ನನ್ನ ವಿರುದ್ಧ ನಾನಾ ರೀತಿಯ ಆಪಾದನೆಗಳನ್ನು ಮಾಡಲಾಗುತ್ತಿತ್ತು. ನನ್ನ ಫ್ರೆಂಚ್ ಅಷ್ಟು ಚೆನ್ನಾಗಿಲ್ಲ, ನಾನೊಬ್ಬ ದಡ್ಡಿ, ಶಾಲೆಯ ಮುಖ್ಯೋಪಾಧ್ಯಾಯಿನಿ ಒಬ್ಬ ಮೂರ್ಖ ಹೆಂಗಸು, ಅವಳು ತನ್ನ ಕರ್ತವ್ಯಗಳನ್ನು ನಿರ್ಲಕ್ಷಿಸುತ್ತಿದ್ದಳಲ್ಲದೆ ಹುಡುಗಿಯರ ನೀತಿ ನಡವಳಿಕೆಗಳ ಕಡೆಗೆ ಏನೇನೂ ಗಮನ ನೀಡುತ್ತಿರಲಿಲ್ಲ, ತಾನು – ನನ್ನ ತಂದೆ – ಇನ್ನೂ ಸರಿಯಾದ ಕೆಲಸ ಕಂಡುಕೊಂಡಿರಲಿಲ್ಲ, ಲೊಮೋಂಡ್‌ರ ವ್ಯಾಕರಣ ಗ್ರಂಥ ಒಂದು ಕಳಪೆ ಪುಸ್ತಕ, ಅದು ಜಪೋಲ್‌ಸ್ಕಿಯವರ ಗ್ರಂಥಕ್ಕಿಂತ ಕೀಳಾದುದು, ನನ್ನ ಶಿಕ್ಷಣಕ್ಕಾಗಿ ಬೇಕಾದಷ್ಟು ಹಣ ಸುರಿಯಲಾಗುತ್ತಿದೆ, ಆದರೆ ನಾನೇ ನಿಶ್ಚಿಂತಳಾಗಿದ್ದೇನೆ, ಯಾವುದನ್ನೂ ಹಚ್ಚಿಕೊಳ್ಳುತ್ತಿಲ್ಲ... ಸ್ವಲ್ಪದರಲ್ಲಿ ಹೇಳು ವುದಾದರೆ, ನಾನು ಕ್ರಿಯಾಪದ ವಾಕ್ಯಗಳ ಬಗೆಗೆ ಎಷ್ಟೇ ಕಷ್ಟಪಟ್ಟು ಅಭ್ಯಾಸ ನಡೆಸುತ್ತಿದ್ದರೂ, ಎಲ್ಲದಕ್ಕೂ ನನ್ನನ್ನೇ ದೂಷಿಸಲಾಗುತ್ತಿತ್ತು. ಅಪ್ಪ ನನ್ನನ್ನು ಪ್ರೀತಿಸುತ್ತಿರಲಿಲ್ಲವೆಂದೇನೂ ಅಲ್ಲ; ತದ್ವಿರುದ್ಧವಾಗಿ ಅವರು ನನ್ನನ್ನೂ ಅಮ್ಮ ನನ್ನೂ ಅತಿಯಾಗಿಯೇ ಪ್ರೀತಿಸುತ್ತಿದ್ದರು. ಸಣ್ಣಪುಟ್ಟದಕ್ಕೆಲ್ಲ ರೇಗುವುದು ಅವರ ಸ್ವಭಾವವಾಗಿತ್ತು.

ಯೋಚನೆಗಳಿಂದಲೂ ವೈಫಲ್ಯಗಳಿಂದಲೂ ಪೀಡಿತರಾಗಿ ಅವರು ಚಿಂತಾ ಕುಲರಾದರು, ಸಂಶಯಗ್ರಸ್ತರಾದರು. ಬಹುವೇಳೆ ಹತಾಶೆಯ ಅಂಚಿನಲ್ಲಿರು ವಂತಾಗಿ ಅವರು ತಮ್ಮ ಆರೋಗ್ಯವನ್ನು ಕಡೆಗಾಣಿಸತೊಡಗಿದರು. ಒಮ್ಮೆ ಶೀತ ಕ್ಕೊಳಗಾಗಿ, ಸ್ವಲ್ಪ ಕಾಲ ಕಾಯಿಲೆ ಮಲಗಿದನಂತರ, ಎಷ್ಟು ಹಠಾತ್ತನೆ ನಿಧನ ರಾದರೆಂದರೆ, ಕೆಲವು ದಿನ ನಾವು ದಂಗುಬಡಿದವರಂತಾದೆವು, ಅವರು ತೀರಿ ಹೋಗಿದ್ದರೆಂಬುದನ್ನು ನಂಬದಂತಾಗಿದ್ದೆವು. ಅಮ್ಮ ಮಂಕು ಕವಿದವಳಂತೆ ಕುಳಿತು ಬಿಡುತ್ತಿದ್ದಳು. ಅವಳ ಮನಃಸ್ಥಿತಿ ಕೆಡುವುದೆಂದು ನಾನು ಅಂಜತೊಡಗಿದೆ. ಅಪ್ಪ ತೀರಿಹೋದ ಕೂಡಲೇ ಅವರ ಸಾಲಗಾರರು ಎಲ್ಲ ಕಡೆಗಳಿಂದಲೂ ಚಿಮ್ಮಿ ನಿಂತು ನಮ್ಮ ಮೇಲೆ ಒಟ್ಟಿಗೇ ಬಂದೆರಗಿದರು. ನಮ್ಮಲ್ಲಿ ಇದ್ದುಬದ್ದುದನ್ನೆಲ್ಲ ಅವರಿಗೆ ಕೊಟ್ಟುಬಿಡಬೇಕಾಯಿತು. ನಾವು ಪೀಟರ್ಸ್‌ಬರ್ಗ್‌ಗೆ ಬಂದ ಸುಮಾರು ಆರು ತಿಂಗಳನಂತರ ಅಪ್ಪ ನಗರದ ಪೀಟರ್ಸ್‌ಬರ್ಗ್ ಸೈಡ್‌ನಲ್ಲಿ ಕೊಂಡಿದ್ದ ಪುಟ್ಟ ಮನೆಯನ್ನೂ ನಾವು ಮಾರಬೇಕಾಯಿತು. ಈ ವ್ಯವಹಾರವನ್ನು ಕೊನೆಗೆ ಹೇಗೆ

ತೀರ್ಮಾನಿಸಲಾಯಿತೋ, ನನಗೆ ತಿಳಿಯದು. ಆದರೆ ನಾವಂತೂ ಮನೆಮಠ ಇಲ್ಲದವರಾಗಿ, ಬಿಡಿಕಾಸೂ ಕೈಯಲ್ಲಿಲ್ಲದವರಾಗಿ, ಸಹಾಯಕ್ಕೆ ಯಾರ ಕಡೆಗೂ ತಿರುಗಲಾರದವರಾಗಿ ಉಳಿದೆವು, ಅಮ್ಮ ಯಾವುದೋ ಅತ್ಯಂತ ನೋವಿನ ರೋಗದಿಂದ ಕೃಶಳಾಗುತ್ತ ಹೋಗುತ್ತಿದ್ದಳು; ನಮ್ಮನ್ನು ನಾವೇ ಪೋಷಿಸಿಕೊಳ್ಳ ದಾಗಿದ್ದೆವು. ನಮಗೆ ಜೀವನ ಸಾಗಿಸಲು ಯಾವ ಆಸರೆಯೂ ಇರಲಿಲ್ಲ; ನಮ್ಮ ತೊಂದರೆಗಳಿಂದ ನಮಗೆ ಮುಕ್ತಿಯೇ ಇರಲಿಲ್ಲ. ಆಗ್ಗೆ ನನಗಿನ್ನೂ ಹದಿನಾಲ್ಕಷ್ಟೆ ವಯಸ್ಸು. ಆಗಲೇ ಅನ್ನ ಫ್ಯೋದೊರೊವ್ನ ಮೊದಲ ಬಾರಿಗೆ ನಮ್ಮನ್ನು ಕಾಣಲು ಬಂದುದು. ತಾನು ಯಾವುದೋ ರೀತಿಯ ಒಬ್ಬ ಭೂಮಾಲೀಕಿ ಎಂದೂ, ನಮಗೆ ಬಂಧುವಾಗಬೇಕೆಂದೂ ಒತ್ತಿ ಒತ್ತಿ ಹೇಳಿದಳು. ಅವಳು ನಮಗೆ ಬಂಧುವೇನೋ ಆಗಬೇಕು, ಆದರೆ ಅತಿದೂರದ ಸಂಬಂಧವಷ್ಟೆ, ಎಂದು ಅಮ್ಮನೂ ಹೇಳಿದಳು. ಅಪ್ಪ ಬದುಕಿದ್ದಾಗ ಅವಳೆಂದೂ ನಮ್ಮನ್ನು ಕಾಣಲು ಬಂದಿರಲಿಲ್ಲ. ಈಗ ಕಣ್ಣೀರು ಕರೆಯುತ್ತ ಬಂದಳು ನಮ್ಮ ಬಳಿಗೆ, ನಮಗಾಗಿದ್ದ ನಷ್ಟದ ಬಗೆಗೂ ನಮ್ಮ ದರಿದ್ರಾವಸ್ಥೆಯ ಬಗೆಗೂ ಸಂತೈಸುವ ಮಾತುಗಳನ್ನಾಡಿದಳು. ಅದಕ್ಕೆಲ್ಲ ಅಪ್ಪನೇ ಕಾರಣನಾಗಿದ್ದನೆಂದೂ ಹೇಳಿದಳು. ಅವನು ತನ್ನ ಮಿತಿಗೂ ಮೀರಿ ವೆಚ್ಚ ಮಾಡುತ್ತಿದ್ದ, ತುಂಬ ಎತ್ತರಕ್ಕೆ ಹತ್ತಿ ಹೋಗಬಯಸಿದ್ದ, ಅತಿ ಆತ್ಮವಿಶ್ವಾಸ ಹೊಂದಿದ್ದ, ಎಂದೆಲ್ಲ ಆರೋಪಿಸಿದಳು. ತಾನು ನಮ್ಮೊಂದಿಗೆ ಸ್ನೇಹದಿಂದಿರಲು ಬಯಸುವುದಾಗಿ ಹೇಳಿದಳು, ಹಿಂದಿನದನ್ನೆಲ್ಲ ಮರೆತು ಬಿಡಬೇಕೆಂದು ಸಲಹೆ ಮಾಡಿದಳು. ಅಮ್ಮನು ತಾನು ಅವಳ ಬಗೆಗೆ ಎಂದೂ ವೈರಭಾವ ತಳೆದಿದ್ದುದಿಲ್ಲವೆಂದು ಹೇಳಿದಾಗ ಅವಳು ಅತ್ತಳು. ಆಮೇಲೆ ಅವಳು ಅಮ್ಮನನ್ನು ಚರ್ಚಿಗೆ ಕರೆದುಕೊಂಡು ಹೋಗಿ ಮೃತನ (ಹಾಗೆಂದೇ ಅವಳು ನನ್ನ ತಂದೆಯನ್ನು ಕರೆಯುತ್ತಿದ್ದುದು) ಆತ್ಮಶಾಂತಿಗಾಗಿ ಶ್ರಾದ್ಧ ಸಂಸ್ಕಾರವನ್ನು ಏರ್ಪಡಿಸಿದಳು. ಹೀಗೆ ನಾವು ರಾಜಿಯಾದೆವು.

ನಮ್ಮ ದುಸ್ಥಿತಿಯ ಬಗೆಗೆ, ಸಂಪೂರ್ಣವಾಗಿ ಒಂಟಿಯಾಗಿರುವುದರ ಬಗೆಗೆ, ನಿಸ್ಸಹಾಯಕರಾಗಿ ಹತಾಶರಾಗಿ ಇರುವುದರ ಬಗೆಗೆ ಅವಳು ಉತ್ಪ್ರೇಕ್ಷೆಮಾಡಿ ಪದೇಪದೇ ಒತ್ತಿ ತಿಳಿಸುತ್ತ, ದೀರ್ಘ ಪೂರ್ವಪೀಠಿಕೆಯನಂತರ, ತನ್ನಲ್ಲಿ ಆಶ್ರಯ ಪಡೆದುಕೊಳ್ಳಬೇಕೆಂದು (ಅವಳು ಹಾಗೆಯೇ ಹೇಳಿದ್ದು) ನಮ್ಮನ್ನು ಆಹ್ವಾನಿ ಸಿದಳು. ಈ ಆಹ್ವಾನಕ್ಕೆ ಅಮ್ಮ ಅವಳಿಗೆ ವಂದಿಸಿದಳು, ಆದರೆ ಅದನ್ನು ಒಪ್ಪಿ ಕೊಳ್ಳಬೇಕೇ ಬಿಡಬೇಕೇ ಎಂಬ ಬಗೆಗೆ ತುಂಬ ಕಾಲ ನಿರ್ಧರಿಸದಾದಳು. ಆದರೆ ಬೇರೆ ದಾರಿಯೇ ಇರಲಿಲ್ಲವಾದುದರಿಂದ, ಬೇರೆ ಏನು ಮಾಡಲೂ ನಮ್ಮ ಕೈಲಾ ಗದಿದ್ದುದರಿಂದ, ಅವಳು ಕೊನೆಗೆ ಅನ್ನ ಫ್ಯೋದೊರೊವ್ನಳಿಗೆ ನಾವು ಅವಳ ಆಹ್ವಾನವನ್ನು ಕೃತಜ್ಞತೆಯಿಂದ ಒಪ್ಪಿಕೊಳ್ಳುವುದಾಗಿ ಹೇಳಿದಳು. ಪೀಟರ್ಸ್

ಬರ್ಗ್ ಸೈಡ್‌ನಿಂದ ವಸೀಲೆವ್‌ಸ್ಕಿ ಐಲೆಂಡ್‌ಗೆ ನಮ್ಮ ವಾಸ ಬದಲಿಸಿದ ಆ ಪ್ರಾತಃ ಕಾಲವನ್ನು ನಾನು ಎಷ್ಟು ಚೆನ್ನಾಗಿ ನೆನಪಿನಲ್ಲಿಟ್ಟಿದ್ದೇನೆ. ಅದೊಂದು ಲವಲವಿಕೆ ಹುಟ್ಟಿಸುವ ತಿಳಿ ಆಗಸದ ಶರದೃತುವಿನ ಬೆಳಗಾಗಿದ್ದಿತು. ಅಮ್ಮ ಅಳುತ್ತಿದ್ದಳು. ನಾನೂ ವಿಪರೀತ ದುಃಖದಿಂದ ಕೂಡಿದ್ದೆ. ಅಸ್ಪಷ್ಟ ಅಶುಭ ಸೂಚನೆಗಳಿಂದ ನನ್ನ ಹೃದಯ ಭಾರವಾಗಿತ್ತು. ಅದು ಕಷ್ಟದ ಕಾಲವಾಗಿತ್ತು...

## II

ಮೊದಮೊದಲು, ಆನ್ನ ಫ್ಯೋದೊರೊವ್ನಳೊಂದಿಗೆ ಜೀವನ ಅಭ್ಯಾಸ ವಾಗುವ ಮುನ್ನ, ನಮಗೆ ಅದು ವಿಚಿತ್ರವಾಗಿ, ಹೇಗೋ ಭೀತಿಕಾರಕವಾಗಿ ಕಂಡುಬಂದಿತು. ಆರನೇ ಬೀದಿಯಲ್ಲಿದ್ದ ಆನ್ನ ಫ್ಯೋದೊರೊವ್ನಳ ಮನೆಯು ಅವಳ ಸ್ವಂತ ಆಸ್ತಿಯಾಗಿದ್ದಿತು. ಅಲ್ಲಿ ಐದು ಕೋಣೆಗಳಿದ್ದವು. ಮೂರು ಕೋಣೆ ಗಳನ್ನು ಆನ್ನ ಫ್ಯೋದೊರೊವ್ನ ಮತ್ತು ನನ್ನ ಸೋದರಸಂಬಂಧಿ ಸಾಷ ಉಪಯೋ ಗಿಸುತ್ತಿದ್ದರು. ಸಾಷ ಒಬ್ಬ ಅನಾಥ ಬಾಲಕಿ. ಆನ್ನ ಫ್ಯೋದೊರೊವ್ನ ಅವಳನ್ನು ಸಾಕುತ್ತಿದ್ದಳು. ನಾಲ್ಕನೆಯ ಕೋಣೆಯನ್ನು ಅಮ್ಮನಿಗೂ ನನಗೂ ನೀಡಲಾ ಯಿತು. ಐದನೆಯ ಕೋಣೆಯನ್ನು ಪಕ್ರೋವ್‌ಸ್ಕಿ ಎಂಬ ಒಬ್ಬ ಬಡ ವಿದ್ಯಾರ್ಥಿ ಯೊಬ್ಬನಿಗೆ ಬಾಡಿಗೆಗೆ ಕೊಡಲಾಗಿದ್ದಿತು. ಆನ್ನ ಫ್ಯೋದೊರೊವ್ನಳು ಮೊದಲ ನೋಟಕ್ಕೆ ಕಂಡುಬರುವುದಕ್ಕಿಂತ ಹೆಚ್ಚು ಶ್ರೀಮಂತಳಾಗಿದ್ದಳು. ಆದರೆ ಅವಳ ವರಮಾನದ ಆಕರವು ಅವಳ ವೃತ್ತಿಯಷ್ಟೇ ರಹಸ್ಯಗರ್ಭಿತವಾಗಿದ್ದಿತು. ಅವಳು ಒಂದು ನಿಮಿಷವೂ ಸುಮ್ಮನೆ ಕುಳಿತಿರುತ್ತಿರಲಿಲ್ಲ. ಯಾವಾಗಲೂ ಕಾರ್ಯ ನಿರತಳಾಗಿರುತ್ತಿದ್ದಳು. ದಿನದಲ್ಲಿ ಅನೇಕ ಬಾರಿ ಮನೆ ಬಿಟ್ಟು ಹೋಗುತ್ತಿದ್ದಳು. ಆದರೆ ಅವಳು ಯಾವ ಕಾರ್ಯದಲ್ಲಿ ನಿರತಳಾಗಿದ್ದಳು ಎಂಬುದು ನನ್ನ ಊಹೆಗೂ ಮೀರಿದುದಾಗಿತ್ತು. ಅವಳ ಬಗೆಬಗೆಯ ಅಸಂಖ್ಯಾತ ಪರಿಚಯಸ್ಥರು ಸತತವಾಗಿ ಬಂದು ಹೋಗುತ್ತಿದ್ದರು. ಅವರು ಯಾರೋ – ದೇವರಿಗೇ ಗೊತ್ತು. ಯಾವಾ ಗಲೂ ಕೆಲಸದ ಮೇಲೆ ಬರುತ್ತಿದ್ದರು, ಒಂದೇ ಒಂದು ನಿಮಿಷವೋ ಏನೋ ಇರು ತ್ತಿದ್ದರು. ಬಾಗಿಲ ಕರೆಗಂಟೆ ಸದ್ದಾದಾಗಲೆಲ್ಲ ಅಮ್ಮ ನನ್ನನ್ನು ನಮ್ಮ ಕೋಣೆ ಯೊಳಕ್ಕೆ ಕರೆಯುತ್ತಿದ್ದಳು. ಅದು ಆನ್ನ ಫ್ಯೋದೊರೊವ್ನಳನ್ನು ತುಂಬ ಕೋಪ ಗೊಳ್ಳುವಂತೆ ಮಾಡುತ್ತಿತ್ತು. ಅವಳು ಅಮ್ಮನ ಮೇಲೆ ಸಿಡಿಮಿಡಿಗೊಳ್ಳುತ್ತಿದ್ದಳು, ನಮಗೆ ಅತಿ ಹೆಮ್ಮೆ, ಯೋಗ್ಯತೆಗೂ ಮೀರಿದ ಹೆಮ್ಮೆ ಎಂದು ಹೇಳುತ್ತಿದ್ದಳು. ಅಷ್ಟು ಹೆಮ್ಮೆಯಿಂದಿರುವುದಕ್ಕೆ ನಮಗೆ ಯಾವ ಆಧಾರವಿದ್ದಿತು, ಎನ್ನುತ್ತಿದ್ದಳು. ಇದೇ ರೀತಿ ಗಂಟೆಗಂಟೆಗಟ್ಟಲೆ ವಟಗುಟ್ಟುತ್ತಿದ್ದಳು. ಅವಳ ನಿಂದನೆಯ ಅರ್ಥ

ವೇನೆಂಬುದನ್ನು ನಾನು ಆಗ ತಿಳಿಯದಾಗಿದ್ದೆ. ಅಮ್ಮನು ಅನ್ನ ಫ್ಯೋದೊರೊವ್ನಳ ಮನೆಗೆ ವಾಸ ಬದಲಿಸಲು ಏಕೆ ಅಷ್ಟು ಹಿಂಜರಿಯುತ್ತಿದ್ದಳೆಂಬುದನ್ನು ನಾನು ಈಗಷ್ಟೆ ಮನಗಂಡಿದ್ದೇನೆ. ಅಥವ ಕೊನೇ ಪಕ್ಷ ಊಹಿಸಿಕೊಳ್ಳಬಲ್ಲೆ. ಅನ್ನ ಫ್ಯೋದೊರೊವ್ನ ಒಬ್ಬ ದುಷ್ಟ ಹೆಂಗಸಾಗಿದ್ದಳು. ನಮ್ಮನ್ನು ಸತತವಾಗಿ ಪೀಡಿಸುತ್ತಿದ್ದಳು. ಅವಳು ನಮ್ಮನ್ನು ತನ್ನಲ್ಲಿ ವಾಸವಾಗಿರುವಂತೆ ಏಕೆ ಆಹ್ವಾನಿಸಿದಳೋ ಅದಿನ್ನೂ ನನಗೆ ರಹಸ್ಯವಾಗಿಯೇ ಉಳಿದಿದೆ. ಅವಳು ಮೊದಲು ನಮ್ಮ ಬಗೆಗೆ ಕರುಣೆಯಿಂದಲೇ ಕೂಡಿದ್ದಳೆನ್ನಬೇಕು – ಅದು ಅವಳ ನಿಜ ಸ್ವರೂಪ ತೋರಿಸುವುದಕ್ಕೆ ಮುನ್ನ, ನಾವು ಸಂಪೂರ್ಣವಾಗಿ ನಿಸ್ಸಹಾಯಕರಾಗಿದ್ದೆವು, ಎಲ್ಲಿಗೆ ಹೋಗಲೂ ನಮಗೆ ನಿಜಕ್ಕೂ ಎಡೆಯಿರಲಿಲ್ಲ, ಎಂದು ಅವಳು ಕಂಡುಕೊಳ್ಳುವುದಕ್ಕೆ ಮುನ್ನ. ಅನಂತರ ಅವಳು ಮತ್ತೆ ನನ್ನ ಬಗೆಗೆ ಕರುಣೆ ತೋರಿದಳು. ತುಂಬ ಆತ್ಮೀಯತೆ ತೋರಿ ಹೊಗಳುವವರೆಗೂ ಹೋದಳು. ಆದರೆ ಮೊದಮೊದಲು ನಾನೂ ನನ್ನ ಅಮ್ಮನಿಗಿಂತ ಕಮ್ಮಿ ಏನೂ ಇಲ್ಲದಂತೆ ಸಂಕಟ ಅನುಭವಿಸಬೇಕಾಗಿದ್ದಿತು. ಅವಳು ಮತ್ತೆ ಮತ್ತೆ ನಮಗೆ ತನ್ನ ಔದಾರ್ಯದ ನೆನಪು ಮಾಡಿಕೊಡುತ್ತಿದ್ದಳು, ದಿನದಲ್ಲಿ ಪ್ರತಿ ನಿಮಿಷವೂ ನಮ್ಮನ್ನು ನಿಂದಿಸುತ್ತಿದ್ದಳು. ಹೊರಗಿನವರಿಗೆ ನಮ್ಮನ್ನು ಅನಾಥರಾದ ಬಡ ಬಂಧುಗಳೆಂದು ಪರಿಚಯ ಮಾಡಿಕೊಡುತ್ತಿದ್ದಳು, ಕ್ರಿಶ್ಚಿಯನ್ ಅನುಕಂಪದಿಂದಾಗಿ ತಾನು ಆಶ್ರಯ ನೀಡಿರುವುದಾಗಿ ತಿಳಿಸುತ್ತಿದ್ದಳು. ಊಟಕ್ಕೆ ಕುಳಿತಾಗ ನಾವು ಬಾಯಿಗೆ ಹಾಕಿಕೊಂಡ ಪ್ರತಿಯೊಂದು ತುತ್ತನ್ನೂ ಈರ್ಷ್ಯೆಯಿಂದ ಗಮನಿಸುತ್ತಿದ್ದಳು. ನಾವು ಕಮ್ಮಿ ತಿಂದರೂ ದೊಡ್ಡ ಗಲಾಟೆಯನ್ನೇ ಎಬ್ಬಿಸುತ್ತಿದ್ದಳು. ನಾವು ಅತಿ ಸೂಕ್ಷ್ಮರು, ಅವಳ ಮನೆಯ ಊಟೋಪಚಾರ ನಮಗೆ ಸರಿಬೀಳುತ್ತಿಲ್ಲ, ಅದಕ್ಕಿಂತ ಹೆಚ್ಚು ಉತ್ತಮವಾದುದನ್ನು ನಾವೆಂದಾದರೂ ಕಂಡು ತಿಳಿದಿದ್ದುದುಂಟೆ? ಎಂದೆಲ್ಲ ನಿಂದಿಸುತ್ತಿದ್ದಳು. ಅಪ್ಪನನ್ನು ಬಯ್ಯುವುದನ್ನಂತೂ ಅವಳು ಎಂದಿಗೂ ನಿಲ್ಲಿಸಲೇ ಇಲ್ಲ. ಅಪ್ಪನು ತನ್ನನ್ನು ಇತರರಿಗಿಂತ ಮೇಲಿರಿಸಿಕೊಳ್ಳಲು ಯತ್ನಿಸಿದ ಹಾಗಾಗಿ ಕೆಟ್ಟ ಕೊನೆ ಕಂಡ; ಅವನು ತನ್ನ ಕುಟುಂಬವನ್ನು ಭಿಕ್ಷೆ ಬೇಡುವ ಸ್ಥಿತಿಗೆ ಇಳಿಸಿದ್ದ, ಧರ್ಮಬುದ್ಧಿಯ ಬಂಧುವೊಬ್ಬಳು, ಕರುಣಾಳು ಕ್ರಿಶ್ಚಿಯನ್ ಆತ್ಮವುಳ್ಳವಳೊಬ್ಬಳು, ಅವರ ಸಹಾಯಕ್ಕೆ ಬರದಿದ್ದರೆ ಅವರು ಬೀದಿಯಲ್ಲಿ ಹಸಿವಿನಿಂದ ಅಲೆಯಬೇಕಾಗುತ್ತಿತ್ತು – ಎಂದೆಲ್ಲ ಅವಳು ಹೇಳುತ್ತಿದ್ದಳು. ಹಾಗೆ ನೋಡಿದರೆ, ಅವಳು ಹೇಳದೆ ಇದ್ದುದೇನು! ಅವಳ ಮಾತು ಕೇಳಿದರೆ ಮನಸ್ಸಿಗೆ ನೋವಾಗುವುದಕ್ಕಿಂತ ಹೆಚ್ಚಾಗಿ ಅಸಹ್ಯವಾಗುತ್ತಿದ್ದಿತು. ಅಮ್ಮ ಮೂರು ಹೊತ್ತೂ ಅಳುತ್ತಿದ್ದಳು. ಅವಳ ಆರೋಗ್ಯ ದಿನೇದಿನೇ ಕ್ಷೀಣವಾಗತೊಡಗಿತು. ಅವಳು ಸೊರಗತೊಡಗಿದ್ದಳು. ಆದರೂ ನಾವು ಬೆಳಿಗ್ಗೆಯಿಂದ ರಾತ್ರಿಯವರೆಗೆ ಕಷ್ಟಪಟ್ಟು ಕೆಲಸ

ಮಾಡುತ್ತಲೇ ಹೋದೆವು. ಹೆಚ್ಚಾಗಿ, ಇತರರ ಕೋರಿಕೆಗನುಗುಣವಾಗಿ ಹೊಲಿಗೆ ಕೆಲಸ ಮಾಡುತ್ತಿದ್ದೆವು. ಇದೂ ಅನ್ನ ಫ್ಯೋದೊರೊವ್ನಳಿಗೆ ಹಿಡಿಸಲಿಲ್ಲ. ತನ್ನ ಮನೆ 'ಫ್ಯಾಷನ್ ಅಂಗಡಿ' ಅಲ್ಲ, ಎಂದು ಹೇಳುತ್ತಲೇ ಇದ್ದಳು. ಆದರೆ ನಾವು ಕೆಲಸ ಮಾಡಲೇ ಬೇಕಿದ್ದಿತು – ನಮ್ಮ ಬಟ್ಟೆಬರೆ ಕೊಳ್ಳಲು ಮತ್ತು ಅನಿರೀಕ್ಷಿತ ಖರ್ಚುಗಳಿಗಾಗಿ. ನಮ್ಮ ಹತ್ತಿರ ನಮ್ಮದೇ ಸ್ವಲ್ಪ ಹಣ ಇಟ್ಟುಕೊಂಡಿರುವುದೂ ಅಗತ್ಯವಾಗಿದ್ದಿತು. ಅಲ್ಲದೆ ಬೇರೆ ಸ್ಥಳಕ್ಕೆ ವಾಸ ಹೋಗುವ ಆಸೆ ಇಟ್ಟುಕೊಂಡು ನಾವು ಹಣ ಕೂಡಿಡಲು ಯತ್ನಿಸುತ್ತಿದ್ದೆವು. ಆದರೆ ಈ ಕೆಲಸ ನನ್ನ ಅಮ್ಮನ ಅಳಿದುಳಿದ ಆರೋಗ್ಯವನ್ನೂ ಕಬಳಿಸಿತು. ಅವಳು ದಿನ ದಿನಕ್ಕೆ ದುರ್ಬಲಳಾದಳು. ರೋಗ ಅವಳ ಜೀವವನ್ನೇ ಹೀರುತ್ತಿದ್ದಿತು. ಒಂದು ಬಹುಮಟ್ಟಿಗೆ ಇನ್ನೊಂದ ರಂತೆಯೇ ಇರುವ ವಾರಗಳು ಉರುಳಿದಂತೆ ನಾನು ಇದೆಲ್ಲವನ್ನೂ ಅನುಭವಿಸಿ ಕಂಡೆ, ಕಣ್ಣಾರೆ ಕಂಡೆ.

ನಾವು ಸ್ವಲ್ಪವೂ ಸದ್ದುಗದ್ದಲವಿಲ್ಲದೆ ವಾಸಿಸುತ್ತಿದ್ದೆವು, ನಾವು ರಾಜಧಾನಿ ಯಲ್ಲಲ್ಲ ಆದರೆ ಹಳ್ಳಿಯಲ್ಲಿ ವಾಸಿಸುತ್ತಿದ್ದೇವೇನೋ ಎಂಬಂತೆ. ಅನ್ನ ಫ್ಯೋದೊ ರೊವ್ನ ನಮ್ಮ ಮೇಲೆ ಪಡೆದುಕೊಂಡ ಪ್ರಾಬಲ್ಯವನ್ನು ಮನಗಂಡಂತೆ ಕ್ರಮೇಣ ಶಾಂತಗೊಳ್ಳತೊಡಗಿದಳು. ಏನೇ ಆಗಲಿ ಯಾರೂ ಅವಳಿಗೆ ಪ್ರತಿ ಹೇಳುವ ಕನಸು ಕೂಡ ಕಾಣುತ್ತಿರಲಿಲ್ಲ. ಅವಳ ಕೋಣೆಗಳಿಗೂ ನಮ್ಮ ಕೋಣೆಗೂ ಮಧ್ಯೆ ಮೊಗಸಾಲೆ ಇದ್ದಿತು. ಆದರೆ ನಾನಾಗಲೇ ಹೇಳಿದಂತೆ, ನಮ್ಮ ಕೋಣೆಯು ಪಕ್ಕದ ಕೋಣೆಯಲ್ಲಿ ಪಕ್ರೋವ್‌ಸ್ಕಿ ವಾಸಿಸುತ್ತಿದ್ದ. ಸಾಷಳಿಗೆ ಫ್ರೆಂಚ್ ಹಾಗೂ ಜರ್ಮನ್ ಭಾಷೆಗಳಲ್ಲಿ, ಭೂಗೋಳ ಮತ್ತು ಚರಿತ್ರೆಯಲ್ಲಿ, ಅನ್ನ ಫ್ಯೋದೊರೊವ್ನ ಹೇಳಿ ದಂತೆ ಎಲ್ಲ ವಿಜ್ಞಾನಗಳಲ್ಲಿ, ಪಾಠ ಹೇಳಿಕೊಡುವುದಕ್ಕೆ ಪ್ರತಿಯಾಗಿ ಪಕ್ರೋವ್‌ಸ್ಕಿ ಅವರ ಮನೆಯಲ್ಲಿ ಉಚಿತ ವಾಸ ಹಾಗೂ ಊಟ ಪಡೆಯುತ್ತಿದ್ದ. ಆಗ್ಗೆ ಹದಿಮೂರು ವರ್ಷದವಳಾಗಿದ್ದ ಸಾಷ ಒಂದು ರೀತಿಯ ತುಂಟಿಯಾಗಿದ್ದರೂ, ಚುರುಕು ಬುದ್ಧಿಯವಳಾಗಿದ್ದಳು. ಶಾಲೆಯಲ್ಲಿ ನನ್ನ ಶಿಕ್ಷಣವೂ ನಿರ್ಲಕ್ಷಿಸಲ್ಪಟ್ಟಿದ್ದುದರಿಂದ ನಾನೂ ಪಾಠ ಹೇಳಿಸಿಕೊಂಡರೆ ತೊಂದರೆಯನ್ನೇನೂ ಮಾಡದೆಂದು ಒಮ್ಮೆ ಅನ್ನ ಫ್ಯೋದೊರೊವ್ನಳೇ ಯಾವುದೋ ಮಾತಿಗೆ ಹೇಳಿದಾಗ, ನನ್ನ ಅಮ್ಮ ಅದಕ್ಕೆ ಸಂತೋಷದಿಂದ ಒಪ್ಪಿಕೊಂಡಳು. ನಾನೂ ಸಾಷಳನ್ನು ಕೂಡಿಕೊಂಡೆ. ಪಕ್ರೋವ್‌ಸ್ಕಿ ನಮ್ಮಿಬ್ಬರಿಗೂ ಒಂದು ವರ್ಷ ಪಾಠ ಹೇಳಿದರು.

ನಮ್ಮ ಅಧ್ಯಾಪಕರು ಒಬ್ಬ ಬಡವರಾದ, ತುಂಬ ಬಡವರಾದ, ಯುವಕ ರಾಗಿದ್ದರು. ಅವರ ಆರೋಗ್ಯ ಅಷ್ಟು ಚೆನ್ನಾಗಿರಲಿಲ್ಲ. ಆದ್ದರಿಂದ ಅವರು ಯಾವುದೇ ಶಿಕ್ಷಣ ಸಂಸ್ಥೆಯಲ್ಲೂ ಕ್ರಮಬದ್ಧ ವ್ಯಾಸಂಗ ನಡೆಸದಾಗಿದ್ದರು. ಅಭ್ಯಾಸಬಲ ದಿಂದಷ್ಟೆ ಅವರನ್ನು ವಿದ್ಯಾರ್ಥಿ ಎಂದು ಕರೆಯಲಾಗುತ್ತಿದ್ದಿತು. ಅವರು ಎಷ್ಟು

ಸೌಮ್ಯವಾಗಿ ನಿಶ್ಶಬ್ದವಾಗಿ ವಾಸಿಸುತ್ತಿದ್ದರೆಂದರೆ ನಾವು ಅವರ ಕೋಣೆ ಯಿಂದ ಎಂದೂ ಒಂದು ಸಣ್ಣ ಸದ್ದನ್ನೂ ಕೇಳುತ್ತಿರಲಿಲ್ಲ. ಅವರು ವಿಚಿತ್ರ ವ್ಯಕ್ತಿ ಎನ್ನುವಂತೆಯೂ ಕಾಣುತ್ತಿದ್ದರು. ಅವರು ಎಷ್ಟು ವಕ್ರವಕ್ರವಾಗಿ ನಡೆದಾ ಡುತ್ತಿದ್ದರೆಂದರೆ, ಎಷ್ಟು ಒಡ್ಡೊಡ್ಡಾಗಿ ಬಾಗಿ ನಮಸ್ಕರಿಸುತ್ತಿದ್ದರೆಂದರೆ, ಎಂಥ ವಿಚಿತ್ರ ರೀತಿಯಲ್ಲಿ ಮಾತನಾಡುತ್ತಿದ್ದರೆಂದರೆ, ಮೊದಲು ನಾನು ಅವರನ್ನು ಕಂಡು ನಗದಿರುವುದೇ ಕಷ್ಟವಾಗುತ್ತಿತ್ತು. ಸಾಷ ಯಾವಾಗಲೂ, ಅದರಲ್ಲೂ ವಿಶೇಷವಾಗಿ ಪಾಠದ ವೇಳೆಯಲ್ಲಿ, ಅವರಿಗೆ ಸಂಬಂಧಿಸಿ ಕುಚೇಷ್ಟೆ ಮಾಡುತ್ತಿ ದ್ದಳು. ಅವರಿಗೆ ಸಹನೆ ಕಮ್ಮಿ. ಯಾವುದೇ ಸಣ್ಣ ಪ್ರಸಂಗವೂ ಅವರನ್ನು ಕೆರಳಿ ಸುತ್ತಿತ್ತು. ಅವರು ಕೂಗಾಡುತ್ತಿದ್ದರು, ಪಾಠ ಮುಗಿಯುವ ಮುನ್ನವೇ ಕೋಣೆ ಯಿಂದ ಹೊರಗೆ ಹೋಗುತ್ತಿದ್ದರು, ಅನ್ನ ಫ್ಯೋದೊರೊವ್ನಳಿಗೆ ದೂರು ಹೇಳುತ್ತಿದ್ದರು. ತಮ್ಮ ಕೋಣೆಯಲ್ಲಿ ಇಡೀ ದಿನ ಒಬ್ಬರೇ ಪುಸ್ತಕಗಳನ್ನು ಓದುತ್ತ ಕುಳಿತಿರುತ್ತಿದ್ದರು. ಅವರ ಬಳಿ ತುಂಬ ಪುಸ್ತಕಗಳಿದ್ದವು. ಎಲ್ಲ ಅಪರೂಪದವು, ಬಹಳ ಬೆಲೆಯುವು. ಅವರು ಇತರ ಕೆಲವು ಕಡೆಗಳಲ್ಲೂ ಪಾಠ ಹೇಳಿಕೊಡು ತ್ತಿದ್ದರು. ಹಾಗೆ ಸ್ವಲ್ಪ ಹಣ ಸಂಪಾದಿಸುತ್ತಿದ್ದರು. ಹಣ ಬಂದ ಕೂಡಲೇ ಇನ್ನಷ್ಟು ಮತ್ತಷ್ಟು ಪುಸ್ತಕ ಕೊಳ್ಳುತ್ತಿದ್ದರು.

ಕಾಲ ಕಳೆದಂತೆ ನಾನು ಅವರನ್ನು ಹೆಚ್ಚು ಉತ್ತಮವಾಗಿ ಅರ್ಥಮಾಡಿ ಕೊಳ್ಳತೊಡಗಿದೆ. ನಾನು ಹಿಂದೆಂದೂ ಸಂಧಿಸದಿದ್ದಂಥ ಅತ್ಯುತ್ತಮರಾದ ಅತ್ಯಂತ ಕರುಣಾಳುವಾದ ವ್ಯಕ್ತಿಯಾಗಿದ್ದರು ಅವರು. ಅಮ್ಮನೂ ಅವರ ಬಗೆಗೆ ಬಹು ಗೌರವದ ಭಾವನೆ ಹೊಂದಿದ್ದಳು. ಆಮೇಲೆ ನನ್ನ ತಾಯಿಯನ್ನು ಬಿಟ್ಟರೆ, ಅವರೇ ನನ್ನ ಅತ್ಯುತ್ತಮ ಮಿತ್ರರಾದರು.

ಆದರೆ ಮೊದಮೊದಲು ನಾನೂ ಸಾಷಳಿಗಿಂತ ದೊಡ್ಡವಳಾಗಿದ್ದರೂ, ಅವಳೊಂದಿಗೆ ಕೂಡಿಕೊಂಡು ಚೇಷ್ಟೆ ಮಾಡುತ್ತಿದ್ದೆ. ಅವರನ್ನು ಚೆನ್ನಾಗಿ ರೇಗಿಸಲು ತಾಳ್ಮೆ ಕಳೆದುಕೊಳ್ಳುವಂತೆ ಮಾಡಲು ಏನು ಮಾಡಿದರೆ ಚೆನ್ನ ಎಂದು ಗಂಟೆ ಗಟ್ಟಲೆ ನಾವಿಬ್ಬರೂ ಕಲೆತು ಯೋಚಿಸುತ್ತಿದ್ದೆವು. ಕೋಪಗೊಂಡಾಗ ಅವರು ಎಷ್ಟು ಅಸಂಗತವಾಗಿ ವರ್ತಿಸುತ್ತಿದ್ದರೆಂದರೆ ಅದು ನಮ್ಮನ್ನು ವಿನೋದಗೊಳಿ ಸುತ್ತಿದ್ದಿತು (ಅದರ ಬಗೆಗೆ ಈಗ ಯೋಚಿಸಲೂ ನನಗೆ ನಾಚಿಕೆಯಾಗುತ್ತದೆ). ಒಮ್ಮೆ ನಾವು ನಮ್ಮ ಕುಚೇಷ್ಟೆಗಳಿಂದ ಅವರನ್ನು ಅಳುವಂತೆ ಮಾಡಿದಾಗ ಅವರು "ಎಂಥ ಕ್ರೂರ ಮಕ್ಕಳು!" ಎಂದು ಮಣಗುಟ್ಟಿದುದನ್ನು ನಾನು ಕೇಳಿದೆ. ಅಂದಿನಿಂದ ನನ್ನಲ್ಲಿ ಇದ್ದಕ್ಕಿದ್ದಂತೆ ಬದಲಾವಣೆಯಾಯಿತು. ನಾನು ನನ್ನ ಬಗೆಗೇ ನಾಚಿಕೆ ಪಟ್ಟುಕೊಂಡೆ, ಅವರ ಬಗೆಗೆ ದುಃಖವಾಯಿತು. ವಿಪರೀತವಾಗಿ ನಾಚುತ್ತ, ನಾನೇ ಬಹುಮಟ್ಟಿಗೆ ಕಣ್ಣೀರು ಸುರಿಸುತ್ತ, ನಮ್ಮ ವರ್ತನೆಯನ್ನು ಹೆಚ್ಚಿಗೆ

ಮನಸ್ಸಿಗೆ ಹಚ್ಚಿಕೊಳ್ಳಬಾರದೆಂದೂ, ನಮ್ಮ ಮೂರ್ಖ ಚೇಷ್ಟೆಗಳಿಂದ ಕೋಪಗೊಳ್ಳಬಾರದೆಂದೂ ಅವರನ್ನು ಬೇಡಿಕೊಂಡೆ. ಆದರೆ ಅವರು ಪುಸ್ತಕ ಮುಚ್ಚಿ ಪಾಠ ಮುಗಿಸದೆಯೇ ಕೋಣೆಯಿಂದ ಹೊರಟು ಹೋದರು. ಅಂದು ಇಡೀ ದಿನ ನಾನು ದುಃಖದಿಂದ ಪರಿತಪಿಸಿದೆ, ನಾವು ಮಕ್ಕಳು ಅವರ ಕಣ್ಣಲ್ಲಿ ನೀರು ತರಿಸಿದೆವಲ್ಲ ಎಂಬ ಯೋಚನೆಯನ್ನು ನಾನು ಸಹಿಸಿಕೊಳ್ಳದಾದೆ. ಅವರು ಅಳಬೇಕೆಂದು ನಾವು ನಿರೀಕ್ಷಿಸಲಿಲ್ಲವೇ? ಅವರು ಅಳಬೇಕೆಂದು ನಾವು ಇಚ್ಛಿಸಲಿಲ್ಲವೇ? ಹಾಗೆ, ನಾವು ಇಬ್ಬರು ಮಕ್ಕಳು ಬಡವರಾದ ದುಃಖಭರಿತರಾದ ಆ ವ್ಯಕ್ತಿಗೆ ಅವರ ಅವಸ್ಥೆ ಏನೆಂಬುದನ್ನು ನೆನಪು ಮಾಡಿಕೊಟ್ಟಿದ್ದೆವಲ್ಲವೇ? ಅಂದು ರಾತ್ರಿ ನನಗೆ ನಿದ್ರೆಯೇ ಬರಲಿಲ್ಲ. ನನ್ನ ಬಗೆಗೇ ನಾನು ಅಷ್ಟು ವ್ಯಗ್ರಗೊಂಡಿದ್ದೆ, ಅಷ್ಟು ವ್ಯಸನಾಕ್ರಾಂತಳಾಗಿದ್ದೆ, ದುಃಖಿತಳಾಗಿದ್ದೆ. ದುಃಖವು ಹೃದಯವನ್ನು ಹಗುರ ಮಾಡುತ್ತದೆಂದು ಹೇಳಲಾಗುತ್ತೆ. ಆದರೆ ಅದು ಎಂಥ ಅಬದ್ಧ ! ಅದು ಹೇಗೋ, ನನ್ನ ದುಃಖದ ಜೊತೆಗೆ ಜಂಭವೂ ಬೆರೆತಿತ್ತು. ಅವರು ನನ್ನನ್ನು ಮಗುವೆಂದು ಭಾವಿಸಬಾರದೆಂದು ನಾನು ಬಯಸಿದ್ದೆ; ಆಗ ನನಗಾಗಲೇ ಹದಿನೈದು ವರ್ಷ ವಯಸ್ಸಾಗಿತ್ತು.

ಅಂದಿನಿಂದ ಪಕ್ರೋವ್‌ಸ್ಕಿಯವರು ನನ್ನ ಬಗೆಗೆ ತಮ್ಮ ಅಭಿಪ್ರಾಯವನ್ನು ಬದಲಿಸುವಂತೆ ಮಾಡಬೇಕೆಂದು ಸಾವಿರಾರು ಯೋಜನೆಗಳನ್ನು ಚಿಂತಿಸುತ್ತ ನನ್ನ ಕಲ್ಪನೆಗೆ ಕಾಟ ಕೊಟ್ಟೆ. ಆದರೆ ನಾನಾಗ ತುಂಬ ನಾಚುತ್ತಿದ್ದೆ, ಅಂಜುತ್ತಿದ್ದೆ, ಮನಸ್ಸಿನಲ್ಲಿ ಅಸ್ಪಷ್ಟ ಕನಸುಗಳನ್ನು ಬಿಟ್ಟು(ಅದೂ ಎಂಥ ಕನಸುಗಳಾಗಿದ್ದವು ಅವು !) ಯಾವುದೇ ಸ್ಪಷ್ಟ ವಿಚಾರ ಹೊಂದಿರದಾಗಿದ್ದೆ. ನಾನು ಮಾಡಿದುದೆಲ್ಲ, ಸಾಪಳ ಚೇಷ್ಟೆಗಳಲ್ಲಿ ಪಾಲ್ಗೊಳ್ಳುವುದನ್ನು ಬಿಟ್ಟುಬಿಟ್ಟೆ, ಅವರು ನಮ್ಮ ಮೇಲೆ ಕೋಪಗೊಳ್ಳದಂತೆ ಮಾಡಿದೆ. ಆದರೆ ಇದು ನನ್ನ ಜಂಭಕ್ಕೆ ತೀರ ಅಸಮ್ಮತವಾಗಿ ಕಂಡುಬಂದಿತು.

ಈಗ, ನಾನು ಹಿಂದೆಂದೂ ತಿಳಿಯದಿದ್ದಂಥ ಅತ್ಯಂತ ಕುತೂಹಲಕಾರಿಯಾದ, ವಿಚಿತ್ರನಾದ ಹಾಗೂ ಕರುಣಾಜನಕನಾದ ವ್ಯಕ್ತಿಯೊಬ್ಬನ ಬಗೆಗೆ ಕೆಲವು ಮಾತುಗಳನ್ನು ಹೇಳಬೇಕು. ಈ ಸಂದರ್ಭದಲ್ಲಿ ನಾನು ಅವನ ವಿಷಯ ಏಕೆ ಹೇಳುತ್ತೇನೆಂದರೆ, ಇದುವರೆವಿಗೂ ನಾನು ಅವನ ಕಡೆಗೆ ಗಮನವನ್ನೇ ಕೊಟ್ಟಿರಲಿಲ್ಲ. ಅವನಿಗೆ ಸಂಬಂಧಿಸಿದ ಪ್ರತಿಯೊಂದು ವಿಷಯವೂ ನನಗೆ ಇದ್ದಕ್ಕಿದ್ದಂತೆ ಅಮಿತಾಸಕ್ತಿಯದಾದಾಗ ನಾನವನ ಕಡೆಗೆ ಗಮನ ನೀಡತೊಡಗಿದೆ.

ಆಗಾಗ್ಗೆ ನಮ್ಮ ಮನೆಗೆ ಒಬ್ಬ ಸಣ್ಣ ಆಕೃತಿಯ ಮುದುಕ ಬರುತ್ತಿದ್ದ. ಹರಕುಮುರಕು ಬಟ್ಟೆ, ನೊರೆಗೂದಲು, ವಕ್ರ ನಡಿಗೆ. ಸ್ವಲ್ಪದರಲ್ಲಿ, ಅವನು ಅತ್ಯಂತ ವಿಚಿತ್ರ ವ್ಯಕ್ತಿಯಾಗಿದ್ದ. ಅವನು ಯಾವಾಗಲೂ ಯಾವುದೋ ವಿಷಯಕ್ಕಾಗಿ ನಾಚುತ್ತಿದ್ದಂತೆ, ತನ್ನ ಬಗೆಗೇ ನಾಚುತ್ತಿದ್ದಂತ, ಕಂಡುಬರುತ್ತಿದ್ದ. ಈ ಕಾರಣ

ದಿಂದಾಗಿ ಅವನು ಯಾವಾಗಲೂ ಚಡಪಡಿಸುತ್ತಿದ್ದ, ವಿಲಿವಿಲಿ ಒದ್ದಾಡುತ್ತಿದ್ದ. ಎಷ್ಟು ವಕ್ರವಾಗಿ ವರ್ತಿಸುತ್ತಿದ್ದನೆಂದರೆ, ಅವನ ಬುದ್ಧಿ ಸ್ವಾಧೀನದಲ್ಲಿದೆಯೋ ಇಲ್ಲವೋ ಎಂದು ಆಶ್ಚರ್ಯಪಡುವಂತಾಗುತ್ತಿತ್ತು. ಮನೆಯ ಸಮೀಪ ಬಂದವನೇ, ಒಳಗೆ ಬರಲು ಅಂಜುತ್ತಿರುವನೋ ಎಂಬಂತೆ ಹೊರಗೆ ಗಾಜಿನ ಬಾಗಿಲ ಬಳಿಯೇ ನಿಲ್ಲುತ್ತಿದ್ದ. ಯಾರಾದರೂ – ನಾನೋ, ಸಾಷಳೋ ಅಥವಾ ಯಾರಾದರೂ ಕರುಣಾಳು ಸೇವಕರೋ – ಅತ್ತ ಕಡೆಗೆ ಹೋದಾಗ, ನಮ್ಮನ್ನು ಕೂಗಿ ಕರೆಯುತ್ತಿರುವವನಂತೆ ನಾನಾ ಸಂಜ್ಞೆಗಳನ್ನು ಮಾಡುತ್ತಿದ್ದ. ಮನೆಯಲ್ಲಿ ಬೇರೆ ಯಾವ ಅತಿಥಿಗಳೂ ಇಲ್ಲ, ಆತ ಒಳಗೆ ಬರಬಹುದು ಎಂಬ ಉತ್ತರ ರೂಪದ ಖಾತರಿ ದೊರೆತಾಗ, ಅವನು ತಡೆತಡೆಯುತ್ತ ಬಾಗಿಲು ತೆರೆಯುತ್ತಿದ್ದ, ಸಂತೋಷದಿಂದ ಕೈಗಳನ್ನು ಉಜ್ಜಿಕೊಳ್ಳುತ್ತ ಪಕ್ರೋವ್‌ಸ್ಕಿಯವರ ಕೋಣೆಗೆ ಮೆಟ್ಟಿಂಗಾಲಿನಲ್ಲಿ ನಡೆದು ಹೋಗುತ್ತಿದ್ದ. ಈತನೇ ಪಕ್ರೋವ್‌ಸ್ಕಿಯವರ ತಂದೆ.

ಅವನ ಇಡೀ ಕಥೆಯನ್ನು ನಾನು ಅನಂತರ ತಿಳಿದೆ. ಅವನು ಯಾವಾಗಲೋ ಎಲ್ಲೋ ಒಬ್ಬ ಕಾರಕೂನನಾಗಿ ಕೆಲಸದಲ್ಲಿದ್ದ. ಕೆಲಸದಲ್ಲಿ ಯಾವ ಕೌಶಲ್ಯವನ್ನೂ ತೋರದಿದ್ದುದರಿಂದ ಅತ್ಯಂತ ಕೆಳದರ್ಜೆಯಲ್ಲಷ್ಟೆ ಇದ್ದ. ಅವನ ಮೊದಲ ಪತ್ನಿ – ಪಕ್ರೋವ್‌ಸ್ಕಿಯ ತಾಯಿ – ತೀರಿ ಹೋದಾಗ ಅವನು ಮತ್ತೆ ಮದುವೆಯಾದ ಆದರೆ ಅವನ ಹೊಸ ಮಡದಿ ಬಂದುದೇ ಅವನ ಮನೆಯ ಪರಿಸ್ಥಿತಿ ಕೆಟ್ಟು ಹೋಗತೊಡಗಿತು. ಅವಳೊಬ್ಬ ಗಯ್ಯಾಳಿ ಹೆಂಗಸು. ಎಲ್ಲರನ್ನೂ ತನ್ನ ಅಧೀನದಲ್ಲಿಟ್ಟುಕೊಂಡಿದ್ದಳು. ಆಗ ಕಿರಿಯ ಪಕ್ರೋವ್‌ಸ್ಕಿ ಹತ್ತು ವರ್ಷದ ಬಾಲಕ. ಅವನ ಮಲತಾಯಿ ಅವನನ್ನು ದ್ವೇಷಿಸುತ್ತಿದ್ದಳು. ಆದರೆ ಸ್ವಲ್ಪ ಕಾಲದ ತರುವಾಯ ಅವನಿಗೆ ಅದೃಷ್ಟ ಒಲಿಯಿತು. ಹಿರಿಯ ಪಕ್ರೋವ್‌ಸ್ಕಿಯನ್ನು ತಿಳಿದಿದ್ದ, ಅವನಿಗೆ ಸಹಾಯ ಮಾಡುತ್ತಿದ್ದ, ಬೀಕವ್ ಎಂಬ ಭೂಮಾಲೀಕನೊಬ್ಬ ಈಗ ಕಿರಿಯ ಪಕ್ರೋವ್‌ಸ್ಕಿಗೆ ಆಶ್ರಯ ನೀಡಿ ಅವನನ್ನು ಶಾಲೆಗೆ ಕಳುಹಿಸಿಕೊಟ್ಟ. ಅವನು ಹುಡುಗನಿಗೆ ಈ ಉಪಕಾರ ಮಾಡಿದನೇಕೆಂದರೆ ಹುಡುಗನ ಗತಿಸಿದ ತಾಯಿಯನ್ನು ಅವನು ತಿಳಿದಿದ್ದ. ಆನ್ನ ಫ್ಯೋದೊರೊವ್ನಳ ಕೃಪಾಶ್ರಯಕ್ಕೆ ಬಂದಿದ್ದ ಆ ಯುವ ಹೆಂಗಸನ್ನು ಹಿರಿಯ ಪಕ್ರೋವ್‌ಸ್ಕಿಗೆ ಮದುವೆ ಮಾಡಿ ಕೊಡಲಾಗಿತ್ತು. ಆನ್ನ ಫ್ಯೋದೊರೊವ್ನಳ ನಿಕಟ ಸ್ನೇಹಿತನಾಗಿದ್ದ ಬೀಕವ್ ಔದಾರ್ಯದಿಂದ ಈ ಯುವತಿಗೆ 5,000 ರೂಬಲ್‌ಗಳನ್ನು ಬಳುವಳಿಯಾಗಿ ಕೊಟ್ಟಿದ್ದ. ಆ ಹಣ ಏನಾಯಿತು ಯಾರಿಗೂ ತಿಳಿಯದು. ಇಷ್ಟು ಸಂಗತಿಯನ್ನು ನಾನು ಆನ್ನ ಫ್ಯೋದೊರೊವ್ನಳಿಂದ ತಿಳಿದೆ. ಕಿರಿಯ ಪಕ್ರೋವ್‌ಸ್ಕಿ ಸ್ವತಃ ತಮ್ಮ ಕುಟುಂಬ ವ್ಯವಹಾರಗಳ ಬಗೆಗೆ ಮಾತನಾಡಲು ಇಷ್ಟಪಡುತ್ತಿರಲಿಲ್ಲ. ಅವರ ತಾಯಿ ತುಂಬ ಚೆಲುವೆಯಾಗಿದ್ದಳೆಂದು ಹೇಳುತ್ತಾರೆ. ಅವಳು ಇಂತಹ ಗಂಡ

ನನ್ನು ಮದುವೆಯಾಗಲು ನಿರ್ಧರಿಸಿದುದು ನನಗೆ ವಿಚಿತ್ರವೆಂದೇ ಕಂಡುಬರುತ್ತದೆ. ಅವಳು ಎಳೆ ವಯಸ್ಸಿನಲ್ಲೇ, ಮದುವೆಯಾದನಂತರ ಕೇವಲ ನಾಲ್ಕು ವರ್ಷಗಳಲ್ಲೇ, ತೀರಿಹೋದಳು.

ಶಾಲಾಭ್ಯಾಸ ಮುಗಿಸಿದನಂತರ ಕಿರಿಯ ಪಕ್ರೋವ್‌ಸ್ಕಿ ವಿಶ್ವವಿದ್ಯಾಲಯವನ್ನು ಪ್ರವೇಶಿಸಿದರು. ಸೇಂಟ್ ಪೀಟರ್ಸ್‌ಬರ್ಗ್‌ಗೆ ಆಗಾಗ್ಗೆ ಬರುತ್ತಿದ್ದ ಮಿ. ಬೀಕವ್, ಹುಡುಗನಲ್ಲಿ ತನ್ನ ಕರುಣಾಪೂರಿತ ಆಸಕ್ತಿಯನ್ನು ತೋರಿಸುತ್ತಲೇ ಹೋದ. ಅನಾರೋಗ್ಯದ ಕಾರಣ ಕಿರಿಯ ಪಕ್ರೋವ್‌ಸ್ಕಿ ವ್ಯಾಸಂಗ ಬಿಟ್ಟು ಕೊಡಬೇಕಾಗಿ ಬಂದಾಗ ಮಿ. ಬೀಕವ್ ಅವರನ್ನು ಅನ್ನ ಫ್ಯೋದೊರೊವ್ನಳ ಬಳಿಗೆ ಕರೆತಂದ. ಅವಳು ಅವರಿಗೆ, ಸಾಷಳಿಗೆ ಪಾಠ ಹೇಳಿಕೊಡುವುದಕ್ಕೆ ಪ್ರತಿಯಾಗಿ ಉಚಿತ ಊಟ ವಸತಿ ನೀಡಿದಳು.

ಈ ಮಧ್ಯೆ ಹಿರಿಯ ಪಕ್ರೋವ್‌ಸ್ಕಿ ತನ್ನ ದ್ವಿತೀಯ ಪತ್ನಿಯಿಂದ ಎಷ್ಟು ಕಿರುಕುಳಕ್ಕೊಳಗಾದನೆಂದರೆ, ಅತ್ಯಂತ ಕೆಟ್ಟ ಚಾಳಿಗಳಿಗೆ ತನ್ನನ್ನು ಈಡು ಮಾಡಿಕೊಂಡ. ಬಹುಮಟ್ಟಿಗೆ ಸತತವಾಗಿ ಕುಡಿತದ ಅಮಲಿನಲ್ಲಿರುತ್ತಿದ್ದ. ಅವನ ಹೆಂಡತಿ ಅವನನ್ನು ಹೊಡೆಯುತ್ತಿದ್ದಳು, ಅವನನ್ನು ಅಡಿಗೆಮನೆಯಲ್ಲಿ ವಾಸಿಸುವಂತೆ ಮಾಡಿದ್ದಳು. ಅವನನ್ನು ಎಂಥ ಸ್ಥಿತಿಗೆ ಇಳಿಸಿದಳೆಂದರೆ ಅವನು ಎಲ್ಲ ರೀತಿಯ ಪೀಡನೆ ಹೊಡೆತಗಳಿಗೂ ಒಗ್ಗಿ ಹೋದ, ದೂರುವುದನ್ನೇ ಬಿಟ್ಟುಕೊಟ್ಟ. ಅವನು ಇನ್ನೂ ನಿಜಕ್ಕೂ ಮುದುಕನಾಗಿರದಿದ್ದರೂ ಅವನ ಕುಡಿತ ಅವನ ವಿವೇಕವನ್ನು ಹಾಳು ಮಾಡುವ ಭೀತಿ ಹಾಕಿದ್ದಿತು. ಅವನಲ್ಲಿ ಇನ್ನೂ ಉಳಿದಿದ್ದ ಮಾನವ ಸೌಜನ್ಯದ ಕೊನೆಯ ಗುರುತೆಂದರೆ, ಅವನು ಕಿರಿಯ ಪಕ್ರೋವ್‌ಸ್ಕಿಯ ಬಗೆಗೆ ಇರಿಸಿಕೊಂಡಿದ್ದ ವಾತ್ಸಲ್ಯನಿಷ್ಠೆ. ಕಿರಿಯ ಪಕ್ರೋವ್‌ಸ್ಕಿ ತಮ್ಮ ತಾಯಿಯ ಪ್ರತಿರೂಪವೇ ಆಗಿದ್ದರು. ಬಹುಶಃ ತನ್ನ ಸಂಭಾವಿತಳಾಗಿದ್ದ ಮೊದಲ ಪತ್ನಿಯ ನೆನಪೇ ಆ ಎದೆಗುಂದಿದ ವೃದ್ಧನಲ್ಲಿ ಈ ಉದ್ರಿಕ್ತ ವಾತ್ಸಲ್ಯವನ್ನು ಹುಟ್ಟಿಸಿದ್ದಿತೇನೋ? ಅವನು ತನ್ನ ಮಗನನ್ನು ಬಿಟ್ಟು ಬೇರಾವ ವಿಷಯವನ್ನೂ ಯೋಚಿಸದಾಗಿದ್ದ. ಅವನೊಬ್ಬನ ಬಗೆಗಷ್ಟೆ ಮಾತನಾಡುತ್ತಿದ್ದ. ವಾರಕ್ಕೆರಡು ಬಾರಿ ಅವನು ಮಗನಲ್ಲಿಗೆ ಭೇಟಿ ಕೊಡುತ್ತಿದ್ದ. ಹೆಚ್ಚು ಬಾರಿ ಬರುವ ಧೈರ್ಯ ಮಾಡದಾಗಿದ್ದ. ಈ ಎರಡು ಬಾರಿ ಬರುವುದನ್ನೂ ಕಿರಿಯ ಪಕ್ರೋವ್‌ಸ್ಕಿ ಅಸಹ್ಯಪಡುತ್ತಿದ್ದರು. ಅವರ ನ್ಯೂನತೆಗಳಲ್ಲೆಲ್ಲ ಅತ್ಯಂತ ಮಹತ್ವಾದ ನ್ಯೂನತೆ ಎಂದರೆ – ತಮ್ಮ ತಂದೆಯ ಬಗೆಗೆ ಗೌರವ ಹೊಂದಿರದಿದ್ದುದು. ಆದರೆ ಆ ಮುದುಕನೂ ಹಾಗೆಯೇ – ಕೆಲವು ವೇಳೆ ಜಗತ್ತಿನಲ್ಲೇ ಅತ್ಯಂತ ಅಸಹ್ಯಕರವಾದ ಪ್ರಾಣಿಯಂತೆ ವರ್ತಿಸುತ್ತಿದ್ದ. ಎಲ್ಲದಕ್ಕೂ ತಲೆ ಹಾಕುತ್ತಿದ್ದ. ಅವನ ಪ್ರಶ್ನೆಗಳೂ ಹರಟೆಗಳೂ ಎಲ್ಲ ತೀರ ಕ್ಷುಲ್ಲಕ ಹಾಗೂ ಅರ್ಥಹೀನ ರೀತಿಯದಾಗಿದ್ದವು. ಅವನು ಕಿರಿಯ ಪಕ್ರೋವ್‌ಸ್ಕಿಯ

ವ್ಯಾಸಂಗಕ್ಕೆ ಅಡ್ಡಿಯಾಗಿದ್ದ. ಅದೂ ಅಲ್ಲದೆ, ಕೊನೆಯದಾಗಿ, ಅವನು ಕೆಲವು ವೇಳೆ ಕುಡಿದು ಬರುತ್ತಿದ್ದ. ಮಗ ತನ್ನ ತಂದೆಯು ಈ ದುಃಶ್ಚಟವನ್ನು, ಅವನ ಅಧಿಕಪ್ರಸಂಗಿತನ ಹಾಗೂ ಹರಟೆ ಸ್ವಭಾವವನ್ನು ಹೋಗಲಾಡಿಸಲು ಯತ್ನಿಸಿದ. ಇದರ ಫಲವಾಗಿ ಆ ಮುದುಕ ಅವನನ್ನು ಒಬ್ಬ ಮಹಾಜ್ಞಾನಿಯನ್ನಾಗಿ ಭಾವಿಸತೊಡಗಿದ, ಅವನ ವಿಶೇಷ ಅಪ್ಪಣೆ ಇಲ್ಲದೆ ಬಾಯಿ ತೆರೆಯುವ ಸಾಹಸವನ್ನೂ ಮಾಡುತ್ತಿರಲಿಲ್ಲ.

ಆ ಬಡಪಾಯಿ ವೃದ್ಧ ತನ್ನ ಪ್ಯೋತ್ರ್ಯೆಂಕನನ್ನು (ಹೀಗೆಂದೇ ಅವನು ತನ್ನ ಮಗನನ್ನು ಕರೆಯುತ್ತಿದ್ದುದು) ಸಾಕಷ್ಟು ಚೆನ್ನಾಗಿ ನೋಡಲಾರದಾಗಿದ್ದ, ಕೇಳಲಾರದಾಗಿದ್ದ. ಏಕೆಂದರೆ ಮಗನನ್ನು ಕಾಣಲು ಬಂದಾಗಲೆಲ್ಲ ಮಗ ತನ್ನನ್ನು ಹೇಗೆ ಬರಮಾಡಿಕೊಳ್ಳುವನೋ ಎಂಬುದನ್ನು ಎಂದೂ ತಿಳಿಯದೆ, ಅವನು ಬಹುಮಟ್ಟಿಗೆ ಯಾವಾಗಲೂ ತಲೆ ತಗ್ಗಿಸಿಕೊಂಡೇ ಇರುತ್ತಿದ್ದ, ಮುಖದಲ್ಲಿ ಅಂಜಿಕೆಯ ಭಾವ ಹೊಂದಿರುತ್ತಿದ್ದ ಅವನು ಹೊರಗೆ ಅಲ್ಲೇ ಬಾಗಿಲ ಬಳಿ ಹಿಂದು ಮುಂದು ನೋಡುತ್ತ ನಿಂತಿರುತ್ತಿದ್ದ. ನಾನೇನಾದರೂ ಬರುವುದು ಕಂಡರೆ, ತನ್ನ ಪ್ಯೋತ್ರ್ಯೆಂಕನ ಬಗೆಗೆ ಇಡೀ ಇಪ್ಪತ್ತು ನಿಮಿಷ ನನ್ನ ಮೇಲೆ ಪ್ರಶ್ನೆಗಳ ಸುರಿಮಳೆ ಕರೆಯುತ್ತಿದ್ದ. ಅವನ ಆರೋಗ್ಯ ಹೇಗಿದೆ? ಅವನು ಯಾವ ಮನೋಸ್ಥಿತಿಯಲ್ಲಿದ್ದಾನೆ? ಏನಾದರೂ ಮುಖ್ಯವಾದ ವಿಷಯದಲ್ಲಿ ತೊಡಗಿದ್ದಾನೆಯೇ? ಹಾಗಾದರೆ ಏನದು? ಬರೆಯುತ್ತಿದ್ದಾನೋ ಅಥವಾ ಸುಮ್ಮನೆ ಯೋಚಿಸುತ್ತಿದ್ದಾನೋ? ನಾನು ಸಾಕಷ್ಟು ಉತ್ತೇಜನ ಕೊಟ್ಟು ಖಾತರಿ ನೀಡಿದ ಮೇಲೆ ಅವನು ಮನಸ್ಸು ಮಾಡಿ ಬಾಗಿಲು ತೆರೆಯುತ್ತಿದ್ದ. ಅದೂ, ಓಹ್, ಎಷ್ಟು ಎಚ್ಚರಿಕೆಯಿಂದ. ಆಮೇಲೆ ಮೆಲ್ಲಗೆ ತನ್ನ ತಲೆಯನ್ನು ಒಳ ತೂರಿಸುತ್ತಿದ್ದ. ಮಗ ಕೋಪಗೊಂಡಿಲ್ಲ, ಒಳಗೆ ಬಾ ಎಂದು ತಲೆದೂಗಿದ್ದಾನೆ ಕೂಡ, ಎಂದು ತೃಪ್ತಿಪಟ್ಟುಕೊಂಡನಂತರ ತನ್ನ ಇಡೀ ಶರೀರವನ್ನು ನಿಶ್ಶಬ್ದವಾಗಿ ಒಳಕ್ಕೆ ಒಯ್ಯುತ್ತಿದ್ದ. ತನ್ನ ಕೋಟು ಹಾಗೂ ಹ್ಯಾಟನ್ನು ತೆಗೆಯುತ್ತಿದ್ದ. ಆ ಹ್ಯಾಟೋ ಸದಾ ಸುಕ್ಕಾಗಿರುತ್ತಿತ್ತು, ತೂತುಗಳಿಂದ ತುಂಬಿತ್ತು, ಅಂಚೂ ಮುರಿದು ಹೋಗಿತ್ತು. ಆಮೇಲೆ ಅವನ್ನು ಗೂಟಕ್ಕೆ ತಗುಲಿ ಹಾಕುತ್ತಿದ್ದ ಮತ್ತು ಅಷ್ಟೇ ಎಚ್ಚರಿಕೆಯಿಂದ ಕುರ್ಚಿಯ ಮೇಲೆ ಕೂರುತ್ತಿದ್ದ. ತನ್ನ ಮಗನಲ್ಲಿ ನೆಟ್ಟ ನೋಟವನ್ನು ಎಂದೂ ಕೀಳುತ್ತಿರಲಿಲ್ಲ, ತನ್ನ ಪ್ಯೋತ್ರ್ಯೆಂಕನ ಮನೋಸ್ಥಿತಿಯನ್ನು ಸೂಕ್ಷ್ಮ ಜ್ಞಾನದಿಂದ ಊಹಿಸಿ ತಿಳಿಯುವವನಂತೆ. ಪ್ಯೋತ್ರ್ಯೆಂಕನ ಮನೋಸ್ಥಿತಿ ಚೆನ್ನಾಗಿರದಿದ್ದರೆ, ಅವನು ಕೂಡಲೇ ಅದನ್ನು ಕಂಡುಕೊಳ್ಳುತ್ತಿದ್ದ, ಸುಮ್ಮನೇ ಹೀಗೇ ಹೋಗುತ್ತಿದ್ದೆ, ಒಂದು ನಿಮಿಷ ಕೂತು ವಿಶ್ರಾಂತಿ ತೆಗೆದುಕೊಂಡು ಹೋಗೋಣ ಅಂತ ಬಂದೆ, ಎಂದು ಮಣಗುಟ್ಟುತ್ತ ಎದ್ದು ನಿಲ್ಲುತ್ತಿದ್ದ. ಆಮೇಲೆ ವಿಧೇಯತೆಯಿಂದ ತನ್ನ ಕೋಟು ಹಾಗೂ ಆ ಹರಕಲು

ಹ್ಯಾಟನ್ನು ಕೈಗೆತ್ತಿಕೊಂಡು, ಮತ್ತೆ ಎಚ್ಚರಿಕೆಯಿಂದ ಬಾಗಿಲು ತೆರೆದು, ಮುಗುಳ್ನ ಗುತ್ತ ಮೆಟ್ಟಿಂಗಾಲಿನಲ್ಲಿ ಹೊರಹೋಗುತ್ತಿದ್ದ. ತನಗಾಗಿದ್ದ ನಿರಾಶೆಯನ್ನು ಮರೆ ಮಾಚಲು ಅವನು ಮುಗುಳ್ನಗುತ್ತಿದ್ದ.

ಇದಕ್ಕೆ ವಿರುದ್ಧವಾಗಿ, ಅವನನ್ನು ಚೆನ್ನಾಗಿ ಬರಮಾಡಿಕೊಂಡಾಗ ಆ ವೃದ್ಧ ಆನಂದಪರವಶನಾಗುತ್ತಿದ್ದ. ಆಗ ಅವನ ಮುಖದ ಮೇಲಿನ ಪ್ರತಿಯೊಂದು ಸುಕ್ಕಿನಲ್ಲೂ, ಅವನ ಪ್ರತಿಯೊಂದು ಅಂಗ ಚಲನೆಯಲ್ಲೂ ಸಂತೃಪ್ತಿ ಬೆಳಗು ತ್ತಿತ್ತು. ಪ್ಯೇತ್ಯೆಂಕ ದೊಡ್ಡ ಮನಸ್ಸು ಮಾಡಿ ಅವನ ಜೊತೆ ಮಾತನಾಡಿದರೆ ಅವನು ತಕ್ಷಣವೇ ತನ್ನ ಆಸನದಿಂದ ಎದ್ದು ನಿಲ್ಲುತ್ತಿದ್ದ, ಅಡಗಿದ ದನಿಯಲ್ಲಿ ವಿಧೇಯತೆಯಿಂದ ಉತ್ತರಿಸುತ್ತಿದ್ದ. ಭಯಭಕ್ತಿಯೊಂದಿಗೆ, ಸೂಕ್ಷ್ಮಾಭಿರುಚಿಯ, ಅಂದರೆ ಅತ್ಯಂತ ಹಾಸ್ಯಾಸ್ಪದವಾದ, ಮಾತುಗಳನ್ನಾಡುತ್ತಿದ್ದ. ಅವನೇನೂ ಅಂಥ ಮಾತುಗಾರನಾಗಿರಲಿಲ್ಲ, ಪಾಪ ಯಾವಾಗಲೂ ಗೊಂದಲಕ್ಕೊಳಗಾಗುತ್ತಿದ್ದ, ನಾಚು ತ್ತಿದ್ದ, ತನ್ನ ಕೈಗಳನ್ನು ಏನು ಮಾಡಬೇಕು ತನ್ನನ್ನೇ ಹೇಗೆ ಇರಿಸಿಕೊಳ್ಳಬೇಕು ಎಂಬುದನ್ನು ತಿಳಿಯದಂತಿರುತ್ತಿದ್ದ. ತನ್ನ ಉತ್ತರಗಳನ್ನು ತಿದ್ದಲು ಕಾತುರಗೊಂಡಿ ರುವವನಂತೆ ಯಾವಾಗಲೂ ಏನನ್ನಾದರೂ ಮಣಗುಟ್ಟುತ್ತಿದ್ದ. ಅಕಸ್ಮಾತ್ತಾಗಿ ಸರಿಯಾದ ಉತ್ತರ ಹೊಳೆಯಿತೆಂದಾದರೆ ಅವನು ಎದೆ ಹಿಗ್ಗಿಸಿಕೊಂಡು ವೇಸ್‌ಕೋಟು ಟೈ ಹಾಗೂ ಹೊರ ಕೋಟನ್ನು ನೆಟ್ಟಗೆ ಮಾಡಿಕೊಂಡು ಮಹಾ ಘನತೆಯ ಬೀಗು ಬೀರುತ್ತಿದ್ದ. ಕೆಲವು ವೇಳೆ ಅವನು ಎದ್ದು ಪುಸ್ತಕದ ಕಪಾಟಿನ ವರೆಗೂ ಹೋಗಿ ಯಾವುದಾದರೂ ಪುಸ್ತಕವನ್ನು ಎತ್ತಿಕೊಂಡು ತಕ್ಷಣವೇ ಅದರಲ್ಲಿ ಏನನ್ನೋ ಓದುವ ಸಾಹಸವನ್ನೂ ಮಾಡುತ್ತಿದ್ದ – ಅವನು ಇದನ್ನು ತನಗೆ ಅದರಲ್ಲಿ ಆಸಕ್ತಿ ಇರಲಿಲ್ಲವೆನ್ನುವಂತೆ, ತನ್ನ ಮಗನ ಪುಸ್ತಕಗಳನ್ನು ಎತ್ತಿ ಕೊಂಡು ನೋಡುವುದು ತನಗೆ ತೀರ ಅಭ್ಯಾಸವಾಗಿ ಹೋಗಿದ್ದ ಸಂಗತಿ ಎನ್ನು ವಂತೆ, ಪ್ಯೇತ್ಯೆಂಕ ತನ್ನ ಬಗೆಗೆ ತೋರುತ್ತಿದ್ದ ಅಂತಹ ಕಾರುಣ್ಯ ತೀರ ಸಹಜ ಸಂಗತಿ ಎನ್ನುವಂತೆ, ಮಾಡುತ್ತಿದ್ದ. ಆದರೆ ಒಮ್ಮೆ ನಾನೂ ಆ ಕೋಣೆಯಲ್ಲಿದ್ದೆ. ಅವನ ಮಗ ಅವನನ್ನು ತನ್ನ ಪುಸ್ತಕಗಳನ್ನು ಮುಟ್ಟದಿರುವಂತೆ ಆಜ್ಞಾಪಿಸಿದಾಗ ಅವನು ಎಷ್ಟು ಹೆದರಿದನೆಂದು ಕಂಡೆ. ನಾಚಿದವನಂತಾಗಿ, ಗೊಂದಲಕ್ಕೆ ಒಳಗಾದವನಂತಾಗಿ ಅವನು ಪುಸ್ತಕವನ್ನು ಅದರ ಸ್ಥಳದಲ್ಲಿ ತಲೆ ಕೆಳಕಾಗಿ ಇಟ್ಟ. ಆಮೇಲೆ ತನ್ನ ತಪ್ಪನ್ನು ತಿದ್ದಲು ಕಾತುರನಾಗಿ ಅದನ್ನು ತುದಿ ಹೊರಗಿರುವಂತೆ ಅದರ ಸ್ಥಳದಲ್ಲಿ ತೂರಿಸಿದ. ಇಡೀ ಸಮಯ ಮುಗುಳ್ನಗುತ್ತಿದ್ದ, ನಾಚುತ್ತಿದ್ದ, ತನ್ನ ಅಪರಾಧವನ್ನು ಹೇಗೆ ಸರಿಪಡಿಸುವುದೆಂಬುದನ್ನು ತಿಳಿಯದವನಂತಿದ್ದ.

ತಮ್ಮ ತಂದೆಯು ಮೂರು ಬಾರಿಯಾದರೂ ತಪ್ಪದೆ ಅನುಕ್ರಮವಾಗಿ ಅಮಲಿಲ್ಲದ ಸ್ಥಿತಿಯಲ್ಲಿ ತಮ್ಮನ್ನು ಕಾಣಬಂದರೆ, ಅವನ ಬಾಳ ರೀತಿಯನ್ನು

ಬದಲಿಸುವ ಕಾತುರತೆಯಿಂದ ಪಕ್ರೋವ್‌ಸ್ಕಿ ತಮ್ಮ ತಂದೆಗೆ ಇಪ್ಪತ್ತೈದೋ, ಐವತ್ತೋ ಅಥವಾ ಇನ್ನೂ ಹೆಚ್ಚು ಕೊಪೆಕ್ ಹಣ ನೀಡುತ್ತಿದ್ದರು, ಅಥವಾ ಅವನಿಗೆ ಒಂದು ಜೊತೆ ಹೊಸ ಬೂಟುಗಳನ್ನೋ, ಒಂದು ಟೈ ಅಥವಾ ವೇಸ್ ಕೋಟನ್ನೋ ನೀಡುತ್ತಿದ್ದರು. ಅದು ಆ ವೃದ್ಧನನ್ನು ನವಿಲಿನಂತೆ ಹೆಮ್ಮೆಯಿಂದ ಅಡ್ಡಾಡುವಂತೆ ಮಾಡುತ್ತಿತ್ತು. ಕೆಲವು ವೇಳೆ ಅವನು ಸಾಷಳಿಗೂ ನನಗೂ ಶುಂಠಿರೊಟ್ಟಿ ಹಾಗೂ ಸೇಬಿನ ಹಣ್ಣು ಕೊಂಡು ತರುತ್ತಿದ್ದ. ನಾವು ಒಟ್ಟಿಗೆ ಕೂತು ಪ್ಯೇತ್ಯೆಂಕನ ಬಗೆಗೆ ಮಾತನಾಡುತ್ತಿದ್ದೆವು. ಪಾಠವನ್ನು ಗಮನವಿತ್ತು ಕೇಳಬೇಕೆಂದೂ ಪ್ಯೇತ್ಯೆಂಕನಿಗೆ ವಿಧೇಯರಾಗಿರಬೇಕೆಂದೂ ಅವನು ನಮ್ಮನ್ನು ಒತ್ತಾಯಿಸುತ್ತಿದ್ದ. ಪ್ಯೇತ್ಯೆಂಕ ಒಬ್ಬ ಒಳ್ಳೆಯ ಮಗ, ಒಬ್ಬ ಆದರ್ಶಯುತನಾದ ಮಗ, ಅಷ್ಟೇ ಅಲ್ಲ ಅವನೊಬ್ಬ ಪಾಂಡಿತ್ಯವುಳ್ಳ ಮಗ, ಎಂದವನು ಹೇಳುತ್ತಿದ್ದ. ಹೀಗೆ ಹೇಳುತ್ತ ಅವನು ನಮ್ಮತ್ತ ಎಷ್ಟು ವಿನೋದಕರವಾಗಿ ಎಡಗಣ್ಣು ಮಿಟುಕಿಸುತ್ತಿದ್ದನೆಂದರೆ, ಹೇಗೆ ಮುಖಚೇಷ್ಟೆ ಮಾಡುತ್ತಿದ್ದನೆಂದರೆ, ನಾವು ಗಹ ಗಹಿಸಿ ನಗುತ್ತಿದ್ದೆವು. ಅಮ್ಮನಿಗೂ ಅವನನ್ನು ಕಂಡರೆ ತುಂಬ ಇಷ್ಟವಿತ್ತು. ಆದರೆ ಆ ವೃದ್ಧನು ಆನ್ನ ಫ್ಯೋದೊರೊವ್ನಳನ್ನು ತುಂಬ ದ್ವೇಷಿಸುತ್ತಿದ್ದ. ಆದರೂ ಅವಳ ಮುಂದೆ ಅವನು ಇಲಿಮರಿಯಂತೆ ಮೌನದಿಂದಿರುತ್ತಿದ್ದ, ಕಾಲ ಕೆಳಗಿನ ಧೂಳಿಗಿಂತಲೂ ಕೀಳೆಂಬಂತೆ ವಿಧೇಯನಾಗಿರುತ್ತಿದ್ದ.

ಪಕ್ರೋವ್‌ಸ್ಕಿಯವರ ಬಳಿ ನಾನು ಪಾಠ ಹೇಳಿಸಿಕೊಳ್ಳುವುದು ಬೇಗನೆಯೇ ನಿಂತಿತು. ಅವರು ನನ್ನನ್ನು ಇನ್ನೂ ಒಂದು ಮಗುವೆಂದೇ, ಸಾಷಳಂತೆ ಒಬ್ಬ ತುಂಟ ಹುಡುಗಿಯೆಂದೇ, ಭಾವಿಸುತ್ತಿದ್ದರು. ಇದು ನನಗೆ ತುಂಬ ನೋವುಂಟು ಮಾಡಿತ್ತು. ಏಕೆಂದರೆ, ನಾನು ನನ್ನ ಹಿಂದಿನ ತಪ್ಪುಗಳನ್ನು ತಿದ್ದಿಕೊಳ್ಳಲು ಯತ್ನಿಸುತ್ತಿದ್ದರೂ ಅವರು ಅದನ್ನು ಗಮನಕ್ಕೆ ತಂದುಕೊಳ್ಳುತ್ತಲೇ ಇರಲಿಲ್ಲ. ಅದು ನನ್ನನ್ನು ಇನ್ನಷ್ಟು ಕೆರಳಿಸಿತ್ತು. ಪಾಠವಿಲ್ಲದ ವೇಳೆಯಲ್ಲಿ ನಾನು ಅವರ ಜೊತೆ ಮಾತನಾಡುತ್ತಲೇ ಇರಲಿಲ್ಲ. ಅವಕಾಶ ಸಿಕ್ಕಿದಾಗಲೂ ಮಾತನಾಡಲು ಅಶಕ್ತಳಾಗಿದ್ದೆ. ಲಜ್ಜಾಭರಿತಳಾಗಿ ನಾಲಿಗೆ ಕಟ್ಟಿ ಹೋದಂತಾಗುತ್ತಿದ್ದೆ. ಆಮೇಲೆ ಒಂದು ಮೂಲೆಗೆ ಹೋಗಿ ಕುಳಿತು ಕೋಪದಿಂದ ಅಳುತ್ತಿದ್ದೆ.

ಒಂದು ವಿಚಿತ್ರ ಘಟನೆ ನಡೆಯದೆ ಹೋಗಿದ್ದರೆ ಇದು ಹೇಗೆ ಕೊನೆಗಾಣು ತ್ತಿದ್ದಿತೋ, ಯಾರಿಗೆ ಗೊತ್ತು. ಒಂದು ಸಂಜೆ ಅಮ್ಮ ಆನ್ನ ಫ್ಯೋದೊರೊವ್ನಳ ಕೋಣೆಯಲ್ಲಿದ್ದಾಗ ನಾನು ಯಾರಿಗೂ ಕಾಣದಂತೆ ಪಕ್ರೋವ್‌ಸ್ಕಿಯವರ ಕೋಣೆಗೆ ಹೋದೆ. ಅವರು ಎಲ್ಲೋ ಹೊರಗೆ ಹೋಗಿದ್ದರೆಂದು ನನಗೆ ಗೊತ್ತಿತ್ತು. ಹಾಗೆ ಮಾಡುವಂತೆ ಏನು ನನ್ನನ್ನು ಪ್ರೇರಿಸಿತೋ ನಾನು ಹೇಳಲಾರೆ. ನಾವು ಒಂದು ವರ್ಷಕ್ಕೂ ಹೆಚ್ಚು ಕಾಲದಿಂದ ಅವರ ನೆರೆಯಲ್ಲಿ ವಾಸವಾಗಿದ್ದರೂ ನಾನೆಂದೂ

ಒಬ್ಬಳೇ ಅವರ ಕೋಣೆಗೆ ಹೋಗಿರಲಿಲ್ಲ. ನನ್ನ ಹೃದಯ ಡವಡವನೆ ಬಡಿದುಕೊಳ್ಳುತ್ತಿತ್ತು. ಮೊದಲು ನಾನು ಗಾಬರಿ ಹಾಗೂ ಕುತೂಹಲದಿಂದ ಸುತ್ತ ನೋಡಿದೆ. ಅಲ್ಲಿ ಹೆಚ್ಚು ಪೀಠೋಪಕರಣಗಳೇನೂ ಇರಲಿಲ್ಲ. ಕೋಣೆಯನ್ನು ಒಪ್ಪವಾಗಿ ಇರಿಸಿರಲಿಲ್ಲ. ಗೋಡೆಯ ಉದ್ದಕ್ಕೂ ಐದು ಬಡುಗಳ ಮೇಲೆ ಪುಸ್ತಕಗಳಿದ್ದವು. ಕುರ್ಚಿಗಳ ಮೇಲೂ ಮೇಜಿನ ಮೇಲೂ ಕಾಗದ ಪತ್ರಗಳ ರಾಶಿ ಇದ್ದಿತು. ಎಲ್ಲಿ ನೋಡಿದರೂ ಪುಸ್ತಕಗಳು ಕಾಗದಗಳೇ ! ಆಗ ನನ್ನ ಮನಸ್ಸಿನಲ್ಲಿ ಒಂದು ವಿಚಿತ್ರ ಭಾವನೆ ಬಂದಿತು, ಶಾಂತಿಯನ್ನು ಕದಡುವಂಥ ಕೆರಳಿಸುವಂಥ ಭಾವನೆ. ಅವರು ನನ್ನ ಸ್ನೇಹ ವಿಶ್ವಾಸಗಳನ್ನು ಏಕೆ ಮನಸ್ಸಿಗೆ ಹಚ್ಚಿಕೊಳ್ಳಬೇಕು ? ಅವರು ವಿದ್ವಾಂಸರು. ನಾನೋ ಪೆದ್ದೆ. ನನಗೆ ಏನೇನೂ ತಿಳಿವಳಿಕೆ ಇರಲಿಲ್ಲ, ನಾನು ಏನೇನೂ ಓದಿರಲಿಲ್ಲ, ಒಂದು ಪುಸ್ತಕವನ್ನೂ ಓದಿರಲಿಲ್ಲ ! ಆ ಎಲ್ಲ ಪುಸ್ತಕಗಳ ಭಾರದಡಿ ನರಳುವಂತಿದ್ದ ಬಡುಗಳತ್ತವೇ ಅಸೂಯೆಯಿಂದ ನೋಡುತ್ತ ನಿಂತೆ. ನಾನು ವ್ಯಗ್ರಗೊಂಡೆ, ಮುನಿಸಿಕೊಂಡೆ, ವಿಚಿತ್ರವಾಗಿ ಉನ್ಮತ್ತಳಾದೆ. ಆ ಪುಸ್ತಕಗಳನ್ನೆಲ್ಲ ಓದಬೇಕು, ಒಂದೇ ಬಾರಿಗೆ ಎಲ್ಲವನ್ನೂ ಓದಬೇಕು, ಮೊದಲಿನಿಂದ ಕೊನೆಯವರೆಗೆ ಎಲ್ಲ ಪುಸ್ತಕಗಳನ್ನೂ ಸಾಧ್ಯವಾದಷ್ಟೂ ಬೇಗ ಓದಬೇಕು, ಎಂದು ನಿರ್ಧರಿಸಿದೆ. ಅವರು ತಿಳಿದುದನ್ನೆಲ್ಲ ನಾನೂ ಓದಿ ತಿಳಿದನಂತರ, ನಾನು ಅವರ ಸ್ನೇಹಕ್ಕೆ ಹೆಚ್ಚು ಯೋಗ್ಯಳಾಗುತ್ತೇನೆ ಎಂಬುದು ಬಹುಶಃ ಆಗ್ಗೆ ನನ್ನ ವಿಚಾರವಾಗಿದ್ದಿತು. ಬೇಗ ನಾನು ಕೈಗೆ ಸಿಕ್ಕಿದ ಒಂದು ಧೂಳುತುಂಬಿದ ಹಳೆಯ ಪುಸ್ತಕವೊಂದನ್ನು ಬಡುವಿನಿಂದ ಎಳೆದುಕೊಂಡೆ, ಅದನ್ನು ಎದೆಗೆ ಅವುಚಿ ಹಿಡಿದುಕೊಂಡೆ, ಅಂಜಿಕೆ ಉದ್ರೇಕಗಳಿಂದ ನಡುಗುತ್ತ, ಒಂದು ಸಾರಿ ನಾಚುತ್ತ ಒಂದು ಸಾರಿ ವಿವರ್ಣಳಾಗುತ್ತ, ಓಡಿ ಹೋದೆ, ಅಮ್ಮ ಮಲಗಿದ ಮೇಲೆ ರಾತ್ರಿ ದೀಪದಲ್ಲಿ ಓದುವುದು ನನ್ನ ಉದ್ದೇಶವಾಗಿತ್ತು.

ಆದರೆ ನನ್ನ ಕೋಣೆಗೆ ಹೋಗಿ ತೆರೆದು ನೋಡಿದಾಗ ಮತ್ತು ಅದು ಕೇವಲ ಒಂದು ಹಳೆಯ, ಹರಿದು ಹೋದ, ಹುಳು ತಿಂದ, ಲ್ಯಾಟಿನ್ ಭಾಷೆಯ ಪ್ರಬಂಧವಾಗಿದ್ದಿತೆಂದು ಕಂಡುಕೊಂಡಾಗ, ಎಷ್ಟು ನಿರಾಶಳಾದೆ. ಸಮಯ ಕಳೆದುಕೊಳ್ಳದೆ ನಾನು ಅವರ ಕೋಣೆಗೆ ಹಿಂದಿರುಗಿ ಪುಸ್ತಕವನ್ನು ಬಡುವಿನ ಮೇಲೆ ಇರಿಸುತ್ತಿದ್ದೆ – ಆಗ ಮೊಗಸಾಲೆಯಲ್ಲಿ ಹೆಜ್ಜೆಗಳ ಸದ್ದು ಕೇಳಿ ಬಂತು. ನಾನು ಆ ದುಷ್ಟ ವಸ್ತುವನ್ನು ಕೈಯಲ್ಲಿ ಹಿಡಿದು ಹತಾಶಳಾಗಿ ಆಡಿಸಿದೆ. ಅದನ್ನು ಅದರ ಸ್ಥಳದಲ್ಲಿ ಎಷ್ಟು ಒತ್ತಾಗಿ ಸೇರಿಸಲಾಗಿದ್ದಿತೆಂದರೆ ಈಗ ಅದನ್ನು ಹೊರತೆಗೆದನಂತರ ಅದರ ಸ್ಥಳವನ್ನು ಅದರ ಅಕ್ಕಪಕ್ಕದ ಪುಸ್ತಕಗಳು ಆಕ್ರಮಿಸಿಕೊಂಡು ಬಿಟ್ಟಿದ್ದವು. ಅದನ್ನು ಮತ್ತೆ ಅದರ ಸ್ಥಳಕ್ಕೆ ಅವುಕಿ ಸೇರಿಸಲು ನಾನು ಅಶಕ್ತಳಾಗಿದ್ದೆ ! ನಾನು ಎಷ್ಟು ಸಾಧ್ಯವೋ ಅಷ್ಟೂ ಗಟ್ಟಿಯಾಗಿ ಅದನ್ನು ಒಳಕ್ಕೆ ತೂರಿಸಲು ಯತ್ನಿಸುತ್ತಿದ್ದೆ.

ಅದೇ ಹೊತ್ತಿನಲ್ಲಿ ಆ ಬಡುಗಳನ್ನು ಗೋಡೆಗೆ ಆನಿಸಿ ಹಿಡಿದಿದ್ದ ತುಕ್ಕು ಹಿಡಿದ ಮೊಳೆಗಳೂ ಅದಕ್ಕಾಗಿಯೇ ಕಾದಿದ್ದಿರಬೇಕು – ಆ ಬಡುವೂ ಅದರೊಂದಿಗೆ ಎಲ್ಲ ಪುಸ್ತಕಗಳೂ ದಿಢೀರನೆ ಕೆಳಗೆ ಬಿದ್ದವು. ಬಾಗಿಲು ತೆರೆಯಿತು, ಪಕ್ರೋವ್‌ಸ್ಕಿ ಕೋಣೆಯ ಒಳ ಬಂದರು.

ಯಾರೇ ಆಗಲಿ ತಮಗೆ ಅಮೂಲ್ಯವಾಗಿದ್ದ ಪುಸ್ತಕಗಳ ಗೊಡವೆಗೆ ಬರುವುದನ್ನು ಅವರು ಸಹಿಸದಾಗಿದ್ದರು. ಅವುಗಳನ್ನು ಕೇವಲ ಮುಟ್ಟುವ ಸಾಹಸ ಮಾಡುವವನನ್ನು ದೇವರೇ ಕಾಪಾಡಬೇಕಿದ್ದಿತು! ಹಾಗಿದ್ದಾಗ, ಎಲ್ಲ ಪುಸ್ತಕಗಳೂ, ದಪ್ಪವೂ ಸಣ್ಣವೂ ನಾನಾ ಗಾತ್ರದವು, ನಾನಾ ಆಕಾರದವು, ಎಲ್ಲ ಕೆಳಗೆ ಉರುಳುತ್ತ ಬಿದ್ದು ಮೇಜು ಕುರ್ಚಿಗಳ ಕೆಳಗೆ ಹಾಗೂ ಕೋಣೆಯಾದ್ಯಂತ ಎಲ್ಲೆಡೆಯೂ ಚೆಲ್ಲಾಪಿಲ್ಲಿಯಾಗಿ ಬಿದ್ದು ಹೋದಾಗ, ನನಗಾದ ಭೀತಿ ಎಷ್ಟೆಂಬುದನ್ನು ಊಹಿಸಿ ನೋಡಿ! ನಾನು ಓಡಿಹೋಗ ಬಯಸಿದ್ದೆ, ಆದರೆ ಆಗಲೇ ತಡವಾಗಿತ್ತು. ಇನ್ನು ಇದೇ ಕೊನೆ, ಎಂದು ನಾನು ಬಗೆದೆ. ಕೊನೆ! ನನ್ನ ಕಥೆ ಮುಗಿಯಿತು! ಹತ್ತು ವರ್ಷದ ಬಾಲಕಿ ಮಾಡುವಂಥ ಚೇಷ್ಟೆ ಮಾಡಿ ಸಿಕ್ಕಿ ಬಿದ್ದಿದ್ದೆ! ಅವಿವೇಕಿ ಹುಡುಗಿಯಂತೆ! ಶುದ್ಧ ಮೂರ್ಖಳು! ಪಕ್ರೋವ್‌ಸ್ಕಿ ಕೋಪದಿಂದ ಹುಚ್ಚೆದ್ದರು. "ಮುಂದೇನು?" ಅವರು ಕೂಗಿ ಕೇಳಿದರು. "ಇಂಥ ಹುಚ್ಚಾಟದಿಂದ ನಿಮಗೆ ನಾಚಿಕೆಯಾಗುವುದಿಲ್ಲವೇ? ಯಾವಾಗ ನೀವು ದೊಡ್ಡವರಾಗುವುದು?" ಅವರು ಪುಸ್ತಕಗಳನ್ನು ಆಯ್ದುಕೊಳ್ಳಲು ಬಾಗಿದರು. ನಾನೂ ಸಹಾಯ ಮಾಡಲು ಬಾಗಿದೆ. "ಬೇಡ ಬೇಡ. ನೀವೇನೂ ತೊಂದರೆ ತೆಗೆದುಕೊಳ್ಳಬೇಕಾಗಿಲ್ಲ!" ಎಂದು ಅವರು ಕರ್ಕಶವಾಗಿ ಹೇಳಿದರು. "ನಿಮ್ಮನ್ನು ಕರೆಯದೆ ಇದ್ದಾಗ ನೀವು ದೂರ ಇದ್ದುಬಿಟ್ಟರೆ ಎಷ್ಟೋ ಒಳ್ಳೆಯದು!" ಆದರೆ ಅವರು ನನ್ನ ವಿನೀತ ನಡೆವಳಿಯನ್ನು ಗಮನಿಸಿದ್ದರು. ತಮ್ಮ ದನಿಯನ್ನು ಗದರಿಸುವ ಅಧ್ಯಾಪಕರ ದನಿಯ ಮಟ್ಟಕ್ಕೆ, ನಮ್ಮ ಈಚೆಗಿನ ಪಾಠಗಳ ಮಟ್ಟಕ್ಕೆ ಇಳಿಸಿದರು. "ನೀವು ಕೊನೆಗೂ ಯಾವಾಗ ವಿವೇಕ ಪಡೆದುಕೊಳ್ಳುವುದು? ನಿಮ್ಮನ್ನೇ ನೋಡಿಕೊಳ್ಳಿ. ನೀವೇನೂ ಮಗುವಲ್ಲ, ಸಣ್ಣ ಹುಡುಗಿಯಲ್ಲ. ನಿಮಗಾಗಲೇ ಹದಿನೈದು ವರ್ಷ ವಯಸ್ಸು." ಹಾಗೆಂದು ತಮಗೆ ತಾವೇ ಮನದಟ್ಟು ಮಾಡಿಕೊಳ್ಳಲೋ ಎಂಬಂತೆ ನನ್ನತ್ತ ಕತ್ತೆತ್ತಿ ನೋಡಿದರು. ಕೂಡಲೇ ಅವರ ಮುಖದಲ್ಲಿ ರಂಗೇರಿತು. ನಾನು ಏನನ್ನೂ ಅರ್ಥಮಾಡಿಕೊಳ್ಳದಾಗಿದ್ದೆ. ದಿಟ್ಟಿಸಿ ನೋಡುತ್ತಲೇ ನಿಂತೆ. ಪುಸ್ತಕಗಳನ್ನು ಆಯ್ದುಕೊಳ್ಳಲು ಬಾಗಿದ್ದ ಅವರು ಪೇಚಿನಲ್ಲಿ ಸಿಕ್ಕಿ ಬಿದ್ದವರಂತೆ ಎದ್ದು ನಿಂತರು, ಅಸಂಬದ್ಧವಾಗಿ ಮಾತನಾಡತೊಡಗಿದರು – ಯಾವುದಕ್ಕೋ ಕ್ಷಮೆ ಕೇಳುವವರಂತೆ, ಬಹುಶಃ ನಾನೊಬ್ಬ ಬೆಳೆದ ಹುಡುಗಿ ಎಂಬುದನ್ನು ಈಗಷ್ಟೆ ಗಮನಿಸಿದುದಕ್ಕಾಗಿ ಕ್ಷಮೆ ಕೇಳುವವರಂತೆ. ಕೊನೆಗೆ ನನಗೆ ಅರ್ಥವಾಯಿತು.

ಆಗ ನಾನು ಏನು ಮಾಡಿದೆ ಅದು ನನಗೇ ಗೊತ್ತಿಲ್ಲ. ತುಂಬ ನಾಚಿದೆ, ಅವರಿಗಿಂತ ಹೆಚ್ಚು ರಂಗೇರುವಂತೆ ನಾಚಿದೆ, ಸಂಪೂರ್ಣವಾಗಿ ಕ್ಷೋಭೆಗೊಂಡೆ, ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಕೋಣೆಯಿಂದ ಹೊರಕ್ಕೆ ಓಡಿದೆ, ಎಂಬುದನ್ನಷ್ಟೆ ಬಲ್ಲೆ.

ಅಂತಹ ಅವಮಾನಕರ ಕೆಲಸ ಮಾಡಿ ಸಿಕ್ಕಿ ಬಿದ್ದನಂತರ ಆ ಕಳಂಕವನ್ನು ಹೋಗಲಾಡಿಸಿಕೊಳ್ಳಲು ನಾನೇನು ಮಾಡಬೇಕಿದ್ದಿತು ಎಂಬುದನ್ನು ನಾನು ತಿಳಿಯದಾಗಿದ್ದೆ. ಅವರು ನನ್ನನ್ನು ತಮ್ಮ ಕೋಣೆಯಲ್ಲಿ ಕಂಡು ಬಿಟ್ಟರಲ್ಲ! ಇಡೀ ಮೂರು ದಿನ ನಾನು ತಲೆ ಎತ್ತಿ ಅವರನ್ನು ನೋಡುವ ಸಾಹಸ ಮಾಡಲಿಲ್ಲ. ಕಣ್ಣಲ್ಲಿ ನೀರು ಬರುವವರೆಗೂ ನಾಚಿದೆ. ಅತ್ಯಂತ ವಿಲಕ್ಷಣವಾದ ಹಾಗೂ ಅತ್ಯಂತ ಗಲಿಬಿಲಿಯಾದ ವಿಚಾರಗಳು ನನ್ನ ಮನಸ್ಸಿಗೆ ಬಂದವು. ಅವುಗಳಲ್ಲಿ ಅತ್ಯಂತ ವಿಚಿತ್ರವಾದುದೆಂದರೆ – ಅವರ ಬಳಿಗೆ ಹೋಗಿ ನನ್ನ ಅಂತರಂಗವನ್ನೆಲ್ಲ ಬರಿದು ಮಾಡುವುದು; ಎಲ್ಲವನ್ನೂ ವಿವರಿಸಿ ಹೇಳಿ, ನಾನೇನೂ ಕೇವಲ ಮೂರ್ಖ ಹುಡುಗಿಯಾಗಿರಲಿಲ್ಲ, ಆದರೆ ಸದುದ್ದೇಶದಿಂದಲೇ ಅಲ್ಲಿಗೆ ಹೋಗಿದ್ದೆ ಎಂದು ತಿಳಿಸುವುದು. ಹಾಗೆಯೇ ಮಾಡಬೇಕೆಂದು ನಾನು ಬಹುಮಟ್ಟಿಗೆ ಆಗಲೇ ಮನಸ್ಸು ಮಾಡಿದ್ದೆ. ಆದರೆ, ದೇವರ ದಯೆ, ಅದಕ್ಕೆ ಸಾಲುವಷ್ಟು ಧೈರ್ಯ ನನ್ನಲ್ಲಿರಲಿಲ್ಲ! ಹಾಗೆ ಮಾಡಿದ್ದರೆ ನಾನು ಎಷ್ಟು ಮೂರ್ಖಳಾಗಿ ಕಾಣುತ್ತಿದ್ದೆ ಎಂಬುದನ್ನು ಊಹಿಸಿಕೊಳ್ಳಬಲ್ಲೆ. ಈಗಲೂ ಆ ವಿಷಯ ಯೋಚನೆ ಮಾಡಲು ನನಗೆ ನಾಚಿಕೆಯಾಗುತ್ತದೆ.

ಅದಾದ ಕೆಲವು ದಿನಗಳನಂತರ ನನ್ನ ತಾಯಿ ಪ್ರಬಲವಾದ ಕಾಯಿಲೆಯಿಂದ ಮಲಗಿದಳು. ಹಾಸಿಗೆ ಹಿಡಿದ ಮೂರನೆಯ ರಾತ್ರಿ ಜ್ವರ ಅತಿಯಾಗಿ ಹೆಚ್ಚಿ ಅವಳು ಸನ್ನಿಯಲ್ಲಿದ್ದಂತೆ ಕನವರಿಸತೊಡಗಿದಳು. ನಾನು ಒಂದು ಘಳಿಗೆಯೂ ಅವಳ ಪಕ್ಕ ಬಿಟ್ಟು ಹೋಗಲಿಲ್ಲ. ಕಾಲಕಾಲಕ್ಕೆ ಅವಳಿಗೆ ಕುಡಿಯಲು ಹಾಲು, ಔಷಧಿಗಳನ್ನು ಕೊಡುತ್ತಿದ್ದೆ. ಎರಡನೆಯ ರಾತ್ರಿ ನಾನು ಸಂಪೂರ್ಣವಾಗಿ ಬಳಲಿದ್ದೆ, ಕಣ್ಣು ಬಿಟ್ಟುಕೊಂಡಿರುವುದೇ ತುಂಬ ಕಷ್ಟವಾಗಿತ್ತು. ನನ್ನ ಕಣ್ಣ ಮುಂದೆ ಹಸುರು ಚುಕ್ಕೆಗಳು ನರ್ತಿಸತೊಡಗಿದವು. ನನ್ನ ಸುತ್ತ ಇದ್ದುದೆಲ್ಲ ತೇಲುತ್ತಿದ್ದಂತೆ ಕಂಡು ಬಂದಿತು. ಯಾವುದೇ ಘಳಿಗೆಯಲ್ಲೂ ನಾನು ಕುಸಿದು ಬೀಳಬಹುದಿತ್ತು. ಆದರೆ ಅಮ್ಮನ ದುರ್ಬಲ ನರಳಾಟವಷ್ಟೇ ಅದಕ್ಕೆ ಅಡ್ಡಿಯಾಗಿತ್ತು. ಮತ್ತೆ ಮತ್ತೆ ನಾನು ಬೆಚ್ಚಿ ಏಳುತ್ತಿದ್ದೆ, ಆದರೆ ನಿದ್ರೆ ಹಿಂದಿನಂತೆ ಮುತ್ತುತ್ತಿತ್ತು. ಅದೊಂದು ಚಿತ್ರಹಿಂಸೆಯಾಗಿತ್ತು! ನನಗೆ ಗೊತ್ತಿಲ್ಲ, ನಾನು ಜ್ಞಾಪಿಸಿಕೊಳ್ಳಲಾರೆ, ಆದರೆ ನಿದ್ರೆ ಎಚ್ಚರದೊಂದಿಗೆ ಸ್ಪರ್ಧಿಸುತ್ತಿದ್ದ ಆ ಘಳಿಗೆಯಲ್ಲಿ ಒಂದು ವಿಚಿತ್ರ ಕನಸು, ಒಂದು ಭಯಂಕರ ದೃಶ್ಯ ನನ್ನ ದುರ್ಬಲ ಮನಸ್ಸಿನ ಮೇಲೆ ದಾಳಿ ಮಾಡಿತು.

ನಾನು ಬೆಚ್ಚಿಬಿದ್ದು ಎದ್ದೆ. ಕೋಣೆ ಕತ್ತಲೆಯಿಂದ ತುಂಬಿತ್ತು. ಮೋಂಬತ್ತಿ ಪೂರ್ಣವಾಗಿ ಉರಿದು ಆರಿಹೋಗಿತ್ತು. ಗೋಡೆಯ ಮೇಲೆ ಬೆಳಕಿನ ಪಟ್ಟಿಗಳು ಒಮ್ಮೆ ಕಾಣಿಸಿಕೊಳ್ಳುತ್ತಿದ್ದವು. ಒಮ್ಮೆ ಸಂಪೂರ್ಣವಾಗಿ ಕಣ್ಮರೆಯಾಗುತ್ತಿದ್ದವು. ಅಂಜಿಕೆ, ಒಂದು ವಿಚಿತ್ರ ರೀತಿಯ ಭೀತಿ, ನನ್ನನ್ನು ಆವರಿಸಿತು. ನನ್ನ ಕಲ್ಪನೆ ದುಸ್ವಪ್ನದ ಹಿಡಿತದಲ್ಲಿ ಸಿಕ್ಕಿಬಿದ್ದಿತ್ತು. ನನ್ನ ಹೃದಯ ಸಂಕುಚಿಸಿತು. ನಾನು ಕಿಟಾರನೆ ಕಿರುಚಿಕೊಳ್ಳುತ್ತ ಅಸಹನೀಯವಾದ ನೋವಿನೊಂದಿಗೆ ಕುರ್ಚಿಯಿಂದ ನೆಗೆದು ನಿಂತೆ. ಬಾಗಿಲು ತೆರೆಯಿತು. ಪಕ್ರೋವ್‌ಸ್ಕಿ ಒಳ ಬಂದರು.

ನನಗೆ ಮತ್ತೆ ಪ್ರಜ್ಞೆ ಬಂದಾಗ ನಾನವರ ತೋಳಿನಲ್ಲಿ ಒರಗಿದ್ದೆ, ಎಂದು ನನ್ನ ನೆನಪು. ಅವರು ನನ್ನನ್ನು ಮೆಲ್ಲಗೆ ಕುರ್ಚಿಯಲ್ಲಿ ಕುಳ್ಳಿರಿಸಿದರು, ಕುಡಿಯಲು ಒಂದು ಲೋಟ ನೀರು ಕೊಟ್ಟರು, ಪ್ರಶ್ನೆಗಳ ಮೇಲೆ ಪ್ರಶ್ನೆ ಕೇಳಿದರು. ನಾನು ಏನೋ ಹೇಳಿದೆ – ಏನೆಂಬುದು ನೆನಪಿಲ್ಲ. "ನಿಮ್ಮ ಆರೋಗ್ಯ ನೆಟ್ಟಗಿಲ್ಲ" ಅವರು ನನ್ನ ಕೈಯನ್ನು ತಮ್ಮ ಕೈಗೆ ತೆಗೆದುಕೊಳ್ಳುತ್ತ ಹೇಳಿದರು. "ನಿಮ್ಮ ಆರೋಗ್ಯವೇ ಏನೇನೂ ಚೆನ್ನಾಗಿಲ್ಲ ! ನಿಮಗೆ ಜ್ವರ ಬಂದಿದೆ. ನೀವು ನಿಮ್ಮ ಆರೋಗ್ಯಕ್ಕೆ ಹಾನಿ ಉಂಟುಮಾಡಿಕೊಳ್ಳುತ್ತಿದ್ದೀರ. ವಿಶ್ರಾಂತಿ ತೆಗೆದುಕೊಳ್ಳಿ. ಮಲಗಿ ನಿದ್ರಿಸಿ. ಇನ್ನು ಎರಡು ಗಂಟೆ ಆದ ಮೇಲೆ ನಿಮ್ಮನ್ನು ಎಚ್ಚರ ಮಾಡುತ್ತೇನೆ. ದಯವಿಟ್ಟು ಮಲಗಿಕೊಳ್ಳಿ !" ಆಗದೆಂದು ಹೇಳಲು ನನಗೆ ಅವಕಾಶವನ್ನೂ ಕೊಡದೆ ಅವರು ಒತ್ತಾಯಿಸುತ್ತ ಹೋದರು. ಬಳಲಿಕೆಯಿಂದ ನಾನು ಕುಸಿದು ಬೀಳಲೂ ಸಿದ್ಧವಿದ್ದೆ; ನನ್ನ ಕಣ್ಣುಗಳು ಅಷ್ಟು ಭಾರವಾಗಿದ್ದವು. ಅರ್ಧ ಗಂಟೆ ವಿಶ್ರಾಂತಿ ತೆಗೆದುಕೊಳ್ಳಲೆಂದು ನಾನು ಕುರ್ಚಿಯಲ್ಲೇ ಒರಗಿದೆ, ಆದರೆ ಬೆಳಗಿನವರೆಗೂ ಮಲಗಿಬಿಟ್ಟೆ. ಆಗ ಪಕ್ರೋವ್‌ಸ್ಕಿಯವರೇ ಬಂದು ಎಬ್ಬಿಸಿದರು. ಏಕೆಂದರೆ ನನ್ನ ತಾಯಿಗೆ ಔಷಧಿ ಕೊಡುವ ಕಾಲ ಬಂದಿತ್ತು.

ಮಾರನೆಯ ರಾತ್ರಿ ಹನ್ನೊಂದು ಗಂಟೆಗೆ, ನಾನು ನಿದ್ರೆ ಮಾಡಲೇ ಕೂಡದೆಂದು ನಿರ್ಧರಿಸಿ ಅಮ್ಮನ ಹಾಸಿಗೆಯ ಪಕ್ಕದಲ್ಲಿ ಕುಳಿತಿದ್ದಾಗ, ಪಕ್ರೋವ್‌ಸ್ಕಿ ಬಾಗಿಲು ತಟ್ಟಿದರು. "ಒಬ್ಬರೇ ಕುಳಿತಿರುವುದಕ್ಕೆ ನಿಮಗೆ ಬೇಸರವಾಗುತ್ತಿರಬಹುದು" ಎಂದವರು, ನಾನು ಬಾಗಿಲು ತೆರೆದಂತೆ, ಹೇಳಿದರು. "ನಾನು ನಿಮಗಾಗಿ ಒಂದು ಪುಸ್ತಕ ತಂದಿದ್ದೇನೆ. ಕಾಲ ಕಳೆಯಲು ಇದು ನಿಮಗೆ ಸಹಾಯವಾಗುತ್ತೆ." ನಾನು ಕೃತಜ್ಞತಾಪೂರ್ವಕವಾಗಿ ಅದನ್ನು ತೆಗೆದುಕೊಂಡೆ. ಅದು ಯಾವ ಪುಸ್ತಕವಾಗಿದ್ದಿತು, ನಾನು ಅದನ್ನು ತೆರೆದು ನೋಡಿದೆನೇ ಇಲ್ಲವೇ, ನನಗೊಂದೂ ನೆನಪಿಲ್ಲ. ಆದರೂ ಅಂದು ರಾತ್ರಿ ನಾನು ಒಂದು ಕ್ಷಣವೂ ನಿದ್ರೆ ಮಾಡಲಿಲ್ಲ. ಒಂದು ವಿಚಿತ್ರ ರೀತಿಯ ಭಾವೋತ್ಕರ್ಷ ನನ್ನನ್ನು ಎಚ್ಚರವಾಗಿ ಇರಿಸಿದ್ದಿತು. ನಾನು ಚಡಪಡಿಸುತ್ತಿದ್ದೆ, ನಿಶ್ಚಲಳಾಗಿ ಕುಳಿತಿರದಾಗಿದ್ದೆ, ಮತ್ತೆಮತ್ತೆ ಎದ್ದು ಕೋಣೆಯಲ್ಲಿ

ಶತಪಥ ತಿರುಗುತ್ತಿದ್ದೆ. ನನ್ನೊಳಗೆ ಬೆಚ್ಚನೆಯ ಸಂತಸ ಭಾವ, ಸಂತೃಪ್ತಿಯ ಭಾವ, ಬೆಳಗುತ್ತಿದ್ದಿತು! ಅವರು ನನ್ನ ಕಡೆಗೆ ಗಮನ ಹರಿಸಿದುದಕ್ಕಾಗಿ ನನಗೆ ಅಮಿತಾನಂದವಾಗಿತ್ತು, ನನ್ನ ಬಗೆಗೆ ಕಾಳಜಿ ತೋರಿದುದಕ್ಕಾಗಿ ನನಗೆ ಹೆಮ್ಮೆ ಎನಿಸಿತ್ತು. ಇಡೀ ರಾತ್ರಿ ನಾನು ಕನಸುತ್ತ ಯೋಚಿಸುತ್ತ ಕುಳಿತಿದ್ದೆ. ಅವರು ಅಂದು ರಾತ್ರಿ ಮತ್ತೆ ಬರಲಿಲ್ಲ. ಅವರು ಬರುವುದಿಲ್ಲವೆಂದು ನಾನು ತಿಳಿದಿದ್ದೆ. ಆದರೆ ಮರುದಿನ ರಾತ್ರಿ ಬರುವರೇ ಎಂದು ಆಲೋಚಿಸಿದೆ.

ಮರುದಿನ ರಾತ್ರಿ, ಎಲ್ಲರೂ ಮಲಗಿದ್ದಾಗ, ಪಕ್ರೋವ್‌ಸ್ಕಿ ತಮ್ಮ ಕೋಣೆಯ ಬಾಗಿಲು ತೆರೆದು ಹೊಸ್ತಿಲ ಮೇಲೆ ನಿಂತು ನನ್ನೊಂದಿಗೆ ತುಂಬ ಹೊತ್ತು ಮಾತ ನಾಡಿದರು. ನಾವು ಒಬ್ಬರಿಗೊಬ್ಬರು ಏನು ಹೇಳಿದೆವು, ನನಗೆ ಒಂದು ಪದವೂ ನೆನಪಿಲ್ಲ. ನಾನು ಒಂದೇ ಸಮನಾಗಿ ನಾಚುತ್ತಿದ್ದೆ, ಗೊಂದಲಕ್ಕೊಳಗಾಗಿದ್ದೆ, ನನ್ನ ಬಗೆಗೇ ವ್ಯಗ್ರಗೊಂಡಿದ್ದೆ. ನಾನು ಅದಕ್ಕಾಗಿಯೇ ಹಂಬಲಿಸಿದ್ದರೂ, ಕನಸಿದ್ದರೂ, ಇಡೀ ದಿನ ನನ್ನ ಪ್ರಶ್ನೆಗಳನ್ನೂ ಉತ್ತರಗಳನ್ನೂ ಮೊದಲೇ ಕಲ್ಪಿಸಿ ಕಲಿತು ಕೊಂಡಿದ್ದರೂ, ಅದು ಬೇಗನೆಯೇ ಮುಗಿದು ಹೋಗಲಿ ಎಂದೇ ಬಯಸಿದೆ... ಅಂದು ಸಂಜೆ ನಮ್ಮ ಸ್ನೇಹ ಪ್ರಾರಂಭವಾಯಿತು. ನನ್ನ ತಾಯಿಯ ಕಾಯಿಲೆ ಯಾದ್ಯಂತ ನಾವು ಪ್ರತಿ ರಾತ್ರಿಯೂ ಒಟ್ಟಿಗೇ ಹಲವಾರು ಗಂಟೆಗಳನ್ನು ಮಾತ ನಾಡುತ್ತ ಕಳೆದೆವು. ಕ್ರಮೇಣ ನಾನು ನನ್ನ ನಾಚಿಕೆಯನ್ನು ಹೋಗಲಾಡಿಸಿಕೊಂಡೆ. ಆದರೂ ಪ್ರತಿ ಬಾರಿಯೂ ನಾನು ಅವರೊಂದಿಗೆ ಸಂಭಾಷಣೆ ನಡೆಸಿದನಂತರ ನನ್ನೊಂದಿಗೇ ಕೋಪಗೊಳ್ಳುತ್ತಿದ್ದೆ. ಆದರೆ ನನಗೆ ಒಳಗೊಳಗೇ ಸಂತೋಷವೂ ಆಗಿತ್ತು, ಅವರು ನನ್ನೊಂದಿಗಿರಲೋಸುಗ ತಮ್ಮ ಆ ಅನಿಷ್ಟ ಪುಸ್ತಕಗಳನ್ನೂ ಮರೆಯುತ್ತಿದ್ದರೆಂಬುದನ್ನು ಕಂಡು ಹೆಮ್ಮೆಯೂ ಆಗಿತ್ತು. ಒಮ್ಮೆ ತಮಾಷೆಯಾಗಿ ಮಾತನಾಡುತ್ತ ನಮ್ಮ ಸಂಭಾಷಣೆ ನಾನು ಪುಸ್ತಕಗಳ ಬಡುವನ್ನು ಬೀಳಿಸಿದುದರ ಕಡೆಗೆ ತಿರುಗಿತು. ನಾನು ಆಗ ಒಂದು ವಿಲಕ್ಷಣ ಮನೋಸ್ಥಿತಿಯಲ್ಲಿದ್ದೆ, ನನ್ನ ಅಂತರಂಗವನ್ನೆಲ್ಲ ತೋಡಿಕೊಳ್ಳುವ ಅತ್ಯಂತ ಪ್ರಾಮಾಣಿಕತೆಯ ಸ್ಥಿತಿಯಲ್ಲಿದ್ದೆ. ನಾನು ಯಾವುದೋ ಹರ್ಷೋದ್ರೇಕದ ಪ್ರವಾಹದ ಮೇಲೆ ಸಾಗಿ ಹೋಗಿದ್ದೆ. ನಾನು ಅವರ ಕೋಣೆಗೆ ಹೋಗಿದ್ದುದು ಹೆಚ್ಚು ಕಲಿಯಬೇಕೆಂಬ, ಹೆಚ್ಚು ತಿಳಿಯಬೇಕೆಂಬ ಬಯಕೆಯಿಂದ ಎಂಬುದನ್ನು ಅವರಿಗೆ ತಿಳಿಸಿದೆ. ಕೇವಲ ಒಬ್ಬ ಬಾಲಕಿಯಾಗಿ ಕಾಣಲ್ಪಡುವುದು ನನಗಿಷ್ಟವಿರಲಿಲ್ಲ ಎಂದೂ ತಿಳಿಸಿದೆ. ನಾನು ನಿಜಕ್ಕೂ ಒಂದು ವಿಚಿತ್ರ ಮನೋಸ್ಥಿತಿಯಲ್ಲಿದ್ದೆನೆಂದು ತೋರುತ್ತೆ. ನಾನು ಕೋಮಲ ಭಾವನೆಗಳಿಂದ ತುಂಬಿದ್ದೆ. ನನ್ನ ಕಣ್ಣುಗಳಲ್ಲಿ ನೀರೂರಿದ್ದಿತು. ನಾನು ಅವರಿಗೆ ಎಲ್ಲವನ್ನೂ ಹೇಳಿಬಿಟ್ಟೆ – ಅವರ ಬಗೆಗೆ ನನ್ನ ಸ್ನೇಹ, ಅವರನ್ನು ಪ್ರೀತಿ ಸುವ ಹಾಗೂ ಅವರನ್ನು ಚೆನ್ನಾಗಿ ನೋಡಿಕೊಳ್ಳುವ ಬಯಕೆ, ಅವರೊಂದಿಗೆ

ಹೃದಯದಾಳದಿಂದ ಒಂದಾಗುವ ಅವರಿಗೆ ಹಿತ ಕೊಡುವ ಸಂತೈಸುವ ಮಹ ದೇಚ್ಛೆ, ಎಲ್ಲವನ್ನೂ ಹೇಳಿದೆ. ಅವರು ಆಶ್ಚರ್ಯಗೊಂಡು, ಪೇಚಿನಲ್ಲಿ ಸಿಕ್ಕಿ ಬಿದ್ದವರಂತೆ ನನ್ನತ್ತ ವಿಚಿತ್ರ ನೋಟ ಬೀರಿದರು. ಏನನ್ನೂ ಹೇಳಲಿಲ್ಲ. ಆಗ ಇದ್ದಕ್ಕಿದ್ದಂತೆ ನಾನು ಘಾಸಿಗೊಂಡ, ನಿರಾಶೆಗೊಂಡ ಭಾವನೆ ಪಡೆದೆ. ಅವರು ನನ್ನನ್ನು ಅರ್ಥಮಾಡಿಕೊಳ್ಳಲಿಲ್ಲ, ನನ್ನನ್ನು ಕಂಡು ನಗುತ್ತಲೂ ಇರಬಹುದು, ಅನಿಸಿತು ನನಗೆ. ನನ್ನ ಕಣ್ಣೀರ ಕಟ್ಟೆ ಒಡೆಯಿತು. ನಾನು ಮಗುವಿನಂತೆ ಅಳ ತೊಡಗಿದೆ. ಉಮ್ಮಳಿಸಿ ಬರುತ್ತಿದ್ದ ಉದ್ವೇಗವನ್ನು ತಡೆಹಿಡಿಯದಾಗಿದ್ದೆ. ಅವರು ನನ್ನ ಕೈಗಳನ್ನು ತಮ್ಮ ಕೈಗೆ ತೆಗೆದುಕೊಂಡು ಮುತ್ತಿಟ್ಟರು, ತಮ್ಮ ಎದೆಗೆ ಒತ್ತಿ ಹಿಡಿದುಕೊಂಡರು, ಸಂತೈಸುವ ಮಾತುಗಳನ್ನು ಮಣಗುಟ್ಟಿದರು. ಅವರು ಭಾವಪೂರಿತರಾಗಿದ್ದರು. ಅವರು ಏನು ಹೇಳಿದರೋ, ನಾನು ಜ್ಞಾಪಿಸಿಕೊಳ್ಳ ಲಾರೆ – ನಾನು ಸುಮ್ಮನೆ ಅತ್ತೆ, ನಕ್ಕೆ, ಮತ್ತೆ ಅತ್ತೆ. ನನ್ನ ಕೆನ್ನೆಗಳು ಬಿಸಿಯಾ ಗಿದ್ದವು. ಆನಂದಭರಿತಳಾಗಿ ನಾನು ಒಂದು ಮಾತನ್ನೂ ಆಡದಾಗಿದ್ದೆ. ಭಾವ ಪೂರಿತರಾಗಿದ್ದರೂ, ಅವರು ಸಂಯಮದಿಂದಿದ್ದರು, ಕಳವಳಗೊಂಡಿದ್ದರು. ನಾನು ಇದ್ದಕ್ಕಿದ್ದಂತೆ ತೋರ್ಪಡಿಸಿದ ಹಿಗ್ಗು ಭಾವೋತ್ಸಾಹಗಳ ಫಲವಾಗಿ ತಮಗಾದ ಅನಿರೀಕ್ಷಿತ ಆಶ್ಚರ್ಯದಿಂದ ಅವರು ಮತ್ತೆ ಸಮಾಧಾನಸ್ಥಿತಿಗೆ ಹಿಂದಿರುಗದಾ ಗಿದ್ದರೆಂದು ಕಾಣುತ್ತೆ. ಅವರು ಬಹುಶಃ ಮೊದಲು ಕುತೂಹಲಿಗಳಷ್ಟೆ ಆಗಿದ್ದರು, ಅನಂತರ ನನ್ನ ನಿಷ್ಠೆಯನ್ನು, ಪ್ರೀತಿಯ ನುಡಿಗಳನ್ನು, ಕಾಳಜಿಯನ್ನು ನನ್ನಷ್ಟೇ ಪ್ರಾಮಾಣಿಕತೆಯಿಂದ, ಅಷ್ಟೇ ಗಮನ ನೀಡಿ, ಅಷ್ಟೇ ಪ್ರೀತಿಯಿಂದ, ಒಬ್ಬ ನಿಜವಾದ ಗೆಳೆಯನಂತೆ, ಬಹುಮಟ್ಟಿಗೆ ಒಬ್ಬ ಸೋದರನಂತೆ, ಒಪ್ಪಿಕೊಂಡರೆಂದು ನನಗನಿಸಿತು. ಅದು ಎಷ್ಟು ಸಂತಸದಾಯಕವಾಗಿತ್ತು, ಹಿತಕರವಾಗಿತ್ತು ! ಏನನ್ನೂ ಮುಚ್ಚಿಡುವ ಆವಶ್ಯಕತೆಯೇ ಇರಲಿಲ್ಲ. ಅವರೂ ಇದನ್ನು ಚೆನ್ನಾಗಿ ಭಾಷಿಸ ಬಲ್ಲವರಾದರು, ದಿನೇದಿನೇ ನನಗೆ ಹೆಚ್ಚು ನಿಕಟವಾಗುತ್ತ ಬಂದರು.

ಆ ಮಧುರವಾದ, ಕಾತುರತೆಯಿಂದ ಕೂಡಿದ ರಾತ್ರಿಗಳಲ್ಲಿ ನಾವು ಅಮ್ಮನ ಹಾಸಿಗೆ ಪಕ್ಕದ ಮೋಂಬತ್ತಿಯ ಮಿಣುಕು ದೀಪದಲ್ಲಿ, ಇಳೆಯ ಮೇಲಿನ ಸಮಸ್ತ ವಿಷಯಗಳ ಬಗೆಗೂ ಮಾತನಾಡಿದೆವು. ನಮ್ಮ ಮನಸ್ಸಿಗೆ ಬಂದ, ನಮ್ಮ ಹೃದಯ ದಿಂದ ಹೊರಬಿದ್ದ, ಎಲ್ಲ ವಿಷಯಗಳ ಬಗೆಗೂ ಮಾತನಾಡಿದೆವು. ನಾವು ಬಹುಮಟ್ಟಿಗೆ ಸುಖಿಗಳಾಗಿದ್ದೆವು. ಅದು ದುಃಖದಿಂದ ಕೂಡಿದ್ದರೂ, ಆನಂದದ ಕಾಲವಾಗಿದ್ದಿತು. ಸ್ಮರಣೆಗಳು, ಅವು ಸಂತಸದವಾಗಿರಲಿ, ದುಃಖದವಾಗಿರಲಿ, ಯಾವತ್ತೂ ವೇದನಾಭರಿತವೇ. ಕೊನೆಯ ಪಕ್ಷ ನನಗಂತೂ ಅವು ಹಾಗೆಯೇ. ಆದರೆ ಅದೊಂದು ರೀತಿಯ ಮಧುರ ವೇದನೆ. ನನ್ನ ಹೃದಯವು ಭಾರವಾಗಿ ದ್ದಾಗ ಈ ಸ್ಮರಣೆಗಳು, ಬಿಸಿಲಿನ ಬೇಗೆಯಿಂದ ಬಾಡಿದ ಬಡ ಹೂವೊಂದಕ್ಕೆ

ಸಂಜೆಯ ಇಬ್ಬನಿಯಂತೆ ಅಷ್ಟೇ ಚೈತನ್ಯದಾಯಕವಾಗಿರುತ್ತವೆ. ಉಲ್ಲಾಸಕರ ವಾಗಿರುತ್ತವೆ.

ಅಮ್ಮ ಗುಣವಾಗುತ್ತಿದ್ದಳು. ಆದರೂ ನಾನು ಅವಳ ಹಾಸಿಗೆಯ ಪಕ್ಕ ದಲ್ಲೇ ಕುಳಿತಿರುತ್ತಿದ್ದೆ. ಪಕ್ರೋವ್‌ಸ್ಕಿ ಆಗಾಗ್ಗೆ ಪುಸ್ತಕಗಳನ್ನು ತಂದು ಕೊಡು ತ್ತಿದ್ದರು. ಮೊದಮೊದಲು ಎಚ್ಚರವಾಗಿರಲೆಂದಷ್ಟೆ ಅವುಗಳನ್ನು ಓದುತ್ತಿದ್ದೆ. ಕ್ರಮೇಣ ಹೆಚ್ಚು ಗಮನವಿತ್ತು, ಕೊನೆಗೆ ಆಸಕ್ತಿಯಿಂದ ಓದತೊಡಗಿದೆ. ಅವು ಗಳಿಂದ ನನಗೆ ಅನೇಕಾನೇಕ ಹೊಸ, ಅದುವರೆವಿಗೂ ನಾನು ಊಹಿಸಿಯೇ ಇರ ದಿದ್ದಂಥ, ಸಂಗತಿಗಳು ತಿಳಿದುಬಂದವು. ಅವುಗಳು ನನ್ನ ಹೃದಯವನ್ನು ಹೊಸ ಭಾವನೆಗಳಿಂದ ತುಂಬಿದವು. ಗ್ರಹಿಸುವುದು ಹೆಚ್ಚು ಕಷ್ಟವಾದಷ್ಟೂ ಅವು ನನಗೆ ಅಷ್ಟೂ ಹೆಚ್ಚು ಪ್ರಿಯವಾಗತೊಡಗಿದವು, ನನ್ನ ಆತ್ಮಕ್ಕೆ ಅಷ್ಟೂ ಹೆಚ್ಚು ಮಧುರವಾಗತೊಡಗಿದವು. ಕೊನೆ ಇಲ್ಲದಂತೆ ನನ್ನ ಹೃದಯವನ್ನು ತುಂಬಿ ಕೊಳ್ಳುತ್ತ ಅವು ನನಗೆ ಬಿಡುವನ್ನೇ ನೀಡುತ್ತಿರಲಿಲ್ಲ. ಈ ಅರಾಜಕತೆಯು ನನ್ನ ಇಡೀ ಇರುವಿಕೆಯನ್ನೇ ಕದಲಿಸಿತು. ಆದರೂ ಈ ವಿಚಿತ್ರ ಆತ್ಮಿಕ ದಾಳಿಯು ನನ್ನ ಸಮತೋಲವನ್ನೇನೂ ಸಂಪೂರ್ಣವಾಗಿ ತಪ್ಪಿಸದಾಗಿದ್ದಿತು. ನಾನೊಬ್ಬ ಹೆಚ್ಚಿನ ಕನಸುಗಾರಳಾಗಿದ್ದೆ. ಅದು ನನ್ನನ್ನು ರಕ್ಷಿಸಿತು.

ಅಮ್ಮನಿಗೆ ಪೂರ್ಣವಾಗಿ ಗುಣವಾದ ಮೇಲೆ ನಮ್ಮ ರಾತ್ರಿ ಜಾಗರಣೆಗಳೂ ದೀರ್ಘ ಮಾತುಕತೆಗಳೂ ಕೊನೆಗಂಡವು. ಕೆಲವು ವೇಳೆ ನಾವು ಒಂದೆರಡು ಮಾತು ಗಳನ್ನು ಪರಸ್ಪರ ಆಡುವುದರಲ್ಲಿ ಯಶಸ್ವಿಯಾದೆವು. ಅವು ಬಹುಮಟ್ಟಿಗೆ ಕೆಲಸಕ್ಕೆ ಬಾರದವಾಗಿದ್ದಿರಬಹುದು. ಆದರೆ ನಾನು ಅವುಗಳನ್ನು ನನ್ನದೇ ರೀತಿಯಲ್ಲಿ ಅರ್ಥವ್ಯಾಖ್ಯಾನಿಸಲು, ಅವುಗಳಲ್ಲಿ ಯಾವುದೋ ರಹಸ್ಯಾರ್ಥವನ್ನು ಕಂಡುಕೊಳ್ಳಲು ಇಷ್ಟಪಟ್ಟೆ. ನನ್ನ ಬಾಳು ಪೂರ್ಣವಾಗಿತ್ತು. ನಾನು ಸಂತಸಿತಳಾಗಿದ್ದೆ. ಹಲವಾರು ವಾರ ನಾನು ಪ್ರಶಾಂತವಾದ ಸುಖ ಸಾಮ್ರಾಜ್ಯದಲ್ಲಿ ವಿಹರಿಸಿದೆ.

ಒಂದು ದಿನ ಹಿರಿಯ ಪಕ್ರೋವ್‌ಸ್ಕಿ ನಮ್ಮನ್ನು ಕಾಣಲು ಬಂದ. ಯಾವ ತ್ತಿನಂತೆ ಅತಿ ಮಾತನಾಡುತ್ತಿದ್ದ ಅವನು ಅಂದು ಅಸಾಮಾನ್ಯವಾಗಿ ಆನಂದ ಭರಿತನಾಗಿದ್ದ, ಭಾವೋತ್ಸಾಹದಿಂದ ಕೂಡಿದ್ದ, ಅತಿ ಹೆಚ್ಚು ಮಾತನಾಡಿದ. ಅವನು ಒಂದೇ ಸಮನೆ ನಗುತ್ತಿದ್ದ, ತಮಾಷೆ ಮಾಡುತ್ತಿದ್ದ. ಕೊನೆಗೆ ತನ್ನ ಉತ್ಸಾಹದ ಕಾರಣವನ್ನು ತಿಳಿಸಿದ. ತನ್ನ ಪ್ಯೇತ್ಯೆಂಕನ ಜನ್ಮದಿನಕ್ಕೆ ಒಂದು ವಾರ ವಷ್ಟೆ ಇದ್ದಿತು, ತಾನಂದು ತನ್ನ ಮಗನನ್ನು ಕಾಣಲು ಬರುವನು, ತನ್ನ ಪತ್ನಿ ತನಗೆ ಕೊಂಡುಕೊಡುವುದಾಗಿ ಮಾತುಕೊಟ್ಟಿರುವ ಹೊಸ ವೇಸ್‌ಕೋಟು, ಬೂಟು ತೊಟ್ಟು ಬರುವನು, ಎಂದು ಅವನು ತಿಳಿಸಿದ. ಸ್ವಲ್ಪದರಲ್ಲಿ, ಆ ವೃದ್ಧ ತುಂಬ ಸಂತೋಷಗೊಂಡಿದ್ದ, ಕೊನೆಯಿಲ್ಲದಂತೆ ಹರಟುತ್ತಿದ್ದ.

ಅವರ ಜನ್ಮದಿನ ! ನಾನು ಹಗಲೂ ರಾತ್ರಿ ಅದರ ಬಗೆಗೆ ಯೋಚಿಸಿದೆ. ನಾನೂ ಅವರಿಗೆ ನಮ್ಮ ಗೆಳೆತನದ ನೆನಪಾಗಿ ಜನ್ಮದಿನದ ಉಡುಗೊರೆ ನೀಡುವೆನು. ಆದರೆ ಏನು ಕೊಡಬೇಕು ? ಕೊನೆಗೆ ನಾನು ಅವರಿಗೆ ಕೆಲವು ಪುಸ್ತಕಗಳನ್ನು ನೀಡಬೇಕೆಂದು ನಿರ್ಧರಿಸಿದೆ. ಅವರಿಗೆ ಪೂಷ್ಕಿನ್ನರ ಸಂಪೂರ್ಣ ಕೃತಿಗಳ ಇತ್ತೀಚಿನ ಆವೃತ್ತಿ ಬೇಕಾಗಿದ್ದಿತೆಂದು ನನಗೆ ಗೊತ್ತಿತ್ತು. ಹಾಗಾದರೆ ಪೂಷ್ಕಿನ್ನರ ಕೃತಿಗಳನ್ನೇ ಕೊಟ್ಟುಬಿಡೋಣ. ಹೊಲಿಗೆ ಕೆಲಸ ಮಾಡಿ ನಾನು ಒಂದು ಹೊಸ ಫ್ರಾಕ್ ಕೊಳ್ಳಲೋಸುಗ 30 ರೂಬಲ್ ಉಳಿಸಿದ್ದೆ. ಪೂಷ್ಕಿನ್ನರ ಕೃತಿಗಳ ಸಂಪೂರ್ಣ ಸೆಟ್ಟಿಗೆ ಎಷ್ಟು ಬೆಲೆಯಾಗುವುದೆಂದು ತಿಳಿದು ಬರಲು ನಾನು ನಮ್ಮ ಅಡಿಗೆ ಕೆಲಸದ ಮುದುಕಿ ಮತ್ರ್ಯೋನಳನ್ನು ಪುಸ್ತಕದ ಅಂಗಡಿಗೆ ಕಳುಹಿಸಿದೆ. ಅಬ್ಬಾ ! ಹನ್ನೊಂದು ಸಂಪುಟಗಳು, ಬೈಂಡಿಂಗ್, ಎಲ್ಲ ಸೇರಿ ಕೊನೆಯ ಪಕ್ಷ 60 ರೂಬಲ್ ಆಗುತ್ತದೆಂದು ತಿಳಿದುಬಂದಿತು. ಅಷ್ಟೊಂದು ಹಣವನ್ನು ಎಲ್ಲಿಂದ ತರುವುದು ? ಎಷ್ಟು ಯೋಚನೆ ಮಾಡಿದರೂ ಮಾರ್ಗ ಕಂಡುಬರಲಿಲ್ಲ. ಅಮ್ಮನನ್ನು ಕೇಳುವುದಂತೂ ಸಾಧ್ಯವಿರಲಿಲ್ಲ. ಅವಳೇನೋ ಸಹಾಯ ಮಾಡುತ್ತಿದ್ದಳು. ಆದರೆ ಆಗ ಮನೆಯಲ್ಲಿದ್ದವರಿಗೆಲ್ಲ ವಿಷಯ ಗೊತ್ತಾಗಿ ಬಿಡುತ್ತಿತ್ತು, ನಾವು ಕೊಡುವ ಬಳುವಳಿ ಪಕ್ರೋವ್‌ಸ್ಕಿಯವರು ಒಂದು ವರ್ಷ ಕಾಲ ಪಾಠ ಹೇಳಿಕೊಟ್ಟುದಕ್ಕೆ ನೀಡಿದ ಕೃತಜ್ಞತೆಯ ಕುರುಹಷ್ಟೆ ಆಗಿ ಬಿಡುತ್ತಿದ್ದಿತು. ಬಳುವಳಿಯು ಇಡೀಯಾಗಿ ನನ್ನದೇ ಆಗಿರಬೇಕೆಂದು ನಾನು ಬಯಸಿದ್ದೆ. ನನಗೆ ಪಾಠ ಹೇಳಿಕೊಡಲು ಅವರು ಕೈಕೊಂಡ ತೊಂದರೆಯ ವಿಷಯ ಹೇಳುವುದಾದರೆ, ನಾನು ಅದಕ್ಕಾಗಿ ಅವರಿಗೆ ಚಿರಋಣಿಯಾಗಿ ಇರಲಿರುವೆನು, ನನ್ನ ಸ್ನೇಹದಿಂದಷ್ಟೆ ಅದಕ್ಕೆ ಪ್ರತಿಫಲ ನೀಡುವೆನು. ಅಂತೂ ಕೊನೆಗೆ ನಾನೊಂದು ಮಾರ್ಗ ಕಂಡುಹಿಡಿದೆ.

ಗಸ್ತಿನಿ ದ್ವೋರ್‌ನಲ್ಲಿರುವ ಪುಸ್ತಕವ್ಯಾಪಾರಿಗಳು ಕೆಲವು ವೇಳೆ ಬಹುಮಟ್ಟಿಗೆ ಹೊಸದೇ ಆಗಿರುವಂಥ ಪುಸ್ತಕಗಳನ್ನು ಅರ್ಧ ಬೆಲೆಗೆ ಮಾರುತ್ತಾರೆ, ಆದರೆ ಅದಕ್ಕಾಗಿ ಅವರೊಂದಿಗೆ ಚೌಕಾಶಿ ಮಾಡಬೇಕಷ್ಟೆ, ಎಂಬುದನ್ನು ನಾನು ತಿಳಿದಿದ್ದೆ. ಹಾಗಾಗಿ ನಾನು ಗಸ್ತಿನಿ ದ್ವೋರ್‌ಗೆ ಸಾಧ್ಯವಾದಷ್ಟು ಬೇಗ ಭೇಟಿ ಕೊಡಲು ನಿರ್ಧರಿಸಿದೆ. ಮಾರನೆಯ ದಿನವೇ ನನಗೆ ಅಂಥ ಅವಕಾಶ ಲಭಿಸಿತು. ಮನೆಗಾಗಿ ಏನೋ ಕೊಳ್ಳಬೇಕಾಗಿದ್ದಿತು. ಅಮ್ಮನಿಗೆ ಮೈ ಚೆನ್ನಾಗಿರಲಿಲ್ಲ. ಅನ್ನ ಫ್ಯೋದೊರೊವ್ನಳಿಗೆ ಅತ್ಯಂತ ಸಕಾಲಿಕವಾಗಿ ಸೋಮಾರಿತನ ಕೆರಳಿತ್ತು. ಆ ಕಾರ್ಯ ನನ್ನ ಮೇಲೆ ಬಿತ್ತು.

ನಾನು ಮತ್ರ್ಯೋನಳೊಂದಿಗೆ ಹೊರಟೆ. ನನ್ನ ಅದೃಷ್ಟ ಚೆನ್ನಾಗಿತ್ತು. ಬೇಗನೆಯೇ ಸೊಗಸಾಗಿ ಬೈಂಡ್ ಮಾಡಿದ ಪೂಷ್ಕಿನ್ನರ ಕೃತಿಗಳ ಒಂದು ಸೆಟ್ಟನ್ನು ಕಂಡುಹಿಡಿದೆ. ಚೌಕಾಶಿ ಪ್ರಾರಂಭಿಸಿದೆ. ಅಂಗಡಿಯವನು ಮೊದಲು ಅಂಗಡಿಯ

ಮಾರಾಟ ಬೆಲೆಗಿಂತ ಹೆಚ್ಚಿಗೆಯೇ ಕೇಳಿದ. ಆದರೆ ಆಮೇಲೆ, ನಿಜ, ಹಲವಾರು ಬಾರಿ ಹೊರಟು ಹೋಗುವಂತೆ ನಟಿಸಿ ಮತ್ತೆ ಬಂದು ಸಾಕಷ್ಟು ಯತ್ನ ಹಾಕಿದ ಮೇಲೆ, ಅದರ ಬೆಲೆಯನ್ನು ಹತ್ತು ಬೆಳ್ಳಿ ರೂಬಲ್*ಗಳಿಗೆ ಇಳಿಸುವಂತೆ ಮಾಡುವುದರಲ್ಲಿ ಯಶಸ್ವಿಯಾದೆ. ಚೌಕಾಶಿ ಮಾಡುವುದರಲ್ಲಿ ಎಷ್ಟು ವಿನೋದವಿರುತ್ತೆ! ನಾನು ಯಾಕೆ ಅಷ್ಟು ಉದ್ವಿಗ್ನಳಾಗಿದ್ದೆ, ನನಗೆ ಅಷ್ಟೊಂದು ಪುಸ್ತಕಗಳು ಯಾಕೆ ಬೇಕಿತ್ತು, ಎಂಬುದು ಬಡಪಾಯಿ ಮತ್ರ್ಯೋನಳಿಗೆ ಅರ್ಥವಾಗಲೇ ಇಲ್ಲ. ಅಷ್ಟಾದರೂ ನನ್ನ ತೊಂದರೆ ಏನೂ ನಿವಾರಣೆಯಾಗಿರಲಿಲ್ಲ. ನನ್ನ ಬಳಿ ಇದ್ದುದು ಬ್ಯಾಂಕ್‌ನೋಟುಗಳಲ್ಲಿ ಮೂವತ್ತು ರೂಬಲ್. ಅಂಗಡಿಯವನು ತಾನು ಹೇಳಿದ ಬೆಲೆಗಿಂತ ಒಂದು ಕೊಪೆಕ್ ಕಮ್ಮಿಗೂ ಆ ಪುಸ್ತಕಗಳನ್ನು ಮಾರಲು ಸಿದ್ಧವಿರಲಿಲ್ಲ. ನಾನೂ ಬಿಡಲಿಲ್ಲ. ಕಮ್ಮಿ ಮಾಡುವಂತೆ ಕೇಳುತ್ತಲೇ ಹೋದೆ. ಕೊನೆಗೆ ಅವನು ಇನ್ನು ಸ್ವಲ್ಪ ಇಳಿದ, ಇನ್ನೂ ಎರಡೂವರೆ ರೂಬಲ್‌ಗಳಷ್ಟು ಕಮ್ಮಿ ಮಾಡಿದ. ನೀವು ಪಾಪ, ಅಷ್ಟು ಒಳ್ಳೆಯ ಹುಡುಗಿ ಬಂದಿದೀರಿ ಅಂತ ಕಮ್ಮಿ ಮಾಡಿದೀನಿ, ಇಲ್ಲದಿದ್ದರೆ, ದೇವರಾಣೆಗೂ, ಪ್ರಪಂಚದಲ್ಲಿ ಯಾರು ಬಂದಿದ್ದರೂ ಬೆಲೆಯನ್ನು ಇಷ್ಟು ಕಮ್ಮಿ ಮಾಡುತ್ತಿರಲಿಲ್ಲ, ಎಂದು ಹೇಳಿದ. ಆದರೂ, ಇನ್ನೂ ಎರಡೂವರೆ ರೂಬಲ್‌ಗಳಷ್ಟು ಬೇಕಾಗಿತ್ತಲ್ಲ! ನನಗೆ ಮನಸ್ಸು ರೋಸಿ ಅಳಲೂ ಸಿದ್ಧವಿದ್ದೆ. ಆದರೆ ನನ್ನ ಈ ಕಷ್ಟದ ಸಮಯದಲ್ಲಿ ಅನಿರೀಕ್ಷಿತ ಘಟನೆಯೊಂದು ನೆರವಿಗೆ ಬಂದಿತು.

ಅನತಿದೂರದಲ್ಲಿದ್ದ ಇನ್ನೊಂದು ಪುಸ್ತಕದ ಅಂಗಡಿಯಲ್ಲಿ ಹಿರಿಯ ಪಕ್ರೋವ್‌ಸ್ಕಿ ಇದ್ದುದನ್ನು ಕಂಡೆ. ಅವನ ಸುತ್ತ ನಾಲ್ಕೈದು ಹಳೆ ಪುಸ್ತಕ ವ್ಯಾಪಾರಿಗಳು ಮುತ್ತಿಕೊಂಡು ಅವನನ್ನು ಚಿತ್ತ ಭ್ರಮಣೆಯಾಗುವಂತೆ ಪೀಡಿಸುತ್ತಿದ್ದರು. ಒಬ್ಬೊಬ್ಬರೂ ತಮ್ಮ ತಮ್ಮ ಪುಸ್ತಕಗಳನ್ನೇ ಎತ್ತಿ ಹಿಡಿಯುತ್ತಿದ್ದರು. ಅವರು ತೋರಿಸದೆ ಇದ್ದ ಪುಸ್ತಕಗಳೇ ಇರಲಿಲ್ಲ. ಹಿರಿಯ ಪಕ್ರೋವ್‌ಸ್ಕಿ ಅವಷ್ಟೆ ಅಲ್ಲ ಇನ್ನೂ ಹೆಚ್ಚು ಕೊಳ್ಳಲು ಉತ್ಸುಕನಾಗಿದ್ದ! ಆ ಬಡಪಾಯಿ ವೃದ್ಧ ಅವರ ಮಧ್ಯೆ ಎಷ್ಟು ಬೆದರಿ ನಿಂತಿದ್ದ. ಯಾವುದೇ ಪುಸ್ತಕವನ್ನು ಆಯ್ಕೆ ಮಾಡಲೂ ಆಗದಷ್ಟು ದಿಗ್ಭ್ರಾಂತನಾಗಿದ್ದ ಅವನು. ನಾನು ಅಲ್ಲಿಗೆ ಹೋಗಿ, ಏನು ಮಾಡುತ್ತಿದ್ದೀರಿ ಇಲ್ಲಿ, ಎಂದು ಕೇಳಿದಾಗ ಅವನಿಗಾದ ಆನಂದ ಅಷ್ಟಿಷ್ಟಲ್ಲ. ಅವನು ನನ್ನನ್ನು ಹುಚ್ಚು ಹಿಡಿಸುವಷ್ಟು ಪ್ರೀತಿಸುತ್ತಿದ್ದ. ತನ್ನ ಪ್ಯೇತ್ಯೆಂಕನನ್ನು ಎಷ್ಟು ಪ್ರೀತಿಸುತ್ತಿದ್ದನೋ ಬಹುಶಃ ಅಷ್ಟೇ ಪ್ರಮಾಣದಲ್ಲಿ ನನ್ನನ್ನೂ ಪ್ರೀತಿಸುತ್ತಿದ್ದ. "ನಾನು ಪುಸ್ತಕಗಳನ್ನು ಕೊಳ್ಳುತ್ತಿದ್ದೇನೆ, ವರ್ವಾರ ಅಲೆಕ್ಸೇಯೆವ್ನ. ನಮ್ಮ

---

*ಒಂದು ಬೆಳ್ಳಿ ರೂಬಲ್ ಬ್ಯಾಂಕ್‌ನೋಟುಗಳಲ್ಲಿ 3 ರೂಬಲ್ 50 ಕೊಪೆಕ್‌ಗೆ ಸಮನಾಗಿತ್ತು. – ಸಂ.

ಪ್ರೀತ್ಯೆಂಕನಿಗಾಗಿ. ಅವನ ಜನ್ಮದಿನ ಬರುತ್ತಿದೆ. ಅವನಿಗೆ ಪುಸ್ತಕಗಳೆಂದರೆ ಪ್ರಾಣ. ಅದಕ್ಕಾಗಿ ಕೆಲವು ಪುಸ್ತಕಗಳನ್ನು ಕೊಳ್ಳುತ್ತಿದ್ದೇನೆ." ಆ ವೃದ್ಧ ಯಾವಾಗಲೂ ತನ್ನ ವಿಚಾರವನ್ನು ವಿನೋದಾತ್ಮಕವಾಗಿ ವ್ಯಕ್ತಪಡಿಸುತ್ತಿದ್ದ. ಈಗ ಅದರ ಜೊತೆಗೆ ಅವನು ಗೊಂದಲಕ್ಕೂ ಒಳಗಾಗಿದ್ದ. ಅವನು ಯಾವುದನ್ನೇ ಆಯ್ದು ಕೊಳ್ಳಲಿ ಬೆಲೆ ಒಂದು, ಎರಡು ಅಥವಾ ಮೂರು ಬೆಳ್ಳಿ ರೂಬಲ್‌ಗಳಿಗಿಂತ ಕಡಮೆಯಿರಲಿಲ್ಲ. ದೊಡ್ಡ ಪುಸ್ತಕಗಳ ಬೆಲೆಯನ್ನು ಕೇಳುವ ಗೊಡವೆಗೂ ಅವನು ಹೋಗಲಿಲ್ಲ. ಅವುಗಳನ್ನು ಕೇವಲ ಆಸೆಯಿಂದ ನೋಡುತ್ತಿದ್ದ, ಅವುಗಳ ಪುಟ ಗಳನ್ನು ತಿರುವಿ ಹಾಕುತ್ತಿದ್ದ, ಆಮೇಲೆ ಅವುಗಳನ್ನು ಮತ್ತೆ ಸ್ವಸ್ಥಾನದಲ್ಲಿ ಮೃದು ವಾಗಿ ಇರಿಸುತ್ತಿದ್ದ. "ಉಹೂಂ, ಉಹೂಂ. ಅದು ತುಂಬ ಬೆಲೆಯದು" ಅವನು ಮಣಗುಟ್ಟುತ್ತಿದ್ದ. "ಅವು, ಆ ಪುಸ್ತಕಗಳು?" ಹಾಗೆನ್ನುತ್ತ ಅವನು ಕಮ್ಮಿ ಬೆಲೆಯ ನಿಯತಕಾಲಿಕಗಳತ್ತ, ಹಾಡಿನ ಮತ್ತಿತರ ಪುಸ್ತಕಗಳತ್ತ ಕೈ ಹಾಕುತ್ತಿದ್ದ. "ಇವನ್ನು ಯಾಕೆ ಕೊಳ್ಳುತ್ತೀರಿ? ಇವೆಲ್ಲ ಕೆಲಸಕ್ಕೆ ಬಾರದವು" ನಾನು ಹೇಳಿದೆ. "ಓಹ್, ಇಲ್ಲ." ಅವನೆಂದ. "ಇಲ್ಲಿ ತುಂಬ ಒಳ್ಳೆಯ ಪುಸ್ತಕಗಳಿವೆ. ನೋಡಿ, ನಿಮಗೇ ಗೊತ್ತಾಗುತ್ತೆ. ಕೆಲವಂತೂ ತುಂಬ ತುಂಬ ಚೆನ್ನಾಗಿವೆ..." ಈ ಕೊನೆಯ ಮಾತುಗಳನ್ನು ಅವನು ಎಷ್ಟು ದುಃಖದೊಂದಿಗೆ ಹೇಳಿದನೆಂದರೆ, ಹೆಚ್ಚು ಉತ್ತಮ ವಾದ ಪುಸ್ತಕಗಳು ತುಂಬ ದುಬಾರಿ ಎಂಬ ಕಾರಣದಿಂದ ಅವನು ಇನ್ನೇನು ಅಳಲಿರುವನೇನೋ ಎಂದು ನಾನು ಅಂದುಕೊಂಡೆ. ವಾಸ್ತವವಾಗಿ ಅವನ ಕೆಂಪು ಮೂಗಿನ ಮೇಲೆ ಒಂದು ದೊಡ್ಡ ಹನಿ ಕಣ್ಣೀರು ಉರುಳಿಬೀಳಲಿದ್ದುದನ್ನೂ ನಾನು ಕಾಣಬಲ್ಲವಳಿದ್ದೆ. ಅವನ ಬಳಿ ಎಷ್ಟು ಹಣ ಇದ್ದಿತು ಎಂದು ನಾನು ಕೇಳಿದೆ. "ಓಹ್, ಹಣವೇ" ಎನ್ನುತ್ತ ಆ ಬಡಪಾಯಿ ಮನುಷ್ಯ ತಾನು ಸಂಗ್ರಹಿಸಿ ವೃತ್ತ ಪತ್ರಿಕೆಯ ಚೂರೊಂದರಲ್ಲಿ ಸುತ್ತಿ ಇರಿಸಿಕೊಂಡಿದ್ದ ಇಡೀ ಹಣವನ್ನು ತೆಗೆದು ತೋರಿಸಿದ. "ನೋಡಿ ಇಲ್ಲೊಂದು ಅರ್ಧರೂಬಲ್ ಇದೆ, ಇಲ್ಲೊಂದು 20 ಕೊಪೆಕ್ ನಾಣ್ಯ. ತಾಮ್ರದ ನಾಣ್ಯಗಳಲ್ಲಿ ಇನ್ನೂ ಇಪ್ಪತ್ತು ಕೊಪೆಕ್." ನಾನು ಅವನನ್ನು ನನ್ನ ಪುಸ್ತಕ ವ್ಯಾಪಾರಿಯ ಬಳಿಗೆ ಕರೆತಂದೆ. "ಇಲ್ಲಿ ನೋಡಿ ಇಲ್ಲಿ ಹನ್ನೊಂದು ಪುಸ್ತಕಗಳಿವೆ. ಇವಕ್ಕೆ ಮೂವತ್ತೆರಡು ರೂಬಲ್ ಐವತ್ತು ಕೊಪೆಕ್ ಆಗುತ್ತೆ. ನನ್ನ ಬಳಿ ಮೂವತ್ತು ರೂಬಲ್ ಇದೆ. ನಿಮ್ಮ ಎರಡೂವರೆ ರೂಬಲ್ ಕೊಡಿ. ನಾವಿಬ್ಬರೂ ಸೇರಿ ಈ ಪುಸ್ತಕಗಳನ್ನು ಕೊಂಡು ಜೊತೆಯಾಗಿ ಬಳುವಳಿ ನೀಡೋಣ." ಅವನು ಆನಂದದಿಂದ ಹುಚ್ಚನಂತಾದ. ತನ್ನಲ್ಲಿದ್ದ ಹಣವನ್ನೆಲ್ಲ ಆ ಪುಸ್ತಕ ವ್ಯಾಪಾರಿಯ ಕೈಗೆ ಸುರಿದ. ಅವನು ಕೂಡಲೇ ಆ ಪುಸ್ತಕಗಳ ಹೊರೆ ಯನ್ನು ಅವನ ಮೇಲೆ ಹೊರಿಸಿದ. ಅವನು ಕೆಲವು ಪುಸ್ತಕಗಳನ್ನು ತನ್ನ ಜೇಬು ಗಳೊಳಕ್ಕೂ ಕೆಲವನ್ನು ತನ್ನ ಕಂಕುಳುಗಳ ಕೆಳಗೂ ತುರುಕಿಕೊಂಡು ತನ್ನ ಮನೆಯ

ಕಡೆಗೆ ಹೊರಟ. ಅವೆಲ್ಲವನ್ನೂ ಮಾರನೆಯ ದಿನ ಗುಟ್ಟಾಗಿ ತಪ್ಪದೆಯೇ ನನಗೆ ತಲುಪಿಸುವುದಾಗಿ ಮಾತುಕೊಟ್ಟು ಹೋದ.

ಮಾರನೆಯ ದಿನ ಅವನು ತನ್ನ ಮಗನನ್ನು ಕಾಣಲು ಬಂದ. ಎಂದಿನಂತೆ ಅಲ್ಲಿ ಒಂದರ್ಧ ಗಂಟೆ ಇದ್ದನಂತರ ನಮ್ಮಲ್ಲಿಗೆ ಬಂದ. ಅತ್ಯಂತ ವಿನೋದಾತ್ಮಕ ಹಾಗೂ ನಿಗೂಢ ಮುಖಭಾವದೊಂದಿಗೆ ನನ್ನ ಪಕ್ಕದಲ್ಲಿ ಬಂದು ಕುಳಿತ. ನಿಷ್ಕಪಟ ನಗೆ ಬೀರುತ್ತ, ಕೈಗಳೆರಡನ್ನೂ ಆನಂದದಿಂದ ಉಜ್ಜಿಕೊಳ್ಳುತ್ತ, ಪುಸ್ತಕಗಳನ್ನು ಯಾರಿಗೂ ಕಾಣದಂತೆ ತಂದು ಅಡಿಗೆಮನೆಯಲ್ಲಿ ಮತ್ರ್ಯೋನಳ ಸುಪರ್ದಿನಲ್ಲಿ ಇರಿಸಲಾಗಿದೆ, ಎಂದು ನನಗೆ ತಿಳಿಸಿದ. ಅನಂತರ ನಮ್ಮ ಸಂಭಾಷಣೆ ಮುಂದೆ ಬರಲಿದ್ದ ಆ ಸಂತಸಕರ ಘಟನೆಯ ಕಡೆಗೆ ಹರಿಯಿತು. ನಾವು ಬಳುವಳಿಯನ್ನು ಹೇಗೆ ಕೊಡಬೇಕು ಎಂಬುದನ್ನು ಅವನು ಸವಿವರವಾಗಿ ತಿಳಿಸಿದ. ಆದರೆ ಅವನು ಹೆಚ್ಚು ಮಾತನಾಡಿದಷ್ಟೂ ಅವನ ಮನಸ್ಸಿನಲ್ಲಿ ಬೇರೆ ಇನ್ನೇನೋ ಇದೆ ಎಂಬುದನ್ನು ನಾನು ಕಾಣಬಲ್ಲವಳಿದ್ದೆ. ಅದನ್ನವನು ಬಹಿರಂಗವಾಗಿ ಹೇಳಲು ಅಂಜಿದ್ದ. ನಾನು ಏನೂ ಹೇಳದೆ ಸುಮ್ಮನೆ ಕಾದಿದ್ದೆ. ಅವನ ಹಾವಭಾವಗಳಲ್ಲಿ ಮುಖಚೇಷ್ಟೆಗಳಲ್ಲಿ ಹಾಗೂ ಎಡಗಣ್ಣು ಮಿಟುಕಿಸುವುದರಲ್ಲಿ ಇದುವರೆವಿಗೂ ಸುಸ್ಪಷ್ಟವಾಗಿದ್ದ ಆ ಆನಂದದ ಕಿಡಿ, ಆ ರಹಸ್ಯಾತ್ಮಕ ತೃಪ್ತಿ, ಈಗ ಕಣ್ಮರೆಯಾಯಿತು. ಒಂದೊಂದು ನಿಮಿಷ ಸಂದಂತೆ ಅವನು ಹೆಚ್ಚುಹೆಚ್ಚು ಕಾತುರನಾದ, ಆತಂಕಗೊಂಡ.

"ವರ್ವಾರ ಅಲೆಕ್ಸೇಯೆವ್ನ" ಎಂದವನು ಕೊನೆಗೆ ಅಂಜುತ್ತಂಜುತ್ತ ತಗ್ಗಿದ ದನಿಯಲ್ಲಿ ಪ್ರಾರಂಭಿಸಿದ. "ನಾನು ಏನಂದುಕೊಂಡಿದೀನಿ ನಿಮಗೆ ಗೊತ್ತೆ, ವರ್ವಾರ ಅಲೆಕ್ಸೇಯೆವ್ನ?" ಈಗವನು ಸಂಪೂರ್ಣವಾಗಿ ಗೊಂದಲಕ್ಕೊಳಗಾಗಿದ್ದ. "ಹೀಗೆ ಮಾಡೋಣಾಂತ. ನೀವು ಹತ್ತು ಪುಸ್ತಕಗಳನ್ನು ಕೊಡೋದು, ನಿಮ್ಮದಾಗಿ, ನಿಮ್ಮ ಸ್ವಂತ ಬಳುವಳಿಯಾಗಿ. ನಾನು ಹನ್ನೊಂದನೆಯದನ್ನು ನನ್ನದಾಗಿ, ನನ್ನ ಸ್ವಂತ ಬಳುವಳಿಯಾಗಿ ಕೊಡೋದು. ಹಾಗೆ ನೋಡಿ, ನೀವೂ ಅವನಿಗೆ ಬಳುವಳಿ ಕೊಟ್ಟಂತಾಗುತ್ತೆ, ನಾನೂ ಒಂದು ಬಳುವಳಿ ಕೊಟ್ಟಂತಾಗುತ್ತೆ – ಇಬ್ಬರೂ ಕೊಟ್ಟ ಹಾಗಾಗುತ್ತೆ, ಇಬ್ಬರೂ ಬೇರೆ ಬೇರೆ ಕೊಟ್ಟ ಹಾಗೆ ಆಗುತ್ತೆ..." ಅವನು ಇನ್ನೂ ಮಾತು ಮುಂದುವರಿಸಲು ಆಗದಂತೆ ತುಂಬ ಗೊಂದಲಕ್ಕೊಳಗಾದ. ನಾನು ಏನು ಹೇಳುವೆನೋ ಎಂದು ಕೇಳಲು ತನ್ನೆಲ್ಲ ಆಸೆಯನ್ನೂ ಬಿಟ್ಟುಕೊಟ್ಟು ಕಾದು ಕುಳಿತ. "ನಾವು ಒಟ್ಟಿಗೇ ಬಳುವಳಿ ಕೊಡುವುದನ್ನು ನೀವೇಕೆ ಇಷ್ಟಪಡುವುದಿಲ್ಲ, ಜಖಾರ್ ಪಿತ್ರೋವಿಚ್‌ರವರೇ?" ನಾನು ಕೇಳಿದೆ. "ನೋಡಿ, ವರ್ವಾರ ಅಲೆಕ್ಸೇಯೆವ್ನ, ವಿಷಯ, ನಿಜವಾಗಿ..." ಅವನು ತೊದಲತೊಡಗಿದ, ಮಾತುಗಳ ಮಧ್ಯೆ ತೊಡರಿದ. ಮುಖ ಕೆಂಪಾಯಿತು.

"ವಿಷಯ..." ಎನ್ನುತ್ತ ಕೊನೆಗೂ ವಿವರಿಸಿದ. "ವರ್ವಾರ ಅಲೆಕ್ಸೇಯೆವ್ನ,

ನಾನು ಆಗೊಮ್ಮೆ ಈಗೊಮ್ಮೆ ಸ್ವಲ್ಪ ಕುಡಿಯುವುದುಂಟು. ಅಂದರೆ ನನಗೆ ಯಾವಾಗಲೂ ಅದೊಂದು ಚಟ ಅಂತಿಟ್ಟುಕೊಳ್ಳಿ. ನಾನು ನಡೆದುಕೊಳ್ಳಬೇಕಾದಂತೆ ನಡೆದುಕೊಳ್ಳುವುದಿಲ್ಲ.... ಕೆಲವು ವೇಳೆ ತುಂಬ ಚಳಿಯಾಗಿರುತ್ತೆ, ಅಥವಾ ಒಂದಲ್ಲ ಒಂದು ಅಹಿತ ಘಟನೆ ಜರುಗುತ್ತೆ, ಅಥವಾ ಏನೋ ದುಃಖ ನನ್ನನ್ನು ಆವರಿಸುತ್ತೆ, ಅಥವಾ ಎಲ್ಲೋ ಏನೋ ತಪ್ಪಾಗುತ್ತೆ... ಆಗ ನನಗೇನೂ ಮಾಡೋಕೆ ಆಗದೆ, ಕುಡೀತೀನಿ, ಕೆಲವು ವೇಳೆ ಒಂದು ಹನಿ ಹೆಚ್ಚು ಕುಡೀತೀನಿ. ಪ್ಯೋತ್ರ್ಯಂಕಗೆ ಅದು ಇಷ್ಟವಿಲ್ಲ, ನಿಮಗೇ ಗೊತ್ತು. ಅವನು ತುಂಬ ಕೋಪ ಮಾಡಿಕೊಳ್ಳುತ್ತಾನೆ, ನನ್ನನ್ನು ಬಯ್ಯುತ್ತಾನೆ, ನನಗೆ ಉಪನ್ಯಾಸ ಕೊಡುತ್ತಾನೆ. ಆದ್ದರಿಂದ ನಾನೇ ಬೇರೆಯಾಗಿ ಬಳುವಳಿ ಕೊಟ್ಟರೆ, ನಾನು ನನ್ನ ನಡತೆ ತಿದ್ದುಕೊಳ್ಳುತ್ತಾ ಇದ್ದೀನಿ ಅಂತ ಅವನಿಗೆ ಗೊತ್ತಾಗುತ್ತೆ. ನಾನು ತುಂಬ ಕಾಲದಿಂದ ಹಣ ಉಳಿಸುತ್ತಾ ಇದೀನಿ ಅಂತ ಅವನು ಕಂಡುಕೊಳ್ಳುತ್ತಾನೆ, ಯಾಕೆಂದರೆ, ಪ್ಯೋತ್ರ್ಯಂಕ ಕೊಟ್ಟರಷ್ಟೆ ಹೊರತು ನನ್ನ ಬಳಿ ಬೇರೆ ಯಾವ ಹಣವೂ ಇರುವುದಿಲ್ಲ. ಅವನಿಗೆ ಅದು ಗೊತ್ತು... ನಾನು ಹಣವನ್ನು ಈ ರೀತಿ ಖರ್ಚು ಮಾಡಿರುವುದನ್ನು ಕಂಡು, ಆ ಎಲ್ಲ ಹಣವನ್ನೂ ಅವನಿಗಾಗಿಯೇ ಉಳಿಸಿಟ್ಟಿದ್ದೆ ಅನ್ನುವುದನ್ನು ಕಂಡು, ಅವನಿಗೆ ತುಂಬ ಸಂತೋಷವಾಗುತ್ತೆ."

ನನ್ನತ್ತ ಅಷ್ಟು ಕಾತುರತೆಯಿಂದ ನೋಡುತ್ತ ಕುಳಿತ ಆ ವೃದ್ಧನನ್ನು ಕಂಡು ನನಗೆ ಖೇದವಾಯಿತು. ನಾನು ಕೂಡಲೇ ಮನಸ್ಸು ಮಾಡಿದೆ.

"ಹೀಗೇಕೆ ಮಾಡಬಾರದು, ಜಖಾರ್ ಪೆತ್ರೋವಿಚ್‌ರವರೇ. ನೀವೇ ಎಲ್ಲ ಪುಸ್ತಕಗಳನ್ನೂ ಕೊಟ್ಟುಬಿಡಿ !" ನಾನೆಂದೆ. "ಎಲ್ಲ? ಎಲ್ಲ ಪುಸ್ತಕಗಳನ್ನೂ ಅಂದಿರಾ?" "ಹುಂ." "ನನ್ನ ಸ್ವಂತ ಬಳುವಳಿಯಾಗಿ?" "ಹೌದು." "ಎಲ್ಲವನ್ನೂ ನನ್ನೊಬ್ಬನದೇ ಬಳುವಳಿಯಾಗಿ?" "ಹೌದು, ಎಲ್ಲವನ್ನೂ ನಿಮ್ಮೊಬ್ಬರದೇ ಬಳುವಳಿಯಾಗಿ !" ಅವನು ನನ್ನ ಮಾತಿನ ಅರ್ಥವನ್ನು ತುಂಬ ಹೊತ್ತು ಗ್ರಹಿಸಲಾರದಾಗಿದ್ದನೆಂದು ಕಂಡುಬಂದಿತು, ನಾನು ಅದನ್ನು ಸಾಕಷ್ಟು ಸ್ಪಷ್ಟವಾಗಿಯೇ ತಿಳಿಸಿದ್ದರೂ.

"ಹಾಗೋ" ಅವನು ಕನಸಿನಲ್ಲಿ ಹೇಳುವಂತೆ ಮಣಗುಟ್ಟಿದ. "ಅದು ನಿಜವಾಗಲೂ ಅದ್ಭುತವಾಗುವುದೆನ್ನಿ, ನಿಜಕ್ಕೂ ಭವ್ಯವಾಗುವುದೆನ್ನಿ. ಆದರೆ ನೀವು.... ನೀವೇನು ಮಾಡುತ್ತೀರಿ, ವರ್ವಾರ ಅಲೆಕ್ಸೇಯೆವ್ನ?" "ನಾನೇನೂ ಕೊಡೊಲ್ಲ, ಅಷ್ಟೆ" ನಾನೆಂದೆ. "ಏನೂ ಕೊಡೊಲ್ಲ !" ಅವನು ಸ್ವಲ್ಪ ಗಾಬರಿಯಿಂದ ಹೇಳಿದನು. "ನಿಮ್ಮಿಂದ ಏನೂ ಇಲ್ಲ, ಏನೇನೂ ಇಲ್ಲ?" ಭಯಭ್ರಾಂತನಾಗಿ ಅವನು ಇಡೀ ವಿಚಾರವನ್ನೇ ಬಿಟ್ಟುಕೊಡಲು ಸಿದ್ಧನಾದ, ನಾನೂ ಅವನ ಮಗನಿಗೆ ಬಳುವಳಿ ಕೊಡಲು ಸಾಧ್ಯವಾಗಲೆಂದು. ಮುದುಕ ನಿಜಕ್ಕೂ ಕಾರುಣ್ಯಮೂರ್ತಿ

ಯಾಗಿದ್ದ. ಅವನ ಮಗನಿಗೆ ಏನನ್ನಾದರೂ ಕೊಡಲು ನನಗೇನೋ ಸಂತೋಷ ವಿದ್ದಿತು, ಆದರೆ ಅವನ ಸಂತೋಷವನ್ನು ಕೆಡಿಸಲು ನನಗಿಷ್ಟವಿರಲಿಲ್ಲ, ಎಂದು ನಾನು ಅವನಿಗೆ ಖಾತರಿಯಾಗಿ ಹೇಳಿದೆ. "ನಿಮ್ಮ ಮಗನಿಗೆ ಸಂತೋಷವಾದರೆ, ನಿಮಗೆ ಸಂತೋಷವಾದರೆ, ನನಗೂ ಸಂತೋಷವೇ. ಏಕೆಂದರೆ ನಾನು ರಹಸ್ಯ ವಾಗಿ, ನನ್ನ ಹೃದಯದಲ್ಲಿ, ನಾನು ಅವರಿಗೆ ಬಳುವಳಿ ಕೊಟ್ಟಿದ್ದೇನೆಂದೇ ಭಾವಿಸಿ ಕೊಳ್ಳುತ್ತೇನೆ" ಎಂದೂ ನಾನು ಹೇಳಿದೆ. ಇದು ಅವನ ಆತಂಕವನ್ನು ನಿವಾರಣೆ ಮಾಡಿತು. ಅವನು ಇನ್ನೂ ಎರಡು ಗಂಟೆ ನಮ್ಮೊಂದಿಗಿದ್ದ. ಆದರೆ ಒಂದು ಘಳಿಗೆಯೂ ನಿಶ್ಚಲವಾಗಿ ಕುಳಿತಿರದಾಗಿದ್ದನು. ಕುಪ್ಪಳಿಸುತ್ತಿದ್ದ, ಹರಟುತ್ತಿದ್ದ, ನಗುತ್ತಿದ್ದ, ಸಾಷಳೊಂದಿಗೆ ಕುಣಿದಾಡಿದ, ನನಗೆ ಗುಟ್ಟಾಗಿ ಮುತ್ತು ಕೊಟ್ಟ, ನನ್ನ ತೋಳನ್ನು ಚಿಗುಟಿದ, ಅನ್ನ ಫ್ಯೋದೊರೊವ್ನ ತನ್ನತ್ತ ನೋಡದಿದ್ದಾಗ ಮುಖವಿಕಾರ ಮಾಡಿ ಅವಳನ್ನು ಅಣಕಿಸಿದ. ಕೊನೆಗೆ ಅನ್ನ ಫ್ಯೋದೊರೊವ್ನಳೇ ಅವನನ್ನು ಹೊರಗೆ ಅಟ್ಟಿದಳು. ಅವನು ಹಿಂದೆಂದೂ ಅಷ್ಟು ಗದ್ದಲಗಲಭೆ ಮಾಡಿರಲಿಲ್ಲ.

ಆ ಮಹಾದಿನ ಬಂದಾಗ ಅವನು ಹನ್ನೊಂದು ಗಂಟೆಗೆ ಸರಿಯಾಗಿ ಕಾಣಿಸಿ ಕೊಂಡ. ಅವನು ಚರ್ಚಿನ ಪ್ರಾರ್ಥನಾ ಕೂಟದಿಂದ ನೇರವಾಗಿ ಅಲ್ಲಿಗೆ ಬಂದಿದ್ದ. ಜಾಗರೂಕತೆಯಿಂದ ರಿಪೇರಿ ಮಾಡಿದ್ದ ಡ್ರೆಸ್-ಕೋಟನ್ನು ಧರಿಸಿದ್ದ. ಹಿಂದೆ ಹೇಳಿ ದ್ದಂತೆಯೇ ಹೊಸ ವೇಸ್‌ಕೋಟನ್ನೂ ಹೊಸ ಬೂಟುಗಳನ್ನೂ ಧರಿಸಿದ್ದ. ಒಂದೊಂದು ಕೈಯಲ್ಲೂ ಅವನು ಪುಸ್ತಕಗಳ ಒಂದೊಂದು ಕಟ್ಟು ಹಿಡಿದಿದ್ದ. ನಾವು ಆಗಷ್ಟೆ ಅನ್ನ ಫ್ಯೋದೊರೊವ್ನಳ ಡ್ರಾಯಿಂಗ್ ರೂಮಿನಲ್ಲಿ (ಅಂದು ಭಾನು ವಾರವಾಗಿತ್ತು) ಕಾಫಿ ಕುಡಿಯುತ್ತ ಕುಳಿತಿದ್ದೆವು. ಅವನು ಬಂದವನೇ ಹೇಳಿದ ಮೊದಲ ಮಾತೆಂದರೆ, ಪೂಷ್ಕಿನ್ ಒಬ್ಬ ಮಹಾಕವಿ, ಎಂಬುದು. ಆಮೇಲೆ ಕೂಡಲೇ ಗೊಂದಲಕ್ಕೊಳಗಾದ, ಒಂದು ವಿಷಯದಿಂದ ಮತ್ತೊಂದಕ್ಕೆ ಸಾಗಿ ಹೋದ. ಯಾರೇ ಆಗಲಿ ಸರಿಯಾಗಿ ನಡೆದುಕೊಳ್ಳಬೇಕು, ಹಾಗೆ ಮಾಡದಿದ್ದರೆ ಅಂಥ ವರು ಕುಡಿತಕ್ಕೆ ಶರಣು ಹೋಗುತ್ತಾರೆ, ಅಂತಹ ದುಶ್ಚಟಗಳು ಮನುಷ್ಯನ ಸರ್ವ ನಾಶವೇ ಸರಿ, ಎಂದು ಏನೇನೋ ಹೇಳತೊಡಗಿದ. ಕುಡಿತಕ್ಕೆ ಒಳಗಾಗಿ ಹಾಳಾದ ಜನರ ಅನೇಕ ನಿದರ್ಶನಗಳನ್ನು ನೀಡಿದ. ಸ್ವಲ್ಪ ಕಾಲದಿಂದೀಚೆಗೆ ತಾನು ತನ್ನ ರೀತಿನೀತಿಗಳನ್ನು ತಿದ್ದುಕೊಳ್ಳುತ್ತಿದ್ದುದಾಗಿಯೂ, ಆದರ್ಶಯುತವಾದ ರೀತಿಯಲ್ಲಿ ನಡೆದುಕೊಳ್ಳುತ್ತಿರುವುದಾಗಿಯೂ ತಿಳಿಸಿದ. ತನ್ನ ಮಗನ ಮಾತುಗಳು ಸತ್ಯವಾಗಿ ದ್ದವೆಂದು ತಾನು ಯಾವತ್ತೋ ಮನಗಂಡಿದ್ದುದಾಗಿಯೂ, ಅವನ್ನು ಹೃತ್ಪೂರ್ವಕ ವಾಗಿ ಒಪ್ಪಿದ್ದುದಾಗಿಯೂ ಈಗಷ್ಟೆ ತಾನು ನಿಜಕ್ಕೂ ಉತ್ತಮವಾದ ಮಾರ್ಗಕ್ಕೆ ಬದಲಿರುವುದಾಗಿಯೂ ಹೇಳಿದ. ಇದಕ್ಕೆ ಸಾಕ್ಷಿ ಎಂದರೆ ಈ ಪುಸ್ತಕ

ಗಳು, ಇವನ್ನು ತಾನು ಅದುವರೆವಿಗೂ ಉಳಿಸಿದ್ದ ಹಣದಿಂದ ಕೊಂಡಿದ್ದ, ಅವನ್ನು ಸ್ವೀಕರಿಸಬೇಕು, ಎಂದು ತನ್ನ ಮಗನನ್ನು ಕೇಳಿಕೊಂಡ.

ಆ ವೃದ್ಧನ ಮಾತುಗಳನ್ನು ಕೇಳಿ ನಾನು ಏಕಕಾಲದಲ್ಲೇ ನಗದೆಯೂ ಇರದಾದೆ, ಅಳದೆಯೂ ಇರದಾದೆ. ಸಂದರ್ಭಕ್ಕೆ ತಕ್ಕಂತೆ ಕಥೆ ಕಟ್ಟಿ ಹೇಳುವ ಕಲೆಯನ್ನು ಅವನು ಅರಿತಿದ್ದ. ಆ ಪುಸ್ತಕಗಳನ್ನು ಮಗನ ಕೋಣೆಗೆ ಕೊಂಡೊಯ್ದು ಬಡುವಿನ ಮೇಲೆ ಇರಿಸಿದ. ಆದರೆ ಪಕ್ರೋವ್‌ಸ್ಕಿ ಕೂಡಲೇ ಸತ್ಯಸಂಗತಿಯನ್ನು ಊಹಿಸಿ ತಿಳಿದರೆನ್ನಿ. ವೃದ್ಧನನ್ನು ಊಟಕ್ಕೆ ಇರುವಂತೆ ಆಹ್ವಾನಿಸಲಾಯಿತು. ಅದು ಎಂತಹ ಆನಂದದ ದಿನವಾಗಿತ್ತು ! ಊಟದನಂತರ ನಾವು ಇಸ್ಪೀಟು ಆಟವನ್ನು ಆಡಿದೆವು. ಸಾಷಳು ಬೇಕಾದಷ್ಟು ಚೇಷ್ಟೆ ಮಾಡಿದಳು. ನಾನೂ ಅವಳಿಗಿಂತ ಕಮ್ಮಿ ಏನೂ ಮಾಡಲಿಲ್ಲ. ಪಕ್ರೋವ್‌ಸ್ಕಿ ನನ್ನ ಕಡೆ ಗಮನವಿತ್ತು ವೀಕ್ಷಿಸುತ್ತಿದ್ದರು, ನನ್ನೊಂದಿಗೆ ಏಕಾಂತದಲ್ಲಿದ್ದು ಒಂದೆರಡು ಮಾತನಾಡಲು ಅವಕಾಶಕ್ಕಾಗಿ ಯತ್ನಿಸುತ್ತಿದ್ದರು. ಆದರೆ ನಾನು ಅವರಿಗೆ ಆ ಅವಕಾಶ ಲಭಿಸದಂತೆ ನೋಡಿಕೊಂಡೆ. ಅದು ಆ ನಾಲ್ಕು ವರ್ಷಗಳಲ್ಲೇ ಅತ್ಯಂತ ಸಂತೋಷದ ದಿನವಾಗಿತ್ತು.

ಈಗ ದುಃಖದ ಯಾತನೆಯ ಸ್ಮರಣೆಗಳು, ಕರಾಳ ದಿನಗಳ ನೆನಪುಗಳು, ಬರುತ್ತವೆ.ಆದ್ದರಿಂದಲೇ ಬಹುಶಃ ನನ್ನ ಲೇಖನಿ ನಿಧಾನವಾಗಿ ಚಲಿಸುತ್ತಿದೆ, ಮುಂದೆ ಸಾಗಲು ಅದಕ್ಕೆ ಇಷ್ಟವೇ ಇಲ್ಲದಂತಿದೆ. ಆದ್ದರಿಂದಲೇ ಬಹುಶಃ ಇರಬೇಕು, ನಾನು ನನ್ನ ಸಂತಸದ ದಿನಗಳ ಎಲ್ಲ ಸಣ್ಣಪುಟ್ಟ ವಿವರಗಳನ್ನೂ ಅಷ್ಟು ಪ್ರೀತಿಯಿಂದ ವರ್ಣಿಸಿರುವುದು. ಅವು ತೀರ ಕೆಲವೇ ದಿನಗಳಾಗಿದ್ದವು. ಅವುಗಳನಂತರ ದುಃಖದ ಹಾಗೂ ಆಶಾಹೀನ ದುಸ್ಥಿತಿಯ ದಿನಗಳು ಬಂದವು. ಇವು ಎಂದಿಗೆ ಮುಗಿಯುವುವೋ, ದೇವರೇ ಬಲ್ಲ.

ನನ್ನ ದೌರ್ಭಾಗ್ಯ ಪ್ರಾರಂಭವಾದುದು ಪಕ್ರೋವ್‌ಸ್ಕಿಯವರ ಕಾಯಿಲೆ ಹಾಗೂ ಸಾವಿನಿಂದ.

ನಾನು ಈಗಷ್ಟೆ ವಿವರಿಸಿದ ಘಟನೆಗಳಾಗಿ ಎರಡು ತಿಂಗಳಲ್ಲೇ ಪಕ್ರೋವ್‌ಸ್ಕಿ ಹಾಸಿಗೆ ಹಿಡಿದರು. ಆ ಕೊನೆಯ ಎರಡು ತಿಂಗಳುಗಳಲ್ಲಿ ಅವರು ತಮ್ಮ ಜೀವನೋಪಾಯಕ್ಕಾಗಿ ಬಹಳ ಕಷ್ಟಪಟ್ಟು ದುಡಿದರು. ಅವರಿಗೆ ಸುಭದ್ರವಾದ ಉದ್ಯೋಗವೇ ಇರಲಿಲ್ಲ. ಕೊನೆಯ ನಿಮಿಷದವರೆಗೂ, ಎಲ್ಲ ಕ್ಷಯರೋಗಿಗಳಂತೆಯೇ ಅವರೂ, ತಾವು ದೀರ್ಘ ಕಾಲ ಬಾಳಲಿರುವರೆಂಬ ಆಸೆಗೇ ಕಚ್ಚಿಕೊಂಡಿದ್ದರು. ಅವರು ಎಲ್ಲಾದರೂ ಶಾಲಾಧ್ಯಾಪಕನ ಉದ್ಯೋಗವನ್ನು ಪಡೆದುಕೊಳ್ಳಬಹುದಿತ್ತು. ಆದರೆ ಅವರು ಅಂಥ ವೃತ್ತಿಯನ್ನು ದ್ವೇಷಿಸುತ್ತಿದ್ದರು. ಇನ್ನು ಸಿವಿಲ್ ಸರ್ವಿಸ್ ವಿಷಯ ಹೇಳುವುದಾದರೆ, ಅವರ ಆರೋಗ್ಯ ಚೆನ್ನಾಗಿರದಿದ್ದ ಕಾರಣ ಅದು ಅವರ ವ್ಯಾಪ್ತಿಗೆ ಹೊರತಾಗಿದ್ದಿತು. ಅಲ್ಲದೆ ಆ ಕೆಲಸ ತೆಗೆದುಕೊಂಡಿ

ದ್ದರೆ ಅವರು ತಮ್ಮ ಮೊದಲ ವೇತನಕ್ಕಾಗಿ ತುಂಬ ಕಾಲ ಕಾಯಬೇಕಾಗುತ್ತಿದ್ದಿತು. ಎಲ್ಲೆಲ್ಲೂ ಅವರಿಗೆ ವೈಫಲ್ಯ ಬಿಟ್ಟು ಬೇರೇನೂ ಇರಲಿಲ್ಲ. ಅವರ ಮನಸ್ಸು ಬಹಳವಾಗಿ ಕೆಟ್ಟಿತು. ಅವರ ಆರೋಗ್ಯವೂ ಕ್ಷೀಣವಾಗುತ್ತಿತ್ತು. ಆದರೆ ಅವರು ಅದನ್ನು ಗಮನಿಸಲೇ ಇಲ್ಲ. ಶರತ್ಕಾಲ ಬಂದಿತು. ಯಾವುದಾದರೂ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿ ಕೇಳಿಕೊಳ್ಳಲೋಸುಗ ಅವರು ಪ್ರತಿದಿನವೂ ತಮ್ಮ ತೆಳುವಾದ ಕೋಟೊಂದನ್ನಷ್ಟೆ ತೊಟ್ಟು ಹೊರ ಹೋಗುತ್ತಿದ್ದರು. ಇದು ಅವರ ಮನಸ್ಸನ್ನು ಬಹಳವಾಗಿ ನೋಯಿಸಿದ್ದಿತು. ಅನೇಕ ವೇಳೆ ಅವರು ಮಳೆಯಲ್ಲಿ ಸಿಕ್ಕಿಬೀಳುತ್ತಿದ್ದರು, ಪಾದಗಳನ್ನು ತೋಯಿಸಿಕೊಳ್ಳುತ್ತಿದ್ದರು. ಕೊನೆಗೆ ಹಾಸಿಗೆ ಹಿಡಿದವರು ಮತ್ತೆ ಎಂದಿಗೂ ಏಳಲೇ ಇಲ್ಲಿ. ಅವರು ಶರತ್ಕಾಲದ ಮಧ್ಯದಲ್ಲೇ, ಅಕ್ಟೋಬರ್ ಕೊನೆಯ ಭಾಗದಲ್ಲಿ ಮೃತರಾದರು.

ಅವರು ಕಾಯಿಲೆ ಮಲಗಿದಾಗಿನಿಂದ ನಾನು ಅವರ ಕೋಣೆ ಬಿಟ್ಟು ಹೊರಗೆ ಹೋಗುತ್ತಲೇ ಇರಲಿಲ್ಲ, ಅವರನ್ನು ಗಮನವಿಟ್ಟು ನೋಡಿಕೊಳ್ಳುತ್ತಿದ್ದೆ, ಅವರ ಆವಶ್ಯಕತೆಗಳನ್ನೆಲ್ಲ ಪೂರೈಸಿಕೊಡುತ್ತಿದ್ದೆ, ಬಹುವೇಳೆ ಇಡೀ ರಾತ್ರಿ ಎಚ್ಚರವಾಗಿರುತ್ತಿದ್ದೆ. ಅವರ ಮನಸ್ಸು ಹೆಚ್ಚಿನ ವೇಳೆ ಎಲ್ಲೆಲ್ಲೋ ಅಲೆದಾಡುತ್ತಿದ್ದಿತು. ಅವರು ನಾನಾ ವಿಷಯಗಳ ಬಗೆಗೆ ಮಾತನಾಡುತ್ತಿದ್ದರು – ಅವರ ಪುಸ್ತಕಗಳ ಬಗೆಗೆ, ಅವರು ಪಡೆಯಲು ಯತ್ನಿಸಿದ ಕೆಲಸಗಳ ಬಗೆಗೆ, ನನ್ನ ಬಗೆಗೆ, ತಮ್ಮ ತಂದೆಯ ಬಗೆಗೆ. ಅವರು ಹೇಳುತ್ತಿದ್ದ ಬಹು ವಿಷಯ ನನಗೆ ಎಂದೂ ತಿಳಿದೂ ಇರಲಿಲ್ಲ, ಊಹಿಸಿಯೂ ಇರಲಿಲ್ಲ. ಅವರ ಕಾಯಿಲೆಯ ಮೊದಲ ದಿನಗಳಲ್ಲಿ ಮನೆಯಲ್ಲಿ ಪ್ರತಿಯೊಬ್ಬರೂ ನನ್ನನ್ನೇ ವಿಚಿತ್ರವಾಗಿ ಗಮನಿಸುತ್ತಿದ್ದಂತೆ ಕಂಡುಬಂದಿತು. ಆನ್ನ ಫ್ಯೋದೊರೊವ್ನಳು ನನ್ನನ್ನು ನೋಡಿ ತಲೆ ಕೊಡಹುತ್ತಿದ್ದಳು. ಆದರೆ ನಾನು ಶಾಂತಳಾಗಿ ಅವರ ನೋಟಗಳಿಗೆ ಪ್ರತಿ ನೋಟ ನೀಡುತ್ತಿದ್ದೆ. ಕ್ರಮೇಣ ಅವರು ನನ್ನನ್ನು ನಿಂದಿಸುವುದನ್ನು ನಿಲ್ಲಿಸಿದರು. ಕೊನೆಯಪಕ್ಷ ನನ್ನ ಅಮ್ಮ ಹಾಗೆ ಮಾಡಿದಳು.

ಪಕ್ರೋವ್‌ಸ್ಕಿ ಕೆಲವು ವೇಳೆ ನನ್ನನ್ನು ಗುರುತು ಹಿಡಿಯುತ್ತಿದ್ದರು. ಆದರೆ ಹಾಗೆ ಸ್ಪಷ್ಟ ತಿಳಿವಿನ ಘಳಿಗೆಗಳು ತುಂಬ ಅಪರೂಪವಾಗಿದ್ದವು. ಬಹು ಹೆಚ್ಚಿನ ಕಾಲವೆಲ್ಲ ಅವರು ಸನ್ನಿಯ ಸ್ಥಿತಿಯಲ್ಲಿದ್ದರು. ಅವರು ಇಡೀ ರಾತ್ರಿ ಯಾರೊಂದಿಗೋ ಉದ್ದವಾದ ಅಸ್ಪಷ್ಟವಾದ ಅಸ್ಫುಟವಾದ ವಾಕ್ಯಗಳೊಂದಿಗೆ ಮಾತನಾಡುತ್ತ ವಾದ ಮಾಡುತ್ತಿದ್ದರು; ಆ ಸಣ್ಣ ಕೋಣೆಯಲ್ಲಿ ಅವರ ಕರ್ಕಶವಾದ ಧ್ವನಿಯು ಶವದಾನಿಯಿಂದ ಬಂದಂತೆ ವಿಚಿತ್ರವಾಗಿ ತುಂಬುಸ್ವರರಹಿತವಾಗಿ ಕೇಳಿಬರುತ್ತಿತ್ತು. ನನಗೆ ಭಯವೋ ಭಯ. ಕೊನೆಯ ರಾತ್ರಿಯಂತೂ ಅವರು ವಿಶೇಷವಾಗಿ ಉನ್ಮಾದಾವಸ್ಥೆಯಲ್ಲಿದ್ದರು, ತುಂಬ ಸಂಕಟಪಡುತ್ತಿದ್ದರು, ನರಳುತ್ತಿದ್ದರು. ಅವರ

ಆಳಲಿಸ ನರಳಾಟವು ನನ್ನ ಹೃದಯುವನ್ನು ಓಂಡುತ್ತಿತ್ತು. ಮನೆಯುವರೆಲ್ಲ ತುಂಬ ಗಾಬರಿಗೊಂಡಿದ್ದರು. ಅನ್ನ ಫ್ಯೋದೊರೊವ್ನಳು ಅವರನ್ನು ಬೇಗ ತನ್ನ ಸನ್ನಿಧಿಗೆ ಕರೆದುಕೊಳ್ಳುವಂತೆ ದೇವರನ್ನು ಪ್ರಾರ್ಥಿಸಿದಳು. ವೈದ್ಯರನ್ನು ಕರೆತರ ಲಾಯಿತು. ಬೆಳಗಿನ ಹೊತ್ತಿಗೆ ಅಂತ್ಯ ಬಳಲಿದೆಯೆಂದು ಅವರು ತಿಳಿಸಿದರು.

ವೃದ್ಧ ಪಕ್ರೋವ್‌ಸ್ಕಿ ಇಡೀ ರಾತ್ರಿ ಬಾಗಿಲ ಬಳಿಯೇ ಕಳೆದ. ಅಲ್ಲಿ ಅವನಿ ಗಾಗಿ ಒಂದು ಚಾಪೆ ಹಾಸಲಾಗಿತ್ತು. ಆಗಾಗ್ಗೆ ಕೋಣೆಯೊಳಗೆ ಬರುತ್ತಿದ್ದ. ಅವನತ್ತ ನೋಡಲೂ ನಾನು ಹೆದರುತ್ತಿದ್ದೆ, ಅವನ ಹೃದಯ ಒಡೆದಿತ್ತು, ಅವನು ದುಃಖದಿಂದ ದಂಗು ಬಡಿದವನಂತಾಗಿದ್ದ, ಜಡಗೊಂಡಿದ್ದ. ಅವನ ತಲೆ ಅಂಜಿಕೆ ಯಿಂದ ಅದುರುತ್ತಿತ್ತು, ಅವನ ಇಡೀ ದೇಹ ಕಂಪಿಸುತ್ತಿತ್ತು, ತನ್ನೊಳಗೇ ವಟಗುಟ್ಟುತ್ತ ಚರ್ಚಿಸುತ್ತಿದ್ದ. ಅವನೆಲ್ಲಿ ಬುದ್ಧಿ ಕಳೆದುಕೊಳ್ಳುವನೋ ಎಂದು ನಾನು ಅಂಜಿದ್ದೆ.

ಮುಂಜಾನೆಗೆ ಸ್ವಲ್ಪ ಮುನ್ನ ವೃದ್ಧ ತುಂಬ ಬಳಲಿಕೆಗೆ ಒಳಗಾಗಿ ಸಾವಿನಂಥ ಗಾಢ ನಿದ್ರೆಯಲ್ಲಿ ಮಲಗಿದ. ಏಳು ಗಂಟೆಯಾದ ನಂತರ ಎಳೆಯ ಪಕ್ರೋವ್ ಸ್ಕಿಗೆ ಸಾವು ಸಮೀಪಿಸಿದೆ ಎಂಬುದನ್ನು ಕಂಡ ನಾನು ತಂದೆಯನ್ನು ಎಬ್ಬಿಸಿದೆ. ಸಾಯಲಿದ್ದವರು ಪೂರ್ಣ ಪ್ರಜ್ಞೆ ಪಡೆದಿದ್ದರು, ನಮ್ಮೆಲ್ಲರಿಂದಲೂ ಬೀಳ್ಕೊಂಡರು. ವಿಚಿತ್ರವೆನ್ನುವಂತೆ, ನನ್ನ ಹೃದಯ ಒಡೆಯುತ್ತಿದ್ದರೂ ನಾನು ಅಳದಾಗಿದ್ದೆ.

ಆದರೆ ಪಕ್ರೋವ್‌ಸ್ಕಿಯವರ ಕೊನೆಯ ಘಳಿಗೆಗಳು ತೀರ ಕೆಡುಕಾಗಿದ್ದವು. ಅವರು ತೊದಲು ಮಾತಿನಲ್ಲಿ ಏನೋ ಬೇಕೆಂದು ಕೇಳುತ್ತಿದ್ದರು. ಆದರೆ ನಾನು ಅವರ ಮಾತುಗಳನ್ನು ತಿಳಿಯದಾಗಿದ್ದೆ. ಅದು ನನಗೆ ಅಸಹನೀಯವಾಗಿದ್ದಿತು. ಒಂದು ಗಂಟೆ ಅವರು ಅವಿಶ್ರಾಂತರಾಗಿದ್ದರು, ನನ್ನತ್ತವೇ ಕರುಣಾಜನಕವಾಗಿ ನೋಡುತ್ತಿದ್ದರು, ತಮ್ಮ ಮಾತಿನ ಅರ್ಥವನ್ನು ಹಾವಭಾವಗಳ ಮೂಲಕ ತಿಳಿಸಲು ಯತ್ನಿಸುತ್ತಿದ್ದರು. ಆಮೇಲೆ ಅವರು ಮತ್ತೆ ತಮ್ಮ ಕರ್ಕಶವಾದ ಅಸ್ಫುಟವಾದ ಧ್ವನಿಯಲ್ಲಿ ಏನನ್ನೋ ಕೇಳತೊಡಗಿದರು. ಅವರ ಮಾತು ಮತ್ತೆ ನನಗೇನೂ ಅರ್ಥವಾಗಲೇ ಇಲ್ಲ. ಒಬ್ಬರಾದ ಮೇಲೊಬ್ಬರಂತೆ ಎಲ್ಲರನ್ನೂ ಅವರ ಹಾಸಿಗೆಯ ಬಳಿಗೆ ಕರೆತಂದೆ. ಸ್ವಲ್ಪ ನೀರು ಕುಡಿಸಿದೆ. ಆದರೂ ಅವರು ತಮ್ಮ ತಲೆಯನ್ನು ದುಃಖದಿಂದ ಆಡಿಸಿದರು. ಕೊನೆಗೆ ಅವರಿಗೆ ಏನು ಬೇಕಿ ದ್ದಿತೆಂಬುದು ನನಗೆ ಅರ್ಥವಾಯಿತು. ಹಗಲಿನ ಬೆಳಕಿನ, ಸೂರ್ಯನ, ದೇವರ ಈ ಎಲ್ಲ ಜಗತ್ತಿನ, ಕೊನೆಯ ನೋಟ ಪಡೆಯಲು ಅನುವಾಗುವಂತೆ ಕಿಟಕಿಗೆ ಮುಚ್ಚಿದ್ದ ತೆರೆಯನ್ನು ಹಿಂದಕ್ಕೆ ಎಳೆಯುವಂತೆ ಅವರು ನನಗೆ ಹೇಳುತ್ತಿದ್ದರು. ನಾನು ತೆರೆಯನ್ನು ಮೇಲಕ್ಕೆತ್ತಿದೆ. ಆದರೆ ಹೊರಗೆ ಆರಂಭವಾಗುತ್ತಿದ್ದ ದಿನವು ನಶಿಸುತ್ತಿದ್ದ ಅವರ ಬಡ ಜೀವದಂತೆಯೇ ವಿಷಾದಪೂರ್ಣವಾಗಿತ್ತು, ದುಃಖ

ಭರಿತವಾಗಿತ್ತು. ಆಗಸದಾದ್ಯಂತ ಮೋಡಗಳು ಮಬ್ಬಿನ ತೆರೆಯಂತೆ ಆವರಿಸಿದ್ದವು. ಅದೊಂದು ವಿಷಣ್ಣವಾದ, ಮಳೆಗಾಲದ, ಮೋಡ ಕವಿದ ಆಗಸವಾಗಿದ್ದಿತು. ಕಿಟಕಿಯ ಗಾಜಿನ ಮೇಲೆ ಸಣ್ಣ ಮಳೆಯ ಹನಿಗಳು ಪಟಪಟ ಸದ್ದು ಮಾಡುತ್ತಿದ್ದವು, ಅದರ ಮೇಲೆ ತಣ್ಣಗಿನ ಕೊಳೆ ನೀರಿನ ಹರಿವುಗಳ ಪಟ್ಟೆ ಮೂಡಿಸಿದ್ದವು. ಹಗಲಿನ ನಿಸ್ತೇಜವಾದ ಬೆಳಕು ಕೋಣೆಯೊಳಕ್ಕೆ ಹರಿದು ದೇವರ ಚಿತ್ರಫಲಕದ ಮುಂದಿದ್ದ ನಡುಗುತ್ತಿದ್ದ ಮೋಂಬತ್ತಿಯ ಜ್ವಾಲೆಗೆ ದುರ್ಬಲ ಸವಾಲು ಹಾಕಿತು. ಮರಣ ಸಮೀಪಿಸಿದ್ದ ಅವರು ನನ್ನತ್ತ ಆಶಾಭರಿತ ನೋಟ ಬೀರಿ ತಲೆ ಆಡಿಸಿದರು. ಮುಂದಿನ ಘಳಿಗೆಯಲ್ಲೇ ಅವರು ಹೊರಟುಹೋಗಿದ್ದರು.

ಆನ್ನ ಫ್ಯೋದೊರೊವ್ನಳೇ ಶವಸಂಸ್ಕಾರ ಏರ್ಪಡಿಸಿದಳು. ಅತ್ಯಂತ ಸರಳವಾದ ಶವಸಂಪುಟವನ್ನು ತರಲಾಯಿತು. ಒಂದು ಸಾಮಾನ್ಯ ಗಾಡಿಯನ್ನು ಬಾಡಿಗೆಗೆ ಗೊತ್ತು ಮಾಡಲಾಯಿತು. ಇವುಗಳಿಗಾಗಿ ಮಾಡಿದ ಖರ್ಚಿಗೆ ಪ್ರತಿಯಾಗಿ ಆನ್ನ ಫ್ಯೋದೊರೊವ್ನ ಮೃತರ ಪುಸ್ತಕ ಮತ್ತಿತರ ವಸ್ತುಗಳನ್ನೆಲ್ಲ ತಾನೇ ವಶಪಡಿಸಿಕೊಂಡಳು. ವೃದ್ಧ ಪಕ್ರೋವ್‌ಸ್ಕಿ ಅವಳೊಂದಿಗೆ ಭಾರಿ ಜಗಳವಾಡಿ ಸಾಧ್ಯವಾದಷ್ಟು ಪುಸ್ತಕಗಳನ್ನು ತಾನೇ ತೆಗೆದುಕೊಂಡ, ಅವನ್ನು ತನ್ನ ಜೇಬುಗಳೊಳಕ್ಕೆ ಹ್ಯಾಟಿನೊಳಕ್ಕೆ ತುರುಕಿಕೊಂಡ. ಶವಸಂಸ್ಕಾರ ಮುಗಿಯುವವರೆಗೂ ಮೂರು ದಿನ ಅವನು ಈ ಪುಸ್ತಕಗಳನ್ನು ಬಿಟ್ಟಿರಲಿಲ್ಲ. ಅವನ್ನು ಚರ್ಚಿಗೂ ತಂದಿದ್ದ. ಅವನು ಎಷ್ಟು ದಿಗ್ಭ್ರಮೆಗೊಂಡಿದ್ದನೆಂದರೆ, ಬುದ್ಧಿಯನ್ನೇ ಕಳೆದುಕೊಂಡಿದ್ದವನಂತೆ ಕಂಡುಬಂದ. ಅವನು ಶವಸಂಪುಟದ ಸುತ್ತವೇ ಅಡ್ಡಾಡುತ್ತಿದ್ದ, ವೇಂಚಿಕ್*ಅನ್ನು ಸರಿಪಡಿಸುತ್ತಿದ್ದ, ಮೋಂಬತ್ತಿಯನ್ನು ಹೊತ್ತಿಸುತ್ತಿದ್ದ, ಆರಿಸುತ್ತಿದ್ದ. ಅವನ ಆಲೋಚನೆಗಳು ಬಹಳ ಹೊತ್ತು ಒಂದೇ ವಸ್ತುವಿನ ಮೇಲೆ ಕೇಂದ್ರೀಕರಿಸಿ ಇರಲಾಗದಿದ್ದವು. ಅಮ್ಮನಾಗಲೀ ಆನ್ನ ಫ್ಯೋದೊರೊವ್ನಳಾಗಲೀ ಚರ್ಚಿನ ಅಂತ್ಯಸಂಸ್ಕಾರಗಳಿಗೆ ಬರಲಿಲ್ಲ. ಅಮ್ಮನಿಗೆ ಮೈ ಸ್ವಸ್ಥವಿರಲಿಲ್ಲ. ಆನ್ನ ಫ್ಯೋದೊರೊವ್ನ ಚರ್ಚಿಗೆ ಹೊರಟಿದ್ದವಳು ಮತ್ತೆ ವೃದ್ಧ ಪಕ್ರೋವ್‌ಸ್ಕಿಯೊಂದಿಗೆ ಜಗಳವಾಡಿ ತನ್ನ ಮನಸ್ಸನ್ನು ಬದಲಿಸಿದಳು. ಆ ವೃದ್ಧ ಹಾಗೂ ನಾನು ಇಬ್ಬರೇ ಚರ್ಚಿನಲ್ಲಿ ಹಾಜರಿದ್ದುದು. ಸಂಸ್ಕಾರ ನಡೆಯುತ್ತಿದ್ದಾಗ ಒಂದು ರೀತಿಯ ಹೆದರಿಕೆ, ಭವಿಷ್ಯತ್ತಿನ ಬಗೆಗೆ ಒಂದು ರೀತಿಯ ಮುನ್ನಳುಕು, ನನ್ನನ್ನು ಆವರಿಸಿತು. ಸಂಸ್ಕಾರ

---

*ವೇಂಚಿಕ್ – ಯೇಸುಕ್ರಿಸ್ತ, ಪವಿತ್ರ ಕನ್ಯೆ ಹಾಗೂ ದೇವದೂತ ಜಾನ್‌ರವರ ಮೂರ್ತಿಗಳನ್ನುಳ್ಳ ಸ್ಯಾಟಿನ್ನಿನ ಇಲ್ಲವೇ ಕಾಗದದ ರಿಬ್ಬನ್. ಇದನ್ನು ಗ್ರೀಕ್ ಆರ್ಥೊಡಾಕ್ಸ್ ಚರ್ಚಿನ ಸಂಪ್ರದಾಯದ ಪ್ರಕಾರ ಮೃತರ ಹಣೆಯ ಮೇಲೆ ಇರಿಸಲಾಗುತ್ತೆ. – ಸಂ.

ಮುಗಿಯುವವರೆಗೂ ಅದನ್ನು ಸಹಿಸಿಕೊಂಡಿರುವುದೇ ಕಷ್ಟವಾಯಿತು. ಕೊನೆಗೆ ಶವಸಂಪುಟವನ್ನು ಮುಚ್ಚಲಾಯಿತು, ಮೊಳೆ ಹೊಡೆಯಲಾಯಿತು, ಬಂಡಿಯಲ್ಲಿರಿಸಿ ತೆಗೆದುಕೊಂಡು ಹೋಗಲಾಯಿತು. ನಾನು ಬೀದಿಯ ಕೊನೆಯವರೆಗೂ ಅದರ ಹಿಂದೆಯೇ ಹೋದೆ. ಬಂಡಿ ಚಾಲಕನು ಕುದುರೆಗಳನ್ನು ಕುಕ್ಕುಲೋಟದಲ್ಲಿ ನಡೆಸಲಾರಂಭಿಸಿದ. ವೃದ್ಧ ಪಕ್ರೋವ್‌ಸ್ಕಿ ಅದರ ಹಿಂದೆ ಓಡಿ ಹೋಗುತ್ತಿದ್ದ, ಗಟ್ಟಿಯಾಗಿ ಅಳುತ್ತಿದ್ದ, ಉಸಿರು ಕಟ್ಟಿದಾಗಷ್ಟೆ ಅವನ ಗದ್ಗದ ನಿಲ್ಲುತ್ತಿತ್ತು. ಅವನ ಹ್ಯಾಟು ಕೆಳಕ್ಕೆ ಬಿದ್ದುಹೋಯಿತು. ಅದನ್ನು ಎತ್ತಿಕೊಳ್ಳಲೂ ಅವನು ನಿಲ್ಲಲಿಲ್ಲ. ತಲೆಗೂದಲು ಮಳೆನೀರಿನಿಂದ ತೋಯ್ದಿತ್ತು. ಜೋರಾಗಿ ಬೀಸುತ್ತಿದ್ದ ಗಾಳಿ ಅವನ ಮುಖದ ಮೇಲೆ ಬಡಿಯುತ್ತಿದ್ದಿತು. ಅವನು ಇವಾವುದನ್ನೂ ಗಮನಕ್ಕೆ ತಂದುಕೊಂಡಂತೆಯೇ ಕಾಣುತ್ತಿರಲಿಲ್ಲ. ಬಂಡಿಯು ಒಂದು ಕಡೆಯಿಂದ ಇನ್ನೊಂದು ಕಡೆಗೆ ನೆಗೆದಾಡುತ್ತಲೇ ಇದ್ದ. ಅವನ ಹಳೆಯ ಕೋಟಿನ ಅಂಚುಗಳು ಗಾಳಿಯಲ್ಲಿ ಪಟಪಟನೆ ಬಡಿದುಕೊಳ್ಳುತ್ತಿದ್ದವು. ಅವನ ಎಲ್ಲ ಜೇಬುಗಳಿಂದಲೂ ಪುಸ್ತಕಗಳು ಹೊರಚಾಚಿಕೊಂಡಿದ್ದವು. ಅತ್ಯಂತ ದೊಡ್ಡದಾದ ಪುಸ್ತಕವನ್ನು ಅವನು ತನ್ನ ಎದೆಗೆ ಅವುಚಿ ಹಿಡಿದುಕೊಂಡಿದ್ದ. ಬೀದಿಯಲ್ಲಿ ಹೋಗಿ ಬರುತ್ತಿದ್ದವರು ತಮ್ಮ ಹ್ಯಾಟುಗಳನ್ನು ತಲೆಯಿಂದ ಮೇಲೆತ್ತಿ ಶಿಲುಬೆವಂದನೆ ಮಾಡುತ್ತಿದ್ದರು. ಕೆಲವರು ನಿಂತು ಆ ಬಡಪಾಯಿ ವೃದ್ಧನನ್ನು ದಿಟ್ಟಿಸಿ ನೋಡುತ್ತಿದ್ದರು. ಪುಸ್ತಕಗಳು ಅವರ ಜೇಬುಗಳಿಂದ ಕೆಸರಿಗೆ ಬೀಳುತ್ತಿದ್ದವು. ಯಾರಾದರೂ ಅವನನ್ನು ನಿಲ್ಲಿಸಿ ಪುಸ್ತಕ ಬೀಳಿಸಿಬಿಟ್ಟಿರಲ್ಲ ಎಂದಾಗ ಅವನು ಕೆಳಕ್ಕೆ ಬಿದ್ದ ಪುಸ್ತಕವನ್ನೆತ್ತಿಕೊಂಡು ಮತ್ತೆ ಬಂಡಿಯ ಹಿಂದೆ ಓಡಿ ಹೋಗುತ್ತಿದ್ದ. ಬೀದಿಯ ಮೂಲೆಯಲ್ಲಿ ಚಿಂದಿ ತೊಟ್ಟ ಭಿಕ್ಷುಕಿ ಮುದುಕಿಯೊಬ್ಬಳು ಅವನಿಗೆ ಜೊತೆ ಬಿದ್ದಳು. ಬಂಡಿ ಕಣ್ಮರೆಯಾದ ಮೇಲೆ ನಾನು ಮನೆಗೆ ಹೋದೆ, ನನ್ನ ತಾಯಿಯ ಎದೆಯ ಮೇಲೆ ಬಿದ್ದು ಗೊಳೋ ಎನ್ನುತ್ತ ಬಿಕ್ಕಳಿಸಿ ಬಿಕ್ಕಳಿಸಿ ಅತ್ತೆ. ಅವಳನ್ನು ಮುದ್ದಾಡಿ ಅವಳನ್ನು ನನ್ನ ತೋಳ ತೆಕ್ಕೆಯಲ್ಲಿ ಭದ್ರವಾಗಿ ಹಿಡಿದೆ – ನನ್ನ ಕೊನೆಯ ಉಳಿದ ಸ್ನೇಹಿತೆಯನ್ನೂ ಸಾವಿನ ಕ್ರೂರ ಮುಷ್ಟಿಯಿಂದ ಸುರಕ್ಷಿತವಾಗಿ ಇರಿಸಲೆಂಬಂತೆ. ಆದರೆ ಸಾವು ಆಗಲೇ ಅವಳ ಸುತ್ತ ಸುಳಿದಾಡುತ್ತಿದ್ದಿತು...

. . . . . . . . . . . . . . . . . . . . . . . . . . . . . . . . . . . . .

ಜೂನ್ **11**

ನಿನ್ನೆ ನಾವು ದ್ವೀಪಗಳಿಗೆ ವಾಯುಸಂಚಾರ ಹೋದುದಕ್ಕಾಗಿ ನಾನು ನಿಮಗೆ ಎಷ್ಟು ಕೃತಜ್ಞಳು, ಮಕಾರ್ ಅಲೆಕ್ಸೇಯೆವಿಚ್. ಆ ಪ್ರದೇಶಗಳು ಎಷ್ಟು ಸೊಗ

ಸಾಗಿವೆ, ಎಷ್ಟು ಹಸನಾಗಿ ಹಸುರಾಗಿವೆ! ಮರಗಳನ್ನೂ ಹುಲ್ಲನ್ನೂ ಕಂಡು ನಾನು ಎಷ್ಟು ದಿವಸವಾಗಿತ್ತು. ನಾನು ಕಾಯಿಲೆ ಮಲಗಿದ್ದಾಗ ಸಾಯುವೆನೆಂದೇ ಭಾವಿಸಿದ್ದೆ. ಹಾಗಾಗಿ ನಿನ್ನೆ ಆ ಸುಂದರ ದೃಶ್ಯವನ್ನು ಕಂಡಾಗ ನನಗೆಷ್ಟು ಆನಂದವಾಯಿತೆಂಬುದನ್ನು ನೀವೇ ಕಲ್ಪಿಸಿಕೊಳ್ಳಿ. ನಿನ್ನೆ ನಾನು ಸ್ವಲ್ಪ ದುಃಖಿತಳಾಗಿ ಕಂಡುಬಂದುದಕ್ಕಾಗಿ ದಯವಿಟ್ಟು ಕೋಪಗೊಳ್ಳಬೇಡಿ. ನಾನು ನಿಜಕ್ಕೂ ಸಂತೋಷ ದಿಂದ ಇದ್ದೆ, ನನ್ನ ಹೃದಯ ಹಗುರವಾಗಿತ್ತು. ಆದರೆ ಯಾವ ಕಾರಣಕ್ಕೋ, ನನ್ನ ಅತ್ಯಂತ ಹರ್ಷದ ಘಳಿಗೆಗಳಲ್ಲೆಲ್ಲ ನಾನು ಯಾವತ್ತೂ ವಿಷಣ್ಣಳಾಗಿರುತ್ತೇನೆ. ನಾನು ಅತ್ತುದನ್ನೂ ನೀವು ಮನಸ್ಸಿಗೆ ಹಚ್ಚಿಕೊಳ್ಳಬೇಡಿ. ನಾನು ಆಗಾಗ್ಗೆ ಹಾಗೆ ಅಳುತ್ತೇನೆ. ಏಕೆಂದು ನನಗೇ ಗೊತ್ತಿಲ್ಲ. ನಾನು ಎಲ್ಲವನ್ನೂ ತೀಕ್ಷ್ಣವಾಗಿ ಭಾವಿ ಸುತ್ತೇನೆ. ನನ್ನ ಭಾವನೆಗಳು ಯಾವತ್ತೂ ವಿಷಾದಕರವಾಗಿರುತ್ತವೆ. ನಿಸ್ತೇಜವಾಗಿದ್ದ ಮೋಡಗಳಿಲ್ಲದ ಆಕಾಶ, ಮುಳುಗುತ್ತಿದ್ದ ಸೂರ್ಯ. ಸಂಜೆಯ ಮೌನ ಇವೆಲ್ಲವು ಗಳಿಂದಾಗಿ, ನನಗೇ ಗೊತ್ತಿಲ್ಲ, ನಾನು ಸುಲಭವಾಗಿ ಭಾವೋದ್ವೇಗಗೊಳ್ಳುವ ಸ್ಥಿತಿಯಲ್ಲಿದ್ದೆ. ನನ್ನ ಹೃದಯ ಭಾರವಾಯಿತು, ಕಣ್ಣೀರು ತನ್ನಷ್ಟಕ್ಕೆ ತಾನೆ ಬಂದಿತು. ನಾನೇಕೆ ಇದನ್ನೆಲ್ಲ ಬರೆಯುತ್ತಿದ್ದೇನೆ? ಇವೆಲ್ಲ ನನ್ನ ಹೃದಯದಲ್ಲೂ ಅಸ್ಪಷ್ಟ ವಾಗಿವೆ, ಕಾಗದದ ಮೇಲೆ ಅರ್ಥರಹಿತವಾಗಿ ಕಾಣುತ್ತವೆ, ಆದರೆ ಬಹುಶಃ ನೀವು ಅರ್ಥಮಾಡಿಕೊಳ್ಳುವಿರಿ. ಕಣ್ಣೀರು, ನಗೆ! ನೀವು ಎಷ್ಟು ಒಳ್ಳೆಯವರು, ಎಷ್ಟು ಕರುಣಾಳು, ಮಕಾರ್ ಅಲೆಕ್ಸೇಯೆವಿಚ್. ನಾನು ನನ್ನ ಕಣ್ಣುಗಳಲ್ಲಿ ಏನು ಭಾವಿಸುತ್ತಿದ್ದೆ ಅನ್ನುವುದನ್ನೂ ಎಷ್ಟು ಉತ್ಸಾಹಿತಳಾಗಿದ್ದೆ, ಎಷ್ಟು ಆನಂದಭರಿತ ಳಾಗಿದ್ದೆ ಅನ್ನುವುದನ್ನೂ ಕಂಡುಕೊಳ್ಳಲು ನೀವು ನನ್ನನ್ನು ಹೇಗೆ ಕಣ್ಣಲ್ಲಿಕಣ್ಣಿಟ್ಟು ನೋಡಿದಿರಿ! ನಾನು ಒಂದು ಪೊದೆಯನ್ನೇ ನೋಡುತ್ತಿರಲಿ, ಗಿಡದ ಸಸಿಯನ್ನೇ ನೋಡುತ್ತಿರಲಿ, ಮರಗಳ ಸಾಲನ್ನೋ ನೀರಿನ ಪಟ್ಟೆಯನ್ನೋ ನೋಡುತ್ತಿರಲಿ, ನೀವು ಹೇಗೆ ನನ್ನನ್ನೇ ಗಮನಿಸುತ್ತಿದ್ದಿರಿ, ಅವೆಲ್ಲ ನಿಮ್ಮ ಸ್ವಂತ ಎಸ್ಟೇಟೇನೋ ಅನ್ನುವಂತೆ ಹೇಗೆ ನನ್ನ ಮುಂದೆ ಹೆಮ್ಮೆಯಿಂದ ಬಿಂಕದಿಂದ ನಡೆಯುತ್ತಿದ್ದಿರಿ. ಇದು ನಿಮ್ಮ ಹೃದಯ ಕರುಣಾಪೂರಿತವಾದುದು, ಎಂದು ತೋರಿಸುತ್ತದೆ, ಮಕಾರ್ ಅಲೆಕ್ಸೇಯೆವಿಚ್, ಅದಕ್ಕಾಗಿ ನಾನು ನಿಮ್ಮನ್ನು ಪ್ರೀತಿಸುತ್ತೇನೆ. ನಮಸ್ಕಾರ, ಪ್ರಿಯ ಮಕಾರ್ ಅಲೆಕ್ಸೇಯೆವಿಚ್, ನಾನಿಂದು ಮತ್ತೆ ಅಸ್ವಸ್ಥಳಾಗಿ ದ್ದೇನೆ. ಪಾದ ನೆನೆಯಿತು, ಶೀತವಾಯಿತು. ಫಿದೋರಳೂ ಅಸ್ವಸ್ಥ. ಹೀಗೆ ಇಬ್ಬರೂ ಅಶಕ್ತರಾಗಿದ್ದೇವೆ, ನಮ್ಮನ್ನು ಮರೆಯಬೇಡಿ, ಸಾಧ್ಯವಾದಷ್ಟೂ ಆಗಾಗ ಬನ್ನಿ.

ನಿಮ್ಮ,

ವ. ದೊ.

ಪ್ರಿಯ ವರ್ವಾರ ಅಲೆಕ್ಸೇಯೆವ್ನ,

ನಿಮಗೆ ಗೊತ್ತೆ, ನೀವು ನಿನ್ನಿನ ನಿಮ್ಮ ಭಾವನೆಗಳನ್ನೆಲ್ಲ ಕಾವ್ಯರೂಪದಲ್ಲಿ ವ್ಯಕ್ತಪಡಿಸುತ್ತೀರೆಂದು ನಾನು ಭಾವಿಸಿದ್ದೆ. ಬದಲು ನೀವು ಎಲ್ಲವನ್ನೂ ಸರಳವಾಗಿ ಒಂದು ಪುಟದಲ್ಲೇ ಬರೆದು ಮುಗಿಸಿದ್ದೀರ. ಆದರೂ ನಾನು ಹೇಳೋದು, ನೀವು ತೀರ ಸ್ವಲ ಬರೆದಿದ್ದರೂ ತುಂಬ ಚೆನ್ನಾಗಿ ಬರೆದಿದ್ದೀರ, ತುಂಬ ಪ್ರೀತಿಯಿಂದ ಬರೆದಿದ್ದೀರ. ನಿಮ್ಮ ಪತ್ರದಲ್ಲಿ ನಿಸರ್ಗದ, ನಾನಾ ರೀತಿಯ ಭೂದೃಶ್ಯಗಳ, ವಿವರಣೆ ಇದೆ, ಭಾವನೆಗಳಿವೆ. ಸ್ವಲ್ಪದರಲ್ಲಿ, ನೀವು ಎಲ್ಲವನ್ನೂ ಬಹಳ ಚೆನ್ನಾಗಿ ವರ್ಣಿಸಿದ್ದೀರ. ನನ್ನ ಬಗೆಗೆ ಹೇಳುವುದಾದರೆ, ನನಗೆ ಯಾವ ರೀತಿಯ ಪ್ರತಿಭೆಯೂ ಇಲ್ಲ, ನಾನು ಒಂದು ಡಜನ್ ಪುಟಗಳನ್ನು ಬರೆದರೂ ಯಾವ ಪರಿಣಾಮವೂ ಇರುವುದಿಲ್ಲ. ನಾನು ಹಾಗೆ ಮಾಡಿ ನೋಡಿದ್ದೇನೆ. ಆದ್ದರಿಂದಲೇ ನನಗೆ ಗೊತ್ತು, ವರ್ಣಿಸುವ ಪ್ರತಿಭೆ ನನಗಿಲ್ಲ ಅಂತ. ನಾನೊಬ್ಬ ಕರುಣಾಳು, ಅಕ್ಕಪಕ್ಕದವರಿಗೆ ಕೇಡು ಮಾಡಲು ಅಸಮರ್ಥ, ನಿಸರ್ಗದಲ್ಲಿ ವ್ಯಕ್ತಗೊಂಡಿರುವಂತೆ ದೇವರ ದಯಾಪೂರಿತ ಔದಾರ್ಯವನ್ನು ಅರ್ಥಮಾಡಿಕೊಳ್ಳುವ ಶಕ್ತಿ ನನ್ನಲ್ಲಿದೆ, ಎಂದು ನೀವು ಹೇಳುತ್ತೀರಿ, ಇನ್ನೂ ಇತರ ಅನೇಕ ರೀತಿಗಳಲ್ಲಿ ನೀವು ನನ್ನನ್ನು ಹೊಗಳುತ್ತೀರಿ, ನನ್ನ ಪ್ರಿಯೆ. ಇದೆಲ್ಲ ನಿಜವೇ, ನನ್ನ ಚಿನ್ನ. ಪರಮ ಸತ್ಯ. ನಾನು ನೀವು ವಿವರಿಸಿರುವಂತೆಯೇ ಇರುವುದು. ಅದು ನನಗೇ ಗೊತ್ತು. ಆದರೂ ನೀವು ಬರೆದಿರುವುದನ್ನು ಓದಿದಾಗ ನನ್ನ ಹೃದಯ ಕರಗುತ್ತೆ, ಆಮೇಲೆ ನಾನಾ ದುಃಖದ ವಿಚಾರಗಳು ಬರುತ್ತವೆ. ಅದುದರಿಂದ ಈಗ ನನ್ನ ವಿಷಯವನ್ನೇ ನಿಮಗೆ ಸ್ವಲ್ಪ ತಿಳಿಸುತ್ತೇನೆ, ಕೇಳಿ.

ನಾನು ಮೊದಲು ಈ ಆಫೀಸಿಗೆ ಬಂದಾಗ ನನಗೆ ಹದಿನೇಳು ವರ್ಷವಷ್ಟೆ. ಸದ್ಯದಲ್ಲೇ ಇಲ್ಲಿ ಕೆಲಸ ಮಾಡತೊಡಗಿ ಮೂವತ್ತು ವರ್ಷವಾಗುತ್ತೆ. ಈ ಸಮಯದಲ್ಲಿ ನಾನು ಬೇಕಾದಷ್ಟು ಸರ್ವೀಸ್ ಕೋಟುಗಳನ್ನು ತೊಟ್ಟು ಹರಿದಿದ್ದೇನೆಂದು ಖಂಡಿತ ಹೇಳಬಲ್ಲೆ. ನಾನು ಈ ಸರ್ವೀಸ್ ಮಾಡುತ್ತ ಹೆಚ್ಚು ಬೆಳೆದೂ ಇದ್ದೇನೆ, ಬುದ್ಧಿವಂತನೂ ಆಗಿದ್ದೇನೆ. ಒಂದಿಷ್ಟು ಜನರನ್ನೂ ಕಂಡಿದ್ದೇನೆ. ಖ್ಯಾತ ಬಾಳು ಬಾಳಿದ್ದೇನೆ, ಖಂಡಿತವಾಗಿಯೂ ! ಯಾಕೆ, ನನಗೆ ಗೌರವ ಪ್ರಶಸ್ತಿ ನೀಡಬೇಕೆಂದು ಶಿಫಾರಸು ಮಾಡಿದ ಕಾಲವೂ ಒಂದಿತ್ತು. ನೀವು ನಂಬುತ್ತೀರೋ ಇಲ್ಲವೋ, ಆದರೆ ದೇವರೇ ಸಾಕ್ಷಿ. ಆಗ ಏನಾಯಿತು ಅಂತೀರಿ, ನನ್ನ ಮುದ್ದು. ಕೆಲವು ಹೊಟ್ಟೆಕಿಚ್ಚಿನ ಜನರಿಂದಾಗಿ ಅದು ನನಗೆ ಲಭಿಸದಾಯಿತು. ನಾನೊಬ್ಬ ತಿಳಿಗೇಡಿ, ಶುದ್ಧ ಅವಿವೇಕಿಯಾಗಿರಬಹುದು, ಆದರೆ ನನಗೂ ಎಲ್ಲರಂತೆಯೇ ಹೃದಯವಿದೆ. ಹಾಗಾಗಿ, ನಿಮಗೆ ಗೊತ್ತೆ, ವಾರೇಂಕಾ, ಆ ಹೊಟ್ಟೆಕಿಚ್ಚಿನ ಜನ

ನನಗೆ ಏನು ಮಾಡಿದರೋಂತ? ನನಗೆ ಹೇಳಲು ನಾಚಿಕೆ – ಯಾಕೆ ಹಾಗೆ ಮಾಡಿದರು ಅಂತ ಕೇಳೋದು ಉತ್ತಮ. ಯಾಕೆಂದರೆ ನಾನು ಪುಕ್ಕಲ, ಯಾಕೆಂದರೆ ನಾನು ವಿನೀತ, ಯಾಕೆಂದರೆ ನಾನು ಮೃದುಹೃದಯಿ. ನಾನು ಅವರ ಅಭಿರುಚಿಗೆ ಸರಿಯಾದವನಾಗಿರಲಿಲ್ಲ, ಅದಕ್ಕೇ. ಅದು ಸಣ್ಣ ಪುಟ್ಟ ವಿಷಯಗಳಿಂದ ಪ್ರಾರಂಭವಾಯಿತು: "ಮಕಾರ್ ಅಲೆಕ್ಸೇಯೆವಿಚ್ ಹೀಗೆ, ಮಕಾರ್ ಅಲೆಕ್ಸೇಯೆವಿಚ್ ಹಾಗೆ." ಆಮೇಲೆ ಇನ್ನು ಸ್ವಲ್ಪ ಮೇಲಕ್ಕೆ ಹೋಯಿತು: "ಈಗ ನೋಡಿ, ಮಕಾರ್ ಅಲೆಕ್ಸೇಯೆವಿಚ್‌ರಿಂದ ಏನನ್ನು ನಿರೀಕ್ಷಿಸಲು ಸಾಧ್ಯ?" ಕೊನೆಗೆ ಇದಕ್ಕೆ ಬಂತು: "ಯಾರ ತಪ್ಪು? ಮಕಾರ್ ಅಲೆಕ್ಸೇಯೆವಿಚ್‌ರದೇ!" ಹೀಗೆ ನೋಡಿ, ನನ್ನ ಚಿನ್ನ, ಯಾವಾಗಲೂ ಮಕಾರ್ ಅಲೆಕ್ಸೇಯೆವಿಚ್‌ರದೇ ತಪ್ಪು. ಅವರು ಮಾಡಿದ್ದೇ ಅದು: ಇಡೀ ಇಲಾಖೆಯಲ್ಲಿ ಮಕಾರ್ ಅಲೆಕ್ಸೇಯೆವಿಚ್‌ರ ಹೆಸರಿಗೆ ಮಸಿ ಬಳಿಯುವುದು. ಅವರಿಗೆ ಇದಿಷ್ಟೇ ಸಾಕಾಗಲಿಲ್ಲ. ನಾನು ಹಾಕಿಕೊಳ್ಳುವ ಬೂಟುಗಳ ಬಗೆಗೆ, ನನ್ನ ಸರ್ವೀಸ್ ಕೋಟು, ನನ್ನ ಕೂದಲು, ನನ್ನ ಆಕೃತಿಯ ಬಗೆಗೂ ಸಹ, ಅವು ಯಾವುದೂ ಸರಿಯಾಗಿಲ್ಲ, ಎಲ್ಲವನ್ನೂ ಬದಲಿಸಬೇಕು ಅಂದರು. ಇದು ಅನೇಕ ವರ್ಷಗಳಿಂದ ನಡೆಯುತ್ತ ಬಂದಿದೆ, ನನಗೆ ನೆನಪಿನಲ್ಲಿರುವಂತೆ ಪ್ರತಿ ದಿನವೂ ನಡೆಯುತ್ತ ಬಂದಿದೆ. ನನಗೀಗ ಅದು ಒಗ್ಗಿಹೋಗಿದೆ. ನಾನು ಎಂಥದಕ್ಕೂ ಒಗ್ಗಿಕೊಂಡು ಹೋಗಬಲ್ಲೆ, ಏಕೆಂದರೆ ನಾನೊಬ್ಬ ಸಣ್ಣ ಮನುಷ್ಯ, ಗಣನೆಗೆ ಬಾರದವ. ಆದರೂ ನಾನೇಕೆ ಇದನ್ನೆಲ್ಲ ಸಹಿಸಿಕೊಂಡಿರಬೇಕು? ನಾನು ಏನು ಅನ್ಯಾಯ ಮಾಡಿದ್ದೇನೆ? ನಾನೇನಾದರೂ ಬೇರೆಯವರ ಬಡ್ತಿಯನ್ನು ನಾನೇ ಸರದಿ ಬಿಟ್ಟು ಲಪಟಾಯಿಸಿಕೊಂಡಿದ್ದೇನೆಯೆ? ಮೇಲಧಿಕಾರಿಗಳ ಮುಂದೆ ಯಾರ ಮೇಲಾದರೂ ದೂರು ಹೇಳಿದ್ದೇನೆಯೆ, ಯಾರನ್ನಾದರೂ ಅವಹೇಳನ ಮಾಡಿದ್ದೇನೆಯೆ? ನಾನು ಎಂದಾದರೂ ಪ್ರಶಸ್ತಿಗಾಗಿ ಜಗಳವಾಡಿದ್ದೇನೆಯೆ? ಎಂದಾದರೂ ಯಾರ ವಿರುದ್ಧವೇ ಆಗಲಿ ಸಂಚು ನಡೆಸಿದ್ದೇನೆಯೆ? ಅಂತಹುದು ಏನನ್ನಾದರೂ ಊಹಿಸುವುದೂ ಪಾಪಕರ! ಅವೆಲ್ಲ ನನಗೆ ಏತಕ್ಕೆ ಬೇಕು? ಅಲ್ಲದೆ, ನೀವೇ ಯೋಚಿಸಿ, ನನ್ನ ಮುದ್ದು, ನಾನು ದುರಾಸೆಯುವನಾಗಿ, ದ್ರೋಹ ಬಗೆಯುವವನಾಗಿ ಇರಲು ಸಾಲುವಷ್ಟು ಬುದ್ಧಿವಂತನೇ? ಇಷ್ಟೆಲ್ಲ ದುಷ್ಟ ಪ್ರಚಾರಕ್ಕೆ ಗುರಿಯಾಗಲು ನಾನು ಮಾಡಿರುವುದಾದರೂ ಏನು? ನೀವು ನನ್ನನ್ನು ಒಬ್ಬ ಯೋಗ್ಯ ಮನುಷ್ಯನೆಂದು ಕಾಣುತ್ತೀರಿ. ನೀವು, ನನ್ನ ಚಿನ್ನ, ಅವರೆಲ್ಲರಿಗಿಂತ ಅನುಪಮವಾಗಿ ಹೆಚ್ಚು ಉತ್ತಮರಾದವರು. ಅಲ್ಲದೆ, ಅತ್ಯಂತ ಹೆಚ್ಚಿನ ನಾಗರಿಕ ಸದ್ಗುಣ ಅನ್ನುವುದಾದರೂ ಯಾವುದು? ಅತ್ಯಂತ ಹೆಚ್ಚಿನ ನಾಗರಿಕ ಸದ್ಗುಣವೆಂದರೆ ಹಣ ಮಾಡುವುದು, ಎಂದು ನಿನ್ನೆ ಖಾಸಗಿಯಾಗಿ ನನ್ನ ಜೊತೆ ಮಾತನಾಡುತ್ತ ಯೆವ್‌ಸ್ತಾಫಿಯ್ ಇವಾನೊವಿಚ್

ಹೇಳಿದರು. ಯೆವ್‌ಸ್ತಾಫಿಯಸ್ ಇವಾನೊವಿಚ್‌ರವರು ತಮಾಷೆ ಮಾಡುತ್ತಿದ್ದ ರೆನ್ನಿ (ಯೆವ್‌ಸ್ತಾಫಿಯಸ್ ಇವಾನೊವಿಚ್‌ರವರು ತಮಾಷೆ ಮಾಡುತ್ತಿದ್ದರೆಂದೇ ನನಗೆ ಖಾತರಿ ಇದೆ). ಆದರೆ ಆದರಿಂದ ತಿಳಿಯಬೇಕಾದ ನೀತಿ ಎಂದರೆ ಯಾರೂ ಯಾರಿಗೂ ಹೊರೆಯಾಗಿರಬಾರದು ಅನ್ನುವುದು. ನಾನೇನೂ ಯಾರಿಗೂ ಹೊರೆ ಯಲ್ಲ. ನನ್ನ ತುತ್ತು ಅನ್ನ ನನಗಿದೆ, ಅದು ಬಹುಶಃ ಹಳಸಿದ್ದರೂ. ಅದನ್ನು ನಾನು ಪ್ರಾಮಾಣಿಕತೆಯಿಂದ ಸಂಪಾದಿಸಿದ್ದೇನೆ, ತುಂಬ ನ್ಯಾಯಬದ್ಧವಾಗಿ ಬಳ ಸಿದ್ದೇನೆ. ಮನುಷ್ಯನಾದವನು ಏನು ಮಾಡಬೇಕು? ಪತ್ರಗಳನ್ನು ನಕಲು ಮಾಡು ವುದು ಮಹತ್ ಕಾರ್ಯವೇನಲ್ಲ. ಆದರೂ ನನಗೆ ಅದರಲ್ಲಿ ಹೆಮ್ಮೆಯೇ. ಏಕೆಂದರೆ ನಾನು ಬೆವರು ಸುರಿಸಿ ಕೆಲಸ ಮಾಡುತ್ತೇನೆ. ಅಲ್ಲದೆ ಪತ್ರಗಳನ್ನು ನಕಲು ಮಾಡುವುದರಲ್ಲಿ ತಪ್ಪೇನಿದೆ? ಅದೇನು ಪಾಪ ಕೃತ್ಯವೇ? "ಅಲ್ಲಿ ನೋಡಿ, ನಕಲು ಮಾಡುತ್ತಾ ಕೂತಿದ್ದಾನೆ!" "ಆಫೀಸಿನ ಇಲಿ ನಕಲು ಮಾಡುತ್ತಾ ಇದೆ!" ಅದರಿಂದೇನು? ಅದರಲ್ಲಿ ಮೋಸ ಏನಿದೆ? ನನ್ನ ಬರವಣಿಗೆ ತುಂಬ ಅಂದವಾಗಿದೆ, ನೋಡುವುದಕ್ಕೆ ತುಂಬ ಚೆನ್ನಾಗಿರುತ್ತೆ, ದೊಡ್ಡ ಸಾಹೇಬರು ಯಾವಾಗಲೂ ಸಂತೋಷ ಪಡುತ್ತಾರೆ. ಇನ್ನು ಶೈಲಿಯ ವಿಷಯ ಹೇಳುವು ದಾದರೆ, ಅದನ್ನು ಬಿಡಿ, ನನಗೆ ಯಾವ ಶೈಲಿಯೂ ಇಲ್ಲ. ಅದು ನನಗೆ ಚೆನ್ನಾಗಿ ಗೊತ್ತು. ಆದ್ದರಿಂದಲೇ ನಾನು ಸರ್ವೀಸಿನಲ್ಲಿ ಎಂದೂ ಮೇಲೆ ಬಂದಿಲ್ಲ. ನಿಮಗೂ, ನನ್ನ ವಾರೆಂಕಾ, ಈಗ ಬರೆಯುತ್ತಿರುವಂತೆಯೇ, ಶೈಲಿಯ ಯಾವ ಆಡಂಬರ ಗಳೂ ಇಲ್ಲದೆ, ಯೋಚನೆಗಳು ಬಂದಂತೆ ಬರೆಯುತ್ತೇನೆ. ಅದು ನನಗೆ ಚೆನ್ನಾಗಿ ಗೊತ್ತು. ಆದರೆ ನಾನು ನಿಮ್ಮನ್ನು ಕೇಳುತ್ತೇನೆ: ಎಲ್ಲರೂ ಸಾಹಿತ್ಯರಚನೆಯನ್ನೇ ಶುರು ಮಾಡಿಬಿಟ್ಟರೆ ಹೇಗೆ? ಆಗ ನಕಲು ಮಾಡುವವರು ಯಾರು? ನಾನು ನಿಮಗೆ ಈ ಪ್ರಶ್ನೆ ಕೇಳುತ್ತಿದ್ದೇನೆ, ನೀವೇ ಉತ್ತರ ಹೇಳಿ. ಸರಿ, ಹಾಗಾದರೆ, ನಾನು ಅವಶ್ಯ ಅನ್ನೋದು ನನಗೆ ಗೊತ್ತು, ಅವರು ಗೇಲಿ ಮಾಡುವುದನ್ನು ನಿಲ್ಲಿಸಲಿ. ನನ್ನನ್ನು "ಆಫೀಸಿನ ಇಲಿ" ಎಂದೇ ಕರೆಯಲಿ – ನಾನು ಹಾಗೆ ಕಾಣುವು ದಾದರೆ. ಆದರೆ ಇದೊಂದು ಅತ್ಯವಶ್ಯವಾದ ಇಲಿ, ಅತ್ಯುಪಯುಕ್ತವಾದ ಇಲಿ, ಮೆಚ್ಚಿಗೆಗೆ ಅರ್ಹವಾಗಿರುವಂಥ ಇಲಿ, ಪ್ರಶಸ್ತಿ ವೇತನ ಪಡೆಯುತ್ತಿರುವಂಥ ಇಲಿ, ಎಂಬುದನ್ನು ಅವರು ಕಂಡುಕೊಳ್ಳಲಾರರೆ? ನಾನು ಅಂತಹ ರೀತಿಯ ಇಲಿಯೇ! ಆದರೆ ಇಲಿಗಳ ವಿಷಯ ಸಾಕು, ಪ್ರಿಯ ವಾರೆಂಕಾ. ನಾನು ಇದರ ವಿಷಯ ಬರೆಯಬೇಕೆಂದು ಅಂದುಕೊಂಡೇ ಇರಲಿಲ್ಲ, ಆದರೆ ಸ್ವಲ್ಪ ತಾಳ್ಮೆ ಕಳೆದುಕೊಂಡೆ, ಅಷ್ಟೆ. ಕಾಲ ಕಾಲಕ್ಕೆ ಯಾರಿಗೇ ಆಗಲಿ ಸಲ್ಲತಕ್ಕ ಗೌರವ ಸಲ್ಲ ಬೇಕು ನಮಸ್ಕಾರ, ನನ್ನ ಪ್ರಿಯತಮೆ, ನನಗೆ ನೆಮ್ಮದಿ ನೀಡುವ ನನ್ನ ಪುಟ್ಟ ಅರಗಿಣಿ. ನಾನು ಬೇಗನೆಯೇ ನಿಮ್ಮನ್ನು ಕಾಣಲು ಖಂಡಿತ ಬರುತ್ತೇನೆ, ನನ್ನ

ದೇವತೆ. ಅಲ್ಲಿಯವರೆಗೂ ಒಂಟಿಯೆಂದು ಅಂದುಕೊಳ್ಳಬೇಡಿ. ನನ್ನೊಡನೆ ಒಂದು ಪುಸ್ತಕವನ್ನೂ ತರುತ್ತೇನೆ. ನಮಸ್ಕಾರ, ವಾರೆಂಕಾ.

ನಿಮ್ಮ ಅತ್ಯಂತ ಹೃತ್ಪೂರ್ವಕ ಹಿತಾಭಿಲಾಷಿ,

ಮಕಾರ್ ದೇವುಷ್ಕಿನ್

ಜೂನ್ 20

ಪ್ರಿಯ ಮಕಾರ್ ಅಲೆಕ್ಸೇಯೆವಿಚ್,

ನಾನು ಒಪ್ಪಿಕೊಂಡಿರುವ ಕೆಲಸವನ್ನು ಸಕಾಲದಲ್ಲಿ ಮುಗಿಸಬೇಕಾಗಿರುವುದರಿಂದ ಈ ಪತ್ರವನ್ನು ಅವಸರದಲ್ಲಿ ಬರೆಯುತ್ತಿದ್ದೇನೆ. ಈ ಕಾಗದ ಬರೆಯುವ ಉದ್ದೇಶವನ್ನು ಸ್ವಲ್ಪ ವಿವರವಾಗಿ ಹೇಳುತ್ತೇನೆ: ನಮಗೀಗ ಒಂದು ತುಂಬ ಒಳ್ಳೆಯ ವಸ್ತುವನ್ನು ಲಾಭದಲ್ಲಿ ಕೊಳ್ಳುವ ಅವಕಾಶ ಲಭಿಸಿದೆ. ಫಿದೋರ ಹೇಳುತ್ತಾಳೆ, ಯಾರೋ ಒಂದು ಹೊಸ ಸಮವಸ್ತ್ರವನ್ನು – ಟ್ರೌಸರ್ಸ್, ವೇಸ್ ಕೋಟು ಹಾಗೂ ಟೋಪಿ ಎಲ್ಲ ಇರುವ ಸಮವಸ್ತ್ರವನ್ನು – ಮಾರಲು ಇಚ್ಛಿಸುತ್ತಿದ್ದಾರಂತೆ. ಅದು ತುಂಬ ಹೊಸದಾಗಿದೆ, ಅಗ್ಗವಾಗಿಯೂ ಇದೆ. ನೀವೇಕೆ ಅದನ್ನು ಕೊಳ್ಳಬಾರದು? ನೀವೇ ಹೇಳಿಕೊಂಡಿರುವಂತೆ, ನಿಮ್ಮ ಪರಿಸ್ಥಿತಿ ಈಗ ಸ್ವಲ್ಪ ಉತ್ತಮಗೊಂಡಿದೆ, ನಿಮ್ಮ ಬಳಿ ಸ್ವಲ್ಪ ಹಣವಿದೆ. ನೀವು ಈ ವಿಷಯದಲ್ಲೆಲ್ಲ ಜುಗ್ಗರಾಗಿರಬಾರದು. ನಿಮಗೆ ಈ ಎಲ್ಲವೂ ಅವಶ್ಯವಾಗಿವೆ. ನಿಮ್ಮನ್ನೇ ಒಮ್ಮೆ ನೋಡಿಕೊಳ್ಳಿ, ನೀವು ತೊಡುತ್ತಿರುವ ಉಡುಪನ್ನು ನೋಡಿಕೊಳ್ಳಿ. ಅದು ಎಷ್ಟು ಹಳತಾಗಿ ಹರಿದುಹೋಗಿದೆ. ನಾಚಿಕೆಗೇಡು. ನೀವು ಏನೇ ಹೇಳಿದರೂ ನಿಮ್ಮ ಬಳಿ ಹೊಸ ಸಮವಸ್ತ್ರ ಇಲ್ಲವೆಂಬುದು ನನಗೆ ಖಚಿತವಾಗಿ ತಿಳಿದಿದೆ. ನಿಮ್ಮ ಹೊಸ ಸಮವಸ್ತ್ರವನ್ನು ಏನು ಮಾಡಿದಿರೋ, ದೇವರಿಗೇ ಗೊತ್ತು. ಆದ್ದರಿಂದ ನನ್ನ ಮಾತು ಕೇಳಿ, ಈ ಸಮವಸ್ತ್ರವನ್ನು ಕೊಳ್ಳಿರಿ. ನನ್ನ ಸಲುವಾಗಿ ಈ ಕೆಲಸ ಮಾಡಿ. ನೀವು ನನ್ನನ್ನು ಪ್ರೀತಿಸುವುದಾಗಿ ತೋರಿಸಲೋಸುಗವಾದರೂ ಈ ಕೆಲಸ ಮಾಡಿ.

ನೀವು ನನಗೆ ಬಟ್ಟೆಯನ್ನು ಬಳುವಳಿಯಾಗಿ ಕಳುಹಿಸಿಕೊಟ್ಟಿದ್ದೀರ. ಆದರೆ ನೀವು ನಿಮ್ಮನ್ನೇ ದಿವಾಳಿ ಎಬ್ಬಿಸಿಕೊಳ್ಳುತ್ತಿದ್ದೀರ. ನೀವು ನನಗಾಗಿ ಬಹಳ ಹಣ ಖರ್ಚು ಮಾಡಿದ್ದೀರಿ, ಗಾಬರಿಗೊಳಿಸುವಷ್ಟು ಹೆಚ್ಚು ಹಣ ಖರ್ಚು ಮಾಡಿದ್ದೀರಿ! ನೀವು ಎಂಥ ದುಂದುಗಾರರು! ಈ ವಸ್ತುಗಳು ನನಗೆ ನಿಜಕ್ಕೂ ಅನವಶ್ಯ. ನೀವು ನನ್ನನ್ನು ಪ್ರೀತಿಸುತ್ತೀರೆಂದು ನಾನು ಬಲ್ಲೆ, ನನಗೆ ಸಂಪೂರ್ಣ ಖಾತರಿ ಇದೆ. ಈ ಬಳುವಳಿಗಳ ಮೂಲಕ ಆ ವಿಷಯವನ್ನು ನೀವು ನೆನಪು ಮಾಡಿಕೊಡುವ

ಆವಶ್ಯಕತೆ ಏನಿಲ್ಲ, ಅದರಲ್ಲೂ ಅವುಗಳನ್ನು ಒಪ್ಪಿಕೊಳ್ಳಲು ನನಗೆ ಅಷ್ಟು ಕಷ್ಟವಾಗಿರುವಾಗ. ಇವುಗಳಿಂದಾಗಿ ನಿಮಗೆ ಎಷ್ಟು ಖರ್ಚಾಗುತ್ತದೆಂಬುದನ್ನು ನಾನು ಬಲ್ಲೆ. ಕಟ್ಟಕಡೆಯದಾಗಿ – ಮತ್ತೆ ಇದನ್ನು ಎಂದೂ ಮಾಡಬೇಡಿ. ನಾನು ನಿಮ್ಮನ್ನು ಬೇಡಿಕೊಳ್ಳುತ್ತೇನೆ. ಇನ್ನು ಹೀಗೆ ಮಾಡುವುದಿಲ್ಲ, ಅಲ್ಲವೇ ?

ನನ್ನ ನೆನಪುಗಳ ಉಳಿದ ಪುಟಗಳನ್ನು ಕಳುಹಿಸಿಕೊಡುವಂತೆ ಕೇಳಿದ್ದೀರಿ, ಮಕಾರ್ ಅಲೆಕ್ಸೇಯೆವಿಚ್. ನಾನು ಅವನ್ನು ಪೂರ್ತಿಯಾಗಿ ಬರೆಯಬೇಕೆಂದು ನೀವು ಬಯಸುತ್ತೀರಿ. ನಿಜ ಹೇಳುವುದಾದರೆ, ಈಗ ಬರೆದಿರುವುದಷ್ಟನ್ನೇ ಹೇಗೆ ಬರೆಯಲು ನನಗೆ ಸಾಧ್ಯವಾಯಿತೋ ಅದೇ ನನಗೆ ತಿಳಿಯದು. ನನ್ನ ಗತ ಜೀವನದ ಬಗೆಗೆ ಮಾತನಾಡುವುದನ್ನು, ಅಥವಾ ಯೋಚನೆ ಮಾಡುವುದನ್ನೂ ಸಹ, ಸಹಿಸಲು ನನ್ನ ಕೈಲಾಗುವುದಿಲ್ಲ. ಅದರ ನೆನಪೇ ನನ್ನನ್ನು ಥರಗುಟ್ಟಿಸುತ್ತದೆ. ನನ್ನ ತಾಯಿಯ ಬಗೆಗೆ, ತನ್ನ ಮಗಳನ್ನು ಪಿಶಾಚಿಗಳ ಬಿಗಿಹಿಡಿತಕ್ಕೆ ಬಿಟ್ಟು ಹೋದಂಥ ನನ್ನ ಬಡಪಾಯಿ ತಾಯಿಯ ಬಗೆಗೆ ಹೇಳ ಹೋಗುವುದಂತೂ ಎಲ್ಲಕ್ಕಿಂತ ಅತ್ಯಂತ ಕಠಿಣವಾದುದು. ಅದರ ಯೋಚನೆ ಬಂದರೆ ಸಾಕು, ನನ್ನ ಹೃದಯದಿಂದ ರಕ್ತ ಚಿಮ್ಮಿದಂತಾಗುತ್ತೆ. ಅವೆಲ್ಲ ಇನ್ನೂ ಎಷ್ಟು ಹಚ್ಚ ಹಸುರಾಗಿವೆಯೆಂದರೆ, ನಾನು ಇನ್ನೂ ನೆಮ್ಮದಿ ಪಡೆದುಕೊಳ್ಳದಾಗಿದ್ದೇನೆ, ಒಂದು ವರ್ಷ ಆಗಲೇ ಆಗಿ ಹೋಗಿದ್ದರೂ ಮನಶ್ಶಾಂತಿಯನ್ನು ಪಡೆದುಕೊಳ್ಳುವುದಂತೂ ಇನ್ನೂ ಸಾಧ್ಯವೇ ಆಗಿಲ್ಲ.

ಆನ್ನ ಫ್ಯೋದೊರೊವ್ನ ಈಗ ಏನು ಯೋಚಿಸುತ್ತಿದ್ದಾಳೆಂಬ ಬಗೆಗೆ ನಾನಾಗಲೇ ನಿಮಗೆ ತಿಳಿಸಿದ್ದೇನೆ. ಅವಳು ನನ್ನನ್ನು ಕೃತಘ್ನೆ ಎಂದು ದೂಷಿಸುತ್ತಿದ್ದಾಳೆ. ಬೀಕವ್ ನಡೆಸಿದ ದುಷ್ಕೃತ್ಯಗಳಿಗೂ ತನಗೂ ಏನೇನೂ ಸಂಬಂಧವಿಲ್ಲವೆಂದು ಖಡಾಖಂಡಿತವಾಗಿ ಹೇಳುತ್ತಾಳೆ. ನಾನು ಹಿಂದಿರುಗಬೇಕೆಂದು ಅವಳು ಬಯಸುತ್ತಾಳೆ. ನಾನು ಭಿಕ್ಷೆಯ ಮೇಲೆ ಜೀವಿಸುತ್ತಿದ್ದೇನೆ, ತುಂಬ ಕೆಟ್ಟುದಾಗಿ ಕೊನೆಗಾಣಲಿರುವೆನು ಎಂದು ಹೇಳುತ್ತಾಳೆ. ನಾನು ಹಿಂದಿರುಗಿದರೆ, ತಪ್ಪು ತಿದ್ದಿಕೊಳ್ಳುವಂತೆಯೂ ನನಗೆ ಕನ್ಯಾಶುಲ್ಕ ನೀಡುವಂತೆಯೂ ತಾನು ಬೀಕವ್‌ನನ್ನು ಒಪ್ಪಿಸುವುದಾಗಿ ಅವಳು ಹೇಳುತ್ತಾಳೆ. ನನಗೆ ಅವರಿಂದ ಏನೂ ಬೇಕಾಗಿಲ್ಲ. ನಾನಿಲ್ಲಿ ನಿಮ್ಮೊಂದಿಗೂ ನನ್ನ ಪ್ರೀತಿಯ ಫಿದೋರಳೊಂದಿಗೂ ಸುಖವಾಗಿಯೇ ಇದ್ದೇನೆ. ಫಿದೋರಳಂತೂ ನನಗೆ ನನ್ನ ಬಾಲ್ಯದ ದಾದಿಯ ನೆನಪು ತರುತ್ತಾಳೆ. ನೀವು ನನ್ನ ದೂರದ ಸಂಬಂಧಿ. ಆದರೆ ನಿಮ್ಮ ಹೆಸರು ನನಗೆ ಶ್ರೀರಕ್ಷೆ. ಇನ್ನು ಅವರ ವಿಷಯ ಹೇಳುವುದಾದರೆ, ನಾನು ಅವರನ್ನು ತಿಳಿಯಬಯಸುವುದಿಲ್ಲ, ಸಾಧ್ಯವಾಗುವುದಾದರೆ, ಮರೆತುಬಿಡುತ್ತೇನೆ. ನನ್ನಿಂದ ಅವರಿಗೆ ಇನ್ನೂ ಹೆಚ್ಚು ಏನು ಬೇಕು ! ಅವರು ಹೇಳುವುದೆಲ್ಲ ಶುದ್ಧ ಸುಳ್ಳು, ಅವರು

ಕೊನೆಗೆ ನನ್ನ ಕೈ ಬಿಡುತ್ತಾರೆ, ಎಂದು ಫಿದೋರ ಹೇಳುತ್ತಾಳೆ. ಅವರು ಹಾಗೆಯೇ ಮಾಡಲೆಂದು ದೇವರು ನನಗೆ ಅನುಗ್ರಹಿಸಲಿ.

ವ. ದೊ.

ಜೂನ್ 21

ನನ್ನ ಪ್ರೀತಿಯ ಪುಟ್ಟ ಅರಗಿಣಿ,

ನಾನು ಹೇಗೆ ಪ್ರಾರಂಭಿಸಬೇಕೋ ನನಗೇ ತಿಳಿಯದು. ನಾವಿಲ್ಲಿ ಈ ರೀತಿ ಜೀವನ ನಡೆಸುತ್ತಿರುವುದು, ನನ್ನ ಮನದನ್ನೆ, ಎಷ್ಟು ವಿಚಿತ್ರ. ನಾನು ಏನು ಹೇಳಬಯಸುತ್ತೇನೆಂದರೆ, ನಾನೆಂದೂ ಇಂಥ ಪರಮ ಸುಖದ ದಿನಗಳನ್ನು ತಿಳಿದುದಿಲ್ಲ. ದಯಾಮಯನಾದ ದೇವರು ನನಗೆ ಒಂದು ಮನೆಯನ್ನೂ ಒಂದು ಕುಟುಂಬವನ್ನೂ ಕೊಟ್ಟಿರುವನೆನ್ನುವ ಹಾಗೆಯೇ ಇದು ಕಂಡುಬರುತ್ತದೆ. ಓಹ್, ನನ್ನ ಮುದ್ದು ಮಧುರ ಮಗುವೇ! ನಾನು ಕಳುಹಿಸಿರುವ ಆ ಕಳಪೆ ನಾಲ್ಕು ಒಳಕುಪ್ಪಸಗಳ ಬಗೆಗೆ ಏಕೆ ನಿಮ್ಮ ಬೆಲೆಯುಳ್ಳ ಶ್ವಾಸವನ್ನು ವ್ಯರ್ಥ ಮಾಡುತ್ತೀರಿ? ನಿಮಗೆ ಅವು ಬೇಕಾಗಿವೆ ಎಂದು ಫಿದೋರ ಹೇಳಿದಳು. ನಿಮಗೆ ಸುಖ ಒದಗಿಸು ವುದು ನನಗೆ ಎಷ್ಟು ಸಂತೋಷದ ಸಂಗತಿ. ಆದ್ದರಿಂದ ನನ್ನನ್ನು ವಿರೋಧಿಸ ಬೇಡಿ, ನನ್ನೊಂದಿಗೆ ವಾದಿಸಬೇಡಿ. ಇಂತಹುದು ನನಗೆ ಹಿಂದೆಂದೂ ಆದುದಿಲ್ಲ, ನನ್ನ ಮುದ್ದು. ನಾನೂ ಈಗ ಈ ಪ್ರಪಂಚದಲ್ಲಿ ಗೌರವಸ್ಥನಾಗಿ ಹೋಗುತ್ತಿ ದ್ದೇನೆ. ನೀವು ನನ್ನ ದಿನಗಳನ್ನು ಉಜ್ವಲಗೊಳಿಸುತ್ತ ಬೀದಿಯ ಅತ್ತ ಬದಿಯಲ್ಲಿ ವಾಸಿಸುತ್ತಿರುವುದರಿಂದಾಗಿ ನನ್ನ ಬಾಳು ಇಮ್ಮಡಿ ಪೂರ್ಣವಾಗಿದೆ. ಆಮೇಲೆ, ನನ್ನ ನೆರೆಯ ರತಜ್ಯಾಯೆವ್ – ಸಾಹಿತ್ಯ ಗೋಷ್ಠಿ ಕೂಟಗಳನ್ನು ಏರ್ಪಡಿಸು ವಂಥ ಆ ಅಧಿಕಾರಿ – ನನ್ನನ್ನು ಟೀಗೆ ಆಹ್ವಾನಿಸಿದ್ದಾನೆ. ನಾವು ಸಾಹಿತ್ಯ ಕೃತಿ ಗಳನ್ನು ಓದಲಿದ್ದೇವೆ. ಅಂತಹ ಜನ ನಾವು! ಸರಿ, ನಮಸ್ಕಾರ, ನನ್ನ ಪ್ರಿಯತಮೆ. ಇದನ್ನು ನಾನು ಯಾವುದೇ ವಿಶೇಷ ಉದ್ದೇಶದಿಂದ ಬರೆದಿಲ್ಲ. ನಾನು ಚೆನ್ನಾಗಿ ದ್ದೇನೆ ಎಂದು ನಿಮಗೆ ತಿಳಿಸಲಷ್ಟೆ ಬರೆದಿದ್ದೇನೆ. ನಿಮಗೆ ಕಸೂತಿ ಹಾಕಲು ಸ್ವಲ್ಪ ಬಣ್ಣಬಣ್ಣದ ಸಿಲ್ಕ್ ಬೇಕಾಗಿದೆಯೆಂದು ಥೆರೇಸ ಮೂಲಕ ನೀವು ನನಗೆ ತಿಳಿಸಿ ದ್ದೀರಿ, ನನ್ನ ಮುದ್ದು. ನಾನದನ್ನು ಖಂಡಿತ ಕೊಂಡು ಕಳುಹಿಸುವೆ. ನಾಳೆಯ ಒಳಗೇ ನಿಮ್ಮ ಇಚ್ಛೆ ಪೂರೈಸುವ ಆನಂದವನ್ನು ನಾನು ಪಡೆಯಲಿರುವೆ. ಅದನ್ನು ಎಲ್ಲಿ ಕೊಳ್ಳಬಹುದೆಂಬುದೂ ನನಗೆ ಗೊತ್ತು.

ನಿಮ್ಮ ವಿಶ್ವಸನೀಯ ಮಿತ್ರ
ಮಕಾರ್ ದೇವುಷ್ಕಿನ್.

ನನ್ನ ಪ್ರಿಯ ವರ್ವಾರ ಅಲೆಕ್ಸೇಯೆವ್ನ,

ನಮ್ಮ ಮನೆಯಲ್ಲಿ ಜರುಗಿದ ತುಂಬ ಕರುಣಾಜನಕವಾದ, ಅತ್ಯಂತ ಅತ್ಯಂತ ಕರುಣಾಜನಕವಾದ ಸಂಗತಿಯೊಂದನ್ನು ತಿಳಿಸಲು ನನಗೆ ಖೇದವೆನಿಸುತ್ತದೆ, ಗೊರ್ಷ್ಕೋವ್‌ನ ಪುಟ್ಟ ಮಗ ಇಂದು ಬೆಳಿಗ್ಗೆ ನಾಲ್ಕು ಗಂಟೆಯಾದ ಮೇಲೆ ಸ್ವಲ್ಪ ಸಮಯದಲ್ಲೇ ತೀರಿಕೊಂಡ. ಯಾವುದರಿಂದ ತೀರಿಕೊಂಡನೋ ನಾನು ಹೇಳಲಾರೆ. ಕೆಂಜ್ವರದಿಂದಲೋ ಅಥವಾ ಅಂತಹುದೇ ಬೇರೆ ಯಾವುದರಿಂದಲೋ ತೀರಿಕೊಂಡ. ನಾನು ಅವರನ್ನು ಸಂತೈಸಲು ಹೋಗಿದ್ದೆ. ಅವರು ತುಂಬ ಬಡತನದ ಬಾಳು ಬಾಳುತ್ತಿದ್ದಾರೆ. ಅವರ ಕೋಣೆ ಎಷ್ಟು ಅಸ್ತವ್ಯಸ್ತವಾಗಿತ್ತು! ಆಶ್ಚರ್ಯವಿಲ್ಲ. ಅವರು ಒಂದೇ ಕೋಣೆಯಲ್ಲಿ ವಾಸಿಸುತ್ತಿರುವುದು. ಶಿಷ್ಟತೆಗೋಸ್ಕರ ಮಧ್ಯ ದಲ್ಲಿ ಹಲವಾರು ತೆರೆಗಳನ್ನು ಹಾಕಿಕೊಂಡಿದ್ದಾರೆ. ಶವಸಂಪುಟವೊಂದು ಸಿದ್ಧ ವಾಗಿ ನಿಂತಿತ್ತು: ಒಂದು ಸರಳವಾದ ಆದರೆ ಸುಂದರವಾದ ಪುಟ್ಟ ಶವಸಂಪುಟ. ಅವರು ಸಿದ್ಧವಾಗಿದ್ದುದನ್ನೇ ಕೊಂಡು ತಂದರು. ಹುಡುಗನಿಗೆ ಒಂಬತ್ತು ವರ್ಷ ವಯಸ್ಸು. ತುಂಬ ಭರವಸೆಯ ಬಾಲಕನಾಗಿದ್ದ ಅನ್ನುತ್ತಾರೆ ಅವರು. ಅವರನ್ನು ನೋಡಿದರೆ ಕರುಳು ಕಿತ್ತುಬರುವಂತಿತ್ತು, ವಾರೆಂಕಾ. ಮಗುವಿನ ತಾಯಿಯೇನೂ ಅಳುತ್ತಿರಲಿಲ್ಲ. ಆದರೆ ಬಡಪಾಯಿ ಆಕೆ ತುಂಬ ವಿಷಣ್ಣಳಾಗಿ ಕಾಣುತ್ತಾಳೆ. ಒಂದು ಮಗುವಿಗೆ ಊಟ ಹಾಕುವುದು ತಪ್ಪಿತಲ್ಲ ಎಂದು ಸಮಾಧಾನವೇ ಆಗಿರಬಹುದು. ಅವರಿಗೆ ಇನ್ನೂ ಎರಡು ಮಕ್ಕಳಿವೆ – ಒಂದು ಪುಟ್ಟ ಕೂಸು, ಇನ್ನೊಂದು ಆರು ವರ್ಷದ ಹುಡುಗಿ. ಮಕ್ಕಳು ಸಂಕಟಪಡುವುದನ್ನು ನೋಡು ವುದು ಸಂತೋಷವೇನಲ್ಲ, ಅದರಲ್ಲೂ ಅವು ನಿಮ್ಮವೇ ಆಗಿದ್ದು ನೀವು ಅವಕ್ಕೆ ಯಾವ ರೀತಿಯಲ್ಲೂ ಸಹಾಯ ಮಾಡಲು ಆಗದಿದ್ದಾಗ. ಮಗುವಿನ ತಂದೆ ಒಂದು ಹಳೆಯ ಜೀರ್ಣವಾದ ಫ್ರಾಕ್‌ಕೋಟು ತೊಟ್ಟು ಮುರುಕಲು ಕುರ್ಚಿ ಯೊಂದರ ಮೇಲೆ ಕುಳಿತಿದ್ದ. ಕೆನ್ನೆಗಳ ಮೂಲಕ ಕಣ್ಣೀರು ಧಾರಾಕಾರವಾಗಿ ಹರಿಯುತ್ತಿತ್ತು – ದುಃಖದಿಂದಾಗಿ ಅಲ್ಲ, ಆದರೆ ಬಹುಶಃ ಅಭ್ಯಾಸಬಲದಿಂದ ಇರಬೇಕು. ಏಕೆಂದರೆ ಅವನ ಕಣ್ಣುಗಳಲ್ಲಿ ಏನೋ ದೋಷವಿದೆ. ಅವನೊಬ್ಬ ವಿಚಿತ್ರ ವ್ಯಕ್ತಿ. ಮಾತನಾಡಿಸಿದಾಗ ಯಾವತ್ತೂ ನಾಚುತ್ತಾನೆ, ಗೊಂದಲಕ್ಕೆ ಬಿದ್ದು ನಾಲಿಗೆ ಕಟ್ಟಿದವನಂತಾಗುತ್ತಾನೆ. ಪುಟ್ಟ ಹುಡುಗಿ, ಅವನ ಮಗಳು, ಶವಸಂಪುಟದ ಬಳಿ ನಿಂತಿದ್ದಳು. ಎಷ್ಟು ಸೊರಗಿದ್ದಳು, ಆ ಬಡಪಾಯಿ. ಎಷ್ಟು ಆಲೋಚನಾಮಗ್ನಳಾಗಿದ್ದಳು. ಮಗುವೊಂದು ಆಲೋಚನೆಯಲ್ಲೇ ಮೈಮರೆ ಯುವುದನ್ನು ಕಾಣುವುದು ನನಗೆ ಇಷ್ಟವಿಲ್ಲ, ವಾರೆಂಕಾ; ಏಕೋ ಏನೋ ಅದು ನನಗೆ ಅಪ್ರಿಯವಾಗಿ ಕಾಣಿಸುತ್ತೆ. ಅವಳ ಮುರಿದ ಬೊಂಬೆ ನೆಲದ ಮೇಲೆ

ಬಿದ್ದಿತ್ತು. ಅವಳು ಅವರೊಂದಿಗೆ ಆಡುತ್ತಿರಲಿಲ್ಲ. ಅವಳು ಅಲ್ಲಿ ತುಟಿಗೆ ಬೆರಳು ಹಚ್ಚಿ ನಿಂತಿದ್ದಳು, ಚಲಿಸಲೇ ಇಲ್ಲ. ನಮ್ಮ ಮನೆಯ ಯಜಮಾನಿ ಅವಳಿಗೆ ಒಂದು ಮಿಠಾಯಿ ಕೊಟ್ಟಳು. ಅವಳು ಅದನ್ನು ಇಸಿದುಕೊಂಡಳು, ಆದರೆ ತಿನ್ನಲಿಲ್ಲ. ಇದು ನಿಜಕ್ಕೂ ದುಃಖಕರವಾದುದು, ವಾರೆಂಕಾ, ಅಲ್ಲವೇ?

ಮಕಾರ್ ದೇವುಷ್ಕಿನ್.

ಜೂನ್ 25

ನನ್ನ ಪ್ರಿಯ ಮಕಾರ್ ಅಲೆಕ್ಸೇಯೆವಿಚ್,

ನಾನು ನಿಮ್ಮ ಪುಸ್ತಕವನ್ನು ಹಿಂದಿರುಗಿಸುತ್ತಿದ್ದೇನೆ. ಇದೊಂದು ಕೊಳಕು ಪುಸ್ತಕ. ಮುಟ್ಟುವುದಕ್ಕೇ ಅಸಹ್ಯವಾಗುತ್ತೆ. ಎಲ್ಲಿ ಸಿಕ್ಕಿತು ನಿಮಗೆ ಇಂತಹ ಅಪರಂಜಿ ಪುಸ್ತಕ? ತಮಾಷಿ ಒತ್ತಟ್ಟಿಗಿರಲಿ, ನೀವು ನಿಜಕ್ಕೂ ಇಂತಹ ಪುಸ್ತಕಗಳನ್ನು ಇಷ್ಟಪಡುತ್ತೀರ, ಮಕಾರ್ ಅಲೆಕ್ಸೇಯೆವಿಚ್? ಮೊನ್ನಿನ ದಿನ ನೀವು ನನಗೆ ಓದಲು ಏನನ್ನಾದರೂ ಕಳುಹಿಸಿಕೊಡುವುದಾಗಿ ಮಾತುಕೊಟ್ಟಿದ್ದಿರಿ. ನಿಮಗೆ ಇಷ್ಟವಾಗುವುದಾದರೆ ನಾವು ಅದನ್ನು ಪಾಲು ಮಾಡಿಕೊಳ್ಳೋಣ. ಸದ್ಯಕ್ಕೆ ನಮಸ್ಕಾರ. ಬರೆಯಲು ಇನ್ನೇನೂ ವಿಶೇಷವಿಲ್ಲ.

ವ. ದೊ.

ಜೂನ್ 26

ಪ್ರಿಯ ವಾರೆಂಕಾ,

ನಿಮಗೆ ನಿಜ ಹೇಳುವುದಾದರೆ, ನಾನು ಆ ಪುಸ್ತಕವನ್ನು ಓದಿಯೇ ಇಲ್ಲ. ಕೆಲವು ಪುಟಗಳನ್ನಷ್ಟೆ ತಿರುವಿ ಹಾಕಿದೆ. ಓದುಗರನ್ನು ನಗಿಸಲೆಂದು ಬರೆದ ವಿನೋದದ ಪುಸ್ತಕವಾಗಿ ಕಂಡುಬಂದಿತು. ಅದು ನಿಜಕ್ಕೂ ಹಾಸ್ಯರಸಭರಿತವಾದ ಕೃತಿಯೆಂದು ನಾನು ಭಾವಿಸಿದೆ. ಯಾರಿಗೆ ಗೊತ್ತು, ವಾರೆಂಕ ಇದನ್ನು ಇಷ್ಟಪಡಬಹುದೆಂದು ತಿಳಿದೆ. ಆದ್ದರಿಂದಲೇ ಕಳುಹಿಸಿಕೊಟ್ಟೆ.

ಆದರೆ ರತಜ್ಯಾಯೆವ್ ನಿಜಕ್ಕೂ ಚೆನ್ನಾದ ಪುಸ್ತಕ ಕೊಡುವುದಾಗಿ ಮಾತು ಕೊಟ್ಟಿದ್ದಾನೆ... ಆದ್ದರಿಂದ ನಿಮಗೆ ಓದಲು ಬೇಕಾದಷ್ಟು ಪುಸ್ತಕಗಳು ಲಭಿಸಲಿರುವುದು, ನನ್ನ ಚಿನ್ನ. ಈ ರತಜ್ಯಾಯೆವ್ ಒಬ್ಬ ಆಳವಾದ ಪಾಂಡಿತ್ಯದ ವ್ಯಕ್ತಿ, ಒಬ್ಬ ನಿಜವಾದ ವಿದ್ವಾಂಸ. ಇವನು ಸ್ವತಃ ಬರೆಯುತ್ತಾನೆ ಕೂಡ. ಅಬ್ಬಾ, ಎಷ್ಟು ಚೆನ್ನಾಗಿ ಬರೆಯುತ್ತಾನೆ! ಅವನಿಗೆ ಒಳ್ಳೆಯ ಲೇಖನಕಲೆ ಇದೆ. ತನ್ನ ಲೇಖನಗಳನ್ನು ಹೇಗೆ ಶೈಲಿಯುತವಾಗಿ ಬರೆಯಬೇಕೆಂಬುದನ್ನು ಅವನು ಬಲ್ಲ. ಪ್ರತಿ

ಯೊಂದು ಪದವನ್ನೂ ಶೈಲಿಯುತವಾಗಿ ಬಳಸುತ್ತಾನೆ. ಹಾಗಾಗಿ ನಾನು ಫಾಲ್ದೊ ನಿಯೊಂದಿಗೋ ಥೆರೇಸಳೊಂದಿಗೋ ಮಾತನಾಡುವಾಗ ಬಳಸುವಂಥ ಬರಿದಾದ, ಕ್ಷುಲ್ಲಕ ಹಾಗೂ ಸಾಮಾನ್ಯ ಪದಗಳೂ, ಅವನು ಬಳಸಿದಾಗ ಸೊಗಸಾದ ಶೈಲಿಯಿಂದ ಕೂಡಿದವಾಗಿ ಕಂಡುಬರುತ್ತವೆ. ನಾನು ಅವನ ಸಾಹಿತ್ಯ ಕೂಟಗಳಿಗೂ ಹೋಗುತ್ತೇನೆ. ನಾವು ಧೂಮಪಾನ ಮಾಡುತ್ತ ಕುಳಿತುಕೊಳ್ಳುತ್ತೇವೆ, ಅವನು ತನ್ನ ರಚನೆಗಳನ್ನು, ಕೆಲವು ವೇಳೆ ಮುಂಜಾನೆ ಐದರವರೆಗೂ, ಓದುತ್ತ ಹೋಗುತ್ತಾನೆ. ಸಾಹಿತ್ಯದ ರಸದೌತಣ ! ಅದು ಎಷ್ಟು ಸೊಗಸಾಗಿರುತ್ತದೆ, ಹೂಗಳಂತೆ. ಹೌದು, ಅದಕ್ಕೆ ಅನುಗುಣವಾದ ಬೇರೊಂದು ಪದವಿಲ್ಲ. ಅವನ ಬರಹದ ಪ್ರತಿಯೊಂದು ಪುಟದಿಂದಲೂ ನೀವು ಒಂದು ಸೊಗಸಾದ ಹೂಗುಚ್ಛ ತಯಾರಿಸಬಹುದು ! ಅಲ್ಲದೆ ಅವನು ತುಂಬ ದಯಾಪರ, ವಿಚಾರಪರ ಹಾಗೂ ಸಹಾಯಕನೂ ಹೌದು ! ಅವನಿಗೆ ಹೋಲಿಸಿದಂತೆ ನಾನು ಏನು? ಏನೂ ಇಲ್ಲ. ಅವನಿಗೆ ಖ್ಯಾತಿ ಇದೆ ! ನನಗೆ? ಏನೂ ಇಲ್ಲ. ನನಗೆ ಇರವೇ ಇಲ್ಲ ! ಆದರೂ ಅವನು ನನ್ನ ಬಗೆಗೆ ದಯಾಪೂರ್ಣನಾಗಿದ್ದಾನೆ ! ಅವನಿಗೆ ಕೆಲವು ಬರಹಗಳನ್ನು ನಾನು ನಕಲು ಮಾಡಿಕೊಡುತ್ತಿದ್ದೇನೆ. ಆದರೆ ನನ್ನ ಬಗೆಗೆ ಅವನ ಕರುಣೆ ಒಂದು ಸಂಚಷ್ಟೆ, ನಕಲು ಮಾಡಿಕೊಡಲೆಂದಷ್ಟೆ ಅವನು ಕರುಣೆ ತೋರುತ್ತಾನೆ, ಎಂದೇನೂ ಅಂದುಕೊಳ್ಳಬೇಡಿ, ನನ್ನ ಮುದ್ದು ! ಅವೆಲ್ಲ ಹೊಲಸು ವದಂತಿಗಳು, ಪ್ರಿಯೆ. ಕೇವಲ ಹೊಲಸು ವದಂತಿಗಳು ! ನಾನು ನಕಲು ಮಾಡುತ್ತಿರುವುದಕ್ಕೆ ಕಾರಣ ನನಗದು ನಿಜಕ್ಕೂ ಇಷ್ಟ ಎಂಬುದಾಗಿದೆ. ನನ್ನ ಸ್ವಂತ ಸಂತೋಷಕ್ಕಾಗಿ ನಾನು ನಕಲು ಮಾಡಿಕೊಡುತ್ತೇನೆ. ಅವನು ನನ್ನ ಬಗೆಗೆ ದಯಾಳುವಾಗಿರುವುದು, ನನಗೆ ಸಂತೋಷ ನೀಡುವುದಕ್ಕಾಗಿಯಷ್ಟೆ. ನಾನದನ್ನು ತಿಳಿದುಕೊಂಡಿದ್ದೇನೆ, ನನ್ನ ಮುದ್ದು ! ಅವನೊಬ್ಬ ಒಳ್ಳೆಯ ದಯಾಳು ವ್ಯಕ್ತಿ. ಹೌದು, ಮತ್ತೆ ಒಬ್ಬ ಅದ್ಭುತ ಬರಹಗಾರ !

ಸಾಹಿತ್ಯವು ನಿಜಕ್ಕೂ ಒಂದು ಒಳ್ಳೆಯ ವಸ್ತು, ವಾರೆಂಕ. ಮೊನ್ನಿನ ದಿನ ನಾನು ಅವರ ಕೂಟದಲ್ಲಿ ತಿಳಿದದ್ದು ಇದನ್ನೇ. ಸಾಹಿತ್ಯ ಒಂದು ಪ್ರಗಾಢವಾದ ವಸ್ತುವೂ ಹೌದು ! ಅದು ತಿಳಿವಳಿಕೆ ಕೊಡುತ್ತೆ, ನಮ್ಮನ್ನು ಕಷ್ಟಸಹಿಷ್ಣುಗಳನ್ನಾಗಿ ಮಾಡುತ್ತೆ. ಅವರ ಕೃತಿಗಳಲ್ಲಿ ಇವೆಲ್ಲವನ್ನೂ ಇನ್ನೂ ಹೆಚ್ಚಿಗೆ ಅಂಶಗಳನ್ನೂ ಸಹ ಕಂಡುಕೊಳ್ಳಬಹುದು. ಎಲ್ಲವನ್ನೂ ಎಷ್ಟು ಚೆನ್ನಾಗಿ ಬರೆಯಲಾಗಿರುತ್ತೆ ! ಸಾಹಿತ್ಯ ಒಂದು ಚಿತ್ರ, ಅಂದರೆ ಒಂದು ರೀತಿಯ ಚಿತ್ರ, ಹಾಗೂ ಒಂದು ಕನ್ನಡಿ; ಅದು ರಾಗಭಾವಗಳನ್ನು ವ್ಯಕ್ತಪಡಿಸುತ್ತದೆ, ಸೊಗಸಾದ ವಿಮರ್ಶೆ ನೀಡುತ್ತದೆ, ಬೋಧಿಸುತ್ತದೆ. ಅದು ಜೀವನದ ಒಂದು ದಾಖಲೆಯೂ ಹೌದು. ನಾನು ಇವನ್ನೆಲ್ಲ ಅವರಿಂದಲೇ ಅರಿತೆ. ಬಿಚ್ಚು ಮನಸ್ಸಿನಿಂದ ಹೇಳುವುದಾದರೆ, ನನ್ನ ಪ್ರಿಯೆ,

ನಾನು ಅಲ್ಲಿ ಎಷ್ಟು ಹೊತ್ತಾದರೂ ಕೇಳುತ್ತ ಕುಳಿತಿರಬಲ್ಲೆ (ಅವರಂತೆಯೇ ಪೈಪ್ ಸೇದುತ್ತ). ಆದರೆ ಅವರು ಯಾವು ಯಾವುವೋ ವಿಷಯಗಳ ಬಗೆಗೆ ಚರ್ಚೆ ಪ್ರಾರಂಭಿಸಿದ ಕೂಡಲೇ, ನಾನು ಗೊಂದಲಕ್ಕೊಳಗಾಗುತ್ತೇನೆ, ವಾರೆಂಕಾ. ಅವರ ಚರ್ಚೆ ನಮ್ಮ ತಿಳಿವಳಿಕೆಗೂ ಮೀರಿದುದು ! ನನಗೆ ನಿಜಕ್ಕೂ ನಾಚಿಕೆಯಾಗುತ್ತೆ, ಇಡೀ ಸಂಜೆ ಮರದ ತುಂಡಿನಂತೆ ಕುಳಿತಿರುವುದಕ್ಕೆ. ಏನಾದರೂ ಒಂದು ಸೂಕ್ತವಾದ ಪದವನ್ನು ನಾನೂ ಹೇಳಬೇಕೆಂದು ನನ್ನ ಬುದ್ಧಿಯನ್ನು ಬೇಕಾದಷ್ಟು ತಿಣಿಕುತ್ತೇನೆ. ಆದರೆ ಒಂದು ಹೋಗಲಿ ಅರ್ಧ ಸೂಕ್ತ ಪದವೂ ಹೊಳೆಯುವುದಿಲ್ಲ ! ನಾವು ಗೊತ್ತಾದ ಮಟ್ಟ ತಲುಪಿಲ್ಲ, ಇಷ್ಟು ವರ್ಷಗಳು ಜೀವಿಸಿದ್ದರೂ ಎಳ್ಳಷ್ಟೂ ಹೆಚ್ಚು ಬುದ್ಧಿವಂತರಾಗಿಲ್ಲ, ಎಂದು ತಿಳಿದಾಗ ಎಷ್ಟು ವಿಷಾದವಾಗುತ್ತದೆ, ವಾರೆಂಕಾ. ನನ್ನ ಬಿಡುವೇಳೆಯಲ್ಲಿ ನಾನು ಏನು ಮಾಡುತ್ತೇನೆ: ಕೊರಡಿನಂತೆ ಮಲಗಿಕೊಂಡಿರುತ್ತೇನೆ. ಅದರ ಬದಲು ಏನಾದರೂ ಪ್ರಿಯವಾದುದನ್ನು ಮಾಡುತ್ತಿದ್ದಿದ್ದರೆ, ಬರೆಯುತ್ತಿದ್ದಿದ್ದರೆ ! ಅದು ನನಗೂ ಉಪಯುಕ್ತ, ಇತರರಿಗೂ ಒಳ್ಳೆಯದು. ನಿಮಗೆ ಗೊತ್ತೆ, ಸಾಹಿತಿಗಳು ಬರವಣಿಗೆಗಳಿಂದ ಎಷ್ಟು ಸಂಪಾದಿಸುತ್ತಾರೆಂದು ? ಉದಾಹರಣೆಗೆ ರತಜ್ಯಾಯೆವ್‌ನನ್ನೇ ತೆಗೆದುಕೊಳ್ಳಿ. ಅವನಿಗೆ ಎಷ್ಟು ಹಣ ಬರುತ್ತೆ ಗೊತ್ತೆ ? ಇಪ್ಪತ್ತು ಪುಟ ಬರೆಯುವುದು ಅವನಿಗೆ ಯಾವ ಮಹಾ ಕೆಲಸವೂ ಅಲ್ಲ. ಅವನು ದಿನಕ್ಕೆ ಸುಮಾರು ಒಂದು ನೂರು ಪುಟ ಬರೆಯಬಲ್ಲ. ತನಗೆ ಇಪ್ಪತ್ತು ಪುಟಕ್ಕೆ ಮುನ್ನೂರು ರೂಬಲ್ ಬರುತ್ತೆ ಅಂತ ಹೇಳುತ್ತಾನೆ. ಅದೇನಾಗಿದ್ದರೂ ಮನರಂಜನೆಯ ಕಥೆಯಾಗಿದ್ದರೆ, ಅಥವಾ ಜನರ ಕುತೂಹಲ ಕೆರಳಿಸುವಂಥ ಕಥೆಯಾಗಿದ್ದರೆ, ಅವನಿಗೆ ಐನೂರು ರೂಬಲ್ಲೇ ಬರುತ್ತೆ. ಅವರು ಅಷ್ಟು ಕೊಡಲು ನಿರಾಕರಿಸಲಿ. ಮುಂದಿನ ಸಾರಿ ಒಂದು ಸಾವಿರ ರೂಬಲ್ಲೇ ಬರುತ್ತೆ ! ಅದಕ್ಕೆ ಏನು ಹೇಳುತ್ತೀರ, ವರ್ವಾರ ಅಲೆಕ್ಸೀಯೆವ್ನ ? ಯಾಕೆ, ನನ್ನ ಚಿನ್ನ, ಕವನಗಳನ್ನೇ ತೆಗೆದುಕೊಳ್ಳಿ, ಕೇವಲ ಸಣ್ಣ ಕವನಗಳು – ಅವನ ಬಳಿ ಒಂದು ಇಡೀ ಕಾಪಿಪುಸ್ತಕದ ತುಂಬ ಕವನಗಳಿವೆ – ಅವಕ್ಕೆ ಏಳು ಸಾವಿರ ರೂಬಲ್ ಕೇಳುತ್ತಿದ್ದಾನೆ, ಒಂದು ಕೊಪೆಕ್ಕೂ ಕಮ್ಮಿ ಇಲ್ಲ ! ಯೋಚನೆ ಮಾಡಿ ನೋಡಿ ! ಒಂದು ಎಸ್ಟೇಟಿನ, ಒಂದು ಭಾರಿ ಮಂದಿರದ, ಬೆಲೆ ! ಅವರು ಅದಕ್ಕೆ ಐದು ಸಾವಿರ ಕೊಡುವುದಾಗಿ ಹೇಳಿದ್ದಾರಂತೆ. ಆದರೆ ಇವನು ಎಲ್ಲವನ್ನೂ ಚೆನ್ನಾಗಿ ತಿಳಿದಿದ್ದಾನೆ, ಆದ್ದರಿಂದ ಒಪ್ಪಿಲ್ಲ. ನಾನು ಅವನಿಗೆ ಹೇಳಲು ಹೋದೆ: ಹೋದರೆ ಹೋಗಲಿ ಐದು ಸಾವಿರ ತೆಗೆದುಕೊಂಡು ಕೊಟ್ಟುಬಿಡು ! ನಗದು ಐದು ಸಾವಿರ ರೂಬಲ್ ! ಆದರೆ ಅವನು ಹಠ ಹಿಡಿದಿದ್ದಾನೆ. "ಅವರು ಏಳು ಸಾವಿರ ಕೊಟ್ಟೇ ತೀರುತ್ತಾರೆ !" ಇವನು ತುಂಬ ಚಾಣಾಕ್ಷ ಅಲ್ಲವೇ, ನಿಜಕ್ಕೂ.

ಮಾತುಗಳನ್ನೇಕೆ ವ್ಯರ್ಥ ಮಾಡಬೇಕು? 'ಇಟಾಲಿಯನ್ ಕಾಮ ವಿಕಾರಗಳು' ಎಂಬ ಅವನ ಕೃತಿಯಿಂದಲೇ ಒಂದು ಭಾಗವನ್ನು ಉದ್ಧರಿಸುತ್ತೇನೆ. ನೀವೇ ತೀರ್ಮಾನಿಸಬಹುದು:

"ವ್ಲದೀಮಿರ್ ಬೆಚ್ಚಿಬಿದ್ದ. ಏಕೆಂದರೆ ಅವನ ಧಮನಿಗಳಲ್ಲಿ ರಾಗಭಾವಗಳ ಉತ್ಕಟೇಚ್ಛೆಯು ಉಕ್ಕೇರಿ ಕುದಿಬಿಂದುವನ್ನು ತಲುಪಿದ್ದಿತು.

" 'ಕೌಂಟೆಸ್' ! ಎನ್ನುತ್ತ ಅವನು ಕೂಗಿ ಹೇಳಿದ. ನಾನು ನಿಮ್ಮನ್ನು ಎಷ್ಟು ಗಾಢವಾಗಿ ಆರಾಧಿಸುತ್ತಿದ್ದೇನೆ, ನನ್ನ ಈ ಉನ್ಮತ್ತತೆ ಎಷ್ಟು ಅಪರಿಮಿತವಾಗಿದೆ, ಅನ್ನುವುದನ್ನು ನೀವು ಬಲ್ಲಿರಾ? ಇಲ್ಲ! ನನ್ನ ಕನಸುಗಳು ನನ್ನನ್ನು ವಂಚಿಸಿಲ್ಲ – ನಾನು ನಿಮ್ಮನ್ನು ಉತ್ಕಟವಾಗಿ, ಉನ್ಮತ್ತವಾಗಿ, ಪ್ರೀತಿಸುತ್ತೇನೆ! ನಿಮ್ಮ ಪತಿಯ ದೇಹದಲ್ಲಿರುವ ಎಲ್ಲ ರಕ್ತವೂ ನನ್ನ ಆತ್ಮದಲ್ಲಿ ಉಕ್ಕೇರುತ್ತಿರುವ ಈ ಉಗ್ರ ಉನ್ಮತ್ತತೆಯನ್ನು ತಣಿಸಲಾರದು! ನನ್ನ ಬಳಲಿದ ಎದೆಯನ್ನು ಸುಟ್ಟು ಬೂದಿ ಮಾಡುತ್ತಿರುವ ಈ ಸರ್ವನಾಶಕವಾದ ಬಡಬಾಗ್ನಿಯನ್ನು ಯಾವ ಪ್ರತಿಬಂಧಕವೂ ತಡೆಹಿಡಿದು ನಿಲ್ಲಿಸಲಾಗದು! ಓಹ್, ಜಿನೈದಾ, ನನ್ನ ಜಿನೈದಾ!"

" 'ವ್ಲದೀಮಿರ್ !' ಎಂದವಳು ತನ್ನಿರವನ್ನೇ ಮರೆತು ಪಿಸುಗುಟ್ಟುತ್ತ ಅವನ ವಕ್ಷಸ್ಥಳದ ಮೇಲೆ ಒರಗಿದಳು.

" 'ಓಹ್, ಜಿನೈದಾ !' ಎಂದು ಭಾವಭರಿತನಾದ ಸ್ಮೈಲ್‌ಸ್ಕಿ ಮತ್ತೊಮ್ಮೆ ಕೂಗಿ ಹೇಳಿದ.

"ಅವನ ಉಸಿರು ತೀವ್ರವಾಗಿ ಬಿಟ್ಟು ಬಿಟ್ಟು ಏದುಸಿರಿನಂತೆ ಹೊರ ಬರುತ್ತಿದ್ದಿತು. ಪ್ರೇಮಜ್ಯೋತಿಯು ರಾಗಭಾವಗಳ ಬಲಿಪೀಠದ ಮೇಲೆ ಕಾಂತಿಯಿಂದ ಪ್ರಜ್ವಲಿಸುತ್ತಿದ್ದಿತು, ಆ ಇಬ್ಬರು ದುರದೃಷ್ಟ ದುಃಖಿಗಳ ಹೃದಯಗಳನ್ನೂ ಸೀಯಿಸುತ್ತಿದ್ದಿತು.

" 'ವ್ಲದೀಮಿರ್ !' ಎಂದವಳು ಮತ್ತೆ ಉನ್ಮತ್ತಳಾಗಿ ಪಿಸುಗುಟ್ಟಿದಳು. ಅವಳ ಎದೆ ಏರಿಳಿಯುತ್ತಿದ್ದಿತು, ಅವಳ ಕೆನ್ನೆಗಳು ಕಂಗೊಳಿಸುತ್ತಿದ್ದವು, ಅವಳ ಕಣ್ಣುಗಳು ಕಿಡಿ ಕಾರುತ್ತಿದ್ದವು.

"ಹೀಗೆ ಒಂದು ಹೊಸ ಹಾಗೂ ಭಯಪೂರಿತ ಕೂಡಿಕೆ ಫಲಗೊಂಡಿತು.

... ... ... ... ... ... ... ... ... ... ... ... ... ...

"ಅರ್ಧ ಗಂಟೆಯನಂತರ ವೃದ್ಧ ಕೌಂಟ್ ತನ್ನ ಪತ್ನಿಯ ಅಂತಃಪುರವನ್ನು ಪ್ರವೇಶಿಸಿದ.

" 'ಏನು, ಪ್ರಿಯೆ! ನಮ್ಮ ಆದರದ ಅತಿಥಿಗಾಗಿ ಟೀಗೆ ಆರ್ಡರ್ ಕೊಡಬೇಡವೇ?' ಹಾಗೆನ್ನುತ್ತ ಅವನು ಅವಳ ಗಲ್ಲದ ಮೇಲೆ ಮೆಲ್ಲಗೆ ಗಿಲ್ಲಿದ."

ಈಗ ಏನೆನ್ನುತ್ತೀರಿ, ವಾರೆಂಕಾ? ಬಹುಶಃ ಸ್ವಲ್ಪ ಕ್ಷುಲ್ಲಕವಾಗಿ ಕಾಣ

ಬಹುದು, ಅಲ್ಲವೇ? ಆದರೂ ಚೆನ್ನಾಗಿದೆ. ಗುಣಕ್ಕೆ ಮತ್ಸರ ತೋರಬಾರದು. ಅವನ 'ಯೆರ್ಮಾಕ್ ಹಾಗೂ ಜುಲೈಕಾ' ಎಂಬ ಇನ್ನೊಂದು ಕಥೆಯಿಂದ ಒಂದು ಭಾಗವನ್ನು ಇಲ್ಲಿ ನೀಡುತ್ತಿದ್ದೇನೆ. ಸೈಬೀರಿಯಾವನ್ನು ಗೆದ್ದ ಈ ಉನ್ಮತ್ತ ಹಾಗೂ ಭೀಕರ ಯೆರ್ಮಾಕ್ ಸೈಬೀರಿಯಾದ ರಾಜ ಕುಚುಮ್‌ನ ಮಗಳು ಜುಲೈಕಾಳಲ್ಲಿ ಮೋಹಿತನಾಗಿದ್ದಾನೆಂದು ಊಹಿಸಿಕೊಳ್ಳಿ, ನನ್ನ ಪ್ರಿಯೆ. ನೀವೇ ಕಾಣುವಂತೆ ಇದು ಇವಾನ್ ದಿ ಟೆರಿಬಲ್‌ನ ಕಾಲಕ್ಕೆ ಸೇರಿದ ಕಥೆ. ಇವರಿಬ್ಬರ ಸಂಭಾಷಣೆ ಹೀಗಿದೆ.

"'ನೀನು ನನ್ನನ್ನು ಪ್ರೀತಿಸುತ್ತೀಯಾ, ಜುಲೈಕಾ? ನೀನು ನನ್ನನ್ನು ಪ್ರೀತಿಸುತ್ತೀಯೆಂದು ಹೇಳು, ಮತ್ತೆ ಮತ್ತೆ ಹೇಳು!'

"'ನಾನು ನಿನ್ನನ್ನು ಪ್ರೀತಿಸುತ್ತೇನೆ, ಯೆರ್ಮಾಕ್' ಜುಲೈಕಾ ಪಿಸುಮಾತಿನಲ್ಲಿ ಹೇಳಿದಳು.

"'ಹಾಗಾದರೆ, ಓ ಆಕಾಶವೇ, ಓ ಭೂಮಿಯೇ, ನಾನು ನಿಮ್ಮನ್ನು ವಂದಿಸುತ್ತೇನೆ! ಆಕಾಶವೇ, ಭೂಮಿಯೇ, ನೀವು ನನ್ನನ್ನು ತುಂಬ ಸುಖಿಯನ್ನಾಗಿ ಮಾಡಿದ್ದೀರಿ! ನಾನು ಹುಟ್ಟಿದಂದಿನಿಂದಲೂ ನನ್ನ ಪರಿತಪ್ತ ಆತ್ಮ ಬಯಸುತ್ತಿದ್ದ ಎಲ್ಲವನ್ನೂ, ಎಲ್ಲವನ್ನೂ, ನೀವು ನನಗೆ ನೀಡಿದ್ದೀರಿ! ನನ್ನ ಧ್ರುವತಾರೆಯೇ, ಇದಕ್ಕಾಗಿಯೇ ನೀನು ನನ್ನನ್ನು ಇಲ್ಲಿಗೆ ಕರೆತಂದೆಯಲ್ಲವೇ! ಇದಕ್ಕಾಗಿಯೇ ನೀನು ನನ್ನನ್ನು ಶಿಲಾಶ್ರೇಣಿಯ ಆಚೆಗೆ ಕರೆತಂದಿರುವೆ! ನಾನೀಗ ಇಡೀ ಜಗತ್ತಿಗೆ ನನ್ನ ಜುಲೈಕಾಳನ್ನು ತೋರಿಸುತ್ತೇನೆ. ಜನರು, ಆ ಉದ್ರಿಕ್ತ ರಾಕ್ಷಸರು, ಈಗ ನನ್ನನ್ನು ದೂಷಿಸುವ ಸಾಹಸ ಮಾಡಲಾರರು. ಓಹ್, ಜನರು ಅವಳ ಮೃದು ಹೃದಯದ ರಹಸ್ಯವಾದ ಅಳಲನ್ನು ಅರ್ಥಮಾಡಿಕೊಳ್ಳುವುದೇ ಆದಲ್ಲಿ, ಅವಳ ಕಣ್ಣೀರಿನ ಒಂದೊಂದೂ ಪುಟ್ಟ ಹನಿಯಲ್ಲಿ ಅಡಗಿರುವ ಕಾವ್ಯವನ್ನು ಕಾಣಬಲ್ಲವರಾದಲ್ಲಿ! ಓಹ್, ನಿನ್ನ ಕಣ್ಣೀರನ್ನು ನನ್ನ ಮುತ್ತುಗಳಿಂದಲೇ ಒರಸಲು ಬಿಡು, ಆ ದಿವ್ಯ ಹನಿಗಳನ್ನು ಕುಡಿಯಲು ಅವಕಾಶ ನೀಡು, ಸ್ವರ್ಗದೇವತೆಯೇ!'

"'ಯೆರ್ಮಾಕ್, ಈ ಜಗತ್ತು ಕ್ರೂರವಾದುದು, ಜನರು ನ್ಯಾಯಪರರಲ್ಲ. ಅವರು ನಮ್ಮನ್ನು ಓಡಿಸಿಬಿಡುತ್ತಾರೆ – ಅವರು ನಮ್ಮನ್ನು ಖಂಡಿಸುವುದು ಖಂಡಿತ, ನನ್ನ ಪ್ರಿಯ ಯೆರ್ಮಾಕ್! ತಂದೆಯ ಡೇರೆಗಳಲ್ಲಿ ಮಂಜಿನ ಮಧ್ಯೆ ಬೆಳೆದ ಈ ಬಡಪಾಯಿ ಕನ್ಯೆ ನಿಮ್ಮ ನೀರಸ, ಶೀತಲ ಕ್ರೌರ್ಯದ ಹಾಗೂ ಸೊಕ್ಕಿನ ಸಮಾಜದಲ್ಲಿ ಬಾಡಲಿರುವಳು. ಅವರು ನನ್ನನ್ನು, ನನ್ನ ಹೃದಯದ ಬಯಕೆಯನ್ನು, ಎಂದೂ ಅರ್ಥಮಾಡಿಕೊಳ್ಳಲಾರರು.'

"'ಹಾಗೇನಾದರೂ ಆದರೆ, ನನ್ನ ಕೊಸ್ಸಾಕ್ ಕತ್ತಿ ಅವರ ತಲೆಗಳ ಮೇಲೆ ಝಳಪಿಸುವುದು!' ಎಂದು ಯೆರ್ಮಾಕ್ ಅಬ್ಬರಿಸಿದ. ಅವನ ಕಣ್ಣುಗಳಲ್ಲಿ ಕೋಪಾಗ್ನಿ ಧಗಧಗಿಸುತ್ತಿತ್ತು."

ಜುಲೈಕಾಳನ್ನು ಇರಿದು ಕೊಲ್ಲಲಾಯಿತು ಎಂಬುದನ್ನು ತಿಳಿದಾಗ ಅವನಿಗೆ ಹೇಗಾಗಿರಬೇಕು, ಎಂಬುದನ್ನು ಈಗ ಊಹಿಸಿಕೊಳ್ಳಿ, ವಾರೆಂಕಾ. ರಾತ್ರಿಯ ಕತ್ತಲಲ್ಲಿ ಕುರುಡ ವೃದ್ಧ ಕುಚುಮ್ ಕಳ್ಳತನದಿಂದ ಯೆರ್ಮಾಕ್‌ನ ಡೇರೆ ಪ್ರವೇಶಿಸಿ ತನ್ನ ಸ್ವಂತ ಮಗಳನ್ನೇ ಇರಿದು ಕೊಂದ. ತನ್ನ ಸಿಂಹಾಸನವನ್ನೂ ರಾಜದಂಡವನ್ನೂ ಕಸಿದುಕೊಂಡಿದ್ದವನಿಗೆ ಈ ಮೂಲಕ ತಾನು ಮಾರಕ ಪ್ರಹಾರ ನೀಡುತ್ತಿದ್ದನೆಂಬುದನ್ನು ಅವನು ತಿಳಿದಿದ್ದ.

" 'ಉಕ್ಕು ಕಲ್ಲಿನ ಮೇಲೆ ಉಜ್ಜಿದಾಗ ಕೇಳಿಬರುವ ಶಬ್ದವನ್ನು ಕೇಳುವುದು ನನಗೆ ಇಷ್ಟ!' ಎಂದು ಯೆರ್ಮಾಕ್ ಮಾಂತ್ರಿಕ ಶಿಲೆಯ ಮೇಲೆ ತನ್ನ ಕತ್ತಿಯನ್ನು ಮಸೆಯುತ್ತ ಕೋಪೋದ್ರೇಕದಲ್ಲಿ ಹೇಳಿದ. 'ನನಗೆ ಅವರ ರಕ್ತ ಬೇಕು. ಅವರನ್ನು ಚೂರುಚೂರಾಗಿ ತುಂಡರಿಸಬೇಕು!' "

ತನ್ನ ಜುಲೈಕಾಳನ್ನು ಕಳೆದುಕೊಂಡುದರಿಂದಾದ ನಷ್ಟವನ್ನು ಭರಿಸಲಾರದೆ ಯೆರ್ಮಾಕ್ ಅನಂತರ ಇರ್ತಿಷ್ ನದಿಯೊಳಕ್ಕೆ ಧುಮುಕಿ ಪ್ರಾಣ ಬಿಟ್ಟ. ಅಲ್ಲಿಗೆ ಕಥೆ ಮುಗಿಯಿತು.

ಈಗ ಇಲ್ಲೊಂದು ಹಾಸ್ಯರಸ ಪ್ರಧಾನವಾದ ಒಂದು ಬರಹವಿದೆ ಜನರನ್ನು ನಗಿಸಲೆಂದು ಬರೆದಿರುವಂಥದು:

"ನಿಮಗೆ ಇವಾನ್ ಪ್ರಕೋಫ್ಯೆವಿಚ್ ರ್ಝೆಲ್ತೊಪೂಜ್ ಗೊತ್ತೆ? ಅವನೇ ಪ್ರಕೋಫಿ ಇವಾನೊವಿಚ್‌ರ ಕಾಲನ್ನು ಕಚ್ಚಿದವ. ಇವಾನ್ ಪ್ರಕೋಫ್ಯೆವಿಚ್ ಒಬ್ಬ ಕೋಪಿಷ್ಠ, ಆದರೆ ಅನೇಕ ಅಪರೂಪದ ಸದ್ಗುಣಗಳನ್ನು ಹೊಂದಿದ್ದಾನೆ. ಇದಕ್ಕೆ ವಿರುದ್ಧವಾಗಿ ಪ್ರಕೋಫಿ ಇವಾನೊವಿಚ್‌ನಿಗೆ ಮೂಲಂಗಿಯನ್ನು ಜೇನು ತುಪ್ಪದಲ್ಲಿ ಅದ್ದಿಕೊಂಡು ತಿನ್ನುವುದು ಇಷ್ಟ. ಪೆಲಗೇಯ ಅಂತೋನವ್ನಳು ಅವನ ಸ್ನೇಹಿತೆಯಾಗಿದ್ದಾಗ... ಪೆಲಗೇಯ ಅಂತೋನವ್ನ ನಿಮಗೆ ಗೊತ್ತೆ? ಅವಳು ಯಾವಾಗಲೂ ತನ್ನ ಪಾವಡೆಯನ್ನು ಒಳಗು ಹೊರಗಾಗುವಂತೆ ತಿರುವಿ ಹಾಕಿಕೊಳ್ಳುವ ಹೆಂಗಸು."

ಇದು ನಗೆ ಬರಿಸುವ, ತುಂಬ ನಗೆ ಬರಿಸುವ ಬರಹ, ಅಲ್ಲವೇ, ವಾರೆಂಕಾ? ಅವನು ಇದನ್ನು ನಮಗೆ ಓದಿ ಹೇಳಿದಾಗ ನಾವು ಪಕ್ಕೆ ಬಿರಿಯುವಷ್ಟು ನಕ್ಕೆವು. ಅಂತಹ ವ್ಯಕ್ತಿ ಅವನು. ದೇವರು ಅವನನ್ನು ಕ್ಷಮಿಸಲಿ. ಬಹುಶಃ ಅವನ ಈ ಬರವಣಿಗೆ ಸ್ವಲ್ಪ ಕಾಲ್ಪನಿಕವಾಗಿ, ಸ್ವಲ್ಪ ಕ್ಷುಲ್ಲಕವೆಂದೇ ಕಂಡುಬರಬಹುದು, ಆದರೆ ಅದೆಲ್ಲ ಮುಗ್ಧ ಬರವಣಿಗೆ. ಅದರಲ್ಲಿ ಮುಕ್ತ ಆಲೋಚನೆ ಹಾಗೂ ತೀವ್ರಗಾಮಿ ವಿಚಾರಗಳೇನೂ ಇಲ್ಲ. ರತಜ್ಯಾಯೆವ್ ಒಳ್ಳೆಯ ಸ್ವಭಾವದ ವ್ಯಕ್ತಿ, ಆದ್ದರಿಂದ ಒಬ್ಬ ಅತ್ಯುತ್ತಮ ಬರಹಗಾರ ಎಂದು ನಾನು ಹೇಳಬೇಕು, ವಾರೆಂಕಾ. ಅನೇಕ ಬರಹಗಾರರ ವಿಷಯದಲ್ಲಿ ಇದೇ ಮಾತನ್ನು ಹೇಳಲಾಗುವುದಿಲ್ಲ.

ನಾನೇ ಒಂದಿಷ್ಟು ಏನಾದರೂ ಬರೆದರೆ? ಎಂಥ ಹುಚ್ಚು ವಿಚಾರಗಳು ಬರುತ್ತೆ, ಒಮ್ಮೊಮ್ಮೆ! 'ಕವನ ಸಂಕಲನ, ಕವಿ: ಮಕಾರ್ ದೇವುಷ್ಕಿನ್' ಎಂಬ ಶೀರ್ಷಿಕೆ ಇರುವ ಗ್ರಂಥವೊಂದನ್ನು ನೀವು ಅಕಸ್ಮಾತ್ತಾಗಿ ಕಂಡಿರೆಂದು ಊಹಿಸಿ ಕೊಳ್ಳಿ. ಆಗ ನೀವೇನು ಹೇಳುವಿರಿ, ನನ್ನ ಪುಟ್ಟ ದೇವತೆ? ನಿಮಗೆ ಹೇಗೆ ಅನಿಸುತ್ತೆ? ನನ್ನ ಮಟ್ಟಿಗೆ ಹೇಳುವುದಾದರೆ, ನನ್ನ ರನ್ನ, ನಾನಂತೂ ಆಗ ನೆವ್‌ಸ್ಕಿ ಪ್ರಾಸ್ಪೆಕ್ಟ್‌ನಲ್ಲಿ ಓಡಾಡುವ ಸಾಹಸವನ್ನು ಮಾಡಲಾರೆ. "ಅಲ್ಲಿ ನೋಡಿ, ಅಲ್ಲಿ ಹೋಗುತ್ತಿದ್ದಾರೆ ದೇವುಷ್ಕಿನ್, ಕವಿ, ಸಾಹಿತಿ!" ಅಂತಲೋ, "ಅಲ್ಲಿ ನೋಡಿ, ಜೀವಂತ ದೇವುಷ್ಕಿನ್!" ಅಂತಲೋ ಜನರೆಲ್ಲ ನನ್ನತ್ತವೇ ನೋಡುತ್ತ ಹೇಳತೊಡಗಿದರೆ, ನನಗೇನು ಅನಿಸಬೇಡ! ಆಗ ನಾನು ಈ ಬೂಟುಗಳನ್ನು ಏನು ಮಾಡಬೇಕು? ಅಂದಹಾಗೆ, ಈ ಬೂಟುಗಳು ಯಾವಾಗಲೂ ತೇಪೆಯಿಂದ ಕೂಡಿಯೇ ಇರುತ್ತವೆ ಮತ್ತು ಅವುಗಳ ಅಡಿಭಾಗ ಕೆಲವು ವೇಳೆ ಅತ್ಯಂತ ಅನುಚಿತವಾದ ರೀತಿಯಲ್ಲಿ ಬಾಯಿ ತೆರೆಯುತ್ತಿರುತ್ತವೆ, ಅನ್ನುವುದನ್ನು ನಾನು ತಿಳಿಸಬೇಕು. ಕವಿ, ಸಾಹಿತಿ, ದೇವುಷ್ಕಿನ್ ತೇಪೆಹಾಕಿದ ಹರಿದುಹೋದ ಬೂಟುಗಳನ್ನು ತೊಟ್ಟು ಹೋಗುತ್ತಿರುವುದನ್ನು ಎಲ್ಲರೂ ಕಾಣುವಂತಾದರೆ ಎಷ್ಟು ಅಸಹ್ಯವಾಗಿರುತ್ತೆ. ಅಂಥ ಸ್ಥಿತಿಯಲ್ಲಿ ನನ್ನನ್ನು ಕಂಡ ಕೌಂಟೆಸ್-ಡಚೆಸ್ ಒಬ್ಬಳು ಏನು ಹೇಳುತ್ತಾಳೆ? ಅದನ್ನು ಅವರು ಗಮನಿಸಲು ಹೋಗುತ್ತಾರೆಂದೇನೂ ನಾನು ಭಾವಿಸುವುದಿಲ್ಲ. ಏಕೆಂದರೆ, ಯಾರು ಯಾವ ಬೂಟು ಹಾಕಿಕೊಂಡಿರುತ್ತಾರೆ ಎಂಬುದನ್ನು, ಅದರಲ್ಲೂ ಕಾರಕೂನನ ಬೂಟುಗಳನ್ನು, ಕೌಂಟೆಸ್‌ರು ನೋಡಲೇನೂ ಹೋಗುವುದಿಲ್ಲ. (ಬೂಟುಗಳೂ ತರಹೇವಾರಿ ಇರುತ್ತವೆನ್ನಿ.) ಆದರೆ ನನ್ನ ಸ್ವಂತ ಸ್ನೇಹಿತರೇ ನನ್ನ ಕೈ ಬಿಡುತ್ತಾರೆ. ಎಲ್ಲರಿಗಿಂತ ಮೊದಲು ರತಜ್ಯಾಯೆವ್ ನನ್ನ ಕೈ ಬಿಡುತ್ತಾನೆ. ಕೌಂಟೆಸ್ ಬಿ.ಯವರು ಅತಿಥಿಗಳನ್ನು ಬರಮಾಡಿಕೊಳ್ಳುವ ಪ್ರತಿಯೊಂದು ದಿನವೂ ರತಜ್ಯಾಯೆವ್ ಅವರನ್ನು ನೋಡಲು ಹೋಗುತ್ತಾನೆ, ಕೆಲವೊಮ್ಮೆ ತಾನೊಬ್ಬನೇ ಅವರಲ್ಲಿಗೆ ಹೋಗುವುದುಂಟು, ಎಂದೂ ರತಜ್ಯಾಯೆವ್ ಹೇಳುತ್ತಾನೆ. ಆಕೆಯೊಬ್ಬ ಸಂತಸಕರ ವ್ಯಕ್ತಿ, ಸಾಹಿತ್ಯದಲ್ಲಿ ಅದ್ದಿ ಮುಳುಗಿದ್ದಾರೆ, ಎನ್ನುತ್ತಾನೆ ಅವನು. ರತಜ್ಯಾಯೆವ್ ಎಂತಹ ಬುದ್ಧಿವಂತ ವ್ಯಕ್ತಿ!

ಇದು ಇಷ್ಟಕ್ಕೆ ಸಾಕು. ನಾನಿದನ್ನೆಲ್ಲ ವಿನೋದಕ್ಕಾಗಿ ಮತ್ತು ನಿಮ್ಮ ಉಲ್ಲಾಸಕ್ಕಾಗಿ ಬರೆಯುತ್ತಿದ್ದೇನೆ. ನಮಸ್ಕಾರ, ನನ್ನ ರನ್ನ! ಇಲ್ಲಿ ನಾನು ಬೇಕಾದಷ್ಟು ಅರ್ಥರಹಿತವಾದುದನ್ನು ಗೀಚಿದ್ದೇನೆ. ಯಾಕೆಂದರೆ ನಾನಿಂದು ಅತ್ಯಂತ ಉಲ್ಲಾಸಭರಿತನಾಗಿದ್ದೇನೆ. ನಾವೆಲ್ಲ ಇಂದು ರತಜ್ಯಾಯೆವ್‌ನ ಕೋಣೆಯಲ್ಲಿ ಊಟ ಮಾಡಿದೆವು. ಅವರು (ಘಾಟಿಗಳು!) ವೈನನ್ನೂ ಕುಡಿದರು. ನಾನು ಅದರ ಬಗೆಗೆ ಬರೆಯು

ಬಾರದು. ಆದರೆ ನನ್ನ ಬಗೆಗೆ ಏನೂ ತಪ್ಪು ಕಲ್ಪಿಸಿಕೊಳ್ಳಬೇಡಿ. ಅದೇನೂ ಅಂಥ ಮಹತ್ವದ್ದಲ್ಲ, ನಿಜಕ್ಕೂ. ನಿಮಗೆ ಪುಸ್ತಕ ಕಳುಹಿಸಿಕೊಡುತ್ತೇನೆ, ಖಂಡಿತ ಕಳು ಹಿಸಿಕೊಡುತ್ತೇನೆ... ಪಾಲ್ ದೆ ಕೋಕ್‌ರ ಪುಸ್ತಕವೊಂದನ್ನು ಇದೀಗ ಈ ಮನೆ ಯಲ್ಲಿ ಎಲ್ಲರೂ ಸರದಿಯಲ್ಲಿ ಓದುತ್ತಿದ್ದಾರೆ. ಆದರೆ ಅದು ನೀವು ಓದುವಂತಹ ಪುಸ್ತಕವಲ್ಲ, ನನ್ನ ಪ್ರಿಯತಮೆ, ಖಂಡಿತ ಅಲ್ಲ ! ಈ ಗ್ರಂಥ ಸೇಂಟ್ ಪೀಟರ್ಸ್ ಬರ್ಗ್‌ನ ಎಲ್ಲ ವಿಮರ್ಶಕರ ಶಿಷ್ಟ ಕೋಪಾವೇಶ ಕೆರಳಿಸಿದೆಯೆಂದು ಹೇಳ ಲಾಗುತ್ತೆ. ನಾನು ಈ ಪತ್ರದೊಂದಿಗೆ ಒಂದು ಪೌಂಡ್ ಮಿಠಾಯಿ ಕಳುಹಿಸು ತ್ತಿದ್ದೇನೆ – ನಿಮಗಾಗಿ ಇದನ್ನು ವಿಶೇಷವಾಗಿ ಕೊಂಡೆ. ಇದನ್ನು ತಿಂದು ಆನಂದಿಸಿ, ನನ್ನ ಚಿನ್ನ. ಪ್ರತಿ ಬಾರಿ ಒಂದೊಂದನ್ನು ತಿಂದಾಗಲೂ ನನ್ನನ್ನು ಜ್ಞಾಪಿಸಿಕೊಳ್ಳಿ. ಪೆಪ್ಪರ್‌ಮಿಂಟ್‌ಗಳನ್ನು ನೀವು ಚೀಪಬೇಕು, ನನ್ನ ರನ್ನ, ಎಂದೂ ಅಗಿದು ತಿನ್ನ ಬಾರದು. ಇಲ್ಲದಿದ್ದರೆ ನಿಮಗೆ ಹಲ್ಲುನೋವು ಬರುತ್ತೆ. ನಿಮಗೆ ಸಕ್ಕರೆ ಪಾಕ ಹಾಕಿದ ಹಣ್ಣು ಇಷ್ಟವೆ? ಇಷ್ಟವಾದರೆ ಬರೆಯಿರಿ. ಒಳ್ಳೆಯದು, ನಮಸ್ಕಾರ, ವಾರೆಂಕಾ, ನಮಸ್ಕಾರ ! ದೇವರು ನಿಮಗೆ ಆಶೀರ್ವದಿಸಲಿ, ನನ್ನ ಪುಟ್ಟ ಮುದ್ದು ಮಣಿ.

ನಿಮ್ಮ ಅತ್ಯಂತ ನಿಷ್ಠಾವಂತ ಮಿತ್ರ,

ಮಕಾರ್ ದೇವುಷ್ಕಿನ್.

ಜೂನ್ 27

ನನ್ನ ಪ್ರಿಯ ಮಕಾರ್ ಅಲೆಕ್ಸೇಯೆವಿಚ್,

ನಾನು ಬಯಸಿದರೆ ನನಗೆ ಮನೆಯಲ್ಲಿ ಮಕ್ಕಳಿಗೆ ಪಾಠ ಹೇಳಿಕೊಡುವ ಉಪಾಧ್ಯಾಯಿನಿಯ ಒಳ್ಳೆಯ ಕೆಲಸ ಕೊಡಿಸಲು ಸಹಾಯ ಮಾಡುವಂಥ ಜನರಿದ್ದಾರೆಂದು ಫಿದೋರ ಹೇಳುತ್ತಾಳೆ. ನಾನು ಒಪ್ಪಿಕೊಳ್ಳಲೇ, ಬೇಡವೇ ? ನಿಮ್ಮ ಸಲಹೆ ಏನು? ಒಪ್ಪಿಕೊಂಡರೆ ನಾನು ಇನ್ನೆಂದಿಗೂ ನಿಮಗೆ ಹೊರೆಯಾ ಗಿರುವುದಿಲ್ಲ. ಅದು ಒಳ್ಳೆಯ ಸಂಬಳದ ಕೆಲಸವೆಂದೂ ನನ್ನ ನಂಬಿಕೆ. ಮತ್ತೊಂದು ಕಡೆ, ಯಾರದೋ ತಿಳಿಯದವರ ಮನೆ ಪ್ರವೇಶಿಸುವ ವಿಚಾರವೇ ಏಕೋ ಏನೋ ನನ್ನನ್ನು ದಿಗಿಲುಗೊಳಿಸುತ್ತದೆ. ಅವರು ಎಲ್ಲೋ ಭೂಮಾಲೀಕರಾಗಿದ್ದಾರಂತೆ. ಅವರು ಎಲ್ಲ ವಿಚಾರಿಸತೊಡಗುತ್ತಾರೆ – ನನ್ನ ಇಂದಿನ ಹಿಂದಿನ ವಿಷಯಗಳ ನ್ನೆಲ್ಲ ಕೆದಕಿಕೆದಕಿ ಕೇಳುತ್ತಾರೆ. ನಾನು ಅವರಿಗೆ ಏನು ಹೇಳಬೇಕು ? ಅಲ್ಲದೆ ನಾನು ಎಂತಹ ಒಂಟಿಬಡಕಿ, ಬೆರೆಯುವಂತಹವಳಲ್ಲ. ತುಂಬ ಕಾಲದಿಂದ ವಾಸಿಸುತ್ತ ಬಂದಿರುವ ಸ್ಥಳಗಳಿಗೇ ಹೊಂದಿಕೊಂಡು ಬಿಟ್ಟಿದ್ದೇನೆ. ಇಲ್ಲಿ ಜೀವನ ಕಷ್ಟ ವಾದರೂ ಇದೇ ಉತ್ತಮವಾದ ಸ್ಥಳವೆಂಬ ಭಾವನೆ ಬೇರೂರಿದೆ. ಆ ಕೆಲಸದ

ಮನೆಯೂ ತುಂಬ ದೂರ. ಅಲ್ಲಿ ನಾನೇನು ಮಾಡಬೇಕಾಗಿ ಬರುವುದೋ ಯಾರಿಗೆ ಗೊತ್ತು. ಬಹುಶಃ ಕೇವಲ ಮಕ್ಕಳನ್ನು ನೋಡಿಕೊಳ್ಳುವ ದಾದಿ ಕೆಲಸ ಇರ ಬಹುದು. ಅಲ್ಲದೆ ಅವರನ್ನು ತೃಪ್ತಿಪಡಿಸುವುದೂ ಕಷ್ಟವೆಂದೇ ಕಂಡುಬರುತ್ತೆ. ಎರಡು ವರ್ಷಗಳಲ್ಲಿ ಆಗಲೇ ಇಬ್ಬರು ಕೆಲಸಕ್ಕಿದ್ದು ಹೋಗಿದ್ದಾರಂತೆ. ನನಗೆ ಸಲಹೆ ನೀಡಿ ಎಂದು ನಾನು ನಿಮ್ಮನ್ನು ಬೇಡಿಕೊಳ್ಳುತ್ತೇನೆ, ಮಕಾರ್ ಅಲೆ ಕ್ಸೇಯೆವಿಚ್. ಹೋಗಲೋ ಬೇಡವೋ? ನೀವೇಕೆ ನಮ್ಮ ಮನೆಗೆ ಬರುವುದೇ ಇಲ್ಲ? ಈಚೀಚೆಗೆ ನಿಮ್ಮನ್ನು ಕಾಣುವುದೇ ಕಷ್ಟವಾಗಿದೆ. ಭಾನುವಾರಗಳಂದು ಚರ್ಚಿನಲ್ಲಷ್ಟೆ ಕಾಣುತ್ತಿದ್ದೇವೆ. ನೀವೂ ನನ್ನಂತೆಯೇ ಏಕಾಂತವಾಸಿ. ಹೇಳಿಕೇಳಿ, ನಾನು ನಿಮ್ಮ ಸಂಬಂಧಿಯಲ್ಲವೇ. ಆದರೂ ನೀವು ಬರುವುದಿಲ್ಲವೇಕೆ? ಅಂದರೆ ನೀವು ನನ್ನನ್ನು ಪ್ರೀತಿಸುವುದಿಲ್ಲ ಎಂದಾಯಿತು, ಮಕಾರ್ ಅಲೆಕ್ಸೇಯೆವಿಚ್. ನಾನು ಒಬ್ಬಂಟಿಗಳಾಗಿ ಎಷ್ಟು ದುಃಖದಲ್ಲಿದ್ದೇನೆ. ಕೆಲವು ವೇಳೆ, ಅದರಲ್ಲೂ ಸಂಜೆ ಹೊತ್ತಿನಲ್ಲಿ, ನಾನು ಒಬ್ಬಳೇ, ಒಂಟಿಯಾಗಿಯೇ, ಕುಳಿತಿರುತ್ತೇನೆ. ಫಿದೋರ ಹೊರಗೆ ಹೋಗಿರುತ್ತಾಳೆ, ನಾನು ಕುಳಿತು ಯೋಚನೆ ಮಾಡುತ್ತಾ ಮಾಡುತ್ತಾ ಇರುತ್ತೇನೆ. ಹಿಂದಿನದೆಲ್ಲವನ್ನೂ, ದುಃಖದ ಹಾಗೂ ಸಂತಸದ ಎಲ್ಲವನ್ನೂ, ಮನಸ್ಸಿನಲ್ಲಿ ಮೆಲುಕು ಹಾಕುತ್ತೇನೆ. ಅವೆಲ್ಲ ನನ್ನ ಕಣ್ಣುಗಳ ಮುಂದೆ ಹಾದು ಹೋಗುತ್ತವೆ. ನಾನು ಮತ್ತೆ ಎಲ್ಲ ಸುಪರಿಚಿತ ಮುಖಗಳನ್ನೂ ಕಾಣುತ್ತೇನೆ. (ಅವೆಲ್ಲ ಬಹುಮಟ್ಟಿಗೆ ನಿಜವಾಗಿಯೇ ಇರುವಂತೆ ಕಾಣುತ್ತವೆ.) ಇತರ ಯಾರಿ ಗಿಂತ ಅಮ್ಮನ ಮುಖವೇ ಹೆಚ್ಚಾಗಿ ಕಂಡುಬರುವುದು. ಮತ್ತೆ ನಾನು ಕಾಣು ವಂತಹ ಕನಸುಗಳಾದರೂ ಎಂತಹವು! ನನ್ನ ಆರೋಗ್ಯ ನಷ್ಟವಾಗಿದೆ ಎಂದು ನನಗನಿಸುತ್ತದೆ; ನಾನು ತುಂಬ ನಿಶ್ಶಕ್ತಳಾಗಿದ್ದೇನೆ. ಇಂದು ಬೆಳಿಗ್ಗೆ ಎದ್ದಾಗ ಇದ್ದ ಕ್ಕಿದ್ದಂತೆ ಮೂರ್ಛೆ ಹೋಗಿಬಿಟ್ಟೆ. ಈಗ ಸ್ವಲ್ಪ ಕಾಲದಿಂದ ವಿಪರೀತ ಕೆಮ್ಮೂ ಆಗಿದೆ. ನಾನು ಬೇಗ ಸತ್ತು ಹೋಗುತ್ತೇನೆ, ನನಗೆ ಹಾಗೆ ಅನ್ನಿಸಿದೆ, ನನಗೆ ಗೊತ್ತು. ನನಗಾಗಿ ಯಾರು ಚಿಂತಿಸುತ್ತಾರೆ, ಯಾರು ಅಳುತ್ತಾರೆ, ಯಾರು ನನ್ನ ಶವ ಸಂಪುಟದ ಹಿಂದೆ ಸಮಾಧಿಭೂಮಿಯವರೆಗೂ ಹೋಗುತ್ತಾರೆ? ಬಹುಶಃ ನಾನು ಯಾರದೋ ತಿಳಿಯದವರ ಮನೆಯಲ್ಲಿ, ತಿಳಿಯದ ಸ್ಥಳದಲ್ಲಿ, ಸಾಯಬೇಕಾ ಗುವುದೇನೋ. ಅಯ್ಯೋ, ದೇವರೇ, ಬಾಳು ಎಷ್ಟು ದುಃಖಭರಿತವಾದುದು. ನೀವು ಸದಾಕಾಲವೂ ನನಗೆ ಸಿಹಿಯನ್ನೇಕೆ ತಿನ್ನಿಸುತ್ತೀರ, ಮಕಾರ್ ಅಲೆಕ್ಸೇಯೆ ವಿಚ್? ಇದಕ್ಕೆಲ್ಲ ನಿಮಗೆ ಹಣ ಎಲ್ಲಿಂದ ಬರುತ್ತೆ ಅಂತ ನಾನು ನಿಜಕ್ಕೂ ಊಹಿ ಸಲಾರೆ. ಹಣವನ್ನು ಉಳಿಸಿ, ನನ್ನ ಪ್ರಿಯ ಮಿತ್ರರೇ, ಉಳಿಸಿ, ದಮ್ಮಯ್ಯ ಉಳಿಸಿ. ನಾನು ಕಸೂತಿ ಹಾಕಿ ಸಿದ್ಧಗೊಳಿಸಿದ ರತ್ನಗಂಬಳಿಯನ್ನು ಫಿದೋರ ಮಾರುತ್ತಿದ್ದಾಳೆ. ಅವರು ಬ್ಯಾಂಕ್‌ನೋಟುಗಳಲ್ಲಿ ಐವತ್ತು ರೂಬಲ್ ಕೊಡು

ವುದಾಗಿ ತಿಳಿಸಿದ್ದಾರೆ. ಇದು ಒಳ್ಳೆಯ ಬೆಲೆಯೇ. ನಾನು ನಿರೀಕ್ಷಿಸಿದುದಕ್ಕಿಂತ ಹೆಚ್ಚೇ ಆಯಿತು. ಫಿದೋರಳಿಗೆ ಮೂರು ರೂಬಲ್ ಕೊಡುತ್ತೇನೆ. ನನಗೆ ಒಂದು ಫ್ರಾಕ್ ಹೊಲಿದುಕೊಳ್ಳುತ್ತೇನೆ, ಸರಳವಾದ ಆದರೆ ಬೆಚ್ಚಗಿನ ಫ್ರಾಕ್. ನಿಮಗಾಗಿ ವೇಸ್‌ಕೋಟನ್ನೂ ಹೊಲಿಯುತ್ತೇನೆ, ಒಳ್ಳೆಯ ಬಟ್ಟೆ ತಂದು ನಾನೇ ಹೊಲಿಯುತ್ತೇನೆ.

ಫಿದೋರಳು 'ಇವಾನ್ ಬೇಲ್ಕಿನ್‌ನ ಕಥೆಗಳು'* ಎಂಬ ಒಂದು ಪುಸ್ತಕ ತಂದಿದ್ದಾಳೆ. ಅದನ್ನು ನಿಮಗೆ ಕಳುಹಿಸಿಕೊಡುತ್ತಿದ್ದೇನೆ. ನಿಮಗೆ ಇಷ್ಟವಾದರೆ ಓದಿ. ಆದರೆ ದಯವಿಟ್ಟು ಅದನ್ನು ಕೊಳೆ ಮಾಡಬೇಡಿ ಅಥವಾ ತುಂಬ ಕಾಲ ಇಟ್ಟುಕೊಳ್ಳಬೇಡಿ. ಅದು ನನ್ನದಲ್ಲ. ಎರಡು ವರ್ಷಗಳ ಹಿಂದೆ ಅಮ್ಮನೂ ನಾನೂ ಒಟ್ಟಿಗೇ ಈ ಕಥೆಗಳನ್ನು ಓದಿದೆವು. ಈಗ ಒಬ್ಬಳೇ ಓದುವುದಕ್ಕೆ ದುಃಖವಾಗುತ್ತೆ. ನಿಮ್ಮ ಬಳಿ ಏನಾದರೂ ಪುಸ್ತಕಗಳಿದ್ದರೆ ದಯವಿಟ್ಟು ಕಳುಹಿಸಿಕೊಡಿ. ರತಜ್ಯಾಯೆವ್ ಕೊಡುವ ಪುಸ್ತಕಗಳಂತೂ ಬೇಡ. ಅವನು ಬಹುಶಃ ತನ್ನ ಪುಸ್ತಕಗಳನ್ನೇ ಕೊಡುತ್ತಾನೇನೋ, ಅವು ಮುದ್ರಿತವಾಗಿದ್ದಲ್ಲಿ. ನೀವು ಅವುಗಳನ್ನು ಹೇಗಾದರೂ ಇಷ್ಟಪಡುತ್ತೀರ, ಮಕಾರ್ ಅಲೆಕ್ಸೇಯೆವಿಚ್? ಅವೆಲ್ಲ ಎಷ್ಟು ಕಳಪೆ. ಇನ್ನು ನಮಸ್ಕಾರ. ನಾನಾಗಲೇ ಸಾಕಷ್ಟು ಹರಟೆ ಹೊಡೆದಿದ್ದೇನೆ. ಕೆಲವು ವೇಳೆ ನಾನು ದುಃಖದಲ್ಲಿದ್ದಾಗ ಹೀಗೆ ಹರಟೆ ಹೊಡೆಯುವುದನ್ನು ಇಷ್ಟಪಡುತ್ತೇನೆ. ಅದು ಔಷಧಿ ಇದ್ದಂತೆ. ಕೂಡಲೇ ಸಹಾಯವಾಗುತ್ತೆ, ಅದರಲ್ಲೂ ಹೃದಯಕ್ಕೆ ಹೊರೆಯಾದಂಥ ಎಲ್ಲವನ್ನೂ ಹೊರಹಾಕಿದಾಗ. ನಮಸ್ಕಾರ, ನನ್ನ ಮಿತ್ರರೇ, ನಮಸ್ಕಾರ.

ನಿಮ್ಮ,
ವ. ದೊ.

ಜೂನ್ 28

ಮರ್ಯಾದಸ್ಥ ಅಲೆಕ್ಸೇಯೆವ್ನ, ನನ್ನ ಮುದ್ದುಮಣಿ,

ನೀವು ಹೀಗೆಲ್ಲ ಚಿಂತಿಸಬಾರದು. ನಾಚಿಕೆಯಾಗೊಲ್ವೆ? ಬೇಡಿ, ನನ್ನ ದೇವತೆ! ಇಂಥ ಯೋಚನೆಗಳೆಲ್ಲ ನಿಮಗೆ ಹೇಗೆ ಬರುತ್ತೆ? ನಿಮಗೆ ಯಾವ ರೀತಿಯ ಅನಾರೋಗ್ಯವೂ ಇಲ್ಲ, ಯಾವ ರೋಗವೂ ಇಲ್ಲ! ನೀವು ಅರಳುತ್ತಿದ್ದೀರ,

*1830ರ ವರ್ಷಗಳಲ್ಲಿ ಎ. ಎಸ್. ಪೂಷ್ಕಿನ್‌ರು ರಚಿಸಿದ ಒಂದು ಕಥಾ ಸಂಗ್ರಹ. – ಸಂ.

ಹೂವಿನಂತೆ ಅರಳುತ್ತಿದ್ದೀರ! ಸ್ವಲ್ಪ ನಿಸ್ತೇಜರಾಗಿದ್ದೀರೇನೋ, ಆದರೂ ಅರಳು ತ್ತಿದ್ದೀರ. ಏನು ನಿಮ್ಮ ಕನಸುಗಳು, ಕಲ್ಪನೆಗಳು? ನಿಮಗೆ ನಾಚಿಕೆಯಾಗಬೇಕು, ನನ್ನ ರನ್ನ. ಅಂಥ ಯೋಚನೆಗಳು ಬಂದಾಗ ಸುಮ್ಮನೆ ಚಿಟಕಿ ಹಾಕಿ ಅವನ್ನು ಓಡಿಸಿಬಿಡಿ. ನಾನು ಹೇಗೆ ಚೆನ್ನಾಗಿ ನಿದ್ದೆ ಮಾಡುತ್ತೇನೆ, ಅಂಥ ಯೋಚನೆಗಳು ಯಾವುವೂ ಎಂದೂ ತೊಂದರೆ ಕೊಡುವುದಿಲ್ಲ. ನನ್ನನ್ನು ನೋಡಿ! ಕೊರಡಿ ನಂತೆ ಮಲಗುತ್ತೇನೆ, ದಷ್ಟಪುಷ್ಟವಾಗಿದ್ದೇನೆ, ಯುವಕರಲ್ಲಿ ಯುವಕ ಅನ್ನು ವಂತಿದ್ದೇನೆ – ನಿಜಕ್ಕೂ ಹಾಗೆಯೇ! ಸಾಕುಮಾಡಿ, ಸಾಕುಮಾಡಿ ವಾರೆಂಕಾ! ಆತ್ಮಸ್ಥೈರ್ಯ ತಂದುಕೊಳ್ಳಿ! ನನಗೆ ನಿಮ್ಮ ವಿಷಯವೆಲ್ಲ ಚೆನ್ನಾಗಿ ಗೊತ್ತು– ಸ್ವಲ್ಪ ಹೆಚ್ಚುಕಮ್ಮಿ ಆಯಿತೆಂದರೆ ಕನಸುವುದಕ್ಕೆ ಚಿಂತಿಸುವುದಕ್ಕೆ ಶುರು ಮಾಡು ತ್ತೀರ! ಇನ್ನೆಷ್ಟು ಮಾತ್ರವೂ ಹಾಗೆ ಮಾಡಬೇಡಿ, ನನ್ನ ಸಲುವಾಗಿ! ಇನ್ನು ಆ ಶಿಕ್ಷಕಿಯ ಕೆಲಸ – ಎಂದಿಗೂ ಬೇಡ! ಬೇಡ, ಬೇಡ, ಬೇಡ! ಎಂತಹ ವಿಚಾರ! ಅಂತಹ ವಿಚಾರವನ್ನು ನೀವು ಹೇಗಾದರೂ ಯೋಚಿಸುತ್ತೀರ. ಆ ಸ್ಥಳವೂ ಬಲು ದೂರ. ಉಹೂಂ, ನನ್ನ ಚಿನ್ನ, ಅದಕ್ಕೆ ನನ್ನ ಬೆಂಬಲವಿಲ್ಲ. ನನ್ನ ಶಕ್ತಿಯನ್ನೆಲ್ಲ ಕೂಡಿಸಿಕೊಂಡು ನಾನು ಅದರ ವಿರುದ್ಧ ಪ್ರತಿಭಟಿಸುತ್ತೇನೆ! ನಿಮ್ಮನ್ನು ಕೊರತೆಯಲ್ಲಿ ಸಂಕಟಪಡುವುದಕ್ಕೆ ಬಿಡುವ ಮುನ್ನ ನಾನೇ ನನ್ನ ಹಳೆಯ ಫ್ರಾಕ್ ಕೋಟನ್ನು ಮಾರಿ ಕೇವಲ ಒಳ ಅಂಗಿಯಲ್ಲಿ ಓಡಾಡಿಯೇನು. ಕೂಡದು, ವಾರೆಂಕಾ, ಅದು ನಿಮಗೆ ಸರಿ ಹೋಗದು. ಅದು ಭಾರಿ ತಪ್ಪಾಗುತ್ತೆ, ಕೇವಲ ಮೂರ್ಖತನವಾಗುತ್ತೆ! ಇದೆಲ್ಲ ಫಿದೋರಳ ಸಂಚೆಂದೇ ನನಗೆ ಖಾತರಿ ಇದೆ. ಅವಳೇ, ಆ ಪೆದ್ದ ಹೆಂಗಸೇ, ನಿಮ್ಮ ತಲೆಗೆ ಇಂತಹ ವಿಚಾರಗಳನ್ನು ತುಂಬು ವುದು. ಅವಳನ್ನು ನಂಬಬೇಡಿ, ನನ್ನ ಪ್ರಿಯೆ. ಅವಳ ವಿಷಯದಲ್ಲಿ ನಿಮಗೆ ತಿಳಿಯದೆ ಇರುವ ಸಂಗತಿಗಳು ಇದ್ದರೂ ಇರಬಹುದು. ಅವಳೊಬ್ಬ ಪೆದ್ದ ಹೆಂಗಸು, ಪದೇಪದೇ ಪೀಡಿಸುವ ಗೊಡ್ಡು ಹರಟೆಗಾರ್ತಿ. ಅವಳು ಹೀಗೆಯೇ ಪೀಡಿಸಿ ಪೀಡಿಸಿ ತನ್ನ ಪತಿಯನ್ನು ಸಮಾಧಿಗೆ ತಳ್ಳಿದಳು. ನೀವು ಕೋಪ ತಾಳು ವಂತೆ ಅವಳು ಮಾಡಿರಬಹುದೇನೋ. ಬೇಡ, ಬೇಡ, ನನ್ನ ಮುದ್ದು. ಜಗತ್ತಿ ನಲ್ಲಿ ಏನು ಕೊಟ್ಟರೂ ಅದು ಬೇಡ! ಹಾಗೇನಾದರೂ ಆದರೆ ನಾನೇನು ಮಾಡಬೇಕು, ನನಗೆ ಮಾಡಲು ಇನ್ನೇನು ಉಳಿದಿರುತ್ತದೆ? ಉಹೂಂ, ವಾರೆಂಕಾ. ಉಹೂಂ, ನನ್ನ ಮುದ್ದು! ಈ ವಿಚಾರವನ್ನು ನಿಮ್ಮ ಮನಸ್ಸಿನಿಂದ ಕಿತ್ತು ಹಾಕಿ! ಇಲ್ಲಿ ನಿಮಗೆ ಇಲ್ಲದಿರುವುದಾದರೂ ಏನು? ನೀವು ಫಿದೋರಳಿಗೂ ನನಗೂ ಎಷ್ಟೊಂದು ಸಂತೋಷ ನೀಡುತ್ತಿದ್ದೀರಿ! ನಮ್ಮನ್ನು ಕಂಡರೆ ನಿಮಗೂ ಇಷ್ಟವೇ. ಆದ್ದರಿಂದ ನೀವು ಈಗಿರುವಂತೆಯೇ ಇಲ್ಲೇ ಸುಖವಾಗಿ ಸಂತೋಷದಿಂದ ಇರ ಬಾರದೇಕೆ? ಬೇಕಾದಾಗ ನೀವು ಓದಬಹುದು, ಹೊಲಿಗೆ ಹೊಲಿಯಬಹುದು;

ಅಥವಾ ಕೇವಲ ಓದುತ್ತ ಕಾಲ ಕಳೆಯಿರಿ, ಹೊಲಿಯುವುದೂ ಬೇಕಾಗಿಲ್ಲ. ಇಲ್ಲಿಂದ ಬೇರೆಲ್ಲಿಗೂ ಹೋಗಬೇಡಿ, ಅಷ್ಟೆ. ನೀವು ಹೊರಟುಹೋದರೆ ಯಾವ ಪ್ರಯೋಜನವೂ ಆಗುವುದಿಲ್ಲ! ನಿಮಗೆ ಬೇಕಾದ ಪುಸ್ತಕಗಳನ್ನೆಲ್ಲ ನಾನು ತಂದು ಕೊಡುತ್ತೇನೆ. ನಾವು ಮತ್ತೆ ಸಂಜೆ ಹೊತ್ತು ವಾಯುವಿಹಾರ ಹೋಗೋಣ. ಆದರೆ ನೀವು ಮಾತ್ರ ವಿವೇಕವುಳ್ಳವರಾಗಬೇಕು, ಅಂಥ ಮೂರ್ಖ ವಿಚಾರಗಳ ಬಗೆಗೆ ಇನ್ನೆಷ್ಟು ಮಾತ್ರವೂ ಯೋಚನೆ ಮಾಡಬಾರದು. ನಾನು ನಿಮ್ಮನ್ನು ಕಾಣಲು ಬರುತ್ತೇನೆ, ಬೇಗನೆಯೇ ಬರುತ್ತೇನೆ. ನನ್ನ ಮನಸ್ಸಿನಲ್ಲಿದ್ದುದನ್ನೇ ಹೇಳಿಬಿಟ್ಟಿರುವುದಕ್ಕೆ ನನ್ನನ್ನು ಕ್ಷಮಿಸಿ. ಆದರೆ ನಿಮ್ಮದು ತಪ್ಪು, ನನ್ನ ಮುದ್ದು, ತುಂಬ ತಪ್ಪು. ನಾನೇನೂ ತುಂಬ ಓದಿಬರದವನಲ್ಲ, ನಿಜ. ನನ್ನ ವಿದ್ಯಾಭ್ಯಾಸ ವೆಲ್ಲ, ಸಾಮಾನ್ಯವಾಗಿ ಹೇಳುವಂತೆ, ಕೊಪೆಕ್ಕುಗಳಲ್ಲೇ ಮುಗಿದು ಹೋಯಿತು. ಆದರೆ ನನ್ನ ಬಗೆಗಲ್ಲ ಆದರೆ ರತಜ್ಯಾಯೆವ್‌ನ ಬಗೆಗೆ ನಾನು ಮಾತನಾಡಬಯಸು ತ್ತೇನೆ. ಕ್ಷಮಿಸಿ, ನನ್ನ ಪ್ರಿಯೆ, ನಾನು ಅವನನ್ನು ಬೆಂಬಲಿಸಿ ಮಾತನಾಡಲೇ ಬೇಕು. ಅವನು ನನ್ನ ಗೆಳೆಯ, ನಾನು ಅವನನ್ನು ಬೆಂಬಲಿಸಲೇ ಬೇಕು. ಅವನು ಚೆನ್ನಾಗಿ ಬರೆಯುತ್ತಾನೆ, ತುಂಬ ತುಂಬ ಚೆನ್ನಾಗಿ ಬರೆಯುತ್ತಾನೆ. ಅವನ ಬರವಣಿಗೆ ವಾಸ್ತವವಾಗಿ ಕಳಪೆಯೇನಲ್ಲ. ಈ ವಿಷಯದಲ್ಲಿ ನಾನು ನಿಮ್ಮ ಅಭಿಪ್ರಾಯವನ್ನು ಒಪ್ಪಲಾರೆ, ಖಂಡಿತ ಒಪ್ಪಲಾರೆ. ಅವನು ಎಷ್ಟು ಅಲಂಕಾರಿಕ ಶೈಲಿಯಲ್ಲಿ ಬರೆ ಯುತ್ತಾನೆ, ಎಷ್ಟು ಸೊಗಸಾದ ರೂಪಕಗಳೊಂದಿಗೆ ನಾನಾ ವಿಚಾರಗಳ ಬಗೆಗೆ ಬರೆಯುತ್ತಾನೆ. ಎಷ್ಟು ಮಾತ್ರವೂ ಕಳಪೆಯಲ್ಲ! ನೀವು ಬಹುಶಃ ಅದನ್ನು ಸೂಕ್ತ ಭಾವಪೂರ್ಣತೆಯೊಂದಿಗೆ ಓದಲಿಲ್ಲವೇನೋ, ವಾರೆಂಕಾ? ಅಥವಾ ನಿಮ್ಮ ಮನೋಸ್ಥಿತಿ ಚೆನ್ನಾಗಿರಲಿಲ್ಲವೇನೋ – ಬಹುಶಃ ನೀವು ಫಿದೋರಳೊಂದಿಗೆ ಕೋಪಗೊಂಡಿದ್ದಿರೇನೋ, ಅಥವಾ ಅಪ್ರಿಯವಾದುದು ಏನಾದರೂ ಜರುಗಿ ದ್ದಿತೋ? ನೀವು ಅದನ್ನು ಮತ್ತೆ ಓದಿ, ವಾರೆಂಕಾ, ಸೂಕ್ತ ಭಾವದೊಂದಿಗೆ, ಹೆಚ್ಚು ಗಮನವಿತ್ತು. ನೀವು ಸಂತಸಿತರಾಗಿ, ತೃಪ್ತಿಯಿಂದ, ಆನಂದದ ಮನೋ ಸ್ಥಿತಿಯಲ್ಲಿದ್ದಾಗ, ಉದಾಹರಣೆಗೆ ಮಿಠಾಯಿಯೊಂದನ್ನು ಬಾಯಿಯಲ್ಲಿ ಹಾಕಿ ಕೊಂಡಿದ್ದಾಗ, ಓದಿ. ರತಜ್ಯಾಯೆವ್‌ನಿಗಿಂತ ಹೆಚ್ಚು ಉತ್ತಮರಾದ, ಬಹುಶಃ ತುಂಬ ಹೆಚ್ಚು ಉತ್ತಮರೇ ಆದ, ಬರಹಗಾರರಿದ್ದಾರೆ ಎಂಬ ಬಗೆಗೆ ನನಗೇನೂ ಸಂದೇಹವಿಲ್ಲ (ಯಾರಿಗೆ ತಾನೆ ಇದ್ದೀತು?). ಅವರು ಒಳ್ಳೆಯವರು, ಆದರೂ ರತಜ್ಯಾಯೆವ್‌ನೂ ಒಳ್ಳೆಯವನೇ. ಅವರು ಚೆನ್ನಾಗಿ ಬರೆಯುತ್ತಾರೆ, ಆದರೆ ರತಜ್ಯಾಯೆವ್‌ನೂ ಕೆಟ್ಟುದಾಗೇನೂ ಬರೆಯುವುದಿಲ್ಲ. ರತಜ್ಯಾಯೆವ್ ತನ್ನಷ್ಟಕ್ಕೆ ತಾನೇ ಬರೆಯುತ್ತಾನೆ, ಗುಣಕ್ಕೆ ಸಂಬಂಧಿಸಿ ತನ್ನ ಕೈಲಾದಷ್ಟು ಬರೆಯುತ್ತಾನೆ. ಅದು ಅವನಿಗೆ ಒಳ್ಳೆಯದೇ! ನಮಸ್ಕಾರ, ನನ್ನ ಪ್ರಿಯತಮೆ. ನಾನು ಹೆಚ್ಚು

ಬರೆಯಲಾರೆ. ತುಂಬ ಕೆಲಸವಿದೆ. ಈಗ ಮನಸ್ಸಿನಲ್ಲಿಡಿ, ನನ್ನ ಪುಟ್ಟ ಹಕ್ಕಿ, ವಿಷಣ್ಣ ಯೋಚನೆಗಳು ಇನ್ನೆಷ್ಟು ಮಾತ್ರವೂ ನಿಮ್ಮನ್ನು ತೊಂದರೆಪಡಿಸದಿರಲಿ. ದೇವರು ನಿಮಗೆ ಒಳ್ಳೆಯದು ಮಾಡಲಿ.

ನಿಮ್ಮ ನೈಜ ಮಿತ್ರ,
ಮಕಾರ್ ದೇವುಷ್ಕಿನ್.

ಮರೆತದ್ದು:

ಪುಸ್ತಕ ಕಳುಹಿಸಿಕೊಟ್ಟುದಕ್ಕಾಗಿ ನಿಮಗೆ ತುಂಬ ವಂದನೆಗಳು, ನನ್ನ ಚಿನ್ನ. ನಾನು ಪೂಷ್ಕಿನ್‌ರ ಬರಹಗಳನ್ನೂ ಓದುತ್ತೇನೆ. ನಾನು ನಿಮ್ಮನ್ನು ಹಗಲು ಕಳೆದ ಮೇಲೆ, ಸಂಜೆ ಹೊತ್ತಿಗೆ, ಬಂದು ಕಾಣುತ್ತೇನೆ.

ಜುಲೈ 1

ನನ್ನ ಪ್ರಿಯ ಮಿತ್ರ ಮಕಾರ್ ಅಲೆಕ್ಸೇಯೆವಿಚ್,

ಇಲ್ಲ, ನನ್ನ ಮಿತ್ರರೇ, ನಿಮ್ಮ ಮಧ್ಯೆ ನನಗೆ ಇಲ್ಲಿ ಜೀವನವಿಲ್ಲ. ಎಲ್ಲವನ್ನೂ ಪರಿಗಣಿಸಿದ ಮೇಲೆ, ಅಂತಹ ಅನುಕೂಲದ ಕೆಲಸವನ್ನು ನಿರಾಕರಿಸುವುದು ಶುದ್ಧ ತಪ್ಪೆಂದು ನನಗನಿಸುತ್ತದೆ. ಆಗ ನನಗೆ ಕೊನೆಯಪಕ್ಷ ನನ್ನ ಜೀವನಾಧಾರದ ಖಾತರಿ ಇರುತ್ತದೆ. ನಾನು ಅಪರಿಚಿತ ಕುಟುಂಬವೊಂದರ ಕರುಣೆಗೆ ಅರ್ಹಳಾಗುವಂತೆ ನನ್ನ ಶಕ್ತಿ ಮೀರಿ ಶ್ರಮಿಸುತ್ತೇನೆ. ಅವಶ್ಯ ಬಿದ್ದರೆ ನನ್ನ ಸ್ವಭಾವವನ್ನೂ ಬದಲಿಸಿಕೊಳ್ಳುತ್ತೇನೆ. ನಿಜ, ಅಪರಿಚಿತರ ಮಧ್ಯೆ ವಾಸ ಮಾಡುವುದು, ಅವರ ಹಂಗಿನಲ್ಲಿರುವುದು, ಸ್ವಂತ ಆಲೋಚನೆಗಳನ್ನೂ ಭಾವನೆಗಳನ್ನೂ ಅಡಗಿಸಿಕೊಂಡಿರುವುದು ಕಷ್ಟವೇ. ಆದರೆ ದೇವರು ಸಹಾಯ ಮಾಡುವನು. ಇಡೀ ಜೀವನ ನಾನು ಹೀಗೆ ನಿಸ್ಸಂಗಿಯಾಗಿ ಇರಲಾರೆ ! ಅಂಥ ಅನುಭವ ನನಗೆ ಹಿಂದೆಯೂ ಆದದ್ದೇ. ಬೋರ್ಡಿಂಗ್ ಶಾಲೆಯಲ್ಲಿ ನನ್ನ ದಿನಗಳನ್ನೇನೂ ನಾನು ಮರೆತಿಲ್ಲ. ನಾನು ಮನೆಯಲ್ಲಿ ಸಂತೋಷದಿಂದ ಜಿಗಿದಾಡುತ್ತಿದ್ದ ಭಾನುವಾರಗಳು ನನಗೆ ನೆನಪಿವೆ; ಮನೆಯಲ್ಲಿ ಅಮ್ಮ ಬಯ್ದರೂ ನನ್ನ ಮನಸ್ಸು ಮುದದಿಂದ ಇರುತ್ತಿತ್ತು, ಹೃದಯ ಹಗುರವಾಗಿರುತ್ತಿತ್ತು. ಆದರೆ ಸಂಜೆಯಾದಂತೆ ನನ್ನ ಉಲ್ಲಾಸ ಉಡುಗುತ್ತಿತ್ತು, ನಾನು ಸಂಪೂರ್ಣವಾಗಿ ಖಿನ್ನಳಾಗುತ್ತಿದ್ದೆ. ಮಾರನೆಯ ಬೆಳಿಗ್ಗೆ ಒಂಬತ್ತು ಗಂಟೆಗೆಲ್ಲ ಶಾಲೆಯಲ್ಲಿ – ಎಲ್ಲವೂ ತೀರ ವಿಚಿತ್ರವಾಗಿದ್ದಂಥ, ಉತ್ಸಾಹರಹಿತವಾಗಿ ಕಟ್ಟುನಿಟ್ಟಾಗಿ ಇದ್ದಂಥ, ಸೋಮವಾರಗಳಂದು ತುಂಬ ಸಿಡುಕಿನಿಂದ ಕೂಡಿರುತ್ತಿದ್ದ ಅಧ್ಯಾಪಕಿಯರಿದ್ದಂಥ, ಶಾಲೆಯಲ್ಲಿ – ಇರಬೇಕಾಗಿತ್ತು. ನಾನು ಅಳಬಯಸುತ್ತಿದ್ದೆ. ಎಲ್ಲೋ ಮೂಲೆಯಲ್ಲಿ ಕುಳಿತು ರಹಸ್ಯವಾಗಿ ಅಳುತ್ತಿದ್ದೆ, ಇಲ್ಲದಿದ್ದರೆ ನನ್ನನ್ನು ಶಾಲೆಗೆ ಹೋಗಲು ಸೋಮಾರಿ ಎಂದು ಕರೆಯುತ್ತಿದ್ದರು. ಶಾಲೆಯ

ಪಾಠಗಳೇನೂ ನನ್ನನ್ನು ಅಳುವಂತೆ ಮಾಡುತ್ತಿರಲಿಲ್ಲವೆನ್ನಿ. ಆಮೇಲೆ ಏನಾಯಿತು? ಕ್ರಮೇಣ ನಾನು ಶಾಲೆಗೆ ಒಗ್ಗಿಕೊಂಡೆ. ಅಲ್ಲೂ, ಶಾಲೆಯನ್ನು ಬಿಡುವಾಗ, ಗೆಳತಿಯರಿಂದ ಅಗಲುವಾಗ, ನಾನು ಅತ್ತೆ. ಅಲ್ಲದೆ, ನಾನು ನಿಮಗೂ ಫಿದೋರ ಳಿಗೂ ಹೊರೆಯಾಗಿರುವುದು ತರವಲ್ಲ. ಅದೇ ನನ್ನ ಮನಸ್ಸನ್ನು ಕೊರೆಯು ತ್ತಿರುವುದು. ನಾನು ವಿಷಯಗಳನ್ನು ಇದ್ದಂತೆಯೇ ತಿಳಿಸುತ್ತಿದ್ದೇನೆ, ಏಕೆಂದರೆ ನಿಮ್ಮ ಜೊತೆ ಬಿಚ್ಚು ಮನಸ್ಸಿನಿಂದಿರುವುದು ನನಗೆ ಅಭ್ಯಾಸವಾಗಿದೆ. ಫಿದೋರಳು ಇಡೀ ದಿನ ತೊಳೆಯುವ ಒಗೆಯುವ ಕೆಲಸ ಮಾಡಲೋಸುಗ ಮುಂಜಾನೆಯ ಮಸುಕಿನಲ್ಲೇ ಹೇಗೆ ಏಳುತ್ತಾಳೆಂಬುದನ್ನು ನಾನು ಕಂಡಿಲ್ಲವೇ? ವಯಸ್ಸಾದವರಿಗೆ, ನಿಮಗೇ ತಿಳಿದಿರುವಂತೆ, ವಿಶ್ರಾಂತಿ ಅವಶ್ಯ. ನೀವೂ ನಿಮ್ಮೆಲ್ಲ ಸಂಪಾದನೆಯನ್ನೂ ಕೊನೆಯ ಕೊಪೆಕ್‌ವರೆಗೂ ನನಗಾಗಿ ಖರ್ಚು ಮಾಡುತ್ತಿದ್ದೀರೆಂಬುದನ್ನು ನಾನು ಕಾಣೆನೆ? ಅದೂ, ನೀವಿರುವಂಥ ಕಷ್ಟದ ಪರಿಸ್ಥಿತಿಗಳಲ್ಲಿ, ನನ್ನ ಮಿತ್ರ, ನನ್ನನ್ನು ಕೊರತೆ ಇಲ್ಲದಂತೆ ಇರಿಸಲೋಸುಗ ನಿಮ್ಮಲ್ಲಿರುವ ಏನನ್ನೂ ಬೇಕಾದರೂ ಮಾರುವುದಾಗಿ ನೀವು ಬರೆಯುತ್ತೀರಿ. ನನಗೆ ನಿಮ್ಮ ಮಾತಿನಲ್ಲಿ ನಂಬಿಕೆ ಇದೆ, ಪ್ರಿಯ ಮಿತ್ರರೆ, ನಿಮ್ಮ ಹೃದಯದಲ್ಲಿ ಕರುಣೆ ತುಂಬಿದೆ ಎಂಬುದು ನನಗೆ ಗೊತ್ತು. ಆದರೆ ಇದನ್ನು ನೀವು ಈಗ ಹೇಳುತ್ತಿದ್ದೀರ – ನಿಮಗೆ ಆಕಸ್ಮಿಕ ಹಣ, ಪ್ರಶಸ್ತಿ ಧನ, ಬಂದಿರುವ ಈಗ! ಆದರೆ ಆಮೇಲೆ? ನಾನು ಸತತವಾಗಿ ಖಾಯಿಲೆಯ ಲ್ಲಿದ್ದೇನೆಂಬುದು ನಿಮಗೆ ಗೊತ್ತು. ನೀವು ಕೆಲಸ ಮಾಡುತ್ತಿರುವಂತೆ ನಾನೂ ಕೆಲಸ ಮಾಡುತ್ತಲೇ ಇರುವುದು ತುಂಬ ಸಂತೋಷವೇ ಆದರೂ, ಹಾಗೆ ಮಾಡಲಾರೆ. ಅಲ್ಲದೆ ನನಗೆ ಯಾವಾಗಲೂ ಸಾಕಷ್ಟು ಕೆಲಸ ಲಭಿಸುತ್ತದೆಂದೇನೂ ಅಲ್ಲ. ನನಗೆ ಉಳಿದುದೇನು? ನೀವು, ಬಡಪಾಯಿಗಳು, ದುಡಿಯುತ್ತಿದ್ದಾಗ, ನಾನು ಸುಮ್ಮನೆ ನಿಮ್ಮನ್ನು ನೋಡುತ್ತ ಜೀವ ಸವೆಸುವುದು. ನಿಮ್ಮಿಬ್ಬರಲ್ಲಿ ಯಾರಿಗೂ ನಾನು ಎಷ್ಟು ಮಾತ್ರವೂ ಪ್ರಯೋಜನವಾಗಿರಲು ಹೇಗೆ ಸಾಧ್ಯ? ನಾನು ನಿಮಗೆ ಅಷ್ಟು ಅವಶ್ಯ ಏಕೆ? ನಿಮಗೆ ನಾನು ಏನು ಒಳ್ಳೆಯದನ್ನು ಮಾಡಿದ್ದೇನೆ? ನಾನು ನಿಮ್ಮನ್ನು ಹೃತ್ಪೂರ್ವಕವಾಗಿ ಗಾಢವಾಗಿ ಪ್ರೀತಿಸುತ್ತೇನೆ. ನೀವು ನನಗೆ ತುಂಬ ತುಂಬ ಪ್ರಿಯರಾದವರು. ಆದರೆ ನನ್ನ ಹಣೆಯಬರಹವೆಂದರೆ – ನಾನು ಪ್ರೀತಿಸಬಲ್ಲೆ, ಆದರೆ ನಿಮ್ಮ ಪ್ರೀತಿಗೆ ಪ್ರತಿಯಾಗಿ ಏನನ್ನೂ ಕೊಡಲಾರೆ, ನಿಮ್ಮ ಕರುಣೆಯನ್ನು ನಾನು ಹಿಂದಿರುಗಿಸಲಾರೆ. ನನ್ನನ್ನಿಲ್ಲಿ ಇನ್ನೆಷ್ಟು ಮಾತ್ರವೂ ಇರುವಂತೆ ಮಾಡ ಬೇಡಿ. ಯೋಚನೆ ಮಾಡಿ, ನಿಮ್ಮ ಅಂತಿಮ ತೀರ್ಮಾನವನ್ನು ತಿಳಿಸಿ. ನಿಮ್ಮ ಉತ್ತರಕ್ಕಾಗಿ ಕಾಯುತ್ತಿರುವ.

ನಿಮ್ಮ ವಿಶ್ವಾಸಿ,

ವ. ದೊ.

## ಜುಲೈ 1

ಅಸಂಬದ್ಧ, ಶುದ್ಧ ಅಸಂಬದ್ಧ, ತೀರ ಅಸಂಬದ್ಧ, ವಾರೆಂಕಾ! ನೀವು ಒಬ್ಬರೇ ಇದ್ದಕೂಡಲೇ ಎಲ್ಲ ರೀತಿಯ ಮೂರ್ಖ ವಿಚಾರಗಳೂ ನಿಮ್ಮ ಸುಂದರ ತಲೆಯೊಳಕ್ಕೆ ನುಸುಳುತ್ತವೆ! ಇದು ಇಷ್ಟವಿಲ್ಲ, ಅದು ಇಷ್ಟವಿಲ್ಲ, ಇವೆಲ್ಲ ಶುದ್ಧ ಅಸಂಬದ್ಧ. ನಿಮಗೆ ಏನು ಬೇಕು, ನಿಮಗೆ ಏನು ಸಾಲದಾಗಿದೆ, ಅಷ್ಟು ಹೇಳಿ. ನಾವು ನಿಮ್ಮನ್ನು ಪ್ರೀತಿಸುತ್ತೇವೆ, ನೀವು ನಮ್ಮನ್ನು ಪ್ರೀತಿಸುತ್ತೀರ. ನಾವು ಸಂತೃಪ್ತರು, ಸಂತೋಷಿಗಳು. ಹೆಚ್ಚಿಗೆ ಏನು ಇರಲು ಸಾಧ್ಯ? ಆ ಅಪರಿಚಿತರ ಮಧ್ಯೆ ಹೆಚ್ಚಿಗೆ ಏನನ್ನು ಕಾಣುವಿರಿ? ಅಪರಿಚಿತ ಜನರು ಹೇಗಿರುತ್ತಾರೆಂಬುದನ್ನು ನೀವು ತಿಳಿದಿಲ್ಲ, ನನ್ನ ಮುದ್ದು! ಅವರು ಎಂಥವರು ಎಂದು ನೀವು ನನ್ನನ್ನು ಕೇಳಬೇಕಿತ್ತು. ಅವರು ಹೇಗಿರುತ್ತಾರೆಂಬುದು ನನಗೆ ಗೊತ್ತು, ಚೆನ್ನಾಗಿ ಗೊತ್ತು. ನಾನವರ ಅನ್ನದ ರುಚಿ ಕಂಡಿದ್ದೇನೆ. ಅವರೆಲ್ಲ ಕೀಳು ಜನರು, ವಾರೆಂಕಾ, ಹೊಟ್ಟೆಕಿಚ್ಚಿನವರು, ಕೀಳು ಜನರು. ಓಹ್, ಎಂಥ ಕೀಳು ಜನ! ನಿಂದನೆಯ ನುಡಿಗಳಿಂದ ಕ್ರೂರ ನೋಟಗಳಿಂದ ನಿಮ್ಮ ಹೃದಯವನ್ನು ಹರಿದು ಹಂಚುವರು. ಅದೇ ಇಲ್ಲಿ ನೀವು ನಮ್ಮ ಮಧ್ಯೆ ಗೂಡಿನಲ್ಲಿರುವ ಪುಟ್ಟ ಹಕ್ಕಿಯಂತೆ ಬೆಚ್ಚಗೆ ಸುಖವಾಗಿದ್ದೀರ. ನೀವು ಹಾರಿ ಹೋದರೆ, ನಾವು ಬಡಪಾಯಿಗಳು ಏನು ಮಾಡಬೇಕು, ಏತಕ್ಕಾಗಿ ಜೀವಿಸಬೇಕು? ವಯೋವೃದ್ಧನಾದ ನಾನು ಏನು ಮಾಡಲಿ? ನೀವು ಯಾರಿಗೂ ಪ್ರಯೋಜನವಿಲ್ಲ ಎಂದು ನೀವು ಹೇಳುತ್ತೀರ? ಪ್ರಯೋಜನವಿಲ್ಲವೇ? ಹೇಗೆ ಹೇಳಬಲ್ಲಿರಿ? ನೀವು ನಮಗೆ ಏನು ಒಳಿತನ್ನೂ ಮಾಡುತ್ತಿಲ್ಲವೇ? ಸ್ವಲ್ಪ ಯೋಚಿಸಿ ನೋಡಿ, ನನ್ನ ಪ್ರಿಯತಮೆ, ನೀವು ನನಗಾಗಿ ಏನು ಮಾಡುತ್ತಿದ್ದೀರಿ, ಎಂಬುದನ್ನು. ಮೊದಲನೆಯದಾಗಿ, ನೀವು ನನ್ನ ಮೇಲೆ ಎಂತಹ ಪ್ರಯೋಜನಾತ್ಮಕ ಪ್ರಭಾವ ಬೀರುತ್ತಿದ್ದೀರ. ಆಮೇಲೆ.... ಉದಾಹರಣೆಗೆ, ಇದೀಗ ನಾನು ನಿಮ್ಮ ಬಗೆಗೆ ಯೋಚಿಸುತ್ತಿದ್ದೇನೆ, ಅದು ನನಗೆ ಎಷ್ಟು ಸಂತೋಷ ನೀಡುತ್ತಿದೆ.... ಕೆಲವು ವೇಳೆ ನಾನು ನಿಮಗೆ ಬರೆಯುವ ಪತ್ರಗಳಲ್ಲಿ ನನ್ನೆಲ್ಲ ಭಾವನೆಗಳನ್ನೂ ವ್ಯಕ್ತಪಡಿಸುತ್ತೇನೆ, ಅನಂತರ ನಿಮ್ಮಿಂದ ವಿವರವಾದ ಉತ್ತರ ಪಡೆಯುತ್ತೇನೆ.... ನಾನು ನಿಮಗಾಗಿ ಸೊಗಸಾದ ಉಡುಪುಗಳನ್ನು ಕೊಳ್ಳಲೂ ಸಾಧ್ಯವಾಗಿದೆ – ನಾನು ನಿಮಗೆ ಒಂದು ಹ್ಯಾಟನ್ನೂ ಕೊಂಡುಕೊಟ್ಟಿದ್ದೇನೆ... ಅಥವಾ ನೀವೇ ಎಷ್ಟೋ ಸಾರಿ ನನಗೆ ಏನೇನೋ ಸ್ವಲ್ಪ ಕೆಲಸಗಳನ್ನು ಕೊಡಿಸಿದ್ದೀರಿ. ಹೀಗಿರುವಾಗ ನೀವು ನಿಷ್ಪ್ರಯೋಜಕರು ಎಂದು ಹೇಗೆ ಹೇಳಬಲ್ಲಿರಿ? ಒಬ್ಬನೇ ಆಗಿ ನಾನು, ಮುದುಕ, ಏನು ಮಾಡಲಿ? ನಾನು ಯಾತಕ್ಕೆ ಯಾರಿಗೆ ಪ್ರಯೋಜನ? ನೀವು ಬಹುಶಃ ಇದನ್ನು ಯೋಚಿಸಲಿಲ್ಲವೆಂದು ಕಾಣುತ್ತೆ, ಅಲ್ಲವೇ, ವಾರೆಂಕಾ?

ಯೋಚಿಸಬೇಕಿತ್ತು. ಈ ಪ್ರಶ್ನೆಯನ್ನು ಕೇಳಿಕೊಳ್ಳಿ: ನಾನಿಲ್ಲದೆ ಈ ವೃದ್ಧ ಏನು ಮಾಡುವನು? ನಿಮ್ಮನ್ನು ಹತ್ತಿರ ಇಟ್ಟುಕೊಂಡಿರುವ ಈ ಸ್ಥಿತಿಗೆ ನಾನು ಒಗ್ಗಿ ಹೋಗಿದ್ದೇನೆ. ನೀವು ಹೊರಟು ಹೋದರೆ, ನನಗೆ ಮಾಡಲು ಒಂದೇ ಒಂದು ಕೆಲಸವಿರುತ್ತೆ – ನೇವಾ ನದಿಗೆ ಹೋಗುವುದು, ಎಲ್ಲದಕ್ಕೂ ಕೊನೆ ಹಾಕುವುದು. ಬೇರೆ ಏನು ಮಾಡಲು ಇರುತ್ತೆ? ಓಹ್, ವಾರೆಂಕಾ, ನನ್ನ ಪ್ರಿಯ ವಾರೆಂಕಾ, ನನ್ನನ್ನು ಬಂಡಿಯಲ್ಲಿ ಮಲಗಿಸಿ ಒಂಟಿಯಾಗಿ ವೋಲ್ಕೊವೊ ಸಮಾಧಿಭೂಮಿಗೆ ಕರೆದೊಯ್ಯುವುದು, ಅಲ್ಲಿ ಅವರು ನನ್ನ ಶವಸಂಪುಟವನ್ನು ಮಣ್ಣಿನಿಂದ ಮುಚ್ಚು ವುದನ್ನು ಭಿಕ್ಷುಕ ಮುದುಕಿಯೊಬ್ಬಳಷ್ಟೆ ಕಾಣುವುದು ಅನಂತರ ನನ್ನನ್ನು ಅಲ್ಲಿ ಒಬ್ಬನನ್ನೇ ಬಿಟ್ಟು ಹೋಗುವುದು – ಇದು ನಿಮಗೆ ಇಷ್ಟವೆಂದು ಕಾಣುತ್ತೆ. ಅಂಥದನ್ನು ಬಯಸುವುದು ಮಹಾಪಾಪ, ಪ್ರಿಯ ವಾರೆಂಕಾ, ಘೋರ ಪಾಪ. ನಾನು ನಿಮ್ಮ ಪುಸ್ತಕವನ್ನು ಹಿಂದಿರುಗಿಸುತ್ತಿದ್ದೇನೆ, ವಾರೆಂಕಾ. ನನ್ನ ಅಭಿಪ್ರಾಯ ವನ್ನು ನೀವು ತಿಳಿಯಬಯಸಿದಲ್ಲಿ, ನನ್ನ ಪುಟ್ಟ ಸ್ನೇಹಿತೆ, ನಾನು ಹೀಗೆ ಹೇಳು ತ್ತೇನೆ: ಇದಕ್ಕಿಂತ ಹೆಚ್ಚು ಉತ್ತಮವಾದ ಪುಸ್ತಕವನ್ನು ನನ್ನ ಇಡೀ ಬಾಳಿನಲ್ಲಿ ಎಂದೂ ಓದಿಲ್ಲ. ನನಗೇ ಕೇಳಿಕೊಳ್ಳುತ್ತೇನೆ – ನಾನು ಅಷ್ಟು ಗಾಂಪನಾಗಿರಲು ಹೇಗೆ ಸಾಧ್ಯವಿತ್ತು? ದೇವರೇ ನನ್ನನ್ನು ಕಾಪಾಡಬೇಕು! ಇಷ್ಟು ದಿವಸ ನಾನು ಏನು ಮಾಡುತ್ತಿದ್ದೆ? ನಾನು ಬಂದದ್ದು ಯಾವ ಕಾಡಿನಿಂದ? ಸತ್ಯವಾಗಿ ಹೇಳು ವುದಾದರೆ, ನನಗೆ ಒಂದು ವಿಷಯವೂ ಗೊತ್ತಿಲ್ಲ, ನನ್ನ ಪ್ರಿಯೆ, ಏನೂ ಗೊತ್ತಿಲ್ಲ! ಸರಳವಾಗಿ ಹೀಗೆ ಹೇಳುತ್ತೇನೆ, ವಾರೆಂಕಾ: ನಾನೊಬ್ಬ ತಿಳಿಗೇಡಿ. ನಾನು ಓದಿ ರುವುದು ತೀರ ಸ್ವಲ್ಪ, ನಿಜಕ್ಕೂ ತೀರ ಸ್ವಲ್ಪ, ಬಹುಮಟ್ಟಿಗೆ ಏನೇನೂ ಇಲ್ಲ: 'ಮಾನವನ ಚಿತ್ರ', ಒಂದು ತುಂಬ ತಿಳಿವಳಿಕೆಯ ಪುಸ್ತಕ; 'ಗಂಟೆಗಳ ಸರಮಾಲೆ ಗಳ ಮೇಲೆ ವಿವಿಧ ರಾಗಗಳನ್ನು ನುಡಿಸುವುದನ್ನು ಕಲಿತ ಬಾಲಕ' ಹಾಗೂ 'ಇವಿಕೊವ್‌ನ ಕೊಕ್ಕರೆಗಳು' – ಇಷ್ಟೆ ನಾನು ಓದಿರುವುದು. ಮತ್ತೆ ಈಗ ನಿಮ್ಮ ಈ ಪುಸ್ತಕದ 'ಸ್ಟೇಷನ್ ಮಾಸ್ಟರ್'* ಓದಿದೆ. ಆದ್ದರಿಂದ, ನೀವೇ ಕಾಣುವಂತೆ, ವಾರೆಂಕಾ, ಒಮ್ಮೊಮ್ಮೆ ಹೀಗಾಗುತ್ತೆ – ನಾವು ಎಷ್ಟೋ ಕಾಲದಿಂದ ವಾಸಿಸುತ್ತಿ ರುತ್ತೀವಿ, ಆದರೆ ನಮ್ಮ ಕೈಗೆಟುಕುವಂತೆ ನಮ್ಮ ಬಳಿಯೇ ಒಂದು ಪುಸ್ತಕವಿದೆ, ಅದು ನಮ್ಮ ಜೀವನದ ಇಡೀ ಕಥೆಯನ್ನೇ ಒಂದು ಹಾಡಿನಂತೆ ಸರಳವಾಗಿ ಹೇಳು ತ್ತದೆ, ಎಂಬುದನ್ನು ನಾವೇ ಎಂದೂ ಅರಿತಿರುವುದಿಲ್ಲ. ನಾವು ಹಿಂದೆ ಏನನ್ನು ಕಾಣಲಾರದೆ ಹೋಗಿದ್ದೆವೋ ಅದು, ನಾವು ಈ ಪುಸ್ತಕ ಓದಿದಂತೆ, ನಮಗೆ ಸ್ಪಷ್ಟ

---

*ಎ. ಪೂಷ್ಕಿನ್‌ರ 'ಇವಾನ್ ಬೆಲ್ಕಿನ್‌ನ ಕಥೆಗಳು' ಕಥಾಸಂಗ್ರಹದಲ್ಲಿನ ಒಂದು ಕಥೆ. – ಸಂ.

ವಾಗುತ್ತೆ, ನಾವು ಎಲ್ಲ ಸಂಗತಿಗಳನ್ನೂ ನೆನಪು ಮಾಡಿಕೊಳ್ಳುತ್ತೇವೆ, ಎಲ್ಲವನ್ನೂ ಅರ್ಥಮಾಡಿಕೊಳ್ಳುತ್ತೇವೆ, ಊಹಿಸುತ್ತೇವೆ. ಇದಲ್ಲದೆ ನಾನು ಈ ಪುಸ್ತಕದಲ್ಲಿ ಇಷ್ಟಪಟ್ಟ ಇನ್ನೊಂದು ಅಂಶವೆಂದರೆ: ಇತರ ಪುಸ್ತಕಗಳು ಕೆಲವು ವೇಳೆ ಎಷ್ಟು ಬುದ್ಧಿವಂತಿಕೆಯುವಾಗಿರುತ್ತವೆಂದರೆ, ನಾನು ಓದುತ್ತಾ ಓದುತ್ತಾ ಹೋಗುತ್ತೇನೆ, ಆದರೆ ಒಂದು ವಿಷಯುವೂ ಅರ್ಥವಾಗಿರುವುದಿಲ್ಲ. ನಾನು ಸ್ವಭಾವತಃ ದಡ್ಡನೆನ್ನಿ. ಅತಿ ಪಂಡಿತ ಪುಸ್ತಕಗಳು ನನಗೆ ಹೇಳಿದವಲ್ಲ. ಆದರೆ ಈ ಪುಸ್ತಕವನ್ನು ಓದಿದಾಗ ನಾನೇ ಅದನ್ನು ಬರೆದಿರುವಂತೆ ಅನಿಸುತ್ತೆ; ಅಲ್ಲಿ ಹೀಗೆ ಹೇಳುವುದಾದರೆ, ನನ್ನ ಸ್ವಂತ ಹೃದಯುವನ್ನೇ – ಅದು ಯಾವ ರೀತಿಯದೇ ಆಗಿರಬಹುದು – ಬಿಚ್ಚಿ ಒಳಹೊರಗೆ ಮಾಡಿ ಎಲ್ಲರಿಗೂ ಓದಲು ತೆರೆದಿರಿಸಿರುವಂತೆ ನನಗೆ ಅನಿಸುತ್ತೆ. ಅದು ಇರುವುದು ಹಾಗೆಯೇ. ನಿಜಕ್ಕೂ ಅದು ತುಂಬ ಸರಳ. ನಾನೇ ಇದನ್ನು ಬರೆಯುಬಹುದಿತ್ತು. ಯಾಕಾಗಬಾರದು? ನನಗೂ ಈ ಪುಸ್ತಕದಲ್ಲಿ ಬರೆದಿರುವಂತೆಯೇ ಭಾವನೆಗಳು ಬರುತ್ತವೆ. ಆ ಬಡ ಸ್ಯಾಮ್ಸನ್ ವೀರಿನ್* ಪಟ್ಟಂಥ ಅನುಭವವನ್ನೇ ನಾನೂ ಪಡಲಿಲ್ಲವೇ? ನಮ್ಮ ಮಧ್ಯೆಯೇ ಎಷ್ಟೊಂದು ಮಂದಿ ವೀರಿನ್‌ಗಳು, ಅದೃಷ್ಟಹೀನರು, ಇಲ್ಲ! ಕಥೆಗಾರರು ಅದನ್ನೆಲ್ಲ ಎಷ್ಟೊಂದು ಜಾಣ್ಮೆಯಿಂದ ವಿವರಿಸಿಲ್ಲವೇ? ಅವನು ಹೇಗೆ ಕುಡಿತ ಪ್ರಾರಂಭಿಸಿದ, ಹೇಗೆ ಕುಡಿದು ಮೈಮರೆತು ಇಡೀ ದಿನ ಆ ಕುರಿಚರ್ಮದ ಕೋಟು ಹೊದ್ದು ಮಲಗಿರುತ್ತಿದ್ದ ಅಥವಾ ತನ್ನ ಅಡ್ಡದಾರಿ ಹಿಡಿದ ಬಡಪಾಯಿ ಮಗಳ ಬಗೆಗೆ ಯೋಚಿಸುತ್ತಿದ್ದಂತೆ ಕಣ್ಣುಗಳಿಂದ ತುಳುಕಿ ಬಂದ ನೀರನ್ನು ತನ್ನ ಕೋಟಿನ ಕೊಳಕಲು ಅಂಚಿನಿಂದ ಒರೆಸಿಕೊಳ್ಳುತ್ತ ಕುಳಿತಿರುತ್ತಿದ್ದ, ಎಂಬುದನ್ನು ಓದಿದಾಗ ನಾನೂ ಅತ್ತೇಬಿಟ್ಟೆ. ಅದು ಜೀವನ. ನೀವೂ ಓದಿ. ಖಂಡಿತ ಓದಿ. ಅದೊಂದು ಜೀವಂತ ವಸ್ತು. ನಾನೇ ಸ್ವತಃ ಕಂಡಿದ್ದೇನೆ. ಅದೆಲ್ಲ ನನ್ನ ಬಗೆಗೇ ಬರೆದುದು. ಉದಾಹರಣೆಗೆ, ನಮ್ಮ ಥೆರೇಸಳನ್ನೇ ತೆಗೆದುಕೊಳ್ಳಿ, ಅಥವಾ ನಮ್ಮ ಬಡ ಕಾರಕೂನನನ್ನು ತೆಗೆದುಕೊಳ್ಳಿ. ಅವನು ಕೂಡ ಇನ್ನೊಬ್ಬ ಸ್ಯಾಮ್ಸನ್ ವೀರಿನ್ ಅಲ್ಲವೇ, ಅವನ ಹೆಸರು ಗೊರ್ಷ್ಕೋವ್ ಅಂತಾಗಿದ್ದರೂ? ಅದು ಸರ್ವರಿಗೂ ಸಾಮಾನ್ಯವಾದ ವಿಷಯು. ನಮ್ಮಲ್ಲಿ ಪ್ರತಿಯೊಬ್ಬರಿಗೂ ಇದೇ ಅನುಭವವೇ ಆಗಬಹುದು. ನೆವ್‌ಸ್ಕಿ ಪ್ರಾಸ್‌ಪೆಕ್ಟ್‌ನಲ್ಲಿ ವಾಸಿಸುತ್ತಿರುವ ಅಥವಾ ನದೀ ತೀರದಲ್ಲಿ ವಾಸಿಸುತ್ತಿರುವ ಕೌಂಟ್‌ಗೂ ಇದೇ ಆಗಬಹುದು, ಅವರ ಉನ್ನತ ಅಂತಸ್ತಿನಿಂದಾಗಿ ಅದು ಭಿನ್ನವೆಂಬಂತೆ ಕಾಣಬಹುದು. ಆದರೂ ಅದು ಅದೇ ಆಗಿರುತ್ತದೆ. ಹೌದು, ಏನೇ ಆಗಬಹುದು. ನನಗೂ ಅದು ಆಗಬಹುದು! ನೋಡಿದಿರಾ

*'ಸ್ಟೇಷನ್ ಮಾಸ್ಟರ್' ಕಥೆಯಲ್ಲಿನ ಒಂದು ಪಾತ್ರ. – ಸಂ.

ಎಲ್ಲ ಹೇಗಿದೆ, ಪ್ರಿಯ ವಾರೆಂಕಾ. ಅಂದಮೇಲೆ ನೀವು ನಮ್ಮನ್ನು ಬಿಟ್ಟು ಹೋಗುವ ಬಗೆಗೆ ಹೇಗಾದರೂ ಯೋಚಿಸಬಲ್ಲಿರಿ? ವೀರಿನ್‌ನ ದುರ್ಗುಣವೇ ನನ್ನನ್ನೂ ವಶಪಡಿಸಿಕೊಳ್ಳಬಹುದು. ನಾವಿಬ್ಬರೂ ನಾಶವಾಗುತ್ತೇವೆ. ಆದ್ದರಿಂದ ದೇವರ ಮೇಲಿನ ಪ್ರೀತಿಗಾಗಿಯಾದರೂ, ನನ್ನ ಪ್ರಿಯೆ, ಆ ದುಷ್ಟ ಯೋಚನೆಗಳನ್ನು ನಿಮ್ಮ ಮನಸ್ಸಿನಿಂದ ದೂರವಿರಿಸಿ. ನನ್ನನ್ನು ಇನ್ನೆಷ್ಟು ಮಾತ್ರವೂ ಹಿಂಸಿಸಬೇಡಿ. ನನ್ನ ಬಡಪಾಯಿ ಪುಟ್ಟ ಹಕ್ಕಿಯೇ, ನೀವು ನಿಮ್ಮ ಜೀವನೋಪಾಯವನ್ನು ಹೇಗೆ ನೀವೇ ಸಂಪಾದಿಸಿಕೊಳ್ಳಬಲ್ಲಿರಿ, ಹಾನಿಯಾಗದಂತೆ ಸುರಕ್ಷಿತವಾಗಿರಬಲ್ಲಿರಿ, ದುಷ್ಟ ಜನರಿಂದ ನಿಮ್ಮನ್ನು ಹೇಗೆ ಕಾಪಾಡಿಕೊಂಡಿರಬಲ್ಲಿರಿ? ಕೂಡದು, ಕೂಡದು, ವಾರೆಂಕಾ! ಕೆಟ್ಟ ಸಲಹೆಗಳಿಗೆ ಕಿವಿಗೊಡಬೇಡಿ. ನೀವು ನನಗೆ ಕೊಟ್ಟಿರುವ ಈ ಪುಸ್ತಕವನ್ನೇ ಮತ್ತೊಮ್ಮೆ ಓದಿ, ಹೆಚ್ಚು ಗಮನವಿತ್ತು ಓದಿ. ನಿಮಗೆ ಒಳಿತಾಗುವುದು.

ನಾನು ರತಜ್ಯಾಯೆವ್‌ನಿಗೆ 'ಸ್ಟೇಷನ್ ಮಾಸ್ಟರ್' ಕಥೆಯ ಬಗೆಗೆ ಹೇಳಿದೆ. ಅದು ಹಳೆಯ ಕಾಲದ ಕಥೆ, ಈಗಿನ ಒಳ್ಳೆಯ ಗ್ರಂಥಗಳೆಲ್ಲ ತುಂಬ ಚಿತ್ರಗಳನ್ನೂ ನಾನಾ ವಿವರಣೆಗಳನ್ನೂ ಒಳಗೊಂಡಿರುತ್ತವೆ, ಎಂದೇ ಅವನು ಒತ್ತಿಹೇಳುತ್ತಾನೆ. ನನಗೆ ಅವನು ಹೇಳಿದುದು ಅಷ್ಟು ಚೆನ್ನಾಗಿ ಅರ್ಥವಾಗಲಿಲ್ಲ. ಆದರೂ ಪೂಷ್ಕಿನ್ ಒಬ್ಬ ಒಳ್ಳೆಯ ಲೇಖಕರು, ಅವರು ರಷ್ಯದ ಕೀರ್ತಿಗೆ ತಮ್ಮ ಕಾಣಿಕೆ ಸಲ್ಲಿಸಿದ್ದಾರೆ, ಎಂದು ಒಪ್ಪಿಕೊಂಡು ಅವನು ಅದೇ ಧಾಟಿಯಲ್ಲೇ ಇನ್ನೂ ಏನೇನೋ ಹೇಳಿದ. ಹೌದು, ವಾರೆಂಕಾ, ಅದೊಂದು ಒಳ್ಳೆಯ ಪುಸ್ತಕ, ತುಂಬ ಒಳ್ಳೆಯ ಪುಸ್ತಕ. ನೀವು ಅದನ್ನು ಮತ್ತೆ ಗಮನವಿತ್ತು ಓದಬೇಕು. ನನ್ನ ಬುದ್ಧಿವಾದವನ್ನು ಸ್ವೀಕರಿಸಿ. ನಿಮ್ಮ ವಿಧೇಯತೆಯಿಂದ ವೃದ್ಧ ವ್ಯಕ್ತಿಗೆ ಸಂತೋಷ ನೀಡಿ. ದೇವರು ನಿಮಗೆ ಒಳ್ಳೆಯದನ್ನು ಮಾಡುವನು, ಮುದ್ದು ವಾರೆಂಕಾ. ಖಂಡಿತವಾಗಿಯೂ ಒಳ್ಳೆಯದನ್ನು ಮಾಡುವನು.

ನಿಮ್ಮ ನಿಷ್ಠಾವಂತ ಮಿತ್ರ,
ಮಕಾರ್ ದೇವುಷ್ಕಿನ್.

ಜುಲೈ 6

ನನ್ನ ಪ್ರಿಯ ಮಕಾರ್ ಅಲೆಕ್ಸೇಯೆವಿಚ್,

ಇಂದು ಫಿದೋರ ಬೆಳ್ಳಿಯ ಹದಿನೈದು ರೂಬಲ್ ತಂದುಕೊಟ್ಟಳು. ಅವಳಿಗೆ ನಾನು ಮೂರು ರೂಬಲ್ ಕೊಟ್ಟಾಗ ಎಷ್ಟು ಸಂತೋಷವಾಯಿತು, ಆ ಬಡಪಾಯಿಗೆ. ನಾನು ಈ ಪತ್ರವನ್ನು ಅವಸರದಲ್ಲಿ ಬರೆಯುತ್ತಿದ್ದೇನೆ: ನಿಮಗೆ ವೇಸ್‌ಕೋಟಿಗಾಗಿ ಬಟ್ಟೆ ಕತ್ತರಿಸುತ್ತಿದ್ದೇನೆ. ಬಟ್ಟೆ ಬಹಳ ಚೆನ್ನಾಗಿದೆ. ಬಣ್ಣ

ಹಳದಿ. ಸಣ್ಣ ಹೂಗಳ ಅಲಂಕರಣವಿದೆ. ನಾನು ನಿಮಗೆ ಇನ್ನೊಂದು ಪುಸ್ತಕ ವನ್ನು ಕಳುಹಿಸುತ್ತಿದ್ದೇನೆ – ಒಂದು ಕಥಾಸಂಗ್ರಹ. ನಾನು ಕೆಲವನ್ನು ಓದಿದ್ದೇನೆ. 'ಓವರ್‌ಕೋಟು'* ಎಂಬ ಕಥೆಯನ್ನು ತಪ್ಪದೆ ಓದಿ. ರಂಗಮಂದಿರಕ್ಕೆ ಬರುವಂತೆ ನೀವು ಒತ್ತಾಯ ಮಾಡುತ್ತಿದ್ದೀರ. ತುಂಬ ಖರ್ಚಾಗುತ್ತದಲ್ಲವೇ? ಹೋಗಲೇ ಬೇಕು ಅನ್ನುವುದಾದರೆ, ಗ್ಯಾಲರಿಗೆ ಟಿಕೆಟ್ ಕೊಂಡುಕೊಳ್ಳಿ. ನಾನು ಯಾವಾಗ ರಂಗಮಂದಿರಕ್ಕೆ ಹೋಗಿದ್ದೆನೋ, ನನಗೇ ಜ್ಞಾಪಕವಿಲ್ಲ. ಆದರೂ ನನಗೆ ಅಂಜಿ ಕೆಯೇ – ತುಂಬ ಖರ್ಚಾಗುತ್ತದಲ್ಲವೇ? ನೀವು ನಿಮ್ಮ ಸಂಪಾದನೆಗೂ ಮೀರಿ ಖರ್ಚು ಮಾಡುತ್ತಿದ್ದೀರೆಂದು ಹೇಳುತ್ತ ಫಿದೋರ ಆಗಾಗ್ಗೆ ತಲೆ ಆಡಿಸುತ್ತಿ ರುತ್ತಾಳೆ. ಅದು ನನಗೇ ಗೊತ್ತಾಗುತ್ತಿದೆ – ನನಗಾಗಿಯೇ ನೀವು ಎಷ್ಟೊಂದು ಖರ್ಚು ಮಾಡುತ್ತಿದ್ದೀರ! ನೀವು ಹೀಗೇ ಖರ್ಚು ಮಾಡುತ್ತಾ ಹೋದರೆ ಏನಾ ದರೂ ಅಹಿತವಾದುದು ಜರುಗುವುದೆಂದೇ ನನ್ನ ಅಂಜಿಕೆ. ಮನೆಯ ಯಜಮಾನಿಗೆ ನೀವು ಬಾಡಿಗೆ ಕೊಡದೆ ಏನೋ ವಾಗ್ವಾದ ನಡೆಯಿತೆಂಬ ಪುಕಾರು ಎದ್ದಿರುವ ಬಗೆಗೆ ಫಿದೋರ ಈಗಷ್ಟೆ ಹೇಳಿದಳು. ನಾನು ನಿಮಗಾಗಿ ತುಂಬ ಭಯಪಡು ತ್ತಿದ್ದೇನೆ, ಮಕಾರ್ ಅಲೆಕ್ಸೇಯೆವಿಚ್! ನಮಸ್ಕಾರ. ನಾನೀಗ ಅವಸರದಲ್ಲಿದ್ದೇನೆ. ಒಂದು ಸಣ್ಣ ವಿಷಯದ ಕಡೆಗೆ ನಾನು ಗಮನ ಕೊಡಬೇಕಾಗಿದೆ – ನನ್ನ ಹ್ಯಾಟಿನ ಮೇಲಿನ ರಿಬ್ಬನ್ ಬದಲಾಯಿಸಬೇಕಾಗಿದೆ.

ವ. ದೊ.

ಮರೆತದ್ದು: ನಾವು ರಂಗಮಂದಿರಕ್ಕೆ ಹೋಗುವುದಾದಲ್ಲಿ, ನಾನು ನನ್ನ ಹೊಸ ಹ್ಯಾಟನ್ನೂ ಕಪ್ಪು ಮುಖಾವರಣವನ್ನೂ ತೊಟ್ಟುಕೊಂಡು ಬರುತ್ತೇನೆ. ಅದು ಚೆನ್ನಾಗಿರುತ್ತದೆ, ಅಲ್ಲವೇ?

ಜುಲೈ 7

ನನ್ನ ಅತ್ಯಂತ ಪ್ರೀತಿಯ ವರ್ವಾರ ಅಲೆಕ್ಸೇಯೆವ್ನ,

ನಮ್ಮ ನಿನ್ನಿನ ಸಂಭಾಷಣೆಯನ್ನು ಮುಂದುವರಿಸುತ್ತ ನಾನು ನಿಮಗೊಂದು ವಿಷಯ ತಿಳಿಸುತ್ತೇನೆ, ನನ್ನ ಪ್ರಿಯೆ. ಒಂದು ಕಾಲದಲ್ಲಿ ನಾನೂ ಒಬ್ಬ ಟೊಳ್ಳು ಬುದ್ಧಿಯ ಯುವಕನಾಗಿದ್ದೆ. ನಟಿಯೊಬ್ಬಳಲ್ಲಿ ಗಾಢವಾಗಿ ಅನುರಕ್ತನಾಗಿದ್ದೆ. ಆದರೆ ತಮಾಷೆಯೆಂದರೆ, ನಾನು ಆಕೆಯನ್ನು ಬಹುಮಟ್ಟಿಗೆ ನೋಡಿಯೇ ಇರಲಿಲ್ಲ. ಎಲ್ಲೋ ಒಮ್ಮೆಯಷ್ಟೆ ರಂಗಮಂದಿರದಲ್ಲಿ ಕಂಡಿದ್ದೆ. ಆದರೂ ನಾನು ಆಕೆಯಲ್ಲಿ ಅನುರಕ್ತನಾಗಿದ್ದೆ, ಹುಚ್ಚು ಹಿಡಿಸುವಷ್ಟು ಅನುರಕ್ತನಾಗಿದ್ದೆ. ಆಗ ನನ್ನ ಪಕ್ಕದ ಕೋಣೆ

---

*ಎನ್. ವಿ. ಗೋಗೊಲ್‌ರು 1824ರಲ್ಲಿ ಬರೆದ ಒಂದು ಕಥೆ. – ಸಂ.

ಯಲ್ಲಿ ಐವರು ಅತ್ಯಂತ ಉತ್ಸಾಹೀ ಯುವಕರಿದ್ದರು. ನನಗೆ ಇಷ್ಟವಿಲ್ಲದಿದ್ದರೂ ಅವರ ಜೊತೆ ಸ್ನೇಹ ಬೆಳೆಸಿದೆ. ಮೊದಲು ದೂರ ದೂರವೇ ಇದ್ದೆ. ಆದರೆ 'ನಿಸ್ಸಂತೋಷಿ'ಯೆನಿಸಿಕೊಳ್ಳಬಾರದೆಂದು ಅವರೊಂದಿಗೆ ಸ್ನೇಹ ಬೆಳೆಸಿದೆ. ಆ ನಟಿಯ ಬಗೆಗೆ ಏನೆಲ್ಲ ಹೇಳುತ್ತಿದ್ದರು ಅವರು! ಆಟವಿದ್ದಾಗ ಪ್ರತಿ ಸಂಜೆಯೂ ಅವರ ಇಡೀ ಗುಂಪೇ ಗ್ಯಾಲರಿಯಲ್ಲಿ ನೆರೆಯುತ್ತಿತ್ತು. ಜೀವನದ ಅತ್ಯಗತ್ಯ ವಸ್ತುಗಳಿಗಾಗಿ ಅವರ ಬಳಿ ಒಂದು ಕೊಪೆಕ್ ಇರದಿದ್ದರೂ ಈ ನಾಟಕಕ್ಕೆ ಮಾತ್ರ ಟಿಕೆಟ್ ಕೊಂಡು ಬರುತ್ತಿದ್ದರು. ಅಲ್ಲಿ ಕುಳಿತು ಅವರು ಆ ನಟಿ ರಂಗದ ಮೇಲೆ ಕಾಣಿಸಿಕೊಂಡ ಕೂಡಲೇ ಸಿಳ್ಳು ಹಾಕುತ್ತಿದ್ದರು, ಚಪ್ಪಾಳೆ ತಟ್ಟುತ್ತಿದ್ದರು, ಆಕೆ ಮತ್ತೆ ಮತ್ತೆ ರಂಗದ ಮೇಲೆ ಬರಬೇಕೆಂದು ಕೂಗುತ್ತಿದ್ದರು, ಹುಚ್ಚರಂತೆ ಕರತಾಡನ ಮಾಡುತ್ತಿದ್ದರು! ಅದಾದ ಮೇಲೆ ಅಂದು ರಾತ್ರಿ ನಿದ್ರೆಯ ಪ್ರಶ್ನೆಯೇ ಇರುತ್ತಿರಲಿಲ್ಲ. ಇಡೀ ರಾತ್ರಿ ಅವರು ತಮ್ಮ ಪ್ರಿಯ ಗ್ಲಾಷಾಳ ಬಗೆಗೆ ಮಾತನಾಡುತ್ತಿದ್ದರು. ಅವರು ಅವಳನ್ನು ಪ್ರೀತಿಸುತ್ತಿದ್ದರು, ಎಲ್ಲರೂ ಒಬ್ಬೊಬ್ಬರೂ. ಆ ಹಾಡುಹಕ್ಕಿ ಪ್ರತಿಯೊಬ್ಬರ ಹೃದಯದಲ್ಲೂ ಹಾಡುತ್ತಿತ್ತು. ಅವರು ಕೊನೆಗೆ ನಿಸ್ಸಹಾಯಕ ಯುವಕನಾದ ನನ್ನನ್ನೂ ಪ್ರಚೋದಿಸಿದರು. ನನಗೆ ತಿಳಿಯುವ ಮುನ್ನವೇ ನಾನವರೊಂದಿಗೆ ಗ್ಯಾಲರಿಯಲ್ಲಿದ್ದೆ. ನಾನು ಕುಳಿತಿದ್ದ ಸ್ಥಳದಿಂದ ನನಗೆ ತೆರೆಯ ಒಂದು ಚೂರಷ್ಟೆ ಕಾಣುತ್ತಿದ್ದುದು, ಆದರೆ ನನ್ನ ಕಿವಿ ಮಾತ್ರ ಎಲ್ಲವನ್ನೂ ಕೇಳಿಸಿಕೊಳ್ಳುತ್ತಿತ್ತು. ನಿಜವೇ, ಆ ನಟಿಯ ಸ್ವರ ತುಂಬ ಮಧುರವಾಗಿತ್ತು. ಅದರಲ್ಲಿ ಬುಲ್‌ಬುಲ್ ಹಕ್ಕಿಯೊಂದರ ಅನುರಣಿಸುವ, ಜೇನುಸವಿಯಂತಹ ಇಂಚರವಿದ್ದಿತು. ನಾವು ಗಂಟಲುಕಟ್ಟುವವರೆಗೂ ಕೂಗಿದೆವು, ಕೈ ನೋಯುವವರೆಗೂ ಚಪ್ಪಾಳೆ ತಟ್ಟಿದೆವು. ಕೊನೆಗೆ ನಮ್ಮೆಲ್ಲೊಬ್ಬರನ್ನು ಹೊರಗಟ್ಟಲಾಯಿತು ಕೂಡ. ನಾನು ಮನೆಗೆ ದಿಗ್ಭ್ರಾಂತನಾಗಿ ಮರಳಿದೆ. ಜೇಬಿನಲ್ಲಿ ಒಂದು ರೂಬಲ್ ಅಷ್ಟೆ ಇದ್ದಿತು. ಸಂಬಳಕ್ಕೆ ಇನ್ನೂ ಹತ್ತು ದಿನಗಳಿದ್ದವು. ಆದರೂ ನಾನು ಏನು ಮಾಡಿದೆ ಅಂತ ನೀವು ಭಾವಿಸುತ್ತೀರಿ, ನನ್ನ ಪ್ರಿಯತಮೆ? ಮೂರನೆಯ ದಿನವೇ ಆಫೀಸಿಗೆ ಹೋಗುವುದಕ್ಕೆ ಮುನ್ನವೇ ನಾನು ಆ ಉಳಿದ ರೂಬಲ್ಲನ್ನೂ ಫ್ರೆಂಚ್ ಸುಗಂಧ ದ್ರವ್ಯ ಅಂಗಡಿಯಲ್ಲಿ ಯಾವುದೋ ಸುಗಂಧದ್ರವ್ಯ ಹಾಗೂ ಪರಿಮಳಯುಕ್ತ ಸಾಬೂನನ್ನು ಕೊಳ್ಳಲು ಉಪಯೋಗಿಸಿದೆ. ಅದನ್ನು ಏಕೆ ಕೊಂಡೆನೋ ನನಗೇ ತಿಳಿದಿರಲಿಲ್ಲ. ಅಂದು ನನಗೆ ಊಟವೇ ಇಲ್ಲ. ಆದರೆ ಊಟದ ಸಮಯದಲ್ಲಿ ಅವಳ ಕಿಟಕಿಯ ಕೆಳಗೇ ಬೆಪ್ಪನಂತೆ ಅಡ್ಡಾಡಿದೆ. ಆಕೆ ನೆವ್‌ಸ್ಕಿ ಪ್ರಾಸ್ಪೆಕ್ಟ್‌ನಲ್ಲಿ ಮನೆಯೊಂದರ ಮೂರನೇ ಅಂತಸ್ತಿನಲ್ಲಿ ವಾಸವಾಗಿದ್ದಳು. ದಿನವೂ ಕೆಲಸ ಮುಗಿದನಂತರ ನನ್ನ ಕೋಣೆಯಲ್ಲಿ ಒಂದು ಗಂಟೆ ವಿಶ್ರಾಂತಿ ತೆಗೆದುಕೊಂಡು ಅನಂತರ ನೆವ್‌ಸ್ಕಿ ಪ್ರಾಸ್ಪೆಕ್ಟ್‌ಗೆ ಹೋಗುತ್ತಿದ್ದೆ, ಆಕೆಯ ಕಿಟಕಿಯ ಕೆಳಗೆ ಅಡ್ಡಾ

ಡಲು. ಹೀಗೆ ನಾನು ಸುಮಾರು ಒಂದು ಒಂದೂವರೆ ತಿಂಗಳೇ ಮಾಡಿದೆ. ಆ ಬೀದಿಯ ಮೂಲೆಯಲ್ಲಿ ಒಂದು ಸಾರೋಟನ್ನು ಬಾಡಿಗೆಗೆ ಗೊತ್ತು ಮಾಡಿಕೊಂಡು ಅದರಲ್ಲಿ ಕುಳಿತು ಅವಳ ಮನೆಯ ಕಿಟಕಿಯ ಮುಂದೆಯೇ ಘನ ಗಾಂಭೀರ್ಯದಿಂದ ಹೋಗುತ್ತಿದ್ದೆ. ಇವೆಲ್ಲದರ ಫಲವಾಗಿ ಸಾಲ ಏರಿತು. ಆದರೆ ಕೊನೆಯಲ್ಲಿ ಈ ಭಾವಾವೇಶ ತಗ್ಗಿತು. ನಾನು ಬಳಲಿದೆ. ನೋಡಿದಿರಾ, ನನ್ನ ಚಿನ್ನ, ನಟಿಯೊಬ್ಬಳು ಸಾಚಾ ಮನುಷ್ಯನೊಬ್ಬನನ್ನು ಎಂತಹ ಸ್ಥಿತಿಗೆ ಇಳಿಸಬಲ್ಲಳು! ಆದರೆ ಆಗ, ಆ ದಿನಗಳಲ್ಲಿ, ನಾನು ಯುವಕನಾಗಿದ್ದೆ.

ಎಂ.ದಿ.

ಜುಲೈ 8

ಗೌರವಾನ್ವಿತ ವರ್ವಾರ ಅಲೆಕ್ಸೇಯೆವ್ನ,

ಈ ತಿಂಗಳು ಆರನೆಯ ತಾರೀಖು ನೀವು ಕಳುಹಿಸಿದ ಪುಸ್ತಕವನ್ನು ತ್ವರೆಯಿಂದ ಹಿಂದಿರುಗಿಸುತ್ತಿದ್ದೇನೆ. ಅದೇ ಹೊತ್ತಿನಲ್ಲಿ ಕೆಲವು ಸಂಗತಿಗಳನ್ನು ವಿವರಿಸಲು ಈ ಸಂದರ್ಭವನ್ನು ಉಪಯೋಗಿಸಿಕೊಳ್ಳುತ್ತೇನೆ. ಇಂತಹ ಪುಸ್ತಕವನ್ನು ನನಗೆ ಕಳುಹಿಸಿದುದು ಕೇಡಿಗತನವಲ್ಲವೇ, ನನ್ನ ಪ್ರಿಯೆ! ಸರ್ವಶಕ್ತನಾದ ಭಗವಂತನು ಜೀವನದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಅವನಿಗೆ ಯೋಗ್ಯವಾದಂಥ ಸ್ಥಾನ ಕೊಡುತ್ತಾನೆ. ಕೆಲವರು ಜನರಲ್ಲರ ಭುಜಕೀರ್ತಿಗಳನ್ನು ತೊಡುವ ಅದೃಷ್ಟ ಹೊಂದಿದ್ದರೆ, ಇತರರು ಪ್ರಿವಿ ಕೌನ್ಸಿಲರ್‌ಗಳಾಗಿ ಸೇವೆಸಲ್ಲಿಸುವ ಭಾಗ್ಯ ಪಡೆದಿರುತ್ತಾರೆ. ಕೆಲವರು ಆಜ್ಞೆ ನೀಡುವವರಾದರೆ ಇತರರು ಹೆದರಿಕೆ ನಮ್ರತೆಯಿಂದ ಆಜ್ಞಾಪಾಲಕರಾಗಿರುತ್ತಾರೆ. ಇವೆಲ್ಲ ಮನುಷ್ಯನ ಸಾಮರ್ಥ್ಯಕ್ಕೆ ತಕ್ಕಂತೆ ದೈವನಿಯಾಮಕವಾದವು. ಕೆಲವರು ಯಾವುದೋ ಒಂದಕ್ಕೆ ಅರ್ಹರಾಗಿದ್ದರೆ ಇತರರು ಇನ್ನೊಂದಕ್ಕೆ ಅರ್ಹರಾಗಿರುತ್ತಾರೆ. ಇದನ್ನು ದೇವರೇ ಆಜ್ಞಾಪಿಸುವುದು. ನಾನು ಈ ಆಫೀಸಿನಲ್ಲಿ ಈಗ ಮೂವತ್ತು ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನನ್ನ ಸೇವಾಕಾರ್ಯ ಯಾವುದೇ ನಿಂದನೆಯಿಂದ ಮುಕ್ತವಾಗಿದೆ, ವರ್ತನೆ ಹಿತಮಿತವಾದುದಾಗಿದೆ. ಕೆಟ್ಟ ನಡತೆ ನಡವಳಿಕೆಯ ಆಪಾದನೆ ನನ್ನ ಮೇಲೆ ಎಂದೂ ಬಂದಿಲ್ಲ. ಒಬ್ಬ ಪ್ರಜೆಯಾಗಿ ನಾನು ನನ್ನನ್ನು ಮನಃಪೂರ್ವಕವಾಗಿ ಕೆಲವು ನ್ಯೂನತೆಗಳಿರುವ ಮನುಷ್ಯನೆಂದೇ ಭಾವಿಸಿಕೊಳ್ಳುತ್ತೇನೆ. ಆದರೆ ನನ್ನಲ್ಲಿ ಸದ್ಗುಣಗಳೂ ಇವೆ. ನನ್ನ ಹಿರಿಯ ಅಧಿಕಾರಿಗಳು ನನ್ನ ಬಗೆಗೆ ಗೌರವ ಹೊಂದಿದ್ದಾರೆ. ನಮ್ಮ ದೊಡ್ಡ ಸಾಹೇಬರೂ ನನ್ನ ಬಗೆಗೆ ಸಂತೋಷಗೊಂಡಿದ್ದಾರೆ. ಅವರು ಇದುವರೆವಿಗೂ ನನಗೆ ಯಾವುದೇ ವಿಶೇಷ ಮೆಚ್ಚಿಕೆಯ ಅನು

ಗ್ರಹ ತೋರಿರದಿದ್ದರೂ ಅವರು ನನ್ನ ವಿಷಯದಲ್ಲಿ ಸಂತೋಷಗೊಂಡಿದ್ದಾರೆಂದು ನನಗೆ ಗೊತ್ತಿದೆ. ನಾನು ಸಾಕಷ್ಟು ಇಳಿವಯಸ್ಸಿನವರೆಗೆ ಬದುಕಿದ್ದೇನೆ. ನನ್ನ ಅಂತರಂಗವನ್ನು ಯಾವ ಗುರುತರವಾದ ಪಾಪವೆಸಗಿದ ಭೀತಿಯೂ ಕಾಡಿಸುತ್ತಿಲ್ಲ. ಸಣ್ಣಪುಟ್ಟ ತಪ್ಪುಗಳನ್ನು ಮಾಡಿದ್ದುಂಟು, ಆದರೆ ಯಾರು ಹಾಗೆ ಮಾಡಿದು ದಿಲ್ಲ? ಸಣ್ಣಪುಟ್ಟ ತಪ್ಪುಗಳನ್ನು ಎಲ್ಲರೂ ಮಾಡಿಯೇ ಇರುತ್ತಾರೆ – ನೀವು ಕೂಡ, ನನ್ನ ಚಿನ್ನ. ಆದರೆ ನಾನೆಂದೂ ಕೆಟ್ಟ ನಡತೆಯ ಅಥವಾ ಅಗೌರವದ ಪಾತಕವೆಸಗಿಲ್ಲ, ನಿಯಮಗಳನ್ನು ಉಲ್ಲಂಘಿಸಿಲ್ಲ, ಶಾಂತಿಯನ್ನು ಭಂಗಗೊಳಿಸಿಲ್ಲ. ಇಲ್ಲ! ಎಂದೂ ಇಲ್ಲ! ನನಗೆ ಪ್ರಶಸ್ತಿ ನೀಡಬೇಕೆಂದು ಶಿಫಾರಸು ಮಾಡಿದ್ದ ಕಾಲವೂ ಒಂದಿತ್ತು. ಆದರೆ ಅದನ್ನೆಲ್ಲ ಈಗ ಯಾಕೆ ಹೇಳಲು ಹೋಗಬೇಕು! ನ್ಯಾಯವಾಗಿ ನೀವು ಇದನ್ನೆಲ್ಲ ತಿಳಿದಿರಬೇಕಿತ್ತು, ಆ ಕಥೆಗಾರನೂ ಇದನ್ನೆಲ್ಲ ತಿಳಿದಿರಬೇಕಿತ್ತು. ಎಲ್ಲವನ್ನೂ ವಿವರಿಸಬೇಕು ಎಂದು ಯಾರೇ ಆಗಲಿ ನಿರ್ಧ ರಿಸಿದಲ್ಲಿ ಅವರು ಎಲ್ಲವನ್ನೂ ತಿಳಿದಿರಲೂ ಬೇಕು. ನಿಮ್ಮಿಂದ ನಾನು ಇಂತಹು ದನ್ನು ನಿರೀಕ್ಷಿಸಿರಲಿಲ್ಲ, ನನ್ನ ಚಿನ್ನ. ನೀವು, ಎಲ್ಲರನ್ನೂ ಬಿಟ್ಟು ನೀವು, ಹೀಗೆ ಮಾಡು ವುದೇ, ವಾರೆಂಕಾ!

ಮನುಷ್ಯನೊಬ್ಬ ತನ್ನ ಮೂಲೆಯಲ್ಲಿ, ಅದು ಎಂತಹುದೇ ಆಗಿರಲಿ ತನ್ನ ಪುಟ್ಟ ಮೂಲೆಯಲ್ಲಿ, ಶಾಂತಿಯಿಂದ, ಎಷ್ಟು ಸಾಧ್ಯವೋ ಅಷ್ಟು ನೆಮ್ಮದಿಯಿಂದ, ದೈವಭೀರುವಾಗಿ, ಯಾರಿಗೂ ಮನ ನೋಯಿಸದಂತೆ, ಹಾಗೆಯೇ ಇತರರು ತನ್ನನ್ನು ತನ್ನಷ್ಟಕ್ಕೆ ತಾನು ಇರಲು ಬಿಡಬೇಕೆಂದು ನ್ಯಾಯವಾಗಿಯೇ ನಿರೀ ಕ್ಷಿಸುತ್ತ, ಬಾಳುವುದಕ್ಕೆ ಬಿಡಬಾರದೆ? ಅವರು ನಿಮ್ಮ ನಾಯಿಗೂಡಿಗೆ ಕದ್ದು ಬರಬಾರದೆಂದು, ನಿಮ್ಮ ಬಳಿ ಲಕ್ಷಣವಾದ ವೇಸ್‌ಕೋಟು ಇದೆಯೇ, ಒಳ ಉಡುಪುಗಳೂ ಎರಡನೆಯ ಜೊತೆ ಬೂಟುಗಳೂ ಇವೆಯೇ, ಬೂಟುಗಳಿಗೆ ಹೊಸ ಅಟ್ಟೆ ಹಾಕಿಸಲಾಗಿದೆಯೇ, ನೀವು ಏನು ತಿನ್ನುತ್ತೀರ ಕುಡಿಯುತ್ತೀರ, ಕಾಪಿ ಮಾಡುತ್ತೀರ, ಎಂಬುದನ್ನು ನೋಡಲೋಸುಗ ನಿಮ್ಮ ಖಾಸಗಿ ಜೀವನ ದೊಳಕ್ಕೆ ಇಣಿಕಿ ನೋಡಬಾರದೆಂದು ನಿರೀಕ್ಷಿಸುತ್ತ ಬಾಳುವುದಕ್ಕೆ ಬಿಡಬಾರದೇ? ಕಾಲುದಾರಿ ಕೆಟ್ಟಿರುವ ಕಡೆ ಬೂಟುಗಳಿಗೆ ಜಖಂ ಆಗದಿರಲೆಂದು ನಾನು ಮೆಟ್ಟಿಂಗಾ ಲಿನಲ್ಲಿ ನಡೆದುಹೋದರೆ ಇವರಿಗೇನಂತೆ! ತನ್ನ ಸಹದೇಶೀಯನು ಕೆಲವು ವೇಳೆ ಎಷ್ಟು ದುಸ್ಥಿತಿಯಲ್ಲಿರುತ್ತಾನೆಂದರೆ ಅವನಿಗೆ ಟೀ ಕುಡಿಯಲೂ ಸಾಧ್ಯವಿರು ವುದಿಲ್ಲ, ಎಂದು ಈ ಕಥೆಗಾರ ತನ್ನ ಓದುಗರಿಗೆ ಏಕೆ ತಿಳಿಸಬೇಕು? ಎಲ್ಲರೂ ಟೀ ಕುಡಿಯಲೇ ಬೇಕೇನೋ ಎನ್ನುವಂತೆ! ನನ್ನ ನೆರೆಯವರು ತಿನ್ನುವ ಪ್ರತಿ ತುತ್ತನ್ನೂ ನಾನು ಕಣ್ಣಿಟ್ಟು ನೋಡುತ್ತೇನೆಯೇ? ಹೌದೇ? ನಾನು ಯಾರಿಗಾದರೂ ಎಂದಾ ದರೂ ಹೀಗೆ ನೋವುಂಟು ಮಾಡಿದ್ದೇನೆಂದು ಯಾರೇ ಆಗಲಿ ಹೇಳಲು ಸಾಧ್ಯವೇ?

ಹಾಗಾದರೆ ಇತರರು ನನಗೆ ಏಕೆ ನೋವುಂಟು ಮಾಡುತ್ತಾರೆ? ನಾನು ಹೇಳು ವುದು ಇದನ್ನೇ, ವರ್ಮಾರ ಅಲೆಕ್ಸೇಯೆವ್ನ: ವ್ಯಕ್ತಿಯೊಬ್ಬ ತನ್ನ ಕೆಲಸವನ್ನು ಅತ್ಯುತ್ಸಾಹದಿಂದ ಮಾಡುತ್ತಿರಬಹುದು. ಅವನ ಮುಖ್ಯಾಧಿಕಾರಿ ಅವನನ್ನು ಗೌರವಿಸುತ್ತಲೂ ಇರಬಹುದು (ನೀವು ಏನೇ ಹೇಳಿ, ಇದು ನಿಜ). ಇದ್ದಕ್ಕಿದ್ದಂತೆ ಯಾರೋ ಒಬ್ಬ ಕಥೆ ಗೀಚುವವ ಬಂದು ಇವನನ್ನು ಮೂರ್ಖನನ್ನಾಗಿ ಚಿತ್ರಿ ಸುತ್ತಾನೆ. ಆ ವ್ಯಕ್ತಿ ಯಾವಾಗಲಾದರೊಮ್ಮೆ ತನಗಾಗಿ ಏನಾದರೊಂದು ಹೊಸ ವಸ್ತುವನ್ನು ಪಡೆದುಕೊಳ್ಳಬಹುದೆನ್ನಿ. ನಿಜ, ಅದರಿಂದಾಗಿ ಅವನು ಎಷ್ಟು ಸಂತಸಿತನಾಗುತ್ತಾನೆಂದರೆ ಇಡೀ ರಾತ್ರಿ ಎಚ್ಚರವಾಗಿಯೇ ಇರಬಹುದು. ಅದು ನಿಜ. ನನಗೇ ಅಂತಹ ಅನುಭವವಾಗಿದೆ. ಉದಾಹರಣೆಗೆ, ನಾನು ನನ್ನ ಹೊಸ ಬೂಟುಗಳನ್ನು ಹಾಕಿಕೊಂಡಾಗ ನನಗೆ ಸರಿಯಾಗಿ ಇಂತಹುದೇ ಭಾವನೆಯಾಯಿತು. ನಾನು ಸಂತಸಭರಿತನಾಗಿದ್ದೆ, ಏಕೆಂದರೆ ಪಾದಗಳು ಅಂತಹ ಸೊಗಸಾದ ಚರ್ಮ ದಿಂದ ಆವರಿಸಿರುವುದನ್ನು ಕಾಣುವುದು ನಿಜಕ್ಕೂ ಆನಂದಕರವೇ. ಕಥೆಗಾರನು ಇದನ್ನು ಸರಿಯಾಗಿಯೇ ವರ್ಣಿಸಿದ್ದಾನೆಂದು ಇಟ್ಟುಕೊಳ್ಳೋಣ. ಅದು ಹೋಗಲಿ. ಆದರೆ ಫ್ಯೋದೊರ್ ಫ್ಯೋಡೊರೊವಿಚ್‌ರು ಈ ಪುಸ್ತಕದ ವಿರುದ್ಧ ಪ್ರತಿಭಟಿಸ ದಿದ್ದುದು ನನಗೆ ನಿಜಕ್ಕೂ ಆಶ್ಚರ್ಯ ಉಂಟುಮಾಡಿದೆ. ನಿಜ, ಅವರಿನ್ನೂ ಒಬ್ಬ ಯುವ ಅಧಿಕಾರಿ, ಕೆಲವು ವೇಳೆ ನಮ್ಮ ಮೇಲೆ ಜಬರ್ದಸ್ತಿನಿಂದ ಎರಗಿ ಕೂಗಾಡುವುದನ್ನು ಇಷ್ಟಪಡುತ್ತಾರೆ. ಆದರೆ ಅವರು ಹಾಗೇಕೆ ಮಾಡಬಾರದು? ಅವರು ನಮ್ಮನ್ನು ದಂಡಿಸಬಾರದೇಕೆ? ಸಣ್ಣಪುಟ್ಟ ಕೆಲಸಗಾರರನ್ನು ಆಗೊಮ್ಮೆ ಈಗೊಮ್ಮೆ ದಂಡಿಸಲೇ ಬೇಕು! ನಿಜ, ಅವರು ಕೆಲವು ವೇಳೆ ತಮ್ಮ ದರ್ಪ ವನ್ನು ತೋರಿಸಿಕೊಳ್ಳಲು ಹಾಗೆ ಮಾಡುತ್ತಾರೆ. ಆದರೆ ಯಾಕೆ ಮಾಡಬಾರದು? ಅವರು ನಮ್ಮನ್ನು ನಮ್ಮ ಸ್ಥಾನದಲ್ಲಿರಿಸಬೇಕು, ನಮಗೆ ಎಚ್ಚರಿಕೆ ನೀಡುತ್ತಿರ ಬೇಕು, ಏಕೆಂದರೆ, ನಮ್ಮನಮ್ಮಲ್ಲೇ ಹೇಳುವುದಾದರೆ, ವಾರೆಂಕಾ, ನಾವು ಸಣ್ಣಪುಟ್ಟ ಕೆಲಸಗಾರರು ಎಚ್ಚರಿಕೆ ಇಲ್ಲದಿದ್ದರೆ ತೀರ ನಿಷ್ಪ್ರಯೋಜಕರಾಗುತ್ತೇವೆ ಮತ್ತು ನಾವು ಒಬ್ಬೊಬ್ಬರೂ ಯಾವುದೋ ಒಂದು ಸ್ಥಾನದಲ್ಲಿ ನೌಕರಿಗಿದ್ದೇವೆಂದಷ್ಟೆ ಭಾವಿಸು ತ್ತೇವೆ. ನಮಗೆ ಮುಖ್ಯವಾದುದು ಸ್ಥಾನ, ಕೆಲಸವಲ್ಲ. ನೌಕರವರ್ಗದಲ್ಲೂ ಬೇರೆ ಬೇರೆ ಅಂತಸ್ತುಗಳಿರುವುದರಿಂದ, ಒಂದೊಂದಕ್ಕೂ ಒಂದೊಂದು ರೀತಿಯ ವಾಗ್ದಂಡನೆ ಇರಬೇಕಾಗುತ್ತದೆ. ಈ ವಾಗ್ದಂಡನೆಯ ಧಾಟಿಯು ವಿವಿಧ ಅಂತ ಸ್ತುಗಳಿಗೆ ಅನುಗುಣವಾಗಿ ಬೇರೆಬೇರೆಯಾಗಿರುತ್ತದೆ. ಅದು ಸಹಜವೇ! ಜಗತ್ತಿನ ನಡವಳಿಕೆಯೇ ಅಂತಹುದು, ನನ್ನ ಮುದ್ದು. ನಮ್ಮಲ್ಲಿ ಒಬ್ಬೊಬ್ಬರೂ ಇತರರ ಮೇಲೆ ಅಧಿಕಾರ ನಡೆಸುತ್ತೇವೆ, ಕೆಲವರು ಇತರರನ್ನು ವಾಗ್ದಂಡನೆಗೆ ಗುರಿಪಡಿ ಸುತ್ತಾರೆ. ಮುನ್ನೆಚ್ಚರಿಕೆಯು ಈ ವ್ಯವಸ್ಥೆ ಇಲ್ಲದೆ ಹೋಗಿದ್ದರೆ, ಜಗತ್ತು ಎಂದೋ

ಕೊನೆಗಾಣುತ್ತಿತ್ತು, ಶಿಸ್ತು ಎಂದೋ ಕೊನೆಗಾಣುತ್ತಿತ್ತು. ಫ್ಯೋದೊರ್ ಫ್ಯೋದೊರೊವಿಚ್‌ರು ಇಂತಹ ಅಧಿಕಪ್ರಸಂಗಿತನವನ್ನು ಸಹಿಸಿಕೊಂಡಿರುವುದು ನನಗೆ ನಿಜಕ್ಕೂ ಆಶ್ಚರ್ಯವನ್ನುಂಟುಮಾಡಿದೆ.

ಅಂಥ ವಿಷಯಗಳನ್ನು ಬರೆಯುವುದರಿಂದ ಏನು ಒಳಿತುಂಟು? ಅದರಿಂದ ಏನು ಪ್ರಯೋಜನ? ಅದನ್ನು ಓದಿದವರು ನನಗೇನಾದರೂ ಒಂದು ಹೊಸ ಓವರ್‌ಕೋಟನ್ನು ಬಳುವಳಿಯಾಗಿ ಕೊಡುತ್ತಾರೆಯೇ? ಅಥವಾ ಒಂದು ಜೊತೆ ಹೊಸ ಬೂಟುಗಳನ್ನು ನೀಡುತ್ತಾರೆಯೇ? ಎಂಥದೂ ಇಲ್ಲ, ವಾರೆಂಕಾ. ಓದುಗ ಅದನ್ನೆಲ್ಲ ಸುಮ್ಮನೆ ಓದುತ್ತಾನೆ, ಇನ್ನಷ್ಟು ನೀಡಬೇಕೆಂದು ಕೇಳುತ್ತಾನೆ. ತಮ್ಮ ಬಗೆಗೆ ಎಲ್ಲಿ ಪುಕಾರುಗಳು ಏಳುತ್ತವೋ ಎಂದು ಹೆದರಿ ಎಲ್ಲರೂ ತಮ್ಮ ನ್ಯೂನತೆಗಳನ್ನು ತುಂಬ ಎಚ್ಚರಿಕೆಯಿಂದ ಮುಚ್ಚಿಡುತ್ತಾರೆ, ತಮ್ಮಷ್ಟಕ್ಕೆ ತಾವೇ ಇರಲು ಯತ್ನಿಸುತ್ತಾರೆ. ಏಕೆಂದರೆ ಪ್ರತಿಯೊಂದು ಸಣ್ಣ ಸಂಗತಿಯೂ ಬೆಟ್ಟದಷ್ಟು ಬೆಳೆಯಬಹುದು. ಮತ್ತೆ ನಮಗೆ ತಿಳಿಯುವುದಕ್ಕೆ ಮುನ್ನವೇ ನಮ್ಮ ಇಡೀ ಸಾಮಾಜಿಕ ಹಾಗೂ ಕೌಟುಂಬಿಕ ಜೀವನ ನಾಚಿಕೆಗೆಟ್ಟ ರೀತಿಯಲ್ಲಿ ಪುಸ್ತಕವೊಂದರ ಪುಟಗಳಲ್ಲಿ ಬಹಿರಂಗಗೊಳಿಸಲ್ಪಟ್ಟಿರುತ್ತದೆ, ಗೇಲಿ ಮಾಡಲ್ಪಟ್ಟಿರುತ್ತದೆ, ಚರ್ಚಿಸಲ್ಪಟ್ಟಿರುತ್ತದೆ. ಅದಾದ ಮೇಲೆ ಯಾರೇ ಆಗಲಿ ಬೀದಿಯಲ್ಲಿ ತಲೆ ಎತ್ತಿಕೊಂಡು ಹೋಗುವುದಾದರೂ ಹೇಗೆ! ಎಲ್ಲವನ್ನೂ ಎಷ್ಟು ಸರಿಯಾಗಿ ವರ್ಣಿಸಲಾಗಿರುತ್ತದೆಂದರೆ, ನಾವು ನಡೆಯುವ ರೀತಿಯಿಂದಲೇ ನಮ್ಮನ್ನು ಗುರುತು ಹಿಡಿಯಲಾಗುತ್ತದೆ! ಪುಸ್ತಕದ ಕೊನೆಯಲ್ಲಿ ಕಥೆಗಾರನು ತನ್ನ ಕಥಾ ನಾಯಕನ ಮೇಲೆ ಹೇಗೆ ಕಾಗದದ ತುಂಡುಗಳನ್ನು ಎಸೆಯಲಾಯಿತು ಎಂಬುದನ್ನು ವರ್ಣಿಸಿದ ನಂತರ ಈ ಕೆಳಗಿನಂತೆ ಏನಾದರೂ ಒಂದಿಷ್ಟು ಬರೆಯುವ ಮೂಲಕ ಸ್ವಲ್ಪ ವಿವೇಕವನ್ನು ತಂದುಕೊಂಡು ತನ್ನ ಕುಹಕವನ್ನು ಸ್ವಲ್ಪಮಟ್ಟಿಗೆ ಸೌಮ್ಯವಾಗಿಸಿದ್ದರೆ, ಬಹುಶಃ ಪುಸ್ತಕ ಅಷ್ಟು ಕೆಟ್ಟುದಾಗಿರುತ್ತಿರಲಿಲ್ಲವೇನೋ. ಆತನು ಹೀಗೆ ಬರೆಯಬಹುದಿತ್ತು: ಏನೆಲ್ಲ ಆದರೂ ಅವನೊಬ್ಬ ಒಳ್ಳೆಯ ವ್ಯಕ್ತಿಯಾಗಿದ್ದ, ಸದ್ಗುಣಿಯಾಗಿದ್ದ, ತನ್ನ ಸಂಗಾತಿಗಳ ಕೈಗಳಿಂದಲೇ ಇಂಥ ಅಪಚಾರಕ್ಕೆ ಒಳಗಾಗುವುದಕ್ಕೆ ಎಷ್ಟು ಮಾತ್ರವೂ ಅರ್ಹನಾಗಿರಲಿಲ್ಲ, ಅವನು ತನ್ನ ಮೇಲಧಿಕಾರಿಗಳಿಗೆ ವಿಧೇಯನಾಗಿದ್ದ (ಇಲ್ಲಿ ಕೆಲವು ನಿದರ್ಶನಗಳನ್ನು ನೀಡುವುದು ಸೂಕ್ತ), ಯಾರ ಬಗೆಗೂ ಮತ್ಸರ ಹೊಂದಿರಲಿಲ್ಲ, ದೇವರಲ್ಲಿ ನಂಬಿಕೆ ಇರಿಸಿದ್ದ, ಕೊನೆಗೆ ಮೃತನಾದ (ಗ್ರಂಥಕರ್ತನು ಅವನನ್ನು ಸಾಯಿಸಲೇಬೇಕೆಂದು ಬಯಸಿದಲ್ಲಿ), ಅವನ ಸಾವಿಗಾಗಿ ಅವನ ಬಂಧುಗಳೂ ಮಿತ್ರರೂ ದುಃಖಿಸಿದರು – ಎಂದು ಬರೆಯಬಹುದಿತ್ತು. ಅವನನ್ನು ಸಾಯುವುದಕ್ಕೆ ಬಿಡದೆ, ಆ ಬಡಪಾಯಿ ತನ್ನ ಓವರ್ ಕೋಟನ್ನು ಹಿಂದಕ್ಕೆ ಪಡೆದುಕೊಳ್ಳುವಂತೆ ಮಾಡಿದ್ದರೆ, ದೊಡ್ಡ ಸಾಹೇಬರು

ಅವನನ್ನು ಕರೆದು ಅವನ ಸದ್ಗುಣಗಳ ಬಗೆಗೆ ಸೂಕ್ತ ವಿಚಾರಣೆ ಮಾಡಿದನಂತರ ಅವನ ಅಂತಸ್ತನ್ನು ಹೆಚ್ಚಿಸಿ ಸಂಬಳವನ್ನೂ ಹೆಚ್ಚಿಸುವಂತೆ ಮಾಡಿದ್ದರೆ, ಹಾಗೆ ಸದ್ಗುಣವು ಗೆದ್ದು, ಅವನ ಸಂಗಾತಿಗಳ ರೂಪದಲ್ಲಿದ್ದ ದುರ್ಗುಣವು ಸೂಕ್ತ ಶಿಕ್ಷೆಗೊಳಗಾದಂತೆ ಮಾಡಿದ್ದರೆ, ಇನ್ನೂ ಹೆಚ್ಚು ಚೆನ್ನಾಗಿರುತ್ತಿತ್ತು. ನಾನು ಬರೆ ದಿದ್ದರೆ ಹಾಗೇ ಬರೆಯುತ್ತಿದ್ದೆ. ಆತನು ಕಥೆಯನ್ನು ಬರೆದಿರುವ ರೀತಿಯಲ್ಲಿ ಒಳಿತಾದುದು ಏನಿದೆ? ನಮ್ಮ ಹೊಲಸು ನಿತ್ಯಜೀವನದ ಒಂದು ಕ್ಷುಲ್ಲಕ ಪ್ರಸಂಗ ವನ್ನಷ್ಟೆ ಅವನು ವರ್ಣಿಸಿದ್ದಾನೆ. ನನ್ನ ಮುದ್ದುರಾಣಿ, ಇಂತಹ ಪುಸ್ತಕವನ್ನು ನೀವು ಹೇಗೆ ನನಗೆ ಕಳುಹಿಸುವಂತಾದಿರಿ? ಇದೊಂದು ಹಾನಿಕರ ಪುಸ್ತಕ, ವಾರೆಂಕಾ. ಇದು ಶುದ್ಧ ಸುಳ್ಳಿನ ಕಂತೆ, ಏಕೆಂದರೆ, ಅಂತಹ ಕಾರಕೂನ ಇರಲು ಸಾಧ್ಯವೇ ಇಲ್ಲ. ಇಂತಹ ಪುಸ್ತಕದ ವಿರುದ್ಧ ದೂರು ನೀಡಬೇಕು, ವಾರೇಂಕಾ.

ನಿಮ್ಮ ವಿಧೇಯ ಸೇವಕ,
ಮಕಾರ್ ದೇವುಷ್ಕಿನ್.

ಜುಲೈ 27

ನನ್ನ ಪ್ರಿಯ ಮಕಾರ್ ಅಲೆಕ್ಸೇಯೆವಿಚ್,

ಇತ್ತೀಚೆಗೆ ನಡೆಯುತ್ತಿರುವ ಘಟನೆಗಳೂ ನಿಮ್ಮ ಕೊನೆಯ ಪತ್ರಗಳೂ ನನ್ನನ್ನು ಭಾರಿ ಚಿಂತೆಗೆ ಒಳಪಡಿಸಿ ಆಶ್ಚರ್ಯಗೊಳ್ಳುವಂತೆ ಮಾಡಿದ್ದವು. ಕೊನೆಗೆ ಫಿದೋರ‍ಳು ಎಲ್ಲವನ್ನೂ ವಿವರಿಸಿ ತಿಳಿಸಿದಳು. ಹತಾಶೆಗೊಳಗಾಗಿ ಅಂತಹ ಪ್ರಪಾತಕ್ಕೇಕೆ ಬೀಳಬೇಕು, ಮಕಾರ್ ಅಲೆಕ್ಸೇಯೆವಿಚ್? ನಿಮ್ಮ ವಿವರಣೆಗಳು ನನಗೆ ತೃಪ್ತಿ ನೀಡಿಲ್ಲ. ನೀವೇ ಈಗ ಕಾಣುವಂತೆ, ನಾನು ಎಷ್ಟೇ ಆಗಲಿ ಆ ಒಳ್ಳೆಯ ಸಂಬಳ ತರುತ್ತಿದ್ದ ಕೆಲಸವನ್ನು ಒಪ್ಪಿಕೊಳ್ಳಬೇಕಾಗಿತ್ತು. ಅಲ್ಲದೆ, ನನ್ನ ಈಚೆಗಿನ ಸಾಹಸ ನನ್ನನ್ನು ನಿಜಕ್ಕೂ ಗಾಬರಿಗೊಳಿಸಿದೆ. ನನ್ನ ಮೇಲಿನ ಪ್ರೇಮಕ್ಕಾಗಿ ನೀವು ಸಂಗತಿಗಳನ್ನು ನನ್ನಿಂದ ಮುಚ್ಚಿಡುತ್ತಿದ್ದೀರೆಂದು ನೀವು ಹೇಳುತ್ತೀರಿ. ನೀವು ನನಗಾಗಿ ಖರ್ಚು ಮಾಡುತ್ತಿದ್ದ ಹಣವು ಬ್ಯಾಂಕಿನಲ್ಲಿದ್ದ ನಿಮ್ಮ ಉಳಿತಾಯದಿಂದ ಬರು ತ್ತಿದ್ದಿತೆಂದು ನಾನು ನಂಬಿದ್ದೆ ಮತ್ತು ಯಾವತ್ತೂ ನಿಮಗೆ ಋಣಿಯಾದ ಭಾವನೆ ಹೊಂದಿದ್ದೆ. ಆದರೆ ನಿಮ್ಮ ಬಳಿ ಎಂದೂ ಹಣ ಇರಲೇ ಇಲ್ಲ, ನನ್ನ ದುರವಸ್ಥೆ ಯನ್ನು ಕಂಡು ಕನಿಕರಿಸಿ ನಿಮ್ಮ ಸಂಬಳವನ್ನೆಲ್ಲ ಮುಂಗಡವಾಗಿಯೇ ಪಡೆಯು ತ್ತಿದ್ದಿರಿ, ನಾನು ಕಾಯಿಲೆ ಮಲಗಿದ್ದಾಗ ನೀವು ನಿಮ್ಮ ಕೋಟನ್ನು ಮಾರಿದಿರಿ, ಎಂಬುದನ್ನು ಈಗ ತಿಳಿದ ನಾನು ಯಾವ ಭಾವನೆ ಹೊಂದಿರಬೇಕು? ಈಗ ನಾನೇನು ಮಾಡಲಿ! ದುರ್ದೈವಿ ಮಕಾರ್ ಅಲೆಕ್ಸೇಯೆವಿಚ್! ಬಂಧುವೆಂಬ

ಭಾವನೆ ಹಾಗೂ ಸಹಾನುಭೂತಿಯಿಂದ ನೀವು ನನ್ನ ಬಗೆಗೆ ತೋರಿದ ಆ ಮೊದಲ ಉಪಕೃತಿಗಳನಂತರ ನೀವು ಎಲ್ಲವನ್ನೂ ನಿಲ್ಲಿಸಿಬಿಡಬೇಕಾಗಿದ್ದಿತು. ನೀವು ಭೋಗ ವಸ್ತುಗಳಿಗಾಗಿ ಹಣವನ್ನು ಪೋಲು ಮಾಡಬಾರದಿತ್ತು. ನೀವು ನಿಜವಾದ ಮಿತ್ರ ರಲ್ಲ: ನೀವು ನನಗೆ ಎಲ್ಲವನ್ನೂ ಮನಬಿಚ್ಚಿ ಹೇಳಲಿಲ್ಲ, ಮಕಾರ್ ಅಲೆಕ್ಸೇಯೆ ವಿಚ್. ನೀವು ನಿಮ್ಮ ಕೊನೆಯ ಕೊಪೆಕ್ಕನ್ನೂ ನನಗಾಗಿ ಬಟ್ಟೆಗಳನ್ನು ಕೊಳ್ಳಲು, ಮಿಠಾಯಿಗಳನ್ನು, ನಾಟಕಕ್ಕೆ ಟಿಕೆಟ್ಟುಗಳನ್ನು, ಪುಸ್ತಕಗಳನ್ನು ಕೊಳ್ಳಲು, ಮನರಂಜ ನೆಯ ವಸ್ತುಗಳನ್ನು ಕೊಳ್ಳಲು, ಖರ್ಚು ಮಾಡಿದಿರಿ ಎಂಬುದನ್ನು ಈಗ ತಿಳಿದ ನಾನು ನನ್ನ ಅಕ್ಷಮ್ಯ ಅವಿಚಾರಕ್ಕಾಗಿ ಅಪಾರ ಯಾತನೆಯನ್ನು ಅನುಭವಿಸು ತ್ತಿದ್ದೇನೆ. (ನಿಮ್ಮ ಆವಶ್ಯಕತೆಗಳ ಬಗೆಗೆ ಯೋಚನೆ ಮಾಡದೆಯೇ ನೀವು ಕೊಟ್ಟ ಎಲ್ಲ ವಸ್ತುಗಳನ್ನೂ ನಾನು ಸ್ವೀಕರಿಸಲಿಲ್ಲವೇ ?) ನೀವು ನನಗೆ ಆನಂದ ತರಲೆಂದು ನೀಡಿದ ವಸ್ತುಗಳೆಲ್ಲವೂ ಈಗ ನನಗೆ ದುಃಖ ಹಾಗೂ ನಿರರ್ಥಕ ವಿಷಾದವನ್ನೇ ತರುವಂತಾಗಿವೆ. ನೀವು ಇತ್ತೀಚೆಗೆ ಖಿನ್ನರಾಗಿರುತ್ತಿದ್ದುದನ್ನು ನಾನು ಗಮನಿ ಸಿದ್ದೆ, ನಾನೂ ವ್ಯಾಕುಲಗೊಂಡಿದ್ದೆ. ಆದರೆ ನಿಜವಾಗಲೂ ಜರುಗಿರುವುದು ನನ್ನ ಅತ್ಯಂತ ಹೆಚ್ಚಿನ ಅಂಜಿಕೆಗಳನ್ನೂ ಮೀರಿದೆ. ಅಯ್ಯೋ ದೇವರೇ ! ನೀವು ನಿಮ್ಮ ಸ್ವಸ್ಥಚಿತ್ತತೆಯನ್ನು ಅಷ್ಟು ಸಂಪೂರ್ಣವಾಗಿ ಕಳೆದುಕೊಳ್ಳಲು ಹೇಗೆ ಸಾಧ್ಯ ವಾಯಿತು, ಮಕಾರ್ ಅಲೆಕ್ಸೇಯೆವಿಚ್ ? ಜನ ಏನು ಹೇಳುತ್ತಾರೆ ! ವಿನಮ್ರತೆ, ಪ್ರಾಜ್ಞತೆ ಹಾಗೂ ಕಾರುಣ್ಯಕ್ಕಾಗಿ ಅಷ್ಟು ಗೌರವಿಸಲ್ಪಡುತ್ತಿದ್ದ ನೀವು ಇಂಥ ಅಸಹ್ಯಕರ ದುರ್ಗುಣಕ್ಕೆ ತುತ್ತಾದಿರೆಂದು ಭಾವಿಸುವುದೂ ಎಷ್ಟು ಭಯಂಕರ ! ಹಿಂದೆಂದೂ ಯಾರೂ ನಿಮ್ಮಲ್ಲಿ ಇಂಥ ದುರ್ಗುಣವನ್ನು ಅನುಮಾನಿಸಲೂ ಸಾಧ್ಯವಿರಲಿಲ್ಲವೆಂದೇ ನನ್ನ ನಂಬಿಕೆ. ನೀವು ಬೀದಿಯಲ್ಲಿ ಅಮಲೇರಿ ತೂರಾಡು ತ್ತಿದ್ದಿರಿ, ಪೊಲೀಸರು ನಿಮ್ಮನ್ನು ಮನೆಗೆ ಕರೆತಂದು ಬಿಟ್ಟರು, ಎಂಬುದನ್ನು ಫಿದೋರಳಿಂದ ನಾನು ಕೇಳಿ ತಿಳಿದಾಗ ನನ್ನ ಭಾವನೆ ಏನಾಗಿರಬೇಕು ? ನಾನು ನನ್ನ ಕಿವಿಗಳನ್ನೇ ನಂಬದಾದೆ. ಈಗ ನಾಲ್ಕು ದಿನಗಳಿಂದ ನೀವು ನನ್ನನ್ನು ಭೇಟಿಯಾ ಗಲು ಬರದಿದ್ದುದರಿಂದ ನಾನು ಅಸಾಧಾರಣವಾದುದು ಏನೋ ಜರುಗಿದೆ ಎಂದು ಶಂಕಿಸಿದ್ದೆ. ನೀವು ಕೆಲಸಕ್ಕೆ ಹೋಗದೆ ಇದ್ದುದಕ್ಕೆ ನಿಜವಾದ ಕಾರಣವನ್ನು ನಿಮ್ಮ ಮುಖ್ಯಾಧಿಕಾರಿಗಳು ತಿಳಿದಾಗ ಏನು ಹೇಳುವರೆಂಬ ಬಗೆಗೆ ನೀವೇನಾ ದರೂ ಯೋಚಿಸಿದ್ದೀರ, ಮಕಾರ್ ಅಲೆಕ್ಸೇಯೆವಿಚ್ ? ಪ್ರತಿಯೊಬ್ಬರೂ ನಿಮ್ಮನ್ನು ನೋಡಿ ನಗುತ್ತಿದ್ದಾರೆ, ಅವರು ನಮ್ಮ ಗೆಳೆತನದ ಬಗೆಗೆ ತಿಳಿದಿದ್ದಾರೆ, ನಿಮ್ಮ ಅಕ್ಕಪಕ್ಕದವರು ಆಗಾಗ್ಗೆ ತಮ್ಮ ಪರಿಹಾಸ್ಯದ ಮಾತುಗಳಲ್ಲಿ ನನ್ನ ಹೆಸರನ್ನೂ ಸೇರಿಸುತ್ತಾರೆ, ಎಂದು ನೀವು ಬರೆಯುತ್ತೀರ. ದೇವರಾಣೆಗೂ, ಮಕಾರ್ ಅಲೆ ಕ್ಸೇಯೆವಿಚ್, ಅವರ ಕಡೆಗೆ ನೀವು ಗಮನ ನೀಡಲೇ ಬೇಡಿ, ಸ್ವಸ್ಥಚಿತ್ತತೆಯನ್ನು

ತಂದುಕೊಳ್ಳಿ. ನಿಮಗೂ ಆ ಸೈನ್ಯಾಧಿಕಾರಿಗಳಿಗೂ ಮಧ್ಯೆ ನಡೆದ ಅಹಿತ ಘಟನೆಯ ಬಗೆಗೂ ನಾನು ಕಳವಳಗೊಂಡಿದ್ದೇನೆ. ಏನೋ ಅಸ್ಪಷ್ಟ ವದಂತಿಗಳು ನನ್ನ ಕಿವಿ ತಲುಪಿವೆ. ಅದರ ಬಗೆಗೆ ದಯವಿಟ್ಟು ಎಲ್ಲವನ್ನೂ ತಿಳಿಸಿ. ನೀವು ನನಗೆ ಇಡೀ ಸತ್ಯವನ್ನು ತಿಳಿಸಲು ಅಂಜುತ್ತೀರಿ, ನನ್ನ ಸ್ನೇಹವನ್ನು ಕಳೆದುಕೊಳ್ಳುವಿರೆಂದು ಅಂಜುತ್ತೀರಿ, ನಾನು ಕಾಯಿಲೆ ಬಿದ್ದಾಗ ನನಗೆ ಹೇಗೆ ಸಹಾಯ ಮಾಡಬೇಕೆಂಬುದನ್ನು, ನನ್ನನ್ನು ಹೇಗೆ ಆಸ್ಪತ್ರೆಗೆ ಹೋಗದ ಹಾಗೆ ಮಾಡಿ ಮನೆಯಲ್ಲೇ ಆರೈಕೆ ಏರ್ಪಡಿಸಬೇಕೆಂಬುದನ್ನು ನೀವು ತಿಳಿಯದೆ ಹೋದ ಕಾರಣ ಹತಾಶರಾದಿರಿ, ನಿಮ್ಮಲ್ಲಿದ್ದುದೆಲ್ಲವನ್ನೂ ಮಾರಿದಿರಿ, ಎಷ್ಟು ಸಾಧ್ಯವೋ ಅಷ್ಟೂ ಸಾಲ ಮಾಡಿದಿರಿ, ನಿಮ್ಮ ಮನೆಯ ಯಜಮಾನಿ ಪ್ರತಿದಿನವೂ ನಿಮಗೆ ತಗಾದೆ ಮಾಡುತ್ತಿದ್ದಾಳೆ, ಎಂದು ನೀವು ಬರೆದಿದ್ದೀರಿ. ನೀವು ಇದೆಲ್ಲವನ್ನೂ ನನ್ನಿಂದ ಮುಚ್ಚಿಟ್ಟು ಅತ್ಯಂತ ಅವಿವೇಕದ ಕಾರ್ಯವನ್ನೇ ಮಾಡಿದ್ದೀರಿ. ಅಂತೂ ನಾನು ಈಗ ಎಲ್ಲವನ್ನೂ ತಿಳಿದಿದ್ದೇನೆ. ನಿಮ್ಮ ತೊಂದರೆಗಳಿಗೆ ನಾನೇ ಕಾರಣಳೆಂದು ನಾನು ಒಪ್ಪಿಕೊಳ್ಳುವಂತೆ ಮಾಡಿದರೆ ಅವಮಾನವೆಂದು ನೀವು ಬಗೆದಿರಿ. ಆದರೆ ನಿಮ್ಮ ವರ್ತನೆಯಿಂದ ವಾಸ್ತವವಾಗಿ ನನ್ನ ದುಃಖವನ್ನು ಇಮ್ಮಡಿಗೊಳಿಸಿದ್ದೀರ. ಇದು ನನ್ನನ್ನು ನಜ್ಜುಗುಜ್ಜು ಮಾಡಿದೆ, ಮಕಾರ್ ಅಲೆಕ್ಸೇಯೆವಿಚ್ ! ಓಹ್, ನನ್ನ ಮಿತ್ರರೇ, ದೌರ್ಭಾಗ್ಯ ಎಂಬುದು ಸಾಂಕ್ರಾಮಿಕವಾದುದು ! ಅದು ಇನ್ನೂ ಉಲ್ಬಣಗೊಳ್ಳದಂತೆ ಮಾಡಲು ಬಡವರಾದ ಅಸುಖಿಗಳಾದ ಜನ ಪರಸ್ಪರ ದೂರವಿರಬೇಕು. ನಿಮ್ಮ ಇಡೀ ವಿನಮ್ರ ವಿಶ್ರಾಂತ ಜೀವನದಲ್ಲಿ ಹಿಂದೆಂದೂ ಹೊಂದಿರದಿದ್ದಷ್ಟು ತೊಂದರೆಗಳನ್ನು ನಾನು ನಿಮಗೆ ತಂದಿದ್ದೇನೆ. ಈ ಚಿಂತೆ ನನ್ನನ್ನು ಚಿತ್ರಹಿಂಸೆಗೊಳಪಡಿಸಿದೆ, ನನ್ನನ್ನು ಕೊಲ್ಲುತ್ತಿದೆ.

ನನಗೆ ಮುಚ್ಚುಮರೆ ಇಲ್ಲದೆ ಹೇಳಿ – ಏನೆಲ್ಲ ಜರುಗಿತು, ನೀವು ಇಂಥ ಸ್ಥಿತಿಗೆ ಹೇಗೆ ಬರುವಂತಾದಿರಿ ? ನನ್ನ ಮನಸ್ಸಿಗೆ ಸಮಾಧಾನ ನೀಡುವಂಥ ವಿಷಯವನ್ನೇನಾದರೂ ಹೇಳಿ, ಸಾಧ್ಯವಿದ್ದರೆ. ಇದನ್ನು ನಾನು ಸ್ವಾರ್ಥಕ್ಕಾಗಿ ಕೇಳುತ್ತಿಲ್ಲ, ಆದರೆ ಸ್ನೇಹಕ್ಕಾಗಿ ಕೇಳುತ್ತಿದ್ದೇನೆ. ಈ ಸ್ನೇಹವನ್ನು ಯಾವ ಶಕ್ತಿಯೂ ನನ್ನ ಹೃದಯದಿಂದ ಹೊಡೆದೋಡಿಸದು. ನಮಸ್ಕಾರ, ನಾನು ನಿಮ್ಮ ಉತ್ತರಕ್ಕಾಗಿಯೇ ತಾಳ್ಮೆಗೆಟ್ಟು ಕಾಯುತ್ತಿದ್ದೇನೆ. ನೀವು ನನ್ನ ಬಗೆಗೆ ತಪ್ಪಾಗಿ ಯೋಚಿಸಿದಿರಿ, ಮಕಾರ್ ಅಲೆಕ್ಸೇಯೆವಿಚ್.

ನಿಮ್ಮ ವಿಶ್ವಾಸಿ,
ವಾರ್ವಾರ ದೊಬ್ರಸ್ಯೋಲೊವ

ನನ್ನ ಅಮೂಲ್ಯ ರತ್ನ ವರ್ವಾರ ಅಲೆಕ್ಸೇಯೆವ್ನ,

ಈಗ ಕೋಲಾಹಲವೆಲ್ಲ ಮುಗಿದು ನನ್ನ ಜೀವನ ಎಂದಿನ ಮಾರ್ಗ ಹಿಡಿದಿದೆ. ಈಗ ನಾನು ಈ ಕೆಳಗಿನ ವಿಷಯವನ್ನು ತಿಳಿಸಬಹುದಾಗಿದೆ: ಜನ ಏನು. ಭಾವಿಸುವರು ಎಂಬ ಬಗೆಗೆ ನೀವು ಚಿಂತಿಸುವಂತಿದೆ. ಆದ್ದರಿಂದ ನನ್ನ ಗೌರವ ನನಗೆ ಈ ಜಗತ್ತಿನಲ್ಲಿ, ಬೇರಾವುದಕ್ಕಿಂತ ಹೆಚ್ಚು ಪ್ರಿಯವಾದುದೆಂದು ನಿಮಗೆ ಖಚಿತವಾಗಿ ತಿಳಿಸಲು ಮುಂದಾಗುತ್ತೇನೆ. ಹಾಗಾಗಿ ನಾನು ಇಲ್ಲಿ ನಿಮಗೆ ನನ್ನ ವಿಪತ್ತುಗಳ ಬಗೆಗೆ ತಿಳಿಸುತ್ತೇನೆ. ನನ್ನ ಮೇಲಧಿಕಾರಿಗಳು ಇವುಗಳ ಬಗೆಗೆ ಎಳ್ಳಷ್ಟೂ ತಿಳಿದಿಲ್ಲ, ತಿಳಿಯುವುದೂ ಇಲ್ಲ. ಆದ್ದರಿಂದ ಅವರು ನನ್ನನ್ನು ಹಿಂದಿನಂತೆಯೇ ಗೌರವದಿಂದಲೇ ಕಾಣುತ್ತಿದ್ದಾರೆ. ಆದಾಗ್ಯೂ ನನ್ನನ್ನು ಕಾಡುತ್ತಿರುವ ಒಂದೇ ಚಿಂತೆ – ವದಂತಿಗಳು. ನನ್ನ ಮನೆಯ ಯಜಮಾನಿಯ ಅರಚಾಟವೂ, ನೀವು ಕೊಟ್ಟ ಹತ್ತು ರೂಬಲ್‌ಗಳಿಂದಾಗಿ, ಈಗ ಕೇವಲ ಗೊಣಗಾಟಕ್ಕೆ ಇಳಿದಿದೆ. ಈ ಹತ್ತು ರೂಬಲ್‌ಗಳಿಂದ ನಾನು ಮನೆಬಾಡಿಗೆಯ ಬಾಕಿಯಲ್ಲಿ ಒಂದು ಭಾಗ ತೀರಿಸಿದ್ದೇನೆ. ಇನ್ನು ಇತರರ ಬಗೆಗೆ ಹೇಳುವುದಾದರೆ, ಅವರು ಯಾವ ತೊಂದರೆಯನ್ನೂ ಮಾಡರು. ಅವರಿಂದ ನಾನು ಮತ್ತೆ ಸಾಲ ಎತ್ತಲು ಯತ್ನಿಸದಿರುವವರೆಗೂ ಅವರು ಯಾವ ತೊಂದರೆಯನ್ನೂ ಮಾಡರು. ನಾನು ನನ್ನ ವಿವರಣೆಯನ್ನು ಈ ಹೇಳಿಕೆಯಿಂದ ಪೂರೈಸುತ್ತೇನೆ, ನನ್ನ ಮುದ್ದು. ನಿಮ್ಮ ಸದಭಿಪ್ರಾಯ ನನಗೆ ಈ ಜಗತ್ತಿನಲ್ಲಿ ಬೇರಾವುದಕ್ಕಿಂತ ಹೆಚ್ಚು ಮುಖ್ಯವಾದುದು. ಅದು ನನ್ನ ಈ ಎಲ್ಲ ತಾತ್ಕಾಲಿಕ ತೊಂದರೆಗಳಿಗೂ ಸಂಪೂರ್ಣ ಪರಿಹಾರ ಒದಗಿಸುತ್ತದೆ. ದೇವರ ದಯದಿಂದ ಮೊದಲ ಪೆಟ್ಟೂ ಮೊದಲ ತೊಂದರೆಗಳೂ ಕೊನೆಗೊಂಡಿವೆ. ನಾನು ನಿಮ್ಮನ್ನು ಪ್ರೀತಿಸುತ್ತಿದ್ದುದರಿಂದ ನಿಮ್ಮನ್ನು ಹೊರಟು ಹೋಗಲು ಬಿಡದಾದೆ, ಹಾಗೆ ನಿಮಗೆ ಮೋಸಮಾಡಿದೆ ಎಂಬ ಕಾರಣದಿಂದ ನೀವು ನನ್ನನ್ನು ಕಪಟ ಸ್ನೇಹಿತನನ್ನಾಗಿ, ಸ್ವಾರ್ಥಪರ ವ್ಯಕ್ತಿಯನ್ನಾಗಿ ಭಾವಿಸದಿರುವುದು ಈಗ ಸ್ಪಷ್ಟವಾಗಿದೆ, ನನ್ನ ಪ್ರಿಯ ಪುಟ್ಟ ದೇವತೆ. ನಾನು ನನ್ನ ಕೆಲಸಕ್ಕೆ ಇಮ್ಮಡಿ ಹುರುಪಿನಿಂದ ಹಿಂದಿರುಗಿದ್ದೇನೆ, ನನ್ನ ಕರ್ತವ್ಯಗಳನ್ನು ಅತ್ಯುತ್ತಮವಾಗಿ ನಿರ್ವಹಿಸುತ್ತಿದ್ದೇನೆ. ನಿನ್ನೆ ನಾನು ಯೆವ್‌ಸ್ತಾಫಿಯ್ ಇವಾನೊವಿಚ್‌ರ ಮುಂದೆಯೇ ಹೋಗೆ. ಅವರು ನನಗೆ ಒಂದು ಮಾತೂ ಹೇಳಲಿಲ್ಲ. ನಾನು ನನ್ನ ಸಾಲಗಳ ಹೊರೆಯಿಂದ ಹಾಗೂ ನನ್ನ ಬಟ್ಟೆಬರೆಗಳ ದುರವಸ್ಥೆಯಿಂದ ನಜ್ಜುಗುಜ್ಜಾಗಿದ್ದೇನೆಂಬ ಅಂಶವನ್ನು, ನನ್ನ ಪ್ರಿಯೆ, ನಾನು ನಿಮ್ಮಿಂದ ಮುಚ್ಚಿಡುವುದಿಲ್ಲ. ಆದರೆ ಅದೇನೂ ನಿಜಕ್ಕೂ ಅಂಥ ದೊಡ್ಡ ವಿಷಯವಲ್ಲ. ನೀವು ಅದರ ಬಗೆಗೆ ಚಿಂತಿಸಬೇಡಿರೆಂದು ಕೇಳಿಕೊಳ್ಳುತ್ತೇನೆ. ನೀವು ಐವತ್ತು ಕೊಪೆಕ್ ಕಳುಹಿಸಿ ಕೊಟ್ಟಿದ್ದೀರಿ. ಅದು ನನ್ನ ಮನ

ಸ್ಸನ್ನು ಕದಡಿದೆ. ಹೀಗೆ ಇದು ಇಷ್ಟಕ್ಕೆ ಬಂದಿಳಿಯಿತಲ್ಲ! ಮೂರ್ಖ ಮುದುಕನಾದ ನಾನಲ್ಲ ನಿಮಗೆ ಸಹಾಯ ಮಾಡುತ್ತಿರುವುದು. ಆದರೆ ಬಡ ಅರಕ್ಷಿತ ಅನಾಥರಾದ ನೀವು ನನಗೆ ಸಹಾಯ ಮಾಡುತ್ತಿದ್ದೀರಿ! ಒಂದಿಷ್ಟು ಹಣವನ್ನು ತಂದುಕೊಟ್ಟು ಫಿದೋರ ಒಳ್ಳೆಯದನ್ನೇ ಮಾಡಿದಳು. ಸಧ್ಯದಲ್ಲಿ, ನನ್ನ ಪ್ರಿಯ ತಮೆ, ನನಗೆ ಹಣ ಬರುವ ಯಾವ ನಿಜವಾದ ಪ್ರತೀಕ್ಷೆಗಳೂ ಇಲ್ಲ. ಏನಾದರೂ ಬಂದರೆ ನಿಮಗೆ ತಕ್ಷಣವೇ ತಿಳಿಸುತ್ತೇನೆ, ಆದರೆ ಈ ವಂದತಿಗಳು – ಅವೇ ನನ್ನನ್ನು ಹೆಚ್ಚು ಚಿಂತೆಗೆ ಈಡುಮಾಡಿರುವುದು. ನಮಸ್ಕಾರ, ನನ್ನ ದೇವತೆ. ನಾನು ನಿಮ್ಮ ಪುಟ್ಟ ಕೈಗಳಿಗೆ ಮುತ್ತಿಡುತ್ತೇನೆ ಮತ್ತು ಬೇಗ ಗುಣಮುಖರಾಗಿರೆಂದು ಪ್ರಾರ್ಥಿಸುತ್ತೇನೆ. ಈಗ ಹೆಚ್ಚು ವಿವರವಾಗಿ ಬರೆಯಲು ಕಾಲಾವಕಾಶವಿಲ್ಲ. ನಾನು ಆಫೀಸಿಗೆ ಧಾವಿಸಬೇಕಾಗಿದೆ. ಇದುವರೆಗಿನ ನಿರ್ಲಕ್ಷ್ಯವನ್ನು ಈಗ ಸರಿಪಡಿಸಬೇಕಾಗಿದೆ. ಇಂದು ಸಂಜೆ ನಾನು ಇತರ ವಿಷಯಗಳ ಬಗೆಗೆ, ನನಗೂ ಆ ಸೈನ್ಯಾಧಿಕಾರಿಗಳಿಗೂ ಮಧ್ಯೆ ನಡೆದ ಮನಸ್ತಾಪದ ಬಗೆಗೆ, ಬರೆಯುತ್ತೇನೆ.

ನಿಮ್ಮ ಗೌರವಾನ್ವಿತನಾದ,
ನಿಮ್ಮನ್ನು ಅಂತರಾಳದಿಂದ ಪ್ರೀತಿಸುತ್ತಿರುವ,
ಮಕಾರ್ ದೇವುಷ್ಕಿನ್.

ಜುಲೈ 28

ಆಹ್, ವಾರೆಂಕಾ, ವಾರೆಂಕಾ!

ಈಗ ನೀವು ನಿಮ್ಮ ಬಗೆಗೆ ನಾಚಿಕೆ ಪಡಬೇಕೇ ಹೊರತು ನಾನಲ್ಲ! ಇದು ನಿಮ್ಮ ಅಂತರಂಗದಲ್ಲಿ ಸದಾಕಾಲಕ್ಕೂ ಇರಲಿರುವುದು. ನಿಮ್ಮ ಕೊನೆಯ ಪತ್ರ ನನ್ನನ್ನು ಸಂಪೂರ್ಣವಾಗಿ ದಿಗ್ಭ್ರಾಂತನನ್ನಾಗಿ ಮಾಡಿತು. ಆದರೆ ಆತ್ಮ ಶೋಧ ಮಾಡಿಕೊಂಡಾಗ ನಾನೇ ಸರಿ, ಸಂಪೂರ್ಣವಾಗಿ ಸರಿ, ಎಂಬುದು ನನಗೆ ಕಂಡು ಬಂದಿತು. ನಾನು ಆ ನನ್ನ ಕಾದಾಟಕ್ಕೆ ಉಲ್ಲೇಖಿಸುತ್ತಿಲ್ಲ (ಆ ವಿಷಯ ಸಾಕು, ನನ್ನ ಚಿನ್ನ, ಸಾಕು!), ಆದರೆ ನಿಮ್ಮ ಮೇಲೆ ನನಗೆ ಅಕ್ಕರೆ ಇದೆ, ಹಾಗೆ ಅಕ್ಕರೆ ಹೊಂದಿರುವುದು ಅವಿವೇಕವೇನಲ್ಲ, ಎಂಬ ವಾಸ್ತವಾಂಶಕ್ಕೆ ಉಲ್ಲೇಖಿಸುತ್ತಿದ್ದೇನೆ. ನೀವು ಆ ವಿಷಯವನ್ನೇನೂ ತಿಳಿದಿಲ್ಲ, ನನ್ನ ಚಿನ್ನ. ನಿಮ್ಮನ್ನು ಪ್ರೀತಿಸದೆ ಇರಲು ನನಗೆ ಏಕೆ ಸಾಧ್ಯವಿಲ್ಲ ಎಂಬುದನ್ನು ನೀವು ನಿಜಕ್ಕೂ ತಿಳಿದರೆ, ನೀವು ಈಗ ಹೇಳಿರುವಂಥ ಮಾತುಗಳನ್ನು ಎಂದೂ ಹೇಳುತ್ತಲೇ ಇರಲಿಲ್ಲ. ಇದೀಗ ನಿಮ್ಮ ತಲೆಯಷ್ಟೆ ಮಾತನಾಡುತ್ತಿದೆ. ನಿಮ್ಮ ಹೃದಯ ತೀರ ಬೇರೆಯೇ ಕಥೆ ಹೇಳುವುದೆಂಬ ಖಾತರಿ ನನಗಿದೆ.

ಪ್ರಾಮಾಣಿಕವಾಗಿ ಹೇಳುವುದಾದರೆ, ನನ್ನ ಪ್ರಿಯೆ, ನನಗೂ ಆ ಸೈನ್ಯಾಧಿಕಾರಿಗಳಿಗೂ ಮಧ್ಯೆ ಸರಿಯಾಗಿ ಏನು ಜರುಗಿತು ಎಂಬುದನ್ನು ನಾನು ನೆನಪಿಗೆ ತಂದುಕೊಳ್ಳದಾಗಿದ್ದೇನೆ. ನಾನು ಮನೋಪೇಚಿನ ಸ್ಥಿತಿಯಲ್ಲಿದ್ದೆ ಎಂಬುದನ್ನಂತೂ ನಾನು ಹೇಳಬೇಕು, ನನ್ನ ಚಿನ್ನ. ಇಡೀ ಒಂದು ತಿಂಗಳು ನಾನು, ಹೀಗೆ ಹೇಳುವುದಾದರೆ, ಒಂದೇ ದಾರದಿಂದ ತೂಗಿ ಬಿದ್ದಿದ್ದೆ. ಅದೊಂದು ಕಠಿಣವಾದ ಪರಿಸ್ಥಿತಿಯಾಗಿತ್ತು. ನಾನು ವಿಷಯಗಳನ್ನು ನಿಮ್ಮಿಂದಲೂ ನನ್ನ ಅಕ್ಕಪಕ್ಕದವರಿಂದಲೂ ಮುಚ್ಚಿರಿಸಿದ್ದೆ. ಆದರೆ ನನ್ನ ಮನೆಯ ಯಜಮಾನಿ ಭಾರಿ ಗುಲ್ಲೆಬ್ಬಿಸಿದಳು. ನಾನು ಆ ಬಗೆಗೆ ಚಿಂತಿಸಲಿಲ್ಲ. ಮುದುಕಿ ಪಿಶಾಚಿ ತೃಪ್ತಿಯಾಗುವವರೆಗೂ ಕೂಗಿಕೊಳ್ಳಲಿ ಎಂದು ಸುಮ್ಮನಿದ್ದೆ. ಆದರೆ ಮೊದಲನೆಯದಾಗಿ, ಅದೊಂದು ಅವಮಾನವಾಗಿದ್ದಿತು. ಆಮೇಲೆ, ಹೇಗೋ ದೇವರಿಗೇ ಗೊತ್ತು, ಅವಳು ನಮ್ಮ ಪತ್ರಗಳ ಬಗೆಗೆ ತಿಳಿದುಬಿಟ್ಟಿದ್ದಳು. ಎಂಥ ಅವಾಚ್ಯ ಮಾತುಗಳನ್ನು ಹೇಳತೊಡಗಿದಳೆಂದರೆ ನಾನು ಕಿವಿ ಮುಚ್ಚಿಕೊಳ್ಳಬೇಕಾಯಿತು. ದುರದೃಷ್ಟವೆಂದರೆ ಇತರರು ಹಾಗೆ ಮಾಡಲಿಲ್ಲ. ಬದಲು ಕಿವಿ ನಿಮಿರಿಸಿ ಕೇಳಿಸಿಕೊಂಡರು. ಈಗಲೂ, ನನ್ನ ಪ್ರಿಯೆ, ನನಗೆ ಭಾರಿ ನಾಚಿಕೆಯಾಗುತ್ತೆ...

ಹೀಗೆ ನೋಡಿ, ವಾರೆಂಕಾ, ಒಂದಾದ ಮೇಲೊಂದರಂತೆ ಬಂದ ತೊಂದರೆಗಳು ನನ್ನನ್ನು ಬಹುಮಟ್ಟಿಗೆ ತೀರಿಸಿಬಿಟ್ಟಿದ್ದವು. ಆಮೇಲೆ, ಯಾರೋ ದುರಾತ್ಮ ನಿಮ್ಮ ಮನೆಗೆ ಬಂದು ತನ್ನ ಕುತ್ಸಿತ ಪ್ರಸ್ತಾಪವನ್ನು ನಿಮ್ಮ ಮುಂದಿಟ್ಟು ನಿಮ್ಮನ್ನು ಅವಮಾನ ಪಡಿಸಿದನೆಂಬ ಅತ್ಯಂತ ವಿಚಿತ್ರ ವಿಷಯವನ್ನು ಫಿದೋರಳಿಂದ ಕೇಳಿ ತಿಳಿದೆ. ಅದು ನನಗೆ ಉಂಟುಮಾಡಿದ ನೋವಿನಿಂದಲೇ, ನಿಮಗೆ ಇನ್ನೆಷ್ಟು ಗಾಢವಾಗಿ ನೋವು ಉಂಟುಮಾಡಿರಬೇಕೆಂಬುದನ್ನು ನಾನು ತೀರ್ಮಾನಿಸಬಲ್ಲವನಿದ್ದೆ. ಆಗಲೇ ನಾನು ನನ್ನ ಬುದ್ಧಿಸ್ಥಿಮಿತವನ್ನು ಕಳೆದುಕೊಂಡೆ – ಕೊನೆಯವರೆಗೂ ಜಾರಿ ಹೋದೆ. ಅಸಾಧ್ಯ ಕೋಪ ತಾಳಿ ನಾನು ಆ ಪಾಪಿಷ್ಠ ದುರಾತ್ಮನ ಬಳಿಗೆ ನೇರವಾಗಿ ಹೋಗಬಯಸಿ ಹೊರ ಓಡಿದೆ, ವಾರೆಂಕಾ. ನಾನು ಏನು ಮಾಡಲು ಹೊರಟಿದ್ದೆನೋ ಅದೇ ನನಗೆ ತಿಳಿದಿರಲಿಲ್ಲ. ಆದರೆ ನಿಮಗೆ ಅವಮಾನವಾದುದನ್ನು ನಾನು ಸಹಿಸದಾಗಿದ್ದೆ, ನನ್ನ ಪುಟ್ಟ ದೇವತೆ. ನನಗೆ ತುಂಬ ದುಃಖವಾಗಿತ್ತು. ಪರಿಸ್ಥಿತಿಯನ್ನು ಮತ್ತಷ್ಟು ಕೆಡಿಸಲೆಂಬಂತೆ ಮಳೆ ಬೇರೆ ಬರುತ್ತಿದ್ದಿತು. ಬೀದಿಯೆಲ್ಲ ಕೊಚ್ಚೆಯಾಗಿದ್ದು ಜಾರುತ್ತಿತ್ತು. ಎಲ್ಲವೂ ಉತ್ಸಾಹವನ್ನು ತೀರ ಕುಗ್ಗಿಸುವಂತಿದ್ದವು. ನಾನು ನನ್ನ ಮನಸ್ಸನ್ನು ಬದಲಿಸಿ ಹಿಂದಿರುಗುವವನಿದ್ದೆ – ಆಗ ನನ್ನ ಪತನ ಬಂದಿತು. ನಾನು ಯೆಮೆಲ್ಯಾನನ್ನು, ಅಂದರೆ, ಯೆಮೆಲ್ಯಾನ್ ಇಲ್ಯಿಚ್‌ನನ್ನು, ಕಂಡೆ. ಅವನೊಬ್ಬ ಕಾರಕೂನ. ಅಂದರೆ ವಜಾ ಮಾಡುವವರೆಗೂ ಕಾರಕೂನನಾಗಿದ್ದ. ಈಗ ಅವನು ತನ್ನ ಜೀವನೋಪಾಯಕ್ಕೆ ಏನು ಮಾಡುತ್ತಿದ್ದಾನೋ

ನಾನು ಹೇಳಲಾರೆ. ನಾವಿಬ್ಬರೂ ಒಟ್ಟಿಗೆ ಹೋದೆವು. ಆಮೇಲೆ – ನಿಮ್ಮ ಮಿತ್ರನ ದುರದೃಷ್ಟ ಹಾಗೂ ಪ್ರಲೋಭನಗಳ ಕಥೆಯನ್ನು ಓದುವುದರಲ್ಲಿ ನೀವು ಯಾವ ಸಂತೋಷ ಕಂಡುಕೊಳ್ಳುವಿರಿ, ವಾರೆಂಕಾ? ಮೂರನೆಯ ದಿನ ಸಂಜೆ ಯೆಮೆಲ್ಯಾನ್ ನನ್ನನ್ನು ಆ ಸೈನ್ಯಾಧಿಕಾರಿಯನ್ನು ಕಾಣುವಂತೆ ಪ್ರೇರಿಸಿದ. ನಾನು ಆತನ ವಿಳಾಸವನ್ನು ಅಂಗಳಪಾಲಕನಿಂದ ತಿಳಿದುಕೊಂಡೆ. ಆ ಸೈನ್ಯಾಧಿಕಾರಿಯ ವಿಷಯ ಹೇಳುವುದಾದರೆ, ನನ್ನ ಚಿನ್ನ, ಅವನಲ್ಲಿ ಏನೋ ತಪ್ಪಿದ್ದಿತೆಂದು ನಾನು ಬಹಳ ಹಿಂದೆಯೇ ಗಮನಿಸಿದ್ದೆ. ಅವನು ನಮ್ಮ ಮನೆಯಲ್ಲೇ ವಾಸಿಸುತ್ತಿದ್ದಾಗ ನಾನ ವನನ್ನು ಗಮನಿಸಿದ್ದೆ. ನಾನು ಒಂದು ಅಚಾತುರ್ಯದ ಅಪರಾಧವೆಸಗಿದೆನೆಂದು ಈಗ ನನಗೆ ಕಂಡುಬರುತ್ತೆ. ಏಕೆಂದರೆ, ನಿಜ ಹೇಳುವುದಾದರೆ, ನಾನು ಆ ಸೈನ್ಯಾಧಿಕಾರಿಯನ್ನು ಕಾಣಲು ಒಳ ಹೋದಾಗ ಸಂಪೂರ್ಣವಾಗಿ ಕುಡಿತದ ಅಮಲಿನಲ್ಲಿದ್ದೆ. ನನಗೆ ಒಂದು ಚೂರೂ ನೆನಪಿಲ್ಲ, ವಾರೆಂಕಾ. ಆ ಕೋಣೆ ಸೈನ್ಯಾಧಿಕಾರಿಗಳಿಂದ ತುಂಬಿತ್ತು ಎಂದಷ್ಟೆ ಜ್ಞಾಪಕವಿದೆ – ಅಥವಾ ಬಹುಶಃ ನಾನು ಒಬ್ಬರನ್ನೇ ಇಬ್ಬರನ್ನಾಗಿ ಕಾಣುತ್ತಿದ್ದೆನೇನೋ – ದೇವರಿಗೇ ಗೊತ್ತು. ನಾನು ಏನು ಹೇಳಿದೆನೋ ಅದೂ ನೆನಪಿಲ್ಲ. ಕೋಪದಲ್ಲಿ ಏನೇನನ್ನೋ ಒದರಿದೆ ಎಂಬುದನ್ನಷ್ಟೆ ಬಲ್ಲೆ. ಆಮೇಲೆ ಅವರು ನನ್ನನ್ನು ಕೋಣೆಯಿಂದ ಹೊರಗಟ್ಟಿದರು, ಮೆಟ್ಟಿಲುಗಳಿಂದ ಕೆಳಕ್ಕೆ ದಬ್ಬಿದರು ಕೂಡ. ಅಂದರೆ ದಬ್ಬಿದರು ಅಂತೇನೂ ಅಲ್ಲ, ಆದರೆ ಸುಮ್ಮನೆ ಮನೆಯಿಂದ ಹೊರಹಾಕಿದರು. ನಾನು ಮನೆಗೆ ಹೇಗೆ ಹಿಂದಿರುಗಿದೆ ಎಂಬುದನ್ನು ನೀವಾಗಲೇ ತಿಳಿದೇ ಇದ್ದೀರಿ. ಇಷ್ಟೇ ಹೇಳಬೇಕಾದುದು. ನನ್ನ ಘನತೆಗೆ ಘಾಸಿಯಾಯಿತು, ನಿಜ. ಆದರೆ ಇದನ್ನು ಯಾರೂ, ಅಂದರೆ ಹೊರಗಿನವರು ಯಾರೂ, ತಿಳಿದಿಲ್ಲ. ಅದನ್ನು ತಿಳಿದಿರುವವರು ನೀವೊಬ್ಬರೇ ಆದುದರಿಂದ, ಆ ಘಟನೆ ಜರುಗಲೇ ಇಲ್ಲ ಎಂದೇ ಇಟ್ಟುಕೊಳ್ಳಬಹುದು. ಅದು ಹಾಗಲ್ಲವೇ, ವಾರೆಂಕಾ? ನನಗೆ ಒಂದು ವಿಷಯ ಖಚಿತವಾಗಿ ತಿಳಿದಿದೆ. ಕಳೆದ ವರ್ಷ ಅಕ್ಸೇಂತಿ ಓಸಿಪವಿಚ್‌ರು ಪ್ಯೋತ್ರ್ ಪಿತ್ರೋವಿಚ್‌ರನ್ನು ಆಫೀಸಿನಲ್ಲಿ ಇದೇ ರೀತಿಯಲ್ಲಿ ಅವಮಾನಪಡಿಸಿದರು. ಆದರೆ ಅದನ್ನು ರಹಸ್ಯವಾಗಿ, ಅತಿ ರಹಸ್ಯವಾಗಿ, ಮಾಡಿದರು. ಅವರು ಮೊದಲು ಅವರನ್ನು ದ್ವಾರ ಪಾಲಕನ ಕೋಣೆಗೆ ಕರೆದರು – ನಾನು ಎಲ್ಲವನ್ನೂ ಬಾಗಿಲ ಸಂದಿಯಿಂದ ನೋಡಿದೆ – ಆಮೇಲೆ ಅಲ್ಲೇ ಸೇಡು ತೀರಿಸಿಕೊಂಡರು, ಆದರೆ ಗೌರವಾರ್ಹ ರೀತಿಯಲ್ಲಿ ಯಾರಿಗೂ ಕಾಣದ ಹಾಗೆ. ನನ್ನ ವಿಷಯ ಹೇಳುವುದಾದರೆ, ಅದೇನೂ ಪರವಾಗಿಲ್ಲ, ಏಕೆಂದರೆ ನಾನು ಈ ವಿಷಯವನ್ನು ಯಾರಿಗೂ ಹೇಳಿಲ್ಲ. ಪ್ಯೋತ್ರ್ ಪಿತ್ರೋವಿಚ್‌ರೂ ಅಕ್ಸೇಂತಿ ಓಸಿಪವಿಚ್‌ರೂ ಆಮೇಲೆ ತಮ್ಮ ಮಧ್ಯೆ ಏನೂ ಜರುಗಲೇ ಇಲ್ಲವೇನೋ ಅನ್ನುವಂತೆ ಹೊರಟುಹೋದರು. ಪ್ಯೋತ್ರ್ ಪಿತ್ರೋವಿಚ್‌ರು ತುಂಬ

ಘನವಾಗಿ ವರ್ತಿಸಿದರು, ಈ ವಿಷಯದ ಬಗೆಗೆ ಮೌನದಿಂದಿದ್ದರು. ಇದಾದ ಮೇಲೆ ಅವರು ಪರಸ್ಪರ ಕೈ ಕುಲುಕುತ್ತಿದ್ದಾರೆ, ಬಾಗಿ ವಂದಿಸುತ್ತಿದ್ದಾರೆ. ನಾನು ವಾದಿಸುವುದಿಲ್ಲ, ವಾರೆಂಕಾ, ವಾದಿಸುವ ಸಾಹಸ ಮಾಡುವುದಿಲ್ಲ. ನಾನು ಪತಿತನಾಗಿದ್ದೇನೆ, ತುಂಬ ಪತಿತನಾಗಿದ್ದೇನೆ. ಅತ್ಯಂತ ಕೀಳಾದುದೆಂದರೆ, ನಾನು ನನ್ನ ಅಭಿಪ್ರಾಯದಲ್ಲೇ ಪತಿತನಾಗಿದ್ದೇನೆ. ಇದನ್ನೆಲ್ಲ ವಿಧಿಯೇ ಮೊದಲೇ ಗೊತ್ತು ಮಾಡಿದ್ದಿರಬೇಕು. ವಿಧಿಯ ಕೈಯಿಂದ ಪಾರಾಗಲು ಯಾರಿಗೆ ತಾನೆ ಸಾಧ್ಯ? ಈಗ ನೋಡಿ ನಿಮಗೆ ನನ್ನ ದುರದೃಷ್ಟಗಳ ಹಾಗೂ ವಿಪತ್ತುಗಳ ಪೂರ್ಣ ಕಥೆ ತಿಳಿಯಿತಲ್ಲವೇ, ವಾರೆಂಕಾ. ಇವೇನೂ ಓದಲು ಅರ್ಹವಾದವುಗಳಲ್ಲ. ನನಗೆ ಸಾಕಷ್ಟು ಆರೋಗ್ಯವಿಲ್ಲ, ವಾರೆಂಕಾ. ನನ್ನ ಎಂದಿನ ಆನಂದದ ಚಿತ್ತ ಸ್ಥಿತಿಯ ನ್ನೆಲ್ಲ ಕಳೆದುಕೊಂಡಿದ್ದೇನೆ. ನಾನು ನಿಮ್ಮ ಬಗೆಗೆ ಗೌರವ, ಪ್ರೇಮ, ವಿಶ್ವಾಸ ಗಳನ್ನು ಇಟ್ಟುಕೊಂಡೇ ಇದ್ದೇನೆಂಬುದನ್ನು, ಪ್ರಿಯ ವರ್ವಾರ ಅಲೆಕ್ಸೇಯೆವ್ನ, ನಿಮಗೆ ಖಾತರಿ ಮಾಡಿ ತಿಳಿಸಲು ಅವಕಾಶ ನೀಡಿ.

ನಿಮ್ಮ ವಿಧೇಯ ಸೇವಕ,
ಮಕಾರ್ ದೇವುಷ್ಕಿನ್.

ಜುಲೈ 29

ನನ್ನ ಪ್ರಿಯ ಮಕಾರ್ ಅಲೆಕ್ಸೇಯೆವಿಚ್,

ನಿಮ್ಮೆರಡು ಪತ್ರಗಳನ್ನೂ ಓದಿ ಬಿಸುಸುಯ್ದೆ! ನನ್ನ ದೌರ್ಭಾಗ್ಯ ಮಿತ್ರ! ನೀವು ನಿಮ್ಮ ತೊಂದರೆಗಳ ಒಂದು ಭಾಗವನ್ನು ನನಗೆ ತಿಳಿಸದೆಯೆ ಇಟ್ಟು ಕೊಂಡಿದ್ದೀರ, ಇಲ್ಲವೇ.... ನಿಜಕ್ಕೂ, ಮಕಾರ್ ಅಲೆಕ್ಸೇಯೆವಿಚ್, ನಿಮ್ಮ ಪತ್ರ ಗಳಿಂದ ತೀರ್ಮಾನಿಸುವುದಾದಲ್ಲಿ, ನಿಮಗೇನೋ ಸ್ವಲ್ಪ ತೊಂದರೆ ಇದೆ, ಅದನ್ನು ನೀವು ನನಗೆ ತಿಳಿಸುತ್ತಿಲ್ಲ, ಎಂಬುದು ಸ್ಪಷ್ಟವಾಗುತ್ತೆ. ದಯವಿಟ್ಟು ಇಂದು ನನ್ನನ್ನು ಕಾಣಲು ತಪ್ಪದೆ ಬನ್ನಿ. ಇನ್ನೂ ಉತ್ತಮ, ಬಂದು ನಮ್ಮೊಂದಿಗೇ ಊಟ ಮಾಡಿ. ನೀವು ದಿನೇ ದಿನೇ ಹೇಗೆ ಜೀವಿಸುತ್ತಿದ್ದೀರ, ನಿಮ್ಮ ಆ ಮನೆಯ ಯಜಮಾನಿಯೊಂದಿಗೆ ಹೇಗೆ ಏಗುತ್ತಿದ್ದೀರ ಎಂಬುದನ್ನೂ ನೀವು ನನಗೆ ತಿಳಿಸಿಲ್ಲ. ಅದರ ಬಗೆಗೆ ನೀವು ಬೇಕಂತಲೇ ಮೌನದಿಂದಿರುವಂತಿದೆ. ನಮಸ್ಕಾರ, ನನ್ನ ಮಿತ್ರ. ಖಂಡಿತವಾಗಿಯೂ ಬನ್ನಿ. ನೀವು ಇನ್ನು ಮುಂದೆ ದಿನಾಗಲೂ ನಮ್ಮ ಮನೆಯಲ್ಲೇ ಊಟ ಮಾಡಿ. ಫಿದೋರ ಚೆನ್ನಾಗಿ ಅಡಿಗೆ ಮಾಡುತ್ತಾಳೆ. ನಮಸ್ಕಾರ.

ನಿಮ್ಮ
ವರ್ವಾರ ದೊಬ್ರುಸ್ಯೋಲೊವ.

ಪ್ರಿಯ ವರ್ವಾರ ಅಲೆಕ್ಸೇಯೆವ್ನ,

ಕಾರುಣ್ಯಕ್ಕೆ ಪ್ರತಿಯಾಗಿ ಕಾರುಣ್ಯವನ್ನು ನೀಡುವ ಅವಕಾಶವನ್ನು ದೇವರು ನಿಮಗೆ ಒದಗಿಸಿಕೊಟ್ಟುದಕ್ಕಾಗಿ ನೀವು ಸಂತೋಷಗೊಂಡಿದ್ದೀರಿ, ಪ್ರಿಯ ವಾರೆಂಕಾ. ನನಗೆ ಅವರ ಬಗೆಗೆ ಖಾತರಿ ಇದೆ. ಏಕೆಂದರೆ ನಿಮ್ಮ ಹೃದಯದ ಸತ್‌ಸ್ವಭಾವದ ಬಗೆಗೆ ನನಗೆ ಹೆಚ್ಚಿನ ಖಾತರಿ ಇದೆ. ನಾನು ನನ್ನ ಇಳಿವಯಸ್ಸಿನಲ್ಲಿ ಈ ಸತ್ ಸ್ವಭಾವದ ಗುರುತುಗಳನ್ನೂ ಅಳಿಸಿಹಾಕಿರುವುದಕ್ಕಾಗಿ ನನ್ನನ್ನು ಬಯ್ಯಬೇಡಿ, ಅಷ್ಟೆ. ನಾನೇನೂ ನಿಮ್ಮನ್ನು ನಿಂದಿಸುತ್ತಿಲ್ಲವೆನ್ನಿ. ಸರಿ, ಹಾಗಾದರೆ ಅದೊಂದು ಪಾಪಕೃತ್ಯವಾಗಿತ್ತೆಂದೇ ಇಟ್ಟುಕೊಳ್ಳಿ – ನೀವು ಒತ್ತಾಯಿಸುವುದಾದರೆ. ಆದರೆ ಅಂತಹ ಮಾತನ್ನು ನಿಮ್ಮಿಂದ ಕೇಳುವುದು, ನನ್ನ ಪುಟ್ಟ ಸ್ನೇಹಿತೆ, ನನ್ನ ಮನಸ್ಸಿಗೆ ನೋವುಂಟುಮಾಡುತ್ತದೆ. ನಾನು ಹೀಗೆ ಹೇಳುತ್ತಿದ್ದೇನೆಂದು ನೀವು ನನ್ನ ಮೇಲೆ ಕೋಪಗೊಳ್ಳಬೇಡಿ. ನನ್ನ ಹೃದಯ ಅಷ್ಟು ಕಸಿವಿಸಿಗೊಂಡಿದೆ. ಬಡ ಜನರು ವಿಚಿತ್ರ ಮನೋಭಾವದವರಾಗಿರುತ್ತಾರೆ. ಅದು ಅವರ ಹುಟ್ಟುಗುಣ ಅಂದು ಕೊಳ್ಳುತ್ತೇನೆ. ಇದಕ್ಕೂ ಮುನ್ನವೇ ನನಗೆ ಹೀಗನಿಸಿತ್ತು. ಬಡವನು ಯಾವಾಗಲೂ ಸಂಶಯಗ್ರಸ್ತನಾಗಿರುತ್ತಾನೆ. ತನ್ನ ಮುಂದೆ ಹೋಗುತ್ತಿರುವವರನ್ನೆಲ್ಲ ಸದಾ ಓರೆನೋಟದಿಂದ ನೋಡುತ್ತಲೇ ಇರುತ್ತಾನೆ, ಅವರೆಲ್ಲ ತನ್ನ ಬಗೆಗೇ ಮಾತನಾ ಡುತ್ತಿದ್ದಾರೆಯೇ, ತನ್ನ ಬಗೆಗೆ ಏನು ಹೇಳುತ್ತಿದ್ದಾರೆ, ಬಹುಶಃ "ಎಂಥ ಬಡವ ಈ ಮನುಷ್ಯ ! ಇವನು ಏನು ಯೋಚನೆ ಮಾಡುತ್ತಿದ್ದಾನೆ? ಈ ಕಡೆಯಿಂದಾ ಗಲೀ ಆ ಕಡೆಯಿಂದಾಗಲೀ ಎಂಥ ವಿಷಣ್ಣ ವ್ಯಕ್ತಿಯಾಗಿ ಕಾಣಿಸುತ್ತಾನೆ" ಎಂದು ಹೇಳುತ್ತಿದ್ದಾರೇನೋ, ಎಂದೇ ಭಾವಿಸುತ್ತಾನೆ. ಮತ್ತೆ, ಎಲ್ಲರೂ ತಿಳಿದಿರು ವಂತೆ, ಬಡ ಮನುಷ್ಯನು, ವಾರೆಂಕಾ, ಕಸಕ್ಕಿಂತ ಕಡೆ. ಯಾರೂ ಅವನನ್ನು ಗೌರವಿಸುವುದಿಲ್ಲ. ಈ ಬರಹಗಾರರು ಏನೇ ಬರೆದರೂ ಎಲ್ಲವೂ ಹಿಂದಿನಂತೆಯೇ ಮುಂದುವರಿಯುವುದು. ಏಕೆ? ಏಕೆಂದರೆ, ಬಡವನು ತನ್ನ ಅಂತರಂಗ ಬಹಿರಂಗ ಗಳನ್ನೆಲ್ಲ ಎಲ್ಲರಿಗೂ ಕಾಣುವಂತೆ ತೆರೆದಿರಿಸಿಬೇಕು ಎಂದು, ಅಂತರಾಳದಲ್ಲಿ ತನ್ನದೇ ಆದುದೇನನ್ನೂ, ತನಗೆ ಪವಿತ್ರವೆನಿಸುವುದೇನನ್ನೂ ಹೊಂದಿರಬಾರದು, ಎಂದು ಅವರು ನಿರೀಕ್ಷಿಸುತ್ತಾರೆ. ಇನ್ನು ಆತ್ಮಗೌರವದ ಬಗೆಗೆ ಹೇಳುವುದಾದರೆ, ಅದು ಅವನಿಗೆ ಹೇಳಿಸಿದ್ದಲ್ಲ! ಯೆಮೆಲ್ಯಾನ್ ಮೊನ್ನೆ ನನಗೆ ಒಂದು ವಿಷಯ ತಿಳಿಸಿದ. ಒಮ್ಮೆ ಅವನಿಗಾಗಿ ಚಂದಾ ಎತ್ತಲಾಯಿತಂತೆ. ಸಂಗ್ರಹಿಸಿದ ಪ್ರತಿ ಹತ್ತು ಕೊಪೆಕ್ ನಾಣ್ಯಕ್ಕೂ ಅವನು ಅಧಿಕೃತ ತನಿಖೆ ಎನ್ನುವಂಥ ಹಿಂಸೆಯನ್ನು ಅನು ಭವಿಸಬೇಕಾಯಿತಂತೆ. ಅವರು ಹಣವನ್ನು ದಾನವಾಗಿ ನೀಡುತ್ತಿದ್ದರೆಂದು ಭಾವಿ ಸಿದ್ದರು. ಆದರೆ ವಾಸ್ತವವಾಗಿ ಅವರು ಬಡ ಮನುಷ್ಯನ ಪ್ರದರ್ಶನಕ್ಕಾಗಿ ಹಣ

ನೀಡುತ್ತಿದ್ದರು. ದಾನಧರ್ಮಗಳನ್ನು ಈ ದಿನಗಳಲ್ಲಿ ವಿಚಿತ್ರವಾದ ರೀತಿಯಲ್ಲಿ ಹಂಚಲಾಗುತ್ತಿದೆ. ಅಥವಾ ಬಹುಶಃ ಅದು ಯಾವತ್ತೂ ಹಾಗಿದ್ದಿತೇನೋ. ಯಾರಿಗೆ ಗೊತ್ತು. ಅದನ್ನು ಹೇಗೆ ಮಾಡಬೇಕೆಂಬುದು ಅವರಿಗೆ ಗೊತ್ತಿಲ್ಲದಿರ ಬಹುದು ಅಥವಾ ಅವರು ಅದನ್ನು ಅತಿಹೆಚ್ಚಾಗಿಯೇ ತಿಳಿದಿದ್ದಾರೇನೋ. ಹೀಗಿದೆ ನೋಡಿ ಪರಿಸ್ಥಿತಿ, ನನ್ನ ಚಿನ್ನ. ಇತರ ವಿಷಯಗಳನ್ನು ನಾವು ಹೆಚ್ಚಾಗಿ ತಿಳಿದಿಲ್ಲದಿರಬಹುದು, ಆದರೆ ಈ ವಿಷಯವನ್ನಂತೂ ನಾವು ನಮಗೆ ಒಳಿತಾ ಗುವುದಕ್ಕಿಂತ ಹೆಚ್ಚು ಪ್ರಮಾಣದಲ್ಲೇ ಅರಿತಿದ್ದೇವೆ. ಏಕೆ? ಏಕೆಂದರೆ, ಅನುಭವ ದಿಂದಾಗಿ. ಕೆಫೆಗೆ ಹೋಗುತ್ತ ಸಜ್ಜನನೊಬ್ಬ, "ಆ ಕೊಳಕು ಕಾರಕೂನ ಇವತ್ತು ಏನು ಊಟ ಮಾಡುತ್ತಾನೋ? ನಾನು sautée papilliotte ತಿನ್ನುತ್ತೇನೆ. ಅವನು ಬಹುಶಃ ಬೆಣ್ಣೆ ಇಲ್ಲದ ಅಂಬಲಿ ಕುಡಿಯಬಹುದು", ಎಂದು ತನ್ನಲ್ಲಿ ತಾನೇ ಹೇಳಿಕೊಳ್ಳುವುದು ಖಂಡಿತ, ಎಂಬ ಕಾರಣದಿಂದ. ನಾನು ಏನು ತಿನ್ನು ತ್ತೇನೆ ಎಂಬ ಬಗೆಗೆ ಅವನಿಗೇಕೆ ಚಿಂತೆ? ಅಂಥ ಸಜ್ಜನರು ನಿಜಕ್ಕೂ ಇದ್ದಾರೆ, ವಾರೆಂಕಾ. ಅವರೇ ಆ ಹೊಲಸು ಗೀಚುವವರು. ಅವರು ಸದಾ ನಿಮ್ಮನ್ನೇ ಗಮನಿಸುತ್ತಿರುತ್ತಾರೆ. ನೀವು ನಿಮ್ಮ ಪಾದವನ್ನು ಭದ್ರವಾಗಿ ಇಡುತ್ತೀರಾ ಅಥವಾ ಅಂಜುತ್ತಂಜುತ್ತ ಇಡುತ್ತೀರಾ, ಇಂಥ – ಇಂಥ ಇಲಾಖೆಯಲ್ಲಿರುವ ಯಾವುದೋ ಬಡ ಕಾರಕೂನನ ಕಾಲು ಬೆರಳುಗಳು ಹರಿದ ಬೂಟುಗಳಿಂದ ಹೊರ ಚಾಚಿ ಕೊಂಡಿವೆಯೋ ಇಲ್ಲವೇ, ಅಥವಾ ಅವನ ಮೊಣಕೈ ಹೊರಕ್ಕೆ ಕಾಣಿಸಿಕೊಳ್ಳು ತ್ತಿದೆಯೋ ಇಲ್ಲವೇ, ಎಂಬುದನ್ನೆಲ್ಲ ಗಮನಿಸಿ ಅವನು ಮನೆಗೆ ಹೋಗಿ ಎಲ್ಲವನ್ನೂ ಬರೆದಿಡುತ್ತಾನೆ, ತನ್ನ ಈ ಕಳಪೆ ಬರಹವನ್ನು ಮುದ್ರಿಸಿ ಪ್ರಕಟಿಸುತ್ತಾನೆ. ಈಗ ನೀವೇ ಹೇಳಿ ಪುಣ್ಯಾತ್ಮರೇ, ನನ್ನ ಮೊಣಕೈ ಹೊರಕ್ಕೆ ಕಾಣಿಸಿಕೊಳ್ಳುತ್ತಿದ್ದರೆ, ಅದರಿಂದ ನಿಮಗೇನಾಯಿತು? ನನ್ನ ಈ ಒರಟುತನಕ್ಕೆ ಕ್ಷಮಿಸಿ, ವಾರೆಂಕಾ. ಆದರೆ ಈ ವಿಷಯದಲ್ಲಿ ಬಡ ವ್ಯಕ್ತಿಯೊಬ್ಬ ಒಬ್ಬ ಕನ್ಯೆಯಷ್ಟೆ ನಾಚಿಕೆ ಹೊಂದಿರುತ್ತಾನೆ. ಯಾವುದೇ ಕನ್ಯೆ ಹೊರಗಿನವರ ಮುಂದೆ ಬಟ್ಟೆ ಕಳಚುವುದಿಲ್ಲ – ಕ್ಷಮಿಸಿ, ನನ್ನ ಒರಟು ಮಾತಿಗೆ – ಅದೇ ರೀತಿ ಬಡವನೊಬ್ಬ ಯಾರೂ ತನ್ನ ನಾಯಿಗೂಡಿ ನೊಳಕ್ಕೆ, ತನ್ನ ಕುಟುಂಬ ವ್ಯವಹಾರಗಳೊಳಕ್ಕೆ ಕೊಳಕು ಮೂತಿ ಚಾಚುವುದನ್ನು ಇಷ್ಟಪಡುವುದಿಲ್ಲ. ಅದೇ ವಾಸ್ತವವಾಗಿ ಇಲ್ಲಿನ ತೊಂದರೆ! ಈಗ, ವಾರೆಂಕಾ, ನನ್ನ ಒಳ್ಳೆಯ ಹೆಸರಿಗೆ, ಆತ್ಮಗೌರವಕ್ಕೆ ಕಳಂಕ ತಂದ ನನ್ನ ಶತ್ರುಗಳ ಪಕ್ಷ ನೀವು ವಹಿಸಿದ್ದೀರೇನೋ ಎಂಬಂತೆ ನಿಮ್ಮಿಂದಲೇ ನಾನು ಘಾಸಿಗೊಳ್ಳುವಂತಾಗುವುದು ಎಂತಹ ದುಃಖದ ಸಂಗತಿ.

ಆಫೀಸಿನಲ್ಲೂ ನಾನು ತುಂಬ ಸಣ್ಣ ಆಕೃತಿಗೆ ಇಳಿದಿರುವ ಭಾವನೆಯೊಂದಿಗೆ, ಅಂದಗೆಟ್ಟ ಗುಬ್ಬಚ್ಚಿಮರಿಯಂತೆ, ಕುಳಿತಿದ್ದೆ. ಅದರ ಬಗೆಗೆ ಯೋಚಿಸಿದರೇ ನಾನು

ನಾಚಿಕೆಯಿಂದ ಬೆಂದು ಹೋಗುತ್ತೇನೆ. ನನ್ನ ಅಂಗಿ ತೋಳಿನಿಂದ ಮೊಣಕೈ ಹೊರ ಕಾಣಿಸಿಕೊಳ್ಳುತ್ತಿದ್ದರೆ ಅಥವಾ ನನ್ನ ಕೋಟಿನ ಗುಂಡಿಗಳು ಗಂಟೆಗಳಂತೆ ದಾರ ದಿಂದ ಜೋತು ಬಿದ್ದಿದ್ದರೆ, ನಾನು ನಾಚಿಕೆ ಪಡದೆ ಇರುವುದು ಹೇಗೆ ಸಾಧ್ಯ? ನನ್ನ ದುರದೃಷ್ಟಕ್ಕೆ ಇಂದು ನನ್ನ ಸ್ಥಿತಿ ಎಂದಿಗಿಂತ ಹೆಚ್ಚು ಕೆಟ್ಟದಾಗಿತ್ತು. ಯಾರನ್ನೇ ಆಗಲಿ ನಿರುತ್ಸಾಹಗೊಳಿಸುವಂಥ ಸ್ಥಿತಿ ಅದು. ಸ್ತೆಪಾನ್ ಕಾರ್ಲೊವಿಚ್‌ರೂ ನನ್ನಲ್ಲಿ ಏನನ್ನೋ ಗಮನಿಸಿದರು. ಯಾವುದೋ ಕೆಲಸದ ವಿಷಯ ಮಾತನಾಡುತ್ತ, ಇದ್ದಕ್ಕಿದ್ದಂತೆ ಮಾತು ನಿಲ್ಲಿಸಿ ಹೇಳಿದರು: "ಎಂಥ ವ್ಯಕ್ತಿ ನೀವು ಮಕಾರ್ ಅಲೆಕ್ಸೇಯೆವಿಚ್‌ರವರೇ !" ಹಾಗೆಂದು ತಕ್ಷಣವೇ ಮಾತು ನಿಲ್ಲಿಸಿದರು. ನಾನು ಉಳಿದುದನ್ನು ಊಹಿಸಿಕೊಂಡೆ. ಎಷ್ಟು ನಾಚಿದೆನೆಂದರೆ ನನ್ನ ಬೊಕ್ಕ ತಲೆಯೂ ಉರಿಯುವಂತಾಯಿತು. ಅದೇನೂ ಅಂಥ ದೊಡ್ಡ ವಿಷಯವಲ್ಲ ಎನ್ನಿ. ಆದರೂ ಮನಸ್ಸನ್ನು ಬೇಸರಗೊಳಿಸುವಂತಹುದೇ. ಅವರಿಗೂ ಸುಳಿವು ಸಿಕ್ಕಿರಬಹುದೇ? ಸಿಕ್ಕಿದ್ದರೆ, ದೇವರೇ ಗತಿ! ನಿಜ ಹೇಳುವುದಾದರೆ, ನಾನು ಒಬ್ಬ ಮನುಷ್ಯನನ್ನು ತುಂಬ ಸಂದೇಹಿಸುತ್ತಿದ್ದೇನೆ. ಹೊಲಸು ಕಥೆ ಗೀಚುವವರಿಗೆ ಇವೆಲ್ಲ ಏನೂ ಅಲ್ಲ. ಆ ದಗಾಕೋರರು ನಿಮ್ಮ ಖಾಸಗಿ ಜೀವನವನ್ನು ಒಂದು ಕೊಪೆಕ್ಕಿಗೇ ಮಾರುತ್ತಾರೆ. ಅವರಿಗೆ ಪವಿತ್ರವೆಂಬುದು ಯಾವುದೂ ಇಲ್ಲ.

ನನಗೆ ಗೊತ್ತು ಇದು ಯಾರ ಕೈವಾಡವೆಂದು. ರತಜ್ಯಾಯೆವ್‌ನದೇ. ಬೇರಾರದೂ ಅಲ್ಲ. ಅವನಿಗೆ ನಮ್ಮ ಆಫೀಸಿನಲ್ಲಿ ಯಾರದೋ ಪರಿಚಯವಿದೆ. ಅವರಿಗೆ ಅವನು ಎಲ್ಲವನ್ನೂ, ಸ್ವಲ್ಪ ಉಪ್ಪು ಖಾರ ಸೇರಿಸಿಯೂ, ಹೇಳಿರ ಬೇಕು. ಅಥವಾ ಬಹುಶಃ ಅವನು ತನ್ನ ಇಲಾಖೆಯಲ್ಲೇ ಅದರ ಬಗೆಗೆ ಮಾತ ನಾಡಿರಬಹುದು. ಅದು ನಮ್ಮ ಆಫೀಸಿಗೂ ಪ್ರವಿಸಿಕೊಂಡು ಬಂದಿರಬೇಕು. ನಮ್ಮ ಮನೆಯಲ್ಲಿ ನನ್ನ ಅಕ್ಕಪಕ್ಕದವರೆಲ್ಲ, ಎಲ್ಲರೂ, ಅದರ ಬಗೆಗೆ ಎಲ್ಲವನ್ನೂ ತಿಳಿ ದಿದ್ದಾರೆ. ಅವರು ನಿಮ್ಮ ಕಿಟಕಿಯ ಕಡೆಗೇ ಬೊಟ್ಟು ಮಾಡಿ ತೋರಿಸುತ್ತಿದ್ದು ದನ್ನೂ ನಾನು ಕಂಡೆ. ನಿನ್ನೆ ನಾನು ನಿಮ್ಮ ಮನೆಗೆ ಊಟಕ್ಕೆಂದು ಬರುತ್ತಿದ್ದಾಗ ಅವರೆಲ್ಲ ಕಿಟಕಿಗಳಿಂದ ತಲೆ ಹೊರಹಾಕಿ ನೋಡಿದರು. ಈ ಗೊಡ್ಡು ಮುದುಕ ಪುಟ್ಟ ಕೂಸಿನ ಜೊತೆಗೆ ಸರಸವಾಡುತ್ತಿದ್ದಾನಲ್ಲ, ಎಂದು ನಮ್ಮ ಮನೆಯ ಯಜಮಾನಿ ಹೇಳಿ ನಿಮ್ಮನ್ನು ಯಾವುದೋ ಕೆಟ್ಟ ಹೆಸರಿನಿಂದಲೂ ಕರೆದಳು. ಆದರೆ, ನಮ್ಮಿಬ್ಬರನ್ನೂ ತನ್ನ ಪುಸ್ತಕದಲ್ಲಿ ಪಾತ್ರಗಳನ್ನಾಗಿ ಮಾಡಿ ನಮ್ಮನ್ನು ಸೂಕ್ಷ್ಮ ವ್ಯಂಗ್ಯದೊಂದಿಗೆ ವಿವರಿಸುವ ರತಜ್ಯಾಯೆವ್‌ನ ಕುತ್ಸಿತ ಉದ್ದೇಶದೊಂದಿಗೆ ಹೋಲಿಸಿದಲ್ಲಿ, ಇದೆಲ್ಲ ಏನು ಮಹಾ? ಅವನೂ ಹಾಗೆಯೇ ಹೇಳಿದ್ದಾನೆ. ಕೆಲವು ಸಜ್ಜನರೂ ನನಗೆ ಇದೆಲ್ಲವನ್ನೂ ತಿಳಿಸಿದ್ದಾರೆ. ನನಗೆ ಏನು ಮಾಡಬೇಕೋ ಗೊತ್ತಾಗುತ್ತಿಲ್ಲ, ಪ್ರಿಯೆ. ನಾವೀಗ ಏನು ಮಾಡೋಣ? ದೇವರಿಗೇ ನಾವು ಕೋಪ

ಬರಿಸಿದ್ದೇವೆ. ನನ್ನ ದೇವತೆ. ಕಾಲ ಕಳೆಯಲೆಂದು ನೀವು ನನಗೆ ಪುಸ್ತಕ ಕಳುಹಿಸಿ, ಕೊಡುವುದಾಗಿ ಮಾತು ಕೊಟ್ಟಿದ್ದಿರಿ. ಪುಸ್ತಕದ ಚಿಂತೆ ಬೇಡ. ಪುಸ್ತಕವಾದರೂ ಏನು? ಒಂದಿಷ್ಟು ಗೊಡ್ಡು ಹರಟೆ, ಅಷ್ಟೆ! ಕಾದಂಬರಿಯೂ ಅಷ್ಟೆ, ಎಲ್ಲ ಜಳ್ಳು, ಸೋಮಾರಿಗಳ ಮನರಂಜನೆಗಾಗಿ ಬರೆದುದು! ದೀರ್ಘ ಅನುಭವದಿಂದ ನನಗಿದು ತಿಳಿಯದೆ? ಅವರು ಷೇಕ್ಸ್‌ಪಿಯರ್‌ನ ಮಾತೆತ್ತಿ "ನೋಡಿ, ಸಾಹಿತ್ಯ ದಲ್ಲಿ ಷೇಕ್ಸ್‌ಪಿಯರ್ ಇಲ್ಲವೇ" ಎಂದು ಹೇಳಿದರೂ, ಅದೆಲ್ಲ ಉಳಿದೆಲ್ಲವು ಗಳಂತೆಯೇ ಶುದ್ಧ ಕಳಪೆ, ಜಳ್ಳು, ಎಂದು ನೀವು ಖಾತರಿಯಿಂದಿರಬಹುದು. ಅವೆಲ್ಲ ಅರ್ಥಹೀನವಾದವು, ಅವಹೇಳನ ಮಾಡುವಂಥವು, ಲೇವಡಿ ಬೈಗುಳ ಬರಹಗಳಿಗಷ್ಟೆ ಸರಿಯಾದವು.

ನಿಮ್ಮ,
ಮಕಾರ್ ದೇವುಷ್ಕಿನ್.

ಆಗಸ್ಟ್ 2

ನನ್ನ ಪ್ರಿಯ ಮಕಾರ್ ಅಲೆಕ್ಸೇಯೆವಿಚ್,

ಯಾವುದರ ಬಗೆಗೂ ನೀವು ತುಂಬ ಕ್ಲೇಶಪಡದಿರಿ. ದೇವರ ದಯದಿಂದ ಎಲ್ಲವೂ ಸರಿ ಹೋಗುವುದು. ಫಿದೋರ ಳು ನಮ್ಮಿಬ್ಬರಿಗೂ ಬೇಕಾದಷ್ಟು ಕೆಲಸ ಪಡೆದುಕೊಂಡು ಬಂದಿದ್ದಾಳೆ. ನಾವಾಗಲೇ ಕೆಲಸವನ್ನು ದೃಢ ಸಂಕಲ್ಪದಿಂದ ಪ್ರಾರಂಭಿಸಿದ್ದೇವೆ. ಬಹುಶಃ ನಾವು ಎಲ್ಲವನ್ನೂ ಸರಿಪಡಿಸಬಹುದು. ನನ್ನ ಈಚಿನ ತೊಂದರೆಗಳೆಲ್ಲ ಹೇಗೋ ಆನ್ನ ಫ್ಯೋದೊರೊವ್ನಳೊಂದಿಗೆ ಸಂಬಂಧಿಸಿದವೆಂದೇ ಫಿದೋರ ಸಂದೇಹಿಸುತ್ತಾಳೆ. ಆದರೆ ಅದರಲ್ಲಿ ವ್ಯತ್ಯಾಸವೇನು? ಇಂದು ಏಕೋ ವಿಚಿತ್ರವೆನ್ನುವಂತೆ ನಾನು ಆನಂದದಿಂದಿದ್ದೇನೆ. ನೀವು ಮತ್ತೆ ಸಾಲ ಮಾಡಲು ಉದ್ದೇಶಿಸಿದ್ದೀರೆಂದು ನಾನು ತಿಳಿದೆ. ದಮ್ಮಯ್ಯ, ಬೇಡಿ! ಸಾಲ ಹಿಂದಿರುಗಿಸಲು ನಿಮಗೆ ತುಂಬ ತೊಂದರೆಯಾಗುತ್ತೆ. ನೀವು ನಮ್ಮ ಅತ್ಯಂತ ನಿಕಟ ಮಿತ್ರರು ಎಂಬುದನ್ನು ನೆನಪಿನಲ್ಲಿಡಿ, ನಮ್ಮನ್ನು ಹೆಚ್ಚು ಆಗಾಗ್ಗೆ ಕಾಣ ಬನ್ನಿ. ನಿಮ್ಮ ಮನೆಯ ಯಜಮಾನಿಯ ಕಡೆಗೆ ಗಮನ ನೀಡಬೇಡಿ. ಇನ್ನು ನಿಮ್ಮ ಉಳಿದ ಶತ್ರುಗಳ ಹಾಗೂ ಕೇಡು ಕೋರುವವರ ಬಗೆಗೆ ಹೇಳುವುದಾದರೆ, ನಿಮ್ಮ ಅಂಜಿಕೆ ಗಳೆಲ್ಲ ಕಾಲ್ಪನಿಕವಾದವೆಂಬ ಖಾತರಿ ನನಗಿದೆ, ಮಕಾರ್ ಅಲೆಕ್ಸೇಯೆವಿಚ್. ನಿಮ್ಮ ಬರಹದ ರೀತಿಯಲ್ಲಿ ತೀರ ವ್ಯತ್ಯಾಸವಿದೆ ಎಂದು ನಾನು ಹೇಳಿದ್ದೆ. ಈಗಲೂ ಅದು ಹಾಗೆಯೇ ಇದೆ. ನಮಸ್ಕಾರ. ಮತ್ತೆ ಭೇಟಿಯಾಗುವವರೆಗೆ. ನೀವು ಕ್ಷಿಪ್ರ ದಲ್ಲೇ ನಮ್ಮಲ್ಲಿಗೆ ಭೇಟಿಕೊಡುತ್ತೀರೆಂಬ ನಿರೀಕ್ಷೆಯೊಂದಿಗೆ,

ನಿಮ್ಮ,
ವ. ದೊ.

ವರ್ವಾರ ಅಲೆಕ್ಸೇಯೆವ್ನ, ನನ್ನ ಪುಟ್ಟ ದೇವತೆ,

ನನ್ನ ಆಸೆಗಳು ಮತ್ತೆ ಹುಟ್ಟಿಕೊಳ್ಳುತ್ತಿವೆ ಎಂದು ನನ್ನ ಅತ್ಯಂತ ಪ್ರೀತಿಪಾತ್ರರಾದ ನಿಮಗೆ ತಿಳಿಸಲು ನಾನು ಅವಸರಿಸುತ್ತೇನೆ. ಆದರೆ ನಾನು ಸಾಲ ಮಾಡಕೂಡದೆಂದು ನೀವು ಹೇಗೆ ಹೇಳುತ್ತೀರಿ, ನನ್ನ ದೇವತೆ? ಅದು ತೀರ ಅಸಾಧ್ಯ, ನನ್ನ ಮುದ್ದು. ನಾನಿಲ್ಲಿ ಕೈಯಲ್ಲಿ ಕಾಸಿಲ್ಲದೆ ಇದ್ದಾಗ ನಿಮಗೆ ಏನಾದರೂ ಆದರೆ? ದೇವರು ಹಾಗಾಗುವುದನ್ನು ತಪ್ಪಿಸಲಿ. ನೀವು ತುಂಬ ನಿಶ್ಶಕ್ತರಾಗಿದ್ದೀರ. ಆದ್ದರಿಂದಲೇ ನಾನು ಹೇಳುತ್ತೇನೆ – ನಾನು ಸಾಲ ಎತ್ತುವುದು ತುಂಬ ಅವಶ್ಯ. ಅದಿರಲಿ, ನನ್ನ ಪತ್ರವನ್ನು ಮುಂದುವರಿಸುತ್ತೇನೆ:

ಮೊದಲು ನಿಮಗೆ ಹೇಳಬೇಕು, ವರ್ವಾರ ಅಲೆಕ್ಸೇಯೆವ್ನ – ನಾನು ಆಫೀಸಿನಲ್ಲಿ ಯೆಮೆಲ್ಯಾನ್ ಇವಾನೊವಿಚ್‌ರ ಪಕ್ಕದಲ್ಲಿ ಕುಳಿತುಕೊಳ್ಳುತ್ತೇನೆ. ನಾನು ಹಿಂದೆ ತಿಳಿಸಿದ ಯೆಮೆಲ್ಯಾನ್ ಇವರಲ್ಲ. ಇವರೊಬ್ಬ ಟಿಟ್ಯುಲರ್ ಕೌನ್ಸಿಲರ್.* ನನ್ನಂತೆಯೇ. ಅವರೂ ನಾನೂ ಬಹುಶಃ ಈ ಆಫೀಸಿನಲ್ಲಿ ಅತ್ಯಂತ ಹಳೆಯ ನೌಕರರು. ಅವರೊಬ್ಬ ಕರುಣಾಳು ನಿಸ್ವಾರ್ಥ ವ್ಯಕ್ತಿ. ಆದರೆ ಎಂದೂ ಏನನ್ನೂ ಹೇಳುವುದೇ ಇಲ್ಲ. ಗಗ್ಗನಂತೆ ಕಾಣುತ್ತಾರೆ. ಆದರೂ ಅವರು ದಕ್ಷ ಕೆಲಸಗಾರರು. ಅವರ ಕೈಬರಹ ಶುದ್ಧ ತಾಮ್ರಫಲಕ! ನಿಜ ಹೇಳುವುದಾದರೆ, ನನ್ನದಕ್ಕಿಂತ ಕೀಳೇನಲ್ಲ. ಒಟ್ಟಿನಲ್ಲಿ ಅವರೊಬ್ಬ ಯೋಗ್ಯ ಮನುಷ್ಯ. ನಾವೆಂದೂ ಆಪ್ತ ಮಿತ್ರರಾಗಿಲ್ಲ. ನಮ್ಮ ಸ್ನೇಹ ಕೇವಲ ಕುಶಲ ಪ್ರಶ್ನೆಗಷ್ಟೆ ಸೀಮಿತ. ಸಹಜವಾಗಿಯೇ, ನನಗೆ ಚಾಕು ಬೇಕಾದಾಗಲೆಲ್ಲ, "ದಯವಿಟ್ಟು ನಿಮ್ಮ ಚಾಕುವನ್ನು ಸ್ವಲ್ಪ ಎರವಲು ಕೊಡುವಿರಾ, ಯೆಮೆಲ್ಯಾನ್ ಇವಾನೊವಿಚ್?" ಎಂದು, ಇದೇ ಧಾಟಿಯಲ್ಲೇ ಕೇಳುತ್ತೇನೆ... ಆದರೆ ಇಂದು ಅವರು ಇದ್ದಕ್ಕಿದ್ದಂತೆ ನನಗೆ ಹೇಳಿದರು: "ಏನೋ ಚಿಂತೆಯಲ್ಲಿ ಮುಳುಗಿರುವಂತಿದೆಯಲ್ಲ, ಮಕಾರ್ ಅಲೆಕ್ಸೇಯೆವಿಚ್." ಅವರು ನನ್ನಲ್ಲಿ ನಿಜಕ್ಕೂ ಸಹಾನುಭೂತಿ ತೋರಿ ಈ ಪ್ರಶ್ನೆ ಕೇಳಿದ್ದರೆಂದು ನಾನು ತಿಳಿಯಬಲ್ಲವನಿದ್ದೆ. ಅವರಿಗೆ ಎಲ್ಲವನ್ನೂ ಹೇಳಿದೆ. ಅಂದರೆ ಎಲ್ಲವನ್ನೂ ಅಲ್ಲ. ಅದಕ್ಕೆ ನನ್ನಲ್ಲಿ ಧೈರ್ಯವಿರಲಿಲ್ಲ. ಆದರೆ ಸುಮ್ಮನೆ ನನ್ನ ಹಣಕಾಸಿನ ಪರಿಸ್ಥಿತಿ ಸ್ವಲ್ಪ ಬಿಗಡಾಯಿಸಿದೆ, ಎಂದು ಅಂತಹುದೇ ಎಲ್ಲ ವಿಷಯ ತಿಳಿಸಿದೆ. "ಅಯ್ಯೋ, ನನ್ನ ಪ್ರಿಯ ಮಿತ್ರರೇ, ಯಾಕೆ ಇಷ್ಟು ಕಷ್ಟಪಡುತ್ತಿದ್ದೀರಿ" ಅನ್ನುತ್ತಾರೆ ಯೆಮೆಲ್ಯಾನ್ ಇವಾನೊವಿಚ್. "ನೀವು ಪ್ಯೋತ್ರ್ ಪಿತ್ರೋವಿಚ್‌ರಿಂದ ಏಕೆ ಸಾಲ

*ಆ ಕಾಲದಲ್ಲಿದ್ದ ಹದಿನಾಲ್ಕು ಅಂತಸ್ತುಗಳ ಅಧಿಕಾರಶಾಹಿ ಪದ್ಧತಿಯಲ್ಲಿ ಕೆಳ ದರ್ಜೆಗಳಲ್ಲೊಂದು.– ಸಂ.

ತೆಗೆದುಕೊಳ್ಳಬಾರದು? ಅವರು ಬಡ್ಡಿಯ ಮೇಲೆ ಹಣ ಕೊಡುತ್ತಾರೆ. ನಾನೇ ಎಷ್ಟೋ ಸಾರಿ ಅವರಿಂದ ಸಾಲ ತಂದಿದ್ದೇನೆ. ಬಡ್ಡಿಯೂ ನ್ಯಾಯವಾದುದು, ದುಬಾರಿಯೇನಲ್ಲ." ಅದನ್ನು ಕೇಳಿದಾಗ ನನ್ನ ಹೃದಯ ಹೇಗೆ ಚಿಮ್ಮಿತು, ವಾರೆಂಕಾ. ದೇವರು ಬಹುಶಃ ನನಗೆ ಸಾಲ ಕೊಡುವಂತೆ ಒತ್ತಾಯಿಸಿ ಪ್ಯೋತ್ರ್ ಪಿತ್ರೊವಿಚ್‌ರ ಕಿವಿಯಲ್ಲಿ ಹೇಳಿರುವನೆಂದುಕೊಂಡಿದ್ದೇನೆ. ಮನೆಯ ಯಜಮಾನಿಗೆ ಎಷ್ಟು ಕೊಡಬೇಕು, ನಿಮ್ಮ ಸಹಾಯಕ್ಕೆ ಎಷ್ಟು ಕೊಡಬೇಕು, ನನಗೇ ಅವಶ್ಯವಾದ ಸಾಮಾನುಗಳಿಗಾಗಿ ಎಷ್ಟು ತೆಗೆದಿರಿಸಬೇಕು, ಎಂದು ನಾನಾಗಲೇ ಲೆಕ್ಕಹಾಕಿದ್ದೇನೆ, ನಿಮಗೇ ತಿಳಿದಿರುವಂತೆ, ನನ್ನ ವೇಷ ದಿಗಿಲು ಹುಟ್ಟಿಸುವಂತಿದೆ. ಈ ವೇಷದಲ್ಲಿ ಆಫೀಸಿನಲ್ಲಿ ಕುಳಿತುಕೊಳ್ಳುವುದಕ್ಕೆ ನನ್ನ ಮೈ ಜುಮ್ಮೆನ್ನುತ್ತೆ. ಅಲ್ಲದೆ ನನ್ನ ಪೀಡಕರೂ ನನ್ನನ್ನು ಹಾಸ್ಯ ಮಾಡುತ್ತಿದ್ದಾರೆ – ದೇವರು ಅವರನ್ನು ಕ್ಷಮಿಸಲಿ. ದೊಡ್ಡ ಸಾಹೇಬರೂ ಕೆಲವು ವೇಳೆ ನಮ್ಮ ಮೇಜಿನ ಮುಂದೇ ಹೋಗುತ್ತಾರೆ. ನನ್ನ ವೇಷ ಹೇಗಿದೆ ಅನ್ನುವುದನ್ನು ಅವರೂ ಗಮನಿಸಿಬಿಟ್ಟರೆ – ಹಾಗಾಗದಂತೆ ದೇವರು ನನ್ನ ಮೇಲೆ ದಯೆ ತೋರಲಿ. ಒಪ್ಪ ಓರಣಗಳ ವಿಷಯ ದಲ್ಲಿ ಅವರು ಕಟ್ಟುನಿಟ್ಟು. ಅವರು ಗಮನಿಸಿ ಏನೂ ಹೇಳದೆ ಹೋದರೂ ನಾನೇ ಅವಮಾನದಿಂದ ಸಾಯುತ್ತೇನಷ್ಟೆ, ಆದ್ದರಿಂದಲೇ ನಾನು ಕೊನೆಗೆ ನನ್ನ ಮಾನ ಮರ್ಯಾದೆಗಳನ್ನೆಲ್ಲ ನನ್ನ ಹರಿದ ಜೇಬುಗಳಲ್ಲಿ ಅಡಗಿಸಿ ಇರಿಸಿ ಪ್ಯೋತ್ರ್ ಪಿತ್ರೋವಿಚ್‌ರ ಬಳಿಗೆ, ಜೀವಂತವಾಗಿದ್ದರೂ ಅಂಜಿಕೆಯಿಂದ ಸತ್ತವನಂತಾಗಿ, ಆದರೆ ನಿರೀಕ್ಷೆಯಿಂದ ತುಂಬಿ, ಹೋಗಬೇಕಾಯಿತು. ಮತ್ತೆ ಊಹಿಸಿಕೊಳ್ಳಿ, ವಾರೆಂಕಾ. ನನ್ನ ಈ ಪ್ರಯತ್ನವೆಲ್ಲ ನಿರರ್ಥಕವಾಗಬೇಕೆ, ನಿಷ್ಫಲವಾಗಬೇಕೆ? ಪ್ಯೋತ್ರ್ ಪಿತ್ರೋವಿಚ್‌ರು ಫೆದೊಸೇಯ್ ಇವಾನೊವಿಚ್‌ರೊಂದಿಗೆ ಮಾತಿ ನಲ್ಲಿ ತೊಡಗಿದ್ದರು. ನಾನು ದೈನ್ಯದಿಂದ ಅವರ ಪಕ್ಕಕ್ಕೆ ಹೋಗಿ, "ಪ್ಯೋತ್ರ್ ಪಿತ್ರೋ ವಿಚ್‌ರವರೇ!" ಎಂದು ಕರೆಯುವವನಂತೆ ಅವರ ತೋಳನ್ನು ಹಿಡಿದು ಮೆಲ್ಲಗೆ ಎಳೆದೆ. ಅವರು ನನ್ನ ಕಡೆಗೆ ತಿರುಗಿದಾಗ, ನನಗೆ ಮೂವತ್ತು ರೂಬಲ್ ಬೇಕಾ ಗಿದೆ, ಎಂದೆಲ್ಲ ಅಂಶಗಳನ್ನೂ ವಿವರಿಸಿ ತಿಳಿಸಿದೆ. ಮೊದಲು ಅವರು ನನ್ನನ್ನು ಅರ್ಥಮಾಡಿಕೊಂಡಂತೆಯೇ ಕಾಣಲಿಲ್ಲ. ನಾನು ಮತ್ತೆ ವಿವರಿಸಿದಾಗ ಅವರು ನಕ್ಕರು, ಅಷ್ಟೆ. ನಾನು ಮತ್ತೆ ಮೊದಲಿನಿಂದ ವಿವರಿಸತೊಡಗಿದಾಗ ಅವರು ಹೇಳಿದರು: "ನಿಮ್ಮಲ್ಲಿ ಸಾಲಕ್ಕೆ ಆಧಾರ ಏನಿದೆ?" ಆಮೇಲೆ ಅವರು ತಮ್ಮ ಕಾಗದ ಪತ್ರಗಳನ್ನು ಓದುವುದರಲ್ಲೇ ಮಗ್ನರಾದರು, ನನ್ನನ್ನು ಸಂಪೂರ್ಣವಾಗಿ ಮರೆತೇ ಬಿಟ್ಟಂತೆ ಕಂಡುಬಂದರು. ಇದು ನನ್ನನ್ನು ಸ್ವಲ್ಪ ಕೆರಳಿಸಿತು. "ಇಲ್ಲ, ಪ್ಯೋತ್ರ್ ಪಿತ್ರೋವಿಚ್. ನನ್ನ ಬಳಿ ಯಾವ ಆಧಾರವೂ ಇಲ್ಲ. ಆದರೆ ಸಂಬಳ ಬಂದ ತಕ್ಷಣ ಹಣ ಹಿಂದಿರುಗಿಸುತ್ತೇನೆ. ಖಂಡಿತ ಹಿಂದಿರುಗಿಸುತ್ತೇನೆ. ಇದರಲ್ಲಿ

ನಿಮಗೆ ಸಂಶಯವೇ ಬೇಡ" ಎಂದು ನಾನು ಹೇಳಿದೆ. ಆ ಹೊತ್ತಿಗೆ ಯಾರೋ ಅವರನ್ನು ಕರೆದರು. ನಾನು ಕಾಯುತ್ತ ನಿಂತೆ. ಹಿಂದಿರುಗಿದಾಗ ಅವರು ಮತ್ತೆ ತಮ್ಮ ಲೇಖನಿಯನ್ನು ಸರಿಪಡಿಸಿಕೊಳ್ಳತೊಡಗಿದರು, ನಾನು ಅಸ್ತಿತ್ವದಲ್ಲೇ ಇರಲಿಲ್ಲವೇನೋ ಎನ್ನುವಂತೆ. ಆದ್ದರಿಂದ ನಾನು ಮತ್ತೆ ಹೇಳಿದೆ: "ಹೇಗಾದರೂ ಮಾಡಿಕೊಡೋದಕ್ಕೆ ಆಗುವುದಿಲ್ಲವೇ, ಪ್ಯೋತ್ರ್ ಪಿತ್ರೋವಿಚ್?" ಆದರೆ ಅವರು ಕೇಳಿಸಿಕೊಂಡಂತೆ ಕಾಣಲಿಲ್ಲ. ನಾನು ನಿಂತೆ, ನಿಂತೆ. ಆಮೇಲೆ ಕೊನೆಯ ಪ್ರಯತ್ನ ಮಾಡಲು ನಿರ್ಧರಿಸಿ ಅವರ ತೋಳನ್ನು ಮತ್ತೆ ಮೆಲ್ಲಗೆ ಎಳೆದೆ. ಅವರು ಒಂದು ಮಾತನ್ನಾದರೂ ಆಡಿದರು ಅಂತೀರಾ? ಉಹೂಂ. ಲೇಖನಿ ಸರಿಪಡಿಸುವುದನ್ನು ಮುಗಿಸಿ ಬರೆಯತೊಡಗಿದರು. ಆದ್ದರಿಂದ ನಾನು ಅಲ್ಲಿಂದ ಹೊರಟುಬಿಟ್ಟೆ.

ಬಹುಶಃ ಅವರೆಲ್ಲ ತುಂಬ ಯೋಗ್ಯ ಜನರಿರಬಹುದು, ನನ್ನ ಚಿನ್ನ. ಆದರೆ ಎಷ್ಟು ಜಂಭ, ಓಹ್ ಎಷ್ಟು ಜಂಭ! ಅವರು ನಮ್ಮಂಥ ಜನರಿಂದ ತುಂಬ ತುಂಬ ದೂರ, ವಾರೆಂಕಾ. ನಾನೇಕೆ ಇದನ್ನೆಲ್ಲ ಬರೆಯುತ್ತಿದ್ದೇನೆ, ನನ್ನ ಮುದ್ದು? ನಾನು ಈ ವಿಷಯವನ್ನು ಯೆಮೆಲ್ಯಾನ್ ಇವಾನೊವಿಚ್‌ರಿಗೆ ಹೇಳಿದಾಗ ಅವರು ನಕ್ಕರು, ತಲೆ ಕೊಡಹಿದರು. ಆದರೆ ಅವರು ನನಗೆ ಸ್ವಲ್ಪ ಧೈರ್ಯ ಕೊಟ್ಟರು, ಅವರಿಗೆ ಒಳ್ಳೆಯದಾಗಲಿ. ಅವರು ನಿಜಕ್ಕೂ ಯೋಗ್ಯರು. ನನ್ನನ್ನು ತಮ್ಮ ಪರಿಚಯಸ್ಥರೊಬ್ಬರಿಗೆ ಗುರುತು ಮಾಡಿಕೊಡುವುದಾಗಿ ಮಾತು ಕೊಟ್ಟರು. ಆತ ಹದಿನಾಲ್ಕನೆಯ ವರ್ಗದ ಅಧಿಕಾರಿ. ವೀಬೊರ್ಗ್ ಸೈಡ್‌ನಲ್ಲಿ ವಾಸ. ಬಡ್ಡಿಯ ಮೇಲೆ ಸಾಲ ಕೊಡುತ್ತಾರಂತೆ. ಅವರು ಸಾಲ ಕೊಡುವುದು ಖಂಡಿತ ಎಂದು ಯೆಮೆಲ್ಯಾನ್ ಇವಾನೊವಿಚ್ ಹೇಳುತ್ತಾರೆ. ಅವರನ್ನು ನೋಡಲು ನಾಳೆ ಹೋಗುತ್ತೇನೆ. ಹೋಗಲೋ ಬೇಡವೋ? ಹಣವಂತೂ ಬೇಕೇಬೇಕು. ನನಗೆ ಹಣ ಸಿಗಲೆಂದು ದೇವರು ಆಶೀರ್ವದಿಸಲಿ. ನಮ್ಮ ಮನೆಯ ಯಜಮಾನಿ ನನ್ನನ್ನು ಮನೆಯಿಂದ ಹೊರಗಟ್ಟುತ್ತಿದ್ದಾಳೆ. ನನಗೆ ಊಟ ಕೊಡಲು ಒಪ್ಪುತ್ತಿಲ್ಲ. ನನ್ನ ಬೂಟುಗಳೂ ಸಂಪೂರ್ಣವಾಗಿ ಸವೆದಿವೆ. ಕೋಟಿಗೆ ಗುಂಡಿಗಳಿಲ್ಲ... ಓಹ್, ನನ್ನ ಬಟ್ಟೆಬರೆಗಳಲ್ಲಿ ಯಾವುದು ಇಲ್ಲ ಯಾವುದು ಉಂಟು! ನಮ್ಮ ಮುಖ್ಯಾಧಿಕಾರಿಗಳಲ್ಲೊಬ್ಬರು ನನ್ನ ಈ ಮಾನಗೆಟ್ಟ ಆಕಾರವನ್ನು ನೋಡಿಬಿಟ್ಟರೆ! ನಮ್ಮ ತೊಂದರೆಗಳಿಗೆ ಕೊನೆಯೇ ಇಲ್ಲ, ವಾರೆಂಕಾ, ಕೊನೆಯೇ ಇಲ್ಲ!

ಮಕಾರ್ ದೇವುಷ್ಕಿನ್.

ಆಗಸ್ಟ್ 4

ನನ್ನ ಕರುಣಾಳು ಮಿತ್ರ ಮಕಾರ್ ಅಲೆಕ್ಸೇಯೆವಿಚ್,

ದೇವರಾಣೆ, ದಯವಿಟ್ಟು, ಸಾಧ್ಯವಾದಷ್ಟು ಬೇಗ ಸಾಲ ತೆಗೆದುಕೊಳ್ಳಿ!

ನೀವಿರುವ ಸ್ಥಿತಿಯಲ್ಲಿ ನಿಮ್ಮ ಸಹಾಯವನ್ನು ನಾನೆಂದೂ ಕೇಳುತ್ತಿರಲಿಲ್ಲ, ಆದರೆ ನಾವು ಇದೀಗ ಎಂಥ ದುಸ್ಥಿತಿಯಲ್ಲಿದ್ದೇವೆಂದು ನೀವು ತಿಳಿದಿದ್ದೇ ಆದರೆ ! ನಾವು ಈ ಮನೆಯಲ್ಲಿ ಇನ್ನೆಷ್ಟು ಕಾಲವೂ ಇರಲಾರೆವು. ನನಗೆ ಎಷ್ಟು ತೊಂದರೆ ಗಳು ಉಂಟಾಗಿವೆಯೆಂದರೆ, ನಾನು ಎಷ್ಟು ಕ್ಷೋಭೆಗೊಂಡಿದ್ದೇನೆಂದು ಹೇಳಲಾರೆ. ಇಂದು ಬೆಳಿಗ್ಗೆ ವಯಸ್ಸಾದ ಒಬ್ಬ ವ್ಯಕ್ತಿ, ವೃದ್ಧರೇ ಎನ್ನಬಹುದಾದಂಥ ವ್ಯಕ್ತಿ, ನನ್ನನ್ನು ಕಾಣಲು ಬಂದರು. ಅವರು ಬಿರುದಿನ ಪದಕಗಳನ್ನು ತೊಟ್ಟಿದ್ದರು. ನನಗವರು ತಿಳಿಯರು. ಅವರಿಗೆ ಏನು ಬೇಕಾಗಿದ್ದಿತೋ ನಾನು ಊಹಿಸದಾದೆ. ಫಿದೋರಳು ಅಂಗಡಿಗೆ ಹೋಗಿದ್ದಳು. ಹೇಗಿದ್ದೀರಿ ಎಂದು ಕೇಳಿ ಅವರು ನನ್ನ ಉತ್ತರಕ್ಕಾಗಿ ಕಾಯದೆ ತಾವು ಆ ಸೈನ್ಯಾಧಿಕಾರಿಯ ಚಿಕ್ಕಪ್ಪ ಎಂದು ಹೇಳಿಕೊಂಡರು. ತಮ್ಮ ಸೋದರಳಿಯನ ವರ್ತನೆಯಿಂದ ಹಾಗೂ ನಮ್ಮ ಹೆಸರನ್ನು ಇಡೀ ಮನೆಯ ಮಾತಾಗಿ ಮಾಡಿದ್ದುದರಿಂದ ಅವರಿಗೆ ಕೋಪ ಬಂದಿದ್ದಿತಂತೆ. ತಮ್ಮ ಸೋದರಳಿಯ ಒಬ್ಬ ನಿಷ್ಪ್ರಯೋಜಕ ಯುವಕ, ಅವನ ಚಿಕ್ಕಪ್ಪನಾದ ತಾವು ನನಗೆ ಆಶ್ರಯ ನೀಡಲು ಸಿದ್ಧವಿರುವುದಾಗಿ ಅವರು ತಿಳಿ ಸಿದರು. ಯುವ ಜನರನ್ನು ನಿರ್ಲಕ್ಷಿಸಬೇಕೆಂದು ಸಲಹೆ ನೀಡಿ ಅವರು ತಾವು ಒಬ್ಬ ತಂದೆಯಂತೆ ನನ್ನ ಬಗೆಗೆ ಸಹಾನುಭೂತಿ ಹೊಂದಿದ್ದಾರೆಂದೂ, ತಾವು ನನ್ನನ್ನು ತಮ್ಮ ಮಗಳಾಗಿ ಕಾಣುವುದಾಗಿಯೂ, ತಾವು ನನಗೆ ಎಲ್ಲ ರೀತಿಯ ನೆರವು ನೀಡಲು ಸಿದ್ಧವಿರುವುದಾಗಿಯೂ ತಿಳಿಸಿದರು. ನಾನು ನಾಚುತ್ತ ನಿಂತೆ, ಏನು ಹೇಳಲೂ ತಿಳಿಯದೆ. ಅವರಿಗೆ ವಂದನೆ ಸಲ್ಲಿಸಲೂ ನಾನೇನೂ ಅವಸರಿ ಸಲಿಲ್ಲ. ಅವರು ನನಗಿಷ್ಟವಿಲ್ಲದಿದ್ದರೂ ನನ್ನ ಕೈ ಹಿಡಿದುಕೊಂಡರು, ನನ್ನ ಗಲ್ಲ ವನ್ನು ಸವರಿ ನಾನು ತುಂಬ ಚೆಲುವೆ ಎಂದು ಹೇಳಿದರು, ನನ್ನ ಕೆನ್ನೆ ಮೇಲಿನ ಗುಳಿಗಳು ತಮಗೆ ತುಂಬ ಇಷ್ಟವಾದವೆಂದರು (ಯಾತಕ್ಕೋ, ದೇವರಿಗೇ ಗೊತ್ತು), ಕೊನೆಗೆ ತಾವೊಬ್ಬ ವೃದ್ಧರು (ಹೌದು, ಅದರಲ್ಲೂ ಹೊಲಸು ವೃದ್ಧರು), ತಪ್ಪು ತಿಳಿಯಬಾರದು ಎನ್ನುತ್ತ, ನನಗೆ ಮುತ್ತಿಡಲು ಯತ್ನಿಸಿದರು. ಅಷ್ಟು ಹೊತ್ತಿಗೆ ಸರಿಯಾಗಿ ಫಿದೋರ ಬಂದಳು. ಅವರು ಸ್ವಲ್ಪ ತಬ್ಬಿಬ್ಬಾದರು. ನನ್ನ ಉತ್ತಮ ನಡತೆಗಾಗಿಯೂ ಸದಸದ್ವಿವೇಕಕ್ಕಾಗಿಯೂ ತಾವು ನನ್ನನ್ನು ಗೌರವಿ ಸುವುದಾಗಿ ಅವರು ಮತ್ತೊಮ್ಮೆ ಖಾತರಿ ನೀಡುವವರಂತೆ ಹೇಳಿ, ನಾನು ಅವ ರನ್ನು ಹೊರಗಿನವರಂತೆ ಭಾವಿಸುವುದಿಲ್ಲವೆಂದು ತಾವು ಭರವಸೆ ಹೊಂದಿರುವುದಾಗಿ ತಿಳಿಸಿದರು. ಆಮೇಲೆ ಅವರು ಫಿದೋರಳನ್ನು ಪಕ್ಕಕ್ಕೆ ಕರೆದು, ಏನೋ ವಿಚಿತ್ರ ನೆಪ ಹೇಳಿ ಅವಳಿಗೆ ಸ್ವಲ್ಪ ಹಣ ನೀಡಲು ಯತ್ನಿಸಿದರು. ಫಿದೋರಳು ನಿರಾಕರಿ ಸಿದಳೆನ್ನಿ. ಕೊನೆಗೆ ಅವರು ಹೋಗಲು ಸಿದ್ಧರಾದರು. ತಾವು ಹಿಂದೆ ನೀಡಿದ ಆಶ್ವಾಸನೆಗಳನ್ನೇ ಪುನರುಚ್ಚರಿಸಿದರು. ನನ್ನನ್ನು ಮತ್ತೆ ಕಾಣಲು ಬರುವುದಾ

ಗಿಯೂ ಒಂದು ಜೊತೆ ಪತ್ರಕಡಕು ತಂದುಕೊಡುವುದಾಗಿಯೂ ಹೇಳಿದರು. (ಅವರು ತಾವೇ ತುಂಬ ನಾಚಿದಂತೆ ಕಂಡುಬಂದರು.) ಹೆಚ್ಚು ಉತ್ತಮವಾದ ಮನೆಗೆ ನಮ್ಮ ವಾಸ ಬದಲಿಸುವುದು ಒಳ್ಳೆಯದೆಂದೂ, ತಾವಾಗಲೇ ಅಂತಹ ಮನೆಯೊಂದನ್ನು ನೋಡಿರುವುದಾಗಿಯೂ, ಆ ಮನೆಗಾಗಿ ನಾನು ಏನೂ ಕೊಡ ಬೇಕಾಗಿಲ್ಲವೆಂದೂ, ಅವರು ತಿಳಿಸಿದರು. ನಾನು ಪ್ರಾಮಾಣಿಕಳಾದ ವಿವೇಕ ಶಾಲಿಯಾದ ಯುವತಿಯಾಗಿದ್ದೇನೆಂದೂ, ಅದಕ್ಕಾಗಿ ತಾವು ನನ್ನನ್ನು ಬಹಳವಾಗಿ ಇಷ್ಟಪಡುವುದಾಗಿಯೂ ತಿಳಿಸಿ, ಪುಂಡ ಯುವ ಜನರ ಬಗೆಗೆ ಎಚ್ಚರದಿಂದಿರ ಬೇಕೆಂದು ಸಲಹೆ ಕೊಟ್ಟರು. ಕೊನೆಗೆ ಅವರು, ತಾವು ಆನ್ನ ಫ್ಯೋದೊರೊವ್ನ ಳನ್ನು ತಿಳಿದಿರುವುದಾಗಿಯೂ, ಅವಳು ಸಧ್ಯದಲ್ಲೇ ಸ್ವತಃ ಕಾಣಲು ಬರುವುದಾಗಿ ತಿಳಿಸಬೇಕೆಂದು ತಮಗೆ ಹೇಳಿರುವುದಾಗಿಯೂ, ತಿಳಿಸಿದರು. ಆಗ ನನಗೆ ಎಲ್ಲ ಗೊತ್ತಾಯಿತು. ನನ್ನಲ್ಲಿ ಯಾವ ಭಾವನೆ ಉಂಟಾಯಿತೆಂಬುದನ್ನು ನನಗೆ ಹೇಳ ಲಿಕ್ಕಾಗದು. ನನ್ನ ಜೀವನದಲ್ಲಿ ಅದೇ ಮೊದಲ ಬಾರಿಗೆ ನಾನು ಅಂತಹ ಸ್ಥಿತಿಯಲ್ಲಿ ಕಂಡುಕೊಂಡಿದ್ದುದು. ನನಗೆ ಕೋಪ ಬಂದಿತು. ಅವರನ್ನು ಉಗ್ರವಾಗಿ ಖಂಡಿಸಿದೆ. ಫಿದೋರಳೂ ನನಗೆ ಬೆಂಬಲ ನೀಡಿದಳು, ಬಲಪ್ರಯೋಗ ಮಾಡಿ ಅವರನ್ನು ಮನೆಯಿಂದ ಹೊರಗಟ್ಟಿದಳು. ಇದೆಲ್ಲ ಆನ್ನ ಫ್ಯೋದೊರೊವ್ನಳ ಕೆಲಸವೇ ಎನ್ನುವುದರಲ್ಲಿ ನಮಗೆ ಎಳ್ಳಷ್ಟೂ ಸಂಶಯವಿಲ್ಲ. ಇಲ್ಲದಿದ್ದರೆ ನಮ್ಮ ವಿಷಯ ಇವರಿಗೆ ಹೇಗೆ ಗೊತ್ತಾಗುತ್ತಿತ್ತು?

ಈಗ ನಾನು ನಿಮ್ಮನ್ನು ಬೇಡಿಕೊಳ್ಳುತ್ತೇನೆ, ಮಕಾರ್ ಅಲೆಕ್ಸೇಯೆವಿಚ್. ಈ ಸ್ಥಿತಿಯಲ್ಲಿ ನನ್ನ ಕೈ ಬಿಡಬೇಡಿ. ದಯವಿಟ್ಟು ಸ್ವಲ್ಪ ಹಣವನ್ನು ಸಾಲ ತನ್ನಿ. ಹೆಚ್ಚಿಲ್ಲದಿದ್ದರೂ ಪರವಾಗಿಲ್ಲ. ಏಕೆಂದರೆ ನಾವು ಇಲ್ಲಿಂದ ವಾಸ ಬದಲಿಸಲೇ ಬೇಕಾಗಿದೆ. ನಾವಿಲ್ಲಿ ಇನ್ನೆಷ್ಟು ಮಾತ್ರವೂ ವಾಸಿಸಲಾರೆವು. ಫಿದೋರಳೂ ಹಾಗೆಯೇ ಹೇಳುತ್ತಾಳೆ. ನಮಗೆ ಕೊನೆಯ ಪಕ್ಷ ಇಪ್ಪತ್ತೈದು ರೂಬಲ್ ಬೇಕಾಗಿದೆ. ನಾನು ಈ ಹಣವನ್ನು ಹಿಂದಿರುಗಿಸುತ್ತೇನೆ. ನಾನದನ್ನು ಸಂಪಾದಿಸುತ್ತೇನೆ. ಫಿದೋರಳು ನನಗೆ ಈಗಿಂತ ಹೆಚ್ಚು ಕೆಲಸ ಹುಡುಕಿ ತಂದುಕೊಡುತ್ತಾಳೆ. ಆದ್ದರಿಂದ ಬಡ್ಡಿ ಏನೇ ಆಗಿರಲಿ, ದಯವಿಟ್ಟು ಸಾಲ ತನ್ನಿ. ನಾನು ಎಲ್ಲವನ್ನೂ ಹಿಂದಿರುಗಿಸು ತ್ತೇನೆ. ನನಗೆ ಸಹಾಯ ಮಾಡಿ, ಅಷ್ಟೆ. ನಿಮ್ಮ ಪರಿಸ್ಥಿತಿಯೇ ಕೆಟ್ಟಿರುವಾಗ ನಿಮಗೆ ತೊಂದರೆ ಕೊಡುವುದು ನನಗೆ ಯಾತನೆಯಾಗುತ್ತೆ. ಆದರೆ ನೀವೊಬ್ಬರೇ ನನ್ನ ಆಶಾಜ್ಯೋತಿ. ನಮಸ್ಕಾರ, ಮಕಾರ್ ಅಲೆಕ್ಸೇಯೆವಿಚ್. ನನ್ನ ಬಗೆಗೆ ಚಿಂತಿಸಿ, ದೇವರು ನಿಮಗೆ ಯಶಸ್ಸು ದಯಪಾಲಿಸಲಿ.

ವ. ದೊ.

ಆಗಸ್ಟ್ 4

ನನ್ನ ರನ್ನ ಚಿನ್ನ, ವರ್ವಾರ ಅಲೆಕ್ಸೇಯೆವ್ನ,

ಈ ಎಲ್ಲ ಅನಿರೀಕ್ಷಿತ ಹೊಡೆತಗಳಿಂದ ನಾನು ಎಷ್ಟು ತತ್ತರಿಸಿ ಹೋಗಿದ್ದೇನೆ! ಈ ವಿಪತ್ತುಗಳು ಹೇಗೆ ನನ್ನ ಚೈತನ್ಯವನ್ನು ಪುಡಿಗುಟ್ಟುತ್ತಿವೆ! ಈ ಎಂಜಲುಬುರುಕರ ಜಂಗುಳಿಯೂ ಈ ಮುದಿಗೊಡ್ಡುಗಳೂ ನಿಮ್ಮನ್ನು ಹಿಂಸಿಸಿ ಕಾಯಿಲೆ ಬೀಳುವಂತೆ ಮಾಡುವರು, ನನ್ನ ದೇವತೆ. ನಿಮ್ಮನ್ನು ನಿಮ್ಮ ಮರಣ ಶಯ್ಯೆಗೆ ದೂಕುವರು. ಆ ಎಂಜಲುಬುರುಕರು ನನ್ನನ್ನೂ ಸಾವಿಗೆ ದೂಡಲು ಬಯಸುತ್ತಿದ್ದಾರೆ. ಅವರು ಹಾಗೆ ಮಾಡುವುದು ಖಂಡಿತ, ನಾನು ಆಣೆ ಇಟ್ಟು ಹೇಳುತ್ತೇನೆ. ನಾನು ಈಗ ನಿಮಗೆ ಹಣ ಒದಗಿಸಿ ಕೊಡದೆ ಹೋದರೆ ಸಾಯುವುದೇ ಮೇಲು. ನಿಮಗೆ ಸಹಾಯ ಮಾಡದಿದ್ದರೆ ಅದು ನನ್ನನ್ನು ಕೊಲ್ಲುತ್ತದೆ, ವಾರೆಂಕಾ, ಖಂಡಿತ ಕೊಲ್ಲುತ್ತದೆ. ನಿಮಗೆ ಹಣ ಒದಗಿಸಿಕೊಟ್ಟರೂ ಕಷ್ಟವೇ – ನೀವು ಹಾರಿ ಹೋಗುತ್ತೀರ. ಕ್ರೂರ ಗೂಬೆಗಳು ಮುತ್ತಿದ ಗೂಡಿನಿಂದ ಹಕ್ಕಿಯಂತೆ ಹಾರಿ ಹೋಗುತ್ತೀರ. ಇದು ನನ್ನನ್ನು ಎಷ್ಟು ಚಿಂತೆಗೆ ಈಡು ಮಾಡಿದೆ, ನನ್ನ ಮುದ್ದು. ಮತ್ತೆ ನೀವು, ವಾರೆಂಕಾ, ನೀವು ಹೇಗೆ ಅಷ್ಟು ಕ್ರೂರಿಯಾಗಬಲ್ಲಿರಿ? ಹೇಗೆ ಇರಬಲ್ಲಿರಿ? ನೀವು ಸಂಕಟಕ್ಕೊಳಗಾಗಿದ್ದೀರ, ಘಾಸಿಗೊಂಡಿದ್ದೀರ, ಹಿಂಸಿಸಲ್ಪಟ್ಟಿದ್ದೀರ, ನನ್ನ ಪುಟ್ಟ ಮರಿ. ಆದರೂ ನೀವು ನನಗೆ ತೊಂದರೆ ಕೊಡಲು ಅಳುಕುತ್ತಿದ್ದೀರಿ. ಹಣವನ್ನು ಹಿಂದಿರುಗಿಸುವುದಾಗಿ ಕರುಣಾಪೂರಿತವಾಗಿ ಖಾತರಿ ನೀಡುತ್ತಿದ್ದೀರಿ. ಅಂದರೆ ಬಡ್ಡಿಯನ್ನು ಸಕಾಲದಲ್ಲಿ ಹಿಂದಿರುಗಿಸಲೋಸುಗ ನಿಮ್ಮ ಆಗಲೇ ಬಡಕಲಾದ ಆರೋಗ್ಯವನ್ನು ಮತ್ತಷ್ಟು ಹಾಳುಮಾಡಿಕೊಳ್ಳುತ್ತೀರ, ಅಂದಾಯಿತು. ಅಂತಹ ಮಾತುಗಳನ್ನು ಹೇಳುವ ಮುನ್ನ ಚೆನ್ನಾಗಿ ಯೋಚನೆ ಮಾಡಿ, ವಾರೆಂಕಾ. ನೀವೇಕೆ ಗುಲಾಮಚಾಕರಿ ಮಾಡಬೇಕು, ಹೊಲಿಗೆ ಹೊಲಿಯಬೇಕು, ನಿಮ್ಮ ಪುಟ್ಟ ತಲೆಯನ್ನು ಚಿಂತೆಗೆ ಗುರಿಪಡಿಸಬೇಕು, ನಿಮ್ಮ ಅಂದದ ಕಣ್ಣುಗಳನ್ನು ಹಾಳುಮಾಡಿಕೊಳ್ಳಬೇಕು, ನಿಮ್ಮ ಆರೋಗ್ಯವನ್ನು ಕೆಡಿಸಿಕೊಳ್ಳಬೇಕು? ಆಹ್, ವಾರೆಂಕಾ, ವಾರೆಂಕಾ! ನಾನು ಯಾವುದಕ್ಕೂ ಯೋಗ್ಯನಲ್ಲವೆಂಬುದನ್ನು ನಾನೇ ಬಲ್ಲೆ, ಆದರೂ ಏನೇ ಆಗಲಿ ಯಾವುದಾದರೂ ಸ್ವಲ್ಪಕ್ಕಾಗಿಯಾದರೂ ಯೋಗ್ಯನಾಗುವಂತೆ ಮಾಡಿಕೊಳ್ಳಲು ನಾನು ನನ್ನನ್ನೇ ಬಲವಂತ ಮಾಡಿಕೊಳ್ಳುತ್ತೇನೆ. ಯಾವುದೂ ನನ್ನನ್ನು ತಡೆಹಿಡಿಯದು. ಸ್ವಲ್ಪ ಹೆಚ್ಚಿನ ಕೆಲಸ ಪಡೆದುಕೊಳ್ಳುತ್ತೇನೆ. ಲೇಖಕರ ಹಸ್ತಪ್ರತಿಗಳನ್ನು ನಕಲು ಮಾಡುತ್ತೇನೆ. ನಾನೇ ಅವರ ಬಳಿಗೆ ಹೋಗಿ ಸ್ವಲ್ಪ ಕೆಲಸ ಕೊಡುವಂತೆ ಬೇಡಿಕೊಳ್ಳುತ್ತೇನೆ. ಖಂಡಿತ ಅವರಿಗೂ ಚೆನ್ನಾಗಿ ನಕಲು ಮಾಡುವವರು ಬೇಕಾಗಿದ್ದಾರೆ. ನನಗೆ ಗೊತ್ತು ಅವರಿಗೆ ಬೇಕು. ಆದರೆ ನೀವು ಕೆಲಸ ಮಾಡಿ ಕಾಯಿಲೆ ಬೀಳುವುದಕ್ಕೆ

ನಾನು ಬಿಟ್ಟುಕೊಡುವುದಿಲ್ಲ. ನಿಮ್ಮ ವಿನಾಶಕರ ಉದ್ದೇಶಗಳನ್ನು ಈಡೇರಿಸಿಕೊಳ್ಳುವುದಕ್ಕೆ ನಾನು ಅವಕಾಶ ನೀಡುವುದಿಲ್ಲ. ಹೇಗಾದರೂ ಸರಿ, ನಾನು ಖಂಡಿತ ಹಣವನ್ನು ಸಾಲ ತರುತ್ತೀನಿ, ನನ್ನ ದೇವತೆ. ಇದರಲ್ಲಿ ವಿಫಲವಾಗುವುದಕ್ಕಿಂತ ನನಗೆ ಸಾವೇ ಮೇಲು, ಭಾರಿ ಬಡ್ಡಿಗಾಗಿ ಹೆದರಬಾರದೆಂದು ನೀವು ಹೇಳುತ್ತೀರ. ಚಿಂತಿಸಬೇಡಿ, ನನ್ನ ಪ್ರಿಯತಮೆ, ನಾನೀಗ ಯಾವುದಕ್ಕೂ ಹೆದರುವುದಿಲ್ಲ. ನಾನು ಬ್ಯಾಂಕ್‌ನೋಟುಗಳಲ್ಲಿ ನಲವತ್ತು ರೂಬಲ್ ಸಾಲ ಕೇಳುತ್ತೇನೆ. ತುಂಬ ಜಾಸ್ತಿ ಏನಲ್ಲ, ಅಲ್ಲವೇ? ನಲವತ್ತು ರೂಬಲ್‌ಗಳಿಗೆ ನನ್ನನ್ನು ನಂಬಲು ಸಾಧ್ಯವೇ? ನನ್ನ ಮಾತನ್ನಷ್ಟೆ ಒಪ್ಪಿಕೊಳ್ಳುತ್ತಾರೆಯೆ? ಬೇರೇನನ್ನೂ ಕೇಳುವುದಿಲ್ಲವೇ? ಮೊದಲ ನೋಟದಲ್ಲೇ ನಂಬಿಕೆ ಮೂಡಿಸುವಷ್ಟು ಶಕ್ತಿ ನನ್ನಲ್ಲಿದೆಯೇ? ಅಂದರೆ ಮೊದಲ ಬಾರಿಗೆ ನನ್ನ ಮುಖ ನೋಡುವುದೇ ಅನುಕೂಲ ಭಾವನೆ ಪ್ರೇರಿಸಬಲ್ಲುದೇ? ನನ್ನ ರೂಪವನ್ನು ನಿಮ್ಮ ಮನಸ್ಸಿನಲ್ಲೇ ಕಲ್ಪಿಸಿಕೊಂಡು ನೋಡಿ ಹೇಳಿ, ನನ್ನ ಮುದ್ದು. ನಾನು ನಂಬಿಕೆ ಪ್ರೇರಿಸಬಲ್ಲೆನೇ? ನೀವೇನೆನ್ನುತ್ತೀರಿ? ನಾನೀಗ ತುಂಬ ದುರ್ಬಲನಾಗಿದ್ದೇನೆ – ಇದು ನಿಜಕ್ಕೂ ಯಾತನಾಮಯವಾದುದು. ಕಲವತ್ತು ರೂಬಲ್‌ಗಳಲ್ಲಿ ಇಪ್ಪತ್ತೈದನ್ನು ನಿಮಗೆ ತೆಗೆದಿರಿಸುತ್ತೇನೆ, ವಾರೆಂಕಾ. ಎರಡು ರೂಬಲ್ ನಮ್ಮ ಮನೆಯ ಯಜಮಾನಿಗೆ. ಉಳಿದದ್ದು ನನ್ನ ಸ್ವಂತ ಆವಶ್ಯಕತೆಗಳಿಗೆ. ನಿಜ, ಮನೆಯ ಯಜಮಾನಿ ಇನ್ನೂ ಹೆಚ್ಚು ಪಡೆಯಬೇಕು. ಅದಕ್ಕೆ ಅವಳು ಬದ್ಧಳು. ಆದರೆ ನನ್ನ ಆವಶ್ಯಕತೆಗಳನ್ನು ಪರಿಗಣಿಸಿ, ವಾರೆಂಕಾ. ಆಗ ನಾನು ಅವಳಿಗೆ ನಿಜಕ್ಕೂ ಹೆಚ್ಚಿಗೆ ಕೊಡಲಾರೆ ಎಂಬುದನ್ನು ನೀವೇ ಮನಗಾಣುವಿರಿ. ಆದ್ದರಿಂದ ಅದರ ಬಗೆಗೆ ಮಾತೇಕೆ, ಅದನ್ನು ನಮೂದಿಸುವುದಾದರೂ ಏಕೆ? ಒಂದು ರೂಬಲ್ ಬೆಳ್ಳಿ ನಾಣ್ಯ ಒಂದು ಜೊತೆ ಹೊಸ ಬೂಟುಗಳಿಗೆ ಸಾಲುತ್ತದೆ. ನನ್ನ ಹಳೆಯ ಬೂಟುಗಳು ನಾಳೆಯೇ ನನ್ನನ್ನು ಆಫೀಸಿಗೆ ಕರೆದೊಯ್ಯಲಾರವು ಎಂದೇ ನನಗನಿಸುತ್ತದೆ. ಒಂದು ಕಂಠವಸ್ತ್ರವೂ ಸ್ವಾಗತಾರ್ಹವೇ. ನನ್ನ ಬಳಿ ಈಗಿರುವುದು ಒಂದು ವರ್ಷ ಹಳೆಯದು. ಆದರೆ ನೀವು ನಿಮ್ಮ ಧೂಳುಪಾವಡೆಯಿಂದ ನನಗಾಗಿ ಒಂದು ಕಂಠವಸ್ತ್ರವನ್ನೂ ಒಂದು ಮುಂಗವಚವನ್ನೂ ಕತ್ತರಿಸಿಕೊಡುವುದಾಗಿ ಹೇಳಿದ್ದೀರಿ. ಆದ್ದರಿಂದ ಅವುಗಳ ಬಗೆಗೆ ಯೋಚಿಸುವ ಆವಶ್ಯಕತೆ ಇಲ್ಲ. ಸರಿ ಈಗ ನನಗೆ ಒಂದು ಜೊತೆ ಹೊಸ ಬೂಟುಗಳು ಒಂದು ಕಂಠವಸ್ತ್ರ, ಎಂದಾಯಿತು. ಆದರೆ ಗುಂಡಿಗಳಿಗೆ ಏನು ಮಾಡಬೇಕು, ನನ್ನ ಪುಟ್ಟ ಗೆಳತಿ? ಗುಂಡಿಗಳಿಲ್ಲದೆ ಸಾಧ್ಯವಿಲ್ಲ, ನೀವೂ ಒಪ್ಪುತ್ತೀರ, ನನ್ನ ಪುಟ್ಟ ವಾರೆಂಕಾ. ನನ್ನ ನಡುವಂಗಿಯ ಒಂದು ಕಡೆಯ ಗುಂಡಿಗಳೆಲ್ಲ ಬಿದ್ದು ಹೋಗಿವೆ. ಇಂಥ ಅಧ್ವಾನವನ್ನು ನಮ್ಮ ದೊಡ್ಡ ಸಾಹೇಬರೇನಾದರೂ ನೋಡಿಬಿಟ್ಟರೆ ಅನ್ನುವ ಯೋಚನೆಯಿಂದಲೇ ನಾನು ನಡುಗುತ್ತೇನೆ. ಹಾಗೆ

ನೋಡಿ ಅವರೇನು ಹೇಳುತ್ತಾರೋ ನನಗೆ ತಿಳಿಯುವುದೇ ಇಲ್ಲ, ನನ್ನ ಚಿನ್ನ. ಏಕೆಂದರೆ ಅದನ್ನು ಕೇಳುವ ಮುನ್ನವೇ ನಾನು ನನ್ನ ಕೊನೆಯುಸಿರೆಳೆದಿರುತ್ತೇನೆ. ಅವಮಾನಿತನಾಗಿ ನಾನು ಸುಮ್ಮನೆ ಆ ಸ್ಥಳದಲ್ಲೇ ಪ್ರಾಣ ನೀಗುತ್ತೇನೆ. ಇನ್ನು ನನ್ನ ಹತ್ತಿರ ಮೂರು ರೂಬಲ್ ಉಳಿಯುತ್ತೆ. ಅದು ನನ್ನ ನಿತ್ಯ ಜೀವನದ ಖರ್ಚಿಗೆ. ಮತ್ತು ಅರ್ಧ ಪೌಂಡ್ ಹೊಗೆಸೊಪ್ಪಿಗೆ. ಹೊಗೆಸೊಪ್ಪಿಲ್ಲದೆ ನಾನು ಏಗಲಾರೆ, ನನ್ನ ಪುಟ್ಟ ಪಕ್ಕಿ. ಈಗಾಗಲೇ ನಾನು ನನ್ನ ಪೈಪ್ ಹಚ್ಚಿ ಒಂಬತ್ತು ದಿನಗಳಾಗಿವೆ. ನಾನದನ್ನು ಕೊಂಡು ನಿಮಗೇನೂ ಹೇಳದೇ ಇದ್ದರೂ ಆಗುತ್ತಿತ್ತು. ಆದರೆ ಹಾಗೆ ಮಾಡುವುದು ನನಗೆ ನಾಚಿಕೆಗೇಡಿನದು. ನೀವು ಭಯಂಕರ ತೊಂದರೆಯಲ್ಲಿದ್ದೀರ, ನಾನಿಲ್ಲಿ ಭೋಗವಸ್ತುಗಳನ್ನು ಬಳಸುತ್ತಿದ್ದೇನೆ. ನಾನು ಇದನ್ನೆಲ್ಲ ಬರೆಯುತ್ತಿರುವುದು ನನ್ನ ಅಂತರಂಗದ ಹೊರೆಯನ್ನು ನಿವಾರಿಸಿಕೊಳ್ಳುವುದಕ್ಕಾಗಿ, ವಾರೆಂಕಾ. ನಾನೀಗ ತುಂಬ ಇಕ್ಕಟ್ಟಿನ ಪರಿಸ್ಥಿತಿಯಲ್ಲಿದ್ದೇನೆ ಎಂದು, ನನ್ನ ಚಿನ್ನ, ನಾನು ನಿಮಗೆ ಬಿಚ್ಚುಮನಸ್ಸಿನಿಂದ ಹೇಳಬೇಕು. ಅಥವಾ ಹಿಂದೆಂದೂ ನನ್ನ ಪರಿಸ್ಥಿತಿ ಈಗಿನಷ್ಟು ಕೆಟ್ಟುದಾಗಿರಲಿಲ್ಲ. ನನ್ನ ಮನೆಯ ಯಜಮಾನಿ ನನ್ನನ್ನು ದ್ವೇಷಿಸುತ್ತಾಳೆ; ನನ್ನನ್ನು ಯಾರೂ ಎಷ್ಟು ಮಾತ್ರವೂ ಗೌರವಿಸುತ್ತಿಲ್ಲ. ನನಗೆ ಅತ್ಯಗತ್ಯ ವಸ್ತುಗಳು ಬಹಳ ಬೇಕಾಗಿವೆ, ಆದರೆ ನನಗಾಗಲೇ ಮೈ ತುಂಬ ಸಾಲ. ಆಫೀಸಿನಲ್ಲಿ ನನ್ನ ಜೊತೆ ಗುಮಾಸ್ತರು ಯಾವಾಗಲೂ ನನ್ನನ್ನು ಗೇಲಿ ಮಾಡುತ್ತಿರುತ್ತಾರೆ. ಈಗ ಅದು ಇನ್ನೂ ಹೆಚ್ಚಾಗಿದೆ. ನಾನು ಎಲ್ಲವನ್ನೂ ಎಲ್ಲರಿಂದಲೂ ಮುಚ್ಚಿಡಲು ಎಷ್ಟೊಂದು ಎಚ್ಚರಿಕೆ ವಹಿಸುತ್ತೇನೆ. ನಾನು ನನ್ನನ್ನೇ ಮರೆಯಾಗಿರಿಸಿಕೊಳ್ಳಲು ಯತ್ನಿಸುತ್ತೇನೆ. ಯಾರಿಗೂ ಕಾಣದಂತೆ ಆಫೀಸಿನೊಳಕ್ಕೆ ನುಸುಳಲು ಮತ್ತು ನನ್ನಷ್ಟಕ್ಕೆ ನಾನು ಇದ್ದುಕೊಂಡಿರಲು ನನ್ನ ಶಕ್ತಿಮೀರಿ ಯತ್ನಿಸುತ್ತೇನೆ. ನಿಮ್ಮೊಂದಿಗಷ್ಟೆ ನಾನು ಧೈರ್ಯದಿಂದ ಮಾತನಾಡುತ್ತಿರುವುದು. ನನಗೆ ಹಣ ಸಿಕ್ಕದೆ ಹೋದರೆ ಏನು ಮಾಡುವುದು? ಉಹೂಂ, ಉಹೂಂ, ವಾರೆಂಕಾ, ಅಂತಹ ಯೋಚನೆ ಮಾಡದಿರುವುದೇ ಒಳಿತು. ಅಂತಹ ಯೋಚನೆಗಳಿಂದ ನಮ್ಮನ್ನು ಹಿಂಸಿಸಿಕೊಳ್ಳದಿರುವುದೇ ಒಳಿತು. ಈ ಕೆಟ್ಟ ಯೋಚನೆಯಿಂದ ನೀವು ನಿಮ್ಮನ್ನೇ ಹಿಂಸಿಸಿಕೊಳ್ಳಕೂಡದೆಂದು, ಚಿಂತಿಸಬಾರದೆಂದು, ನಾನು ಇದನ್ನು ಬರೆಯುತ್ತಿದ್ದೇನೆ. ಅಯ್ಯೋ ದೇವರೇ, ಆಮೇಲೆ ನಿಮಗೇನಾಗುವುದು! ನಿಮಗೆ ಬೇರೆ ಮನೆಗೆ ಹೋಗಲು ಆಗುವುದಿಲ್ಲ, ನೀವು ನನ್ನ ಬಳಿಯೇ ಇರುತ್ತೀರಿ, ನಿಜ. ಆದರೆ ಆಗ ನಾನೇ ಇಲ್ಲಿರುವುದಿಲ್ಲ – ನಾನು ಎಂದೆಂದಿಗೂ ಹಿಂದಿರುಗುವುದಿಲ್ಲ, ನಾನು ಸುಮ್ಮನೆ ಕಣ್ಮರೆಯಾಗುತ್ತೇನೆ, ಅದೃಶ್ಯನಾಗುತ್ತೇನೆ. ಇಷ್ಟೊಂದೆಲ್ಲ ಬರೆಯುವ ಬದಲು ನಾನು ಮುಖ ಕ್ಷೌರಮಾಡಿಕೊಳ್ಳುತ್ತಿರಬೇಕಿತ್ತು. ಆಗ ನಾನು ಬಹುಶಃ ಹೆಚ್ಚು ಯೋಗ್ಯವಾಗಿ ಕಾಣುತ್ತೇನೇನೋ. ನಿಮಗೇ ಗೊತ್ತಿ

ರುವಂತೆ, ಯೋಗ್ಯರಾಗಿ ಕಾಣುವವರೇ ಸಂಬಿಕೆಗೆ ಅರ್ಹರು. ದೇವರು ನನಗೆ ಸಹಾಯ ಮಾಡಲಿ. ನಾನು ಪ್ರಾರ್ಥನೆ ಸಲ್ಲಿಸಿ ನನ್ನ ದಾರಿ ಹಿಡಿದು ಹೋಗುತ್ತೇನೆ.

ಎಂ. ದೇವುಷ್ಕಿನ್.

ಆಗಸ್ಟ್ 5

ಸನ್ಮಿತ್ರ ಮಕಾರ್ ಅಲೆಕ್ಸೇಯೆವಿಚ್‌ರವರೇ,

ಏನೇ ಆಗಲಿ ನೀವು ಹತಾಶರಾಗಕೂಡದು! ನಮಗೆ ಸಾಕಷ್ಟು ತೊಂದರೆಗಳಿವೆ. ನಾನು ಬೆಳ್ಳಿ ನಾಣ್ಯಗಳಲ್ಲಿ ಮೂವತ್ತು ಕೊಪೆಕ್ ಕಳುಹಿಸುತ್ತಿದ್ದೇನೆ. ಹೆಚ್ಚಿಗೆ ಕಳುಹಿಸಲಾರೆ. ನಾಳೆಯವರೆಗೂ ಆಗುವಂತೆ ಅತ್ಯಂತ ಅಗತ್ಯವಾದವುಗಳನ್ನಷ್ಟೆ ಕೊಳ್ಳಿರಿ. ಫಿದೋರಳ ಬಳಿಯೂ ನನ್ನ ಬಳಿಯೂ ಏನೇನೂ ಇಲ್ಲ. ನಾಳೆಗೆ ಏನು ಮಾಡಬೇಕೋ ನನಗೆ ತಿಳಿಯದು. ಇದು ತುಂಬ ವಿಷಾದದ ಸಂಗತಿ, ಮಕಾರ್ ಅಲೆಕ್ಸೇಯೆವಿಚ್. ಆದರೆ ಸಾಲ ದೊರೆಯಲಿಲ್ಲವೆಂದು ದುಃಖಿಸಬೇಡಿ. ನಿಮಗೆ ಅದೃಷ್ಟವಿಲ್ಲ. ಅದಕ್ಕೆ ಯಾರೇನು ಮಾಡುವುದಕ್ಕೆ ಆಗುತ್ತೆ. ನಾವು ಇಲ್ಲೇ ನಮ್ಮ ವಾಸವನ್ನು ಮುಂದುವರಿಸುವುದು ಒಳ್ಳೆಯದು, ಬೇರೆ ಜಾಗಕ್ಕೆ ಹೋದರೂ, ಬೇಕೆಂದರೆ ಅವರು ಕಂಡೇ ಕಂಡುಕೊಳ್ಳುವರು, ಎಂದು ಫಿದೋರ ಹೇಳುತ್ತಾಳೆ. ಇರಬಹುದು, ಆದರೆ ಇಲ್ಲೇ ವಾಸಿಸುತ್ತ ಹೋಗುವುದು ನನಗೇಕೋ ಅಷ್ಟು ಚೆನ್ನಾಗಿ ಕಾಣುವುದಿಲ್ಲ. ನನಗೆ ಈ ದುಃಖದ ಭಾವನೆ ತುಸ ಕಮ್ಮಿಯಾದರೆ, ಇನ್ನಷ್ಟು ಬರೆಯುವೆ.

ನೀವು ಎಂಥ ವಿಚಿತ್ರ ವ್ಯಕ್ತಿ, ಮಕಾರ್ ಅಲೆಕ್ಸೇಯೆವಿಚ್. ನೀವು ಹೇಗೆ ಎಲ್ಲವನ್ನೂ ಮನಸ್ಸಿಗೆ ತೀರ ಹಚ್ಚಿಕೊಳ್ಳುತ್ತೀರ. ಇದು ಯಾವಾಗಲೂ ನಿಮ್ಮನ್ನು ಅತ್ಯಂತ ದುಃಖಿತರಲ್ಲಿ ದುಃಖಿತರನ್ನಾಗಿ ಮಾಡುತ್ತದೆ. ನಾನು ನಿಮ್ಮ ಪತ್ರಗಳನ್ನು ತುಂಬ ಗಮನವಿತ್ತು ಓದುತ್ತೇನೆ. ನೀವು ನಿಮ್ಮ ಬಗೆಗೆ ಚಿಂತಿಸುವುದಕ್ಕಿಂತ ಹೆಚ್ಚಾಗಿ ನನ್ನ ಬಗೆಗೆ ಚಿಂತಿಸುತ್ತೀರೆಂದು ನಾನು ಕಂಡುಕೊಳ್ಳಬಲ್ಲೆ. ನಿಮ್ಮ ಹೃದಯದಲ್ಲಿ ಕರುಣೆ ತುಂಬಿದೆ ಎಂದೇನೋ ಎಲ್ಲರೂ ಹೇಳುತ್ತಾರೆ. ಆದರೆ ಅದು ಅತಿ ಹೆಚ್ಚಾಗಿದೆ ಎಂದೇ ನಾನು ಹೇಳುತ್ತೇನೆ. ನಿಮಗೆ ಕೆಲವು ಸ್ನೇಹಯುತ ಸಲಹೆಗಳನ್ನು ನೀಡಲು ಅವಕಾಶ ನೀಡಿ, ಮಕಾರ್ ಅಲೆಕ್ಸೇಯೆವಿಚ್. ನೀವು ನನಗಾಗಿ ಮಾಡಿರುವುದಕ್ಕೆಲ್ಲ ನಾನು ಕೃತಜ್ಞಳಾಗಿದ್ದೇನೆ, ಅತ್ಯಂತ ಕೃತಜ್ಞಳಾಗಿದ್ದೇನೆ. ನಾನು ಅವನ್ನು ಗಾಢವಾಗಿ ಮನಗಂಡಿದ್ದೇನೆ. ಆದ್ದರಿಂದ, ನಿಮ್ಮೆಲ್ಲ ವಿಪತ್ತುಗಳನಂತರವೂ, ಇವಕ್ಕೆಲ್ಲ ನಾನೇ ಅನುದ್ದಿಷ್ಟ ಹೇತುವಾಗಿದ್ದರೂ, ನೀವು ನನ್ನ ಸುಖದುಃಖಗಳಲ್ಲಿ ಸಹಭಾಗಿಯಾಗಿಯೇ ಇರುವುದನ್ನು, ನನ್ನ ವಾತ್ಸಲ್ಯ

ಕ್ಕಾಗಿಯಷ್ಟೆ ಜೀವಿಸಿರುವುದನ್ನು, ಕಂಡಾಗ ನಾನು ಹೇಗೆ ಭಾವಿಸುತ್ತೇನೆಂಬುದನ್ನು ಊಹಿಸಿ ನೋಡಿ. ಇತರರ ತೊಂದರೆಗಳನ್ನೆಲ್ಲ ಮನಸ್ಸಿಗೆ ಹಚ್ಚಿಕೊಳ್ಳುತ್ತ ಹೋದ ನೀವು ಅತ್ಯಂತ ಅಸುಖಿ ಮನುಷ್ಯರಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ. ಇಂದು ಆಫೀಸು ಕೆಲಸದನಂತರ ನೀವು ನನ್ನನ್ನು ಕಾಣಬಂದಾಗ ನಾನು ಗಾಬರಿಗೊಂಡೆ. ನೀವು ಎಷ್ಟು ನಿಸ್ತೇಜರಾಗಿ, ಭೀತಗ್ರಸ್ತರಾಗಿ, ಹತಾಶರಾಗಿ ಕಂಡುಬಂದಿರಿ. ಯಾವ ಕಾರಣಕ್ಕಾಗಿ? – ನೀವು ನಿಮ್ಮ ಕಾರ್ಯದಲ್ಲಿ ವಿಫಲರಾದಿರಿ ಎಂದು ನನಗೆ ಹೇಳಲು ಅಂಜಿ, ನನ್ನನ್ನು ಕ್ಷೋಭೆಗೀಡು ಮಾಡಲು ಹೆದರಿ. ನಾನು ಆ ಸುದ್ದಿ ಕೇಳಿ ನಗಲು ಬಹುಮಟ್ಟಿಗೆ ಸಿದ್ಧಳಾಗಿದ್ದೆ ಎಂಬುದನ್ನು ಕಂಡಾಗ ನೀವು ಎಷ್ಟು ಸಮಾಧಾನಗೊಂಡಂತಾದಿರಿ. ಚಿಂತಿಸಬೇಡಿ, ಬಂದಿದ್ದನ್ನೆಲ್ಲ ಒಪ್ಪಿಕೊಳ್ಳಿ, ಮಕಾರ್ ಅಲೇಕ್ಸೇಯೆವಿಚ್, ವಿವೇಕಶೀಲರಾಗಿ. ನಾನು ನಿಮ್ಮನ್ನು ಬೇಡಿಕೊಳ್ಳುತ್ತೇನೆ. ಎಲ್ಲವೂ ಸರಿ ಹೋಗುವುದು. ನೀವೇ ಕಾಣುವಿರಂತೆ! ಇಲ್ಲದಿದ್ದರೆ, ನೀವು ಮಾಡುವಂತೆ ಇತರರಿಗಾಗಿ ದುಃಖಿಸುತ್ತ ಹೋದರೆ, ನಿಮ್ಮ ಬಾಳು ದುರ್ಭರವಾಗುತ್ತದೆ. ನಮಸ್ಕಾರ, ನನ್ನ ಮಿತ್ರರೇ. ನನ್ನ ಬಗೆಗೆ ಚಿಂತಿಸಬೇಡಿ. ನಾನು ಬೇಡಿಕೊಳ್ಳುತ್ತೇನೆ.

ವ. ದೊ.

ಆಗಸ್ಟ್ 5

ವಾರೆಂಕಾ, ನನ್ನ ಪುಟ್ಟ ಅರಗಿಣಿ,

ತುಂಬ ಒಳ್ಳೆಯದು, ನನ್ನ ದೇವತೆ, ತುಂಬ ಒಳ್ಳೆಯದು! ನಾನು ಹಣ ಪಡೆಯುವುದರಲ್ಲಿ ವಿಫಲನಾದರೂ ಪರವಾಗಿಲ್ಲ ಎಂದು ನೀವು ಹೇಳುತ್ತೀರ. ತುಂಬ ಒಳ್ಳೆಯದು, ಹಾಗಾದರೆ. ನಿಮ್ಮ ಬಗೆಗೆ ನನ್ನಲ್ಲಿ ಮತ್ತೆ ಭರವಸೆ ಮೂಡಿದೆ, ಸಂತೋಷವೂ ಆಗಿದೆ. ನೀವು ಇಲ್ಲಿಯೇ ವಾಸ ಮಾಡಲಿರುವಿರಿ, ಈ ಬಡಪಾಯಿ ವೃದ್ಧನನ್ನು ಬಿಟ್ಟು ಹೋಗುವುದಿಲ್ಲ, ಎಂಬುದು ನನ್ನ ಸಂತೋಷವನ್ನು ಇನ್ನಷ್ಟು ಹೆಚ್ಚಿಸಿದೆ. ನಿಜ ಹೇಳುವುದಾದರೆ, ನಿಮ್ಮ ಕಾಗದ ಓದಿ, ನನ್ನ ಭಾವನೆಗಳಿಗೆ ನೀವು ಬೆಲೆ ಕೊಡುವ ರೀತಿಯನ್ನು ಕಂಡು, ನನಗೆ ಅಮಿತಾನಂದವಾಯಿತು. ನಾನಿದನ್ನು ಹೆಮ್ಮೆಯಿಂದಾಗಿ ಅಲ್ಲ, ಆದರೆ ನೀವು ನನ್ನನ್ನು ಪ್ರೀತಿಸುತ್ತೀರಿ ಹಾಗೂ ನನ್ನ ಹೃದಯದ ಭಾವನೆಗಳನ್ನು ಅರ್ಥಮಾಡಿಕೊಂಡಿದ್ದೀರಿ, ಎಂಬ ಕಾರಣದಿಂದಾಗಿ, ಹೇಳುತ್ತಿದ್ದೇನೆ. ಆದರೆ ನನ್ನ ಹೃದಯದ ಬಗೆಗೆ ಏಕೆ ಹೇಳಬೇಕು? ನನ್ನ ಹೃದಯ, ಎಷ್ಟೇ ಆಗಲಿ, ನನ್ನ ಹೃದಯವಷ್ಟೆ. ಆದರೆ ನಾನು ದುರ್ಬಲ ಹೃದಯಿಯಾಗಿರಬಾರದೆಂದು ನೀವೇ ಹೇಳಿದ್ದೀರಿ, ನನ್ನ ಮುದ್ದು. ತುಂಬ

ಸರಿಯಾದ ಮಾತು, ನನ್ನ ಚಿನ್ನ. ಯಾರೇ ಆಗಲಿ ದುರ್ಬಲ ಹೃದಯಿಯಾಗಿರ ಬಾರದು ನಿಜ. ಆದರೂ ನನ್ನ ಪುಟ್ಟ ಪಕ್ಕಿ, ನಾನು ಬೂಟುಗಳ ಬಗೆಗೆ ಚಿಂತಿ ಸಲೇ ಬೇಕು, ನಾನು ನಾಳೆ ಆಫೀಸಿಗೆ ಯಾವ ಬೂಟು ಹಾಕಿಕೊಂಡು ಹೋಗ ಬೇಕು! ಅಲ್ಲೇ ತೊಂದರೆ ಇರುವುದು. ಅಂಥ ಕೊರಗು ಮನುಷ್ಯನನ್ನು ನಾಶ ಮಾಡುತ್ತದೆ, ಸಂಪೂರ್ಣವಾಗಿ ನಾಶಮಾಡುತ್ತದೆ, ನನ್ನ ವಿಷಯಕ್ಕಾಗಿಯಷ್ಟೆ ಅಲ್ಲ ನಾನು ನನ್ನನ್ನು ಹಿಂಸೆಪಡಿಸಿಕೊಳ್ಳುತ್ತಿರುವುದು. ನನ್ನ ಮಟ್ಟಿಗೆ, ಎಲ್ಲ ಒಂದೇ. ನಾನು ಓವರ್‌ಕೋಟಿಲ್ಲದೆಯೇ ಬರಿಗಾಲಿನಲ್ಲೇ ಅತ್ಯಂತ ಉಗ್ರ ಹಿಮ ಶೈತ್ಯದಲ್ಲಿ ಹೋಗಬೇಕಾಗಿ ಬಂದರೂ, ಅಷ್ಟಾಗಿ ಚಿಂತಿಸುವುದಿಲ್ಲ. ನಾನದನ್ನು ಸಹಿಸಿಕೊಳ್ಳುತ್ತೇನೆ. ಅದು ನನಗೆ ಪರವಾಗಿಲ್ಲ. ನಾನೊಬ್ಬ ಸಣ್ಣ ಮನುಷ್ಯ, ಅತ್ಯಂತ ಸಾಮಾನ್ಯನಾದ ಮನುಷ್ಯ. ಆದರೆ ಜನ ಏನು ಹೇಳುತ್ತಾರೆ. ನಾನು ಕೋಟಿಲ್ಲದೆ ನಡೆದಾಡುತ್ತಿದ್ದರೆ ಕೆಟ್ಟ ನಾಲಿಗೆಗಳು ಎಂಥ ಕುತ್ಸಿತ ಮಾತುಗಳನ್ನಾ ಡುವುದಿಲ್ಲ! ಆದ್ದರಿಂದಲೇ ಬಹುಶಃ ಜನ ಕೋಟುಗಳನ್ನೂ ಬೂಟುಗಳನ್ನೂ ತೊಡುವರೆಂದು ಕಾಣುತ್ತೆ. ಆದ್ದರಿಂದ, ನೀವೇ ನೋಡಿ ವಾರೆಂಕಾ, ಬೂಟುಗಳು ನನ್ನ ಮಾನಮರ್ಯಾದೆಯನ್ನು, ಒಳ್ಳೆಯ ಹೆಸರನ್ನು ಉಳಿಸಿಕೊಳ್ಳಲು ಅವಶ್ಯ. ಹರಕು ಬೂಟು ಹಾಕಿಕೊಂಡು ಹೋದಾಗ ಈ ಎರಡೂ ಕಳೆದು ಹೋಗ ಬಹುದು. ಇದು ನಿಜ ಅನ್ನುವ ಬಗೆಗೆ ನೀವು ಖಾತರಿಯಿಂದಿರಬಹುದು, ನನ್ನ ಚಿನ್ನ. ನಾನಿದನ್ನು ಅನೇಕ ವರ್ಷಗಳ ಅನುಭವದಿಂದ ಕಲಿತಿದ್ದೇನೆ. ಜಗತ್ತು ಎಂತಹುದು, ಅದರಲ್ಲಿರುವ ಜನರು ಎಂತಹವರು ಎಂಬುದನ್ನು ನಾನು ಬಲ್ಲೆ. ಆದ್ದರಿಂದ ನೀವು ಈ ಮುದುಕನನ್ನು ನಂಬಿ. ಆ ಲೇಖನಿದಾಸರ, ತೋಚಿದ್ದನ್ನು ಗೀಚುವವರ, ಮಾತುಗಳಿಗೆ ಎಂದೂ ಕಿವಿಗೊಡಬೇಡಿ.

ಆದರೆ ಇಂದು ಅದೆಲ್ಲ ಹೇಗೆ ಜರುಗಿತು ಎಂಬುದನ್ನು ನಾನಿನ್ನೂ ನಿಮಗೆ ಹೇಳಿಲ್ಲ, ವಾರೆಂಕಾ. ನಾನು ಇಂದು ಬೆಳಿಗ್ಗೆ ಏನು ಅನುಭವಿಸಿದೆ, ಎಂಥ ಪಾಡು ಪಟ್ಟೆ, ಅದು ಇತರರಿಗೆ ಒಂದು ಇಡೀ ವರ್ಷಕ್ಕೆ ಸಾಕಾದೀತು. ಅದು ಹೀಗೆ ಜರು ಗಿತು. ನಾನು ಅವನನ್ನು ಮನೆಯಲ್ಲೇ ಕಾಣಲು ಸರಿಹೋಗುವಂತೆ ಮತ್ತು ಆಫೀಸಿಗೆ ತಡವಾಗದಂತೆ, ಬೆಳಿಗ್ಗೆ ತುಂಬ ಮುಂಚೆಯೇ ಹೊರಟೆ. ಮಳೆ ಬರು ತ್ತಿತ್ತು. ಎಲ್ಲೆಲ್ಲೂ ಕೆಸರು ಕೊಚ್ಚೆ. ನಾನು ನನ್ನ ಕೋಟಿನಲ್ಲಿ ದೇಹವನ್ನು ಮುದುಡಿ ಇರಿಸಿಕೊಂಡು, "ದಯಾಳುವಾದ ದೇವರೇ, ನನ್ನ ಪಾಪಗಳನ್ನೆಲ್ಲ ಕ್ಷಮಿಸು, ನನ್ನ ಪ್ರಾರ್ಥನೆಯನ್ನು ನಡೆಸಿಕೊಡು, ಈ ನನ್ನ ಒಂದು ಪ್ರಾರ್ಥನೆಯನ್ನಷ್ಟೆ ನಡೆಸಿ ಕೊಡು!" ಎಂದು ಚಿಂತಿಸುತ್ತ ಹೊರಟೆ. ಚರ್ಚಿನ ಮುಂದೆ ಹೋದಾಗ ಶಿಲುಬೆ ವಂದನೆ ಮಾಡಿ, ಮತ್ತೆ ದೇವರಿಗೆ ನನ್ನ ಪಾಪಗಳನ್ನು ಕ್ಷಮಿಸುವಂತೆ ಕೇಳಿಕೊಂಡೆ. ಇದನ್ನು ನಡೆಸಿಕೊಟ್ಟರೆ ನಾನು ಅದನ್ನು ಮಾಡಿಸುತ್ತೇನೆ ಎಂದೆಲ್ಲ ದೇವರಿಗೆ

ಷರತ್ತುಗಳನ್ನು ಹಾಕುವುದು ಸರಿಯಲ್ಲವೆಂಬುದನ್ನು ಆಗ ಜ್ಞಾಪಿಸಿಕೊಂಡು ಹಾಗೇನೂ ಮಾಡ ಹೋಗಲಿಲ್ಲ. ಹೀಗೆ ನಾನು ಆಲೋಚನಾಮಗ್ನನಾಗಿ, ಕೆಸರನ್ನು ಕಣ್ಣುಕಾಣದವನಂತೆ ಅತ್ತಇತ್ತ ಸಿಡಿಸುತ್ತ ಮುಂದುವರಿದೆ. ಬೀದಿಗಳಲ್ಲಿ ಜನರೇ ಇರಲಿಲ್ಲ. ಇದ್ದ ಕೆಲವರೂ ನನ್ನಂತೆಯೇ ತಮ್ಮತಮ್ಮ ಆಲೋಚನೆ ಆತಂಕಗಳಲ್ಲಿ ಮಗ್ನರಾಗಿದ್ದರು. ಹಾಗಿಲ್ಲದೆ ಬೇರೆ ಹೇಗೆ ಇರಲು ಸಾಧ್ಯ – ಅಂತಹ ಹವಾಗುಣದಲ್ಲಿ ಅಂತಹ ವೇಳೆಯಲ್ಲಿ ಬೀದಿಯಲ್ಲಿ ನಡೆದು ಹೋಗುತ್ತ. ಮೈ ಎಲ್ಲ ಮಸಿಮೆತ್ತಿದ್ದ ಕೆಲಸಗಾರರ ಗುಂಪೊಂದು ನನಗೆ ಎದುರಾಯಿತು. ಅವರು ನನ್ನನ್ನು ತಳ್ಳಿಕೊಂಡೇ ಹೋದರು, ಒಡ್ಡ ಜನ. ಇದ್ದಕ್ಕಿದ್ದಂತೆ ನನಗೆ ಅಂಜಿಕೆ ಯಾಯಿತು, ಕಳವಳವಾಯಿತು. ಹಣದ ಬಗೆಗೆ ನಾನು ಇನ್ನೆಷ್ಟು ಮಾತ್ರವೂ ಯೋಚಿಸ ಹೋಗಲಿಲ್ಲ. ಇನ್ನೊಂದು ಯತ್ನ ಮಾಡುವುದು, ಆಮೇಲೆ ಬಿಟ್ಟು ಬಿಡುವುದು ಎಂದುಕೊಂಡೆ. ವೊಸ್ಕ್ರೆಸೇನ್‌ಸ್ಕಿ ಸೇತುವೆ ಬಳಿ ಹೋಗುವ ಹೊತ್ತಿಗೆ ನನ್ನ ಬೂಟಿನ ಅಟ್ಟೆ ಕಿತ್ತು ಜೋಲಾಡತೊಡಗಿತು. ಮುಂದೆ ಹೋಗುವುದು ಕಷ್ಟವಾಯಿತು. ಆಗ ನಾನು ಯಾರನ್ನು ಸಂಧಿಸಿದೆ ಅಂತೀರಾ – ಮತ್ತಾರನ್ನೂ ಅಲ್ಲ, ನಮ್ಮ ನಕಲು ಮಾಡುವ ಯೆರ್ಮೊಲಯೆವ್‌ನನ್ನು. ನನ್ನನ್ನು ನೋಡಿ ಸೆಟೆದು ನಿಂತ. ತನ್ನ ದೃಷ್ಟಿಯಿಂದ ನನ್ನನ್ನೇ ಹಿಂಬಾಲಿಸಿದ – ನನ್ನ ಆರೋಗ್ಯ ಕ್ಕಾಗಿ ಸ್ವಸ್ತಿಪಾನ ಮಾಡಲು ನನ್ನಿಂದ ಒಂದು ತಾಮ್ರದ ಬಿಲ್ಲೆ ನಿರೀಕ್ಷಿಸುತ್ತಿ ದ್ದನೋ ಎಂಬಂತೆ. "ಆಹ್ ! ನನ್ನ ಆರೋಗ್ಯಕ್ಕೆ ಕುಡಿಯುತ್ತೀಯ ? ಯಾರಿಗೆ ಬೇಕು ಅದೀಗ ?" ನಾನೆಂದುಕೊಂಡೆ. ನನಗೆ ತುಂಬ ಸುಸ್ವಾದಂತಾಯಿತು. ಒಂದು ಘಳಿಗೆ ನಿಂತು ವಿರಮಿಸಿಕೊಂಡು ಆಮೇಲೆ ಮತ್ತೆ ಕಾಲೆಳೆದುಕೊಂಡು ಹೊರಟೆ. ಸುತ್ತಮುತ್ತ ನೋಡಿದೆ, ನನ್ನ ಮನಸ್ಸನ್ನು ತೂಗಿ ಹಾಕಲು ಯಾವುದಾದರೂ ವಿಷಯ ದೊರಕುತ್ತದೇನೋ ಎಂದು. ನನ್ನ ಮನಸ್ಸನ್ನು ಬೇರೊಂದು ಕಡೆಗೆ ತಿರುಗಿಸುವಂಥ, ಸ್ವಲ್ಪ ಉತ್ತೇಜನಗೊಳಿಸುವಂಥ ಏನಾದರೊಂದು ವಿಷಯ ಬೇಕಿತ್ತು. ಆದರೆ ಏನೊಂದು ವಿಷಯವೂ ಹೊಳೆಯಲಿಲ್ಲ. ಅದರ ಬದಲು ನಾನು ಕೊಚ್ಚೆಯ ಮಡುವೊಂದರಲ್ಲಿ ನೋಡದೆ ಕಾಲಿಟ್ಟು ಸಿಡಿಸಿದೆ, ಅಷ್ಟೆ. ಅದು ನನ್ನ ಬಟ್ಟೆಯನ್ನು ಮತ್ತಷ್ಟು ಕೊಳೆ ಮಾಡಿತು. ನಾನು ರೋಸಿ ಅತ್ತೆ. ದೂರದಲ್ಲಿ ಹಳದಿಯ ಮರದ ಮನೆಯೊಂದು ಕಾಣುತ್ತಿತ್ತು. ಅದರ ಮೇಲೆ ಮುಂದಿದ್ದ ತ್ರಿಕೋಣಾಕಾರದ ಗೋಡೆಯು ಅಟ್ಟವು ಮಹಡಿಯಾಗಿ ನೆರವಾಗಿತ್ತು. "ಇದೇ ಇರಬೇಕು ಮಾರ್ಕೊವ್‌ರ ಮನೆ. ಯೆಮೆಲ್ಯಾನ್ ಇವಾನೊವಿಚ್ ವರ್ಣಿ ಸಿದಂತೆಯೇ ಇದೆ" ಅಂದುಕೊಂಡೆ. (ಅದೇ, ಬಡ್ಡಿಯ ಮೇಲೆ ಹಣ ಸಾಲ ನೀಡುವ ಮಾರ್ಕೊವ್). ಆದರೆ ನಾನು ನರದೌರ್ಬಲ್ಯಕ್ಕೊಳಗಾಗಿದ್ದೆ. ಅದು ಮಾರ್ಕೊವ್‌ರ ಮನೆಯೆಂದು ಗೊತ್ತಿದ್ದರೂ, ಖಾತರಿ ಪಡಿಸಿಕೊಳ್ಳಲು ಗಸ್ತು

ಪೊಲೀಸನನ್ನು ಕೇಳಿದೆ: "ಇದು ಯಾರ ಮನೆ, ಗೆಳೆಯ?" ಉತ್ತರ ಸ್ನೇಹಪರ ವಾಗಿರಲಿಲ್ಲ. ಸಿಡುಕು ಪೊಲೀಸು ಪೇದೆಯ ಉತ್ತರ ಹೀಗಿತ್ತು: "ಮತ್ತೆ ಯಾರ ಮನೇರೀ? ಮಾರ್ಕೊವ್‌ರ ಮನೆ." ಈ ಪೊಲೀಸು ಪೇದೆಗಳೆಲ್ಲ ಹೀಗೇ – ಸ್ವಲ್ಪವೂ ಸಹಾನುಭೂತಿ ಹೊಂದಿರುವುದಿಲ್ಲ. ಹೋಗಲಿ, ಪೊಲೀಸನವ ಹೇಗಿದ್ದರೆ ನನಗೇ ನಂತೆ. ಆದರೂ ಅದು ನನ್ನ ಮನಸ್ಸಿನಲ್ಲಿ ಕಹಿ ಉಂಟುಮಾಡಿತು. ನಿಮಗೇ ತಿಳಿದಿರುವಂತೆ ಕಷ್ಟಗಳು ಒಂದಕ್ಕೊಂದು ಅಂಟಿಕೊಂಡು ಬರುತ್ತವೆ. ಪ್ರತಿಯೊಂದು ಅಲ್ಪ ಸಂಗತಿಯೂ ಪರಿಸ್ಥಿತಿಯ ಮೇಲೆ ಪ್ರಭಾವ ಬೀರುವಂತೆ ಕಂಡುಬರುತ್ತದೆ. ನಾನು ಆ ಮನೆಯ ಮುಂದೆಯೇ ಮೂರು ಬಾರಿ ಹೋಗಿ ಬಂದೆ, ಆದರೂ ಒಳ ಪ್ರವೇಶಿಸುವುದನ್ನು ಹೆಚ್ಚುಹೆಚ್ಚು ಕಷ್ಟವನ್ನಾಗಿ ಕಂಡುಕೊಂಡೆ. "ಅವನು ನನಗೆ ಹಣ ಕೊಡುವುದಿಲ್ಲ" ನಾನಂದುಕೊಂಡೆ. "ಎಂದಿಗೂ ಇಲ್ಲ. ನಾನು ಅವನಿಗೆ ಸಂಪೂರ್ಣವಾಗಿ ಅಪರಿಚಿತ. ನೋಡುವುದಕ್ಕೂ ಆಕರ್ಷಕವಾಗಿಲ್ಲ. ವಿಷಯ ಬೇರೆ ಅಷ್ಟು ಸೂಕ್ಷ್ಮವಾದುದು – ಆದರೂ ಅದೃಷ್ಟವೇ ನಿರ್ಧರಿಸಲಿ. ಕೇಳುವುದಂತೂ ಕೇಳಿ ಬಿಡೋದು, ಆಮೇಲೆ ಕೇಳಲಿಲ್ಲವಲ್ಲ ಅಂತ ನನ್ನನ್ನೇ ನಿಂದಿಸಿಕೊಳ್ಳಬಾರದಲ್ಲ. ಅವರೇನೂ ನನ್ನನ್ನು ತಿಂದು ಹಾಕುವುದಿಲ್ಲವಷ್ಟೆ." ಹಾಗೆಂದುಕೊಂಡು ನಾನು ಮೆಲ್ಲಗೆ ಗೇಟನ್ನು ತೆಗೆದು ಒಳಹೋದೆ. ಅಲ್ಲಿ ನನಗೆ ಇನ್ನಷ್ಟು ತೊಂದರೆ ಕಾದಿತ್ತು – ಹಾಳು ನಾಯಿಮರಿಯೊಂದು ತಲೆ ಎತ್ತಿಕೊಂಡು ಬೊಗಳುತ್ತ ಅತ್ತಿಂದಿತ್ತ ಓಡಾಡತೊಡಗಿತು. ಇಂಥ ಕೆಟ್ಟ ಅಲ್ಪ ಪ್ರಸಂಗವೇ ಸಾಕು, ಯಾವುದೇ ಮನುಷ್ಯನನ್ನು ಹುಚ್ಚನನ್ನಾಗಿಸುವುದಕ್ಕೆ, ಅವನ ಚಿತ್ತಸ್ವಾಸ್ಥ್ಯವನ್ನು ಹಾಳುಮಾಡಿ ಅವನ ನಿರ್ಧಾರಗಳನ್ನೆಲ್ಲ ಏರುಪೇರು ಮಾಡುವುದಕ್ಕೆ. ನಾನು ಆ ಮನೆಯನ್ನು ಜೀವಂತವಾಗಿರುವುದಕ್ಕಿಂತ ಸತ್ತ ಮನುಷ್ಯನಂತೆ ಪ್ರವೇಶಿಸಿದೆ. ಅಲ್ಲಿ ಮತ್ತೆ ನಾನು ಇನ್ನಷ್ಟು ತೊಂದರೆ ಎದುರಿಸಿದೆ. ಹೊಸ್ತಿಲ ಬಳಿಯೇ ಒಬ್ಬ ಮುದಿ ಹೆಂಗಸನ್ನು ಎಡವಿದೆ. ಅಲ್ಲಿನ ಆ ಧೂಳಿನಲ್ಲಿ ನನಗೆ ಅವಳು ಕುಳಿತಿದ್ದುದು ಕಂಡುಬರಲೇ ಇಲ್ಲ. ಅವಳು ಏನೋ ಪಾತ್ರೆ ಇಟ್ಟುಕೊಂಡು ಹಾಲನ್ನು ಸೋಸುತ್ತಿದ್ದಳೆಂದು ಕಾಣುತ್ತೆ. ಪಾತ್ರೆ ಸಹಜವಾಗಿಯೇ ಉರುಳಿತು. ಅವಳು ಎಷ್ಟು ಕೂಗಾಡಿದಳು, ಚೀರಾಡಿದಳು! "ನಿನಗೇನು ಬೇಕು ಇಲ್ಲಿ!" ಅಂತ ಮೇಲಿಂದ ಮೇಲೆ ಕೇಳುತ್ತ ಸಿಕ್ಕಾಪಟ್ಟೆ ಬಯ್ದಳು. ನಾನು ಇದನ್ನೆಲ್ಲ ಏತಕ್ಕೆ ಬರೆಯುತ್ತಿದ್ದೇನೆ ಅಂದರೆ, ವಾರೆಂಕಾ, ನಾನು ಇಂಥ ಸ್ಥಿತಿಯಲ್ಲಿರುವಾಗಲೆಲ್ಲ ಯಾವಾಗಲೂ ಇಂಥವೇ ಪ್ರಸಂಗಗಳು ಜರುಗಿವೆ. ಅದು ನನ್ನ ಹಣೆಯ ಬರಹ. ನಾನು ಯಾವಾಗಲೂ ಹೀಗೆ ತಪ್ಪು ಮಾಡುತ್ತ ತೊಂದರೆಯಿಂದ ತೊಂದರೆಗೆ ಹೋಗುತ್ತಿರುತ್ತೇನೆ. ನಮ್ಮ ಈ ಗಲಾಟೆ ಆ ಮನೆಯ ಫಿನ್ನಿಷ್ ಯಜಮಾನಿಯನ್ನು ಅಲ್ಲಿಗೆ ಕರೆತಂದಿತು. ಅವಳೊಬ್ಬ ಭಯಂಕರ ಹೆಣಮುಖದ ಮುದುಕಿಯಾಗಿದ್ದಳು.

ಮಾರ್ಕೊವ್ ಅಲ್ಲಿ ವಾಸಿಸುತ್ತಿದ್ದರೇ ಎಂದು ನಾನು ಅವಳನ್ನು ಕೇಳಿದೆ. ಅವಳು ಇಲ್ಲ ಎಂದಳು. ಆದರೆ ನನ್ನನ್ನು ಮತ್ತೊಮ್ಮೆ ಜಾಗರೂಕತೆಯಿಂದ ಮೇಲಿಂದ ಕೆಳಕ್ಕೆ ನೋಡಿ ತನ್ನ ಮನಸ್ಸನ್ನು ಬದಲಿಸಿದಳೆಂದು ಕಾಣುತ್ತೆ. ಏಕೆ ಬೇಕು ಎಂದು ಕೇಳಿದಳು. ನನ್ನನ್ನು ಯೆಮೆಲ್ಯಾನ್ ಇವಾನೊವಿಚ್ ಕಳಿಸಿದ್ದರೆಂದು ಹೇಳಿ ಎಲ್ಲ ಸಂಗತಿಯನ್ನು ಅವಳಿಗೆ ತಿಳಿಸಿದೆ. ಮುದುಕಿ ಈಗ ತನ್ನ ಮಗಳನ್ನು ಕರೆದಳು. ಆ ಹುಡುಗಿ ಎತ್ತರಕ್ಕಿದ್ದಳು, ಬರಿಗಾಲಿನಲ್ಲಿದ್ದಳು. "ಅಪ್ಪನನ್ನು ಕರಿ. ಮಹಡಿಯ ಮೇಲೆ ಬಾಡಿಗೆದಾರರ ಜೊತೆ ಇದ್ದಾರೆ" ಎಂದಳು. ಆಮೇಲೆ ನನ್ನ ಕಡೆಗೆ ತಿರುಗಿ, "ದಯವಿಟ್ಟು ಒಳಕ್ಕೆ ಬನ್ನಿ" ಅಂದಳು.

ಕೋಣೆ ಸಾಕಷ್ಟು ಸುಖಕರವಾಗಿತ್ತು. ಗೋಡೆಗಳ ಮೇಲೆ ಚಿತ್ರಗಳಿದ್ದವು. ಹೆಚ್ಚಾಗಿ ಜನರಲ್ಲರ ಚಿತ್ರಗಳು. ಕೋಣೆಯಲ್ಲಿ ಒಂದು ಸೋಫಾ, ಒಂದು ದುಂಡು ಮೇಜು ಇದ್ದವು. ಕಿಟಕಿ ಚೌಕಟ್ಟಿನ ಬಳಿ ಮಿನ್ಯನೆಟ್ ಹಾಗೂ ಬಾಲ್ಸಮ್ ಹೂಗಳ ಕುಂಡಗಳಿದ್ದವು. ಮುಖಭಂಗವಾಗುವುದಕ್ಕೆ ಮುನ್ನವೇ ಹೋಗಿ ಬಿಡುವುದು ಒಳ್ಳೆಯದಲ್ಲವೇ ಅನಿಸಿತು ನನಗೆ. ನಾನು ಇನ್ನೇನು ಓಡಿ ಹೋಗುವುದರಲ್ಲಿದ್ದೆ, ನನ್ನ ಚಿನ್ನ. ನಾಳೆ ಪುನಃ ಬಂದರಾಯಿತು, ಎಂದು ಆಗಲೇ ನಿರ್ಧರಿಸಿದ್ದೆ. ನಾಳೆ ಹವಾಗುಣವೂ ಚೆನ್ನಾಗಿ ಇರುತ್ತೆ, ಹಾಲು ಉರುಳಿಸಿದ ಪ್ರಸಂಗವೂ ಇರುವುದಿಲ್ಲ, ಗೋಡೆಗಳ ಮೇಲಿರುವ ಜನರಲ್ಲರೂ ಇಷ್ಟು ಉಗ್ರವಾಗಿ ನನ್ನತ್ತ ನೋಡು ತ್ತಿರುವುದಿಲ್ಲ. ನಾನು ಇನ್ನೇನು ಬಾಗಿಲ ಕಡೆಗೆ ಹೊರಟಿದ್ದೆ, ಆಗ ಅವರು ಬಂದರು. ಅವರು ಒಬ್ಬ ಪುಟ್ಟ ಆಕೃತಿಯ ಬೂದು ಮೈ ಬಣ್ಣದ ವೃದ್ಧರಾಗಿ ದ್ದರು. ಕಣ್ಣುಗಳು ಸದಾ ಚಡಪಡಿಸುತ್ತಿದ್ದವು. ಕೊಳಕಲಾದ ಡ್ರೆಸಿಂಗ್ ಗೌನ್ ತೊಟ್ಟಿದ್ದರು. ಸೊಂಟದ ಬಳಿ ಒಂದು ಉದ್ದ ದಾರ ಕಟ್ಟಿದ್ದರು. ತಮ್ಮಿಂದ ನನಗೇ ನಾಗಬೇಕು ಎಂದವರು ಕೇಳಿದರು. ನಾನು ಯೆಮೆಲ್ಯಾನ್ ಇವಾನೊವಿಚ್‌ರ ಬಗೆಗೆ, ನಲವತ್ತು ರೂಬಲ್‌ಗಳ ಬಗೆಗೆ ಎಲ್ಲ ವಿಷಯವನ್ನೂ ಹೇಳಿದೆ. ಆದರೆ ಇನ್ನೂ ಮುಗಿಸಿರಲಿಲ್ಲ. ಅವರ ಕಣ್ಣುಗಳಿಂದಲೇ ನನ್ನ ಕೆಲಸ ಕೈಗೂಡಲಿಲ್ಲವೆಂಬುದನ್ನು ಅರಿತೆ. "ನಿಮಗೆ ಹಣ ತುರ್ತಾಗಿ ಬೇಕಿತ್ತೆ?" ಅವರು ಕೇಳಿದರು. "ಆದರೆ ಸಧ್ಯಕ್ಕೆ ನನ್ನ ಬಳಿ ಇಲ್ಲವಲ್ಲ. ಮತ್ತೆ ಆಧಾರವಾಗಿ ಏನು ಕೊಡುತ್ತೀರಿ?" ನನ್ನ ಬಳಿ ಯಾವ ಆಧಾರವೂ ಇಲ್ಲವೆಂದು ವಿವರಿಸಿದೆ. ಮತ್ತೆ ಯೆಮೆಲ್ಯಾನ್ ಇವಾನೊವಿಚ್‌ರ ಮಾತೆತ್ತಿದೆ. ತುಂಬ ತುರ್ತಾಗಿ ಬೇಕಿದ್ದಿತೆಂದು ತಿಳಿಸಿದೆ. "ಯೆಮೆಲ್ಯಾನ್ ಇವಾ ನೊವಿಚ್‌ರಿಗೂ ಇದಕ್ಕೂ ಏನು ಸಂಬಂಧ? ನನ್ನ ಬಳಿ ಹಣವಿಲ್ಲ" ಅವರೆಂದರು. ಹೌದು ಇಲ್ಲ, ನಾನೆಂದುಕೊಂಡೆ. ನನಗದು ತುಂಬ ಹಿಂದಿನಿಂದಲೇ ತಿಳಿದಿತ್ತು. ಆಹ್, ವಾರೆಂಕಾ, ಆಗ ಭೂಮಿ ಬಾಯಿಬಿಟ್ಟು ನನ್ನನ್ನು ಅಲ್ಲೇ ನುಂಗಿ ಹಾಕಿ ಬಿಟ್ಟಿದ್ದರೆ! ನನ್ನ ಕಾಲುಗಳು ಮರಗಟ್ಟಿದವು. ನನ್ನ ಬೆನ್ನುದ್ದ ಕಂಪನವಾಯಿತು.

ನಾನು ಅವರನ್ನು ನೋಡುತ್ತಿದ್ದೆ, ಅವರು ನನ್ನನ್ನು ನೋಡುತ್ತಿದ್ದರು. ಅವರ ಕಣ್ಣುಗಳು "ಹುಂ, ಹೊರಡು. ಇಲ್ಲಿ ನಿನಗೇನು ಕೆಲಸ!" ಎಂದು ಹೇಳುವಂತಿದ್ದವು. ಇದು ವ್ಯಾಪಾರದ ವಿಷಯವಾಗಿರದೆ ಇದ್ದಿದ್ದರೆ, ನಾನು ತುಂಬ ಕ್ಲೇಶಗೊಳ್ಳುತ್ತಿದ್ದೆ. "ಹಣ ನಿಮಗೆ ಏತಕ್ಕೆ ಬೇಕು?" (ಹೀಗೆಯೇ ಅವರು ನನ್ನನ್ನು ಕೇಳಿದ್ದು, ನನ್ನ ಪ್ರಿಯೆ.) ನಾನು ಏನಾದರೂ ಹೇಳಬೇಕಲ್ಲ ಅನ್ನುವ ಸಲುವಾಗಿ ಮತ್ತೆ ಮಾತನಾಡತೊಡಗಿದೆ. ಆದರೆ ಅವರು ನನ್ನ ಮಾತನ್ನೇನೂ ಕೇಳುತ್ತಿರಲಿಲ್ಲ. "ಇಲ್ಲ. ನನ್ನ ಹತ್ತಿರ ಹಣವಿಲ್ಲ. ಏನು ಮಾಡೋದು," ಅವರು ಮತ್ತೆ ಹೇಳಿದರು. ನಾನು ಒತ್ತಾಯಿಸುತ್ತಲೇ ಇದ್ದೆ, ಬೇಡಿಕೊಳ್ಳುತ್ತಿದ್ದೆ, ಹಣವನ್ನು ಕಾಲಕ್ಕೆ ಸರಿಯಾಗಿ, ಕಾಲಕ್ಕೆ ಮುನ್ನವೇ ಹಿಂದಿರುಗಿಸುವುದಾಗಿ ಮಾತು ಕೊಟ್ಟೆ. ಎಷ್ಟು ಬೇಕಾದರೂ ಬಡ್ಡಿ ಕೊಡುವುದಾಗಿ ಹೇಳಿದೆ. ಹೋಗಲಿ ಅಷ್ಟೂ ಅಲ್ಲದಿದ್ದರೆ, ಸ್ವಲ್ಪವನ್ನಾದರೂ ಕೊಡಲು ಆಗುವುದಿಲ್ಲವೇ? ಆ ಘಳಿಗೆಯಲ್ಲಿ ನಾನು ನಿಮ್ಮ ಬಗೆಗೆ ಯೋಚಿಸುತ್ತಿದ್ದೆ, ನನ್ನ ಮುದ್ದು. ನೀವು ನೀಡಿದ ಆ ಅರ್ಧ ರೂಬಲ್ ಬಗೆಗೆ, ನಮ್ಮೆಲ್ಲ ತೊಂದರೆಗಳ ಹಾಗೂ ಆವಶ್ಯಕತೆಗಳ ಬಗೆಗೆ ಯೋಚಿಸುತ್ತಿದ್ದೆ. "ಉಹೂಂ" ಅವರು ಮತ್ತೆ ಹೇಳಿದರು. "ಬಡ್ಡಿ ವಿಷಯ ಮಾತನಾಡಬೇಡಿ; ನೀವು ಏನನ್ನಾದರೂ ಆಧಾರವಾಗಿ ನೀಡಬೇಕು. ನನ್ನ ಬಳಿ ಹಣವಿಲ್ಲ. ದೇವರಾಣೆಗೂ. ಏನು ಮಾಡೋದು!" ದೇವರಾಣೆ! ದೇವರ ಹೆಸರನ್ನು ಹೇಳುತ್ತಾನಲ್ಲ, ಈ ಠಕ್ಕ!

ನಾನು ಆ ಮನೆಯನ್ನು ಬಿಟ್ಟು ಹೇಗೆ ಹೊರಬಂದೆ, ಹೇಗೆ ವೊಸ್ಕ್ರೆಸೇನ್‌ಸ್ಕಿ ಸೇತುವೆ ತಲುಪಿದೆ, ನಾನು ನಿಜಕ್ಕೂ ಜ್ಞಾಪಿಸಿಕೊಳ್ಳಲಾರೆ. ನಾನು ತುಂಬ ಬಳಲಿದ್ದೆ. ಮೈಯೆಲ್ಲ ಥಂಡಿಯಿಂದ ಕೊರೆಯುತ್ತಿತ್ತು. ಆಫೀಸನ್ನು ತಡವಾಗಿ, 10 ಗಂಟೆಗೆ, ತಲುಪಿದೆ. ನನ್ನ ಬಟ್ಟೆಯನ್ನು ಸ್ವಲ್ಪ ಬ್ರಷ್‌ನಿಂದ ಒರಸಲು ಬಯಸಿದ್ದೆ. ಆದರೆ ಕಾವಲುಗಾರ ಸ್ನೆಗಿರ್ಯೋವ್ ಅದಕ್ಕೆ ಬಿಡಲಿಲ್ಲ. ನಾನು ಬ್ರಷ್ಷನ್ನು ಹಾಳು ಮಾಡಬಹುದೆಂದು ಅವನಿಗೆ ಭಯ. ಬ್ರಷ್ ಎಷ್ಟೇ ಆಗಲಿ ಆಫೀಸಿಗೆ ಸೇರಿದ್ದಷ್ಟೆ. ಹೀಗೆ ನೋಡಿ, ನನ್ನ ಚಿನ್ನ, ನಾನು ಈ ಪ್ರಭುಗಳಿಗೂ ಕಾಲೊರೆಸಿಗಿಂತ ಕಡೆ. ಇದೇ ನನ್ನನ್ನು ಕೊಲ್ಲುತ್ತಿರುವುದು, ವಾರೆಂಕಾ, ಹಣದ ಕೊರತೆಯಲ್ಲ, ಆದರೆ ಈ ದುರವಸ್ಥೆ, ಈ ಹುಸಿನಗೆಗಳು, ಅಣಕವಾಡಗಳು, ಈ ವ್ಯಂಗ್ಯ ನುಡಿಗಳು. ದೊಡ್ಡ ಸಾಹೇಬರೇನಾದರೂ ಅಕಸ್ಮಾತ್ತಾಗಿ ಈ ಮಾತುಗಳನ್ನು ಕೇಳಿ ಬಿಟ್ಟರೆ! ನನ್ನ ಕೇಡಿನ ದಿನಗಳು ಬಂದಿವೆ.

ನಾನು ನಿಮ್ಮೆಲ್ಲ ಪತ್ರಗಳನ್ನೂ ಇಂದು ಪುನಃ ಓದಿದೆ, ನನ್ನ ಪ್ರಿಯೆ. ಅವೆಲ್ಲ ಎಷ್ಟು ದುಃಖ ಬರಿಸುವಂತಹವು. ನಮಸ್ಕಾರ. ದೇವರು ನಿಮ್ಮನ್ನು ಅನುಗ್ರಹಿಸಲಿ!

ಎಂ. ದೇವುಷ್ಕಿನ್

ಮರೆತದ್ದು: ನಾನು ನನ್ನ ತೊಂದರೆಗಳನ್ನು ತಮಾಷೆಯಾಗಿ ವಿವರಿಸಬೇಕೆಂಬ ಉದ್ದೇಶದಿಂದ ಬರೆದೆ, ವಾರೆಂಕಾ, ಆದರೆ ಅದು ಹಾಗೆ ಆಗಿಯೇ ಇಲ್ಲ. ನಾನು ನಿಮ್ಮನ್ನು ಸಂತೋಷಗೊಳಿಸಲು ಬಯಸಿದ್ದೆ. ನಾನು ನಿಮ್ಮನ್ನು ಬಂದು ಕಾಣು ತ್ತೇನೆ, ನನ್ನ ಚಿನ್ನ. ನಾಳೆ ಖಂಡಿತ ನಿಮ್ಮಲ್ಲಿಗೆ ಭೇಟಿ ನೀಡುತ್ತೇನೆ.

ಆಗಸ್ಟ್ 11

ನನ್ನ ಪುಟ್ಟ ಅರಗಿಣಿ, ವರ್ವಾರ ಅಲೆಕ್ಸೇಯೆವ್ನ,

ನಾನು ಹಾಳಾದೆ! ನಾವಿಬ್ಬರೂ ಸಂಪೂರ್ಣವಾಗಿ ಹಾಳಾದೆವು! ಎಲ್ಲವೂ, ನನ್ನ ಖ್ಯಾತಿ, ನನ್ನ ಗೌರವ, ಎಲ್ಲವೂ ನಾಶವಾಗಿವೆ. ನಾನು ನಾಶವಾದೆ ಹಾಗೂ ನೀವೂ ನಾಶವಾದಿರಿ, ನನ್ನ ದುರದೃಷ್ಟ ಗೆಳತಿ. ನೀವೂ ನನ್ನೊಂದಿಗೆ ಪುನಃ ಚೇತನ ಗೊಳ್ಳಲಾಗದಂತೆ ನಾಶವಾದಿರಿ. ನಾನು, ನಾನೇ, ನಿಮ್ಮ ನಾಶಕ್ಕೆ ಕಾರಣ. ಅವರು ನನ್ನ ತೇಜೋವಧೆ ಮಾಡುತ್ತಿದ್ದಾರೆ, ಗೇಲಿ ಮಾಡುತ್ತಿದ್ದಾರೆ, ಪರಿಹಾಸ್ಯ ಮಾಡು ತ್ತಿದ್ದಾರೆ. ನನ್ನ ಮನೆಯ ಯಜಮಾನಿ ವಾಸ್ತವವಾಗಿ ಶಾಪ ಹಾಕಿದಳು. ಅವಳು ನನ್ನನ್ನು ಇಂದು ಬೇಕಾಬಿಟ್ಟಿ ಬಯ್ದಳು, ನನ್ನ ಮೇಲೆ ರೇಗಿ ಕೂಗಾಡಿದಳು, ನಾನು ಮರದ ತುಂಡಿಗೂ ಕಡಿಮೆ ಎನ್ನುವಂತೆ ನನ್ನೊಂದಿಗೆ ವರ್ತಿಸಿದಳು. ಇದು ಸಾಲದೆನ್ನುವಂತೆ, ರತಜ್ಯಾಯೆವ್‌ನ ಸಂಜೆ ಕೂಟದಲ್ಲಿ ಯಾರೋ ನಾನು ನಿಮಗೆ ಬರೆದ ಪತ್ರವೊಂದರ ಕರಡು ಪ್ರತಿಯೊಂದನ್ನು ಗಟ್ಟಿಯಾಗಿ ಓದಿ ಹೇಳಿ ದರು. ಈ ಕರಡು ಪ್ರತಿ ನನ್ನ ಜೇಬಿನಿಂದ ಯಾವಾಗಲೋ ಬಿದ್ದು ಹೋಗಿದ್ದಿತು. ಅವರು ಹೇಗೆ ನಮ್ಮಿಬ್ಬರನ್ನೂ ಹಾಸ್ಯ ಮಾಡಿದರು, ನಮ್ಮ ಬಗೆಗೆ ನಾನಾ ರೀತಿಯ ಮಾತುಗಳನ್ನಾಡಿದರು. ಅವರು ಗಹಗಹಿಸಿ ನಗುತ್ತಿದ್ದರು, ಆ ದ್ರೋಹಿಗಳು. ನಾನು ಆ ಕೋಣೆಗೆ ಹೋಗಿ ರತಜ್ಯಾಯೆವ್‌ನನ್ನು ವಿಶ್ವಾಸಘಾತುಕ ಮಿತ್ರನೆಂದು, ದ್ರೋಹಿಯೆಂದು ಖಂಡಿಸಿದೆ. ಆದರೆ ನಾನೇ ದ್ರೋಹಿ, ದುರಾಕ್ರಮಣದಲ್ಲಿ ಸಿದ್ಧಹಸ್ತ, ಎಂದು ಅವನು ಪ್ರತಿನುಡಿದ. ನಾನೊಬ್ಬ ನಿಗೂಢ ವ್ಯಕ್ತಿ, ಒಬ್ಬ ಸ್ತ್ರೀಲಂಪಟ ಎಂದು ಕರೆದ. ಈಗ ಎಲ್ಲರೂ ನನ್ನನ್ನು ಹಾಗೇ ಕರೆಯುತ್ತಿದ್ದಾರೆ – ಸ್ತ್ರೀಲಂಪಟ ಅಂತ. ಇದು ಭಯಂಕರ, ನನ್ನ ಚಿನ್ನ, ಅವರು ನಿಮ್ಮ ಹಾಗೂ ನನ್ನ ಬಗೆಗೆ ಎಲ್ಲವನ್ನೂ, ಪ್ರತಿಯೊಂದು ಅಂಶವನ್ನೂ, ಬಲ್ಲರು. ಫಾಲ್ದೊ ನಿಯೂ ಅವರನ್ನೇ ಅನುಸರಿಸಿ ಹೊರಟಿದ್ದಾನಲ್ಲ! ಅಂಗಡಿಗೆ ಹೋಗಿ ಏನನ್ನೋ ತಂದುಕೊಡುವಂತೆ ನಾನು ಕೇಳಿದಾಗ ಅವನು ನಿರಾಕರಿಸಿದ, ತನಗೆ ಬೇರೆ ಕೆಲಸ ಇದೆ ಎಂದು ಹೇಳಿದ. "ಇದು ನಿನ್ನ ಕರ್ತವ್ಯವಲ್ಲವೇ?" ನಾನು ಕೇಳಿದೆ. "ಉಹೂಂ. ನನ್ನ ಕರ್ತವ್ಯವಲ್ಲ. ಏಕೆಂದರೆ ನೀವು ನನ್ನ ಯಜಮಾನಿಗೆ ಬಾಡಿಗೆ ಕೊಟ್ಟಿಲ್ಲ" ಅವನು ಪ್ರತಿನುಡಿದ. ನಾನು ಒಬ್ಬ ಪೆದ್ದ ರೈತನಿಂದ ಅಂತಹ ಅವಹೇಳನವನ್ನು

ಸಹಿಸದಾದೆ. ಅವನನ್ನು ಮೂರ್ಖನೆಂದು ಕರೆದೆ. ಅವನು ಏನು ಉತ್ತರ ಕೊಟ್ಟ ಗೊತ್ತೆ? "ನೀವೇ ಮೂರ್ಖರು!" ಅವನು ಕುಡಿದಿರಬೇಕೆಂದು ನನಗನಿಸಿತು. "ನೀನು ಕುಡಿದಿದ್ದೀಯಾ, ಮೂರ್ಖ, ಪೆದ್ದ!" ಎಂದೆ ನಾನು. ಅವನು ಎದುರು ಹೇಳಿದ: "ಹೌದು, ಹೌದು. ನೀವೇ ಕೊಡಿಸಿದರಲ್ಲವೇ ನನಗೆ ಒಂದು ಲೋಟ ಹೆಂಡ! ಹಿಂದಿನ ರಾತ್ರಿಯ ಆ ಘೋರ ಪ್ರಸಂಗದನಂತರ ಮತ್ತೆ ಸ್ತಿಮಿತಕ್ಕೆ ಬರೋಕೆ ನಿಮಗೇ ನೀವು ಒಂದು ಲೋಟ ಹೆಂಡ ಕೊಂಡುಕೊಳ್ಳೋಕೆ ತಾಖತ್ತಿಲ್ಲ! ಯಾವಾಗಲೂ ಹತ್ತು ಕೊಪೆಕ್ ಭಿಕ್ಷೆ ಬೇಡುತ್ತಿರುತ್ತೀರ." ಅಷ್ಟೇ ಸಾಲದೂಂತ ಅವನು ಇನ್ನೂ ಹೇಳಿದ: "ಮತ್ತೆ ನೀವು ನಿಮ್ಮನ್ನೇ ಒಬ್ಬ ಸಾಭ್ಯಸ್ಥ ಅಂತ ಕರೆದುಕೊಳ್ಳುತ್ತೀರ!" ಈ ಸ್ಥಿತಿಗೆ ನಾವು ಬಂದಿದ್ದೀವಿ, ಪ್ರಿಯ ವಾರೇಕಾ. ಜೀವಿಸಿಕೊಂಡೇ ಇರಲು ನನಗೆ ನಾಚಿಕೆಯಾಗುತ್ತಿದೆ. ನನ್ನನ್ನು ಬಹಿಷ್ಕೃತ ವ್ಯಕ್ತಿಯನ್ನಾಗಿ ಕಾಣಲಾಗುತ್ತಿದೆ. ಪಾಸ್‌ಪೋರ್ಟ್ ಇಲ್ಲದ ಅಲೆಮಾರಿ ವ್ಯಕ್ತಿಗಿಂತ ಕೀಳಾಗಿ ನನ್ನನ್ನು ಕಾಣಲಾಗುತ್ತಿದೆ. ಭಯಂಕರ, ಭಯಂಕರ! ನಾನು ಹಾಳಾದೆ, ವಿಮೋಚನೆಯ ಆಸೆಯೇ ಇಲ್ಲದ ಹಾಗೆ ಹಾಳಾಗಿದ್ದೇನೆ.

ಎಂ.ದಿ.

ಆಗಸ್ಟ್ 13

ದುರದೃಷ್ಟದ ಮೇಲೆ ದುರದೃಷ್ಟ, ನನ್ನ ಸನ್ಮಿತ್ರ ಮಕಾರ್ ಅಲೆಕ್ಸೇಯೆವಿಚ್!

ಏನು ಮಾಡಬೇಕೆಂದೇ ನನಗೆ ಹೊಳೆಯುತ್ತಿಲ್ಲ. ನಿಮ್ಮ ಗತಿ ಏನು? ನಾನು ನಿಮಗೆ ಈಗ ಯಾವ ರೀತಿಯಲ್ಲಿ ಸಹಾಯವಾಗಬಲ್ಲೆ. ನಾನು ಇವತ್ತು ಇಸ್ತ್ರಿ ಮಾಡುತ್ತ ಕೈಯನ್ನು ಗಾಯಮಾಡಿಕೊಂಡೆ. ಇಸ್ತ್ರಿಪೆಟ್ಟಿಗೆಯು ಜಾರಿಬಿದ್ದು ಬೆರಳುಗಳನ್ನು ಸುಟ್ಟಿತು, ಗಾಯಮಾಡಿತು ಕೂಡ. ಈಗ ನಾನೇನು ಮಾಡಲಿ? ನಾನು ಕೆಲಸ ಮಾಡಲಾರದಾಗಿದ್ದೇನೆ. ಫಿದೋರಳೂ ಮೂರು ದಿನದಿಂದ ಕಾಯಿಲೆ ಮಲಗಿದ್ದಾಳೆ. ನನಗೆ ತುಂಬ ಚಿಂತೆಯಾಗಿದೆ. ನಿಮಗೆ ಬೆಳ್ಳಿಯ ಮೂವತ್ತು ಕೊಪೆಕ್ ನಾಣ್ಯ ಕಳುಹಿಸುತ್ತಿದ್ದೇನೆ: ಇದಿಷ್ಟೆ ನಮ್ಮ ಬಳಿ ಇರುವುದು. ನಿಮಗೆ ಇನ್ನೂ ಹೆಚ್ಚು ಸಹಾಯ ಮಾಡಲು ನನಗೆ ಬಹಳ ಇಷ್ಟ. ಹೇಗೆ ಮಾಡಬೇಕೋ, ದೇವರಿಗೇ ಗೊತ್ತು. ನನ್ನ ಪರಿಸ್ಥಿತಿ ನನ್ನನ್ನು ಸುಮ್ಮನೆ ಅಳುವಂತೆ ಮಾಡುತ್ತಿದೆ. ನಮಸ್ಕಾರ, ನನ್ನ ಪ್ರಿಯ ಮಿತ್ರ. ಇಂದು ನೀವು ನನ್ನನ್ನು ಕಾಣಲು ಬಂದರೆ ನನಗೆ ತುಂಬ ಸಮಾಧಾನವಾಗುತ್ತೆ.

ವ. ದೊ.

ಮಕಾರ್ ಅಲೆಕ್ಸೇಯೆವಿಚ್ !

ನಿಮಗೇನಾಗಿದೆ? ನಿಮಗೆ ದೇವರ ಭಯವೆಲ್ಲ ಹೊರಟುಹೋಯಿತೆ? ನೀವು ನನ್ನನ್ನು ಹುಚ್ಚಳನ್ನಾಗಿ ಮಾಡುತ್ತಿದ್ದೀರಿ. ನಿಮಗೆ ನಾಚಿಕೆಯಾಗಬೇಕು – ನೀವು ನಿಮ್ಮನ್ನೇ ಹಾಳುಮಾಡಿಕೊಳ್ಳುತ್ತಿದ್ದೀರಿ. ನಿಮ್ಮ ಮಾನಮರ್ಯಾದೆ ಏನಾಗುತ್ತೆ, ಯೋಚನೆ ಮಾಡಿ ನೋಡಿ. ನೀವು ಗೌರವ ಘನತೆ ಉಳ್ಳ ಪ್ರಾಮಾಣಿಕ ವ್ಯಕ್ತಿ ಹೀಗೆ ಮಾಡುವುದೇ? ಹೇಗೆ ಮಾಡಬಲ್ಲಿರಿ? ಆಫೀಸಿನಲ್ಲಿ ಈ ವಿಷಯ ಏನಾದರೂ ತಿಳಿದುಬಿಟ್ಟರೆ? ನೀವು ನಾಚಿಕೆಯಿಂದ ಪ್ರಾಣಬಿಡುತ್ತೀರಿ ಅಷ್ಟೆ! ನಿಮ್ಮ ಕೂದಲು ನರೆತಿಲ್ಲವೇ – ದೈವಭೀತಿಯನ್ನು ಕಳೆದುಕೊಳ್ಳಬೇಡಿ! ನಿಮಗೆ ಇನ್ನೆಷ್ಟೂ ಸಹಾಯ ಮಾಡುವುದಿಲ್ಲವೆಂದು ಫಿದೋರ ಹೇಳುತ್ತಾಳೆ. ನಾನೂ ಸಹಾಯ ಮಾಡುವುದಿಲ್ಲ. ನಿಮ್ಮ ವರ್ತನೆಯಿಂದ ನನ್ನ ಮೇಲೆ ಏನೂ ಪರಿಣಾಮವಿಲ್ಲ ಅಂದುಕೊಂಡಿರಾ? ನಿಮಗಾಗಿ ನಾನು ಎಷ್ಟು ಸಂಕಟ ಪಡುತ್ತಿದ್ದೇನೋ, ನಿಮಗೆ ಗೊತ್ತಿಲ್ಲ. ನನಗೆ ನಮ್ಮ ಮಹಡಿ ಮೆಟ್ಟಲ ಮೇಲೆ ಕಾಣಿಸಿಕೊಳ್ಳುವ ಧೈರ್ಯವೇ ಬರುತ್ತಿಲ್ಲ. ಎಲ್ಲರೂ ನನ್ನತ್ತವೇ ನೋಡುತ್ತ ಏನೇನೋ ಹೇಳುತ್ತಾರೆ. ನಾನು ಒಬ್ಬ ಕುಡಕನನ್ನು ಇಟ್ಟುಕೊಂಡಿದ್ದೇನೆಂದು ಅವರು ಹೇಳುತ್ತಾರೆ. ನಿಮ್ಮನ್ನು ಮನೆಗೆ ಹೊತ್ತು ತಂದಾಗ, "ಓಹ್, ಆ ಗುಮಾಸ್ತನನ್ನು ಮತ್ತೆ ಕರೆದುಕೊಂಡು ಬಂದರು!" ಎಂದು ಜನ ಆಡಿಕೊಳ್ಳುವುದನ್ನು ನಾನು ಕೇಳಿದ್ದೇನೆ. ನಾಚಿಕೆಯಾಗಿ ಅಳು ಬರುತ್ತೆ. ನನ್ನಾಣೆ, ನಾನು ಇಲ್ಲಿಂದ ಹೊರಟು ಹೋಗುತ್ತೇನೆ. ಪರಿಚಾರಕಳಾಗೋ, ಬಟ್ಟೆ ಒಗೆಯುವವಳಾಗೋ ಕೆಲಸ ಮಾಡಲು ಹೊರಟು ಹೋಗುತ್ತೇನೆ. ನಾನು ಇಲ್ಲಿ ಇರುವುದಿಲ್ಲ.

ನನ್ನನ್ನು ಬಂದು ಕಾಣುವಂತೆ ನಿಮ್ಮನ್ನು ಕೇಳಿಕೊಂಡಿದ್ದೆ. ನೀವು ಬರಲೇ ಇಲ್ಲ. ನನ್ನ ಪ್ರಾರ್ಥನೆಗಳೂ ನನ್ನ ಕಣ್ಣೀರೂ ನಿಮ್ಮ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡುತ್ತಿಲ್ಲ, ಮಕಾರ್ ಅಲೆಕ್ಸೇಯೆವಿಚ್! ನಿಮಗೆ ಹಣ ಎಲ್ಲಿಂದ ಬಂತೋ, ಆಶ್ಚರ್ಯವಾಗುತ್ತೆ. ದೇವರ ಭಯ ನಿಮಗಿರಲಿ! ನೀವು ನಿಮ್ಮನ್ನೇ ಹಾಳುಮಾಡಿಕೊಳ್ಳುತ್ತಿದ್ದೀರ! ಅದೂ ಯಾತಕ್ಕಾಗಿ? ನಿಮ್ಮ ಮನೆಯ ಯಜಮಾನಿಯು ನಿಮ್ಮನ್ನು ಕೋಣೆಯೊಳಕ್ಕೆ ಬಿಡಲಿಲ್ಲವೆಂದೂ ನೀವು ಇಡೀ ರಾತ್ರಿ ಮೊಗಸಾಲೆಯಲ್ಲೇ ಕಳೆಯಬೇಕಾಗಿ ಬಂದಿತೆಂದೂ ನಾನು ಕೇಳಿದೆ. ಎಂಥ ಅವಮಾನ! ಅದನ್ನು ಕೇಳಿದಾಗ ನನಗೆಷ್ಟು ಬೇಸರವಾಯಿತು!

ನಮ್ಮ ಮನೆಗೆ ಬನ್ನಿ. ಇಲ್ಲಿ ನೀವು ಸಂತೋಷವಾಗಿರಬಹುದು. ನಾವು ಒಟ್ಟಿಗೇ ಓದೋಣ. ಹಳೆಯ ದಿನಗಳನ್ನು ನೆನಸಿಕೊಳ್ಳೋಣ. ಫಿದೋರಳು ನಮಗೆ ಪುಣ್ಯಕ್ಷೇತ್ರಗಳಿಗೆ ತಾನು ತೀರ್ಥಯಾತ್ರೆ ಹೋಗಿಬಂದುದನ್ನೆಲ್ಲ ಹೇಳುತ್ತಾಳೆ.

ನನ್ನ ಪ್ರಿಯ ಮಿತ್ರ, ದಮ್ಮಯ್ಯ ನೀವು ನಿಮ್ಮನ್ನೂ ನಾಶಮಾಡಿಕೊಳ್ಳಬೇಡಿ. ನನ್ನನ್ನೂ ನಾಶಮಾಡಬೇಡಿ. ನಿಮಗಾಗಿಯೇ ನಾನು ಜೀವಿಸಿರುವುದು, ನಿಮಗಾಗಿಯೇ ಇಲ್ಲಿ ವಾಸಿಸುತ್ತಿರುವುದು. ಗೌರವವುಳ್ಳ ಮನುಷ್ಯನಾಗಿ, ಕಷ್ಟದಲ್ಲಿ ದೃಢತೆಯಿಂದಿರಿ. ಬಡವರಾಗಿರುವುದು ಪಾಪವೇನಲ್ಲ ಅನ್ನುವುದನ್ನು ಜ್ಞಾಪಕದಲ್ಲಿಡಿ. ನೀವು ಅಷ್ಟು ಹತಾಶರಾಗಬೇಕೇಕೆ? ಇದೆಲ್ಲ ತಾತ್ಕಾಲಿಕ. ದೇವರು ದಯಾಮಯ. ನಮ್ಮ ತೊಂದರೆಗಳೆಲ್ಲವೂ ಕಳೆಯುವುವು. ಆದರೆ ನೀವು ಸಹಿಸಿಕೊಂಡಿರಬೇಕು. ನಾನು ಇಪ್ಪತ್ತು ಕೊಪೆಕ್ ನಾಣ್ಯ ಕಳುಹಿಸುತ್ತಿದ್ದೇನೆ. ಹೊಗೇಸೊಪ್ಪನ್ನೋ ಸಧ್ಯಕ್ಕೆ ಅತ್ಯವಶ್ಯವಾದ ಮತ್ತೇನನ್ನಾದರೂ ನೀವು ಕೊಂಡುಕೊಳ್ಳಬಹುದು. ಆದರೆ ದಯವಿಟ್ಟು ಆ ಕೆಟ್ಟ ಪದಾರ್ಥಕ್ಕಾಗಿ ಖರ್ಚುಮಾಡಬೇಡಿ. ದಯವಿಟ್ಟು ನಮ್ಮನ್ನು ಕಾಣಲು ಬನ್ನಿ. ನೀವು ಹಿಂದಿನಂತೆಯೇ ನಮ್ಮಲ್ಲಿಗೆ ಬರಲು ನಾಚುವಿರೇನೋ. ಆದರೆ ನಾಚಬೇಕಾದ್ದಿಲ್ಲ. ನಿಮ್ಮ ಒಣ ಜಂಭವನ್ನು ಬಿಟ್ಟುಬಿಡಿ, ಪ್ರಾಮಾಣಿಕವಾಗಿ ಪಶ್ಚಾತ್ತಾಪಪಡಿ. ದೇವರಲ್ಲಿ ವಿಶ್ವಾಸವಿರಿಸಿ: ಅವನು ಎಲ್ಲವನ್ನೂ ಅತ್ಯುತ್ತಮವಾಗಿ ಪರಿಹರಿಸುವನು.

ವ. ದೊ.

ಆಗಸ್ಟ್ 19

ವರ್ವಾರ ಅಲೆಕ್ಸೇಯೆವ್ನ, ನನ್ನ ಚಿನ್ನ !

ನನಗೆ ನಾಚಿಕೆಯಾಗಿದೆ, ನಿಜಕ್ಕೂ ವಾಸ್ತವವಾಗಿಯೂ ನಾಚಿಕೆಯಾಗಿದೆ. ಅಂದ ಹಾಗೇ, ನನ್ನ ಮುದ್ದು, ನಿಜಕ್ಕೂ ಅಂತಹ ಅನಾಹುತ ಏನಾಗಿದೆ? ಯಾವಾಗಲೋ ಒಮ್ಮೆ ಹೃದಯಕ್ಕೆ ಸಂತೋಷ ನೀಡಬಾರದೇಕೆ? ಅಂತಹ ಸಮಯದಲ್ಲಿ ನಾನು ನನ್ನ ಬೂಟುಗಳ ಅಟ್ಟೆ ಚೆನ್ನಾಗಿಲ್ಲ ಅನ್ನುವ ವಿಷಯವನ್ನು ಮರೆಯುತ್ತೇನೆ. ಹಾಗೆ ನೋಡಿದರೆ ಈ ಅಟ್ಟೆಗಳ ಮಾತೆಲ್ಲ ಅರ್ಥವಿಲ್ಲದ್ದು. ನೀವು ಏನೇ ಮಾಡಿ ಅವು ಸಾಮಾನ್ಯವಾದವುಗಳಾಗಿಯೇ, ಕೀಳಾಗಿಯೇ, ಕೊಳಕಾಗಿಯೇ ಇರುತ್ತವೆ. ಅದೇ ರೀತಿ ಬೂಟುಗಳ ವಿಷಯ`ವೂ. ಪ್ರಾಚೀನ ಗ್ರೀಕ್ ಪಂಡಿತರು ಬೂಟುಗಳಿಲ್ಲದೆ ನಡೆದಾಡುತ್ತಿರಲಿಲ್ಲವೆ? ನಾವೇಕೆ ಅಂತಹ ಕ್ಷುಲ್ಲಕ ವಸ್ತುಗಳ ಬಗೆಗೆ ನಮ್ಮ ತಲೆ ಕೆಡಿಸಿಕೊಳ್ಳಬೇಕು? ಹಾಗಿದ್ದ ಮೇಲೆ ಜನ ಏಕೆ ನನ್ನನ್ನು ಹಾಸ್ಯ ಮಾಡುತ್ತಾರೆ, ಅವಮಾನ ಮಾಡುತ್ತಾರೆ? ನೀವೇಕೆ ಈ ವಿಷಯದ ಮೇಲೆಲ್ಲ ಬರೆಯುವುದಕ್ಕೆ ಹೋದಿರಿ? ಬರೆಯಲು ನಿಮಗೆ ಬೇರೆ ಯಾವ ವಿಷಯವೂ ಹೊಳೆಯಲಿಲ್ಲವೇ, ನನ್ನ ಪುಟ್ಟ ಪಕ್ಕಿ. ಫಿದೋರಳಿಗೆ ನನ್ನ ಪರವಾಗಿ ಹೇಳಿ, ಅವಳೊಬ್ಬ ವಿವೇಕವಿಲ್ಲದ ಗಯ್ಯಾಳಿ ಅಂತ. ತೊಂದರೆ ಕೊಡುವ, ಹಿಂಸಿ

ಸುವ ಗಯ್ಯಾಳಿ. ಇದಲ್ಲದೆ ಮೂರ್ಖಗಳು ಬೇರೆ, ಶುದ್ಧ ಮೂರ್ಖಗಳು. ಇನ್ನು ನನ್ನ ನರೆತ ಕೂದಲ ಬಗೆಗೆ ಹೇಳುವುದಾದರೆ, ನೀವು ತಪ್ಪು ತಿಳಿದಿದ್ದೀರಿ, ನನ್ನ ಪ್ರಿಯೆ. ನಾನು ನೀವು ಭಾವಿಸಿರುವಷ್ಟು ಮುದುಕನೇನಲ್ಲ. ಯೆಮೆಲ್ಯಾನ್ ನಿಮಗೆ ನಮಸ್ಕಾರ ತಿಳಿಸುತ್ತಾನೆ. ನನ್ನ ಸಲುವಾಗಿ ನೀವು ದುಃಖದಿಂದ ಜರ್ಜರಿತರಾದಿರೆಂದು, ಅತ್ತಿರೆಂದು ನೀವು ಬರೆಯುತ್ತೀರಿ. ನಿಮ್ಮ ಸಲುವಾಗಿ ನಾನೂ ದುಃಖದಿಂದ ಜರ್ಜರಿತನಾದೆ, ಅತ್ತೆ, ಎಂದು ನಾನು ಬರೆಯುತ್ತೇನೆ. ಮುಕ್ತಾಯದಲ್ಲಿ ನಿಮಗೆ ಆರೋಗ್ಯಭಾಗ್ಯವನ್ನೂ, ಸುಖಸಂತೋಷಗಳನ್ನೂ ಕೋರುತ್ತೇನೆ. ನನ್ನ ಮಟ್ಟಿಗೆ ಹೇಳುವುದಾದರೆ, ನನ್ನ ಆರೋಗ್ಯ ಚೆನ್ನಾಗಿದೆ, ಎಲ್ಲ ಸರಿಯಾಗಿದೆ, ನನ್ನ ಪುಟ್ಟ ದೇವತೆ.

ನಿಮ್ಮ ಮಿತ್ರ
ಮಕಾರ್ ದೇವುಷ್ಕಿನ್.

ಆಗಸ್ಟ್ 21

ನನ್ನ ಪ್ರಿಯ ಹಾಗೂ ಪೂಜ್ಯ ಗೆಳತಿ ವರ್ವಾರ ಅಲೆಕ್ಸೇಯೆವ್ನ,

ತಪ್ಪು ನನ್ನದು, ನಿಮ್ಮ ದೂಷಣೆಗೆ ನಾನು ಅರ್ಹ, ಎಂಬುದು ನನಗೆ ಗೊತ್ತು. ಆದರೆ ಅದನ್ನು ತಿಳಿದಿರುವುದರಿಂದ ಏನು ಪ್ರಯೋಜನ, ನನ್ನ ಚಿನ್ನ. ನಾನು ಆ ತಪ್ಪು ಕೆಲಸ ಮಾಡುವ ಮುನ್ನವೂ ಇವೆಲ್ಲವನ್ನೂ ತಿಳಿದಿದ್ದೆ. ಆದರೂ, ಅಪರಾಧದ ಪ್ರಜ್ಞೆ ಇದ್ದರೂ ನಾನು ತಿಳಿವಳಿಕೆ ಕಳೆದುಕೊಂಡೆ. ನನ್ನ ಅತ್ಯಂತ ಪ್ರೀತಿಪಾತ್ರಳೇ, ನಾನೇನೂ ದುಷ್ಟನಲ್ಲ, ಕಠಿಣ ಹೃದಯಿಯಲ್ಲ. ನಿಮ್ಮನ್ನು ನೋಯಿಸಬಯಸುವವನು, ನನ್ನ ಮಗು, ರಕ್ತ ಪಿಪಾಸು ಹುಲಿಯ ಹೃದಯ ಹೊಂದಿರಬೇಕು. ನಾನಾದರೋ, ನಿಮಗೇ ತಿಳಿದಿರುವಂತೆ, ಕುರಿಯ ಹೃದಯ ಹೊಂದಿದ್ದೇನೆ, ಕ್ರೌರ್ಯದ ಒಂದಿಷ್ಟು ಒಲವನ್ನೂ ಹೊಂದಿಲ್ಲ. ಆದ್ದರಿಂದ, ನನ್ನ ಚಿನ್ನ, ನನ್ನ ತಪ್ಪು ಕೆಲಸಗಳಿಗೆ ನಾನೇ ಸಂಪೂರ್ಣವಾಗಿ ದೋಷಾರ್ಹನಲ್ಲ, ನನ್ನ ಹೃದಯವೂ ಅಲ್ಲ, ಮನಸ್ಸೂ ಅಲ್ಲ. ಯಾವುದನ್ನು ದೂಷಿಸಬೇಕೋ ನನಗೆ ತಿಳಿಯದು. ಅದು ಅಷ್ಟು ಅಸ್ಪಷ್ಟ, ನನ್ನ ಚಿನ್ನ. ನೀವು ಮೂವತ್ತು ಕೊಪೆಕ್ ಬೆಳ್ಳಿಯ ನಾಣ್ಯ, ಅನಂತರ ಇನ್ನೂ ಇಪ್ಪತ್ತು ಕೊಪೆಕ್ ಕಳುಹಿಸಿದ್ದೀರ. ನಾನು ಈ ನಿಮ್ಮ, ಬಡಪಾಯಿ ಅನಾಥೆಯ, ನಾಣ್ಯಗಳನ್ನೇ ನೋವಿನ ಹೃದಯದೊಂದಿಗೆ ನೋಡುತ್ತ ಕುಳಿತಿದ್ದೆ. ನೀವು ನಿಮ್ಮ ಕೈಯನ್ನು ಸುಟ್ಟುಕೊಂಡಿದ್ದೀರ, ಕೆಲಸ ಮಾಡಲಾರಿರಿ, ಬೇಗನೆಯೇ ಉಪವಾಸ ಬೀಳಲಿರುವಿರಿ, ಆದರೂ ನೀವು ನನಗೆ ಹೊಗೇಸೊಪ್ಪು ಕೊಳ್ಳಲು ಹಣ ಕಳುಹಿಸಿಕೊಟ್ಟಿರಿ. ನಾನೇನು ಮಾಡಬೇಕಿತ್ತು?

ದಯಾದಾಕ್ಷಿಣ್ಯವಿಲ್ಲದೆ ಬಡ ಅನಾಥೆಯೊಬ್ಬಳ ಹಣವನ್ನು ಸುಲಿಯಬೇಕಿತ್ತೆ? ನನಗೆ ತುಂಬ ಖೇದವಾಯಿತು, ನನ್ನ ಮುದ್ದು. ಅಂದರೆ, ಮೊದಲು ನಾನೊಬ್ಬ ನಿಷ್ಪ್ರಯೋಜಕ, ನನ್ನ ಬೂಟುಗಳ ಅಟ್ಟೆಗಳಿಗಿಂತ ಹೆಚ್ಚು ಉತ್ತಮನೇನಲ್ಲ ಎಂಬ ಭಾವನೆಯನ್ನು ಪಡೆದೆ. ಆದ್ದರಿಂದ ನನ್ನನ್ನು ಯಾವುದೇ ರೀತಿಯ ಗಣ್ಯವ್ಯಕ್ತಿಯನ್ನಾಗಿ ಭಾವಿಸಿಕೊಳ್ಳುವುದು ಹಾಸ್ಯಾಸ್ಪದ ಎಂದು ನನಗೆ ತೋರಿಬಂತು. ಹಾಗೆ ಭಾವಿಸಿಕೊಳ್ಳುವುದಕ್ಕೆ ವಿರೋಧವಾಗಿ ನಾನು ನನ್ನನ್ನೇ ಗಣ್ಯತೆ ಇಲ್ಲದ ವ್ಯಕ್ತಿಯನ್ನಾಗಿ, ತೀರ ಮರ್ಯಾದೆಗೆಟ್ಟವನನ್ನಾಗಿ, ಅಸಭ್ಯನನ್ನಾಗಿಯೂ ಸಹ, ಭಾವಿಸಿಕೊಳ್ಳಲು ನಿರ್ಧರಿಸಿದೆ. ಆತ್ಮಗೌರವವನ್ನು ಕಳೆದುಕೊಂಡ ಕೂಡಲೇ ನಾನು ನನ್ನೆಲ್ಲ ಸದ್ಗುಣಗಳನ್ನೂ ಯೋಗ್ಯತೆಯನ್ನೂ ನಿರಾಕರಿಸದೆ ಇರದಾದೆ. ಇದು ಅನಿವಾರ್ಯವಾಗಿಯೇ ನನ್ನ ಪತನಕ್ಕೆ ದಾರಿ ಮಾಡಿಕೊಟ್ಟಿತು. ನನ್ನ ತಪ್ಪಲ್ಲ, ಅದೆಲ್ಲ ಹಣೆಯ ಬರಹ, ನಿಮಗೆ ಗೊತ್ತಿದೆ. ಯೋಚಿಸಿ ಯೋಚಿಸಿ ಬೇಸತ್ತು ಹಚ್ಚಹೊಸ ಗಾಳಿ ಸೇವಿಸಲು ಹೊರಬಂದೆ. ಒಂದು ಇನ್ನೊಂದಕ್ಕೆ ದಾರಿ ಮಾಡಿಕೊಟ್ಟಿತು – ಹವೆಯೂ ತುಂಬ ಕೆಟ್ಟಿತ್ತು, ಚಳಿಗಾಳಿ ಬೀಸುತ್ತಿತ್ತು, ಮಳೆ ಸುರಿಯುತ್ತಿತ್ತು. ಆಮೇಲೆ ಅಲ್ಲೇ ಯೆಮೆಲ್ಯಾನ್‌ನೂ ಇದ್ದ. ಅವನು ಎಲ್ಲವನ್ನೂ ಅಡವಿಟ್ಟಿದ್ದ, ವಾರೆಂಕಾ. ಅವನದಾಗಿದ್ದ ಎಲ್ಲವೂ ಅದೇ ದಾರಿ ಹಿಡಿದಿದ್ದವು. ಎರಡು ದಿನದಿಂದ ಏನನ್ನೂ ತಿಂದಿರಲಿಲ್ಲ. ಈಗ ಏನನ್ನಾದರೂ ಅಡವಿಡಲು ನೋಡುತ್ತಿದ್ದ, ಆದರೆ ಅವನ ಬಳಿ ಏನೂ ಇರಲೇ ಇಲ್ಲ. ನಿಜಕ್ಕೂ, ವಾರೆಂಕಾ, ನಾನು ನನ್ನ ಸ್ವಂತ ಬಯಕೆಗಿಂತ ಹೆಚ್ಚಾಗಿ ಆ ಮನುಷ್ಯನ ಬಗೆಗೆ ನನ್ನಲ್ಲಿ ಉಂಟಾದ ಕರುಣೆ ಹಾಗೂ ಸಹಾನುಭೂತಿಯಿಂದಾಗಿ ದೌರ್ಬಲ್ಯಕ್ಕೆ ತುತ್ತಾದೆ. ಹಾಗೆ ನಾನು ಆ ಪಾತಕವೆಸಗುವಂತಾದೆ. ನಾವಿಬ್ಬರೂ ಹೇಗೆ ಅತ್ತೆವು. ನಿಮ್ಮನ್ನು ಹೇಗೆ ನೆನಸಿಕೊಂಡೆವು. ಅವನೊಬ್ಬ ಒಳ್ಳೆಯ ಮನುಷ್ಯ, ಆ ಯೆಮೆಲ್ಯಾನ್. ಕೋಮಲ ಸ್ವಭಾವದವ, ಕರುಣಾಮೂರ್ತಿ. ಇವೆಲ್ಲವನ್ನೂ ನಾನೇ ಸ್ವತಃ ಭಾವಿಸುತ್ತೇನೆ. ಆದ್ದರಿಂದಲೇ ನನಗೆ ಅಂಥ ಘಟನೆಗಳು ಜರುಗುವುದು – ನಾನು ಭಾವಿಸುತ್ತೇನಾದ ಕಾರಣ. ನಾನು ನಿಮಗೆ ಎಷ್ಟು ಋಣಿ ಎಂಬುದು ನನಗೆ ಗೊತ್ತು, ನನ್ನ ಮುದ್ದು. ನಿಮ್ಮನ್ನು ತಿಳಿದಾಗ ನಾನು ನನ್ನನ್ನೇ ಹೆಚ್ಚು ಉತ್ತಮವಾಗಿ ತಿಳಿದುಕೊಂಡೆ, ನಿಮ್ಮನ್ನು ಪ್ರೀತಿಸತೊಡಗಿದೆ. ನಿಮ್ಮನ್ನು ತಿಳಿಯುವುದಕ್ಕೆ ಮುಂಚೆ, ನನ್ನ ದೇವತೆ, ನಾನು ಈ ಜಗತ್ತಿನಲ್ಲಿ ಎಷ್ಟು ಒಬ್ಬಂಟಿಗನಾಗಿದ್ದೆ. ಜೀವಿಸುತ್ತಿದ್ದುದಕ್ಕಿಂತ ಹೆಚ್ಚಾಗಿ ನಾನು ಮಲಗಿದ್ದೆನೆಂದೇ ಹೇಳಬಹುದು. ಆ ದಿನಗಳಲ್ಲಿ ಆ ನೀಚರು ನನ್ನ ಶರೀರದ ಆಕೃತಿಯೇ ಅಸಹ್ಯವಾದುದು ಎಂದು ಹೇಳುತ್ತಿದ್ದರು, ನನ್ನನ್ನು ತುಂಬ ತಿರಸ್ಕಾರದಿಂದ ಕಾಣುತ್ತಿದ್ದರು. ಕೊನೆಗೆ ನಾನೇ ನನ್ನನ್ನು ತಿರಸ್ಕಾರದಿಂದ ನೋಡಿಕೊಳ್ಳತೊಡಗಿದೆ. ನಾನೊಬ್ಬ ಮೂರ್ಖ ಎಂದು

ಅವರು ಹೇಳುತ್ತಿದ್ದರು, ನಾನೂ ಹಾಗೆಯೇ ಭಾವಿಸಿಕೊಳ್ಳತೊಡಗಿದೆ. ಆದರೆ ನೀವು ಮೇಲಿನಿಂದ ಒಂದು ದಿವ್ಯಪ್ರಭೆಯಂತೆ ನನಗೆ ಕಾಣಿಸಿಕೊಂಡಾಗ, ನನ್ನ ಈ ಕತ್ತಲಿನಿಂದ ತುಂಬಿದ ಬಾಳಿಗೆ ಬೆಳಕು ತಂದಿರಿ, ನನ್ನ ಹೃದಯಕ್ಕೆ, ನನ್ನ ಆತ್ಮಕ್ಕೆ ಬೆಳಕು ತಂದಿರಿ. ನನಗೆ ಆತ್ಮಶಾಂತಿ ಲಭಿಸಿತು. ನಾನು ಇತರರಿಗಿಂತ ಕೀಳೇನೂ ಅಲ್ಲವೆಂದು ತಿಳಿದೆ. ಬಹುಶಃ ನನ್ನಲ್ಲಿ ನಯನಾಜೂಕು ಇರಲಿಲ್ಲ, ಮಾತಿನಲ್ಲಿ ಮೆರುಗು ಕಾಂತಿ ಇರಲಿಲ್ಲ. ಆದರೂ ಹೃದಯದಲ್ಲೂ ಮನಸ್ಸಿನಲ್ಲೂ ನಾನೊಬ್ಬ ಮನುಷ್ಯನಾಗಿದ್ದೆ. ಮತ್ತೆ ಈಗ ವಿಧಿ ನನ್ನನ್ನು ಹಿಂಸೆಗೆ, ತೇಜೋವಧೆಗೆ ಗುರಿಪಡಿಸುತ್ತಿದ್ದಿತೆಂದು ಭಾವಿಸಿದೆ. ನನ್ನ ಘನತೆಗೆ ನಾನೇ ಬೆಲೆ ಕೊಡದಾದೆ. ದುರದೃಷ್ಟದ ಹೊರೆಯಿಂದ ಪೀಡಿತನಾಗಿ ನಾನು ಧೃತಿಗೆಟ್ಟೆ. ನಾನು ಈಗ ನಿಮಗೆ ಎಲ್ಲವನ್ನೂ ಹೇಳಿದ್ದೇನೆ. ನೀವು ಮತ್ತೆ ಈ ವಿಷಯವನ್ನು ಎಂದೂ ಎತ್ತಬಾರದೆಂದು ನಾನು ಕಣ್ಣೀರು ಕರೆಯುತ್ತ ಕೇಳಿಕೊಳ್ಳುತ್ತೇನೆ. ನನಗೆ ದುಃಖವಾಗಿದೆ, ನಾನು ಬಳಲಿದ್ದೇನೆ, ನನ್ನ ಹೃದಯ ಒಡೆಯುತ್ತಿದೆ.

ಸಕಲ ಗೌರವಗಳೊಂದಿಗೆ, ನನ್ನ ಮುದ್ದು.

ನಿಮ್ಮ ದೃಢ ಮಿತ್ರ.

ಮಕಾರ್ ದೇವುಷ್ಕಿನ್.

ಸೆಪ್ಟೆಂಬರ್ 3

ನನ್ನ ಕಳೆದ ಪತ್ರವನ್ನು ಮುಗಿಸಿಯೇ ಇರಲಿಲ್ಲ, ಮಕಾರ್ ಅಲೆಕ್ಸೇಯೆವಿಚ್. ಬರೆಯುವುದಕ್ಕೆ ತುಂಬ ಕಷ್ಟವಾಯಿತು. ಕೆಲವು ಘಳಿಗೆಗಳಲ್ಲಿ ನಾನು ಒಬ್ಬಳೇ ಇರಬೇಕೆಂದು, ಕೇವಲ ಒಬ್ಬಳೇ ಇರಬೇಕೆಂದು ಇಚ್ಛಿಸುತ್ತೇನೆ. ಆಗ ನಾನು ಅಪಾರ ದುಃಖದಿಂದ ಕೂಡಿರುತ್ತೇನೆ. ಈ ಮನೋಸ್ಥಿತಿ ಈಚೀಚೆಗೆ ಹೆಚ್ಚು ಹೆಚ್ಚಾಗಿ ಬರುತ್ತಿದೆ. ಈ ನನ್ನ ನೆನಪುಗಳಲ್ಲಿ ಏನೋ ಒಂದು ವಿಶೇಷವಿದೆ. ಅದನ್ನು ನಾನು ವಿವರಿಸಿ ತಿಳಿಸಲಾರೆ. ಅದು ನನ್ನನ್ನು ಪ್ರತಿರೋಧವಿಲ್ಲದಂತೆ ಎಲ್ಲಿಗೋ ಕರೆದೊಯ್ದುಬಿಡುತ್ತದೆ. ಗಂಟೆಗಟ್ಟಲೆ ನಾನು ನನ್ನ ಸುತ್ತಮುತ್ತಲಿನ ಎಲ್ಲವನ್ನೂ ಮರೆತು ಕೂರುತ್ತೇನೆ. ನನಗೆ ಈಗ ದುಃಖವಾಗಲೀ ಸುಖವಾಗಲೀ ಯಾವುದೇ ಭಾವನೆ ಬರಲಿ ಅದು ಅಂತಹುದೇ ಗತಕಾಲದ ಹೆಚ್ಚಾಗಿ ನನ್ನ ಬಂಗಾರದ ಬಾಲ್ಯದಲ್ಲಿನ ಪ್ರಸಂಗವನ್ನು ತಪ್ಪದೆಯೇ ನೆನಪು ಮಾಡಿಕೊಡುತ್ತದೆ. ಆದರೆ ಅಂಥ ಘಳಿಗೆಗಳು ಕಳೆದು ಹೋದ ಮೇಲೆ ನಾನು ಯಾವತ್ತೂ ಉತ್ಸಾಹ ಕುಗ್ಗಿದವಳಾಗಿರುತ್ತೇನೆ. ನಿಶ್ಶಕ್ತಳಾಗುತ್ತೇನೆ ನನ್ನ ಈ ಹಗಲುಗನಸುಗಳು ನನ್ನನ್ನು ಬಳಲಿಸಿ ಬೆಂಡು ಮಾಡುತ್ತಿವೆ. ನನ್ನ ಆರೋಗ್ಯ ದಿನೇದಿನೇ ಹದಗೆಡುತ್ತಿದೆ.

ಆದರೆ ಇಂದು ನಾವು ಶರತ್ಕಾಲದಲ್ಲಿನ ಆ ಅಪರೂಪದ ಚುರುಕಾದ ಚೇತೋಹಾರಿಯಾದ ಪ್ರಾತಃಕಾಲವನ್ನು ಕಂಡೆವು. ನಾನದನ್ನು ಅತ್ಯಾನಂದದಿಂದ ಸ್ವಾಗತಿಸಿದೆ. ಅಂತೂ ಶರತ್ಕಾಲ ಬಂದಿತು. ನಾನು ಹಳ್ಳಿಯಲ್ಲಿದ್ದಾಗ ಶರತ್ಕಾಲವನ್ನು ಎಷ್ಟು ಪ್ರೀತಿಸುತ್ತಿದ್ದೆ. ಆಗ ನಾನಿನ್ನೂ ಮಗುವಾಗಿದ್ದೆ. ಆದರೆ ಎಲ್ಲವನ್ನೂ ಎಷ್ಟು ತೀವ್ರವಾಗಿ ಅನುಭವಿಸಿ ತಿಳಿಯುತ್ತಿದ್ದೆ. ನಾನು ಶರತ್ಕಾಲದ ಪ್ರಾತಃಕಾಲಗಳಿಗಿಂತ ಸಂಜೆಗಳನ್ನು ಹೆಚ್ಚಾಗಿ ಇಷ್ಟಪಡುತ್ತಿದ್ದೆ. ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲೇ ಒಂದು ಗುಡ್ಡದ ಬುಡದಲ್ಲಿ ಒಂದು ಕೊಳವಿತ್ತು. ನನಗೆ ಈಗಲೂ ಅದು ಕಣ್ಣಿಗೆ ಕಟ್ಟಿದಂತಿದೆ. ಅದೊಂದು ವಿಶಾಲವಾದ ಥಳಥಳಿಸುತ್ತಿದ್ದ ಕೊಳವಾಗಿತ್ತು, ಸ್ಫಟಿಕದ ಒಂದು ದೊಡ್ಡ ಫಲಕವಿದ್ದಂತೆ. ಸಂಜೆ ಪ್ರಶಾಂತವಾಗಿದ್ದಾಗ ಕೊಳ ತುಂಬ ನಿಶ್ಚಲವಾಗಿರುತ್ತಿತ್ತು. ಅದರ ಮೇಲೆ ಬಾಗಿ ನಿಂತಿದ್ದ ಮರಗಳಲ್ಲೂ ಸಣ್ಣ ಸರಸರ ಸದ್ದೂ ಕೇಳಿಬರುತ್ತಿರಲಿಲ್ಲ. ಗಾಳಿ ತಣ್ಣಗೆ ಚೇತೋಹಾರಿಯಾಗಿರುತ್ತಿತ್ತು. ಹುಲ್ಲು ಗರಿಕೆಗಳ ಮೇಲೆ ಇಬ್ಬನಿ ಕೂತಿರುತ್ತಿತ್ತು, ಹುಲ್ಲು ಚಾವಣಿಗಳ ಕೆಳಗೆ ಕಿಟಕಿಗಳಲ್ಲಿ ದೀಪಗಳು ಕಾಣಿಸಿಕೊಳ್ಳುತ್ತಿದ್ದವು, ಹಸುಗಳು ಮನೆಗೆ ಹಿಂದಿರುಗುತ್ತಿದ್ದವು. ಆಗಲೇ ನಾನು ಮನೆಯಿಂದ ಮೆಲ್ಲಗೆ ಹೊರಟು ನನ್ನ ಕೊಳವನ್ನು ನೋಡಲು ಹೋಗುತ್ತಿದ್ದೆ, ಎಲ್ಲವನ್ನೂ ಮರೆಯುತ್ತಿದ್ದೆ. ಕೊಳದ ದಂಡೆಯ ಮೇಲೆ ಮೀನುಗಾರರು ಯಾವುದಾದರೂ ಪೊದೆಗೆ ಬೆಂಕಿ ಹಚ್ಚಿ ಅದರ ಸುತ್ತ ಕುಳಿತಿರುತ್ತಿದ್ದರು. ಅದರ ಬೆಳಕು ಕೊಳದ ನೀರಿನಲ್ಲಿ ದೂರ ದೂರದವರೆಗೆ ಬೆಳಗುತ್ತಿದ್ದಿತು. ಆಕಾಶವು ತುಂಬ ಶೀತಲವಾಗಿ ನೀಲವಾಗಿ ಇರುತ್ತಿತ್ತು. ಅಲ್ಲಲ್ಲಿ ಉರಿಯುವ ಕೆಂಪು ಪಟ್ಟೆಗಳನ್ನು ಬಳಿದಂತಿರುತ್ತಿತ್ತು. ಈ ಪಟ್ಟೆಗಳು ಬರಬರುತ್ತ ಮಂಕಾಗುತ್ತಿದ್ದವು. ಆಮೇಲೆ ಚಂದ್ರೋದಯವಾಗುತ್ತಿತ್ತು. ನಿರ್ಮಲವಾದ ಗಾಳಿಯು ಎಲ್ಲ ರೀತಿಯ ಶಬ್ದಗಳನ್ನೂ ಬೆಳ್ಳಿಯ ಗಂಟೆಗಳ ನಾದದಂತೆ ಒಯ್ದು ತರುತ್ತಿದ್ದಿತು. ಹಕ್ಕಿಯ ರೆಕ್ಕೆಯ ಬಡಿತ, ಜೊಂಡುಗಳ ಅತ್ಯಂತ ಸಣ್ಣ ಸದ್ದು, ಅಥವಾ ಮೀನಿನ ಮುಳುಗುವ ಸದ್ದು – ಎಲ್ಲವೂ ಕೇಳಿಬರುತ್ತಿದ್ದವು. ಆಮೇಲೆ ಸಂಜೆಗತ್ತಲು, ಮಬ್ಬು, ಹರಡತೊಡಗುತ್ತಿತ್ತು. ತೆಳುವಾಗಿ, ಪಾರದರ್ಶಕವಾಗಿ, ಕಪ್ಪಾಗುತ್ತಿದ್ದ ನೀರಿನ ಮೇಲೆ ಬಿಳಿ ಮಬ್ಬು ಹರಡುತ್ತಿತ್ತು. ದೂರದ ಎಲ್ಲ ವಸ್ತುಗಳೂ ಅಸ್ಪಷ್ಟವಾಗಿ ಕಣ್ಮರೆಯಾಗುತ್ತಿದ್ದವು. ಆದರೆ ಹತ್ತಿರದಲ್ಲೇ ಇದ್ದ ಎಲ್ಲ ವಸ್ತುಗಳೂ – ದೋಣಿಗಳು, ನೀರಿನ ಅಂಚು, ನಡುಗುಡ್ಡೆಗಳು, ದಡಕ್ಕೆ ಸಮೀಪದಲ್ಲೇ ಮುಳುಗಿ ಏಳುತ್ತಿದ್ದ ತೊರೆದಿದ್ದ ಅಥವಾ ಮರೆತಿದ್ದ ಪಿಪಾಯಿ, ಅಥವಾ ಜೊಂಡುಗಳ ಮಧ್ಯೆ ಸಿಕ್ಕಿಕೊಂಡಿದ್ದ ಹಳದಿಯಾಗಿದ್ದ ಎಲೆಗಳ ಪೊರಕೆಯೊಂದರ ರೆಂಬೆ, ಎಲ್ಲವೂ – ಸ್ಪಷ್ಟವಾಗಿ ಕಡೆದು ನಿಲ್ಲಿಸಿದಂತೆ ಕಾಣುತ್ತಿದ್ದವು. ತಡವಾಗಿ ಬಂದ ಗಲ್ ಪಕ್ಷಿಯೊಂದು ಕೊಳದ ಶೀತಲ ಆಳದೊಳಕ್ಕೆ ಮುಳುಗಿ ಮತ್ತೆ

ಹಾರಿಹೋಗುತ್ತಿತ್ತು. ನಾನಲ್ಲಿ ನಿಂತು ಎಲ್ಲವನ್ನೂ ನೋಡುತ್ತಿದ್ದೆ, ಕೇಳುತ್ತಿದ್ದೆ, ಅದ್ಭುತವಾದ ವಿಚಿತ್ರ ಅನುಭವ ಪಡೆಯುತ್ತಿದ್ದೆ. ಆಗ ನಾನು ಒಂದು ಮಗು ವಷ್ಟೆ ಆಗಿದ್ದೆ.

ಹೌದು, ನಾನು ಶರತ್ಕಾಲವನ್ನು, ಅದರಲ್ಲೂ ವಿಶೇಷವಾಗಿ ಶರತ್ಕಾಲದ ಕೊನೆಯ ಭಾಗವನ್ನು ತುಂಬ ಇಷ್ಟಪಡುತ್ತಿದ್ದೆ. ಅಷ್ಟು ಹೊತ್ತಿಗೆ ಫಸಲನ್ನೆಲ್ಲ ಕೊಯ್ದು ಸುಗ್ಗಿ ಕೆಲಸವನ್ನೆಲ್ಲ ಮುಗಿಸಿರಲಾಗುತ್ತಿತ್ತು. ಹಳ್ಳಿಗರು ಒಬ್ಬರಲ್ಲ ಒಬ್ಬರ ಮನೆಯಲ್ಲಿ ಕಲೆತು ಮಾತನಾಡುತ್ತಿದ್ದರು, ಹಾಡುತ್ತಿದ್ದರು, ಚಳಿಗಾಲ ಕ್ಕಾಗಿ ಕಾಯುತ್ತಿದ್ದರು. ಅನಂತರ ತಗ್ಗಾಗುತ್ತಿದ್ದ ಆಕಾಶದ ಕೆಳಗೆ ಎಲ್ಲವೂ ಮಂಕು ಕವಿದಂತಾಗುತ್ತಿದ್ದಿತು, ಬೆತ್ತಲೆ ನಿಂತ ಕಾಡು ಮರಗಳ ಕೆಳಗೆ ಹಳದಿ ಎಲೆಗಳು ದಟ್ಟವಾಗಿ ಬಿದ್ದಿರುತ್ತಿದ್ದವು. ಈ ಕಾಡು ಮರಗಳು ಸತತವಾಗಿ ಕಪ್ಪಾಗುತ್ತಿದ್ದವು, ಗಾಢವಾದ ನೀಲಿ ಬಣ್ಣಕ್ಕೆ ತಿರುಗುತ್ತಿದ್ದವು, ಅದರಲ್ಲೂ ಸಂಜೆಯ ವೇಳೆಗೆ, ಮಬ್ಬು ಅವುಗಳ ಮೇಲೆ ಮುಸುಕಿದಾಗ. ಮರಗಳು ಕತ್ತಲ ಗರ್ಭದಲ್ಲಿ ದೈತ್ಯಾ ಕಾರದಲ್ಲಿ, ಭಾರಿ ಪ್ರೇತಗಳಂತೆ ಕಾಣುತ್ತಿದ್ದವು. ಇಂಥ ಕಾಲದಲ್ಲಿ ಒಮ್ಮೊಮ್ಮೆ ನಾನು ತುಂಬ ಹೊತ್ತು ಹೊರಗೇ ಇದ್ದು ಬಿಟ್ಟಿದ್ದಾಗ, ಅಥವಾ ವಾಯುಸಂಚಾರ ಹೋದಾಗ ನಾನೊಬ್ಬಳೇ ಹಿಂದೆ ಬಿದ್ದಾಗ, ಇದ್ದಕ್ಕಿದ್ದಂತೆ ನನಗೆ ನಾನೊಬ್ಬಳೇ ಇದ್ದೇನೆಂಬ ಭಾವನೆ ಆಗುತ್ತಿತ್ತು, ಕೂಡಲೇ ಹೆದರಿದವಳಂತೆ ಮನೆಗೆ ಓಡಿ ಹೋಗು ತ್ತಿದ್ದೆ. ಎಲೆಯಂತೆ ನಡುಗುತ್ತ ನಾನು ಮರದ ಪೊಟರೆಯೊಳಗಿಂದ ಯಾವುದೋ ಭೀಕರ ಮುಖವೊಂದು ನನ್ನತ್ತವೇ ದಿಟ್ಟಿಸಿ ನೋಡುತ್ತಿರುವಂತೆ ಭಾವಿಸಿಕೊಳ್ಳು ತ್ತಿದ್ದೆ. ಆಮೇಲೆ ಗಾಳಿ ಇದ್ದಕ್ಕಿದ್ದಂತೆ ಕಾಡಿನಲ್ಲಿ ಭರ್‍ರನೆ ಬೀಸಿಕೊಂಡು ಬರುತ್ತ ಗರ್ಜಿಸುತ್ತಿತ್ತು, ಗೋಳಿಡುತ್ತಿತ್ತು, ಬರಿ ಕೊಂಬೆಗಳಲ್ಲಿ ಅಳಿದುಳಿದಿದ್ದ ಎಲೆಗಳನ್ನೂ ಕಿತ್ತು ಹಾಕಿ ಸುತ್ತಿಕೊಂಡು ಹಾರಿ ಹೋಗುವಂತೆ ಮಾಡುತ್ತಿತ್ತು. ಆಮೇಲೆ ಹಕ್ಕಿಗಳ ಭಾರಿ ಹಿಂಡು ಶಬ್ದ ಮಾಡಿಕೊಂಡು ಬರುತ್ತ ಆಕಾಶವನ್ನೇ ಕಪ್ಪಾಗಿಸುತ್ತಿ ದ್ದಿತು. ನಾನು ಹೇಳಲಾಗದಂತಹ ಭೀತಿಯಿಂದ ತುಂಬುತ್ತಿದ್ದೆ. ಯಾವುದೋ ಪಿಸುಮಾತು ಕೇಳಿಬರುವಂತೆ ನನಗೆ ಅನಿಸುತ್ತಿದ್ದಿತು: "ಓಡು, ಮಗು, ಓಡಿ ಹೋಗು ! ಬೇಗನೆಯೇ ಈ ಪ್ರದೇಶ ಭಯಂಕರವಾಗುವುದು. ಓಡು !" ನಾನು ಉಸಿರು ಸಿಕ್ಕಿಹಾಕಿಕೊಳ್ಳುವವರೆಗೂ ಓಡುತ್ತಿದ್ದೆ. ಕೊನೆಗೆ ಮನೆ ಸೇರಿದಾಗ ಅಲ್ಲಿ ಆನಂದಕರವಾದ ಹಿತಕರವಾದ ಸದ್ದುಗದ್ದಲ ಕೇಳಿ ಬರುತ್ತಿತ್ತು. ನಮಗೆ, ಮಕ್ಕಳಿಗೆ, ಬಟಾಣಿಯ ಅಥವಾ ಗಸಗಸೆ ಕಾಯಿಯ ಸಿಪ್ಪೆ ಬಿಡಿಸುವ ಕೆಲಸ ನೀಡಲಾಗು ತ್ತಿತ್ತು. ಬೆಂಕಿಗೂಡಿನಲ್ಲಿ ಹಸಿ ಮರದ ತುಂಡುಗಳು ಚಟಪಟ ಸದ್ದು ಮಾಡು ತ್ತಿದ್ದವು. ಅಮ್ಮ ಎಲ್ಲವನ್ನೂ ನೋಡುತ್ತ ಕುಳಿತಿರುತ್ತಿದ್ದಳು. ನಮ್ಮ ವೃದ್ಧ ದಾದಿ ಉಲ್ಯಾನ ನಮಗೆ ಹಳೆಯ ದಿನಗಳ ಸಂಗತಿಗಳನ್ನೋ ಅಥವಾ ಮಾಟಗಾರರ

ಹಾಗೂ ರಕ್ತಪಿಶಾಚಿಗಳ ಕಥೆಗಳನ್ನೋ ಹೇಳುತ್ತಿದ್ದಳು. ನಾವು ಒಬ್ಬರಿಗೊಬ್ಬರು ಹತ್ತಿಕೊಂಡು ಕುಳಿತು ಕಥೆ ಕೇಳುತ್ತಿದ್ದೆವು, ಕೇಳುತ್ತಿದ್ದಂತೆ ಮುಗುಳ್ನಗುತ್ತಿದ್ದೆವು. ಆಮೇಲೆ ಇದ್ದಕ್ಕಿದ್ದಂತೆ ಮೌನ ನೆಲಸುತ್ತಿತ್ತು. ಯಾರೋ ಬಾಗಿಲು ತಟ್ಟಿದರಲ್ಲವೇ? ಇಲ್ಲ, ಅದು ವೃದ್ಧೆ ಫ್ರೊಲೊವ್ನಳ ನೂಲುವ ರಾಟೆಯು ಶಬ್ದವಾಗಿದ್ದಿತಷ್ಟೆ. ಆಗ ಹೇಗೆ ನಗೆಯು ಬುಗ್ಗೆ ಚಿಮ್ಮುತ್ತಿತ್ತು. ಆಮೇಲೆ ಮಲಗಿದಾಗ ನಾವು ಭಯಂಕರ ಸ್ವಪ್ನಗಳನ್ನು ಕಾಣುತ್ತಿದ್ದೆವು. ಆಗಾಗ್ಗೆ ಬೆಚ್ಚಿ ಎದ್ದುಕೂರುತ್ತಿದ್ದೆವು. ನಾನು ಮಧ್ಯರಾತ್ರಿಯಲ್ಲಿ ಎಚ್ಚರಗೊಳ್ಳುತ್ತಿದ್ದೆ, ಚಲಿಸಲೂ ಹೆದರಿ ಕಣ್ಣು ಬಿಟ್ಟುಕೊಂಡೇ ಮುಂಜಾನೆಯುವರೆಗೂ ಮಲಗಿರುತ್ತಿದ್ದೆ, ಹೊದಿಕೆಯು ಕೆಳಗೆ ನಡುಗುತ್ತ ಮಲಗಿರುತ್ತಿದ್ದೆ. ಆದಾಗ್ಯೂ ಬೆಳಿಗ್ಗೆ ಡೈಸಿ ಹೂವಿನಷ್ಟು ಹಚ್ಚ ಹಸನಾಗಿ ಗೆಲುವಿನಿಂದ ಏಳುತ್ತಿದ್ದೆ. ಕಿಟಕಿಗಳಿಂದ ಹೊರಗೆ ನೋಡುತ್ತಿದ್ದೆ. ಹೊಲಗದ್ದೆಗಳು ಆಗಲೇ ಮಾಗಿಯು ಹಿಡಿತಕ್ಕೆ ಸಿಕ್ಕಿಬಿದ್ದಿದ್ದುದನ್ನು, ಶರತ್ಕಾಲದ ತೆಳುವಾದ ಗಡ್ಡೆಕಟ್ಟಿದ ಇಬ್ಬನಿ ಮರದ ಬರಿದಾದ ಕೊಂಬೆರೆಂಬೆಗಳಿಗೆ ಅಂಟಿಕೊಂಡಿರುವುದನ್ನು ಕಾಣುತ್ತಿದ್ದೆ. ಕೊಳವು ಅನಂತರ ತೆಳುವಾದ ಮಂಜಿನ ಪದರದಿಂದ ಆವರಿಸಲ್ಪಡುತ್ತಿತ್ತು. ಅದರಿಂದ ಬಿಳಿ ಆವಿ ಹೊರಬರುತ್ತಿತ್ತು. ಹಕ್ಕಿಗಳು ಸಂತೋಷದಿಂದ ಚಿಲಿಪಿಲಿಗುಟ್ಟುತ್ತ ಅತ್ತಿಂದಿತ್ತ ಹಾರಾಡುತ್ತಿದ್ದವು. ಆದರೆ ಕೊಳದ ನೀರಿನ ಮೇಲೆ ರೂಪುಗೊಂಡಿದ್ದ ತೆಳುವಾದ ಹೆಪ್ಪುಗಟ್ಟಿದ್ದ ಪದರವು ಬೇಗನೆಯೇ ಸೂರ್ಯನ ಬೆಚ್ಚಗಿನ ಕಿರಣಗಳಿಗೆ ಸಿಕ್ಕಿ ಕರಗುತ್ತಿದ್ದಿತು. ಅದೊಂದು ಉಜ್ವಲ ಜಗತ್ತಾಗಿದ್ದಿತು, ಸ್ಫುಟವಾದ, ಸುಖಸಂತೋಷಗಳಿಂದ ಕೂಡಿದ ಜಗತ್ತಾಗಿದ್ದಿತು. ನಾವು ಸಮೊವಾರ್ ಸುತ್ತ ಕೂರುತ್ತಿದ್ದೆವು, ಅಗ್ಗಿಷ್ಟಿಕೆಗಳು ಮತ್ತೆ ಚಟಪಟಗುಟ್ಟತೊಡಗುತ್ತಿದ್ದವು. ನಮ್ಮ ಕಪ್ಪು ನಾಯಿ ಪೊಲ್ಕಾನ್ ರಾತ್ರಿಯು ಚಳಿಯಿಂದ ಇನ್ನೂ ನಡುಗುತ್ತ ಕಿಟಕಿಯಿಂದ ಒಳಕ್ಕೆ ಇಣಿಕಿ ನೋಡುತ್ತಿತ್ತು, ಕಣ್ಣುಗಳಲ್ಲಿ ಆಸೆ ಸೂಚಿಸುತ್ತ ಬಾಲ ಅಲ್ಲಾಡಿಸುತ್ತಿದ್ದಿತು. ರೈತನ ಬಂಡಿಯೊಂದು ಸೌದೆ ತರಲೋಸುಗ ಕಾಡಿನತ್ತ ಗುಡುಗಿಕೊಂಡು ಹೋಗುತ್ತಿತ್ತು. ನಾವೆಲ್ಲ ಆ ಸಂತಸದ ದಿನಗಳಲ್ಲಿ ತುಂಬ ತೃಪ್ತರಾಗಿ ತುಂಬ ಆನಂದಭರಿತರಾಗಿ ಕಾಲ ಕಳೆಯುತ್ತಿದ್ದೆವು. ಆಹ್, ಎಷ್ಟು ಸೊಗಸಾಗಿದ್ದಿತು ನನ್ನ ಬಾಲ್ಯ!

ಈ ಸ್ಮರಣೆಗಳು ನನ್ನ ಕಣ್ಣಲ್ಲಿ ನೀರು ತರುತ್ತವೆ. ಗತಕಾಲವು ಅಷ್ಟು ಉಜ್ವಲವಾಗಿ ಎದ್ದು ನಿಲ್ಲುತ್ತದೆ, ವರ್ತಮಾನಕಾಲವು ಅಷ್ಟೂ ಉತ್ಸಾಹಶೂನ್ಯವಾಗಿ ಕರಾಳವಾಗಿ ಕಾಣುತ್ತದೆ. ಭವಿಷ್ಯತ್ತಿನಲ್ಲಿ ಇದು ಹೇಗೆ ಕೊನೆಗಾಣುವುದೋ, ದೇವರೇ! ನಿಮಗೆ ಗೊತ್ತೆ, ನನಗೆ ಅನಿಸುತ್ತಿದೆ, ನಾನು ಈ ಶರತ್ಕಾಲದಲ್ಲೇ ಸತ್ತು ಹೋಗುವೆನೆಂದು, ಅದು ಖಂಡಿತವೆಂದು ನನಗನಿಸುತ್ತಿದೆ. ನಾನು ತುಂಬ ತುಂಬ ಅಸ್ವಸ್ಥಳಾಗಿದ್ದೇನೆ. ನಾನು ತುಂಬ ಆಗಾಗ್ಗೆ ಆ ಬಗೆಗೆ ಯೋಚಿಸುತ್ತೇನೆ.

ಆದರೆ ನಾನು ಈ ಸ್ಥಳದಲ್ಲಿ ಸಾಯಲು, ಈ ಭೂಮಿಯಲ್ಲಿ ಹೂಳಲ್ಪಡಲು, ಇಚ್ಛಿಸುವುದಿಲ್ಲ. ಕಳೆದ ವಸಂತ ಮಾಸದಲ್ಲಾದಂತೆಯೇ ಈ ಶರತ್ಕಾಲದಲ್ಲೂ ನಾನು ಬಹುಶಃ ಮತ್ತೆ ಹಾಸಿಗೆ ಹಿಡಿಯುತ್ತೇನೆ. ನಿಮಗೇ ಗೊತ್ತಿದೆ, ಆಗ ಕಾಯಿಲೆ ಬಿದ್ದವಳು ನಾನು ಮತ್ತೆ ಚೇತರಿಸಿಕೊಂಡೇ ಇಲ್ಲ. ಈಗಲೂ ನಾನು ತುಂಬ ಕಾಯಿಲೆಯ ಭಾವನೆಯನ್ನೇ ಹೊಂದಿದ್ದೇನೆ. ಫಿದೋರಳು ಇಡೀ ದಿನ ಹೊರಗೆ ಹೋಗಿದ್ದಾಳೆ, ನಾನು ಒಂಟಿಯಾಗಿಯೇ ಇದ್ದೇನೆ. ಕೆಲವು ವೇಳೆ ನಾನು ಒಬ್ಬಳೇ ಇರಲು ತುಂಬ ಹೆದರುತ್ತೇನೆ. ಕೋಣೆಯಲ್ಲಿ ಬೇರೆ ಇನ್ನಾರೋ ಇದ್ದಾರೆಂಬ, ಯಾರೋ ನನ್ನ ಜೊತೆಗೆ ಮಾತನಾಡುತ್ತಿದ್ದಾರೆಂಬ, ವಿಚಿತ್ರ ಭಾವನೆಯನ್ನು ಹೊಂದಿರುತ್ತೇನೆ, ಅದರಲ್ಲೂ ಹಗಲುಗನಸುಗಳಿಂದ ಬೆಚ್ಚಿ ಹೊರಬಂದಾಗ. ಆದ್ದರಿಂದಲೇ ನಾನು ಇಷ್ಟು ದೀರ್ಘ ಪತ್ರ ಬರೆದಿದ್ದೇನೆ. ನಾನು ಬರೆಯುತ್ತಿದ್ದಾಗ ಅಂಜಿಕೆ ದೂರವಾಗುತ್ತೆ. ನಮಸ್ಕಾರ. ನಾನಿಲ್ಲಿಗೆ ಈ ಪತ್ರ ಮುಗಿಸಬೇಕು, ಏಕೆಂದರೆ, ಬರೆಯಲು ಹೆಚ್ಚಿಗೆ ಕಾಗದವಿಲ್ಲ. ಅಲ್ಲದೆ ವೇಳೆಯೂ ಇಲ್ಲ. ನಾವು ಮಾರಿದ ಉಡುಪು ಹಾಗೂ ಹ್ಯಾಟಿಗಾಗಿ ದೊರೆತ ಹಣದಲ್ಲಿ ಬೆಳ್ಳಿಯ ಒಂದು ರೂಬಲ್ ಅಷ್ಟೆ ಉಳಿದಿದೆ. ನೀವು ನಿಮ್ಮ ಮನೆಯ ಯಜಮಾನಿಗೆ ಬೆಳ್ಳಿಯ ಎರಡು ರೂಬಲ್ ಕೊಟ್ಟುದು ಸಂತೋಷದ ಸಂಗತಿ. ಇದು ಅವಳನ್ನು ಸ್ವಲ್ಪ ಕಾಲ ಸುಮ್ಮನಿರುವಂತೆ ಮಾಡುವುದು.

ನಿಮ್ಮ ಬಟ್ಟೆ ಬರೆಗಳನ್ನೆಲ್ಲ ಸುವ್ಯವಸ್ಥಿತವಾಗಿ ಇಟ್ಟುಕೊಳ್ಳಲು ಯತ್ನಿಸಿ. ನಮಸ್ಕಾರ, ನನ್ನ ಮಿತ್ರರೇ. ನಾನು ಎಷ್ಟು ನಿಶ್ಶಕ್ತಳಾಗಿದ್ದೇನೆಂದರೆ ಬೇಗ ಬಳಲುತ್ತೇನೆ. ಸ್ವಲ್ಪ ಯತ್ನವೂ ನನ್ನ ಶಕ್ತಿಯನ್ನೆಲ್ಲ ಉಡುಗಿಸುತ್ತದೆ. ಇನ್ನು ಹೇಗೆ ಕೆಲಸ ಮಾಡಲು ಸಾಧ್ಯವಾಗುವುದೋ – ಕೆಲಸ ದೊರೆತರೂ ಸಹ. ಆ ಯೋಚನೆಯೇ ನನ್ನೆಲ್ಲ ಆಸೆ ಆಕಾಂಕ್ಷೆಗಳನ್ನೂ ನಾಶಮಾಡುತ್ತದೆ.

ವ. ದೊ.

ಸೆಪ್ಟೆಂಬರ್ 5

ಪ್ರಿಯ ವಾರೆಂಕ,

ಇಂದು ನನಗೆ ಎಷ್ಟೊಂದು ತರಹೇವಾರಿ ಭಾವನೆಗಳಾಗುತ್ತಿವೆ. ಮೊದಲನೆಯದಾಗಿ ನನಗೆ ತುಂಬ ತಲೆ ನೋವಾಯಿತು. ಅದನ್ನು ಹೋಗಲಾಡಿಸಿಕೊಳ್ಳಲೋಸುಗ ನಾನು ಫೊಂತಾಂಕಾ ನದಿಯ ದಂಡೆಯ ಉದ್ದಕ್ಕೂ ವಾಯುಸಂಚಾರ ಹೋದೆ. ಸಂಜೆ ಥಂಡಿಯಿಂದ ಕೂಡಿತ್ತು, ಆಗಲೇ ಕತ್ತಲಾಗಿತ್ತು – ಐದು ಗಂಟೆಯಾದ ಮೇಲೆ, ನಿಮಗೇ ತಿಳಿದಂತೆ, ಬೇಗ ಕತ್ತಲಾಗಿಬಿಡುತ್ತದೆ. ಮಳೆ ಇರ

ಲಿಲ್ಲ ಆದರೆ ಮಬ್ಬು ಯಾವುದೇ ಮಳೆಗಿಂತ ಹೊಲಸಾಗಿತ್ತು. ಮೋಡಗಳು ಆಕಾಶದಲ್ಲಿ ವಿಶಾಲವಾದ ಪಟ್ಟೆಗಳಂತೆ ಚಲಿಸುತ್ತಿದ್ದವು. ಜನರು ಗುಂಪು ಗುಂಪಾಗಿ ನದಿಯ ದಂಡೆಯ ಮೇಲೆ ಅವಸರವಸರವಾಗಿ ಹೋಗುತ್ತಿದ್ದರು. ವಿಚಿತ್ರವಾಗಿ ಕುರೂಪಿಯಾದ ಜನಜಂಗುಳಿ. ಅವರನ್ನು ನೋಡಿದಾಗ ನನ್ನ ಮನಸ್ಸು ಎಷ್ಟು ಕುಗ್ಗಿತು. ಅವರ ಮಧ್ಯೆ ಕುಡಿದು ಅಮಲೇರಿದ್ದ ರೈತರಿದ್ದರು, ಚಪ್ಪಟೆ ಮೂಗಿನ ಬರಿತಲೆಯ, ಮೇಲುಬೂಟು ತೊಟ್ಟ ಫಿನ್ನಿಷ್ ಹೆಂಗಸರಿದ್ದರು, ಕೆಲಸಗಾರರಿದ್ದರು, ಗಾಡಿ ಹೊಡೆಯುವವರಿದ್ದರು, ನಮ್ಮ ರೀತಿಯ ಗುಮಾಸ್ತರಿದ್ದರು, ಪಟ್ಟೆ ಪಟ್ಟೆಯ ಮೇಲುಜುಬ್ಬ ತೊಟ್ಟ, ಜಿಡ್ಡಿನಿಂದ ಮುಖ ಕಪ್ಪಾದ, ಒಂದು ದೊಡ್ಡ ಬೀಗವನ್ನು ಕೈಲಿ ಹಿಡಿದಿದ್ದ ಒಬ್ಬ ಸೆಣಕಲು ಕ್ಷಯರೋಗಿ ಕಾರ್ಯಾಭ್ಯಾಸಿಯಿದ್ದ, ವಿಪರೀತ ಎತ್ತರವಾಗಿದ್ದ ಸೈನ್ಯದಿಂದ ಬರಖಾಸ್ತು ಆಗಿದ್ದ ಒಬ್ಬ ಸೈನಿಕನಿದ್ದ. ಇಂಥ ಜನರಷ್ಟೇ ಬೀದಿಯಲ್ಲಿ ಕಾಣಿಸಿಕೊಳ್ಳುವ ಕಾಲವಾಗಿದ್ದಿತು ಅದು. ನೌಕಾ ಸಾರಿಗೆಯ ಕಾಲುವೆಯೇ ನೋಡಲು ಎಷ್ಟು ಚೆನ್ನಾಗಿತ್ತು. ಅಷ್ಟೊಂದು ಹರಿ ಗೋಲುಗಳಿಗೆ ಅಲ್ಲಿ ಹೇಗೆ ಸ್ಥಳವಿರಲು ಸಾಧ್ಯವಿದ್ದಿತೋ! ಸೇತುವೆಗಳ ಮೇಲೆ ಹೆಂಗಸರು ಕುಳಿತು ನೆನೆದುಹೋಗಿದ್ದ ಬಿಸ್ಕತ್ ಹಾಗೂ ಕೊಳೆತ ಸೇಬುಗಳನ್ನು ಮಾರುತ್ತಿದ್ದರು. ಆ ಹೆಂಗಸರೇ ಮಲಿನವಾದ ಬಟ್ಟೆ ಉಟ್ಟು ಕೊಳಕು ಕೊಳ ಕಾಗಿದ್ದರು. ನಿಜಕ್ಕೂ ವಾಯುಸಂಚಾರಕ್ಕೆ ಅನರ್ಹವಾದ ವಿಷಣ್ಣವಾದ ಸ್ಥಳ ಅದು. ಅಲ್ಲಿ ಕಾಲ ಕೆಳಗೆ ಒದ್ದೆಯಾದ ಕಲ್ಲುಚಪ್ಪಡಿಗಳು, ಪಕ್ಕದಲ್ಲಿ ಹೊಗೆಯಿಂದ ಕಪ್ಪಾದ ಎತ್ತರವಾದ ಮನೆಗಳು; ನೆಲದ ಮೇಲೆ ಮಬ್ಬು, ತಲೆಯ ಮೇಲೆ ಮಬ್ಬು. ಎಂಥ ವಿಷಾದದ ಕರಾಳ ಸಂಜೆಯಾಗಿದ್ದಿತು ಅದು.

ಅಲ್ಲಿಂದ ನಾನು ಗೊರೋಹೊವಯ ಕಡೆಗೆ ತಿರುಗಿದಾಗ ಆಗಲೇ ಸಾಕಷ್ಟು ಕತ್ತಲೆಯಾಗಿತ್ತು. ಗ್ಯಾಸ್ ದೀಪಗಳನ್ನು ಹಚ್ಚಲಾಗುತ್ತಿತ್ತು. ನಾನು ಈ ಬೀದಿಯಲ್ಲಿ ಹೋಗಿ ಬಹಳ ದಿನಗಳಾಗಿದ್ದವು. ಅದು ತುಂಬ ಚಟುವಟಿಕೆಯಿಂದ ಕೂಡಿದಂತಿತ್ತು. ಸೊಗಸಾದ ಸಣ್ಣ ಹಾಗೂ ದೊಡ್ಡ ಅಂಗಡಿಗಳಿದ್ದವು. ಎಲ್ಲ ಬೆಲೆ ಬಾಳುವ ವಸ್ತುಗಳಿಂದ ಥಳಥಳಿಸುತ್ತಿದ್ದವು, ಕಂಗೊಳಿಸುತ್ತಿದ್ದವು. ಹೂವುಗಳೂ ರಿಬ್ಬನ್ ಕಟ್ಟಿದ ಹ್ಯಾಟುಗಳೂ ಅಲ್ಲಿದ್ದವು. ಅವನ್ನೆಲ್ಲ ಕೇವಲ ಪ್ರದರ್ಶನಕ್ಕಾಗಿ ಜೋಡಿಸಿ ಇರಿಸಲಾಗಿದ್ದಿತೆಂದು ಯಾರೇ ಭಾವಿಸಬಹುದಿತ್ತು. ಆದರೆ ಅಲ್ಲ. ಅಂಥ ವಸ್ತುಗಳನ್ನು ತಮ್ಮ ಪತ್ನಿಯರಿಗಾಗಿ ಕೊಳ್ಳುವ ಜನರೂ ನಿಜಕ್ಕೂ ಇದ್ದಾರೆ! ಅಂತೂ ಇದೊಂದು ಸಂಪದ್ಭರಿತವಾದ ಬೀದಿ. ಅನೇಕ ಜರ್ಮನ್ ಬ್ರೆಡ್ ಅಂಗಡಿಗಳವರೂ ಇಲ್ಲೇ ವಾಸಿಸುತ್ತಾರೆ. ಅವರೆಲ್ಲ ಶ್ರೀಮಂತ ಜನ. ಇಲ್ಲಿ ಎಷ್ಟೊಂದು ಬಂಡಿಗಳು ಚಲಿಸುತ್ತಿವೆ! ಇವನ್ನೆಲ್ಲ ಈ ಬೀದಿ ಹೇಗೆ ಸಹಿಸಿಕೊಂಡಿದೆಯೋ ಆಶ್ಚರ್ಯವಾಗುತ್ತದೆ. ಅದೂ ಎಂಥ ವೈಭವದ ಗಾಡಿಗಳು. ಹೊಳೆಯುವ

ಕಿಟಕಿಗಳು, ಸಿಲ್ಕ್ ಹಾಗೂ ವೆಲ್ವೆಟ್ ಪರದೆಗಳು, ಕತ್ತಿಗಳನ್ನು ಹಿಡಿದು ಭುಜ ಕೀರ್ತಿಗಳನ್ನು ತೊಟ್ಟು ನಿಂತ ಭಟರು. ಅವು ಒಂದೊಂದು ಹೋದ ಹಾಗೂ ನಾನು ಅದರೊಳಗೆ ನೋಟಹರಿಸಿದೆ. ಅಲ್ಲಿರುವವರು ಕೌಂಟೆಸ್‌ಗಳೋ ರಾಜ ಕುಮಾರಿಯರೋ ಆಗಿರಬೇಕೆಂದು ಊಹಿಸಿದೆ. ಏಕೆಂದರೆ ಅವರೆಲ್ಲ ಅಷ್ಟು ಸೊಗ ಸಾದ ಉಡುಪು ತೊಟ್ಟಿದ್ದರು. ಅದು ಅಂತಹ ಜನರು ಪ್ರತಿಯೊಬ್ಬರೂ ನೃತ್ಯ ಗೋಷ್ಠಿಗಳಿಗಾಗಲೀ ಸಂಧ್ಯಾಕೂಟಗಳಿಗಾಗಲೀ ಹೋಗುವ ಸಮಯವಾಗಿ ದ್ದಿರಬೇಕು. ಒಬ್ಬ ಕೌಂಟೆಸ್ಸಳನ್ನೋ ಮತ್ತ್ಯಾರಾದರೂ ಮಹಾ ಮಹಿಳೆಯನ್ನೋ ಹತ್ತಿರದಿಂದ ನೋಡಬೇಕೆಂದು ನನಗೆ ತುಂಬ ಕುತೂಹಲವಿದೆ. ಅವರು ತುಂಬ ಸುಂದರಿಯರಾಗಿರಬೇಕು, ಖಂಡಿತ. ನನಗೆ ಅಂತಹ ಅವಕಾಶ ಇದುವರೆವಿಗೂ ಲಭಿಸಿಲ್ಲ. ದೂರದಿಂದ ಗಾಡಿಯೊಳಕ್ಕೆ ಈಗಿನಂತೆ ಇಣಿಕಿ ನೋಡುವುದಷ್ಟೆ ಸಾಧ್ಯವಾಗಿದೆ. ನಾನು ನಿಮ್ಮ ಬಗೆಗೂ ಯೋಚಿಸಿದೆ. ನನ್ನ ಮನಸ್ಸಿಗೆ ತುಂಬ ನೋವಾಯಿತು, ನನ್ನ ದುರದೃಷ್ಟ ಮುದ್ದು ವಾರೆಂಕ. ನಿಮಗೇಕೆ ಇಂಥ ದುಸ್ಥಿತಿ ಬರಬೇಕು, ವಾರೆಂಕ ? ನನ್ನ ಅತ್ಯಂತ ಪ್ರಿಯ ಪುಟ್ಟ ದೇವತೆ, ಯಾವ ರೀತಿಯಲ್ಲಿ ನೀವು ಈ ಇತರ ಎಲ್ಲರಿಗಿಂತ ಕಮ್ಮಿ ಯೋಗ್ಯರು ? ನೀವು ಎಷ್ಟು ಕರುಣಾಳು, ಚೆಲುವೆ ಹಾಗೂ ವಿದ್ಯಾವಂತೆ ! ಜೀವನದಲ್ಲಿ ನಿಮ್ಮ ಪಾಡು ಇಷ್ಟು ಕಠಿಣವಾಗಿರಬೇಕೇಕೆ ? ಸತ್‌ಸ್ವಭಾವದ ಜನರೇಕೆ ಕೊರತೆ ಅನಾದರಗಳ ಜೀವನ ನಡೆಸಬೇಕು ಮತ್ತು ಇತರರಿಗೇಕೆ ಎಲ್ಲ ಸುಖಸಂತೋಷಗಳೂ ಇರಬೇಕು ? ನನಗೆ ಗೊತ್ತು, ನನ್ನ ಪ್ರಿಯತಮೆ, ನನಗೆ ಗೊತ್ತು ನಾನು ಹೀಗೆ ಹೇಳಬಾರದೆಂದು. ಏಕೆಂದರೆ ಇದು ಮುಕ್ತ ಚಿಂತನೆಯ ಛಾಯೆ ಹೊಂದಿದೆ. ಆದರೆ ನ್ಯಾಯವಾಗಿ ಹೇಳುವುದಾದರೆ, ತಾಯಿಯ ಹೊಟ್ಟೆಯಲ್ಲಿರುವಾಗಲೇ ಒಬ್ಬರ ಮೇಲೆ ಅದೃಷ್ಟವು ಮುಗುಳ್ನಗೆ ಬೀರಬೇಕೇಕೆ, ಇನ್ನೊಬ್ಬರ ಮೇಲೆ ಅವರು ಬಡ ಕುಟುಂಬದಲ್ಲಿ ಜನಿಸಿದರೆಂಬ ಕಾರಣದಿಂದಾಗಷ್ಟೆ ರಣಹದ್ದಿನಂತೆ ಎರಗಬೇಕೇಕೆ ? ನಮ್ಮ ರಮ್ಯ ಕಥೆಗಳಲ್ಲಿ ಬರುವಂತೆ, ಕೆಲವು ವೇಳೆ ಸುಖಸಂತೋಷಗಳು ಪೆದ್ದ ಇವಾನುಷ್ಕನಿಗೂ ಲಭಿಸು ವಂತಾಗಬಹುದು. ಅಂಥ ಪ್ರಸಂಗದಲ್ಲಿ ಅವನು ತಾನು ಪಡೆದ ಬೊಕ್ಕಸದಿಂದ ಬೇಕಾದಷ್ಟು ಹಣವನ್ನು ಹೊರತೆಗೆದು ಅದರಿಂದ ಕುಡಿಯಬಹುದು, ಆನಂದಿಸ ಬಹುದು. ಅದೇ ಹೊತ್ತಿನಲ್ಲಿ ಮತ್ತೊಬ್ಬ ದರಿದ್ರ ವ್ಯಕ್ತಿಯು ಜೊಲ್ಲು ಸುರಿ ಸುತ್ತ ಆ ಅದೃಷ್ಟವಂತನನ್ನೇ ನೋಡುತ್ತ ನಿಲ್ಲಬಹುದಷ್ಟೆ – ಅವನು ಅದಕ್ಕಷ್ಟೆ ಅರ್ಹನು, ಅವನು ಹುಟ್ಟಿದುದು ಅದಕ್ಕಾಗಿಯಷ್ಟೆ. ಈ ರೀತಿ ಯೋಚಿಸುವುದು ಪಾಪಕರವೆನ್ನಿ. ಆದರೆ ಈ ಪಾಪಕರ ಆಲೋಚನೆಗಳು ಕರೆಯದೆ ಬರುತ್ತವೆ. ನೀವು ಆ ಬಂಡಿಗಳೊಂದರಲ್ಲಿ ಸವಾರಿ ಮಾಡಿಕೊಂಡು ಹೋಗಬಾರದೇಕೆ ? ಆಗ ನನ್ನಂಥವರೂ ಅಲ್ಲದೆ ಜನರಲ್‌ಗಳೂ ನಿಮ್ಮ ಸವಿನಗೆಗಾಗಿ ಕಾದು ಕುಳಿ

ತಿರುತ್ತಿದ್ದರು. ಆಗ ನೀವು ಚಿನ್ನದ ಜರಿಯ ರೇಷ್ಮೆ ಬಟ್ಟೆಗಳನ್ನು ಉಡುತ್ತಿದ್ದಿರಿ. ಈ ಬಡಕಲು ಹರಕಲು ಹತ್ತಿ ಬಟ್ಟೆಗಳನ್ನಲ್ಲ. ಮತ್ತೆ ಆಗ, ಈಗಿರುವಂತೆ ನಿಸ್ತೇಜ ರಾಗಿ ನಿಶ್ಯಕ್ತರಾಗಿ ಇರುತ್ತಿದ್ದಿರಾ? ಇಲ್ಲವೇ ಇಲ್ಲ! ನೀವು ಸಕ್ಕರೆಯ ಲೇಪನವುಳ್ಳ ಶುಂಠಿ ಬೊಂಬೆಯಂತಿರುತ್ತಿದ್ದಿರಿ, ಕೆಂಗುಲಾಬಿಯಂತೆ ಪ್ರಸನ್ನರಾಗಿ ದಷ್ಟಪುಷ್ಟ ವಾಗಿ ಇರುತ್ತಿದ್ದಿರಿ. ಆಗ ಉಜ್ವಲವಾಗಿ ಬೆಳಗುವ ನಿಮ್ಮ ಕಿಟಕಿಗಳಲ್ಲಿ ಇಣಿಕಿ ನೋಡಿ ನಿಮ್ಮ ನೆರಳನ್ನಷ್ಟೆ ಕಂಡು ನೀವು ಸಂತೋಷದಿಂದ ಆನಂದದಿಂದ ಇದ್ದೀ ರೆಂದು ತಿಳಿಯುವುದಷ್ಟೆ ನನಗೆ ಸುಖ ನೀಡಲು ಸಾಕಾಗುತ್ತಿದ್ದಿತು. ಆದರೆ ನಿಜ ಜೀವನದಲ್ಲಿ ಪರಿಸ್ಥಿತಿ ಹೇಗಿದೆ? ದುಃಖ. ದುಷ್ಟ ಜನರು ನಿಮ್ಮನ್ನು ದುಃಖದ ಸ್ಥಿತಿಗೆ ತಂದಿದ್ದಾರೆ. ಗಾಯದ ಮೇಲೆ ಬರೆ ಎಳೆಯುವಂತೆ ಈಗ ಆ ಮೀಸೆಯ ಕಚಡ ಮನುಷ್ಯ ಬೇರೆ ನಿಮ್ಮನ್ನು ಕಾಡಿಸುತ್ತಿದ್ದಾನೆ. ಫ್ರಾಕ್‌ಕೋಟು ತೊಟ್ಟು ಚಿನ್ನದ ಕಟ್ಟಿನ ಕನ್ನಡಕದ ಗಾಜಿನ ಮೂಲಕ ನಿಮ್ಮತ್ತ ಪ್ರಣಯದೃಷ್ಟಿ ಬೀರಬಲ್ಲ ನೆಂಬ ಕಾರಣದಿಂದ ಆ ಜಂಭದ ಕೋಳಿ ನಿಮ್ಮ ವಿಷಯದಲ್ಲಿ ಸ್ವಾತಂತ್ರ್ಯ ತೆಗೆದು ಕೊಳ್ಳಬಹುದೆಂದು, ನೀವು ಅವನ ಅಧಿಕಪ್ರಸಂಗತನದ ಕೇಳಿಕೆಗಳಿಗೆಲ್ಲ ಸಂತೋಷ ದಿಂದ ಓಗೊಡಬೇಕೆಂದು ಕಲ್ಪಿಸಿಕೊಂಡಿದ್ದಾನೆ. ಯಾಕೆ? ಯಾಕೆ? ಯಾಕೆಂದರೆ ನೀವೊಬ್ಬ ನಿಸ್ಸಹಾಯಕರಾದ ಅನಾಥರಾದ ಹೆಂಗಸು. ನಿಮ್ಮನ್ನು ರಕ್ಷಿಸಲು ಬಲಿಷ್ಠರಾದ ಮಿತ್ರರಿಲ್ಲ. ರಕ್ಷಣೆಯಿಲ್ಲದ ಅನಾಥೆಯೊಬ್ಬಳನ್ನು ಅವಮಾನಪಡಿಸು ವುದರಲ್ಲಿ ತಪ್ಪೇನಿಲ್ಲವೆಂದು ಭಾವಿಸಿದರೆ ಅಂತಹ ಆ ವ್ಯಕ್ತಿ, ಅಂತಹ ಜನರು, ಎಷ್ಟು ನೀಚರಾಗಿರಬೇಕು? ಅವನು ಕಸದರಾಶಿಯಾಗಿರಬೇಕು, ಮನುಷ್ಯನಲ್ಲ! ಮೇಲ್ನೋಟಕ್ಕಷ್ಟೆ ಮನುಷ್ಯ! ಖಂಡಿತ ಹಾಗೆಯೇ. ಹಾಗೆ ನೋಡಿದರೆ, ಗೊರೋಹೊವಯ ಬೀದಿಯಲ್ಲಿ ನನಗೆ ಕಂಡುಬಂದ ಆ ಆರ್ಗನ್‌ವಾದ್ಯಗಾರ ಹೆಚ್ಚು ಗೌರವಕ್ಕೆ ಅರ್ಹ. ಒಂದು ಕೊಪೆಕ್ ಹೆಚ್ಚಿಗೆ ಸಿಕ್ಕೀತೆ ಎಂದು ಅವನು ಇಡೀ ದಿನ ಬೀದಿ ಬೀದಿ ಅಲೆದರೂ ಏನಂತೆ? ಅವನು ತನಗೆ ತಾನೇ ಯಜಮಾನ. ತನ್ನ ಹೊಟ್ಟೆಪಾಡನ್ನು ತಾನೇ ಸಂಪಾದಿಸಿಕೊಳ್ಳುತ್ತಾನೆ. ಅವನೇನೂ ತಿರುಪೆ ಯವನಲ್ಲ. ಜನರ ಸಂತೋಷಕ್ಕಾಗಿ ಆರ್ಗನ್‌ವಾದ್ಯ ನುಡಿಸುತ್ತ ಹೋಗುತ್ತಾನೆ: ಇಲ್ಲಿ ಕೇಳಿ! ಸಂತೋಷಪಡಿ! ನಾನಿರುವುದು ಇದಕ್ಕಾಗಿಯೇ! ಬಹುಶಃ ಅವನು ಬಹಳ ಬಡವನಾಗಿಯೂ ಇರಬಹುದು, ನಿಜವಾದ ಬಡವನಾಗಿರಬಹುದು. ಆದರೂ ಗೌರವಾರ್ಹ ಬಡವ. ಬಳಲಿದ್ದರೂ, ಹಸಿವಿನಿಂದ ಕಂಗಾಲಾಗಿದ್ದರೂ ಅವನು ತನ್ನದೇ ಆದ ರೀತಿಯಲ್ಲಿ ಕೆಲಸ ಮಾಡುತ್ತ ಹೋಗುತ್ತಾನೆ. ಆದರೂ ಕೆಲಸ ಮಾಡುತ್ತಾನೆ. ಇಂತಹ ಅನೇಕ ಜನರಿದ್ದಾರೆ. ಅವರು ಸಾಮಾನ್ಯವಾದ ಕೆಲಸ ಮಾಡುತ್ತಾರೆ, ಸ್ವಲ್ಪವನ್ನಷ್ಟೆ ಸಂಪಾದಿಸುತ್ತಾರೆ, ಆದರೆ ಯಾರ ಮುಂದೂ ತಲೆ ಬಾಗುವುದಿಲ್ಲ, ಯಾರನ್ನೂ ಏನೂ ಕೇಳ ಹೋಗುವುದಿಲ್ಲ. ನಾನೂ ಆ

ಆರ್ಗನ್‌ವಾದ್ಯಗಾರನಂತೆಯೇ. ಅಂದರೆ ಸರಿಯಾಗಿ ಅವನಂತೆಯೇ ಅಲ್ಲ, ಅವನಂತೆ ಅಲ್ಲದಿರಲೂ ಬಹುದು. ಆದರೆ ಶಿಷ್ಟ ಗೌರವಾರ್ಹ ಕುಲೀನ ಅರ್ಥ ದಲ್ಲಿ, ಅವನಂತೆ. ನಾನು ಕೈಲಾದಷ್ಟು ಕಷ್ಟಪಟ್ಟು ಕೆಲಸ ಮಾಡುತ್ತೇನೆ. ಹೆಚ್ಚಿಗೆ ಏನು ಮಾಡಬಲ್ಲೆ?

ಆರ್ಗನ್‌ವಾದ್ಯಗಾರನ ಬಗೆಗೆ ನಾನು ಏಕೆ ಯೋಚಿಸ ಹೊರಟೆ? ಏಕೆಂದರೆ ಇಂದು ಹಿಂದೆಂದಿಗಿಂತ ಹೆಚ್ಚು ತೀವ್ರವಾಗಿ ನನ್ನ ಬಡತನ ಪರೀಕ್ಷೆಗೆ ಒಳಗಾಯಿತು. ನಾನು ಬೀದಿಯಲ್ಲಿ ಅವನ ವಾದನವನ್ನು ಗಮನಿಸುತ್ತ ನಿಂತೆ. ನನ್ನ ಮನಸ್ಸನ್ನು ಬೇರೆ ಕಡೆಗೆ ತಿರುಗಿಸಲು, ಅಪ್ರಿಯ ಯೋಚನೆಗಳಿಂದ ದೂರವಿರಿಸಲು, ನಾನು ಹೀಗೆ ಮಾಡಿದೆ. ಅದೇ ರೀತಿ ಕೆಲವು ಗಾಡಿಹೊಡೆಯುವವರೂ, ಒಬ್ಬ ಯುವ ಹೆಂಗಸೂ, ಮೈಯೆಲ್ಲ ಮಸಿ ಮೆತ್ತಿದ ಒಂದು ಪುಟ್ಟ ಹುಡುಗಿಯೂ, ನೋಡುತ್ತ ನಿಂತಿದ್ದರು. ಆರ್ಗನ್‌ವಾದ್ಯಗಾರನು ಯಾರದೋ ಮನೆಯ ಕಿಟಕಿಯ ಕೆಳಗೆ ನಿಂತು ವಾದ್ಯ ನುಡಿಸುತ್ತಿದ್ದನು. ಈಗ ನಾನು ಅಲ್ಲಿ ಸುಮಾರು ಹತ್ತು ವಯಸ್ಸಿನ ಒಬ್ಬ ಪುಟ್ಟ ಹುಡುಗನನ್ನೂ ಕಂಡೆ. ಅವನು ಬಡತನದಲ್ಲಿ ಬೆಂದು ರೋಗಿಷ್ಠನಾ ಗಿರದಿದ್ದರೆ, ಬಹು ಅಂದವಾಗಿಯೇ ಕಾಣಿಸುವಂಥ ಹುಡುಗನಾಗಿರುತ್ತಿದ್ದ. ಬಹು ಮಟ್ಟಿಗೆ ಬರಿಗಾಲಿನಲ್ಲಿದ್ದ. ತೊಟ್ಟಿದ್ದು ಒಂದೇ ಅಂಗಿ. ಬಾಯಿಬಿಟ್ಟುಕೊಂಡು ಆರ್ಗನ್‌ವಾದನವನ್ನೇ ಕೇಳುತ್ತ ನಿಂತಿದ್ದ. ಹುಡುಗರು ಎಷ್ಟೇ ಆಗಲಿ ಹುಡುಗರೇ ! ಅವನ ಕೈ ಕಾಲು ಚಳಿಯಿಂದ ನಡುಗುತ್ತಿದ್ದರೂ ಅವನು ತನ್ನ ಅಂಗಿಯ ತೋಳನ್ನು ಜಗಿಯುತ್ತ, ಆ ಆರ್ಗನ್‌ವಾದ್ಯದ ಬುರುಡೆಯ ಮೇಲೆ ನರ್ತಿಸುತ್ತಿದ್ದ ಬೊಂಬೆ ಗಳಿಂದ ತನ್ನ ಕಣ್ಣುಗಳನ್ನು ಕೀಳಲಾರದೆ, ನಿಂತಿದ್ದ. ಕೈಯಲ್ಲಿ ಒಂದು ತುಂಡು ಕಾಗದ ಹಿಡಿದಿದ್ದುದನ್ನೂ ನಾನು ಗಮನಿಸಿದೆ. ಕೊನೆಗೆ ಯಾರೋ ಒಬ್ಬ ಮಹಾ ಶಯ ಬಂದ, ವಾದ್ಯದ ಬೊಂಬೆಗಳು – ಫ್ರೆಂಚ್‌ಮನ್ ಮತ್ತವನ ಜೊತೆಗಾರ್ತಿ ಯರು – ನರ್ತಿಸುತ್ತಿದ್ದ ಪೆಟ್ಟಿಗೆಯ ಮೇಲೆ ಒಂದು ನಾಣ್ಯವನ್ನು ಹಾಕಿದ. ಆ ನಾಣ್ಯ ಬಿದ್ದ ಠಣಠಣ ಸದ್ದು ಆ ಹುಡುಗನನ್ನು ಎಚ್ಚರಿಸಿತು. ಅವನು ಅಂಜು ತ್ತಂಜುತ್ತ ಸುತ್ತ ನೋಡಿದ. ನಾನು ಆ ನಾಣ್ಯವನ್ನು ಹಾಕಿದ್ದೆನೆಂದು ಅವನು ಭಾವಿಸಿರಬೇಕು, ಏಕೆಂದರೆ, ಅವನು ಕೂಡಲೇ ನನ್ನ ಬಳಿಗೆ ಓಡಿ ಬಂದು ನಡು ಗುವ ಕೈಗಳಿಂದ ಆ ಕಾಗದವನ್ನು ನನಗೆ ಕೊಟ್ಟು ಅದನ್ನು ಓದುವಂತೆ ಕೀರಲು ದನಿಯಲ್ಲಿ ಕೇಳಿಕೊಂಡ. ನಾನು ಆ ಕಾಗದವನ್ನು ಬಿಚ್ಚಿ ನೋಡಿದೆ. ಅದು ಮಾಮೂ ಲಿಯದೇ ಆಗಿದ್ದಿತೆನ್ನಿ – ತಾಯಿ ಸಾಯುವ ಸ್ಥಿತಿಯಲ್ಲಿದ್ದಾಳೆ, ಮಕ್ಕಳು ಮೂರು, ಹಸಿವಿನಿಂದ ಕಂಗಾಲಾಗಿವೆ, ದಾನಶೀಲರಾದ ಜನ ಕೊಡುಗೈನ ಸಹಾಯ ನೀಡ ಬೇಕು, ತಾಯಿ ಸತ್ತ ಮೇಲೆ ಮೇಲಿನ ಲೋಕದಲ್ಲಿ ದಾತೃಗಳ ಒಳಿತಿಗಾಗಿ ಪ್ರಾರ್ಥಿ ಸುವಳು, ಎಂಬ ಮಾಮೂಲಿ ಬೇಡಿಕೆಯ ಪತ್ರ. ಅದರಲ್ಲಿ ವಿಶೇಷವಾದುದೇನೂ

ಇರಲಿಲ್ಲ. ಇಂತಹುದು ಯಾರಿಗೂ ಆಗಬಹುದಿತ್ತು. ಆದರೆ ನಾನು ಅವನಿಗೆ ಏನು ಕೊಡಬಹುದಿತ್ತು? ಏನೂ ಇಲ್ಲ. ಆದರೆ ನನಗೆಷ್ಟು ದುಃಖವಾಯಿತು! ಎಂಥ ನತದೃಷ್ಟ ಪುಟ್ಟ ಬಾಲಕ, ಚಳಿಯಿಂದ ನೀಲಿಗಟ್ಟಿದ್ದಾನೆ! ಖಂಡಿತ ಹಸಿದಿರಲೂ ಬೇಕು. ಅವನೇನೂ ನನಗೆ ಸುಳ್ಳು ಹೇಳುತ್ತಿರಲಿಲ್ಲ. ಇಲ್ಲ, ಇಲ್ಲ, ಸುಳ್ಳು ಹೇಳುವಂತಿರಲಿಲ್ಲ. ಅದು ನನಗೆ ಚೆನ್ನಾಗಿ ಗೊತ್ತು. ಈ ಪ್ರಸಂಗದ ಅತ್ಯಂತ ಹೇಸಿಕೆಯ ಅಂಶವೆಂದರೆ – ತಾಯಿಯೊಬ್ಬಳು ತನ್ನ ಮಗನನ್ನು ಸಾಕಷ್ಟು ಬಟ್ಟೆಯನ್ನೂ ತೊಡಿಸದೆ ಚಳಿಯಲ್ಲಿ ಇಂಥ ಕಾಗದವನ್ನು ಕೈಯಲ್ಲಿ ಕೊಟ್ಟು ಕಳುಹಿಸುವುದು. ಅವಳು ಬಹುಶಃ ಹೃದಯಹೀನಳಾಗಿರಬೇಕು. ಅವಳಿಗೆ ಸಹಾಯ ಮಾಡುವವರು ಯಾರೂ ಇಲ್ಲ. ಆದ್ದರಿಂದ ಅವಳು ಮನೆಯಲ್ಲೇ ಏನೂ ಕೆಲಸ ಮಾಡದೆ ಕುಳಿತಿರಬಹುದು. ಬಹುಶಃ ಅವಳು ನಿಜಕ್ಕೂ ಕಾಯಿಲೆ ಬಿದ್ದಿರಬಹುದು. ಆದರೂ ಅವಳು ಸೂಕ್ತ ಅಧಿಕಾರಿಗಳಿಗೆ ಮನವಿ ಮಾಡಿಕೊಳ್ಳಬೇಕು. ಅಥವಾ ಅವಳು ತನ್ನ ದುರ್ಬಲನಾದ ಹಸಿದ ಪುಟ್ಟ ಹುಡುಗನನ್ನು ಭಿಕ್ಷೆ ಬೇಡಲು ಕಳುಹಿಸುವ ಮೂಲಕ ಸಾರ್ವಜನಿಕರನ್ನು ಮೋಸ ಮಾಡುತ್ತಲೂ ಇರಬಹುದು. ಇಂತಹ ಕಾಗದದ ಚೂರುಗಳನ್ನು ಹಿಡಿದುಕೊಂಡು ಭಿಕ್ಷೆ ಬೇಡುತ್ತ ಅಲೆಯುತ್ತ ಆ ಹುಡುಗ ಯಾವ ರೀತಿಯಲ್ಲಿ ಬೆಳೆಯುತ್ತಾನೆ? ಅಲ್ಲಿ ನೋಡಿ ಅವನು ಒಬ್ಬರಿಂದ ಒಬ್ಬರ ಬಳಿಗೆ ಬೇಡುತ್ತ ಓಡುತ್ತಿದ್ದಾನೆ, ಆದರೆ ಅವನ ಮನವಿ ಕೇಳಲು ಜನರಿಗೆ ಪುರಸತ್ತೆಲ್ಲಿದೆ? ಅವರದು ಕಲ್ಲು ಹೃದಯ. ಅವರ ಮಾತು ಕ್ರೂರ: "ಹೋಗೋ, ಹೋಗೋ! ನಮಗೆ ಗೊತ್ತಿದೆ ನಿನ್ನ ಮೋಸ!" ಹುಡುಗ ಇಂಥ ಮಾತುಗಳನ್ನು ಕೇಳಿ ಕೇಳಿ, ಚಳಿಯಿಂದ ನಡುಗಿ, ನಿರ್ದಯಿಯಾಗಿ ಬೆಳೆಯುತ್ತಾನೆ. ಪಾಪ, ಅವನು ಗೂಡಿನಿಂದ ಕೆಳಗೆ ಬಿದ್ದ ಬೆದರಿದ ಪುಟ್ಟ ಮರಿ ಹಕ್ಕಿಯಂತಿದ್ದಾನೆ. ಅವನ ಕೈಗಳು ಜಡ್ಡುಗಟ್ಟಿವೆ. ಆ ಶೀತದ ಗಾಳಿಯಲ್ಲಿ ಅವನಿಗೆ ಉಸಿರಾಡಲೂ ಆಗುತ್ತಿಲ್ಲ. ಇನ್ನೇನಾಗುತ್ತೆ – ತನಗೇ ತಿಳಿಯುವುದಕ್ಕೆ ಮುನ್ನವೇ ಅವನು ಕೆಮ್ಮ ತೊಡಗುತ್ತಾನೆ, ಅಸಹ್ಯಕರ ಜಂತುವಿನಂತೆ ರೋಗ ಅವನ ಎದೆಗೆ ಅಮರುತ್ತೆ, ಆಗಲೇ ಸಾವು ಅವನ ಮೇಲೆ ನಿಂತಿರುತ್ತೆ, ಯಾವುದೋ ಕತ್ತಲಿನ ಕೊಳಕು ಮೂಲೆಯಲ್ಲಿ ಅವನಿಗಾಗಿ ಕಾದಿರುತ್ತೆ, ಏಕೆಂದರೆ ಅವನನ್ನು ನೋಡಿಕೊಳ್ಳುವವರು ಯಾರೂ ಇಲ್ಲ, ಅವನಿಗೆ ಸಹಾಯ ಮಾಡುವವರು ಯಾರೂ ಇಲ್ಲ. ಹೀಗೆ ಅವನ ಪುಟ್ಟ ಜೀವ ಕೊನೆಗೊಳ್ಳುತ್ತೆ. ಕೆಲವು ಜೀವಗಳಿಗೆ ಇರುವುದೆಲ್ಲ ಇಷ್ಟೆ, ವಾರೆಂಕ. "ಕ್ರಿಸ್ತನ ಪ್ರೀತ್ಯರ್ಥವಾಗಿ ಸಹಾಯ ಮಾಡಿ" ಎಂದು ಯಾರಾದರೂ ಹೇಳುವುದನ್ನು ಕೇಳುವುದು, ಅನಂತರ ಏನನ್ನೂ ಕೊಡದೆಯೇ "ದೇವರು ನಿನಗೆ ಸಹಾಯ ಮಾಡುತ್ತಾನೆ" ಎಂದು ಸುಮ್ಮನೆ ಹೇಳಿ ಹೊರಟು ಹೋಗುವುದು, ಸುಲಭವೇನಲ್ಲ. "ಕ್ರಿಸ್ತನ ಪ್ರೀತ್ಯರ್ಥ" ಎಂಬ ಮಾತುಗಳು ಅಷ್ಟು ಭಯಂಕರ

ವಲ್ಲದ ಸಮಯವೂ ಉಂಟು ("ಕ್ರಿಸ್ತನ ಪ್ರೀತ್ಯರ್ಥ" ಎನ್ನುವುದರಲ್ಲೂ ನಾನಾ ತರಹಗಳುಂಟು, ನನ್ನ ಪ್ರಿಯೆ). ಕೆಲವು ಸಾರಿ ಇವನ್ನು ಯಾಂತ್ರಿಕವಾಗಿ ಬೊಗುಳ ಲಾಗುತ್ತೆ, ಭಿಕ್ಷುಕರು ಯಾವಾಗಲೂ ಮಾಡುವುದಿಲ್ಲವೆ, ಹಾಗೆ. ಅಂಥವರಿಗೆ ಏನನ್ನೂ ಕೊಡದಿರುವುದು ಮನಸ್ಸನ್ನು ಅಷ್ಟು ಹಿಂಸಿಸುವುದಿಲ್ಲ. ಅಂಥ ಮನುಷ್ಯ ಇವಕ್ಕೆಲ್ಲ ಒಗ್ಗಿ ಹೋಗಿರುತ್ತಾನೆ, ಗಡುಸಾಗಿರುತ್ತಾನೆ, ಹೇಗೋ ಏಗಿಕೊಂಡು ಹೋಗುತ್ತಾನೆ. ಆದರೆ ಇನ್ನು ಕೆಲವು ವೇಳೆ "ಕ್ರಿಸ್ತನ ಪ್ರೀತ್ಯರ್ಥ" ಎನ್ನುವ ಮಾತು ಗಳು ವಿಚಿತ್ರವಾಗಿ, ಕರ್ಕಶವಾಗಿ, ಭೀತಿಕಾರಕವಾಗಿ ಕೇಳಿಬರುತ್ತವೆ. ನಾನು ಇಂದು ಆ ಬಾಲಕನ ಮನವಿ ಪತ್ರವನ್ನು ಓದುತ್ತಿದ್ದಾಗ ಯಾರೋ ಬೇಲಿಯ ಬಳಿಯೇ – ಅವನು ಅಲ್ಲಿ ಸುಮ್ಮನೆ ನಿಂತಿದ್ದ, ಎಲ್ಲರ ಹತ್ತಿರವೂ ಭಿಕ್ಷೆ ಬೇಡುತ್ತಿರಲಿಲ್ಲ – "ಒಂದು ಕಾಸು ಕೊಡಿ, ಸ್ವಾಮಿ, ಕ್ರಿಸ್ತನ ಪ್ರೀತ್ಯರ್ಥ" ಎಂದು ನನ್ನನ್ನು ಕೇಳಿದಾಗ ನನಗೆ ಅನಿಸಿದ್ದು ಹಾಗೆಯೇ. ಆ ಧ್ವನಿ ಎಷ್ಟು ಕರ್ಕಶವಾಗಿದ್ದಿತೆಂದರೆ ನಾನು ಬೆಚ್ಚಿಬಿದ್ದೆ. ಆದರೆ ನಾನು ಅವನಿಗೆ ಏನು ಕೊಡಬಹುದಿತ್ತು? ನನ್ನ ಬಳಿ ಏನೂ ಇರಲಿಲ್ಲ. ಬಡವರು ತಮ್ಮ ದುರವಸ್ಥೆಯ ಬಗೆಗೆ ಗಟ್ಟಿಯಾಗಿ ಹೇಳಿಕೊಳ್ಳುವು ದನ್ನು ಶ್ರೀಮಂತರು ಇಷ್ಟಪಡುವುದಿಲ್ಲ. ಅಂತಹವರೆಲ್ಲ ಅಸಹ್ಯ ಜನ, ಮಾನ ಮರ್ಯಾದೆ ಇಲ್ಲದ ಜನ, ಎನ್ನುತ್ತಾರೆ ಶ್ರೀಮಂತರು! ಹಸಿದ ಜನರ ನರಳಾಟ ಈ ಶ್ರೀಮಂತರ ನಿದ್ರೆಯನ್ನೇನು ಕೆಡಿಸುತ್ತದೆಯೇ? ನನಗೇನೂ ಹಾಗನಿಸು ವುದಿಲ್ಲ.

ನಿಜ ಹೇಳುವುದಾದರೆ, ನನ್ನ ಮುದ್ದು, ನಾನು ಇದನ್ನೆಲ್ಲ ಬರೆದಿರುವುದು ಭಾಗಶಃ ನನ್ನ ಹೃದಯದ ಹೊರೆಯನ್ನು ಕಮ್ಮಿ ಮಾಡಿಕೊಳ್ಳುವುದಕ್ಕೆ, ಭಾಗಶಃ ನಿಮಗೆ ನನ್ನ ಬರವಣಿಗೆಯ ಉತ್ತಮ ಶೈಲಿಯನ್ನು ನಿದರ್ಶನವಾಗಿ ತಿಳಿಸುವು ದಕ್ಕೆ. ನೀವೇ ಕಾಣುವಂತೆ, ನನ್ನ ಚಿನ್ನ, ನನ್ನ ಬರವಣಿಗೆಯ ಶೈಲಿ ಇತ್ತೀಚೆಗೆ ನಿರ್ದಿಷ್ಟ ರೂಪ ಪಡೆದುಕೊಳ್ಳುತ್ತಿದೆ. ಇದೀಗ ನಾನು ಎಷ್ಟು ವಿಷಣ್ಣನಾಗಿದ್ದೇ ನೆಂದರೆ, ನನ್ನ ಆಲೋಚನೆಗಳ ಬಗೆಗೇ ನಾನು ಸಹಾನುಭೂತಿ ತೋರಿಸದೆ ಇರದಾ ಗಿದ್ದೇನೆ. ಅಂಥ ಸಹಾನುಭೂತಿಯು ನನಗೆ ಯಾವ ರೀತಿಯಲ್ಲೂ ಸಹಾಯ ವಾಗುವುದಿಲ್ಲವೆಂದು ನಾನು ತಿಳಿದಿದ್ದರೂ, ನನ್ನ ಯೋಗ್ಯತೆಗೆ ನಾನೇ ಒಂದು ಸ್ವಲ್ಪ ಬೆಲೆ ಕೊಟ್ಟುಕೊಳ್ಳುವುದು, ಸಂತಸಕರವೇ ಆಗಿರುತ್ತದೆ. ಯಾರೇ ಆಗಲಿ ಸಾಮಾನ್ಯವಾಗಿ ತನ್ನನ್ನು ತುಂಬ ವಿನೀತನನ್ನಾಗಿ ಮಾಡಿಕೊಳ್ಳುವ, ತನ್ನನ್ನು ಕಸ ಕ್ಕಿಂತ ಕಡೆಯನ್ನಾಗಿ ಕಂಡುಕೊಳ್ಳುವ, ತನ್ನನ್ನು ಮರದ ಹೊಟ್ಟಿಗಿಂತ ಕೆಳಗಿನ ಸ್ಥಾನದಲ್ಲಿರಿಸಿಕೊಳ್ಳುವ ಮನೋಒಲವು ಹೊಂದಿದ್ದಲ್ಲಿ, ಆತ್ಮ ಸಹಾನುಭೂತಿ ಇನ್ನೂ ಹೆಚ್ಚು ಸಂತಸಕರವಾಗಿರುತ್ತದೆ. ನಿಮಗೆ ಒಂದು ಹೋಲಿಕೆ ನೀಡುವು ದಾದರೆ, ನಾನು ಹೀಗೆ ಹೇಳಬಹುದು – ನನ್ನಲ್ಲಿ ಇಂತಹ ಯೋಚನೆ ಬರುವು

ದಕ್ಕೆ ಮುಖ್ಯ ಕಾರಣ, ನಾನೂ ಭಿಕ್ಷೆ ಕೇಳಿದ ಆ ಪುಟ್ಟ ಬಾಲಕನಂತೆಯೇ ಅಷ್ಟೇ ಪೀಡಿತನಾಗಿದ್ದೇನೆ, ಅಷ್ಟೇ ಜರ್ಜರಿತನಾಗಿದ್ದೇನೆ. ವಿಷಯವನ್ನು ರೂಪಕ ಕಥೆಯ ರೀತಿಯಲ್ಲಿ ಹೇಳುತ್ತೇನೆ, ವಾರೆಂಕ. ಅದಕ್ಕಾಗಿ ಕ್ಷಮಿಸಿ. ನಾನು ಆಫೀಸಿಗೆ ಬೆಳಿಗ್ಗೆ ಬೇಗನೆಯೇ ಹೋಗುವಾಗ ಕೆಲವು ವೇಳೆ ಈ ಪಟ್ಟಣವನ್ನೆಲ್ಲ ನೋಡುತ್ತೇನೆ, ಈ ಹೊಗೆಯನ್ನೆಲ್ಲ, ಈ ಜನಜಂಗುಳಿಯನ್ನು, ಈ ಗದ್ದಲಗಲಾಟೆಯನ್ನು, ನೋಡು ತ್ತೇನೆ. ಅದು ನನ್ನನ್ನು ತುಂಬ ಅಲ್ಪನನ್ನಾಗಿ ಭಾವಿಸಿಕೊಳ್ಳುವಂತೆ ಮಾಡುತ್ತದೆ – ನನ್ನ ಮೂಸುತ್ತಿರುವ ಮೂಗಿನ ಕೆಳಗೇ ಯಾರೋ ನನ್ನನ್ನು ಮೂದಲಿಸುವಂತೆ ಚಿಟಿಕೆ ಹಾಕಿದಂತೆ. ಅಂತಹುದು ಜರುಗಿದಾಗ ನಾನು ಕುಗ್ಗುತ್ತೇನೆ, ಇಲಿಮರಿ ಯಷ್ಟು ನಮ್ರನಾಗಿ ಕಾಲೆಳೆದುಕೊಂಡು ಮುಂದೆ ಹೋಗುತ್ತೇನೆ. ಈಗ, ನನ್ನ ಚಿನ್ನ, ಆ ದೊಡ್ಡ ಕತ್ತಲಿನಿಂದ ಕೂಡಿದ ಮಂಕು ಮನೆಗಳಲ್ಲಿ ಏನು ಜರುಗುತ್ತಿದೆ ಎಂಬುದನ್ನು ನಿಕಟವಾಗಿ ಪರಿಶೀಲಿಸೋಣ. ತನ್ನನ್ನೇ ಅಷ್ಟು ಕೆಳ ಸ್ಥಾನದಲ್ಲಿರಿಸಿ ಕೊಂಡು ಅನಂತರ ಅದಕ್ಕಾಗಿ ಪೇಚಾಡುವುದು ಸರಿಯೇ ಎಂಬುದನ್ನು ನೀವೇ ನೋಡಿ ಹಾಗೂ ಪರಿಗಣಿಸಿ. ನಾನು ಇದೆಲ್ಲವನ್ನೂ ನೇರವಾದ ಅರ್ಥದಲ್ಲಲ್ಲ ಆದರೆ ರೂಪಕ ಅರ್ಥದಲ್ಲಿ ಹೇಳುತ್ತಿದ್ದೇನೆಂಬುದನ್ನು, ವಾರೆಂಕ, ಗಮನದಲ್ಲಿರಿಸಿ. ನಾವು ಆ ಮನೆಗಳಲ್ಲಿ ಏನು ಕಾಣುತ್ತೇವೆ? ಗೃಹ ವಿಭಾಗ ಎಂದು ಕರೆಸಿಕೊಳ್ಳ ಲಾಗುವಂತಹ ಯಾವುದೋ ಅತಿಥಂಡಿಯಿಂದ ಕೂಡಿದ ಹಜಾರದ ಯಾವುದೋ ಕೊಳಕು ಮೂಲೆಯಲ್ಲಿ ಹೇಗೆ ಕೆಲಸಗಾರನೊಬ್ಬನು ಏಳುತ್ತಾನೆಂಬುದನ್ನು ಕಾಣು ತ್ತೇವೆ. ಇಡೀ ರಾತ್ರಿ ಅವನು ಹಿಂದಿನ ದಿನ ಹರಿದ ಪಾದರಕ್ಷೆಗಳ ವಿಚಾರದಿಂದಲೇ ಪೀಡಿತನಾಗಿದ್ದುದೂ ಸಾಧ್ಯ. ಮನುಷ್ಯನೊಬ್ಬ ಇಂತಹ ಕೀಳು ವಿಚಾರಗಳ ಕನಸು ಕಾಣುತ್ತಾನೆಂಬುದನ್ನು ಯೋಚಿಸುವುದೂ ಎಷ್ಟು ಮೂರ್ಖತನ. ಆದರೆ ಅವನೊಬ್ಬ ಕಾರ್ಮಿಕ, ಒಬ್ಬ ಮೋಚಿ. ಆದ್ದರಿಂದ ಅಂಥ ವಿಷಯಗಳ ಬಗೆಗೇ ಸತತವಾಗಿ ಯೋಚಿಸುತ್ತಿರುವುದಕ್ಕಾಗಿ ಕ್ಷಮಿಸಬಹುದು. ಅವನ ಮಕ್ಕಳು ಗೋಳಿ ಡುತ್ತಿದ್ದಾರೆ, ಅವನ ಹೆಂಡತಿ ಹಸಿದಿದ್ದಾಳೆ. ಮೋಚಿಗಳಷ್ಟೆ ಅಲ್ಲ, ನನ್ನ ಪ್ರಿಯೆ, ತಮ್ಮ ಮನಸ್ಸಿನಲ್ಲಿ ಅಂತಹ ವಿಚಾರಗಳನ್ನಿಟ್ಟುಕೊಂಡು ಏಳುವುದು. ಇಲ್ಲಿ ಮತ್ತೊಂದು ಪ್ರಸಂಗವೂ ಇದೆ. ಅದು ಇಲ್ಲದಿದ್ದರೆ ಈ ಮೇಲಿನದು ಪರವಾಗಿರಲಿಲ್ಲ. ಅದು ಬಹುಶಃ ನಮೂದಿಸಲೂ ಅರ್ಹವಾಗುತ್ತಿರಲಿಲ್ಲ. ಆ ಪ್ರಸಂಗವೆಂದರೆ – ಅದೇ ಮನೆಯಲ್ಲಿ, ಮೇಲಿನ ಮಹಡಿಯಲ್ಲಿ ಒಬ್ಬ ತುಂಬ ಶ್ರೀಮಂತ ವಾಸಿಸುತ್ತಿದ್ದಾನೆ. ಅವನೂ ತನ್ನ ರಂಗುರಂಗಿನ ಕೋಣೆಯಲ್ಲಿ ಇಡೀ ರಾತ್ರಿ ಪಾದರಕ್ಷೆಗಳ ಬಗೆಗೇ ಕನಸು ಕಾಣುತ್ತಿದ್ದಾನೆ. ಅವು ಬೇರೆ ರೀತಿಯ ಪಾದರಕ್ಷೆಗಳು, ಆದರೆ ಅಂತೂ ಪಾದರಕ್ಷೆಗಳು. ಈ ಅರ್ಥದಲ್ಲಿ, ನನ್ನ ಚಿನ್ನ, ನಾವೆಲ್ಲ ಸ್ವಲ್ಪಮಟ್ಟಿಗೆ ಮೋಚಿ ಗಳೇ. ಆದರೂ ಪರವಾಗಿರಲಿಲ್ಲ. ಆದರೆ ಇದೇ ಶ್ರೀಮಂತನ ಕಿವಿಯೊಳಕ್ಕೆ, ಅವನು

ತನ್ನ ಬಗೆಗಷ್ಟೆ ಯೋಚಿಸುತ್ತ, ತನಗಾಗಿಯಷ್ಟೆ ಬಾಳುತ್ತ ಒಂಟಿಯಾಗಿ ಇರುವುದನ್ನು ನಿಲ್ಲಿಸಬೇಕು, ಅವನೇನೂ ಮೋಚಿಯಲ್ಲ, ಅವನ ಮಕ್ಕಳೆಲ್ಲ ಆರೋಗ್ಯವಾಗಿದ್ದಾರೆ, ಅವನ ಹೆಂಡತಿ ಹಸಿದಿಲ್ಲ, ಎಂಬ ಅಂಶವನ್ನು ಮೆಲ್ಲಗೆ ಉಸುರಲು ಯಾರೂ ಇಲ್ಲದಿರುವುದೇ ತೊಂದರೆಯದಾಗಿದೆ. ಅವನೇಕೆ ಸುತ್ತಮುತ್ತ ನೋಡಬಾರದು, ಯೋಚನೆ ಮಾಡಲು ಪಾದರಕ್ಷೆಗಳಿಗಿಂತ ಹೆಚ್ಚು ಉದಾತ್ತವಾದ ವಸ್ತುವನ್ನು ಕಂಡುಕೊಳ್ಳಬಾರದು. ಇದನ್ನೇ ನಾನು ನಿಮಗೆ ರೂಪಕವಾಗಿ ಹೇಳಲು ಬಯಸಿದ್ದುದು. ಇದು ತೀರ ಮುಕ್ತ ಆಲೋಚನೆಯಾಗಿರಬಹುದು, ವಾರೆಂಕ. ಆದರೆ ಅಂಥ ಆಲೋಚನೆ ಕೆಲವು ವೇಳೆ ಖಂಡಿತ ಹೊಳೆಯುತ್ತದೆ. ಹೊಳೆದಾಗ ಅದು ನನ್ನ ಹೃದಯದಿಂದ ಮಾತುಗಳ ರೂಪದಲ್ಲಿ ಹೊರಹೊಮ್ಮುತ್ತದೆ. ಆದ್ದರಿಂದ ಯಾರೇ ಆಗಲಿ ತನ್ನನ್ನು ವಿನೀತನನ್ನಾಗಿ ಮಾಡಿಕೊಳ್ಳುವ ಆವಶ್ಯಕತೆಯೇ ನಿಲ್ಲ, ತಳಮಳಿಸುತ್ತಿರುವ ಗುಡುಗುಟ್ಟುತ್ತಿರುವ ಎಲ್ಲವುಗಳ ಬಗೆಗೂ ಅಂಜುವ ಆವಶ್ಯಕತೆಯೇನಿಲ್ಲ. ಮುಕ್ತಾಯದಲ್ಲಿ ನಾನು ಹೀಗೆ ಹೇಳುತ್ತೇನೆ, ನನ್ನ ಚಿನ್ನ: ನಾನು ಸುಮ್ಮನೆ ಹರಟುತ್ತಿದ್ದೇನಷ್ಟೆ, ಅಥವಾ ನಾನು ಪ್ರಸನ್ನ ಮನೋಸ್ಥಿತಿಯಲ್ಲಿಲ್ಲ ಎಂದಷ್ಟೆ, ಅಥವಾ ನಾನು ಇದನ್ನೆಲ್ಲ ಯಾವುದೋ ಪುಸ್ತಕದಿಂದ ಕಾಪಿ ಮಾಡಿದ್ದೇನೆ ಎಂದಷ್ಟೆ, ನೀವು ಭಾವಿಸಬಹುದು. ಇಲ್ಲ, ನನ್ನ ಪ್ರಿಯೆ, ನಾನು ನಿಮಗೆ ಖಾತರಿಯಾಗಿ ಹೇಳುತ್ತೇನೆ – ಹರಟುವುದನ್ನು ಬಿಟ್ಟು ನಾನು ಬೇರಾವುದನ್ನೂ ಅಷ್ಟು ಹೆಚ್ಚಾಗಿ ದ್ವೇಷಿಸುವುದಿಲ್ಲ, ನಾನು ಯಾವುದೇ ಕೆಟ್ಟ ಮನೋಸ್ಥಿತಿಯಲ್ಲೂ ಇಲ್ಲ, ನಾನು ಇದನ್ನು ಯಾವ ಪುಸ್ತಕದಿಂದಲೂ ಕಾಪಿ ಮಾಡಿಲ್ಲ. ಅಷ್ಟೇ ನೋಡಿ!

ನಾನು ಮನೆಗೆ ತುಂಬ ವಿಷಣ್ಣ ಮನೋಸ್ಥಿತಿಯಲ್ಲಿ ಹಿಂದಿರುಗಿದೆ, ಕೆಟಲ್ ಅನ್ನು ಒಲೆಯ ಮೇಲಿಟ್ಟು ಒಂದು ಕಪ್ ಟೀ ಕುಡಿಯಲು ಸಿದ್ಧಮಾಡಿಕೊಳ್ಳುತ್ತಿದ್ದೆ. ಆಗ ಇದ್ದಕ್ಕಿದ್ದಂತೆ ನನ್ನ ಪಕ್ಕದ ಕೋಣೆಯ ಬಡವ ಗೊರ್ಷ್ಕೋವ್ ಒಳಬಂದ. ಬೆಳಿಗ್ಗೆಯೇ ಅವನು ನನ್ನನ್ನೂ ಇತರ ಬಾಡಿಗೆದಾರರನ್ನೂ ಮಾತನಾಡಿಸಲು ತುಂಬ ಹಿಂದುಮುಂದು ನೋಡುತ್ತ ಯತ್ನಿಸುತ್ತಿದ್ದುದನ್ನು ನಾನು ಗಮನಿಸಿದ್ದೆ. ಅಂದಹಾಗೇ, ನಾನಿಲ್ಲಿ ಹೇಳಬಹುದು ವಾರೆಂಕ, ಅವನ ಬಾಳು ನನ್ನ ಬಾಳಿಗಿಂತ ಅನುಪಮವಾಗಿ ಕೀಳಾದುದು. ತುಂಬ ಕೀಳಾದುದೇ! ಹೆಂಡತಿ ಮಕ್ಕಳನ್ನು ಬೇರೆ ಸಾಕಬೇಕು! ನಾನೇ ಗೊರ್ಷ್ಕೋವ್ ಆಗಿದ್ದರೆ ಏನು ಮಾಡಬೇಕೆಂಬುದೇ ನನಗೆ ನಿಜಕ್ಕೂ ತಿಳಿಯುತ್ತಿರಲಿಲ್ಲ. ಗೊರ್ಷ್ಕೋವ್ ಕೋಣೆಯ ಒಳಬಂದ. ಎಂದಿನಂತೆ ಬಾಗಿ ನಮಸ್ಕರಿಸಿದ. ಅವನ ಕಣ್ಣುಗಳಿಂದ ಯಾವತ್ತಿನಂತೆ ಕಣ್ಣೀರು ಧಾರಾಕಾರವಾಗಿ ಸುರಿಯುತ್ತಿತ್ತು. ಕಾಲಿನ ಬೆರಳುಗಳಿಂದ ನೆಲವನ್ನು ಕೆರೆಯುತ್ತ, ಒಂದು ಮಾತನ್ನು ಆಡಲೂ ಆಗದವನಂತೆ ನಿಂತ. ನಾನು ಅವನಿಗೆ ಕುಳಿತುಕೊಳ್ಳಲು

ಒಂದು ಕುರ್ಚಿಯನ್ನು ಕೊಟ್ಟೆ. ಮುರುಕಲು ಕುರ್ಚಿ. ನನ್ನ ಬಳಿ ಬೇರೆ ಇರಲಿಲ್ಲ. ಕುಡಿಯಲು ಸ್ವಲ್ಪ ಟೀ ಕೊಟ್ಟೆ. ತುಂಬ ಹೊತ್ತು 'ಬೇಡ, ಕ್ಷಮಿಸಿ' ಅನ್ನುತ್ತಲೇ ಇದ್ದು ಕೊನೆಗೆ ಟೀ ಇದ್ದ ಲೋಟವನ್ನು ಕೈಗೆತ್ತಿಕೊಂಡ. ಸಕ್ಕರೆ ಬೇಡವೆಂದ, ಮತ್ತೆ ಕ್ಷಮೆ ಯಾಚಿಸತೊಡಗಿದ. ಸಕ್ಕರೆ ತೆಗೆದುಕೊಳ್ಳುವಂತೆ ನಾನು ಒತ್ತಾಯಿಸಿದಾಗ ತುಂಬ ಹೊತ್ತು ವಾದಿಸುತ್ತಿದ್ದ, ಕೊನೆಗೆ ಸಣ್ಣ ತುಂಡೊಂದನ್ನು ಆರಿಸಿ ತೆಗೆದುಕೊಂಡ. ಟೀ ಬಹಳ ರುಚಿಯಾಗಿದೆ ಎಂದು ಮತ್ತೆಮತ್ತೆ ಹೇಳಿದ. ಅಬ್ಬಾ, ಬಡತನ ಹೇಗೆ ಮನುಷ್ಯನನ್ನು ದೈನ್ಯನನ್ನಾಗಿ ಮಾಡುತ್ತದೆ! "ಹೇಗಿದ್ದೀರಿ ಮಿತ್ರರೇ?" ನಾನು ಕೇಳಿದೆ. "ಧನ್ಯವಾದ" ಅವನೆಂದ. ಮತ್ತೆ ಹೇಳಿದ: "ಮಕಾರ್ ಅಲೆಕ್ಸೇಯೆವಿಚ್‌ರವರೇ! ನೀವು ದೇವರ ಹೆಸರಿನಲ್ಲಿ ಸ್ವಲ್ಪ ಉಪಕಾರ ಮಾಡಿ ನತದೃಷ್ಟ ಕುಟುಂಬವೊಂದಕ್ಕೆ ಸಹಾಯ ಮಾಡಲಾರಿರಾ? ನನ್ನ ಹೆಂಡತಿ ಮಕ್ಕಳನ್ನು ನೀವು ಕಂಡೇ ಇದ್ದೀರ. ಅವರಿಗೆ ತಿನ್ನಲು ಏನೂ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ತಂದೆಯಾದವನ ಮನೋಸ್ಥಿತಿ ಹೇಗಿರುತ್ತದೆಂಬುದನ್ನು ನೀವು ಊಹಿಸಿಕೊಳ್ಳಬಲ್ಲಿರಿ." ನಾನು ಏನನ್ನೋ ಹೇಳಲು ಹೊರಟಿದ್ದೆ, ಆದರೆ ಅವನು ಮತ್ತೆ ಮಧ್ಯೆ ತಡೆದು ಮಾತನಾಡತೊಡಗಿದ: "ನಾನು ಇಲ್ಲಿನ ಬಾಡಿಗೆದಾರರ ಜೊತೆ ಮಾತನಾಡಲು ಹೆದರುತ್ತೇನೆ, ಮಕಾರ್ ಅಲೆಕ್ಸೇಯೆವಿಚ್‌ರವರೇ. ಹೆದರುತ್ತೇನೆ ಅನ್ನೋದಕ್ಕಿಂತ ನಾಚಿಕೆ ಅನ್ನಬಹುದು. ಅವರೆಲ್ಲ ಒಂದು ರೀತಿ ದೂರ ದೂರ ಇರುವವರು, ತುಂಬ ಗರ್ವ. ನಿಮಗೆ ತೊಂದರೆ ಕೊಡಲು ನಾನು ಎಂದೂ ಯೋಚಿಸಿರಲಿಲ್ಲ, ನನ್ನ ಮಿತ್ರರೇ ಹಾಗೂ ದಾತೃವೇ. ನಿಮಗೆ ನಿಮ್ಮವೇ ತೊಂದರೆಗಳಿವೆ, ನನಗೆ ಹೆಚ್ಚು ಸಹಾಯ ಮಾಡಲಾರಿರಿ, ಅನ್ನುವುದು ನನಗೆ ಗೊತ್ತು. ಆದರೂ ದಯವಿಟ್ಟು ಎಷ್ಟಾದರೂ ಸರಿ, ಕೊಡಿ. ಇದಕ್ಕಾಗಿ ನಿಮ್ಮ ಬಳಿಗೆ ಬರುವುದು ನನಗೆ ಸುಲಭವೇನಾಗಿರಲಿಲ್ಲ. ಆದರೆ ನಿಮಗೆ ಕರುಣೆಯ ಹೃದಯವಿದೆ, ನೀವೂ ನನ್ನಂತೆಯೇ ಕೊರತೆಯಲ್ಲಿರುವುದರಿಂದ ನನ್ನ ಈ ದುರದೃಷ್ಟ ಪರಿಸ್ಥಿತಿಯಲ್ಲಿ ನನ್ನ ಬಗೆಗೆ ನೀವು ಅನುಕಂಪ ತೋರುವ ಸಂಭವ ಹೆಚ್ಚು ಎಂದು ನನಗೆ ಅನಿಸಿದ್ದರಿಂದ ಬಂದಿದ್ದೇನೆ." ತಾನು ಹೀಗೆ ಭಾವಿಸಿಕೊಂಡುದಕ್ಕಾಗಿ ಹಾಗೂ ನಾಚಿಕೆಗೆಟ್ಟ ರೀತಿಯಲ್ಲಿ ಬಂದು ಕೇಳುತ್ತಿರುವುದಕ್ಕಾಗಿ ಅವನು ಅನೇಕ ಬಾರಿ ಕ್ಷಮೆ ಕೋರಿದ. ಸಹಾಯ ಮಾಡುವುದು ಸಂತೋಷವೇ, ಆದರೆ ನನ್ನ ಬಳಿ ಏನೂ ಇಲ್ಲ, ಏನೇನೂ ಇಲ್ಲ, ಎಂದು ನಾನೆಂದೆ. "ಮಕಾರ್ ಅಲೆಕ್ಸೇಯೆವಿಚ್ ರವರೇ, ನನ್ನ ದಯಾಶೀಲ ಮಿತ್ರರೇ" ಎಂದವನು ಮತ್ತೆ ಕೇಳಿಕೊಳ್ಳತೊಡಗಿದ. "ನಾನೇನೂ ಹೆಚ್ಚಿಗೆ ಕೇಳುತ್ತಿಲ್ಲ. ಪರಿಸ್ಥಿತಿ ಹೀಗಿದೆ (ಇದನ್ನು ಹೇಳುವಾಗ ಅವನ ಮುಖ ಕೆಂಪಾಯಿತು) ನನ್ನ ಹೆಂಡತಿ ಮಕ್ಕಳು ನಿಮಗೆ ಗೊತ್ತಲ್ಲ. ಅವರು ಹಸಿವಿನಿಂದ ಕಂಗಾಲಾಗಿದ್ದಾರೆ. ಕೇವಲ ಹತ್ತು ಕೊಪೆಕ್ ಕೊಡಲಾರಿರಾ?"

ಇದನ್ನು ಕೇಳಿ ನಾನು ತುಂಬ ಕಸಿವಿಸಿಗೊಂಡೆ. ಹೌದು, ಈ ಮನುಷ್ಯನ ಪರಿಸ್ಥಿತಿ ನನಗಿಂತ ಕೆಟ್ಟುದಾಗಿದ್ದಿತು. ಆಗ ನನ್ನ ಬಳಿ ಇದ್ದುದೆಲ್ಲ ಇಪ್ಪತ್ತು ಕೊಪೆಕ್‌ಗಳು. ಇದನ್ನು ನಾನು ನಾಳಿನ ತುರ್ತಿನ ಅಗತ್ಯಗಳಿಗಾಗೆಂದು ಇರಿಸಿಕೊಂಡಿದ್ದೆ. "ಇಲ್ಲ, ನಾನು ನಿಜಕ್ಕೂ ಸಹಾಯ ಮಾಡಲಾರೆ" ನಾನೆಂದೆ. ಏಕೆ ಎಂದೂ ವಿವರಿಸಿದೆ. "ಪ್ರಿಯ ಮಕಾರ್ ಅಲೆಕ್ಸೇಯೆವಿಚ್, ಎಷ್ಟಾದರೂ ಸರಿ, ನಿಮಗೆ ಇಷ್ಟ ಬಂದುದೆಷ್ಟಾದರೂ ಸರಿ, ಕೇವಲ ಹತ್ತು ಕೊಪೆಕ್ ಆದರೂ ಸರಿಯೆ, ಕೊಡಿ !" ನಾನು ನನ್ನ ಇಪ್ಪತ್ತು ಕೊಪೆಕ್ ನಾಣ್ಯವನ್ನು ತೆಗೆದು ಅವನ ಕೈಗಿತ್ತೆ. ಇಪ್ಪತ್ತು ಕೊಪೆಕ್‌ಗಳೂ ಸಹಾಯವೇ, ಅಲ್ಲವೇ, ವಾರೆಂಕ ? ಎಂಥ ಬಡತನ ! ನಾವು ಮಾತನಾಡತೊಡಗಿದೆವು. ತಾನು ಅಂಥ ಸ್ಥಿತಿಯಲ್ಲಿರುವಾಗ ಐದು ರೂಬಲ್ ಬಾಡಿಗೆಯ ಆ ಕೋಣೆಯನ್ನೇಕೆ ತೆಗೆದುಕೊಂಡಿದ್ದನೆಂದು ಕೊನೆಗೆ ನಾನು ಆತನನ್ನು ಕೇಳಿದೆ. ತಾನು ಅಲ್ಲಿಗೆ ಆರು ತಿಂಗಳ ಹಿಂದೆ ಬಂದನೆಂದೂ, ಮೂರು ತಿಂಗಳ ಬಾಡಿಗೆ ಮುಂಗಡವಾಗಿ ನೀಡಿದ್ದನೆಂದೂ, ಅಷ್ಟು ಹೊತ್ತಿಗೆ ತನ್ನ ಕೇಸ್ ತೀರ್ಮಾನವಾಗುವುದೆಂದು ನಂಬಿದ್ದನೆಂದೂ ಅವನು ವಿವರಿಸಿದ. ಅವನ ಕೇಸ್ ನಿಜಕ್ಕೂ ಅಪ್ರಿಯವಾದುದೇ. ಯಾವುದೋ ರೀತಿಯ ನಿಯಮವನ್ನು ಉಲ್ಲಂಘಿಸಿದನಂತೆ. ಖಜಾನೆಗೆ ಮೋಸಮಾಡಿದ ವರ್ತಕನೊಬ್ಬನ ಕೇಸಿನಲ್ಲಿ ಇವನನ್ನೂ ಸಿಕ್ಕಿಸಲಾಗಿದೆ. ವರ್ತಕನ ಮೋಸದ ವಿಷಯ ಪತ್ತೆಯಾದಾಗ ಆ ಖದೀಮನನ್ನು ವಿಚಾರಣೆಗೆ ಗುರಿಪಡಿಸಲಾಯಿತು. ಅವನು ಗೊರ್ಷ್ಕೋವ್‌ನನ್ನೂ ಆ ಗೋಜಿನಲ್ಲಿ ಸಿಕ್ಕಿಸಿದ. ಸತ್ಯಾಂಶವೆಂದರೆ, ಗೊರ್ಷ್ಕೋವ್‌ನ ತಪ್ಪೆಲ್ಲ ಅಜಾಗರೂಕತೆ, ರಾಜ್ಯದ ಹಿತಗಳ ಬಗೆಗೆ ನಿಂದಾರ್ಹವಾದ ಔದಾಸೀನ್ಯ. ಈ ಕೇಸ್ ಈಗ ಅನೇಕ ವರ್ಷಗಳಿಂದ ನಡೆಯುತ್ತಲೇ ಇದೆ, ಗೊರ್ಷ್ಕೋವ್ ಹೊಸ ಹೊಸ ತೊಂದರೆಗಳಿಗೆ ಸಿಕ್ಕಿಬೀಳುತ್ತಲೇ ಇದ್ದಾನೆ. "ನನ್ನ ಮೇಲೆ ಹೊರಿಸಲಾಗಿರುವ ಆರೋಪಗಳ ಬಗೆಗೆ ಹೇಳುವುದಾದರೆ, ನಾನು ನಿರಪರಾಧಿ" ಎನ್ನುತ್ತಾನೆ ಗೊರ್ಷ್ಕೋವ್. "ಸಂಪೂರ್ಣ ನಿರಪರಾಧಿ ! ಮೋಸ, ಕಳ್ಳತನಗಳ ವಿಷಯದಲ್ಲಿ ನಾನು ನಿರಪರಾಧಿ !" ಆದರೆ ಈ ಮೊಕದ್ದಮೆ ಇವನ ಗೌರವವನ್ನು ಹಾಳುಮಾಡಿದೆ. ಇವನನ್ನು ಕೆಲಸದಿಂದ ವಜಾಮಾಡಲಾಯಿತು. ಅಪರಾಧಿಯೆಂದು ಸ್ಥಿರಪಡಿಸದಿದ್ದರೂ ಇವನನ್ನು ಸಂಪೂರ್ಣವಾಗಿ ದೋಷಮುಕ್ತನನ್ನಾಗಿ ಮಾಡಲಿಲ್ಲ. ಇವನನ್ನು ಸಂಪೂರ್ಣವಾಗಿ ದೋಷಮುಕ್ತನನ್ನಾಗಿ ಮಾಡಿದ್ದರೆ ಆ ವರ್ತಕ ಇವನಿಗೆ, ಇವನ ಹಕ್ಕಿನದಾಗಿ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಹಣ ನೀಡಬೇಕಾಗುತ್ತಿತ್ತು. ನಾನೇನೋ ಗೊರ್ಷ್ಕೋವ್‌ನ ಮಾತನ್ನು ಒಪ್ಪಲು ಸಿದ್ಧವಿದ್ದೇನೆ, ಆದರೆ ನ್ಯಾಯಾಲಯವು ಸಿದ್ಧವಿಲ್ಲವಲ್ಲ. ಇದೊಂದು ತೊಡಕಿನ ಸಮಸ್ಯೆ. ಎಷ್ಟು ಜಟಿಲವೆಂದರೆ ಇದನ್ನು ಬಿಡಿಸಲು ನೂರಕ್ಕೂ ಹೆಚ್ಚು ವರ್ಷಗಳೇ ಬೇಕಾದೀತು. ಅವರು ಒಂದು ಗಂಟು ಬಿಡಿಸಿದರೆ, ವರ್ತಕ ಕೂಡಲೇ

ಮತ್ತೊಂದು ಗಂಟು ಹಾಕುತ್ತಾನೆ. ಗೊಷ್ಕೋರ್ೀವ್‌ನ ಬಗೆಗೆ ನನಗೆ ದುಃಖ ವಾಗುತ್ತೆ. ನಾನು ಅವನಲ್ಲಿ ಗಾಢ ಸಹಾನುಭೂತಿ ಹೊಂದಿದ್ದೇನೆ. ಅವನಿಗೆ ಕೆಲಸ ವಿಲ್ಲ. ಅವನ ಗೌರವ ನಷ್ಟವಾದುದರಿಂದಾಗಿ ಯಾರೂ ನೌಕರಿಯಲ್ಲಿ ಇರಿಸಿ ಕೊಳ್ಳುತ್ತಿಲ್ಲ. ಅವನಲ್ಲಿದ್ದ ಎಲ್ಲ ವಸ್ತುಗಳನ್ನೂ ಎಷ್ಟೋ ಹಿಂದೆಯೇ ಮಾರಿ ಬಿಡಲಾಗಿದೆ. ಮೊಕದ್ದಮೆ ಮುಂದುವರಿಯುತ್ತಲೇ ಇದೆ, ಈ ಮಧ್ಯೆ ಒಂದು ಮಗು ಬೇರೆ ಹುಟ್ಟಿದೆ, ತೀರ ತಪ್ಪು ಸಮಯದಲ್ಲಿ. ಇವೆಲ್ಲಕ್ಕೂ ಹಣ ಬೇಕಾಯಿ ತೆನ್ನಿ. ಹುಡುಗ ಕಾಯಿಲೆ ಬಿದ್ದಾಗ ಮತ್ತೆ ಹಣ ಬೇಕಾಯಿತು. ಆ ಹುಡುಗ ಸತ್ತಾಗ ಇನ್ನೂ ಹಣ ಬೇಕಾಯಿತು. ಅವನ ಹೆಂಡತಿಗೂ ಕಾಯಿಲೆ. ಅವನಿಗೂ ಏನೋ ಹಳೆಯ ರೋಗವಿದೆ. ಸ್ವಲ್ಪದರಲ್ಲಿ ಹೇಳುವುದಾದರೆ, ಅವನು ಬಹಳ ಸಂಕಟಪಟ್ಟಿದ್ದಾನೆ. ಆದರೂ ಇನ್ನು ಕೆಲವೇ ದಿನಗಳಲ್ಲಿ ತನಗೆ ಅನುಕೂಲವಾಗು ವಂಥ ನಿರ್ಧಾರವಾಗುವುದು, ಅದರಲ್ಲಿ ಸಂಶಯವೇ ಇಲ್ಲ, ಎಂದು ಅವನು ಸಾಧಿಸುತ್ತಾನೆ. ನಾನು ಅವನ ಬಗೆಗೆ ತುಂಬ ದುಃಖಿತನಾಗಿದ್ದೇನೆ, ವಾರೆಂಕ. ನನ್ನ ಕೈಲಾದಷ್ಟೂ ಅವನನ್ನು ಸಮಾಧಾನಪಡಿಸಲು ಯತ್ನಿಸಿದೆ. ಅವನೊಬ್ಬ ನಿಸ್ಸಹಾಯಕನಾದ ಸಣ್ಣ ಮನುಷ್ಯ. ಅವನಿಗೆ ರಕ್ಷಣೆ ತುಂಬ ಬೇಕಾಗಿದೆ. ನಾನು ನನ್ನ ಕೈಲಾದಷ್ಟೂ ಅವನಿಗೆ ಸಮಾಧಾನ ನೀಡಿದೆ. ನಮಸ್ಕಾರ, ನನ್ನ ಚಿನ್ನ. ಕ್ರಿಸ್ತನ ಆಶೀರ್ವಾದ ನಿಮಗಿರಲಿ. ಆರೋಗ್ಯ ಕಾಪಾಡಿಕೊಳ್ಳಿ. ವಾರೆಂಕ, ನಿಮ್ಮ ಬಗೆಗೆ ಯೋಚಿಸುವುದೇ ನನ್ನ ಆತ್ಮಕ್ಕೆ ಉಪಶಾಮಕ ಲೇಪನ, ನಿಮಗಾಗಿ ಸಂಕಟ ಪಡುವುದೇ ಒಂದು ಸಮಾಧಾನ.

ನಿಮ್ಮ ಪ್ರಾಮಾಣಿಕ ಮಿತ್ರ,
ಮಕಾರ್ ದೇವುಷ್ಕಿನ್.

ಸೆಪ್ಟೆಂಬರ್ 9

ವರ್ವಾರ ಅಲೆಕ್ಸೇಯೆವ್ನ, ನನ್ನ ಚಿನ್ನ,

ನನ್ನ ಮನಸ್ಸು ಈಗ ಹತೋಟಿಯಲ್ಲೇ ಇಲ್ಲದಂತಾಗಿದೆ. ಒಂದು ಭಯಂಕರ ವಾದ ಘಟನೆ ಜರುಗಿದೆ. ನನ್ನ ತಲೆ ಸುತ್ತುತ್ತಿದೆ. ನನ್ನ ಸುತ್ತಮುತ್ತ ಇರುವ ಎಲ್ಲವೂ ಸುತ್ತುತ್ತಿವೆ. ನಾನು ನಿಮಗೆ ಈಗ ಏನು ಹೇಳಬೇಕಾಗಿದೆಯೋ ಅದನ್ನು ನೀವೆಂದಿಗೂ ಊಹಿಸಲಾರಿರಿ. ನಾವು ಅಂತಹ ಘಟನೆಯನ್ನು ಎಂದೂ ಕಲ್ಪಿಸಿ ಕೊಂಡುದಿಲ್ಲ. ಇಲ್ಲ, ಅಂತಹುದನ್ನು ನಾನು ನನ್ನ ಹೃದಯದಲ್ಲಿ ಭಾವಿಸಿ ತಿಳಿದಿರ ಲಿಲ್ಲವೆಂದೇನೂ ಅಲ್ಲ! ಮೊನ್ನಿನ ದಿನ ಅಂತಹುದೇ ಕನಸೊಂದನ್ನೂ ಕಂಡೆ.

ಹೀಗೆ ಜರುಗಿತು. ನಾನು ಯಾವ ಶೈಲಿಯ ಗೊಡವೆಗೂ ಹೋಗದೆ ನನ್ನ

ಲೇಖನಿಗೆ ಬಂದಂತೆ ವಿವರಿಸುತ್ತೇನೆ. ಇಂದು ಬೆಳಿಗ್ಗೆ ನಾನು ಎಂದಿನಂತೆ ಆಫೀಸಿಗೆ ಹೋದೆ, ಮೇಜಿನ ಮುಂದೆ ನನ್ನ ಸ್ಥಾನದಲ್ಲಿ ಕುಳಿತು ಬರೆಯಲು ಪ್ರಾರಂಭಿಸಿದೆ. ಇಲ್ಲಿ ನಾನು ಒಂದು ವಿಷಯವನ್ನು ತಿಳಿಸಬೇಕು, ನನ್ನ ಪ್ರಿಯೆ, ನಿನ್ನೆಯೂ ನಾನು ಹೀಗೆಯೇ ಮಾಡಿದೆ. ಆಗ ತಿಮೊಫೇಯ್ ಇವಾನೊವಿಚ್‌ರು ಸ್ವತಃ ನನ್ನ ಬಳಿಗೆ ಬಂದು ಒಂದು ಕಾಗದವನ್ನು ಆದಷ್ಟು ಬೇಗ ಕಾಪಿ ಮಾಡಿಕೊಡಬೇಕೆಂದು ಕೇಳಿದರು. "ದಯವಿಟ್ಟು ನೀಟಾಗಿ ಕಾಪಿ ಮಾಡಿ. ಸಾಧ್ಯವಾದಷ್ಟೂ ಬೇಗ ಮಾಡಿ. ದೊಡ್ಡ ಸಾಹೇಬರು ಅದಕ್ಕೆ ಇಂದೇ ಸಹಿ ಹಾಕುತ್ತಾರೆ" ಎಂದು ಅವರು ಹೇಳಿದರು. ನಿನ್ನೆ ನನ್ನ ಮನೋಸ್ಥಿತಿ ಸಂಪೂರ್ಣವಾಗಿ ಸರಿಯಾಗಿರಲಿಲ್ಲವೆಂದು ನಾನು ತಿಳಿಸಬೇಕು. ತುಂಬ ವಿಷಾದಭರಿತನಾಗಿದ್ದೆ, ಏಕಾಂಗಿಯ ಭಾವನೆ ಹೊಂದಿದ್ದೆ. ನನ್ನ ಹೃದಯವೂ ಮಂಕುಬಡಿದಂತಿತ್ತು, ಉತ್ಸಾಹರಹಿತವಾಗಿತ್ತು. ನಾನು ನಿಮ್ಮ ಬಗೆಗೂ ತುಂಬ ಚಿಂತೆಯಿಂದ ಕೂಡಿದ್ದೆ, ನನ್ನ ಚಿನ್ನ. ನಾನು ಕೂಡಲೇ ಅವರು ಕೊಟ್ಟ ಕೆಲಸವನ್ನು ಪ್ರಾರಂಭಿಸಿದೆ, ಆ ಅಧಿಕೃತಪತ್ರವನ್ನು ಸರಿಯಾಗಿ ಚೆನ್ನಾಗಿ ಕಾಪಿ ಮಾಡಿದೆ. ಆದರೆ ಬಹುಶಃ ಅದು ಭೂತಚೇಷ್ಟೆಯಾಗಿದ್ದಿತೋ ಏನೋ, ಅಥವಾ ಮೇಲಿನಿಂದ ಮೊದಲೇ ನಿಯಮಿತವಾಗಿದ್ದಿತೋ ಏನೋ, ಅದು ಹಾಗೆಯೇ ಆಗಬೇಕಿದ್ದಿತು – ನಾನು ಕಾಪಿ ಮಾಡುವಾಗ ಒಂದು ಸಾಲನ್ನೇ ಬಿಟ್ಟುಬಿಟ್ಟೆ. ಅದು ಅರ್ಥವನ್ನು – ಅರ್ಥ ಏನಾದರೂ ಉಳಿದಿದ್ದರೆ, – ಹೇಗೆ ಬದಲಿಸಿತೋ ದೇವರೇ ಬಲ್ಲ. ಆದರೂ ಆ ಕಾಗದವನ್ನು ಕೊಡಲು ನಿನ್ನೆ ತಡವಾಯಿತು. ಇಂದಷ್ಟೆ ಅವರು ಅದನ್ನು ದೊಡ್ಡ ಸಾಹೇಬರಿಗೆ ಸಹಿ ಹಾಕಲು ಕೊಟ್ಟರು. ನಾನು ಆಫೀಸಿಗೆ ತಪ್ಪು ಮಾಡಿದ ಯಾವ ಅನುಮಾನವೂ ಇಲ್ಲದೆ ಬಂದು ಯೆಮೆಲ್ಯಾನ್ ಇವಾನೊವಿಚ್‌ರ ಪಕ್ಕದಲ್ಲಿ ನನ್ನ ಸ್ಥಳದಲ್ಲಿ ಕುಳಿತೆ. ಈಗ ಸ್ವಲ್ಪ ಸಮಯದಿಂದ ನಾನು ವಿಶೇಷವಾಗಿ ನಾಚಿಕೆಯ ಹಾಗೂ ಅವಮಾನದ ಭಾವನೆಯಿಂದ ಕೂಡಿರುತ್ತಿದ್ದೇನೆಂಬುದನ್ನು ನಾನಿಲ್ಲಿ ತಿಳಿಸಬೇಕು, ನನ್ನ ಮುದ್ದು. ಯಾರನ್ನೂ ಮುಖ ಎತ್ತಿ ನೋಡಲೂ ನಾನು ಯತ್ನಿಸುತ್ತಿಲ್ಲ. ಇದು ಎಂಥ ಸ್ಥಿತಿ ಮುಟ್ಟಿದೆಯೆಂದರೆ ಕುರ್ಚಿ ಕುಂಯಿಗುಟ್ಟಿದರೂ ನಾನು ಮಿಸುಕಾಡದೆ ಕುಳಿತಿರುತ್ತೇನೆ. ಇಂದೂ ನಾನು ಆಮೆಯಂತೆ ಚಿಪ್ಪಿನೊಳಗೆ ತಲೆ ಇರಿಸಿಕೊಂಡಿದ್ದೆ, ಜೀವಶ್ಶವದಂತಿದ್ದೆ. ಹಾಗಾಗಿ ಯೆಫೀಮ್ ಅಕೀಮೊವಿಚ್‌ರು (ಇವರಂಥ ಕುಚೇಷ್ಟೆಗಾರರು ಈ ಜಗತ್ತಿನಲ್ಲೇ ಬೇರೊಬ್ಬರಿಲ್ಲ) ಎಲ್ಲರಿಗೂ ಕೇಳಿಸುವಂತೆಯೇ ಕೇಳಿದರು: "ಮಕಾರ್ ಅಲೆಕ್ಸೇಯೆವಿಚ್‌ರವರೇ, ಒಮ್ಮೆ ನಿಮ್ಮತ್ತವೇ ನೋಡಿಕೊಳ್ಳಿ !" ಹಾಗೆನ್ನುತ್ತ ಅವರು ತಮ್ಮ ಮುಖವನ್ನು ಎಷ್ಟು ಸೊಟ್ಟಗೆ ಮಾಡಿದರೆಂದರೆ ಎಲ್ಲರೂ ಗೊಳ್ಳೆಂದು ನಕ್ಕರು. ಅವರು ಈ ಕುಚೇಷ್ಟೆಯನ್ನು ಒಮ್ಮೆಗೇ ನಿಲ್ಲಿಸಲಿಲ್ಲ. ಮತ್ತೆಯೂ ಮಾಡಿದರು. ನಾನು ಸುಮ್ಮನೆ ಕಣ್ಣು ಕಿವಿಗಳನ್ನು ಮುಚ್ಚಿಕೊಂಡು

ಏನನ್ನೂ ಕಾಣದವನಂತೆ, ಏನನ್ನೂ ಕೇಳದವನಂತೆ ಸೋಗು ಹಾಕುತ್ತ ಕುಳಿತೆ. ಅವರು ನನ್ನನ್ನು ಒಂಟಿಯಾಗಿ ಬಿಡುವಂತೆ ಮಾಡುವುದಕ್ಕೆ ಅದೇ ಅತ್ಯುತ್ತಮ ವಿಧಾನವಾಗಿದ್ದಿತು. ಆಗ ಇದ್ದಕ್ಕಿದ್ದಂತೆ ದೂರದಲ್ಲಿ ಏನೋ ಗದ್ದಲ ಕೇಳಿಬಂದಿತು. ಅಲ್ಲಿ ನನ್ನ ಹೆಸರು ಹೇಳುತ್ತಿದ್ದುದೂ ಕೇಳಿಬಂದಿತು. ನನಗೆ ಅದನ್ನು ನಂಬಲೂ ಸಾಧ್ಯವಾಗಲಿಲ್ಲ – ಅವರು ನನ್ನನ್ನೇ – ದೇವುಷ್ಕಿನ್‌ನನ್ನೇ – ಕರೆಯುತ್ತಿದ್ದುದು. ನನ್ನ ಹೃದಯದ ಮಿಡಿತ ಹಲವಾರು ಬಾರಿ ನಿಂತಂತಾಯಿತು. ನಾನು ಏಕೆ ಅಷ್ಟೊಂದು ಹೆದರಿದೆನೋ ನನಗೆ ತಿಳಿಯದು. ನನ್ನ ಜೀವನದಲ್ಲಿ ನಾನೆಂದೂ ಅಷ್ಟು ಹೆದರಿರ ಲಿಲ್ಲ. ನಾನು ಕುರ್ಚಿಯಲ್ಲೇ ಬೇರುಬಿಟ್ಟಂತೆ ಕುಳಿತಿದ್ದೆ. ಸ್ವಲ್ಪವೂ ಕದಲಲಿಲ್ಲ – ಅವರು ಕರೆಯುತ್ತಿದ್ದುದು ನನ್ನನ್ನಲ್ಲವೇನೋ ಎಂಬಂತೆ. ಧ್ವನಿ ಹೆಚ್ಚು ಹೆಚ್ಚು ಹತ್ತಿರ ಕೇಳಿಬರತೊಡಗಿತು. ಕೊನೆಗೆ ಅದು ನನ್ನ ಹತ್ತಿರವೇ ಮೇಲಿನಿಂದ ಕೇಳಿ ಬಂದಿತು. "ದೇವುಷ್ಕಿನ್, ದೇವುಷ್ಕಿನ್! ಎಲ್ಲಿ ದೇವುಷ್ಕಿನ್?" ನಾನು ತಲೆ ಎತ್ತಿ ನೋಡಿದೆ. ಯೆವ್‌ಸ್ತಾಫಿಯ್ ಇವಾನೊವಿಚ್ ನನ್ನ ಮುಂದೆ ನಿಂತು ಹೇಳು ತ್ತಿದ್ದರು: "ದೊಡ್ಡ ಸಾಹೇಬರು ನಿಮ್ಮನ್ನು ಕೂಡಲೇ ಬರ ಹೇಳಿದ್ದಾರೆ, ಮಕಾರ್ ಅಲೆಕ್ಸೇಯೆವಿಚ್. ಆ ಅಧಿಕೃತಪತ್ರವನ್ನೆಲ್ಲ ಕೆಡಿಸಿಬಿಟ್ಟಿದ್ದೀರ!" ಅಷ್ಟೇ ಹೇಳಿದ್ದು. ಆದರೆ ಅಷ್ಟು ಸಾಕಾಗಿತ್ತು, ಅಲ್ಲವೇ? ನನ್ನ ಮೈ ಎಲ್ಲ ತಣ್ಣಗಾಯಿತು. ಪ್ರಜ್ಞೆ ಯನ್ನೇ ಕಳೆದುಕೊಂಡಂತಾಯಿತು. ನಾನು ಜೀವಂತವಾಗಿದ್ದುದಕ್ಕಿಂತ ನಿರ್ಜೀವ ವಾಗಿದ್ದೆನೆಂದೇ ಹೇಳಬಹುದಿತ್ತು. ಆ ಘಳಿಗೆಯಲ್ಲಿ ನನ್ನ ಮನಸ್ಸಿನಲ್ಲಿ ಏನು ಯೋಚನೆ ಇದ್ದಿತೋ ಅದನ್ನೂ ನಾನು ಹೇಳಲಾರೆ. ನಾವು ಒಂದು ರೂಮಿ ನಿಂದ ಇನ್ನೊಂದಕ್ಕೆ, ಆಮೇಲೆ ಮತ್ತೊಂದಕ್ಕೆ, ಕೊನೆಗೆ ದೊಡ್ಡ ಸಾಹೇಬರ ಸ್ವಂತ ಆಫೀಸಿಗೆ ಹೋದೆವು, ಎಂಬುದಷ್ಟೆ ನನಗೆ ನೆನಪಿದೆ. ನಾನು ಅವರ ಮುಂದೆ, ನಿಂತಿದ್ದೆ! ಆಗ ನಾನು ಏನು ಯೋಚನೆ ಮಾಡಿದೆ ಎಂಬುದನ್ನು ಸರಿಯಾಗಿ ಹೇಳ ಲಾರೆ. ಅಲ್ಲಿ ದೊಡ್ಡ ಸಾಹೇಬರವರೂ ಇತರ ಎಲ್ಲರೂ ಇದ್ದರು! ಬಾಗಿ ನಮ ಸ್ಕರಿಸುವುದನ್ನೂ ನಾನು ಮರೆತೆ. ತುಟಿ, ಕೈ ಕಾಲುಗಳನ್ನು ನಡುಗಿಸಿಕೊಂಡು ನಿಂತೆ – ಸಕಾರಣವಾಗಿಯೇ, ನನ್ನ ಮುದ್ದು. ಮೊದಲನೆಯದಾಗಿ, ನಾನು ಬಲ ಪಕ್ಕದಲ್ಲಿದ್ದ ಕನ್ನಡಿಯತ್ತ ಒಮ್ಮೆ ನೋಡುವಂತಾದೆ – ಅಲ್ಲಿ ಕಂಡುದು ಯಾರಿಗೇ ಆಗಲಿ ತಲೆ ಕೆಡಿಸಿಕೊಳ್ಳುವುದಕ್ಕೆ ಸಾಕಾಗಿತ್ತು. ಎರಡನೆಯದಾಗಿ, ನಾನು ಯಾವತ್ತೂ ಅಸ್ತಿತ್ವದಲ್ಲಿರಲಿಲ್ಲವೆನ್ನುವಂತಲೇ ನಡೆದುಕೊಳ್ಳುತ್ತಿದ್ದೆ. ಆದ್ದರಿಂದ ದೊಡ್ಡ ಸಾಹೇಬರು ನನ್ನ ಅಸ್ತಿತ್ವವನ್ನು ತಿಳಿದಿದ್ದರೇ ಎಂಬುದೇ ನನಗೆ ಸಂಶಯವಾಗಿದ್ದಿತು. ಸಚಿವಾಲಯದಲ್ಲಿ ದೇವುಷ್ಕಿನ್ ಅಂತ ಹೆಸರು ಹೇಳುತ್ತಿದ್ದುದನ್ನು ಅವರು ಕೇಳಿದ್ದಿರಬಹುದು, ಆದರೆ ಯಾರು ಅನ್ನುವುದನ್ನು ಕಂಡುಕೊಳ್ಳುವ ತೊಂದರೆ ಯನ್ನು ಅವರು ಎಂದೂ ತೆಗೆದುಕೊಂಡಿರಲಿಲ್ಲ.

"ಏನಿದೆಲ್ಲದರ ಅರ್ಥ?" ಅವರು ಕೋಪದಿಂದ ಮಾತು ಪ್ರಾರಂಭಿಸಿದರು. "ಯಾಕೆ ಹೀಗೆ ಮಾಡಿದಿರಿ? ನಿಮ್ಮ ಗಮನ ಎಲ್ಲಿ ಹೋಗಿತ್ತು? ತುರ್ತಿನ ಮುಖ್ಯ ಅಧಿಕೃತಪತ್ರವನ್ನು ಕೆಡಿಸಿದ್ದೀರಿ!" ಅನಂತರ ದೊಡ್ಡ ಸಾಹೇಬರು ಯೆವ್‌ಸ್ತಾಫಿಯ್ ಇವಾನೊವಿಚ್‌ರ ಕಡೆಗೆ ತಿರುಗಿ ಏನೋ ಹೇಳಿದರು. ನನಗೆ ಅವರು ಹೇಳಿದ ಅಲ್ಲೊಂದು ಇಲ್ಲೊಂದು ಮಾತಷ್ಟೆ ಕೇಳಿಬಂದಿತು: "ಎಂಥ ಅಜಾಗರೂಕತೆ! ಎಂಥ ಅಶ್ರದ್ಧೆ! ಎಷ್ಟು ತೊಂದರೆಯಾಯಿತು!" ನಾನು ಕ್ಷಮೆ ಕೇಳಲೆಂದು ಹಲವಾರು ಬಾರಿ ಬಾಯಿ ತೆರೆದೆ. ಆದರೆ ಶಬ್ದವೇ ಹೊರಡಲಿಲ್ಲ. ಓಡಿಹೋಗಲು ಬಯಸಿದೆ. ಆದರೆ ಅಷ್ಟು ಧೈರ್ಯವಿರಲಿಲ್ಲ. ಆಮೇಲೆ ಬಂದಿತು ಎಲ್ಲಕ್ಕಿಂತ ಕೆಡುಕಾದುದು. ಎಷ್ಟು ಭಯಂಕರವೆಂದರೆ ಅದನ್ನು ಬರೆಯಲೂ ನನ್ನ ಲೇಖನಿ ನಾಚಿಕೆಯಿಂದ ನಡುಗುತ್ತೆ! ನನ್ನ ಕೋಟಿನ ಒಂದು ಗುಂಡಿ, ಹಾಳಾದ್ದು, ಒಂದೆಳೆದಾರದಿಂದ ತೂಗಾಡುತ್ತಿದ್ದ ಗುಂಡಿ, ಇದ್ದಕ್ಕಿದ್ದಂತೆ ಕಿತ್ತು ಬಂದು ಕುಪ್ಪಳಿಸಿಕೊಂಡು ಟಣಟಣ ಶಬ್ದ ಮಾಡುತ್ತ ದೊಡ್ಡ ಸಾಹೇಬರ ಕಾಲಬಳಿಗೇ ಹೋಗಿ ಬಿದ್ದಿತು. ಅದೂ ಸುತ್ತ ಎಲ್ಲ ನಿಶ್ಶಬ್ದವಾಗಿದ್ದಾಗ. ನಾನು ಕ್ಷಮೆ ಕೇಳಬೇಕು, ತಪ್ಪಿಗೆ ಕಾರಣ ಕೊಡಬೇಕು ಎಂದು ಅಂದುಕೊಂಡಿದ್ದಾಗ ಆದುದು ಹೀಗೆ. ಇದರ ಪರಿಣಾಮಗಳನ್ನು ವಿವರಿಸುವುದು ಅತಿಭಯಂಕರ. ದೊಡ್ಡ ಸಾಹೇಬರು ನನ್ನತ್ತ ದೃಷ್ಟಿಹರಿಸಿದರು, ನನ್ನ ಆಕಾರ ನನ್ನ ಉಡುಪು ಎಲ್ಲ ವಿವರಗಳನ್ನೂ ಕಂಡರು. ನಾನು ಕನ್ನಡಿಯಲ್ಲಿ ಏನು ಕಂಡಿದ್ದೆನೋ ಅದನ್ನು ನೆನಸಿಕೊಂಡೆ, ಗುಂಡಿಯನ್ನು ಹಿಂದಕ್ಕೆ ಪಡೆದುಕೊಳ್ಳಲು ಬಾಗಿದೆ. ಹಾಗೆ ಮಾಡೆಂದು ಯಾವ ಪ್ರೇತ ಪ್ರೇರಿಸಿತೋ! ನಾನು ಅದರತ್ತ ಕೈಚಾಚಿ ಹಿಡಿದೆ, ಆದರೆ ಅದು ಉರುಳುತ್ತ ಸುತ್ತುತ್ತ ಇನ್ನಷ್ಟು ದೂರ ಓಡಿತು. ಹೀಗೆ ನೋಡಿ ನಾನು ನನ್ನ ಕೈಚಳಕದಿಂದಲೂ ನನ್ನನ್ನು ಇತರರಿಂದ ಪ್ರತ್ಯೇಕಿಸಿ ತೋರಿಸಿಕೊಂಡೆ. ನನ್ನ ಬುದ್ಧಿ ಹೋಗುತ್ತಿದೆ ಎಂಬ ಭಾವನೆ ನನಗಾಯಿತು. ಎಲ್ಲ ನಷ್ಟವಾಗಿತ್ತು – ನನ್ನ ಮಾನಮರ್ಯಾದೆ, ಮತ್ತೆಲ್ಲ, ಪುನಃ ಪಡೆದುಕೊಳ್ಳಲಾಗದಂತೆ ನಷ್ಟವಾಗಿತ್ತು! ನನ್ನ ಮನಸ್ಸಿನ ಗೊಂದಲದಲ್ಲಿ ನಾನು ಫಾಲ್ದೊನಿ ಹಾಗೂ ಥೆರೇಸರ ಕೂಗಾಟ ಅರಚಾಟಗಳನ್ನೂ ಸಾವಿರ ನಾಲಿಗೆಗಳ ಗೊಡ್ಡು ಹರಟೆಯನ್ನೂ ಕೇಳಬಲ್ಲವನಿದ್ದೆ. ಕೊನೆಗೂ ನಾನು ಗುಂಡಿಯನ್ನು ಹಿಡಿದೆ, ಎದ್ದು ನೆಟ್ಟಗೆ ನಿಂತೆ. ಕೈಗಳನ್ನು ಪಕ್ಕಗಳಲ್ಲಿ ಇಳಿಬಿಟ್ಟು ನಿಶ್ಚಲವಾಗಿ ನಿಲ್ಲಬೇಕಿತ್ತು. ಆದರೆ ಇಲ್ಲ. ನಾನು ಆ ಗುಂಡಿಯ ಜೊತೆಗೆ ಸೆಣಸಾಡತೊಡಗಿದೆ. ಹರಿದು ಹೋದ ದಾರದ ಮೇಲೆ ಹಿಡಿದು ಒತ್ತತೊಡಗಿದೆ –ಅದು ಮತ್ತೆ ಅಲ್ಲಿಗೇ ಅಂಟುಕೊಳ್ಳುವುದೇನೋ ಅನ್ನುವಂತೆ. ಇಡೀ ಕಾಲವೂ ನಾನು ನಗುತ್ತಾ, ನಗುತ್ತಾ, ಇದ್ದೆ ನೋಡಿ. ದೊಡ್ಡ ಸಾಹೇಬರು ಪಕ್ಕಕ್ಕೆ ತಿರುಗಿದರು. ಆಮೇಲೆ ಮತ್ತೊಮ್ಮೆ ನನ್ನತ್ತ ನೋಟ ಬೀರಿದರು. ಯೆವ್‌ಸ್ತಾಫಿಯ್ ಇವಾ

ನೊವಿಚ್‌ರಿಗೆ ಹೇಳಿದರು: "ಏನಿದೆಲ್ಲ? ನೋಡಿ ಆ ವ್ಯಕ್ತಿಯನ್ನು! ಅವರ ರೂಪವನ್ನು! ಏನಾಗಿದೆ ಅವರಿಗೆ?" ಓಹ್, ಪ್ರಿಯ ವಾರೆಂಕ. ಯೋಚನೆ ಮಾಡಿ ನೋಡಿ: "ಏನಾಗಿದೆ ಅವರಿಗೆ?"ನಾನು ನನ್ನನ್ನೇ ಇತರರಿಂದ ಪ್ರತ್ಯೇಕಿಸಿ ತೋರಿಸಿಕೊಂಡಿದ್ದೆ, ಅಲ್ಲವೇ? ಯೆವ್‌ಸ್ತಾಫಿಯ್ ಇವಾನೊವಿಚ್ ಉತ್ತರಿಸಿದರು: "ಇವರ ರಿಕಾರ್ಡ್ ಸಂಪೂರ್ಣವಾಗಿ ದೋಷರಹಿತ, ನಡವಳಿಕೆ ಅತ್ಯುತ್ತಮ, ಸಂಬಳ ಸ್ಕೇಲುಗಳಿಗೆ ಅನುಗುಣವಾಗಿ." "ಸರಿ. ಹೇಗಾದರೂ ಅವರಿಗೆ ಸಹಾಯ ಮಾಡಿ. ಮುಂಗಡವಾಗಿ ಸ್ವಲ್ಪ ಹಣ ಕೊಡಿ" ದೊಡ್ಡ ಸಾಹೇಬರು ಹೇಳಿದರು. "ಆದರೆ ಅವರು ತಮಗೆ ಮುಂದೆ ಬರಬೇಕಾದುದನ್ನೆಲ್ಲ ಆಗಲೇ ತೆಗೆದುಕೊಂಡು ಬಿಟ್ಟಿದ್ದಾರೆ. ಪರಿಸ್ಥಿತಿ ಅವರನ್ನು ಹಾಗೆ ಮಾಡುವಂತೆ ಒತ್ತಾಯಿಸಿರಬೇಕು. ಏಕೆಂದರೆ ಇವರ ನಡವಳಿಕೆ ಅತ್ಯುತ್ತಮ, ರಿಕಾರ್ಡ್ ದೋಷರಹಿತ, ಸಂಪೂರ್ಣವಾಗಿ ದೋಷರಹಿತ. ಅವರ ವಿರುದ್ಧ ಏನೂ ಇಲ್ಲ." ನಾನು ನರಕದ ಅಗ್ನಿಕುಂಡದಲ್ಲಿ ಬೇಯುತ್ತಿದ್ದೆ, ನನ್ನ ಚಿನ್ನ. "ಸರಿ, ಸರಿ" ಎಂದು ದೊಡ್ಡ ಸಾಹೇಬರು ಗಟ್ಟಿಯಾಗಿ ಹೇಳಿದರು. "ಕಾಗದವನ್ನು ಮತ್ತೆ ಸಾಧ್ಯವಾದಷ್ಟೂ ಬೇಗ ಕಾಪಿ ಮಾಡಿಸಿ. ದೇವುಷ್ಕಿನ್, ಇಲ್ಲಿ ಬನ್ನಿ. ಈ ಕಾಗದವನ್ನು ತಪ್ಪಿಲ್ಲದೆ ಕಾಪಿ ಮಾಡಿ. ಮತ್ತೆ ಇಲ್ಲಿ ಕೇಳಿ..." ಹೀಗೆಂದು ಹೇಳುವಾಗ ದೊಡ್ಡ ಸಾಹೇಬರು ಇತರರೆಲ್ಲರನ್ನೂ ಹೊರಗೆ ಕಳುಹಿಸಿದರು. ನಾವಿಬ್ಬರೇ ಉಳಿದೆವು. ಆಗ ಅವರು ಬೇಗ ತಮ್ಮ ಜೇಬಿನಿಂದ ಪರ್ಸ್ ಹೊರತೆಗೆದು ಅದರಿಂದ ಒಂದು ನೂರು ರೂಬಲ್ ಬ್ಯಾಂಕ್ ನೋಟನ್ನು ಎತ್ತಿಕೊಂಡು ನನ್ನ ಕೈಯೊಳಕ್ಕೆ ತುರುಕಿ ಹೇಳಿದರು: "ತಗೊಳ್ಳಿ.... ಇದನ್ನು ನಿಮಗೆ ಇಷ್ಟ ಬಂದಂತೆ ಭಾವಿಸಿಕೊಳ್ಳಿ." ನಾನು ಚಕಿತನಾದೆ, ನನ್ನ ದೇವತೆ. ಮೂಕನಂತೆ ನಿಂತೆ, ಏನು ಜರುಗುತ್ತಿದ್ದಿತೆಂಬುದೇ ತಿಳಿಯದವನಂತೆ. ನಾನು ಅವರ ಕೈಯಿಗೆ ಕೃತಜ್ಞತಾ ಸೂಚಕವಾಗಿ ಮುತ್ತಿಡಲಿದ್ದೆ, ಆದರೆ ಅವರ ಮುಖ ತುಂಬ ಕೆಂಪಾಯಿತು. ಆಮೇಲೆ – ನಾನೇನೂ ಒಂದು ಚೂರೂ ಉತ್ಪ್ರೇಕ್ಷಿಸಿ ಹೇಳುತ್ತಿಲ್ಲ, ವಾರೆಂಕ – ಅವರು ನನ್ನ ಅಯೋಗ್ಯ ಕೈಯನ್ನು ತಮ್ಮ ಕೈಗಳಲ್ಲಿ ತೆಗೆದುಕೊಂಡು ನಾನು ಅವರ ಸಮಾನನೇನೋ ಎಂಬಂತೆ ಕುಲುಕಿದರು. "ನಿಮಗೆ ಇನ್ನೂ ಹೆಚ್ಚಿಗೆ ಸಹಾಯ ಮಾಡಲಾಗದುದಕ್ಕೆ ನಾನು ವಿಷಾದಿಸುತ್ತೇನೆ. ಇನ್ನು ಮೇಲೆ ತಪ್ಪು ಮಾಡಬೇಡಿ. ಈಗಿನ ತಪ್ಪನ್ನು ನಾವಿಬ್ಬರೂ ಹಂಚಿಕೊಳ್ಳೋಣ" ಎಂದರು.

ನಾನು ನಿಮ್ಮನ್ನೂ ಫಿದೋರಳನ್ನೂ ಕೇಳಿಕೊಳ್ಳುತ್ತೇನೆ: ದಯವಿಟ್ಟು ನಮ್ಮ ದೊಡ್ಡ ಸಾಹೇಬರಿಗೆ ಒಳ್ಳೆಯದಾಗಲೆಂದು ನೀವು ಪ್ರತಿದಿನವೂ ದೇವರಲ್ಲಿ ಪ್ರಾರ್ಥನೆ ಮಾಡಿ. ನನಗೆ ಮಕ್ಕಳಿದ್ದಿದ್ದರೆ ಅವರಿಗೂ ತಮ್ಮ ಸ್ವಂತ ತಂದೆಗಿಂತ ಹೆಚ್ಚಾಗಿ ದೊಡ್ಡ ಸಾಹೇಬರಿಗಾಗಿ ಪ್ರಾರ್ಥನೆ ಮಾಡಿರೆಂದು ಹೇಳುತ್ತಿದ್ದೆ. ನಾನು

ಇದನ್ನೂ ಹೇಳುತ್ತೇನೆ ತಮಾಷೆಯಾಗಲ್ಲ. ಆದರೆ ಶ್ರದ್ಧೆಯಿಂದ ಹೇಳುತ್ತಿದ್ದೇನೆ, ನನ್ನ ಮುದ್ದು – ನಮಗೆ ಅತ್ಯಂತ ಅಗತ್ಯ ವಸ್ತುಗಳ ಕೊರತೆ ಇದ್ದ ಕೀಳು ದಿನಗಳಲ್ಲಿ ನನ್ನ ಮನಸ್ಸಿನ ಬೇಗುದಿ ಭಯಂಕರವಾಗಿದ್ದಿತು, ನಿಜ. ನೀವು ಅನುಭವಿಸುತ್ತಿದ್ದ ಸಂಕಷ್ಟಗಳನ್ನು ತಿಳಿದೂ, ಅದರ ಜೊತೆಗೆ ನನ್ನ ಸ್ವಂತ ತೇಜೋವಧೆಯಿಂದ ಚಿತ್ರಹಿಂಸೆಗೊಳಗಾಗಿ ನಾನು ನಿಸ್ಸಹಾಯಕನಾದ ಭಾವನೆಯನ್ನೂ ಹೊಂದಿದ್ದೆ. ಆದಾಗ್ಯೂ, ನನಗೆ ಇಂದು ದೊರೆತಿರುವ ಈ ನೂರು ರೂಬಲ್ಲುಗಳು ನನಗೆ ಅಷ್ಟು ಮಹತ್ವದ್ದಾಗಿಯೇನೂ ಕಂಡುಬರುತ್ತಿಲ್ಲ. ಅದಕ್ಕಿಂತ ಹೆಚ್ಚಾಗಿ ದೊಡ್ಡ ಸಾಹೇಬರು ನನ್ನ ಕೈ ಕುಲುಕಿದರು, ಈ ಹುಲು ಮನುಷ್ಯನ ಹಾಗೂ ಕುಡುಕನ ಕೈ ಕುಲುಕಿದರು, ಎಂಬ ಸಂಗತಿಯೇ ನನಗೆ ಹೆಚ್ಚು ಪ್ರೀತಿಯದಾಗಿ ಕಂಡುಬರುತ್ತದೆಂದು ನಾನು ಪ್ರಮಾಣ ಮಾಡಿ ಹೇಳುತ್ತೇನೆ. ಅವರು ನನ್ನನ್ನು ಮತ್ತೆ ಒಬ್ಬ ಮನುಷ್ಯನನ್ನಾಗಿ ಮಾಡಿದ್ದಾರೆ. ಅವರು ನನ್ನನ್ನು ಪುನಶ್ಚೇತನಗೊಳಿಸಿದ್ದಾರೆ, ನನ್ನ ಬಾಳನ್ನು ಸದಾಕಾಲಕ್ಕೂ ಸವಿಯಾದುದನ್ನಾಗಿ ಮಾಡಿದ್ದಾರೆ. ನಾನು ದೇವರ ಮುಂದೆ ಪಾಪಪೂರಿತನಾಗಿರಬಹುದಾದರೂ, ದೊಡ್ಡ ಸಾಹೇಬರ ಒಳಿತಿಗಾಗಿ ನಾನು ಮಾಡುವ ಪ್ರಾರ್ಥನೆಯನ್ನು ದೇವರು ಅನುಗ್ರಹಿಸುವನೆಂದೇ ನಾನು ದೃಢವಾಗಿ ನಂಬಿದ್ದೇನೆ.

ವಾರೆಂಕ, ನಾನು ತುಂಬ ಭಾವೋತ್ಕರ್ಷಕ್ಕೊಳಗಾಗಿದ್ದೇನೆ. ನಾನು ಸಂಪೂರ್ಣವಾಗಿ ತಳಮಳಗೊಂಡಿದ್ದೇನೆ. ನನ್ನ ಹೃದಯ ನನ್ನ ಎದೆಯಿಂದ ಒಂದೇ ಸಮನಾಗಿ ಪುಟನೆಗೆಯುತ್ತಿದೆ. ನಾನು ತುಂಬ ದುರ್ಬಲನಾಗಿದ್ದೇನೆ. ನಾನು ನಿಮಗೆ ನಲವತ್ತೈದು ರೂಬಲ್ ಬ್ಯಾಂಕ್‌ನೋಟುಗಳನ್ನು ಕಳುಹಿಸುತ್ತಿದ್ದೇನೆ. ನನ್ನ ಮನೆಯ ಯಜಮಾನಿಗೆ ಇಪ್ಪತ್ತು ರೂಬಲ್ ಕೊಡುತ್ತೇನೆ. ಇನ್ನು ಮೂವತ್ತೈದು ರೂಬಲ್ ಉಳಿಯುತ್ತೆ. ನನ್ನ ಬಟ್ಟೆಬರೆ ದುರಸ್ತಿಗಾಗಿ ಇಪ್ಪತ್ತು ರೂಬಲ್ ತೆಗೆದುಕೊಳ್ಳುತ್ತೇನೆ. ಹದಿನೈದು ರೂಬಲ್‌ಗಳು ಇತರ ಆವಶ್ಯಕತೆಗಳಿಗೆ. ಇಂದು ಬೆಳಗಿನ ಭಾವನೆಗಳು ನನ್ನನ್ನು ಸಂಪೂರ್ಣವಾಗಿ ಕಲಕಿವೆ. ಮಲಗುವುದು ಉತ್ತಮವೆಂದು ತೋರುತ್ತಿದೆ. ಆದರೂ ನಾನು ಸಮಾಧಾನದಲ್ಲಿದ್ದೇನೆ, ನನ್ನ ಮನಸ್ಸು ಪ್ರಶಾಂತವಾಗಿದೆ. ನನ್ನ ಆತ್ಮವಷ್ಟೆ ಹೇಗೋ ನೋಯುತ್ತಿದೆ. ನನ್ನ ಅಂತರಾಳದಲ್ಲಿ ನಾನು ಅದು ನಡುಗುತ್ತಿರುವುದನ್ನು ಕದಲುತ್ತಿರುವುದನ್ನು ಕೇಳಬಲ್ಲವನಾಗಿದ್ದೇನೆ. ನಿಮ್ಮಲ್ಲಿಗೆ ಅನಂತರ ಭೇಟಿಕೊಡುವೆ. ಇದೀಗ ನನ್ನ ತಲೆ ತಿರುಗುತ್ತಿದೆ – ಇಷ್ಟೆಲ್ಲ ಜರುಗಿರುವುದರ ಫಲವಾಗಿ. ದೇವರು ಎಲ್ಲವನ್ನೂ ನೋಡುತ್ತಾನೆ, ನನ್ನ ಪ್ರಿಯೆ, ನನ್ನ ಅಮೂಲ್ಯ ರತ್ನ !

ನಿಮ್ಮ ವಿಶ್ವಾಸಿ ಮಿತ್ರ
ಮಕಾರ್ ದೇವುಷ್ಕಿನ್.

ಸೆಪ್ಟೆಂಬರ್ 10

ನನ್ನ ಪ್ರಿಯ ಮಕಾರ್ ಅಲೆಕ್ಸೇಯೆವಿಚ್,

ನಿಮ್ಮ ಒಳ್ಳೆಯ ಅದೃಷ್ಟದ ಸುದ್ದಿ ತಿಳಿದು ನನಗೆ ತುಂಬ ಸಂತೋಷವಾಗಿದೆ. ನಿಮ್ಮ ಮುಖ್ಯಾಧಿಪತಿಯ ಕಾರುಣ್ಯವನ್ನು ನಾನು ಸಂಪೂರ್ಣವಾಗಿ ಮೆಚ್ಚುತ್ತೇನೆ. ಈಗ ನೀವು ನಿಮ್ಮ ಕಷ್ಟಕೋಟಲೆಗಳಿಂದ ಸ್ವಲ್ಪ ವಿಶ್ರಾಂತಿ ಪಡೆದುಕೊಳ್ಳಬಹುದು. ಆದರೆ ದೇವರಾಣೆಗೂ, ಹಣವನ್ನು ಪೋಲುಮಾಡಬೇಡಿ. ಸದ್ದುಗದ್ದಲವಿಲ್ಲದೆ, ಎಷ್ಟು ಸರಳವಾಗಿ ಸಾಧ್ಯವೋ ಅಷ್ಟೂ ಸರಳವಾಗಿ ಜೀವನ ನಡೆಸಿ. ಎಷ್ಟೇ ಸ್ವಲ್ಪವಾದರೂ ಸರಿಯೆ, ಹಣವನ್ನು ತೆಗೆದಿರಿಸತೊಡಗಿ. ನಾಳೆ ದುರದೃಷ್ಟ ಒದಗಿದಾಗ ನೀವು ಅದನ್ನು ಎದುರಿಸಲು ಸಿದ್ಧರಿಲ್ಲದಂತಾಗಬಾರದಷ್ಟೆ. ಫಿದೋರಳೂ ನಾನೂ ಹೇಗೋ ನಿಭಾಯಿಸುತ್ತೇವೆ. ನಮಗೆ ಅಷ್ಟೊಂದು ಹಣವನ್ನೇಕೆ ಕಳುಹಿಸಿದಿರಿ, ಮಕಾರ್ ಅಲೆಕ್ಸೇಯೆವಿಚ್? ನಮಗೆ ನಿಜಕ್ಕೂ ಅಷ್ಟೊಂದು ಬೇಕಿಲ್ಲ – ನಮ್ಮಲ್ಲಿರುವುದೇ ನಮಗೆ ಸಾಕಾಗಿದೆ. ಬೇರೆ ಮನೆಗೆ ನಿವಾಸ ಬದಲಿಸುವಾಗ ಒದಗಿ ಬರುವ ವೆಚ್ಚಗಳಿಗೆ ಫಿದೋರ ತನ್ನ ಹಳೆಯ ಸಾಲವೊಂದನ್ನು ವಸೂಲು ಮಾಡುವ ಭರವಸೆ ಹೊಂದಿದ್ದಾಳೆ. ತುರ್ತಿನ ಆವಶ್ಯಕತೆಗಳಿಗೆಂದು ನಾನು ಇಪ್ಪತ್ತು ರೂಬಲ್ ಇರಿಸಿಕೊಂಡು ಉಳಿದುದನ್ನು ಹಿಂದಿರುಗಿಸುತ್ತಿದ್ದೇನೆ. ಹಣದ ಬಗೆಗೆ ಎಚ್ಚರದಿಂದಿರಿ, ಮಕಾರ್ ಅಲೆಕ್ಸೇಯೆವಿಚ್. ನಮಸ್ಕಾರ. ನಿಮ್ಮ ಚಿಂತೆಗಳೆಲ್ಲ ದೂರವಾಗಿ ನೀವು ಶಾಂತಿಯಿಂದಿರುವಂತಾಗಲಿ. ಚೆನ್ನಾಗಿರಿ, ಚೈತನ್ಯದಿಂದ ತುಂಬಿರಿ. ನನಗೆ ತುಂಬ ಆಯಾಸವಾಗಿರದಿದ್ದಲ್ಲಿ ಇನ್ನೂ ಹೆಚ್ಚು ಬರೆಯುತ್ತಿದ್ದೆ. ನಿನ್ನೆಯೆಲ್ಲಾ ನಾನು ಹಾಸಿಗೆ ಹಿಡಿದು ಮಲಗಿದ್ದೆ. ನಮ್ಮಲ್ಲಿಗೆ ಭೇಟಿಕೊಡುವುದಾಗಿ ನೀವು ಮಾತುಕೊಟ್ಟಿರುವುದು ನನಗೆ ಸಂತೋಷ ನೀಡಿದೆ. ಖಂಡಿತ ಬನ್ನಿ, ದಯವಿಟ್ಟು ಬನ್ನಿ.

ವ. ದೊ.

ಸೆಪ್ಟೆಂಬರ್ 11

ಪ್ರಿಯ ವರ್ವಾರ ಅಲೆಕ್ಸೇಯೆವ್ನ,

ನಾನು ಸಂತೋಷದಿಂದ ತೃಪ್ತಿಯಿಂದ ಇರುವ ಈಗ ನೀವು ದಯವಿಟ್ಟು ಇಲ್ಲಿಂದ ಹೊರಟು ಹೋಗಬೇಡಿ. ಪ್ರಿಯ ವಾರೆಂಕ, ಫಿದೋರಳ ಮಾತನ್ನು ಕೇಳ ಹೋಗಬೇಡಿ. ನಿಮಗಿಷ್ಟವಾದುದನ್ನೆಲ್ಲ ನಾನೇ ಮಾಡುತ್ತೇನೆ. ನನ್ನ ವರ್ತನೆಯನ್ನೂ ಸರಿಪಡಿಸಿಕೊಳ್ಳುತ್ತೇನೆ, ದೊಡ್ಡ ಸಾಹೇಬರಿಗೆ ಗೌರವ ತೋರಿಸಲಾದರೂ. ನಾವು ಮತ್ತೆ ಹಿಂದಿನಂತೆಯೇ ಪರಸ್ಪರರಿಗೆ ಸಂತಸದ ಪತ್ರಗಳನ್ನು ಬರೆಯುತ್ತಿರೋಣ, ಪರಸ್ಪರರ ಸುಖದುಃಖಗಳನ್ನು – ದುಃಖಗಳು ಯಾವುವಾ

ದರೂ ಇರುವುವೇ ಆದಲ್ಲಿ – ಹಂಚಿಕೊಳ್ಳೋಣ. ನಾವು ಸಾಮರಸ್ಯದಿಂದ ಶಾಂತಿಯಿಂದ ಜೀವನ ನಡೆಸೋಣ. ಮತ್ತೆ ಸಾಹಿತ್ಯ ವಾಚನವನ್ನು ಕೈಗೊಳ್ಳೋಣ. ನನ್ನ ಜೀವನದಲ್ಲಿ ಎಲ್ಲವೂ ಉತ್ತಮ ಸ್ಥಿತಿಗೆ ಬದಲಿದೆ, ವಾರೆಂಕ. ಮನೆಯ ಯಜಮಾನಿ ಹೆಚ್ಚು ಸ್ನೇಹಪರಳಾಗಿದ್ದಾಳೆ, ಥೆರೇಸಳು ಹೆಚ್ಚು ಬುದ್ಧಿವಂತಳಾಗಿದ್ದಾಳೆ, ಫಾಲ್ಡೊನಿಯೂ ನಮಗೆ ಬೇಕಾದ ಕೆಲಸ ಮಾಡಿಕೊಡಲು ಹೆಚ್ಚು ಸಿದ್ಧವಾಗಿದ್ದಾನೆ. ನಾನು ರತಜ್ಯಾಯೆವ್‌ನೊಂದಿಗೂ ಮನಸ್ತಾಪ ಪರಿಹರಿಸಿಕೊಂಡಿದ್ದೇನೆ. ನಾನೇ ಅವನ ಬಳಿಗೆ ಹೋದುದು ನನಗೆ ತುಂಬ ಸಂತೋಷ ನೀಡಿತು. ಅವನು ಅಂತರಂಗದಲ್ಲಿ ಒಳ್ಳೆಯವನೇ, ನನ್ನ ಚಿನ್ನ. ಅವನ ಬಗೆಗೆ ಜನ ಹೇಳಿರುವ ಎಲ್ಲ ಕೆಟ್ಟ ಸಂಗತಿಗಳೂ ಕೇವಲ ಅವಹೇಳನವಷ್ಟೇ, ಸುಳ್ಳು ಸುದ್ದಿಗಳಷ್ಟೇ ಎನ್ನುವುದನ್ನು ನಾನು ಕಂಡುಕೊಂಡೆ. ಅವನು ನಮ್ಮ ವಿಷಯವನ್ನು ಪುಸ್ತಕವಾಗಿ ಬರೆಯಲು ಎಂದೂ ಉದ್ದೇಶಿಸಿರಲಿಲ್ಲ. ಇದನ್ನು ಅವನೇ ನನಗೆ ಹೇಳಿದ. ತನ್ನ ಕೆಲವು ಹೊಸ ಬರಹಗಳನ್ನೂ ಓದಿ ತಿಳಿಸಿದ. ನನ್ನನ್ನು 'ಲವ್‌ಲೇಸ್' (ಸ್ತ್ರೀಲಂಪಟ) ಎಂದು ಕರೆದಿರುವುದಕ್ಕೆ ಅವನ ವಿವರಣೆಯೆಂದರೆ: ಅದು ನಿಜಕ್ಕೂ ಅಂತಹ ಅಸಭ್ಯವಾದ ಮಾತೇನೂ ಅಲ್ಲ, ಅದು ವಿದೇಶೀ ಭಾಷೆಯಿಂದ ಪಡೆದುಕೊಂಡ ಒಂದು ಪದ, ಅದರ ನಿಜವಾದ ಅರ್ಥ ಚುರುಕು ಬುದ್ಧಿಯ ವ್ಯಕ್ತಿ, ಎಂಬುದಾಗಿದೆ. ಅಥವಾ ಅದನ್ನೇ ಹೆಚ್ಚು ನಯವಾದ ಗ್ರಾಂಥಿಕ ಭಾಷೆಯಲ್ಲಿ ಹೇಳುವುದಾದರೆ, ಅದರ ಅರ್ಥ "ಒಬ್ಬ ತೀಕ್ಷ್ಣವಾದ ವ್ಯವಹಾರ ನಿಪುಣತೆಯುಳ್ಳ ಯುವಕ!" ಎಂದಾಗುತ್ತೆ. ಅಷ್ಟೆ. ಆದ್ದರಿಂದ ಅದು ಹಾನಿಮಾಡದಂಥ ಒಂದು ವಿನೋದವಷ್ಟೆ ಆಗಿದ್ದಿತು, ನನ್ನ ದೇವತೆ. ಅದನ್ನು ನಾನು ನನ್ನ ತಿಳಿಗೇಡಿತನದಲ್ಲಿ, ತಪ್ಪು ಅರ್ಥಮಾಡಿಕೊಂಡೆ. ನಾನು ಅವನಲ್ಲಿ ಕ್ಷಮೆ ಕೇಳಿಕೊಂಡೆ. ಇಂದು ಹವೆ ಕೂಡ ತುಂಬ ಚೆನ್ನಾಗಿದೆ. ಬೆಳಿಗ್ಗೆ ಸ್ವಲ್ಪ ಇಬ್ಬನಿ ಬಿದ್ದಿತು, ನಿಜ. ಆದರೆ ಅದು ಗಾಳಿಯನ್ನು ಮತ್ತಷ್ಟು ಹಸನು ಮಾಡಿದೆ. ನಾನು ಒಂದು ಜೊತೆ ಸೊಗಸಾದ ಬೂಟುಗಳನ್ನು ಕೊಂಡುಕೊಂಡೆ. ಅದನ್ನು ತೊಟ್ಟು ನೆವ್‌ಸ್ಕಿ ಪ್ರಾಸ್ಪೆಕ್ಟ್‌ನಲ್ಲಿ ವಾಯುಸಂಚಾರ ಹೋಗಿ ಅಲ್ಲೇ ನಿಂತು 'ದಿ ಬೀ' ಪತ್ರಿಕೆ*ಯನ್ನೂ ಓದಿಕೊಂಡು ಬಂದೆ.

ಓಹ್, ಮುಖ್ಯ ವಿಷಯವನ್ನು ಹೇಳುವುದನ್ನೇ ಮರೆತೆ: ಇಂದು ಬೆಳಿಗ್ಗೆ ನಾನು ಯೆಮೆಲ್ಯಾನ್ ಇವಾನೊವಿಚ್‌ರೊಂದಿಗೂ ಅಕ್ಸೇಂತಿ ಮಿಖಾಯ್‌ಲೊವಿಚ್‌ರೊಂದಿಗೂ ನಮ್ಮ ದೊಡ್ಡ ಸಾಹೇಬರ ಬಗೆಗೆ ಸಂಭಾಷಣೆ ನಡೆಸಿದೆ. ಅವರಿಂದ ಇಂತಹ ಕೃಪಾಪೂರಿತ ಉಪಕಾರ ಪಡೆದವನು ನಾನೊಬ್ಬನೇ ಅಲ್ಲವೆಂದು

---

*'ಸ್ಯೇವ್ಯೆರ್ನಯ ಪ್ಚೆಲಾ' ('ಉತ್ತರದ ಜೇನ್ನೊಣ') ವೃತ್ತಪತ್ರಿಕೆ. –ಸಂ.

ತಿಳಿದುಬಂದಿತು. ಅವರು ದಯಾಶೀಲ ಹೃದಯಿಯೆಂದು ಹೆಸರುವಾಸಿಯಾಗಿದ್ದಾರೆ. ಅನೇಕ ಕಡೆಗಳಿಂದ ಅವರಿಗೆ ಆಶೀರ್ವಾದ ಬರುತ್ತದೆ. ಅನೇಕರು ಅವರಿಂದ ಪಡೆದ ಉಪಕಾರಕ್ಕಾಗಿ ಕೃತಜ್ಞತೆಯಿಂದ ಅತ್ತಿದ್ದಾರೆ. ಒಮ್ಮೆ ಅವರು ಒಬ್ಬ ಅನಾಥ ಬಾಲಕಿಯನ್ನು ದತ್ತು ತೆಗೆದುಕೊಂಡು, ಅವಳನ್ನು ಓದಿಸಿ ಬೆಳೆಸಿ ಅನಂತರ ಒಬ್ಬ ಪ್ರಮುಖ ವ್ಯಕ್ತಿಗೆ, ದೊಡ್ಡ ಸಾಹೇಬರ ಬಳಿಯೇ ವಿಶೇಷ ಕೆಲಸಗಳಿಗಾಗಿ ನೇಮಿತನಾದ ಗುಮಾಸ್ತನಿಗೆ, ಮದುವೆ ಮಾಡಿಕೊಟ್ಟರಂತೆ. ಮತ್ತೊಮ್ಮೆ ಒಬ್ಬ ವಿಧವೆಯ ಮಗನಿಗೆ ಒಂದು ಕೆಲಸ ಕೊಡಿಸಿಕೊಟ್ಟರಂತೆ. ಇವಲ್ಲದೆ ಅವರು ಇನ್ನೂ ಅನೇಕ ಸತ್ಕಾರ್ಯಗಳನ್ನು ನಡೆಸಿರುವರೆಂದು ಎಲ್ಲರೂ ಹೇಳುತ್ತಾರೆ. ಇವೆಲ್ಲದಕ್ಕೂ ನನ್ನದನ್ನೂ ಸೇರಿಸುವುದು ನನ್ನ ಕರ್ತವ್ಯವೆಂದು ನಾನು ಭಾವಿಸಿದೆ. ನನ್ನ ಕಥೆಯನ್ನು ಎಲ್ಲರಿಗೂ ಏನೊಂದು ಚೂರನ್ನೂ ಮುಚ್ಚಿಡದೆ ಹೇಳಿದೆ. ನನ್ನ ಅವಮಾನವನ್ನು ನಾನು ಲೆಕ್ಕಿಸಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಅವಮಾನದ ಮಾತೆಲ್ಲಿ ಬಂತು. ದೊಡ್ಡ ಸಾಹೇಬರ ಸತ್ಕಾರ್ಯಗಳನ್ನು ಎಲ್ಲರೂ ಎಲ್ಲರಿಗೂ ಕೇಳಿಸುವಂತೆ ಹೊಗಳುವಂತಾಗಲಿ. ನಾನು ಉತ್ಸುಕತೆಯಿಂದ ಮಾತನಾಡಿದೆ, ಮೈ ಮರೆತು ಮಾತನಾಡಿದೆ. ನಾಚಿಕೆ ಪಡುವ ಬದಲು, ಅಂತಹ ವಿಷಯವನ್ನು ಹೇಳಲು ನನಗೆ ಹೆಮ್ಮೆಯೇ ಎನಿಸಿತು. ನಾನು ಅವರಿಗೆ ಎಲ್ಲವನ್ನೂ ಹೇಳಿದೆ (ಆದರೆ ನಿಮ್ಮ ವಿಷಯವನ್ನು ಮಾತ್ರ ಏನೂ ಹೇಳಲಿಲ್ಲವೆನ್ನಿ). ನನ್ನ ಮನೆಯ ಯಜಮಾನಿ, ಫಾಲ್ದೊನಿ, ರತಜ್ಯಾಯೆವ್, ನನ್ನ ಬೂಟುಗಳು, ಮಾರ್ಕೊವ್ – ಇವರೆಲ್ಲರ ಬಗೆಗೆ ಹೇಳಿದೆ. ಸ್ವಲ್ಪದರಲ್ಲಿ, ಎಲ್ಲ ವಿಷಯಗಳನ್ನೂ ತಿಳಿಸಿದೆ. ಅವರಲ್ಲಿ ಕೆಲವರು, ಕೆಲವರೇನು ವಾಸ್ತವವಾಗಿ ಎಲ್ಲರೂ, ಒಳಗೊಳಗೇ ವ್ಯಂಗ್ಯವಾಗಿ ನಕ್ಕರು. ಬಹುಶಃ ನನ್ನ ಆಕಾರದಲ್ಲೇ ಏನೋ ವಿನೋದಕರವಾಗಿದ್ದಿತೇನೋ, ಅಥವಾ ನನ್ನ ಬೂಟುಗಳು ಹಾಸ್ಯಾಸ್ಪದವಾಗಿದ್ದವೇನೋ. ಓಹ್, ಹೌದು. ಈಗ ನನಗೆ ಚೆನ್ನಾಗಿ ಗೊತ್ತಾಯಿತು. ನನ್ನ ಬೂಟುಗಳೇ ಅವರನ್ನು ಹಾಗೆ ನಗುವಂತೆ ಮಾಡಿರಬೇಕು. ಆದರೂ ಅವರು ಯಾವುದೇ ಕೆಟ್ಟ ಅರ್ಥದಲ್ಲಿ ನಕ್ಕಿರಲಿಲ್ಲ. ಅವರೆಲ್ಲ ಇನ್ನೂ ಯುವಕರು, ಜೊತೆಗೆ ಸುಸ್ಥಿತಿಯಲ್ಲಿದ್ದಾರೆ. ಅವರು ಮಾತ್ಸರ್ಯದಿಂದ ಕೂಡಿರಲಿಲ್ಲವೆಂಬುದು ಖಂಡಿತ. ದೊಡ್ಡ ಸಾಹೇಬರಿಗೆ ಅವಮಾನವಾಗುವಂತೆ ಅವರು ಹೇಗೆ ನಗಬಲ್ಲರು? ಹಾಗೆ ನಗಲು ಸಾಧ್ಯವೇ, ನೀವೇ ಹೇಳಿ, ವಾರೆಂಕ?

ನಾನಿನ್ನೂ ಭಾವಪರವಶನಾಗಿದ್ದೇನೆ, ನನ್ನ ಚಿನ್ನ. ಘಟನೆಗಳು ನನ್ನನ್ನು ಬಹಳವಾಗಿ ಗೊಂದಲಗೊಳಿಸಿವೆ. ನಿಮ್ಮಲ್ಲಿ ಸಾಕಷ್ಟು ಸೌದೆ ಇದೆಯೆ? ನಿಮ್ಮ ಆರೋಗ್ಯ ನೋಡಿಕೊಳ್ಳಿ, ವಾರೆಂಕ. ನೆಗಡಿ ಬರಿಸಿಕೊಳ್ಳಬೇಡಿ. ಓಹ್, ನನ್ನ ಮುದ್ದುರಾಣಿ. ನಿಮ್ಮ ವಿಷಾದಪೂರ್ಣ ಚಿಂತನೆಗಳು ನನ್ನನ್ನು ಕೊಲ್ಲುತ್ತಿವೆ.

ನಾನು ಅದರ ಬಗೆಗೆ ದೇವರಲ್ಲಿ ಪ್ರಾರ್ಥನೆ ಮಾಡುತ್ತಿರುತ್ತೇನೆ. ನಿಮ್ಮ ಬಳಿ ಉಣ್ಣೆಯ ಕಾಲುಚೀಲವೂ, ತೊಡಲು ಸಾಕಷ್ಟು ಬೆಚ್ಚಗಿನ ಉಡುಪುಗಳೂ ಇವೆಯಷ್ಟೆ? ಈ ಮುದುಕನ ಮೇಲೆ ದಯೆಯಿಟ್ಟು ಎಲ್ಲವನ್ನೂ ಹೇಳಿ, ನಿಮಗೆ ಬೇಕಾದುದೇನಾದರೂ ಇದ್ದರೆ ಹೇಳಿ. ನನಗೆ ಹೇಳಿ, ಸಾಕು. ಕೆಟ್ಟ ಕಾಲ ಕಳೆಯಿತು. ಭವಿಷ್ಯತ್ತು ಎಷ್ಟು ಉಜ್ವಲವಾಗಿದೆ, ಎಷ್ಟು ಭವ್ಯವಾಗಿದೆ!

ನಮ್ಮ ಹಿಂದಿನ ದಿನಗಳು ದುಃಖಭರಿತವಾಗಿದ್ದವು, ವಾರೆಂಕ. ಆದರೆ ಅವು ಸದಾಕಾಲಕ್ಕೂ ಹೊರಟುಹೋಗಿವೆ. ವರ್ಷಗಳು ಕಳೆದಂತೆ ನಾವು ಆ ದಿನಗಳಿಗಾಗಿಯೂ ಬಿಸುಸುಯ್ಯಲಿರುವೆವು. ನನ್ನ ಎಳೆತನದ ದಿನಗಳು ನನಗೆ ಜ್ಞಾಪಕಕ್ಕೆ ಬರುತ್ತವೆ. ಆಗ ನನ್ನ ಬಳಿ ಒಂದು ಕೊಪೆಕ್ ಕೂಡ ಇರುತ್ತಿರಲಿಲ್ಲ. ಚಳಿಯಿಂದ ನಡುಗುತ್ತಿದ್ದೆ, ಹಸಿದಿರುತ್ತಿದ್ದೆ, ಆದರೂ ಸಂತೋಷದಿಂದಿರುತ್ತಿದ್ದೆ. ಬೆಳಗಿನ ಹೊತ್ತು ನೆವ್‌ಸ್ಕಿ ಪ್ರಾಸ್ಪೆಕ್ಟ್‌ನಲ್ಲಿ ನಡೆದು ಹೋಗುತ್ತ ಯಾವುದಾದರೂ ಒಂದು ಸುಂದರ ಮುಖ ಕಾಣುತ್ತಿದ್ದೆ. ಅದು ನನ್ನನ್ನು ಇಡೀ ದಿನ ಸಂತೋಷದಿಂದ ಇರಿಸಿರುತ್ತಿತ್ತು. ಅವೀಗ ಸಂತಸದ ದಿನಗಳು! ಜೀವಿಸಿರುವುದು ಎಷ್ಟು ಒಳ್ಳೆಯದು, ವಾರೆಂಕ, ಅದರಲ್ಲೂ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ. ಕಷ್ಟದ ದಿನಗಳಲ್ಲಿ ನಾನು ಎಸಗಿದ ಪಾತಕಗಳಿಗಾಗಿ – ದೈವನಿಂದನೆ ಮಾಡಿದುದಕ್ಕಾಗಿ, ಉದಾರವಾದೀ ವಿಚಾರಗಳ ಚಿಂತನೆ ಮಾಡಿದುದಕ್ಕಾಗಿ, ಮದ್ಯಪಾನ ಮಾಡಿದುದಕ್ಕಾಗಿ – ನನ್ನನ್ನು ಕ್ಷಮಿಸುವಂತೆ ನಾನು ನಿನ್ನೆ ಕಣ್ಣೀರು ಸುರಿಸುತ್ತ ದೇವರನ್ನು ಪ್ರಾರ್ಥಿಸಿದೆ. ಪ್ರಾರ್ಥನೆಯ ಸಮಯದಲ್ಲಿ ನಾನು ನಿಮ್ಮನ್ನೂ ಕೋಮಲವಾಗಿ ಸ್ಮರಿಸಿದೆ. ನೀವೇ ನನಗೆ ಮನೋಸ್ಥೈರ್ಯ ನೀಡಿದುದು, ಸಮಾಧಾನ ಮಾಡಿದುದು, ಉತ್ತಮ ಸಲಹೆ ನೀಡಿದುದು. ನಾನು ಅದನ್ನು ಎಂದಿಗೂ ಮರೆಯುವುದಿಲ್ಲ, ನನ್ನ ಮನಮೋಹಿನಿ. ಇಂದು ನಾನು ನಿಮ್ಮ ಪತ್ರಗಳನ್ನೆಲ್ಲ ಹೊರತೆಗೆದು ಅವಕ್ಕೆ ಒಂದೊಂದಾಗಿ ಮುತ್ತಿಟ್ಟೆ, ನನ್ನ ಮುದ್ದು. ನಮಸ್ಕಾರ, ವಾರೆಂಕ. ಇಲ್ಲಿಂದ ಸ್ವಲ್ಪ ದೂರದಲ್ಲೇ ಇರುವ ಅಂಗಡಿಯೊಂದರಲ್ಲಿ ಒಂದು ಸರ್ವೀಸ್ ಕೋಟು ಖರೀದಿಗಿದೆ ಎಂದು ನಾನು ಕೇಳಿದೆ. ವಿಚಾರಿಸಲು ಹೋಗುತ್ತೇನೆ. ನಮಸ್ಕಾರ, ನನ್ನ ಪುಟ್ಟ ದೇವತೆ, ನಮಸ್ಕಾರ.

ನಿಮ್ಮ ಆತ್ಮೀಯ ಮಿತ್ರ,<br>ಮಕಾರ್ ದೇವುಷ್ಕಿನ್.

ಸೆಪ್ಟೆಂಬರ್ 15

ನನ್ನ ಪ್ರಿಯ ಮಕಾರ್ ಅಲೆಕ್ಸೇಯೆವಿಚ್,

ನಾನು ತುಂಬ ಕ್ಷೋಭೆಗೊಳಗಾಗಿದ್ದೇನೆ. ಏನು ಜರುಗಿತೋ ಹೇಳಿಬಿಡುತ್ತೇನೆ. ನನಗೆ ತುಂಬ ಕೆಟ್ಟ ಮುನ್ಸೂಚನೆಗಳು ಬರುತ್ತಿವೆ! ನೀವೇ ತೀರ್ಮಾನಿಸಿ. ಈ

ಕೆಳಗಿನದು ಜರುಗಿತು. ಮಿ. ಬೀಕವ್ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿದ್ದಾರೆ. ಫಿದೋರ ಅವರನ್ನು ಸಂಧಿಸಿದ್ದಳು. ಅವರು ಕುದುರೆ ಬಂಡಿಯಲ್ಲಿ ಹೋಗು ತ್ತಿದ್ದರಂತೆ. ಫಿದೋರಳನ್ನು ಕಂಡ ಕೂಡಲೇ ಬಂಡಿ ನಿಲ್ಲಿಸಿ ಅವಳ ಬಳಿ ಬಂದು ವಾಸ ಎಲ್ಲಿ ಎಂದು ಕೇಳಿದರಂತೆ. ಫಿದೋರ ಹೇಳಲು ನಿರಾಕರಿಸಿದಾಗ, ಅವಳ ಜೊತೆ ಯಾರು ವಾಸಿಸುತ್ತಿದ್ದಾರೆ ಎಂಬುದು ತಮಗೆ ಗೊತ್ತು ಎಂದು ಕಿರುನಗೆ ನಗುತ್ತ ಹೇಳಿದರಂತೆ (ಆನ್ನ ಫ್ಯೋದೊರೊವ್ನ ಅವರಿಗೆ ಹೇಳಿರಬೇಕು). ಫಿದೋರ ಳಿಗೆ ತಡೆದುಕೊಳ್ಳಲು ಆಗಲಿಲ್ಲ. ಅವರನ್ನು ಚೆನ್ನಾಗಿ ಬಯ್ಯುತೊಡಗಿದಳು. ಅವರೊಬ್ಬ ನೀತಿಗೆಟ್ಟ ಮನುಷ್ಯರು, ಅವರೇ ನನ್ನ ದುಸ್ಥಿತಿಗೆ ಕಾರಣ, ಎಂದು ಹೇಳಿದಳು. ಹೌದು, ನಾನು ನಿಜಕ್ಕೂ ದುಃಖದಲ್ಲೇ ಇರಬೇಕು, ಏಕೆಂದರೆ ನನ್ನ ಬಳಿ ಒಂದು ಕೊಪೆಕ್ ಕೂಡ ಇಲ್ಲ, ಎಂದು ಅವರು ಹೇಳಿದರಂತೆ. ನಾನು ಎಲ್ಲಾದರೂ ಕೆಲಸ ಮಾಡಿಕೊಂಡು ಹೊಟ್ಟೆ ಹೊರೆದುಕೊಳ್ಳಬಹುದಿತ್ತು, ಅಥವಾ ಯಾರನ್ನಾದರೂ ಮದುವೆಯಾಗಬಹುದಿತ್ತು, ಅಥವಾ ಎಲ್ಲಾದರೂ ನೆಲೆ ಕಂಡು ಕೊಳ್ಳಬಹುದಿತ್ತು, ಆದರೆ ಅವರ ಕೆಟ್ಟ ಕಾರ್ಯದ ಫಲವಾಗಿ ನಾನು ಕಾಯಿಲೆ ಬಿದ್ದಿದ್ದೇನೆ ಮತ್ತು ಬೇಗನೆಯೇ ಸಾಯಲಿರುವೆ, ಎಂದು ಅನಂತರ ಫಿದೋರ ಹೇಳಿದಳಂತೆ. ಸಾಯಲು ನಾನಿನ್ನೂ ತುಂಬ ಎಳೆಯುವಳು, ನಾನು ಟೊಳ್ಳುಬುದ್ಧಿಯುವಳು, ನಿಜ, ನನ್ನ ಸದ್ಗುಣಕ್ಕೇನೋ ಸ್ವಲ್ಪ ಕಳಂಕ ಬಂದಿದೆ (ಅವರು ಉಪಯೋಗಿಸಿದ ಮಾತುಗಳೇ), ಎಂದು ಅವರು ಅದಕ್ಕೆ ಹೇಳಿದರಂತೆ. ನಾವು ಎಲ್ಲಿ ವಾಸಿಸುತ್ತಿದ್ದೇವೆಂಬುದು ಅವರಿಗೆ ತಿಳಿದಿರಲಿಲ್ಲವೆಂದು ಫಿದೋರಳೂ ನಾನೂ ಭಾವಿಸಿದ್ದೆವು. ಆದರೆ ನಿನ್ನೆ ನಾನು ಏನೋ ಸಾಮಾನು ತರಲು ಗೊಸ್ತೀನಿ ದ್ವೋರ್‌ಗೆ ಹೋಗಿದ್ದಾಗ ಅವರು ಇದ್ದಕ್ಕಿದ್ದಂತೆ ನಮ್ಮ ಮನೆಗೆ ಬಂದರು. ಅವರು ಬೇಕಂತಲೇ ನಾನು ಮನೆಯಲ್ಲಿಲ್ಲದಿದ್ದಾಗ ಬಂದಿದ್ದರು. ನನ್ನ ಬಗೆಗೆ, ನಮ್ಮ ಜೀವನದ ಬಗೆಗೆ, ಫಿದೋರಳನ್ನು ಅನೇಕ ಪ್ರಶ್ನೆಗಳನ್ನು ಕೇಳಿದರಂತೆ, ಎಲ್ಲವನ್ನೂ, ನನ್ನ ಕಸೂತಿ ಕೆಲಸವನ್ನೂ ಸಹ, ತನಿಖೆ ಮಾಡಿ ನೋಡಿ ಕೊನೆಗೆ ಕೇಳಿದರಂತೆ: "ಯಾರದು, ಯಾರೋ ಗುಮಾಸ್ತ ನಿಮಗೆ ಪರಿಚಯುವಂತಲ್ಲ?" ಆ ಸಮಯಕ್ಕೆ ಸರಿಯಾಗಿ ನೀವು ಅಂಗಳದಲ್ಲಿ ಹೋಗುತ್ತಿದ್ದಿರಂತೆ. ಫಿದೋರ ನಿಮ್ಮನ್ನು ಅವರಿಗೆ ತೋರಿ ಸಿದಳಂತೆ. ಅವರು ನೋಡಿ ಮತ್ತೆ ಮುಗುಳ್ನಕ್ಕರಂತೆ. ಹೊರಟುಹೋಗುವಂತೆ ಫಿದೋರ ಅವರಿಗೆ ಹೇಳಿದಳಂತೆ. ಕಷ್ಟಕಾರ್ಪಣ್ಯಗಳಿಂದ ನಾನು ಕಾಯಿಲೆ ಬಿದ್ದಿ ದ್ದೇನೆ, ಅವರನ್ನು ಕಾಣುವುದು ನನಗೆ ಅತ್ಯಂತ ಅಪ್ರಿಯುವಾಗಿರುತ್ತದೆ, ಎಂದ ವಳು ಅವರಿಗೆ ಹೇಳಿದಳಂತೆ. ಇದಕ್ಕೆ ಅವರು ಏನೂ ಉತ್ತರ ನೀಡದೆ, ಬೇರೆ ಏನೂ ಕೆಲಸವಿರಲಿಲ್ಲದಿದ್ದುದರಿಂದ ಸುಮ್ಮನೆ ಬಂದಿದ್ದುದಾಗಿ ತಿಳಿಸಿದರಂತೆ. ಆಮೇಲೆ ಅವರು ಅವಳಿಗೆ ಇಪ್ಪತ್ತೈದು ರೂಬಲ್ ಕೊಡಲು ಬಂದರಂತೆ.

ಅವಳು ಸಹಜವಾಗಿಯೋ ಅದನ್ನು ನಿರಾಕರಿಸಿದಳು. ಇದೆಲ್ಲದರ ಅರ್ಥ ಏನು? ಅವರು ಏತಕ್ಕೆ ಬಂದಿದ್ದರು? ನಮ್ಮ ಬಗೆಗೆ ಅವರು ಎಲ್ಲವನ್ನೂ ಹೇಗೆ ತಿಳಿಯಲು ಸಾಧ್ಯವಾಯಿತು? ನಾನಾ ರೀತಿಯ ಊಹಾಪೋಹಗಳಲ್ಲಿ ತೊಡಗಿ ನಾನು ಏನೂ ತಿಳಿಯದಂತಾಗಿದ್ದೇನೆ. ಫಿದೋರಳ ಅತ್ತಿಗೆ ಅಕ್ಸೀನಿಯ ನಮ್ಮನ್ನು ಆಗಾಗ್ಗೆ ನೋಡಲು ಬರುತ್ತಿರುತ್ತಾಳೆ. ಅವಳಿಗೆ ಬಟ್ಟೆ ಒಗೆಯುವ ನಾಸ್ತಾಸಿಯ ಗುರ್ತಂತೆ. ನಾಸ್ತಾಸಿಯಳ ಭಾಗಿನೇಯ ಇಲಾಖೆಯಲ್ಲಿ ಪಹರೆಯವನಾಗಿ ಕೆಲಸ ಮಾಡು ತ್ತಿದ್ದಾನಂತೆ. ಅದೇ ಇಲಾಖೆಯಲ್ಲಿ ಆನ್ನ ಫ್ಯೋದೊರೊವ್ನಳ ಭಾಗಿನೇಯನ ಒಬ್ಬ ಮಿತ್ರನೂ ಕೆಲಸ ಮಾಡುತ್ತಿದ್ದಾನಂತೆ. ಹಾಗೆ ಆನ್ನ ಫ್ಯೋದೊರೊವ್ನ ನಮ್ಮ ಬಗೆಗೆ ತಿಳಿದಿರಬೇಕು, ಎಂಬುದರಲ್ಲಿ ಸಂದೇಹವಿಲ್ಲ ಎಂದು ಫಿದೋರ ಹೇಳುತ್ತಾಳೆ. ಆದರೆ ಫಿದೋರಳ ಊಹೆ ತಪ್ಪಾಗಿರಬಹುದು. ಈಗ ಏನು ಮಾಡ ಬೇಕೋ, ನಮಗೆ ತಿಳಿಯದು. ಅವರು ಮತ್ತೆ ಬರುತ್ತಾರೆಯೋ? ಆ ಯೋಚನೆಯೇ ನನ್ನನ್ನು ಭೀತಳನ್ನಾಗಿ ಮಾಡುತ್ತದೆ. ಫಿದೋರಳು ನನಗೆ ನಿನ್ನೆ ಇದೆಲ್ಲವನ್ನೂ ಹೇಳಿದಾಗ ನಾನು ಮೂರ್ಛೆ ಹೋದಂತೆಯೇ ಆಗಿಬಿಟ್ಟೆ. ಅವರಿಗೆ ನನ್ನಿಂದ ಇನ್ನೇನು ಬೇಕಾಗಿರಬಹುದು? ಅವರೊಂದಿಗೆ ಇನ್ನೆಷ್ಟು ಮಾತ್ರವೂ ಯಾವ ಸಂಬಂಧವನ್ನೇ ಇಟ್ಟುಕೊಂಡಿರಲು ನನಗೆ ಸ್ವಲ್ಪವೂ ಇಷ್ಟವಿಲ್ಲ. ನನ್ನಷ್ಟಕ್ಕೆ ನಾನು ಇದ್ದುಕೊಂಡಿದ್ದರೆ ಅವರೇಕೆ ನನ್ನನ್ನು ಹಿಂಬಾಲಿಸಿಕೊಂಡು ಬರಬೇಕು? ನನಗೆ ಅದೇ ಸತತವಾದ ಅಂಜಿಕೆ. ಈ ಘಳಿಗೆಯಲ್ಲೇ ಬೀಕವ್ ಮತ್ತೆ ಬಂದುಬಿಟ್ಟರೆ ಏನು ಗತಿ? ನನಗೆ ಭವಿಷ್ಯತ್ತಿನಲ್ಲಿ ಏನು ಕಾದಿದೆಯೋ? ನಮ್ಮನ್ನು ಕಾಣಲು ಕೂಡಲೇ ಬನ್ನಿ, ಮಕಾರ್ ಅಲೆಕ್ಸೇಯೆವಿಚ್! ದಯವಿಟ್ಟು ಈ ಕೂಡಲೇ ಬನ್ನಿ, ದಮ್ಮಯ್ಯ.

ವ. ದೊ.

ಸೆಪ್ಟೆಂಬರ್ 18

ನನ್ನ ಪ್ರಿಯ ವರ್ವಾರ ಅಲೆಕ್ಸೇಯೆವ್ನ,

ಇಂದು ನಮ್ಮ ಮನೆಯಲ್ಲಿ ತುಂಬ ದುಃಖಾಕ್ರಾಂತವಾದ, ಅನಿರೀಕ್ಷಿತವಾದ, ವಿವರಿಸಲಾಗದಂತಹ ಘಟನೆಯೊಂದು ಜರುಗಿತು. ನಮ್ಮ ನತದೃಷ್ಟ ಗೊಷ್ಕೋರ್ವ್ ಸಂಪೂರ್ಣವಾಗಿ ದೋಷಮುಕ್ತನಾಗಿದ್ದಾನೆ. ಈ ನಿರ್ಧಾರವನ್ನು ತುಂಬ ಹಿಂದೆಯೇ ಅನುಮೋದಿಸಲಾಗಿದ್ದಿತು. ಇಂದು ಅವನು ಅಂತಿಮ ತೀರ್ಮಾನ ವನ್ನು ಕೇಳಲು ನ್ಯಾಯಾಲಯಕ್ಕೆ ಹೋಗಿದ್ದ. ಮೊಕದ್ದಮೆಯು ಅದೃಷ್ಟದಿಂದ ಅವನ ಪರವಾಗಿ ತೀರ್ಮಾನವಾಯಿತು. ನಿರ್ಲಕ್ಷ್ಯದ ರೂಪದಲ್ಲಿ ಯಾವುದೇ ತಪ್ಪು

ಮಾಡಲಾಗಿದ್ದರೂ ಅದನ್ನು ಕ್ಷಮಿಸಲಾಗಿದೆ. ವರ್ತಕನು ಪರಿಹಾರವಾಗಿ ಗೊರ್ಷ್ಕೋವ್‌ಗೆ ಒಂದು ಭಾರಿ ಮೊತ್ತವನ್ನೇ ನೀಡಬೇಕೆಂದು ನಿರ್ದೇಶಿಸಲಾಗಿದೆ. ಇದರಿಂದಾಗಿ ಗೊರ್ಷ್ಕೋವ್‌ನ ಪರಿಸ್ಥಿತಿ ಸುಧಾರಿಸಿದೆ, ಅವನ ಕೀರ್ತಿಗೆ ಅಂಟಿದ್ದ ಕಳಂಕ ನಿವಾರಣೆಯಾಗಿದೆ. ಸ್ವಲ್ಪದರಲ್ಲಿ, ಎಲ್ಲವೂ ಬದಲಿದೆ. ಅವನ ಅತ್ಯುತ್ತಮ ನಿರೀಕ್ಷೆಗಳೆಲ್ಲ ಫಲಿಸಿವೆ. ಅವನು ಅಪರಾಹ್ನ ಮೂರಕ್ಕೆ ಹಿಂದಿರುಗಿದ. ಪ್ರೇತ ದಂತೆ ನಿಸ್ತೇಜನಾಗಿದ್ದ. ತುಟಿಗಳು ಅದುರುತ್ತಿದ್ದವು. ಆದರೂ ನಸುನಗುತ್ತಿದ್ದ. ಹೆಂಡತಿ ಮಕ್ಕಳನ್ನು ತಬ್ಬಿಕೊಂಡ. ನಾವೆಲ್ಲ ಅವನನ್ನು ಅಭಿನಂದಿಸಲು ಅವನ ಕೋಣೆಗೆ ಗುಂಪಾಗಿ ಹೋದೆವು. ತುಂಬ ಭಾವಭರಿತನಾಗಿ ಅವನು ಸತತವಾಗಿ ಬಾಗಿ ನಮಸ್ಕರಿಸಿದ, ನಮ್ಮ ಒಬ್ಬೊಬ್ಬರ ಕೈಯನ್ನೂ ಹಲವಾರು ಬಾರಿ ಕುಲು ಕಿದ. ಹೇಗೋ ಅವನು ಸ್ವಲ್ಪ ಹೆಚ್ಚು ಎತ್ತರವಾಗಿ ಬೆಳೆದಿದ್ದಂತೆ ಕಾಣಬರುತ್ತಿದ್ದ. ಅವನ ಬೆನ್ನು ನೆಟ್ಟಗಿದ್ದಿತು. ಅವನ ಕಣ್ಣುಗಳು ನೀರು ಸುರಿಸುವುದನ್ನು ನಿಲ್ಲಿಸಿದ್ದವು. ಎಷ್ಟು ಭಾವೋದ್ದೀಪ್ತನಾಗಿದ್ದ ಆ ಬಡಪಾಯಿ ! ಒಂದು ಘಳಿಗೆಯೂ ನಿಶ್ಚಲನಾಗಿ ನಿಲ್ಲಲಾರದಾಗಿದ್ದ. ವಸ್ತುಗಳನ್ನು ಕೈಗೆತ್ತಿಕೊಳ್ಳುತ್ತಿದ್ದ, ಕೆಳಗಿರಿಸುತ್ತಿದ್ದ, ಮುಗುಳ್ನ ಗುತ್ತಿದ್ದ, ಬಾಗಿ ನಮಸ್ಕರಿಸುತ್ತಿದ್ದ, ಕುಳಿತುಕೊಳ್ಳುತ್ತಿದ್ದ, ಎದ್ದು ನಿಲ್ಲುತ್ತಿದ್ದ, ತನ್ನ ಮನಸ್ಸಿಗೆ ಬಂದುದೇನೇನನ್ನೋ ವಟಗುಟ್ಟುತ್ತಿದ್ದ, ತನ್ನ ಗೌರವದ ಬಗೆಗೆ, ತನ್ನ ನಿಷ್ಕಳಂಕವಾದ ಹೆಸರಿನ ಬಗೆಗೆ, ತನ್ನ ಮಕ್ಕಳ ಬಗೆಗೆ ಮಾತನಾಡುತ್ತಿದ್ದ. ಅವನು ಗೊಳೋ ಎಂದು ಅತ್ತು ಕೂಡ. ನಮ್ಮಲ್ಲನೇಕರ ಕಣ್ಣುಗಳಲ್ಲೂ ನೀರು ಬಂದಿತು. ಬಹುಶಃ ಅವನನ್ನು ಉತ್ತೇಜಿಸಲೋಸುಗ ರತಜ್ಯಾಯೆವ್ ಹೇಳಿದ: "ಅಯ್ಯೋ, ತಿನ್ನುವುದಕ್ಕೇ ಏನೂ ಇಲ್ಲದೆ ಇರುವಾಗ ಗೌರವ ಕಟ್ಟಿಕೊಂಡು ಏನಾಗಬೇಕು, ಮಿತ್ರ. ಮುಖ್ಯವಾದುದು ಹಣ. ಹಣಕ್ಕಾಗಿಯೇ ನೀವು ಸಂತೋಷಿ ಸಬೇಕು" ಹಾಗೆಂದು ಅವನು ಆತನ ಹೆಗಲು ತಟ್ಟಿದ. ಇದರಿಂದ ಗೊರ್ಷ್ಕೋವ್‌ಗೆ ಕೋಪ ಬಂತೆಂದು ನನಗೆ ಕಂಡಿತು. ತನ್ನ ಅತೃಪ್ತಿಯನ್ನು ನೇರವಾಗಿಯೇ ಏನೂ ವ್ಯಕ್ತಪಡಿಸಲಿಲ್ಲ. ಆದರೆ ರತಜ್ಯಾಯೆವ್‌ನನ್ನು ವಿಚಿತ್ರವಾಗಿ ನೋಡುತ್ತ ಅವನ ಕೈಯನ್ನು ತನ್ನ ಹೆಗಲಿನಿಂದ ತೆಗೆದ. ಇಂಥದನ್ನು ಅವನು ಹಿಂದೆ ಎಂದೂ ಮಾಡು ತ್ತಿರಲಿಲ್ಲ. ಜನ ಬೇರೆ ಬೇರೆ ಸ್ವಭಾವದವರಾಗಿರುತ್ತಾರೆ, ನಿಜ. ಉದಾಹರಣೆಗೆ, ನಾನು ಅಂತಹ ಸಂತಸದ ದಿನದಂದು ಅಷ್ಟು ಜಂಭದಿಂದಿರುತ್ತಿರಲಿಲ್ಲ. ಕೆಲವು ಸಂದರ್ಭಗಳಲ್ಲಿ ಒಂದಲ್ಲ ಹತ್ತು ಬಾರಿ ಬಾಗಿ ನಮಸ್ಕರಿಸಬೇಕಾಗುತ್ತದೆ, ತಮ್ಮ ಮೃದು ಹೃದಯ ತುಂಬಿ ಹೊರಸೂಸುವ ಮಿತಿಮೀರಿದ ಪರೋಪಕಾರ ಭಾವನೆಯ ಕಾರಣದಿಂದಾಗಿಯಷ್ಟೆ ನಮ್ಮ ಗರ್ವವನ್ನು ತಗ್ಗಿಸಿಕೊಳ್ಳಬೇಕಾಗುತ್ತದೆ. ಹೋಗಲಿ, ನಾನೇಕೆ ನನ್ನ ವಿಷಯವನ್ನೇ ಹೇಳಿಕೊಳ್ಳಬೇಕು? "ಹೌದು" ಗೊರ್ಷ್ಕೋವ್ ಹೇಳಿದ. "ಹಣವೂ ಒಳ್ಳೆಯದೇ. ಅದಕ್ಕಾಗಿ ದೇವರಿಗೆ ವಂದನೆ ಸಲ್ಲಲೇ ಬೇಕು !"

ಮತ್ತೆ ಮತ್ತೆ ಅವನು "ದೇವರಿಗೆ ವಂದನೆ ಸಲ್ಲಲೇ ಬೇಕು!" ಎನ್ನುತ್ತಲೇ ಇದ್ದ. ಅವನ ಪತ್ನಿ ಸಾಮಾನ್ಯವಾದುದಕ್ಕಿಂತ ಹೆಚ್ಚು ಉತ್ತಮವಾದ ಹಾಗೂ ಹೆಚ್ಚು ಸಮೃದ್ಧವಾದ ಭೋಜನಕ್ಕೆ ಆಜ್ಞೆ ನೀಡಿದಳು. ಮನೆಯ ಯಜಮಾನಿಯೇ ಅಡಿಗೆ ಮಾಡತೊಡಗಿದಳು. ನಮ್ಮ ಮನೆಯ ಯಜಮಾನಿ ತನ್ನದೇ ರೀತಿಯಲ್ಲಿ ಒಬ್ಬ ಕರುಣಾಳುವಾದ ಹೆಂಗಸೇ. ಭೋಜನಕ್ಕಾಗಿ ಕಾಯುತ್ತ ಗೊಷ್ಕೋವ್ ತುಂಬ ಅವಿಶ್ರಾಂತನಾದ, ಆಹ್ವಾನ ಇರಲಿ ಇಲ್ಲದಿರಲಿ ಎಲ್ಲರ ಕೋಣೆಗಳಿಗೂ ಭೇಟಿಕೊಟ್ಟ. ಪ್ರತಿಯೊಂದು ಕೋಣೆಯ ಒಳಕ್ಕೂ ಸುಮ್ಮನೆ ಹೋಗುತ್ತಿದ್ದ, ಮುಗುಳ್ನಗುತ್ತಿದ್ದ, ತುಸು ಹೊತ್ತು ಕೂರುತ್ತಿದ್ದ, ಏನಾದರೂ ಹೇಳುತ್ತಿದ್ದ ಇಲ್ಲವೇ ಏನೂ ಹೇಳುತ್ತಿರಲಿಲ್ಲ, ಆಮೇಲೆ ಎದ್ದು ಹೊರಹೋಗುತ್ತಿದ್ದ. ನೌಕಾಧಿಕಾರಿಯ ಕೋಣೆಯಲ್ಲಿ ಎಂದಿನಂತೆ ಇಸ್ಪೀಟು ಆಟ ನಡೆಯುತ್ತಿತ್ತು. ಇವನು ಒಳಹೋದಾಗ ಇವನನ್ನೂ ನಾಲ್ಕನೆಯ ಆಟಗಾರನಾಗಿ ಆಟಕ್ಕೆ ಸೇರಿಕೊಳ್ಳುವಂತೆ ಆಹ್ವಾನಿಸ ಲಾಯಿತು. ಅವನು ಸೇರಿಕೊಂಡು ಒಂದೆರಡು ಆಟವನ್ನೂ ಆಡಿದ. ಆಟದಲ್ಲಿ ಕೆಲವು ಮೂರ್ಖತನದ ತಪ್ಪುಗಳನ್ನು ಮಾಡಿದ, ಮೂರು ನಾಲ್ಕು ಬಾರಿ ಎಲೆ ಇಳಿಸುವುದರಲ್ಲೂ ತಪ್ಪು ಮಾಡಿದ. ಕೊನೆಗೆ ಆಟ ಬಿಟ್ಟುಕೊಟ್ಟ. "ಸುಮ್ಮನೆ ಒಂದೆರಡು ಆಟ ಆಡೋಣ ಅಂದುಕೊಂಡೆ, ಅಷ್ಟೆ" ಎಂದು ಹೇಳಿ ಕೋಣೆ ಬಿಟ್ಟು ಹೊರಹೋದ. ನಡುಮನೆಯಲ್ಲಿ ನನ್ನನ್ನು ಸಂಧಿಸಿದ. ನನ್ನೆರಡು ಕೈಗಳನ್ನೂ ತನ್ನ ಕೈಗಳಲ್ಲಿ ಹಿಡಿದುಕೊಂಡ, ಕಣ್ಣಲ್ಲಿ ಕಣ್ಣಿಟ್ಟು ನೋಡಿದ, ಆದರೆ ಒಂದು ವಿಚಿತ್ರ ರೀತಿಯಲ್ಲಿ ನೋಡಿದ. ಆಮೇಲೆ ಮತ್ತೊಮ್ಮೆ ನನ್ನ ಕೈ ಅವುಕಿ, ಇನ್ನೂ ನಸುನಗುತ್ತಲೇ, ಹೋದ. ಆದರೆ ಮತ್ತೆ ಅವನ ನಗೆ ವಿಚಿತ್ರ ರೀತಿಯದಾಗಿದ್ದಿತು, ಬಲವಂತದಿಂದ ಬಂದುದಾಗಿತ್ತು, ಸ್ವಲ್ಪಮಟ್ಟಿಗೆ ನಿರ್ಜೀವವಾದಂತಿದ್ದಿತು. ಅವನ ಪತ್ನಿ ಆನಂದಾಶ್ರುಗಳನ್ನು ಸುರಿಸುತ್ತಿದ್ದಳು, ಅದೊಂದು ಮಹಾ ಉತ್ಸವದಿನ ವಾಗಿದ್ದಿತೇನೋ ಎಂಬಂತೆ ತಮ್ಮ ಕೋಣೆಯಲ್ಲಿ ಸಂಭ್ರಮ ಸಡಗರದಿಂದ ಅಡ್ಡಾ ಡುತ್ತಿದ್ದಳು. ಊಟವಾದ ಮೇಲೆ ಅವನು ತನ್ನ ಪತ್ನಿಗೆ ಹೇಳಿದ: "ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳೋಣ ಅನಿಸುತ್ತಿದೆ." ಹಾಸಿಗೆ ಮೇಲೆ ಮಲಗಿದ. ತನ್ನ ಪುಟ್ಟ ಮಗಳನ್ನು ಕರೆದು ಅವಳ ತಲೆಯನ್ನು ಮತ್ತೆ ಮತ್ತೆ ನೇವರಿಸಿದ. ಅನಂತರ ಪತ್ನಿಯ ಕಡೆಗೆ ತಿರುಗಿ ಕೇಳಿದ: "ನಮ್ಮ ಪ್ಯೇತ್ಯೆಂಕ ಎಲ್ಲಿ?" ಅವನ ಪತ್ನಿ ತಕ್ಷಣವೇ ಶಿಲುಬೆ ವಂದನೆ ಸಲ್ಲಿಸಿ, ಪ್ಯೇತ್ಯೆಂಕ ತೀರಿಹೋಗಿದ್ದನೆಂಬ ವಿಷಯವನ್ನು ಅವನಿಗೆ ನೆನಪು ಮಾಡಿದಳು. "ಓಹ್, ಹೌದು. ನನಗೆ ಗೊತ್ತು" ಅವನು ಒಪ್ಪು ವವನಂತೆ ಹೇಳಿದ. "ಪ್ಯೇತ್ಯೆಂಕ ಸ್ವರ್ಗದಲ್ಲಿದ್ದಾನೆ." ಅವನು ಎಂದಿನಂತಿರಲಿಲ್ಲ, ವಿಚಲಿತನಾಗಿದ್ದ, ಭಾವೋತ್ಕರ್ಷಕ್ಕೆ ಒಳಗಾಗಿದ್ದ, ಎಂಬುದನ್ನು ಕಂಡುಕೊಂಡು ಅವಳು ಅವನನ್ನು ಸ್ವಲ್ಪ ಹೊತ್ತು ನಿದ್ರಿಸುವಂತೆ ಒತ್ತಾಯಿಸಿದಳು. "ಹೌದು, ಹಾಗೆ

ಮಾಡುತ್ತೇನೆ... ಸ್ವಲ್ಪ ಹೊತ್ತು ನಿದ್ರೆ ಮಾಡುತ್ತೇನೆ" ಅವನೆಂದ. ಆಮೇಲೆ ಅವನು ಅತ್ತ ಕಡೆಗೆ ತಿರುಗಿದ. ಒಂದು ಘಳಿಗೆ ನಿಶ್ಚಲನಾಗಿ ಮಲಗಿದ್ದ, ಮತ್ತೆ ಮಾತನಾಡಲಿರುವವನಂತೆ ತಲೆಯನ್ನು ಇತ್ತ ಕಡೆಗೇ ತಿರುಗಿಸಿದ. ಅವನು ಏನು ಹೇಳಿದನೆಂಬುದನ್ನು ಅವಳು ಅರ್ಥಮಾಡಿಕೊಳ್ಳಲಿಲ್ಲ. ಏನು ಹೇಳಿದುದು ಎಂದು ಕೇಳಿದಳು. ಅವನು ಉತ್ತರಿಸಲಿಲ್ಲ. ನಿದ್ರೆ ಬಂದಿರಬಹುದೆಂದು ಭಾವಿಸಿ ಅವಳು ಮನೆಯ ಯಜಮಾನಿಯ ಕೋಣೆಗೆ ಹೋದಳು. ಅಲ್ಲೇ ಒಂದು ಗಂಟೆ ಇದ್ದು ಹಿಂದಿರುಗಿದಳು. ಅವನು ಇನ್ನೂ ಮಲಗಿರುವುದನ್ನು ಕಂಡು ಸ್ವಲ್ಪ ಹೊಲಿಗೆ ಕೆಲಸ ಮಾಡಲು ಕುಳಿತಳು. ಮುಂದಿನ ಅರ್ಧಗಂಟೆ ಅವಳು ಹೊಲಿಗೆ ಕೆಲಸದಲ್ಲೂ ತನ್ನ ಆಲೋಚನೆಗಳಲ್ಲೂ ಎಷ್ಟು ತನ್ಮಯಳಾಗಿದ್ದಳೆಂದರೆ ಅವನ ವಿಷಯ ಸಂಪೂರ್ಣವಾಗಿ ಮರೆತಳು. ಆದರೆ ಆಮೇಲೆ ಏನೋ ಅವಳನ್ನು ಹೆದರಿ ಎದ್ದು ನಿಲ್ಲುವಂತೆ ಮಾಡಿತು. ಅವಳ ಮನಸ್ಸಿಗೆ ಮೊದಲು ತಟ್ಟಿದ ಭಾವನೆಯೆಂದರೆ ಕೋಣೆಯಲ್ಲಿ ನೆಲಸಿದ್ದ ಮಸಣಮೌನ. ಹಾಸಿಗೆಯತ್ತ ನೋಡಿದಳು. ಅವನು ಪಕ್ಕ ಬದಲಿಸಿಯೇ ಇರದಿದ್ದುದನ್ನು ಕಂಡಳು. ಅವನ ಬಳಿಗೆ ಹೋದಳು, ಹೊದಿಕೆಯನ್ನು ಹಿಂದಕ್ಕೆ ಸರಿಸಿದಳು – ಕ್ಷಣನೋಟದಲ್ಲೇ ಅವನು ಸತ್ತಿದ್ದನೆಂದು ತಿಳಿದಳು. ಅವನು ತೀರಿಹೋಗಿದ್ದ, ನತದೃಷ್ಟ ಗೊಷ್ಕೋವ್, ಸಿಡಿಲು ಬಡಿದವನಂತೆ. ಯಾಕೆ ಎಂಬುದು ಯಾರಿಗೂ ತಿಳಿಯದು. ನಾನೂ ಸ್ತಂಭೀಭೂತನಾದೆ. ಇನ್ನೂ ಸಮಾಧಾನ ಸ್ಥಿತಿಗೆ ಬರದಾಗಿದ್ದೇನೆ. ಮನುಷ್ಯನೊಬ್ಬ ಹೀಗೆ ಸಾಯುವುದು ಹೇಗೆ ಸಾಧ್ಯ? ದುರದೃಷ್ಟ ವ್ಯಕ್ತಿ, ಈ ಗೊಷ್ಕೋವ್. ಎಂಥ ಬಾಳು ಅವನು ನಡೆಸಿದ್ದು, ಎಂಥ ಬಾಳು! ಅವನ ಪತ್ನಿ ಒಂದೇ ಸಮನಾಗಿ ಅಳುತ್ತಿದ್ದಾಳೆ. ತುಂಬ ಗಾಬರಿಯಾಗಿದ್ದಾಳೆ. ಅವನ ಪುಟ್ಟ ಮಗಳು ಯಾವುದೋ ಮೂಲೆಯಲ್ಲಿ ಮುದುರಿ ಕುಳಿತಿದ್ದಾಳೆ. ಆಮೇಲೆ ಎಷ್ಟು ಗದ್ದಲ ಗಲಾಟೆ ಆಯಿತು. ಶವ ಪರೀಕ್ಷೆ ಮಾಡಲಾಗುವುದೆಂದು ನಾನು ಕೇಳಿದೆ. ನಾನು ಮಾತಿಗೂ ಮೀರಿದ ದುಃಖದಿಂದ ಕೂಡಿದ್ದೇನೆ. ಇಂತಹ ಘಳಿಗೆ ಯಾವಾಗ ಬರುತ್ತದೆಂದು ಮುಂದಾಗಿಯೇ ಹೇಳಲು ನಮ್ಮಲ್ಲಿ ಯಾರಿಗೆ ಸಾಧ್ಯವಿದೆ?... ಇವತ್ತು ಇಹಲೋಕ, ನಾಳೆ ಪರಲೋಕ!

ನಿಮ್ಮ

ಮಕಾರ್ ದೇವುಷ್ಕಿನ್.

ಸೆಪ್ಟೆಂಬರ್ 19

ನನ್ನ ಅತ್ಯಂತ ಪ್ರೀತಿಪಾತ್ರ ವರ್ವಾರ ಅಲೆಕ್ಸೇಯೆವ್ನ,

ನಿಮಗೊಂದು ವಿಷಯವನ್ನು ತಕ್ಷಣವೇ ತಿಳಿಸಲು ಈ ಕಾಗದ ಬರೆಯುತ್ತಿ

ದ್ದೇನೆ. ರತಜ್ಯಾಯೆವ್ ನನಗೆ ಒಬ್ಬ ಲೇಖಕರ ಬಳಿ ಕೆಲಸ ಹುಡುಕಿಕೊಟ್ಟಿದ್ದಾನೆ. ಅವರು ರತಜ್ಯಾಯೆವ್‌ನ ಕೈಲಿ ಒಂದು ದೊಡ್ಡ ಹಸ್ತಪ್ರತಿ ಕೊಟ್ಟಿದ್ದಾರೆ – ಬೇಕಾದಷ್ಟು ಕೆಲಸ, ದೇವರ ದಯದಿಂದ. ಆದರೆ ದುರದೃಷ್ಟವೆಂದರೆ ಅವರ ಕೈಬರಹ ತುಂಬ ಅಸ್ಪಷ್ಟವಾಗಿದೆ. ಕೆಲಸ ಹೇಗೆ ಪ್ರಾರಂಭಿಸಬೇಕೆಂಬುದೇ ತಿಳಿಯದಾಗಿದೆ. ಇದನ್ನು ಬೇಗ ನಕಲು ಮಾಡಿಕೊಡಬೇಕು. ಆದರೆ ಎಂತಹ ವಿಚಿತ್ರ ರೀತಿಯಲ್ಲಿ ಬರೆಯಲಾಗಿದೆಯೆಂದರೆ ಅದರ ಅರ್ಥವೇ ತಿಳಿಯದಾಗಿದೆ. ಇಪ್ಪತ್ತು ಪುಟಕ್ಕೆ ನಲವತ್ತು ಕೊಪೆಕ್ ಎಂದು ಒಪ್ಪಂದ ಮಾಡಿಕೊಂಡಿದ್ದೇವೆ. ನನಗೆ ಸ್ವಲ್ಪ ಹೆಚ್ಚಿನ ಹಣ ಬರಲಿದೆ ಎಂಬುದನ್ನು ತಿಳಿಸಲೋಸುಗ ನಾನು ಈ ಕಾಗದ ಬರೆಯುತ್ತಿದ್ದೇನೆ. ನಮಸ್ಕಾರ, ನನ್ನ ಚಿನ್ನ. ಈಗ ನಾನು ಕೆಲಸ ಪ್ರಾರಂಭಿಸಬೇಕು.

ನಿಮ್ಮ ವಿಶ್ವಾಸೀ ಮಿತ್ರ,<br>
ಮಕಾರ್ ದೇವುಷ್ಕಿನ್.

ಸೆಪ್ಟೆಂಬರ್ 23

ನನ್ನ ಪ್ರಿಯ ಮಿತ್ರ ಮಕಾರ್ ಅಲೆಕ್ಸೇಯೆವಿಚ್,

ನಾನು ಈ ಮೂರು ದಿನಗಳಿಂದ ನಿಮಗೆ ಬರೆದಿಲ್ಲ. ಈ ಮಧ್ಯೆ ನನಗೆ ಬೇಕಾದಷ್ಟು ತೊಂದರೆ, ಚಿಂತೆ, ಉಂಟಾಗಿದೆ.

ಮೊನ್ನಿನ ದಿನ ಬೀಕವ್ ನನ್ನನ್ನು ನೋಡಲು ಬಂದಿದ್ದರು. ಫಿದೋರ ಎಲ್ಲಿಗೋ ಹೋಗಿದ್ದಳು. ಮನೆಯಲ್ಲಿ ನಾನೊಬ್ಬಳೇ ಇದ್ದೆ. ಬಾಗಿಲು ತಟ್ಟಿದ ಶಬ್ದಕ್ಕೆ ನಾನು ಬಾಗಿಲು ತೆರೆದಾಗ ಎಷ್ಟು ಭೀತಳಾದೆನೆಂದರೆ ನನಗೆ ಚಲಿಸಲೂ ಆಗಲಿಲ್ಲ. ನಾನು ತುಂಬ ನಿಸ್ತೇಜಳಾಗಿದ್ದಿರಬೇಕು. ಅವರು ತಮ್ಮ ಎಂದಿನ ದೊಡ್ಡ ನಗೆಯೊಂದಿಗೆ ಮನೆಯ ಒಳಬಂದರು, ಕುರ್ಚಿಯೊಂದನ್ನು ಎಳೆದುಕೊಂಡು ಕುಳಿತರು. ಕೊನೆಗೆ ನಾನು ನನ್ನ ಮನಸ್ಸಮಾಧಾನ ಪಡೆದುಕೊಂಡು ಮೂಲೆಯಲ್ಲಿ ಕೆಲಸಕ್ಕೆ ಕುಳಿತೆ. ಅವರು ನನ್ನನ್ನು ಹೆಚ್ಚು ಹತ್ತಿರದಿಂದ ಕಂಡಂತೆ ಅವರ ಮುಗುಳ್ನಗೆ ಬೇಗನೆಯೇ ಮಾಯವಾಯಿತು. ನಾನು ಇತ್ತೀಚೆಗೆ ಅಷ್ಟು ಬಡಕಲಾಗಿ ಬಿಟ್ಟಿದ್ದೇನೆ. ನನ್ನ ಕೆನ್ನೆ ಗುಳಿ ಬಿದ್ದಿದೆ, ಕಣ್ಣುಗಳು ಆಳ ಹೊಕ್ಕಿವೆ. ನಾನು ಶವದ ಮೇಲೆ ಹೊದಿಸುವ ಶ್ವೇತವಸ್ತ್ರದಷ್ಟು ಬಿಳಿಚಿಕೊಂಡಿದ್ದಿರಬೇಕು. ನಿಜಕ್ಕೂ, ನನ್ನನ್ನು ಒಂದು ವರ್ಷದ ಹಿಂದೆ ಕಂಡ ಜನ ಈಗ ಎಷ್ಟು ಮಾತ್ರವೂ ಗುರುತಿಸರು. ಬೀಕವ್ ಸ್ವಲ್ಪ ಹೊತ್ತು ಅಲ್ಲೇ ಕುಳಿತಿದ್ದು ನನ್ನನ್ನೇ ನೆಟ್ಟ ದೃಷ್ಟಿಯಿಂದ ನೋಡುತ್ತಿದ್ದರು. ಆಮೇಲೆ ಮತ್ತೆ ಅವರ ಮುಖದ ಮೇಲೆ ನಗೆ ಮೂಡಿತು. ಏನೋ ಹೇಳಿದರು. ನಾನು ಏನು ಉತ್ತರ ಕೊಟ್ಟೆನೋ ಜ್ಞಾಪಕವಿಲ್ಲ. ಅವರು

ಮತ್ತೆ ನಕ್ಕರು. ಒಂದು ಇಡೀ ಗಂಟೆ ಇಲ್ಲಿದ್ದರು, ಏನೇನೋ ಮಾತನಾಡಿದರು, ಪ್ರಶ್ನೆಗಳನ್ನು ಕೇಳಿದರು. ಹೋಗಲು ಎದ್ದಾಗ ನನ್ನ ಕೈ ಹಿಡಿದು ಹೇಳಿದರು (ನಾನು ಅವರ ಮಾತುಗಳನ್ನೇ ಸರಿಯಾಗಿ ಉದ್ಧರಿಸುತ್ತಿದ್ದೇನೆ): "ಈ ಮಾತು ನಮ್ಮ ನಮ್ಮಲ್ಲೇ ಇರಲಿ, ವರ್ವಾರ ಅಲೆಕ್ಸೇಯೆವ್ನ. ನಿಮ್ಮ ಸಂಬಂಧಿ ಹಾಗೂ ನನ್ನ ನಿಕಟ ಪರಿಚಯಸ್ಥೆ ಆ ಆನ್ನ ಫ್ಯೋದೊರೊವ್ನ ಇದ್ದಾಳಲ್ಲ, ಅವಳೊಬ್ಬ ನೀಚ ಹೆಂಗಸು." (ಇದಕ್ಕೆ ಅವರು ಇನ್ನೂ ಹೆಚ್ಚು ಅಸಹ್ಯವಾದ ಮಾತು ಸೇರಿ ಸಿದರು.) "ಅವಳು ನಿಮ್ಮ ಚಿಕ್ಕಮ್ಮನ ಮಗಳು ಸಾಷಳನ್ನು ತಪ್ಪು ದಾರಿಗೆಳೆದಳು, ನಿಮ್ಮನ್ನೂ ನಾಶಮಾಡಿದಳು. ನಾನೂ ಒಬ್ಬ ಮುಟ್ಠಾಳನಂತೆ ವರ್ತಿಸಿದೆನೆನ್ನಿ. ಇದು ಗಂಡಸರ ಒಂದು ಸಾಮಾನ್ಯ ದೌರ್ಬಲ್ಯ." ಹಾಗೆಂದು ಅವರು ಗಟ್ಟಿಯಾಗಿ ನಕ್ಕರು. ತಾವು ಭಾಷಣಕಾರರಲ್ಲವೆಂದೂ, ಮುಖ್ಯ ವಿಷಯವನ್ನು, ತಮ್ಮ ವ್ಯವಹಾರಜ್ಞಾನ ಹೇಳಬೇಕೆಂದು ಒತ್ತಾಯಿಸಿದಂಥ ವಿಷಯವನ್ನು, ಹೇಳಿದ್ದಾಯಿ ತೆಂದೂ ಉಳಿದುದನ್ನು ಈಗ ಸ್ಥೂಲವಾಗಿ ಹೇಳಲು ಉದ್ದೇಶಿಸಿರುವುದಾಗಿಯೂ ಅವರು ಹೇಳಿದರು. ಆಮೇಲೆ ಅವರು, ತಾವು ನನ್ನನ್ನು ವಿವಾಹವಾಗಲು ಬಯ ಸಿರುವುದಾಗಿಯೂ, ನನ್ನ ಮಾನವನ್ನು ನನಗೆ ಪುನಃ ದೊರಕುವಂತೆ ಮಾಡಲು ನನ್ನೊಡನೆ ವಿವಾಹವಾಗುವುದನ್ನು ತಮ್ಮ ಕರ್ತವ್ಯವನ್ನಾಗಿ ಭಾವಿಸಿರುವು ದಾಗಿಯೂ, ತಾವು ಶ್ರೀಮಂತರೆಂದೂ, ವಿವಾಹದನಂತರ ನನ್ನನ್ನು ಸ್ತೈಪ್ ಪ್ರದೇಶದಲ್ಲಿರುವ ತಮ್ಮ ಎಸ್ಟೇಟಿಗೆ ಕರೆದೊಯ್ಯುವುದಾಗಿಯೂ ಅಲ್ಲಿ ತಾವು ಮೊಲಗಳನ್ನು ಷಿಕಾರಿ ಮಾಡಲು ಉದ್ದೇಶಿಸಿರುವುದಾಗಿಯೂ, ಹೇಳಿದರು. ತಾವು ಇನ್ನೆಂದೂ ಸೇಂಟ್ ಪೀಟರ್ಸ್‌ಬರ್ಗ್‌ಗೆ ಬರುವುದಿಲ್ಲವೆಂದೂ, ಇದೊಂದು ಹೊಲಸು ಪಟ್ಟಣವೆಂದೂ ಹೇಳಿದರು. ತಮಗೆ ಈ ನಗರದಲ್ಲಿ ಒಬ್ಬ ಅಯೋಗ್ಯ ಭಾಗಿನೇಯನಿರುವುದಾಗಿಯೂ ಅವನಿಗೆ ತಾವು ತಮ್ಮ ಉತ್ತರಾ ಧಿಕಾರವನ್ನು ತಪ್ಪಿಸಲು ಶಪಥ ಮಾಡಿರುವುದಾಗಿಯೂ, ತಮಗೆ ನೇರ ವಾರ ಸುದಾರ ಬೇಕೆಂದೂ ಅದೇ ವಾಸ್ತವವಾಗಿ ಈ ವಿವಾಹ ಪ್ರಸ್ತಾಪವನ್ನು ಮುಂದಿ ಡುವುದಕ್ಕೆ ಮುಖ್ಯ ಕಾರಣವೆಂದೂ, ಅವರು ತಿಳಿಸಿದರು. ನಾನು ತುಂಬ ಬಡತನ ದಲ್ಲಿ ಜೀವಿಸುತ್ತಿರುವುದಾಗಿಯೂ, ಇಂಥ ಗೂಡಿನಲ್ಲಿ ವಾಸಿಸುತ್ತ ನಾನು ರೋಗಿ ಯಂತೆ ಕಾಣುವುದರಲ್ಲಿ ಆಶ್ಚರ್ಯವಿಲ್ಲವೆಂದೂ, ಇನ್ನೊಂದು ತಿಂಗಳು ನಾನು ಇಲ್ಲೇ ಇದ್ದರೆ ನನ್ನ ಮರಣ ಖಂಡಿತವೆಂದೂ ಹೇಳಿದರು. ಸೇಂಟ್ ಪೀಟರ್ಸ್ ಬರ್ಗ್‌ನಲ್ಲಿ ವಸತಿ ಗೃಹಗಳು ಘೋರವಾಗಿರುವುದಾಗಿ ಹೇಳಿ, ನನಗೆ ತುರ್ತಾಗಿ ಏನಾದರೂ ಬೇಕಾಗಿದೆಯೇ ಎಂದು ಕೇಳಿದರು.

ನಾನು ಅವರ ವಿವಾಹ ಪ್ರಸ್ತಾಪದಿಂದ ಎಷ್ಟು ವಿಸ್ಮಿತಳಾದೆನೆಂದರೆ, ಏತಕ್ಕೋ ತಿಳಿಯದು, ಅಳಲು ಶುರುಮಾಡಿದೆ. ನನ್ನ ಕಣ್ಣೀರನ್ನು ಕೃತಜ್ಞತೆಯ ಸೂಚನೆ

ಯುನ್ನಾಗಿ ತಪ್ಪು ತಿಳಿದು ಅವರು, ನಾನೊಬ್ಬ ಒಳ್ಳೆಯ ಸಹೃದಯದ ತಿಳಿವಳಿಕೆಯುಳ್ಳ ಯುವತಿಯೆಂದು ತಾವು ಯಾವತ್ತೂ ಖಚಿತವಾಗಿ ನಂಬಿದ್ದುದಾಗಿಯೂ, ಆದರೂ ನನ್ನ ಬಗೆಗೆ ಸೂಕ್ತ ವಿಚಾರಣೆ ಮಾಡುವವರೆಗೂ ವಿವಾಹದ ಪ್ರಸ್ತಾಪ ಮಾಡುವ ಹೆಜ್ಜೆ ಕೈಕೊಳ್ಳಲು ಅನುಮಾನಿಸುತ್ತಿದ್ದುದಾಗಿಯೂ, ಘೋಷಿಸಿದರು. ಆಮೇಲೆ ಅವರು ನಿಮ್ಮ ಬಗೆಗೆ ಕೆಲವು ಪ್ರಶ್ನೆಗಳನ್ನು ಕೇಳಿದರು. ನೀವೊಬ್ಬ ಗೌರವಾರ್ಹರಾದ ನೀತಿನಿಯಮಗಳ ವ್ಯಕ್ತಿಯೆಂದು ತಾವು ಕೇಳಿದ್ದುದಾಗಿಯೂ ಅವರು ಹೇಳಿದರು. ತಾವು ನಿಮಗೆ ಋಣಿಗಳಾಗಿರಲು ಬಯಸುವುದಿಲ್ಲವೆಂದೂ, ನೀವು ನನಗೆ ಮಾಡಿರುವ ಎಲ್ಲ ಸಹಾಯಗಳಿಗೂ ಪ್ರತಿಫಲವಾಗಿ ಐನೂರು ರೂಬಲ್ಲುಗಳನ್ನು ಕೊಟ್ಟರೆ ಸಾಲುತ್ತದೆಯೇ ಎಂದೂ, ಕೇಳಿದರು. ನೀವು ನನಗೆ ಮಾಡಿರುವ ಸಹಾಯವನ್ನು ಕೇವಲ ಹಣ ನೀಡಿ ಎಂದೂ ತೀರಿಸಲು ಸಾಧ್ಯವಿಲ್ಲ ವೆಂದು ನಾನು ವಿವರಿಸಿದಾಗ, ಅದೆಲ್ಲ ಶುದ್ಧ ಹುಚ್ಚು ಮಾತೆಂದು ಅವರು ತಳ್ಳಿ ಹಾಕಿದರು. ಅವೆಲ್ಲ ಕೇವಲ ಕಾದಂಬರಿಗಳ ಮಾತು ಎಂದವರು ಹೇಳಿದರು. ನಾನು ಇನ್ನೂ ಚಿಕ್ಕವಳಾಗಿರುವುದಾಗಿಯೂ ಬಹುಶಃ ಕವನಗಳನ್ನು ಓದುವ ಹಂಬಲ ನನ್ನಲ್ಲಿ ಇನ್ನೂ ಇರಬಹುದಾಗಿಯೂ ಹೇಳಿದರು. ಕವನಗಳೂ ಕಾದಂ ಬರಿಗಳೂ ಯಾವತ್ತೂ ಎಳೆಯ ಹುಡುಗಿಯರನ್ನು ಹಾಳು ಮಾಡಿವೆ, ಒಟ್ಟಿ ನಲ್ಲಿ ಪುಸ್ತಕಗಳೇ ಜನರ ನೀತಿನಡತೆಗಳನ್ನು ಭ್ರಷ್ಟಗೊಳಿಸುತ್ತವೆ, ಆದ್ದರಿಂದ ತಾವು ಎಲ್ಲ ಪುಸ್ತಕಗಳನ್ನೂ ದ್ವೇಷಿಸುವುದಾಗಿ ಅವರು ತಿಳಿಸಿದರು. "ನನ್ನ ವಯಸ್ಸಿಗೆ ಬಂದಾಗ ನೀವು ಜನರನ್ನು ಸರಿಯಾಗಿ ತೀರ್ಮಾನಿಸಬಲ್ಲವರಾಗುತ್ತೀರ" ಎಂದವರು ಹೇಳಿದರು. ತಮ್ಮ ವಿವಾಹ ಪ್ರಸ್ತಾಪವನ್ನು ಜಾಗರೂಕತೆಯಿಂದ ಪರಿಗಣಿಸಬೇಕೆಂದೂ, ಅವಸರದಲ್ಲಿ ನಿರ್ಧಾರ ಕೈಕೊಂಡರೆ ದುರದೃಷ್ಟವಾದೀ ತೆಂದೂ ಅವರು ಹೇಳಿದರು. ಅವಸರ, ಅವಿಚಾರಕತೆ ಇವು ಯಾವತ್ತೂ ಎಳೆಯರ ನಾಶಕ್ಕೆ ಕಾರಣವಾಗಿವೆ. ನನ್ನ ಉತ್ತರ ಅನುಕೂಲವಾಗಿರಲೆಂದೇ ತಾವು ಕಾತುರರಾಗಿ ರುವುದಾಗಿಯೂ ಅವರು ತಿಳಿಸಿದರು. ಇಲ್ಲದಿದ್ದರೆ ತಾವು ಮಾಸ್ಕೋದಲ್ಲಿರುವ ವರ್ತಕರೊಬ್ಬರ ಮಗಳನ್ನು ವಿವಾಹವಾಗುವ ಒತ್ತಾಯಕ್ಕೊಳಗಾಗುವರು, ಏಕೆಂ ದರೆ, ಆ ತಮ್ಮ ಠಕ್ಕ ಭಾಗಿನೇಯನಿಗೆ ಉತ್ತರಾಧಿಕಾರ ತಪ್ಪಿಸಬೇಕೆಂದು ತಾವು ಪಣ ತೊಟ್ಟಿದ್ದಾರೆ, ಎಂದೂ ಹೇಳಿದರು. ನನ್ನ ಪ್ರತಿಭಟನೆಯನ್ನೂ ಲೆಕ್ಕಿಸದೆ ಅವರು ನನ್ನ ಕಸೂತಿಯ ಚೌಕಟ್ಟಿನ ಮೇಲೆ ಐನೂರು ರೂಬಲ್ಲುಗಳನ್ನು ಇಟ್ಟು ಹೋದರು – ಮಿಠಾಯಿ ಕೊಳ್ಳಲೆಂದು, ಅವರ ಪ್ರಕಾರ. ಗ್ರಾಮಾಂತರ ಪ್ರದೇಶ ದಲ್ಲಿ ನಾನು ಬನ್ನಿನಂತೆ ಗುಂಡಗಾಗುವೆನೆಂದೂ, ಭೋಗಜೀವನ ನಡೆಸಲಿರು ವೆನೆಂದೂ ಅವರು ಹೇಳಿದರು. ತಾವು ಪ್ರಸ್ತುತದಲ್ಲಿ ಕೈ ತುಂಬ ಕೆಲಸ ಹೊಂದಿ ರುವುದಾಗಿಯೂ ಇಡೀ ದಿನ ಸ್ಥಳದಿಂದ ಸ್ಥಳಕ್ಕೆ ಓಡಾಡುತ್ತಲೇ ಇರುವರೆಂದೂ

ನನ್ನನ್ನು ಒಂದು ನಿಮಿಷ ನೋಡಿಹೋಗಲಷ್ಟೆ ನಮ್ಮ ಮನೆಗೆ ಬಂದಿದ್ದುದಾಗಿಯೂ ಹೇಳಿದರು. ಹಾಗೆಂದು ಅವರು ಹೊರಟು ಹೋದರು. ನನ್ನ ಪ್ರಿಯ ಮಿತ್ರರೇ, ನಾನು ಇವೆಲ್ಲದರ ಬಗೆಗೂ ತುಂಬ ಯೋಚನೆ ಮಾಡಿದೆ, ತುಂಬ ಸಂಕಟಪಟ್ಟೆ. ಕೊನೆಗೆ ಒಂದು ನಿರ್ಧಾರಕ್ಕೆ ಬಂದಿದ್ದೇನೆ. ನಾನು ಅವರನ್ನು ಮದುವೆಯಾಗುವೆನು. ನಾನು ಅವರ ವಿವಾಹಪ್ರಸ್ತಾಪಕ್ಕೆ ಒಪ್ಪಲೇ ಬೇಕು. ನನ್ನನ್ನು ಈಗಿರುವ ಈ ಅಗೌರವದಿಂದ ಪಾರುಮಾಡಲು ನನ್ನ ಒಳ್ಳೆಯ ಹೆಸರನ್ನು ನನಗೆ ಪುನಃ ದೊರಕಿಸಿಕೊಡಲು, ಈ ಬಡತನ ಈ ಸಂಕಷ್ಟ ಈ ದುರ್ದೈವಗಳನ್ನು ತಪ್ಪಿಸಲು, ಯಾರಿಗಾದರೂ ಸಾಧ್ಯವಿದ್ದರೆ, ಅದು ಈ ವ್ಯಕ್ತಿಗೇ. ನಾನು ಭವಿಷ್ಯತ್ತಿನಲ್ಲಿ ಇನ್ನೇನು ನಿರೀಕ್ಷಿಸಲು ಸಾಧ್ಯ; ವಿಧಿಯನ್ನು ನಾನು ಇನ್ನೇನು ಕೇಳಲು ಸಾಧ್ಯ? ಸುಖಸಂತೋಷಗಳು ಬಂದಾಗ ಅದರಿಂದ ತಪ್ಪಿಸಿಕೊಳ್ಳಬಾರದು, ಈಗ ನನಗೆ ಬಂದಿರುವುದು ಸುಖಸಂತೋಷವಲ್ಲದಿದ್ದರೆ, ಮತ್ತೇನು ಸುಖಸಂತೋಷ ಎಂಬುದು, ಎಂದು ಫಿದೋರ ಹೇಳುತ್ತಾಳೆ. ನನ್ನ ಮಟ್ಟಿಗೆ ಹೇಳುವುದಾದರೆ, ನನಗೆ ಬೇರಾವ ದಾರಿಯೂ ಕಾಣುತ್ತಿಲ್ಲ, ನನ್ನ ಮಿತ್ರ. ನಾನು ಎಷ್ಟು ಕಷ್ಟಪಟ್ಟು ಕೆಲಸ ಮಾಡುತ್ತಿದ್ದೇನೆಂದರೆ ನನ್ನ ಆರೋಗ್ಯವೆಲ್ಲ ನಾಶವಾಗಿದೆ. ಇದೇ ರೀತಿ ಇಡೀ ಕಾಲ ಕೆಲಸ ಮಾಡಿಕೊಂಡು ಹೋಗಲು ಸಾಧ್ಯವಿಲ್ಲ. ಹೋಗಲಿ, ಬೇರೆ ಯಾರಾದರೊಬ್ಬರ ಮನೆಯಲ್ಲಿ ದಾದಿಯಾಗಿಯೋ ಸೇವಕಿಯಾಗಿಯೋ ಕೆಲಸಕ್ಕೆ ಸೇರಿಕೊಳ್ಳಲೆ ಅಂದರೆ ಒಂಟಿತನದಿಂದ ಕ್ಷಯಿಸಿಹೋಗುತ್ತೇನೆ, ಅಲ್ಲದೆ ಯಾರೊಂದಿಗೂ ಹೊಂದಿಕೊಂಡು ಹೋಗಲಾರೆ. ಸ್ವಭಾವತಃ ನಾನೊಬ್ಬ ರೋಗಿ, ಯಾವಾಗಲೂ ಯಾರ ಮೇಲಾದರೂ ಹೊರೆಯಾಗಿಯೇ ಇರಬೇಕಾಗುವುದು. ನಾನು ಹೋಗುತ್ತಿರುವುದು ಸುಖದ ಸ್ವರ್ಗವೇನಲ್ಲ ಎಂಬುದನ್ನು ನಾನು ಬಲ್ಲೆ. ಆದರೆ ನಾನೇನು ಮಾಡಲಿ? ಹೇಳಿ, ನೀವೇ, ನಾನೇನು ಮಾಡಲಿ? ನನ್ನ ಮುಂದೆ ಬೇರೆ ಯಾವ ಮಾರ್ಗವಿದೆ?

ನಾನೇನೂ ನಿಮ್ಮನ್ನು ನಿಜಕ್ಕೂ ಸಲಹೆ ಕೇಳುತ್ತಿಲ್ಲ. ಸುಮ್ಮನೇ ನಾನೇ ಯೋಚನೆ ಮಾಡಲಷ್ಟೆ ಬಯಸಿ ಹೀಗೆ ಬರೆದಿದ್ದೇನೆ. ನೀವು ಮೇಲೆ ಓದಿರುವ ನನ್ನ ತೀರ್ಮಾನ ಬದಲಿಸಲಾಗದಂತಹುದು. ಉತ್ತರ ಹೇಳಬೇಕೆಂದು ಒತ್ತಾಯಿಸುತ್ತಿರುವ ಬೀಕವ್‌ರಿಗೆ ಅದನ್ನು ಹೇಳಿಬಿಡುತ್ತೇನೆ. ತಮ್ಮ ವ್ಯವಹಾರಗಳನ್ನು ಹೆಚ್ಚು ಕಾಲ ತಡ ಮಾಡಲು ಸಾಧ್ಯವಿಲ್ಲವೆಂದೂ, ಕ್ಷುಲ್ಲಕ ಕಾರಣಗಳಿಗಾಗಿ ವಿವಾಹವನ್ನು ಮುಂದೂಡಿಕೊಂಡು ಹೋಗಲು ಸಾಧ್ಯವಿಲ್ಲವೆಂದೂ ಅವರು ಹೇಳಿದರು. ನಾನು ಸುಖವಾಗಿ ಇರಲಿರುವೆನೇ ಅಥವಾ ಇಲ್ಲವೇ, ದೇವರಿಗೇ ಗೊತ್ತು. ಏನೇ ಆಗಲಿ ನನ್ನ ಅದೃಷ್ಟವನ್ನು ಆ ಭಗವಂತನ ನಿಗೂಢ ಸಂಕಲ್ಪಕ್ಕೆ ಒಪ್ಪಿಸಿಬಿಡುವೆನು. ಬೀಕವ್ ದಯಾಶೀಲ ವ್ಯಕ್ತಿ ಎಂದು ಹೇಳಲಾಗುತ್ತಿದೆ. ಅವರು

ನನ್ನನ್ನು ಗೌರವಿಸುವರು, ಬಹುಶಃ ನಾನೂ ಅವರನ್ನು ಗೌರವಿಸುವುದನ್ನು ಕಲಿಯುವೆನು. ಇಂತಹ ವಿವಾಹದಿಂದ ನಾನು ಇನ್ನೇನು ಹೆಚ್ಚು ನಿರೀಕ್ಷಿಸಲು ಸಾಧ್ಯ?

ನಾನು ಹೇಳಬೇಕಾದುದನ್ನೆಲ್ಲ ಹೇಳಿದ್ದೇನೆ, ಮಕಾರ್ ಅಲೆಕ್ಸೇಯೆವಿಚ್. ನೀವು ಅರ್ಥಮಾಡಿಕೊಳ್ಳುವಿರೆಂಬ ಖಾತರಿ ನನಗಿದೆ. ನನ್ನ ಮನಸ್ಸನ್ನು ಬದಲಿಸುವಂತೆ ಒತ್ತಾಯಿಸಲು ಯತ್ನಿಸಬೇಡಿ. ಅದರಲ್ಲಿ ನೀವು ಯಶಸ್ವಿಯಾಗುವುದಿಲ್ಲ! ಈ ಹೆಜ್ಜೆಯನ್ನು ಕೈಕೊಳ್ಳಲು ನನ್ನನ್ನು ಒತ್ತಾಯಿಸಿದಂಥ ಎಲ್ಲವನ್ನೂ ಒಂದು ಘಳಿಗೆ ನಿಮ್ಮ ಹೃದಯದಲ್ಲೇ ತೂಕಮಾಡಿ ನೋಡಿ. ಮೊದಲು ನಾನು ತುಂಬ ಗಾಬರಿಗೊಂಡಿದ್ದೆ, ಆದರೆ ಈಗ ಹೆಚ್ಚು ಶಾಂತಳಾಗಿದ್ದೇನೆ. ನನಗೆ ಮುಂದೆ ಏನು ಕಾದಿದೆಯೋ ನಾನರಿಯೆ. ಭವಿಷ್ಯತ್ತು ಅಸ್ಪಷ್ಟವಾಗಿದೆ. ಏನೇ ಆಗಲಿ, ದೇವರ ಇಚ್ಛೆ ಇದ್ದಂತೆ ಆಗುವುದು!

ಬೀಕವ್ ಈಗಷ್ಟೆ ಬಂದರು. ನಾನು ನಿಮಗೆ ಇನ್ನೂ ಎಷ್ಟೋ ಹೇಳಬೇಕಾಗಿದ್ದರೂ, ಈ ಕಾಗದವನ್ನು ಇಲ್ಲಿಗೇ ಮುಕ್ತಾಯ ಮಾಡುತ್ತೇನೆ.

ವ. ದೊ.

ಸೆಪ್ಟೆಂಬರ್ 23

ನನ್ನ ಅತ್ಯಂತ ಪ್ರಿಯರಾದ ವರ್ವಾರ ಅಲೆಕ್ಸೇಯೆವ್ನ,

ನಾನು ನಿಮ್ಮ ಪತ್ರಕ್ಕೆ ತಕ್ಷಣವೇ ಉತ್ತರ ಬರೆಯುತ್ತಿದ್ದೇನೆ, ನನ್ನ ಚಿನ್ನ. ನಾನು ಸಂಪೂರ್ಣವಾಗಿ ದಿಗ್ಭ್ರಾಂತಿಗೊಂಡಿದ್ದೇನೆ. ಎಲ್ಲೋ ಏನೋ ತಪ್ಪು ನಡೆದಿದೆ. ನಿನ್ನೆ, ನಾವು ಗೊರ್ಷ್ಕೋವ್‌ನನ್ನು ಸಮಾಧಿ ಮಾಡಿದೆವು. ಹೌದು, ಬೀಕವ್ ತುಂಬ ಉದಾತ್ತವಾಗಿಯೇ ವರ್ತಿಸಿದ್ದಾರೆಂದು ಹೇಳಬೇಕು. ಆದರೆ ನೀವು ನಿಜಕ್ಕೂ ಒಪ್ಪಿಬಿಟ್ಟಿರಾ, ನನ್ನ ಪ್ರಿಯೆ? ಎಲ್ಲವೂ ದೇವರ ಕೈಯಲ್ಲಿದೆ ಎನ್ನಿ. ಅದು ನಿಸ್ಸಂದೇಹವಾಗಿಯೂ ನಿಜ. ಇದೂ ದೇವರ ಕೈಯಲ್ಲೇ ಇರಬೇಕು. ನಮ್ಮನ್ನೆಲ್ಲ ನಿರ್ಮಿಸಿರುವ ಆ ಭಗವಂತನ ರೀತಿನೀತಿಗಳು ಪವಿತ್ರವಾದವುಗಳಾದರೂ, ವಿಧಿಯ ರೀತಿನೀತಿಗಳಂತೆಯೇ ತಿಳಿಯಲಾಗದಂತಹವು! ಅವನ್ನು ಪ್ರಶ್ನಿಸುವ ಹಾಗೆಯೇ ಇಲ್ಲ! ಫಿದೋರಳೂ ಅದನ್ನು ಒಪ್ಪಿದ್ದಾಳೆ. ಈಗ ನೀವು ಸಂತೃಪ್ತಿಯಿಂದ ಸುಖಸಂತೋಷಗಳಿಂದ ಬಾಳಲಿರುವಿರಿ, ನನ್ನ ಪುಟ್ಟ ಮುದ್ದುಮಣಿ, ನನ್ನ ಪುಟ್ಟ ಸುಂದರ ದೇವತೆ. ಆದರೆ ಇಷ್ಟು ಬೇಗ ಏಕೆ, ವಾರೆಂಕ? ಆಹ್, ಹೌದು. ಮಿ. ಬೀಕವ್‌ರ ವ್ಯವಹಾರಗಳು ಇವೆ ಎಂದಿರಲ್ಲವೇ. ಎಲ್ಲರಿಗೂ ಅವರವರವೇ ವ್ಯವಹಾರಗಳಿರುತ್ತವೆ. ಹಾಗಾಗಿ ಅವರಿಗೂ ಕೆಲಸ ಕಾರ್ಯಗಳಿದ್ದೇ ಇರುತ್ತವೆ... ಅವರು ನಿಮ್ಮ ಮನೆಯಿಂದ ಹೋಗುತ್ತಿದ್ದಾಗ ನೋಡಿದೆ. ಆಕರ್ಷಕ ವ್ಯಕ್ತಿ. ಅದಕ್ಕೂ ಹೆಚ್ಚೇ ಎಂದು ಹೇಳಬಹುದು. ಆದರೆ ಎಲ್ಲೋ ಏನೋ ತಪ್ಪಿದೆ.

ಮುಖ್ಯ ವಿಷಯ, ಅವರು ಆಕರ್ಷಕ ವ್ಯಕ್ತಿ ಎಂಬುದಲ್ಲ. ನಾನು ಸಂಪೂರ್ಣವಾಗಿ ಕ್ಷೋಭೆಗೊಂಡಿದ್ದೇನೆ. ಈಗ ನಾವು ಪರಸ್ಪರರಿಗೆ ಹೇಗೆ ಕಾಗದ ಬರೆಯುವುದು? ನಾನು ಒಬ್ಬನೇ ಹೇಗೆ ಬಾಳುವುದು? ನೀವು ಕೊಟ್ಟ ಕಾರಣಗಳನ್ನೆಲ್ಲ ನಾನು ನೀವು ಹೇಳಿದಂತೆಯೇ ನನ್ನ ಹೃದಯದಲ್ಲಿ ತೂಗಿ ನೋಡುತ್ತಿದ್ದೇನೆ. ನಾನು ಇಲ್ಲಿ ಸುಮ್ಮನೆ ಕುಳಿತು ಇಡೀ ಕಾಲ ತೂಗಿ ನೋಡುತ್ತಲೇ ಇದ್ದೀನಿ. ನಾನು ಆಗಲೇ ಆ ಹಸ್ತಪ್ರತಿಯ ಇಪ್ಪತ್ತನೆಯ ಪುಟವನ್ನು ನಕಲು ಮಾಡುತ್ತಿದ್ದೆ, ಆಗ ನಿಮ್ಮ ಕಾಗದ ಬಂದಿತು. ನೀವು ಹೋಗುತ್ತಿದ್ದೀರಾ, ನನ್ನ ಚಿನ್ನ? ಅಂದ ಮೇಲೆ ನಾನಾ ರೀತಿಯ ಸಾಮಾನುಗಳನ್ನು ಕೊಳ್ಳಬೇಕು; ಫ್ರಾಕುಗಳು, ಪಾದರಕ್ಷೆಗಳು, ಇತ್ಯಾದಿ. ಅಂದ ಹಾಗೇ, ಗೊರೋಹೊವಯ ಬೀದಿಯಲ್ಲಿ ನನಗೆ ತಿಳಿದ ಒಂದು ಅಂಗಡಿ ಇದೆ. ಅದರ ವಿಷಯ ನಾನು ನಿಮಗಾಗಲೇ ಹೇಳಿದ್ದೇನೆ. ಜ್ಞಾಪಕವಿದೆಯೇ? ಆದರೆ ನೀವು ಈಗಲೇ ಹೇಗೆ ಹೊರಟುಹೋಗುವಿರಿ? ಉಹೂಂ, ಈಗ ಹೋಗಲು ಸಾಧ್ಯವಿಲ್ಲ, ಖಂಡಿತ ಸಾಧ್ಯವಿಲ್ಲ! ಎಷ್ಟೊಂದು ಸಾಮಾನುಗಳನ್ನು ಕೊಳ್ಳಬೇಕಾದ್ದಿದೆ, ಒಂದು ಬಂಡಿಯನ್ನೂ ಕೊಳ್ಳಬೇಕಾಗಿದೆ! ಹವಾಗುಣ ಕೆಟ್ಟದಾಗಿದೆ. ನೋಡಿ, ಹೇಗೆ ಮಳೆ ಸುರಿಯುತ್ತಿದೆ, ಬಕೆಟ್ ಬಕೆಟ್ಟುಗಳಲ್ಲಿ ಸುರಿಯುತ್ತಿದೆ. ಅದೂ ಎಷ್ಟು ತೇವದಿಂದ ಕೂಡಿದ ಮಳೆ! ಅಲ್ಲದೆ... ನಿಮಗೆ ಚಳಿಯಾಗುತ್ತೆ, ನನ್ನ ದೇವತೆ. ನಿಮ್ಮ ಹೃದಯಕ್ಕೂ ಚಳಿಯಾಗುತ್ತೆ. ಅಪರಿಚಿತರೊಬ್ಬರೊಂದಿಗೆ ಹೊರಟು ಹೋಗುವುದಕ್ಕೆ ನಿಮಗೆ ಹೆದರಿಕೆ ಇಲ್ಲವೇ? ಇನ್ನು ನನಗೆ ಏನು ಉಳಿದಿರುತ್ತದೆ? ನೀವು ತುಂಬ ಅದೃಷ್ಟಶಾಲಿ. ಭಾರಿ ಸುಖ ನಿಮಗಾಗಿ ಕಾದಿದೆ ಎಂದು ಫಿದೋರ ಹೇಳುತ್ತಾಳೆ. ಆದರೆ ಅವಳೊಬ್ಬ ಕೆಟ್ಟ ಹೆಂಗಸು. ನನ್ನನ್ನು ಹಾಳು ಮಾಡುವುದೇ ಅವಳೆಲ್ಲ ಯೋಚನೆ. ನೀವು ವೆಸ್ಪರ್ಸ್‌ಗೆ ಹೋಗಲಿದ್ದೀರಾ? ನಾನೂ ನಿಮ್ಮನ್ನು ಕಾಣಲು ಅಲ್ಲಿಗೆ ಬರುತ್ತೇನೆ. ನೀವೊಬ್ಬ ತಿಳಿವಳಿಕೆಯುಳ್ಳ, ಸದ್ಗುಣೆಯಾದ, ಪ್ರೀತಿ ಸ್ವಭಾವದ ಯುವತಿಯೆಂಬುದು ನಿಜ, ನನ್ನ ಮುದ್ದು, ತುಂಬ ನಿಜ. ಆದರೆ ಅವರು ಆ ವರ್ತಕನ ಮಗಳನ್ನು ಮದುವೆಯಾಗುವುದೇ ಉತ್ತಮವಾಗಿದ್ದಿತು. ನಿಮಗೆ ಹಾಗೆ ಅನಿಸುವುದಿಲ್ಲವೇ, ಪ್ರಿಯೆ? ಆ ವರ್ತಕನ ಮಗಳನ್ನು ಮದುವೆಯಾಗುವುದೇ ಉತ್ತಮವಲ್ಲವೇ? ಕತ್ತಲಾದ ಮೇಲೆ ನಿಮ್ಮ ಜೊತೆ ಒಂದು ಗಂಟೆ ಇದ್ದು ಬರಲು ನಿಮ್ಮ ಮನೆಗೆ ಬರುತ್ತೇನೆ. ಈಗ ಬೇಗ ಕತ್ತಲಾಗುತ್ತೆ, ನಾನು ಖಂಡಿತ ಬರುತ್ತೇನೆ. ಮಬ್ಬು ಕವಿದ ಕೂಡಲೇ ಖಂಡಿತ ಬರುತ್ತೇನೆ. ನೀವು ಈಗ ಬೀಕವ್‌ರನ್ನು ನಿರೀಕ್ಷಿಸುತ್ತಿದ್ದೀರಿ. ಅವರು ಹೋದ ಮೇಲೆ ನಾನು ಬರುತ್ತೇನೆ. ನನಗಾಗಿ ಕಾದಿರಿ, ನನ್ನ ಮುದ್ದು, ನಾನು ಬರಲಿದ್ದೇನೆ.

ಮಕಾರ್ ದೇವುಷ್ಕಿನ್.

ಸೆಪ್ಟೆಂಬರ್ 27

ನನ್ನ ಪ್ರಿಯ ಮಿತ್ರ ಮಕಾರ್ ಅಲೆಕ್ಸೇಯೆವಿಚ್,

ನಾನು ಹಾಲೆಂಡಿನ ನಾರುಬಟ್ಟೆಯ ಮೂರು ಡಜನ್ ಒಳಕುಪ್ಪಸಗಳನ್ನು ಹೊಂದಿರಬೇಕೆಂದು ಮಿ. ಬೀಕವ್ ಹೇಳುತ್ತಾರೆ. ಎರಡು ಡಜನ್ ಒಳಕುಪ್ಪಸಗಳನ್ನು ಹೊಲಿಯಬಲ್ಲಂಥ ದರ್ಜಿಯವಳನ್ನು ನಾನೀಗ ಹುಡುಕಬೇಕಾಗಿದೆ. ಸಮಯ ಇರುವುದು ತೀರ ಸ್ವಲ್ಪ. ಮಿ. ಬೀಕವ್‌ರಿಗೆ ಕೋಪ. ಈ ಬಟ್ಟೆಬರೆಯ ಸಿದ್ಧತೆಯ ಕೆಲಸವೇ ತುಂಬ ಸಮಯ ತೆಗೆದುಕೊಳ್ಳುತ್ತದೆ ಎಂದು ಅವರು ಹೇಳುತ್ತಾರೆ. ನಮ್ಮ ಮದುವೆ ಇನ್ನು ಐದು ದಿನಗಳಲ್ಲಿ ಆಗಲಿದೆ. ಅದಾದ ಮಾರನೆಯ ದಿನವೇ ನಾವು ಹೊರಡಬೇಕು. ಮಿ. ಬೀಕವ್ ಅವಸರದಲ್ಲಿದ್ದಾರೆ. ಇಂತಹ ಸಣ್ಣ ವಿಷಯಗಳಿಗೆ ಇಷ್ಟೊಂದು ಸಮಯ ವ್ಯರ್ಥಮಾಡುವುದು ನಾಚಿಕೆಗೇಡು ಅನ್ನುತ್ತಾರೆ. ನಾನು ಎಷ್ಟು ಕೆಲಸ ಮಾಡುತ್ತಿದ್ದೇನೆಂದರೆ ನನ್ನಲ್ಲಿ ನಿಂತುಕೊಳ್ಳಲೂ ಸಾಕಷ್ಟು ಶಕ್ತಿ ಇಲ್ಲದಂತಾಗಿದೆ. ಮಾಡಬೇಕಾದ್ದು ಇನ್ನೂ ಎಷ್ಟೊಂದಿದೆ. ಸತ್ಯವಾಗಿಯೂ, ಇದೆಲ್ಲ ಇಲ್ಲದೇ ಇದ್ದರೇ ಚೆನ್ನಾಗಿರುತ್ತಿತ್ತು ಅನಿಸುತ್ತೆ. ಮತ್ತೊಂದು ವಿಷಯ: ನಮ್ಮ ಬಳಿ ಸಾಕಷ್ಟು ರೇಷ್ಮೆಯ ದಾರದ ಜರತಾರಿ ಇಲ್ಲ. ಇನ್ನಷ್ಟು ಕೊಳ್ಳಬೇಕು. ಏಕೆಂದರೆ ತಮ್ಮ ಪತ್ನಿ ಮುಸುರೆ ತೊಳೆಯುವ ಕೆಲಸಗಾರಳಂತೆ ಕಾಣುವಂತಿರಬಾರದೆಂದು ಮಿ. ಬೀಕವ್ ಹೇಳುತ್ತಾರೆ. ಅವರು ಹೇಳುವಂತೆ, ನಾನು ಸ್ಥಳೀಯ ಜಮೀನುದಾರರ ಪತ್ನಿಯರ ಮೂಗು ಮುರಿಯುವಂತಿರಬೇಕಂತೆ. ನೀವು ಗೊರೋಹೊವಯದಲ್ಲಿನ ಮದಾಮ್ ಷಿಫಾನ್‌ರ ಬಳಿಗೆ ಹೋಗಿ ಕೆಲವು ಹೊಲಿಗೆಯವರನ್ನು ನಮ್ಮಲ್ಲಿಗೆ ಕಳುಹಿಸಿಕೊಡಬೇಕೆಂದೂ, ಆಕೆಯೇ ಕೃಪೆಯಿಟ್ಟು ಬಂದರೆ ಒಳಿತೆಂದೂ, ಹೇಳಬಲ್ಲಿರಾ? ಇವತ್ತು ನನಗೆ ಮೈ ಸ್ವಸ್ಥವಿಲ್ಲ. ನಮ್ಮ ಈ ಹೊಸ ಮನೆಯಲ್ಲಿ ಚಳಿ ಜಾಸ್ತಿ. ಅಲ್ಲದೆ ಎಲ್ಲ ಅಸ್ತವ್ಯಸ್ತವಾಗಿದೆ. ಮಿ. ಬೀಕವ್‌ರ ಚಿಕ್ಕಮ್ಮ ಎಷ್ಟು ವಯಸ್ಸಾದವರೆಂದರೆ, ಎಷ್ಟು ಕಾಯಿಲೆ ಮಲಗಿರುವರೆಂದರೆ, ನಾವು ಹೊರಡುವ ಮುನ್ನವೇ ಅವರು ತೀರಿಹೋಗಬಹುದೆಂದೇ ನನ್ನ ಅಂಜಿಕೆ. ಆದರೆ ಪರವಾಗಿಲ್ಲ, ಅವರು ಚೇತರಿಸಿಕೊಳ್ಳುತ್ತಾರೆ, ಎಂದು ಮಿ. ಬೀಕವ್ ಹೇಳುತ್ತಾರೆ. ಎಲ್ಲವೂ ಎಷ್ಟು ಅವ್ಯವಸ್ಥೆಯಿಂದ ಕೂಡಿದೆ. ಮಿ. ಬೀಕವ್‌ರು ಇಲ್ಲಿ ವಾಸಿಸುತ್ತಿಲ್ಲ. ಸೇವಕರು ಘಳಿಗೆ ಘಳಿಗೆಗೆ ಓಡಿ ಹೋಗುತ್ತಿರುತ್ತಾರೆ, ದೇವರಿಗೇ ಗೊತ್ತು ಎಲ್ಲಿಗೋ. ಕೆಲವು ವೇಳೆ ಫಿದೋರಳೇ ಎಲ್ಲ ಕೆಲಸ ಮಾಡಬೇಕಾಗುತ್ತೆ. ಈ ಮನೆಯ ವ್ಯವಸ್ಥೆಯನ್ನೆಲ್ಲ ನೋಡಿಕೊಳ್ಳಬೇಕಾದ ಮಿ. ಬೀಕವ್‌ರ ಅಂಗಸೇವಕನು ಎರಡು ದಿನಗಳಿಂದ ಪತ್ತೆ ಇಲ್ಲ. ಮಿ. ಬೀಕವ್ ಪ್ರತಿದಿನ ಬೆಳಿಗ್ಗೆ ಇಲ್ಲಿಗೆ ಬರುತ್ತಾರೆ, ಯಾವಾಗಲೂ ಸಿಡಿಮಿಡಿಗುಟ್ಟುತ್ತಿರುತ್ತಾರೆ. ನಿನ್ನೆ ಅವರು ಪಾರುಪತ್ಯಗಾರನನ್ನು ಚೆನ್ನಾಗಿ ಥಳಿಸಿದರು.

ಆದರಿಂದಾಗಿ ಪೊಲೀಸರ ಜೊತೆ ಅಹಿತ ಚರ್ಚೆ ನಡೆಸಬೇಕಾಯಿತು. ನನ್ನ ಕಾಗದ ಗಳನ್ನು ನಿಮಗೆ ತಂದುಕೊಡಲು ಯಾರೂ ಇಲ್ಲ. ಆದ್ದರಿಂದ ಇದನ್ನು ಅಂಚೆ ಯಲ್ಲಿ ಹಾಕುತ್ತಿದ್ದೇನೆ. ಓಹ್, ನಾನು ಅತ್ಯಂತ ಮುಖ್ಯ ವಿಷಯವನ್ನೇ ಮರೆತು ಬಿಟ್ಟಿದ್ದೆ. ರೇಷ್ಮೆದಾರದ ಜರತಾರಿಯನ್ನು ನಿನ್ನೆ ತೋರಿಸಿದ ಸ್ಯಾಂಪಲ್‌ಗೆ ಅನು ಗುಣವಾಗಿ ಬದಲಿಸಬೇಕೆಂದು ಮದಾಮ್ ಷಿಫಾನ್‌ರಿಗೆ ಹೇಳಿ. ಅವರೇ ಬಂದು ನನಗೆ ಹೊಸ ನಮೂನೆಗಳನ್ನು ತೋರಿಸುವಂತೆ ಹೇಳಿ. ನಾನು ಕಾನ್‌ಜೂ* ಬಗೆಗೂ ನನ್ನ ಮನಸ್ಸು ಬದಲಿಸಿದ್ದೇನೆಂದೂ ಅವರಿಗೆ ಹೇಳಿ. ಅದನ್ನು ಕ್ರೋಷೆ ಕೆಲಸದಲ್ಲಿ ಮಾಡಬೇಕು. ಕರವಸ್ತ್ರಗಳ ಮೇಲೆ ನನ್ನ ಹೆಸರಿನ ಮೊದಲಕ್ಷರ ಗಳನ್ನು ಸಾಟಿನ್ ಹೊಲಿಗೆಯಲ್ಲಲ್ಲ ಆದರೆ ಟಾಂಬೂರ್‌ನಲ್ಲಿ** ಹಾಕಬೇಕೆಂದು ಹೇಳಿ. ಟಾಂಬೂರ್ ಅಂತ ಹೇಳಬೇಕು. ಜ್ಞಾಪಕವಿರುತ್ತದೆಯೇ? ಇನ್ನೊಂದು ವಿಷಯವನ್ನೂ ಮರೆತಿದ್ದೆ: ತುಪ್ಪುಳದ ಮೇಲಂಗಿಯ ಮೇಲಿನ ಚಿಕ್ಕ ಮಡಿಕೆಗಳು ಸ್ವಲ್ಪ ಎತ್ತಿರಬೇಕು, ಮೂಲೆಪಟ್ಟಿಗಳನ್ನು ಹೆಣೆದು ಅಂಚುಕಟ್ಟಬೇಕು ಮತ್ತು ಕಾಲರಿನ ಅಂಚಿಗೆ ಲೇಸ್ ಅಥವಾ ಅಗಲವಾದ ನಿರಿಪಟ್ಟಿ ಹಾಕಿ ಅಲಂಕರಿಸಬೇಕು, ಅಂತಲೂ ದಯವಿಟ್ಟು ಅವರಿಗೆ ತಿಳಿಸಿ. ಮರೆಯುವುದಿಲ್ಲ ತಾನೆ?

ನಿಮ್ಮ,
ವ. ದೊ.

<u>ಮರೆತದ್ದು</u>: ನಿಮಗೆ ಈ ಕೆಲಸಗಳನ್ನು ಹಚ್ಚಿ ತೊಂದರೆ ಕೊಡುವುದಕ್ಕೆ ನನಗೆ ನಾಚಿಕೆಯಾಗುತ್ತದೆ. ಮೊನ್ನೆಯೂ ಸಹ ನೀವು ನನಗಾಗಿ ಇಡೀ ಬೆಳಿಗ್ಗೆ ಸುತ್ತಾ ಡಿದಿರಿ. ಆದರೆ ನಾನೇನೂ ಮಾಡಲಾರೆ, ನಿಜಕ್ಕೂ! ಇಲ್ಲಿ ಸುವ್ಯವಸ್ಥೆಯು ತೋರಿ ಕೆಯೂ ಇಲ್ಲ. ನಾನು ಬೇರೆ ಅಸ್ವಸ್ಥಳಾಗಿದ್ದೇನೆ. ಆದ್ದರಿಂದ ಕೋಪ ಮಾಡಿಕೊಳ್ಳ ಬೇಡಿ, ಮಕಾರ್ ಅಲೆಕ್ಸೇಯೆವಿಚ್. ನಾನು ತುಂಬ ನಿರುತ್ಸಾಹಿತಳಾಗಿದ್ದೇನೆ. ನನಗೇನು ಆಗಲಿದೆ, ಹೇಳಿ, ನನ್ನ ಪ್ರಿಯ ನನ್ನ ಕರುಣಾಳು ಮಕಾರ್ ಅಲೆಕ್ಸೇಯೆ ವಿಚ್‌ರವರೇ? ನಾನು ಭವಿಷ್ಯತ್ತಿನತ್ತ ನೋಡಲೂ ಹೆದರುತ್ತೇನೆ. ಅಶುಭ ಸೂಚನೆಗಳಿಂದ ನಾನು ಕಂಗಾಲಾಗಿದ್ದೇನೆ, ಮನಸ್ಸಿಗೆ ಮಂಕು ಬಡಿದವಳಂತೆ ಜೀವಿಸುತ್ತಿದ್ದೇನೆ.

<u>ಮತ್ತೆ ಮರೆತದ್ದು</u>: ನಾನು ನಿಮಗೆ ಮಾಡಿರೆಂದು ಹೇಳಿರುವುದನ್ನು ದಯವಿಟ್ಟು ಮರೆಯಬೇಡಿ. ನೀವೆಲ್ಲಿ ತಪ್ಪು ಮಾಡುವಿರೋ ಎಂದು ಹೆದರಿಕೆ ನನಗೆ. ಮರೆಯ ಬೇಡಿ: ಸಾಟಿನ್ ಹೊಲಿಗೆಯಲ್ಲಲ್ಲ, ಆದರೆ ಟಾಂಬೂರ್‌ನಲ್ಲಿ.

ವ. ದೊ.

---

*ಕಾನ್‌ಜೂ (ಫ್ರೆಂಚ್) – ತೋಳಿಲ್ಲದ ಲಘು ರವಿಕೆ. – ಸಂ.

**ಟಾಂಬೂರ್ (ಫ್ರೆಂಚ್) – ಕಸೂತಿದುಂಡುಕಟ್ಟು. – ಸಂ.

ಸೆಪ್ಟೆಂಬರ್ 27

ನನ್ನ ಪ್ರಿಯ ವರ್ವಾರ ಅಲೆಕ್ಸೇಯೆವ್ನ,

ನಿಮ್ಮೆಲ್ಲ ಆದೇಶಗಳನ್ನೂ ನಾನು ಜಾಗರೂಕತೆಯಿಂದ ನೆರವೇರಿಸಿದ್ದೇನೆ. ಮದಾಮ್ ಷಿಫಾನ್ ತಾವೇ ಸ್ವತಃ ಟಾಂಬೂರ್‌ನಲ್ಲಿ ಮಾಡಲು ಬಯಸಿದ್ದರು, ಏಕೆಂದರೆ ಅದೇ ಹೆಚ್ಚು ಸೂಕ್ತವಾಗಿದ್ದಿತು, ಎಂದೋ ಏನೋ ಆಕೆ ಹೇಳಿದರು. ಅವರು ಹೇಳಿದ್ದು ನನಗೆ ಸಂಪೂರ್ಣವಾಗಿ ಅರ್ಥವಾಗಲಿಲ್ಲ. ನಿರಿಪಟ್ಟಿಯ ಬಗೆಗೂ ಅವರು ಏನೋ ಹೇಳಿದರು. ನನಗೆ ಮರೆತು ಹೋಗಿದೆ. ಈ ನಿರಿಪಟ್ಟಿಯ ಬಗೆಗೆ ಅವರು ತುಂಬ ಏನೇನೋ ಹೇಳಿದರು ಎಂಬುದಷ್ಟೆ ನನಗೆ ಜ್ಞಾಪಕವಿರುವುದು. ಅವರೊಬ್ಬರು ಹುಚ್ಚುಹಿಡಿಸುವಂಥ ಮುದಿ ಹೆಂಗಸು! ಅವರು ಇನ್ನೇನು ಹೇಳಿದರು? ಅವರೇ ನಿಮಗೆ ಹೇಳಿದರೆ ಒಳಿತು. ನಾನು ಈ ಓಡಾಟದಿಂದ ಆಗಲೇ ಅರ್ಧ ಸತ್ತಂತಾಗಿದ್ದೇನೆ. ಇವತ್ತು ಆಫೀಸಿಗೂ ಹೋಗಲಿಲ್ಲ. ಆದರೆ ನನ್ನ ವಿಷಯದಲ್ಲಿ ಚಿಂತಿಸಬೇಡಿ, ಮುದ್ದು. ನಿಮ್ಮ ಮನಸ್ಸಿಗೆ ಶಾಂತಿ ಸಿಗುವುದಾದರೆ ನಾನು ಈ ಊರಿನ ಪ್ರತಿಯೊಂದು ಅಂಗಡಿಯಿಂದ ಅಂಗಡಿಗೆ ಸುತ್ತಾಡಿ ಬರಲೂ ಸಿದ್ಧವಿದ್ದೇನೆ. ಭವಿಷ್ಯತ್ತಿನತ್ತ ನೋಡಲೂ ನಿಮಗೆ ಹೆದರಿಕೆಯಾಗುತ್ತದೆಂದು ನೀವು ಹೇಳುತ್ತೀರ. ಆದರೆ ಏಳು ಗಂಟೆ ಹೊತ್ತಿಗೆ ನಿಮಗೆ ಎಲ್ಲವೂ ತಿಳಿಯುತ್ತೆ. ಮದಾಮ್ ಷಿಫಾನ್‌ರು ನಿಮ್ಮ ಮನೆಗೆ ಬರುವುದಾಗಿ ಮಾತುಕೊಟ್ಟಿದ್ದಾರೆ. ಧೈರ್ಯಗೆಡಬೇಡಿ, ನನ್ನ ಚಿನ್ನ. ಬಹುಶಃ ಆಗುವುದೆಲ್ಲ ಒಳಿತೇ ಏನೋ. ಆ ಹಾಳಾದ ನಿರಿಪಟ್ಟಿಯನ್ನು ನನ್ನ ಮನಸ್ಸಿನಿಂದ ಕಿತ್ತು ಹಾಕಲು ನನಗೆ ಸಾಧ್ಯವಿಲ್ಲವಾಗಿದೆ. ಓಹ್, ಆ ನಿರಿಪಟ್ಟಿ, ನಿರಿಪಟ್ಟಿ! ನಾನು ನಿಮ್ಮನ್ನು ಕಾಣಲು ಬರುತ್ತೇನೆ, ನನ್ನ ಮುದ್ದು, ಖಂಡಿತ ಬರುತ್ತೇನೆ. ನಿಜ ಹೇಳುವುದಾದರೆ ನಾನು ಆಗಲೇ ನಿಮ್ಮ ಮನೆಯ ಗೇಟಿನ ಮುಂದೆಯೇ ಎರಡು ಬಾರಿ ಹೋಗಿ ಬಂದೆ. ಆದರೆ ಬೀಕವ್‌ರು, ಅಂದರೆ ಮಿ. ಬೀಕವ್‌ರು ಯಾವಾಗಲೂ ಎಷ್ಟು ಕೋಪದಿಂದಿರುತ್ತಾರೆಂದರೆ, ನಾನು ನಿಜಕ್ಕೂ... ಸರಿ, ನೋಡಿ ಸಂಗತಿ ಹೀಗಿದೆ!

ಮಕಾರ್ ದೇವುಷ್ಕಿನ್.

ಸೆಪ್ಟೆಂಬರ್ 28

ನನ್ನ ಪ್ರಿಯ ಮಕಾರ್ ಅಲೆಕ್ಸೇಯೆವಿಚ್,

ದಯವಿಟ್ಟು, ದಯವಿಟ್ಟು, ಈ ಕೂಡಲೇ ಅಕ್ಕಸಾಲೆಯ ಅಂಗಡಿಗೆ ಓಡಿ ಹೋಗಿ ಮುತ್ತು ಹಾಗೂ ಪಚ್ಚೆಯ ಹತ್ತಕಡಕಗಳನ್ನು ಮಾಡಬೇಕಾಗಿಲ್ಲವೆಂದು ತಿಳಿಸಿ. ಅದರ ಬೆಲೆ ತಾವು ಕೊಡಲು ಸಿದ್ಧವಿರುವುದಕ್ಕಿಂತ ತುಂಬ ಹೆಚ್ಚೆಂದು

ಮಿ. ಬೀಕವ್ ಹೇಳುತ್ತಾರೆ. ಅವರು ಸ್ವಲ್ಪ ಕೋಪಗೊಂಡಿದ್ದಾರೆ. ಇವೆಲ್ಲವರ ಸಲುವಾಗಿ ಆಗಲೇ ತಮಗೆ ಬೇಕಾದಷ್ಟು ಖರ್ಚಾಗಿದೆಯೆಂದೂ, ತಮ್ಮನ್ನು ಸುಲಿಯುಲಾಗುತ್ತಿದೆಯೆಂದೂ ಅವರು ಹೇಳುತ್ತಾರೆ. ಇಷ್ಟೊಂದು ಖರ್ಚಾಗುತ್ತದೆಂದು ತಮಗೆ ಮೊದಲೇ ತಿಳಿದಿದ್ದರೆ ಇದನ್ನೆಲ್ಲ ಪ್ರಾರಂಭಿಸುತ್ತಲೇ ಇರಲಿಲ್ಲವೆಂದು ಸಿನ್ನೆಯೂ ಅವರು ಹೇಳಿದರು. ಮದುವೆಯ ಸಮಾರಂಭ ಮುಗಿದ ಕೂಡಲೇ ನಾವು ಹೊರಟುಹೋಗುವೆವೆಂದೂ, ಅತಿಥಿಗಳನ್ನೂ ಯಾರನ್ನೂ ಕರೆಯುವುದಿಲ್ಲವೆಂದೂ, ನಾನು ನರ್ತಿಸಲು ಅಥವಾ ಅವರಿವರೊಡನೆ ಸಲ್ಲಾಪ ನಡೆಸಲು ಅವಕಾಶವಿರುವುದಾಗಿ ನಿರೀಕ್ಷಿಸಬಾರದೆಂದೂ, ಏಕೆಂದರೆ ಅದ್ದೂರಿಯಿಂದ ಆಚರಿಸುವುದಕ್ಕೆ ಇನ್ನೂ ಕಾರಣವಿಲ್ಲವೆಂದೂ, ಅವರು ಹೇಳಿದರು. ಅವರು ಹಾಗೆಯೇ ಮಾತನಾಡುವುದು. ಇವನ್ನೆಲ್ಲ ನಾನು ಎಳ್ಳಷ್ಟೂ ಇಷ್ಟಪಡುವುದಿಲ್ಲವೆಂಬುದೂ, ಮಿ. ಬೀಕವ್‌ರೇ ಇವಕ್ಕೆಲ್ಲ ಆರ್ಡರ್ ನೀಡಿರುವರೆಂಬುದೂ, ದೇವರಿಗೆ ಗೊತ್ತಿದೆ. ನಾನು ಅವರಿಗೆ ಉತ್ತರ ಹೇಳುವ ಸಾಹಸ ಮಾಡಲಿಲ್ಲ, ಏಕೆಂದರೆ ಅವರು ಬಹುಬೇಗ ಕೆರಳುತ್ತಾರೆ. ನನಗೆ ಮುಂದೆ ಏನಾಗುವುದೋ ?

ವ. ದೊ.

ಸೆಪ್ಟೆಂಬರ್ 28

ವರ್ವಾರ ಅಲೆಕ್ಸೇಯೆವ್ನ, ನನ್ನ ಮುದ್ದು ಮಗು,

ನಾನು... ಅಂದರೆ, ಅಕ್ಕಸಾಲೆಗೆ ಸಂಬಂಧಿಸಿದ ವಿಷಯದಲ್ಲಿ ಎಲ್ಲ ಸರಿಯಾಗಿದೆ. ನನ್ನ ಮಟ್ಟಿಗೇ ಹೇಳುವುದಾದರೆ, ನಾನು ಕಾಯಿಲೆಯಿಂದ ಹಾಸಿಗೆ ಹಿಡಿದು ಮಲಗಿದ್ದೇನೆ ಎಂದು ಮೊದಲು ಹೇಳಬೇಕು. ಎಷ್ಟೊಂದು ಕೆಲಸ ಮಾಡಬೇಕಾಗಿರುವಾಗಲೇ ನಾನು ಕಾಯಿಲೆ ಬೀಳಬೇಕೇ, ಈ ಹಾಳಾದ್ದು ದುರದೃಷ್ಟ ! ನನ್ನ ಸಂಕಷ್ಟವನ್ನು ಮತ್ತಷ್ಟು ಹೆಚ್ಚಿಸುವಂತೆ, ಮೊನ್ನಿನ ದಿನ ನಮ್ಮ ದೊಡ್ಡ ಸಾಹೇಬರು ತುಂಬ ಕೋಪಗೊಂಡಿದ್ದರು. ಅವರು ಯೆಮೆಲ್ಯಾನ್ ಇವಾನೊವಿಚ್‌ರ ಮೇಲೆ ಹೇಗೆ ಕೂಗಾಡಿದರೆಂದರೆ, ಅವರ ಉಸಿರೇ ಕಟ್ಟುವಂತಾಯಿತು. ಇಷ್ಟನ್ನೇ ನಾನು ನಿಮಗೆ ತಿಳಿಸಬಯಸಿದ್ದು. ಇನ್ನಷ್ಟು ಬರೆಯೋಣವೆಂದೇನೋ ನನಗೆ ಆಸೆ, ಆದರೆ ನಿಮಗೆ ಅನವಶ್ಯ ತೊಂದರೆ ಉಂಟುಮಾಡುವೆನೆಂದು ಹೆದರಿಕೆ. ನಾನೊಬ್ಬ ಸರಳ ಮನುಷ್ಯ, ಅಷ್ಟು ಜಾಣನಲ್ಲ, ನನ್ನ ಮನಸ್ಸಿಗೆ ಬಂದದ್ದನ್ನೆಲ್ಲ ಬರೆಯುತ್ತೇನೆ. ಹಾಗಾಗಿ ನಾನು ಗೀಚುವ ಕೆಲವು ಸಂಗತಿಗಳು ಇರಬೇಕಾದಂತೆ ಇಲ್ಲವೆಂದು ನಿಮಗೆ ಕಂಡುಬರಬಹುದು. ಸರಿ, ಅದು ನಿಜಕ್ಕೂ ಪರವಾಗಿಲ್ಲ.

ನಿಮ್ಮ,

ಮಕಾರ್ ದೇವುಷ್ಕಿನ್.

ಪರ್ವಾರ ಅಲೆಕ್ಸೇಯೆವ್ನ, ನನ್ನ ಅರಗಿಣಿ,

ನಾನು ಫಿದೋರಳನ್ನು ಇಂದು ಸಂಧಿಸಿದೆ. ನಿಮಗೆ ನಾಳೆ ವಿವಾಹವಾಗುವು ದೆಂದೂ, ನಾಡಿದ್ದು ನೀವು ಹೊರಟುಹೋಗುವಿರೆಂದೂ, ಮಿ. ಬೀಕವ್‌ರು ಕುದುರೆಗಳನ್ನು ಬಾಡಿಗೆಗೆ ಗೊತ್ತು ಮಾಡುತ್ತಿದ್ದಾರೆಂದೂ ಅವಳು ನನಗೆ ತಿಳಿಸಿದಳು. ನಾನು ನಿಮಗೆ ಆಗಲೇ ನನ್ನ ದೊಡ್ಡ ಸಾಹೇಬರಿಗೆ ಸಂಬಂಧಿಸಿದ ಆ ಸುದ್ದಿ ಯನ್ನು ತಿಳಿಸಿದ್ದೇನೆ. ಬೇರೆ ಇನ್ನೇನಿದೆ? ಆಹ್ ಹೌದು, ಗೊರೋಹೊವಯದ ಅಂಗಡಿಯಿಂದ ಕಳುಹಿಸಿದ ಬಿಲ್ಲುಗಳನ್ನು ನಾನು ನೋಡಿದೆ. ಎಲ್ಲ ಸರಿಯಾಗಿದೆ, ಆದರೆ ತುಂಬ ದುಬಾರಿ. ಮಿ. ಬೀಕವ್‌ರು ನಿಮ್ಮ ಮೇಲೇಕೆ ಕೋಪ ಮಾಡಿ ಕೊಳ್ಳಬೇಕು? ಒಳ್ಳೆಯದು, ನೀವು ಎಂದೆಂದಿಗೂ ಸುಖದಿಂದಿರಿ, ನನ್ನ ಚಿನ್ನ. ನೀವು ನೆಮ್ಮದಿಯಿಂದಿರುವಿರೆಂಬುದನ್ನು ತಿಳಿದು ನಾನು ತುಂಬ ಸಂತೋಷಿಸುವೆನು. ನನ್ನ ಸೊಂಟ ನೋಯುತ್ತಿಲ್ಲದಿದ್ದರೆ ನಾನು ನಿಮ್ಮ ವಿವಾಹ ಸಮಾರಂಭಕ್ಕೂ ಬರುತ್ತೇನೆ.

ಪತ್ರಗಳ ವಿಷಯ ಮತ್ತೆ ಯೋಚನೆಗೆ ಇಟ್ಟುಕೊಂಡಿದೆ... ಅವುಗಳನ್ನು ಯಾರು ಒಯ್ಯಲಿರುವರು? ನೀವು ಫಿದೋರಳನ್ನು ತುಂಬ ಚೆನ್ನಾಗಿ ಉಪಚರಿಸಿ ದ್ದೀರಿ. ನೀವು ತುಂಬ ಕರುಣಾಳುಗಳು. ಇದಕ್ಕಾಗಿ ದೇವರು ನಿಮ್ಮನ್ನು ಕಾಪಾಡು ತ್ತಾನೆ. ಸತ್ಕಾರ್ಯಗಳು ಎಂದೂ ಪ್ರತಿಫಲ ದೊರಕಿಸದೆ ಹೋಗವು. ಸದ್ಗುಣವು ಎಂದೂ ದಿವ್ಯ ನ್ಯಾಯದ ಪ್ರಭೆಯನ್ನು ಪಡೆಯದೆ ಹೋಗದು. ನನ್ನ ಚಿನ್ನ, ನನ್ನ ಏಕೈಕ ಅರಗಿಣಿ, ನಾನು ನಿಮಗೆ ಪ್ರತಿ ಗಂಟೆಯೂ ಪ್ರತಿ ನಿಮಿಷವೂ ಬರೆಯಬಯಸುತ್ತೇನೆ. ಬರೆಯುತ್ತ, ಬರೆಯುತ್ತ, ಬರೆಯುತ್ತಲೇ ಇರಬಯ ಸುತ್ತೇನೆ. ನೀವು ಕೊಟ್ಟ ಪುಸ್ತಕ 'ಇವಾನ್ ಬೇಲ್ಕಿನ್‌ನ ಕಥೆಗಳು' ನನ್ನ ಬಳಿಯೇ ಇದೆ, ನನ್ನ ಪ್ರಿಯೆ. ಅದನ್ನು ನನಗೆ ಉಡುಗೊರೆಯಾಗಿ ಬಿಟ್ಟುಹೋಗಿ. ನಾನು ಅದನ್ನು ಅಷ್ಟೊಂದು ಓದಲು ಇಷ್ಟಪಡುತ್ತೇನೆಂದೇನೂ ಅಲ್ಲ. ಆದರೆ ನಿಮಗೇ ಗೊತ್ತಿರುವಂತೆ, ಚಳಿಗಾಲ ಸಮೀಪಿಸುತ್ತಿದೆ. ಸಂಜೆಗಳು ಬಹು ದೀರ್ಘವಾಗಿ ರುತ್ತವೆ, ದುಃಖದಿಂದ ಕೂಡಿರುತ್ತವೆ. ಅದು ಓದಲು ಸೂಕ್ತ ಸಮಯವಾಗಿ ರುತ್ತದೆ. ನಾನು ನನ್ನ ಕೋಣೆಯನ್ನು ಬಿಟ್ಟು ನಿಮ್ಮ ಹಳೆಯ ಕೋಣೆಯಲ್ಲಿ ವಾಸಿಸಲಿರುವೆನು. ನಾನು ಅದನ್ನು ಫಿದೋರಳಿಂದ ಬಾಡಿಗೆಗೆ ಪಡೆದು ಕೊಳ್ಳಲಿರುವೆನು. ನಾನು ಆ ಪ್ರಾಮಾಣಿಕ ಮಹಿಳೆಯ ಸ್ನೇಹವನ್ನು ಎಂದೂ ಬಿಟ್ಟುಕೊಡುವುದಿಲ್ಲ. ಅವಳು ಎಷ್ಟು ಕಷ್ಟಪಟ್ಟು ದುಡಿಯುತ್ತಾಳೆ, ನಿಮಗೇ ಗೊತ್ತಲ್ಲ! ನಿನ್ನೆ ನಾನು ನೀವು ಬಿಟ್ಟುಹೋದ ಕೋಣೆಗೆ ಭೇಟಿಕೊಟ್ಟಿದ್ದೆ, ಅಲ್ಲಿ ಸುತ್ತಾಡಿದೆ, ನೀವು ಉಳಿಸಿ ಹೋಗಿದ್ದ ವಸ್ತುಗಳನ್ನು ನೋಡಿದೆ. ಅಲ್ಲಿ, ಮೂಲೆಯಲ್ಲಿ

ನಿಮ್ಮ ಪ್ರಿಯವಾದ ಕಸೂತಿ ಚೌಕಟ್ಟಿದ್ದಿತು. ಅದರಲ್ಲಿ ನೀವು ಕಸೂತಿ ಕೆಲಸ ಮಾಡುತ್ತಿದ್ದ ಒಂದು ಕೈಚೌಕವೂ ಇದ್ದಿತು. ನಾನು ಅದನ್ನು ಪರಿಶೀಲಿಸಿದೆ. ಇತರ ಚಿಲ್ಲರೆ ವಸ್ತುಗಳನ್ನೂ ನೋಡಿದೆ. ನನ್ನ ಕಾಗದಗಳಲ್ಲೊಂದನ್ನು ನೀವು ನಿಮ್ಮ ರೇಷ್ಮೆ ದಾರವನ್ನು ಸುತ್ತಲು ಉರುಳೆಯನ್ನಾಗಿ ಉಪಯೋಗಿಸಿದ್ದುದನ್ನು ಕಂಡು ನನಗೆ ತುಂಬ ಸಂತೋಷವಾಯಿತು. ಮೇಜಿನ ಮೇಲೂ "ನನ್ನ ಪ್ರಿಯ ಮಕಾರ್ ಅಲೆಕ್ಸೇಯೆವಿಚ್, ನಾನು ಅವಸರದಿಂದ..." ಎಂಬ ಪದಗಳಿದ್ದ ಕಾಗದದ ಚೂರೊಂದನ್ನೂ ಕಂಡೆ. ಯಾರೋ ಬಂದುದರಿಂದ ನೀವು ಅದನ್ನು ಬರೆಯುತ್ತಿದ್ದುದನ್ನು ನಿಲ್ಲಿಸಿದಂತೆ ಕಾಣುತ್ತೆ. ಅಡ್ಡ ತೆರೆಯ ಹಿಂದೆ ಮೂಲೆಯಲ್ಲಿ ನಿಮ್ಮ ಪುಟ್ಟ ಹಾಸಿಗೆ ಇದ್ದಿತು... ನನ್ನ ಪ್ರಿಯ ಪುಟ್ಟ ಹಕ್ಕಿ ! ! ! ಒಳ್ಳೆಯದು, ನಮಸ್ಕಾರ, ನಮಸ್ಕಾರ, ನನ್ನ ಚಿನ್ನ. ದಯವಿಟ್ಟು ಈ ನನ್ನ ಪತ್ರಕ್ಕೆ ಬೇಗ ಉತ್ತರ ಬರೆಯಿರಿ. ನಾನು ಬೇಡಿಕೊಳ್ಳುತ್ತೇನೆ.

ಮಕಾರ್ ದೇವುಷ್ಕಿನ್.

ಸೆಪ್ಟೆಂಬರ್ 30

ಮಕಾರ್ ಅಲೆಕ್ಸೇಯೆವಿಚ್, ನನ್ನ ಅಮೂಲ್ಯ ಮಿತ್ರ,

ಕಾರ್ಯ ನೆರವೇರಿತು, ಹಿಂದಕ್ಕೆ ಬರಲಾಗದಂತೆ ನಿರ್ಧಾರವಾಗಿ ಹೋಯಿತು. ನನ್ನ ಮುಂದೇನು ಕಾದಿದೆ, ನನಗೆ ಗೊತ್ತಿಲ್ಲ. ನಾನು ದೈವೇಚ್ಛೆಗೆ ನನ್ನನ್ನು ಒಪ್ಪಿಸಿಕೊಳ್ಳುವೆನು. ನಾಳೆ ನಾವು ಹೊರಡಲಿರುವೆವು. ನಾನು ಈ ಮಾತುಗಳನ್ನು ಬಿದಾಯ ಹೇಳುತ್ತ ಬರೆಯುತ್ತಿದ್ದೇನೆ, ನನ್ನ ಅತ್ಯಂತ ನಿಕಟ ಮಿತ್ರ, ನನ್ನ ಪೋಷಕ, ನನ್ನ ಹೃದಯೇಶ್ವರ. ನನಗಾಗಿ ದುಃಖಿಸಬೇಡಿ, ಸಂತೋಷದಿಂದಿರಿ. ನನ್ನನ್ನು ಜ್ಞಾಪಕದಲ್ಲಿಟ್ಟಿರಿ. ನಿಮ್ಮ ಮೇಲೆ ಸದಾ ದೇವರ ಅನುಗ್ರಹವಿರಲಿ. ನಾನು ನಿಮ್ಮನ್ನು ನೆನಪಿನಲ್ಲಿಟ್ಟಿರುತ್ತೇನೆ, ನನ್ನ ಪ್ರಾರ್ಥನೆಗಳಲ್ಲಿ ಯಾವತ್ತೂ ನಿಮ್ಮನ್ನು ನೆನಸಿಕೊಳ್ಳುತ್ತಿರುತ್ತೇನೆ. ಅಂತೂ ನಾನಿಲ್ಲಿ ನಡೆಸಿದ ಜೀವನ ಹೀಗೆ ಕೊನೆಗೊಳ್ಳುತ್ತಿದೆ. ಇಲ್ಲಿನ ಜೀವನದ ಬಗೆಗೆ ನಾನು ನೆನಪಿನಲ್ಲಿಡಲಿರುವ ಬಹು ಅಂಶಗಳು ನನಗೆ ಭವಿಷ್ಯತ್ತಿನಲ್ಲಿ ಎಷ್ಟು ಮಾತ್ರವೂ ನೆಮ್ಮದಿ ನೀಡಲಿರುವುದಿಲ್ಲ. ಆದರೆ ನಿಮ್ಮ ನೆನಪು ಮಾತ್ರ ಸದಾ ಹೆಚ್ಚು ಪ್ರೀತ್ಯಾದರಗಳಿಂದ ಕೂಡಿರುವುದು. ನೀವು ನನ್ನ ಏಕೈಕ ಮಿತ್ರರು, ನನ್ನನ್ನು ಪ್ರೀತಿಯಿಂದ ಕಂಡ ಏಕೈಕ ವ್ಯಕ್ತಿ. ನೀವು ನನ್ನನ್ನು ಪ್ರೀತಿಸುತ್ತಿದ್ದಿರೆಂಬುದನ್ನು ನಾನು ಕಂಡಿದ್ದೆ, ತಿಳಿದಿದ್ದೆ. ನನ್ನ ಕಿರುನಗೆ ಅಥವಾ ನನ್ನಿಂದ ಒಂದು ಸಾಲು ನಿಮ್ಮನ್ನು ಸಂತೋಷಗೊಳಿಸಲು ಸಾಕಾಗಿದ್ದಿತು. ಈಗ ನೀವು ನಾನಿಲ್ಲದೆ ಇರಬೇಕಾಗಿದೆ. ನೀವು ಎಷ್ಟು ಒಂಟಿಯಾಗಿ ಬಿಡುವಿರಿ ! ನಿಮ್ಮನ್ನು ಸಮಾಧಾನ ಪಡಿಸಲು ಯಾರು ಇರಲಿರುವರು ? ನನ್ನ ಕರುಣಾಳುವಾದ ಏಕೈಕ

ಮಿತ್ರ! ನಾನು ನನ್ನ ಪುಸ್ತಕವನ್ನೂ ಕಸೂತಿ ಚೌಕಟ್ಟನ್ನೂ, ನಾನು ಬರೆಯಲು ಪ್ರಾರಂಭಿಸಿದ್ದ ಆ ಕಾಗದವನ್ನೂ ನಿಮಗೇ ಬಿಟ್ಟು ಹೋಗುತ್ತೇನೆ. ಮೊದಲ ಸಾಲು ಗಳನ್ನು ಮತ್ತೆ ಓದಿ ಮತ್ತು ಉಳಿದುದಕ್ಕೆ ನಿಮಗೆ ಏನು ಸಂತೋಷ ನೀಡುತ್ತದೋ ಅದನ್ನು ಕಲ್ಪಿಸಿಕೊಳ್ಳಿ. ನಾನು ಏನು ಬರೆಯಲಿದ್ದೆನೋ, ದೇವರಿಗೇ ಗೊತ್ತು! ನಿಮ್ಮನ್ನು ಅಷ್ಟು ಚೆನ್ನಾಗಿ ಪ್ರೀತಿಸುತ್ತಿದ್ದ ನಿಮ್ಮ ನತದೃಷ್ಟ ವಾರೆಂಕಳನ್ನು ನೆನಪಿ ನಲ್ಲಿಟ್ಟಿರಿ. ನಾನು ನಿಮ್ಮೆಲ್ಲ ಪತ್ರಗಳನ್ನೂ ಫಿದೋರಳ ಅಲಮಾರುವಿನ ಮೇಲಿನ ಬಡುವಿನಲ್ಲಿರಿಸಿದ್ದೇನೆ. ನೀವು ಕಾಯಿಲೆ ಮಲಗಿದ್ದೀರೆಂದು ಬರೆದಿದ್ದೀರಿ. ಆದರೆ ನಿಮ್ಮನ್ನು ಕಾಣಲು ಬರೋಣವೆಂದರೆ ಮಿ. ಬೀಕವ್ ಇಂದು ನನ್ನನ್ನು ಹೊರಗೆ ಹೋಗಲು ಬಿಡುವಂತೆ ಕಾಣುತ್ತಿಲ್ಲ. ನಾನು ಬರೆಯುತ್ತಿರುತ್ತೇನೆನ್ನಿ. ಆದರೆ ಮುಂದೆ ಏನು ಜರುಗಲಿರುವುದೋ, ದೇವರಿಗೇ ಗೊತ್ತು. ಆದ್ದರಿಂದ ಈಗ ಅಂತಿಮ ಬಿದಾಯ ಹೇಳಿ ಬಿಡುವುದು ಉತ್ತಮ, ನನ್ನ ಪ್ರಿಯರಾದ, ಪ್ರಿಯರಾದ ಮಿತ್ರ. ನಿಮ್ಮನ್ನು ಆಲಂಗಿಸಿಕೊಂಡರೆ ಎಷ್ಟು ಚೆನ್ನ. ನಮಸ್ಕಾರ. ನನ್ನ ಮಿತ್ರ, ನಮಸ್ಕಾರ. ಯಾವಾ ಗಲೂ ಆರೋಗ್ಯದಿಂದಿರಿ, ಸಂತೋಷದಿಂದಿರಿ! ನಾನು ನಿಮಗಾಗಿ ಪ್ರಾರ್ಥಿಸು ವೆನು. ನನ್ನ ಹೃದಯ ಹೇಳಲಾರದಷ್ಟು ಭಾರವಾಗಿದೆ. ಮಿ. ಬೀಕವ್ ಕರೆಯು ತ್ತಿದ್ದಾರೆ.

ನಿಮ್ಮ ಚಿರ ಪ್ರೇಮಿ,

ವ.

<u>ಮರೆತದ್ದು</u>: ನನ್ನ ಆತ್ಮ ತುಂಬಿದೆ, ಕಣ್ಣೀರಿನಿಂದ ತುಂಬಿದೆ.
ಕಣ್ಣೀರು ನನ್ನ ಉಸಿರು ಕಟ್ಟಿಸುತ್ತಿದೆ. ನಮಸ್ಕಾರ!
ಓಹ್, ಎಷ್ಟು ದುಃಖ ಇದು.
ನಿಮ್ಮ ಬಡಪಾಯಿ ವಾರೆಂಕಳನ್ನು ನೆನಪಿನಲ್ಲಿಡಿ!

ನನ್ನ ಪ್ರಿಯ ವಾರೆಂಕ, ನನ್ನ ಮುದ್ದು, ನನ್ನ ಮುತ್ತು ರತ್ನ!

ನಿಮ್ಮನ್ನು ನನ್ನಿಂದ ಕಸಿದುಕೊಂಡು ಹೋಗಲಾಗುತ್ತಿದೆ. ನೀವು ಹೊರಟು ಹೋಗುತ್ತಿದ್ದೀರ! ಅವರು ನನ್ನ ಎದೆಯಿಂದ ನನ್ನ ಹೃದಯವನ್ನೇ ಕಿತ್ತು ಒಯ್ದಿ ದ್ದರೆ ಚೆನ್ನಾಗಿರುತ್ತಿತ್ತು. ನೀವು ಅವರಿಗೆ ಹೇಗೆ ಅವಕಾಶ ಕೊಟ್ಟಿರಿ? ನೀವು ಅಳು ತ್ತಿದ್ದೀರಿ, ಆದರೂ ಹೋಗುತ್ತಿದ್ದೀರಿ. ಕಣ್ಣೀರಿನಿಂದ ತೋಯ್ದು ಇನ್ನೂ ಒದ್ದೆ ಯಾಗೇ ಇರುವ ನಿಮ್ಮ ಪತ್ರ ಇದೀಗ ನನಗೆ ತಲುಪಿದೆ. ಅಂದರೆ ನೀವು ನಿಜಕ್ಕೂ ಇಲ್ಲಿಂದ ಹೋಗಲು ಇಷ್ಟಪಡುತ್ತಿಲ್ಲ; ಅವರು ನಿಮ್ಮನ್ನು ಹೋಗುವಂತೆ...

ನೀವು ನನಗಾಗಿ ದುಃಖಿತರಾಗಿದ್ದೀರ... ಹಾಗಾದರೆ ನೀವು ನನ್ನನ್ನು ಪ್ರೀತಿಸು ತ್ತೀರ. ಈಗ ನಿಮ್ಮನ್ನು ಯಾರು ನೋಡಿಕೊಳ್ಳುವರು? ಅಲ್ಲಿ ನಿಮ್ಮ ಪುಟ್ಟ ಹೃದಯ ದುಃಖದಿಂದ ತುಂಬಿ ಇರಲಿರುವುದು, ಉತ್ಸಾಹಶೂನ್ಯವಾಗಿ ಇರಲಿ ರುವುದು. ದುಃಖ ನಿಮ್ಮ ಹೃದಯದಿಂದ ರಕ್ತವನ್ನೆಲ್ಲ ಹೀರಿ ಹಾಕುವುದು, ವಿಷಾದ ನಿಮ್ಮ ಹೃದಯವನ್ನು ಒಡೆದುಹಾಕುವುದು. ನೀವಲ್ಲಿ ಒಂಟಿಯಾಗಿ ಸಾಯುವಿರಿ. ಅವರು ನಿಮ್ಮನ್ನು ಆ ಶೀತಲ ಮಣ್ಣಿನಲ್ಲಿ ಸಮಾಧಿ ಮಾಡುವರು. ನಿಮ್ಮ ಸಮಾಧಿಯ ಬಳಿ ಅಳಲು ಯಾರೂ ಇರುವುದಿಲ್ಲ. ಮಿ. ಬೀಕವ್‌ರು ಮೊಲಗಳ ಷಿಕಾರಿಯಲ್ಲಿ ತೊಡಗಿರುತ್ತಾರೆ. ಆಹ್, ನನ್ನ ಚಿನ್ನ, ನೀವೇಕೆ ಇಂತಹ ಹೆಜ್ಜೆ ಕೈಕೊಂಡಿರಿ? ಏನು ಮಾಡಿಬಿಟ್ಟಿರಿ! ನಿಮಗೆ ನೀವೇ ಎಂಥ ಘೋರ ಅನ್ಯಾಯ ಮಾಡಿಕೊಂಡಿರಿ! ಅವರು ನಿಮ್ಮನ್ನು ಸಮಾಧಿಗೆ ಅಟ್ಟಲಿರುವರು, ನಿಮ್ಮ ಚೈತನ್ಯವನ್ನು ಉಪವಾಸ ಕೆಡವಿ ಸಾಯಿಸಲಿರುವರು. ನೀವಿನ್ನೂ ಒಂದು ಪುಟ್ಟ ಪುಕ್ಕವಷ್ಟೆ, ನನ್ನ ಪುಟ್ಟ ದೇವತೆ. ನಾನೆಲ್ಲಿಗೆ ಹೋಗಿದ್ದೆ? ನಾನೇನು ಮಾಡುತ್ತಿದ್ದೆ? ಮಗು ತನ್ನನ್ನೇ ಮರೆತಿತ್ತು, ಮಗು ಕಾಯಿಲೆಯಿಂದ ನರಳುತ್ತಿತ್ತು, ಎನ್ನು ವುದನ್ನು ನಾನು ಕಂಡೆ. ನಾನು ಕದಲದಿರಬೇಕಿತ್ತು – ಆದರೆ ಹಾಗೆ ಮಾಡಲಿಲ್ಲ! ನಾನು ಮೂರ್ಖನಂತೆ ವರ್ತಿಸಿದೆ, ಯಾವ ಯೋಚನೆಯನ್ನೂ ಮಾಡಲಿಲ್ಲ, ಯಾವುದನ್ನೂ ಕಾಣಲಿಲ್ಲ, ನನಗೆ ಅದು ಯಾವುದೂ ಸಂಬಂಧಿಸಿರಲಿಲ್ಲವೇನೋ ಎಂಬಂತೆ. ಅಯ್ಯೋ ದೇವರೇ! ನಾನು ಆ ನಿರಿಪಟ್ಟಿಗಾಗಿ ಓಡಾಡುತ್ತಿದ್ದೆನಲ್ಲ. ಇಲ್ಲ, ವಾರೆಂಕ, ನಾನು ನನ್ನ ಹಾಸಿಗೆ ಬಿಟ್ಟು ಏಳುತ್ತೇನೆ. ನಾಳೆಯ ಹೊತ್ತಿಗೆ ಗುಣ ಮಾಡಿಕೊಂಡು ಹಾಸಿಗೆಯಿಂದ ಏಳುತ್ತೇನೆ. ನಿಮ್ಮ ಬಂಡಿಯ ಚಕ್ರಗಳ ಕೆಳಗೆ ಬಂದು ಬೀಳುತ್ತೇನೆ. ನಾನು ನಿಮ್ಮನ್ನು ಹೋಗಲು ಬಿಡುವುದಿಲ್ಲ! ಇದೊಂದು ದೌರ್ಜನ್ಯ ಕೃತ್ಯ! ಅವರಿಗೆ ಯಾವ ಅಧಿಕಾರವಿದೆ? ನಾನು ನಿಮ್ಮೊಟ್ಟಿಗೇ ಬರು ತ್ತೇನೆ, ನೀವು ನನ್ನನ್ನು ಕರೆದುಕೊಳ್ಳದೆ ಹೋದರೆ ನಿಮ್ಮ ಬಂಡಿಯ ಹಿಂದೆಯೇ ಓಡಿಬರುತ್ತೇನೆ. ಕಾಲು ಸೋತು ಬೀಳುವವರೆಗೂ ಓಡುತ್ತೇನೆ! ನೀವು ಎಲ್ಲಿಗೆ ಹೋಗುತ್ತಿದ್ದೀರ? ನಿಮಗೆ ಗೊತ್ತೆ? ನಾನು ಹೇಳುತ್ತೇನೆ! ನೀವು ಸ್ತೆಪ್ ಪ್ರದೇಶಕ್ಕೆ ಹೋಗುತ್ತಿದ್ದೀರ, ನನ್ನ ಕೈಯಿನ ಈ ಅಂಗೈನಂತೆಯೇ ಬರಿದಾದ ಸ್ತೆಪ್‌ಗೆ ಹೋಗುತ್ತಿದ್ದೀರ. ಭಾವಶೂನ್ಯರಾದ ರೈತ ಹೆಂಗಸರು, ಅವರ ಒರಟು ಕುಡುಕ ಗಂಡಂದಿರು ಇವರನ್ನು ಬಿಟ್ಟು ಅಲ್ಲಿ ಬೇರೆ ಯಾರೂ ಇರುವುದಿಲ್ಲ. ಅಲ್ಲಿ ಮರಗಳೂ ತಮ್ಮ ಎಲೆಗಳನ್ನು ಉದುರಿಸಿ ಬಿಟ್ಟಿರುತ್ತವೆ. ಯಾವಾಗಲೂ ಮಳೆ ಬರುತ್ತಿರುತ್ತದೆ, ಯಾವಾಗಲೂ ಚಳಿ ಇರುತ್ತದೆ. ಅಲ್ಲಿಗೇ ನೀವು ಹೋಗು ತ್ತಿರುವುದು! ಮಿ. ಬೀಕವ್‌ರೇನೋ ಮೊಲಗಳ ಷಿಕಾರಿಯಲ್ಲಿ ತೊಡಗಿರುತ್ತಾರೆ. ಆದರೆ ನೀವು? ನೀವು ಭೂಮಾಲೀಕನ ಪತ್ನಿಯಾಗಬಯಸುತ್ತೀರಾ, ನನ್ನ ಪ್ರಿಯೆ?

ನಿಮ್ಮನ್ನೇ ಒಮ್ಮೆ ನೋಡಿಕೊಳ್ಳಿ, ನನ್ನ ಪುಟ್ಟ ದೇವತೆ. ನೀವು ಯಾವ ರೀತಿಯ ಲ್ಲಾದರೂ ಸರಿಯೆ, ಭೂಮಾಲೀಕನ ಪತ್ನಿಯಂತಿದ್ದೀರಾ? ಆ ಪ್ರಶ್ನೆಯೇ ಇಲ್ಲ, ವಾರೆಂಕ! ಆಮೇಲೆ ನಾನು ಯಾರಿಗೆ ಪತ್ರ ಬರೆಯುವುದು? ಒಂದು ಘಳಿಗೆ ನಿಂತು ಯೋಚಿಸಿ! ನಾನು ಯಾರಿಗೆ ಬರೆಯಲಿ? ಯಾರನ್ನು ನಾನು "ಪ್ರಿಯ ಹೃದಯೇಶ್ವರಿ" ಎಂದು ಕರೆಯಲಿ? ಯಾರನ್ನು ನಾನು ಆ ಸವಿಯಾದ ಮಾತಿನಿಂದ ಕರೆಯಲಿ? ನಾನು ನಿಮ್ಮನ್ನು ಎಲ್ಲಿ ಕಾಣಲಿ, ನನ್ನ ಪುಟ್ಟ ದೇವತೆ? ನಾನು ಸಾಯುತ್ತೇನೆ, ವಾರೆಂಕ, ನಾನು ಖಂಡಿತ ಸಾಯುತ್ತೇನೆ. ನನ್ನ ಹೃದಯ ಈ ದುರ್ಘಟನೆಯನ್ನು ಸಹಿಸಿಕೊಂಡಿರಲಾರದು. ನಾನು ನಿಮ್ಮನ್ನು ದೇವರ ದಿವ್ಯ ಜ್ಯೋತಿಯೆಂದೇ, ನನ್ನ ಸ್ವಂತ ಮಗಳೆಂದೇ, ಪ್ರೀತಿಸಿದೆ. ನಾನು ನಿಮ್ಮಲ್ಲಿನ ಪ್ರತಿ ಯೊಂದನ್ನೂ ಪ್ರೀತಿಸಿದೆ, ನನ್ನ ಚಿನ್ನ. ನಾನು ನಿಮಗಾಗಿಯೇ ಬಾಳಿದೆ. ನೀವು ಸಮೀಪದಲ್ಲಿದ್ದೀರಿ ಎಂಬ ಕಾರಣದಿಂದಾಗಿಯಷ್ಟೆ ನಾನು ಕೆಲಸ ಮಾಡಿದೆ, ಕಾಗದಗಳನ್ನು ನಕಲು ಮಾಡಿದೆ, ನಡೆದಾಡಿದೆ, ನನ್ನ ವಿಚಾರ ಚಿಂತನೆಗಳನ್ನು ಸ್ನೇಹಪೂರಿತವಾದ ಪತ್ರಗಳಲ್ಲಿ ವ್ಯಕ್ತಪಡಿಸಿದೆ. ನೀವು ಇದನ್ನೆಂದೂ ಮನಗಾಣಲೇ ಇಲ್ಲವೇನೋ. ಆದರೆ ಅದು ನಿಜಕ್ಕೂ ಹಾಗೆಯೇ. ಈಗ ಮತ್ತೆ ಕೇಳಿ: ನೀವು ಹೊರಟುಹೋಗುತ್ತಿರುವುದು ಹೇಗೆ ಸಾಧ್ಯ? ಹೋಗಲಾರಿರಿ! ಅದು ತೀರ ಅಸಾಧ್ಯ. ಸಂಪೂರ್ಣವಾಗಿ ಅಸಂಭವವಾದುದು! ಮಳೆ ಸುರಿಯುತ್ತಿದೆ. ನಿಮಗೆ ನೆಗಡಿಯಾಗುವುದು ಖಂಡಿತ – ನೀವು ಎಷ್ಟು ದುರ್ಬಲರಾಗಿದ್ದೀರಿ, ಎಷ್ಟು ನಿಶ್ಯಕ್ತರಾಗಿದ್ದೀರಿ. ಬಂಡಿಯ ಮೇಲ್ಹಾವಣಿಯಿಂದ ನೀರು ಸೋರುವುದೂ ಖಂಡಿತ. ಬಂಡಿಯು ಮುರಿದು ಬೀಳುವುದು. ನೀವು ಈ ಪಟ್ಟಣವನ್ನು ಬಿಟ್ಟು ಹೊರಹೋದ ಕೂಡಲೇ ಅದು ಖಂಡಿತ ಮುರಿದು ಬೀಳುವುದು. ಈ ಪೀಟರ್ಸ್‌ಬರ್ಗ್‌ನಲ್ಲಿ ಮಾಡುವಂಥ ಬಂಡಿಗಳೆಲ್ಲ ಅಂಥ ಲೊಡ್ಡು ಬಂಡಿಗಳೇ. ಆ ಬಂಡಿ ತಯಾರ ಕರೆಲ್ಲ ನನಗೆ ಗೊತ್ತು. ಅವರಿಗೆ ಫ್ಯಾಷನ್ ಮುಖ್ಯ. ಅವರು ಬಂಡಿಯನ್ನು ಒಂದು ಸುಂದರವಾದ ಆಟದ ಸಾಮಾನನ್ನಾಗಿ ತಯಾರಿಸಬಯಸುತ್ತಾರೆ. ಆದರೆ ಅವರು ಬಾಳಿಕೆ ಬರುವ ಬಂಡಿಯನ್ನು ಮಾಡಲಾರರು. ಖಂಡಿತ ಮಾಡಲಾರರು, ನಾನು ಪಣವಿಟ್ಟು ಹೇಳುತ್ತೇನೆ! ನಾನು ಮಿ. ಬೀಕವ್‌ರ ಕಾಲುಗಳ ಮೇಲೆ ಬಿದ್ದು ಕೇಳಿಕೊಳ್ಳುತ್ತೇನೆ, ನನ್ನ ಮುದ್ದು. ನಾನು ಅವರಿಗೆ ಸಾಧಿಸಿ ತೋರುತ್ತೇನೆ, ಎಲ್ಲರಿಗೂ ಸಾಧಿಸಿ ತೋರುತ್ತೇನೆ. ನೀವು, ನನ್ನ ಪ್ರಿಯ ವಾರೆಂಕ, ನೀವೂ ಅವರ ಜೊತೆ ವಾದ ಮಾಡಿ. ನೀವು ಇಲ್ಲೇ ಇರಬೇಕು, ಎಲ್ಲಿಗೂ ಹೋಗಲಾರಿರಿ, ಎಂದು ಅವರಿಗೆ ಹೇಳಿ. ಓಹ್, ಅವರು ಆ ಮಾಸ್ಕೋದ ವರ್ತಕನ ಮಗಳನ್ನೇ ಏಕೆ ಮದುವೆಯಾಗಲಿಲ್ಲ! ಹಾಗೆ ಮಾಡಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. ವರ್ತಕನ ಮಗಳು ಅವರಿಗೆ ಹೆಚ್ಚು ಸೂಕ್ತವಾಗಿದ್ದಳು. ತುಂಬ ಸೂಕ್ತವೇ ಆಗಿದ್ದಳು! ಅದು

ನನಗೆ ಖಚಿತವಾಗಿ ಗೊತ್ತು. ಆಗ ನೀವು ಇಲ್ಲೇ ನನ್ನೊಟ್ಟಿಗೇ ಇರಬಹುದಿದ್ದಿತು! ನಿಮಗೆ ಮಿ. ಬೀಕವ್ ಆದರೂ ಏಕೆ ಬೇಕು? ಅವರು ನಿಮಗೆ ಹೇಗೆ ಪ್ರೀತಿ ಪಾತ್ರರಾದರು? ಅವರು ನಿಮಗೆ ಆ ನಿರಿಪಟ್ಟಿ ಮುಂತಾದ ಸಾಮಾನುಗಳನ್ನು ಕೊಂಡುಕೊಟ್ಟರು ಎಂಬುದರಿಂದಾಗಿ ಖಂಡಿತವಾಗಿಯೂ ಅಲ್ಲ! ಆ ನಿರಿಪಟ್ಟಿ ಯಾದರೂ ಏನು ಮಹಾ? ಆ ನಿರಿಪಟ್ಟಿಯ ವಿಷಯವನ್ನು ಎತ್ತುವುದಾದರೂ ಏಕೆ? ಅದು ಅವಿವೇಕ, ನನ್ನ ಪ್ರಿಯೆ. ಇಲ್ಲಿ ಇದು ಜೀವನ್ಮರಣ ಪ್ರಶ್ನೆ, ನಿರಿಪಟ್ಟಿ ಯದಲ್ಲ! ನಿರಿಪಟ್ಟಿಯು ಒಂದು ತುಂಡು ಬಟ್ಟೆಯಷ್ಟೆ. ನಿರಿಪಟ್ಟಿಯು ಒಂದು ನಿಷ್ಪ್ರಯೋಜಕ ಚಿಂದಿ. ನನಗೆ ಸಂಬಳ ಬರುವವರೆಗೂ ಕಾದಿರಿ, ನಾನು ನಿಮಗೆ ಬೇಕಾದಷ್ಟು ನಿರಿಪಟ್ಟಿಯನ್ನು ಕೊಂಡುಕೊಡುತ್ತೇನೆ, ನನ್ನ ಚಿನ್ನ. ಆ ಅಂಗಡಿಯಲ್ಲಿ, ನಿಮಗೆ ಜ್ಞಾಪಕವಿದೆಯೆ? ನನಗೆ ಸಂಬಳ ಬರುವವರೆಗೂ ಕಾದಿರಿ ಅಷ್ಟೆ, ನನ್ನ ಅತ್ಯಂತ ಪ್ರೀತಿಯ ದೇವತೆ! ಓಹ್ ವಾರೆಂಕ, ಅಯ್ಯೋ ದೇವರೇ! ನೀವು ಖಂಡಿತವಾಗಿಯೂ ಮಿ. ಬೀಕವ್‌ರೊಂದಿಗೆ ಹೊರಟುಹೋಗುತ್ತಿರುವಿರಾ? ಸದಾ ಕಾಲಕ್ಕೂ? ಓಹ್, ವಾರೆಂಕ! ಇಲ್ಲ, ನೀವು ಮತ್ತೆ ಬರೆಯಲೇ ಬೇಕು, ಕೇವಲ ಇನ್ನೊಂದೇ ಪತ್ರ! ಆಮೇಲೆ ಮತ್ತೆ ಅಲ್ಲಿಂದ. ನೀವು ಬರೆಯದಿದ್ದರೆ, ಈಗ ನನ್ನ ಬಳಿ ಇರುವ ಪತ್ರವೇ ಕೊನೆಯದಾಗುತ್ತೆ. ಖಂಡಿತ ಇದೇ ಕೊನೆಯದಾಗ ಲಾರದು. ಅದು ಹೇಗೆ ಸಾಧ್ಯ? ಇದ್ದಕ್ಕಿದ್ದಂತೆ–ಕೊನೆಯ ಪತ್ರ! ಆದರೂ ನಾನಂತೂ ಬರೆಯುತ್ತಲೇ ಇರುತ್ತೇನೆ. ಮತ್ತೆ ನೀವೂ ಬರೆಯಿರಿ. ನನ್ನ ಬರವಣಿಗೆಯ ಶೈಲಿ ಈಗಷ್ಟೆ ಸರಿಯಾದ ರೂಪ ತಾಳುತ್ತಿದೆ... ಓಹ್, ನನ್ನ ಚಿನ್ನ, ಶೈಲಿಯ ಬಗೆಗೆ ಚಿಂತೆ! ನಾನು ಏನು ಹೇಳುತ್ತಿದ್ದೇನೋ, ಏನು ಬರೆಯುತ್ತಿದ್ದೇನೋ ನನಗೇ ತಿಳಿಯದು. ಪರವಾಗಿಲ್ಲ, ಬರೆಯುತ್ತಾ, ಬರೆಯುತ್ತಾ ಹೋಗುತ್ತಿದ್ದ ರಾಯಿತು... ನನ್ನ ಪುಟ್ಟ ಹಕ್ಕಿ, ನನ್ನ ಅತ್ಯಂತ ಪ್ರೀತಿಪಾತ್ರ ದೇವತೆ, ನನ್ನವಳೇ ಆದ ಪ್ರಿಯತಮೆ!

**1846**



# ಶ್ವೇತ ರಾತ್ರಿಗಳು

## ಒಂದು ಭಾವಪೂರಿತ ಪ್ರೇಮಕಥೆ

## (ಕನಸುಗಾರನೊಬ್ಬನ ನೆನಪುಗಳಿಂದ)

...ಅಥವಾ, ಒಂದು ಕ್ಷಣಕಾಲವಾದರೂ ನಿಮ್ಮ ಹೃದಯದ ಸಮೀಪದಲ್ಲಿ ತಾನು ಇರಬಹುದು, ಎಂದು ಹುಟ್ಟಿದನೆ ಅವನು?

– ಐ. ತುರ್ಗೇನೆವ್

# ಮೊದಲನೆಯ ರಾತ್ರಿ

ಅದೊಂದು ಸುಂದರ ರಾತ್ರಿಯಾಗಿತ್ತು, ಪ್ರಿಯ ಓದುಗ. ಎಂತಹ ರಾತ್ರಿಯೆಂದರೆ, ನಾವು ಯುವಕರಾಗಿರುವಾಗಲಷ್ಟೆ ತಿಳಿಯಲು ಸಾಧ್ಯವಿರುವಂಥ ರಾತ್ರಿ. ಆಕಾಶದಲ್ಲಿ ನಕ್ಷತ್ರಗಳು ತುಂಬಿದ್ದವು. ಆಗಸವು ಎಷ್ಟು ನಿರ್ಮಲವಾಗಿದ್ದಿತೆಂದರೆ, ಅದನ್ನು ನೋಡಿ ಇಂತಹ ಆಗಸದ ಕೆಳಗೆ ನಾನಾ ರೀತಿಯ ಚಿತ್ತಸ್ತಿಮಿತವಿಲ್ಲದ ಹಾಗೂ ಕೋಪ ಸ್ವಭಾವದ ಜನ ಹೇಗೆ ವಾಸಿಸಿಕೊಂಡಿರಲು ಸಾಧ್ಯವೋ ಎಂಬ ಪ್ರಶ್ನೆಯನ್ನು ನಿಮಗೆ ನೀವೇ ಹಾಕಿಕೊಳ್ಳದೆ ಇರಲು ಸಾಧ್ಯವೇ ಇರುತ್ತಿರಲಿಲ್ಲ. ಇದೂ ಒಂದು ಯುವ ಸಹಜ ಪ್ರಶ್ನೆಯೇ. ಹೌದು, ಪ್ರಿಯ ಓದುಗ, ನಿಜಕ್ಕೂ ತುಂಬ ಯುವ ಸಹಜ ಪ್ರಶ್ನೆ. ಆದರೆ ದೇವರು ನಿಮ್ಮ ಹೃದಯವನ್ನು ಇಂತಹ ಪ್ರಶ್ನೆಗಳಿಂದಲೇ ಹೆಚ್ಚು ಆಗಾಗ್ಗೆ ಕಾಡಿಸುತ್ತಿರಲಿ. ನಾನಾ ರೀತಿಯ ಚಿತ್ತಸ್ತಿಮಿತವಿಲ್ಲದ ಹಾಗೂ ಕೋಪ ಸ್ವಭಾವದ ಜನರ ಬಗೆಗೆ ಹೇಳುವಾಗ ನಾನು ಆ ಇಡೀ ದಿನ ನನ್ನ ಸ್ವಂತ ಆದರ್ಶಯುತ ವರ್ತನೆಯನ್ನೇ ನೆನಪಿಗೆ ತಂದುಕೊಳ್ಳದಿರಲಾರೆ. ಬೆಳಿಗಿನಿಂದಲೂ ನಾನು ಒಂದು ವಿಚಿತ್ರ ವ್ಯಾಕುಲತೆಯ ಭಾವನೆಗೆ ಸಿಕ್ಕಿ ಬಿದ್ದಿದ್ದೆ. ಎಲ್ಲರೂ ನನ್ನನ್ನು ಒಂಟಿಯಾಗಿ ಬಿಟ್ಟು ಹೋಗುತ್ತಿದ್ದಾರೆ, ಎಲ್ಲರೂ ನನ್ನನ್ನು ದೂರವಮಾಡುತ್ತಿದ್ದಾರೆ, ಎಂದು ನಾನು ಇದ್ದಕ್ಕಿದ್ದಂತೆ ಕಲ್ಪಿಸಿಕೊಂಡೆ. ಆದರೆ ಯಾರು ಈ ಎಲ್ಲರೂ ಎಂಬ ಪ್ರಶ್ನೆಯನ್ನು ಕೇಳುವುದು ಉಚಿತವೇ ಎನ್ನಿ. ಏಕೆಂದರೆ ನಾನು ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಈಗ ಎಂಟು ವರ್ಷಗಳಿಂದ ವಾಸಿಸುತ್ತಿದ್ದೇನೆ, ಅಂತಹ ಹೇಳಿಕೊಳ್ಳುವಂತಹ ಸ್ನೇಹಿತರನ್ನು ಮಾಡಿಕೊಳ್ಳುವುದರಲ್ಲಿ ಎಷ್ಟು ಮಾತ್ರವೂ ಯಶಸ್ವಿಯಾಗಿಲ್ಲ. ಆದರೆ ನಾನು ಯಾರನ್ನೇ ಮಿತ್ರರನ್ನಾಗಿ ಏಕೆ ಮಾಡಿಕೊಳ್ಳಬೇಕು? ಹಾಗೆ ನೋಡಿದರೆ, ನಾನು ಇಡೀ ಸೇಂಟ್ ಪೀಟರ್ಸ್‌ಬರ್ಗ್‌ನೊಂದಿಗೇ ಸ್ನೇಹದಿಂದಿದ್ದೇನೆ. ಆದ್ದರಿಂದಲೇ ಇಡೀ ನಗರದ ಜನರು ಇದ್ದಕ್ಕಿದ್ದಂತೆ ತಮ್ಮ ಸಾಮಾನುಸರಂಜಾಮುಗಳನ್ನೆಲ್ಲ ಕಟ್ಟಿಕೊಂಡು ಗ್ರಾಮಾಂತರಕ್ಕೆ ಹೊರಟಾಗ, ಎಲ್ಲರೂ ನನ್ನನ್ನು ಕೈ ಬಿಡುತ್ತಿದ್ದಾರೆಂದೇ ನಾನು

ಕಲ್ಪಿಸಿಕೊಂಡೆ. ಒಂಟಿಯಾಗಿಯೇ ಉಳಿಯುವುದಕ್ಕೆ ನನಗೆ ಹೆದರಿಕೆಯಾಯಿತು. ಇಡೀ ಮೂರು ದಿನ ನಾನು ನಗರದ ಬೀದಿಗಳಲ್ಲಿ ಮೇಲಿನಿಂದ ಕೆಳಕ್ಕೆ ತುಂಬ ಖಿನ್ನನಾಗಿ ಸುತ್ತಾಡಿದೆ. ನನಗೇನಾಗಿದ್ದಿತು ಎಂಬುದನ್ನೇ ನಾನು ಅರ್ಥಮಾಡಿಕೊಳ್ಳಲು ಅಸಮರ್ಥನಾಗಿದ್ದೆ. ನೆವ್‌ಸ್ಕಿ ಪ್ರಾಸ್ಪೆಕ್ಟ್‌ಗೆ ಹೋಗುತ್ತಿದ್ದೆ, ಇಲ್ಲವೇ ಪಾರ್ಕಿಗೆ ಹೋಗುತ್ತಿದ್ದೆ, ಇಲ್ಲವೇ ನದಿಯ ದಡದ ಮೇಲೆ ಅಡ್ಡಾಡುತ್ತಿದ್ದೆ. ಎಲ್ಲಿ ಹೋದರೂ ನಾನು ಈಗ ಒಂದು ಇಡೀ ವರ್ಷ ಅದೇ ಸ್ಥಳದಲ್ಲಿ ಅದೇ ಸಮಯದಲ್ಲಿ ಸಂಧಿಸುತ್ತಿದ್ದ ಜನರನ್ನು ಕಾಣದಾಗಿದ್ದೆ. ನಿಜ, ಅವರಿಗೆ ನನ್ನ ಪರಿಚಯವಿರಲಿಲ್ಲ, ಆದರೆ ನಾನು ಅವರನ್ನು ತಿಳಿದಿದ್ದೆ. ನಾನು ಅವರನ್ನು ಚೆನ್ನಾಗಿಯೇ ತಿಳಿದಿದ್ದೇನೆ, ಅವರ ಮುಖಗಳ ಅಧ್ಯಯನ ಮಾಡಿದ್ದೇನೆ. ಅವರು ಸಂತೋಷದಿಂದಿದ್ದಾಗ ನಾನೂ ಆನಂದಪಟ್ಟಿದ್ದೇನೆ, ಅವರು ದುಃಖದಿಂದ ಆವೃತರಾಗಿದ್ದಾಗ ನಾನೂ ವಿಷಾದಪಟ್ಟಿದ್ದೇನೆ. ಪ್ರತಿದಿನವೂ ಅದೇ ಹೊತ್ತಿನಲ್ಲಿ ನಾನು ಫೊಂತಾಂಕಾ ನದಿಯ ದಡದ ಮೇಲೆ ಸಂಧಿಸುತ್ತಿದ್ದ ಒಬ್ಬ ವೃದ್ಧರೊಂದಿಗೆ ಬಹುಮಟ್ಟಿಗೆ ಸ್ನೇಹವನ್ನೂ ಬೆಳೆಸಿದ್ದೆ. ಅವರ ಮುಖ ಗಂಭೀರವಾಗಿ ಚಿಂತಾಕ್ರಾಂತವಾಗಿರುತ್ತಿದ್ದಿತು. ಅವರು ಯಾವಾಗಲೂ ತಮ್ಮತಮ್ಮಲ್ಲೇ ಪಿಸುಗುಟ್ಟಿಕೊಳ್ಳುತ್ತಿದ್ದರು, ಎಡಗೈಯನ್ನು ಭಾವಸೂಚಕವಾಗಿ ಆಡಿಸುತ್ತಿದ್ದರು. ಬಲಗೈಯಲ್ಲಿ ಒಂದು ಉದ್ದವಾದ ಗಂಟುಗಂಟಾದ ಚಿನ್ನದ ಗುಬುಟವಿದ್ದ ಕೋಲು ಹಿಡಿದಿರುತ್ತಿದ್ದರು. ಅವರೂ ನನ್ನನ್ನು ಗಮನಿಸಿದ್ದರು. ನನ್ನಲ್ಲಿ ಪ್ರಾಮಾಣಿಕ ಆಸಕ್ತಿ ತಳೆದರು. ಪ್ರತಿದಿನವೂ ಫೊಂತಾಂಕಾದಲ್ಲಿ ಅದೇ ಸ್ಥಳದಲ್ಲಿ ಅದೇ ಹೊತ್ತಿನಲ್ಲಿ ಅವರು ನನ್ನನ್ನು ಸಂಧಿಸದೆ ಹೋದರೆ ತುಂಬ ನಿರುತ್ಸಾಹಿತರಾಗುತ್ತಿದ್ದರೆಂದೇ ನಾನು ಖಂಡಿತ ಹೇಳಬಲ್ಲೆ. ಆದ್ದರಿಂದಲೇ ನಾವು ಕೆಲವು ವೇಳೆ, ಅದರಲ್ಲೂ ವಿಶೇಷವಾಗಿ ನಾವಿಬ್ಬರೂ ಸಂತಸದ ಮನೋಭಾವದಲ್ಲಿದ್ದಾಗ, ಪರಸ್ಪರ ಶುಭಾಶಯ ಹೇಳಿಕೊಳ್ಳುತ್ತಿದ್ದೆವು. ಎರಡು ಇಡೀ ದಿನ ಸಂಧಿಸದೆಯೇ ಅನಂತರ ಮೂರನೆಯ ದಿನ ಸಂಧಿಸಿದಾಗ ನಾವು ಪರಸ್ಪರರಿಗೆ ನಮಸ್ಕಾರ ತಿಳಿಸಲು ನಮ್ಮ ಹ್ಯಾಟುಗಳನ್ನು ಇನ್ನೇನು ಎತ್ತಲಿದ್ದೆವು. ಆದರೆ ಅದೃಷ್ಟವಶಾತ್ ನಾವು ಸಕಾಲದಲ್ಲೇ ನಮ್ಮ ಉತ್ಸಾಹವನ್ನು ತಡೆಹಿಡಿದೆವು, ನಮ್ಮ ಕೈಗಳನ್ನು ಕೆಳಗಿಳಿಸಿದೆವು, ನಮ್ಮ ಹೃದಯಗಳಲ್ಲೇ ಪರಸ್ಪರರ ಬಗೆಗೆ ಅಪ್ರಕಟಿತ ಸಹಾನುಭೂತಿ ತುಂಬಿಕೊಂಡು ಒಬ್ಬರ ಪಕ್ಕದಲ್ಲೊಬ್ಬರು ಹಾದು ಹೋದೆವು.

ನಾನು ಇಲ್ಲಿನ ಮನೆಗಳ ಜೊತೆಗೂ ಸ್ನೇಹ ಬೆಳೆಸಿಕೊಂಡಿದ್ದೇನೆ. ನಾನು ಬೀದಿಯಲ್ಲಿ ನಡೆದು ಹೋಗುತ್ತಿರುವಾಗ ಅವುಗಳೆಲ್ಲ ನನ್ನ ಎದುರಿಗೆ ಒಂದು ಹೆಜ್ಜೆ ಮುಂದೆ ಬಂದು ನಿಂತು, ತಮ್ಮೆಲ್ಲ ಕಿಟಕಿಗಳಿಂದಲೂ ನನ್ನನ್ನೇ ದಿಟ್ಟಿಸಿ ನೋಡುತ್ತ ನನ್ನೊಂದಿಗೆ ಮಾತನಾಡುವಂತೆಯೇ ಕಂಡುಬರುತ್ತವೆ. "ನೀವು

ಹೇಗಿದ್ದೀರಿ? ನಾನಂತೂ ಚೆನ್ನಾಗಿದ್ದೇನೆ. ಮೇ ತಿಂಗಳಲ್ಲಿ ನನಗೆ ಇನ್ನೊಂದು ಅಂತಸ್ತು ಸೇರಿಸಲಾಗುವುದು !" ಎಂದೋ, "ಹೇಗಿದ್ದೀರಿ? ನಾಳೆಯಿಂದ ನನ್ನ ರಿಪೇರಿ ಪ್ರಾರಂಭವಾಗುತ್ತೆ !" ಎಂದೋ, "ನಾನು ಬೆಂಕಿಗೆ ಆಹುತಿಯಾಗಲಿದ್ದೆ, ಎಷ್ಟು ಹೆದರಿಬಿಟ್ಟಿದ್ದೆ !" ಎಂದೋ ಏನಾದರೂ ಹೇಳುವಂತೆ ಕಂಡುಬರುತ್ತವೆ. ಅವುಗಳಲ್ಲಿ ನನ್ನ ಮೆಚ್ಚಿನ ಮನೆಗಳೂ ಇವೆ. ಅವು ನನ್ನ ಆತ್ಮೀಯ ಗೆಳೆಯರು. ಅವುಳಗಲ್ಲೊಂದು ಈ ಬೇಸಿಗೆಯಲ್ಲಿ ವಾಸ್ತುಶಿಲ್ಪಿಯ ಕೈಯಲ್ಲಿ ರೋಗೋಪ ಚಾರ ಪಡೆಯುವ ಉದ್ದೇಶ ಹೊಂದಿದೆ. ನಾನು ಇಲ್ಲಿಗೆ ಪ್ರತಿದಿನವೂ ಬಂದು ಅದಕ್ಕೆ ಯಾವ ಅಪಾಯವೂ ತಟ್ಟದಂತೆ ನೋಡಿಕೊಳ್ಳುತ್ತೇನೆ, ಅದಕ್ಕೆ ಆಶೀರ್ವ ದಿಸುತ್ತೇನೆ. ಆದರೆ ಒಂದು ಅತ್ಯಂತ ಸುಂದರವಾದ ನಸುಗೆಂಪಿನ ಪುಟ್ಟ ಮನೆಯೊಂ ದಕ್ಕೆ ಏನಾಯಿತೆಂಬುದನ್ನು ನಾನೆಂದಿಗೂ ಮರೆಯಲಾರೆ. ಅದು ಎಷ್ಟು ಮುದ್ದಾದ ಪುಟ್ಟ ಮನೆಯಾಗಿತ್ತು. ನನ್ನನ್ನು ಕಂಡಾಗಲೆಲ್ಲ ಎಷ್ಟು ಸ್ನೇಹಯುತವಾಗಿ ನಸು ನಗುತ್ತಿತ್ತು. ತನ್ನ ಅಕ್ಕಪಕ್ಕದ ಕೊಳಕು ಮನೆಗಳ ಮಧ್ಯೆ ಎಷ್ಟು ಠೀವಿಯಿಂದ ನಿಂತಿರುತ್ತಿತ್ತು. ಅದರ ಪಕ್ಕದಲ್ಲಿ ಹೋದಾಗಲೆಲ್ಲ ನನ್ನ ಹೃದಯ ಆನಂದದಿಂದ ನರ್ತಿಸುತ್ತಿತ್ತು. ಆದರೆ ಕಳೆದ ವಾರ ನಾನು ಆ ಬೀದಿಯಲ್ಲಿ ಹೋಗುತ್ತಿದ್ದಾಗ ಒಂದು ದುಃಖದ ಆಕ್ರಂದನ ಕೇಳಿಬಂದಿತು: "ಅವರು ನನಗೆ ಹಳದಿ ಬಣ್ಣ ತೊಡೆ ಯುತ್ತಿದ್ದಾರೆ !" ನಾನು ನನ್ನ ಮಿತ್ರನತ್ತ ನೋಡಿದೆ. ಎಂಥ ಪಶುಗಳು ! ಅನಾ ಗರೀಕರು ! ಅವರು ಯಾವುದನ್ನೂ ಬಿಟ್ಟಿರಲಿಲ್ಲ. ಕಂಬಗಳು, ಕಾರ್ನೀಸುಗಳು ಎಲ್ಲಕ್ಕೂ ಹಳದಿ ಹಚ್ಚಿದ್ದರು. ನನ್ನ ಮಿತ್ರ ಕನೇರಿ ಹಕ್ಕಿಯಂತೆ ಹಳದಿಯಾಗಿ ಬಿಟ್ಟಿದ್ದ. ಅದನ್ನು ಕಂಡು ನನಗೆ ಕಾಮಾಲೆ ರೋಗ ತಗುಲಿದಂತಾಯಿತು. ಇಂದಿಗೂ ನಾನು ಅಲ್ಲಿಗೆ ಹೋಗಿ ನನ್ನ ನತದೃಷ್ಟನಾದ, ವಿಕಾರಗೊಳಿಸಲ್ಪಟ್ಟ, 'ಸ್ವರ್ಗ ಸಾಮ್ರಾಜ್ಯ'ದ ಬಣ್ಣ ಬಳಿಯಲ್ಪಟ್ಟ, ಮಿತ್ರನನ್ನು ಕಂಡುಬರುವಂತೆ ನನ್ನ ಮನಸ್ಸನ್ನು ಒಲಿಸಿಕೊಳ್ಳದಾಗಿದ್ದೇನೆ.

ಹೀಗೆ ನೀವೇ ಕಾಣುವಂತೆ, ಪ್ರಿಯ ಓದುಗ, ನಾನು ಇಡೀ ಸೇಂಟ್ ಪೀಟರ್ಸ್ ಬರ್ಗ್‌ನೊಂದಿಗೇ ಸ್ನೇಹ ಬೆಳೆಸಿಕೊಂಡಿದ್ದೇನೆ.

ನನಗೆ ಉತ್ಸಾಹ ಕುಗ್ಗಿದ ಮನೋಸ್ಥಿತಿ ಉಂಟಾಗಿದ್ದಿತೆಂದು ನಾನಾಗಲೇ ತಿಳಿಸಿದ್ದೇನಷ್ಟೆ. ಈ ಮನೋಸ್ಥಿತಿ ಮೂರು ದಿನ ಪೂರ್ತಿ ಇದ್ದಿತು. ಅನಂತರವಷ್ಟೆ ನಾನು ಅದಕ್ಕೆ ಕಾರಣ ತಿಳಿದುಕೊಂಡುದು. ಹೊರಗೆ ಹೋದಾಗಲೂ ಮುಜುಗರ (ಅಲ್ಲಿದ್ದುದು ಇಲ್ಲ, ಇಲ್ಲಿದ್ದುದು ಕಾಣಬರುತ್ತಿಲ್ಲ, ಇಂಥ... ಇಂಥವರಿಗೆ ಏನಾ ಯಿತೋ?) ಮನೆಯೊಳಗಿದ್ದಾಗಲೂ ಅಶಾಂತಿ. ನನ್ನ ಗೃಹವಿಭಾಗದಲ್ಲಿ ಏನು ತಪ್ಪಾಗಿದೆ ಎಂಬುದನ್ನು ಕಂಡುಹಿಡಿಯಲು ನಾನು ಎರಡು ರಾತ್ರಿ ಒಂದೇ ಸಮನಾಗಿ ನನ್ನ ತಲೆ ಚಚ್ಚಿಕೊಂಡೆ. ಯಾಕಿದು ನನಗೆ ಇಷ್ಟು ಅಪ್ರಸನ್ನವಾಗಿ

ಕಂಡುಬರುತ್ತಿದೆ? ಉತ್ತರ ಹುಡುಕುತ್ತ ನಾನು ನನ್ನ ಸುತ್ತ ಹಸುರಾದ ಕೊಳಕಾದ ಗೋಡೆಗಳನ್ನು, ಜೇಡರ ಬಲೆಗಳು ತೂಗಿಬಿದ್ದಿದ್ದ ಒಳಮಾಳಿಗೆಯನ್ನು ಕಂಡೆ. ಮತ್ರ್ಯೋನಳು ಈ ಜೇಡರ ಬಲೆಗಳನ್ನು ಬೇಕಾದಷ್ಟು ಬೆಳೆಯುವಂತೆ ಬಿಟ್ಟು ಕೊಟ್ಟಿದ್ದಳು. ನನ್ನಲ್ಲಿದ್ದ ಎಲ್ಲ ಪೀಠೋಪಕರಣಗಳನ್ನೂ ಪರೀಕ್ಷಿಸಿದೆ, ಪ್ರತಿಯೊಂದು ಕುರ್ಚಿಯನ್ನೂ ಕಣ್ಣಿಟ್ಟು ನೋಡಿದೆ, ಅಲ್ಲೇ ಬಹುಶಃ ನನ್ನ ತೊಂದರೆಗೆ ಮೂಲ ಅಡಗಿದ್ದಿತೆಂದು ಭಾವಿಸಿಕೊಂಡು. ಏಕೆಂದರೆ, ಏಕೈಕ ಕುರ್ಚಿಯೂ ಹಿಂದಿನ ದಿನ ಇದ್ದ ಸ್ಥಳದಲ್ಲೇ ಇರದೆ ಬೇರೆ ಸ್ಥಳದಲ್ಲಿದ್ದರೆ ನಾನು ತಳಮಳಿಸುತ್ತೇನೆ. ನಾನು ಕಿಟಕಿ ಯತ್ತ ನೋಡಿದೆ, ಆದರೂ ನನ್ನ ಮನಸ್ಸಿಗೆ ಸಮಾಧಾನ ಸಿಗಲಿಲ್ಲ! ಮತ್ರ್ಯೋನ ಳನ್ನು ಕರೆದು ಜೇಡರ ಬಲೆಗಳ ಬಗೆಗೂ ಒಟ್ಟಿನಲ್ಲಿ ಮನೆಯಲ್ಲಿ ಏನೇನೂ ಅಚ್ಚು ಕಟ್ಟಿಲ್ಲದಿರುವ ಬಗೆಗೂ, ತಂದೆಯಂತೆ ಒಂದಿಷ್ಟು ಬಯ್ಯಬೇಕೆಂದೂ ನನಗನಿಸಿತು. ಆದರೆ ಅವಳು ನನ್ನತ್ತ ಆಶ್ಚರ್ಯದಿಂದ ನೋಡಿದಳಷ್ಟೆ. ಒಂದು ಮಾತನ್ನೂ ಆಡದೆ ಕೋಣೆ ಬಿಟ್ಟುಹೋದಳು. ಹಾಗಾಗಿ ಜೇಡರ ಬಲೆಗಳು ಇಂದಿಗೂ ಹಾಗೆಯೇ ಉಳಿದಿವೆ. ಕೊನೆಗೆ ಈ ಬೆಳಿಗ್ಗೆಯಷ್ಟೆ, ನನ್ನ ಮುಜುಗರಕ್ಕೆ ಏನು ಕಾರಣ ಅನ್ನುವುದನ್ನು ತಿಳಿದೆ. ಮತ್ತಿನ್ನೇನು – ಅವರೆಲ್ಲ ನನ್ನಿಂದ ಗ್ರಾಮಾಂತ ರಕ್ಕೆ ಕಂಬಿಕೀಳುತ್ತಿದ್ದರು! ಕ್ಷಮಿಸಿ ಈ ಅಸಭ್ಯ ಪದಪ್ರಯೋಗಕ್ಕೆ. ಆದರೆ ನನ್ನ ಆಗಿನ ಸ್ಥಿತಿಯಲ್ಲಿ ನಾನು ಯಾವುದೇ ಉದಾತ್ತ ಪದದ ಆಯ್ಕೆಗೂ ಮೀರಿದ್ದೆ.... ಏಕೆಂದರೆ, ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ವಾಸಿಸುತ್ತಿದ್ದ ಪ್ರತಿಯೊಬ್ಬರೂ ಗ್ರಾಮಾಂತ ರಕ್ಕೆ ಹೋಗುತ್ತಿದ್ದರು ಇಲ್ಲವೇ ಹೋಗಿದ್ದರು; ಏಕೆಂದರೆ, ಬಂಡಿಯನ್ನು ಬಾಡಿಗೆಗೆ ಗೊತ್ತು ಮಾಡಿಕೊಳ್ಳುತ್ತಿದ್ದ ಗೌರವಾರ್ಹರಾಗಿ ಕಾಣುತ್ತಿದ್ದ ಪ್ರತಿಯೊಬ್ಬ ಸಜ್ಜ ನರಲ್ಲೂ ನಾನು, ತಮ್ಮ ದಿನದ ಕೆಲಸವನ್ನು ಮುಗಿಸಿದನಂತರ ತಮ್ಮ ಕುಟುಂಬ ದವರೊಂದಿಗೆ ಸೇರಿಕೊಳ್ಳಲು ಗ್ರಾಮಾಂತರಕ್ಕೆ ಧಾವಿಸುತ್ತಿದ್ದ ಶಾಂತ ಸದ್ಗೃಹ ಸ್ಥರನ್ನು ಕಾಣುತ್ತಿದ್ದೆ; ಏಕೆಂದರೆ ಬೀದಿಯಲ್ಲಿ ಕಾಣುತ್ತಿದ್ದ ಪ್ರತಿಯೊಬ್ಬ ವ್ಯಕ್ತಿಯೂ ಈಗ ಒಂದು ವಿಚಿತ್ರ ನೋಟ ಹೊಂದಿರುತ್ತಿದ್ದ. ಆ ನೋಟವು ಹೋಗಿಬರು ತ್ತಿದ್ದವರಿಗೆಲ್ಲ "ನಾವಿಲ್ಲಿ ಪ್ರಾಸಂಗಿಕವಾಗಷ್ಟೆ ಇದ್ದೇವೆ, ಇನ್ನು ಕೆಲವೇ ಗಂಟೆಗಳಲ್ಲಿ ಊರು ಬಿಟ್ಟು ಹೋಗಲಿರುವೆವು" ಎಂದು ಹೇಳುವಂತಿದ್ದಿತು. ಕಿಟಕಿಯೊಂದು ತೆರೆಯಲ್ಪಟ್ಟು ನೀಳವಾದ ಸಕ್ಕರೆ ಬಿಳುಪಿನ ಬೆರಳುಗಳು ಕಿಟಕಿಯ ಚೌಕಟ್ಟಿನ ಮೇಲೆ ಮೊದಲು ಕುಟ್ಟುತ್ತಿದ್ದು ಆಮೇಲೆ ಚೆಲುವೆಯಾದ ಹುಡುಗಿಯೊಬ್ಬಳು ತನ್ನ ತಲೆಯನ್ನು ಹೊರಕ್ಕೆ ದೂಡಿ ಕುಂಡಗಳಲ್ಲಿ ಹೂಗಳನ್ನು ಮಾರುತ್ತಿದ್ದ ಮಾರಾಟ ಗಾರನನ್ನು ಕರೆಯುವುದನ್ನು ಕಂಡರೆ, ನಾನು ತಕ್ಷಣವೇ ಅಲ್ಲೇ ಆಗಲೇ, ಆ ಹೂಗಳನ್ನು ಕೊಂಡುಕೊಳ್ಳುತ್ತಿರುವುದು ಜನರು ನಗರದಲ್ಲಿನ ಉಸಿರುಕಟ್ಟಿಸು ವಂಥ ಮನೆಗಳಲ್ಲಿ ಹೂಗಳ ಕಂಪನ್ನೂ ವಸಂತಮಾಸದ ಸೊಬಗನ್ನೂ ಆನಂದಿಸ

ಬಯಸುತ್ತಾರೆಂಬ ಕಾರಣದಿಂದಲ್ಲವೇ ಅಲ್ಲ, ಆದರೆ ಬಹು ಬೇಗನೆಯೇ ಅವರೆಲ್ಲ ಗ್ರಾಮಾಂತರಕ್ಕೆ ಹೋಗಲಿದ್ದರು ಮತ್ತು ಈ ಹೂಗಳನ್ನು ತಮ್ಮೊಂದಿಗೆ ಕೊಂಡೊಯ್ಯಲಿದ್ದರು, ಎಂಬ ಕಾರಣದಿಂದ, ಎಂದು ಕಲ್ಪಿಸಿಕೊಳ್ಳುತ್ತಿದ್ದೆ. ಅಷ್ಟೇ ಅಲ್ಲ, ನಾನು ಈ ಹೊಸತಾದ ವಿಚಿತ್ರವಾದ ವೀಕ್ಷಣಾ ಕ್ಷೇತ್ರದಲ್ಲಿ ಆಗಲೇ ಎಂಥ ಮುನ್ನಡೆ ಸಾಧಿಸಿದ್ದೆನೆಂದರೆ, ಹೊರ ನೋಟದಿಂದಲೇ ಪ್ರತಿಯೊಬ್ಬರೂ ಎಲ್ಲಿ ತಮ್ಮ ಬೇಸಿಗೆ ನಿವಾಸ ಹೊಂದಿದ್ದರು ಎಂಬುದನ್ನು ತಪ್ಪಿಲ್ಲದಂತೆ ಹೇಳಬಲ್ಲವನಿದ್ದೆ.

ಕಾಮೆನ್ನಿ ಹಾಗೂ ಅಪ್ಟೇಕರ್ಸ್ಕಿ ದ್ವೀಪಗಳಿಂದ ಅಥವಾ ಪೀಟರ್‌ಹಾಫ್ ಕಡೆಯಿಂದ ಬಂದವರನ್ನು, ಅವರ ಘನಗಾಂಭೀರ್ಯದ ವರ್ತನೆಯಿಂದ, ಅವರ ಅಂದಚೆಂದದ ಬೇಸಿಗೆ ಉಡುಪುಗಳಿಂದ ಮತ್ತು ಅವರನ್ನು ನಗರಕ್ಕೆ ಕರೆತಂದ ಸೊಗಸಾದ ಬಂಡಿಗಳಿಂದ, ಗುರುತು ಹಿಡಿಯಬಹುದಿತ್ತು. ಪರ್ಗೊಲೊವೊ ನಿಂದಲೂ ಇನ್ನೂ ದೂರದ ಸ್ಥಳಗಳಿಂದಲೂ ಬಂದವರು ನನ್ನ ಮೇಲೆ ತಮ್ಮ ವಿವೇಕ ಜ್ಞಾನ ಹಾಗೂ ಘನತೆಯಿಂದ ತಕ್ಷಣವೇ ಪ್ರಭಾವ ಬೀರುತ್ತಿದ್ದರು. ಕ್ರೆಸ್ಟೋವ್‌ಸ್ಕಿ ದ್ವೀಪದ ಬೇಸಿಗೆ ನಿವಾಸಿಯ ಮುಖದ ಮೇಲೆ ನಿರಾತಂಕದ ಆನಂದದ ಭಾವ ಅಚ್ಚೊತ್ತಿರುತ್ತಿದ್ದಿತು.

ಟೇಬಲ್ಲುಗಳು ಕುರ್ಚಿಗಳು, ಸೋಫಾಗಳು, ತುರ್ಕಿಯ ಅಥವಾ ಬೇರಾವುದೇ ದೇಶದ ರತ್ನಕಂಬಳಿಗಳು ಇವೇ ಮುಂತಾದ ಪೀಠೋಪಕರಣಗಳನ್ನೂ ಇತರ ಗೃಹೋಪಯೋಗಿ ಸಾಮಾನುಗಳನ್ನೂ, ಎತ್ತರವಾಗಿ ಹೇರಿಕೊಂಡು ಅವೆಲ್ಲವುಗಳ ಮೇಲೆ ತನ್ನ ಯಜಮಾನನ ಸಾಮಾನುಗಳನ್ನೆಲ್ಲ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿರುವಂಥ ಸೊರಗಿದ ದೇಹದ ಅಡಿಗೆಯವಳನ್ನು ಕೂರಿಸಿ ಕೊಂಡು, ತಾವೇ ತಮ್ಮ ತಗ್ಗು ಬಂಡಿಗಳ ಪಕ್ಕದಲ್ಲಿ ಲಗಾಮನ್ನು ಕೈಯಲ್ಲಿ ಹಿಡಿದುಕೊಂಡು ಸೋಮಾರಿಗಳಂತೆ ಮೆಲ್ಲಗೆ ನಡೆದು ಹೋಗುತ್ತಿರುವ ಕೋಚ್ ಮನ್‌ಗಳ ದೊಡ್ಡ ಮೆರವಣಿಗೆಯನ್ನು ನಾನು ಸಂಧಿಸಿದಾಗಾಗಲೀ; ಪೀಠೋಪಕರಣಗಳನ್ನೂ ಪಾತ್ರೆಪರಟೆಗಳನ್ನೂ ತುಂಬಿಕೊಂಡು ನೇವಾ ಅಥವಾ ಫೊಂತಾಂಕಾ ನದಿಗಳ ಮೇಲೆ ಚೋರ್ನಯ ನದಿಯ ಕಡೆಗೆ ಅಥವಾ ದ್ವೀಪಗಳ ಕಡೆಗೆ ತೇಲಿಕೊಂಡು ಹೋಗುತ್ತಿರುವ ದೋಣಿಗಳನ್ನು ವೀಕ್ಷಿಸಿದಾಗಾಗಲೀ – ಈ ಬಂಡಿಗಳೂ ದೋಣಿಗಳೂ ನನ್ನ ಕಣ್ಣಿಗೆ ಹತ್ತುಪಟ್ಟು ನೂರುಪಟ್ಟು ಹೆಚ್ಚಾಗಿ ಕಾಣ ಬರುತ್ತಿದ್ದವು, ಎಲ್ಲವೂ ಮೇಲೆದ್ದು ಗ್ರಾಮಾಂತರದ ಹಾದಿ ಹಿಡಿದು ಹೊರಟಿದ್ದವು, ಎಲ್ಲವೂ ತಂಡೋಪತಂಡವಾಗಿ ಕಾರವಾನ್‌ಗಳಲ್ಲಿ ಗ್ರಾಮಾಂತರಕ್ಕೆ ಹೊರಟಿದ್ದವು, ಸೇಂಟ್ ಪೀಟರ್ಸ್‌ಬರ್ಗ್ ನಗರವೇ ಒಂದು ಮರುಭೂಮಿಯಾಗುವ ಭೀತಿಗೆ ಒಳಗಾಗಿದ್ದಿತು, ಎಂದು ನನಗೆ ಕಂಡುಬರುತ್ತಿದ್ದಿತು. ಆಮೇಲೆ ನನಗೆ ಅವಮಾನವಾದಂತಾಯಿತು, ಘಾಸಿಗೊಂಡಂತಾಯಿತು, ದುಃಖವಾಯಿತು –

ನನಗೆ ಗ್ರಾಮಾಂತರದಲ್ಲಿ ಎಲ್ಲಿ ಹೋಗಲೂ ಎಷ್ಟು ಮಾತ್ರವೂ ಸ್ಥಳವೂ ಇರಲಿಲ್ಲ, ಕಾರಣವೂ ಇರಲಿಲ್ಲ. ನಾನು ಪ್ರತಿಯೊಂದು ಬಂಡಿಯೊಂದಿಗೂ ಬಂಡಿಯನ್ನು ಬಾಡಿಗೆಗೆ ಗೊತ್ತು ಮಾಡಿಕೊಳ್ಳುವ ಪ್ರತಿಯೊಬ್ಬ ಗೌರವಾರ್ಹರಾಗಿ ಕಾಣುವ ಸಜ್ಜನರೊಂದಿಗೂ ಹೋಗಲು ಸಿದ್ಧವಿದ್ದೆ. ಆದರೆ ಯಾರೂ, ಯಾರೂ ಸಹ, ನನ್ನನ್ನು ಆಹ್ವಾನಿಸಲೇ ಇಲ್ಲ. ನನ್ನನ್ನು ಅವರೆಲ್ಲ ಮರೆತುಬಿಟ್ಟಿದ್ದರೇನೋ ಎನ್ನು ವಂತೆ, ನಾನು ಅವರಿಗೆ ನಿಜಕ್ಕೂ ಅಪರಿಚಯಸ್ಥನೇನೋ ಎನ್ನುವಂತೆ !

ನಾನು ಇಂತಹುದೇ ಯೋಚನೆಗಳಲ್ಲಿ ಮಗ್ನನಾಗಿ ಎಷ್ಟು ಹೊತ್ತು ಹಾಗೂ ಎಷ್ಟು ದೂರ ಹೊರಟುಹೋದೆನೆಂದರೆ, ನಾನು ಎಲ್ಲಿಂದ ಬಂದೆ ಎಲ್ಲಿ ಇದ್ದೇನೆ ಎನ್ನುವುದನ್ನೇ ತಿಳಿಯದಾದೆ. ಇಂತಹ ಅನುಭವ ನನಗೆ ತುಂಬ ಸಾಮಾನ್ಯವೆನ್ನಿ. ಆಗ ಇದ್ದಕ್ಕಿದ್ದಂತೆ ನಾನು ನಗರದ ಹೊರ ಗೇಟಿನ ಬಳಿ ಇದ್ದೆನೆಂಬುದನ್ನು ಕಂಡು ಕೊಂಡೆ. ಆ ಕೂಡಲೇ ನನಗೆ ಅಮಿತಾನಂದವಾಯಿತು. ನಾನು ಕಟ್ಟೆಯನ್ನು ದಾಟಿ ಹಸುರು ಹೊಲ ಹಾಗೂ ಹುಲ್ಲುಗಾವಲುಗಳ ಮೂಲಕ ನಡೆದು ಹೋದೆ. ನನಗೆ ಬಳಲಿಕೆಯ ಯಾವ ಭಾವನೆಯೂ ಆಗಲಿಲ್ಲ. ಆದರೆ ನನ್ನ ಹೃದಯದಿಂದ ಒಂದು ದೊಡ್ಡ ಭಾರ ತೆಗೆದು ಹಾಕಿದ ಭಾವನೆಯನ್ನು ನಾನು ನಖಶಿಖಾಂತ ಅನುಭವಿಸಿದೆ. ನನ್ನ ಪಕ್ಕದಲ್ಲೇ ಬಂಡಿಗಳಲ್ಲಿ ಹಾದು ಹೋದವರೆಲ್ಲ ನನ್ನತ್ತ ಎಂಥ ಸ್ನೇಹಪರ ನೋಟ ಬೀರಿದರು. ಅವರೆಲ್ಲ ನನಗೆ ನಮಸ್ಕಾರ ತಿಳಿಸಿದರು. ಅವರೆಲ್ಲ ಏನೋ ಒಂದು ಆನಂದ ಪಡೆದಿದ್ದವರಂತೆ ಕಂಡುಬಂದರು. ಅವರಲ್ಲಿ ಪ್ರತಿಯೊಬ್ಬರೂ ಸಿಗಾರ್ ಸೇದುತ್ತಿದ್ದರು, ನಾನು ಹಿಂದೆಂದೂ ಪಡದಿದ್ದಷ್ಟು ಸಂತೋಷ ಪಟ್ಟೆ. ನಾನು ಇದ್ದಕ್ಕಿದ್ದಂತೆ ಇಟಲಿಯಲ್ಲಿದ್ದೇನೋ ಎಂದು ನನಗೆ ಅನಿಸಿತು. ನಗರದ ಎತ್ತರವಾದ ಕಟ್ಟಡಗಳ ಮಧ್ಯದ ಬೀದಿಗಳಲ್ಲಿ ಬಹುಮಟ್ಟಿಗೆ ಉಸಿರುಕಟ್ಟಿಸುವಂಥ ಮನೆಗಳಲ್ಲಿ ವಾಸಿಸುತ್ತ ಅರೆ ರೋಗಿಯಂತಿದ್ದ ನಗರ ನಿವಾಸಿಯಾದ ನನ್ನ ಮೇಲೆ ಪ್ರಕೃತಿಯ ಪ್ರಭಾವ ಅಷ್ಟು ಭಾರಿಯದಾಗಿದ್ದಿತು.

ಸೇಂಟ್ ಪೀಟರ್ಸ್‌ಬರ್ಗ್‌ನ ಸುತ್ತಮುತ್ತ ಇರುವ ಗ್ರಾಮಾಂತರ ಪ್ರದೇಶ ದಲ್ಲಿ ಅನಿರ್ವಚನೀಯವಾದಂಥ ಮಾರ್ಮಿಕ ಶಕ್ತಿ ಏನೋ ಇದೆ. ವಸಂತ ಬಂದಾಗ ಲಂತೂ ಅಲ್ಲಿ ಪ್ರಕೃತಿ ಇದ್ದಕ್ಕಿದ್ದಂತೆ ದೈವದತ್ತವಾದ ತನ್ನೆಲ್ಲ ಶಕ್ತಿಸಾಮರ್ಥ್ಯ ಗಳನ್ನೂ ಪ್ರದರ್ಶಿಸುತ್ತದೆ. ಆಗ ಅದು ಮನೋಹರವಾದ ದುಕೂಲವನ್ನು ಉಟ್ಟು ಉಜ್ವಲ ಪುಷ್ಪಗಳಿಂದ ಅಲಂಕರಿಸಿಕೊಳ್ಳುತ್ತದೆ... ಯಾವ ಕಾರಣಕ್ಕೋ ಅದು ನನಗೆ ಶಕ್ತಿಹೀನಳಾದ, ಕ್ಷಯರೋಗಕ್ಕೆ ತುತ್ತಾದ ಯುವತಿಯೊಬ್ಬಳ ನೆನಪು ತಂದುಕೊಡುತ್ತದೆ. ಅಂತಹ ಯುವತಿಯನ್ನು ನೀವು ಕೆಲವು ವೇಳೆ ಕನಿ ಕರದಿಂದ ಕಾಣುತ್ತೀರ, ಮತ್ತೆ ಕೆಲವು ವೇಳೆ ಅನುಕಂಪದ ರೀತಿಯ ವಾತ್ಸಲ್ಯ ದಿಂದ ಕಾಣುತ್ತೀರ, ಇನ್ನು ಕೆಲವು ವೇಳೆಗಳಲ್ಲಿ ಸಂಪೂರ್ಣವಾಗಿ ನಿರ್ಲಕ್ಷಿಸುತ್ತೀರ.

ಆದರೆ ಅದೇ ಯುವತಿ ಇದ್ದಕ್ಕಿದ್ದಂತೆ ಒಂದು ಘಳಿಗೆ ವಿಚಿತ್ರವಾಗಿ ಅದ್ಭುತವಾಗಿ ಸುಂದರಳಾಗಿ ಪರಿವರ್ತಿತಳಾದಾಗ, ದಿಗ್ಭ್ರಾಂತರಾದ, ಮಂತ್ರಮುಗ್ಧರಂತಾದ ನೀವು ನಿಮ್ಮನ್ನೇ ಕೇಳಿಕೊಳ್ಳಬೇಕಾಗುತ್ತದೆ: ಆಕೆಯ ದುಃಖಭರಿತವಾದ ಚಿಂತಾಕ್ರಾಂತ ವಾದ ಕಣ್ಣುಗಳು ಇಂಥ ಜ್ವಾಲೆಯಿಂದ ಬೆಳಗುವಂತೆ ಮಾಡಿದ ಶಕ್ತಿ ಯಾವುದು? ಆಕೆಯ ನಿಸ್ತೇಜವಾದ ಮ್ಲಾನವಾದ ಗಲ್ಲಗಳಿಗೆ ಯಾವುದು ಬಣ್ಣ ತಂದು ಕೊಟ್ಟಿದ್ದಿತು? ಆಕೆಯ ನಯನಾಜೋಕಿನ ಮುಖ ಲಕ್ಷಣಗಳಿಗೆ ರಾಗಭಾವಗಳನ್ನು ಉಸಿರಿಸಿದುದಾವುದು? ಆಕೆಯ ವಕ್ಷಸ್ಥಲ ಅಷ್ಟು ಏರಿಳಿಯುತ್ತಿರುವುದೇಕೆ? ಈ ಬಡಪಾಯಿ ಯುವತಿಯ ಮುಖಕ್ಕೆ ಯಾವುದು ಶಕ್ತಿ, ಜೀವ ಹಾಗೂ ಸೌಂದ ರ್ಯವನ್ನು ಇಷ್ಟು ಹಠಾತ್ತನೆ ತಂದಿತ್ತಿರುವುದು? ಅದನ್ನು ಅಷ್ಟು ಕಾಂತಿಯುತ ವಾದಂಥ ಮುಗುಳ್ನಗೆಯಿಂದ ಬೆಳಗುವಂತೆ ಮಾಡಿರುವುದು, ಅಷ್ಟು ಕಂಗೊಳಿಸು ವಂಥ ನಗೆಯಿಂದ ಪ್ರಕಾಶಿಸುವಂತೆ ಮಾಡಿರುವುದು ಯಾವುದು? ನೀವು ಸುತ್ತ ಮುತ್ತ ನೋಡುತ್ತೀರ, ಆಶ್ಚರ್ಯಪಡುತ್ತೀರ, ಅನಂತರ ಅರ್ಥಮಾಡಿಕೊಳ್ಳ ತೊಡಗುತ್ತೀರ... ಆದರೆ ಆ ಘಳಿಗೆ ಕಳೆಯುತ್ತದೆ, ಮಾರನೆಯ ದಿನ ಬಹುಶಃ ನೀವು ಮತ್ತೆ ಅದೇ ಚಿಂತಾಕ್ರಾಂತವಾದ ವ್ಯಾಕುಲತೆಯ ಮುಖವನ್ನು ಕಾಣು ತ್ತೀರ, ಅದೇ ನಿಸ್ತೇಜ ಮುಖ, ಅದೇ ನಿಶ್ಶಕ್ತತೆಯ ಅಂಜಿಕೆಯ ಮನೋಭಾವವನ್ನು ಕಾಣುತ್ತೀರ, ತೀಕ್ಷ್ಣ ಪರಿತಾಪವನ್ನೂ, ಅನಾರೋಗ್ಯ ಸ್ವರೂಪದ ವಿಷಾದ ಹಾಗೂ ವ್ಯಗ್ರತೆಯನ್ನೂ ಸಹ, ಕಾಣುತ್ತೀರ, ಎಲ್ಲ ಆ ಒಂದು ಘಳಿಗೆಯ ಸ್ಫೂರ್ತಿಯ ಕಾರಣದಿಂದಾಗಿ... ಆ ಕ್ಷಣಿಕ ಸೌಂದರ್ಯ ಪುಷ್ಪವು ಅಷ್ಟು ಬೇಗ ಬಾಡಿ ಹೋದು ದಕ್ಕಾಗಿ, ಮತ್ತೆ ಪಡೆಯಲಾಗದಂತೆ ಬಾಡಿ ಹೋದುದಕ್ಕಾಗಿ ನೀವು ವಿಷಾದಿಸು ತ್ತೀರ. ಅದರ ಕಾಂತಿಸ್ಫುರಣವು ಅಷ್ಟು ವಂಚಕವಾಗಿದ್ದುದಕ್ಕಾಗಿ, ನಿರರ್ಥಕವಾದು ದಕ್ಕಾಗಿ, ವಿಷಾದಿಸುತ್ತೀರ. ಅದನ್ನು ಪ್ರೀತಿಸುವಂತಾಗುವಷ್ಟು ಸಮಯವೂ ನಿಮಗೆ ದೊರಕದೆ ಹೋದುದಕ್ಕಾಗಿ ನೀವು ವಿಷಾದಿಸುತ್ತೀರ...

ಆದರೂ ನನಗೆ ರಾತ್ರಿಯೇ ಹಗಲಿಗಿಂತ ಹೆಚ್ಚು ಉತ್ತಮವಾಗಿದ್ದಿತು! ಆಗಲೇ ಈ ಕೆಳಗಿನದು ಜರುಗಿದುದು.

ನಾನು ನಗರಕ್ಕೆ ಹಿಂದಿರುಗಿದಾಗ ತುಂಬ ಹೊತ್ತಾಗಿತ್ತು. ನನ್ನ ಮನೆ ಸಮೀ ಪಿಸುತ್ತಿದ್ದಾಗ ಗಡಿಯಾರ ಆಗಲೇ ಹತ್ತು ಬಡಿದಿದ್ದಿತು. ನಾನು ಕಾಲುವೆಯ ದಂಡೆಯ ಮೇಲೆ ಬರುತ್ತಿದ್ದೆ. ರಾತ್ರಿಯ ಈ ಘಳಿಗೆಯಲ್ಲಿ ನೀವು ಸಾಮಾನ್ಯವಾಗಿ ಇಲ್ಲಿ ಒಬ್ಬ ನರಪಿಳ್ಳೆಯನ್ನೂ ಸಂಧಿಸುವುದಿಲ್ಲ. ನಿಜ, ನನ್ನ ನಿವಾಸ ಇದ್ದುದು ನಗರದ ಒಂದು ದೂರ ಮೂಲೆಯಲ್ಲಿ ಎನ್ನಿ. ನಾನು ನಡೆಯುತ್ತ ಹಾಡುತ್ತಿದ್ದೆ. ಏಕೆಂದರೆ ನನಗೆ ಸಂತೋಷವಾಗಿದ್ದಾಗ ನಾನು ಯಾವಾಗಲೂ ಏನಾದರೂ ಹಾಡನ್ನು ಗುಣಗುಣಿಸುತ್ತಿರುತ್ತೇನೆ – ತನ್ನ ಸಂತೋಷವನ್ನು ಹಂಚಿಕೊಳ್ಳಲು

ಬಳಿಯಲ್ಲಿ ಯಾವುದೇ ಮಿತ್ರ ಅಥವಾ ಪರಿಚಯಸ್ಥರಿಲ್ಲದ ಪ್ರತಿಯೊಬ್ಬ ಸಂತುಷ್ಟ ಮನುಷ್ಯನೂ ಮಾಡುವಂತೆ. ಆಗ ಇದ್ದಕ್ಕಿದ್ದಂತೆ ನಾನು ಒಂದು ಅತ್ಯಂತ ಅನಿರೀಕ್ಷಿತವಾದ ಸಾಹಸ ಕಾರ್ಯವೊಂದನ್ನು ಎಸಗಬೇಕಾಯಿತು.

ನನ್ನಿಂದ ಸ್ವಲ್ಪ ದೂರದಲ್ಲಿ ಹೆಂಗಸೊಬ್ಬಳು ಕಟಕಟೆಗೆ ಸಮೀಪವಾಗಿ ನಿಂತಿದ್ದಳು. ಕಂಬಿ ಚೌಕಟ್ಟಿನ ಮೇಲೆ ಬಾಗಿ ಒರಗಿಕೊಂಡು ಅವಳು ಮಬ್ಬಾದ ಕಾಲುವೆ ನೀರನ್ನೇ ದಿಟ್ಟಿಸಿನೋಡುತ್ತ ಅದರಲ್ಲೇ ಮಗ್ನಳಾಗಿರುವಂತೆ ಕಂಡುಬಂದಳು. ಅವಳು ಒಂದು ಸುಂದರವಾದ ಹಳದಿ ಬಾನೆಟ್‌ಅನ್ನೂ ಸೊಗಸಾದ ಒಂದು ಕಪ್ಪು ಮೇಲ್‌ಹೊದಿಕೆಯನ್ನೂ ಧರಿಸಿದ್ದಳು. "ಇನ್ನೂ ಎಳೆಯುವಳಾಗಿದ್ದಾಳೆ, ಕಂದು ಕೂದಲಿನ ಯುವತಿಯಾಗಿರುವುದು ಖಂಡಿತ" ಎಂದು ನಾನಂದುಕೊಂಡೆ. ಸ್ಪಷ್ಟವಾಗಿಯೇ ಅವಳು ನನ್ನ ಹೆಜ್ಜೆ ಸಪ್ಪಳವನ್ನು ಕೇಳಲಿಲ್ಲ. ನಾನು ಅವಳ ಪಕ್ಕದಲ್ಲೇ ಉಸಿರು ಹಿಡಿದುಕೊಂಡು ಡಬಡಬನೆ ಬಡಿಯುತ್ತಿದ್ದ ಹೃದಯದೊಂದಿಗೆ ನಡೆದು ಹೋದಾಗಲೂ ಅವಳು ಸ್ವಲ್ಪವೂ ಚಲಿಸಲಿಲ್ಲ. "ಇದು ವಿಚಿತ್ರ. ಇವಳು ಯಾವುದೋ ಆಲೋಚನೆಯಲ್ಲಿ ಗಾಢವಾಗಿ ಮಗ್ನಳಾಗಿರಬೇಕು" ಎಂದು ನಾನಂದುಕೊಂಡೆ. ಆಮೇಲೆ ಇದ್ದಕ್ಕಿದ್ದಂತೆ ನಾನು ಘನೀಭೂತನಾಗಿ ನಿಂತೆ. ಮುಸುಕಿನಲ್ಲಿ ಬಿಕ್ಕಳಿಸಿ ಅಳುತ್ತಿದ್ದಂಥ ಶಬ್ದ ಕೇಳಿದೆನೆಂಬ ಭಾವನೆ ನನಗಾಯಿತು. ಹೌದು, ನನ್ನ ಭಾವನೆ ಸರಿಯಾಗಿದ್ದಿತು. ಆ ಯುವತಿ ಅಳುತ್ತಿದ್ದಳು, ಮತ್ತೆ ಮತ್ತೆ ಬಿಕ್ಕಳಿಸಿ ಅಳುತ್ತಿದ್ದಳು. ಅಯ್ಯೋ ದೇವರೇ! ನನ್ನ ಹೃದಯ ಮುದುಡಿಕೊಂಡಿತು. ನಾನು ಹೆಂಗಸರನ್ನು ಕಂಡರೆ ತುಂಬ ನಾಚುವವನಾಗಿದ್ದರೂ ಇದು ಅಸಾಧಾರಣವಾದ ಪ್ರಸಂಗವಾಗಿದ್ದಿತು... ನಾನು ಹಿಂದಕ್ಕೆ ತಿರುಗಿದೆ, ಅವಳ ಕಡೆಗೆ ಒಂದು ಹೆಜ್ಜೆ ಇಟ್ಟೆ. "ಮದಾಮ್" ಎಂದು ಖಂಡಿತ ಕೂಗುವವನಿದ್ದೆ. ಆದರೆ ಉಚ್ಚ ಸಮಾಜದ ಜೀವನ ಕುರಿತಾದ ಎಲ್ಲ ರಷ್ಯನ್ ಕಾದಂಬರಿಗಳಲ್ಲೂ ಈ ಮಾತನ್ನೇ ಆಗಲೇ ಸಹಸ್ರಾರು ಬಾರಿ ಹೇಳಲಾಗಿದ್ದಿತೆಂಬುದನ್ನು ಮನಗಂಡು ನಾನು ಸುಮ್ಮನಾದೆ. ಆದರೆ ಸೂಕ್ತವಾದ ಆರಂಭಪದಕ್ಕಾಗಿ ನಾನು ನನ್ನ ಮನಸ್ಸಿನಲ್ಲೇ ಹುಡುಕುತ್ತಿರುವಾಗ ಆ ಯುವತಿ ತನ್ನ ಆಲೋಚನಾ ಪ್ರಪಂಚದಿಂದ ಹೊರಬಂದು ತನ್ನ ಸುತ್ತಮುತ್ತ ನೋಡಿದಳು, ತನ್ನ ಮನಸ್ಸನ್ನು ಸ್ತಿಮಿತಕ್ಕೆ ತಂದುಕೊಂಡಳು, ನೋಟ ತಗ್ಗಿಸಿ ನನ್ನ ಪಕ್ಕದಲ್ಲೇ ದಂಡೆಯ ಮೇಲೆ ಮುಂದಕ್ಕೆ ನಡೆದು ಹೋದಳು. ನಾನು ಕೂಡಲೇ ಅವಳನ್ನು ಹಿಂಬಾಲಿಸಿ ಹೋದೆ. ಆದರೆ ಅವಳು ನಾನು ಬರುತ್ತಿದ್ದ ಶಬ್ದ ಕೇಳಿದ ಕೂಡಲೇ ರಸ್ತೆ ದಾಟಿ ಅತ್ತಬದಿಯ ಕಾಲುದಾರಿಯಲ್ಲಿ ನಡೆದುಕೊಂಡು ಹೋದಳು. ನಾನೂ ರಸ್ತೆಯನ್ನು ದಾಟಿ ಅವಳ ಕಡೆಗೇ ಹೋಗುವ ಸಾಹಸ ಮಾಡಲಿಲ್ಲ. ನನ್ನ ಹೃದಯ ಸೆರೆಸಿಕ್ಕ ಹಕ್ಕಿಯ ಹೃದಯದಂತೆ ಪಟಪಟನೆ ಬಡಿದುಕೊಳ್ಳುತ್ತಿದ್ದಿತು. ಆಮೇಲೆ ಕೇವಲ ಆಕಸ್ಮಿಕವಷ್ಟೆ ನನ್ನ ನೆರವಿಗೆ ಬಂದಿತು.

ಇದ್ದಕ್ಕಿದ್ದಂತೆ, ಫ್ರಾಕ್‌ಕೋಟು ತೊಟ್ಟ, ವಯಸ್ಸಿನಲ್ಲಿ ಘನತೆಯಿಂದ ಕೂಡಿದ್ದರೂ ನಡತೆಯಲ್ಲಿ ಘನತೆಯಿಂದ ಕೂಡಿರದಿದ್ದ, ವ್ಯಕ್ತಿಯೊಬ್ಬ ಕಾಲುದಾರಿಯಲ್ಲಿ ಆ ಯುವತಿಯ ಸಮೀಪವೇ ಕಾಣಿಸಿಕೊಂಡ. ಅವನು ನಡೆಯುತ್ತಿದ್ದಂತೆ ಅತ್ತ ಇತ್ತ ತೂರಾಡುತ್ತಿದ್ದ. ಗೋಡೆಯನ್ನು ಆಸರೆಯಾಗಿ ಹಿಡಿದುಕೊಳ್ಳುತ್ತ ತನ್ನನ್ನು ಬೀಳದಂತೆ ನೋಡಿಕೊಳ್ಳುತ್ತಿದ್ದ. ಯುವತಿಯು ಅಂಜಿನಂತೆ ಬೇಗ ಬೇಗ ಹಾಗೂ ಹಗುರವಾಗಿ ನಡೆದು ಹೋದಳು, ರಾತ್ರಿ ವೇಳೆಯಲ್ಲಿ ಮನೆಗೆ ಕರೆದುಕೊಂಡು ಹೋಗಲು ಜೊತೆಗಾರರು ಯಾರೂ ಬೇಡವೆಂದುಕೊಂಡಾಗ ಯುವತಿಯರು ಸಾಮಾನ್ಯವಾಗಿ ನಡೆದು ಹೋಗುವಂತೆ. ಆ ತೂರಾಡುತ್ತಿದ್ದ ವ್ಯಕ್ತಿ ಅವಳ ಸರಿಸಮ ಎಂದೂ ಹೋಗಲಾರದಾಗಿದ್ದನೆನ್ನಿ. ಆದರೆ ನನ್ನ ಅದೃಷ್ಟದ ಮೇಲೆ ಶಾಸನ ಮಾಡುತ್ತಿದ್ದ ವಿಧಿ ಅವನನ್ನು ತೀವ್ರತರವಾದ ಕ್ರಮ ಕೈಗೊಳ್ಳುವಂತೆ ಪ್ರೇರಿಸಿತು. ಇದ್ದಕ್ಕಿದ್ದಂತೆ, ಒಂದು ಮಾತನ್ನೂ ಆಡದೆ ಅವನು ಮುಂದಕ್ಕೆ ಹಾರಿ ಆ ಯುವತಿಯ ಕಡೆಗೆ ಓಡುತ್ತ ನಡೆದ. ಅವಳು ಗಾಳಿಯಂತೆ ವೇಗವಾಗಿ ಹೋಗುತ್ತಿದ್ದಳು. ಆದರೂ ತೂರಾಡುತ್ತಿದ್ದ ಆ ವ್ಯಕ್ತಿ ಅವಳ ಸಮೀಪವೇ ಹೋಗಿಬಿಟ್ಟಿದ್ದ. ಆಮೇಲೆ ಅವನು ಆ ಯುವತಿಯನ್ನು ಹಿಡಿದ. ಅವಳು ಕೂಗಿಕೊಂಡಳು. ನಾನು, ನನ್ನ ಅದೃಷ್ಟಕ್ಕೆ, ಬಲಗೈಯಲ್ಲಿ ಒಂದು ಸೊಗಸಾದ ಗಂಟು ಗಂಟುಳ್ಳ ಬೆತ್ತವನ್ನು ಹಿಡಿದಿದ್ದೆ. ಕಣ್ಣು ಮಿಟುಕಿಸುವಷ್ಟರಲ್ಲಿ ನಾನು ರಸ್ತೆಯ ಅತ್ತ ಬದಿಯಲ್ಲಿದ್ದೆ. ತಕ್ಷಣವೇ ಯುವತಿಯನ್ನು ಪೀಡಿಸುತ್ತಿದ್ದ ಆ ವ್ಯಕ್ತಿ ತನಗೆ ಏನು ಕಾದಿದೆಯೆಂಬುದನ್ನು ಅರಿತ, ಬೆತ್ತದ ಪ್ರತಿಭಟಿಸಲಾಗದಂಥ ವಾದಕ್ಕೆ ಮಣಿದ, ಒಂದು ಮಾತೂ ಆಡದೆ ಹಿಂದೆ ಉಳಿದ. ನಾವು ತುಂಬ ದೂರ ಹೋದ ಮೇಲಷ್ಟೆ ಅವನು ನನ್ನ ವಿರುದ್ಧ ತೀವ್ರ ಪ್ರತಿಭಟನೆಯ ಮಾತುಗಳನ್ನಾಡತೊಡಗಿದ. ಆದರೆ ಅವನ ಮಾತುಗಳು ನಮ್ಮವರೆಗೂ ಬರುತ್ತಲೇ ಇರಲಿಲ್ಲ.

"ನಿಮ್ಮ ಕೈಯನ್ನು ನನ್ನ ಕೈಯಲ್ಲಿ ಬಳಸಿತನ್ನಿ" ನಾನು ಆ ಯುವತಿಗೆ ಹೇಳಿದೆ. "ಅವನು ಮತ್ತೆ ನಮ್ಮನ್ನು ಪೀಡಿಸುವ ಸಾಹಸ ಮಾಡುವುದಿಲ್ಲ."

ಮೌನವಾಗಿ ಅವಳು ತನ್ನ ಕೈಯನ್ನು ನನ್ನ ಕೈಗೆ ಕೊಟ್ಟಳು. ಅವಳ ಕೈ ಇನ್ನೂ ಹೆದರಿಕೆ ಚಿತ್ತಕ್ಷೋಭೆಯಿಂದ ನಡುಗುತ್ತಿತ್ತು. ಓಹ್, ಅಪರಿಚಿತ ವ್ಯಕ್ತಿಯೇ! ಆ ಘಳಿಗೆಯಲ್ಲಿ ನಾನು ಅವನನ್ನು ಎಷ್ಟು ಸಂತೋಷದಿಂದ ಹರಸಿದೆ! ನಾನು ಅವಳತ್ತ ಒಂದು ಕ್ಷಣನೋಟ ಬೀರಿದೆ. ಅವಳು ತುಂಬ ಮುದ್ದಾಗಿದ್ದಳು. ಕಂದು ಕೂದಲ ಯುವತಿಯಾಗಿದ್ದಳು. ಅಂದರೆ ನಾನು ಸರಿಯಾಗಿಯೇ ಊಹಿಸಿದ್ದೆ! ಅವಳ ಕಪ್ಪು ರೆಪ್ಪೆ ಕೂದಲುಗಳು ಆಗಷ್ಟೆ ಅಂಜಿಕೆಯಿಂದಾಗಿ – ಅಥವಾ ದುಃಖದಿಂದಾಗಿಯೋ ನನಗೆ ತಿಳಿಯದು – ಹೊರಸೂಸಿದ್ದ ಕಣ್ಣೀರಿನಿಂದ ಥಳಥಳಿಸುತ್ತಿದ್ದವು. ಆದರೆ ಅವಳ ತುಟಿಗಳ ಮೇಲೆ ಆಗಲೇ ಕಾಂತಿಯುತವಾದ

ಮುಗುಳ್ನಗೆ ಮೂಡಿದ್ದಿತು. ಅವಳೂ ನನ್ನತ್ತ ಒಮ್ಮೆ ಕದ್ದು ನೋಡಿದಳು, ಲಘುವಾಗಿ ನಾಚಿದಳು, ಮತ್ತೆ ನೋಟ ತಗ್ಗಿಸಿದಳು.

"ನೋಡಿದಿರಾ, ಈಗ ಗೊತ್ತಾಯಿತೇ, ಈ ಮುಂಚೆ ನೀವು ನನ್ನನ್ನು ದೂರ ಮಾಡಬಾರದಿತ್ತು. ನಾನು ನಿಮ್ಮ ಜೊತೆಗೆ ಇದ್ದಿದ್ದರೆ ಇಂತಹುದು ಯಾವುದೂ ಆಗುತ್ತಿರಲಿಲ್ಲ" ನಾನೆಂದೆ.

"ಆದರೆ ನೀವು ನನಗೆ ಗೊತ್ತಿರಲಿಲ್ಲ. ನಾನು ಅಂದುಕೊಂಡೆ, ನೀವೂ ಕೂಡ..."

"ಈಗ ನಾನು ನಿಮಗೆ ಗೊತ್ತಾಯಿತಾ?"

"ಸ್ವಲ್ಪ ಗೊತ್ತಾಯಿತು. ಈಗ ಹೇಳಿ ಮೊದಲು. ನೀವೇಕೆ ನಡುಗುತ್ತ ಇದ್ದೀರ?" ಅವಳು ಕೇಳಿದಳು.

"ಓಹ್, ನೀವು ಮೊದಲ ನೋಟಕ್ಕೇ ಊಹಿಸಿಬಿಟ್ಟಿರಿ!" ನಾನು ಹೇಳಿದೆ ಆ ಯುವತಿ ಅಷ್ಟು ಬುದ್ಧಿವಂತಳಾಗಿರುವುದನ್ನು ಕಂಡು ಆನಂದಿತನಾಗಿ. ಸೌಂದರ್ಯದೊಂದಿಗೆ ಬುದ್ಧಿವಂತಿಕೆಯೂ ಇರುವುದು ಅಪರೂಪ. "ಮೊದಲ ನೋಟಕ್ಕೇ ನೀವು ಯಾರ ಜೊತೆಗೆ ವ್ಯವಹರಿಸುತ್ತಿದ್ದೀರಿ ಅನ್ನುವುದನ್ನು ಊಹಿಸಿಬಿಟ್ಟಿರಿ! ನಿಜ, ನನಗೆ ಹೆಂಗಸರನ್ನು ಕಂಡರೆ ನಾಚಿಕೆ. ಒಂದು ನಿಮಿಷದ ಹಿಂದೆ ಆ ವ್ಯಕ್ತಿಯು ನಿಮ್ಮನ್ನು ಬೆದರಿಸಿದಾಗ ನೀವು ಎಷ್ಟು ಕ್ಷೋಭೆಗೊಂಡರೋ ನಾನೂ ಅಷ್ಟೇ ಕ್ಷೋಭೆಗೊಂಡಿದ್ದೆ... ಈಗಲೂ ನನಗೆ ಸ್ವಲ್ಪ ಹೆದರಿಕೆಯ ಭಾವನೆ ಆಗುತ್ತಾ ಇದೆ. ಇದೆಲ್ಲ ಕನಸಿನಂತಿದೆ. ಕನಸಿನಲ್ಲೂ ನಾನು ಎಂದಾದರೊಂದು ದಿನ ಒಬ್ಬ ಹೆಂಗಸಿನೊಂದಿಗೆ ಮಾತುಕತೆ ನಡೆಸುವೆನೆಂದು ಎಂದೂ ಕಲ್ಪಿಸಿಕೊಂಡಿರಲಿಲ್ಲ."

"ಇಲ್ಲವೇ? ನಿಜಕ್ಕೂ?"

"ನಿಜಕ್ಕೂ. ಈಗ ನನ್ನ ಕೈ ನಡುಗುತ್ತಿದ್ದರೆ ಅದಕ್ಕೆ ಕಾರಣ, ನನ್ನ ಕೈ ಎಂದೂ ನಿಮ್ಮಂಥ ಸುಂದರವಾದ ಪುಟ್ಟ ಕೈಗಳನ್ನು ಹಿಡಿದಿರಲಿಲ್ಲ, ಎಂಬುದು. ನನಗೆ ಹೆಂಗಸರೊಂದಿಗೆ ಇರುವ ಅಭ್ಯಾಸವೇ ಇಲ್ಲದಂತಾಗಿದೆ, ಹಾಗೆ ನೋಡಿದರೆ ನನಗೆಂದೂ ಅಂಥ ಅಭ್ಯಾಸವೇ ಇರಲಿಲ್ಲ. ನಾನು ಒಂಟಿಯಾಗಿಯೇ ಇದ್ದೇನೆ, ನಿಮಗೆ ಗೊತ್ತ. ಹೆಂಗಸರ ಜೊತೆ ಹೇಗೆ ಮಾತನಾಡಬೇಕು ಅನ್ನೋದೇ ನನಗೆ ಗೊತ್ತಿಲ್ಲ. ಈಗಲೂ ಅಷ್ಟೆ. ನಾನು ನಿಮಗೆ ಏನೇನೋ ಅರ್ಥವಿಲ್ಲದ ಮಾತುಗಳನ್ನು ಹೇಳಿರಬಹುದು, ಹೌದೆ? ನೀವು ಬಿಚ್ಚು ಮನಸ್ಸಿನಿಂದ ಹೇಳಿ. ನಾನೇನೂ ತಪ್ಪು ತಿಳಿಯುವುದಿಲ್ಲ, ಖಂಡಿತವಾಗಿಯೂ..."

"ಓಹ್, ಇಲ್ಲ, ಇಲ್ಲ. ಅದಕ್ಕೆ ವಿರುದ್ಧವೇ. ನಾನು ನಿಮಗೆ ಮನಸ್ಸು ಬಿಚ್ಚಿ ಹೇಳಬೇಕು ಅನ್ನುವುದಾದರೆ, ಹೇಳುತ್ತೇನೆ ಕೇಳಿ – ಹೆಂಗಸರಿಗೆ ಇಂತಹ ನಾಚಿಕೆಯೇ ಮೆಚ್ಚು. ಇನ್ನೂ ಹೆಚ್ಚು ತಿಳಿಯಬೇಕು ಅಂತ ಇಚ್ಛಿಸಿದರೆ, ಹೇಳುತ್ತೇನೆ, ಕೇಳಿ – ನನಗೂ ಅಂಥ ನಾಚಿಕೆಯೇ ಇಷ್ಟ. ಈಗ ನನ್ನ ಮನೆ ತಲಪುವವರೆಗೂ ನಾನು ನಿಮ್ಮನ್ನು ಬಿಡುವುದಿಲ್ಲ."

"ನಾನು ನನ್ನ ನಾಚಿಕೆಯನ್ನೆಲ್ಲ ಒಂದೇ ಬಾರಿಗೆ ಕಳೆದುಕೊಳ್ಳುವಂತೆ ಮಾಡು ತ್ತಿದ್ದೀರ ನೀವು" ನಾನು ಸಂತೋಷದಿಂದ ಉಸಿರು ಕಟ್ಟಿದವನಂತಾಗಿ ಹೇಳಿದೆ. "ಆಮೇಲೆ – ನನ್ನ ಬಳಿ ಇರುವ ಏಕೈಕ ಸಾಧನಕ್ಕೂ ನಾನು ವಿದಾಯ ಹೇಳ ಬೇಕಾಗುತ್ತೆ !"

"ಸಾಧನ? ಯಾವ ಸಾಧನ? ನೋಡಿದಿರಾ, ಹೀಗೆ ಹೇಳೋದು ಸರಿಯಲ್ಲ."

"ಕ್ಷಮಿಸಿ. ಮತ್ತೆ ಆ ಮಾತು ಹೇಳೊಲ್ಲ. ಬಾಯಿ ತಪ್ಪಿ ಹೇಳಿದೆ ಅಷ್ಟೆ. ಆದರೆ ಇಂಥ ಘಳಿಗೆಯಲ್ಲಿ ನನಗೂ ಏನಾದರೂ ಒಂದು ಬಯಕೆ ಇರಬಹುದು ಅಂತ ಅನಿಸುವುದಿಲ್ಲವೇ ನಿಮಗೆ?"

"ಇಷ್ಟವಾಗುವ ಬಯಕೆಯೆ?"

"ಸರಿ, ಹಾಗೆಂದೇ ಇಟ್ಟುಕೊಳ್ಳಿ. ನನ್ನ ಬಗೆಗೆ ಸ್ವಲ್ಪ ಕರುಣೆ ತೋರಿ, ದಮ್ಮಯ್ಯ, ಕರುಣೆ ತೋರಿ. ನಾನು ಯಾರು, ನನ್ನ ಸ್ಥಿತಿ ಎಂತಹುದು ಅನ್ನುವ ಬಗೆಗೆ ಸ್ವಲ್ಪ ಯೋಚನೆಮಾಡಿ! ನೋಡಿ, ನನಗಾಗಲೇ ಇಪ್ಪತ್ತಾರು ವಯಸ್ಸು. ಇನ್ನೂ ನನಗೆ ಯಾರ ಪರಿಚಯವೂ ಇಲ್ಲ! ಅಂದ ಮೇಲೆ ನಾನು ಹೇಗೆ ಚೆನ್ನಾಗಿ, ಬುದ್ಧಿವಂತಿಕೆಯಿಂದ, ಸಲೀಸಾಗಿ, ಮಾತನಾಡಲು ಸಾಧ್ಯ? ಎಲ್ಲ ವನ್ನೂ ಬಿಚ್ಚು ಮನಸ್ಸಿನಿಂದ ಹಿಡಿತಡೆ ಇಲ್ಲದೆ ಹೇಳಿದರೆ ಅದನ್ನು ನೀವೂ ಹೆಚ್ಚು ಇಷ್ಟಪಡುವಿರಿ... ನನ್ನ ಹೃದಯ ನನ್ನೊಳಗೇ ತಳಮಳಿಸುತ್ತಿರುವಾಗ ನಾನು ಮೂಕನಾಗಿರಲು ಹೇಗೆ ಸಾಧ್ಯ? ಓಹ್, ಸರಿ. ಪರವಾಗಿಲ್ಲ: ನೀವು ನಂಬು ತ್ತೀರೋ ಇಲ್ಲವೋ – ಒಬ್ಬ ಹೆಂಗಸೂ ನನಗೆ ಗುರುತಿಲ್ಲ, ಎಂದೂ ಎಂದೂ ಇಲ್ಲ! ಒಬ್ಬರ ಪರಿಚಯವೂ ನನಗಿಲ್ಲ! ನಾನು ಮಾಡುತ್ತಿರುವುದೆಲ್ಲ, ಎಂದಾ ದರೂ ಎಲ್ಲಾದರೂ ಯಾರೋ ಒಬ್ಬಾಕೆ ಸಂಧಿಸುವಳು ಎಂದು ಕನಸು ಕಾಣು ವುದು. ನಾನು ಹೀಗೆ ಎಷ್ಟೊಂದು ಬಾರಿ ಪ್ರೇಮಪರವಶನಾಗಿದ್ದೇನೆ ಎಂಬು ದನ್ನು ನೀವು ತಿಳಿಯಬಲ್ಲವರಾದರೆ !"

"ಆದರೆ ಹೇಗೆ? ಯಾರೊಂದಿಗೆ?"

"ಓಹ್, ಯಾರೂ ಇಲ್ಲ. ಕೇವಲ ಒಬ್ಬ ಆದರ್ಶ ಮಹಿಳೆಯೊಂದಿಗೆ. ನಾನು ಕನಸುಗಳಲ್ಲಿ ಕಂಡ ಯಾವುದೋ ಹೆಂಗಸಿನೊಂದಿಗಾದರೂ ಸರಿ. ನಾನು ಇಡೀ ಪ್ರಣಯ ಪ್ರಸಂಗಗಳನ್ನೇ ಕನಸುಗಳಲ್ಲಿ ಕಲ್ಪಿಸಿಕೊಂಡು ಕಾಣುತ್ತೇನೆ. ಓಹ್, ನೀವು ನನ್ನನ್ನು ತಿಳಿದಿಲ್ಲ! ನಿಜ, ನಾನು ಇಬ್ಬರು ಮೂವರು ಸ್ತ್ರೀಯರನ್ನು ಸಂಧಿಸಿದ್ದೇನೆ. ಆದರೆ ಅವರು ಎಂಥ ಹೆಂಗಸರು ಗೊತ್ತೆ? – ಮನೆಯೊಡತಿಯರು... ಅದಿರಲಿ. ಈಗ ನಿಮ್ಮನ್ನು ನಗಿಸುವಂಥ ಒಂದು ವಿಷಯವನ್ನು ಹೇಳುತ್ತೇನೆ ಕೇಳಿ. ನಾನು ಬಹುವೇಳೆ ಬೀದಿಯಲ್ಲಿ ಹೋಗುವಾಗ ಯಾರಾದರೊಬ್ಬ ಶ್ರೀಮಂತ ಮಹಿಳೆಯೊಂದಿಗೆ ಅನಿಯತ ಸಂಭಾಷಣೆ ನಡೆಸಬೇಕೆಂದು ಅಂದುಕೊಂಡಿದ್ದೇನೆ – ಅದೂ ಆಕೆ ಒಬ್ಬಳೇ ಇದ್ದರೆ. ನಾನು ಅವಳೊಂದಿಗೆ ಅಂಜುತ್ತಾಂಜುತ್ತ, ಗೌರವ

ದಿಂದ ಹಾಗೂ ಭಾವಪೂರಿತವಾಗಿ ಮಾತನಾಡುತ್ತೇನೆನ್ನಿ. ನಾನು ಒಂಟಿತನದಿಂದ ಪರಿತಪಿಸುತ್ತಿದ್ದೇನೆಂದು ಅವಳಿಗೆ ಹೇಳುತ್ತೇನೆ. ನನ್ನನ್ನು ಅಟ್ಟಿಬಿಡಬೇಡಿರೆಂದು ಬೇಡಿಕೊಳ್ಳುತ್ತೇನೆ. ಯಾವುದೇ ಸ್ತ್ರೀಯ ಪರಿಚಯ ಪಡೆದುಕೊಳ್ಳಲೂ ನನಗೆ ಯಾವ ಸಾಧನ ಸೌಲಭ್ಯವೂ ಇಲ್ಲವೆಂದು ಹೇಳುತ್ತೇನೆ. ನನ್ನಷ್ಟು ಅಸುಖಿಯಾದ ವ್ಯಕ್ತಿ ಅಂಜಿಕೆಯಿಂದ ಮಾಡುವ ಬೇಡಿಕೆಗೆ ಕಿವಿಗೊಡುವುದು ಸ್ತ್ರೀಯಾಗಿ ಆಕೆಯ ಕರ್ತವ್ಯವೆಂದು ಆಕೆ ಮನಗಾಣುವಂತೆ ಮಾಡುತ್ತೇನೆ. ನಾನು ಆಕೆಯನ್ನು ಕೇಳುವುದೆಲ್ಲ ನನ್ನ ಬಗೆಗೆ ಸೋದರಿಯಂತೆ ಎರಡು ಅನುಕಂಪದ ಮಾತುಗಳನ್ನಾಡುವುದು. ನನ್ನನ್ನು ತಕ್ಷಣವೇ ಕಳುಹಿಸಿ ಬಿಡದೆ ನನ್ನ ಮಾತನ್ನು ಒಪ್ಪಿಕೊಳ್ಳುವುದು, ನಾನು ಹೇಳುವುದನ್ನು ಕೇಳುವುದು, ಆಕೆಗೆ ಸಂತೋಷವಾಗುವುದಾದರೆ ನನ್ನ ವರ್ತನೆಯಿಂದ ನಗಬಹುದು, ಆದರೆ ನನಗೆ ಸ್ವಲ್ಪ ಭರವಸೆ ನೀಡಬೇಕು, ನನ್ನ ಜೊತೆಗೆ ಕೆಲವು ಮಾತುಗಳನ್ನಾಡಬೇಕು, ಕೆಲವೇ ಮಾತುಗಳನ್ನಷ್ಟೆ.ನಾವು ಪುನಃ ಎಂದೂ ಸಂಧಿಸದೆ ಇದ್ದರೂ ಸರಿಯೆ ! ನೀವು ನಗುವಂತೆ ಕಾಣುತ್ತಿದೆ... ಆದರೆ ನಾನು ಅದಕ್ಕಾಗಿಯೇ ಇದೆಲ್ಲವನ್ನೂ ಹೇಳುತ್ತಿರುವುದು..."

"ಕೋಪ ಮಾಡಿಕೊಳ್ಳಬೇಡಿ. ನಾನು ನಗುತ್ತಿರುವುದು ಏಕೆಂದರೆ, ನೀವು ಒಂಟಿಯಾಗಿರುವುದಕ್ಕೆ ನೀವೇ ಕಾರಣ ಅನ್ನುವುದಕ್ಕಾಗಿ. ನೀವು ಪ್ರಯತ್ನಪಟ್ಟಿದ್ದರೆ ಬಹುಶಃ ಯಶಸ್ವಿಯಾಗುತ್ತಲೇ ಇದ್ದಿರಿ, ಅದು ಬೀದಿಯಲ್ಲೇ ಆದರೂ ಆಯಿತು; ಸರಳವಾಗಿದ್ದಷ್ಟೂ ಉತ್ತಮವೇ... ಮೂರ್ಖಳಾಗಿದ್ದ ಹೊರತು, ಅಥವಾ ನೀವು ಕೇಳಿದಾಗಲೇ ಅವಳೂ ಯಾವ ಕಾರಣಕ್ಕಾಗಿಯೋ ವಿಶೇಷವಾಗಿ ಕೋಪಗೊಂಡಿದ್ದ ಹೊರತು, ಕಾರುಣ್ಯದಿಂದ ಕೂಡಿದ ಯಾವ ಹೆಂಗಸೇ ಆಗಲಿ, ನೀವು ಅಷ್ಟು ಅಂಜಿಕೆಯಿಂದ ಮಾತನಾಡಬೇಕೆಂದು ಬೇಡಿಕೊಂಡಂಥ ಕೆಲವು ಮಾತುಗಳನ್ನು ಆಡದೆಯೇ ನಿಮ್ಮನ್ನು ಕಳುಹಿಸಿ ಬಿಡುವ ಸಾಹಸ ಮಾಡಲಾರಳು... ಓಹ್ ನಾನೇನು ಹೇಳುತ್ತಿದ್ದೇನೆ ! ಆಕೆ ನಿಮ್ಮನ್ನು ಒಬ್ಬ ಹುಚ್ಚನೆಂದುಕೊಳ್ಳುತ್ತಾಳಷ್ಟೆ ! ನಾನು ಅವಳನ್ನು ನನ್ನಂತೆಯೇ ಅಂದುಕೊಂಡುಬಿಟ್ಟಿದ್ದೆ. ಈ ಜಗತ್ತಿನಲ್ಲಿ ಜನ ಹೇಗೆ ಬಾಳುತ್ತಾರೆಂಬುದು ನನಗೆ ಚೆನ್ನಾಗಿಯೇ ತಿಳಿದಿದೆ !"

"ಓಹ್, ನಿಮಗೆ ಧನ್ಯವಾದ !" ನಾನು ಕೂಗುವಂತೆ ಹೇಳಿದೆ. "ನೀವು ನನಗೆ ಎಂತಹ ಉಪಕಾರ ಮಾಡಿದ್ದೀರೋ, ನಿಮಗೆ ತಿಳಿಯದು !"

"ಸರಿ, ಸರಿ ! ಆದರೆ ಹೇಳಿ ನನಗೆ – ನೀವು ಮಾತನಾಡಬಯಸಿದ್ದಂತಹ, ನಿಮ್ಮ ಗಮನ ಬೀಳುವುದಕ್ಕೂ ನಿಮ್ಮ ಸ್ನೇಹ ಸಂಪಾದಿಸುವುದಕ್ಕೂ ಯೋಗ್ಯಳೆಂದು ನೀವು ಪರಿಗಣಿಸಿದ್ದಂತಹ, ಸ್ವಲ್ಪದರಲ್ಲಿ, ನೀವು ಹೇಳಿದಂತೆ ಮನೆಯೊಡತಿಯಲ್ಲದಂತಹ, ಹೆಂಗಸು ನಾನು ಅಂತ ನಿಮಗೆ ಹೇಗೆ ಗೊತ್ತಾಯಿತು... ನನ್ನ ಬಳಿಗೆ ಬರುವಷ್ಟು ಸಾಹಸವನ್ನು ನೀವು ಏಕೆ ಮಾಡಿದಿರಿ ?"

"ಏಕೆ? ನೀವು ಒಬ್ಬರೇ ಇದ್ದಿರಿ. ಆ ವ್ಯಕ್ತಿ ಮಿತಿಮೀರಿ ವರ್ತಿಸಿದ. ರಾತ್ರಿ ಬೇರೆ. ಅದು ನನ್ನ ಕರ್ತವ್ಯವಾಗಿತ್ತೆಂದು ನೀವೇ ಒಪ್ಪಿಕೊಳ್ಳುವಿರಿ..."

"ಅಲ್ಲ, ಅಲ್ಲ. ಅದಕ್ಕೂ ಮುಂಚೆ. ಅಲ್ಲಿ, ಬೀದಿಯ ಆ ಪಕ್ಕದಲ್ಲಿ. ಆಗ ನೀವು ನನ್ನ ಬಳಿಗೆ ಬರಲು ಖಂಡಿತ ಇಚ್ಛಿಸಿದಿರಿ, ಅಲ್ಲವೇ ?"

"ಅಲ್ಲಿ, ಆ ಪಕ್ಕದಲ್ಲೇ? ಆದರೆ ಅದನ್ನು ಹೇಗೆ ಹೇಳಬೇಕೋ ನನಗೇ ತಿಳಿಯುತ್ತಿಲ್ಲ... ನೋಡಿ, ನಾನು ಇವತ್ತು ತುಂಬ ಸಂತೋಷದಿಂದ ಇದ್ದೆ, ನಡೆದಾಡುತ್ತ ಹಾಡುತ್ತಿದ್ದೆ. ನಾನು ಊರಿನಿಂದ ಹೊರಗೆ ಹೋಗಿದ್ದೆ. ಅಂತಹ ಸಂತಸದ ಘಳಿಗೆಗಳನ್ನು ನಾನೆಂದೂ ತಿಳಿದುದಿಲ್ಲ. ನೀವು... ಹೀಗಂತ ನಾನು ಕಲ್ಪಿಸಿಕೊಂಡಿದ್ದರೂ ಇರಬಹುದು... ಕ್ಷಮಿಸಿ, ನಿಮಗೆ ಹಳೆಯ ನೆನಪು ಮಾಡಿಕೊಡುತ್ತಿದ್ದರೆ; ನೀವು ಅಳುತ್ತಿದ್ದಿರಿ ಅಂತ ನಾನು ಭಾವಿಸಿಕೊಂಡೆ... ನನಗೆ ಅದನ್ನು ಸಹಿಸಲು ಆಗಲಿಲ್ಲ... ಅದು ನನ್ನ ಹೃದಯವನ್ನು ಹಿಂಡಿತು... ಓಹ್, ದೇವರೇ ! ನಿಮ್ಮ ದುಃಖದಲ್ಲಿ ನಾನೂ ಪಾಲ್ಗೊಳ್ಳಲು ಖಂಡಿತ ಅವಕಾಶ ವಿದ್ದಿತಲ್ಲವೇ ! ನಿಮ್ಮ ಬಗೆಗೆ ಸೋದರ ಅನುಕಂಪ ತೋರುವುದು ಖಂಡಿತ ಪಾತಕವೇನೂ ಆಗಿರಲಿಲ್ಲ, ಅಲ್ಲವೇ ? ಕ್ಷಮಿಸಿ, ನಾನು ಅನುಕಂಪ ಅಂತ ಹೇಳಿದೆ... ಸರಿ, ಒಂದು ಮಾತಿನಲ್ಲಿ ಹೇಳುವುದಾದರೆ, ನಾನು ನಿಮ್ಮ ಬಳಿಗೆ ಬರಬೇಕೆಂಬ ನನ್ನ ಮನಸ್ಸಿನ ಆವೇಗದ ಬಯಕೆಯಿಂದ ನಿಮ್ಮನ್ನು ಕೋಪಗೊಳಿಸಿರುವುದು ಸಾಧ್ಯವೇ ?"

"ಸಾಕು, ಆ ವಿಷಯ ಹೆಚ್ಚಿಗೆ ಏನೂ ಹೇಳಬೇಡಿ, ಸಾಕು" ಆಕೆಯೆಂದಳು ನನ್ನ ಕೈಯನ್ನು ಅವುಕುತ್ತ. "ಅದು ನನ್ನದೇ ತಪ್ಪು. ನಾನೇ ಆ ದುಃಖವನ್ನು ತಂದುಕೊಂಡೆ. ಆದರೆ ನಿಮ್ಮನ್ನು ತಪ್ಪು ತಿಳಿಯದಿದ್ದುದು ನನಗೆ ಸಂತೋಷ ನೀಡಿದೆ... ಸರಿ, ಇಲ್ಲಿಗೆ ಬಂದೆವಲ್ಲ. ಈಗ ನಾನು ಈ ಗಲ್ಲಿಯಲ್ಲಿ ತಿರುಗಬೇಕು. ಒಂದೆರಡು ಹೆಜ್ಜೆ ಹೋದರೆ ನನ್ನ ಮನೆ. ಹೋಗಿಬರುತ್ತೇನೆ. ಮತ್ತೊಮ್ಮೆ ವಂದನೆಗಳು."

"ಅಂದರೆ, ಅಂದರೆ... ನಾವು ಮತ್ತೆ ಎಂದೂ ಸಂಧಿಸುವುದಿಲ್ಲ ಎಂದೇ ಇದರ ಅರ್ಥ? ಇದೆಲ್ಲ ಇಷ್ಟೇಯೇ"?

"ನೋಡಿ, ನಿಮಗೆ ಮೊದಲು ಬೇಕಾಗಿದ್ದುದು ಕೆಲವು ಮಾತುಗಳಷ್ಟೆ. ಈಗ... ಆದರೆ ನಾನೇನೂ ಹೇಳುವುದಿಲ್ಲ. ಬಹುಶಃ ನಾವು ಮತ್ತೆ ಸಂಧಿಸಬಹುದು," ಆ ಹುಡುಗಿ ನಗುತ್ತ ಹೇಳಿದಳು.

"ನಾನು ನಾಳೆ ಇಲ್ಲಿಗೆ ಬರುತ್ತೇನೆ" ನಾನೆಂದೆ. "ಓಹ್, ಕ್ಷಮಿಸಿ, ನಾನಾಗಲೇ ಹಠಹಿಡಿಯುತ್ತಿದ್ದೇನೇನೋ."

"ಹೌದು, ನೀವು ತಾಳ್ಮೆಗೆಟ್ಟಿದ್ದೀರಿ. ನೀವು ಬಹುಮಟ್ಟಿಗೆ ಹೆಚ್ಚು ಹಠ ಹಿಡಿಯುತ್ತಿರುವಂತೆಯೇ ಇದೆ."

"ಇಲ್ಲಿ ಕೇಳಿ, ಇಲ್ಲಿ ಕೇಳಿ" ನಾನು ತಕ್ಷಣವೇ ಹೇಳಿದೆ. "ಕ್ಷಮಿಸಿ, ನಾನು ನಿಮಗೆ ಮತ್ತೆ ಏನಾದರೂ... ಹೇಳಿದಲ್ಲಿ... ಇದು ನನ್ನ ಅಭ್ಯಾಸ; ನಾನು ನಾಳೆ ಇಲ್ಲಿಗೆ ಬರಲೇಬೇಕು. ನಾನೊಬ್ಬ ಕನಸುಗಾರ. ನನ್ನ ನಿಜಜೀವನ ತೀರ ಅಲ್ಪಾವಧಿಯದು. ಇಂಥ ಘಳಿಗೆಗಳು ನನಗೆ ಬರುವುದೇ ಅಪರೂಪ. ಆದ್ದರಿಂದಲೇ ಅದನ್ನು ನಾನು ಮತ್ತೆ ಮತ್ತೆ ಕನಸುಗಳಲ್ಲಿ ಕಂಡು ಆನಂದಿಸುತ್ತೇನೆ. ನಾನು ನಿಮ್ಮ ಬಗೆಗೇ ಇಡೀ ರಾತ್ರಿ ಕನಸು ಕಾಣುತ್ತೇನೆ. ಒಂದು ಇಡೀ ವಾರ, ಒಂದು ಇಡೀ ವರ್ಷ ಕನಸು ಕಾಣುತ್ತೇನೆ. ನಾಳೆ ನಾನು ಖಂಡಿತ ಇಲ್ಲಿಗೆ, ಇದೇ ಜಾಗಕ್ಕೆ, ಇದೇ ಗಂಟೆಗೆ ಬರುತ್ತೇನೆ. ಹಿಂದಿನ ದಿನದ ಘಟನೆಗಳನ್ನು ನೆನಸಿಕೊಂಡು ಸಂತೋಷಿಸುತ್ತೇನೆ. ಈ ಸ್ಥಳ ನನಗೆ ತುಂಬ ಪ್ರಿಯ. ಪೀಟರ್ಸ್‌ಬರ್ಗ್‌ನಲ್ಲಿ ನನಗೆ ಇಂತಹ ಎರಡು ಮೂರು ಸ್ಥಳಗಳಿವೆ. ಒಮ್ಮೆ ನನ್ನ ಸ್ಮರಣೆಗಳು ನನ್ನನ್ನು ನಿಮ್ಮಂತೆ ಅಳುವಂತೆಯೂ ಮಾಡಿದವು... ಯಾರಿಗೆ ಗೊತ್ತು, ನೀವೂ ಸ್ವಲ್ಪ ಸಮಯದ ಹಿಂದೆ ಏನನ್ನೋ ನೆನಸಿಕೊಂಡೇ ಅಳುತ್ತಿದ್ದಿರೇನೋ. ಕ್ಷಮಿಸಿ, ನಾನು ನನ್ನನ್ನೇ ಮತ್ತೆ ಮರೆಯುತ್ತಿದ್ದೇನೆ. ಬಹುಶಃ ಒಮ್ಮೆ ನೀವು ಇಲ್ಲಿ ಅತ್ಯಂತ ಸಂತೋಷದಿಂದಿದ್ದಿರಬಹುದು."

"ಸರಿ, ಒಳ್ಳೆಯದು" ಆ ಹುಡುಗಿ ಹೇಳಿದಳು. "ನಾನು ನಾಳೆ ಇಲ್ಲಿಗೆ ಹತ್ತು ಗಂಟೆಗೆ ಬರುತ್ತೇನೆ ಅನಿಸುತ್ತೆ. ನಿಮ್ಮನ್ನು ಬರಬೇಡಿ ಅಂತ ನಾನೇನೂ ನಿಷೇಧಿಸಲಾರೆ. ಮುಖ್ಯ ವಿಷಯ, ನಾನು ನಾಳೆ ಇಲ್ಲಿಗೆ ಬರಲೇ ಬೇಕಾಗಿದೆ. ನಿಮ್ಮೊಂದಿಗೆ ಭೇಟಿ ಗೊತ್ತು ಮಾಡಿಕೊಳ್ಳುತ್ತಿದ್ದೇನೆಂದು ಏನೂ ಭಾವಿಸಬೇಡಿ. ನಾನು ನಿಮಗೆ ಎಚ್ಚರಿಕೆ ನೀಡುತ್ತೇನೆ – ನಾನು ಇಲ್ಲಿಗೆ ಬರಲಿರುವುದು ನನ್ನ ಸ್ವಂತ ಕಾರಣಗಳಿಗಾಗಿ. ಆದರೆ ಒಂದು ವಿಷಯ... ಓಹ್ ಸರಿ, ನಿಮಗೆ ಮುಚ್ಚುಮರೆ ಇಲ್ಲದೆ ಹೇಳುತ್ತೇನೆ: ನೀವು ಬಂದರೂ ನನಗೇನೂ ಪರವಾಗಿಲ್ಲ. ಮೊದಲನೆಯದಾಗಿ, ಇವತ್ತು ರಾತ್ರಿ ಆದಂತೆಯೇ ನಾಳೆಯೂ ಏನಾದರೂ ಅಪ್ರಿಯ ಘಟನೆ ಜರುಗಬಹುದು. ಆದರೆ ಅದು ಮುಖ್ಯವಲ್ಲವೆನ್ನಿ. ಸ್ವಲ್ಪದರಲ್ಲಿ ಹೇಳುವುದಾದರೆ, ನಾನು ಸುಮ್ಮನೆ ನಿಮ್ಮನ್ನು ಕಾಣಲು, ನಿಮ್ಮ ಜೊತೆ ಎರಡು ಮಾತುಗಳನ್ನಾಡಲು ಇಷ್ಟಪಡುತ್ತೇನೆ... ಆದರೆ ಇದರಿಂದ ನನ್ನ ಬಗೆಗೆ ಯಾವುದೇ ತೀವ್ರ ತೀರ್ಮಾನಕ್ಕೂ ಬರಬೇಡಿ, ಏನಂತೀರಿ? ನಾನು ಬಹುಸುಲಭವಾಗಿ ಇತರರೊಂದಿಗೆ ಭೇಟಿ ಏರ್ಪಡಿಸಿಕೊಳ್ಳುತ್ತೇನೆಂದು ನೀವು ಭಾವಿಸುವುದಿಲ್ಲವಷ್ಟೆ? ಈ ಭೇಟಿಯನ್ನೂ ನಾನು ಗೊತ್ತುಪಡಿಸಿಕೊಳ್ಳುತ್ತಿರಲಿಲ್ಲ. ಆದರೆ... ಆದರೆ ಅದು ನನ್ನ ಗುಟ್ಟಾಗಿಯೇ ಉಳಿದಿರಲಿ. ಆದರೂ ಒಂದು ಷರತ್ತಿನ ಮೇಲೆ..."

"ಒಂದು ಷರತ್ತು! ಹೇಳಿ, ಈಗಲೇ ಹೇಳಿ. ನಾನು ಯಾವುದೇ ಷರತ್ತಿಗೂ ಒಪ್ಪಿಕೊಳ್ಳುತ್ತೇನೆ. ನಾನು ಯಾವುದಕ್ಕೂ ಸಿದ್ಧ!" ನಾನು ಆನಂದಪರವಶನಾಗಿ

ಹೇಳಿದೆ. "ನನ್ನ ವರ್ತನೆಗೆ ನಾನೇ ಹೊಣೆಯಾಗಿರುತ್ತೇನೆ. ನಾನು ವಿಧೇಯ ನಾಗಿರುತ್ತೇನೆ, ಗೌರವದಿಂದ ವರ್ತಿಸುತ್ತೇನೆ... ನನ್ನನ್ನು ನೀವು ತಿಳಿದೇ ಇದ್ದೀರ."

"ಹೌದು, ನಾನು ನಿಮ್ಮನ್ನು ತಿಳಿದಿದ್ದೇನೆಂಬ ಕಾರಣದಿಂದಲೇ ನಾಳೆ ಬನ್ನಿ ರೆಂದು ನಿಮ್ಮನ್ನು ಆಹ್ವಾನಿಸುತ್ತಿದ್ದೇನೆ" ಎಂದು ಯುವತಿ ನಗುತ್ತ ಉತ್ತರಿಸಿ ದಳು. "ನಾನು ನಿಮ್ಮನ್ನು ಚೆನ್ನಾಗಿ ತಿಳಿದಿದ್ದೇನೆ. ಆದರೆ ಜ್ಞಾಪಕದಲ್ಲಿಟ್ಟಿರಿ, ನೀವು ಈ ಷರತ್ತಿನ ಮೇಲೆ ಬನ್ನಿ (ದಯವಿಟ್ಟು ನಾನು ಈಗ ಏನು ಹೇಳುತ್ತೇನೋ ಹಾಗೆಯೇ ಮಾಡಬೇಕು – ನೋಡಿ, ನಾನು ಎಷ್ಟು ಬಿಚ್ಚುಮನಸ್ಸಿನಿಂದಿದ್ದೇನೆ !) – ನೀವು ನನ್ನಲ್ಲಿ ಅನುರಕ್ತರಾಗಕೂಡದು, ಎಂಬ ಷರತ್ತಿನ ಮೇಲೆ ಬನ್ನಿ... ಖಂಡಿತ ಕೂಡದು, ನಾನು ನಂಬುತ್ತೇನೆ. ನಾನು ಸ್ನೇಹಕ್ಕೆ ಸಿದ್ಧ, ಇಕೋ ನನ್ನ ಸ್ನೇಹ ಹಸ್ತ... ಆದರೆ ನೀವು ನನ್ನಲ್ಲಿ ಅನುರಕ್ತರಾಗಕೂಡದು, ನಾನು ನಿಮ್ಮನ್ನು ಕೇಳಿ ಕೊಳ್ಳುತ್ತೇನೆ !"

"ನಾನು ಪ್ರಮಾಣ ಮಾಡಿ ಹೇಳುತ್ತೇನೆ !" ನಾನೆಂದೆ ಆಕೆಯ ಕೈ ಹಿಡಿದು.

"ಪರವಾಗಿಲ್ಲ. ಪ್ರಮಾಣವೇನೂ ಬೇಡ. ನೀವು ಸಿಡಿಮದ್ದಿನಂತೆ ಭುಗಿಲೇಳು ವವರೆಂದು ನನಗೆ ಗೊತ್ತು. ಹೀಗೆ ಹೇಳಿದೆನೆಂದು ಅನ್ಯಥಾ ಭಾವಿಸುವುದಿಲ್ಲ ವಷ್ಟೆ? ನಿಮಗೆ ಈ ವಿಷಯ ತಿಳಿದಿದ್ದರೆ... ಮಾತನಾಡಲೂ ಸಲಹೆ ಕೇಳಲೂ ನನಗೂ ಯಾರೂ ಇಲ್ಲ. ನಿಜ, ಸಲಹೆಗಾರರನ್ನು ಹುಡುಕಲು ಬೀದಿಯು ಸ್ಥಳ ವಲ್ಲ. ಆದರೆ ನೀವೊಂದು ಅಪವಾದ. ನಾನು ನಿಮ್ಮನ್ನು ಚೆನ್ನಾಗಿ ಬಲ್ಲೆನೆಂದೇ ನನಗನಿಸುತ್ತಿದೆ – ನಾವು ಈಗ ಇಪ್ಪತ್ತು ವರ್ಷಗಳಿಂದ ಸ್ನೇಹಿತರಾಗಿದ್ದೇವೇನೋ ಅನ್ನುವಂತೆ. ನೀವು ಮಾತು ತಪ್ಪುವುದಿಲ್ಲ ತಾನೆ ?"

"ನೀವೇ ನೋಡುವಿರಂತೆ... ಆದರೆ ಈಗ ನಾಳೆಯವರೆಗಿನ ಈ ಅಂತರದಲ್ಲಿ ಹೇಗೆ ಜೀವದಿಂದಿರುವುದೋ ನನಗೆ ತಿಳಿಯದು."

"ಚೆನ್ನಾಗಿ ನಿದ್ದೆ ಮಾಡಿ. ಅದೇ ಸರಿಯಾದ ಮಾರ್ಗ. ನಮಸ್ಕಾರ. ಜ್ಞಾಪಕ ದಲ್ಲಿಡಿ – ನಾನಾಗಲೇ ನಿಮ್ಮಲ್ಲಿ ವಿಶ್ವಾಸವಿರಿಸಿದ್ದೇನೆ. ಪ್ರತಿಯೊಂದು ರೀತಿಯ ಭಾವನೆಗೂ, ಸೋದರ ಅನುಕಂಪದ ಭಾವನೆಗೂ ಸಹ, ಕಾರಣ ಕೊಡಬೇಕಾಗಿಲ್ಲ ವೆಂದು ನೀವು ಎಷ್ಟು ಚೆನ್ನಾಗಿ ಹೇಳಿದಿರಿ ! ನೀವು ಅದನ್ನು ಎಷ್ಟು ಚೆನ್ನಾಗಿ ಹೇಳಿದಿರೆಂದರೆ, ನಿಮ್ಮಲ್ಲಿ ನನ್ನ ಅಂತರಂಗವನ್ನು ಹೇಳಿಕೊಳ್ಳಬಹುದೆಂದು ನನಗೆ ತಕ್ಷಣವೇ ಹೊಳೆಯಿತು, ನಿಮಗೆ ಗೊತ್ತೆ."

"ದಮ್ಮಯ್ಯ ಹೇಳಿ, ಏನದು ?"

"ನಾಳೆ ಹೇಳುತ್ತೇನೆ. ಅಲ್ಲಿನವರೆಗೆ ಅದು ರಹಸ್ಯವಾಗಿಯೇ ಉಳಿದಿರಲಿ. ಅದು ನಿಮಗೂ ಉತ್ತಮ. ನಿಮಗೊಂದು ಪ್ರಣಯ ಪ್ರಸಂಗದಂತೆ ಕಾಣು ವುದು – ಕಲ್ಪನೆಯಲ್ಲಾದರೂ ಸರಿ. ನಾಳೆ ನಾನು ಎಲ್ಲವನ್ನೂ ಹೇಳಿದರೂ ಹೇಳ

ಬಹುದು, ಹೇಳದೆಯೂ ಇರಬಹುದು. ಮೊದಲು ನಾನು ನಿಮ್ಮೊಂದಿಗೆ ಮಾತನಾಡುತ್ತೇನೆ. ನಾವು ಪರಸ್ಪರರನ್ನು ಹೆಚ್ಚು ಉತ್ತಮವಾಗಿ ಅರಿತುಕೊಳ್ಳೋಣ."

"ಓಹ್, ಹೌದು ! ನಾನು ನನ್ನ ಬಗೆಗೆ ಎಲ್ಲವನ್ನೂ ನಾಳೆ ಹೇಳುತ್ತೇನೆ ! ಆದರೆ ಏನಿದು ? ನನಗೆ ಒಂದು ಪವಾಡವೇ ಜರುಗುತ್ತಿದೆಯೇನೋ ಎಂಬಂತಿದೆ... ನಾನೆಲ್ಲಿದ್ದೇನೆ, ದೇವರೇ ? ಹೇಳಿ, ಬೇರೆ ಯಾರಾದರೂ ಮಾಡುವಂತೆ ನೀವು ಕೋಪಗೊಂಡು ನನ್ನನ್ನು ಕೂಡಲೇ ಕಳುಹಿಸಿ ಬಿಡದಿದ್ದುದಕ್ಕಾಗಿ ನಿಮ್ಮ ಬಗೆಗೇ ನೀವು ಖಂಡಿತ ಅಸಂತುಷ್ಟರಾಗಿಲ್ಲವಷ್ಟೆ ? ಎರಡೇ ನಿಮಿಷಗಳಷ್ಟೆ, ನೀವು ನನ್ನನ್ನು ಸದಾಕಾಲಕ್ಕೂ ಸಂತೋಷಿಯನ್ನಾಗಿ ಮಾಡಿದ್ದೀರಿ. ಹೌದು, ಸಂತೋಷ ! ಯಾರು ಹೇಳಬಲ್ಲರು, ಬಹುಶಃ ನೀವು ನನ್ನನ್ನು ನನ್ನೊಂದಿಗೇ ರಾಜಿ ಮಾಡಿಸಿರಬಹುದು, ನನ್ನ ಸಂದೇಹಗಳನ್ನು ನಿವಾರಿಸಿರಬಹುದು. ಬಹುಶಃ ನಾನು ಆ ರೀತಿಯ ಮೋಡಿಗಳಿಗೆ ಒಳಗಾಗುತ್ತೇನೇನೋ. ಓಹ್, ಸರಿ. ನಾನು ಎಲ್ಲವನ್ನೂ ನಾಳೆ ಹೇಳುತ್ತೇನೆ. ನೀವು ಎಲ್ಲವನ್ನೂ ತಿಳಿಯುವಿರಿ, ಎಲ್ಲವನ್ನೂ."

"ತುಂಬ ಒಳ್ಳೆಯದು, ಹಾಗೆಯೇ ಆಗಲಿ. ನೀವೇ ಪ್ರಾರಂಭಿಸುವಿರಂತೆ."

"ನೀವು ಹಾಗೆ ಬಯಸುವುದಾದರೆ."

"ಹೋಗಿ ಬನ್ನಿ."

"ಹೋಗಿ ಬರುತ್ತೇನೆ."

ನಾವು ಅಗಲಿದೆವು. ನಾನು ಇಡೀ ರಾತ್ರಿ ಸುಮ್ಮನೆ ಬೀದಿಗಳಲ್ಲಿ ಸುತ್ತಾಡಿದೆ. ಮನೆಗೆ ಹೋಗುವ ಮನಸ್ಸೇ ಬರಲಿಲ್ಲ. ನಾನು ಅಷ್ಟು ಸಂತೋಷಗೊಂಡಿದ್ದೆ... ನಾಳೆಯವರೆಗೆ !

# ಎರಡನೆಯ ರಾತ್ರಿ

"ನೋಡಿದಿರಾ, ನಾಳೆಯವರೆಗೆ ಉಳಿಯುವುದು ಹೇಗೋ ಅನ್ನುತ್ತಿದ್ದಿರಿ. ಉಳಿದಿದ್ದೀರಲ್ಲ !" ಎಂದವಳು ನಗುತ್ತ ನನ್ನೆರಡು ಕೈಗಳನ್ನೂ ಹಿಡಿದು ಕುಲುಕುತ್ತ ಹೇಳಿದಳು.

"ನಾನು ಈಗಾಗಲೇ ಎರಡು ಗಂಟೆಗಳಿಂದ ಇಲ್ಲಿ ಕಾಯುತ್ತಿದ್ದೇನೆ. ಈ ದಿನ ನನಗೆ ಎಂತಹ ಮಹಾ ಸುದಿನ ಅನ್ನುವುದನ್ನು ನೀವು ಊಹಿಸಲಾರಿರಿ !"

"ಊಹಿಸಬಲ್ಲೆ, ಊಹಿಸಬಲ್ಲೆ. ಆದಿರಲಿ, ಈಗ ವಿಷಯಕ್ಕೆ ಬರೋಣ. ನಾನು ಇಲ್ಲಿಗೇಕೆ ಬಂದಿದ್ದೇನೆ ನಿಮಗೆ ಗೊತ್ತೆ ? ನಾನು ಇಲ್ಲಿಗೆ ಕಳೆದ ರಾತ್ರಿ

ನಾವು ಮಾಡಿದಂತೆ ಚಿಲ್ಲರೆ ವಿಷಯಗಳ ಬಗೆಗೆ ಹರಟೆ ಹೊಡೆಯಲು ಬಂದಿಲ್ಲ, ನಿಮಗೇ ಗೊತ್ತಿದೆ. ಈಗ ಹಾಗಾದರೆ ನಾವು ಇನ್ನು ಮುಂದೆ ಹೆಚ್ಚು ವಿವೇಕ ದಿಂದ ವರ್ತಿಸಬೇಕು. ನಾನು ಇವೆಲ್ಲವುಗಳ ಬಗೆಗೂ ಕಳೆದ ರಾತ್ರಿ ತುಂಬ ಹೊತ್ತು ಯೋಚಿಸಿದೆ."

"ಅದು ಸರಿ. ಆದರೆ ನಾವು ಯಾವ ರೀತಿ ಹೆಚ್ಚು ವಿವೇಕದಿಂದ ವರ್ತಿಸಬೇಕು? ನನ್ನ ಮಟ್ಟಿಗೆ ಹೇಳುವುದಾದರೆ, ನಾನು ಸಿದ್ಧನಿದ್ದೇನೆ. ಆದರೆ ನಿಜಕ್ಕೂ, ಇದೇ ನನ್ನ ಜೀವನದಲ್ಲಿ ಎಂದೇ ಸಂಭವಿಸಿರುವುದಕ್ಕಿಂತ ಅತ್ಯಂತ ಹೆಚ್ಚು ವಿವೇಕಯುತ ವಾದ ಘಟನೆಯಾಗಿದೆ!"

"ನಿಜಕ್ಕೂ? ಮೊದಲನೆಯದಾಗಿ, ನನ್ನ ಕೈಗಳನ್ನು ಅಷ್ಟು ಗಟ್ಟಿಯಾಗಿ ಅವುಕಬೇಡಿ ಎಂದು ನಾನು ನಿಮಗೆ ತಿಳಿಸಬೇಕು. ಎರಡನೆಯದಾಗಿ, ನಾನು ಇಂದು ತುಂಬ ಹೊತ್ತು ನಿಮ್ಮ ಬಗೆಗೇ ತುಂಬ ಆಲೋಚಿಸಿದೆ ಎಂಬುದನ್ನು ನೀವು ತಿಳಿಯ ಬೇಕೆಂದು ನಾನು ಇಚ್ಛಿಸುತ್ತೇನೆ."

"ಸರಿ. ಯಾವ ತೀರ್ಮಾನಕ್ಕೆ ಬಂದಿರಿ?"

"ತೀರ್ಮಾನ? ನಾವು ಮತ್ತೆ ಮೊದಲಿನಿಂದ ಪ್ರಾರಂಭಿಸಬೇಕೆಂದು ನಾನು ತೀರ್ಮಾನಿಸಿದೆ. ಏಕೆಂದರೆ, ನಾನು ನಿಮ್ಮ ಬಗೆಗೆ ಏನೇನೂ ತಿಳಿದಿಲ್ಲ, ಕಳೆದ ರಾತ್ರಿ ನಾನು ಒಂದು ಮಗುವಿನಂತೆ, ಒಬ್ಬ ಅವಿವೇಕಿ ಬಾಲಕಿಯಂತೆ ವರ್ತಿಸಿದೆ, ಎಂಬುದನ್ನು ಈ ಬೆಳಿಗ್ಗೆ ನಾನು ಮನಗಂಡೆ. ಅದರ ಫಲವಾಗಿ ನನಗೆ ಸಹ ಜವಾಗಿಯೇ ಅನಿಸಿದುದೇನೆಂದರೆ, ತಪ್ಪು ನನ್ನ ಕರುಣೆಯಿಂದ ಕೂಡಿದ ಹೃದ ಯದ್ದೇ, ಎಂದು. ಬೇರೆ ಮಾತುಗಳಲ್ಲಿ, ಯಾರೇ ಆಗಲಿ ಸ್ವಂತ ಕಾರ್ಯಗಳನ್ನು ವಿಶ್ಲೇಷಿಸ ಹೊರಟಾಗ ಯಾವಾಗಲೂ ಮಾಡುವಂತೆಯೇ ನಾನು ನನ್ನನ್ನೇ ಹೊಗಳಿಕೊಂಡೆ. ಆದ್ದರಿಂದ ಈ ತಪ್ಪನ್ನು ತಿದ್ದಿಕೊಳ್ಳಲೋಸುಗ ನಿಮ್ಮ ಬಗೆಗೆ ಅತ್ಯಂತ ಸಣ್ಣ ವಿವರಗಳನ್ನೂ ಒಳಗೊಂಡು ಎಲ್ಲವನ್ನೂ ತಿಳಿದುಕೊಳ್ಳಬೇಕೆಂದು ನಿರ್ಧರಿಸಿದೆ. ಕೇಳಲು ಬೇರೆ ಯಾರೂ ಇಲ್ಲದಿರುವುದರಿಂದ ನೀವೇ ನಿಮ್ಮ ಬಗೆಗೆ ಎಲ್ಲವನ್ನೂ, ನಿಮ್ಮೆಲ್ಲ ರಹಸ್ಯಗಳನ್ನೂ, ಹೇಳಬೇಕು. ಈಗ ಹೇಳಿ, ಯಾವ ರೀತಿಯ ವ್ಯಕ್ತಿ ನೀವು? ಬೇಗ ಬೇಗ ಎಲ್ಲವನ್ನೂ ಹೇಳಿ, ನಿಮ್ಮ ಜೀವನ ಕಥೆಯನ್ನು ಹೇಳಿ."

"ನನ್ನ ಕಥೆಯೇ?" ನಾನು ಗಾಬರಿಯಿಂದ ಹೇಳಿದೆ. "ನನ್ನ ಕಥೆ! ಆದರೆ ನನಗೊಂದು ಕಥೆ ಇದೆ ಅಂತ ಯಾರು ನಿಮಗೆ ಹೇಳಿದ್ದು? ನನಗೆ ಯಾವ ಕಥೆಯೂ ಇಲ್ಲ."

"ಕಥೆ ಇಲ್ಲದಿದ್ದರೆ ಹೇಗೆ ಜೀವಿಸುತ್ತಿದ್ದೀರಿ?" ಅವಳು ನನ್ನ ಮಾತಿನ ಮಧ್ಯೆಯೇ ನಗುತ್ತ ಕೇಳಿದಳು.

"ನನ್ನ ಜೀವನಕ್ಕೆ ಕಥೆ ಎಂಬುದೇ ಇಲ್ಲ! ನಾನು ಸುಮ್ಮನೆ ನನ್ನಷ್ಟಕ್ಕೆ, ಇಡೀಯಾಗಿ ಒಬ್ಬನೇ ಅಂದರೆ – ಒಂಟಿಯಾಗಿ, ಸಂಪೂರ್ಣವಾಗಿ ಒಂಟಿಯಾಗಿ – ಜೀವಿಸುತ್ತಿದ್ದೇನೆ. ಒಂಟಿಯಾಗಿ ಅನ್ನುವುದರ ಅರ್ಥ ನಿಮಗೆ ಗೊತ್ತು ತಾನೆ?"

"ಆದರೆ ಹೇಗೆ – ಒಂಟಿಯಾಗಿ? ನೀವು ಎಂದೂ ಯಾರನ್ನೂ ನೋಡಿಯೂ ಇಲ್ಲವೆಂದೆ?"

"ಓಹ್, ಇಲ್ಲ. ನಾನು ಜನರನ್ನು ನೋಡುತ್ತೇನೆನ್ನಿ. ಆದರೂ ನಾನು ಒಂಟಿಯಾಗಿಯೇ ಇದ್ದೇನೆ."

"ನೀವು ಎಂದೂ ಯಾರ ಜೊತೆಯೂ ಮಾತಾಡಿಲ್ಲವೇ?"

"ಕಟ್ಟುನಿಟ್ಟಾಗಿ ಹೇಳುವುದಾದರೆ – ಇಲ್ಲ."

"ಆದರೆ ಯಾವ ರೀತಿಯ ವ್ಯಕ್ತಿ ನೀವು, ವಿವರಿಸಿ ಹೇಳಿ! ಒಂದು ನಿಮಿಷ ತಾಳಿ. ನನಗೆ ಗೊತ್ತಿದೆ ಅಂತ ಕಾಣುತ್ತೆ. ನಿಮಗೂ ನನ್ನಂತೆಯೇ ಬಹುಶಃ ಒಬ್ಬ ಅಜ್ಜಿ ಇರಬೇಕು. ಅವಳಿಗೆ ಕಣ್ಣು ಕಾಣುತ್ತಿಲ್ಲ. ನನ್ನನ್ನು ಈಗ ಬಹಳ ಕಾಲದಿಂದ ಎಲ್ಲಿಗೆ ಹೋಗಲೂ ಬಿಡುತ್ತಿಲ್ಲ. ಆದ್ದರಿಂದ ನಾನು ಇತರರೊಂದಿಗೆ ಸಂಭಾಷಣೆ ನಡೆಸುವ ಅಭ್ಯಾಸವನ್ನೇ ಬಹುಮಟ್ಟಿಗೆ ಕಳೆದುಕೊಂಡಿದ್ದೇನೆ. ಒಂದು ಸಾರಿ, ಎರಡು ವರ್ಷಗಳ ಕೆಳಗೆ, ನಾನು ಏನೋ ಒಂದು ತುಂಟತನ ಮಾಡಿದೆ. ಆಗ ಅವಳು ನನ್ನನ್ನು ತಡೆದು ಇರಿಸಲು ಸಾಧ್ಯವಿಲ್ಲ ಅನ್ನುವುದನ್ನು ಕಂಡುಕೊಂಡಳು. ಆದ್ದರಿಂದ ಅವಳು ನನ್ನನ್ನು ಹತ್ತಿರ ಬರುವಂತೆ ಕರೆದು ನನ್ನ ಬಟ್ಟೆಯನ್ನು ಅವಳ ಬಟ್ಟೆಗೆ ಸೇರಿಸಿ ಪಿನ್ ಹಾಕಿದಳು. ಹೀಗೆ ನಾವು ಆಗಿನಿಂದ ದಿನದಿನವೂ ಒಟ್ಟಿಗೇ ಪಿನ್ ಹಾಕಿಕೊಂಡು ಕೂತುಕೊಂಡಿರುತ್ತೇವೆ. ಕುರುಡಳಾದರೂ ಅವಳು ಕಾಲುಚೀಲ ಹೆಣೆಯುತ್ತ ಕುಳಿತುಕೊಂಡಿರುತ್ತಾಳೆ. ನಾನು ಅವಳ ಪಕ್ಕದಲ್ಲೇ ಹೊಲಿಗೆ ಹಾಕುತ್ತಲೋ ಇಲ್ಲವೇ ಅವಳಿಗೆ ಗಟ್ಟಿಯಾಗಿ ಓದಿ ಹೇಳುತ್ತಲೋ ಕುಳಿತಿರಬೇಕಾಗಿದೆ. ಇದು ಎಂಥ ವಿಚಿತ್ರ ಪದ್ಧತಿ – ಎರಡು ಇಡೀ ವರ್ಷ ಒಬ್ಬರನ್ನು ಪಿನ್ ಹಾಕಿ ಜೊತೆಗೆ ಕೂರಿಸಿಕೊಂಡಿರುವುದು."

"ಅಬ್ಬಾ! ಎಂಥ ದುರದೃಷ್ಟ! ಆದರೆ ಇಲ್ಲ, ನನಗೆ ಅಂತಹ ಯಾವ ಅಜ್ಜಿಯೂ ಇಲ್ಲ."

"ಹಾಗಿದ್ದರೆ ನಿಮ್ಮನ್ನು ಮನೆಯಲ್ಲೇ ಇರುವಂತೆ ಮಾಡಿರುವುದು ಯಾವುದು?"

"ಇಲ್ಲಿ ನೋಡಿ, ನಾನು ಯಾರು ಅಂತ ನೀವು ತಿಳಿಯಬೇಕೆ?"

"ಹೌದು."

"ಖಂಡಿತವಾಗಿಯೂ?"

"ತುಂಬ ಖಂಡಿತವಾಗಿಯೂ."

"ಸರಿ, ಹಾಗಾದರೆ. ಕೇಳಿ, ನಾನೊಬ್ಬ ಮಾದರಿ ವ್ಯಕ್ತಿ."

"ಮಾದರಿ ವ್ಯಕ್ತಿ? ಯಾವ ಮಾದರಿ ವ್ಯಕ್ತಿ?" ಅವಳು ಉದ್ಗರಿಸಿದಳು. ಫಕ್ಕನೆ ಜೋರಾಗಿ ನಗತೊಡಗಿದಳು. ಎಷ್ಟು ಆನಂದದಿಂದ ನಗತೊಡಗಿದಳೆಂದರೆ, ಅವಳಿಗೆ ನಗಲು ಒಂದು ಇಡೀ ವರ್ಷ ಅವಕಾಶವೇ ಸಿಕ್ಕಿರಲಿಲ್ಲವೇನೋ ಎಂದು ಯಾರಿಗಾದರೂ ಅನಿಸುತ್ತಿತ್ತು. "ಓಹ್, ನೀವು ಎಂಥ ತಮಾಷೆಯವರು. ಅಲ್ಲಿ ನೋಡಿ, ಅಲ್ಲೊಂದು ಬೆಂಚಿದೆ. ಅದರ ಮೇಲೆ ಕುಳಿತುಕೊಳ್ಳೋಣ. ಇಲ್ಲಿಗೆ ಯಾರೂ ಬರೊಲ್ಲ, ಯಾರೂ ನಮ್ಮ ಮಾತು ಕೇಳಿಸಿಕೊಳ್ಳೊಲ್ಲ. ಈಗ ನಿಮ್ಮ ಕಥೆ ಹೇಳಲು ಪ್ರಾರಂಭಿಸಿ. ನೀವು ಅದನ್ನು ಹೇಗೇ ಕರೆದರೂ ನಿಮಗೆ ಕಥೆ ಅನ್ನುವುದಂತೂ ಇದೆ. ಅದನ್ನು ನೀವು ಮುಚ್ಚಿಡುತ್ತಿದ್ದೀರಷ್ಟೆ. ಮೊದಲನೆಯ ದಾಗಿ, ಈ 'ಮಾದರಿ ವ್ಯಕ್ತಿ' ಅಂದರೆ ಏನು ಅರ್ಥ?"

"ಮಾದರಿ ವ್ಯಕ್ತಿಯೇ? ಮಾದರಿ ವ್ಯಕ್ತಿ ಒಬ್ಬ ವಿಚಿತ್ರ, ವಿಲಕ್ಷಣ ಮನುಷ್ಯ" ನಾನು ಹೇಳಿದೆ ಅವಳ ಮಗುವಿನಂಥ ನಗೆಯಲ್ಲಿ ನಾನೂ ಸೇರಿಕೊಳ್ಳುತ್ತ. "ಅವನದು ಆ ರೀತಿಯ ವ್ಯಕ್ತಿತ್ವ. ಕನಸುಗಾರ ಅಂದರೆ ಯಾರು ನಿಮಗೆ ಗೊತ್ತೆ?"

"ಕನಸುಗಾರ? ಅಯ್ಯೋ, ಯಾರಿಗೆ ಗೊತ್ತಿಲ್ಲ? ನಾನೇ ಒಬ್ಬ ಕನಸುಗಾರ್ತಿ! ಅಜ್ಜಿಯ ಪಕ್ಕದಲ್ಲಿ ಕೂತಿದ್ದಾಗ ಕೆಲವು ವೇಳೆ ನನ್ನ ತಲೆಯೊಳಕ್ಕೆ ಎಂತಹ ಯೋಚನೆಗಳು ಬರುತ್ತವೆ! ಆಗ ನಾನು ಕನಸುಗಳನ್ನು ನೇಯತೊಡಗುತ್ತೇನೆ. ಅವು ನನ್ನನ್ನು ದೂರದೂರ ಕರೆದೊಯ್ಯುತ್ತವೆ. ನಾನೊಬ್ಬ ಚೀಣೀ ರಾಜಕುಮಾರನನ್ನು ಮದುವೆ ಯಾಗುವುದನ್ನು ಕಾಣುತ್ತೇನೆ! ನೋಡಿ, ಕೆಲವು ವೇಳೆ ಕನಸುಗಾರರಾಗಿರುವುದೂ ಒಳ್ಳೆಯದೇ. ಉಹೂಂ, ಬಹುಶಃ ಒಳ್ಳೆಯದಲ್ಲವೇನೋ, ನನಗೇ ತಿಳಿಯದು, ಅದರಲ್ಲೂ ನಿಮಗೆ ಯೋಚನೆ ಮಾಡಲು ಬೇರೆ ಏನೋ ವಿಚಾರ ಇದ್ದಾಗ" ಎಂದು ಅವಳು, ಈಗ ಮುಖವನ್ನು ಸ್ವಲ್ಪ ಗಂಭೀರ ಮಾಡಿಕೊಂಡು, ಹೇಳಿದಳು.

"ತುಂಬ ಚೆನ್ನಾಯಿತು! ನೀವು ಚೀಣೀ ರಾಜಕುಮಾರನನ್ನು ಮದುವೆ ಯಾಗುವ ಕನಸು ಕಂಡಿರುವುದರಿಂದ, ನನ್ನನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಈಗ ಕೇಳಿ. ಇಲ್ಲ, ತಾಳಿ. ನಿಮ್ಮ ಹೆಸರೂ ನನಗಿನ್ನೂ ಗೊತ್ತಿಲ್ಲವಲ್ಲ!"

"ಅಂತೂ ಕೊನೆಗೆ! ತುಂಬ ಬೇಗನೇ ಹೊಳೆಯಿತು ಈ ವಿಚಾರ ನಿಮಗೆ, ಅಲ್ಲವೇ?"

"ಅಯ್ಯೋ, ದೇವರೇ. ಅದು ನನ್ನ ತಲೆಗೆ ಹೊಳೆಯಲೇ ಇಲ್ಲ. ಹೆಸರು ತಿಳಿಯದೆಯೇ ನಾನು ಸಾಕಷ್ಟು ಸಂತೋಷದಿಂದ ಕೂಡಿದ್ದೆ."

"ನನ್ನ ಹೆಸರು ನಾಸ್ತೆಂಕ."

"ನಾಸ್ತೆಂಕ – ಅಷ್ಟೇನೇ?"

"ಅಷ್ಟೇ. ಸಾಲದೇ? ನಿಮಗೆಷ್ಟು ದುರಾಶೆ."

"ಸಾಕೆ? ಬದಲು, ಬೇಕಾದಷ್ಟಾಯಿತು, ಸಾಕು ಬೇಕಾದಷ್ಟಾಯಿತು. ನಾಸ್ತೆಂಕ, ನೀವು ತುಂಬ ದಯಾಶೀಲ ಯುವತಿಯಾಗಿರಬೇಕು – ನನ್ನನ್ನು ನೇರವಾಗಿ ನಾಸ್ತೆಂಕ ಎಂದು ಕರೆಯಲೇ ಅವಕಾಶ ಕೊಡುತ್ತಿದ್ದೀರ!"

"ಹಾಗೆಂದೇ ನನ್ನ ಆಸೆ. ಇರಲಿ, ನೀವು ಮುಂದುವರಿಸಿ."

"ಹಾಗಾದರೆ ಈಗ, ನಾಸ್ತೆಂಕ, ಈ ವಿನೋದಕರ ಕಥೆಯನ್ನು ಕೇಳಿ!"

ನಾನು ಅವಳ ಪಕ್ಕದಲ್ಲಿ ಕುಳಿತುಕೊಂಡೆ, ಗಂಭೀರ ಮುಖಭಾವ ತಳೆದು, ಬಾಯಿಪಾಠವಾದ ಕಥೆಯನ್ನು ಹೇಳುತ್ತಿರುವೆನೋ ಎಂಬಂತೆ, ಹೇಳತೊಡಗಿದೆ:

"ನಿಮಗೆ ಗೊತ್ತಿಲ್ಲದಿರಬಹುದು, ನಾಸ್ತೆಂಕ. ಪೀಟರ್ಸ್‌ಬರ್ಗ್‌ನಲ್ಲಿ ಕೆಲವು ಸ್ವಲ್ಪ ವಿಚಿತ್ರವೇ ಅನ್ನುವಂಥ ಮೂಲೆಗಳಿವೆ. ನಗರದ ಉಳಿದ ಭಾಗಗಳಿಗೆಲ್ಲ ಬೆಳಕು ನೀಡುವ ಸೂರ್ಯ ಈ ಸ್ಥಳಗಳಲ್ಲಿ ಇಣಕಿ ನೋಡುವುದೂ ಇಲ್ಲ ಎಂದು ಕಂಡುಬರುತ್ತೆ. ಇಲ್ಲಿಗೆ ಬರುವುದು ಬೇರೊಂದು ಸೂರ್ಯ. ಹೊಸತಾದುದು. ದೂರ ಮೂಲೆಗಳಿಗಾಗೆಂದೇ ವಿಶೇಷವಾಗಿ ಆಜ್ಞೆ ನೀಡಿ ಏರ್ಪಡಿಸಿದಂಥ ಸೂರ್ಯ. ಅದು ಪ್ರತಿಯೊಂದರ ಮೇಲೂ ಒಂದು ವಿಚಿತ್ರವಾದ ವಿಭಿನ್ನವಾದ ಬೆಳಕು ಬೀರುತ್ತೆ. ಅಲ್ಲದೆ ಆ ದೂರ ಮೂಲೆಗಳಲ್ಲಿರುವ ಜೀವನಕ್ಕೂ ಹೊರ ಜೀವನಕ್ಕೂ ಮಧ್ಯೆ ಅಜಗಜಾಂತರ. ಹೊರಗೆ ನಮ್ಮ ಸುತ್ತಮುತ್ತ ತುಂಬಿತುಳುಕುತ್ತಿರುವ ಜೀವನಕ್ಕೂ ಅಲ್ಲಿನ ಜೀವನಕ್ಕೂ ಏನೇನೂ ಹೋಲಿಕೆ ಇಲ್ಲ. ಅದು ನಮ್ಮ ಈ ಭೂಮಂಡಲದ ಮೇಲಲ್ಲ, ನಮ್ಮ ಈ ಅತ್ಯಂತ ಗಹನವಾದ ಕಾಲಗಳಲ್ಲಲ್ಲ, ಆದರೆ ಯಾವುದೋ ಕಾಲ್ಪನಿಕ ವಿಚಿತ್ರ ಪ್ರಪಂಚದಲ್ಲಿ ನಡೆಯಬಹುದಾದಂಥ ಜೀವನ ವಾಗಿರುತ್ತದೆ. ಮತ್ತೆ ಈ ಜೀವನವೂ ಶುದ್ಧ ಅತಿಕಾಲ್ಪನಿಕವಾದ, ಅತ್ಯಂತ ಉತ್ಸಾಹಿತ ಆದರ್ಶವಾದಿಯಾದ, ಅದೇ ಹೊತ್ತಿನಲ್ಲಿ (ಇದೇ ದುಃಖದ ಸಂಗತಿ ನಾಸ್ತೆಂಕ), ತೀರ ನೀರಸವಾದ ಹಾಗೂ ಸಾಧಾರಣವಾದ, ನಂಬಲ ಸಾಧ್ಯವೆನ್ನುವಷ್ಟು ನಿಸ್ಸಾರವಾದ ಜೀವನದ ವಿಚಿತ್ರ ಮಿಶ್ರಣವಾಗಿರುತ್ತದೆ."

"ಓಹ್! ದೇವರೇ, ಎಂಥ ಪೀಠಿಕೆ! ಇನ್ನೇನು ಕೇಳಲಿರುವೆನೋ?"

"ನಾಸ್ತೆಂಕ (ನಿಮ್ಮ ಹೆಸರನ್ನು ಎಷ್ಟು ಸಾರಿ ಹೇಳಿದರೂ ನನಗೆ ಆಯಾಸ ವಾಗದೆಂದೇ ನನಗನಿಸುತ್ತೆ) ನಾಸ್ತೆಂಕ. ನೀವು ಇನ್ನೇನು ಕೇಳಲಿರುವಿರೆಂದರೆ – ಈ ದೂರ ಮೂಲೆ ಪ್ರದೇಶಗಳಲ್ಲಿ ಕೆಲವು ವಿಚಿತ್ರ ಸ್ವಭಾವದ ಜನರು, ಕನಸುಗಾರರು, ವಾಸಿಸುತ್ತಿರುತ್ತಾರೆ. ಕನಸುಗಾರನೊಬ್ಬನು – ಈ ಪದದ ನಿಷ್ಕೃಷ್ಟ ನಿರೂಪಣೆ ನಿಮಗೆ ಬೇಕಾಗಿದ್ದಲ್ಲಿ – ಒಬ್ಬ ನಿಜವಾದ ವ್ಯಕ್ತಿಯಲ್ಲ. ಅವನು ಒಂದು ರೀತಿಯ ನಪುಂಸಕ ಪ್ರಾಣಿ. ಈ ಪ್ರಾಣಿಯು ಸಾಮಾನ್ಯವಾಗಿ ಯಾವು ದಾದರೊಂದು ಯಾರಿಗೂ ಸಿಗದಂಥ ಮೂಲೆಯಲ್ಲಿ ನೆಲಸಿರುತ್ತಾನೆ, ಹಗಲಿನ

ಬೆಳಕಿನಿಂದ ಅಡಗಿಕೊಂಡಿರುವನೆಂಬಂತೆ. ಒಮ್ಮೆ ತನ್ನ ಚಿಪ್ಪಿನೊಳಕ್ಕೆ ತೆವಳಿಕೊಂಡು ಹೋದರಾಯಿತು ಅದಕ್ಕೇ ಬಸವನ ಹುಳುವಿನಂತೆ ಅಂಟಿಕೊಂಡು ಬಿಡುತ್ತಾನೆ. ಈ ದೃಷ್ಟಿಯಲ್ಲಿ ಇವನು ಆಮೆಯೆಂದು ಕರೆಯಲಾಗುವ ಆ ಅತ್ಯಂತ ವಿನೋದಾತ್ಮಕ ಪ್ರಾಣಿಯನ್ನು ಹೋಲುತ್ತಾನೆ. ಆಮೆಯು ಒಂದು ಪ್ರಾಣಿಯೂ ಹೌದು, ಒಂದು ಮನೆಯೂ ಹೌದು. ಈ ಮನುಷ್ಯ ಪ್ರಾಣಿ ತನ್ನ ಮನೆಯ ನಾಲ್ಕು ಗೋಡೆಗಳೊಳಗೇ ಇರಲು ಏಕೆ ಅಷ್ಟು ಇಷ್ಟಪಡುತ್ತಾನೆ? ಈ ಗೋಡೆಗಳಿಗೋ ಸರ್ವೇ ಸಾಮಾನ್ಯವಾಗಿ ಹಸುರು ಬಣ್ಣ ತೊಡೆದಿರಲಾಗುತ್ತೆ. ಅವುಗಳಿಗೆ ಕೊಳಕು ಮೆತ್ತಿರುತ್ತೆ. ಅವು ಹೊಗೆಯಿಂದ ಅಸಹ್ಯ ಬರುವಷ್ಟು ಕಪ್ಪಾಗಿರುತ್ತವೆ. ಆದರೂ ಅವನು ಅವನ್ನು ಇಷ್ಟಪಡುತ್ತಾನೇಕೆ, ನಿಮಗೆ ಗೊತ್ತೆ? ಅವನ ಕೆಲವೇ ಗೆಳೆಯರಲ್ಲಿ ಯಾರಾದರೂ ಅವನನ್ನು ಕಾಣಲು ಬಂದಾಗ – ಕೊನೆಯಲ್ಲಿ ಅವನಿಗೆ ಯಾವ ಮಿತ್ರರೂ ಉಳಿದಿರುವುದಿಲ್ಲ –ಈ ವಿಲಕ್ಷಣ ವ್ಯಕ್ತಿ ಅವರನ್ನು ಗೊಂದಲದ ಮನೋಸ್ಥಿತಿಯಲ್ಲಿದ್ದವನಂತೆ ಬರಮಾಡಿಕೊಳ್ಳುತ್ತಾನೆ? ಅವನೇಕೆ ಅಷ್ಟು ಪೇಚಿನಲ್ಲಿ ಇದ್ದವನಂತಿರುತ್ತಾನೆ? ಅವನ ಮುಖ ಲಕ್ಷಣಗಳೇಕೆ ವಿರೂಪಗೊಂಡಿರುತ್ತವೆ – ತನ್ನ ನಾಲ್ಕು ಗೋಡೆಗಳೊಳಗೇ ಅವನು ಆಗಷ್ಟೆ ಯಾವುದೋ ಮಹಾಪರಾಧ ಮಾಡಿದ್ದನೇನೋ ಎಂಬಂತೆ, ಅಥವಾ ಖೋಟಾ ಬ್ಯಾಂಕ್‌ನೋಟುಗಳ ತಯಾರಿಕೆಯಲ್ಲಿ ತೊಡಗಿದ್ದನೇನೋ ಎಂಬಂತೆ, ಅಥವಾ ಪತ್ರಿಕೆಗೆ ಕಳುಹಿಸಲು ಕೆಲವು ಕವನಗಳನ್ನು ರಚಿಸಿ, ಆ ಕವನಗಳನ್ನು ರಚಿಸಿದ ಕವಿ ತೀರಿ ಹೋಗಿದ್ದನೆಂದೂ ಆತನ ಮಿತ್ರನಾದ ತಾನು ಅವುಗಳನ್ನು ಪ್ರಕಟಿಸುವುದು ತನ್ನ ಕರ್ತವ್ಯವೆಂದು ಬಗೆದು ಅವುಗಳನ್ನು ಪತ್ರಿಕೆಗೆ ಕಳುಹಿಸುತ್ತಿರುವುದಾಗಿ ಬೇನಾಮಿ ಪತ್ರವೊಂದನ್ನು ಬರೆಯುವುದರಲ್ಲಿ ತೊಡಗಿದ್ದನೇನೋ ಎಂಬಂತೆ? ಅವರಿಬ್ಬರ ನಡುವೆಯೂ ಸಂಭಾಷಣೆ ಏತಕ್ಕೆ ಕೃತಕ ಆಡಂಬರದಿಂದ ಕೂಡಿರುತ್ತದೆ ಹೇಳಿ ನಾಸ್ತೆಂಕ? ಬೇರೆ ಸಂದರ್ಭಗಳಲ್ಲಿ ನಗೆಚಾಟಿಕೆ ಹಾಗೂ ಬುದ್ಧಿವಂತ ಮಾತುಗಳನ್ನು ಇಷ್ಟಪಡುವ, ಮಹಿಳೆಯರ ವಿಷಯದ ಮೇಲೂ ಇತರ ಆಸಕ್ತಿಕರ ವಿಷಯಗಳ ಮೇಲೂ ಹರಟೆ ಹೊಡೆಯುವುದನ್ನು ತುಂಬ ಇಷ್ಟಪಡುವ ಆ ಮಿತ್ರ ಇವನ ಬಳಿಗೆ ಬಂದಾಗ ಏಕೆ ದಿಗ್ಭ್ರಾಂತನಾದವನಂತೆ ಕಂಡುಬರುತ್ತಾನೆ, ಇವರ ಸಂಭಾಷಣೆಯಲ್ಲಿ ನಗೆಯಾಗಲೀ ಚಾಣಾಕ್ಷತನದ ಮಾತುಗಾರಿಕೆಯಾಗಲೀ ಕಂಡುಬರುವುದಿಲ್ಲವೇಕೆ? ಈ ಮಿತ್ರನು ಸ್ಪಷ್ಟವಾಗಿಯೇ ಒಬ್ಬ ಹೊಸ ಪರಿಚಯಸ್ಥ. ಇವನು ತನ್ನ ಮೊದಲನೆಯ ಹಾಗೂ ತನ್ನ ಏಕೈಕ ಭೇಟಿ ನೀಡುತ್ತಿದ್ದಾನೆ. (ಏಕೆಂದರೆ ಈ ಪ್ರಸಂಗದಲ್ಲಿ ಎರಡನೆಯ ಭೇಟಿ ಇರುವುದೇ ಇಲ್ಲ, ಏಕೆಂದರೆ ಈ ಮಿತ್ರ ಮತ್ತೆಂದೂ ಇವನಲ್ಲಿಗೆ ಭೇಟಿ ನೀಡುವುದಿಲ್ಲ). ಈ ಮಿತ್ರ ಎಷ್ಟೇ ಬುದ್ಧಿಚಾತುರ್ಯ ಹೊಂದಿದ್ದರೂ (ಅವನಲ್ಲಿ ಅದು ಇದ್ದಲ್ಲಿ) ತನ್ನ ಆತಿಥೇಯನ ತಬ್ಬಿಬ್ಬಾದ ಮುಖಭಾವ

ನೋಡಿದ ಕೂಡಲೇ ತುಂಬ ಪೇಚಿಗೆ ಸಿಕ್ಕಿಬಿದ್ದು ನಾಲಿಗೆ ಸೇದಿದವನಂತೇಕೆ ಆಗುತ್ತಾನೆ? ಈ ಆತಿಥೇಯನಾದರೋ ತನ್ನ ಸರದಿಯಲ್ಲಿ, ಸಂಭಾಷಣೆಯಲ್ಲಿನ ತೆರಪುಗಳನ್ನು ಮುಚ್ಚಲು ಮತ್ತು ಸ್ವಲ್ಪ ಚುರುಕುಗೊಳಿಸಲು ಸಾಹಸದ ಆದರೆ ನಿರರ್ಥಕ ಯತ್ನಗಳನ್ನು ಮಾಡಿದನಂತರ ಸಂಪೂರ್ಣವಾಗಿ ಗೊಂದಲಕ್ಕೆ ಬಿದ್ದವ ನಂತೆ, ಮಾತಿನಲ್ಲಿ ಎಲ್ಲ ಸುಸಂಗತತೆಯನ್ನೂ ಕಳೆದುಕೊಂಡವನಂತೆ ಆಗುವು ದೇಕೆ? ತಾನೂ ಸಾಮಾಜಿಕ ಶಿಷ್ಟಾಚಾರಗಳನ್ನು ಚೆನ್ನಾಗಿ ತಿಳಿದವನೇ ಎಂದು ತೋರಿಸಿಕೊಡಲು, ಸ್ತ್ರೀಯರ ಬಗೆಗೆ ಏನಾದರೊಂದು ಹೇಳಿಕೆ ನೀಡಲು, ತನ್ಮೂ ಲಕ ಬೇರೇನು ಅಲ್ಲದಿದ್ದರೂ ತಪ್ಪಿನಿಂದಾಗಿ ತನ್ನನ್ನು ಕಾಣಲು ಬಂದ ಆ ಬಡ ಪಾಯಿ ವ್ಯಕ್ತಿಗೆ ತನ್ನನ್ನು ಪ್ರಿಯವಾದವನನ್ನಾಗಿ ಮಾಡಿಕೊಳ್ಳಲು, ನಿರರ್ಥಕ ಯತ್ನ ಮಾಡುವುದೇಕೆ? ಆ ಭೇಟಿಕಾರನು ಇದ್ದಕ್ಕಿದ್ದಂತೆ ತನ್ನ ಹ್ಯಾಟನ್ನು ಎತ್ತಿಕೊಂಡು, ಯಾವುದೋ ಅಸ್ತಿತ್ವದಲ್ಲಿಲ್ಲದಿದ್ದ ಅತ್ಯಂತ ಮುಖ್ಯ ಕಾರ್ಯನಿಶ್ಚ ಯವನ್ನು ಕೂಡಲೇ ಜ್ಞಾಪಿಸಿಕೊಂಡು, ತನ್ನ ಕೈಯನ್ನು ಆತಿಥೇಯನ ಬಿಗಿ ಹಿಡಿತದಿಂದ ಎಳೆದು ಬಿಡಿಸಿಕೊಂಡು ಅವಸರದಲ್ಲಿ ಹೊರಟು ಹೋಗುವುದೇಕೆ? ಅದೇ ಹೊತ್ತಿನಲ್ಲಿ ಆತಿಥೇಯನು ಭೇಟಿ ಇದ್ದಕ್ಕಿದ್ದಂತೆ ಮುಕ್ತಾಯವಾದುದಕ್ಕಾಗಿ ಖೇದಗೊಂಡವನಂತೆ, ಪರಿಸ್ಥಿತಿಯ ಕೆಡುಕನ್ನು ನಿವಾರಿಸಲು ಯತ್ನ ಮಾಡು ವವನಂತೆ, ತೋರಿಸಿಕೊಳ್ಳಲು ತನ್ನ ಕೈಲಾದುದನ್ನೆಲ್ಲ ಮಾಡುವುದೇಕೆ? ಭೇಟಿ ಕಾರನು ಕೋಣೆಯಿಂದ ಹೊರಗೆ ಬಂದ ಕೂಡಲೇ ಫಕ್ಕನೆ ನಗುವುದೇಕೆ, ಈ ವಿಚಿತ್ರ ಮನುಷ್ಯನ ಬಳಿಗೆ, ತಾನು ಮತ್ತೆಂದೂ ಬರುವುದಿಲ್ಲವೆಂದು ಅಲ್ಲೇ ಆಗಲೇ ಆಣೆ ಇಟ್ಟು ಹೇಳುವುದೇಕೆ – ವಾಸ್ತವವಾಗಿ ಆ ವಿಚಿತ್ರ ಮನುಷ್ಯನು ಒಬ್ಬ ಒಳ್ಳೆಯ ವ್ಯಕ್ತಿಯಾಗಿದ್ದರೂ? ಅದೇ ಹೊತ್ತಿನಲ್ಲಿ ಅವನು ತನ್ನ ಕಲ್ಪನೆಯನ್ನು ಒಂದು ಪುಟ್ಟ ಆಟದಲ್ಲಿ ತೊಡಗಲು ಬಿಡುತ್ತಾನೆ. ಅಂದರೆ, ಒಂದು ಹೋಲಿಕೆಯಲ್ಲಿ – ಅದು ಬಹು ದೂರ ಎಳೆದುದಾದರೂ ಸರಿಯೆ – ತೊಡಗಲು ಬಿಡುತ್ತಾನೆ. ಸಂಭಾಷಣೆಯ ಇಡೀ ಕಾಲ ಕಾಣಿಸಿಕೊಂಡಂಥ ಆತಿಥೇಯನ ಮುಖವನ್ನು ಈ ಭೇಟಿಕಾರನ ಕಲ್ಪನೆ ಒಂದು ಪುಟ್ಟ ದರಿದ್ರ ಬೆಕ್ಕಿನ ಮರಿಯ ಮುಖಕ್ಕೆ ಹೋಲಿಸುತ್ತದೆ. ಈ ಪುಟ್ಟ ಬೆಕ್ಕು ಕೆಲವು ಮಕ್ಕಳ ಕೈಗೆ ಸಿಕ್ಕಿ ಬಿದ್ದಿದೆ. ಅವರು ಅದನ್ನು ದುಷ್ಟ ರೀತಿಯಲ್ಲಿ ಸೆರೆ ಹಿಡಿದಿದ್ದಾರೆ. ಅದನ್ನು ಸಾಧ್ಯ ವಾದ ಎಲ್ಲ ರೀತಿಯಲ್ಲೂ ಹೊಡೆದು ಚಚ್ಚಿದ್ದಾರೆ, ಭೀತಿಗೊಳಿಸಿದ್ದಾರೆ, ಹಿಂಸಿ ಸಿದ್ದಾರೆ. ಅದು ಅವರಿಂದ ಬಚ್ಚಿಟ್ಟುಕೊಳ್ಳಲು ಒಂದು ಕುರ್ಚಿಯ ಕೆಳಗೆ ತೆವಳಿ ಕೊಂಡು ಹೋಗಿ ಕುಳಿತಿದೆ. ಅಲ್ಲಿ ಅದು ಒಂದು ಇಡೀ ಗಂಟೆ ಇರುವ ಒತ್ತಾಯ ಕ್ಕೊಳಗಾಗಿದೆ. ಅದು ಕೆರಳುತ್ತಿದೆ, ಸೀನುತ್ತಿದೆ, ತನ್ನ ದುಃಖಾಕ್ರಾಂತವಾದ ಪುಟ್ಟ ಮುಖವನ್ನು ಎರಡೂ ಪಂಜಗಳಿಂದ ಉಜ್ಜಿಕೊಳ್ಳುತ್ತಿದೆ. ಅದಾದ ಮೇಲೆ ಅದು

ತುಂಬ ಕಾಲ ಈ ಜಗತ್ತನ್ನು ವೈರದಿಂದ ನೋಡುತ್ತದೆ, ಕರುಣಾಳು ಪಾರು ಪತ್ಯೆಗಾರನು ಈ ಬೆಕ್ಕಿನಮರಿಯ ಸಲುವಾಗಿ ಮನೆಯ ಯಜಮಾನನ ಊಟದ ಮೇಜಿನಿಂದ ಉಳಿಸಿಟ್ಟ ತುಣುಕುಗಳನ್ನೂ ಇದು ವೈರದಿಂದ ನೋಡುವಂತಾ ಗುತ್ತದೆ. ಭೇಟಿಕಾರನು ತನ್ನ ಕಲ್ಪನೆ ಇಂತಹ ಹೋಲಿಕೆಯಲ್ಲಿ ತೊಡಗಲು ಬಿಡುವನೇಕೆ ?"

"ಇಲ್ಲಿ ಕೇಳಿ" ಎಂದು ಅದುವರೆವಿಗೂ ನನ್ನ ಮಾತನ್ನೇ ಆಶ್ಚರ್ಯದಿಂದ ಕಣ್ಣು ಅಗಲಿಸಿಕೊಂಡು ಬಾಯಿಬಿಟ್ಟುಕೊಂಡು ಕೇಳುತ್ತಿದ್ದ ನಾಸ್ತೆಂಕ ಮಧ್ಯೆ ನುಡಿದಳು. "ಇಲ್ಲಿ ಕೇಳಿ, ಇದೆಲ್ಲ ಏಕೆ ಜರುಗಿತೋ ನನಗೆ ಗೊತ್ತಿಲ್ಲ. ನೀವು ನನ್ನನ್ನು ಏಕೆ ಈ ವಿಚಿತ್ರವಾದ ಪ್ರಶ್ನೆಗಳನ್ನು ಕೇಳುತ್ತಿದ್ದೀರೋ ಅದೂ ಗೊತ್ತಿಲ್ಲ. ಆದರೆ ನನಗೆ ಖಚಿತವಾಗಿ ಗೊತ್ತಿರುವುದು ಅಂದರೆ, ಈ ಎಲ್ಲ ಅನುಭವಗಳೂ, ಮೊದಲಿ ನಿಂದ ಕೊನೆಯವರೆಗೂ, ನಿಮಗೆ ಆಗಿವೆ, ಎನ್ನುವುದು."

"ನಿಸ್ಸಂದೇಹವಾಗಿಯೂ" ನಾನು ಉತ್ತರಿಸಿದೆ ಅತ್ಯಂತ ಗಂಭೀರವಾದ ಮುಖಭಾವದೊಂದಿಗೆ.

"ಸರಿ, ಹಾಗಿದ್ದರೆ ಮುಂದುವರಿಸಿ" ಅವಳೆಂದಳು. "ಏಕೆಂದರೆ ಇದೆಲ್ಲ ಹೇಗೆ ಕೊನೆಗಾಣುತ್ತೆ ಅನ್ನುವುದನ್ನು ತಿಳಿಯಬೇಕು ಅಂತ ನನಗೆ ತುಂಬ ಆಸೆ."

"ಈ ಕಥಾ ನಾಯಕನು, ಅಥವಾ ನಾನೇ ಎನ್ನಿ, ಏಕೆಂದರೆ ಈ ಕಥಾನಾಯಕ ನಾನೇ, ಈ ಸಾಮಾನ್ಯ ಮನುಷ್ಯನೇ, ತನ್ನ ಆ ದೂರ ಮೂಲೆಯಲ್ಲಿ ಕುಳಿತು ಏನು ಮಾಡುತ್ತಿದ್ದ ಅನ್ನುವುದನ್ನು ನೀವು ತಿಳಿಯ ಬಯಸುತ್ತೀರ, ನಾಸ್ತೆಂಕ? ನನ್ನ ಮಿತ್ರನ ಅನಿರೀಕ್ಷಿತ ಭೇಟಿಯು ಏಕೆ ನನ್ನ ಚಿತ್ತಸ್ಥಿಮಿತವನ್ನು ಕೆಡಿಸಿತು, ಇಡೀ ದಿನ ನನ್ನನ್ನು ಕ್ಷೋಭೆಗೆ ಈಡುಮಾಡಿತು ಅನ್ನುವುದನ್ನು ನೀವು ತಿಳಿಯ ಬಯಸುತ್ತೀರ? ನನ್ನ ಕೋಣೆಯ ಬಾಗಿಲು ಅಷ್ಟು ತಟಕ್ಕನೆ ತೆರೆದಾಗ ನಾನೇಕೆ ಬೆಚ್ಚಿಬಿದ್ದೆ, ತಬ್ಬಿಬ್ಬಾದೆ; ನಾನು ನನ್ನಲ್ಲಿಗೆ ಬಂದ ಭೇಟಿಕಾರನನ್ನು ಸರಿಯಾಗಿ ಬರ ಮಾಡಿಕೊಳ್ಳಲು ಅಸಮರ್ಥನಾಗಿದ್ದೆ, ನನ್ನ ಸ್ವಂತ ಆತಿಥ್ಯದ ಹೊಡೆತಕ್ಕೆ ಸಿಕ್ಕಿ ಅಷ್ಟು ಅವಮಾನಕರವಾಗಿ ಉರುಳಿದೆ, ಅನ್ನುವುದನ್ನು ತಿಳಿಯ ಬಯಸುತ್ತೀರ?"

"ಹೌದು, ಅದನ್ನೇ" ಎಂದಳು ನಾಸ್ತೆಂಕ "ಅದನ್ನೇ ನಾನು ತಿಳಿಯ ಬಯಸು ವುದು. ನೋಡಿ ನೀವು ಎಲ್ಲವನ್ನೂ ತುಂಬ ಅದ್ಭುತವಾಗಿ ಹೇಳುತ್ತಿದ್ದೀರ. ಆದರೆ ನಿಮ್ಮ ಮಾತನ್ನು ಸ್ವಲ್ಪ ಕಮ್ಮಿ ಅದ್ಭುತವಾಗಿರುವಂತೆ ಮಾಡಲು ಸಾಧ್ಯವಿಲ್ಲವೇ? ಏಕೆಂದರೆ ನೀವು ಹೇಳುವುದನ್ನು ಕೇಳಿದಾಗ, ನೀವು ಯಾವುದೋ ಪುಸ್ತಕದಿಂದ ಓದುತ್ತಿದ್ದೀರೇನೋ ಎಂದು ನನಗನಿಸುತ್ತೆ."

"ನಾಸ್ತೆಂಕ" ನಾನು ಗಂಭೀರವಾದ ನಿಷ್ಠುರವಾದ ಧ್ವನಿಯಲ್ಲಿ ನಗುವ ಬಯಕೆ ಯನ್ನು ಹೇಗೋ ಹತ್ತಿಕ್ಕಿ ಹೇಳಿದೆ. "ಪ್ರಿಯ ನಾಸ್ತೆಂಕ, ನನ್ನ ಮಾತು

ಅದ್ಭುತವಾಗಿದೆ ಅನ್ನೋದು ನನಗೆ ಗೊತ್ತು. ಆದರೆ ವಿಷಾದವೆಂದರೆ, ನನಗೆ ಬೇರೆ ರೀತಿ ಮಾತನಾಡಲು ಬರುವುದೇ ಇಲ್ಲ. ಈಗ, ಪ್ರಿಯ ನಾಸ್ತೆಂಕ, ನಾನು ಈಗ ಕುಡಿಕೆಯೊಂದರಲ್ಲಿ ಏಳು ಮೊಹರು ಹಾಕಿ ಸಾವಿರ ವರ್ಷ ಭೂಮಿಯ ಕೆಳಗಿರಿಸಿ ಕೊನೆಗೆ ಎಲ್ಲ ಏಳು ಮೊಹರುಗಳನ್ನೂ ತೆಗೆದು ಹೊರಬಿಟ್ಟಂಥ ಸಾಲೊಮನ್ ದೊರೆಯ ಪ್ರೇತವಿದ್ದಂತೆ ಇದ್ದೇನೆ. ನನ್ನ ಪ್ರಿಯ ನಾಸ್ತೆಂಕ, ದೀರ್ಘ ಅಗಲಿಕೆಯನಂತರ ನಾವು ಮತ್ತೆ ಸಂಧಿಸುತ್ತಿದ್ದೇವೆ ಏಕೆಂದರೆ ನಾನು ನಿಮ್ಮನ್ನು, ಬಹಳ ಕಾಲದಿಂದ ಬಲ್ಲೆ, ನಾಸ್ತೆಂಕ. ನಾನು ಬಹಳ ಕಾಲದಿಂದ ಯಾರೋ ಒಬ್ಬರಿಗಾಗಿ ಹುಡುಕಾಡುತ್ತಿದ್ದೆ, ಈಗ ನಾವು ಸಂಧಿಸಿರುವುದೇ, ನಾನು ಯಾರಿಗಾಗಿ ಹುಡುಕುತ್ತಿದ್ದೆನೋ ಅವರೇ ನೀವು ಎಂಬುದಕ್ಕೆ ಸೂಚನೆಯಾಗಿದೆ. ನಮ್ಮ ಈ ಭೇಟಿ ಪೂರ್ವನಿಯಾಮಕವಾದುದಾಗಿದೆ. ದೀರ್ಘ ಅಗಲಿಕೆಯ ನಂತರ ನಾವು ಸಂಧಿಸಿರುವಾಗ, ಈಗ ನನ್ನ ತಲೆಯಲ್ಲಿ ಸಾವಿರಾರು ತಿರುಪುಗಳು ಥಟಕ್ಕನೆ ತೆರೆದಿವೆ. ನಾನು ಈ ತಿರುಪುಗಳ ಮೂಲಕ ನನ್ನ ಮಾತುಗಳ ಪ್ರವಾಹ ಹೊರ ಹರಿಯುವುದಕ್ಕೆ ಅವಕಾಶ ಕೊಡಬೇಕು. ಇಲ್ಲದ್ದಿದ್ದರೆ ನನ್ನ ಉಸಿರು ಕಟ್ಟುತ್ತೆ. ಆದ್ದರಿಂದ ದಯವಿಟ್ಟು ನನ್ನನ್ನು ಮಧ್ಯೆದಲ್ಲಿ ತಡೆಯಬೇಡಿ, ನಾಸ್ತೆಂಕ. ನನ್ನ ಮಾತುಗಳನ್ನು ನಮ್ರರಾಗಿ ಗಮನವಿಟ್ಟು ಕೇಳಿ. ಇಲ್ಲದಿದ್ದರೆ ನನ್ನ ಮಾತನ್ನು ಇಲ್ಲಿಗೇ ನಿಲ್ಲಿಸಿಬಿಡುತ್ತೇನೆ."

"ಇಲ್ಲ, ಇಲ್ಲ. ಓಹ್ ಇಲ್ಲ. ಮುಂದುವರಿಸಿ ! ನಾನು ಒಂದು ಮಾತನ್ನೂ ಆಡುವುದಿಲ್ಲ."

"ಮುಂದುವರಿಸುತ್ತೇನೆ: ನನ್ನ ದಿನದಲ್ಲಿ ನನಗೆ ಅತ್ಯಂತ ಪ್ರೀತಿಪಾತ್ರವಾದ ಒಂದು ಗಂಟೆ ಇದೆ, ನನ್ನ ಪ್ರಿಯ ಗೆಳತಿ ನಾಸ್ತೆಂಕ. ಅದು ಯಾವುದೆಂದರೆ, ಹೆಚ್ಚಿಗಿನ ಕೆಲಸ, ಕರ್ತವ್ಯ ಹಾಗೂ ವ್ಯವಹಾರಗಳೆಲ್ಲ ಮುಗಿದು ಎಲ್ಲರೂ ಊಟ ಮಾಡಲೋ, ಸಣ್ಣ ನಿದ್ದೆ ಮಾಡಲೋ, ಅಥವಾ ಸಂಜೆಯನ್ನು ರಾತ್ರಿಯನ್ನು, ಹಾಗೂ ತಮ್ಮೆಲ್ಲ ಬಿಡು ಸಮಯವನ್ನು ನಾನಾ ಆನಂದಕರ ಹವ್ಯಾಸಗಳಲ್ಲಿ ಕಳೆಯಲೋ ಯೋಜನೆ ಮಾಡುತ್ತ ಮನೆಯತ್ತ ಧಾವಿಸುತ್ತಿರುವ ಗಂಟೆ. ಆ ಗಂಟೆಯಲ್ಲಿ ನಮ್ಮ ಕಥಾನಾಯಕನೂ – ಈ ನಿರೂಪಣೆಯನ್ನು ಪ್ರಥಮ ಪುರುಷದಲ್ಲೇ ನಡೆಸಲು ನೀವು ನನಗೆ ಅನುಮತಿ ನೀಡಬೇಕು, ನಾಸ್ತೆಂಕ. ಏಕೆಂದರೆ ಇವನ್ನೆಲ್ಲ ಉತ್ತಮ ಪುರುಷದಲ್ಲೇ ಹೇಳಲು ನನಗೆ ತುಂಬ ನಾಚಿಕೆಯಾಗುತ್ತದೆ – ಹೀಗೆ ನಮ್ಮ ಕಥಾನಾಯಕನೂ ಬೇರೆಲ್ಲರೊಂದಿಗೂ ದಾಪುಗಾಲು ಹಾಕಿಕೊಂಡು ಹೋಗುತ್ತಾನೆ. ಇವನೂ ತನ್ನ ದಿನವನ್ನು ಸೋಮಾರಿತನದಿಂದೇನೂ ಕಳೆದಿರುವುದಿಲ್ಲ. ಇವನ ನಿಸ್ತೇಜವಾದ, ಸ್ವಲ್ಪಮಟ್ಟಿಗೆ ವಿವರ್ಣವಾದ ಮುಖವು ಆನಂದದ ಒಂದು ವಿಚಿತ್ರ ಭಾವದಿಂದ ಕಂಗೊಳಿಸುತ್ತಿರುತ್ತದೆ. ಅವನು ಸೇಂಟ್ ಪೀಟರ್ಸ್

ಬರ್ಗ್‌ನ ಶೀತಲ ಆಗಸದಲ್ಲಿ ಅಸ್ತಂಗತ ಸೂರ್ಯನು ನಿಧಾನವಾಗಿ ಮುಳು ಗುತ್ತಿರುವುದನ್ನು ಅನಾದರದಿಂದೇನೂ ಅಲ್ಲದೆ ಗಮನಿಸುತ್ತಾನೆ. ಆದರೆ ಅವನು ಗಮನಿಸುತ್ತಾನೆ ಅಂದಾಗ ನಾನು ಸುಳ್ಳನ್ನು ಹೇಳುತ್ತಿದ್ದೇನೆ. ಅವನು ಅದನ್ನು ಗಮನಿಸುವುದಿಲ್ಲ ಆದರೆ ಅನ್ಯಮನಸ್ಕತೆಯಿಂದ ಅವಲೋಕಿಸುತ್ತಾನೆ, ತಾನು ಬಳಲಿದ್ದಾನೆನ್ನುವಂತೆ, ಅಥವಾ ಬೇರೆ ಯಾವುದರಲ್ಲೋ, ಹೆಚ್ಚು ಆಸಕ್ತಿಯ ಯಾವುದೋ ವಿಷಯದಲ್ಲಿ, ಮಗ್ನನಾಗಿದ್ದಾನೆ, ತಾನು ತನ್ನ ಸುತ್ತಲಿನ ಜಗತ್ತಿಗೆ ನೀಡಬಹುದಾದುದೆಲ್ಲ ಒಂದು ಕ್ಷಣಿಕವಾದ, ಅನಿಯತವಾದ, ಘಳಿಗೆಯಷ್ಟೆ, ಎನ್ನು ವಂತೆ. ಅವನು ಸಂತುಷ್ಟನಾಗಿದ್ದಾನೆ, ಏಕೆಂದರೆ ಮನಸ್ಸನ್ನು ವ್ಯಗ್ರಗೊಳಿಸುವ ವ್ಯವಹಾರಗಳಿಂದ ನಾಳಿನವರೆಗೂ ಮುಕ್ತನಾಗಿದ್ದಾನೆ. ಶಾಲೆಯ ಕೋಣೆಯಿಂದ ಹೊರಗೆ ಹೋಗಲು ಮತ್ತು ತನ್ನ ಮೆಚ್ಚಿನ ಆಟಗಳಲ್ಲೂ ಚೇಷ್ಟೆಗಳಲ್ಲೂ ತೊಡ ಗಲು ಅವಕಾಶ ನೀಡಲ್ಪಟ್ಟ ಶಾಲಾಬಾಲಕನಂತೆ ಅವನು ಆನಂದಿತನಾಗಿದ್ದಾನೆ. ಅವನತ್ತ ಒಮ್ಮೆ ಕ್ಷಣನೋಟ ಬೀರಿ, ನಾಸ್ತೆಂಕ. ಅವನು ಅನುಭವಿಸುತ್ತಿರುವ ಆನಂದವು ಅವನ ದುರ್ಬಲ ನರಗಳ ಮೇಲೆ ಮತ್ತು ಅವನ ವಿಕಾರವಾದ ಕಲ್ಪ ನೆಯ ಮೇಲೆ ತನ್ನ ಸಂತಸ ಪ್ರಭಾವವನ್ನು ಆಗಲೇ ಬೀರಿದೆ ಎಂಬುದನ್ನು ನೀವು ಕೂಡಲೇ ಕಂಡುಕೊಳ್ಳುವಿರಿ. ಈಗವನು ಹಗಲುಗನಸಿನಲ್ಲಿ ಮೈಮರೆ ತಿದ್ದಾನೆ. ಅವನು ತನ್ನ ಊಟದ ಬಗೆಗೆ, ಅಥವಾ ಸಂಜೆಯ ಮನರಂಜನೆಗಳ ಬಗೆಗೆ ಯೋಚಿಸುತ್ತಿದ್ದಾನೆಂದು ನೀವಂದುಕೊಂಡಿರಾ? ಅವನು ಏನನ್ನು ಹಾಗೆ ದಿಟ್ಟಿಸಿ ನೋಡುತ್ತಿರುವುದು? ಚುರುಕುಗಾಲಿನ ಕುದುರೆಗಳಿಂದ ಎಳೆಯಲ್ಪಟ್ಟ ಥಳಥಳಿಸುವ ಬಂಡಿಯಲ್ಲಿ ಕುಳಿತು ಸಂಚಾರ ಹೊರಟಿರುವ ಲಲನಾಮಣಿಗೆ ತುಂಬ ಆಕರ್ಷಕವಾಗಿ ಬಾಗಿ ವಂದಿಸುತ್ತಿರುವ ಭವ್ಯ ನೋಟದ ಮಹಾನು ಭವವನ್ನೇ? ಇಲ್ಲ, ನಾಸ್ತೆಂಕ. ಈಗ ಅವನಿಗೆ ಈ ಸಣ್ಣಪುಟ್ಟ ವಿಷಯಗಳೆಲ್ಲ ಯಾವ ಮಹತ್ವದ್ದು? ಅವನೀಗ ತನ್ನ ಸ್ವಂತ ವಿಚಿತ್ರ ಜಗತ್ತಿನ ಸಂಪತ್ತಿನಿಂದ ಸಿರಿವಂತ ನಾಗಿದ್ದಾನೆ; ಈ ಸಂಪತ್ತುಗಳನ್ನವನು ತೀರ ಇದ್ದಕ್ಕಿದ್ದಂತೆ ಪಡೆದುಕೊಂಡಿದ್ದ. ಅಸ್ತಂಗತ ಸೂರ್ಯನ ಕೊನೆಯ ಕಿರಣವು ಅವನ ಮುಂದೆ ಅಷ್ಟು ಹರ್ಷದಿಂದ ಕಂಗೊಳಿಸಿದುದು, ಅವನ ಹೃದಯವನ್ನು ಆಪ್ಯಾಯಮಾನವಾಗಿಸಿ ಅದರಲ್ಲಿ ಕಲ್ಪನೆಗಳ ಗರಿಕೆದರಿದುದು, ನಿರರ್ಥಕವೇನಾಗಿರಲಿಲ್ಲ. ಒಂದು ಘಳಿಗೆಯ ಹಿಂದಷ್ಟೆ ಅತ್ಯಂತ ಸಣ್ಣಪುಟ್ಟ ಚಿಲ್ಲರೆ ಸಂಗತಿಗಳೂ ಅವನ ಗಮನಕ್ಕೆ ಬರುತ್ತಿದ್ದ ಆ ಬೀದಿ ಈಗ ಅವನಿಗೆ ಎಷ್ಟು ಮಾತ್ರವೂ ಕಾಣಬರುತ್ತಿಲ್ಲ. ಏಕೆಂದರೆ ಆಗಲೇ ಕಲ್ಪನೆಯ ದೇವತೆಯು (ನೀವು ಜುಕೋವ್‌ಸ್ಕಿಯ ಕೃತಿಗಳನ್ನು ಓದಿದ್ದೀರಾ, ಪ್ರಿಯ ನಾಸ್ತೆಂಕ) ತನ್ನ ಮಗ್ಗದಲ್ಲಿ ಚಿನ್ನದ ಎಳೆಗಳ ಹಾಸು ಹೊಕ್ಕುಗಳಿಂದ ಅವನಿಗಾಗಿ ಕನಸುಗಳ, ರಮಣೀಯವಾದ ಅದ್ಭುತ ಕಾಲ್ಪನಿಕ ಬಾಳ ಕನಸುಗಳ

ನವುರು ಬಟ್ಟೆಯನ್ನು ನೇಯತೊಡಗಿದ್ದಾಳೆ. ಅಥವಾ ಬಹುಶಃ ಅವನನ್ನು ಅವನು ಮನೆಗೆ ನಡೆದು ಹೋಗುತ್ತಿದ್ದ ಆ ಸುಂದರ ಕಲ್ಲು ಕಾಲುದಾರಿಯಿಂದ ಸಪ್ತ ಸ್ಫಟಿಕ ಸ್ವರ್ಗಕ್ಕೆ ತನ್ನ ಮಾಂತ್ರಿಕ ಹಸ್ತದಿಂದ ಎತ್ತಿಕೊಂಡು ಹೋಗಿರುವಳೋ ಏನೋ, ಯಾರಿಗೆ ಗೊತ್ತು. ಅವನನ್ನು ನಿಲ್ಲಿಸಿ ತಟಕ್ಕನೆ ಅವನು ಎಲ್ಲಿದ್ದಾನೆ, ಯಾವ ಬೀದಿಗಳ ಮೂಲಕ ನಡೆದುಕೊಂಡು ಬಂದ, ಎಂದು ನೀವು ಕೇಳಿದಲ್ಲಿ ಅವನು ಬಹುಶಃ ಏನೊಂದನ್ನೂ ನೆನಸಿಕೊಳ್ಳಲು ಅಸಮರ್ಥನಾಗಿರುತ್ತಾನೆ. ತಾನು ಎಲ್ಲಿಗೆ ಹೋಗಿದ್ದ, ಎಲ್ಲಿದ್ದಾನೆ ಎಂಬುದನ್ನು ನೆನಪಿಗೆ ತಂದುಕೊಳ್ಳಲಾಗದೆ ಅವನು ತಬ್ಬಿಬ್ಬಾಗಿ ನಾಚುತ್ತ ತನ್ನ ಘನತೆಯನ್ನು ಉಳಿಸಿಕೊಳ್ಳಲು ಏನಾದರೊಂದು ಕಥೆಯನ್ನು ಹುಟ್ಟಿಸಿ ಹೇಳುತ್ತಾನೆ. ಆದ್ದರಿಂದಲೇ ಕಾಲುದಾರಿಯ ಮಧ್ಯದಲ್ಲಿ ತುಂಬ ಗೌರವಸ್ಥಳಾದ ವೃದ್ಧ ಮಹಿಳೆಯೊಬ್ಬಳು ಅವನನ್ನು ನವುರಾಗಿ ನಿಲ್ಲಿಸಿ ತನಗೆ ದಾರಿ ತೋರಿಸಬೇಕೆಂದು ವಿನಯದಿಂದ ಕೇಳಿದಾಗ ಅವನು ಅಷ್ಟೊಂದು ಬೆಚ್ಚಿ ಬೀಳುವುದು, ಕಿರುಚುವುದು, ಸುತ್ತಮುತ್ತ ಗಾಬರಿಯಿಂದ ನೋಡುವುದು. ಕೋಪದಿಂದ ಹುಬ್ಬು ಗಂಟಿಕ್ಕಿಕೊಂಡು ಅವನು ದಾಪುಗಾಲು ಹಾಕಿಕೊಂಡು ನಡೆಯುತ್ತ ಹೋಗುತ್ತಾನೆ. ಅವನ ಪಕ್ಕದಲ್ಲೇ ಹೋಗಿಬರುತ್ತಿರುವವರ ಪರಿವೆಯೇ ಅವನಿಗಿರುವುದಿಲ್ಲ. ಅವರು ಅವನತ್ತ ನೋಡಿ ನಸುನಕ್ಕು ಸ್ವಲ್ಪ ದೂರ ಹೋದ ಮೇಲೆ ಹಿಂದಿರುಗಿ ಮತ್ತೆ ಅವನನ್ನು ನೋಡುತ್ತಾರೆ. ಅವನು ಹೋಗುತ್ತಿದ್ದ ದಾರಿಯಿಂದ ಅಂಜಿಕೆಯಿಂದ ಪಕ್ಕಕ್ಕೆ ಸರಿಯುವ ಪುಟ್ಟ ಬಾಲಕಿಯೂ ಅವನ ಗಮನಕ್ಕೆ ಬರುವುದೇ ಇಲ್ಲ. ಪಕ್ಕಕ್ಕೆ ಸರಿದ ಆ ಬಾಲಕಿ ಅವನ ವಿಶಾಲವಾದ ಆಲೋಚನಾಮಗ್ನ ಮುಗುಳ್ನಗೆಯನ್ನೂ ಭಾವಸೂಚಕವಾಗಿ ಆಡಿಸುತ್ತಿದ್ದ ಕೈಗಳನ್ನೂ ಕಂಡಾಗ ಗಟ್ಟಿಯಾಗಿ ನಗತೊಡಗುತ್ತಾಳೆ. ಆದರೆ ಇದೇ ಕಲ್ಪನೆಯ ದೇವತೆಯೇ ಆ ವೃದ್ಧ ಮಹಿಳೆಯನ್ನೂ, ಕುತೂಹಲಿಗಳಾದ ದಾರಿಗರನ್ನೂ, ನಗುವ ಪುಟ್ಟ ಹುಡುಗಿಯನ್ನೂ, ಫೊಂತಾಂಕಾ ನದಿಯಲ್ಲಿ (ಅಂದರೆ, ನಮ್ಮ ಕಥಾನಾಯಕನು ಆ ಕಾಲದಲ್ಲಿ ಅದರ ಪಕ್ಕದಲ್ಲಿ ಹೋಗುತ್ತಿದ್ದನೆಂದು ಭಾವಿಸಿಕೊಂಡರೆ) ಗುಂಪುಕೂಡಿದ್ದ ದೋಣಿಗಳ ಮೇಲೆ ಆಗಲೇ ತಮ್ಮ ಊಟದಲ್ಲಿ ತೊಡಗಿದ್ದ ದೋಣಿಗರನ್ನೂ ತನ್ನ ವಿಲಾಸಯಾನದಲ್ಲಿ ಕರೆದೊಯ್ಯುತ್ತಾಳೆ; ಅವಳು ಎಲ್ಲವನ್ನೂ ಎಲ್ಲರನ್ನೂ ತನ್ನ ಚಿನ್ನದ ಬಟ್ಟೆಯೊಳಕ್ಕೆ ಸೇರಿಸಿ ನೇಯುತ್ತಾಳೆ – ನೊಣಗಳು ಜೇಡರ ಬಲೆಯೊಳಕ್ಕೆ ನೇಯಲ್ಪಡುವಂತೆ. ಈ ವಿಚಿತ್ರ ಮನುಷ್ಯನು ಈ ಹೊಸ ಸಂಪತ್ತಿನಿಂದ ಕೂಡಿದವನಾಗಿ ತನ್ನ ಆನಂದಭರಿತವಾದ ಪುಟ್ಟ ಕೊಟ್ಟಿಗೆ ಪ್ರವೇಶಿಸುತ್ತಾನೆ. ಕುಳಿತುಕೊಳ್ಳುತ್ತಾನೆ, ಊಟ ಮಾಡುತ್ತಾನೆ. ಅವನ ಮ್ಲಾನವದನಳಾದ ಚಿರದುಃಖಿಯಾದ ಸೇವಕಿ ಮತ್ರೋನಳು ಮೇಜನ್ನು ಒರಸಿ ಶುಭ್ರಮಾಡಿ ಅವನಿಗೆ ಅವನ ಪೈಪ್ ತಂದುಕೊಟ್ಟಾಗಲಷ್ಟೆ ಅವನು

ತನ್ನ ಕನಸುಗಳಿಂದ ಎಚ್ಚರವಾಗುತ್ತಾನೆ. ಅವನು ಮೈ ಕದಲಿಸುತ್ತಾನೆ, ತನ್ನ ಊಟ ಆಗಲೇ ಆಯಿತೆಂಬ ಸಂಗತಿಯನ್ನು ಆಶ್ಚರ್ಯದಿಂದ ನೆನಪು ಮಾಡಿ ಕೊಳ್ಳುತ್ತಾನೆ. ಊಟ ಮಾಡಿದ ಇಡೀ ಪ್ರಕ್ರಿಯೆಯೇ ಅವನಿಗೆ ನೆನಪಿನಲ್ಲಿರುವು ದಿಲ್ಲ. ಕೋಣೆ ಕತ್ತಲೆಯಾಗತೊಡಗುತ್ತದೆ. ಶೂನ್ಯತೆ ಹಾಗೂ ದುಃಖ ಅವನ ಹೃದಯವನ್ನು ತುಂಬುತ್ತವೆ. ಕಲ್ಪನೆಯ ಆ ಇಡೀ ಪ್ರಪಂಚ ಅವನ ಸುತ್ತಮುತ್ತ ಕುಸಿದು ಬೀಳುತ್ತದೆ, ನಿಶ್ಶಬ್ದವಾಗಿ, ಒಡಕಿನ ಸದ್ದಿಲ್ಲದೆ ಬಿದ್ದು ಧೂಳಿನಲ್ಲಿ ಬೆರೆ ಯುತ್ತದೆ. ಅದು ಕನಸಿನಂತೆ ಒಂದು ಕ್ಷಣ ಇದ್ದು ಮರುಕ್ಷಣದಲ್ಲೇ ಮಂಗ ಮಾಯ ವಾಗಿರುತ್ತದೆ. ತಾನು ಏನು ಕನಸುತ್ತಿದ್ದನೆಂಬುದೂ ಅವನಿಗೆ ಜ್ಞಾಪಕದಲ್ಲಿರುವು ದಿಲ್ಲ. ಆದರೆ ಈಗ ಯಾವುದೋ ಅವ್ಯಕ್ತ ಸಂವೇದನೆ, ಒಂದು ಹೊಸ ಬಯಕೆ ಅವನ ಹೃದಯದ ಬಡಿತವನ್ನು ಹೆಚ್ಚಿಸುತ್ತದೆ, ನೋವನ್ನುಂಟುಮಾಡುತ್ತದೆ. ಅವನ ಕಲ್ಪನೆಯನ್ನು ಆಕರ್ಷಿಸುತ್ತದೆ, ಉದ್ರೇಕಿಸುತ್ತದೆ, ಉತ್ತೇಜಿಸುತ್ತದೆ. ಕಂಡೂ ಕಾಣದಂತೆ ಹೊಸ ಚಿತ್ತಭ್ರಾಂತಿಗಳ ತಂಡವನ್ನು ಅವನ ಮುಂದೆ ತಂದಿ ರಿಸುತ್ತದೆ.... ಆ ಪುಟ್ಟ ಕೋಣೆಯಲ್ಲಿ ಮೌನದ್ದೇ ರಾಜ್ಯಭಾರ. ಅವನ ಕಲ್ಪನೆ ಏಕಾಂತದಲ್ಲಿ ಜಡತೆಯಲ್ಲಿ ಹಾಯಾಗಿರುತ್ತದೆ. ಅದು ಮೃದುವಾಗಿ ಭುಗಿಲೇಳು ತ್ತದೆ, ಪಕ್ಕದಲ್ಲಿರುವ ಅಡಿಗೆಮನೆಯಲ್ಲಿ ಈ ಜಗತ್ತಿನ ಬೇರಾವ ಚಿಂತೆಯನ್ನೂ ಹಚ್ಚಿಕೊಳ್ಳದೆ ಕಾಫಿ ಮಾಡುವ ಸಡಗರದಲ್ಲಿ ತೊಡಗಿದ ಮತ್ರ್ಯೋನಳ ಹಳೆಯ ಕಾಫಿ ಪಾತ್ರೆಯಲ್ಲಿನ ನೀರಿನಂತೆ ಗುಳ್ಳೆಗಳನ್ನೆಬ್ಬಿಸುತ್ತ ಕೊತಕೊತ ಕುದಿಯುತ್ತದೆ. ಅನಂತರ ಅವನ ಖಯಾಲು ರಭಸದಿಂದ ಹೊರಚಿಮ್ಮುವ ಸಣ್ಣಪುಟ್ಟ ಜ್ವಾಲೆ ಗಳಂತೆ ಭೇದಿಸಿಕೊಂಡು ನುಗ್ಗಿಬರತೊಡಗುತ್ತದೆ. ಯಾವ ನಿರ್ದಿಷ್ಟ ಗುರಿಯೂ ಇಲ್ಲದೆ ಕೈಗೆತ್ತಿಕೊಂಡಿದ್ದ ಪುಸ್ತಕ ನನ್ನ ಕನಸುಗಾರನ ಕೈಯಿಂದ ಜಾರಿ ಬೀಳು ತ್ತದೆ. ಅವನದರ ಒಂದೆರಡು ಪುಟ ಬಿಟ್ಟು ಹೆಚ್ಚಿಗೆ ಓದೇ ಇರುವುದಿಲ್ಲ. ಅವನ ಕಲ್ಪನೆ ಮತ್ತೆ ಜಾಗೃತವಾಗುತ್ತದೆ, ಮತ್ತೆ ಗರಿಗೊಳ್ಳುತ್ತದೆ. ಇದ್ದಕ್ಕಿ ದ್ದಂತೆ ಅವನ ಮನೋನೇತ್ರದ ಮುಂದೆ ಒಂದು ಹೊಸ ಜಗತ್ತು, ಅತ್ಯಾಕರ್ಷಕ ಜಗತ್ತು ತನ್ನೆಲ್ಲ ವಿಸ್ಮಯಗೊಳಿಸುವ ಸಾಧ್ಯತೆಗಳೊಂದಿಗೆ ಬೆಳಗುತ್ತದೆ. ಒಂದು ಹೊಸ ಕನಸು – ಒಂದು ಹೊಸ ಸಂತೋಷ ! ಸೂಕ್ಷ್ಮವಾದ ಹಾಗೂ ಇಂದ್ರಿಯಗ್ರಾಹ್ಯವಾದ ಹೊಸ ವಿಷದ ಒಂದು ಗುಳಿಗೆ. ನಮ್ಮ ನಿಜವಾದ ಜೀವನದ ಉಸಾಬರಿ ಅವನಿಗೇಕೆ? ಭ್ರಾಂತಿಭರಿತವಾದ ಅವನ ದೃಷ್ಟಿಕೋನದಲ್ಲಿ, ನಾಸ್ತೆಂಕ, ನೀವೂ ನಾನೂ ತುಂಬ ಆಲಸ್ಯದ ಸೋಮಾರಿತನದ ಜಡತೆಯ ಜೀವನ ನಡೆಸುತ್ತಿದ್ದೇವೆ. ಅವನ ದೃಷ್ಟಿಯಲ್ಲಿ ನಾವು ನಮ್ಮ ಪಾಲಿಗೆ ಬಂದ ಜೀವನದ ಬಗೆಗೆ ತುಂಬ ಅತೃ ಪ್ತರಾಗಿದ್ದೇವೆ, ಜೀವನವನ್ನು ತುಂಬ ಬೇಸರವನ್ನಾಗಿ ಕಂಡುಕೊಳ್ಳುತ್ತಿದ್ದೇವೆ. ನಿಜಕ್ಕೂ, ನೋಡಿ ನಾವು ಪರಸ್ಪರರ ಬಗೆಗೆ ಎಷ್ಟು ಉತ್ಸಾಹಶೂನ್ಯರಾಗಿ, ಎಷ್ಟು

ದುಮ್ಮಾನದಿಂದ ಹಾಗೂ ಕೋಪದಿಂದ ಇರುವಂತೆ ಕಾಣುತ್ತೇವೆ. ಎಂಥ ನತದೃಷ್ಟ ಜೀವಿಗಳು, ಎಂದು ನನ್ನ ಕನಸುಗಾರ ಭಾವಿಸುತ್ತಾನೆ. ಅವನು ಹಾಗೆ ಭಾವಿಸುವುದರಲ್ಲಿ ಆಶ್ಚರ್ಯವೂ ಇಲ್ಲ! ಆ ಚಿತ್ತಭ್ರಾಂತಿಗಳು ಅವನಿಗಾಗಿ ಹೆಣೆಯುವ ಮಾಂತ್ರಿಕವಾದ ಚೈತನ್ಯಪೂರ್ಣವಾದ ಚಿತ್ರವನ್ನು ನೋಡಿ. ಅವು ಎಷ್ಟು ಆಕರ್ಷಕವಾಗಿ, ಎಷ್ಟು ನವುರಾಗಿ ಹಾಗೂ ಎಷ್ಟು ಉದಾರವಾಗಿ ಹೆಣೆಯಲ್ಪಟ್ಟಿರುತ್ತವೆ. ಅವುಗಳಲ್ಲಿ ನಮ್ಮ ಕನಸುಗಾರನದೇ ಅತ್ಯಂತ ಮುಖ್ಯ ಪಾತ್ರ. ಅವನೇ ಸತತವಾಗಿ ಮುನ್ನೆಲೆಯಲ್ಲಿ ಇರುತ್ತಾನೆ, ಅವುಗಳಲ್ಲಿನ ಸಾಹಸಕೃತ್ಯಗಳ ವೈವಿಧ್ಯತೆಯನ್ನು ನೋಡಿ. ಅವನ ಪರಮಾನಂದಭರಿತ ಕನಸುಗಳು ಕೊನೆಯಿಲ್ಲದಂತೆ ಹರಿಯುತ್ತಿರುವುದನ್ನು ನೋಡಿ! ಅವನು ಏನು ಕನಸು ಕಾಣುತ್ತಾನೆ ಎಂದು ನೀವು ಬಹುಶಃ ಕೇಳುತ್ತೀರೇನೋ. ಕೇಳಬೇಕೇಕೆ? ಅವನು ಎಲ್ಲ ರೀತಿಯ ಕನಸುಗಳನ್ನೂ ಕಾಣುತ್ತಾನೆ. ಮೊದಲು ಅವನು ಯಾರ ಮನ್ನಣೆಗೂ ಒಳಗಾಗದಿದ್ದ, ಅನಂತರ ಕೀರ್ತಿ ಕಿರೀಟಧಾರಿಯಾದ ಕವಿಯಾಗಿರುವ ಕನಸು ಕಾಣುತ್ತಾನೆ. ಹಾಫ್‌ಮನ್‌ರ ಸ್ನೇಹಿತನಾಗಿರುವ, ಸಂತ ಬಾರ್ತಾಲೊಮ್ಯುನ ರಾತ್ರಿಯ, ಡಯಾನಾ ವೆರ್ನೋನ್‌ನ, ತ್ಸಾರ್ ಇವಾನ್‌ನ ಕಜಾನ್ ದಿಗ್ವಿಜಯದಲ್ಲಿ ವೀರೋಚಿತ ಪಾತ್ರ ನಿರ್ವಹಿಸುವ, ಕ್ಲಾರಾ ಮೋಬ್ರೇಯ, ಎಫ್ಫೀಡೀನ್ಸ್‌ರ, ಉನ್ನತ ಕ್ರೈಸ್ತ ಮಠಾಧಿಪತಿಗಳ ಸಮಿತಿಯ ಮುಂದೆ ಯಾನ್ ಹೂಸ್‌ನ ವಿಚಾರಣೆಯಾಗುವ, 'ಭೂತ ರಾಬರ್ಟ್'ನಲ್ಲಿ ಮೃತರಾದವರು ಪುನರ್ಜನ್ಮ ಪಡೆಯುವ (ಇದರ ಸಂಗೀತ ನಿಮಗೆ ಜ್ಞಾಪಕವಿದೆಯೆ? ಅದು ಹೊಂದಿರುವ ಆ ಮಸಣ ವಾಸನೆ!), ಮಿನ್ನಾ ಹಾಗೂ ಬ್ರೆಂಡಾಗಳ, ಬೆರೆಜಿನಾ ನದಿಯ ಬಳಿಯ ಕದನದ, ಡಂಟಾನ್‌ನ, ಕೌಂಟೆಸ್ ವಿ.ಡಿ.ಯ ಸ್ವಾಗತಶಾಲೆಯಲ್ಲಿ ಕವನಗಳನ್ನು ಓದುವ, ಕ್ಲಿಯೋಪಾತ್ರಾ ei suoi amanti*, ಕೊಲೋಮ್ನಾದಲ್ಲಿ ಒಂದು ಪುಟ್ಟ ಮನೆಯ, ಅದರಲ್ಲಿ ತನ್ನದೇ ಆದ ಒಂದು ಕೋಣೆ ಮತ್ತು ತನ್ನ ಪಕ್ಕದಲ್ಲಿ ಒಂದು ಚೆಲುವಾದ ಪ್ರಾಣಿ, ಅದು ಚಳಿಗಾಲದ ರಾತ್ರಿಯಂದು ಅವನ ಮಾತುಗಳನ್ನೇ ಕಣ್ಣಗಲಿಸಿಕೊಂಡು ಬಾಯಿಬಿಟ್ಟುಕೊಂಡು ಈಗ ನೀವು ಕೇಳುತ್ತಿಲ್ಲವೇ ಹಾಗೆ, ನನ್ನ ಪುಟ್ಟ ದೇವತೆ, ಕೇಳುವ, ಇಂತಹುವೇ ನಾನಾ ರೀತಿಯ ಕನಸುಗಳನ್ನು ಕಾಣುತ್ತಾನೆ. ಉಹೂಂ, ನಾಸ್ತೆಂಕ, ಆ ಇಂದ್ರಿಯಸುಖದ ಜಡಮನುಷ್ಯನು, ನೀವೂ ನಾನೂ ಅನುಭವಿಸಲು ತುಂಬ ಕಾತುರರಾಗಿರುವಂಥ ಜೀವನವನ್ನು ಸ್ವಲ್ಪವೂ ಇಷ್ಟಪಡುವುದಿಲ್ಲ. ಅದೊಂದು ಬಡ ದರಿದ್ರ ಜೀವನ ಎಂದವನು ಭಾವಿಸುತ್ತಾನೆ. ತನಗೂ ಒಂದಲ್ಲ ಒಂದು ದಿನ ದುಃಖದ ಘಂಟಾರವ ಮೊಳಗಬಹುದು ಎಂಬುದನ್ನವನು ತಿಳಿಯಲಾರ.

---

*ಮತ್ತು ಅವಳ ಪ್ರೇಮಿಗಳ (ಇಟಾಲಿಯನ್).

ಆಗ ಈ ದರಿದ್ರ ಜೀವನದ ಒಂದು ಗಂಟೆಗೆ ತನ್ನೆಲ್ಲ ಭ್ರಾಂತಿಯ ವರ್ಷಗಳನ್ನೂ ನೀಡಲು ಸಿದ್ಧನಾಗುತ್ತಾನೆ. ಅದೂ, ಸುಖ ಅಥವಾ ಆನಂದಕ್ಕೆ ವಿನಿಮಯವಾಗಿ ಅಲ್ಲ. ಆ ದುಃಖದ, ವಿಷಾದದ, ಅನಿರ್ಬಂಧಿತ ಶೋಕದ ಆ ಘಳಿಗೆಯಲ್ಲಿ ಅವನು ಅವನ್ನು ಬಯಸುವುದೂ ಇಲ್ಲ. ಆದರೆ ಆ ಭೀಕರ ಗಂಟೆ ಹೊಡೆಯುವವರೆಗೂ ಅವನು ಏನನ್ನೂ ಅಪೇಕ್ಷಿಸುವುದಿಲ್ಲ, ಏಕೆಂದರೆ ಅವನು ಅಪೇಕ್ಷೆಗಳಿಗೆ ಮೀರಿ ರುತ್ತಾನೆ, ಏಕೆಂದರೆ ಅವನು ಆಗಲೇ ಎಲ್ಲವನ್ನೂ ಹೊಂದಿರುತ್ತಾನೆ, ಅವನು ತಣಿದಿರುತ್ತಾನೆ, ಏಕೆಂದರೆ ಅವನೇ ತನ್ನ ಸ್ವಂತ ಕಲಾವಿದನಾಗಿರುತ್ತಾನೆ, ಹೊಸ ಖಯಾಲಿಯೊಂದು ಅವನನ್ನು ಒತ್ತಾಯಿಸಿದ ಕೂಡಲೇ ಅವನು ತನಗಾಗಿ ಹೊಸ ಜಗತ್ತುಗಳನ್ನು ಸೃಷ್ಟಿಸಿಕೊಳ್ಳುತ್ತಾನೆ. ಆಮೇಲೆ, ನಿಮಗೇ ಗೊತ್ತಿದೆ, ಈ ರಮ್ಯ ಕಥೆಯನ್ನು, ಈ ಭ್ರಾಂತ ಜಗತ್ತನ್ನು ಬಹು ಸುಲಭವಾಗಿ, ಬಹು ಸಹಜವಾಗಿ, ಅದು ನಿಜಕ್ಕೂ ಭ್ರಾಂತಿಯಲ್ಲವೇ ಅಲ್ಲ ಅನ್ನುವಂತೆ, ಸೃಜಿಸಲು ಸಾಧ್ಯ! ನಿಜಕ್ಕೂ, ಕೆಲವು ವೇಳೆ ನಾನು ಈ ಜಗತ್ತು ಕಾಲ್ಪನಿಕವಲ್ಲ, ನನ್ನ ಉದ್ರಿಕ್ತ ಇಂದ್ರಿಯಗಳು ಸೃಜಿಸಿದುದಲ್ಲ, ನನ್ನ ಕಲ್ಪನಾ ಶಕ್ತಿಯ ಚಮತ್ಕಾರವಲ್ಲ, ಆದರೆ ವಾಸ್ತವವಾಗಿ ಸತ್ಯವಾದುದು, ನೈಜವಾದುದು, ಅಸ್ತಿತ್ವದಲ್ಲಿರುವಂತ ಹುದು, ಎಂದೇ ನಂಬುತ್ತೇನೆ. ಹಾಗಿದ್ದರೆ, ಹೇಳಿ, ನಾಸ್ತೆಂಕ, ಏಕೆ ಅಂಥ ಘಳಿಗೆಗಳಲ್ಲಿ ನನ್ನ ಚೈತನ್ಯ ಬೇಗುದಿಗೊಳಗಾಗಿರುತ್ತದೆ? ಆಗ ಯಾವ ಮಾಂತ್ರಿಕ ಶಕ್ತಿ, ಯಾವ ವಿಚಿತ್ರ ಶಕ್ತಿ ನಾಡಿ ಮಿಡಿತವನ್ನು ಹೆಚ್ಚುವಂತೆ ಮಾಡುತ್ತದೆ, ಕನಸು ಗಾರನ ಕಣ್ಣುಗಳಲ್ಲಿ ನೀರನ್ನು ತರಿಸುತ್ತದೆ, ಅವನ ನಿಸ್ತೇಜವಾದ ಕಣ್ಣೀರಿನಿಂದ ನೆಂದ ಕೆನ್ನೆಗಳಲ್ಲಿ ರಂಗೇರಿಸುತ್ತದೆ, ಅವನ ಇಡೀ ಇರುವಿಕೆಯನ್ನು ಸ್ವರ್ಗಾನಂದ ದಿಂದ ತುಂಬುತ್ತದೆ? ಅವನ ನಿದ್ರೆರಹಿತ ರಾತ್ರಿಗಳು ಅವನಿಗೆ ಏಕೆ ಅಷ್ಟು ಬೇಗ ಅನಂತ ಸುಖಸಂತೋಷಗಳಲ್ಲಿ ಕಳೆದು ಹೋಗುವಂತೆ ಕಂಡುಬರುತ್ತವೆ? ಸೂರ್ಯನ ಮೊದಲ ಅರುಣ ಕಿರಣ ಅವನ ಕೋಣೆಯ ಕಿಟಕಿಯ ಮೂಲಕ ತೂರಿ ಬಂದಾಗ, ಮುಂಜಾನೆಯು ತನ್ನ ಭಯ ಹುಟ್ಟಿಸುವಂಥ ಅನಿಶ್ಚಿತ ಬೆಳ ಕನ್ನು ಅವನ ಕೋಣೆಯೊಳಕ್ಕೆ ಕಳುಹಿಸಿದಾಗ, ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಇಲ್ಲಿ ಮಾಡುತ್ತಲ್ಲ ಹಾಗೆ ಬೆಳಕನ್ನು ಕಳುಹಿಸಿದಾಗ, ಆಗ ಏಕೆ ನಮ್ಮ ಕನಸುಗಾರ ಬಳಲಿ ಬೆಂಡಾಗಿ ತನ್ನ ಹಾಸಿಗೆಯ ಮೇಲೆ ಮೈ ಚೆಲ್ಲುತ್ತಾನೆ, ನಿದ್ರೆ ಹೋಗು ತ್ತಾನೆ, ಅವನ ಅಸ್ವಸ್ಥ ಜರ್ಝರಿತ ಚೈತನ್ಯದಲ್ಲಿ ಉಡುಗಿದ ಹರ್ಷಾತಿರೇಕದಿಂದ ಮೂರ್ಛೆ ಹೋಗುತ್ತಾನೆ? ಸಹಿಸಲಾಗದಷ್ಟು ಮಧುರವಾದ ಯಾತನೆ ಅವನ ಹೃದಯವನ್ನು ತುಂಬುತ್ತದೇಕೆ? ಹೌದು, ನಾಸ್ತೆಂಕ, ಅದು ನಿಮ್ಮನ್ನು ಮೋಸ ಮಾಡುತ್ತದೆ. ಅವನ ಆತ್ಮದಲ್ಲಿ ಸಂಚರಿಸುತ್ತಿರುವ ರಾಗಭಾವವು ಸತ್ಯವಾದುದು, ನೈಜವಾದುದು, ಎಂದು ನೀವು ನಿಮಗೇ ತಿಳಿಯದಂತೆಯೇ ನಂಬುವಂತಾಗುತ್ತೀರ.

ಅವನ ಅಶರೀರ ಕನಸುಗಳಲ್ಲಿ ಸ್ಪರ್ಶ್ಯವಾದುದು, ಚೈತನ್ಯದಿಂದ ಕೂಡಿದುದು ನಿಜಕ್ಕೂ ಏನೋ ಇದೆ ಎಂದು ನಂಬುವಂತಾಗುತ್ತೀರ. ಅದರ ಮೋಸ ಎಂತ ಹುದು ಯೋಚನೆ ಮಾಡಿ ನೋಡಿ! ಉದಾಹರಣೆಗೆ, ಪ್ರೇಮ ತನ್ನೆಲ್ಲ ಅನಂತ ಆನಂದದೊಂದಿಗೆ, ತನ್ನೆಲ್ಲ ಮನೋವೇಧಕ ಯಾತನೆಯೊಂದಿಗೆ ಅವನ ಹೃದಯ ಪ್ರವೇಶಿಸುತ್ತದೆ. ಅವನನ್ನು ಒಂದು ಕ್ಷಣ ನೋಡಿದರೆ ಸಾಕು, ನಿಮಗೆ ಇದು ಸ್ಪಷ್ಟವಾಗುತ್ತದೆ! ಅವನು ತನ್ನ ಆನಂದಾತಿಶಯದ ಕನಸುಗಳಲ್ಲಿ ಪ್ರೀತಿಸಿ ದಂಥ ಆ ವ್ಯಕ್ತಿಯನ್ನು ನಿಜವಾಗಿಯೂ ಎಂದೂ ತಿಳಿದುದೇ ಇಲ್ಲ ಎಂದು ಅವ ನನ್ನು ನೋಡಿದ ನೀವು ನಂಬುವಿರಾ, ಪ್ರಿಯ ನಾಸ್ತೆಂಕ? ಅವನು ಅವಳನ್ನು ತನ್ನ ಮೋಸಸ್ವರೂಪದ ಭ್ರಾಂತಿಗಳಲ್ಲಷ್ಟೆ ಕಂಡಿರುವುದು, ಆ ಪ್ರೇಮಭಾವನೆಯನ್ನು ಕನಸಿನಲ್ಲಷ್ಟೆ ಕಂಡಿರುವುದು, ಖಂಡಿತ ಸಾಧ್ಯವಿಲ್ಲ. ಅವರು ತಮ್ಮ ಅನೇಕ ವರ್ಷಗಳ ಜೀವಿತವನ್ನು ನಿಜವಾಗಿಯೂ ಜೊತೆಜೊತೆಯಾಗಿ ಕೈಕೈ ಹಿಡಿದು ಕಳೆದಿರಲಿಲ್ಲ, ಕೇವಲ ಅವರಿಬ್ಬರೇ, ಇಡೀ ಜಗತ್ತನ್ನು ತೊರೆದು, ತಮ್ಮ ಭವಿತವ್ಯಗಳನ್ನು, ತಮ್ಮ ಎರಡು ಖಾಸಗಿ ಜಗತ್ತುಗಳನ್ನು ಒಂದನ್ನಾಗಿ ಜೊತೆಗೂಡಿಸಿ ಕಳೆದಿರ ಲಿಲ್ಲ, ಎಂಬುದು ನಿಜವಾಗಿರುವುದು ಸಾಧ್ಯವೇ? ಆಮೇಲೆ ಆ ರಾತ್ರಿ, ಅಗಲಿ ಕೆಯ ಆ ರಾತ್ರಿ, ವಿಷಣ್ಣ ಆಗಸದ ಕೆಳಗೆ ಘೀಳಿಡುತ್ತ ಬೀಸುತ್ತಿದ್ದ ಚಂಡಮಾರು ತಕ್ಕೆ ಕಿವಿಗೊಡದೆ, ತನ್ನ ಕಪ್ಪು ರೆಪ್ಪೆಕೂದಲುಗಳಿಂದ ಕಣ್ಣೀರಿನ ಹನಿಗಳನ್ನು ಹಾರಿಸಿ ದೂರ ಒಯ್ಯುತ್ತಿದ್ದ ಗಾಳಿಯ ಪರಿವೆಯೂ ಇಲ್ಲದೆ, ಅವನ ಎದೆಯ ಮೇಲೆ ಬಿಕ್ಕಳಿಸಿ ಅಳುತ್ತ, ದುಃಖಿಸುತ್ತ ಮಲಗಿದ್ದುದು ಅವಳೇ ಅಲ್ಲವೇ? ಅವೆಲ್ಲ ಕೇವಲ ಕನಸಾಗಿದ್ದುದು ಖಂಡಿತ ಸಾಧ್ಯವಿರಲಿಲ್ಲ – ಆ ವಿಷಣ್ಣವಾದ, ಉಪೇ ಕ್ಷಿಸಲ್ಪಟ್ಟಿದ್ದ, ಹುಚ್ಚುಹುಚ್ಚಾಗಿ ಬೆಳೆದಿದ್ದ ಆ ಉದ್ಯಾನ, ಪಾಚಿ ಬೆಳೆದು ಮುಚ್ಚಿ ಹೋಗಿದ್ದ ಅದರ ಕಾಲುದಾರಿಗಳು, ಅವರು ಅಷ್ಟು ಆಗಾಗ್ಗೆ ಆಸೆಯೊಂದಿಗೆ, ನಿರಾಸೆಯೊಂದಿಗೆ, ಪ್ರೀತಿಯೊಂದಿಗೆ, ಹೌದು ಅಷ್ಟು ದೀರ್ಘ ಕಾಲ, ಸುದೀರ್ಘ ಕಾಲ, ಅಷ್ಟು ಮಮತೆಯಿಂದ ಪರಸ್ಪರ ಪ್ರೇಮಿಸಿದ ಆ ಪ್ರೀತಿಯೊಂದಿಗೆ, ನಡೆದಾಡಿದ್ದ ಆ ಒಂಟಿ ಉದ್ಯಾನ – ಎಲ್ಲವೂ ಕನಸಾಗಿದ್ದುದು ಖಂಡಿತ ಸಾಧ್ಯ ವಿರಲಿಲ್ಲ, ಅಲ್ಲವೇ? ಆಮೇಲೆ ಆ ವಿಚಿತ್ರ ಪೂರ್ವಿಕರ ಮನೆ – ಅಲ್ಲೇ ಅವಳು ಅಷ್ಟೊಂದು ವರ್ಷ ತನ್ನ ಮ್ಲಾನವದನನಾದ ನಿತ್ಯಮೌನಿಯಾದ, ಸಿಡುಕಿನ ಗಂಡನೊಂದಿಗೆ ಏಕಾಂತದಲ್ಲಿ ಹಾಗೂ ದುಃಖದಲ್ಲಿ ವಾಸವಾಗಿದ್ದುದು. ಅವರಿ ಬ್ಬರನ್ನೂ ಉಳಿದವರು ಇಬ್ಬರು ಸಣ್ಣ ಅಂಜುವ ಮಕ್ಕಳನ್ನಾಗಿಯೇ ಭಾವಿಸಿ ದ್ದರು, ಅವರು ತಮ್ಮ ನಡುವಿನ ಪ್ರೇಮವನ್ನು ಪರಸ್ಪರರಿಂದ ಪುಕ್ಕಲುತನದಿಂದ ಹಾಗೂ ಖಿನ್ನತೆಯಿಂದ ಅಡಗಿಸಿಟ್ಟಿದ್ದರೆಂದೇ ಭಾವಿಸಿದ್ದರು. ಅವರು ಎಷ್ಟು ಸಂಕಟ ಅನುಭವಿಸಿದರು, ಎಷ್ಟು ಅಂಜಿದ್ದರು, ಅವರ ಪ್ರೇಮ ಎಷ್ಟು ಪರಿಶುದ್ಧ

ವಾಗಿದ್ದಿತು, ಮುಗ್ಧವಾಗಿದ್ದಿತು, ಜನ ಎಷ್ಟು ಮತ್ಸರದಿಂದ ಕೂಡಿದ್ದರು (ಇದನ್ನು ಹೇಳಲೇ ಬೇಕಾಗಿಲ್ಲ, ನಾಸ್ತೆಂಕ !). ಆದರೆ ದೈವಕೃಪೆ. ಅನಂತರ ತುಂಬ ಕಾಲ ವಾದ ಮೇಲೆ, ತನ್ನ ತಾಯ್ನಾಡಿನಿಂದ ತುಂಬ ದೂರದಲ್ಲಿ, ವಿದೇಶೀ ಆಗಸದ ಕೆಳಗೆ ಅವನು ಮತ್ತೆ ಸಂಧಿಸಿದ ವ್ಯಕ್ತಿ ಅವಳೇ ಆಗಿರಲಿಲ್ಲವೇ? ಅಲ್ಲಿನ ಆಗಸ ಸುಡು ಸೆಖೆಯಿಂದ ಕೂಡಿತ್ತು. ಅದೊಂದು ಸುಂದರವಾದ ಶಾಶ್ವತ ನಗರಿಯಾ ಗಿದ್ದಿತು. ಅಲ್ಲಿ ಭವ್ಯ ನೃತ್ಯಕೂಟವೊಂದರಲ್ಲಿ, ವಾದ್ಯಗೋಷ್ಠಿಯು ವಿಜೃಂಭಿಸುತ್ತಿ ದ್ದಾಗ, ಬೆಳಕು ತುಂಬಿದ್ದ ಪಲಾಸ್ಸೊದಲ್ಲಿ (ಹೌದು, ಅದು ಪಲಾಸ್ಸೊವೇ ಆಗಿರ ಬೇಕಿದ್ದಿತು) ಅವನು ಸಂಧಿಸಿದುದು ಅವಳನ್ನೇ ಅಲ್ಲವೇ? ಗುಲಾಬಿ ಹಾಗೂ ಮರ್ಟ್‌ಲ್ ಹೂಗೊಂಚಲುಗಳಿಂದ ಸುತ್ತುವರಿಯಲ್ಪಟ್ಟಿದ್ದ ಮೊಗಸಾಲೆಯಲ್ಲಿ ಅವನು ಕಂಡುದು ಅವಳನ್ನೇ ಅಲ್ಲವೇ? ಅಲ್ಲಿ, ಅವನನ್ನು ಕಂಡ ಕೂಡಲೇ ಅವಳು ತನ್ನ ಮುಖವಾಡವನ್ನು ತಕ್ಷಣವೇ ತೆಗೆದು 'ನಾನು ಸ್ವತಂತ್ರಳು' ಎಂದು ಪಿಸು ಗುಟ್ಟುತ್ತ ನಡುಗುತ್ತ ಅವನ ತೋಳತೆಕ್ಕೆಯೊಳಕ್ಕೆ ಹಾರಿದಳು. ಆನಂದದ ಕೂಗು ಕೂಗುತ್ತ ಅವರು ಪರಸ್ಪರ ಆಲಂಗಿಸಿಕೊಂಡರು. ಒಂದು ಘಳಿಗೆಯಲ್ಲಿ ಎಲ್ಲ ಮರೆತು ಹೋಯಿತು – ಅವರ ದುಃಖ, ಅವರ ಅಗಲಿಕೆ, ಅವರೆಲ್ಲ ಸಂಕಷ್ಟ ಗಳು, ಆ ಮಂಕು ಕವಿದ ಮನೆ, ಆ ವೃದ್ಧ ಮೌನಿ ಮನುಷ್ಯ, ಅವರ ದೂರ ತಾಯ್ನಾಡಿನ ಆ ಉಲ್ಲಾಸರಹಿತ ಉದ್ಯಾನ, ಆ ಉದ್ಯಾನದಲ್ಲಿನ ಆಸನ, ಆ ಆಸನ ದಲ್ಲಿ ಕುಳಿತಿದ್ದಾಗಲೇ ಅವಳು ಅವನಿಗೆ ಅಗಲಿಕೆಯ ಗಾಢಾನುರಕ್ತ ಚುಂಬನ ನೀಡಿ ಹತಾಶೆಯ ಸಂಕಟದಿಂದ ಮರಗಟ್ಟಿದ್ದ ಅವನ ತೋಳತೆಕ್ಕೆಯಿಂದ ಬಿಡಿಸಿ ಕೊಂಡು ಹೋದುದು, ಇವೆಲ್ಲವೂ ಮರೆತು ಹೋದವು. ಓಹ್, ನಾಸ್ತೆಂಕ, ನಿಮ್ಮ ಕೋಣೆಯ ಬಾಗಿಲು ಇದ್ದಕ್ಕಿದ್ದಂತೆ ತೆರೆದು ಯಾರೋ ಅನಾಹ್ವಾನಿತ ಮಿತ್ರ, ಯಾರೋ ಎತ್ತರದ ದೃಢಕಾಯ. ವ್ಯಕ್ತಿ, ಸಂತಸಭರಿತನಾದ ಚತುರ ವ್ಯಕ್ತಿ, ಒಳಬಂದರೆ, ನಿಮಗೆ ಹೇಗಾಗುತ್ತದೆ? ನೀವು ಬೆಚ್ಚಿಬಿದ್ದು ನಾಚುವಿರಲ್ಲವೇ? ಪಕ್ಕದ ಮನೆಯ ತೋಟದಿಂದ ಕದ್ದು ತಂದ ಸೇಬಿನ ಹಣ್ಣನ್ನು ಆಗಷ್ಟೆ ತನ್ನ ಜೋಬಿನೊಳಕ್ಕೆ ತುರುಕಿಕೊಳ್ಳುತ್ತಿರುವ ಶಾಲಾಬಾಲಕನಂತೆ ನೀವು ವರ್ತಿಸುವು ದಿಲ್ಲವೇ? ಈ ಅಸಾಧಾರಣ ವ್ಯಕ್ತಿ ಬಂದವನೇ ಅಸಾಧಾರಣವಾದುದು ಏನೂ ಜರುಗಿರಲಿಲ್ಲವೇನೋ ಎಂಬಂತೆ 'ನಾನು ಈಗಷ್ಟೆ, ಈ ಘಳಿಗೆಯಲ್ಲೇ ಪಾವ್ಲೊವ್‌ಸ್ಕ್ ನಿಂದ ಹಿಂದಿರುಗಿದೆ' ಎಂದು ಘೋಷಿಸಿದಾಗ, ನನಗಾದುದು ಹಾಗೆಯೇ. ಓಹ್ ದೇವರೇ! ವೃದ್ಧ ಕೌಂಟ್ ಸತ್ತಿದ್ದ, ಅನಿರ್ವಚನೀಯವಾದ ಸುಖದ ಘಳಿಗೆ ಸಮೀಪಿಸಿದ್ದಿತು ಎಂದುಕೊಳ್ಳುತ್ತಿದ್ದಾಗ, ಈಗ ಇವನೊಬ್ಬ ಬಂದ, ಪಾವ್ಲೊವ್‌ಸ್ಕ್ ನಿಂದ ಈಗಷ್ಟೆ ಬಂದೆನೆಂದುಕೊಂಡು !"

ನಾನು ಹೀಗೆ ನಾಟಕೀಯವಾಗಿ ಕಥಾ ನಿರೂಪಣೆ ಮಾಡಿದನಂತರ ಕೊನೆ

ತಲುಪಿದಾಗ ಅಷ್ಟೇ ನಾಟಕೀಯವಾಗಿ ನಿಲ್ಲಿಸಿದೆ. ಆಗ ನಾನು ನಗೆ ತಂದುಕೊಳ್ಳಲು ಎಷ್ಟು ಕಷ್ಟಪಟ್ಟು ಯತ್ನಿಸಿದೆ ಎಂಬುದು ನನಗೆ ಜ್ಞಾಪಕವಿದೆ. ಏಕೆಂದರೆ ನನ್ನ ಹೃದಯದೊಳಗೆ ಆಗಲೇ ಯಾವುದೋ ವೈರದ ಮರಿಪಿಶಾಚಿ ಸಂಚಲಿಸತೊಡ ಗಿದುದನ್ನು, ನನ್ನ ಉಸಿರು ಗಂಟಲಿನಲ್ಲೇ ಸಿಕ್ಕಿಕೊಳ್ಳುವಂತಾದುದನ್ನು ನಾನು ಭಾವಿಸಬಲ್ಲವನಿದ್ದೆ. ನನ್ನ ಗಲ್ಲ ಅದುರತೊಡಗಿತ್ತು, ನನ್ನ ಕಣ್ಣುಗಳು ಹೆಚ್ಚು ಹೆಚ್ಚಾಗಿ ತೇಲತೊಡಗಿದ್ದವು. ತನ್ನ ಬುದ್ಧಿವಂತ ಕಣ್ಣುಗಳನ್ನು ವಿಶಾಲವಾಗಿ ತೆರೆದುಕೊಂಡು ನನ್ನ ಮಾತುಗಳನ್ನು ಗಮನವಿತ್ತು ಕೇಳುತ್ತಿದ್ದ ನಾಸ್ತೆಂಕ ಫಕ್ಕನೆ ತನ್ನ ಮಗುವಿನಂಥ ಅಪ್ರಯತ್ನಪೂರ್ವಕ ನಗೆ ನಗಲಿರುವಳೆಂದು ನಾನು ಅಂಜಿದ್ದೆ. ನಾನು ನನ್ನ ನಾಟಕೀಯ ನಿರೂಪಣೆಯನ್ನು ಅತಿಯಾಗಿ ಮಾಡಿದ್ದೆನೆಂದು ನನಗೆ ದುಃಖವಾಯಿತು. ನನ್ನ ಹೃದಯದ ಮೇಲೆ ಬಹುಕಾಲದಿಂದ ಹೊರೆಯಾಗಿದ್ದ ವಿಷಯವನ್ನು ನಾನು ಅನವಶ್ಯವಾಗಿ ಹೇಳಿದ್ದೆ. ಈ ವಿಷಯವನ್ನು ನಾನು ಬಾಯಿ ಪಾಠ ಮಾಡಿದ್ದಂತೆ ಹೇಳಿಕೊಂಡು ಹೋಗಬಲ್ಲವನಿದ್ದೆ. ಏಕೆಂದರೆ ಬಹುಹಿಂದೆಯೇ ನಾನು ನನ್ನ ಮೇಲೆಯೇ ತೀರ್ಪು ನೀಡಿಕೊಂಡಿದ್ದೆ. ನಾನದನ್ನು ಅವಳಿಗೆ ಓದಿ ಹೇಳುವ ಒತ್ತಾಸೆಗೆ ಒಳಗಾಗಿದ್ದೆ. ಆದರೆ ಅವಳು ಅದನ್ನು ಅರ್ಥಮಾಡಿಕೊಳ್ಳು ವಳೆಂದೇನೂ ನಾನು ನಿರೀಕ್ಷಿಸಿರಲಿಲ್ಲವೆಂದು ಒಪ್ಪಿಕೊಳ್ಳಬೇಕು. ಆದರೆ ನನಗೆ ಆಶ್ಚರ್ಯವಾಗುವಂತೆ ಅವಳು ಮೌನದಿಂದಿದ್ದಳು. ಸ್ವಲ್ಪ ಹೊತ್ತಿನನಂತರ ನನ್ನ ಕೈಯನ್ನು ಲಘುವಾಗಿ ಅವುಕಿದಳು. ಆಸಕ್ತಿ ತೋರುತ್ತ ಅಂಜಿಕೆಯಿಂದ ಕೇಳಿ ದಳು:

"ನೀವು ನಿಮ್ಮ ಇಡೀ ಜೀವನವನ್ನು ನಿಜಕ್ಕೂ ಹೀಗೆಯೇ ಬಾಳಿದ್ದೀರ?"

"ಹೌದು, ನನ್ನ ಇಡೀ ಜೀವನ, ನಾಸ್ತೆಂಕ" ನಾನು ಉತ್ತರಿಸಿದೆ. "ನನ್ನ ಇಡೀ ಜೀವನ. ಬಹುಶಃ ನನ್ನ ಜೀವನದ ಕೊನೆಯುವರೆಗೂ ಹೀಗೆಯೇ ಇರುತ್ತ ಹೋಗುತ್ತೇನೇನೋ."

"ಇಲ್ಲ, ಇಲ್ಲ. ನೀವು ಹಾಗೆ ಇರಲಾರಿರಿ!" ಅವಳು ಕಾತುರತೆಯಿಂದ ಹೇಳಿ ದಳು. "ಹಾಗೆ ಇರಲು ಸಾಧ್ಯವಿಲ್ಲ, ಏಕೆಂದರೆ, ನಾನೂ ಹಾಗಾದರೆ ನನ್ನ ಉಳಿದ ಬಾಳನ್ನೆಲ್ಲ ನನ್ನ ಅಜ್ಜಿಯ ಪಕ್ಕದಲ್ಲಿ ಕುಳಿತೇ ಕಳೆಯಬೇಕಾಗುತ್ತೆ. ಹಾಗೆ ಜೀವಿ ಸುವುದು ಎಷ್ಟು ಮಾತ್ರವೂ ಸರಿಯಲ್ಲ, ನಿಮಗೆ ಗೊತ್ತೆ?"

"ಗೊತ್ತು, ನಾಸ್ತೆಂಕ, ಗೊತ್ತು!" ನಾನು ಉತ್ಕಂಠಿತ ಸ್ವರದಲ್ಲಿ ಹೇಳಿದೆ, ನನ್ನ ಭಾವೋದ್ವೇಗವನ್ನು ಇನ್ನೆಷ್ಟು ಮಾತ್ರವೂ ತಡೆ ಹಿಡಿದುಕೊಳ್ಳಲಾಗದೆ. "ನನ್ನ ಜೀವನದ ಅತ್ಯುತ್ತಮ ವರ್ಷಗಳನ್ನು ವ್ಯರ್ಥಮಾಡಿದನಂತರ ಈಗ ನಾನು ಅದನ್ನು ಹಿಂದೆಂದಿಗಿಂತ ಹೆಚ್ಚು ಚೆನ್ನಾಗಿ ತಿಳಿದಿದ್ದೇನೆ. ನನಗದು ಈಗ ತಿಳಿದಿದೆ. ಈ ತಿಳಿವೇ ನನಗೆ ಹೆಚ್ಚು ಯಾತನೆ ನೀಡುತ್ತಿರುವುದು. ದೇವರೇ ನಿಮ್ಮನ್ನು,

ನನ್ನ ಕರುಣಾಳು ದೇವತೆಯಾದ, ನಿಮ್ಮನ್ನು, ನನ್ನ ಬಳಿಗೆ ಇದನ್ನು ತಿಳಿಸಲು ಮತ್ತು ಮನಗಾಣಿಸಲು ಕಳುಹಿಸಿಕೊಟ್ಟಿದ್ದಾನೆ. ನಾನಿಲ್ಲಿ ಈಗ ನಿಮ್ಮ ಪಕ್ಕದಲ್ಲಿ ಕುಳಿತಿರುವಾಗ ಹಾಗೂ ಮಾತನಾಡುತ್ತಿರುವಾಗ ನನ್ನ ಭವಿಷ್ಯತ್ತಿನ ಬಗೆಗೆ ಯೋಚಿಸುವುದಕ್ಕೂ ನನಗೆ ಹೆದರಿಕೆಯಾಗುತ್ತದೆ. ಏಕೆಂದರೆ ಭವಿಷ್ಯತ್ತಿನಲ್ಲೂ ನನಗೆ ಮತ್ತೆ ಏಕಾಂತವಷ್ಟೆ ಕಾದಿದೆ, ಆ ನಿರರ್ಥಕ ದುರ್ಗಂಧ ಜೀವನವಷ್ಟೆ ಕಾದಿದೆ; ಈಗ ನಿಮ್ಮೊಂದಿಗೆ ವಾಸ್ತವಿಕವಾಗಿಯೇ ಸಂತೋಷದಲ್ಲಿರುವಾಗ ಇನ್ನೂ ಯಾತರ ಬಗೆಗೆ ಕನಸು ಕಾಣಬೇಕು ! ಓಹ್, ನನ್ನ ಪ್ರಿಯ ಗೆಳತಿ, ನೀವು ನನ್ನನ್ನು ಆರಂಭದಲ್ಲೇ ದೂರೀಕರಿಸಲಿಲ್ಲ. ಅದಕ್ಕಾಗಿ ದೇವರು ನಿಮಗೆ ಒಳ್ಳೆಯದು ಮಾಡಲಿ. ಈಗ ನಾನು ನನ್ನ ಜೀವನದಲ್ಲಿ ಕೊನೆಯ ಪಕ್ಷ ಎರಡು ಸಂಜೆ ನಿಜವಾದ ಬಾಳು ಬಾಳಿದೆ ಎಂದು ಹೇಳಬಲ್ಲವನಾಗಿದ್ದೇನೆ !"

"ಓಹ್, ಇಲ್ಲ, ಇಲ್ಲ !" ನಾಸ್ತೆಂಕ ಕೂಗಿ ಹೇಳಿದಳು. ಅವಳ ರೆಪ್ಪೆಗೂದಲುಗಳ ಮೇಲೆ ಕಣ್ಣೀರ ಹನಿಗಳು ಹೊಳೆಯುತ್ತಿದ್ದವು. "ಇಲ್ಲ, ಅದು ಹಾಗಿರುವುದೇ ಇಲ್ಲ ! ನಾವು ಹಾಗೆ ಅಗಲಿ ಹೊರಟುಹೋಗುವುದಿಲ್ಲ ! ಎರಡು ಸಂಜೆಗಳು ಏನು ಮಹಾ !"

"ನಾಸ್ತೆಂಕ, ಓಹ್ ನಾಸ್ತೆಂಕ ! ನೀವು ನನ್ನನ್ನು ನನ್ನೊಂದಿಗೇ ದೀರ್ಘ ಕಾಲ ದವರೆಗೆ ರಾಜಿ ಮಾಡಿಕೊಳ್ಳುವಂತೆ ಮಾಡಿದ್ದೀರಿ, ನಿಮಗೆ ಗೊತ್ತೆ ? ನಾನು ಕೆಲವು ವೇಳೆ ನನ್ನ ಬಗೆಗೇ ಕೀಳಾಗಿ ಭಾವಿಸಿಕೊಳ್ಳುವುದು ಅಭ್ಯಾಸವಾಗಿದೆ. ಇನ್ನು ಮುಂದೆ ಹಾಗೆಂದೂ ಮಾಡುವುದಿಲ್ಲವೆಂದು ನಿಮಗೆ ಗೊತ್ತೆ? ನಾನು ಮಹಾ ಪರಾಧ ಮಾಡಿದ್ದೇನೆ, ಪಾಪ ಮಾಡಿದ್ದೇನೆ – ಏಕೆಂದರೆ ನನ್ನಂತಹ ಜೀವನ ಮಹಾ ಪರಾಧ ಹಾಗೂ ಪಾಪವಲ್ಲದೆ ಮತ್ತೇನು – ಎಂದು ಇನ್ನೆಂದಿಗೂ ನಾನು ಹತಾಶ ನಾಗದಿರುವುದು ಸಾಧ್ಯ, ಎಂಬುದು ನಿಮಗೆ ಗೊತ್ತೆ ? ಮತ್ತೆ, ನಾನು ಏನನ್ನೋ ಉತ್ಪ್ರೇಕ್ಷಿಸಿ ಹೇಳಿದ್ದೇನೆಂದು ದಯವಿಟ್ಟು ಭಾವಿಸಬೇಡಿ. ದೇವರಾಣೆಗೂ ಹಾಗೆ ಯೋಚಿಸಬೇಡಿ, ನಾಸ್ತೆಂಕ. ಏಕೆಂದರೆ ಕೆಲವು ವೇಳೆ ನಾನು ವ್ಯಥೆಯ, ಭಾರಿ ವ್ಯಥೆಯ ವಶವಾಗಿಬಿಟ್ಟಿರುತ್ತೇನೆ... ಏಕೆಂದರೆ ಆಗಾಗ್ಗೆ ಬರುವ ಈ ಭಾವಕ್ಕೆ ನಾನು ವಶವಾದಾಗ, ಹೊಸ ನಿಜವಾದ ಬಾಳು ಪ್ರಾರಂಭಿಸಲು ನಾನೆಂದೂ ಸಮರ್ಥನಲ್ಲ ವೆಂದೇ ಭಾವಿಸತೊಡಗುತ್ತೇನೆ. ಏಕೆಂದರೆ ನಾನು ಆಗಲೇ ಎಲ್ಲ ಸ್ಪರ್ಶ ಜ್ಞಾನವನ್ನೂ, ನಿಜವಾದ ಹಾಗೂ ವಾಸ್ತವವಾದ ಎಲ್ಲ ಭಾವನೆಯನ್ನೂ ಕಳೆದು ಕೊಂಡಿದ್ದೇನೆಂದೇ ನನಗನಿಸುತ್ತದೆ. ಏಕೆಂದರೆ ನಾನು ನನ್ನ ಆತ್ಮವನ್ನು ಮಾರು ತ್ತಿದ್ದೆ, ಏಕೆಂದರೆ ಚಿತ್ತಭ್ರಾಂತಿಗಳ ರಾತ್ರಿಗಳ ನಂತರ ಈಗ ಚಿತ್ತಸ್ವಾಸ್ಥ್ಯದ ಘಳಿಗೆ ಗಳು ಬರುತ್ತಿವೆ ಮತ್ತು ಅವು ಭೀತಿಕಾರಕವಾಗಿವೆ ! ಈ ಮಧ್ಯೆ ಜೀವನವು ನಿಮ್ಮ ಸುತ್ತಮುತ್ತ ಮಾನವಸುಳಿಯಲ್ಲಿ ಗದ್ದಲ ಮಾಡುತ್ತಿರುವುದನ್ನು ಸುತ್ತು

ತ್ತಿರುವುದನ್ನು ನೀವು ಕೇಳಬಹುದು, ಜನ ಜೀವಿಸುತ್ತಿರುವುದನ್ನು, ನಿಜವಾದ ಜೀವನವನ್ನು ಜೀವಿಸುತ್ತಿರುವುದನ್ನು ಕೇಳ ಬಹುದು, ಕಾಣಬಹುದು. ಅವರ ಜಗತ್ತು ಅವರ ಸ್ವಂತ ಆಜ್ಞೆಗನುಗುಣವಾಗಿ ನಿರ್ಮಿತವಾದುದಲ್ಲ, ಅದು ಕನಸಿನಂತೆ ಅಥವಾ ಕಾಣ್ಕೆಯಂತೆ ಒಡೆಯುವುದಿಲ್ಲ, ಎನ್ನುವುದನ್ನು, ಅವರ ಜೀವನ ಚಿರಯೌವನದಿಂದ ಕೂಡಿರುತ್ತದೆ, ಸತತವಾಗಿ ಪುನಶ್ಚೇತನಗೊಳ್ಳುತ್ತಿರುತ್ತದೆ ಎಂಬುದನ್ನು, ಅದರಲ್ಲಿ ಪ್ರತಿಯೊಂದು ಗಂಟೆಯೂ ಅದರ ಹಿಂದಿನ ಗಂಟೆಯಿಂದ ಭಿನ್ನವಾಗಿರುತ್ತದೆ, ಎಂಬುದನ್ನು ನೀವು ಕಾಣಬಹುದು. ಆದರೆ ಅಂಜಿಕೆಯ ಚಿತ್ತಭ್ರಾಂತಿಯಾದರೋ ಬೇಸರ ತರಿಸುವಷ್ಟು ಉತ್ಸಾಹಶೂನ್ಯವಾಗಿರುತ್ತದೆ, ವೈವಿಧ್ಯಶೂನ್ಯವಾಗಿರುತ್ತದೆ, ಪ್ರತಿಯೊಂದು ನೆರಳಿಗೂ ಪ್ರತಿಯೊಂದು ಭಾವನೆಗೂ ದಾಸನಾಗಿರುತ್ತದೆ, ಸೂರ್ಯನನ್ನು ಮುಚ್ಚುವ, ಸೂರ್ಯನ ಮೇಲೆ ಬಹಳ ಭರವಸೆ ಇಟ್ಟ ಸೇಂಟ್ ಪೀಟರ್ಸ್‌ಬರ್ಗ್‌ನ ಪ್ರತಿಯೊಬ್ಬ ನಿಜವಾದ ವ್ಯಕ್ತಿಯ ಹೃದಯವನ್ನೂ ಗೋಳುಗುಟ್ಟಿಸಿ ಹಿಂಡುವ ಮೊದಲ ಮೋಡಕ್ಕೆ ದಾಸನಾಗಿರುತ್ತದೆ. ಬೇಗುದಿಗೊಳಗಾದ ಭ್ರಾಂತಿ ಎನ್ನುವುದಾದರೂ ಏನು? ಸತತವಾದ ಪ್ರಯಾಸವು ಕೊನೆಗೂ ನಿಮ್ಮ ಅಕ್ಷಯುವೆನ್ನುವಂಥ ಚಿತ್ತಭ್ರಾಂತಿಯನ್ನು ಬಳಲಿಸಿ ಸುಸ್ತು ಮಾಡುವುದನ್ನು ನೀವು ಕಾಣುತ್ತೀರ, ಏಕೆಂದರೆ ನೀವು ಪರಿಪಕ್ವಗೊಳ್ಳುತ್ತಿದ್ದೀರ, ನಿಮ್ಮ ಹಿಂದಿನ ಧ್ಯೇಯಗಳಿಗೂ ಮೀರಿ ಬೆಳೆಯುತ್ತಿದ್ದೀರ; ಅವು ಚೂರುಚೂರಾಗಿ ಒಡೆಯುತ್ತವೆ, ಮಣ್ಣಿನಲ್ಲಿ ಬೆರೆಯುತ್ತವೆ; ನಿಮಗೆ ಬಾಳಲು ಬೇರೆ ಯಾವುದೇ ಜೀವನವಿಲ್ಲದಿದ್ದಲ್ಲಿ, ನೀವು ಅದನ್ನು ಮುರಿದ ಚೂರುಪಾರುಗಳಿಂದಲೇ ಪುನರ್‌ನಿರ್ಮಿಸುವ ಒತ್ತಾಯಕ್ಕೊಳಗಾಗುತ್ತೀರ. ಆದರೂ ನಿಮ್ಮ ಆತ್ಮ ಭಿನ್ನವಾದ ಬೇರೊಂದು ಜೀವನ ಬೇಕೆಂದು ಕೇಳುತ್ತದೆ, ಅದಕ್ಕಾಗಿ ಹಂಬಲಿಸುತ್ತದೆ! ಕನಸುಗಾರನು ತನ್ನ ಹಳೆಯ ಕನಸುಗಳ ಬೂದಿಯನ್ನು ನಿರರ್ಥಕವಾಗಿ ಕೆದಕುತ್ತಾನೆ, ಆ ಭಗ್ನಾವಶೇಷಗಳ ಮಧ್ಯೆ ಒಂದು ಸಣ್ಣ ಕಿಡಿಯನ್ನಾದರೂ ಕಂಡುಹಿಡಿದು ಅದನ್ನೇ ಊದಿ ಮತ್ತೆ ಜೀವಂತಗೊಳಿಸುವ ಆಸೆಯಿಂದ ಈ ಪುನಶ್ಚೈತನ್ಯಗೊಳಿಸಿದ ಬೆಂಕಿಯಿಂದ ತನ್ನ ಶೀತಲಗೊಂಡ ಹೃದಯವನ್ನು ಬೆಚ್ಚಗೆ ಮಾಡಿಕೊಳ್ಳುವ ಆಸೆಯಿಂದ, ಆ ಮುನ್ನ ಅದಕ್ಕೆ ಪ್ರೀತಿಪಾತ್ರವಾದಂಥದೆಲ್ಲವನ್ನೂ, ಅದನ್ನು ಕದಲಿಸಿದುದೆಲ್ಲವನ್ನೂ, ಅವನ ಕಣ್ಣುಗಳಿಂದ ಕಣ್ಣೀರನ್ನು ಹಿಂಡಿ ಹೊರ ಹೊಮ್ಮಿಸಿದುದನ್ನು ಮತ್ತು ಅವನನ್ನು ಅಷ್ಟು ಭವ್ಯವಾದ ರೀತಿಯಲ್ಲಿ ಮೋಸಗೊಳಿಸಿದುದನ್ನು ಎಲ್ಲವನ್ನೂ ಅದಕ್ಕೆ ಒಂದಕ್ಕೆ ತಂದುಕೊಡುವ, ಆಸೆಯಿಂದ! ನನ್ನ ಸ್ಥಿತಿ ಈಗ ಎಲ್ಲಿಗೆ ಬಂದಿದೆ ನಿಮಗೆ ಗೊತ್ತೆ, ನಾಸ್ತೆಂಕ? ನಿಮಗೆ ಗೊತ್ತೆ, ನಾನೀಗ ನನ್ನ ಹಳೆಯ ರಾಗಭಾವಗಳ ವಾರ್ಷಿಕೋತ್ಸವವನ್ನು ಆಚರಿಸಬೇಕಾಗಿದೆ. ಈ ಮುನ್ನ ಇದ್ದುದರ ಆದರೆ ಎಂದೂ ವಾಸ್ತವವಾಗಿ ಜರು

ಗದೇ ಇದ್ದುದರ ಕುರಿತಾದ ನನ್ನ ಪ್ರೀತಿಯ ವಾರ್ಷಿಕೋತ್ಸವವನ್ನು ಆಚರಿಸ ಬೇಕಾಗಿದೆ, ಏಕೆಂದರೆ, ಈ ವಾರ್ಷಿಕೋತ್ಸವವನ್ನೂ ಅದೇ ಮೂರ್ಖ ಅಶರೀರಿ ಕನಸುಗಳ ಪ್ರಕಾರ ಆಚರಿಸಬೇಕಾಗಿದೆ. ನಾನು ಅದನ್ನು ಆಚರಿಸುವ ಒತ್ತಾಯ ಕ್ಕೊಳಗಾಗಿದ್ದೇನೆ, ಏಕೆಂದರೆ, ಈ ಮೂರ್ಖ ಕನಸುಗಳೇ ಇನ್ನೆಷ್ಟು ಮಾತ್ರವೂ ಅಸ್ತಿತ್ವದಲ್ಲಿಲ್ಲ – ಅವುಗಳನ್ನು ಬೆಂಬಲಿಸಲು ನನ್ನ ಬಳಿ ಏನೂ ಇಲ್ಲ. ನೀವು ನಿಮ್ಮ ಕನಸುಗಳನ್ನೂ ಬಾಳಿ ಅನುಭವಿಸಬೇಕು, ನಿಮಗೆ ಗೊತ್ತಲ್ಲ. ನಾನೀಗ ಕೆಲವು ತೇದಿಗಳಂದು ಒಮ್ಮೆ ನಾನು ನನ್ನದೇ ವಿಚಿತ್ರ ರೀತಿಯಲ್ಲಿ ಸುಖ ಕಂಡು ಕೊಂಡಿದ್ದ ಸ್ಥಳಗಳನ್ನು ನೆನಪಿಗೆ ತಂದುಕೋಂಡು ಅಲ್ಲಿಗೆ ಭೇಟಿ ನೀಡಬಯಸುತ್ತೇನೆ. ನಾನು ನನ್ನ ವರ್ತಮಾನವನ್ನು ನನ್ನ ಹಿಂದಕ್ಕೆ ಪಡೆಯಲಾಗದ ಗತಕಾಲದೊಂದಿಗೆ ಅನುಗೊಳಿಸಿಕೊಳ್ಳಬಯಸುತ್ತೇನೆ. ಬಹು ವೇಳೆ ನಾನು ಸೇಂಟ್ ಪೀಟರ್ಸ್‌ಬರ್ಗ್‌ನ ಬೀದಿಗಳಲ್ಲೂ ಸಂದಿಗೊಂದಿಗಳಲ್ಲೂ ದುಃಖಿತನಾಗಿ, ಖಿನ್ನಮನಸ್ಕನಾಗಿ, ಯಾವುದೇ ನಿರ್ದಿಷ್ಟ ಗುರಿ ಅಥವಾ ಉದ್ದೇಶವಿಲ್ಲದೆ, ಪ್ರೇತದಂತೆ ಅಲೆದಾಡು ತ್ತೇನೆ. ಓಹ್, ನನ್ನ ಸ್ಮರಣೆಗಳು ! ಉದಾಹರಣೆಗೆ, ಒಂದು ವರ್ಷದ ಕೆಳಗೆ ಸರಿಯಾಗಿ ಇದೇ ಸ್ಥಳದಲ್ಲಿ ಸರಿಯಾಗಿ ಇದೇ ಗಂಟೆಯಲ್ಲಿ ನಾನು ಇದೇ ಕಾಲು ದಾರಿಯಲ್ಲಿ ಮೇಲಿಂದ ಕೆಳಕ್ಕೆ ಅಡ್ಡಾಡಿದ್ದೆ, ಆಗಲೂ ಇಷ್ಟೇ ಒಂಟಿಯಾಗಿದ್ದೆ, ಈಗಿನಷ್ಟೆ ಖಿನ್ನನಾಗಿದ್ದೆ ಎಂಬುದನ್ನು ಸ್ಮರಿಸಿಕೊಳ್ಳುತ್ತೇನೆ ! ನನ್ನ ಕನಸುಗಳು ಇಷ್ಟೇ ದುಃಖಪೂರಿತವಾಗಿದ್ದವು ಎಂಬುದನ್ನೂ ಜ್ಞಾಪಕಕ್ಕೆ ತಂದುಕೊಳ್ಳು ತ್ತೇನೆ. ಆಗ ಜೀವನವು ಈಗಿಗಿಂತ ಯಾವ ರೀತಿಯಲ್ಲೂ ಹೆಚ್ಚು ಉತ್ತಮವಾ ಗಿರದಿದ್ದರೂ, ಆ ದಿನಗಳಲ್ಲಿ ಜೀವನ ಹೆಚ್ಚು ಸುಲಭವಾಗಿದ್ದಿತು, ಹೆಚ್ಚು ನೆಮ್ಮದಿ ಯಿಂದ ಕೂಡಿದ್ದಿತು, ಈಗ ನನ್ನನ್ನು ಪೀಡಿಸುತ್ತಿರುವ ಕರಾಳ ಯೋಚನೆಯಿಂದ ಆಗ ಅದು ಬಾಧಿಸಲ್ಪಡುತ್ತಿರಲಿಲ್ಲ, ಈಗ ನನಗೆ ಹಗಲೂ ರಾತ್ರಿ ಶಾಂತಿ ಕೊಡು ತ್ತಿಲ್ಲದಿರುವಂಥ ಈ ಅಂತರಂಗದ ವೇದನೆಗೆ, ಉಗ್ರವಾದ ಯಾತನೆಯಿಂದ ಕೂಡಿದ ವೇದನೆಗೆ, ಆಗ ನಾನು ತುತ್ತಾಗಿರಲಿಲ್ಲ, ಎಂದು ಹೇಗೋ ಚಿಂತಿಸದೆ ಇರಲು ಸಾಧ್ಯವೇ ಇಲ್ಲ. ನೀವು ನಿಮ್ಮನ್ನೇ ಕೇಳಿಕೊಳ್ಳುತ್ತೀರಿ: ಎಲ್ಲಿ ಆ ನಿಮ್ಮ ಕನಸು ಗಳು ? ನೀವು ತಲೆ ಆಡಿಸುತ್ತ ಹೇಳುತ್ತೀರ: ಹೇಗೆ ವರ್ಷಗಳು ಉರುಳುತ್ತವೆ ! ಮತ್ತೆ ನೀವು ನಿಮ್ಮನ್ನೇ ಕೇಳಿಕೊಳ್ಳುತ್ತೀರ: ನಿಮ್ಮ ಜೀವನವನ್ನು ಏನು ಮಾಡಿ ದಿರಿ ? ನಿಮ್ಮ ಅತ್ಯುತ್ತಮ ವರ್ಷಗಳನ್ನು ಎಲ್ಲಿ ಹೂಳಿದಿರಿ ? ನೀವು ಬಾಳಿದಿರಾ ಅಥವಾ ಇಲ್ಲವೇ ? ನೋಡಿ, ನಿಮಗೆ ನೀವೇ ಹೇಳಿಕೊಳ್ಳಿ, ನೋಡಿ ಜಗತ್ತು ಎಷ್ಟು ನಿಷ್ಠುರವಾಗುತ್ತಿದೆ ? ಇನ್ನಷ್ಟು ವರ್ಷಗಳು ಉರುಳುತ್ತವೆ, ಇನ್ನಷ್ಟು ವಿಷಣ್ಣ ಏಕಾಂಗಿತನವನ್ನು ತರುತ್ತವೆ. ಅನಂತರ ನಡುಗುವ ಮುಪ್ಪು ಊರುಗೋಲಿನ ಮೇಲೆ ಬಾಗಿಕೊಂಡು ಬರುತ್ತೆ. ಅದಾದ ಮೇಲೆ ಕೇವಲ ಕ್ಲೇಶ ಹಾಗೂ ಉತ್ಸಾಹ

ಶೂನ್ಯತೆ. ನಿಮ್ಮ ಚಿತ್ತಭ್ರಾಂತಿಯು ಜಗತ್ತು ಮಸುಕಾಗುತ್ತದೆ, ನಿಮ್ಮ ಕನಸುಗಳು ಕ್ಷಯಿಸಿ ನಿರ್ಜೀವವಾದ ಹಳದಿ ಎಲೆಗಳಂತೆ ಉದುರುತ್ತವೆ. ಓಹ್, ನಾಸ್ತೆಂಕ, ಒಂಟಿಯಾಗಿಯೇ ಇರುವುದು, ಸಂಪೂರ್ಣವಾಗಿ ಒಂಟಿಯಾಗಿಯೇ ಇರುವುದು, ಖೇದಪಡಲೂ ಏನೂ ಇಲ್ಲದೆ, ಏನೂ ಏನೇನೂ ಇಲ್ಲದೆ, ಇರುವುದು ದುಃಖಕರವಲ್ಲವೇ.... ಏಕೆಂದರೆ, ನಾನು ಏನನ್ನು ಕಳೆದುಕೊಳ್ಳುತ್ತೇನೋ ಅವೆಲ್ಲ ಏನೂ ಆಗಿರುವುದಿಲ್ಲ, ಕೇವಲ ನೀರಸ ಶೂನ್ಯವಾಗಿರುತ್ತವೆ, ಕನಸುಗಳಲ್ಲದೆ ಬೇರೇನೂ ಆಗಿರುವುದಿಲ್ಲ !"

"ಓಹ್, ಮುಂದುವರಿಸಬೇಡಿ, ನನಗಾಗಲೇ ಅಳು ಬರುತ್ತಿದೆ" ನಾಸ್ತೆಂಕ ಕಣ್ಣೀರನ್ನು ಒರಸಿಕೊಳ್ಳುತ್ತ ಹೇಳಿದಳು. "ಅದೆಲ್ಲ ಈಗ ಮುಗಿಯಿತು ! ಈಗ ನಾವು ಇಬ್ಬರು ಜೊತೆಯಾಗಿ ಇರಲಿರುವೆವು, ನಾವು ಎಂದಿಗೂ ಅಗಲುವುದಿಲ್ಲ, ನನಗೆ ಏನೇ ಆದರೂ ಸರಿಯೆ. ನಾನೊಬ್ಬ ಸರಳ ಬಾಲಕಿ. ಅಜ್ಜಿ ನನಗಾಗಿ ಒಬ್ಬ ಅಧ್ಯಾಪಕರನ್ನು ದುಡ್ಡು ಕೊಟ್ಟು ಇರಿಸಿದ್ದರೂ ನಾನು ಹೆಚ್ಚಿಗೆ ಓದಿಲ್ಲ. ಆದರೂ ನಿಜಕ್ಕೂ ನಾನು ನಿಮ್ಮನ್ನು ಅರ್ಥಮಾಡಿಕೊಳ್ಳಬಲ್ಲೆ. ಏಕೆಂದರೆ ಈಗ ನೀವು ಏನು ಹೇಳಿದಿರೋ ಅದೆಲ್ಲವನ್ನೂ ನಾನೇ ಅಜ್ಜಿಯು ನನ್ನನ್ನು ತನ್ನ ಉಡುಪಿಗೆ ಪಿನ್ನಿನಿಂದ ಸೇರಿಸಿ ಇರಿಸಿಕೊಂಡಿದ್ದಾಗ ಅನುಭವಿಸಿಕಂಡಿದ್ದೇನೆ. ಆದರೆ ಅದನ್ನು ನೀವು ಹೇಳಿರುವಷ್ಟು ಚೆನ್ನಾಗಿ ನನ್ನ ಕೈಲಿ ಹೇಳಲು ಆಗುತ್ತಿರಲಿಲ್ಲ. ಏಕೆಂದರೆ, ನಾನೆಂದೂ ಓದಿದವಳೇ ಅಲ್ಲ" ಎಂದವಳು ನಾಚಿಕೆಪಟ್ಟುಕೊಳ್ಳುತ್ತ ಹೇಳಿದಳು, ಏಕೆಂದರೆ ಅವಳು ಇನ್ನೂ ನನ್ನ ನಾಟಕೀಯ ಭಾಷಣದ ಬಗೆಗೂ ನನ್ನ ಉದಾತ್ತ ಶೈಲಿಯ ಬಗೆಗೂ ಒಂದು ರೀತಿಯ ಗೌರವ ಹೊಂದಿದ್ದಳು. "ನೀವು ನಿಮ್ಮ ಹೃದಯವನ್ನು ಬಿಚ್ಚಿ ತೋರಿಸಿದುದು ನನಗೆ ಸಂತೋಷ ಉಂಟುಮಾಡಿದೆ. ಈಗ ನಾನು ನಿಮ್ಮನ್ನು ಬಲ್ಲೆ, ಚೆನ್ನಾಗಿ ಬಲ್ಲೆ. ನೋಡಿ, ನಾನು ಕೂಡ ನನ್ನ ಕಥೆಯನ್ನು, ನನ್ನ ಇಡೀ ಕಥೆಯನ್ನು, ಸ್ವಲ್ಪವನ್ನೂ ಹಿಡಿದಿರಿಸದೆ, ನಿಮಗೆ ಹೇಳ ಬಯಸುತ್ತೇನೆ. ಅದನ್ನು ಕೇಳಿದ ಮೇಲೆ ನೀವು ನನಗೆ ಸಲಹೆ ನೀಡುವಿರಂತೆ. ನೀವು ತುಂಬ ಬುದ್ಧಿವಂತರು. ಕಥೆಯನ್ನು ಕೇಳಿದ ಮೇಲೆ ಸಲಹೆ ನೀಡುವುದಾಗಿ ಮಾತು ಕೊಡುವಿರಾ ?"

"ಆಹ್, ನಾಸ್ತೆಂಕ. ನಾನೆಂದೂ ಸಲಹೆಗಾರನಾಗಿರದಿದ್ದರೂ, ಬುದ್ಧಿವಂತ ಸಲಹೆಗಾರನಂತೂ ಆಗಿಯೇ ಇರದಿದ್ದರೂ, ನನಗೆ ಈಗ ಏನು ಅನಿಸುತ್ತದೆಂದರೆ, ನಾವು ಹೀಗೆಯೇ ಮುಂದುವರಿಸುತ್ತ ಹೋದರೆ, ಅದೇ ಅತ್ಯುತ್ತಮವಾದುದಾಗುತ್ತದೆ. ಆಮೇಲೆ ನಮ್ಮಲ್ಲಿ ಒಬ್ಬೊಬ್ಬರೂ ಇನ್ನೊಬ್ಬರಿಗೆ ತುಂಬ ಜಾಣ್ಮೆಯಿಂದ ಸಲಹೆ ನೀಡಬಹುದು. ಸರಿ, ಚೆಲುವೆ ನಾಸ್ತೆಂಕ, ನೀವು ಏನು ತಿಳಿಯ ಬಯಸುತ್ತೀರಿ ? ಬಿಚ್ಚು ಮನಸ್ಸಿನಿಂದ ಹೇಳಿ. ಈಗ ನಾನು ಎಷ್ಟು ಸಂತೋಷಗೊಂಡಿ

ಷ್ಠೇನೆಂದರೆ, ಎಷ್ಟು ಆನಂದಭರಿತನಾಗಿದ್ದೇನೆಂದರೆ, ಎಷ್ಟು ಧೀರ ಹಾಗೂ ಪ್ರಾಜ್ಞ ನಾಗಿದ್ದೇನೆಂದರೆ, ಉತ್ತರಕ್ಕಾಗಿ ಹುಡುಕಬೇಕಾಗಿಯೇ ಇರುವುದಿಲ್ಲ !"

"ಇಲ್ಲ, ಇಲ್ಲ" ನಾಸ್ತೆಂಕ ನಗುತ್ತ ಮಧ್ಯೆ ಮಾತನಾಡಿದಳು. "ನನಗೆ ಬೇಕಾಗಿರುವುದು ಕೇವಲ ಒಂದು ಜಾಣ್ಮೆಯ ಬುದ್ಧಿವಾದವಲ್ಲ, ಆದರೆ ಪ್ರಾಮಾಣಿಕವಾದ ಸೋದರ ಸಲಹೆ. ನೀವು ನಿಮ್ಮ ಇಡೀ ಜೀವನ ನನ್ನನ್ನು ಪ್ರೀತಿಸುತ್ತಿದ್ದಿದ್ದರೆ ಎಂತಹ ಸಲಹೆ ನೀಡುತ್ತಿದ್ದಿರೋ ಅಂತಹುದು."

"ತುಂಬ ಒಳ್ಳೆಯದು, ನಾಸ್ತೆಂಕ, ತುಂಬ ಒಳ್ಳೆಯದು !" ನಾನು ಉತ್ಸಾಹಭರಿತನಾಗಿ ಹೇಳಿದೆ. "ನಾನು ನಿಮ್ಮನ್ನು ಇಪ್ಪತ್ತು ವರ್ಷಗಳಿಂದ ಪ್ರೀತಿಸುತ್ತಿದ್ದರೂ, ಈಗ ನಿಮ್ಮನ್ನು ಪ್ರೀತಿಸುತ್ತಿರುವುದಕ್ಕಿಂತ ಹೆಚ್ಚು ಪ್ರೀತಿಯಿಂದಿರುತ್ತಿರಲಿಲ್ಲವೆಂದೇ ಹೇಳಬೇಕು."

"ನಿಮ್ಮ ಕೈ ನೀಡಿ !" ನಾಸ್ತೆಂಕ ಹೇಳಿದಳು.

"ಇಕೋ !" ನಾನು ನನ್ನ ಕೈ ನೀಡಿದೆ.

"ಸರಿ, ನಾನು ನನ್ನ ಕಥೆ ಪ್ರಾರಂಭಿಸುತ್ತೇನೆ."

# ನಾಸ್ತೆಂಕಳ ಕಥೆ

"ನನ್ನ ಅರ್ಧಕಥೆಯನ್ನು ನೀವಾಗಲೇ ತಿಳಿದಿದ್ದೀರಿ. ಕೊನೆಯಪಕ್ಷ ನನಗೊಬ್ಬ ಅಜ್ಜಿ ಇದ್ದಾಳೆ ಎಂಬುದನ್ನಾದರೂ ಬಲ್ಲಿರಿ."

"ಉಳಿದರ್ಧವೂ ಇಷ್ಟೇ ಸ್ಥೂಲವಾಗಿರುವುದಾದರೆ...." ನಾನು ನಸುನಗುತ್ತ ಮಧ್ಯೆ ಹೇಳಿದೆ.

"ನೀವು ಸುಮ್ಮನಿದ್ದು ನನ್ನ ಮಾತು ಕೇಳಿ. ನಾನು ಒಂದು ಷರತ್ತು ಹಾಕಬೇಕು: ನಾನು ಹೇಳುತ್ತಿರುವಾಗ ಮಧ್ಯೆ ಮಾತನಾಡಬೇಡಿ. ಹಾಗೆ ಮಾಡಿದರೆ ನಾನು ಎಲ್ಲವನ್ನೂ ಗೊಂದಲ ಮಾಡಿಬಿಡುತ್ತೇನೆ. ಈಗ ಸುಮ್ಮನೆ ನಾನು ಹೇಳುವುದನ್ನು ಕೇಳಿ.

"ನನಗೊಬ್ಬಳು ಮುದುಕಿ ಅಜ್ಜಿ ಇದ್ದಾಳೆ. ನಾನು ತುಂಬ ಪುಟ್ಟ ಹುಡುಗಿಯಾಗಿದ್ದಾಗಲೇ ಅವಳ ಜೊತೆ ವಾಸಿಸಲು ಹೋದೆ. ಏಕೆಂದರೆ ನನ್ನ ತಂದೆ ತಾಯಿ ಇಬ್ಬರೂ ತೀರಿಹೋಗಿದ್ದರು. ಅಜ್ಜಿ ಆಗ ಈಗಿರುವುದಕ್ಕಿಂತ ಹೆಚ್ಚು ಸಿರಿವಂತಳಾಗಿದ್ದಳೆಂದು ನನಗನಿಸುತ್ತೆ. ಏಕೆಂದರೆ ಅವಳು ಈಗಲೂ ಆ ಉತ್ತಮ ದಿನಗಳನ್ನು ಸ್ಮರಿಸಿಕೊಳ್ಳುತ್ತಿರುತ್ತಾಳೆ. ಅವಳು ನನಗೆ ತಾನೇ ಫ್ರೆಂಚ್ ಹೇಳಿ

ಕೊಟ್ಟಳು. ಆಮೇಲೆ ಒಬ್ಬ ಅಧ್ಯಾಪಕರನ್ನು ಹಣಕ್ಕೆ ಗೊತ್ತು ಮಾಡಿದಳು. ನನಗೆ ಹದಿನೈದು ವಯಸ್ಸಾಗಿದ್ದಾಗ (ಈಗ ನನಗೆ ಹದಿನೇಳು) ನನ್ನ ಅಧ್ಯಯನ ಮುಗಿಯಿತು. ಆಗಲೇ ನಾನು ಆ ತುಂಟ ಕೆಲಸ ಮಾಡಿದ್ದು. ಅದೇನು ಅನ್ನುವುದನ್ನು ನಾನು ಹೇಳುವುದಿಲ್ಲ. ಅದೇನೂ ಅಂಥ ಕೆಟ್ಟ ಕೆಲಸವಾಗಿರಲಿಲ್ಲ ಎಂದು ಹೇಳಿದರೆ ಸಾಕು. ಆದರೆ ಒಂದು ದಿನ ಅಜ್ಜಿ ನನ್ನನ್ನು ಕರೆದು, ತನಗೆ ಕಣ್ಣುಕಾಣಿಸುವುದಿಲ್ಲವಾದ ಕಾರಣ ನನ್ನ ಮೇಲೆ ನಿಗಾ ಇಟ್ಟಿರುವುದು ಸಾಧ್ಯವಿಲ್ಲವೆಂದು ಹೇಳಿ, ಒಂದು ಸೇಫ್ಟಿ ಪಿನ್ ತೆಗೆದುಕೊಂಡು ಅದನ್ನು ನನ್ನ ಬಟ್ಟೆಗೂ ಅವಳ ಬಟ್ಟೆಗೂ ಜೋಡಿಸಿ ಹಾಕಿದಳು. ಇನ್ನು ಇಡೀ ಕಾಲ ನಾವು ಹಾಗೆಯೇ ಇರುವೆವು, ನನ್ನ ವರ್ತನೆ ಸುಧಾರಿಸಿದರಷ್ಟೆ ಬೇರೆ ಮಾತು, ಎಂದು ಅವಳು ನನಗೆ ಹೇಳಿದಳು. ಮೊದಮೊದಲು ಅವಳಿಂದ ತಪ್ಪಿಸಿಕೊಂಡು ಹೋಗುವುದು ಸಾಧ್ಯವೇ ಇರಲಿಲ್ಲ. ನಾನು ಕಥೆ ಓದುತ್ತಿರಲಿ, ಪಾಠ ಕಲಿಯುತ್ತಿರಲಿ ಇಲ್ಲವೇ ಹೆಣಿಗೆ ಹಾಕುತ್ತಿರಲಿ, ಅವಳ ಪಕ್ಕದಲ್ಲೇ ಕುಳಿತಿರಬೇಕಾಗಿದ್ದಿತು. ಒಂದು ಸಾರಿ ಒಂದು ಉಪಾಯ ಮಾಡಿದೆ. ಫ್ಯೋಕ್ಲಳನ್ನು ನನ್ನ ಬದಲು ಕುಳಿತುಕೊಂಡಿರುವಂತೆ ಏರ್ಪಾಟು ಮಾಡಿದೆ. ಫ್ಯೋಕ್ಲ ನಮ್ಮ ಮನೆಯ ಸೇವಕಿ. ಆದರೆ ಅವಳು ಕಿವುಡಳು. ಅವಳು ನನ್ನ ಜಾಗದಲ್ಲಿ ಕುಳಿತುಕೊಂಡಳು, ಅಜ್ಜಿ ಆಗಷ್ಟೆ ತನ್ನ ಕುರ್ಚಿಯಲ್ಲೇ ನಿದ್ದೆ ಹೋದಳು. ನಾನು ಹತ್ತಿರದಲ್ಲೇ ವಾಸವಾಗಿದ್ದ ಒಬ್ಬ ಹುಡುಗಿಯನ್ನು ನೋಡಲು ಹೋದೆ. ಈ ಏರ್ಪಾಟೂ ಕೊನೆಯಲ್ಲಿ ವಿಫಲವಾಯಿತೆನ್ನಿ. ಅಜ್ಜಿ ಎದ್ದು ನಾನಿನ್ನೂ ಅವಳ ಪಕ್ಕದಲ್ಲೇ ಸದ್ದಿಲ್ಲದೆ ಕುಳಿತಿರುವೆನೆಂದು ಭಾವಿಸಿ ಏನನ್ನೋ ಕೇಳಿದಳು. ಅಜ್ಜಿ ಏನನ್ನೋ ಕೇಳುತ್ತಿದ್ದಳು ಅನ್ನುವುದನ್ನು ಫ್ಯೋಕ್ಲ ಕಂಡಳು ಆದರೆ ಏನು ಅನ್ನುವುದನ್ನು ಕೇಳಲಾಗಲಿಲ್ಲ. ಏನು ಮಾಡಬೇಕು ಎಂದು ತುಂಬ ಯೋಚಿಸಿ ಕೊನೆಗೆ ಪಿನ್ ತೆಗೆದು ಓಡಿ ಹೋದಳು."

ಇದನ್ನು ಹೇಳಿ ನಾಸ್ತೆಂಕ ಫಕ್ಕನೆ ನಕ್ಕಳು. ನಾನೂ ಅವಳ ಜೊತೆ ನಕ್ಕೆ. ಅವಳು ಮಾತನ್ನು ಹಠಾತ್ತನೆ ನಿಲ್ಲಿಸಿದಳು.

"ಉಹೂಂ, ನೀವು ಅಜ್ಜಿಯನ್ನು ಗೇಲಿಮಾಡಿಕೊಂಡು ನಗಬಾರದು. ನಾನು ನಗಬಹುದು, ಏಕೆಂದರೆ ಅದು ವಿನೋದಕರವಾದುದು. ಅಜ್ಜಿಗೆ ಹಾಗೆ ಇರದೆ ಬೇರೆ ರೀತಿ ಇರಲು ಸಾಧ್ಯವೇ ಇರಲಿಲ್ಲ. ಆದರೂ ಈಗಲೂ ನಾನು ಅವಳನ್ನು ಸ್ವಲ್ಪ ಪ್ರೀತಿಸುತ್ತೇನೆ. ಆಗ ನನಗೆ ಸರಿಯಾಗಿ ಶಿಕ್ಷಿಸಲಾಯಿತು. ನನ್ನನ್ನು ನನ್ನ ಸ್ಥಳದಲ್ಲೇ ಮತ್ತೆ ಕೂರಿಸಲಾಯಿತು. ಅದಾದ ಮೇಲೆ ನಾನು ಒಂದು ಕಿರು ಬೆರಳನ್ನು ಆಡಿಸಲೂ ಸಾಧ್ಯವಿರಲಿಲ್ಲ.

"ಇನ್ನೊಂದು ವಿಷಯ ಹೇಳುವುದು ಮರೆತಿದ್ದೆ. ನಮಗೆ, ಅಂದರೆ ಅಜ್ಜಿಗೆ, ಒಂದು ಸ್ವಂತ ಮನೆ ಇದೆ, ಒಂದು ಸಣ್ಣಪುಟ್ಟ ಮನೆ. ಮೂರು ಕಿಟಕಿಗಳು ಬೀದಿ

ಕಡೆಗಿವೆ. ಎಲ್ಲ ಮರದ್ದು. ಅಜ್ಜಿಯಷ್ಟೇ ಹಳತಾದುದು. ಮನೆಗೆ ಒಂದು ಅಟ್ಟವೂ ಇದೆ. ಒಂದು ದಿನ ಯಾರೋ ಒಬ್ಬರು ಹೊಸಬರು ಈ ಅಟ್ಟಕ್ಕೆ ವಾಸ ಬಂದರು."

"ಅಂದರೆ ಅವರು ಬರುವುದಕ್ಕೂ ಮುನ್ನ ಇನ್ನೊಬ್ಬರು ಅಲ್ಲಿ ವಾಸಿಸುತ್ತಿದ್ದರು, ಅಂದಾಯಿತು" ನಾನು ಸುಮ್ಮನೆ ಹೇಳಿದೆ.

"ಹೌದು, ಇದ್ದರು" ನಾಸ್ತೆಂಕ ಹೇಳಿದಳು. "ಅವರು ನಿಮಗಿಂತ ಹೆಚ್ಚು ಉತ್ತಮವಾಗಿ ತಮ್ಮ ನಾಲಿಗೆ ಹಿಡಿಯಬಲ್ಲವರಿದ್ದರು, ನಿಜ, ಆ ಹೊತ್ತಿಗೆ ಅವರಿಗೆ ನಾಲಿಗೆ ಆಡಿಸಲೇ ಆಗುತ್ತಿರಲಿಲ್ಲವೆನ್ನಿ. ಅವರೊಬ್ಬ ಪುಟ್ಟ ಆಕೃತಿಯ ಮುದುಕರಾಗಿದ್ದರು, ತೆಳುವಾಗಿದ್ದರು, ಕಿವಿ ಕೇಳಿಸುತ್ತಿರಲಿಲ್ಲ, ಕಣ್ಣು ಕಾಣಿಸುತ್ತಿರಲಿಲ್ಲ. ಕುಂಟರು ಬೇರೆ ಆಗಿದ್ದರು. ಕೊನೆಗೆ ಈ ಲೋಕದಲ್ಲಿ ಜೀವಿಸಲಾರದೆ ಸತ್ತರು. ಆದ್ದರಿಂದಲೇ ಹೊಸಬರು ವಾಸಕ್ಕೆ ಬಂದರು. ಏಕೆಂದರೆ ಅಟ್ಟವನ್ನು ಬಾಡಿಗೆಗೆ ಕೊಡದೆ ನಾವು ನಮ್ಮ ಜೀವನ ನಡೆಸಲು ಸಾಧ್ಯವಿರುತ್ತಿರಲಿಲ್ಲ. ಅಜ್ಜಿಗೆ ಬರುತ್ತಿದ್ದ ನಿವೃತ್ತಿ ವೇತನವಷ್ಟೆ ನಮ್ಮೆಲ್ಲ ಆದಾಯ. ಅದೃಷ್ಟಕ್ಕೆ ಬಾಡಿಗೆಗೆ ಬಂದ ಈ ಹೊಸಬರು ಯುವಕರಾಗಿದ್ದರು. ಸ್ಥಳೀಯರೂ ಆಗಿರಲಿಲ್ಲ. ಅಜ್ಜಿ ಅವರಿಗೆ ಅಟ್ಟದ ಕೋಣೆಯನ್ನು ಕೊಟ್ಟಳು, ಏಕೆಂದರೆ, ಅವರು ಬಾಡಿಗೆಯ ಬಗೆಗೆ ಚೌಕಾಶಿ ಮಾಡಲಿಲ್ಲ. ಆಮೇಲೆ ಅಜ್ಜಿ ನನ್ನನ್ನು ಕೇಳಿದಳು: 'ಹೇಳು, ನಾಸ್ತೆಂಕ. ನಮ್ಮ ಕೋಣೆಗೆ ಹೊಸದಾಗಿ ಬಾಡಿಗೆಗೆ ಬಂದಿರುವವರು ಯುವಕರೇ ?' ನಾನು ಸುಳ್ಳು ಹೇಳಲು ಇಷ್ಟಪಡಲಿಲ್ಲ. ಆದ್ದರಿಂದ ನಾನು ಹೇಳಿದೆ: 'ಯುವಕರು ಅಂತೇನೂ ಅಲ್ಲ, ವಯಸ್ಸಾದವರೂ ಅಲ್ಲ.' 'ಲಕ್ಷಣವಾಗಿ ಕಾಣಿಸುತ್ತಾರಾ ?' ಅವಳು ಕೇಳಿದಳು. ನಾನು ಸುಳ್ಳು ಹೇಳಲು ಮತ್ತೆ ಇಷ್ಟಪಡಲಿಲ್ಲ. ನಾನು ಹೇಳಿದೆ: 'ಹೌದು, ಲಕ್ಷಣವಾಗಿ ಕಾಣಿಸುತ್ತಾರೆ.' ಅಜ್ಜಿ ಹೇಳಿದಳು: 'ಆಹ್, ನಾಚಿಕೆಗೇಡು, ನಾಚಿಕೆಗೇಡು ! ನಾನು ಈಗಲೇ ನಿನಗೆ ಎಚ್ಚರಿಕೆ ಕೊಡುತ್ತೀನಿ, ಮಗು. ಅವರನ್ನು ಕಣ್ಣೆತ್ತಿ ಕೂಡ ನೋಡಬೇಡ. ಅವರ ವಿಷಯ ಯೋಚನೆಯನ್ನೂ ಮಾಡಬೇಡ. ಅಬ್ಬಾ, ಎಲ್ಲಿಗೆ ಬಂತು ಈ ಪ್ರಪಂಚ ! ಊಹಿಸಿನೋಡು. ಬಂದಿರೋದು ಅಟ್ಟದಲ್ಲಿ ವಾಸ ಮಾಡೋಕೆ. ನೋಡೋಕೆ ಮಾತ್ರ ಲಕ್ಷಣವಾಗಿದಾರೆ. ನನ್ನ ಕಾಲದಲ್ಲಿ ಹೀಗೆಲ್ಲ ಇರಲಿಲ್ಲವಮ್ಮ !'

"ಅಜ್ಜಿ ಯಾವತ್ತೂ ಅಷ್ಟೆ. ಎಲ್ಲಕ್ಕೂ 'ನನ್ನ ಕಾಲ, ನನ್ನ ಕಾಲ' ಅನ್ನುತ್ತಿದ್ದಳು. ಅವಳ ಕಾಲದಲ್ಲಿ ಅವಳು ಯುವತಿಯಾಗಿದ್ದಳು, ಅವಳ ಕಾಲದಲ್ಲಿ ಸೂರ್ಯ ಹೆಚ್ಚು ಆಪ್ಯಾಯಮಾನವಾಗಿದ್ದ. ಆಗ ಕೆನೆ ಅಷ್ಟು ಬೇಗ ಹುಳಿಯಾಗುತ್ತಿರಲಿಲ್ಲ – ಎಲ್ಲವೂ 'ನನ್ನ ಕಾಲ'ಕ್ಕೇ ಹೋಗುತ್ತಿದ್ದಿತು. ನಾನು ಅವಳ ಪಕ್ಕದಲ್ಲೇ ಕುಳಿತು ಯೋಚನೆ ಮಾಡಿದೆ: ಈ ಅಜ್ಜಿ ಏಕೆ ತಾನೇ ಇಲ್ಲ ಸಲ್ಲದ ವಿಚಾರಗಳನ್ನು ನನ್ನ ತಲೆಗೆ ತುಂಬಿದಳೋ, ಬಾಡಿಗೆಗೆ ಬಂದವರು ಲಕ್ಷಣವಾಗಿದ್ದಾರೆಯೇ, ಯುವಕ

ರಾಗಿದ್ದಾರೆಯೇ, ಎಂದು ಕೇಳಿದಳೋ? ಈ ಯೋಚನೆ ಸುಮ್ಮನೆ ಅಕಸ್ಮಿಕವಾಗಷ್ಟೆ ಮನಸ್ಸಿನಲ್ಲಿ ಹೊಳೆಯಿತು. ನಾನು ಮತ್ತೆ ಹೆಣಿಗೆ ಕೆಲಸ ಶುರು ಮಾಡಿದೆ, ಕುಣಿಕೆಗಳನ್ನು ಎಣಿಸಿದೆ, ಆ ವಿಷಯ ಎಲ್ಲವನ್ನೂ ಮರೆತೆ.

"ನಾವು ಆ ಬಾಡಿಗೆ ಕೋಣೆಯ ಗೋಡೆಗಳಿಗೆ ಹೊಸ ಕಾಗದ ಅಂಟಿಸುವುದಾಗಿ ಮೊಸಬರಿಗೆ ಮಾತು ಕೊಟ್ಟಿದ್ದೆವು. ಒಂದು ದಿನ ಬೆಳಿಗ್ಗೆ ಅವರು ಆ ವಿಷಯ ವಿಚಾರಿಸಲು ಬಂದರು. ಒಂದಾದ ಮೇಲೊಂದು ಮಾತು ಬಂತು. ಅಜ್ಜಿ ತುಂಬ ಮಾತುಗಾರಳು. ಆಮೇಲೆ ಅವಳು ನನಗೆ ಹೇಳಿದಳು: 'ನಾಸ್ತೆಂಕ, ನನ್ನ ಮಲಗುವ ಕೋಣೆಗೆ ಹೋಗಿ ಎಣಿಸುವ ಮಣಿಕಟ್ಟು ತೆಗೆದುಕೊಂಡು ಬಾ.' ನಾನು ಕೂಡಲೇ ಜಿಗಿದು ನಿಂತೆ, ಮೈ ಎಲ್ಲ ನಾಚುತ್ತ. ಯಾಕೆ ಹಾಗೆ ನಾಚಿದೆನೋ ನನಗೆ ತಿಳಿಯದು. ನನ್ನ ಬಟ್ಟೆಗೂ ಅಜ್ಜಿಯ ಬಟ್ಟೆಗೂ ಪಿನ್ ಹಾಕಿದೆ ಅನ್ನುವುದನ್ನೇ ಮರೆತೆ. ಆ ಬಾಡಿಗೆದಾರರಿಗೆ ಕಾಣದಂತೆ ಪಿನ್ ತೆಗೆಯುವ ಬದಲು ನಾನು ಆ ನಾಚಿದ ಸ್ಥಿತಿಯಲ್ಲಿ ತಕ್ಷಣ ಮಲಗುವ ಕೋಣೆಯ ಕಡೆಗೆ ಹೊರಟೆ. ಅಜ್ಜಿಯ ಕುರ್ಚಿಯೂ ನನ್ನ ಹಿಂದೆಯೇ ಎಳೆದುಕೊಂಡು ಬಂದಿತು. ಬಾಡಿಗೆದಾರರಿಗೆ ಈ ನನ್ನ ವಿಷಯವೆಲ್ಲ ಗೊತ್ತಾಗಿಬಿಟ್ಟಿತು ಎಂಬುದು ತಿಳಿದು ಬಂದಾಗ ನಾನು ಇನ್ನಷ್ಟು ನಾಚಿ ನೀರಾದೆ, ಆ ಸ್ಥಳದಲ್ಲೇ ಘನೀಭೂತಳಾಗಿ ನಿಂತೆ, ಇದ್ದಕ್ಕಿದ್ದಂತೆ ಕಣ್ಣೀರು ಸುರಿಸತೊಡಗಿದೆ – ಆ ಕಹಿ ಪ್ರಸಂಗ, ಆ ಅವಮಾನ ನನ್ನ ಸಹನೆಗೂ ಮೀರಿತ್ತು! ಅಜ್ಜಿ ಕೂಗಿ ಹೇಳಿದಳು: 'ಅಲ್ಲೇಕೆ ನಿಂತೆ? ಹೋಗು.' ನಾನು ಇನ್ನೂ ಹೆಚ್ಚು ಜೋರಾಗಿ ಅತ್ತೆ. ತಾವು ಅಲ್ಲಿದ್ದುದರಿಂದ ನಾನು ತುಂಬ ನಾಚಿದ್ದೆನೆಂಬುದನ್ನು ಕಂಡುಕೊಂಡ ಆ ಬಾಡಿಗೆದಾರರು ಕೂಡಲೇ ಹೋಗಿ ಬರುತ್ತೇನೆಂದು ಹೇಳಿ ಹೊರಟುಹೋದರು.

"ಅದಾದ ಮೇಲೆ ಹಜಾರದಲ್ಲಿ ಸ್ವಲ್ಪ ಸದ್ದು ಕೇಳಿಸಿದರೂ ಸಾಕು, ನಾನು ಸತ್ತೆನೆಂದೇ ಅಂದುಕೊಳ್ಳುತ್ತಿದ್ದೆ. ಬಾಡಿಗೆದಾರರು ಬಂದರು, ನಾನೆಂದುಕೊಳ್ಳುತ್ತಿದ್ದೆ, ಮೆಲ್ಲಗೆ ಪಿನ್ ತೆಗೆಯುತ್ತಿದ್ದೆ, ಮತ್ತೆ ಅವಮಾನವಾಗದಿರಲೆಂದು. ಆದರೆ ಅದು ಹಾಗಾಗಲೇ ಇಲ್ಲ. ಅವರು ಮತ್ತೆ ಬರಲೇ ಇಲ್ಲ. ಎರಡು ವಾರಗಳಾದವು. ಒಂದು ದಿನ ಅವರು ಫ್ಯೋಕ್ಲ ಮೂಲಕ ಒಂದು ಚೀಟಿ ಕಳುಹಿಸಿ, ತಮ್ಮ ಬಳಿ ತುಂಬ ಫ್ರೆಂಚ್ ಪುಸ್ತಕಗಳಿವೆಯೆಂದೂ, ಎಲ್ಲವೂ ಒಳ್ಳೆಯವು, ಓದಲರ್ಹವಾದವು, ನಾನು ಅವನ್ನು ಅಜ್ಜಿಗೆ ಓದಿ ಹೇಳಲು ಅಜ್ಜಿ ಇಷ್ಟಪಡುವರೇ, ಸುಮ್ಮನೆ ಬೇಸರವಾಗದಿರಲೆಂದು, ಎಂದು ಕೇಳಿದ್ದರು. ಅಜ್ಜಿ ಅವರ ಸಲಹೆಯನ್ನು ಕೃತಜ್ಞತೆಯಿಂದ ಒಪ್ಪಿಕೊಂಡಳು. ಆದರೆ ಪುಸ್ತಕಗಳು ನೈತಿಕವಾದವೇ ಎಂದು ಪದೇ ಪದೇ ಕೇಳಿದಳು. ಏಕೆಂದರೆ, ಅವು ಅನೈತಿಕವಾಗಿದ್ದರೆ, 'ನೀನು ಅವನ್ನು ಓದಲೇ

ಬಾರದು ನಾಸ್ತೆಂಕ. ಏಕೆಂದರೆ ಆವು ತಪ್ಪು ಮಾಡುವಂತೆ ಹೇಳಿಕೊಡುತ್ತವೆ' ಎಂದು ಅವಳು ಹೇಳಿದಳು.

"'ಅವು ಏನು ಹೇಳಿಕೊಡುತ್ತವೆ, ಅಜ್ಜಿ ? ಅವುಗಳಲ್ಲಿ ಏನು ಬರೆದಿರುತ್ತೆ ?' ನಾನು ಕೇಳಿದೆ.

"'ಆಹ್, ಅವೆಲ್ಲ ಯುವಕರು ಸಭ್ಯ ಹುಡುಗಿಯರನ್ನು ಕೆಡಿಸುವ ಕಥೆಗಳಷ್ಟೆ. ಅವರು ಹುಡುಗಿಯರನ್ನು ಅವರ ತಾಯಿತಂದೆಯರ ಮನೆಯಿಂದ ಕರೆದೊಯ್ದು ಬಿಡುತ್ತಾರೆ, ಅವರನ್ನು ಮದುವೆಯಾಗುವುದಾಗಿ ನಟಿಸುತ್ತ. ಆಮೇಲೆ ಆ ನತದೃಷ್ಟ ಹುಡುಗಿಯರನ್ನು ಅವರ ದುರ್ಗತಿಗೆ ಬಿಟ್ಟು ಹೊರಟು ಹೋಗುತ್ತಾರೆ. ಕೊನೆಯಲ್ಲಿ ಈ ಹುಡುಗಿಯರ ಅವಸ್ಥೆ ಏನಾಗುತ್ತದೆಂಬುದನ್ನು ಹೇಳುವುದೂ ದುಃಖಕರ. ನಾನು ಅಂತಹ ಎಷ್ಟೋ ಪುಸ್ತಕಗಳನ್ನು ಓದಿದ್ದೇನೆ' ಅಜ್ಜಿ ಹೇಳಿದಳು. 'ಇವೆಲ್ಲವನ್ನೂ ಅವು ಬಹು ಸುಂದರವಾಗಿ ವರ್ಣಿಸುತ್ತವೆ. ನೀನು ಇಡೀ ರಾತ್ರಿ ಕುಳಿತು ಉಸಿರು ಹಿಡಿದು ಓದುತ್ತೀಯ. ಆದ್ದರಿಂದ, ಎಚ್ಚರ, ಅಂಥ ಪುಸ್ತಕಗಳನ್ನು ಎಂದೂ ಓದಬೇಡ, ನಾಸ್ತೆಂಕ ! ಇವರು ಯಾವ ರೀತಿಯ ಪುಸ್ತಕ ಕಳಿಸಿದಾರೆ. ಅಂದೆ ನೀನು ?'

"'ಎಲ್ಲವೂ ಸರ್ ವಾಲ್ಟರ್ ಸ್ಕಾಟ್‌ರ ಕಾದಂಬರಿಗಳೇ, ಅಜ್ಜಿ.'

"'ಸರ್ ವಾಲ್ಟರ್ ಸ್ಕಾಟ್‌ರ ಕಾದಂಬರಿಗಳೇ ? ಇಲ್ಲಿ ಬೇರೆ ಯಾವ ತಂತ್ರವೂ ಇಲ್ಲ ಅಂತ ಖಾತರಿ ಇದೆಯೋ ನಿನಗೆ? ಇನ್ನೊಂದು ಸಾರಿ ನೋಡು. ಯಾವುದಾದರೂ ಒಂದರಲ್ಲಿ ಪ್ರೇಮಪತ್ರ ಅಡಗಿಸಿ ಇಟ್ಟಿರಬಹುದು ?'

"'ಇಲ್ಲ, ಅಜ್ಜಿ. ಯಾವ ಪತ್ರವೂ ಇಲ್ಲ.'

"'ರಟ್ಟಿನ ಕೆಳಗೆ ನೋಡು. ಅವರು ಕೆಲವು ಸಾರಿ ಪತ್ರಗಳನ್ನು ರಟ್ಟಿನ ಕೆಳಗೆ ಸೇರಿಸಿರುತ್ತಾರೆ, ಪುಂಡ ಪೋಕರಿಗಳು !'

"'ಇಲ್ಲ, ಅಜ್ಜಿ. ರಟ್ಟಿನ ಕೆಳಗೂ ಏನೂ ಇಲ್ಲ.'

"'ಎಚ್ಚರ. ಎಲ್ಲೂ ಇಲ್ಲವೇ ನೋಡು !'

"ಹೀಗೆ ನಾವು ಸರ್ ವಾಲ್ಟರ್ ಸ್ಕಾಟ್‌ರ ಕಾದಂಬರಿಗಳನ್ನು ಓದತೊಡಗಿದೆವು. ಒಂದು ತಿಂಗಳಲ್ಲಿ ಅವರು ಕೊಟ್ಟ ಅರ್ಧ ಪುಸ್ತಕಗಳನ್ನು ಮುಗಿಸಿದ್ದೆವು. ಆಮೇಲೆ ನಮ್ಮ ಬಾಡಿಗೆದಾರರು ಇನ್ನೂ ಹೆಚ್ಚು ಹೆಚ್ಚು ಪುಸ್ತಕಗಳನ್ನು ಕಳುಹಿಸಿಕೊಟ್ಟರು. ಪೂಷ್ಕಿನ್‌ರ ಕೆಲವು ಕೃತಿಗಳನ್ನೂ ಕಳುಹಿಸಿಕೊಟ್ಟರು.ಹಾಗಾಗಿ ಕೊನೆಗೆ ನಾನು ಪುಸ್ತಕಗಳಿಲ್ಲದೆ ಜೀವಿಸದಂತಾದೆ. ಚೀಣೀ ರಾಜಕುಮಾರನನ್ನು ವಿವಾಹವಾಗುವ ಕನಸು ಕಾಣುವುದನ್ನು ನಿಲ್ಲಿಸಿದೆ.

"ಹಾಗಿದ್ದಾಗ ಒಂದು ದಿನ ನಾನು ಮಹಡಿ ಮೆಟ್ಟಲ ಮೇಲೆ ಅಕಸ್ಮಾತ್ತಾಗಿ ನಮ್ಮ ಬಾಡಿಗೆದಾರರನ್ನು ಸಂಧಿಸಿದೆ. ಅಜ್ಜಿ ಏನನ್ನೋ ತರುವಂತೆ ನನ್ನನ್ನು

ಕಳಿಸಿದ್ದಳು. ಅವರು ನನ್ನನ್ನು ಕಂಡ ಕೂಡಲೇ ನಿಂತರು. ನಾನು ನಾಚಿದೆ. ಅವರೂ ನಾಚಿದರು. ಆದರೆ ಅವರು ನಸುನಕ್ಕು ಹೇಗಿದ್ದೀರಿ ಎಂದು ಕೇಳಿದರು. ಅಜ್ಜಿ ಹೇಗಿದ್ದಾರೆ ಎಂದೂ ಕೇಳಿದರು. ಆಮೇಲೆ 'ಪುಸ್ತಕಗಳನ್ನೆಲ್ಲ ಓದಿದಿರಾ?' ಎಂದು ವಿಚಾರಿಸಿದರು. 'ಓದಿದೆ' ನಾನೆಂದೆ. 'ಯಾವ ಪುಸ್ತಕ ನಿಮಗೆ ತುಂಬ ಹಿಡಿಸಿತು?' ಅವರು ಕೇಳಿದರು. 'ಐವನ್‌ಹೋ ಹಾಗೂ ಪೂಷ್ಕಿನ್‌ರ ಕೃತಿಗಳು ಎಲ್ಲಕ್ಕಿಂತ ಹೆಚ್ಚು ಇಷ್ಟವಾದವು' ನಾನೆಂದೆ. ಆ ಸಂದರ್ಭದಲ್ಲಿ ಜರುಗಿದ್ದು ಅಷ್ಟೆ.

"ಒಂದು ವಾರವಾದ ಮೇಲೆ ನಾನು ಅವರನ್ನು ಮತ್ತೆ ಮಹಡಿ ಮೆಟ್ಟಿಲ ಮೇಲೆ ಸಂಧಿಸಿದೆ. ಈ ಬಾರಿ ಅಜ್ಜಿಯೇನೂ ನನ್ನನ್ನು ಕಳಿಸಿರಲಿಲ್ಲ. ನನಗೇ ಏನೋ ಬೇಕಾಗಿತ್ತು. ಎರಡು ಗಂಟೆ ಆಗಲೇ ಹೊಡೆದಿತ್ತು. ಆಗಲೇ ನಮ್ಮ ಬಾಡಿಗೆದಾರರು ಸಾಮಾನ್ಯವಾಗಿ ಮನೆಗೆ ಬರುವುದು. 'ಹೇಗಿದ್ದೀರಿ?' ಅವರೆಂದರು. 'ನೀವು ಹೇಗಿದ್ದೀರಿ?' ನಾನು ಕೇಳಿದೆ. 'ಇಡೀ ದಿನ ಅಜ್ಜಿ ಜೊತೆ ಕೂತಿರೋದಕ್ಕೆ ಬೇಸರವಾಗುವುದಿಲ್ಲವೇ ನಿಮಗೆ?' ಅವರು ಕೇಳಿದರು.

"ಅವರು ಅದನ್ನು ಕೇಳಿದಾಗ ನನಗೆ ನಾಚಿಕೆ ಹಾಗೂ ಅವಮಾನದಿಂದ ಮೈ ಎಲ್ಲ ಬಿಸಿಯಾಯಿತು. ಯಾಕೋ ನನಗೆ ನಿಜಕ್ಕೂ ಗೊತ್ತಿಲ್ಲ. ಇತರರು ನನ್ನ ಈ ಸ್ಥಿತಿಯ ಬಗೆಗೆ ಕೇಳತೊಡಗಿದ್ದಾರೆಂಬ ಅರಿವು ಅದಕ್ಕೆ ಕಾರಣವಾಗಿದ್ದಿರಬಹುದು. ಏನೂ ಹೇಳದೆ ಹೊರಟು ಹೋಗೋಣವೆಂದುಕೊಂಡೆ. ಆದರೆ ಹೋಗಲು ನನ್ನಲ್ಲಿ ಶಕ್ತಿಯೇ ಇರಲಿಲ್ಲ.

" 'ನೀವು ಒಳ್ಳೆಯ ಹುಡುಗಿ' ಅವರೆಂದರು. 'ನಿಮ್ಮ ಜೊತೆ ಹೀಗೆ ಮಾತನಾಡುತ್ತಿರುವುದಕ್ಕೆ ಕ್ಷಮಿಸಿ. ಆದರೆ ನಾನು ನಿಮ್ಮ ಬಗೆಗೆ ನಿಮ್ಮ ಅಜ್ಜಿಗಿಂತ ಹೆಚ್ಚು ಗಾಢವಾದ ಕಾಳಜಿ ಹೊಂದಿದ್ದೇನೆ, ಖಂಡಿತವಾಗಿಯೂ. ನಿಮಗೆ ಬೇರೆ ಯಾರೂ ಸ್ನೇಹಿತರೇ ಇಲ್ಲವೇ, ಯಾರ ಬಳಿಗೂ ಹೋಗುವುದೇ ಇಲ್ಲವೇ?'

" 'ಯಾರೂ ಇಲ್ಲ. ಒಬ್ಬಳು ಇದ್ದಳು – ಮಾಷೆಂಕ. ಅವಳೂ ಪಿಸ್ಕೋವ್‌ಗೆ ಹೊರಟುಹೋಗಿದ್ದಾಳೆ' ಎಂದು ನಾನವರಿಗೆ ಹೇಳಿದೆ.

" 'ನೋಡಿ. ನನ್ನ ಜೊತೆಗೆ ನಾಟಕಕ್ಕೆ ಬರೋದಕ್ಕೆ ನಿಮಗೆ ಇಷ್ಟವೇ?'

" 'ನಾಟಕಕ್ಕೆ? ಅಜ್ಜಿ ಏನು ಹೇಳುತ್ತಾರೋ?'

" 'ಅವರಿಗೆ ಹೇಳದೆ ಬನ್ನಿ.'

" 'ಉಹೂಂ. ಅಜ್ಜಿಗೆ ಮೋಸ ಮಾಡಲು ನನಗೆ ಇಷ್ಟವಿಲ್ಲ. ಹೋಗಿ ಬರುತ್ತೀನಿ.'

" 'ಹೋಗಿ ಬನ್ನಿ' ಅವರೆಂದರು, ಇನ್ನೊಂದು ಮಾತೂ ಆಡದೆ.

"ಆಮೇಲೆ ಆದೇ ದಿನ ಊಟವಾದ ಮೇಲೆ ಅವರು ನಮ್ಮ ಕೋಣೆಗೆ ಬಂದರು. ಕುರ್ಚಿಯ ಮೇಲೆ ಕುಳಿತು ಅಜ್ಜಿಯೊಂದಿಗೆ ತುಂಬ ಹೊತ್ತು ಮಾತ

ನಾಡಿದರು. ಅಜ್ಜಿ ಎಂದೂ ಹೊರಗೆ ಹೋಗುವುದೇ ಇಲ್ಲವೇ, ಅವಳಿಗೆ ಯಾರೂ ಗೆಳತಿಯರೇ ಇಲ್ಲವೇ, ಎಂದು ಕೇಳಿದರು. ಆಮೇಲೆ ಇದ್ದಕ್ಕಿದ್ದಂತೆ ಹೇಳಿದರು: 'ನಾನು ಇವತ್ತು ರಾತ್ರಿ ಆಪೆರಾಗೆ ಒಂದು ಬಾಕ್ಸ್ ಟಿಕೆಟ್ ತಗೊಂಡಿದೀನಿ. 'ಬಾರ್ಬರ್ ಆಫ್ ಸೆವಿಲ್' ಅಂತ ಆಪೆರಾ. ನನ್ನ ಮಿತ್ರರು ಕೆಲವರು ಬರುತ್ತೇನೆ ಅಂತ ಹೇಳಿದ್ದರು. ಈಗ ಬರೊಲ್ಲ ಅಂತಾರೆ. ನನ್ನ ಬಳಿ ಟಿಕೆಟ್ ಉಳಿದು ಹೋಗಿದೆ.'

" 'ಬಾರ್ಬರ್ ಆಫ್ ಸೆವಿಲ್!' ಅಜ್ಜಿ ಉದ್ಗರಿಸಿದಳು. 'ನನ್ನ ಕಾಲದಲ್ಲಿ ಆಡುತ್ತಿದ್ದರಲ್ಲ ಅದೇ ಬಾರ್ಬರ್ ಆಪೆರಾವೇ?'

" 'ಹೌದು. ಅದೇ ಬಾರ್ಬರ್ ಆಪೆರಾ!' ಹಾಗೆಂದು ಅವರು ನನ್ನತ್ತ ಒಮ್ಮೆ ನೋಡಿದರು. ನಾನಾಗಲೇ ಅದನ್ನೆಲ್ಲ ಅರ್ಥಮಾಡಿಕೊಂಡಿದ್ದೆ. ನಾನು ನಾಚಿದೆ. ನನ್ನ ಹೃದಯ ನಿರೀಕ್ಷೆಯಿಂದ ಪುಟ ನೆಗೆಯಿತು.

" 'ಓಹ್, ಹಾಗೋ. ನನಗದು ಚೆನ್ನಾಗಿ ಗೊತ್ತು.' ಅಜ್ಜಿ ಹೇಳಿದಳು. 'ನಾನೇ ಆ ಹಳೆಯ ದಿನಗಳಲ್ಲಿ ಮನೆಯಲ್ಲೇ ಆಪೆರಾ ಆಡಿದಾಗ ರೊಸೀನಾಳ ಪಾತ್ರ ಅಭಿನಯಿಸುತ್ತಿದ್ದೆ.'

" 'ಬರುತ್ತೀರಾ ಇವತ್ತು ರಾತ್ರಿ?' ಅವರು ಕೇಳಿದರು. 'ನನ್ನ ಬಳಿ ಟಿಕೆಟ್ಟುಗಳು ಉಳಿದು ಹೋಗಿವೆ.'

" 'ಸರಿ. ಹೋಗೋಣ. ಯಾಕೆ ಬಾರದು. ಅಲ್ಲದೆ ನಮ್ಮ ನಾಸ್ತೆಂಕಳೂ ಇದುವರೆವಿಗೂ ಯಾವ ಆಪೆರಾಗೂ ಹೋಗಿಲ್ಲ.'

"ಓಹ್, ದೇವರೇ, ಎಂಥ ಆನಂದ! ನಾವು ಕೂಡಲೇ ಸಿದ್ಧತೆ ಮಾಡಿಕೊಳ್ಳ ತೊಡಗಿದೆವು. ಉಡುಪು ತೊಟ್ಟು ಹೊರಟೆವು. ಅಜ್ಜಿಗೆ ಕಣ್ಣು ಕಾಣಿಸುತ್ತಿರಲಿಲ್ಲ. ಆದರೆ ಸಂಗೀತ ಕೇಳ ಬಯಸಿದ್ದಳು. ಅಲ್ಲದೆ ಅವಳೊಬ್ಬ ಕರುಣಾಳು ವೃದ್ಧೆಯಾಗಿದ್ದಳು. ನನಗೆ ಸಂತೋಷ ನೀಡ ಬಯಸಿದ್ದಳು. ನಾವೇ ಟಿಕೆಟ್ ಕೊಂಡು ಏರ್ಪಾಟು ಮಾಡಿಕೊಂಡು ಹೋಗುವುದಂತೂ ಎಂದಿಗೂ ಸಾಧ್ಯವಿರಲಿಲ್ಲ. 'ಬಾರ್ಬರ್ ಆಫ್ ಸೆವಿಲ್' ಆಪೆರಾ ನನ್ನ ಮೇಲೆ ಯಾವ ಪ್ರಭಾವ ಬೀರಿದ್ದಿತು, ನಾನು ಹೇಳಲಾರೆ. ಆದರೆ ಇಡೀ ಸಂಜೆ ಆ ನಮ್ಮ ಬಾಡಿಗೆದಾರರು ನನ್ನತ್ತವೇ ಕರುಣಾಪೂರಿತವಾಗಿ ನೋಡುತ್ತಿದ್ದರು, ನನ್ನ ಜೊತೆಗೆ ತುಂಬ ಚೆನ್ನಾಗಿ ಮಾತನಾಡಿದರು, ಅಂತ ಮಾತ್ರ ಹೇಳಬಲ್ಲೆ. ಅಂದು ಬೆಳಿಗ್ಗೆ ನಾನೊಬ್ಬಳೇ ಅವರೊಂದಿಗೆ ಆಪೆರಾಗೆ ಹೋಗಲು ಕೇಳಿದಾಗ ಅವರು ನನ್ನನ್ನು ಪರೀಕ್ಷಿಸಲೆಂದೇ ಹಾಗೆ ಕೇಳಿದ್ದರು ಎಂಬುದನ್ನು ಇದರಿಂದ ನಾನು ಕೂಡಲೇ ತಿಳಿದೆ. ನನಗೆ ಅಪಾರ ಆನಂದವಾಗಿದ್ದಿತು. ಅಂದು ರಾತ್ರಿ ಮಲಗಿದಾಗ ನನ್ನಲ್ಲಿ ಹೆಮ್ಮೆಯ ಸಂತೋಷದ ಭಾವನೆ

ತುಂಬಿತ್ತು. ನನ್ನ ಹೃದಯವೂ ಜೋರಾಗಿ ಬಡಿದುಕೊಳ್ಳುತ್ತಿತ್ತು. ಅದು ನನ್ನನ್ನು ಸ್ವಲ್ಪ ಅಸ್ವಸ್ಥಳನ್ನಾಗಿ ಮಾಡಿತು. ಇಡೀ ರಾತ್ರಿ ನಾನು 'ಬಾರ್ಬರ್ ಆಫ್ ಸೆವಿಲ್'ನ ಬಗೆಗೇ ಹುಚ್ಚುಹುಚ್ಚಾಗಿ ಮಾತನಾಡಿದೆ.

"ಅದಾದ ಮೇಲೆ ಅವರು ನಮ್ಮನ್ನು ಹೆಚ್ಚು ಆಗಾಗ್ಗೆ ಕಾಣಬರುತ್ತಾರೆಂದು ನಾನು ಬಗೆದೆ. ಆದರೆ ನನ್ನ ಎಣಿಕೆ ತಪ್ಪಾಗಿತ್ತು. ಅವರು ಬರುವುದನ್ನೇ ಬಹುಮಟ್ಟಿಗೆ ಸಂಪೂರ್ಣವಾಗಿ ನಿಲ್ಲಿಸಿದರು. ತಿಂಗಳಿಗೊಮ್ಮೆಯೋ ಏನೋ ಸುಮ್ಮನೆ ಬಂದ ಹಾಗೆ ಮಾಡುತ್ತಿದ್ದರು, ಅದೂ ಮತ್ತೆ ಆಪೆರಾಗೆ ಬರುತ್ತೀರಾ ಎಂದು ಕರೆಯಲಷ್ಟೆ. ಒಂದೆರಡು ಬಾರಿ ನಾವು ಹೋದೆವು. ಆದರೆ ಅದು ನನಗೆ ಎಷ್ಟು ಮಾತ್ರವೂ ಸಂತೋಷ ನೀಡಲಿಲ್ಲ. ಅಜ್ಜಿ ನನ್ನನ್ನು ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ ಎಂದಷ್ಟೆ ಅವರು ನನ್ನ ಬಗೆಗೆ ದುಃಖಿತರಾಗಿದ್ದರು, ಅಷ್ಟೆ ಅದಕ್ಕೂ ಹೆಚ್ಚಿಗೇನೂ ಇಲ್ಲ, ಎಂಬುದನ್ನು ನಾನು ಕಂಡುಕೊಂಡೆ. ನಾನು ತುಂಬ ಯೋಚನೆ ಮಾಡಿದೆ. ಕೊನೆಗೆ ನನ್ನ ಮನಸ್ಸಿನ ಮೇಲೆ ಏನೋ ಪರಿಣಾಮವಾಯಿತು – ನನ್ನ ಕೈಲಿ ಸುಮ್ಮನೆ ಕುಳಿತುಕೊಂಡಿರಲು ಆಗಲಿಲ್ಲ, ಓದಲು ಆಗಲಿಲ್ಲ, ಹೆಣಿಗೆ ಕೆಲಸ ಮಾಡಲೂ ಆಗಲಿಲ್ಲಿ. ಕೆಲವು ವೇಳೆ ಸುಮ್ಮಸುಮ್ಮನೆ ನಗುತ್ತಿದ್ದೆ, ಅಜ್ಜಿಯನ್ನು ರೇಗಿಸಲು ಏನಾದರೂ ಮಾಡುತ್ತಿದ್ದೆ. ಇಲ್ಲವೇ ಸುಮ್ಮನೆ ಅಳುತ್ತಿದ್ದೆ. ಎಷ್ಟು ಸಣ್ಣಗಾದೆನೆಂದರೆ ಬಹುಮಟ್ಟಿಗೆ ಅಸ್ವಸ್ಥಳೇ ಆದೆ. ಆಪೆರಾ ಸೀಸನ್ ಮುಗಿಯಿತು. ನಮ್ಮ ಬಾಡಿಗೆದಾರರು ನಮ್ಮನ್ನು ನೋಡಲು ಬರುವುದನ್ನೇ ನಿಲ್ಲಿಸಿದರು. ಯಾವಾಗಲಾದರೂ ಸಂಧಿಸಿದಾಗ – ಅದೇ ಮಹಡಿ ಮೆಟ್ಟಿಲ ಮೇಲೆ – ಗಂಭೀರವಾಗಿ ಮೌನವಾಗಿ ಬಾಗಿ ವಂದಿಸುತ್ತಿದ್ದರು, ನನ್ನ ಜೊತೆಗೆ ಮಾತನಾಡಲು ತಮಗೆ ಇಷ್ಟವಿಲ್ಲವೇನೋ ಅನ್ನುವಂತೆ. ನಾನಿನ್ನೂ ಮಹಡಿ ಮೆಟ್ಟಿಲ ಮಧ್ಯದಲ್ಲಿ ನಾಚಿಕೆಯಿಂದ ಮುಖವನ್ನು ಚೆರ್ರಿ ಹಣ್ಣಿನಂತೆ ಕೆಂಪಗೆ ಮಾಡಿಕೊಂಡು – ನಾನು ಅವರನ್ನು ಕಂಡಾಗಲೆಲ್ಲ ನನ್ನ ಮೈ ರಕ್ತವೆಲ್ಲ ತಲೆಗೆ ಉಕ್ಕೇರಿ ಬರುತ್ತಿತ್ತು – ನಿಂತಿರುವಾಗಲೇ ಅವರು ಆಗಲೇ ದ್ವಾರಮಂಟಪದ ಬಳಿಗೆ ಹೊರಟು ಹೋಗಿರುತ್ತಿದ್ದರು.

"ಈಗ ಬಹುಮಟ್ಟಿಗೆ ಇದೇ ಕೊನೆ. ಕಳೆದ ಮೇ ತಿಂಗಳಲ್ಲಿ ನಮ್ಮ ಬಾಡಿಗೆದಾರರು ಅಜ್ಜಿಯ ಬಳಿಗೆ ಬಂದು, ಪೀಟರ್ಸ್‌ಬರ್ಗ್‌ನಲ್ಲಿ ತಮ್ಮೆಲ್ಲ ಕೆಲಸಗಳನ್ನೂ ಮುಗಿಸಿದ್ದುದರಿಂದ ತಾವು ಮತ್ತೆ ಮಾಸ್ಕೋಗೆ ಒಂದು ವರ್ಷಕ್ಕೆ ಹೋಗಲಿರುವರೆಂದು ತಿಳಿಸಿದರು. ಈ ವಿಷಯ ಕೇಳಿದ ಕೂಡಲೇ ನಾನು ನಿಸ್ತೇಜಳಾದೆ, ಮೂರ್ಛೆ ಹೋದಂತವಳಾಗಿ ಕುರ್ಚಿಯ ಮೇಲೆ ಕುಸಿದು ಕುಳಿತೆ. ಅಜ್ಜಿ ಇದಾವುದನ್ನೂ ಗಮನಿಸಲಿಲ್ಲ. ಅವರಾದರೋ, ತಾವು ಹೋಗುವ ವಿಷಯ ತಿಳಿಸಿದ ನಂತರ ಬಾಗಿ ವಂದಿಸಿ ಹೊರಟು ಹೋದರು.

"ನಾನೇನು ಮಾಡಬೇಕಿತ್ತು? ತುಂಬ ಯೋಚನೆ ಮಾಡಿದೆ, ಪರಿತಪಿಸಿದೆ, ವ್ಯಸನಪಟ್ಟೆ. ಕೊನೆಗೆ ಒಂದು ನಿರ್ಧಾರಕ್ಕೆ ಬಂದೆ. ಅವರು ಮಾರನೆಯ ದಿನ ಹೊರಡಬೇಕಿತ್ತು. ನಾನು ಅದಕ್ಕೆ ಹಿಂದಿನ ಸಂಜೆಯೇ ಅಜ್ಜಿ ವಿರಮಿಸಿದನಂತರ ಕೊನೆಯ ಹೆಜ್ಜೆ ಇಡಲು ನಿರ್ಧರಿಸಿದೆ. ನಾನು ಹೀಗೆ ಮಾಡಿದೆ. ನನ್ನ ಬಳಿ ಇದ್ದ ಎಲ್ಲ ಬಟ್ಟೆಗಳನ್ನೂ ಕೆಲವು ಒಳ ಉಡುಪುಗಳನ್ನೂ ಸಹ ಗಂಟು ಕಟ್ಟಿದೆ. ಮೂಟೆ ಯನ್ನು ಕೈಯಲ್ಲಿ ಹಿಡಿದುಕೊಂಡು, ಜೀವಂತವಾಗಿರುವುದಕ್ಕಿಂತ ಹೆಚ್ಚಾಗಿ ಸತ್ತ ವಳಂತೆ, ನಮ್ಮ ಬಾಡಿಗೆದಾರರ ಕೋಣೆಗೆ ಹೋಗಲು ಮಹಡಿ ಮೆಟ್ಟಲು ಹತ್ತಿದೆ. ಆ ಕೆಲವೇ ಮೆಟ್ಟಲುಗಳನ್ನು ಹತ್ತಲೂ ನನಗೆ ಒಂದು ಗಂಟೆಯೇ ಬೇಕಾಯಿ- ತೆಂದು ನನಗನಿಸುತ್ತೆ. ಅವರ ಕೋಣೆಯ ಬಾಗಿಲನ್ನು ತಳ್ಳಿ ತೆರೆದೆ. ನನ್ನನ್ನು ಕಂಡು ಅವರು ಆಶ್ಚರ್ಯಚಕಿತರಾಗಿ ಉಸಿರಿಗಾಗಿ ಬಾಯಿ ತೆಗೆದರು. ನಾನೊಬ್ಬ ಪ್ರೇತವೆಂದೇ ಅವರು ಬಗೆದರು. ಆಮೇಲೆ ನನಗೆ ಸ್ವಲ್ಪ ನೀರು ತಂದುಕೊಡಲು ಧಾವಿಸಿದರು. ಏಕೆಂದರೆ ನನ್ನ ಕೈಲಿ ನಿಲ್ಲಲೂ ಆಗುತ್ತಿರಲಿಲ್ಲ. ನನ್ನ ಹೃದಯ ತುಂಬ ಜೋರಾಗಿ ಬಡಿದುಕೊಳ್ಳುತ್ತಿದ್ದಿತು, ತಲೆ ನೋಯುತ್ತಿದ್ದಿತು, ಮನಸ್ಸು ತತ್ತರಿಸಿತು. ಸ್ವಲ್ಪ ಸಮಾಧಾನವಾದ ಮೇಲೆ ನಾನು ನನ್ನ ಬಟ್ಟೆಯ ಗಂಟನ್ನು ಅವರ ಹಾಸಿಗೆಯ ಮೇಲಿರಿಸಿ ಅದರ ಪಕ್ಕದಲ್ಲಿ ಕುಳಿತೆ. ಮುಖವನ್ನು ಕೈಗಳಿಂದ ಮುಚ್ಚಿಕೊಂಡು ಗಟ್ಟಿಯಾಗಿ ಅಳತೊಡಗಿದೆ. ಅವರು ಕೂಡಲೇ ಎಲ್ಲವನ್ನೂ ಅರ್ಥಮಾಡಿಕೊಂಡಿರಬೇಕು. ಏಕೆಂದರೆ ಅವರು ನನ್ನ ಮುಂದೆ ವಿವರ್ಣರಾಗಿ, ಕಣ್ಣುಗಳಲ್ಲಿ ದುಃಖ ಹೊರಸೂಸುತ್ತ ನಿಂತರು. ಅದು ನನ್ನ ಹೃದಯವನ್ನೇ ಇರಿಯಿತು.

"'ನಾಸ್ತೆಂಕ, ದಯವಿಟ್ಟು ನನ್ನ ಮಾತು ಕೇಳಿ. ನಾನೇನೂ ಮಾಡಲಾರೆ. ನಾನೊಬ್ಬ ಬಡವ. ನನಗಿನ್ನೂ ಏನೂ ಇಲ್ಲ. ಒಂದು ಒಳ್ಳೆಯ ಕೆಲಸ ಕೂಡ ಇಲ್ಲ. ಮದುವೆಯಾದರೆ ಹೇಗೆ ಜೀವನ ನಡೆಸುವುದು?' ಅವರು ಹೇಳತೊಡಗಿದರು.

"ನಾವು ತುಂಬ ಹೊತ್ತು ಮಾತನಾಡಿದೆವು. ಕೊನೆಗೆ ನಾನು ನನ್ನ ಅಜ್ಜಿಯ ಜೊತೆ ಇನ್ನೆಷ್ಟು ಕಾಲವೂ ಇರಲಾರೆನೆಂದೂ, ಅವಳ ಉಡುಪಿಗೆ ನನ್ನ ಉಡು ಪನ್ನು ಪಿನ್ ಹಾಕಿಕೊಂಡು ಕುಳಿತಿರಲು ನನಗಿಷ್ಟವಿಲ್ಲವೆಂದೂ, ಅವರಿಗೆ ಇಷ್ಟ ವಿರಲಿ ಇಲ್ಲದಿರಲಿ ನಾನೂ ಅವರೊಂದಿಗೆ ಮಾಸ್ಕೋಗೆ ಹೋಗುವುದಾಗಿಯೂ, ಏಕೆಂದರೆ ಅವರಿಲ್ಲದೆ ನಾನು ಬಾಳಲಾರೆನೆಂದೂ, ನನ್ನ ಉನ್ಮಾದದ ಸ್ಥಿತಿಯಲ್ಲಿ ಅವರಿಗೆ ಹೇಳಿದೆ. ಅವಮಾನ, ಪ್ರೀತಿ, ಹೆಮ್ಮೆ – ಎಲ್ಲವೂ ಒಮ್ಮೆಗೇ ನನ್ನಲ್ಲಿ ತುಂಬಿಕೊಂಡು ಬಂದಿದ್ದಿತು. ಅವರ ಹಾಸಿಗೆಯ ಮೇಲೆ ಬಹುಮಟ್ಟಿಗೆ ಮೂರ್ಛೆ ಹೋದವಳಂತೆ ಬಿದ್ದು ಬಿಟ್ಟೆ. ಅವರ ನಿರಾಕರಣೆಯಿಂದ ಅಷ್ಟು ಹೆದರಿದ್ದೆ!

"ಅವರು ಕೆಲವು ನಿಮಿಷ ಮೌನದಿಂದ ಕುಳಿತಿದ್ದರು. ಆಮೇಲೆ ಎದ್ದು ನಿಂತು ನನ್ನ ಹತ್ತಿರ ಬಂದು ನನ್ನ ಕೈಯನ್ನು ತಮ್ಮ ಕೈಯಲ್ಲಿ ಹಿಡಿದುಕೊಂಡರು.

"'ನನ್ನ ಪ್ರೀತಿಯ, ನನ್ನ ಮುದ್ದಿನ ನಾಸ್ತೆಂಕ' ಎಂದವರು ಹೇಳತೊಡಗಿದರು. ಅವರ ಮುಖದ ಮೇಲೆ ಕಣ್ಣೀರು ಧಾರೆಧಾರೆಯಾಗಿ ಹರಿಯುತ್ತಿತ್ತು. 'ನನ್ನ ಮಾತು ಕೇಳಿ. ನಾನು ಪ್ರಮಾಣ ಮಾಡಿ ಹೇಳುತ್ತೇನೆ. ನಾನು ಮದುವೆಯಾಗಬಹುದಾದ ಸ್ಥಿತಿಗೆ ಬಂದಾಗ ನನ್ನನ್ನು ಸಂತೋಷಪಡಿಸಲಿರುವವರು ನೀವಲ್ಲದೆ ಬೇರಾರೂ ಆಗಿರುವುದಿಲ್ಲ. ನೀವಷ್ಟೆ ನನ್ನನ್ನು ಸುಖಿಯನ್ನಾಗಿ ಮಾಡಬಲ್ಲಿರಿ ಎಂದು ನಾನು ಈಗ ಹೇಳಿದಾಗ ದಯವಿಟ್ಟು ನನ್ನ ಮಾತನ್ನು ನಂಬಿ. ಆಮೇಲೆ ಕೇಳಿ: ನಾನೀಗ ಮಾಸ್ಕೋಗೆ ಹೋಗುತ್ತಿದ್ದೇನೆ. ಅಲ್ಲಿ ಸರಿಯಾಗಿ ಒಂದು ವರ್ಷ ಇರುತ್ತೇನೆ. ಅಷ್ಟರಲ್ಲಿ ನನ್ನ ವ್ಯವಹಾರಗಳೆಲ್ಲ ತೀರ್ಮಾನವಾಗಿರುತ್ತವೆ ಅಂದುಕೊಂಡಿದ್ದೇನೆ. ಹಿಂದಿರುಗಿದಾಗ, ನೀವು ಇನ್ನೂ ನನ್ನನ್ನು ಪ್ರೀತಿಸುತ್ತಲೇ ಇದ್ದರೆ, ನಾನು ನಿಮಗೆ ಪ್ರಮಾಣ ಮಾಡಿ ಹೇಳುತ್ತೇನೆ, ನಾವು ಸುಖದಿಂದ ಇರಬಹುದು. ಆದರೆ ಈಗ ಅದು ಸಾಧ್ಯವಿಲ್ಲದ ಮಾತು. ನನ್ನಿಂದಾಗದ ಕೆಲಸ. ನಿಮಗೆ ಯಾವ ಮಾತು ಕೊಡಲೂ ಈಗ ನನಗೆ ಅಧಿಕಾರವಿಲ್ಲ. ನಾನು ಮತ್ತೆ ಹೇಳುತ್ತೇನೆ. ಇನ್ನೊಂದು ವರ್ಷದೊಳಗೇ ಆಗದಿದ್ದರೂ, ಯಾವಾಗಲಾದರೂ ಸರಿಯೆ ಆಗಿಯೇ ಆಗುತ್ತದೆ. ಅಂದರೆ ನೀವು ಅಷ್ಟರೊಳಗೇ ನನ್ನ ಬದಲು ಬೇರೆ ಯಾರನ್ನಾದರೂ ಇಷ್ಟಪಡದೆ ಹೋಗಿದ್ದಲ್ಲಿ, ಅನ್ನುವುದು ವೇದ್ಯವೇ. ನಾನು ನಿಮ್ಮನ್ನು ಯಾವುದೇ ವಚನದಿಂದ ಬಂಧಿಸುವ ಸಾಹಸ ಮಾಡಲಾರೆ.'

"ಅವರು ಹೇಳಿದ್ದು ಇದನ್ನೇ. ಮಾರನೆಯ ದಿನ ಅವರು ಹೊರಟುಹೋದರು. ಈ ವಿಷಯ ಒಂದು ಮಾತನ್ನೂ ಅಜ್ಜಿಗೆ ತಿಳಿಸಬಾರದೆಂದು ನಾವು ಒಪ್ಪಿಕೊಂಡೆವು. ಅವರೇ ಹಾಗೆ ಇಚ್ಛಿಸಿದರು. ನೋಡಿ, ನನ್ನ ಕಥೆ ಇನ್ನೇನು ಮುಗಿಯಿತು. ಈಗ್ಗೆ ಸರಿಯಾಗಿ ಒಂದು ವರ್ಷವಾಯಿತು. ಅವರು ಹಿಂದಿರುಗಿ ಬಂದಿದ್ದಾರೆ. ಇಡೀ ಮೂರು ದಿನದಿಂದ ಇಲ್ಲೇ ಇದ್ದಾರೆ, ಆದರೆ..."

"ಆದರೆ ಏನು?" ನಾನು ಕಥೆಯ ಕೊನೆಯನ್ನು ಕೇಳಲು ತಾಳ್ಮೆಗೆಟ್ಟವನಂತೆ ಕೇಳಿದೆ.

"ಆದರೆ ಇನ್ನೂ ನಮ್ಮ ಮನೆಯ ಕಡೆಗೆ ಬಂದೇ ಇಲ್ಲ!" ನಾಸ್ತೆಂಕ ಸ್ಪಷ್ಟವಾಗಿಯೇ ವಿಶೇಷ ಯತ್ನದೊಂದಿಗೆ ಉತ್ತರಿಸಿದಳು. "ಅವರ ಕಡೆಯಿಂದ ಒಂದು ಮಾತೂ ಇಲ್ಲ, ಒಂದು ಸದ್ದೂ ಇಲ್ಲ".

ಅವಳು ಮಾತು ನಿಲ್ಲಿಸಿದಳು, ಸ್ವಲ್ಪ ತಡೆದಳು. ತಲೆ ಕೆಳಗೆ ಮಾಡಿ, ಇದ್ದಕ್ಕಿದ್ದಂತೆ ಮುಖವನ್ನು ಕೈಗಳಲ್ಲಿ ಹುದುಗಿಸಿ ಎಷ್ಟು ಜೋರಾಗಿ ಅಳತೊಡಗಿದ

ಳೆಂದರೆ, ಅದು ನನ್ನ ಹೃದಯವನ್ನು ಹಿಂಡಿತು. ಇದು ಹೀಗೆ ಕೊನೆಗಾಣುವುದೆಂದು ನಾನೆಂದೂ ನಿರೀಕ್ಷಿಸಿರಲಿಲ್ಲ.

"ನಾಸ್ತೆಂಕ" ನಾನು ಅಂಜಿಕೆಯ ಹಾಗೂ ಹುರಿದುಂಬಿಸುವ ಧ್ವನಿಯಲ್ಲಿ ಹೇಳತೊಡಗಿದೆ."ನಾಸ್ತೆಂಕ, ದಮ್ಮಯ್ಯ ಅಳಬೇಡಿ! ನಿಮಗೆ ಹೇಗೆ ಗೊತ್ತು? ಅವರಿನ್ನೂ ಬಂದಿಲ್ಲವೇನೋ."

"ಇಲ್ಲ, ಬಂದಿದ್ದಾರೆ, ಬಂದಿದ್ದಾರೆ" ನಾಸ್ತೆಂಕ ಹೇಳಿದಳು. "ಅವರು ಇಲ್ಲಿದ್ದಾರೆ, ನನಗೆ ಗೊತ್ತು. ಅವರು ಹೊರಟ ಹಿಂದಿನ ರಾತ್ರಿ ನಾವು ಎಲ್ಲ ಗೊತ್ತು ಮಾಡಿ ಕೊಂಡಿದ್ದೆವು. ಆಗ ನಮ್ಮ ಮಧ್ಯೆ ನಾನು ನಿಮಗೆ ಈಗ ಹೇಳಿದ ಹಾಗೆ ಹೇಳ ಬೇಕಾದುದನ್ನೆಲ್ಲ ಹೇಳಲಾಗಿತ್ತು, ಒಪ್ಪಂದ ಮಾಡಿಕೊಳ್ಳಲಾಗಿತ್ತು. ನಾವು ಇದೇ ಸ್ಥಳಕ್ಕೇ ಗಾಳಿ ಸೇವನೆಗೆ ಬಂದಿದ್ದೆವು. ಆಗ ಹತ್ತು ಗಂಟೆಯಾಗಿತ್ತು. ಈ ಬೆಂಚಿನ ಮೇಲೆಯೇ ಕುಳಿತುಕೊಂಡಿದ್ದೆವು. ಆಗ ನಾನು ಎಷ್ಟು ಮಾತ್ರವೂ ಅಳುತ್ತಿರಲಿಲ್ಲ. ಅವರು ಏನು ಹೇಳಿದರೋ ಅದನ್ನು ನಾನು ಅಮಿತಾನಂದದಿಂದ ಕೇಳುತ್ತಿದ್ದೆ..... ಹಿಂದಿರುಗಿದ ಕೂಡಲೇ ತಾವು ನಮ್ಮ ಬಳಿಗೆ ಬರುವುದಾಗಿ ಅವರು ಹೇಳಿದರು. ನಾನು ಅವರನ್ನು ನಿರಾಕರಿಸದಿದ್ದಲ್ಲಿ, ನಾವು ಅಜ್ಜಿಗೆ ಎಲ್ಲವನ್ನೂ ಹೇಳಿಬಿಡುವುದು, ಎಂದು ಒಪ್ಪಿಕೊಳ್ಳಲಾಗಿತ್ತು. ಈಗ ಅವರು ಹಿಂದಿರುಗಿದ್ದಾರೆ, ನನಗೆ ಗೊತ್ತು, ಆದರೂ, ಬಂದಿಲ್ಲ, ಬಂದಿಲ್ಲ!"

ಅವಳು ಮತ್ತೆ ಅಳತೊಡಗಿದಳು.

"ಅಯ್ಯೋ ದೇವರೇ! ನಿಮಗೆ ಸಹಾಯವಾಗುವಂತೆ ಏನನ್ನಾದರೂ ಮಾಡಲು ಸಾಧ್ಯವಿಲ್ಲವೇ?" ನಾನು ಹೇಳುತ್ತ ತೀರ ಹತಾಶನಾದವನಂತೆ ಬೆಂಚಿನ ಮೇಲೆ ಕುಳಿತಿದ್ದವನು ಜಿಗಿದು ನಿಂತೆ. "ಹೇಳಿ, ನಾಸ್ತೆಂಕ. ಬಹುಶಃ ನಾನು ಹೋಗಿ ಅವರನ್ನು ಕಂಡರೆ ಸಹಾಯವಾದೀತೆ?"

"ನಿಮಗೆ ಸಾಧ್ಯವೇ? ಸಾಧ್ಯವೆನ್ನುತ್ತೀರ?" ಅವಳು ತಕ್ಷಣವೇ ತಲೆ ಎತ್ತಿ ಕೇಳಿದಳು.

"ಇಲ್ಲ. ಅದು ಸಾಧ್ಯವಿಲ್ಲ ಎಂದು ಕಾಣುತ್ತೆ" ನಾನೆಂದೆ, ನನ್ನ ಸಲಹೆ ತಪ್ಪಾಗಿದ್ದಿತೆಂಬುದನ್ನು ಮನಗಂಡು. "ನನಗೆ ಇನ್ನೊಂದು ವಿಚಾರ ಹೊಳೆಯುತ್ತಿದೆ: ಅವರಿಗೆ ಒಂದು ಕಾಗದ ಬರೆಯಿರಿ."

"ಇಲ್ಲ. ಅದು ಸಾಧ್ಯವಿಲ್ಲ ಅಂತ ಕಾಣುತ್ತೆ. ಅಂಥದು ಸಾಮಾನ್ಯವಾಗಿ ಮಾಡಲಾಗಿಲ್ಲ" ಅವಳು ದೃಢವಾಗಿ ಹೇಳಿದಳು. ಆದರೆ ಅದೇ ಹೊತ್ತಿನಲ್ಲಿ ಅವಳು ಕಣ್ಣುಗಳನ್ನು ತಗ್ಗಿಸಿ ನನ್ನ ದೃಷ್ಟಿಯನ್ನು ತಪ್ಪಿಸಲು ಯತ್ನಿಸಿದಳು.

"ಯಾಕಿಲ್ಲ. ಯಾಕೆ ಮಾಡಲಾಗಿಲ್ಲ?" ನಾನು ಮಾತು ಮುಂದುವರಿಸಿದೆ, ನನ್ನ ಸಲಹೆಯಿಂದ ಪ್ರೇರಿತನಾಗಿ. "ಆದರೆ ಅದು ಒಂದು ವಿಶೇಷ ಪತ್ರವಾಗಿರ

ಬೇಕು, ಅನ್ನಿ. ಆದರ ಪ್ರಭಾವ ನೀವು ಪದಗಳನ್ನು ಬಳಸುವ ರೀತಿಯ ಮೇಲೆ ಅವಲಂಬಿಸಿರುತ್ತದೆ. ಓಹ್, ನಾಸ್ತೆಂಕ, ಅದು ನಿಜಕ್ಕೂ ಹಾಗೆಯೇ ! ನನ್ನಲ್ಲಿ ವಿಶ್ವಾಸವಿಡಿ. ದಯವಿಟ್ಟು ! ನಾನು ನಿಮಗೆ ಕೆಡುಕಿನ ಸಲಹೆಯನ್ನೇನೂ ನೀಡು ತ್ತಿಲ್ಲ. ಇವೆಲ್ಲವನ್ನೂ ಸರಿಪಡಿಸಬಹುದು. ಆಗ ಮೊದಲ ಹೆಜ್ಜೆ ಇಟ್ಟುದು ನೀವೆಯೇ. ಈಗಲೂ ನೀವೇ ಏಕೆ ಮೊದಲ ಹೆಜ್ಜೆ ಇಡಬಾರದು ?"

"ಇಲ್ಲ, ಇಲ್ಲ. ನಾನು ಅತಿ ಮುಂದುವರಿದವಳು ಅಂತ ಆದರಿಂದ ಕಂಡು ಬರುವುದು."

"ಆಹ್, ನನ್ನ ಪ್ರಿಯ ನಾಸ್ತೆಂಕ !" ನಾನು ಅವಳ ಮಾತನ್ನು ಮಧ್ಯೆಯೇ ತಡೆಯುತ್ತ ನಸುನಕ್ಕೆ. "ಇಲ್ಲ, ಹಾಗೇನೂ ಕಂಡುಬರುವುದಿಲ್ಲ. ಅದು ನಿಮ್ಮ ಹಕ್ಕು, ಏಕೆಂದರೆ ಅವರು ಮಾತುಕೊಟ್ಟಿದ್ದರು. ಅಲ್ಲದೆ, ನೀವು ಹೇಳಿರುವುದೆಲ್ಲದರಿಂದ ತೀರ್ಮಾನಿಸುವುದಾದರೆ, ಅವರು ತುಂಬ ಔಚಿತ್ಯ ಜ್ಞಾನದ ವ್ಯಕ್ತಿಯೆಂದು ನನಗೆ ಕಂಡುಬರುತ್ತೆ. ಅವರು ಗೌರವವಾಗಿಯೇ ನಡೆದುಕೊಂಡಿದ್ದಾರೆ." ನಾನು ನನ್ನ ಸ್ವಂತ ವಿಚಾರ ಹಾಗೂ ಅಭಿಪ್ರಾಯಗಳ ತಾರ್ಕಿಕತೆಯಿಂದ ಹಿಗ್ಗುತ್ತ ಮಾತು ಮುಂದುವರಿಸಿದೆ. "ಅವರು ಹೇಗೆ ವರ್ತಿಸಿದರು ? ತಮ್ಮನ್ನು ಒಂದು ವಚನಕ್ಕೆ ಬದ್ಧರನ್ನಾಗಿ ಮಾಡಿಕೊಂಡರು. ತಾವು ಮದುವೆ ಮಾಡಿಕೊಳ್ಳುವುದೇ ಆದಲ್ಲಿ ನಿಮ್ಮನ್ನು ಬಿಟ್ಟು ಬೇರೆ ಯಾರನ್ನೂ ಮದುವೆಯಾಗುವುದಿಲ್ಲ ಎಂದು ಹೇಳಿದರು. ಅದೇ ಹೊತ್ತಿನಲ್ಲಿ ನೀವು ಯಾವಾಗ ಇಚ್ಛಿಸಿದರೂ ಅವರನ್ನು ನಿರಾಕರಿಸಲು ನಿಮಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿದರು. ಆದ್ದರಿಂದ ನೀವು ಮೊದಲ ಹೆಜ್ಜೆ ತೆಗೆದುಕೊಳ್ಳುವುದು ಸಮರ್ಥನೀಯವಾದುದು. ನಿಮಗೆ ಆ ಹಕ್ಕಿದೆ. ಅವರ ಮೇಲೆ ನೀವು ಈ ಅಧಿಕಾನುಕೂಲ ಹೊಂದಿದ್ದೀರಿ. ಈಗ ನೀವು ಅವರನ್ನು ಅವರು ನೀಡಿದ್ದ ವಚನದಿಂದ ಮುಕ್ತರನ್ನಾಗಿ ಮಾಡಲು ಬಯಸಿದಿರಿ, ಎಂದಿಟ್ಟುಕೊಳ್ಳಿ...."

"ಹೇಳಿ, ನೀವು ಹೇಗೆ ಬರೆಯುತ್ತೀರಿ ?"

"ಏನನ್ನು ಬರೆಯುವುದು ?"

"ಪತ್ರವನ್ನು."

" 'ಪ್ರಿಯ ಮಹಾಶಯ'.... ಅಂತ ಪ್ರಾರಂಭಿಸುತ್ತೇನೆ."

"ಪ್ರಿಯ ಮಹಾಶಯ ಎಂದೇ ಆಗಿರಬೇಕೆ ?"

"ಖಂಡಿತ. ಆದರೆ ನನಗೆ ತಿಳಿಯದು. ಬಹುಶಃ..."

"ಪರವಾಗಿಲ್ಲ, ಹೇಳಿ !"

" 'ಪ್ರಿಯ ಮಹಾಶಯ, ಕ್ಷಮಿಸಿ, ನಾನು...' ಮತ್ತೆ ಯೋಚಿಸಿದರೆ ಹೀಗೆ

ಬೇಡ ಅನಿಸುತ್ತೆ. ನೀವೇನೂ ಕ್ಷಮೆ ಕೇಳಬೇಕಾಗಿಲ್ಲ. ವಾಸ್ತವಾಂಶವೇ ಎಲ್ಲವನ್ನೂ ಸಮರ್ಥಿಸುತ್ತದೆ. ಸುಮ್ಮನೆ ಬರೆಯಿರಿ: 'ನಾನು ನಿಮಗೆ ಬರೆಯುತ್ತಿದ್ದೇನೆ. ನನ್ನ ಅಸಹನೆಗೆ ಕ್ಷಮಿಸಿ. ಆದರೆ ಈಗ ಒಂದು ಇಡೀ ವರ್ಷದಿಂದ ನಾನು ಸುಖದ ಭರವಸೆಯಲ್ಲಿ ಜೀವಿಸಿಕೊಂಡು ಬಂದಿದ್ದೇನೆ. ಇನ್ನೂ ಒಂದು ದಿನದ ಸಂದೇಹ ವನ್ನು ಸಹಿಸಿಕೊಂಡಿರಲಾಗಲಿಲ್ಲವೆಂದರೆ ಅದಕ್ಕೆ ನನ್ನನ್ನು ದೂಷಿಸಬೇಕೆ? ನೀವು ಬಂದಿದ್ದೀರಿ. ನಿಮ್ಮ ಮನಸ್ಸು ಬದಲಿಸಿದ್ದರೂ ಬದಲಿಸಿರಬಹುದು. ಹಾಗಿದ್ದರೆ ನಾನು ಅಸಮಧಾನ ಪಡುವುದೂ ಇಲ್ಲ, ನಿಮ್ಮ ಬಗೆಗೆ ತೀರ್ಮಾನ ನೀಡಲೂ ಹೋಗುವುದಿಲ್ಲ, ಎಂದು ಈ ಕಾಗದ ನಿಮಗೆ ತಿಳಿಸುತ್ತದೆ. ನಾನು ನಿಮ್ಮ ಬಗೆಗೆ ತೀರ್ಮಾನಿಸಲು ಹೋಗುವುದಿಲ್ಲ, ಏಕೆಂದರೆ ನಿಮ್ಮ ಹೃದಯದ ಮೇಲೆ ನನಗೆ ಯಾವ ಅಧಿಕಾರವೂ ಇಲ್ಲ – ಅಂತಹುದು ನನ್ನ ಅದೃಷ್ಟ !

" 'ನೀವು ಗೌರವದ ವ್ಯಕ್ತಿ. ನನ್ನ ಈ ತಾಳ್ಮೆಗೆಟ್ಟ ಮಾತುಗಳನ್ನು ಓದಿ ನೀವು ನಗುವುದೂ ಇಲ್ಲ, ಕೋಪಗೊಳ್ಳುವುದೂ ಇಲ್ಲ. ನಿಮಗೆ ಈ ಕಾಗದ ಬರೆಯುತ್ತಿರುವವಳು ಒಬ್ಬ ಬಡ ಏಕಾಂಗಿ ಯುವತಿ, ಅವಳಿಗೆ ಮಾರ್ಗದರ್ಶನ ನೀಡಲು ಅಥವಾ ಸಲಹೆ ನೀಡಲು ಯಾರೂ ಇಲ್ಲ, ಎಂಬುದು ನಿಮಗೆ ನೆನಪಿನಲ್ಲಿದೆ. ನಾನು ನನ್ನ ಹೃದಯದ ಮೇಲೆ ಹಿಡಿತ ಇರಿಸಿಕೊಳ್ಳಲು ಎಂದೂ ಶಕ್ತಳಾಗಿಲ್ಲ. ನನ್ನ ಮನಸ್ಸಿನೊಳಗೆ ಒಂದು ನಿಮಿಷ ಮೂಡಿದ ಸಂದೇಹಕ್ಕಾಗಿ ನನ್ನನ್ನು ಕ್ಷಮಿಸಿ. ನಿಮ್ಮನ್ನು ಅಷ್ಟೊಂದು ಪ್ರೀತಿಸಿದ ಹಾಗೂ ಇನ್ನೂ ಪ್ರೀತಿಸುತ್ತಿರುವ ಯುವತಿಗೆ ನೋವುಂಟುಮಾಡುವುದನ್ನು ನಿಮ್ಮ ಮನಸ್ಸಿನಲ್ಲೂ ಯೋಚಿಸಲಾರಿರಿ.' "

"ಹೌದು, ಹೌದು. ನಾನು ಅಂದುಕೊಂಡದ್ದೂ ಹಾಗೆಯೇ ಇರಬೇಕೂಂತ," ನಾಸ್ತೆಂಕ ಕೂಗಿ ಹೇಳಿದಳು. ಅವಳ ಕಣ್ಣು ಆನಂದದಿಂದ ಬೆಳಗಿತು. "ಓಹ್, ನೀವು ನನ್ನ ಸಂದೇಹಗಳನ್ನೆಲ್ಲ ದೂರ ಮಾಡಿದ್ದೀರಿ. ದೇವರೇ ನಿಮ್ಮನ್ನು ನನ್ನ ಬಳಿಗೆ ಕಳುಹಿಸಿರಬೇಕು. ಧನ್ಯವಾದ ! ಧನ್ಯವಾದ !"

"ಯಾತಕ್ಕಾಗಿ – ದೇವರಿಂದಲೇ ನಿಮ್ಮ ಬಳಿಗೆ ಕಳುಹಿಸಲ್ಪಟ್ಟುದಕ್ಕಾಗಿಯೇ ?" ನಾನು ಹೇಳಿದೆ, ಅವಳ ಸಂತಸಭರಿತ ಮುಖವನ್ನು ಆನಂದದಿಂದ ನೋಡುತ್ತ.

"ಹೌದು, ಅದಕ್ಕಾದರೂ ಸರಿಯೆ."

"ಆಹ್ ನಾಸ್ತೆಂಕ ! ನಿಮಗೆ ಗೊತ್ತೆ, ಕೆಲವು ವೇಳೆ ನಾವು ಕೆಲವು ಜನರಿಗೆ, ನಮ್ಮೊಂದಿಗೆ ಅವರೂ ಇದೇ ಜಗತ್ತಿನಲ್ಲಿ ಬಾಳುತ್ತಿದ್ದಾರೆ ಎಂಬ ಕಾರಣದಿಂದಾಗಿಯಷ್ಟೆ, ಕೃತಜ್ಞರಾಗಿರುತ್ತೇವೆ. ನಾನು ನಿಮಗೆ ಕೃತಜ್ಞ, ಏಕೆಂದರೆ, ನಾವು

ಪರಸ್ಪರ ತಿಳಿಯುವಂತಾದೆವು; ಏಕೆಂದರೆ, ಈಗ ನನ್ನ ಉಳಿದ. ಜೀವಮಾನವೆಲ್ಲ ನಾನು ನಿಮ್ಮನ್ನು ನೆನಪಿನಲ್ಲಿಟ್ಟಿರುತ್ತೇನೆ !"

"ಸಾಕು, ಸಾಕು ! ಈಗ ನಾನು ಹೇಳುವುದನ್ನು ಕೇಳಿ: ತಾವು ಹಿಂದಿರುಗಿದ ಕೂಡಲೇ ನನ್ನ ಕೆಲವು ಮಿತ್ರರ ಬಳಿ ಒಂದು ಪತ್ರ ಇರಿಸಿ ತಾವು ಬಂದುದನ್ನು ತಕ್ಷಣವೇ ನನಗೆ ತಿಳಿಸಬೇಕೆಂದು ನಾವು ನಮ್ಮ ಮಧ್ಯೆಯೇ ಏರ್ಪಾಟು ಮಾಡಿ ಕೊಂಡಿದ್ದೆವು. ಆ ನನ್ನ ಮಿತ್ರರು ಒಳ್ಳೆಯ ಸರಳ ಜನರು. ಅವರಿಗೆ ಈ ವಿಷಯ ಏನೇನೂ ತಿಳಿಯದು. ಅಥವಾ ಅವರಿಗೆ ಪತ್ರ ಬರೆಯಲು ಆಗದೆ ಇದ್ದರೆ – ಏಕೆಂದರೆ ಪತ್ರದಲ್ಲಿ ನೀವು ಎಲ್ಲವನ್ನೂ ಹೇಳಲಾಗುವುದಿಲ್ಲ – ಅವರು ಇಲ್ಲಿಗೆ ಹಿಂದಿರುಗಿದ ದಿನವೇ ರಾತ್ರಿ ಹತ್ತು ಗಂಟೆಗೆ ಸರಿಯಾಗಿ ಈ ಸ್ಥಳಕ್ಕೆ, ನಾವು ನಮ್ಮ ಭೇಟಿಯನ್ನು ಏರ್ಪಡಿಸಿಕೊಂಡ ಸ್ಥಳಕ್ಕೇ, ಬರಬೇಕು. ಅವರು ಬಂದಿದ್ದಾರೆಂದು ನನಗೆ ಗೊತ್ತು. ಈಗಾಗಲೇ ಮೂರು ದಿನಗಳಾಗಿವೆ. ಅವರು ಇಲ್ಲಿಗೆ ಬಂದೂ ಇಲ್ಲ, ನನಗೆ ಪತ್ರವನ್ನೂ ಕಳುಹಿಸಿಲ್ಲ. ಹಗಲು ಹೊತ್ತು ಅಜ್ಜಿಯಿಂದ ತಪ್ಪಿಸಿ ಕೊಂಡು ಹೊರ ಬರುವುದು ನನಗೆ ತೀರ ಅಸಾಧ್ಯ. ಆದ್ದರಿಂದ ನೀವು ನಾಳೆ ನನ್ನ ಈ ಸನ್ಮಿತ್ರರ ಬಳಿಗೆ ಹೋಗಿ ಅವರ ಬಳಿ ನನ್ನ ಪತ್ರವನ್ನಿಟ್ಟು ಬರುವಿರಾ ? ಅವರು ಆತನ ಬಳಿಗೆ ಕಳುಹಿಸುತ್ತಾರೆ. ಉತ್ತರವೇನಾದರೂ ಇದ್ದರೆ ನೀವೇ ಅದನ್ನು ಇಲ್ಲಿಗೆ ಹತ್ತು ಗಂಟೆಗೆ ತಂದುಕೊಡಬೇಕು."

"ಆದರೆ ಪತ್ರ ! ಪತ್ರ ! ನೀವು ಮೊದಲು ಪತ್ರ ಬರೆಯಬೇಕಲ್ಲವೇ ! ನಾಡಿ ದ್ದರವರೆಗೂ ಅದು ಸಾಧ್ಯವಿಲ್ಲ ಅಂತಾಯಿತು."

"ಪತ್ರ..." ನಾಸ್ತೆಂಕ ಗೊಂದಲದಲ್ಲಿ ಬಿದ್ದವಳಂತೆ ಹೇಳಿದಳು. "ಪತ್ರ..."

ಅವಳು ಮಾತು ಮುಗಿಸಲಿಲ್ಲ. ಮೊದಲು ನನ್ನಿಂದ ಅತ್ತ ತಿರುಗಿದಳು. ಅನಂತರ ಗುಲಾಬಿಯಂತೆ ರಂಗೇರಿದಳು. ಆಮೇಲೆ ಇದ್ದಕ್ಕಿದ್ದಂತೆ ಕಾಗದ ನನ್ನ ಕೈಲಿದ್ದುದನ್ನು ನಾನು ಕಂಡೆ. ಸ್ಪಷ್ಟವಾಗಿಯೇ ಅವಳು ಅದನ್ನು ತುಂಬ ಹಿಂದೆಯೇ ಬರೆದಿದ್ದಳು. ವಿಳಾಸ ಬರೆದು ಸೀಲು ಮಾಡಿ, ಎಲ್ಲ ಸಿದ್ಧವಾಗಿರಿಸಿದ್ದಳು. ಕೋಮಲವಾದ, ನವುರಾದ ನೆನಪುಗಳ ಕಂತೆ ನನ್ನ ಮನಸ್ಸಿನಲ್ಲಿ ಮಿಂಚಿ ಹೋಯಿತು.

"ರೊ-ರೊ, ಸಿ-ಸಿ, ನಾ-ನಾ" ನಾನು ಹೇಳತೊಡಗಿದೆ.

"ರೊಸೀನಾ !" ನಾವಿಬ್ಬರೂ ಒಟ್ಟಿಗೇ ಹಾಡಿದೆವು. ನಾನು ನನ್ನ ಆನಂದದಲ್ಲಿ ಅವಳನ್ನು ಬಹುಮಟ್ಟಿಗೆ ಅಪ್ಪಿಕೊಂಡೇ ಬಿಟ್ಟೆ. ಅವಳು ನಾಚಿ ನೀರಾದಳು. ಆನಂದಭಾಷ್ಪ ಸುರಿಸಿದಳು. ಅದು ಅವಳ ಕಪ್ಪು ರೆಪ್ಪೆ ಕೂದಲುಗಳ ಮೇಲೆ ಪುಟ್ಟ ಮುತ್ತಿನ ಮಣಿಗಳಂತೆ ಹೊಳೆಯಿತು.

"ಸಾಕು, ಸಾಕು ! ಹೋಗಿ ಬರುತ್ತೇನೆ, ಹೋಗಿ ಬರುತ್ತೇನೆ, ಸಧ್ಯಕ್ಕೆ !"

ಅವಳು ಅವಸರದಲ್ಲಿ ಹೇಳಿದಳು. "ಇಲ್ಲಿದೆ ಪತ್ರ. ಇಲ್ಲಿದೆ ಅದನ್ನು ತಲುಪಿಸ ಬೇಕಾದ ವಿಳಾಸ. ನಾಳಿನವರೆಗೂ, ನಮಸ್ಕಾರ !"

ಅವಳು ನನ್ನ ಕೈಗಳನ್ನು ಆತ್ಮೀಯತೆಯಿಂದ ಅವುಕಿದಳು, ತಲೆದೂಗಿದಳು, ಅಂಬಿನಂತೆ ತನ್ನ ಮನೆಯ ಗಲ್ಲಿಗೆ ಶೀಘ್ರವಾಗಿ ಹೋದಳು. ನಾನು ಇದ್ದಲ್ಲೇ ತುಂಬ ಹೊತ್ತು ಇದ್ದೆ. ಅವಳು ಹೋದ ದಿಕ್ಕಿನಲ್ಲೇ ತುಂಬ ಹೊತ್ತು ನೋಡು ತ್ತಿದ್ದೆ.

"ನಾಳಿನವರೆಗೆ ! ನಾಳಿನವರೆಗೆ !" ಅವಳು ನನ್ನ ದೃಷ್ಟಿಯಿಂದ ಮರೆಯಾದ ಮೇಲೆ ಈ ಮಾತುಗಳು ನನ್ನ ಮನಸ್ಸಿನಲ್ಲಿ ಗುಂಯಿಗುಟ್ಟಿದವು.

# ಮೂರನೆಯ ರಾತ್ರಿ

ಇಂದು ಹಗಲಿನಲ್ಲಿ ಒಂದೇ ಸಮನಾಗಿ ಮಳೆ ಸುರಿಯುತ್ತಿತ್ತು, ಉತ್ಸಾಹ ಶೂನ್ಯವಾಗಿತ್ತು. ಬೆಳಕಿನ ಒಂದು ಕಿರಣವೂ ಕಾಣಬರುತ್ತಿರಲಿಲ್ಲ. ನನಗೆ ಬರಲಿದ್ದ ಒಂಟಿತನದ ಮುಪ್ಪಿನಲ್ಲಿರುವಂಥ ಹಗಲಾಗಿದ್ದಿತು ಅದು. ಇದೀಗ ವಿಚಿತ್ರ ಚಿಂತನೆ ಗಳು ನನ್ನ ಮೇಲೆ ಬಂದು ಮುಸುಕುತ್ತಿವೆ. ಅಸ್ಪಷ್ಟವಾದ ಭಾವನೆಗಳು ಅಸ್ಪಷ್ಟ ವಾದ ಸಮಸ್ಯೆಗಳು ನನ್ನ ಮನಸ್ಸನ್ನು ಮುತ್ತುತ್ತಿವೆ. ಆದರೂ ಅವಕ್ಕೆ ಸ್ಪಷ್ಟತೆ ನೀಡುವ ಇಚ್ಛೆಯಾಗಲೀ ಶಕ್ತಿಯಾಗಲೀ ಹೇಗೋ ನನ್ನಲ್ಲಿಲ್ಲ. ಇಲ್ಲ, ಇವನ್ನೆಲ್ಲ ಪರಿಹರಿಸುವುದು ನನ್ನ ಕಾರ್ಯವಲ್ಲ !

ಇಂದು ರಾತ್ರಿ ನಾವು ಸಂಧಿಸುವುದಿಲ್ಲ. ಕಳೆದ ರಾತ್ರಿ ನಾವು ಪರಸ್ಪರರಿಗೆ ವಿದಾಯ ಹೇಳಿದಾಗ ಆಗಸದಲ್ಲಿ ಮೋಡಗಳು ಕೂಡತೊಡಗಿದ್ದವು, ಮಂಜು ಕವಿಯತೊಡಗಿದ್ದಿತು. ನಾಳೆ ಹವಾಗುಣ ಚೆನ್ನಾಗಿರುವುದಿಲ್ಲವೆಂದು ನಾನು ಹೇಳಿದೆ. ಅವಳು ಏನೂ ಉತ್ತರಿಸಲಿಲ್ಲ. ತನ್ನನ್ನು ನಿರಾಶೆಗೊಳಿಸಿಕೊಳ್ಳಲು ಅವಳಿಗೆ ಇಷ್ಟವಿರಲಿಲ್ಲ; ಅವಳಿಗೆ ಈ ದಿನ ತಿಳಿಯಾಗಿ ಬೆಳಕಿನಿಂದ ಕೂಡಿ ಇರಲಿದ್ದಿತು. ಅವಳ ಸುಖವನ್ನು ಮುಚ್ಚುವಂಥ ಅತ್ಯಂತ ಸಣ್ಣ ಮೋಡದ ತುಣುಕೂ ಇರುತ್ತಿ ರಲಿಲ್ಲ.

"ಮಳೆ ಬಂದರೆ ನಾವು ಸಂಧಿಸುವುದಿಲ್ಲ. ನಾನು ಬರುವುದಿಲ್ಲ." ಅವಳು ಹೇಳಿದ್ದಳು.

ಇಂದಿನ ಮಳೆಯನ್ನು ಅವಳು ಗಮನಿಸಿಯೂ ಇರುತ್ತಿರಲಿಲ್ಲವೆಂದು ನಾನು ಭಾವಿಸಿದ್ದೆ. ಆದರೂ ಅವಳು ಬಂದಿರಲಿಲ್ಲ.

ಕಳೆದ ರಾತ್ರಿ ನಾವು ನಮ್ಮ ಮೂರನೆಯ ಭೇಟಿಯನ್ನು, ನಮ್ಮ ಮೂರನೆಯ ಶ್ವೇತ ರಾತ್ರಿಯನ್ನು, ಹೊಂದಿದ್ದೆವು....

ಆದರೆ ಸುಖಸಂತೋಷಗಳ ಮೂಲಕ ಯಾರೇ ಆಗಲಿ ಎಂಥ ಚೆಲುವು ಪಡೆಯುತ್ತಾರೆಂಬುದು ನಿಜಕ್ಕೂ ಅದ್ಭುತವಾದುದು! ಅಂತಹವರ ಹೃದಯ ಹೇಗೆ ಪ್ರೇಮದಿಂದ ತುಂಬಿ ತುಳುಕುತ್ತದೆ! ನೀವು ನಿಮ್ಮೆಲ್ಲ ಪ್ರೇಮವನ್ನೂ ಇನ್ನೊಂದು ಹೃದಯಕ್ಕೆ ತುಂಬ ಬಯಸುತ್ತೀರ. ನಿಮ್ಮ ಸುತ್ತಮುತ್ತ ಇರುವ ಎಲ್ಲವೂ ಆನಂದೋತ್ಸಾಹಗಳಿಂದ ಅನುರಣಿಸಬೇಕೆಂದು ನೀವು ಬಯಸುತ್ತೀರ. ಆನಂದ – ಅದು ಎಷ್ಟು ಸಾಂಕ್ರಾಮಿಕ! ಕಳೆದ ರಾತ್ರಿ ಅವಳ ಮಾತುಗಳಲ್ಲಿ ಎಂಥ ಕೋಮಲತೆ ಇದ್ದಿತು, ಅವಳ ಹೃದಯದಲ್ಲಿ ಎಂಥ ಕರುಣೆ ಇದ್ದಿತು. ಅವಳು ನನ್ನ ಬಗೆಗೆ ಎಷ್ಟು ಪ್ರೀತಿಯಿಂದಿದ್ದಳು, ನನ್ನ ಭಾವನೆಗಳ ಬಗೆಗೆ ಎಂಥ ಸಹಾನುಭೂತಿ ಹೊಂದಿದ್ದಳು. ಎಷ್ಟು ಆಪ್ಯಾಯಮಾನವಾದ ಧ್ವನಿಯಲ್ಲಿ ನನಗೆ ಭರವಸೆ ನೀಡಿದಳು, ಧೈರ್ಯ ನೀಡಿದಳು! ಓಹ್, ಅವಳ ಸುಖದಿಂದ ಎಂಥ ಬೆಡಗುಬಿನ್ನಾಣಗಳ ಜಗತ್ತು ಸ್ಫುರಿಸಿದ್ದಿತು! ಮತ್ತೆ ನಾನು... ನಾನು ಅದನ್ನೆ ನೈಜವೆಂದು ಭಾವಿಸಿದೆ. ನಾನು ಬಗೆದೆ, ಅವಳು...

ಅಯ್ಯೋ ದೇವರೇ, ನಾನು ಹಾಗೆಲ್ಲ ಹೇಗೆ ಭಾವಿಸಲು ಸಾಧ್ಯವಿತ್ತು? ಎಲ್ಲವೂ ಮತ್ತೊಬ್ಬರಿಗೆ ಆಗಲೇ ಸೇರಿದ್ದಾಗ, ನನಗೆ ಏನೂ ಸೇರಿರದಿದ್ದಾಗ, ನಾನು ಹೇಗೆ ಅದನ್ನು ಅಷ್ಟು ಕಾಣಲಾರದೆ ಹೋದೆ. ಅವಳ ಕೋಮಲ ಮನೋಭಾವ, ಸಹಾನುಭೂತಿ, ಪ್ರೇಮ – ಹೌದು ನನಗಾಗಿ ಅವಳ ಪ್ರೇಮವೂ ಸಹ – ಆ ಬೇರೊಬ್ಬನನ್ನು ಸಂಧಿಸಲಿದ್ದುದರಲ್ಲಿ ಅವಳು ಹೊಂದಿದ್ದ ಆನಂದ ಬಿಟ್ಟು ಬೇರೇನೂ ಆಗಿರಲಿಲ್ಲ, ತಾನು ಪಡೆಯಲಿದ್ದ ಸುಖವನ್ನು ನನ್ನೊಂದಿಗೆ ಪಾಲ್ಗೊಳ್ಳಲು ಅವಳ ಕಾತುರತೆ ಬಿಟ್ಟು ಬೇರೇನೂ ಆಗಿರಲಿಲ್ಲ... ಏಕೆಂದರೆ, ಅವನು ಬರದೆ ಹೋದಾಗ, ಅವನಿಗಾಗಿ ನಾವು ವಿಫಲವಾಗಿ ಕಾದಾಗ, ಅವಳೆಷ್ಟು ಕೋಪಗೊಂಡಳು, ಎಷ್ಟು ಹೆದರಿದಳು, ಎಷ್ಟು ಅಂಜಿದಳು. ಅವಳ ಚಲನೆಗಳೆಲ್ಲವುಗಳ, ಅವಳ ಮಾತುಗಳೆಲ್ಲವುಗಳ ಲಾಘವತೆ ಹೋಯಿತು, ವಿನೋದ ಹಾಗೂ ಸರಸಗಳು ಹೋದವು. ವಿಚಿತ್ರವೆನ್ನುವಂತೆ ಅವಳು ನನ್ನತ್ತ ತನ್ನ ಗಮನವನ್ನು ಇಮ್ಮಡಿ ಹೆಚ್ಚಿಸಿದಳು. ತಾನು ಅಂದು ಪಡೆಯುವುದಾಗಿ ಆಶಿಸಿದ್ದ, ಆದರೆ ಪಡೆಯದೆ ಹೋಗಬಹುದೇನೋ ಎಂದು ಯೋಚಿಸಲೂ ಹೆದರಿದ್ದ, ಆ ಎಲ್ಲ ಪ್ರೇಮಾದರಗಳನ್ನೂ ಅವಳು ನನ್ನ ಮೇಲೆ ಸಹಜಪ್ರವೃತ್ತಿಯೊಂದಿಗೆ ಸುರಿಯ ಬಯಸಿದ್ದಳು. ನನ್ನ ನಾಸ್ತೆಂಕ ಎಷ್ಟು ಗಾಬರಿಗೊಂಡು ದಿಗ್ಭ್ರಾಂತಳಾದಳೆಂದರೆ, ನಾನು ಅವಳನ್ನು ಪ್ರೀತಿಸುತ್ತಿದ್ದೆ ಎಂಬುದನ್ನು ಅವಳು ಕೊನೆಗೆ ಅರ್ಥ

ಮಾಡಿಕೊಂಡು ನನ್ನ ನತದೃಷ್ಟ ಪ್ರೀತಿಯ ಮೇಲೆ ಕರುಣೆ ತೋರತೊಡಗಿ ದಳೆಂದು ನನ್ನ ನಂಬಿಕೆ. ನಾವೇ ಸ್ವತಃ ಅಸುಖಿಯಾಗಿದ್ದಾಗ ಇತರರ ಅಸುಖದ ಬಗೆಗೆ ನಾವು ಹೆಚ್ಚು ಸಂವೇದನಾಶೀಲರಾಗಿರುತ್ತೇವೆ; ಆಗ ಭಾವನೆ ನಮ್ಮಲ್ಲಿ ನಾಶವಾಗುವುದಿಲ್ಲ, ಆದರೆ ಸಾರವರ್ಧಿತವಾಗಿ ರುತ್ತದೆ...

ನಾನು ಅವಳಲ್ಲಿಗೆ ತುಂಬಿದ ಹೃದಯದಿಂದ ಹೋದೆ, ಭೇಟಿಯ ಸಮಯ ಬರುವುದಕ್ಕಾಗಿಯೇ ಕಾತರತೆಯಿಂದ ಕಾದೆ. ಈಗ ನಾನು ಯಾವ ಭಾವನೆ ಹೊಂದಿದ್ದೇನೋ ಇಂತಹುದು ಆಗುವುದೆಂಬ ಮುನ್ನರಿವು ಎಳ್ಳಷ್ಟೂ ನನಗಿರಲಿಲ್ಲ. ಅದು ಹೀಗೆ ಕೊನೆಗಾಣುವುದೆಂಬ ಮುನ್ನರಿವು ನನಗಿರಲಿಲ್ಲ. ಅವಳು ಆನಂದವನ್ನು ಮೊರಸೂಸುತ್ತಿದ್ದಳು, ಅವನ ಉತ್ತರಕ್ಕಾಗಿ ಕಾಯುತ್ತಿದ್ದಳು. ಅವನೇ ಸ್ವತಃ ಅವಳ ಉತ್ತರವಾಗಬೇಕಿದ್ದಿತು. ಅವನು ಬರಬೇಕಿದ್ದಿತು, ಅವಳ ಕರೆಗೆ ಓಗೊಟ್ಟು, ಓಡೋಡಿ ಬರಬೇಕಿದ್ದಿತು. ಅವಳಾಗಲೇ ಅಲ್ಲಿ ನನಗಿಂತ ಒಂದು ಗಂಟೆ ಮುಂಚೆಯೇ ಇದ್ದಳು. ಮೊದಲು ಎಲ್ಲವೂ ಅವಳನ್ನು ವಿನೋದ ಗೊಳಿಸಿತು. ನಾನು ಆಡಿದ ಪ್ರತಿಯೊಂದು ಮಾತಿಗೂ ಅವಳು ನಕ್ಕಳು. ನನ್ನ ಹೃದಯದಲ್ಲೇನಿದ್ದಿತು ಎನ್ನುವುದನ್ನು ನಾನವಳಿಗೆ ತಿಳಿಸಲಿದ್ದೆ, ಆದರೆ ತಿಳಿಸಲಿಲ್ಲ.

"ನನಗೆ ಇಷ್ಟು ಸಂತೋಷವಾಗಿದೆ ಏಕೆ ನಿಮಗೆ ಗೊತ್ತೆ?" ಅವಳು ಕೇಳಿ ದಳು. "ನಿಮ್ಮ ಬಗೆಗೂ ನಾನು ಏಕೆ ಅಷ್ಟು ಸಂತೋಷಗೊಂಡಿದ್ದೇನೆ? ನಿಮ್ಮನ್ನು ಇಂದು ಏಕೆ ಅಷ್ಟೊಂದು ಪ್ರೀತಿಸುತ್ತೇನೆ?"

"ಇಲ್ಲ, ಏಕೆ?" ನಾನು ಕೇಳಿದೆ. ನನ್ನ ಹೃದಯ ಕಂಪಿಸಿತು.

"ನಾನು ನಿಮ್ಮನ್ನು ಇಷ್ಟೊಂದು ಪ್ರೀತಿಸುತ್ತೇನೇಕೆಂದರೆ, ನೀವು ನನ್ನಲ್ಲಿ ಅನುರಕ್ತರಾಗಿಲ್ಲ, ಎಂಬ ಕಾರಣದಿಂದ. ಬೇರೆ ಯಾರಾದರೂ ನಿಮ್ಮ ಸ್ಥಳದಲ್ಲಿದ್ದರೆ ನನ್ನನ್ನು ಸತಾಯಿಸಿ ಚಿಂತೆಗೊಳಪಡಿಸುತ್ತಿದ್ದರು, ಉತ್ಸಾಹ ಶೂನ್ಯರಾಗುತ್ತಿದ್ದರು, ಬಿಸುಸುಯ್ಯುತ್ತಿದ್ದರು. ಆದರೆ ನೀವು ಎಷ್ಟು ಒಳ್ಳೆಯ ವರು!"

ಹೀಗೆಂದು ಅವಳು ನನ್ನ ಕೈಯನ್ನು ಎಷ್ಟು ಗಟ್ಟಿಯಾಗಿ ಅವುಕಿದಳೆಂದರೆ, ನಾನು ನೋವಿನಿಂದ ಕೂಗಲಿದ್ದೆ. ಅವಳು ನಕ್ಕಳು.

"ನೀವು ಎಂತಹ ಒಳ್ಳೆಯ ಸ್ನೇಹಿತರು!" ಅವಳೆಂದಳು ತುಂಬ ಗಹನವಾದ ಸ್ವರದಲ್ಲಿ, ಒಂದು ನಿಮಿಷದನಂತರ. "ದೇವರೇ ನಿಮ್ಮನ್ನು ನನ್ನ ಬಳಿಗೆ ಕಳು ಹಿಸಿದ್ದಾನೆ. ಯೋಚನೆ ಮಾಡಿ ನೋಡಿ, ನೀವು ನನ್ನ ಬಳಿ ಈಗ ಇರದೆ ಇದ್ದರೆ

ನನ್ನ ಅವಸ್ಥೆ ಏನಾಗುತ್ತಿದ್ದಿತು? ನೀವು ಎಷ್ಟು ನಿಸ್ವಾರ್ಥರು! ನನ್ನ ಬಗೆಗೆ ನಿಮ್ಮ ಪ್ರೇಮ ಎಷ್ಟು ಉದಾರವಾದುದು! ನಾನು ಮದುವೆಯಾದ ಮೇಲೆ ನಾವಿಬ್ಬರೂ ಆಪ್ತ ಮಿತ್ರರಾಗಿರೋಣ, ಸೋದರ ಸೋದರಿಯರಿಗಿಂತ ಹೆಚ್ಚು ಆಪ್ತರಾಗಿರೋಣ. ನಾನು ನಿಮ್ಮನ್ನೂ ಬಹುಮಟ್ಟಿಗೆ ಅವರಷ್ಟೇ ಪ್ರೀತಿಸುತ್ತೇನೆ."

ಒಂದು ಘಳಿಗೆ ನಾನು ತುಂಬ ಭಯಂಕರವಾಗಿ ದುಃಖಿತನಾದ ಭಾವನೆ ಪಡೆದೆ. ಆದರೆ ನಗೆಯಂತಹುದು ಏನೋ ನನ್ನ ಹೃದಯದಲ್ಲಿ ಸಂಚಲಿಸುತ್ತಿದ್ದಿತು.

"ನೀವು ಉದ್ರೇಕಗೊಂಡಿದ್ದೀರ" ನಾನೆಂದೆ. "ನೀವು ಅಂಜಿದ್ದೀರ. ಅವರು ಬರುವುದಿಲ್ಲವೆಂದು ನೀವು ಭಾವಿಸಿದ್ದೀರ."

"ದೇವರಾಣೆಗೂ ಇಲ್ಲ!" ಅವಳು ಉತ್ತರಿಸಿದಳು. "ನಾನು ಸಂತೋಷದಿಂದ ಇಷ್ಟು ತುಂಬಿರದೆ ಇದ್ದಿದ್ದರೆ ನಿಮ್ಮ ನಿಂದನೆಗಾಗಿಯೂ ನಿಮ್ಮ ವಿಶ್ವಾಸ ರಾಹಿತ್ಯತೆಗಾಗಿಯೂ ಅತ್ತುಬಿಡುತ್ತಿದ್ದೆನಷ್ಟೆ. ಆದರೆ ನೀವು ಅನೇಕ ದಿನಗಳ ಯೋಚನೆಗಾಗಿ ಗ್ರಾಸ ಒದಗಿಸಿದ್ದೀರ. ಅದರ ಬಗೆಗೆ ನಾನು ಅನಂತರ ಯೋಚಿಸುತ್ತೇನೆ. ಈಗ ನೀವು ಏನು ಹೇಳಿದಿರೋ ಅದು ನಿಜ ಎಂದು ಒಪ್ಪಿಕೊಳ್ಳುತ್ತೇನೆ. ಹೌದು, ನಿಜ. ಹೇಗೋ ಏನೋ ಅಂತೂ ನಾನು ಇಡೀಯಾಗಿ ಕ್ಷೋಭೆಗೊಂಡಿದ್ದೇನೆ. ಸಂಪೂರ್ಣ ನಿರೀಕ್ಷೆಯಲ್ಲಿದ್ದೇನೆ. ನನ್ನ ಭಾವನೆಗಳು ಹೇಗೋ ಏನೋ ತುಂಬ ಸುಲಭವಾಗಿ ಘಾಸಿಗೊಳಗಾಗಬಹುದಾದ ಸ್ಥಿತಿಯಲ್ಲಿವೆ. ಆದರೆ ಸಾಕು. ನಮ್ಮ ಭಾವನೆಗಳ ಬಗೆಗೆ ಈಗ ಯೋಚಿಸುವುದು ಬೇಡ."

ಹೆಜ್ಜೆಗಳ ಸದ್ದು ನಮ್ಮನ್ನು ಬೆಚ್ಚುಬೀಳಿಸಿತು. ಮಬ್ಬಿನಿಂದ ವ್ಯಕ್ತಿಯೊಬ್ಬ ಹೊರಬಂದು ನಮ್ಮತ್ತವೇ ನಡೆಯತೊಡಗಿದ. ನಾವಿಬ್ಬರೂ ನಡುಗಿದೆವು. ಅವಳು ಇನ್ನೇನು ಕೂಗುವುದರಲ್ಲಿದ್ದಳು. ನಾನು ಅವಳ ಕೈ ಬಿಟ್ಟುಕೊಟ್ಟು ಅವಳನ್ನು ಬಿಟ್ಟುಹೋಗುವವನಿದ್ದೆ. ಆದರೆ ನಮ್ಮ ಎಣಿಕೆ ತಪ್ಪಾಗಿತ್ತು. ಅದು ಅವನಾಗಿರಲಿಲ್ಲ.

"ನಿಮಗೆ ಯಾತರ ಹೆದರಿಕೆ? ನನ್ನ ಕೈಯನ್ನೇಕೆ ಬಿಟ್ಟುಕೊಟ್ಟಿರಿ?" ಅವಳು ಕೇಳಿ ತನ್ನ ಕೈಯನ್ನು ಮತ್ತೆ ಕೊಟ್ಟಳು. "ಹೌದು, ಯಾಕಾಗಬಾರದು? ನಾವಿಬ್ಬರೂ ಒಟ್ಟಿಗೆಯೇ ಅವರನ್ನು ಸಂಧಿಸೋಣ. ನಾವು ಪರಸ್ಪರರನ್ನು ಎಷ್ಟು ಪ್ರೀತಿಸುತ್ತೇವೆ ಅನ್ನುವುದನ್ನು ಅವರು ಕಾಣಲೆಂದು ನಾನು ಬಯಸುತ್ತೇನೆ."

"ನಾವು ಪರಸ್ಪರ ಎಷ್ಟು ಪ್ರೀತಿಸುತ್ತೇವೆ!" ನಾನು ಮರುನುಡಿದೆ.

"ಓಹ್ ನಾಸ್ತೆಂಕ, ಓಹ್ ನಾಸ್ತೆಂಕ!" ನಾನು ಮನಸ್ಸಿನಲ್ಲೇ ಹೇಳಿಕೊಂಡೆ. "ಈ ಒಂದು ಪದ ನನಗೆ ಎಷ್ಟು ಅರ್ಥಪೂರ್ಣವಾದುದು! ಇಂತಹ ಪ್ರೇಮವು ಆತ್ಮದ ಮೇಲೆ ಬಹು ಭಾರಿ ತೂಕ ಹಾಕುತ್ತದೆ, ಹೃದಯವನ್ನು ನಿರುತ್ಸಾಹ ಗೊಳಿಸುತ್ತದೆ. ನಿಮ್ಮ ಕೈ ತಣ್ಣಗಿದೆ. ನನ್ನದು ಬೆಂಕಿಯಂತೆ ಬಿಸಿ. ಓಹ್, ನಾಸ್ತೆಂಕ, ಎಷ್ಟು ಕುರುಡರು ನೀವು!... ಓಹ್, ಸುಖಿಯಾದವನೊಬ್ಬ ಕೆಲವು ವೇಳೆ ಎಷ್ಟು ಸಹಿಸಲಾಗದಷ್ಟು ಅಪ್ರಿಯನಾಗಿರುತ್ತಾನೆ! ಆದರೆ ನಾನು ನಿಮ್ಮ ಮೇಲೆ ಕೋಪ ಗೊಳ್ಳಲಾರೆ!"

ಕೊನೆಗೆ ನಾನು ನನ್ನ ಭಾವನೆಗಳನ್ನು ಹತ್ತಿಕ್ಕಿ ಇರಿಸದಾದೆ.

"ನಾಸ್ತೆಂಕ, ನಿಮಗೆ ಗೊತ್ತೆ, ಕಳೆದ ರಾತ್ರಿಯಿಂದ ನನ್ನ ಅನುಭವ ಎಂತ ಹುದು ಅಂತ?"

"ಇಲ್ಲ, ಎಂತಹುದು? ಬೇಗ ಹೇಳಿ. ಇದುವರೆವಿಗೂ ಯಾಕೆ ಹೇಳ ಲಿಲ್ಲ?"

"ಮೊದಲಿಗೆ, ನಾಸ್ತೆಂಕ. ನೀವು ಕೊಟ್ಟ ಕೆಲಸಗಳನ್ನೆಲ್ಲ ಮಾಡಿದ ಮೇಲೆ, ನಿಮ್ಮ ಸನ್ಮಿತ್ರರ ಬಳಿಗೆ ಹೋಗಿ ಕಾಗದ ತಲುಪಿಸಿದ ಮೇಲೆ, ನಾನು ಮನೆಗೆ ಬಂದೆ... ಮನೆಗೆ ಬಂದು ನಿದ್ರೆ ಹೋದೆ."

"ಅಷ್ಟೇಯೇ?" ಅವಳು ನಗುತ್ತ ಮಧ್ಯೆ ನುಡಿದಳು.

"ಹೌದು. ಬಹುಮಟ್ಟಿಗೆ ಅಷ್ಟೆ" ನಾನು ಪ್ರಯಾಸದಿಂದ ಉತ್ತರಿಸಿದೆ. ಏಕೆಂದರೆ ಆಗಲೇ ಹುಚ್ಚು ಕಣ್ಣೀರು ನನ್ನ ಕಣ್ಣುಗಳಲ್ಲಿ ತುಂಬಿ ಬರುತ್ತಿತ್ತು. "ನಾನು ನಮ್ಮ ಭೇಟಿಯ ಕಾಲಕ್ಕೆ ಒಂದು ಗಂಟೆ ಮುಂಚೆ ಎದ್ದೆ. ಆದರೆ ಮಲ ಗಿದ್ದೆನೆಂದೇ ನನಗೆ ಅನಿಸಲಿಲ್ಲ. ನನಗೆ ಏನಾಯಿತೋ ತಿಳಿಯದು. ಅದೆಲ್ಲವನ್ನೂ ನಿಮಗೆ ಹೇಳಬೇಕೆಂದು ನಾನಿಲ್ಲಿಗೆ ಬಂದೆ. ನನಗೆ ಕಾಲ ನಿಂತಲ್ಲೇ ನಿಂತಂತೆ ಕಂಡು ಬಂದಿದ್ದಿತು, ಆ ಘಳಿಗೆಯಿಂದ ಒಂದು ಭಾವನೆಯುಷ್ಟೆ, ಒಂದು ಸಂವೇದನೆಯುಷ್ಟೆ ಸದಾ ಕಾಲಕ್ಕೂ ನನ್ನೊಂದಿಗಿರುವುದಿದ್ದಿತು, ಆ ಘಳಿಗೆಯು ನನಗೆ ಚಿರವಾಗಿ ಇರ ಲಿದ್ದಿತು, ನನಗೆ ಸಂಬಂಧಿಸಿ ಅಂದಿನಿಂದ ಎಲ್ಲ ಜೀವನವೂ ನಿಂತಿದ್ದಿತೇನೋ ಎಂಬಂತೆ – ಎಂಬುದೆಲ್ಲವನ್ನೂ ನಿಮಗೆ ತಿಳಿಸಬೇಕೆಂದು ಬಂದೆ. ನಾನು ನಿದ್ರೆಯಿಂದ ಎಚ್ಚೆತ್ತಾಗ ಬಹಳ ಕಾಲದಿಂದ ಸುಪರಿಚಿತವಾದಂಥ ರಾಗವೊಂದು ನನಗೆ ನೆನ ಪಿಗೆ ಬರುತ್ತಿದ್ದಿತೆಂದು ನನಗನಿಸಿತು. ಸುಮಧುರವಾದುದು, ಒಮ್ಮೆ ಎಲ್ಲೋ ಕೇಳಿ, ಅನಂತರ ಮರೆಯಲಾದುದು. ಅದು ನನ್ನ ಇಡೀ ಜೀವನ ನನ್ನ ಹೃದಯದಿಂದ ಹೊರಹೊಮ್ಮಲು ಪ್ರಯಾಸಪಡುತ್ತಿದ್ದಿತು. ಈಗಷ್ಟೆ..."

"ಅಬ್ಬಾ! ಅಬ್ಬಾ!" ನಾಸ್ತೆಂಕ ಮಧ್ಯೆ ನುಡಿದಳು. "ಇದೆಲ್ಲ ಏನು? ನೀವು ಹೇಳುತ್ತಿರುವ ಒಂದು ಪದವೂ ನನಗೆ ಅರ್ಥವಾಗುತ್ತಿಲ್ಲ!"

“ಆಹ್, ನಾಸ್ತೆಂಕ! ಈ ವಿಚಿತ್ರ ಸಂವೇದನೆಯನ್ನು ನೀವೂ ಅನುಭವಿಸಿ ಕಾಣುವಂತೆ ಮಾಡಬೇಕೆಂದು ನಾನು ಎಷ್ಟು ಬಯಸಿದ್ದೆ...” ನಾನು ದುಃಖಾಕ್ರಾಂತ ವಾದ ಧ್ವನಿಯಲ್ಲಿ ಪ್ರಾರಂಭಿಸಿದೆ. ಆದರೂ ಆ ಧ್ವನಿಯಲ್ಲಿ, ಅತ್ಯಂತ ಸಣ್ಣದಾ ದರೂ ಸರಿ, ಆಸೆಯ, ಒಂದು ಕಣವಿದ್ದಿತು.

“ಮುಷ್, ಮುಂದುವರಿಸಬೇಡಿ” ಅವಳೆಂದಳು, ಕ್ಷಣದಲ್ಲಿ ಅವಳು ಎಲ್ಲವನ್ನೂ ಅರಿತಿದ್ದಳು, ಬುದ್ಧಿವಂತ ಹುಡುಗಿ!

ಇದ್ದಕ್ಕಿದ್ದಂತೆ ಅವಳು ಸ್ವಲ್ಪ ಅಸಾಮಾನ್ಯವೇ ಅನ್ನುವಂಥ ರೀತಿಯಲ್ಲಿ ವಾಚಾಳಿ ಯಾದಳು, ಸಂತಸಭರಿತಳಾದಳು, ತಮಾಷೆ ಮಾಡುವವಳಂತಾದಳು. ನನ್ನ ತೋಳು ಗಳನ್ನು ಹಿಡಿದುಕೊಂಡು ಗಟ್ಟಿಯಾಗಿ ನಗುತ್ತ ನನ್ನನ್ನೂ ನಗುವಂತೆ ಮಾಡಲು ಯತ್ನಿಸಿದಳು. ಗೊಂದಲದಲ್ಲಿ ಬಿದ್ದ ನಾನು ಆಡಿದ ಪ್ರತಿಯೊಂದು ಪದವೂ ಅವಳಲ್ಲಿ ದೀರ್ಘ ನಗೆಯ ಅಲೆಗಳನ್ನೇ ಎಬ್ಬಿಸಿತು. ನಾನು ಕೋಪಗೊಳ್ಳತೊಡಗಿದ್ದೆ. ಆಗ ಅವಳು ಇದ್ದಕ್ಕಿದ್ದಂತೆ ತನ್ನ ಮಾತನ್ನು ಲಲ್ಲೆಗಾತಿಯ ಧ್ವನಿಗೆ ಬದಲಿ ಸಿದಳು.

“ನಿಮಗೆ ಗೊತ್ತೆ. ನೀವು ನನ್ನಲ್ಲಿ ಅನುರಕ್ತರಾಗಿಲ್ಲದುದು ನನ್ನ ಮನಸ್ಸನ್ನು ಸ್ವಲ್ಪ ವ್ಯಗ್ರಗೊಳಿಸೇ ಇದೆ: ಇದಾದ ಮೇಲೆ ಮನುಷ್ಯ ಹೃದಯದ ಒಗಟನ್ನು ಬಿಡಿಸಿ! ಏನೇ ಆಗಲಿ, ಮಾನ್ಯ ವಜ್ರ ಹೃದಯಿಯೇ, ನನ್ನ ಬಿಚ್ಚು ಮನಸ್ಸಿಗಾಗಿ ನೀವು ನನ್ನನ್ನು ಹೊಗಳದೆ ಇರಲಾರಿರಿ. ನಾನು ಎಲ್ಲವನ್ನೂ ಹೇಳುತ್ತೇನೆ, ನನ್ನ ತಲೆಯಲ್ಲಿ ಸುಳಿಯುವ ಎಲ್ಲ ವಿಚಾರಗಳನ್ನೂ, ಅವು ಎಷ್ಟೇ ಮೂರ್ಖತನ ದ್ದಾಗಿದ್ದರೂ, ಹೇಳಿಬಿಡುವೆ!”

“ಕೇಳಿ! ಹನ್ನೊಂದೇ?” ನಾನು ಹೇಳಿದೆ, ದೂರದಲ್ಲಿ ನಗರದ ಗೋಪುರ ಗಡಿಯಾರದ ಲಯಬದ್ಧ ಘಂಟಾರವವನ್ನು ಕೇಳುತ್ತ. ಅವಳು ನಗೆ ನಿಲ್ಲಿಸಿದಳು, ಇದ್ದಕ್ಕಿದ್ದಂತೆ ಮತ್ತೆ ಮೌನ ತಳೆದಳು. ಗಂಟೆಯ ಬಡಿತವನ್ನು ಎಣಿಸತೊಡಗಿ ದಳು.

“ಹೌದು, ಹನ್ನೊಂದು” ಅವಳು ಕೊನೆಗೆ ಅಂಜುವ ನಡುಗುವ ಧ್ವನಿಯಲ್ಲಿ ಹೇಳಿದಳು.

ನಾನು ತಕ್ಷಣವೇ ವಿಷಾದಪಟ್ಟೆ, ಅವಳನ್ನು ಗಾಬರಿಗೊಳಿಸಿ ಗಂಟೆಗಳನ್ನು ಎಣಿಸುವಂತೆ ಮಾಡಿದೆನಲ್ಲ ಎಂದು. ನನ್ನ ಈ ಪೀಡಿಸಬೇಕೆಂಬ ಇಚ್ಛೆಗಾಗಿ ನನ್ನನ್ನೇ ಶಪಿಸಿಕೊಂಡೆ. ಅವಳ ದುಸ್ಥಿತಿ ನನ್ನನ್ನು ದುಃಖಿತನನ್ನಾಗಿ ಮಾಡಿತು. ನನ್ನ ಪಾಪಕೃತ್ಯಕ್ಕೆ ಹೇಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಿದ್ದಿತೋ ನನಗೆ ತಿಳಿಯಲಿಲ್ಲ. ನಾನು ಅವಳನ್ನು ಸಮಾಧಾನ ಪಡಿಸತೊಡಗಿದೆ. ಆತ ಬರದಿದ್ದುದಕ್ಕಾಗಿ ನೆಪಗಳನ್ನು ಹುಟ್ಟಿಸಿಕೊಂಡು ಹೇಳತೊಡಗಿದೆ. ಆತ ಬರದೆ ಇದ್ದುದು ಸಮರ್ಥನೀಯವೇ

ಆಗಿದ್ದಿತೆಂದು ಅವಳಿಗೆ ಸಾಧಿಸಿ ತೋರಲು ಯತ್ನಿಸಿದೆ. ಅಂಥ ಸ್ಥಿತಿಯಲ್ಲಿ ಬೇರಾರಿಗಿಂತ ನಾಸ್ತೆಂಕಳನ್ನು ಮನವೊಪ್ಪಿಸುವುದು ಹೆಚ್ಚು ಸುಲಭವಾಗಿದ್ದಿತು. ಅಥವಾ ಅಂತಹ ಸ್ಥಿತಿಯಲ್ಲಿ ಯಾರೇ ಆಗಲಿ ಯಾವುದೇ ರೀತಿಯ ಸಂತೈಸುವಿಕೆಗೂ ಸಂತೋಷದಿಂದ ಒಪ್ಪುವ ಮನೋಬಲವನ್ನೇ ಹೊಂದಿರುತ್ತಾರೆಂದು ಹೇಳಬೇಕು. ನೆಪದ ಸಣ್ಣ ಸುಳಿವು ಸಿಕ್ಕಿದರೂ ಸಾಕು ಅವರು ತುಂಬ ಸಮಾಧಾನ ಪಟ್ಟುಕೊಳ್ಳುತ್ತಾರೆ.

"ನೋಡಿ, ಇದು ನಿಜಕ್ಕೂ ಆಶ್ಚರ್ಯಕರ" ಎಂದು ನಾನು ನನ್ನ ವಾದದ ಅಸಾಧಾರಣ ಸ್ಪಷ್ಟತೆಯನ್ನು ಒತ್ತಿತಿಳಿಸುತ್ತ ಹೆಚ್ಚು ಹೆಚ್ಚು ಉತ್ಸಾಹದಿಂದ ಆ ವಿಷಯಕ್ಕೆ ಹಿಂದಿರುಗಿದೆ. "ನೋಡಿ ಅವರು ಬರುವುದಕ್ಕೆ ಸಾಧ್ಯವೇ ಇಲ್ಲ! ನೀವು ನನ್ನನ್ನೂ ಗೊಂದಲಗೊಳಿಸಿ ಮೋಸಮಾಡಿಬಿಟ್ಟಿರಿ, ನಾಸ್ತೆಂಕ. ಹಾಗಾಗಿ ನಾನು ಸಮಯಕ್ಕೆ ಸಂಬಂಧಿಸಿ ಎಲ್ಲ ಗಜಿಬಿಜಿ ಮಾಡಿಬಿಟ್ಟೆ. ಒಂದು ನಿಮಿಷ ಯೋಚನೆ ಮಾಡಿ ನೋಡಿ: ಅವರಿಗೆ ನಿಮ್ಮ ಪತ್ರ ಇನ್ನೂ ತಲುಪಿಯೇ ಇಲ್ಲದಿರಬಹುದು; ಬರಲು ಅವರಿಗೆ ಸಾಧ್ಯವಿಲ್ಲದೆ ಹೋಗಿರಬಹುದು, ನಿಮಗಿನ್ನೂ ಪತ್ರ ಬರೆಯುತ್ತಿರಬಹುದು. ಅದನ್ನು ನೀವು ನಾಳೆಯಷ್ಟೆ ಪಡೆಯುತ್ತೀರ! ನಾಳೆ ನಾನೇ ಹೋಗಿ ಸಾಧ್ಯವಾದಷ್ಟೂ ಬೇಗ ತರುತ್ತೇನೆ, ನಿಮಗೆ ಕೂಡಲೇ ತಿಳಿಸುತ್ತೇನೆ. ಹೀಗೆಯೇ, ಸಾವಿರಾರು ಅನಿರೀಕ್ಷಿತ ಅಡ್ಡಿ ಆತಂಕಗಳು ಅವರಿಗೆ ಒದಗಿ ಬಂದಿರಬಹುದು. ನಿಮ್ಮ ಕಾಗದ ತಲುಪಿದಾಗ ಅವರು ಮನೆಯಲ್ಲೇ ಇಲ್ಲದಿರಬಹುದು. ಅವರು ಅದನ್ನು ಇನ್ನೂ ಓದಿಯೇ ಇಲ್ಲದಿರುವ ಸಾಧ್ಯತೆಯೂ ಇದೆ! ಹೇಗೆ ಹೇಳಲು ಸಾಧ್ಯ – ಏನೇ ಆದರೂ ಸಂಭವಿಸಿರಬಹುದು."

"ನಿಜ, ನಿಜ!" ನಾಸ್ತೆಂಕ ಉತ್ತರಿಸಿದಳು. "ನಾನು ಆ ವಿಷಯ ಯೋಚನೆ ಮಾಡಲೇ ಇಲ್ಲ. ಹೌದು, ಏನೇ ಆದರೂ ಸಂಭವಿಸಿರಬಹುದು" ಎಂದವಳು ನನ್ನ ಮಾತನ್ನೇ ಅನುಮೋದಿಸುವ ಧ್ವನಿಯಲ್ಲಿ ಹೇಳತೊಡಗಿದಳು. ಆದರೆ ಈ ಧ್ವನಿ ಅವಳಲ್ಲಿ ಯಾವುದೋ ಅಸ್ಪಷ್ಟ ಹಾಗೂ ವಿರೋಧಿ ಭಾವನೆ ಉಂಟುಮಾಡಿದ್ದ ಅಪಶ್ರುತಿಯೊಂದರಿಂದ ಕೆಡಿಸಲ್ಪಟ್ಟಿದ್ದಿತು. "ಈಗ ನೀವು ಹೀಗೆ ಮಾಡಬೇಕು" ಅವಳು ಹೇಳಿದಳು. "ನಾಳೆ ಸಾಧ್ಯವಾದಷ್ಟೂ ಬೇಗ ಅಲ್ಲಿಗೆ ಹೋಗಿ. ಉತ್ತರವಿದ್ದರೆ ನನಗೆ ಕೂಡಲೇ ತಿಳಿಸಿ. ನಾನೆಲ್ಲಿ ವಾಸಿಸುತ್ತಿದ್ದೇನೆ, ನಿಮಗೆ ಗೊತ್ತಲ್ಲ?" ಅವಳು ಮತ್ತೆ ನನಗೆ ತನ್ನ ವಿಳಾಸ ಹೇಳಿದಳು.

ಆಮೇಲೆ ಅವಳು ಇದ್ದಕ್ಕಿದ್ದಂತೆ ನನ್ನ ಬಗೆಗೆ ಪ್ರೀತಿಯ ಕೋಮಲತೆಯ ಭಾವನೆ ತಳೆದಳು. ನಾನು ಅವಳಿಗೆ ಹೇಳಿದುದನ್ನೆಲ್ಲ ಗಮನವಿತ್ತು ಕೇಳಿದಳು. ಆದರೆ ನಾನು ನೇರ ಪ್ರಶ್ನೆ ಕೇಳಿದಾಗ ಉತ್ತರ ನೀಡದೆ ತಬ್ಬಿಬ್ಬಾದವಳಂತೆ ಮುಖ

ವನ್ನು ಅತ್ತ ತಿರುವಿದಳು. ನಾನು ಅವಳ ಕಣ್ಣುಗಳನ್ನು ನೋಡಿದೆ – ಹೌದು, ಅದು ನಿಜ, ಅವಳು ಅಳುತ್ತಿದ್ದಳು.

"ಓ-ಹೊ-ಹ್ಹೋ ! ಎಂಥ ಮಗು ನೀವು ! ಎಂಥ ಬಾಲಿಶ ! ಬಿಡಿ, ಬಿಡಿ !"

ಅವಳು ಮುಗುಳ್ನಕ್ಕಳು, ತನ್ನನ್ನು ಸಮಾಧಾನಪಡಿಸಿಕೊಳ್ಳಲು ಯತ್ನಿಸಿದಳು. ಆದರೆ ಅವಳ ಗಲ್ಲ ಇನ್ನೂ ಅದುರುತ್ತಿತ್ತು, ಎದೆ ಇನ್ನೂ ಉಬ್ಬುತ್ತ ಇಳಿಯುತ್ತ ಇದ್ದಿತು.

"ನಾನು ನಿಮ್ಮ ಬಗೆಗೇ ಯೋಚಿಸುತ್ತಿರುವುದು" ಸ್ವಲ್ಪ ತಡೆದು ಅವಳು ಹೇಳಿದಳು. "ನೀವು ಎಷ್ಟು ಒಳ್ಳೆಯವರು. ನನ್ನ ಹೃದಯ ಕಲ್ಲಿನದಾಗಿದ್ದರಷ್ಟೆ ನಿಮ್ಮ ಒಳ್ಳೆಯತನವನ್ನು ತಿಳಿಯಲಸಮರ್ಥವಾಗಿರುತ್ತೆ. ಈಗ ನನಗೆ ಏನು ಹೊಳೆಯಿತು ಗೊತ್ತೆ ? ನಾನು ನಿಮ್ಮಿಬ್ಬರನ್ನೂ ಹೋಲಿಸುತ್ತಿದ್ದೆ. ಅವರು ನೀವೇ ಯಾಕಾಗಿರಬಾರದಿತ್ತು ? ಅವರು ನಿಮ್ಮಂತೆ ಏಕಿಲ್ಲ ! ನಾನು ಅವರನ್ನು ಹೆಚ್ಚಿಗೆ ಪ್ರೀತಿಸಿದರೂ ನೀವು ಅವರಿಗಿಂತ ಹೆಚ್ಚು ಉತ್ತಮ."

ನಾನು ಯಾವ ಉತ್ತರವನ್ನೂ ನೀಡಲಿಲ್ಲ. ನಾನು ಏನಾದರೂ ಹೇಳಲೆಂದು ಅವಳು ನಿರೀಕ್ಷಿಸುತ್ತಿದ್ದಂತೆ ಕಂಡುಬಂದಳು.

"ನಾನು ಅವರನ್ನು ಇನ್ನೂ ಸಂಪೂರ್ಣವಾಗಿ ತಿಳಿದಿರದೆಯೇ ಇರಬಹುದು, ಸಾಕಷ್ಟು ಚೆನ್ನಾಗಿ ತಿಳಿದಿರದೆ ಇರಬಹುದು. ನಾನು ಯಾವಾಗಲೂ ಅವರಿಗೆ ಹೆದರುತ್ತಲೇ ಇದ್ದೀನೆಂದು ನನ್ನ ಭಾವನೆ. ಅವರು ಯಾವಾಗಲೂ ಅತಿಗಂಭೀರವಾಗಿರುತ್ತಿದ್ದರು, ಒಂದು ರೀತಿಯ ಹೆಮ್ಮೆಯಿಂದಿರುತ್ತಿದ್ದರು. ನಿಜ, ಅವರು ಹಾಗೆಂದು ಕಾಣಿಸಿಕೊಳ್ಳುತ್ತಿದ್ದರಷ್ಟೆ ಎಂಬುದನ್ನು ನಾನು ಬಲ್ಲೆ. ಅವರ ಹೃದಯದಲ್ಲಿ ನನ್ನ ಹೃದಯದಲ್ಲಿರುವುದಕ್ಕಿಂತ ಹೆಚ್ಚು ಕೋಮಲತೆ ಇದೆ. ನಾನು ಅವರಲ್ಲಿಗೆ ನನ್ನ ಬಟ್ಟೆ ಗಂಟು ಹೊತ್ತುಕೊಂಡು ಹೋದಾಗ ಅವರು ಹೇಗೆ ನನ್ನತ್ತ ನೋಡಿದರೆಂಬುದನ್ನು ನಾನು ನೆನಪಿನಲ್ಲಿಟ್ಟಿದ್ದೇನೆ. ಆದರೂ ನಾನು ಅವರಲ್ಲಿ ತುಂಬ ಗೌರವ ಹೊಂದಿದ್ದೇನೆಂದೇ ನನಗನಿಸುತ್ತೆ. ಅದು ನಾವಿಬ್ಬರೂ ಸಮಾನರಲ್ಲವೇನೋ ಎಂಬರ್ಥ ಕೊಡುತ್ತದೆ, ಅಲ್ಲವೇ ?"

"ಇಲ್ಲ, ನಾಸ್ತೆಂಕ, ಇಲ್ಲ !" ನಾನು ಉತ್ತರಿಸಿದೆ. "ನೀವು ಅವರನ್ನು ಈ ಜಗತ್ತಿನಲ್ಲಿ ಬೇರಾವುದಕ್ಕಿಂತ, ಬೇರಾರಿಗಿಂತ ಹೆಚ್ಚಾಗಿ ಪ್ರೀತಿಸುತ್ತೀರ, ನಿಮ್ಮ ಬಗೆಗೆ ನೀವು ಪ್ರೀತಿ ಹೊಂದಿರುವುದಕ್ಕಿಂತ ಹೆಚ್ಚಾಗಿ ನೀವು ಅವರನ್ನು ಪ್ರೀತಿಸುತ್ತೀರ, ಎಂದು ಅದರ ಅರ್ಥ."

"ಹೌದು, ಬಹುಶಃ ಅದೇ ಸರಿ ಇರಬಹುದು" ಎಂದು ಆ ಸರಳ ಹೃದಯದ ಯುವತಿ ಒಪ್ಪಿಕೊಂಡಳು. "ಆದರೆ ನನಗೆ ಇದೀಗ ಏನು ಹೊಳೆಯಿತು, ನಿಮಗೆ ಗೊತ್ತೆ ? ಈ ವಿಚಾರ ಅವರಿಗೆ ಸಂಬಂಧಿಸಿದುದಲ್ಲ, ಅಷ್ಟೆ. ನಾನು ಒಟ್ಟಿ

ನಲ್ಲಿ ಹೇಳುತ್ತಿದ್ದೇನೆ: ಇದು ನನ್ನ ಮನಸ್ಸಿನಲ್ಲಿ ತುಂಬ ಕಾಲದಿಂದ ಇತ್ತು. ಈಗ ನೋಡಿ, ನಾವೆಲ್ಲ ಏಕೆ ಸೋದರರಾಗಿರಬಾರದು? ಯಾಕೆ ಶ್ರೇಷ್ಠರೆನಿಸಿಕೊಂಡ ಜನರೂ ಇತರರಿಂದ ಏನನ್ನೋ ಹಿಡಿದಿರಿಸಿರುವಂತೆ, ಯಾವುದೋ ರಹಸ್ಯವನ್ನು ಮುಚ್ಚಿಟ್ಟಿರುವಂತೆ ಕಾಣಬರುತ್ತಾರೆ? ನಿಮ್ಮ ಹೃದಯದಲ್ಲಿ ಏನಿದೆಯೋ ಅದನ್ನು, ಅದೇ ನಿಮ್ಮ ದೃಢನಂಬಿಕೆ ಎನ್ನುವುದಾದಲ್ಲಿ, ಮಾತುಗಳಲ್ಲಿ ಸುಮ್ಮನೆ ಹೇಳಿ ಬಿಡಬಾರದೇಕೆ? ಆದರೂ ಪ್ರತಿಯೊಬ್ಬರೂ ತಾವು ನಿಜವಾಗಲೂ ಇರುವುದಕ್ಕಿಂತ ಹೆಚ್ಚಾಗಿ ಇತರರನ್ನು ದೂರವಿರಿಸುವವರಾಗಿಯೇ ಕಾಣಿಸಿಕೊಳ್ಳಲು ಯತ್ನಿಸುತ್ತಾರೆ, ತಮ್ಮ ಭಾವನೆಗಳನ್ನು ಬೇಗನೆಯೇ ಪ್ರಕಟಗೊಳಿಸಿಬಿಟ್ಟರೆ ಅವಮಾನವೇನೋ ಎಂಬ ಅಂಜಿಕೆ ಹೊಂದಿರುವವರಂತೆ."

"ಆಹ್, ನಾಸ್ತೆಂಕ. ನೀವು ಹೇಳುವುದು ನಿಜ, ಆದರೆ ಅದಕ್ಕೆ ನಾನಾ ರೀತಿಯ ಅನೇಕ ಕಾರಣಗಳಿವೆ" ನಾನು ಹೇಳಿದೆ, ನನ್ನ ಭಾವನೆಗಳನ್ನೇ ಆ ಘಳಿಗೆಯಲ್ಲಿ ಹಿಂದೆಂದಿಗಿಂತ ಹೆಚ್ಚಾಗಿ ಅದುಮಿ ಹಿಡಿಯುತ್ತ.

"ಇಲ್ಲ, ಇಲ್ಲ" ಅವಳು ಗಾಢವಾಗಿ ವಿಚಲಿತಳಾದವಳಂತೆ ಹೇಳಿದಳು. "ಉದಾಹರಣೆಗೆ, ನೀವು ಇತರರಂತಲ್ಲ. ನಿಮ್ಮ ಬಗೆಗೆ ನನ್ನ ಭಾವನೆಗಳನ್ನು ಅತ್ಯುತ್ತಮವಾದ ರೀತಿಯಲ್ಲಿ ಹೇಗೆ ಹೇಳಬೇಕೋ ನನಗೆ ನಿಜಕ್ಕೂ ತಿಳಿಯದು. ಆದರೆ ನನಗೆ ಅನಿಸುತ್ತೆ, ನೀವು... ಈಗ, ಉದಾಹರಣೆಗೆ... ನೀವು ನನಗಾಗಿ ಏನನ್ನೋ ತ್ಯಾಗ ಮಾಡುತ್ತಿದ್ದೀರೆಂದೇ ನನಗೆ ಕಂಡುಬರುತ್ತೆ" ಅವಳು ಮೃದುವಾಗಿ ನನ್ನತ್ತ ಹಾರುನೋಟ ಬೀರುತ್ತ ಹೇಳಿದಳು. "ನಾನು ಇದನ್ನು ಹೇಳುತ್ತಿರುವುದಕ್ಕಾಗಿ ನನ್ನನ್ನು ಕ್ಷಮಿಸಿ. ನಾನೊಬ್ಬಳು ಕೇವಲ ಸರಳ ಬಾಲಕಿ. ನಾನಿನ್ನೂ ಪ್ರಪಂಚವನ್ನು ಹೆಚ್ಚಾಗಿ ಕಂಡಿಲ್ಲ. ನಿಜಕ್ಕೂ, ಕೆಲವು ವೇಳೆ ವಿಷಯಗಳನ್ನು ಹೇಗೆ ಹೇಳಬೇಕೆಂಬುದೇ ನನಗೆ ಗೊತ್ತಾಗುವುದಿಲ್ಲ" ಅವಳು ಯಾವುದೋ ನಿಗೂಢ ಭಾವದಿಂದಾಗಿ ನಡುಗುತ್ತಿದ್ದ ಧ್ವನಿಯಲ್ಲಿ ಹೇಳಿದಳು. ಆದರೆ ಅದನ್ನು ಮುಗುಳ್ನಗೆಯಲ್ಲಿ ಮರೆಮಾಚ ಯತ್ನಿಸಿದಳು. "ಆದರೆ ನಾನು ನಿಮಗೆ ಎಷ್ಟು ಕೃತಜ್ಞಳು, ನಾನು ಇವೆಲ್ಲವನ್ನೂ ಭಾವಿಸಿ ತಿಳಿಯಬಲ್ಲೆ, ಎಂಬುದನ್ನು ನಿಮಗೆ ತಿಳಿಸಲು ಬಯಸುತ್ತೇನಷ್ಟೆ. ಇದಕ್ಕಾಗಿ ನೀವು ಎಂದೆಂದಿಗೂ ಸಂತೋಷದಿಂದಿರುವಂತೆ ದೇವರು ಅನುಗ್ರಹಿಸಲಿ! ಇನ್ನು ನೀವು ಆ ದಿನ ನಿಮ್ಮ ಕನಸುಗಾರನ ಬಗೆಗೆ ಹೇಳಿದ ಆ ಎಲ್ಲ ವಿಷಯಗಳ ಬಗೆಗೂ ಹೇಳುವುದಾದರೆ, ಅದರಲ್ಲಿ ಯಾವುದೂ ನಿಜವಲ್ಲ. ಅಂದರೆ, ನಾನು ಹೇಳುವುದು, ಅದಕ್ಕೂ ನಿಮಗೂ ಏನೇನೂ ಸಂಬಂಧವಿಲ್ಲ. ನೀವು ಪುನಶ್ಚೇತನಗೊಳ್ಳುತ್ತಿದ್ದೀರಿ. ನೀವು ನಿಮ್ಮ ಬಗೆಗೇ ನೀಡಿದ ವಿವರಗಳಿಗಿಂತ ತೀರ ಭಿನ್ನವಾಗಿದ್ದೀರ. ನೀವು ಯಾರನ್ನಾದರೂ ಪ್ರೀತಿಸುವಂತಾದರೆ, ಆಕೆಯೊಂದಿಗೆ ನಿಮಗೆ ಎಲ್ಲ ಸುಖಸಂತೋಷಗಳೂ ಲಭಿಸಲೆಂದು ನಾನು ಹಾರೈ

ಸುತ್ತೇನೆ. ಆಕೆಗಾಗಿ ನಾನು ಹಾರೈಸುವುದು ಏನೂ ಇಲ್ಲ, ಏಕೆಂದರೆ ಆಕೆ ನಿಜಕ್ಕೂ ನಿಮ್ಮೊಂದಿಗೆ ಸುಖದಿಂದಲೇ ಇರುತ್ತಾಳೆ, ನಾನೂ ಹೆಂಗಸೇ, ನನಗೆ ಗೊತ್ತು. ನಾನು ಹೀಗೆ ಹೇಳಿದಾಗ ನೀವು ನನ್ನ ಮಾತನ್ನು ನಂಬಬೇಕು".

ಅವಳು ಮೌನಳಾಗಿ ನನ್ನ ಕೈಯನ್ನು ಆತ್ಮೀಯತೆಯಿಂದ ಅವುಕಿದಳು. ನನ್ನ ಭಾವೋದ್ರಿಕ್ತ ಸ್ಥಿತಿಯಲ್ಲಿ ನಾನೂ ಏನನ್ನೂ ಹೇಳದಾದೆ. ಹಲವಾರು ನಿಮಿಷಗಳು ಕಳೆದವು.

"ಅವರು ಇಂದು ರಾತ್ರಿ ಬರುವುದಿಲ್ಲವೆನ್ನುವುದು ಸ್ಪಷ್ಟ" ಅವಳು ಕೊನೆಗೆ ಹೇಳಿದಳು, ತಲೆ ಎತ್ತಿ. "ಆಗಲೇ ತುಂಬ ತಡವಾಗಿದೆ."

"ನಾಳೆ ಬರುತ್ತಾರೆ" ನಾನು ಅತ್ಯಂತ ದೃಢವಾದ ಹಾಗೂ ಮನಒಪ್ಪಿಸು ವಂತಹ ಸ್ವರದಲ್ಲಿ ಹೇಳಿದೆ.

"ಹೌದು" ಅವಳು ಗೆಲುವು ತಂದುಕೊಂಡು ಹೇಳಿದಳು. "ನಾನೇ ಅದನ್ನು ಕಾಣಬಲ್ಲೆ – ಅವರು ನಾಳೆಯಷ್ಟೆ ಬರುವುದು. ಸರಿ, ಹೋಗಿ ಬರುತ್ತೇನೆ! ನಾಳಿನವರೆಗೆ! ಮಳೆ ಬಂದರೆ ನಾನು ಬರುವುದಿಲ್ಲ. ಆದರೆ ನಾಡಿದ್ದು ನಾನು ಬಂದೇ ಬರುತ್ತೇನೆ, ಖಂಡಿತ ಬರುತ್ತೇನೆ, ಏನೇ ಆದರೂ ಸರಿ. ನೀವೂ ಖಂಡಿತ ಬನ್ನಿ. ನೀವು ಬರಲೇ ಬೇಕು. ನಾನು ಎಲ್ಲವನ್ನೂ ನಿಮಗೆ ಹೇಳಿ ಬಿಡುವೆ."

ನಾವು ಅಗಲುತ್ತಿದ್ದಂತೆ ಅವಳು ತನ್ನ ಕೈ ನೀಡಿ ನನ್ನತ್ತ ನಿಷ್ಕಪಟದಿಂದ ನೋಡುತ್ತ ಹೇಳಿದಳು:

"ಈಗ ನಾವು ಸದಾ ಕಾಲಕ್ಕೂ ಜೊತೆಯಾಗಿರುವೆವು, ಅಲ್ಲವೇ?"

ಓಹ್, ನಾಸ್ತೆಂಕ, ನಾಸ್ತೆಂಕ! ನಾನು ಈಗ ಎಷ್ಟು ಏಕಾಂಗಿಯಾ ಗಿದ್ದೇನೆಂಬುದನ್ನು ನೀನು ತಿಳಿದಿದ್ದೇ ಆದರೆ!

ಗಡಿಯಾರ ಒಂಬತ್ತು ಬಡಿದಾಗ ನಾನು ನನ್ನ ಕೋಣೆಯಲ್ಲೇ ಇರದಾದೆ. ಬಟ್ಟೆ ಹಾಕಿಕೊಂಡು ಮಳೆ ಬರುತ್ತಿದ್ದರೂ ಹೊರ ಹೊರಟೆ. ಅಲ್ಲಿ ಹೋಗಿ ನಮ್ಮ ಆ ಬೆಂಚಿನ ಮೇಲೆ ಕುಳಿತೆ. ಅವಳ ಮನೆಯ ಗಲ್ಲಿಯಲ್ಲಿ ನಡೆದು ಹೋದೆ. ನಾಚಿ ಕೆಯಾದಂತವನಾಗಿ ಅವಳ ಮನೆಯ ಸಮೀಪ ಹೋಗುವುದಕ್ಕೂ ಮುನ್ನವೇ, ಅವಳ ಕಿಟಕಿಗಳ ಕಡೆಗೆ ಒಂದು ಕ್ಷಣನೋಟ ಬೀರದೆಯೂ ಸಹ, ಹಿಂದಿರುಗಿದೆ. ನನ್ನ ಕೋಣೆಗೆ ಎಷ್ಟು ಹತಾಶೆಯಿಂದ ಹಿಂದಿರುಗಿದೆನೆಂದರೆ ಅಂತಹ ಹತಾಶ ಭಾವನೆಯನ್ನು ನಾನು ಹಿಂದೆಂದೂ ಅನುಭವಿಸಿರಲಿಲ್ಲ. ಎಂಥ ಮಳೆ ಸುರಿಯುತ್ತಿ ರುವ ಮಂಕು ಬಡಿದ ದಿನ! ಹವಾಗುಣ ಹೀಗಿರದಿದ್ದರೆ ನಾನು ಅಲ್ಲೇ ಇಡೀ ರಾತ್ರಿ ಅಲೆದಾಡುತ್ತಿದ್ದೆ.

ಆದರೆ ನಾಳಿನವರೆಗೂ ! ನಾಳಿನವರೆಗೂ ! ನಾಳೆ ಅವಳು ನನಗೆ ಎಲ್ಲವನ್ನೂ ಹೇಳುವಳು.

ಇಂದು ಪತ್ರ ಇರಲಿಲ್ಲ. ಆದರೆ ಇರಬೇಕಾದುದೇ ಇಲ್ಲವೇನೋ. ಈಗವರು ಒಟ್ಟಿಗೇ ಇದ್ದಾರೇನೋ.

# ನಾಲ್ಕನೆಯ ರಾತ್ರಿ

ಅಯ್ಯೋ ದೇವರೇ, ಎಲ್ಲ ಹೇಗೆ ಕೊನೆಗಂಡಿತು ! ಎಲ್ಲಕ್ಕೂ ಎಂಥ ಕೊನೆ !

ನಾನು ಒಂಬತ್ತು ಗಂಟೆಗೆ ಬಂದೆ. ಅವಳಾಗಲೇ ಅಲ್ಲಿದ್ದಳು. ಸ್ವಲ್ಪ ದೂರದಿಂದಲೇ ನನಗವಳು ಕಂಡುಬಂದಳು. ಮೊದಲ ರಾತ್ರಿ ಇದ್ದಂತೆಯೇ ಸೇತುವೆಯ ಕಟಕಟೆಗೆ ಒರಗಿ ನಿಂತಿದ್ದಳು. ನಾನು ಬರುವ ಸದ್ದು ಅವಳಿಗೆ ಕೇಳಿಸಲಿಲ್ಲ.

"ನಾಸ್ತೆಂಕ !" ನಾನು ಕೂಗಿ ಕರೆದೆ, ನನ್ನ ಉದ್ರಿಕ್ತ ಸ್ಥಿತಿಯನ್ನು ಪ್ರಯತ್ನ ಪೂರ್ವಕವಾಗಿ ಅದುಮಿ ಇರಿಸುತ್ತ.

ಅವಳು ತಕ್ಷಣವೇ ಸುತ್ತು ತಿರುಗಿದಳು.

"ಸರಿ. ಬೇಗ ಕೊಡಿ !" ಅವಳೆಂದಳು.

ನಾನು ಅವಳನ್ನೇ ದಿಗ್ಭ್ರಾಂತನಾಗಿ ನೋಡುತ್ತ ನಿಂತೆ.

"ಸರಿ, ಎಲ್ಲಿ ಕಾಗದ ? ಕಾಗದ ತಂದಿರಾ ?" ಅವಳು ಮತ್ತೆ ಕೇಳಿದಳು, ಕಟಕಟೆಯನ್ನು ಒಂದು ಕೈಯಲ್ಲಿ ಹಿಡಿದುಕೊಂಡೇ.

"ಇಲ್ಲ. ಕಾಗದ ಇಲ್ಲ" ನಾನೆಂದೆ ಕೊನೆಗೆ. "ನೀವು ಅವರನ್ನು ಇನ್ನೂ ಕಂಡಿಲ್ಲವೇ ?"

ಅವಳು ಭೀತಿಗೊಳಿಸುವಷ್ಟು ನಿಸ್ತೇಜಳಾದಳು. ನನ್ನನ್ನೇ ದೀರ್ಘ ಕಾಲ ದಿಟ್ಟಿಸಿನೋಡುತ್ತ ನಿಂತಳು. ನಾನು ಅವಳ ಕೊನೆಯ ಆಸೆಯನ್ನೂ ಭಗ್ನಗೊಳಿಸಿದ್ದೆ.

"ಓಹ್, ಸರಿ. ಅವರಿಷ್ಟ" ಅವಳು ಕೊನೆಗೆ ಒಡೆದ ಧ್ವನಿಯಲ್ಲಿ ಹೇಳಿದಳು. "ಅವರಿಷ್ಟ. ಅವರು ನನ್ನನ್ನು ಹೀಗೆ ಬಿಡಬೇಕೆಂದು ಇಚ್ಛಿಸಿದಲ್ಲಿ, ಹಾಗೆಯೇ ಆಗಲಿ."

ಅವಳು ಕಣ್ಣು ತಗ್ಗಿಸಿದಳು. ಆಮೇಲೆ ನನ್ನ ಕಣ್ಣುಗಳನ್ನು ನೋಡ ಬಯಸಿದಳು, ಆದರೆ ನೋಡಲು ಅವಳ ಕೈಲಿ ಆಗಲಿಲ್ಲ. ತನ್ನಲ್ಲಿ ಉಕ್ಕಿ ಬರುತ್ತಿದ್ದ ಭಾವೋದ್ರೇಕವನ್ನು ಇನ್ನೂ ಕೆಲವು ನಿಮಿಷ ಹತೋಟಿಯಲ್ಲಿರಿಸಿಕೊಳ್ಳಲು ಪ್ರಯಾಸ

ಪಟ್ಟಳು. ಆಮೇಲೆ ಹಠಾತ್ತನೆ ಅತ್ತ ಕಡೆಗೆ ತಿರುಗಿ, ಕಟಕಟೆಯ ಮೇಲೆ ವಾಲಿ, ಕಣ್ಣೀರು ಸುರಿಸತೊಡಗಿದಳು.

"ಬೇಡಿ, ಬೇಡಿ" ನಾನು ಮಾತು ಪ್ರಾರಂಭಿಸಿದೆ. ಆದರೆ ಅವಳನ್ನು ನೋಡಿದಂತೆ, ಮಾತು ಮುಂದುವರಿಸಿಕೊಂಡು ಹೋಗುವ ಶಕ್ತಿ ನನ್ನಲ್ಲಿರಲಿಲ್ಲ. ಅಲ್ಲದೆ, ಏನು ಹೇಳುವುದಿದ್ದಿತು?

"ನನ್ನನ್ನೇನೂ ಸಮಾಧಾನಪಡಿಸಬೇಡಿ" ಅವಳು ಕಣ್ಣೀರು ಕರೆಯುತ್ತಲೇ ಹೇಳಿದಳು. "ಅವರ ವಿಷಯ ನನ್ನ ಮುಂದೆ ಮಾತನಾಡಬೇಡಿ, ಅವರು ಬರುತ್ತಾರೆಂದು ಹೇಳಬೇಡಿ, ಅವರು ನನ್ನನ್ನು ಇಷ್ಟು ನಿರ್ದಯದಿಂದ ಇಷ್ಟು ಅಮಾನುಷವಾಗಿ ಬಿಟ್ಟುಬಿಟ್ಟಿಲ್ಲವೆಂದೇನೂ ಹೇಳಬೇಡಿ. ಆದರೆ ಏಕೆ? ಏಕೆ? ಖಂಡಿತ ನನ್ನ ಆ ಪತ್ರದಲ್ಲಿ, ಆ ದರಿದ್ರ ಪತ್ರದಲ್ಲಿ, ಏನೂ ಪ್ರಮಾದವಿರಲಿಲ್ಲವಷ್ಟೆ, ಇಲ್ಲವಷ್ಟೆ?"

ಅವಳು ಗದ್ಗದದಿಂದ ಅಳುತ್ತ ಮಾತು ನಿಲ್ಲಿಸಿದಳು. ಅವಳನ್ನು ನೋಡಿದಂತೆ ನನ್ನ ಕರುಳು ಕಿತ್ತುಬಂದಿತು.

"ಓಹ್, ಅವರು ಎಷ್ಟು ಅಮಾನುಷವಾಗಿ ಕ್ರೂರಿಗಳು!" ಅವಳು ಮತ್ತೆ ಹೇಳತೊಡಗಿದಳು. "ಒಂದು ಸಾಲು, ಒಂದೇ ಒಂದು ಸಾಲು ಕೂಡ ಇಲ್ಲವಲ್ಲ! ನಾನು ತಮಗೆ ಇನ್ನೆಷ್ಟು ಮಾತ್ರವೂ ಬೇಕಿಲ್ಲವೆಂದು, ತಾವು ನನ್ನನ್ನು ತೊರೆಯುತ್ತಿರುವರೆಂದು, ಕೊನೆಯಪಕ್ಷ ಬರೆಯಬಹುದಿತ್ತು. ಇಡೀ ಮೂರು ದಿನದಲ್ಲಿ ಒಂದು ಸಾಲೂ ಇಲ್ಲ! ಒಬ್ಬ ನತದೃಷ್ಟಳಾದ, ಅರಕ್ಷಿತಳಾದ ಬಾಲಕಿಯನ್ನು ಅವಮಾನಪಡಿಸುವುದು ಘಾಸಿಗೊಳಿಸುವುದು ಎಷ್ಟು ಸುಲಭ ಅವರಿಗೆ. ಅವಳ ಏಕೈಕ ತಪ್ಪೆಂದರೆ ಅವರನ್ನು ಪ್ರೀತಿಸಿದುದು! ಓಹ್ ಈ ಮೂರು ದಿನಗಳಲ್ಲಿ ನಾನು ಅನುಭವಿಸಿದ ಸಂಕಟವೋ! ಓಹ್, ನನ್ನ ದೈವವೇ, ಓಹ್ ನನ್ನ ದೈವವೇ! ನಾನೇ ಅವರ ಬಳಿಗೆ ಆ ಮೊದಲ ಸಾರಿ ಹೋದುದು, ನಾನೇ ಅವರ ಮುಂದೆ ನನ್ನನ್ನೇ ಸಣ್ಣವಳನ್ನಾಗಿ ಮಾಡಿಕೊಂಡು ಹೋಗಿ ನಿಂತೆ, ಅಳುತ್ತ ಪ್ರೇಮಭಿಕ್ಷೆ ಯಾಚಿಸಿದೆ, ಒಂದೇ ಒಂದು ಸಣ್ಣ ಹನಿ ಪ್ರೇಮವಾದರೂ ಸಾಕೆಂದು ಬೇಡಿಕೊಂಡೆ, ಎಂಬುದನ್ನು ಜ್ಞಾಪಕಕ್ಕೆ ತಂದುಕೊಂಡರೆ! ಅಷ್ಟೆಲ್ಲ ಆದ ಮೇಲೆ ಈಗ ಇದು!.... ಇಲ್ಲಿ ಕೇಳಿ" ಎಂದವಳು ನನ್ನ ಕಡೆಗೆ ತಿರುಗಿದಳು. ಅವಳ ಕಪ್ಪು ಕಣ್ಣುಗಳು ಮಿಂಚಿನಂತೆ ಮಿನುಗಿದವು. "ಅದು ಹಾಗಲ್ಲವೇ ಅಲ್ಲ! ಹಾಗಿರಲು ಸಾಧ್ಯವೇ ಇಲ್ಲ! ಅದು ಅಸಂಬದ್ಧ! ನಮ್ಮಲ್ಲೊಬ್ಬರು ತಪ್ಪು ಮಾಡಿರಲೇ ಬೇಕು: ಇಲ್ಲ ನೀವು, ಇಲ್ಲ ನಾನು; ಅವರಿಗೆ ಬಹುಶಃ ನನ್ನ ಕಾಗದ ಇನ್ನೂ ತಲುಪೇ ಇಲ್ಲವೇನೋ? ಬಹುಶಃ ಅವರಿಗೆ ಆ ಪತ್ರದ ಬಗೆಗೆ ಇನ್ನೂ ಏನೂ ಗೊತ್ತೇ ಇಲ್ಲವೇನೋ? ಏಕೆಂದರೆ, ನೀವೇ ಹೇಳಿ ದಮ್ಮಯ್ಯ, ನೀವೇ ತೀರ್ಮಾನಿಸಿ, ನನಗೆ ವಿವರಿಸಿ

ಹೇಳಿ, ನನಗಂತೂ ಗೊತ್ತಾಗುತ್ತಿಲ್ಲ –ಯಾರೇ ಆಯಿತು ಇನ್ನೊಬ್ಬರನ್ನು, ಅವರು ನನ್ನನ್ನು ಕಂಡಿರುವಂತೆ ಇಷ್ಟು ಮೃಗೀಯವಾಗಿ, ಇಷ್ಟು ಕಠಿಣವಾಗಿ, ಕಾಣಲು ಹೇಗೆ ಸಾಧ್ಯ? ಒಂದು ಪದವೂ ಇಲ್ಲವಲ್ಲ! ದರಿದ್ರರಲ್ಲಿ ಅತ್ಯಂತ ದರಿದ್ರ ರಾದವರ ಬಗೆಗೂ, ನನ್ನ ಬಗೆಗೆ ತೋರಿರುವುದಕ್ಕಿಂತ ಹೆಚ್ಚು ಕರುಣೆಯನ್ನು ತೋರಲಾಗುತ್ತೆ. ಬಹುಶಃ ಅವರು ನನ್ನ ಬಗೆಗೆ ಏನೋ ವದಂತಿಗಳನ್ನು ಕೇಳಿರ ಬಹುದೇನೋ, ಬಹುಶಃ ಯಾರಾದರೂ ನನ್ನ ಬಗೆಗೆ ಅವರಿಗೆ ಕಟ್ಟುಕಥೆಗಳನ್ನು ಹೇಳಿರಬಹುದೇನೋ?" ಅವಳು ತನ್ನ ಈ ಕೊನೆಯ ಪ್ರಶ್ನೆ ಕೇಳುತ್ತ ನನ್ನ ಕಡೆಗೆ ತಿರುಗಿ ಅತ್ತಳು. "ನೀವೇನು ಭಾವಿಸುತ್ತೀರಿ?"

"ಇಲ್ಲಿ ನೋಡಿ, ನಾಸ್ತೆಂಕ. ನಾಳೆ ನಾನೇ ಅವರ ಬಳಿಗೆ ಹೋಗಿ ನಿಮ್ಮ ಪರವಾಗಿ ಮಾತನಾಡುತ್ತೇನೆ."

"ಆಮೇಲೆ?"

"ಅವರನ್ನು ಎಲ್ಲ ಕೇಳುತ್ತೇನೆ. ಅವರಿಗೆ ಎಲ್ಲ ಹೇಳುತ್ತೇನೆ".

"ಆಮೇಲೆ ಏನು?"

"ನೀವು ಅವರಿಗೆ ಒಂದು ಕಾಗದ ಬರೆಯಿರಿ. ಉಹೂಂ, ಅನ್ನಬೇಡಿ, ನಾಸ್ತೆಂಕ, ಉಹೂಂ ಅನ್ನಬೇಡಿ. ನಿಮ್ಮ ಇಂಗಿವನ್ನು ಅವರು ಗೌರವಿಸುವಂತೆ ನಾನು ಮಾಡುತ್ತೇನೆ. ಅವರಿಗೆ ಎಲ್ಲವನ್ನೂ ತಿಳಿಸುತ್ತೇನೆ. ಆದರೂ...."

"ಉಹೂಂ. ನನ್ನ ಗೆಳೆಯರೇ, ಉಹೂಂ" ಅವಳು ನನ್ನ ಮಾತಿನ ಮಧ್ಯೆಯೇ ಹೇಳಿದಳು. "ಸಾಕು! ಒಂದು ಪದವೂ ಇಲ್ಲ, ನನ್ನಿಂದ ಒಂದು ಪದವೂ ಇಲ್ಲ, ಒಂದು ಸಾಲೂ ಇಲ್ಲ – ಸಾಕು! ನನಗೆ ಅವರು ಗೊತ್ತಿಲ್ಲ, ನಾನು ಅವರನ್ನು ಇನ್ನೆಷ್ಟು ಮಾತ್ರವೂ ಪ್ರೀತಿಸುವುದಿಲ್ಲ. ಅವರನ್ನು ಮರೆತುಬಿಡುತ್ತೇನೆ..." ಮಾತನ್ನು ಮುಂದುವರಿಸಲು ಅವಳ ಕೈಲಿ ಆಗಲಿಲ್ಲ.

"ಹುಷ್, ಈಗ ನೋಡಿ, ಸ್ವಲ್ಪ ಸಮಾಧಾನಮಾಡಿಕೊಳ್ಳಿ. ಇಲ್ಲಿ ಬನ್ನಿ, ಕುಳಿತುಕೊಳ್ಳಿ, ನಾಸ್ತೆಂಕ!" ನಾನೆಂದೆ, ಬೆಂಚಿನ ಮೇಲೆ ಕುಳಿತುಕೊಳ್ಳಲು ಅವ ಳಿಗೆ ಸಹಾಯ ಮಾಡುತ್ತ.

"ಹಾಗೇನೂ ಇಲ್ಲ. ನಾನು ಸಮಾಧಾನಳಾಗಿಯೇ ಇದ್ದೇನೆ. ಚಿಂತಿಸಬೇಡಿ. ಇದೇನೂ ಇಲ್ಲ. ಕೇವಲ ಕಣ್ಣೀರಷ್ಟೆ. ಒಣಗಿ ಹೋಗುತ್ತೆ. ನಾನೇನು ಪ್ರಾಣ ಬಿಡುತ್ತೇನೆ, ನದಿಗೆ ಹಾರುತ್ತೇನೆ, ಅಂದುಕೊಂಡಿರಾ?"

ನನ್ನ ಹೃದಯ ಹಿಂಡಿದಂತಾಯಿತು. ಮಾತನಾಡ ಬಯಸಿದ್ದೆ, ಆದರೆ ಒಂದು ಶಬ್ದವನ್ನೂ ಹೇಳಲಾಗಲಿಲ್ಲ.

"ನೀವೇ ಹೇಳಿ" ಎನ್ನುತ್ತ ಅವಳು ನನ್ನ ಕೈಯನ್ನು ತನ್ನ ಕೈಯಲ್ಲಿ ಹಿಡಿದು ಕೊಂಡು ಮಾತು ಮುಂದುವರಿಸಿದಳು. "ನೀವು ಹೀಗೆ ಮಾಡುತ್ತಿದ್ದಿರಾ, ಹೇಳಿ?

ತಾನೇ ತಾನಾಗಿ ಬಂದವಳನ್ನು ನೀವು ಪರಿತ್ಯಜಿಸುತ್ತಿರಲಿಲ್ಲ, ಅವಳ ಬಡಪಾಯಿ ಮೂರ್ಖ ಹೃದಯದ ಬಗೆಗೆ ನಿಮ್ಮ ಭಂಡ ತುಚ್ಛೀಕಾರವನ್ನು ಅವಳ ಮುಖಕ್ಕೇ ಎಸೆಯುತ್ತಿರಲಿಲ್ಲ, ಅಲ್ಲವೇ ? ನೀವು ಅವಳ ಬಗೆಗೆ ಕಾಳಜಿ ವಹಿಸುತ್ತಿರಲಿಲ್ಲವೇ ? ಅವಳು ಒಬ್ಬಳೇ ಇದ್ದುದು, ಇದೆಲ್ಲ ಹೇಗೆ ಪ್ರಾರಂಭವಾಯಿತೆಂಬುದನ್ನು ಅವಳು ತಿಳಿದಿರಲಿಲ್ಲ, ನಿಮಗಾಗಿ ತನ್ನಲ್ಲಿ ಹುಟ್ಟಿದ ಅನುರಾಗದಿಂದ ಅವಳು ತನ್ನನ್ನೇ ರಕ್ಷಿಸಿಕೊಳ್ಳುವುದು ಹೇಗೆಂಬುದನ್ನು ತಿಳಿದಿರಲಿಲ್ಲ, ಅದಕ್ಕೆ ಅವಳು ದೋಷಾರ್ಹಳಾಗಿರಲಿಲ್ಲ, ಅವಳದೇನೂ ತಪ್ಪಿರಲಿಲ್ಲ, ಅವಳು ಯಾವ ತಪ್ಪನ್ನೂ ಮಾಡಿರಲಿಲ್ಲ ಎಂದು ನೀವು ಮನಗಾಣುತ್ತಿರಲಿಲ್ಲವೇ ?... ಅಯ್ಯೋ, ದೇವರೇ ! ಅಯ್ಯೋ, ಪ್ರಿಯ ದೇವರೇ !"

"ನಾಸ್ತೆಂಕ !" ಕೊನೆಗೆ ನಾನು ಕೂಗಿ ಹೇಳಿದೆ. ನನ್ನ ಭಾವನೆಗಳ ಮೇಲೆ ನಾನೇ ಇನ್ನೆಷ್ಟು ಮಾತ್ರವೂ ಪ್ರಭುವಾಗಿರಲಿಲ್ಲ. "ನಾಸ್ತೆಂಕ ! ನೀವು ನನ್ನನ್ನು ಗೋಳುಗುಟ್ಟಿಸುತ್ತಿದ್ದೀರ ! ನನ್ನ ಹೃದಯವನ್ನು ಒಡೆಯುತ್ತಿದ್ದೀರ, ನನ್ನನ್ನು ಕೊಲ್ಲುತ್ತಿದ್ದೀರ, ನಾಸ್ತೆಂಕ ! ನಾನು ಮೌನದಿಂದಿರಲಾರೆ ! ಹೇಳಿಬಿಡಲೇ ಬೇಕು. ನನ್ನ ಹೃದಯವನ್ನು ಜಜ್ಜಿ ಹಾಕುತ್ತಿರುವುದೆಲ್ಲವನ್ನೂ ಕೊನೆಗೂ ನಿಮ್ಮ ಮುಂದೆ ತೆರೆದಿರಿಸಲೇ ಬೇಕಾಗಿದೆ !"

ಇದನ್ನು ಹೇಳಿದಂತೆ ನಾನು ಬೆಂಚಿನಿಂದ ಎದ್ದು ನಿಂತೆ. ಅವಳು ನನ್ನ ಕೈಯನ್ನು ಹಿಡಿದು ನನ್ನತ್ತವೇ ಆಶ್ಚರ್ಯದಿಂದ ನೋಡಿದಳು.

"ಏನದು, ಹೇಳಿ ?" ಕೊನೆಗೆ ಅವಳು ಹೇಳಿದಳು.

"ನಾಸ್ತೆಂಕ" ಎಂದು ನಾನು ದೃಢ ನಿರ್ಧಾರದಿಂದ ಹೇಳಿದೆ. "ನನ್ನ ಮಾತು ಕೇಳಿ, ನಾಸ್ತೆಂಕ ! ನಾನು ನಿಮ್ಮ ಮುಂದೆ ಈಗ ಏನು ಹೇಳಲಿರುವೆನೋ ಅದು ಮೂರ್ಖತನದ ಆಶಾರಹಿತವಾದ ಕನಸು ಬಿಟ್ಟು ಬೇರೇನೂ ಅಲ್ಲ, ಅದೆಲ್ಲ ಅರ್ಥ ಹೀನವಾದುದು. ಅದು ಎಂದಿಗೂ ನಿಜವಾಗಲಾರದು ಎಂದು ನನಗೆ ಗೊತ್ತು. ಆದರೆ ನಾನು ಈಗ ಮೌನದಿಂದಿರಲಾರೆ. ನಿಮ್ಮನ್ನು ಯಾವುದು ಸಂಕಟಕ್ಕೊಳ ಪಡಿಸುತ್ತಿದೆಯೋ ಅದರ ಹೆಸರಿನಲ್ಲಿ ನನ್ನನ್ನು ಕ್ಷಮಿಸುವಂತೆ ನಾನು ಮುನ್ನವೇ ನಿಮ್ಮನ್ನು ಪ್ರಾರ್ಥಿಸುತ್ತೇನೆ."

"ಆದರೆ, ಏನದು ?" ಅವಳು ಕೇಳಿದಳು. ಅವಳ ಕಣ್ಣುಗಳು ಒಣಗಿದ್ದವು, ಆಶ್ಚರ್ಯ ಕುತೂಹಲಗಳ ವಿಚಿತ್ರ ಬೆಳಕಿನೊಂದಿಗೆ ನನ್ನ ಕಣ್ಣುಗಳನ್ನೇ ದಿಟ್ಟಿಸಿ ನೋಡುತ್ತಿದ್ದವು. "ಏನದು, ಏನು ವಿಷಯ ?"

"ನನಗೆ ಗೊತ್ತು, ಇದು ಆಶಾರಹಿತವಾದುದು ಅಂತ. ಆದರೂ ಹೇಳು ತ್ತೇನೆ – ನಾನು ನಿಮ್ಮನ್ನು ಪ್ರೀತಿಸುತ್ತೇನೆ, ನಾಸ್ತೆಂಕ ! ನೋಡಿದಿರಾ ! ಈಗ ನಾನು ಎಲ್ಲ ಹೇಳಿದ್ದಾಯಿತು !" ಎಂದು ನಾನು ಯಾವ ಆಸೆಯನ್ನೂ ಇಟ್ಟು

ಕೊಂಡಿರದವನಂತೆ ಕೈ ಆಡಿಸುತ್ತ ಹೇಳಿದೆ. "ಇದನ್ನು ಕೇಳಿದ ಮೇಲೆ, ನೀವು. ಇದುವರೆವಿಗೂ ನನ್ನೊಂದಿಗೆ ಮಾತನಾಡುತ್ತಿದ್ದ ರೀತಿಯಲ್ಲೇ ಮಾತನಾಡುತ್ತ ಹೋಗುವಿರಾ ಅಥವಾ ಇಲ್ಲವೇ ಎಂಬುದನ್ನು, ಅಷ್ಟೇ ಅಲ್ಲ, ನಾನು ಇನ್ನೂ ಏನು ಹೇಳಲಿರುವೆನೋ ಅದನ್ನು ಕೇಳುವಿರಾ ಅಥವಾ ಇಲ್ಲವೇ ಎಂಬುದನ್ನು, ತೀರ್ಮಾನಿಸುವುದು ನಿಮಗೇ ಬಿಟ್ಟದ್ದು."

"ಆದರೆ ಯಾಕೆ ಕೇಳಬಾರದು?" ನಾಸ್ತೆಂಕ ನನ್ನ ಮಾತಿನ ಮಧ್ಯದಲ್ಲೇ ಹೇಳಿದಳು. "ಅದರಿಂದ ಏನಂತೆ? ನೀವು ನನ್ನನ್ನು ಪ್ರೀತಿಸುತ್ತೀರಿ ಎಂಬುದನ್ನು ನಾನು ಯಾವತ್ತೂ ತಿಳಿದೇ ಇದ್ದೆ. ಆದರೆ ನೀವು ನನ್ನನ್ನು ಬೇರೆ ರೀತಿಯಲ್ಲಿ ಪ್ರೀತಿಸುತ್ತಿದ್ದಿರಿ, ಈ ರೀತಿಯಲ್ಲಲ್ಲ, ಎಂದು ಕಲ್ಪಿಸಿಕೊಂಡಿದ್ದೆ, ಅಷ್ಟೆ. ಅಯ್ಯೋ, ದೇವರೇ, ಅಯ್ಯೋ, ದೇವರೇ!"

"ಮೊದಲು ನಾನು ಹಾಗೆ ಪ್ರೀತಿಸುತ್ತಿದ್ದೆ, ನಾಸ್ತೆಂಕ. ಆದರೆ ಈಗ... ಈಗ ನಾನು, ನೀವು ನಿಮ್ಮ ಬಟ್ಟೆ ಗಂಟಿನೊಂದಿಗೆ ಅವರ ಬಳಿಗೆ ಹೋದಾಗ ಯಾವ ಭಾವನೆ ಹೊಂದಿದ್ದಿರೋ, ಅದೇ ಭಾವನೆ ಹೊಂದಿದ್ದೇನೆ. ನೀವು ಭಾವಿಸಿದ್ದುದಕ್ಕಿಂತ ಹೆಚ್ಚು ಗಾಢವಾದ ಭಾವನೆ ಹೊಂದಿದ್ದೇನೆ, ನಾಸ್ತೆಂಕ. ಏಕೆಂದರೆ, ಅವರು ಆಗ ಯಾರನ್ನೂ ಪ್ರೀತಿಸುತ್ತಿರಲಿಲ್ಲ. ಆದರೆ ನೀವು ಪ್ರೀತಿಸುತ್ತಿದ್ದೀರಿ."

"ಏನಿದು ನೀವು ನನಗೆ ಹೇಳುತ್ತಿರುವುದು! ನನಗಂತೂ ನೀವು ಹೇಳುತ್ತಿರುವುದು ಏನೂ ಗೊತ್ತಾಗುತ್ತಿಲ್ಲ. ಆದರೆ ಕೇಳಿ. ಇದೆಲ್ಲ ಏತಕ್ಕಾಗಿ, ಅಥವಾ ಏಕೆ ಅಲ್ಲ ಎಂತಲೇ ಎನ್ನಿ. ಆದರೆ ಏತಕ್ಕೆ ನೀವು... ಇಷ್ಟು ಹಠಾತ್ತನೆ... ಅಯ್ಯೋ ದೇವರೇ! ನಾನು ಏನೇನೋ ಮಾತನಾಡುತ್ತಿದ್ದೇನೆ! ಆದರೆ ನೀವು..."

ನಾಸ್ತೆಂಕ ಸಂಪೂರ್ಣವಾಗಿ ಗೊಂದಲಕ್ಕೊಳಗಾದಳು. ಅವಳ ಕೆನ್ನೆಗಳ ಮೇಲೆ ರಂಗೇರಿತು. ಅವಳು ಕಣ್ಣು ತಗ್ಗಿಸಿದಳು.

"ಆದರೆ ನಾನೇನು ಮಾಡಲಿ, ನಾಸ್ತೆಂಕ, ನಾನೇನು ಮಾಡಲಿ? ತಪ್ಪು ನನ್ನದೇ. ನಾನು ದುರುಪಯೋಗಪಡಿಸಿಕೊಂಡೆ.... ಆದರೆ ಇಲ್ಲ, ತಪ್ಪು ನನ್ನದಲ್ಲ, ನಾಸ್ತೆಂಕ. ನಾನದನ್ನು ಭಾವಿಸಬಲ್ಲೆ, ನಾನದನ್ನು ಕೇಳಬಲ್ಲೆ. ಏಕೆಂದರೆ ನಾನು ಸರಿ ಎಂದು ನನ್ನ ಹೃದಯ ಹೇಳುತ್ತಿದೆ. ನಾನೆಂದೂ ನಿಮಗೆ ಘಾಸಿ ಮಾಡಲು ಅಥವಾ ಅವಮಾನ ಮಾಡಲು ಸಮರ್ಥನಲ್ಲ! ನಾನು ನಿಮ್ಮ ಮಿತ್ರನಾಗಿದ್ದೆ; ಸರಿ, ಈಗಲೂ ನಾನು ನಿಮ್ಮ ಮಿತ್ರನೇ; ನಾನು ವಿಶ್ವಾಸಕ್ಕೆ ದ್ರೋಹ ಬಗೆದಿಲ್ಲ. ನನ್ನ ಮುಖದ ಮೇಲೆ ಹರಿಯುತ್ತಿರುವ ಕಣ್ಣೀರು ಕಾಣಿಸುತ್ತಿದೆಯೇ, ನಾಸ್ತೆಂಕ? ಹರಿಯಲಿ ಬಿಡಿ. ಹರಿಯಲಿ. ಅದರಿಂದ ಯಾವ ಹಾನಿಯೂ ಇಲ್ಲ! ಅದು ಒಣಗಿ ಹೋಗುತ್ತದೆ, ನಾಸ್ತೆಂಕ".

"ಓಹ್, ಕುಳಿತುಕೊಳ್ಳಿ, ದಯವಿಟ್ಟು ಕುಳಿತುಕೊಳ್ಳಿ" ಅವಳು ನನ್ನನ್ನು ತನ್ನ ಪಕ್ಕಕ್ಕೆ ಎಳೆದು ಕೂರಿಸಿಕೊಳ್ಳುತ್ತ ಹೇಳಿದಳು. "ಓಹ್, ದೇವರೇ ! ಓಹ್, ದೇವರೇ !"

"ಇಲ್ಲ, ನಾಸ್ತೆಂಕ. ನಾನು ಕುಳಿತುಕೊಳ್ಳುವುದಿಲ್ಲ. ನಾನಿಲ್ಲಿ ಹೆಚ್ಚು ಕಾಲ ಇರಲಾಗದು. ನೀವು ನನ್ನನ್ನು ಇನ್ನೆಂದೂ ಕಾಣುವುದಿಲ್ಲ. ನಾನು ಹೇಳುವುದನ್ನೆಲ್ಲ ಹೇಳಿ ಹೊರಟುಹೋಗುತ್ತೇನೆ. ನೀವು ನನ್ನ ಪ್ರೀತಿಯ ವಿಷಯ ಎಂದೂ ತಿಳಿಯುತ್ತಲೇ ಇರಲಿಲ್ಲ. ಎಂದಷ್ಟೆ ನಾನು ಹೇಳ ಬಯಸಿದ್ದೆ. ನಾನದನ್ನು ರಹಸ್ಯವಾಗಿಯೇ ಇರಿಸಿಕೊಳ್ಳುತ್ತಿದ್ದೆ. ಇಂತಹ ಸ್ಥಿತಿಯಲ್ಲಿ ನಿಮ್ಮನ್ನು ನನ್ನ ಸ್ವಾರ್ಥದಿಂದ ಹಿಂಸಿಸಲು ನಾನು ಎಂದೂ ಯೋಚಿಸುತ್ತಿರಲಿಲ್ಲ. ಆದರೆ ಅದು ನನ್ನ ಸಹನಾ ಶಕ್ತಿಗೂ ಮೀರಿದ್ದಿತು. ನೀವೇ ಅದರ ಬಗೆಗೆ ಮಾತನಾಡಲು ಪ್ರಾರಂಭಿಸಿದಿರಿ. ಅದು ನಿಮ್ಮ ತಪ್ಪೇ. ಎಲ್ಲದಕ್ಕೂ ನೀವೇ ದೋಷಾರ್ಹರು, ನಾನಲ್ಲ. ನೀವು ನನ್ನನ್ನು ನಿಮ್ಮಿಂದ ದೂಡಲಾರಿರಿ..."

"ಇಲ್ಲ. ನಾನು ನಿಮ್ಮನ್ನು ನನ್ನಿಂದ ದೂಡುವುದಿಲ್ಲ, ಇಲ್ಲ !" ನಾಸ್ತೆಂಕ ಹೇಳಿದಳು, ತನ್ನ ಗೊಂದಲವನ್ನು ಮರೆಮಾಚಿ ಇರಿಸಲು ಶಕ್ತಿಮೀರಿ ಯತ್ನಿಸುತ್ತ. ನತದೃಷ್ಟೆ.

"ನೀವು ನನ್ನನ್ನು ನಿಮ್ಮಿಂದ ದೂಡುವುದಿಲ್ಲವೇ ? ಇಲ್ಲವೇ ? ನಾನೇ ನಿಮ್ಮಿಂದ ಓಡಿ ಹೋಗಲಿದ್ದೆ. ನಾನೇ ಹೊರಟು ಹೋಗುತ್ತೇನೆ. ಹೋಗುವ ಮುನ್ನ ಎಲ್ಲ ಹೇಳಿ ಬಿಡುತ್ತೇನೆ. ಏಕೆಂದರೆ ಈಗಷ್ಟೆ ನೀವು ನನ್ನೊಂದಿಗೆ ಮಾತನಾಡುತ್ತಿದ್ದಾಗ ನನಗೆ ತಡೆದುಕೊಂಡಿರಲೇ ಆಗಲಿಲ್ಲ. ನೀವು.... ನೀವು (ಕ್ಷಮಿಸಿ ಇದನ್ನು ಹೇಳುತ್ತಿರುವುದಕ್ಕೆ, ನಾಸ್ತೆಂಕ) ನಿಮ್ಮನ್ನು ತೊರೆದು ಬಿಡಲಾಗುತ್ತಿದೆ, ನಿಮ್ಮ ಪ್ರೀತಿಯನ್ನು ಜರಿಯಲಾಗುತ್ತಿದೆ, ಎಂದು ಭಾವಿಸಿಕೊಂಡು ನಿಮ್ಮನ್ನೇ ಹಿಂಸೆಗೆ ಗುರಿಪಡಿಸಿಕೊಳ್ಳುತ್ತಿದ್ದಾಗ, ಅಳುತ್ತಿದ್ದಾಗ, ನಾನು ನನ್ನ ಹೃದಯದಲ್ಲಿ ನಿಮಗಾಗಿ ಎಷ್ಟೊಂದು ಪ್ರೇಮವಿದೆ, ನಾಸ್ತೆಂಕ, ಎಷ್ಟೊಂದು ಪ್ರೇಮವಿದೆ, ಎಂಬುದನ್ನು ನಾನು ತಿಳಿದಿದ್ದೆ, ಭಾವಿಸಿದ್ದೆ ! ನಾನು ನಿಮಗೆ ಈ ನನ್ನ ಪ್ರೇಮದಿಂದ ಸಹಾಯ ಮಾಡಲಾರದಾಗಿದ್ದೇನಲ್ಲ ಎಂದು ನನಗೆ ತುಂಬ ದುಃಖವಾಯಿತು... ಅದು ನನ್ನ ಹೃದಯವನ್ನು ಒಡೆಯಿತು, ನಾನು, ನಾನು ಮೌನದಿಂದಿರದಾದೆ. ನಾನು ಮಾತನಾಡಲೇ ಬೇಕಿದ್ದಿತು, ನಾಸ್ತೆಂಕ, ಮಾತನಾಡಲೇ ಬೇಕಿದ್ದಿತು !"

"ಹುಂ, ಹೇಳಿ. ಹೇಳುತ್ತ ಹೋಗಿ. ಇದೇ ರೀತಿ ಹೇಳುತ್ತ ಹೋಗಿ !" ನಾಸ್ತೆಂಕಳು ಅನಿರ್ವಚನೀಯವಾದಂಥ ಭಾವೋದ್ವೇಗದೊಂದಿಗೆ ಹೇಳಿದಳು. "ನಾನು ಹೀಗೆ ಹೇಳುತ್ತಿರುವುದು ನಿಮಗೆ ವಿಚಿತ್ರವಾಗಿ ಕಾಣಬಹುದು.... ಆದರೆ ಹೇಳಿ, ಹೇಳಿ ! ನಾನು ಆಮೇಲೆ ಹೇಳುತ್ತೇನೆ ! ಎಲ್ಲವನ್ನೂ ಹೇಳುತ್ತೇನೆ !"

"ನೀವು ನನಗಾಗಿ ಪರಿತಪಿಸುತ್ತಿದ್ದೀರಿ, ನಾಸ್ತೆಂಕ. ನನಗಾಗಿಯಷ್ಟೆ ಪರಿತಪಿಸುತ್ತಿದ್ದೀರಿ, ನನ್ನ ಪುಟ್ಟ ಗೆಳತಿ ! ಸರಿ, ಆದದ್ದು ಆಯಿತು ! ಹೇಳಿದ್ದನ್ನು ಹೇಳಿರದಂತೆ ಮಾಡಲಾಗುವುದಿಲ್ಲ, ಅಲ್ಲವೇ ? ನಿಮಗೀಗ ಎಲ್ಲ ತಿಳಿದಿದೆ. ಇದೇ ನಮ್ಮ ಆರಂಭ ಬಿಂದುವಾಗಲಿ. ತುಂಬ ಒಳ್ಳೆಯದು. ಎಲ್ಲವೂ ಈಗ ಭವ್ಯವಾಗಿದೆ ! ಆದರೆ ನನ್ನ ಮಾತು ಪೂರ್ತಿ ಕೇಳಿ. ನೀವಲ್ಲಿ ಕುಳಿತು ಅಳುತ್ತಿದ್ದಾಗ ನಾನು ನನ್ನಲ್ಲೇ ಅಂದುಕೊಂಡೆ (ನಾನು ಏನಂದುಕೊಂಡೆ ಅನ್ನುವುದನ್ನು ಹೇಳಲು ಬಿಡಿ). ನಾನು ಅಂದುಕೊಂಡೆ (ಅದು ಎಂದಿಗೂ ಹಾಗಾಗುವುದು ಸಾಧ್ಯವಿಲ್ಲವೆನ್ನಿ, ನಾಸ್ತೆಂಕ), ನಾನು ಅಂದುಕೊಂಡೆ, ನೀವು.... ನಾನು ಹೇಗೋ ಅಂದುಕೊಂಡೆ, ನೀವು, ಒಂದು ರೀತಿಯ ನಿರ್ಲಿಪ್ತ ರೀತಿಯಲ್ಲಿ ಎನ್ನಿ, ನೀವು ಅವರನ್ನು ಇನ್ನೆಷ್ಟು ಮಾತ್ರವೂ ಪ್ರೀತಿಸುತ್ತಿಲ್ಲ, ಅಂತ. ಆಗ – ನಾನು ಕಳೆದ ರಾತ್ರಿಯೂ, ಅದಕ್ಕೆ ಹಿಂದಿನ ರಾತ್ರಿಯೂ ಇದೇ ಯೋಚನೆ ಮಾಡುತ್ತಿದ್ದೆ, ನಾಸ್ತೆಂಕ – ನಾನು ಏನಾದರೂ ಮಾಡಬೇಕು, ನೀವು ನನ್ನನ್ನು ಪ್ರೀತಿಸುವಂತೆ ಮಾಡಲು ಏನಾದರೂ ಮಾಡಬೇಕು, ಅಂದುಕೊಂಡೆ. ನೀವೇ ಹೇಳಿದಿರಿ, ಅಲ್ಲವೇ, ನಾಸ್ತೆಂಕ, ನೀವೇ ಹೇಳಿದಿರಿ, ನೀವು ಬಹುಮಟ್ಟಿಗೆ ನನ್ನನ್ನು ಪ್ರೀತಿಸುವಂತಾಗಿದ್ದೀರಿ, ಎಂದು. ಸರಿ, ಹಾಗಾದರೆ, ನಾನು ಏನು ಹೇಳ ಹೋಗಿದ್ದೆ ? ಓಹ್, ಸರಿ, ನಾನು ಎಲ್ಲ ಹೇಳಿದ್ದಾಯಿತು ಅಂತ ನನಗನಿಸುತ್ತೆ. ಈಗ ನಾನು ನಿಮಗೆ ಹೇಳಬಹುದಾದುದೆಲ್ಲ, ನೀವು ನನನ್ನೇನಾದರೂ ಪ್ರೀತಿಸುತ್ತಿದ್ದರೆ ನಾನು ಏನು ಹೇಳಬಹುದಾಗಿದ್ದಿತೋ ಅದು – ಅದು ಅಷ್ಟೆ, ಹೆಚ್ಚಿಗೇನೂ ಇಲ್ಲ ! ಕೇಳಿ, ನನ್ನ ಪ್ರಿಯ ಗೆಳತಿ – ಏಕೆಂದರೆ, ಎಷ್ಟೇ ಆಗಲಿ ನೀವು ನನ್ನ ಗೆಳತಿ – ನಾನೊಬ್ಬ ಸಾಮಾನ್ಯ ಮನುಷ್ಯ ಎನ್ನಿ. ನಾನು ಬಡವ ಆದ್ದರಿಂದ ನಿಕೃಷ್ಟನಾದವ. ಆದರೆ ಅದು ಮುಖ್ಯವಲ್ಲ (ನಾನು ಸರದಿ ಬಿಟ್ಟು ಮಾತನಾಡುತ್ತಿದ್ದೇನೆಂದು ಕಂಡುಬರಬಹುದು, ಆದರೆ ಅದು ನನ್ನ ನಾಚಿಕೆಯಿಂದಾಗಿ, ನಾಸ್ತೆಂಕ). ಮುಖ್ಯ ವಿಷಯವೆಂದರೆ, ನಾನು ನಿಮ್ಮನ್ನು ಹೇಗೆ ಪ್ರೀತಿಸುವೆನೆಂದರೆ, ಹೇಗೆ ಪ್ರೀತಿಸುವೆನೆಂದರೆ, ಈ ಪ್ರೇಮ ನಿಮ್ಮ ಮೇಲೆ ಯಾವ ರೀತಿಯಲ್ಲೂ ಎಂದೂ ಹೊರೆ ಎಂಬ ಭಾವನೆ ಉಂಟುಮಾಡುವುದಿಲ್ಲ, ನೀವು ನನಗೆ ತಿಳಿಯದ ಆ ಇನ್ನೊಬ್ಬ ವ್ಯಕ್ತಿಯ ಬಗೆಗೆ ಇನ್ನೂ ಆಸ್ಥೆ ಹೊಂದಿದ್ದರೂ, ಹೊಂದಿರುತ್ತಲೇ ಹೋದರೂ. ನಿಮಗೆ ಅನಿಸಬಹುದಾದುದೆಲ್ಲ, ನಿಮ್ಮ ಪ್ರಜ್ಞೆಗೆ ಬರಬಹುದಾದುದೆಲ್ಲ ನಿಮ್ಮ ಪಕ್ಕದಲ್ಲೇ ಒಂದು ಹೃದಯ ಸತತವಾಗಿ ಮಿಡಿಯುತ್ತಿದೆ, ಎಂಬುದಷ್ಟೆ. ಕೃತಜ್ಞತೆಯಿಂದ ತುಂಬಿದ, ಪ್ರೇಮಪೂರಿತ ಹೃದಯ, ನಿಮಗೆ ಸದಾ ಕಾಲಕ್ಕೂ ಸೇರಿರುವಂಥ ಹೃದಯ. ಓಹ್ ನಾಸ್ತೆಂಕ ! ನಾಸ್ತೆಂಕ ! ನೀವು ನನಗೆ ಏನು ಮಾಡಿಬಿಟ್ಟಿರಿ !"

"ದಯವಿಟ್ಟು ಅಳಬೇಡಿ, ನೀವು ಅಳುವುದು ನನಗೆ ಬೇಡ" ನಾಸ್ತೆಂಕ ಬೇಗ

ಬೆಂಚಿನ ಮೇಲಿನಿಂದ ಎದ್ದು ನಿಲ್ಲುತ್ತ ಹೇಳಿದಳು. "ಬನ್ನಿ, ಏಳಿ, ನನ್ನೊಂದಿಗೆ ಬನ್ನಿ, ಅಳಬೇಡಿ, ಅಳಬೇಡಿ" ಎಂದು ಅವಳು ಕರವಸ್ತ್ರದಿಂದ ನನ್ನ ಕಣ್ಣೀರನ್ನು ಒರಸಿದಳು. "ಸರಿ, ಈಗ ಬನ್ನಿ, ನಾನೂ ನಿಮಗೆ ಸ್ವಲ್ಪ ವಿಷಯ ಹೇಳ ಬಹುದೇನೋ. ಈಗ ಅವರು ನನ್ನನ್ನು ತೊರೆದಿರುವುದರಿಂದ, ಈಗ ಅವರು ನನ್ನನ್ನು ಮರೆತಿರುವುದರಿಂದ, ನಾನು ಅವರನ್ನು ಇನ್ನೂ ಪ್ರೀತಿಸುತ್ತಿದ್ದರೂ (ನಾನು ನಿಮಗೆ ಮೋಸ ಮಾಡಲು ಬಯಸುವುದಿಲ್ಲ)... ಆದರೆ ಹೇಳಿ, ನನ್ನ ಪ್ರಶ್ನೆಗೆ ಉತ್ತರ ಹೇಳಿ. ಉದಾಹರಣೆಗೆ, ನಾನು ನಿಮ್ಮನ್ನು ಪ್ರೀತಿಸುವಂತಾದರೆ, ಅಂದರೆ ಹಾಗಾದರಷ್ಟೆ.... ಓಹ್, ನನ್ನ ಗೆಳೆಯ, ನನ್ನ ಗೆಳೆಯ! ನಾನು ನಿಮ್ಮ ಪ್ರೇಮವನ್ನು ಹಾಸ್ಯ ಮಾಡಿದಾಗ, ನನ್ನಲ್ಲಿ ಅನುರಕ್ತರಾಗದೆ ಇದ್ದುದಕ್ಕಾಗಿ ನಿಮ್ಮನ್ನು ನಾನು ಹೊಗಳಿದಾಗ, ನಿಮಗೆ ಯಾವ ರೀತಿಯಲ್ಲಿ ಘಾಸಿ ಉಂಟುಮಾಡಿದೆನೆಂಬುದನ್ನು ನಾನು ನೆನಪಿಗೆ ತಂದುಕೊಂಡಾಗ, ಅದರ ಬಗೆಗೆ ಯೋಚಿಸಿದಾಗ! ಇದನ್ನು ನಾನೇಕೆ ಮುಂಗಾಣಲಿಲ್ಲ, ಏಕೆ ಮುಂಗಾಣಲಿಲ್ಲ? ನಾನು ಎಷ್ಟು ಮೂರ್ಖಳಾಗಿದ್ದೆ. ಆದರೆ... ಸರಿ, ಈಗ ನಾನು ನಿರ್ಧರಿಸಿದ್ದೇನೆ. ನಾನು ಎಲ್ಲವನ್ನೂ ಹೇಳಿಬಿಡುತ್ತೇನೆ."

"ತಾಳಿ, ನಾಸ್ತೆಂಕ. ನಾನು ನಿಮ್ಮನ್ನು ಶಾಂತಿಯಲ್ಲಿ ಇರಗೊಟ್ಟು ಹೋಗಬೇಕೆಂದು ನನಗನಿಸುತ್ತಿದೆ. ನಾನು ನಿಮ್ಮನ್ನು ಚಿತ್ರಹಿಂಸೆಗೆ ಗುರಿಪಡಿಸುತ್ತಿದ್ದೇನಷ್ಟೆ. ನಿಮ್ಮ ಅಂತರಂಗ ನಿಮ್ಮನ್ನು ಬಾಧಿಸತೊಡಗಿದೆ, ನೀವು ನನ್ನನ್ನು ಪರಿಹಾಸ್ಯ ಮಾಡಿದಿರಿ ಎಂಬ ಕಾರಣದಿಂದ. ಇದನ್ನು ನಾನು ಇಷ್ಟಪಡುವುದಿಲ್ಲ, ಇಲ್ಲ, ಇಷ್ಟಪಡುವುದಿಲ್ಲ. ನಿಮಗೆ ನಿಮ್ಮದೇ ದುಃಖ ಬೇಕಾದಷ್ಟಿದೆ... ಅದು ನನ್ನ ತಪ್ಪೇ, ನಾಸ್ತೆಂಕ. ಹೋಗಿ ಬರುತ್ತೇನೆ!"

"ನಿಲ್ಲಿ, ನನ್ನ ಮಾತು ಕೇಳಿ; ಸ್ವಲ್ಪ ಕಾಯಬಲ್ಲಿರಾ?"

"ಕಾಯುವುದೇ – ಯಾತಕ್ಕಾಗಿ?"

"ನಾನು ಅವರನ್ನು ಪ್ರೀತಿಸುತ್ತೇನೆ. ಆದರೆ ಅದು ಹೊರಟುಹೋಗುವುದು, ಹೋಗಲೇ ಬೇಕು, ಹೋಗದಿರಲು ಸಾಧ್ಯವಿಲ್ಲ. ಈಗಲೇ ಅದು ಹೋಗುತ್ತಿದೆ, ನನಗದರ ಭಾವನೆಯಾಗುತ್ತಿದೆ... ಯಾರಿಗೆ ಗೊತ್ತು, ಅದು ಬಹುಶಃ ಈ ರಾತ್ರಿಯೇ ಮುಗಿದು ಹೋಗಬಹುದು. ಏಕೆಂದರೆ ನಾನು ಅವರನ್ನು ದ್ವೇಷಿಸುತ್ತೇನೆ. ಅವರು ನನ್ನನ್ನು ಧಿಕ್ಕರಿಸಿದರು. ಆದರೆ ನೀವು ನನ್ನೊಂದಿಗೆ ಅತ್ತಿರಿ. ನೀವು ನನ್ನನ್ನು ಪ್ರೀತಿಸುತ್ತೀರ. ಅದಕ್ಕಾಗಿಯೇ ನೀವು ಅವರಂತೆ ನನ್ನನ್ನು ತೊರೆದಿಲ್ಲ. ಅವರು ನನ್ನನ್ನು ಎಂದೂ ಪ್ರೀತಿಸಲೇ ಇಲ್ಲ. ಅಲ್ಲದೆ, ನಾನು ನಿಮ್ಮನ್ನು ಪ್ರೀತಿಸುತ್ತೇನೆ, ಎಂಬ ಕಾರಣದಿಂದಲೂ... ಹೌದು, ನಾನು ಪ್ರೀತಿಸುತ್ತೇನೆ! ನೀವು ನನ್ನನ್ನು ಪ್ರೀತಿಸುವಂತೆಯೇ ನಾನು ನಿಮ್ಮನ್ನು ಪ್ರೀತಿಸುತ್ತೇನೆ! ನಾನು ಅದನ್ನು ಈ ಮುನ್ನವೂ

ಹೇಳಿದೆ – ನಿಮಗೇ ಗೊತ್ತಿದೆ. ನಾನು ನಿಮ್ಮನ್ನು ಪ್ರೀತಿಸುತ್ತೇನೆ, ಏಕೆಂದರೆ ನೀವು ಅವರಿಗಿಂತ ಹೆಚ್ಚು ಉತ್ತಮರು, ಏಕೆಂದರೆ ನೀವು ಹೆಚ್ಚು ಗೌರವ ಉಳ್ಳವರು, ಏಕೆಂದರೆ, ಏಕೆಂದರೆ...."

ಹತಭಾಗ್ಯೆ ನಾಸ್ತೆಂಕ. ಅವಳು ಎಷ್ಟು ಭಾವಪರವಶಳಾದಳೆಂದರೆ ಅವಳಿಗೆ ಮಾತು ಮುಂದುವರಿಸಲಾಗಲಿಲ್ಲ. ಅವಳು ತನ್ನ ತಲೆಯನ್ನು ನನ್ನ ಭುಜದ ಮೇಲೆ ವಾಲಿಸಿದಳು, ಅನಂತರ ನನ್ನ ಎದೆಯ ಮೇಲೆ ಬೀಳಗೊಟ್ಟಳು, ಸ್ತಿಮಿತಗೆಟ್ಟಂತೆ ಅತ್ತಳು. ನಾನು ಅವಳನ್ನು ಸಮಾಧಾನ ಮಾಡಲು, ಸಂತೈಸಲು, ಯತ್ನಿಸಿದೆ. ಆದರೆ ಅವಳು ತನ್ನ ಕಣ್ಣೀರನ್ನು ತಡೆಹಿಡಿಯದಾಗಿದ್ದಳು. ಅವಳು ನನ್ನ ಕೈಯನ್ನು ಅವುಕುತ್ತಲೇ ಇದ್ದಳು. ಗದ್ಗದಿಸುತ್ತ "ಒಂದು ನಿಮಿಷ, ಒಂದು ನಿಮಿಷ, ಈಗ ನಿಲ್ಲಿಸುತ್ತೇನೆ ! ನಿಮಗೆ ಏನು ಹೇಳಬೇಕೂಂದರೆ... ಈ ಕಣ್ಣೀರು ಅರ್ಥವಿಲ್ಲದ್ದು. ಅಶಕ್ತಿಯಿಂದಾಗಿ ಅಳುತ್ತಿದ್ದೇನೆ. ಇನ್ನೊಂದು ನಿಮಿಷದಲ್ಲಿ ಎಲ್ಲ ಮುಗಿಯುತ್ತೆ." ಕೊನೆಗೆ ಅವಳ ಗದ್ಗದ ನಿಂತಿತು. ಕಣ್ಣೀರು ಒರಸಿಕೊಂಡಳು. ನಾವು ಮುಂದೆ ನಡೆದು ಹೋದೆವು. ನಾನು ಏನೋ ಹೇಳಲಿದ್ದೆ, ಆದರೆ ತಾಳಿ ಎಂದು ಅವಳು ಕೇಳಿಕೊಂಡಳು. ಇಬ್ಬರೂ ಮೌನದಿಂದಿದ್ದೆವು. ಕೊನೆಗೆ ಅವಳು ಸಮಾಧಾನ ಮಾಡಿಕೊಂಡು ಹೇಳತೊಡಗಿದಳು:

"ನಾನು ನನ್ನ ಪ್ರೀತಿಯಲ್ಲಿ ತುಂಬ ಅಸ್ಥಿರಳು ಹಾಗೂ ದುಡುಕಿನವಳು ಎಂದು ದಯವಿಟ್ಟು ಭಾವಿಸಬೇಡಿ" ಅವಳು ದುರ್ಬಲವಾದ ನಡುಗುತ್ತಿರುವ ಧ್ವನಿಯಲ್ಲಿ ಹೇಳಿದಳು. ಆದರೆ ಅದರಲ್ಲಿ ಏನೋ ಒಂದು ರೀತಿಯ ತಕ್ಷಣದ ಅನುರಣನವಿದ್ದಿತು. ಅದು ನೇರವಾಗಿ ನನ್ನ ಹೃದಯದೊಳಕ್ಕೆ ನುಗ್ಗಿತು, ಅಲ್ಲಿ ಮಧುರ ಯಾತನೆಯೊಂದಿಗೆ ಮಿಡಿಯ ತೊಡಗಿತು. "ನಾನು ಬಹು ಬೇಗ ಬಹು ಸುಲಭವಾಗಿ ಮರೆತು ಬಿಡುತ್ತೇನೆ, ದ್ರೋಹ ಬಗೆಯುತ್ತೇನೆ, ಎಂದು ದಯವಿಟ್ಟು ಭಾವಿಸಬೇಡಿ.... ನಾನು ಅವರನ್ನು ಒಂದು ಇಡೀ ವರ್ಷ ಪ್ರೀತಿಸಿದೆ. ನಾನು ಅವರಿಗೆ ಕನಸು ಮನಸ್ಸಿನಲ್ಲೂ ಸಹ ಎಂದೂ ವಂಚನೆ ಮಾಡಿಲ್ಲವೆಂದು ದೇವರ ಮೇಲೆ ಆಣೆಯಿಟ್ಟು ಹೇಳುತ್ತೇನೆ. ಅವರು ನನ್ನ ನಿಷ್ಠೆಯನ್ನು ಧಿಕ್ಕರಿಸಿದರು, ನನ್ನನ್ನು ಅವಹೇಳನ ಮಾಡಿದರು – ಮಾಡಿಕೊಳ್ಳಲಿ ! ಆದರೆ ಅವರು ನನ್ನನ್ನು ಘಾಸಿಗೊಳಿಸಿದ್ದಾರೆ, ನನ್ನ ಪ್ರೇಮವನ್ನು ಅವಮಾನಿಸಿದ್ದಾರೆ. ನಾನು... ನಾನು ಅವರನ್ನು ಪ್ರೀತಿಸುವುದಿಲ್ಲ, ಏಕೆಂದರೆ, ನಾನು ಔದಾರ್ಯ, ತಿಳಿವಳಿಕೆ, ಮರ್ಯಾದೆಯಿಂದ ಕೂಡಿದವರನ್ನಷ್ಟೆ ಪ್ರೀತಿಸಬಲ್ಲೆ. ಏಕೆಂದರೆ ನಾನು ಇರುವುದು ಹಾಗೆಯೇ. ಅವರು ನನಗೆ ಯೋಗ್ಯರಲ್ಲ – ಸರಿ, ಹಾಗೆಯೇ ಇದ್ದುಕೊಳ್ಳಲಿ ! ಅವರು ಸರಿಯಾಗಿಯೇ ವರ್ತಿಸಿದರು. ಆಮೇಲೆ, ಅವರು ಎಂತಹ ಮನುಷ್ಯರೆಂಬುದನ್ನು ನಾನು ತಿಳಿಯುವಂತಾದ ಮೇಲೆ ಅವರಲ್ಲಿ ನಿರಾಶಳಾಗಿದ್ದರೆ, ನನ್ನ

ಸ್ಥಿತಿ ಇನ್ನೂ ಹೆಚ್ಚು ಕೆಟ್ಟುದಾಗಿರುತ್ತಿದ್ದಿತು... ಈಗ ಅದೆಲ್ಲ ಮುಗಿಯಿತು. ಆದರೆ ಯಾರಿಗೆ ಗೊತ್ತು, ನನ್ನ ಕರುಣಾಳು ಗೆಳೆಯ" ಎನ್ನುತ್ತ ಅವಳು ತನ್ನ ಕೈ ಬೆರಳುಗಳನ್ನು ನನ್ನ ಬೆರಳುಗಳ ಸುತ್ತ ಮುಚ್ಚಿರಿಸುತ್ತ ಮಾತು ಮುಂದು ವರಿಸಿದಳು: "ಯಾರಿಗೆ ಗೊತ್ತು, ನನ್ನ ಈ ಪ್ರೀತಿಯೇ ಒಂದು ಮರೀಚಿಕೆಯಾಗಿದ್ದಿತೇನೋ, ನನ್ನ ಕಲ್ಪನಾ ವಿಲಾಸವಾಗಿದ್ದಿತೇನೋ. ಬಹುಶಃ ಅದೆಲ್ಲ ತುಂಟತನ ಅವಿವೇಕದಿಂದ ಪ್ರಾರಂಭವಾಯಿತೇನೋ. ಏಕೆಂದರೆ ಅಜ್ಜಿಯ ಕಣ್ಣು ತಪ್ಪಿಸಿಕೊಂಡು ಹೋಗಲು ನನಗೆಂದೂ ಅವಕಾಶವೇ ಇರಲಿಲ್ಲ. ಬಹುಶಃ ನಾನು ಅವರನ್ನಲ್ಲ ಆದರೆ ಬಹುಶಃ ಇನ್ನೊಬ್ಬರನ್ನು, ವಿಭಿನ್ನ ವ್ಯಕ್ತಿಯನ್ನು, ನನ್ನ ಮೇಲೆ ಕರುಣೆ ತೋರುವಂಥ ವ್ಯಕ್ತಿಯನ್ನು ಪ್ರೀತಿಸಬೇಕಿದ್ದಿತೇನೋ... ಮತ್ತು... ಊಹೂಂ, ಇದನ್ನು ಇಲ್ಲಿಗೇ ಬಿಡೋಣ, ಇದನ್ನು ಇಲ್ಲಿಗೇ ಬಿಡೋಣ." ನಾಸ್ತೆಂಕ ತನ್ನ ಮಾತನ್ನು ಥಟಕ್ಕನೆ ಮೊಟಕು ಮಾಡಿದಳು, ಭಾವೋತ್ಕರ್ಷದಿಂದ ಉಸಿರು ಕಟ್ಟಿದಂತಾಗಿದ್ದಳು. "ನಾನು ಹೇಳಬಯಸಿದುದೇನೆಂದರೆ... ನಾನು ನಿಮಗೆ ತಿಳಿಸ ಬಯಸಿದುದೇನೆಂದರೆ, ನಾನು ಅವರನ್ನು ಪ್ರೀತಿಸುತ್ತಿದ್ದರೂ (ಇಲ್ಲ, ಎಂದೋ ಪ್ರೀತಿಸಿದ್ದರೂ), ಹಾಗಿದ್ದಡೂ, ನೀವು ಮತ್ತೊಮ್ಮೆ.... ನಿಮ್ಮ ಪ್ರೇಮ ಎಷ್ಟು ಮಹತ್ತಾದುದೆಂದರೆ ಅದು ಇನ್ನೊಬ್ಬರನ್ನು ನನ್ನ ಹೃದಯದಿಂದ ನಿಜಕ್ಕೂ ಹೊರದೂಡಬಲ್ಲುದೆಂದು ನೀವು ಭಾವಿಸಿದಲ್ಲಿ.... ನೀವು ನನ್ನ ಮೇಲೆ ಕರುಣೆ ತೋರ ಬಯಸಿದಲ್ಲಿ, ನೀವು ನನ್ನನ್ನು ನನ್ನ ದುರ್ಗತಿಗೇ, ಒಂಟಿತನಕ್ಕೇ, ಚಿತ್ತ ಸ್ಥೈರ್ಯ ಕಳೆದುಕೊಂಡು ಆಶಾಭಂಗವಾಗಿ ಗೋಳಾಡುವ ಸ್ಥಿತಿಗೇ, ಬಿಟ್ಟು ಕೊಡ ಬಯಸದಿದ್ದಲ್ಲಿ, ಈಗ ನೀವು ನನ್ನನ್ನು ಪ್ರೀತಿಸುತ್ತಿರುವಂತೆಯೇ ಸದಾ ಕಾಲವೂ ಪ್ರೀತಿಸ ಬಯಸಿದಲ್ಲಿ, ನಾನು ಪ್ರಮಾಣಮಾಡಿ ಹೇಳುತ್ತೇನೆ, ನನ್ನ ಕೃತಜ್ಞತೆ... ನನ್ನ ಪ್ರೇಮ ನಿಮ್ಮ ಪ್ರೇಮಕ್ಕೆ ಯೋಗ್ಯವಾದುದಾಗಿರುವುದು. ಇದನ್ನು ಕೇಳಿದ ಮೇಲೆ, ನೀವು ನನ್ನ ಕೈ ಹಿಡಿಯುವಿರಾ?"

"ನಾಸ್ತೆಂಕ!" ನಾನು ಕೂಗಿ ಹೇಳಿದೆ. ನನ್ನ ಗದ್ಗದ ನನ್ನ ಉಸಿರು ಕಟ್ಟಿಸು ವಂತಿತ್ತು: "ನಾಸ್ತೆಂಕ! ಓಹ್, ನಾಸ್ತೆಂಕ!"

"ಸಾಕು, ಸಾಕು! ಇಷ್ಟು ಸಾಕು, ಇದಿಷ್ಟು ಸಾಕು!" ಅವಳು ಪ್ರಯಾಸ ಪಟ್ಟುಕೊಂಡು ಹೇಳಿದಳು. "ಈಗ ಎಲ್ಲವೂ ಹೇಳಲಾಯಿತು, ಅಲ್ಲವೇ? ನಿಮಗೆ ಈಗ ಸಂತೋಷವಾಯಿತು, ನನಗೂ ಸಂತೋಷವಾಯಿತು; ಅದರ ಬಗೆಗೆ ಇನ್ನೊಂದು ಮಾತೂ ಬೇಡ. ಇನ್ನೂ ಈಗಲೇ ಬೇಡ – ನನ್ನ ಮೇಲೆ ಕರುಣೆ ಇಡಿ!... ಬೇರೆ ಯಾವುದಾದರೂ ವಿಷಯ ಮಾತನಾಡಿ, ದಮ್ಮಯ್ಯ!"

"ಹೌದು, ನಾಸ್ತೆಂಕ, ನಿಜ! ಇದು ಸಾಕು. ನನಗೀಗ ಸಂತೋಷವಾಗಿದೆ. ನಾನು... ಹೌದು, ಬೇರೆ ಯಾವುದಾದರೂ ವಿಷಯ ಮಾತನಾಡೋಣ, ನಾಸ್ತೆಂಕ.

ಬೇರೊಂದು ವಿಷಯವನ್ನು ಬೇಗ ಕಂಡುಹಿಡಿಯೋಣ. ಹೌದು ! ನಾನು ಸಿದ್ಧ...."

ನಾವು ಮಾತನಾಡಲು ಬೇರೆ ಯಾವುದೇ ವಿಷಯವನ್ನು ಕಂಡುಹಿಡಿಯದಾದೆವು. ಸುಮ್ಮನೆ ನಕ್ಕೆವು, ಅತ್ತೆವು, ಸಾವಿರಾರು ಅರ್ಥವಿಲ್ಲದ, ಪರಸ್ಪರ ಸಂಬಂಧವಿಲ್ಲದ ಪದಗಳನ್ನು ಹೇಳಿದೆವು. ನದಿಯ ದಂಡೆಯ ಮೇಲೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ನಡೆದಾಡಿದೆವು, ಇಲ್ಲವೇ ಹಠಾತ್ತನೆ ಹಿಂದಕ್ಕೆ ತಿರುಗಿ ರಸ್ತೆಯನ್ನು ದಾಟಲು ಹೋದೆವು, ನಿಂತೆವು, ಮತ್ತೆ ಕಟಕಟೆಯ ಬಳಿಗೆ ಬಂದೆವು. ನಾವು ಇಬ್ಬರು ಮಕ್ಕಳಂತಿದ್ದೆವು.

"ಈಗ ನಾನು ಒಬ್ಬನೇ ವಾಸಿಸುತ್ತಿದ್ದೇನೆ. ಆದರೆ ನಾಳೆ..." ನಾನು ಹೇಳತೊಡಗಿದೆ. "ನೋಡಿ, ನಾನು ಬಡವ, ನಾಸ್ತೆಂಕ. ನನ್ನ ಬಳಿ ಇರುವುದೆಲ್ಲ ವರ್ಷಕ್ಕೆ ಒಂದು ಸಾವಿರದ ಇನ್ನೂರು. ಆದರೆ ಅದು ಪರವಾಗಿಲ್ಲ..."

"ಹೌದು, ಪರವಾಗಿಲ್ಲ. ಜೊತೆಗೆ ಅಜ್ಜಿಯ ಪೆನ್ಷನ್ ಇರುತ್ತೆ. ಅವಳೇನೂ ನಮಗೆ ಹೊರೆಯಾಗುವುದಿಲ್ಲ. ನಾವು ಅಜ್ಜಿಯನ್ನು ನಮ್ಮ ಜೊತೆ ಇಟ್ಟುಕೊಳ್ಳಬೇಕು."

"ಹೌದು, ಅಜ್ಜಿಯನ್ನು ಇಟ್ಟುಕೊಳ್ಳಲೇ ಬೇಕು. ಆಮೇಲೆ ಮತ್ರ್ಯೋನ ಇದ್ದಾಳೆ...."

"ಓಹ್ ಹೌದು. ನಮ್ಮ ಫ್ಯೋಕ್ಲಳೂ ಇದ್ದಾಳೆ !"

"ಮತ್ರ್ಯೋನ ತುಂಬ ಒಳ್ಳೆಯವಳು. ಅವಳ ಒಂದೇ ತಪ್ಪೆಂದರೆ ಕಲ್ಪನಾಶಕ್ತಿ ಇಲ್ಲದಿರುವುದು. ಅವಳಿಗೆ ಏನೇನೂ ಕಲ್ಪನಾಶಕ್ತಿ ಇಲ್ಲ, ನಾಸ್ತೆಂಕ. ಆದರೂ ಅದು ಪರವಾಗಿಲ್ಲ."

"ಚಿಂತಿಸಬೇಡಿ. ಅವರಿಬ್ಬರೂ ಒಟ್ಟಿಗೇ ಇರಬಹುದು. ಆದರೆ ನೀವು ನಾಳೆಯೇ ನಮ್ಮ ಮನೆಗೆ ವಾಸ ಬದಲಿಸಬೇಕು."

"ಹೌದೆ? ನಿಮ್ಮ ಮನೆಗೆ? ಸರಿ. ನಾನು ಸಿದ್ಧ."

"ಹೌದು. ನೀವು ನಮ್ಮೊಂದಿಗೆ ವಾಸಮಾಡುತ್ತೀರ. ನಮ್ಮ ಅಟ್ಟದ ಮೇಲೆ ಒಂದು ಕೋಣೆ ಇದೆ. ಅದೀಗ ಖಾಲಿ. ಅಲ್ಲಿ ಒಬ್ಬ ವೃದ್ಧೆ ವಾಸಿಸುತ್ತಿದ್ದಳು, ಒಬ್ಬ ಸಂಭಾವಿತ ಹೆಂಗಸು. ಈಗ ಬೇರೆ ಕಡೆಗೆ ವಾಸ ಬದಲಿಸಿದ್ದಾಳೆ. ಅದನ್ನು ಯಾರಾದರೂ ಒಬ್ಬ ಯುವಕನಿಗೆ ಬಾಡಿಗೆಗೆ ಕೊಡಬೇಕೆಂದು ಅಜ್ಜಿ ಅಂದು ಕೊಂಡಿದ್ದಾಳೆ, ನನಗೆ ಗೊತ್ತು. 'ಯುವಕನಿಗೇ ಏಕೆ?' ನಾನು ಕೇಳಿದೆ. 'ಸುಮ್ಮನೆ. ನನಗೆ ವಯಸ್ಸಾಯಿತು. ಆದರೆ ನಿನಗೆ ಯಾರನ್ನಾದರೂ ಜೊತೆ ಕೂಡಿಸುವುದಕ್ಕೆ ಯತ್ನಿಸುತ್ತಿದ್ದೇನೆ ಅಂತ ಅಂದುಕೋಬೇಡ, ನಾಸ್ತೆಂಕ!' ಅಂದಳು. ಆದ್ದ

ರಿಂದಲೇ ಅವಳು ಯುವಕನಿಗೆ ಬಾಡಿಗೆಗೆ ಕೊಡಲು ಇಷ್ಟಪಟ್ಟಿರುವುದು ಅಂತ ನಾನು ಕೂಡಲೇ ತಿಳಿದೆ."

"ಆಹ್, ನಾಸ್ತೆಂಕ !"

ನಾವಿಬ್ಬರೂ ನಗತೊಡಗಿದೆವು.

"ನಿಲ್ಲಿ, ನಿಲ್ಲಿ ! ನೀವೆಲ್ಲಿ ವಾಸಿಸುತ್ತಿರುವುದು ? ನಾನು ಕೇಳುವುದನ್ನೇ ಮರೆತೆ."

"ಅಲ್ಲಿ. ಸೇತುವೆ ಹತ್ತಿರ. ಬರಾನ್ನಿಕೊವ್‌ರ ಮನೆಯಲ್ಲಿ."

"ಅದೊಂದು ತುಂಬ ದೊಡ್ಡ ಮನೆ, ಅಲ್ಲವೇ ?"

"ಹೌದು. ದೊಡ್ಡ ಮನೆ."

"ಓಹ್, ನನಗೆ ಗೊತ್ತು. ಅದೊಂದು ಸೊಗಸಾದ ಮನೆ. ಆದರೂ ಅದನ್ನು ಬಿಟ್ಟುಬಿಡಿ. ಸಾಧ್ಯವಾದಷ್ಟು ಬೇಗ ನಮ್ಮ ಮನೆಗೆ ಬಂದುಬಿಡಿ."

"ಬೆಳಗಾದ ಕೂಡಲೇ, ನಾಸ್ತೆಂಕ, ನಾಳೆ ಪ್ರಾರಂಭವಾದ ಕೂಡಲೇ. ನಾನು ಅವರಿಗೆ ಸ್ವಲ್ಪ ಬಾಡಿಗೆ ಕೊಡಬೇಕು. ಪರವಾಗಿಲ್ಲ. ಸಧ್ಯದಲ್ಲೇ ಸಂಬಳ ಬರುತ್ತೆ."

"ನೋಡಿ, ನಾನೂ ಪಾಠ ಹೇಳಿಕೊಡಬಹುದು. ಅಂದರೆ ಮೊದಲು ವ್ಯಾಸಂಗ ಮಾಡುತ್ತೇನೆ, ಆಮೇಲೆ ಪಾಠ ಹೇಳಿಕೊಡುತ್ತೇನೆ."

"ಓಹ್, ಅದು ತುಂಬ ಚೆನ್ನಾಗಿಯೇ ಆಯಿತು.ಅಲ್ಲದೆ ನನಗೆ ಸಧ್ಯದಲ್ಲೇ ನನ್ನ ಗ್ರಾಚ್ಯುಯಿಟಿ (ಪ್ರೋತ್ಸಾಹದ್ರವ್ಯ) ಬರಲಿದೆ, ನಾಸ್ತೆಂಕ."

"ಸರಿ. ಹಾಗಾದರೆ ನೀವು ನಾಳೆ ನಮ್ಮ ಮನೆಗೆ ವಾಸಕ್ಕೆ ಬರುತ್ತೀರ"

"ಹೌದು. ಆಮೇಲೆ ನಾವು 'ಬಾರ್ಬರ್ ಆಫ್ ಸೆವಿಲ್' ಆಪೆರಾಗೆ ಹೋಗೋಣ. ಅದು ಬೇಗನೆಯೇ ಮತ್ತೆ ಪ್ರದರ್ಶನಕ್ಕೆ ಬರುತ್ತಿದೆ."

"ಹೌದು, ಹೋಗೋಣ" ನಾಸ್ತೆಂಕ ಮುಗುಳ್ನಗುತ್ತ ಹೇಳಿದಳು. "ಆದರೆ ಬೇಡ. 'ಬಾರ್ಬರ್' ಆಪೆರಾಗೆ ಬೇಡ. ಬೇರೆ ಯಾವುದಕ್ಕಾದರೂ ಹೋಗೋಣ."

"ಸರಿ, ಹಾಗೇ ಆಗಲಿ. ಬೇರೆಯೇ ಆಯಿತು. ಅದು ಇನ್ನೂ ಉತ್ತಮ. ಕ್ಷಮಿಸಿ, ನನಗದು ಹೊಳೆಯಲೇ ಇಲ್ಲ."

ಈ ಧಾಟಿಯಲ್ಲಿ ಮಾತನಾಡುತ್ತ ನಾವು ಆ ಹಾದಿಯಲ್ಲಿ ಮೇಲಿನಿಂದ ಕೆಳಕ್ಕೆ ಕೆಳಗಿನಿಂದ ಮೇಲಕ್ಕೆ ಅಡ್ಡಾಡಿದೆವು, ಭಾವೋದ್ರಿಕ್ತರಾದವರಂತೆ, ದಿಗ್ಭ್ರಮೆಗೊಂಡಿದ್ದವರಂತೆ, ನಮಗೇನು ಆಗುತ್ತಿದೆ ಎನ್ನುವುದನ್ನು ತಿಳಿಯದೆಯೇ. ಒಂದು ಜಾಗಕ್ಕೆ ಬರುತ್ತಿದ್ದೆವು, ನಿಲ್ಲುತ್ತಿದ್ದೆವು, ತುಂಬ ಹೊತ್ತು ಮಾತನಾಡುತ್ತಿದ್ದೆವು, ಇಲ್ಲವೇ ಮತ್ತೆ ನಡೆಯಲು ಪ್ರಾರಂಭಿಸುತ್ತಿದ್ದೆವು, ಎಲ್ಲಿಗೋ ದೇವರಿಗೇ ಗೊತ್ತು. ಮಾತ್ತೆ ನಗುತ್ತಿದ್ದೆವು. ಮತ್ತೆ ಅಳುತ್ತಿದ್ದೆವು. ಅಥವಾ ನಾಸ್ತೆಂಕ ಇದ್ದಕ್ಕಿದ್ದಂತೆ ಮನೆಗೆ ಹೋಗಬೇಕು ಅನ್ನುತ್ತಿದ್ದಳು. ಅವಳನ್ನು ತಡೆಯುವ ಸಾಹಸ ನನಗಿ

ರಲಿಲ್ಲ. ಆದರೆ ಅವಳ ಮನೆಯ ಹೊಸ್ತಿಲವರೆಗೂ ಬಂದು ಕಳುಹಿಸಿಕೊಡುತ್ತೇನೆ, ಅನ್ನುತ್ತಿದ್ದೆ. ನಾವು ಹೊರಡುತ್ತಿದ್ದೆವು. ಆಮೇಲೆ, ಕಾಲು ಗಂಟೆಯಾದ ಮೇಲೆ, ನಮಗೇ ಆಶ್ಚರ್ಯವಾಗುವಂತೆ, ನಾವು ಮತ್ತೆ ನದಿಯ ದಂಡೆಯ ಮೇಲೆ ಇರುತ್ತಿದ್ದೆವು, ನಮ್ಮ ಬೆಂಚಿನ ಮೇಲೆ ಕುಳಿತಿರುತ್ತಿದ್ದೆವು. ಅಥವಾ ಇದ್ದಕ್ಕಿದ್ದಂತೆ ಅವಳು ಬಿಸುಸುಯ್ಯುತ್ತಿದ್ದಳು, ಅವಳ ಕಣ್ಣುಗಳಲ್ಲಿ ಮತ್ತೆ ಕಣ್ಣೀರು ಥಳಥಳಿಸುತ್ತಿತ್ತು. ನಾನು ಕಂಗಾಲಾಗುತ್ತಿದ್ದೆ. ನನ್ನ ರಕ್ತ ಹೆಪ್ಪುಗಟ್ಟುತ್ತಿತ್ತು. ಮುಂದಿನ ಘಳಿಗೆಯೇ ಅವಳು ನನ್ನ ಕೈ ಹಿಸುಕುತ್ತಿದ್ದಳು, ನನ್ನನ್ನು ತನ್ನೊಂದಿಗೆ ಎಳೆದುಕೊಂಡು ಹೋಗುತ್ತಿದ್ದಳು, ಮತ್ತೆ ನಡೆಯಲು, ಹರಟೆ ಹೊಡೆಯಲು, ಮಾತನಾಡಲು.

"ತುಂಬ ಹೊತ್ತಾಯಿತು. ನಿಜಕ್ಕೂ ನಾನು ಮನೆಗೆ ಹೋಗುವ ಹೊತ್ತು ಮೀರಿತು. ತುಂಬ ತಡವಾಗಿರಬೇಕು" ನಾಸ್ತೆಂಕ ಕೊನೆಗೆ ಹೇಳಿದಳು. "ನಾವು ತುಂಬ ಹೊತ್ತಿನಿಂದ ಒಳ್ಳೆಯ ಮಕ್ಕಳ ಹಾಗೆ ಆಡುತ್ತಿದ್ದೇವೆ."

"ನಿಜ್ಜ ನಾಸ್ತೆಂಕ. ಆದರೆ ನನಗೀಗ ನಿದ್ರೆ ಇನ್ನೆಲ್ಲಿ. ನಾನು ಮನೆಗೆ ಹೋಗುವುದೇ ಇಲ್ಲ."

"ನನಗೂ ಅಷ್ಟೆ. ನಿದ್ರೆ ಬರುತ್ತೆ ಅಂದುಕೊಂಡಿರಾ? ಆದರೂ ಮನೆಯವರೆಗೂ ಬಂದು ಬಿಟ್ಟುಹೋಗಿ."

"ಖಂಡಿತ!"

"ಆದರೆ ಈ ಸಾರಿ ನಾವು ನಿಜಕ್ಕೂ ಮನೆಗೆ ಹೋಗಬೇಕು."

"ಖಂಡಿತ, ಹೋಗೋಣ."

"ಮಾತು ಕೊಡುತ್ತೀರಾ? ಏಕೆಂದರೆ, ಏನೇ ಆಗಲಿ, ಎಷ್ಟು ಹೊತ್ತಿಗಾದರೂ ಸರಿ, ನಾನು ಮನೆಗೆ ಹೋಗಲೇ ಬೇಕಲ್ಲ."

"ಮಾತು ಕೊಡುತ್ತೇನೆ" ನಾನು ಉತ್ತರಿಸಿದೆ, ನಗುತ್ತ.

"ಸರಿ, ಬನ್ನಿ ಹೋಗೋಣ."

"ನಡೆಯಿರಿ, ಹೋಗೋಣ.".

"ಆಕಾಶವನ್ನು ನೋಡಿ, ನಾಸ್ತೆಂಕ, ನೋಡಿ! ನಾಳೆ ಅದ್ಭುತವಾದ ದಿನವಾಗಲಿರುವುದು; ಚಂದ್ರನನ್ನು ನೋಡಿ. ಆಕಾಶ ಎಷ್ಟು ನೀಲಿಯಾಗಿದೆ ನೋಡಿ! ನೋಡಿ – ಅಲ್ಲಿ ಆ ಹಳದಿ ಮೋಡ ಚಂದ್ರನ ಮೇಲೆ ಸರಿಯುತ್ತಾ ಇದೆ, ನೋಡಿ, ನೋಡಿ! ಓಹ್ ಇಲ್ಲ, ಮುಂದಕ್ಕೆ ಚಲಿಸಿಕೊಂಡು ಹೋಯಿತು. ಈಗ ನೋಡಿ, ನೋಡಿ!"

ಆದರೆ ನಾಸ್ತೆಂಕ ಮೋಡದತ್ತ ನೋಡುತ್ತಿರಲಿಲ್ಲ. ಅವಳು ಆ ಸ್ಥಳದಲ್ಲೇ ಬೇರುಬಿಟ್ಟವಳಂತೆ ನಿಂತಳು. ಏನೂ ಹೇಳಲಿಲ್ಲ. ಆಮೇಲೆ ಅವಳು ಅಂಜುತ್ತಂಜುತ್ತ ನನ್ನನ್ನು ಒತ್ತಿ ನಿಂತಂತೆ ನನಗೆ ಭಾಸವಾಯಿತು. ನನ್ನ ಕೈಯಲ್ಲಿದ್ದ

ಅವಳ ಕೈ ನಡುಗುತ್ತಿದ್ದಂತೆ ನನಗನಿಸಿತು. ಅವಳತ್ತ ನೋಡಿದೆ. ನನ್ನ ತೋಳಿನ ಮೇಲೆ ಹೆಚ್ಚು ಗಟ್ಟಿಯಾಗಿ ಒರಗಿದ್ದಳು.

ಯುವಕನೊಬ್ಬ ನಮ್ಮ ಪಕ್ಕದಲ್ಲೇ ಹಾದು ಹೋದ. ಇದ್ದಕ್ಕಿದ್ದಂತೆ ನಿಂತ, ನಮ್ಮನ್ನೇ ದುರುಗುಟ್ಟಿಕೊಂಡು ನೋಡಿದ. ಮತ್ತೆ ನಡೆದು ಹೋದ. ನನ್ನ ಹೃದಯ ಕುಸಿಯಿತು.

"ನಾಸ್ತೆಂಕ" ನಾನು ಮೃದುವಾಗಿ ಕೇಳಿದೆ. "ಯಾರದು, ನಾಸ್ತೆಂಕ?"

"ಅದು ಅವರು" ಅವಳು ಪಿಸುಗುಟ್ಟಿದಳು, ನನಗೆ ಹೆಚ್ಚು ನಿಕಟವಾಗಿ ಹತ್ತಿಕೊಂಡು ನಿಲ್ಲುತ್ತ, ಹೆಚ್ಚುಹೆಚ್ಚು ಅಂಜುತ್ತ. ನಾನು ಇನ್ನೇನು ಕುಸಿಯುವುದರಲ್ಲಿದ್ದೆ.

"ನಾಸ್ತೆಂಕ! ನಾಸ್ತೆಂಕ! ನೀನಾ!" ನಮ್ಮ ಹಿಂದೆ ಕೂಗು ಕೇಳಿಸಿತು. ಅದೇ ಘಳಿಗೆಯಲ್ಲಿ ಆ ಯುವಕ ನಮ್ಮತ್ತ ಕೆಲವು ಹೆಜ್ಜೆ ಇರಿಸಿದ್ದ.

ದೇವರೇ! ಅವಳು ಕೂಗಿದ ಬಗೆ, ಬೆಚ್ಚಿಬಿದ್ದ ಬಗೆ! ನನ್ನ ತೋಳಿನಿಂದ ಬಿಡಿಸಿಕೊಂಡು ಅವನ ಬಳಿಗೆ ಹೇಗೆ ಹಾರಿ ಹೋದಳು.... ನಾನು ನಿಂತು ಅವರನ್ನು ಗಮನಿಸಿದೆ, ಸಂಪೂರ್ಣವಾಗಿ ನಜ್ಜುಗುಜ್ಜಾಗಿ. ಆದರೆ ಅವಳಿನ್ನೂ ಅವನಿಗೆ ತನ್ನ ಕೈ ನೀಡಿರಲಿಲ್ಲ, ಅವನ ತೋಳ ತೆಕ್ಕೆಯೊಳಕ್ಕೆ ಇನ್ನೂ ಸೇರಿಕೊಂಡಿರಲಿಲ್ಲ, ಕೂಡಲೇ ಅವಳು ನನ್ನ ಕಡೆಗೆ ತಿರುಗಿದಳು, ಮತ್ತೆ ನನ್ನ ಪಕ್ಕದಲ್ಲಿದ್ದಳು, ಮಿಂಚಿನಷ್ಟು ವೇಗವಾಗಿ, ಗಾಳಿಯಂತೆ. ನಾನು ನನ್ನ ಬುದ್ಧಿಸ್ತಿಮಿತವನ್ನು ಪುನಃ ಪಡೆದುಕೊಳ್ಳುವುದಕ್ಕೆ ಮುನ್ನವೇ ಅವಳು ತನ್ನ ಬಾಹುಗಳನ್ನು ನನ್ನ ಕೊರಳ ಸುತ್ತ ಬಳಸಿ ತಂದು ನನಗೆ ಗಟ್ಟಿಯಾಗಿ, ಭಾವೋದ್ವೇಗದಿಂದ ಮುತ್ತಿಟ್ಟಳು. ಆಮೇಲೆ ನನಗೆ ಒಂದು ಮಾತೂ ಹೇಳದೆ ಅವಳು ಮತ್ತೆ ಅವನ ಬಳಿಗೆ ಧಾವಿಸಿದಳು, ಅವನ ಕೈಗಳನ್ನು ಹಿಡಿದುಕೊಂಡು ಅವನನ್ನು ಎಳೆದುಕೊಂಡು ತನ್ನೊಂದಿಗೆ ಕರೆದೊಯ್ದಳು.

ನಾನು ತುಂಬ ಹೊತ್ತು ಅವರನ್ನೇ ನೋಡುತ್ತ ನಿಂತೆ. ಕೊನೆಗೆ ಅವರಿಬ್ಬರೂ ಕಣ್ಮರೆಯಾದರು.

# ಬೆಳಿಗ್ಗೆ

ಬೆಳಿಗ್ಗೆ ನನ್ನ ರಾತ್ರಿಗಳಿಗೆ ಕೊನೆ ಹಾಕಿತು. ಅದೊಂದು ದರಿದ್ರ ದಿನವಾಗಿತ್ತು. ಮಳೆ ಸುರಿಯುತ್ತಿತ್ತು, ನನ್ನ ಕಿಟಕಿಯ ಮೇಲೆ ದುಃಖ ಉಂಟುಮಾಡುವಂತೆ ಟಪಟಪನೆ ಬಡಿಯುತ್ತಿತ್ತು. ನನ್ನ ಪುಟ್ಟ ಕೋಣೆ ಕತ್ತಲಾಗಿತ್ತು. ಆಕಾಶ ಮೋಡ

ದಿಂದ ಮುಚ್ಚಿತ್ತು. ನನ್ನ ತಲೆ ನೋಯುತ್ತಿತ್ತು, ಸುತ್ತುತ್ತಿತ್ತು. ಜ್ವರ ನನ್ನ ಅಂಗಾಂಗಗಳಿಗೆಲ್ಲ ನಿಧಾನವಾಗಿ ವ್ಯಾಪಿಸುತ್ತಿತ್ತು.

"ನಿಮಗೊಂದು ಕಾಗದ, ಸಾರ್. ಪೋಸ್ಟ್‌ಮನ್ ತಂದುಕೊಟ್ಟ. ಅಂಚೆಯಲ್ಲಿ ಬಂದಿದೆ" ಮತ್ರ್ಯೋನ ಹೇಳಿದಳು, ನನ್ನ ಬಳಿ ಬಂದು.

"ಕಾಗದವೇ? ಯಾರಿಂದ?" ನಾನು ಕೂಗಿ ಕೇಳಿದೆ, ಕುರ್ಚಿಯಿಂದ ಚಿಮ್ಮಿ ನಿಲ್ಲುತ್ತ.

"ಅದು ನನಗೆ ಗೊತ್ತಿಲ್ಲ, ಸಾರ್. ನೀವೇ ನೋಡಿ. ಯಾರಿಂದ ಅಂತ ಗೊತ್ತಾಗಬಹುದು."

ನಾನು ಕಾಗದ ಒಡೆದೆ. ಅದು ಅವಳಿಂದ ಬಂದಿತ್ತು!

"ಓಹ್, ಕ್ಷಮಿಸಿ, ಕ್ಷಮಿಸಿ!" ನಾಸ್ತೆಂಕ ಬರೆದಿದ್ದಳು. "ನಾನು ಮಂಡಿಯೂರಿ ಕುಳಿತು ಬೇಡಿಕೊಳ್ಳುತ್ತೇನೆ, ನನ್ನನ್ನು ಕ್ಷಮಿಸಿ! ನಾನು ನನ್ನನ್ನೂ ಮೋಸ ಮಾಡಿಕೊಂಡೆ, ನಿಮ್ಮನ್ನೂ ಮೋಸಪಡಿಸಿದೆ. ಅದೊಂದು ಕನಸಾಗಿತ್ತು. ಒಂದು ಚಿತ್ತಭ್ರಾಂತಿ. ನನ್ನ ಹೃದಯ ಇಂದು ನಿಮಗಾಗಿ ನೋಯುತ್ತಿದೆ. ಕ್ಷಮಿಸಿ, ಕ್ಷಮಿಸಿ....

"ನನ್ನ ವಿಷಯದಲ್ಲಿ ಕ್ರೂರವಾದ ತೀರ್ಮಾನಕ್ಕೆ ಬರಬೇಡಿ. ಏಕೆಂದರೆ ನಾನು ನಿಮ್ಮ ಬಗೆಗೆ ಸ್ವಲ್ಪವೂ ಬದಲಾಗಿಲ್ಲ; ನಿಮ್ಮನ್ನು ಪ್ರೀತಿಸುತ್ತೇನೆಂದು ಹೇಳಿದೆ. ಖಂಡಿತ ಪ್ರೀತಿಸುತ್ತೇನೆ, ಪ್ರೀತಿಗಿಂತ ಹೆಚ್ಚಾದ ಭಾವನೆ ಹೊಂದಿದ್ದೇನೆ! ಓಹ್, ದೇವರೇ! ನಿಮ್ಮಿಬ್ಬರನ್ನೂ ಒಂದೇ ಕಾಲದಲ್ಲಿ ಪ್ರೀತಿಸಲು ಸಾಧ್ಯವಾದಲ್ಲಿ! ನೀವೇ ಅವರಾಗಿದ್ದಲ್ಲಿ!"

"ಅವರು ನೀವೇ ಆಗಿದ್ದಲ್ಲಿ!" ಈ ನೆನಪು ನನ್ನ ಮನಸ್ಸಿನಲ್ಲಿ ಮಿಂಚಿ ಹೋಯಿತು. ನಾನು ನಿನ್ನ ಮಾತುಗಳನ್ನಷ್ಟೆ ನೆನಪಿಸಿಕೊಂಡೆ, ನಾಸ್ತೆಂಕ!

"ಈಗ ನಾನು ನಿಮಗಾಗಿ ಏನು ಮಾಡುವುದಿಲ್ಲ – ಇದು ನಿಜವೆಂಬುದು ದೇವರಿಗೇ ಗೊತ್ತು! ನೀವು ದುಃಖಿತರಾಗಿದ್ದೀರಿ, ನೊಂದಿದ್ದೀರಿ, ನನಗೆ ಗೊತ್ತು. ನಾನು ನಿಮಗೆ ಹಾನಿ ಮಾಡಿದೆ. ಆದರೆ ನೋಡಿ, ಪ್ರೀತಿ ಇದ್ದರೆ ಹಾನಿ ಬೇಗ ಮರೆಯುತ್ತೆ. ನೀವು ನನ್ನನ್ನು ಪ್ರೀತಿಸುತ್ತೀರ, ಖಂಡಿತ!

"ನಾನು ನಿಮಗೆ ಋಣಿ! ಈ ಪ್ರೇಮಕ್ಕಾಗಿ ನಾನು ನಿಮಗೆ ಋಣಿ. ಏಕೆಂದರೆ ಅದು ನನ್ನ ಸ್ಮರಣೆಯಲ್ಲಿ ಎಚ್ಚೆತ್ತ ಮೇಲೂ ತುಂಬ ಹೊತ್ತು ಇರುವಂಥ ಒಂದು ಮಧುರವಾದ ಕನಸಿನಂತೆ ಅಚ್ಚೊತ್ತಿದೆ; ಏಕೆಂದರೆ, ನೀವು ಅಂಥ ಸೋದರ ನಿಷ್ಕಾಪಟ್ಯದಿಂದ ನಿಮ್ಮ ಹೃದಯವನ್ನು ನನ್ನ ಮುಂದೆ ತೆರೆದಿರಿಸಿದ ಹಾಗೂ ನನ್ನ ಭಗ್ನ ಹೃದಯವನ್ನು ಔದಾರ್ಯದಿಂದ ಅಂಗೀಕರಿಸಿ ಅದನ್ನು ಪಾಲಿಸಿ ಪೋಷಿಸಲು, ಸಲಹಲು ಹಾಗೂ ಮತ್ತೆ ಜೀವಂತಗೊಳ್ಳುವಂತೆ ಉಪಚರಿಸಲು, ಮುಂದೆ

ಬಂದ ಆ ಘಳಿಗೆಯನ್ನು ನಾನು ಯಾವತ್ತೂ ನೆನಪಿನಲ್ಲಿಟ್ಟಿರುತ್ತೇನೆ. ನೀವು ನನ್ನನ್ನು ಕ್ಷಮಿಸಿದರೆ ನಿಮ್ಮ ಬಗೆಗಿನ ನನ್ನ ಸ್ಮರಣೆಯು ಯಾವತ್ತೂ ನನ್ನ ಚಿರಕೃತಜ್ಞತೆಯಿಂದ ಪವಿತ್ರಗೊಳಿಸಲ್ಪಟ್ಟಿರುತ್ತದೆ. ಈ ಭಾವನೆ ನನ್ನ ಹೃದಯದಿಂದ ಎಂದೂ ಅಳಿಸಿ ಹೋಗದು. ನಾನು ಈ ಸ್ಮರಣೆಯನ್ನು ರಕ್ಷಿಸಿ ಇರಿಸಿರುತ್ತೇನೆ, ಅದಕ್ಕೆ ಸತ್ಯವಾಗಿರುತ್ತೇನೆ, ಅದಕ್ಕೆಂದೂ ದ್ರೋಹ ಬಗೆಯುವುದಿಲ್ಲ. ನಾನು ನನ್ನ ಹೃದಯವನ್ನು ಎಂದೂ ವಂಚಿಸುವುದಿಲ್ಲ. ಅದು ತುಂಬ ಸ್ಥಿರವಾದುದು. ಕಳೆದ ರಾತ್ರಿಯಷ್ಟೆ ಅದು ತಾನು ಸದಾ ಕಾಲಕ್ಕೂ ಯಾರಿಗೆ ಸೇರಿದ್ದಿತೋ ಅವರ ಬಳಿಗೆ ಎಷ್ಟು ಬೇಗ ಹಾರಿಹೋಯಿತು.

"ನಾವು ಭೇಟಿಯಾಗೋಣ. ನೀವು ನಮ್ಮನ್ನು ಕಾಣಲು ಬನ್ನಿ. ನೀವು ನಮ್ಮನ್ನು ತ್ಯಜಿಸುವುದಿಲ್ಲ. ನೀವು ನನ್ನ ಸ್ನೇಹಿತರಾಗಿರುತ್ತೀರ, ನನ್ನ ಸೋದರರಾಗಿರುತ್ತೀರ, ಯಾವತ್ತಿಗೂ. ನನ್ನನ್ನು ಕಂಡಾಗ ನೀವು ನಿಮ್ಮ ಸ್ನೇಹದ ಹಸ್ತ ನೀಡುವಿರಿ, ಅಲ್ಲವೇ ? ನಿಮ್ಮ ಸ್ನೇಹ ಹಸ್ತ ನೀಡುವಿರಿ, ನನ್ನನ್ನು ಕ್ಷಮಿಸಿರುವಿರಿ, ಅಲ್ಲವೇ ? ನೀವು ಮುಂಚಿನಂತೆಯೇ ಖಂಡಿತ ನನ್ನನ್ನು ಪ್ರೀತಿಸುತ್ತೀರಿ, ಅಲ್ಲವೇ ?

"ಓಹ್, ಖಂಡಿತ ಪ್ರೀತಿಸಿರಿ. ನನ್ನನ್ನು ತ್ಯಜಿಸಬೇಡಿ. ಏಕೆಂದರೆ, ನಾನು ನಿಮ್ಮನ್ನು ಈ ಘಳಿಗೆಯಲ್ಲೂ ಹಾಗೆಯೇ ಪ್ರೀತಿಸುತ್ತಿದ್ದೇನೆ; ಏಕೆಂದರೆ, ನಾನು ನಿಮ್ಮ ಪ್ರೀತಿಗೆ ಅರ್ಹಳಾಗಿದ್ದೇನೆ, ನಿಮ್ಮ ಪ್ರೀತಿಗೆ ಅರ್ಹಳಾಗ ಬಯಸುತ್ತೇನೆ.... ನನ್ನ ಪ್ರಿಯ, ಪ್ರಿಯ ಮಿತ್ರ ! ನಾನು ಅವರನ್ನು ಮುಂದಿನ ವಾರ ವಿವಾಹವಾಗಲಿದ್ದೇನೆ. ಅವರು ಹಿಂದಿರುಗಿ ಬಂದರು, ನನ್ನಲ್ಲಿ ಪ್ರೇಮ ಹೊಂದಿದ್ದಾರೆ. ಅವರೆಂದೂ ನನ್ನನ್ನು ಮರೆತಿರಲಿಲ್ಲ. ಅವರ ಬಗೆಗೆ ನಿಮಗೆ ಬರೆಯುತ್ತಿರುವುದು ನಿಮಗೆ ಕೋಪ ತರುವುದಿಲ್ಲವಷ್ಟೆ. ಆದರೆ ನಾನು ಅವರೊಂದಿಗೆ ನಿಮ್ಮ ಬಳಿಗೆ ಬರಲು ಬಯಸುತ್ತೇನೆ. ನೀವು ನಿಮ್ಮ ವಿಶ್ವಾಸವನ್ನು ಅವರಿಗೆ ನಿರಾಕರಿಸುವುದಿಲ್ಲ, ಅಲ್ಲವೇ ?

"ನಮ್ಮನ್ನು ಕ್ಷಮಿಸಿ, ನಿಮ್ಮ ನಾಸ್ತೆಂಕಳನ್ನು ನೆನಪಿನಲ್ಲಿಡಿ, ಪ್ರೀತಿಸಿ."

ನಾನು ಈ ಕಾಗದವನ್ನು ಮತ್ತೆ ಮತ್ತೆ ಓದಿದೆ. ಅಳ ಬಯಸಿದೆ. ಕೊನೆಗೆ ಕಾಗದ ನನ್ನ ಕೈಯಿಂದ ಜಾರಿಬಿತ್ತು. ನಾನು ಮುಖವನ್ನು ನನ್ನ ಕೈಗಳಲ್ಲಿ ಹುದುಗಿಸಿದೆ.

"ಸ್ವಾಮಿಾ, ಸ್ವಾಮಿಾ" ಮತ್ರ್ಯೋನ ಹೇಳತೊಡಗಿದಳು.

"ಏನದು ?"

"ನೋಡಿ, ಜೇಡರ ಬಲೆಗಳನ್ನೆಲ್ಲ ಗುಡಿಸಿ ಹಾಕಿದ್ದೇನೆ. ನಿಮ್ಮ ಕೋಣೆಯಲ್ಲಿ

ಈಗ, ನಿಮಗೆ ಮನಸ್ಸಿದ್ದರೆ, ಮದುವೆಯ ಭೋಜನ ಅಥವಾ ಸತ್ಕಾರ ಕೂಟ ಏರ್ಪಡಿಸಬಹುದು, ಅಷ್ಟು ಚೊಕ್ಕಟವಾಗಿದೆ."

ನಾನು ಮತ್ರ್ಯೋನಳತ್ತ ನೋಡಿದೆ. ಅವಳು ಇನ್ನೂ ಆರೋಗ್ಯವಂತಳಾದ, ದೃಢಕಾಯಳಾದ "ಎಳೆಯ" ಮುದುಕಿಯಾಗಿದ್ದಳು. ಆದರೆ ಇದ್ದಕ್ಕಿದ್ದಂತೆ, ಏಕೋ ನನಗೆ ತಿಳಿಯದು, ಅವಳ ಬೆನ್ನು ಬಾಗಿದ್ದಿತೆಂದು, ಅವಳು ಮುಪ್ಪಾಗಿದ್ದಳೆಂದು, ಕಣ್ಣುಗಳು ಕಾಂತಿರಹಿತವಾಗಿದ್ದವೆಂದು, ಮುಖ ಸುಕ್ಕುಗಟ್ಟಿದ್ದಿತೆಂದು ಕಲ್ಪಿಸಿ ಕೊಂಡೆ. ಏಕೋ ತಿಳಿಯದು, ಇದ್ದಕ್ಕಿದ್ದಂತೆ ನನ್ನ ಕೋಣೆಯೂ ಮತ್ರ್ಯೋನ ಳಂತೆಯೇ ಮುದಿಯಾಗಿದ್ದಿತೆಂದು ನನಗೆ ಕಂಡುಬಂದಿತು. ಒಳಮಾಳಿಗೆಯೂ ಗೋಡೆಗಳೂ ಮಾಸಿದ್ದವು, ಎಲ್ಲವೂ ಕೊಳಕಾಗಿದ್ದಂತೆ, ಜೇಡರ ಬಲೆಗಳು ಹಿಂದೆಂ ದಿಗಿಂತ ಹೆಚ್ಚು ದಟ್ಟವಾಗಿ ಮುಸುಕಿದ್ದಂತೆ, ಕಂಡುಬಂದಿತು. ಏಕೋ ತಿಳಿಯದು, ಕಿಟಕಿಯಿಂದ ಹೊರಗೆ ನೋಡಿದಾಗ ಎದುರಿಗಿನ ಮನೆಯೂ ಹಳೆಯದಾಗಿ ಕೊಳಕಾಗಿದ್ದಿತೆಂದು, ಕಂಬಗಳಿಂದ ಗಾರೆ ಕಿತ್ತುಬಂದಿದ್ದಿತೆಂದು, ಕಾರ್ನಿಸ್‌ಗಳು ಕಪ್ಪಾಗಿ ಸೀಳು ಬಿಟ್ಟಿದ್ದವೆಂದು, ಉಜ್ವಲವಾದ ಹಳದಿಬಣ್ಣದ ಗೋಡೆಗಳು ಮಲಿನವಾಗಿ ಕಲಬೆರಕೆಯ ಬಣ್ಣದವಾಗಿದ್ದವೆಂದು, ಕಲ್ಪಿಸಿಕೊಂಡೆ.


ಅದಕ್ಕೆ ಬಹುಶಃ ಕಾರಣವೆಂದರೆ – ತುಂಬ ಅನಿರೀಕ್ಷಿತವಾಗಿ ಹೊರಕಾಣಿಸಿ ಕೊಂಡಿದ್ದ ಸೂರ್ಯಕಿರಣ ಮತ್ತೆ ಮಳೆ ಮೋಡದ ಹಿಂದೆ ಅಡಗಿದುದಾಗಿದ್ದಿತು. ಆದ್ದರಿಂದಲೇ ಎಲ್ಲವೂ ನನ್ನ ಕಣ್ಣ ಮುಂದೆ ಮತ್ತೊಮ್ಮೆ ಮಾಸಲಾಗಿದ್ದಂತೆ ಕಂಡುಬಂದವು. ಅಥವಾ ನನ್ನ ಭವಿಷ್ಯತ್ತಿನ ಇಡೀ ಜೀವನದ ನೀಳ ನೋಟವು ತುಂಬ ಬೋಳುಬೋಳಾಗಿ ತುಂಬ ದುಃಖಕಾರಕವಾಗಿ ನನ್ನ ಮುಂದೆ ಚಾಚಿ ನಿಂತಿದ್ದುದು, ಬಹುಶಃ ಅದಕ್ಕೆ ಕಾರಣವಾಗಿದ್ದಿತು. ನಾನು ನನ್ನನ್ನು ಈಗಿರುವ ಸ್ಥಿತಿಯಲ್ಲೇ ಸರಿಯಾಗಿ ಹದಿನೈದು ವರ್ಷಗಳನಂತರ ಹೇಗೆ ಕಾಣಿಸಿಕೊಳ್ಳುವೆ ನೆಂದು ಊಹಿಸಿ ನೋಡಿದೆ. ಆಗ ನಾನು ಒಬ್ಬ ಮುದುಕನಾಗಿರಲಿದ್ದೆ, ಇದೇ ಹಳೆಯ ಕೋಣೆಯಲ್ಲಿ, ಎಂದಿನಂತೆಯೇ ಒಂಟಿಯಾಗಿ, ವಯಸ್ಸಾದಂತೆ ಎಷ್ಟು ಮಾತ್ರವೂ ಬುದ್ಧಿವಂತೆಯಾಗಿ ಬೆಳೆದಿರದಂಥ ಅದೇ ವೃದ್ಧ ಮತ್ರ್ಯೋನಳೊಂದಿಗೆ ಇರಲಿರುವ ನೋಟವನ್ನು ಕಲ್ಪಿಸಿಕೊಂಡೆ.

ಆದರೆ ನನಗಾದ ಅವಮಾನಗಳ ಬಗೆಗೆ ನಾನು ಚಿಂತಿಸುತ್ತ ಕೂರುವೆನೆಂದು ಕೊಂಡಿರಾ, ನಾಸ್ತೆಂಕ? ಎಂದಿಗೂ ಇಲ್ಲ. ನಿಮ್ಮ ಪರಿಶುದ್ಧವಾದ ಆನಂದಭರಿತ ವಾದ ಸುಖಸಂಪದವನ್ನು ದುಃಖದ ಮೋಡ ಆವರಿಸುವಂತೆ ನಾನೆಂದೂ ಮಾಡು ವುದಿಲ್ಲ. ಕಟುವಾದ ನಿಂದನೆಯಿಂದ ನಿಮ್ಮ ಹೃದಯಕ್ಕೆ ಎಂದೂ ದುಃಖ ತರು ವುದಿಲ್ಲ, ಅಥವಾ ಅಂತಸ್ಸಾಕ್ಷಿಯ ತೀವ್ರ ಯಾತನೆಯಿಂದ ಅದಕ್ಕೆ ಗಾಯಗೊಳಿಸಿ ಆನಂದೋತ್ಸಾಹಗಳ ಘಳಿಗೆಯಲ್ಲಿ ಅದು ಯಾತನೆಯಿಂದ ಮುದುಡಿಕೊಳ್ಳು

ವಂತೆ ಮಾಡುವುದಿಲ್ಲ. ನೀವು ವಿವಾಹವಾಗಲು ಅವರೊಂದಿಗೆ ಚರ್ಚು ಪ್ರವೇಶಿಸುವಾಗ ನಿಮ್ಮ ಕರಿಕುರುಳುಗಳಿಗೆ ಹೆಣೆದುಕೊಳ್ಳುವ ಆ ಅತ್ಯದ್ಭುತ ಹೂಗಳ ಪ್ರತ್ಯೇಕ ಎಸಳನ್ನೂ ನಾನು ಎಂದಿಗೂ ಹೊಸಕಿ ಹಾಕುವುದಿಲ್ಲ.... ಓಹ್, ಇಲ್ಲ, ಎಂದಿಗೂ ಇಲ್ಲ ! ನಿಮ್ಮ ಆಗಸ ಎಂದೂ ನಿರ್ಮಲವಾಗಿರಲಿ, ನಿಮ್ಮ ಮಧುರ ಮುಗುಳುನಗೆ ಎಂದೂ ಉಜ್ವಲವಾಗಿ ತೊಂದರೆಗೆ ಸಿಲುಕದಂತಿರಲಿ, ನೀವು ಮತ್ತೊಂದು ಜೀವಕ್ಕೆ, ಏಕಾಂಗಿಯಾದ ಕೃತಜ್ಞತಾಪೂರ್ವಕವಾದ ಹೃದಯಕ್ಕೆ, ನೀಡಿದ ಆ ಒಂದು ಘಳಿಗೆಯ ಸುಖಸಂತೋಷಕ್ಕಾಗಿ, ದೇವರ ಅನುಗ್ರಹ ಸದಾ ಕಾಲಕ್ಕೂ ನಿಮ್ಮ ಮೇಲಿರಲಿ !

ಓಹ್ ದೇವರೇ ! ಆನಂದದ ಒಂದು ಇಡೀ ನಿಮಿಷ ! ಒಂದು ಇಡೀ ಜೀವಮಾನಕ್ಕೇ ಅದು ಸಾಲದೆ ?...

**1848**



# ಪುಕ್ಕಲು ಹೃದಯಿ

ಒಂದೇ ಸೂರಿನ ಕೆಳಗೆ, ಒಂದೇ ನಾಲ್ಕನೆಯ ಅಂತಸ್ತಿನಲ್ಲಿ ಒಂದೇ ಗೃಹ ವಿಭಾಗದಲ್ಲಿ ಇಬ್ಬರು ಯುವ ಸಹೋದ್ಯೋಗಿಗಳು ವಾಸಿಸುತ್ತಿದ್ದರು – ಅರ್ಕಾದಿ ಇವಾನೊವಿಚ್ ನಿಫಿದ್ಯೇವಿಚ್ ಹಾಗೂ ವಾಸ್ಯ ಷುಮ್ಕೋವ್... ಈ ಇಬ್ಬರು ಕಥಾನಾಯಕರಲ್ಲಿ ಒಬ್ಬನನ್ನು ಪೂರ್ಣ ಹೆಸರಿನಿಂದಲೂ, ಇನ್ನೊಬ್ಬನನ್ನು ಕೇವಲ ವಾಸ್ಯ ಎಂದು ಹ್ರಸ್ವವಾಗಿಯೂ ಕರೆದಿರುವುದಕ್ಕೆ ಈ ಕಥಾಲೇಖಕ ಓದುಗರಿಗೆ ಒಂದು ವಿವರಣೆ ನೀಡಬೇಕೆಂದು ಸಹಜವಾಗಿಯೇ ಭಾವಿಸುತ್ತಾನೆ. ಹ್ರಸ್ವವಾದರೂ ಈ ಎರಡನೆಯ ರೂಪದ ಹೆಸರನ್ನು ಅಸಭ್ಯವೆಂದಾಗಲೀ ಅತಿಪರಿಚಯದ್ದೆಂದಾಗಲೀ ಭಾವಿಸಬಾರದು. ಇಲ್ಲದಿದ್ದರೆ ಈ ಕಥಾನಾಯಕರ ಅಂತಸ್ತು, ವಯಸ್ಸು, ಉದ್ಯೋಗ, ಪದವಿ, ಅವರ ವಿಶಿಷ್ಟ ಲಕ್ಷಣಗಳು, ಇವುಗಳನ್ನೆಲ್ಲ ವಿವರಿಸುವುದರಿಂದ, ಚಿತ್ರಿಸುವುದರಿಂದ ಕಥೆಯನ್ನು ಪ್ರಾರಂಭಿಸುವುದು ಅವಶ್ಯವಾಗುತ್ತಿತ್ತು. ಅನೇಕ ಕಥೆಗಾರರು ಸಾಮಾನ್ಯವಾಗಿ ಈ ರೀತಿಯಲ್ಲೇ ತಮ್ಮ ಕಥೆಗಳನ್ನು ಪ್ರಾರಂಭಿಸುವುದರಿಂದ ಈ ಕಥಾಲೇಖಕ ಇತರರಿಂದ ಭಿನ್ನವಾಗಿರುವ ಏಕೈಕ ಉದ್ದೇಶದಿಂದ ಆರಂಭದಿಂದಲೇ ಕ್ರಿಯೆಯಿಂದ ಪ್ರಾರಂಭಿಸಲು ನಿರ್ಧರಿಸಿದ್ದಾನೆ. (ಇದನ್ನು ಕೆಲವರು ಮಿತಿ ಇಲ್ಲದ ಮಮಕಾರ ಎಂದೇ ಹೇಳಬಹುದು.) ಈ ಮುನ್ನುಡಿಯನ್ನು ಹೇಳಿದನಂತರ ಅವನು ಕಥೆಯನ್ನು ಪ್ರಾರಂಭಿಸುತ್ತಾನೆ.

ಹೊಸ ವರುಷದ ಮುನ್ನಾದಿನ ಷುಮ್ಕೋವ್ ಸಂಜೆ ಐದು ಗಂಟೆಯಾದ ಮೇಲೆ ಮನೆಗೆ ಬಂದ. ತನ್ನ ಹಾಸಿಗೆಯ ಮೇಲೆ ಮಲಗಿದ್ದ ಅರ್ಕಾದಿ ಇವಾನೊವಿಚ್ ಎಚ್ಚರಗೊಂಡು ತನ್ನ ಮಿತ್ರನತ್ತ ಅರೆಗಣ್ಣಿನಿಂದ ಓರೆನೋಟ ಬೀರಿದ. ವಾಸ್ಯ ಬಹು ಸೊಗಸಾಗಿ ಹೊಲಿದಿದ್ದ ಸಿವಿಲಿಯನ್ ಫ್ರಾಕ್ ಕೋಟನ್ನೂ ಅತ್ಯಂತ ಶುಭ್ರವಾದ ಷರ್ಟ್ ಮುಂಭಾಗವನ್ನೂ ತೊಟ್ಟಿದ್ದ. ಇದು ಅರ್ಕಾದಿಯನ್ನು ಆಶ್ಚರ್ಯಗೊಳಿಸಿತು. "ಈ ರೀತಿ ಉಡುಪು ತೊಟ್ಟು ವಾಸ್ಯ ಎಲ್ಲಿಗೆ ಹೋಗಿದ್ದಿರಬಹುದು? ಮಧ್ಯಾಹ್ನ ಊಟಕ್ಕೂ ಮನೆಗೆ ಬರಲಿಲ್ಲ!" ಈ ಮಧ್ಯೆ ಷುಮ್ಕೋವ್

ಮೋಂಬತ್ತಿ ಹೊತ್ತಿಸಿದ್ದ. ತನ್ನ ಮಿತ್ರನು ತನ್ನನ್ನು ಅಕಸ್ಮಾತ್ತಾಗಿ ಎನ್ನುವಂತೆ ಎಚ್ಚರಿಸಲಿರುವನೆಂದು ಅರ್ಕಾದಿ ಇವಾನೊವಿಚ್ ಕೂಡಲೇ ಊಹಿಸಿದ. ವಾಸ್ಯ ನಿಜಕ್ಕೂ ಹಾಗೆಯೇ ಮಾಡಿದ. ಎರಡು ಬಾರಿ ಕೆಮ್ಮಿ ಗಂಟಲು ಸರಿಪಡಿಸಿಕೊಂಡ, ಒಂದೆರಡು ಬಾರಿ ಕೋಣೆಯಲ್ಲೇ ಅತ್ತಿಂದಿತ್ತ ಸುತ್ತಾಡಿದ, ಕೊನೆಗೆ ಮೂಲೆಯಲ್ಲಿ ಅಗ್ಗಿಷ್ಟಿಕೆ ಬಳಿ ತನ್ನ ಪೈಪಿಗೆ ಹೊಗೆಸೊಪ್ಪು ತುಂಬಿಕೊಳ್ಳಲು ನಿಂತಾಗ ಪೈಪನ್ನು ಬೆರಳುಗಳಿಂದ ಜಾರಿಸಿ ನೆಲದ ಮೇಲೆ ಬೀಳಿಸಿದ – ತೀರ ಅಕಸ್ಮಾತ್ತಾಗಿ ಅನ್ನುವಂತೆ. ಅರ್ಕಾದಿ ಇವಾನೊವಿಚ್ ಒಳಗೊಳಗೇ ನಕ್ಕ.

"ವಾಸ್ಯ, ನೀನೊಬ್ಬ ಪಕ್ಕಾ ತಂತ್ರಗಾರ!" ಅವನು ಹೇಳಿದ.

"ಅರ್ಕಾಷ,* ನಿದ್ರೆ ಮಾಡುತ್ತಿಲ್ಲವೇ?"

"ಏನೋ ನನಗೆ ಗೊತ್ತಿಲ್ಲ. ಖಚಿತವಾಗಿ ಹೇಳಲಾರೆ. ನಾನು ನಿದ್ರೆ ಮಾಡುತ್ತಿಲ್ಲವೆಂದೇ ನನಗೆ ಕಂಡುಬರುತ್ತೆ."

"ಆಹ್, ಅರ್ಕಾಷ! ನೀನು ಭಾರಿ ತರಲೆ ಕಣೋ! ಏನೋ ತಮ್ಮ, ಏನೋ! ನಾನು ನಿನಗೆ ಈಗ ಏನು ಹೇಳಬೇಕೂಂತ ಇದೀನಿ ಗೊತ್ತಾ!"

"ಇಲ್ಲಪ್ಪ, ಖಂಡಿತ ಗೊತ್ತಿಲ್ಲ. ಅದು ಸರಿ, ಬಾ ಇಲ್ಲಿ."

ತಾನು ಇಂತಹ ಆಹ್ವಾನವನ್ನು ನಿರೀಕ್ಷಿಸುತ್ತಿದ್ದನೋ ಎಂಬಂತೆ ವಾಸ್ಯ ಕೂಡಲೇ ಅವನ ಬಳಿಗೆ ನಡೆದ. ಆದರೆ ಅರ್ಕಾದಿ ಇವಾನೊವಿಚ್ ಏನಾದರೂ ಮೋಸ ಮಾಡಲಿದ್ದರೆ, ಅದಕ್ಕೆ ಅವನು ಸಿದ್ಧನಾಗಿರಲಿಲ್ಲ. ಅರ್ಕಾದಿ ಅವನ ಕೈಗಳನ್ನು ಚಾತುರ್ಯದಿಂದ ಬಿಗಿಯಾಗಿ ಹಿಡಿದುಕೊಂಡು ಅವನನ್ನೊಂದು ಸುತ್ತು ಸುತ್ತಿಸಿ ಹಾಸಿಗೆಯ ಮೇಲೆ ಮಲಗುವಂತೆ ಬೀಳಿಸಿ ತನ್ನ ಪಟ್ಟಿಗೆ ಸಿಕ್ಕಿದವನ "ಕತ್ತು ಹಿಸುಕ" ತೊಡಗಿದ. ವಿನೋದಪ್ರಿಯನಾಗಿದ್ದ ಅರ್ಕಾದಿಗೆ ಇದು ಸ್ಪಷ್ಟವಾಗಿಯೇ ಭಾರಿ ಸಂತೋಷ ನೀಡಿತ್ತು.

"ಸಿಕ್ಕಿ ಬಿದ್ದಿಯಾ! ಸಿಕ್ಕಿ ಬಿದ್ದಿಯಾ!" ಎಂದವನು ಕೂಗಿದ.

"ಏಯ್ ಅರ್ಕಾಷ, ಅರ್ಕಾಷ! ಏನು ಮಾಡುತ್ತಿದೀಯೋ! ಬಿಡೋ, ದಮ್ಮಯ್ಯ, ಬಿಡೋ! ನನ್ನ ಫ್ರಾಕ್ ಕೋಟೆಲ್ಲ ಹಾಳಾಗುತ್ತೆ!"

"ಹಾಳಾದರೆ ಹಾಳಾಗಲಿ, ನನಗೇನಂತೆ. ಅದು ಸರಿ, ನಿನಗೇಕೆ ಬೇಕು ಈ ಫ್ರಾಕ್ ಕೋಟು? ಅಲ್ಲ ನೀನು ಯಾಕೆ ಅಷ್ಟು ಬುದ್ಧಿಮಂಕನೋ? ಎಷ್ಟು ಸುಲಭವಾಗಿ ಸಿಕ್ಕಿಹಾಕಿಕೊಳ್ಳುತ್ತೀಯ. ಈಗ ಹೇಳು, ಎಲ್ಲಿಗೆ ಹೋಗಿದ್ದೆ? ಮಧ್ಯಾಹ್ನ ಎಲ್ಲಿ ಊಟಮಾಡಿದೆ?"

---

*ಸಲಿಗೆಯಿಂದ ಕರೆಯುವಾಗ ಅರ್ಕಾದಿ ಬದಲು ಅರ್ಕಾಷ ಎನ್ನಲಾಗುತ್ತೆ. – ಸಂ.

"ಅರ್ಕಾಷ, ದಮ್ಮಯ್ಯ ಕಣೋ, ಬಿಟ್ಟು ಬಿಡೋ !"

"ಎಲ್ಲಿ ಊಟ ಮಾಡಿದೆ, ಹೇಳು ?"

"ಅದನ್ನೇ ನಾನು ನಿನಗೆ ಹೇಳಬೇಕೂಂತಿದ್ದುದು !"

"ಸರಿ ಹಾಗಾದರೆ. ಹೇಳು."

"ಮೊದಲು ನನ್ನನ್ನು ಬಿಡು."

"ಓಹ್, ಇಲ್ಲ, ಇಲ್ಲ. ನೀನು ಹೇಳಿದ ಹೊರತು ಬಿಡೊಲ್ಲ."

"ಅರ್ಕಾಷ, ಅರ್ಕಾಷ ! ನೀನೇ ನೋಡು, ನನಗೆ ಹೇಗೆ ಹೇಳೋಕೆ ಆಗುತ್ತೆ. ತೀರ ಅಸಾಧ್ಯ !" ದುರ್ಬಲನಾದ ವಾಸ್ಯ ಹೇಳಿದ, ತನ್ನ ಶತ್ರುವಿನ ಬಲಿಷ್ಠವಾದ ಹಿಡಿತದಿಂದ ತನ್ನನ್ನು ಸ್ವತಂತ್ರಗೊಳಿಸಿಕೊಳ್ಳಲು ಪ್ರಯಾಸಪಡುತ್ತ. "ಕೆಲವು ವಿಷಯಗಳಿರುತ್ತವೆ, ನೋಡು..."

"ಯಾವ ವಿಷಯ ?"

"ಯಾವುದೂಂದರೆ, ಈಗ ನಾವು ಇರೋ ಸ್ಥಿತಿಯಲ್ಲೇ ಇದ್ದುಕೊಂಡು ಹೇಳೋಕೆ ಹೋದರೆ ನಮ್ಮ ಘನತೆಯನ್ನು ಕಳೆದುಕೊಳ್ಳುವಂತೆ ಮಾಡೋ ವಿಷಯ; ಹೀಗಿದ್ದುಕೊಂಡು ಹೇಳೋದು ಸಾಧ್ಯವಿಲ್ಲ. ಅದು ತಮಾಷೆಯಾಗಿ ಕಾಣುತ್ತೆ. ಆದರೆ ನಿಜವಾಗಿ ಅದು ತಮಾಷೆಯ ವಿಷಯವಲ್ಲ. ತುಂಬ ಗಂಭೀರ ವಾದ ವಿಷಯ."

"ಗಂಭೀರವಾಗಿದ್ದರೆ ಇದ್ದುಕೊಂಡಿರಲಿ ! ಮುಂದೆ ಇನ್ನೇನು ಕಲ್ಪಿಸಿಕೊಂಡು ಹೇಳುತ್ತೀಯ ? ನಗುವಂತೆ ಮಾಡೋದೇನಾದರೂ ಹೇಳು. ಅದೆ ನನಗೆ ಈಗ ಬೇಕಾದ್ದು. ಗಂಭೀರವಾದ್ದು ಏನೂ ನನಗೆ ಬೇಕಿಲ್ಲ. ಇಲ್ಲದಿದ್ದರೆ ಎಂತಹ ಸ್ನೇಹಿತನೋ ನೀನು ? ಹೇಳು, ಎಂತಹ ಸ್ನೇಹಿತ ನೀನು ?"

"ಅರ್ಕಾಷ, ನನ್ನಾಣೆ. ನನಗೆ ಹೇಳೋಕಾಗೊಲ್ಲವೋ !"

"ಅವೆಲ್ಲ ಬೇಡ."

"ಅಲ್ಲವೋ, ಅರ್ಕಾಷ !" ಎನ್ನುತ್ತ ಹಾಸಿಗೆಯ ಮೇಲೆ ಅಡ್ಡಲಾಗಿ ಬಿದ್ದು ಕೊಂಡಿದ್ದಂತೆಯೇ ಎಷ್ಟು ಸಾಧ್ಯವೋ ಅಷ್ಟು ಗಂಭೀರವಾದ ಧ್ವನಿಯಲ್ಲಿ ವಾಸ್ಯ ಹೇಳತೊಡಗಿದ. "ಅರ್ಕಾಷ ! ಸರಿ ಹೇಳ್ತೀನಿ ಕಣೋ. ಆದರೆ..."

"ಹೇಳು, ಹೇಳು !"

"ಸರಿ, ಕೇಳಿಸಿಕೋ – ನಾನು ಮದುವೆಯ ಪ್ರಸ್ತಾಪ ಮಾಡಿದೆ !"

ಇನ್ನೊಂದು ಮಾತೂ ಆಡದೆ ಅರ್ಕಾದಿ ಇವಾನೊವಿಚ್ ವಾಸ್ಯನನ್ನು ಮಗುವಿನಂತೆ ಕೈಗಳಲ್ಲಿ ಎತ್ತಿಕೊಂಡು ಕೋಣೆಯಲ್ಲಿ ಅತ್ತಿಂದಿತ್ತ ಓಡಾಡತೊಡಗಿದ. ವಾಸ್ಯನು ಚಿಕ್ಕವನೇನೂ ಆಗಿರದಿದ್ದರೂ, ತೆಳುವಾದರೂ ಸ್ವಲ್ಪ ಎತ್ತರವೇ

ಆಗಿದ್ದರೂ, ಅರ್ಕಾದಿಯು ಅವನನ್ನ ಬಹು ಸಲೀಸಾಗಿ ಎತ್ತಿಕೊಂಡು ಮಗುವನ್ನು ತೂಗುವವನಂತೆ ತೂಗಾಡಿಸಿದ.

"ತಾಳೋ, ಮದುವೆ ಗಂಡು, ನಿನ್ನನ್ನು ಬಟ್ಟೆಯಲ್ಲಿ ಹಾಕಿ ಸುತ್ತುತ್ತೇನೆ" ಎಂದು ಹೇಳುತ್ತಲೇ ಇದ್ದ. ಆದರೆ ವಾಸ್ಯ ತನ್ನ ತೋಳುಗಳಲ್ಲಿ ನಿಶ್ಚಲನಾಗಿ ಒಂದು ಮಾತೂ ಆಡದೆ ಬಿದ್ದುಕೊಂಡಿದ್ದುದನ್ನು ಕಂಡು ಅರ್ಕಾದಿ ಕೂಡಲೇ ಸ್ತಿಮಿತಕ್ಕೆ ಬಂದ, ತನ್ನ ವಿನೋದ ಮಿತಿಮೀರಿ ಹೋಗಿದ್ದಿತೆಂಬುದನ್ನು ಕಂಡುಕೊಂಡ. ತನ್ನ ಗೆಳೆಯನನ್ನು ಕೋಣೆಯ ಮಧ್ಯ ಭಾಗದಲ್ಲಿ ಇಳಿಸಿ ಅವನ ಕೆನ್ನೆಯ ಮೇಲೆ ಅತ್ಯಂತ ಪ್ರಾಮಾಣಿಕವಾದ ಹಾಗೂ ಸ್ನೇಹಯುತವಾದ ರೀತಿಯಲ್ಲಿ ಮುತ್ತು ಕೊಟ್ಟ.

"ಕೋಪ ಬಂತೇನೋ, ವಾಸ್ಯ?"

"ಇಲ್ಲವೋ, ಅರ್ಕಾಷ. ಇಲ್ಲಿ ಕೇಳು..."

"ಹೊಸ ವರುಷಕ್ಕಾಗಿ..."

"ಅದೆಲ್ಲ ನನಗೇನೂ ಇಲ್ಲವೋ. ಆದರೆ ನೀನು ಯಾಕೆ ಇಷ್ಟು ಹುಚ್ಚು ಹುಚ್ಚಾಗಿ ಆಡುತ್ತೀಯ, ಆಮೇಲೆ ತೊಂದರೆಗೆ ಸಿಕ್ಕಿಹಾಕಿಕೊಳ್ಳುತ್ತೀಯಾ! ನಾನು ನಿನಗೆ ಎಷ್ಟು ಸಾರಿ ಹೇಳಿಲ್ಲ, ಅರ್ಕಾಷ. ನಿಜವಾಗಲೂ, ನೀನು ಮಾಡೋದು ತಮಾಷೆ ಯಲ್ಲ, ತಮಾಷೆ ಅಲ್ಲವೇ ಅಲ್ಲ!"

"ಹೋಗಲಿ. ನಿನಗೇನೂ ಕೋಪ ಬಂದಿಲ್ಲ ತಾನೆ?"

"ಓಹ್, ನನಗೆ ಏನು ಮಾಡಿದರೂ ಪರವಾಗಿಲ್ಲ; ನಾನು ಎಂದಾದರೂ ಯಾರ ಜೊತೆಗೆ ಕೋಪ ಮಾಡಿಕೊಂಡಿದ್ದೇನೆ? ಆದರೆ ಈಗ ನೀನು ನಿಜಕ್ಕೂ ನನ್ನನ್ನು ನೋಯಿಸಿದ್ದೀಯಾ, ತಿಳಿಯಿತೆ?"

"ಹೇಗೆ ನೋಯಿಸಿದೀನಿ, ಹೇಗೆ?"

"ನಾನು ನಿನ್ನ ಬಳಿಗೆ ಸ್ನೇಹಿತನಂತೆ ಬಂದೆ, ಹೃದಯ ತುಂಬಿಕೊಂಡು, ಎಲ್ಲವನ್ನೂ ನಿನ್ನ ಮುಂದೆ ಬರಿದು ಮಾಡಬೇಕೂಂತ ಬಂದೆ, ನನ್ನ ಸುಖದ ವಿಷಯವನ್ನು ನಿನಗೆ ತಿಳಿಸೋಣ ಅಂತ ಬಂದೆ."

"ಏನು ಸುಖ? ನೀನು ಮೊದಲೇ ಅದನ್ನು ಯಾಕೆ ಹೇಳಲಿಲ್ಲ?"

"ಇನ್ನೇನು, ಅದೇ, ನಾನು ಮದುವೆ ಪ್ರಸ್ತಾಪ ಮಾಡಿದ ವಿಷಯ" ವಾಸ್ಯ ತುಂಬ ಅಸಮಾಧಾನಗೊಂಡವನಂತೆ ಹೇಳಿದ. ಏಕೆಂದರೆ ಅವನು ನಿಜಕ್ಕೂ ಸ್ವಲ್ಪ ಕೋಪಗೊಂಡಿದ್ದ.

"ನೀನು! ನೀನು ಮದುವೆಯಾಗುತ್ತಿದೀಯ! ನೀನು ಹೇಳಿದ್ದು ನಿಜವೇ?" ಅರ್ಕಾದಿ ಗಟ್ಟಿಯಾಗಿ ಗರ್ಜಿಸುವ ಸ್ವರದಲ್ಲಿ ಹೇಳಿದ. "ಇಲ್ಲ, ನಿಜಕ್ಕೂ... ಸರಿ, ಹೇಗೆ? ಅದನ್ನು ನೀನು ಕಣ್ಣೀರು ಸುರಿಸುತ್ತ ಹೇಳುವ ರೀತಿಯೋ! ವಾಸ್ಯ, ನನ್ನ ಪ್ರೀತಿಯ ವಾಸ್ಯ, ನನ್ನ ನಚ್ಚಿನ ಗೆಳೆಯ, ಅಳಬೇಡ! ನಿಜವಾಗಿಯೂ ಮದುವೆ

ಯಾಗುತ್ತಿದೀಯಾ?" ಹಾಗೆನ್ನುತ್ತ ಅರ್ಕಾದಿ ಇವಾನೊವಿಚ್ ಮತ್ತೆ ವಾಸ್ಯನ ಸುತ್ತ ತೋಳು ಬಳಸಿ ತಬ್ಬಿಕೊಂಡ.

"ನಾನು ಯಾಕೆ ಅಷ್ಟು ರೇಗಿದ್ದೆ, ನಿನಗೀಗ ಗೊತ್ತಾಯಿತೆ?" ವಾಸ್ಯ ಹೇಳಿದ. "ನೀನು ತುಂಬ ಕರುಣಾಳು. ನನ್ನ ನಿಜವಾದ ಮಿತ್ರ. ನನಗೆ ಗೊತ್ತು. ನಾನು ನಿನ್ನ ಬಳಿಗೆ ಈ ನನ್ನ ಸುಖದೊಂದಿಗೆ ಬಂದೆ, ನನ್ನ ಆತ್ಮದಲ್ಲಿನ ಈ ಪರಮಾನಂದ ದೊಂದಿಗೆ ಬಂದೆ. ಆದರೆ ಹಠಾತ್ತನೆ ನನ್ನ ಹೃದಯದಲ್ಲಿನ ಈ ಎಲ್ಲ ಸುಖವನ್ನೂ, ಈ ಎಲ್ಲ ಪರಮಾನಂದವನ್ನೂ ನಾನು ನನ್ನೆಲ್ಲ ಘನತೆಯನ್ನೂ ಕಳೆದುಕೊಂಡು ಹಾಸಿಗೆಯ ಮೇಲೆ ಅಡ್ಡಲಾಗಿ ಬಿದ್ದುಕೊಂಡು ಒದ್ದಾಡುತ್ತ ತಿಳಿಸುವಂತೆ ನೀನು ಒತ್ತಾಯಕ್ಕೊಳಪಡಿಸಿದೆ. ನಿನಗೆ ಗೊತ್ತಾಯಿತೆ, ಅರ್ಕಾಷ" ವಾಸ್ಯ ಅರೆನಗೆಯೊಂದಿಗೆ ಮುಂದುವರಿಸಿದ. "ನನ್ನ ಸ್ಥಿತಿ ವಿಕಟವಾಗಿದ್ದಿತು. ಆದರೆ ಆ ಘಳಿಗೆಯಲ್ಲಿ ಒಂದು ರೀತಿಯಲ್ಲಿ ನಾನು ನಾನೇ ಆಗಿರಲಿಲ್ಲ. ಈ ವಿಷಯವನ್ನು ಲಘುವಾಗಿ ಪರಿಗಣಿಸುವ ಹಕ್ಕು ನನಗಿರಲಿಲ್ಲ, ಅಲ್ಲವೇ? ಸಧ್ಯಕ್ಕೆ ನೀನು ಆಗ ಅವಳ ಹೆಸರನ್ನೂ ಹೇಳುವಂತೆ ಒತ್ತಾಯಿಸಲಿಲ್ಲವಲ್ಲ. ಹಾಗೇನಾದರೂ ಮಾಡಿದ್ದರೆ, ನಾನು ಪ್ರಮಾಣ ಮಾಡಿ ಹೇಳುತ್ತೇನೆ, ನಿನಗೆ ನನ್ನನ್ನು ಕೊಲ್ಲಲು ಅವಕಾಶ ಕೊಡುತ್ತಿದ್ದೆನೇ ಹೊರತು, ನಿನ್ನ ಪ್ರಶ್ನೆಗೆ ಉತ್ತರ ಕೊಡುತ್ತಿರಲಿಲ್ಲ!"

"ಆದರೆ, ವಾಸ್ಯ, ನೀನು ಯಾಕೆ ಮಾತಾಡಲೇ ಇಲ್ಲ? ನನಗೆ ಮುಂಚೆಯೇ ಎಲ್ಲವನ್ನೂ ಹೇಳಬೇಕಿತ್ತು. ಆಗ ನಾನು ಕೀಟಲೆ ಮಾಡುತ್ತಲೇ ಇರಲಿಲ್ಲ" ಅರ್ಕಾದಿ ಇವಾನೊವಿಚ್ ನಿಜಕ್ಕೂ ಹತಾಶನಾದವನಂತೆ ಹೇಳಿದ.

"ಓಹ್, ಹೋಗಲಿ ಬಿಡು, ಹೋಗಲಿ ಬಿಡು! ನಾನು ಸುಮ್ಮನೆ ಹೇಳಿದೆ. ನಾನು ಯಾಕೆ ಅದನ್ನೆಲ್ಲ ಹಾಗೆ ಪರಿಗಣಿಸುತ್ತೇನೆ, ಗೊತ್ತೆ – ಯಾಕೆಂದರೆ, ನನಗೆ ತುಂಬ ಕರುಣೆಯಿಂದ ಕೂಡಿದ ಹೃದಯವಿರುವುದರಿಂದ. ಆದ್ದರಿಂದಲೇ, ನಾನು ಅದನ್ನು ಹೇಳಬೇಕಾದ ರೀತಿಯಲ್ಲಿ ಹೇಳಲಾಗಲಿಲ್ಲ. ನಿನ್ನನ್ನು ಸಂತೋಷಗೊಳಿ ಸಲು, ಆನಂದಗೊಳಿಸಲು, ಅದನ್ನು ಸೂಕ್ತವಾದ ರೀತಿಯಲ್ಲಿ ಹೇಳಲು, ನಿನಗೆ ಎಲ್ಲವನ್ನೂ ಸಭ್ಯವಾದ ರೀತಿಯಲ್ಲಿ ನಿವೇದಿಸಲು, ಆಗಲಿಲ್ಲವಲ್ಲ, ಅನ್ನುವುದೇ ನನ್ನನ್ನು ದುಃಖಿತನನ್ನಾಗಿ ಮಾಡಿದ್ದು. ನಿಜಕ್ಕೂ, ಅರ್ಕಾಷ, ನಾನು ನಿನ್ನನ್ನು ಅಷ್ಟೊಂದು ಪ್ರೀತಿಸುತ್ತೇನೆ. ನೀನಿಲ್ಲದಿದ್ದರೆ ನಾನು ಎಂದೂ ಮದುವೆಯೇ ಆಗುತ್ತಿರಲಿಲ್ಲ, ಈ ಜಗತ್ತಿನಲ್ಲಿ ಜೀವಿಸುತ್ತಲೇ ಇರುತ್ತಿರಲಿಲ್ಲ."

ಸ್ವಭಾವತಃ ತುಂಬ ಸಂವೇದನಾಶೀಲನಾದ ಅರ್ಕಾದಿ ಇವಾನೊವಿಚ್ ವಾಸ್ಯನ ಮಾತುಗಳನ್ನು ಕಣ್ಣೀರು ಸುರಿಸುತ್ತಲೂ ಅದೇ ಹೊತ್ತಿನಲ್ಲಿ ಆನಂದದಿಂದಲೂ ಕೇಳಿದ. ವಾಸ್ಯನೂ ಅದೇ ರೀತಿ ಪ್ರಭಾವಿತನಾದ. ಮತ್ತೊಮ್ಮೆ ಅವರು ಪರಸ್ಪರ ಅಪ್ಪಿಕೊಂಡರು, ತಮ್ಮ ವೈಮನಸ್ಯವನ್ನು ಮರೆತರು.

"ಈಗ ಹೇಳು, ಅದು ಹೇಗೆ ಆಯಿತು? ಎಲ್ಲವನ್ನೂ ಹೇಳು, ವಾಸ್ಯ! ಕ್ಷಮಿಸಿ ಬಿಡೋ, ನನ್ನ. ನಾನು ದಿಗ್ಭ್ರಾಂತನಾದೆ, ಸಂಪೂರ್ಣವಾಗಿ ದಿಗ್ಭ್ರಾಂತ ನಾದೆ; ಪ್ರಮಾಣವಾಗಿಯೂ, ನನಗೆ ಸಿಡಿಲು ಬಡಿದಂತಾಯಿತು! ಹೌದು, ತಮ್ಮ, ನೀನೇನಾದರೂ ಬೇಕೂಂತ ಹೇಳುತ್ತಿದೀಯೋ. ನನ್ನಾಣೆ, ಹೇಳು ನೀನೇನಾ ದರೂ ಬುರುಡೆ ಹೊಡೀತಿದೀಯೋ!" ಅರ್ಕಾದಿ ಇವಾನೊವಿಚ್ ಗಟ್ಟಿಯಾಗಿ ಹೇಳಿದ, ವಾಸ್ಯನ ಮುಖವನ್ನೇ ಸಂಶಯದಿಂದ ನೋಡುತ್ತ. ಆದರೆ ಸಾಧ್ಯವಾ ದಷ್ಟೂ ಬೇಗ ವಿವಾಹವಾಗುವ ದೃಢ ನಿರ್ಧಾರವನ್ನು ಆ ಮುಖದಲ್ಲಿ ಕಂಡು, ಅರ್ಕಾದಿ ಅತ್ಯಾನಂದಭರಿತನಾಗಿ ಹಾಸಿಗೆಯ ಮೇಲೆ ಬಿದ್ದು ಕೋಣೆಯ ಗೋಡೆ ಗಳು ಅದುರುತ್ತವೋ ಎಂಬಂತೆ ಲಾಗ ಹಾಕತೊಡಗಿದ.

"ವಾಸ್ಯ, ಇಲ್ಲಿ ಬಾ. ಕೂತುಕೋ" ಆನಂದೋತ್ಸಾಹ ಕೊನೆಗೂ ತಗ್ಗಿದ ಮೇಲೆ ಅವನು ಕೂಗಿ ಹೇಳಿದ.

"ನನಗೆ ನಿಜಕ್ಕೂ ಹೇಗೆ ಪ್ರಾರಂಭಿಸಬೇಕೋ ಗೊತ್ತಾಗುತ್ತಿಲ್ಲ ಕಣೋ. ಹೇಗೆ ಪ್ರಾರಂಭಿಸಲಿ?"

ಇಬ್ಬರು ಮಿತ್ರರೂ ಪರಸ್ಪರರನ್ನು ಆನಂದೋತ್ಸಾಹಗಳಿಂದ ನೋಡಿದರು.

"ಯಾರಾಕೆ, ವಾಸ್ಯ?"

"ಅರ್ತೇಮ್ಯೆವ" ವಾಸ್ಯ ಹೇಳಿದ. ಅವನ ಧ್ವನಿ ಸಂತಸದಿಂದ ದುರ್ಬಲ ಗೊಂಡಿದ್ದಿತು.

"ಹೌ-ದೇ!"

"ಓಹ್, ನಾನು ಅವಳ ವಿಷಯ ನಿನಗೆ ಎಷ್ಟೊಂದು ಎಷ್ಟೊಂದು ಸಾರಿ ಹೇಳುತ್ತಾ ಇದ್ದೆ. ಆಮೇಲೆ ಹೇಳೋದು ನಿಲ್ಲಿಸಿಬಿಟ್ಟೆ. ನೀನು ಅದನ್ನು ಗಮನಿ ಸಲೇ ಇಲ್ಲ. ಓಹ್, ಅರ್ಕಾಷ. ಅದನ್ನು ನಿನ್ನಿಂದ ಮುಚ್ಚಿಡಲು ನಾನು ಎಷ್ಟು ಯತ್ನ ಮಾಡಬೇಕಾಯಿತು. ನಾನು ಹೆದರಿದ್ದೆ. ಅದನ್ನು ಮಾತುಗಳಲ್ಲಿ ತಿಳಿಸಲು ಹೆದರಿದ್ದೆ! ಎಲ್ಲಿ ಎಲ್ಲವೂ ವಿಫಲವಾಗಿ ಬಿಡುತ್ತೋ ಅಂತ ಹೆದರಿಕೆ. ನಾನು ಪ್ರೇಮ ಪಾಶದಲ್ಲಿ ಸಿಕ್ಕಿಬಿದ್ದಿದ್ದೇನೆ, ಅರ್ಕಾಷ. ನಿನಗೇ ಗೊತ್ತಲ್ಲ! ಓಹ್, ದೇವರೇ! ಓಹ್, ದೇವರೇ! ಈಗ ನೋಡು, ಆದದ್ದು ಹೀಗೆ" ಅವನು ಹೇಳುತ್ತ ಹೋದ, ಭಾವೋದ್ರಿಕ್ತನಾಗಿ ಆಗಾಗ ಮಾತು ನಿಲ್ಲಿಸುತ್ತ, ತಡವರಿಸುತ್ತ. "ಒಂದು ವರ್ಷದ ಹಿಂದೆ ಅವಳಿಗೆ ಒಬ್ಬ ಪ್ರೇಮಿ ಇದ್ದ. ಇದ್ದಕ್ಕಿದ್ದಂತೆ ಅವನನ್ನು ಎಲ್ಲಿಗೋ ಕೆಲಸದ ಮೇಲೆ ಕಳುಹಿಸಲಾಯಿತು. ನಾನೂ ಅವನನ್ನು ನೋಡಿದ್ದೆ. ಅವನು ಹೋದದ್ದೇ ಒಳ್ಳೆಯದಾಯಿತು. ಅಲ್ಲಿಗೆ ಹೋದ ಮೇಲೆ ಅವನು ಕಾಗದ ಬರೆ ಯುವುದನ್ನೇ ನಿಲ್ಲಿಸಿದ. ಸಂಪೂರ್ಣವಾಗಿ ಕಣ್ಮರೆಯಾದ. ಅವಳ ಕುಟುಂಬದವರೂ ತುಂಬ ದಿನ ಕಾದರು, ಏನು ಅದರ ಅರ್ಥ ಅಂತ ಆಶ್ಚರ್ಯಪಡುತ್ತ. ಆಮೇಲೆ

ಇದ್ದಕ್ಕಿದ್ದಂತೆ ನಾಲ್ಕು ತಿಂಗಳನಂತರ ಅವನು ಹಿಂದಕ್ಕೆ ಬಂದ, ತನ್ನೊಂದಿಗೆ ಒಬ್ಬ ಪತ್ನಿಯನ್ನೂ ಕರೆತಂದಿದ್ದ. ಅವರ ಮನೆಯ ಕಡೆಗೆ ಕಾಲಿರಿಸಲೇ ಇಲ್ಲ. ಎಂಥ ಒರಟುತನ! ಎಂಥ ನೀಚತನ! ಆದರೆ ಅವರಿಗೆ ಬೆಂಬಲವಾಗಿ ನಿಲ್ಲಲು ಯಾರೂ ಇರಲಿಲ್ಲ. ಅವಳು ತುಂಬ ಅತ್ತಳು. ನತದೃಷ್ಟ ಯುವತಿ. ನಾನು ಅಲ್ಲಿಗೆ ಹೋದೆ, ಅವಳಲ್ಲಿ ಮೋಹಿತನಾದೆ... ಆದರೂ ನಾನು ತುಂಬ ದಿನದಿಂದಲೂ ಅವಳಲ್ಲಿ ಮೋಹಿತನಾಗಿದ್ದೆ, ಯಾವಾಗಲೂ ಅವಳಲ್ಲಿ ಮೋಹಿತನಾಗಿಯೇ ಇದ್ದೆ! ನಾನು ಅವಳನ್ನು ಸಂತೈಸತೊಡಗಿದೆ. ಅವರ ಮನೆಗೆ ತುಂಬ ಸಾರಿ ಹೋದೆ... ಆಮೇಲೆ ಅದು ಹೇಗಾಯಿತೋ ನನಗೇ ಗೊತ್ತಿಲ್ಲ. ಅವಳೂ ನನ್ನನ್ನು ಪ್ರೀತಿಸತೊಡಗಿದಳು. ಒಂದು ವಾರದ ಹಿಂದೆ ನನಗೆ ಹೆಚ್ಚಿಗೆ ತಡೆದುಕೊಳ್ಳಲಾಗದು ಎಂಬ ಭಾವನೆ ಉಂಟಾಯಿತು. ನನ್ನ ಕಣ್ಣೀರು ಕಟ್ಟೆ ಒಡೆಯಿತು. ಅಳುತ್ತ ಅವಳಿಗೆ ಎಲ್ಲವನ್ನೂ ಹೇಳಿದೆ, ಅಂದರೆ ನಾನು ಅವಳನ್ನು ಪ್ರೀತಿಸುತ್ತೇನೆ ಅಂತ, ಇನ್ನೂ ಎಲ್ಲ ಹೇಳಿದೆ!... 'ನಾನೂ ನಿಮ್ಮನ್ನು ಪ್ರೀತಿಸಲು ಸಿದ್ಧವಿದ್ದೇನೆ, ವಸೀಲಿ ಪೆತ್ರೋವಿಚ್' ಅವ ಳೆಂದಳು: 'ಆದರೆ ನಾನೊಬ್ಬ ಹತಭಾಗ್ಯೆ. ದಯವಿಟ್ಟು ನನಗೆ ಮೋಸ ಮಾಡಬೇಡಿ. ಬೇರೆ ಯಾರನ್ನೂ ನಾನು ಪ್ರೀತಿಸಲಾರೆ.' ತಿಳಿಯಿತೇನೋ, ತಮ್ಮ, ತಿಳಿಯಿ ತೇನೋ?... ನಾವು ಅಲ್ಲೇ ಆಗಲೇ ಪರಸ್ಪರ ಮಾತುಕೊಟ್ಟು ಒಪ್ಪಿಕೊಂಡೆವು. ನಾನು ತುಂಬ ಯೋಚನೆ ಮಾಡಿದೆ. ನಾನು ಕೇಳಿದೆ: 'ನಿಮ್ಮ ಅಮ್ಮನಿಗೆ ಈ ವಿಷಯ ಹೇಗೆ ತಿಳಿಸುವುದು?' ಅವಳು ಹೇಳಿದಳು: 'ಈಗ ಹೇಳೋದು ಕಷ್ಟ. ಸ್ವಲ್ಪ ಕಾಯೋಣ. ಅವಳಿಗೆ ಹೆದರಿಕೆ. ಈಗ ನಿಮ್ಮನ್ನು ಮದುವೆಯಾಗೋಕೆ ಅವಳು ನನಗೆ ಬಿಡೊಲ್ಲ'; ಅವಳೂ ಅತ್ತಳು. ನಾನು ಅವಳನ್ನು ಕೇಳದೆಯೇ ಇಂದು ಅವಳ ಅಮ್ಮನ ಬಳಿಗೆ ಹೋಗಿ ಹೇಳಿಬಿಟ್ಟೆ. ಲೀಸಂಕ ಅವಳ ಕಾಲ ಮೇಲೆ ಬಿದ್ದಳು. ನಾನೂ ಹಾಗೇ ಮಾಡಿದೆ... ಅವಳು ಆಶೀರ್ವಾದ ಮಾಡಿದಳು. ಅರ್ಕಾಷ, ಅರ್ಕಾಷ, ನನ್ನ ಅತ್ಯಂತ ಪ್ರಿಯ ಮಿತ್ರ! ನಾವೆಲ್ಲ ಒಟ್ಟಿಗೇ ವಾಸ ಮಾಡೋಣ. ಉಹೂಂ, ಈ ಪ್ರಪಂಚದಲ್ಲಿ ನನಗೆ ಏನೇ ಕೊಟ್ಟರೂ ನಿನ್ನಿಂದ ಎಂದೂ ಅಗಲುವುದಿಲ್ಲ!"

"ವಾಸ್ಯ, ನಾನು ಎಷ್ಟೇ ಪ್ರಯತ್ನಪಟ್ಟರೂ ನಿನ್ನ ಮಾತನ್ನು ನಂಬುವುದಕ್ಕೇ ಆಗುತ್ತಿಲ್ಲ. ಖಂಡಿತ ಆಗುತ್ತಿಲ್ಲ. ಪ್ರಮಾಣ ಮಾಡಿ ಹೇಳುತ್ತೇನೆ. ನಿಜವಾಗಲೂ, ನನಗೆ ಎಲ್ಲ ಹೇಗೆ ಕಾಣುತ್ತೆ ಅಂದರೆ... ಇಲ್ಲಿ ಕೇಳೋ, ನೀನು ಮದುವೆಯಾಗು ವುದು ಹೇಗೋ? ನನಗೆ ಯಾಕೆ ಗೊತ್ತಾಗಲಿಲ್ಲ? ನಿಜ ಹೇಳೋದಾದರೆ, ವಾಸ್ಯ, ನಾನು ಮುಚ್ಚುಮರೆ ಇಲ್ಲದೆ ಹೇಳುತ್ತೇನೆ – ನಾನೇ ಮದುವೆಯಾಗಬೇಕೂಂತ ಅಂದುಕೊಂಡಿದ್ದೆ ಕಣೋ. ಆದರೆ ಈಗ ನೀನು ಮದುವೆಯಾಗುತ್ತಿರೋದರಿಂದ, ನನ್ನದು ಪರವಾಗಿಲ್ಲ! ಸರಿ, ನೀನು ಸುಖವಾಗಿರಪ್ಪ, ತುಂಬ ಸುಖವಾಗಿರು!"

“ಓಹ್, ಅರ್ಕಾಷ, ಈಗ ನನ್ನ ಹೃದಯ ಎಷ್ಟು ಹಗುರವಾಗಿದೆ ಅಂತ, ನನ್ನ ಮನಸ್ಸು ಎಷ್ಟು ಹಗುರವಾಗಿದೆ ಅಂತ!” ವಾಸ್ಯ ಎದ್ದುನಿಂತು ಕೋಣೆಯಲ್ಲಿ ಶತಪಥ ತಿರುಗುತ್ತ ಹೇಳಿದ. “ನಿಜವಲ್ಲವೇ? ನಿಜವಲ್ಲವೇ? ನಿನಗೂ ಹಾಗೇ ಅನಿಸುತ್ತಲ್ಲವೇ? ನಾವು ಬಡವರ ಹಾಗೆ ಜೀವಿಸುತ್ತೇವೆ, ಆದರೆ ಸುಖದಿಂದ ಇರುತ್ತೇವೆ. ಖಂಡಿತವಾಗಿಯೂ ಸುಖದಿಂದ ಇರುತ್ತೇವೆ. ಇದೇನೂ ಭ್ರಾಂತಿಯಲ್ಲ. ನಮ್ಮ ಸುಖ ಪುಸ್ತಕದ ಬದನೇಕಾಯಲ್ಲ. ನಾವು ನಿಜಕ್ಕೂ ಸುಖವಾಗಿ ಇರುತ್ತೇವೆ!”

“ವಾಸ್ಯ, ಇಲ್ಲಿ ಕೇಳು, ವಾಸ್ಯ!”

“ಏನು?” ವಾಸ್ಯ ಕೇಳಿದ ಅರ್ಕಾದಿಯ ಮುಂದೆ ನಿಲ್ಲುತ್ತ.

“ನಾನು ಒಂದು ವಿಷಯ ಯೋಚನೆ ಮಾಡುತ್ತಾ ಇದೀನಿ. ಆದರೆ ನಿನಗೆ ಹೇಳೋಕೆ ಯಾಕೋ ಹೆದರಿಕೆ... ಕ್ಷಮಿಸು, ಆದರೆ ನನ್ನ ಸಂದೇಹ ನಿವಾರಣೆ ಮಾಡು. ನೀನು ಜೀವನಕ್ಕೆ ಏನು ಮಾಡ್ತೀಯ? ನೀನು ಮದುವೆಯಾಗೋದು ನನಗೆ ಸಂತೋಷವೇ, ತುಂಬ ಸಂತೋಷವೇ. ಆ ಸಂತೋಷವನ್ನು ನನಗೆ ತಡೆದು ಕೊಳ್ಳೋಕೆ ಆಗುತ್ತಿಲ್ಲ. ಆದರೆ ಜೀವನ ಹೇಗೆ ನಡಿಸ್ತೀಯಾ, ಹೇಳು?”

“ಅಯ್ಯೋ, ದೇವರೇ! ನೀನು ಏನೋ, ಅರ್ಕಾಷ!” ವಾಸ್ಯ ಹೇಳಿದ, ನಿಫಿದ್ಯೇವಿಚ್‌ನತ್ತ ಅತ್ಯಾಶ್ಚರ್ಯದಿಂದ ನೋಡುತ್ತ. “ನಿನಗೆ ಏನಾಗಿದೆಯೋ? ನಾನು ಎಲ್ಲವನ್ನು ಸ್ಪಷ್ಟವಾಗಿ ಹೇಳಿದಾಗ ಆ ಮುದುಕಿಯೂ ಮರು ಯೋಚನೆ ಮಾಡಲಿಲ್ಲ. ಅವರು ಹೇಗೆ ವಾಸಮಾಡುತ್ತಿದ್ದಾರೆ ಅಂದುಕೊಂಡೆ? ವರ್ಷಕ್ಕೆ ಐನೂರು ರೂಬಲ್ಲಲ್ಲೇ ಅವರು ಮೂರು ಜನ ಜೀವಿಸುತ್ತಿದಾರೆ. ಮುದುಕಪ್ಪನಿಗೆ ಬರೋ ಪೆನ್ಷನ್ ಅಷ್ಟೇ. ಮುದುಕಿ, ಲೀಸಂಕ ಅಲ್ಲದೆ ಒಬ್ಬ ಸಣ್ಣ ಹುಡುಗನೂ ಇದಾನೆ. ಅವನ ಶಾಲೆಯ ಶುಲ್ಕವನ್ನೂ ಈ ಹಣದಿಂದಲೇ ಕೊಡುತ್ತಿದಾರೆ. ನೋಡು, ಅವರು ಹೇಗೆ ಜೀವಿಸ್ತಿದಾರೆ? ನಿನ್ನಂಥ ನನ್ನಂಥ ಬಂಡವಾಳಗಾರರೇ ಚಿಂತಿಸೋದು. ಅದರ ಬಗ್ಗೆ ಈಗೇಕೆ ಯೋಚನೆ? ಯಾಕೆ, ಕೆಲವು ವೇಳೆ, ವರ್ಷ ಒಳ್ಳೆಯದಾಗಿದ್ದರೆ, ನನ್ನ ಆದಾಯ ಏಳು ನೂರಕ್ಕೂ ಹೋಗುತ್ತೆ!”

“ಅಲ್ಲವೋ, ವಾಸ್ಯ. ನೀನು ನನ್ನನ್ನು ಕ್ಷಮಿಸು. ನಾನು ಹೀಗೆ ಹೇಳ್ತೀನಿ ಅಂತ ಕೋಪ ಮಾಡಿಕೊಳ್ಳಬೇಡ. ನಿನ್ನ ಸುಖ ಕೆಡದಂತಿರಬೇಕು ಅನ್ನೋದೇ ನನ್ನ ಏಕೈಕ ಯೋಚನೆ. ಹೇಳೋ, ಏಳು ನೂರು ಎಲ್ಲಿ ಬಂತೋ? ಮುನ್ನೂರೇ ಅಲ್ಲವೇನೋ?”

“ಮುನ್ನೂರು! ಆದರೆ ಯೂಲಿಯಾನ್ ಮಸ್ತಾಕೊವಿಚ್‌ರ ವಿಷಯ? ಮರೆತು ಬಿಟ್ಟೆಯಾ?”

“ಯೂಲಿಯಾನ್ ಮಸ್ತಾಕೊವಿಚ್‌ರೇ? ನಿಜ. ಆದರೆ ಅವರದು ಖಾತರಿ

ಇಲ್ಲವಲ್ಲೋ ! ಅದೇನೂ ಗೊತ್ತಾದ ಸಂಬಳದಂತಲ್ಲವಲ್ಲ. ಸಂಬಳವಾದರೆ, ಅದರ ಪ್ರತಿ ರೂಬಲ್ಲೂ ನಿಜವಾದ ಮಿತ್ರನಂತಿರುತ್ತೆ. ನಿಜ, ಯೂಲಿಯಾನ್ ಮಸ್ತಾಕೊವಿಚ್‌ರು ಒಬ್ಬ ದೊಡ್ಡ ಮನುಷ್ಯರು. ನಾನು ಅವರನ್ನು ಗೌರವಿಸುತ್ತೇನೆ. ಅವರು ತುಂಬ ಉನ್ನತ ಸ್ಥಾನದಲ್ಲಿದ್ದರೂ ನಾನವರನ್ನು ಅರ್ಥಮಾಡಿಕೊಳ್ಳುತ್ತೇನೆ. ನನ್ನಾಣೆ, ನಾನವರನ್ನು ಇಷ್ಟಪಡುತ್ತೇನೆ, ಯಾಕೆಂದರೆ ಅವರು ನಿನ್ನನ್ನು ಇಷ್ಟಪಡುತ್ತಾರೆ, ನಿನ್ನ ಕೆಲಸಕ್ಕೆ ಹಣ ಕೊಡುತ್ತಾರೆ. ನಿನಗೆ ಕೊಡುತ್ತಿರುವ ಹಣಕ್ಕೆ ಅವರು ಬೇಕಾದರೆ ತಮಗಾಗಿಯೇ ಒಬ್ಬ ವಿಶೇಷ ಗುಮಾಸ್ತನನ್ನು ನೇಮಿಸಿಕೊಳ್ಳಬಹುದಿತ್ತು. ಅದು ಸರಿ. ಆದರೆ ನಿನ್ನ ವಿಷಯ ನೀನೇ ನೋಡಿಕೊಳ್ಳಬೇಕು ಕಣೋ, ವಾಸ್ಯ... ಅಲ್ಲದೆ, ನಾನು ಒಪ್ಪಿಕೊಳ್ಳುತ್ತೇನೆ, ನಿನ್ನಷ್ಟು ಅಂದವಾದ ಕೈಬರಹ ಬರೆಯುವವರು ಈ ಇಡೀ ಪೀಟರ್ಸ್‌ಬರ್ಗ್‌ನಲ್ಲೇ ಇನ್ನೊಬ್ಬರಿಲ್ಲ. ಅದನ್ನು ನಾನು ಒಪ್ಪಿಕೋತೇನೆ" ನಿಫಿದ್ಯೇವಿಚ್ ಉತ್ಸಾಹದಿಂದಲೇ ಮಾತು ಮುಗಿಸಿದ: "ಆದರೆ – ದೇವರ ದಯದಿಂದ ಹೀಗಾಗದಿರಲಿ – ನೀನು ಅವರಲ್ಲಿ ಏನಾದರೂ ಅಸಂತುಷ್ಟಿ ಉಂಟುಮಾಡಿದರೆ, ಅವರು ನಿನ್ನ ಬಗೆಗೆ ಅತೃಪ್ತರಾದರೆ, ಅವರ ವ್ಯಾಪಾರ ಕೊನೆಗಂಡರೆ, ಅವರು ಬೇರೆ ಯಾರನ್ನಾದರೂ ಗೊತ್ತು ಮಾಡಿಕೊಂಡರೆ, ಹೀಗೇ ಎಷ್ಟೋ ಘಟನೆಗಳು ಜರುಗಬಹುದು ! ಯೂಲಿಯಾನ್ ಮಸ್ತಾಕೊವಿಚ್‌ರು ಇವತ್ತು ಇಲ್ಲಿರಬಹುದು, ನಾಳೆ ಇಲ್ಲದಿರಬಹುದು, ವಾಸ್ಯ..."

"ಇಲ್ನೋಡೋ, ಅರ್ಕಾಷ. ನೀನು ಹೇಳೋ ರೀತಿಯಲ್ಲಿ, ಯಾವುದೇ ಘಳಿಗೆಯಲ್ಲಿ ಆಕಾಶವೇ ನಮ್ಮ ಮೇಲೆ ಕಳಚಿ ಬೀಳಬಹುದು."

"ನಿಜ... ನಿಜ... ನಾನು ಸುಮ್ಮನೆ ಹೇಳಿದೆ."

"ಇಲ್ಲ, ಇಲ್ಲಿ ಕೇಳು. ನನ್ನ ಮಾತು ಪೂರ್ತಿ ಕೇಳು. ಈಗ ನೋಡು ಅವರು ನನ್ನನ್ನು ಬಿಟ್ಟುಕೊಡೋ ಹಾಗೇ ಇಲ್ಲ. ಇಲ್ಲ. ನೀನು ಸುಮ್ಮನೆ ನನ್ನ ಮಾತು ಕೇಳು. ನೋಡು ನಾನು ಅವರು ಹೇಳಿದ್ದನ್ನೆಲ್ಲ ಶ್ರದ್ಧೆಯಿಂದ ನಡೆಸುತ್ತೇನೆ. ಅವರು ಎಷ್ಟು ಉದಾರಿ, ನಿನಗೆ ಗೊತ್ತೆ, ಅರ್ಕಾಷ. ನನಗೆ ಇವತ್ತು ಐವತ್ತು ಬೆಳ್ಳಿ ರೂಬಲ್ ಕೊಟ್ಟರು !"

"ನಿಜವಾಗಲೂ, ವಾಸ್ಯ ? ನಿನ್ನ ಕೆಲಸಕ್ಕೆ ಬಹುಮಾನವೇನೋ ?"

"ಯಾವ ಕೆಲಸಕ್ಕೆ ಬಹುಮಾನ ? ತಮ್ಮ ಸ್ವಂತ ಜೇಬಿನಿಂದ ತೆಗೆದುಕೊಟ್ಟರು. 'ತಗೊಳ್ಳಿ. ಈಗ ಐದು ತಿಂಗಳಿಂದ ನಿಮಗೆ ಸ್ವಲ್ಪವೂ ಹಣ ಬಂದಿಲ್ಲ. ಬೇಕಾದರೆ ತಗೊಳ್ಳಿ. ವಂದನೆಗಳು' ಅಂತ ಅಂದರು. 'ವಂದನೆಗಳು. ನಿಮ್ಮ ಕೆಲಸ ನನಗೆ ತೃಪ್ತಿ ನೀಡಿದೆ' ಅಂದರು. ನಾನು ಪ್ರಮಾಣ ಮಾಡಿ ಹೇಳ್ತೀನಿ ! 'ನೀವೇನೂ ನನಗೆ ಬಿಟ್ಟಿ ಚಾಕರಿ ಮಾಡುತ್ತಿಲ್ಲವಲ್ಲ' ಅಂದರು ಕಣೋ ಅವರು. ಸತ್ಯ

ವಾಗಿಯೂ ! ಹಾಗೆಯೇ ಅವರು ಹೇಳಿದ್ದು ! ನನ್ನ ಮುಖದ ಮೇಲೆ ಕಣ್ಣೀರು ಸುಮ್ಮನೆ ಸುರಿಯಿತು ಕಣೋ, ಅರ್ಕಾಷ ! ದೇವರೇ ಸಾಕ್ಷಿ !"

"ಹೇಳು, ವಾಸ್ಯ. ನೀನು ಅವರ ಕಾಗದಗಳನ್ನು ನಕಲು ಮಾಡುವುದನ್ನು ಮುಗಿಸಿದೆಯಾ ?"

"ಇಲ್ಲ... ಇನ್ನೂ ಇಲ್ಲ."

"ಓಹ್, ವಾಸ್ಯ ! ವಾಸ್ಯೆಂಕ ! ಏನು ಮಾಡಿಬಿಟ್ಟೆಯೋ !"

"ಪರವಾಗಿಲ್ಲ ಕಣೋ, ಅರ್ಕಾದಿ. ಇನ್ನೂ ಎರಡು ದಿನ ಇದೆ. ಮುಗಿಸಿ ಬಿಡ್ತೀನಿ."

"ಇಷ್ಟು ಹೊತ್ತಿಗೇ ಯಾಕೆ ಮುಗಿಸಲಿಲ್ಲವೋ ?"

"ನೋಡಿದಿಯಾ, ನೋಡಿದಿಯಾ, ಶುರುವಾಯಿತು ನಿನ್ನ ಗೋಳಾಟ. ನಿನ್ನ ಮುಖ ನೋಡಿದರೆ ನನ್ನ ಕರುಳು ಕಿತ್ತು ಬಂದಂತಾಗುತ್ತೆ, ನನ್ನ ಹೃದಯ ಹಿಂಡಿದಂತಾಗುತ್ತೆ ! ಓಹ್, ನೀನು ಯಾವಾಗಲೂ ಹಾಗೇ, ನನ್ನ ಉತ್ಸಾಹ ವನ್ನೆಲ್ಲ ಕುಗ್ಗಿಸುತ್ತೀಯ. ಏನೋ ಅನಾಹುತ ಆಯಿತು ಅಂತ 'ಸ-ಹಾ-ಯ' ಅಂತ ಕೂಗೋದು ! ಏನಾಯಿತು ಈಗ, ಒಂದು ನಿಮಿಷ ನಿಂತು ನೋಡು. ನಾನು ಮುಗಿಸ್ತೀನಿ, ಪ್ರಮಾಣವಾಗಿಯೂ ಮುಗಿಸ್ತೇನೆ."

"ಮುಗಿಸದೆ ಇದ್ದರೆ ?" ಅರ್ಕಾದಿ ನೆಗೆದು ನಿಲ್ಲುತ್ತ ಕೇಳಿದ. "ಅವರು ಆಗಲೇ ನಿನಗೆ ಇವತ್ತು ಹಣ ಕೊಟ್ಟುಬಿಟ್ಟಿದ್ದಾರೆ ! ಮದುವೆ ಬೇರೆ ಆಗ ಬೇಕೂಂತ ಇದೀಯಾ... ಅಯ್. ಅಯ್, ಅಯ್ !"

"ಚಿಂತಿಸಬೇಡ, ಚಿಂತಿಸಬೇಡ" ಷುಮ್ಕೋವ್ ಕೂಗಿ ಹೇಳಿದ. "ಈಗಿಂದೀಗಲೇ ನಾನು ಬರೆಯುವುದಕ್ಕೆ ಕೂರುತ್ತಿದ್ದೇನೆ. ಚಿಂತಿಸಬೇಡ !"

"ನಿನ್ನ ಕರ್ತವ್ಯವನ್ನು ನೀನು ಯಾಕೆ ಹಾಗೆ ಮರೆತೆಯೋ, ವಾಸ್ಯ ?"

"ಓಹ್, ಅರ್ಕಾಷ ! ನಾನು ಹೇಗೆ ಕೂತು ಬರೆಯೋಕೆ ಸಾಧ್ಯವಿತ್ತೋ ? ನಾನು ಎಂಥ ಸ್ಥಿತಿಯಲ್ಲಿದ್ದೆ ! ಆಫೀಸಿನಲ್ಲೇ ಕುರ್ಚಿಯ ಮೇಲೆ ಕೂತಿರೋಕೂ ನನಗೆ ಆಗುತ್ತಿರಲಿಲ್ಲ. ನೋಡೋ, ನನ್ನ ಭಾವನೆಗಳನ್ನು ನಾನು ಹತೋಟಿಯ ಲ್ಲಿಟ್ಟಿರೋದಕ್ಕೇ ನನಗಾಗುತ್ತಿರಲಿಲ್ಲ... ಅಯ್ಯೋ, ದೇವರೇ ! ಇವತ್ತು ಇಡೀ ರಾತ್ರಿ, ನಾಳೆ ರಾತ್ರಿ, ನಾಡಿದ್ದು ರಾತ್ರಿ, ಕೂತು ಮುಗಿಸಿಬಿಡ್ತೇನೆ."

"ತುಂಬ ಉಳಿದಿದೆಯೇ ?"

"ನನಗೆ ಅಡ್ಡಿಬರಬೇಡವೋ, ದಮ್ಮಯ್ಯ ಅಡ್ಡಿಬರಬೇಡ. ನೀನು ಸುಮ್ಮ ನಿರಪ್ಪ, ಸಾಕು."

ಅರ್ಕಾದಿ ಇವಾನೊವಿಚ್ ಮೆಟ್ಟಿಂಗಾಲಿನಲ್ಲಿ ತನ್ನ ಹಾಸಿಗೆಯ ಬಳಿಗೆ ಹೋಗಿ ಕುಳಿತ; ಆಮೇಲೆ ಇದ್ದಕ್ಕಿದ್ದಂತೆ ನೆಗೆದು ನಿಂತ. ಮತ್ತೆ ಕುಳಿತ, ವಾಸ್ಯನ ಕೆಲಸಕ್ಕೆ ಅಡ್ಡಿ

ಯಾಗಬಹುದೇನೋ ಎಂಬುದನ್ನು ಜ್ಞಾಪಿಸಿಕೊಂಡು. ಆದರೂ ಅವನ ಮನಸ್ಸಿನಲ್ಲಾಗುತ್ತಿದ್ದ ತಳಮಳ ಅವನಿಗೆ ತೆಪ್ಪಗೆ ಕೂರಲು ಅಸಾಧ್ಯವನ್ನಾಗಿ ಮಾಡಿತ್ತು. ವಾಸ್ಯ ಹೇಳಿದ ಸಂಗತಿ ಅವನನ್ನು ಭಾರಿ ಕ್ಷೋಭೆಗೊಳಿಸಿತ್ತೆಂಬುದು ಸ್ಪಷ್ಟವಾಗಿತ್ತು. ಅದರ ಪ್ರತಿಕ್ರಿಯೆಯಾಗಿ ಅವನಲ್ಲಿ ಉಂಟಾದ ಮೊದಲ ಆನಂದದ ಉಬ್ಬರ ಇನ್ನೂ ಇಳಿದಿರಲಿಲ್ಲ. ಅವನು ಷುಮ್ಕೋವ್‌ನತ್ತ ಕ್ಷಣನೋಟ ಬೀರಿದ. ಷುಮ್ಕೋವ್‌ನೂ ಅವನತ್ತ ಕ್ಷಣನೋಟ ಬೀರಿದ, ನಸುನಗುತ್ತ ಅವನತ್ತ ಬೆರಳು ಆಡಿಸಿದ, ಅನಂತರ ಭಯಂಕರವಾಗಿ ಹುಬ್ಬು ಗಂಟಿಕ್ಕಿಕೊಂಡು (ಹೀಗೆ ಮಾಡುವುದರಲ್ಲೇ ಅವನ ಕೆಲಸದ ಎಲ್ಲ ಶಕ್ತಿ ಎಲ್ಲ ಯಶಸ್ಸು ಅಡಗಿದ್ದಿತೇನೋ ಎಂಬಂತೆ) ತನ್ನ ಕಾಗದಗಳ ಮೇಲೆ ದೃಷ್ಟಿ ನೆಟ್ಟ.

ಅವನೂ ತನ್ನ ಭಾವೋದ್ವೇಗವನ್ನು ಹತೋಟಿಯಲ್ಲಿ ಇರಿಸಿಕೊಳ್ಳದಾಗಿದ್ದನೆಂದು ಕಂಡುಬರುತ್ತಿತ್ತು. ಏಕೆಂದರೆ ಅವನು ಪದೇ ಪದೇ ತನ್ನ ಗರಿಲೇಖನಿಯನ್ನು ಬದಲಿಸುತ್ತಿದ್ದ, ಕುರ್ಚಿಯಲ್ಲಿ ಕುಳಿತು ಚಡಪಡಿಸುತ್ತಿದ್ದ. ಕುಳಿತ ಭಂಗಿ ಬದಲಿಸುತ್ತಿದ್ದ, ಮತ್ತೆ ಬರೆಯತೊಡಗುತ್ತಿದ್ದ. ಆದರೆ ಅವನ ಕೈ ಅದುರುತ್ತಿತ್ತು, ಅವನಿಗೆ ವಿಧೇಯವಾಗಿರಲು ನಿರಾಕರಿಸುತ್ತಿತ್ತು.

"ಅರ್ಕಾಷ! ನಾನು ಅವರಿಗೆ ನಿನ್ನ ವಿಷಯನ್ನೂ ಹೇಳಿದ್ದೇನೆ ಕಣೋ!" ಅವನು ಇದ್ದಕ್ಕಿದ್ದಂತೆ ಹೇಳಿದ, ಆಗಷ್ಟೆ ಅದನ್ನು ನೆನಪಿಗೆ ತಂದುಕೊಂಡನೇನೋ ಎಂಬಂತೆ.

"ಹೌದೆ?" ಅರ್ಕಾದಿ ಕೇಳಿದ. "ನಾನೇ ಅದನ್ನು ಕೇಳೋಣ ಅಂತಿದ್ದೆ. ಹುಂ. ಏನು?"

"ಏನು? ಹುಂ, ನಾನು ಎಲ್ಲವನ್ನೂ ಆಮೇಲೆ ಹೇಳುತ್ತೇನೆ! ಹೌದು, ನನ್ನದೇ ತಪ್ಪು. ಪ್ರಮಾಣವಾಗಿಯೂ. ನಾಲ್ಕು ಪುಟ ಬರೆಯುವವರೆಗೂ ಏನೂ ಮಾತನಾಡಬಾರದು ಅಂದುಕೊಂಡಿದ್ದೆ. ಆಮೇಲೆ ಇದ್ದಕ್ಕಿದ್ದಂತೆ ನಿನ್ನ ಹಾಗೂ ಅವರ ಜ್ಞಾಪಕ ಬಂತು. ಹೇಗೋ ಇದು ನನ್ನ ಮನಸ್ಸಿನಲ್ಲಿದ್ದುದು ಹೊರ ಬಂದು ಬಿಟ್ಟಿತು. ನನಗೆ ಬರೆಯೋದಕ್ಕೇ ಆಗೊಲ್ಲ ಅಂತ ಕಂಡುಬರುತ್ತಾ ಇದೆ ಕಣೋ. ನಿಮ್ಮೆಲ್ಲರ ಬಗೆಗೇ ಯೋಚನೇ ಮಾಡೋ ಹಾಗೆ ಆಗುತ್ತೆ...." ವಾಸ್ಯ ನಸುನಕ್ಕ.

ಅವರು ಮತ್ತೆ ಮೌನವಾದರು.

"ಹುಹ್, ಎಂಥ ದರಿದ್ರ ಗರಿಲೇಖನಿ!" ಷುಮ್ಕೋವ್ ಹೇಳಿದ, ಬೇಸರ ಪಟ್ಟುಕೊಂಡು ಗರಿಲೇಖನಿಯನ್ನು ಮೇಜಿನ ಮೇಲೆ ಕುಟ್ಟುತ್ತ. ಇನ್ನೊಂದು ಗರಿಲೇಖನಿಯನ್ನು ಎತ್ತಿಕೊಂಡ.

"ವಾಸ್ಯ! ಇಲ್ಲಿ ಕೇಳು! ಒಂದೇ ಒಂದು ಮಾತು."

"ಏನದು? ಬೇಗ ಹೇಳು. ಇದೇ ಕೊನೆಯದಾಗಿರಲಿ."

"ಸರಿ. ಇನ್ನೂ ತುಂಬ ಉಳಿದಿದೆಯಾ?"

"ಅಯ್ಯೋ, ಪ್ರೀತ್ಯಾತ್ಮ!" ವಾಸ್ಯ ಈ ಜಗತ್ತಿನಲ್ಲಿ ಈ ಪ್ರಶ್ನೆಗಿಂತ ಹೆಚ್ಚು ಅಸಹ್ಯವಾದುದು, ಭಯಂಕರವಾದುದು ಬೇರೊಂದಿಲ್ಲ ಎನ್ನುವಂತೆ ಬೆಚ್ಚಿ ಬೀಳುತ್ತ ಹೇಳಿದ. "ಹೌದು. ತುಂಬ, ತುಂಬ ಉಳಿದಿದೆ!"

"ನೋಡು, ನನಗೊಂದು ವಿಚಾರ ಹೊಳೀತಾ ಇದೆ."

"ಏನು?"

"ಹೋಗಲಿ ಬಿಡು. ನೀನು ಬರವಣಿಗೆ ಮುಂದುವರಿಸು."

"ಆಗಲಿ. ಏನದು, ಹೇಳು?"

"ಆಗಲೇ ಏಳು ಗಂಟೆ ಆಗುತ್ತಾ ಇದೆ ಕಣೋ, ವಾಸ್ಯ."

ಇದನ್ನು ಹೇಳುತ್ತ ನಿಫಿದ್ಯೇವಿಚ್ ಮುಗುಳ್ನಗುತ್ತ ವಾಸ್ಯನತ್ತ ತುಂಟ ತನದಿಂದ ಕಣ್ಣು ಮಿಟುಕಿಸಿದ. ಅದರಲ್ಲಿ ಒಂದು ರೀತಿಯ ಅಂಜಿಕೆಯ ಭಾವನೆಯೂ ಇದ್ದಿತು. ಏಕೆಂದರೆ ತನ್ನ ಪ್ರಶ್ನೆಗೆ ವಾಸ್ಯನ ಪ್ರತಿಕ್ರಿಯೆ ಏನಾಗಿರಬಹುದೆಂಬ ಖಾತರಿ ಅವನಿಗಿರಲಿಲ್ಲ.

"ಸರಿ, ಏನದು?" ವಾಸ್ಯ ಕೇಳಿದ, ಬರವಣಿಗೆಯನ್ನು ಸಂಪೂರ್ಣವಾಗಿ ನಿಲ್ಲಿಸಿ, ಅರ್ಕಾದಿಯ ಕಣ್ಣುಗಳನ್ನೇ ದಿಟ್ಟಿಸಿನೋಡುತ್ತ; ತಾಳ್ಮೆಗೆಟ್ಟವನಾಗಿ ಅವನು ನಿಸ್ತೇಜನೂ ಆದ.

"ಏನೂಂದರೆ?"

"ದಮ್ಮಯ್ಯಾ, ಏನದು, ಬೇಗ ಹೇಳು."

"ಏನೂಂದರೆ... ನೀನು ಈಗ ತುಂಬ ಭಾವೋದ್ವೇಗಕ್ಕೊಳಗಾಗಿದ್ದೀಯೋ. ಈ ಸ್ಥಿತಿಯಲ್ಲಿ ನೀನು ಹೆಚ್ಚು ಕೆಲಸ ಮಾಡಲಾರೆ... ತಾಳು, ತಾಳು, ತಾಳು – ನನಗೆ ಗೊತ್ತು, ನನಗೆ ಗೊತ್ತು – ಇಲ್ಲಿ ಕೇಳು!" ನಿಫಿದ್ಯೇವಿಚ್ ಹೇಳಿದ, ಉತ್ಸು ಕತೆಯಿಂದ ಹಾಸಿಗೆಯಿಂದ ಜಿಗಿದು ಮೇಲೆದ್ದು ವಾಸ್ಯನನ್ನು ತಡೆಯುತ್ತ, ಅವನು ಮಾಡಬಹುದಾಗಿದ್ದ ಯಾವುದೇ ಆಕ್ಷೇಪಣೆಗಳನ್ನೂ ತಳ್ಳಿಹಾಕುವ ದೃಢ ನಿರ್ಧಾರ ದೊಂದಿಗೆ. "ಮೊಟ್ಟಮೊದಲು ನೀನು ನಿನ್ನನ್ನು ಶಾಂತಗೊಳಿಸಿಕೊಳ್ಳಬೇಕು, ಸಮಾಧಾನಪಡಿಸಿಕೊಳ್ಳಬೇಕು, ಅಲ್ಲವೇ?"

"ಅರ್ಕಾಷ! ಅರ್ಕಾಷ!" ವಾಸ್ಯ ಕೂಗಿ ಹೇಳಿದ, ಕುರ್ಚಿಯಿಂದ ನೆಗೆದು ಮೇಲೇಳುತ್ತ. "ಇಡೀ ರಾತ್ರಿ ಕುಳಿತುಕೊಂಡು ಬರೆಯುತ್ತೇನೆ, ಖಂಡಿತ ವಾಗಿಯೂ ಬರೆಯುತ್ತೇನೆ!"

"ಒಹ್, ಹೌದು, ಹೌದು! ಬೆಳಿಗ್ಗೆಯ ಹೊತ್ತಿಗಷ್ಟೆ ನಿದ್ರೆ ಹೋಗುತ್ತೀಯ."

"ಇಲ್ಲ, ಇಲ್ಲ. ನಾನು ನಿದ್ರೆ ಹೋಗುವುದೇ ಇಲ್ಲ."

"ಇಲ್ಲ, ಅದಾಗದು, ಕೂಡದು; ನೀನು ನಿದ್ರೆ ಹೋಗುತ್ತೀಯ. ಹೌದು, ಐದು ಗಂಟೆಗೆ ನಿದ್ರೆ ಹೋಗು. ಎಂಟು ಗಂಟೆಗೆ ನಾನು ಎಬ್ಬಿಸುತ್ತೇನೆ. ನಾಳೆ ರಜ. ನೀನು ಕೂತು ಇಡೀ ದಿನ ಬರೆಯಬಹುದು... ಆಮೇಲೆ ರಾತ್ರಿ ಬರೆಯ ಬಹುದು. ಅಂದಹಾಗೇ, ಬರೆಯುವುದು ತುಂಬ ಉಳಿದಿದೆಯೇ?"

"ಇಲ್ಲಿ ನೋಡು! ನೀನೇ ನೋಡು!"

ವಾಸ್ಯ ಆನಂದ ನಿರೀಕ್ಷೆಗಳಿಂದ ನಡುಗುತ್ತ ತನ್ನ ನೋಟುಪುಸ್ತಕವನ್ನು ತೋರಿಸಿದ.

"ಇಲ್ಲಿ ನೋಡು!"

"ಏನೋ, ಇದೇನು ಅಷ್ಟು ಹೆಚ್ಚಿಲ್ಲ".

"ಪ್ರಿಯ ಅರ್ಕಾಷ, ಅಲ್ಲಿ ಇನ್ನಷ್ಟಿದೆ ಕಣೋ" ವಾಸ್ಯ ಹೇಳಿದ ನಿಫಿದ್ಯೇ ವಿಚ್‌ನತ್ತ ತುಂಬ ನಮ್ರತೆಯಿಂದ ನೋಡುತ್ತ, ವಾಸ್ಯ ಹೊರಗೆ ಹೋಗುವುದು ಬಿಡುವುದು ಅವನ ಮೇಲೆ ಅವಲಂಬಿಸಿದೆಯೇನೋ ಎನ್ನುವಂತೆ.

"ಇನ್ನೂ ಎಷ್ಟಿದೆ?"

"ಎರಡು... ಪುಟ್ಟ ಪುಟಗಳು."

"ಸರಿ, ಆಮೇಲೆ? ಇಲ್ಲಿ ಕೇಳು. ನಾವು ಇದನ್ನು ಸಕಾಲದಲ್ಲೇ ಮುಗಿಸು ವೆವು, ಖಂಡಿತ ಮುಗಿಸುವೆವು!"

"ಅರ್ಕಾಷ!"

"ವಾಸ್ಯ, ಇಲ್ಲಿ ಕೇಳು! ಇದು ಹೊಸ ವರುಷದ ಮುನ್ನಾದಿನ. ಎಲ್ಲರೂ ಬಂಧು ಮಿತ್ರರೊಂದಿಗೆ ಕಳೆಯುತ್ತಿದಾರೆ. ನೀನೂ ನಾನೇ ನಿರ್ಗತಿಕರು, ಅನಾಥರು. ಆಹ್, ವಾಸ್ಯೆಂಕ!" ನಿಫಿದ್ಯೇವಿಚ್ ವಾಸ್ಯನನ್ನು ತಬ್ಬಿಕೊಂಡು ಕರಡಿಯಂಥ ಅಪ್ಪುಗೆಯಲ್ಲಿ ಅವನನ್ನು ನಜ್ಜುಗುಜ್ಜು ಮಾಡಿದ.

"ಅರ್ಕಾದಿ, ಈಗ, ನಿರ್ಧಾರವಾಯಿತು!"

"ವಾಸ್ಯ, ನಾನೇ ಹೇಳಹೊರಟಿದ್ದೆ ಕಣೋ. ಇಲ್ನೋಡೋ, ವಾಸ್ಯ, ಒಡ್ಡ! ಇಲ್ಲಿ ಕೇಳು! ಕೇಳು! ನೋಡು..."

ಅರ್ಕಾದಿ ಬಾಯಿ ತೆಗೆದವನು ಹಾಗೇ ನಿಂತ, ಆನಂದದಿಂದಾಗಿ ಮಾತ ನಾಡಲು ಆಗದವನಂತೆ. ವಾಸ್ಯ ಅವನ ಭುಜಗಳನ್ನು ಹಿಡಿದು ಅವನ ಕಣ್ಣು ಗಳನ್ನೇ ದಿಟ್ಟಿಸಿ ನೋಡುತ್ತ, ಅವನ ವಾಕ್ಯವನ್ನು ತಾನೇ ಮುಗಿಸುವವನಂತೆ ತುಟಿ ಆಡಿಸಿದ.

"ಸರಿ!" ಕೊನೆಗೆ ವಾಸ್ಯ ಹೇಳಿದ.

"ಇವತ್ತು ಅವರಿಗೆ ನನ್ನ ಪರಿಚಯ ಮಾಡಿಕೊಡು!"

"ಅರ್ಕಾದಿ, ಇವತ್ತು ಟೀಗೆ ಅಲ್ಲಿಗೇ ಹೋಗೋಣ! ಏನು ಗೊತ್ತ? ಹೊಸ

ವರುಷ ಬರುವವರೆಗೂ ಅಲ್ಲಿ ಇರೋದು ಏನೂ ಬೇಡ. ಇನ್ನೂ ಮುಂಚೆಯೋ ಹೊರಟು ಬಂದುಬಿಡೋಣ" ವಾಸ್ಯ ನಿಜವಾದ ಉತ್ಸಾಹದಿಂದ ಹೇಳಿದ.

"ಅಂದರೆ, ಎರಡು ಗಂಟೆ, ಹೆಚ್ಚೂ ಇಲ್ಲ, ಕಮ್ಮಿಯೂ ಇಲ್ಲ!"

"ಆಮೇಲೆ, ನಾನು ಬರೆದು ಮುಗಿಸುವವರೆಗೂ ನಾವು ಬೇರೆ ಬೇರೆ."

"ವಾಸ್ಯೂಕ್!"

"ಅರ್ಕಾದಿ!"

ಅರ್ಕಾದಿ ಮೂರು ನಿಮಿಷಗಳಲ್ಲಿ ಉಡುಪು ಬದಲಿಸಿ ಸಿದ್ಧನಾದ. ವಾಸ್ಯ ತಾನು ತೊಟ್ಟಿದ್ದ ಉಡುಪನ್ನೇ ಸ್ವಲ್ಪ ಸರಿಪಡಿಸಿಕೊಂಡ. ಏಕೆಂದರೆ, ಕೆಲಸ ಪ್ರಾರಂಭಿಸುವ ಆತುರದಲ್ಲಿ ಅವನು ಮನೆಗೆ ಬಂದಾಗ ತನ್ನ ಹೊರ ಉಡುಪನ್ನು ತೆಗೆಯುವುದನ್ನೂ ಮರೆತಿದ್ದ.

ಅವರು ಬೇಗ ಬೇಗ ಬೀದಿಗೆ ಹೋದರು. ಒಬ್ಬ ಇನ್ನೊಬ್ಬನಿಗಿಂತ ಹೆಚ್ಚು ಸಂತಸದ ಭಾವನೆ ಹೊಂದಿದ್ದ. ಅವರ ಮಾರ್ಗ ಪೀಟರ್ಸ್‌ಬರ್ಗ್ ಸೈಡ್‌ನಿಂದ ಕೊಲೋಮ್ನಾಗೆ ಹೋಗುತ್ತಿದ್ದಿತು. ಅರ್ಕಾದಿ ಇವಾನೊವಿಚ್‌ನ ನಡಿಗೆ ಚುರುಕಾಗಿತ್ತು, ಚಟುವಟಿಕೆಯಿಂದ ಕೂಡಿತ್ತು. ವಾಸ್ಯನ ಅದೃಷ್ಟ ಖುಲಾಯಿಸಿದ್ದುದಕ್ಕಾಗಿ, ಅವನ ಸುಖ ಸತತವಾಗಿ ಹೆಚ್ಚುತ್ತಿದ್ದುದಕ್ಕಾಗಿ ಅರ್ಕಾದಿ ಅತ್ಯಂತ ಆನಂದಿತನಾಗಿದ್ದ ಎಂಬುದನ್ನು ಅವನು ನಡೆಯುತ್ತಿದ್ದ ರೀತಿಯೇ ಸ್ಪಷ್ಟಪಡಿಸುತ್ತಿದ್ದಿತು. ವಾಸ್ಯ ಸಣ್ಣಸಣ್ಣ ಹೆಜ್ಜೆ ಹಾಕಿಕೊಂಡು ಸಾಧಾರಣ ವೇಗದಲ್ಲಿ ನಡೆಯುತ್ತಿದ್ದ. ಆದರೂ ಅವನು ನಡೆಯುತ್ತಿದ್ದ ರೀತಿ ಘನತೆಯಿಂದಲೇ ಕೂಡಿದ್ದಿತು. ಅರ್ಕಾದಿ ಇವಾನೊವಿಚ್‌ನಿಗಂತೂ ವಾಸ್ಯ ಎಂದೂ ಅಷ್ಟು ಸೂಕ್ತವಾಗಿ ಅಷ್ಟು ಮೆಚ್ಚಿಕೆಯಾಗಿ ಕುಡುಬಂದಿದ್ದಿರಲಿಲ್ಲ. ವಾಸ್ತವವಾಗಿ ಆ ಘಳಿಗೆಯಲ್ಲಿ ಅರ್ಕಾದಿ ಇವಾನೊವಿಚ್ ವಾಸ್ಯನ ಬಗೆಗೆ ಗಾಢ ಗೌರವದ ಭಾವನೆ ಹೊಂದಿದ್ದ. ವಾಸ್ಯನ ಶಾರೀರಿಕ ನ್ಯೂನತೆಯು – ಇದರ ಬಗೆಗೆ ಓದುಗರು ಇನ್ನೂ ತಿಳಿದಿಲ್ಲ (ವಾಸ್ಯನ ಶರೀರದ ಒಂದು ಪಕ್ಕ ಇನ್ನೊಂದಕ್ಕಿಂತ ಸ್ವಲ್ಪ ಕೆಳಗಿದ್ದಿತು) – ಅರ್ಕಾದಿಯ ಕಾರುಣ್ಯಪೂರಿತ ಹೃದಯದಲ್ಲಿ ಯಾವತ್ತೂ ಗಾಢ ಹಾಗೂ ವಿಶ್ವಾಸಪೂರಿತ ಅನುಕಂಪ ಉಂಟುಮಾಡುತ್ತಿದ್ದರೆ, ಈಗ ಅದು ಅವನಲ್ಲಿ ಹೆಚ್ಚು ಹೆಚ್ಚು ಕೋಮಲ ವಾತ್ಸಲ್ಯದ ಭಾವನೆ ಮೂಡಿಸಿದ್ದಿತು. ವಾಸ್ಯ ಅಂತಹ ವಾತ್ಸಲ್ಯಕ್ಕೆ ಸಹಜವಾಗಿಯೇ ಅರ್ಹನಾಗಿದ್ದ ಎಂಬ ಭಾವನೆಯೂ ಅರ್ಕಾದಿಯಲ್ಲಿ ಬೆಳೆದಿದ್ದಿತು. ನಿಜವಾಗಿ ಹೇಳುವುದಾದರೆ ಅರ್ಕಾದಿ ಇವಾನೊವಿಚ್ ತನ್ನ ಗೆಳೆಯನ ಭಾಗ್ಯಕ್ಕಾಗಿ ತಾನೇ ಆನಂದಭಾಷ್ಪ ಸುರಿಸಲು ಸಿದ್ಧನಿದ್ದ, ಆದರೆ ತನ್ನನ್ನು ತಾನೇ ಅಂಕೆಯಲ್ಲಿರಿಸಿಕೊಂಡ.

"ಎಲ್ಲಿ ಹೋಗುತ್ತ ಇದೀಯೋ, ವಾಸ್ಯ? ಹೀಗೆ ಹೋದರೆ ಹತ್ತಿರ!"

ಅವನೆಂದ, ವಾಸ್ಯ ವೊರ್ಷ್ನುಸೇನ್‌ಸ್ಕಿ ಪ್ರಾಸ್ಪೆಕ್ಟ್ ಕಡೆಗೆ ತಿರುಗ ಹೊರಟಿದ್ದಾಗ.

"ಸುಮ್ಮನಿರೋ ನೀನು, ಅರ್ಕಾಷ, ಸುಮ್ಮನಿರೋ !"

"ಹೀಗೆ ಹೋದರೆ ನಿಜಕ್ಕೂ ಹತ್ತಿರವೋ, ವಾಸ್ಯ !"

"ಅರ್ಕಾಷ ! ಏನು ಗೊತ್ತ ?" ವಾಸ್ಯ ಏನೋ ರಹಸ್ಯ ಹೇಳುವವನಂತೆ ಹೇಳ ತೊಡಗಿದ. ಅವನ ಧ್ವನಿ ಅಮಿತಾನಂದದಿಂದಾಗಿ ಸಣ್ಣದಾಗಿತ್ತು. "ಏನು ಗೊತ್ತ ? ನಾನು ಲೀಸಂಕಳಿಗೆ ಒಂದು ಸಣ್ಣ ಬಳುವಳಿ ಕೊಡೋಣ ಅಂತ ಇದೇನೋ."

"ಏನು ಕೊಡ್ತೀಯಾ ?"

"ಇಲ್ಲಿ ಈ ಮೂಲೆಯಲ್ಲಿ ಒಂದು ಸೊಗಸಾದ ಅಂಗಡಿ ಇದೆ. ಮದಾಮ್ ಲೆರೂರವರ ಅಂಗಡಿ."

"ಸರಿ, ಏನು ?"

"ಅಲ್ಲೊಂದು ಬಾನೆಟ್ ಇದೆ ಕಣೋ. ಪುಟ್ಟದಾಗಿ ಎಷ್ಟು ಮುದ್ದಾಗಿದೆ ಅಂತ. ನಾನು ಇವತ್ತು ನೋಡಿದೆ. ವಿಚಾರಿಸಿದೆ. ಮಾನನ್ ಲೆಸ್ಕೋ ಶೈಲಿಯದು ಅಂತ ಹೇಳಿದರು. ಬಹಳ ಚೆನ್ನಾಗಿದೆ ಕಣೋ ! ಅದಕ್ಕೆ ಲಘು ತಿಳಿಗೆಂಪಿನ ರಿಬ್ಬನ್ ಗಳಿವೆ. ತುಂಬ ಬೆಲೆಯದಾಗಿ ಇರದೆ ಹೋದರೆ... ಅರ್ಕಾಷ, ಬೆಲೆಯದಾಗಿದ್ದರೂ ಸರಿಯೆ !"

"ನೀನೊಬ್ಬ ಮಹಾ ಕವಿ ಕಣೋ, ವಾಸ್ಯ. ನಾನು ಘಂಟಾಘೋಷವಾಗಿ ಹೇಳ್ತೀನಿ. ಸರಿ, ಬಾ ಹೋಗೋಣ."

ಅವರು ನಡಿಗೆಯ ವೇಗವನ್ನು ಓಟದ ವೇಗಕ್ಕೆ ಹೆಚ್ಚಿಸಿದರು. ಎರಡು ನಿಮಿಷಗಳನಂತರ ಅಂಗಡಿ ಪ್ರವೇಶಿಸಿದರು. ಕಪ್ಪು ಕಣ್ಣುಗಳ ಫ್ರೆಂಚ್ ಮಹಿಳೆ ಯೊಬ್ಬಳು ಅವರನ್ನು ಸ್ವಾಗತಿಸಿದಳು. ಅವಳು ತಲೆಗೂದಲನ್ನು ಸುರುಳಿ ತುಂಬಿರುವಂತೆ ಸಿಂಗರಿಸಿಕೊಂಡಿದ್ದಳು. ತನ್ನ ಗ್ರಾಹಕರನ್ನು ಕಂಡ ಕೂಡಲೇ ಅವಳು ಅವರಷ್ಟೇ ಸಂತಸ ಭರಿತಳಾದಳು. ಸಾಧ್ಯವಿದ್ದರೆ ಅವರಿಗಿಂತ ಹೆಚ್ಚು ಸಂತಸಗೊಳ್ಳಲು ಸಿದ್ಧವಿದ್ದಳು. ವಾಸ್ಯ ತನ್ನ ಆನಂದದ ಉತ್ಸಾಹದಲ್ಲಿ ಮದಾಮ್ ಲೆರೂಗೆ ಮುತ್ತಿಡಲೂ ಸಿದ್ಧವಿದ್ದ.

"ಅರ್ಕಾಷ !" ಅವನೆಂದ ಸಣ್ಣ ದನಿಯಲ್ಲಿ, ಅಂಗಡಿಯ ದೊಡ್ಡ ಮೇಜಿನ ಮೇಲೆ ಪುಟ್ಟ ಮರದ ಆಸರೆಗಳ ಮೇಲೆ ಪ್ರದರ್ಶನಕ್ಕಿರಿಸಿದ್ದ ಎಲ್ಲ ಸುಂದರವಾದ ಭವ್ಯವಾದ ವಸ್ತುಗಳನ್ನೂ ಅನಿಯತವಾಗಿ ನೋಡುತ್ತ. "ಅದ್ಭುತ ಕಣೋ ! ಎಷ್ಟು ಸುಂದರವಾಗಿವೆ, ನೋಡೋ, ಎಷ್ಟು ಸುಂದರ ! ಅಲ್ಲಿ ನೋಡು, ಆ ಬಾಂಬೋಂಚಿಕ್,* ಕಾಣಿಸ್ತಾ ?" ಅವನು ಪಿಸುಗುಟ್ಟಿದ, ತುಂಬ ಚೆಲುವಾದ

---

*ಬಾಂಬೋಂಚಿಕ್ (ಫ್ರೆಂಚ್ – ಬಾನ್‌ಬಾನ್) – ಸಕ್ಕರೆ ಮಿಠಾಯಿ. – ಸಂ.

ಬಾನೆಟ್ ಒಂದನ್ನು ತೋರಿಸುತ್ತ. ಆದರೆ ಅದು ಅವನು ಕೊಳ್ಳಬಯಸಿದ್ದು ದೇನೂ ಆಗಿರಲಿಲ್ಲ. ಏಕೆಂದರೆ ಅವನು ತನ್ನ ಆಯ್ಕೆಯನ್ನು ಆಗಲೇ ದೂರದಿಂದಲೇ ಮಾಡಿದ್ದ. ಈಗವನು ತನ್ನ ಮೆಚ್ಚಿನ ನೋಟವನ್ನು ಮೇಜಿನ ಮತ್ತೊಂದು ಕೊನೆಯಲ್ಲಿ ಪ್ರದರ್ಶನಕ್ಕಿರಿಸಿದ್ದ ಆ ಬಾನೆಟ್ಟಿನ ಮೇಲೆ, ಆ ಅಪ್ರತಿಮ ಚೆಲುವಿನ ಬಾನೆಟ್ಟಿನ ಮೇಲೆ, ನೆಟ್ಟ. ಅವನು ಅದನ್ನು ದಿಟ್ಟಿಸುತ್ತಿದ್ದ ರೀತಿಯನ್ನು ನೋಡಿ ದಲ್ಲಿ, ಬೇರೆ ಯಾರಾದರೂ ಅದನ್ನು ಕದ್ದು ಬಿಡಲಿದ್ದರೋ ಅಥವಾ ಆ ಬಾನೆಟ್ಟೇ ಅವನ ಕೈಗೆ ಸಿಗಬಾರದೆಂದು ಹಾರಿ ಹೋಗಲಿದ್ದಿತೋ, ಎಂದು ಯಾರಿಗಾದರೂ ಅನಿಸುತ್ತಿತ್ತು.

"ಅಲ್ಲಿದೆ ನೋಡು, ಅದು ಎಲ್ಲಕ್ಕಿಂತ ತುಂಬ ಚೆನ್ನಾಗಿದೆ ಅಂತ ನನಗೆ ಅನಿಸುತ್ತೆ" ಅರ್ಕಾದಿ ಹೇಳಿದ.

"ಸರಿ, ಕಣೋ, ಅರ್ಕಾಷ! ನಿನಗೆ ಎಲ್ಲ ಗೌರವ ಸಲ್ಲತಕ್ಕದ್ದೆ; ನಿಜಕ್ಕೂ, ನಿನ್ನ ಸದಭಿರುಚಿಗಾಗಿ ನಾನು ಅಸಾಧಾರಣ ಗೌರವದ ಭಾವನೆ ಪಡೆಯುತ್ತಿದ್ದೇನೆ" ವಾಸ್ಯ ಹೇಳಿದ, ಅರ್ಕಾಷನ ಆಯ್ಕೆಯನ್ನು ತಾನು ಪ್ರಾಮಾಣಿಕವಾಗಿಯೂ ಮೆಚ್ಚುವಂತೆ ಸೋಗು ಹಾಕುತ್ತ. "ನಿನ್ನ ಬಾನೆಟ್ ಏನೋ ತುಂಬ ಮೋಹಕವಾಗಿದೆ. ಆದರೆ ಇಲ್ಲಿ ಬಾ. ಈ ಕಡೆ!"

"ಏನು ಅದಕ್ಕಿಂತ ಚೆನ್ನಾಗಿರೋದು ಇದೆಯೇನೋ?"

"ನೋಡು, ಇದನ್ನು!"

"ಅದೇ?" ಅರ್ಕಾದಿ ಸಂಶಯದಿಂದ ಕೇಳಿದ.

ಆದರೆ ವಾಸ್ಯ ತನ್ನನ್ನು ಇನ್ನೆಷ್ಟು ಮಾತ್ರವೂ ಹಿಡಿತದಲ್ಲಿರಿಸಿಕೊಳ್ಳಲಾಗದೆ ಅದನ್ನು ಅದರ ನೆಲೆಯಿಂದ ಆತುರದಿಂದ ಕಸಿದುಕೊಂಡ. ಅದೂ ದೀರ್ಘ ಕಾಲ ಕಾದನಂತರ ಇಂತಹ ಉತ್ತಮ ಗ್ರಾಹಕನನ್ನು ಸ್ವಾಗತಿಸುತ್ತಿದೆಯೋ ಎಂಬಂತೆ ತನ್ನ ಇಚ್ಛಾಶಕ್ತಿಯಿಂದಲೇ ಅವನ ಕೈಯೊಳಕ್ಕೆ ಹಾರಿಬಂದಂತೆ ಕಾಣಿಸುತ್ತಿದ್ದಿತು. ಅದರ ಎಲ್ಲ ನಿರಿಗೆಗಳೂ, ಕಸೂತಿ ಹಾಗೂ ಜರತಾರಿ ಅಲಂಕರಣಗಳೂ, ಕುಣಿಕೆ ಪಟ್ಟಿಗಳೂ ಸರಸರ ಸದ್ದುಮಾಡತೊಡಗಿದಾಗ, ಅರ್ಕಾದಿ ಇವಾನೊವಿಚ್‌ನ ಶಕ್ತಿಯುತವಾದ ಎದೆಯಿಂದ ಹಠಾತ್ತನೆ ಮೆಚ್ಚಿಕೆಯ ಉದ್ಗಾರ ಹೊರಬಂದಿತು. ಅಭಿರುಚಿಯ ವಿಷಯದಲ್ಲಿ ನಿರ್ವಿವಾದಾತ್ಮಕ ಉಚ್ಚತೆ ಹಾಗೂ ಉತ್ಕೃಷ್ಟತೆಯನ್ನು ಕಾಪಾಡಿಕೊಂಡು ಬಂದಿದ್ದ ಮಡಾಮ್ ಲೆರೂ ಕೂಡ, ಬಾನೆಟ್ಟುಗಳ ಆಯ್ಕೆಯಾಗುತ್ತಿದ್ದಾಗ ಕೇವಲ ಅನುಗ್ರಹಪೂರ್ವಕವಾಗಿ ಮೌನದಿಂದಿದ್ದವಳು, ಈಗ ವಾಸ್ಯನತ್ತ ಅನುಮೋದನೆಯ ಉಜ್ವಲ ಮುಗುಳ್ನಗೆಯ ನೋಟ ಬೀರಿದಳು. ಅವಳಿಗೆ ಸಂಬಂಧಿಸಿದ ಎಲ್ಲವೂ – ಅವಳ ನೋಟ, ಹಾವಭಾವ,

ಮುಗುಳ್ನಗೆ, ಎಲ್ಲವೂ – "ಹೌದು! ನೀವು ಸರಿಯಾಗಿ ಊಹಿಸಿದ್ದೀರಿ, ನಿಮಗಾಗಿ ಕಾದಿರುವ ಸುಖಕ್ಕೆ ನೀವು ಅರ್ಹರು" ಎಂದು ಹೇಳಿದವು.

"ನೀನು ನಾಚಿಕೆಯಿಂದ ಅಡಗಿ ಕುಳಿತಿದ್ದೆ, ಅಲ್ಲವಾ?" ವಾಸ್ಯ ಹೇಳಿದ ತನ್ನೆಲ್ಲ ಪ್ರೀತಿಯನ್ನೂ ಆ ಮೋಹಕವಾದ ಬಾನೆಟ್ ಮೇಲೆ ಕೇಂದ್ರೀಕರಿಸಿ. "ನೀನು ಬೇಕಂತಲೇ ಅಡಗಿಕೊಂಡಿದ್ದೆ ಅಲ್ಲವಾ, ನನ್ನ ಮುದ್ದು!" ಹಾಗೆನ್ನುತ್ತ ಅವನು ಅದಕ್ಕೆ, ಅಲ್ಲ, ಅದರ ಸುತ್ತ ಇದ್ದ ಗಾಳಿಗೆ, ಮುತ್ತಿಟ್ಟ, ಏಕೆಂದರೆ ತನ್ನ ಈ ನಿಧಿಯನ್ನು ಮುಟ್ಟಲೂ ಅವನು ಅಂಜಿದ್ದ.

"ಹೌದು ಕಣೋ, ಹೌದು. ನಿಜವಾದ ಯೋಗ್ಯತೆ, ಸದ್ಗುಣಗಳು ಯಾವಾಗಲೂ ಒಳಗೇ ಅಡಗಿರುತ್ತವೆ" ಅರ್ಕಾದಿ ಹೇಳಿದ ಅತ್ಯಾನಂದದಿಂದ, ಅಂದು ಬೆಳಿಗ್ಗೆಯಷ್ಟೆ ವ್ಯಂಗ್ಯ ಪತ್ರಿಕೆಯೊಂದರಲ್ಲಿ ಓದಿದ್ದ ವಾಕ್ಯವನ್ನು ವಿನೋದವಾಗಿ ಪುನರುಚ್ಚರಿಸುತ್ತ. "ಸರಿ, ವಾಸ್ಯ. ಈಗೇನು?"

"ಹುರ್ರಾ! ಅರ್ಕಾಷ! ನೀನು ಇವತ್ತು ತುಂಬ ಚಮತ್ಕಾರದಿಂದ ಮಾತನಾಡುತ್ತಿದ್ದೀಯ. ನನ್ನ ಮಾತು ಕೇಳು, ನೀನು ಇವತ್ತು ಹೆಂಗಸರ ಮಧ್ಯೆ, ಅವರು ಹೇಳುತ್ತಾರಲ್ಲ ಹಾಗೆ, ಫ್ಯೂರೋರ್* ಉಂಟುಮಾಡುವುದು ಖಂಡಿತ. ಮದಾಮ್ ಲೆರೂ! ಮದಾಮ್ ಲೆರೂ!"

"ಏನಾಗಬೇಕಿತ್ತು?"

"ಪ್ರಿಯ ಮದಾಮ್ ಲೆರೂ!"

ಮದಾಮ್ ಲೆರೂ ಅರ್ಕಾದಿ ಇವಾನೊವಿಚ್‌ನತ್ತ ಕ್ಷಣನೋಟ ಬೀರಿ, ಇಚ್ಛಾಪೂರ್ತಿ ಮಾಡಿಕೊಳ್ಳುವಂತೆ ಮುಗುಳ್ನಕ್ಕಳು.

"ನಾನು ಈ ಘಳಿಗೆಯಲ್ಲಿ ನಿಮ್ಮನ್ನು ಎಷ್ಟು ಆರಾಧಿಸುತ್ತೇನೋ ಊಹಿಸಲಾರಿರಿ... ದಯವಿಟ್ಟು ನಿಮಗೊಂದು ಮುತ್ತು ಕೊಡಲು ಅವಕಾಶ ನೀಡಿ..." ಹಾಗೆಂದು ವಾಸ್ಯ ಆ ಅಂಗಡಿಯ ಒಡತಿಗೆ ಮುತ್ತು ಕೊಟ್ಟ.

ವಾಸ್ಯನಂಥ ಪೋಕರಿಯಿಂದ ಮುತ್ತುಕೊಡಿಸಿಕೊಂಡೂ ತನ್ನ ಘನತೆಯನ್ನು ಕಳೆದುಕೊಳ್ಳದಂತೆ ಇರಲು ಆಕೆ ಖಂಡಿತವಾಗಿಯೂ ಒಂದು ಘಳಿಗೆ ತನ್ನೆಲ್ಲ ಸಮಸ್ಥಾಯಿತ್ವವನ್ನೂ ಕೂಡಿಸಿಕೊಳ್ಳಬೇಕಿದ್ದಿತು. ಆದರೆ ಮದಾಮ್ ಲೆರೂಳ ಅಂತರ್ಗತ ನೈಜ ಸೌಜನ್ಯ ಹಾಗೂ ವಿನಯಶೀಲತೆಯೇ, ಅವಳು ಅವನ ಭಾವೋದ್ರೇಕದ ಮನಸ್ಸಿನ ಆವೇಗವನ್ನು ಹಾಗೆ ಸ್ವೀಕರಿಸುವಂತೆ ಅವಳನ್ನು ಪ್ರೇರಿಸಿದುದು, ಎಂದೇ ನಾನು ಒತ್ತಿ ಹೇಳುತ್ತೇನೆ. ಅವಳು ಅವನನ್ನು ಕ್ಷಮಿಸಿದಳು. ಅವಳು ಈ ಪ್ರಸಂಗದಲ್ಲಿ ತೋರಿದ ಮನೋಧರ್ಮ ಎಷ್ಟು ಜಾಣತನದಿಂದ

---

*ಹುಚ್ಚು ಉತ್ಸಾಹ (ಲ್ಯಾಟಿನ್). – ಸಂ.

ಕೂಡಿದ್ದಿತು, ಎಷ್ಟು ಗೌರವ ತರುವಂಥದಾಗಿದ್ದಿತು! ಯಾರಾದರೂ ಸರಿಯೆ ವಾಸ್ಯನೊಂದಿಗೆ ನಿಜಕ್ಕೂ ಕೋಪಗೊಳ್ಳಲು ಸಾಧ್ಯವಿದ್ದಿತೇ!

"ಮದಾಮ್ ಲೆರೂ, ಇದರ ಬೆಲೆ ಏನು?"

"ಐದು ಬೆಳ್ಳಿ ರೂಬಲ್‌ಗಳು" ಅವಳು ಮತ್ತೆ ಸಮಾಧಾನಚಿತ್ತ ಪಡೆದು ಕೊಂಡನಂತರ, ಮುಗುಳ್ನಗೆಯೊಂದಿಗೆ ಉತ್ತರಿಸಿದಳು.

"ಮತ್ತೆ ಅದರ ಬೆಲೆ ಎಷ್ಟು, ಮದಾಮ್ ಲೆರೂ?" ಅರ್ಕಾದಿ ಇವಾನೊವಿಚ್ ಕೇಳಿದ, ತನ್ನ ಆಯ್ಕೆಯ ಬಾನೆಟ್‌ಅನ್ನು ತೋರಿಸುತ್ತ.

"ಅದಕ್ಕೆ ಎಂಟು ಬೆಳ್ಳಿ ರೂಬಲ್‌ಗಳು."

"ಹಾಗೋ. ಆದರೆ ದಯವಿಟ್ಟು ನೀವೇ ಹೇಳಿ, ಮದಾಮ್ ಲೆರೂ, ಇವುಗಳಲ್ಲಿ ಯಾವುದು ಹೆಚ್ಚು ಉತ್ತಮ, ಹೆಚ್ಚು ನಾಜೋಕಾದುದು, ಹೆಚ್ಚು ಮೋಹಕವಾದುದು? ಯಾವುದು ಹೆಚ್ಚಾಗಿ ನಿಮ್ಮ ಶೈಲಿಯದು?"

"ಅದಕ್ಕೆ ಬೆಲೆ ಹೆಚ್ಚು. ಆದರೆ ನಿಮ್ಮ ಆಯ್ಕೆ, c'est plus coquet.*"

"ಸರಿ ಹಾಗಾದರೆ. ಅದನ್ನೇ ನಾವು ಕೊಳ್ಳುತ್ತೇವೆ!"

ಮದಾಮ್ ಲೆರೂ ಅತ್ಯಂತ ತೆಳುವಾದ ಕಾಗದದ ಹಾಳೆಯೊಂದನ್ನು ತೆಗೆದುಕೊಂಡು ಬಾನೆಟ್‌ಅನ್ನು ಅದರಲ್ಲಿ ಸುತ್ತಿದಳು, ಸಣ್ಣ ಪಿನ್ನಿನಿಂದ ಭದ್ರಪಡಿಸಿದಳು. ಇದು ಕಾಗದವನ್ನು ಬಾನೆಟ್ ಇಲ್ಲದಿದ್ದಾಗ ಕಾಣಿಸಿದುದಕ್ಕಿಂತ ಇನ್ನೂ ಹೆಚ್ಚು ಹಗುರವಾಗಿಯೂ ಸೊಗಸಾಗಿಯೂ ಕಾಣುವಂತೆ ಮಾಡಿತು. ವಾಸ್ಯ ಅದನ್ನು ಅತ್ಯಂತ ಜಾಗರೂಕತೆಯಿಂದ ಉಸಿರುಹಿಡಿದುಕೊಂಡು ಎತ್ತಿಕೊಂಡ, ಮದಾಮ್ ಲೆರೂಗೆ ಬಾಗಿ ವಂದಿಸಿದ, ಮತ್ತೇನೋ ಮೆಚ್ಚಿಗೆಯ ಮಾತು ಹೇಳಿದ, ಅಂಗಡಿಯಿಂದ ಹೊರಬಿದ್ದ.

"ನಾನೊಬ್ಬ viveur**, ಅರ್ಕಾಷ, ನಾನೊಬ್ಬ ಹುಟ್ಟು viveur!" ವಾಸ್ಯ ಹೇಳಿದ. ಅವನು ಬಿಟ್ಟು ಬಿಟ್ಟು ಸಣ್ಣದಾಗಿ ಶಬ್ದವಿಲ್ಲದಂತೆ ನರಕ್ಷೋಭೆಗೊಳಗಾದವನಂತೆ ನಗುತ್ತಿದ್ದ. ಧಾವಿಸಿ ನಡೆಯುತ್ತ ಅವನು ಎದುರು ಬಂದವರಿಗೆ ಅವಶ್ಯವಾದುದಕ್ಕಿಂತ ಹೆಚ್ಚು ವಿಶಾಲವಾದ ಸ್ಥಳಬಿಟ್ಟುಕೊಟ್ಟು ಹೋಗುತ್ತಿದ್ದ, ಎದುರಿಗೆ ಬಂದವರೆಲ್ಲರೂ ಅವನ ಪ್ರಶಸ್ತ ಬಾನೆಟ್‌ಅನ್ನು ಬೇಕಂತಲೇ ಅಜ್ಜಿಬಿಜ್ಜಿ ಮಾಡುವ ಉದ್ದೇಶ ಹೊಂದಿದ್ದರೆಂದು ಸಂದೇಹಿಸುತ್ತ.

"ಇಲ್ಲಿ ಕೇಳೋ, ಅರ್ಕಾದಿ, ಇಲ್ಲಿ ಕೇಳು!" ಅವನು ಒಂದು ನಿಮಿಷದನಂತರ ಹೇಳತೊಡಗಿದ. ಅವನ ಧ್ವನಿಯಲ್ಲಿ ಗಂಭೀರವಾದುದು ಏನೋ, ಹೇಳಲಾಗ

---

*ಇದು ಹೆಚ್ಚು ಬೆಡಗಿನದು.

**ಸಂತುಷ್ಟಜೀವಿ (ಫ್ರೆಂಚ್).

ದಷ್ಟು ಪ್ರೀತಿಪೂರ್ವಕವಾದುದು ಏನೋ, ಅನುರಣಿಸುತ್ತಿದ್ದಿತು. "ಅರ್ಕಾದಿ, ನನಗೆ ತುಂಬ ಸಂತೋಷವಾಗಿದೆ, ತುಂಬ ಸಂತೋಷವಾಗಿದೆ !"

"ವಾಸೆಂಕ ! ನನಗೂ, ನನಗೂ ತುಂಬ ಸಂತೋಷವಾಗಿದೆ ಕಣೋ !"

"ಇಲ್ಲ, ಅರ್ಕಾಷ, ಇಲ್ಲ. ನನಗೆ ಗೊತ್ತು ನನ್ನ ಬಗೆಗೆ ನಿನ್ನ ಪ್ರೇಮ ಅಪರಿಮಿತವಾದುದು; ಆದರೆ ನಾನು ಈಗ ಅನುಭವಿಸುತ್ತಿರುವ ಸಂತೋಷದ ನೂರನೇ ಒಂದು ಪಾಲನ್ನೂ ನೀನು ಭಾವಿಸಲಾರೆ ! ನನ್ನ ಹೃದಯ ತುಂಬಿದೆ, ಅರ್ಕಾಷ, ತುಂಬಿದೆ ! ನಾನು ಇಂಥ ಸುಖಕ್ಕೆ ಅನರ್ಹ ! ನಾನದನ್ನು ಕೇಳಬಲ್ಲೆ, ಭಾವಿಸಬಲ್ಲೆ ! ಇದಕ್ಕೆ ಅರ್ಹನಾಗಲು ನಾನು ಎಂದು ಏನು ಮಾಡಿದ್ದೆನೊ" ಅವನು ಅದು ಮಿಟ್ಟಿ ಗದ್ಗದದಿಂದ ಅದುರುತ್ತಿದ್ದ ಸ್ವರದಲ್ಲಿ ಹೇಳಿದ. "ನಾನು ಏನು ಮಾಡಿದ್ದೇನೆ, ಹೇಳು ! ಎಲ್ಲ ಜನರನ್ನು ನೋಡು, ಎಲ್ಲೆಡೆಯೂ ಎಷ್ಟೊಂದು ದುಃಖವಿದೆ ನೋಡು. ಎಷ್ಟೊಂದು ಕಣ್ಣೀರು, ಒಂದು ರಜಾ ದಿನವೂ ಇಲ್ಲದ ಎಷ್ಟೊಂದು ನೀರಸ ದಿನಗಳು ! ಮತ್ತೆ ನಾನು ! ನಾನು ಅಂತಹ ಯುವತಿಯೊಬ್ಬಳ ಪ್ರೀತಿಗೆ ಪಾತ್ರನಾಗಿದ್ದೇನೆ, ನಾನು... ಆದರೆ ನೀನೇ ಅವಳನ್ನು ನೋಡುವಿಯಂತೆ, ಅವಳ ಆ ಉದಾತ್ತ ಹೃದಯವನ್ನು ನೀನೇ ಕಂಡು ಮೆಚ್ಚಲಿರುವೆ. ನಾನು ಹುಟ್ಟಿನಲ್ಲಿ ಕೆಳದರ್ಜೆಯವ. ಆದರೆ ಈಗ ನನಗೆ ಒಂದು ಅಂತಸ್ತಿದೆ, ಸ್ವತಂತ್ರ ಆದಾಯವಿದೆ – ಅಂದರೆ ನನ್ನ ಸಂಬಳವಿದೆ. ನಿಜ, ನಾನು ಶಾರೀರಿಕ ನ್ಯೂನತೆಯೊಂದಿಗೆ ಹುಟ್ಟಿದ್ದೇನೆ – ನನ್ನ ಭುಜಗಳು ಸ್ವಲ್ಪ ವಕ್ರವಾಗಿವೆ. ಆದರೂ ನೋಡು, ಅವಳು ನನ್ನನ್ನು, ಈ ನ್ಯೂನತೆ ಇದ್ದರೂ, ಪ್ರೀತಿಸುತ್ತಾಳೆ. ಯೂಲಿಯಾನ್ ಮಸ್ತಾಕೊವಿಚ್‌ರೂ ಅಷ್ಟೆ. ಅವರು ಇಂದು ನನ್ನ ಬಗೆಗೆ ಎಷ್ಟು ನಯವಾಗಿದ್ದರು, ಎಷ್ಟು ಸಹಾನುಭೂತಿ ತೋರಿದರು, ಎಷ್ಟು ಮರ್ಯಾದೆಯಿಂದಿದ್ದರು. ಅವರು ನನ್ನೊಂದಿಗೆ ಮಾತನಾಡುವುದೇ ಅಪರೂಪ. ಆದರೆ ಇಂದು ಅವರೇ ನನ್ನ ಬಳಿಗೆ ಬಂದು ಹೇಳಿದರು: 'ಏನು, ವಾಸ್ಯ' (ಸತ್ಯವಾಗಿಯೂ, ಅವರು ಹಾಗೇ ನನ್ನನ್ನು ಕರೆದುದು, ಸುಮ್ಮನೆ ವಾಸ್ಯ ಎಂದೇ) 'ರಜಾದಿನಗಳಲ್ಲಿ ವಿನೋದ ಕೇಳಿಯಲ್ಲಿ ತೊಡಗುವೆಯಾ, ಏನು ?' ಹಾಗೆಂದು ಅವರು ನಕ್ಕರು.

" 'ಇಲ್ಲ, ಮಹಾ ಸ್ವಾಮಿ' ನಾನೆಂದೆ. 'ಸ್ವಲ್ಪ ಕೆಲಸವಿದೆ.' ಸ್ವಲ್ಪ ಧೈರ್ಯ ತಂದುಕೊಂಡು ಮತ್ತೂ ಹೇಳಿದೆ: 'ಬಹುಶಃ ಸ್ವಲ್ಪ ಆನಂದದಲ್ಲೂ ತೊಡಗುವೆ, ಮಹಾಸ್ವಾಮಿ' – ನನ್ನಾಣೆಗೂ, ಹಾಗೆಯೇ ಹೇಳಿದೆ. ಆಮೇಲೆ ಅವರು ನನಗೆ ದುಡ್ಡು ಕೊಟ್ಟರು, ಇನ್ನೂ ಒಂದೆರಡು ಮಾತುಗಳನ್ನು ಹೇಳಿದರು. ನಾನು ಅತ್ತೆ ಕಣೋ, ಸತ್ಯವಾಗಿಯೂ, ನನ್ನ ಕಣ್ಣುಗಳಲ್ಲಿ ನೀರು ಬಳಬಳನೆ ಸುರಿಯಿತು. ಅವರೂ ಭಾವಭರಿತರಾದರೆಂದು ಕಾಣುತ್ತೆ. ನನ್ನ ಬೆನ್ನು ತಟ್ಟಿ ಹೇಳಿದರು: 'ಅದೀಗ ಸರಿಯಾದ ಮಾತು, ವಾಸ್ಯ. ನೀನು ಯಾವಾಗಲೂ ಇಂತಹುದೇ ಭಾವನೆ ಹೊಂದಿರಬೇಕು.' "

ವಾಸ್ಯ ಒಂದು ಕ್ಷಣ ತಡೆದ. ಅರ್ಕಾದಿ ಇವಾನೊವಿಚ್ ಅತ್ತ ಕಡೆಗೆ ತಿರುಗಿ ತನ್ನ ಕಣ್ಣಿನಲ್ಲಿ ಊರಿ ಬಂದಿದ್ದ ನೀರನ್ನು ತನ್ನ ಮುಷ್ಟಿಯಿಂದ ಒರಸಿಕೊಂಡ.

"ಆಮೇಲೆ, ಆಮೇಲೆ..." ವಾಸ್ಯ ಮಾತು ಮುಂದುವರಿಸಿದ. "ನಾನಿದನ್ನು ನಿನಗೆ ಈ ಮುನ್ನ ಹೇಳಿಯೇ ಇಲ್ಲ, ಅರ್ಕಾದಿ... ಅರ್ಕಾದಿ ! ನಿನ್ನ ಸ್ನೇಹದಿಂದ ನೀನು ನನ್ನನ್ನು ಎಷ್ಟೊಂದು ಸಂತೋಷಗೊಳಿಸಿದ್ದೀಯೆ. ನೀನಿಲ್ಲದೆ ಇದ್ದರೆ ನಾನು ಜೀವದಿಂದಲೇ ಇರುತ್ತಿರಲಿಲ್ಲ – ಇಲ್ಲ, ಇಲ್ಲ, ನೀನೇನೂ ಹೇಳಬೇಡ, ಅರ್ಕಾಷ ! ಎಲ್ಲಿ ನಿನ್ನ ಕೈ ಕೊಡು, ನಾನು ಕುಲುಕಬೇಕು, ನಿನಗೆ ವಂದಿಸಬೇಕು !" ಮತ್ತೆ ವಾಸ್ಯ ಮಾತು ಮುಂದುವರಿಸದಾದ.

ಅವರು ಬೀದಿ ದಾಟುತ್ತಿದ್ದರು. ಅಲ್ಲೇ ಆಗಲೇ ಅರ್ಕಾದಿ ಇವಾನೊವಿಚ್ ವಾಸ್ಯನನ್ನು ಅಪ್ಪಿಕೊಳ್ಳ ಬಯಸಿದ್ದ. ಆದರೆ ಇದ್ದಕ್ಕಿದ್ದಂತೆ "ಹೇಯ್, ಎಚ್ಚರ !" ಎಂಬ ಕೀರಲು ಕೂಗು ಅವರ ಕಿವಿಯ ಬಳಿಯೇ ಕೂಗಿದಂತೆ ಕೇಳಿಬಂದಿತು. ಗಾಬರಿಗೊಂಡು ಅವರು ಸುರಕ್ಷಿತ ಕಾಲುದಾರಿಗೆ ಓಡಿದರು. ಇದು ಅರ್ಕಾದಿ ಇವಾನೊವಿಚ್‌ಗೆ ಒಂದು ರೀತಿಯ ಸಮಾಧಾನ ತಂದಿತು. ವಾಸ್ಯನ ಅಷ್ಟೆಲ್ಲ ಕೃತಜ್ಞತೆಯ ಪ್ರಮಾಣವಚನಗಳಿಗೆ ಆ ಘಳಿಗೆಯ ವೈಲಕ್ಷಣ್ಯವಷ್ಟೆ ಕಾರಣ ವಾಗಿದ್ದಿತೆಂದು ಅವನು ತಿಳಿದಿದ್ದ. ತನ್ನಮಟ್ಟಿಗೇ ಹೇಳುವುದಾದರೆ, ಅವನು ಖೇದಗೊಂಡಿದ್ದ. ಅದುವರೆವಿಗೂ ತಾನು ವಾಸ್ಯನಿಗಾಗಿ ಹೆಚ್ಚಿಗೆ ಏನೂ ಮಾಡಿ ಲ್ಲವಲ್ಲ ಎಂದು ಅವನು ಖೇದಗೊಂಡಿದ್ದ. ವಾಸ್ತವವಾಗಿ, ತಾನು ಮಾಡಿದ ಅತ್ಯಲ್ಪ ನೆರವಿಗಾಗಿಯೇ ವಾಸ್ಯ ತನ್ನನ್ನು ವಂದಿಸತೊಡಗಿದಾಗ ಅವನು ತನ್ನ ಬಗೆಗೆ ತಾನೇ ನಾಚಿದ್ದ. ಆದರೂ ಪರವಾಗಿಲ್ಲ, ಮುಂದೆ ಇನ್ನೂ ಇಡೀ ಜೀವಮಾನ ಕಾಲವೇ ಇದೆಯಲ್ಲ. ಈ ಭಾವನೆಯಿಂದ ಅರ್ಕಾದಿ ಸ್ವಲ್ಪ ಹೆಚ್ಚು ಸುಲಭವಾಗಿ ಉಸಿರಾಡತೊಡಗಿದ.

ಅವರ ಆತಿಥೇಯರು ನಿಜಕ್ಕೂ ಅವರಿಗಾಗಿ ಕಾಯುವುದನ್ನು ಬಿಟ್ಟುಕೊಟ್ಟಿ ದ್ದರು. ಅದಕ್ಕೆ ಸಾಕ್ಷಿ ಇದ್ದಿತು – ಅವರಾಗಲೇ ಚಾ ಕುಡಿಯುತ್ತಿದ್ದರು. ಆದರೆ ನಿಜವಾಗಲೂ, ಕೆಲವೊಮ್ಮೆ ಹಿರಿಯ ಆತ್ಮ ಕಿರಿಯ ಆತ್ಮಕ್ಕಿಂತ ಹೆಚ್ಚು ಬುದ್ಧಿ ವಂತಿಕೆಯಿಂದ ಕೂಡಿರುತ್ತದೆ. ಅದರಲ್ಲೂ ಇಲ್ಲಿ ಈ ಕಿರಿಯ ಆತ್ಮ ಎಷ್ಟು ಎಳೆಯದಾಗಿದ್ದಿತು ! ವಾಸ್ಯ ಬರುವುದಿಲ್ಲವೆಂದು ಲೀಸಂಕ ತುಂಬ ಗಂಭೀರತೆ ಯಿಂದಲೇ ಒತ್ತಿ ನುಡಿದಿದ್ದಳು. "ಅವರು ಬರುವುದಿಲ್ಲ, ಅಮ್ಮ. ನನ್ನ ಹೃದಯ ಹೇಳುತ್ತಿದೆ, ಅವರು ಬರುವುದಿಲ್ಲ." ಆದರೆ ತನ್ನ ಹೃದಯ ಅದಕ್ಕೆ ವಿರುದ್ಧವಾ ದುದನ್ನೇ ಹೇಳುತ್ತಿದೆಯೆಂದು ಅವಳ ಅಮ್ಮ ಒತ್ತಿಹೇಳಿದ್ದಳು. ಅವರು ಬರುವುದು ಖಂಡಿತ, ಬರದೆ ಇರಲು ಅವರಿಗೆ ಆಗುವುದೇ ಇಲ್ಲ, ಅವರು ಓಡೋಡಿ ಬರು ತ್ತಾರೆ, ಆ ವೇಳೆಯಲ್ಲಿ ಯಾರಿಗೂ ಆಫೀಸು ಕೆಲಸವೂ ಇರುವುದಿಲ್ಲ. ಅಲ್ಲದೆ

ಅದು ಹೊಸ ವರುಷದ ಮುನ್ನಾದಿನ ಬೇರೆ! ಬಾಗಿಲ ಕರೆಗಂಟೆ ಶಬ್ದವಾಗ ಲೀಸಂಕ ಬಾಗಿಲು ತೆರೆಯಲು ಹೋದಾಗಲೂ ಅವರನ್ನು ಕಾಣುವುದನ್ನು ನಿರೀಕ್ಷಿಸಿರಲಿಲ್ಲ. ಅವಳು ತನ್ನ ಕಣ್ಣುಗಳನ್ನು ತಾನೇ ನಂಬದಾದಳು. ಅವಳಿಗೆ ಉಸಿರು ಕಟ್ಟಿದಂತಾಯಿತು. ಅವಳ ಹೃದಯ ಇದ್ದಕ್ಕಿದ್ದಂತೆ, ಸೆರೆ ಹಿಡಿಯಲ್ಪಟ್ಟ ಪುಟ್ಟ ಹಕ್ಕಿಯ ಹೃದಯದಂತೆ, ಪಟಪಟನೆ ಬಡಿದುಕೊಳ್ಳತೊಡಗಿತು. ಅವಳು ನಖಶಿಖಾಂತ ನಾಚಿದಳು. ಚೆರ್ರಿ ಹಣ್ಣಿನಂತೆ ಕೆಂಪಾದಳು. ಅವಳು ಚೆರ್ರಿ ಹಣ್ಣನ್ನೇ ಅತಿಯಾಗಿ ಹೋಲುತ್ತಿದ್ದಳು. ಅಬ್ಬಾ, ದೇವರೇ, ಎಂಥ ಆಶ್ಚರ್ಯ! ಎಂಥ ಆನಂದದ "ಓಹ್!" ಕೂಗು ಹೊರಹೊಮ್ಮಿತು ಅವಳ ತುಟಿಗಳಿಂದ! "ಎಂಥ ಮಾತಿಗೆ ತಪ್ಪುವವರು ನೀವು! ಎಂಥ ಕೆಟ್ಟವರು ನೀವು!" ಎಂದು ಕೂಗುತ್ತ ಅವಳು ತನ್ನ ತೋಳುಗಳನ್ನು ವಾಸ್ಯನ ಕೊರಳ ಸುತ್ತ ಬಿಗಿದಳು. ಆದರೆ ಅವಳಿಗಾದ ಆಶ್ಚರ್ಯವನ್ನು, ಇದ್ದಕ್ಕಿದ್ದಂತೆ ಆದ ಅವಳೆಲ್ಲ ಗೊಂದಲವನ್ನು ಊಹಿಸಿ ನೋಡಿ: ವಾಸ್ಯನಿಗೆ ನೇರವಾಗಿ ಹಿಂದುಗಡೆಯೇ, ಅವನ ಬೆನ್ನ ಹಿಂದೆ ಬಚ್ಚಿಟ್ಟು ಕೊಂಡಿರಲು ಯತ್ನಿಸುವಂತೆ, ಅರ್ಕಾದಿ ಇವಾನೊವಿಚ್ ನಿಂತಿದ್ದ, ಸ್ವಲ್ಪ ನಾಚಿದವನಂತೆ ಕಾಣುತ್ತ. ಅವನು ಮಹಿಳೆಯರ ಮುಂದೆ ನಿಜಕ್ಕೂ ಸ್ವಲ್ಪ ಎಡವಟ್ಟಿಗೆ ಬಿದ್ದವನಂತಾಗುತ್ತಿದ್ದ, ಸ್ವಲ್ಪವೇನು ತುಂಬವೇ ಎಡವಟ್ಟಿಗೆ ಬಿದ್ದವನಂತಾಗುತ್ತಿದ್ದ, ಎಂಬುದನ್ನು ಒಪ್ಪಿಕೊಳ್ಳಬೇಕು. ಒಮ್ಮೆ ಏನಾಯಿತೆಂದರೆ... ಆದರೆ ಅದನ್ನು ಆಮೇಲೆ ಹೇಳೋಣ. ಆದರೆ ನೀವು ಅವನ ಪರಿಸ್ಥಿತಿಯನ್ನೂ ತಿಳಿಯಬೇಕು: ಅದು ನಗುವುದಕ್ಕೆ ಸೂಕ್ತವಾದುದೇನೂ ಆಗಿರಲಿಲ್ಲ. ಅವನು ಆ ಹಜಾರದಲ್ಲಿ ಮೇಲ್ಜೋಡು, ಮೇಲುಕೋಟು, ಚಳಿಗಾಲದ ಟೋಪಿ, ತೊಟ್ಟು ನಿಂತಿದ್ದ. ಟೋಪಿಯನ್ನೇನೋ ಅವನು ಅವಸರವಸರವಾಗಿ ತೆಗೆದ. ಆದರೆ ಕೊರಳ ಸುತ್ತ ಅತ್ಯಂತ ಕೆಟ್ಟ ರೀತಿಯಲ್ಲಿ, ಅತ್ಯಂತ ಕೀಳಾದ ಹಳದಿಯ ಹೆಣೆದ ಮಫ್ಲರ್ ಅನ್ನು ಸುತ್ತುಕೊಂಡಿದ್ದ. ಹೆಚ್ಚು ಪರಿಣಾಮಕಾರಿಯಾಗಿರಲೆಂದು ಹಿಂದೆ ಒಂದು ಗಂಟನ್ನೂ ಹಾಕಿದ್ದ. ಇವೆಲ್ಲವನ್ನೂ ಅವನು ಬಿಚ್ಚಬೇಕಾಗಿತ್ತು, ಸಾಧ್ಯವಾದಷ್ಟೂ ಬೇಗ ತೆಗೆಯಬೇಕಾಗಿತ್ತು, ಹೆಚ್ಚು ಪ್ರಸನ್ನವಾದ ರೀತಿಯಲ್ಲಿ ತನ್ನನ್ನು ಕಾಣಿಸಿಕೊಳ್ಳಬೇಕಾಗಿದ್ದಿತು. ಏಕೆಂದರೆ, ಸುಂದರ ಯುವತಿಯ ಮುಂದೆ ಅತ್ಯಂತ ಪ್ರಸನ್ನವಾದ ರೀತಿಯಲ್ಲಿ ಕಾಣಿಸಿಕೊಳ್ಳಬೇಕೆಂದು ಇಚ್ಛಿಸದೆ ಇರುವವರು ಈ ಜಗತ್ತಿನಲ್ಲಿ ಯಾರಾದರೂ ಇದ್ದಾರೆಯೆ? ಪರಿಸ್ಥಿತಿ ಹೀಗೆ ಎಡವಟ್ಟಿನದಾಗಿರುವಾಗಲೇ ಈ ವಾಸ್ಯ ಬೇರೆ. ಬೇಸರ ತರಿಸುವವ, ಅಸಾಧ್ಯದವ, ಕರುಣಾಳುವಾದ ಪ್ರಿಯನಾದ ಅದೇ ವಾಸ್ಯನಾದರೂ ನಿಜಕ್ಕೂ ಅಸಾಧ್ಯದವ. ದಯಾದಾಕ್ಷಿಣ್ಯವಿಲ್ಲದೆ ಈ ವಾಸ್ಯ ತಕ್ಷಣವೇ ಹೇಳಬೇಕೆ: "ಇಲ್ಲಿ ನೋಡು, ಲೀಸಂಕ. ಇಲ್ಲಿ ನನ್ನ ಅರ್ಕಾದಿ. ನಿನಗೆ ಪರಿಚಯ ಮಾಡಿಸಲು ಕರೆದುಕೊಂಡು ಬಂದಿದ್ದೇನೆ. ನೋಡಿದೆಯಾ,

ಹೇಗಿದ್ದಾನೆ? ನನ್ನ ಅತ್ಯಂತ ನಚ್ಚಿನ ಗೆಳೆಯ. ಅವನನ್ನು ಆಲಂಗಿಸು, ಮುತ್ತಿಡು, ಲೀಸಂಕ. ಈಗ ನನಗಾಗಿ ಮುತ್ತಿಡು. ಆಮೇಲೆ ಅವನನ್ನು ಚೆನ್ನಾಗಿ ತಿಳಿದ ಮೇಲೆ ನೀನೇ ಅವನಿಗೆ ಮುತ್ತಿಡಲು ಬಯಸುತ್ತೀಯೆ." ನೋಡಿದಿರಾ? ನೋಡಿದಿರಾ? ಈಗ ನಾನು ಕೇಳುತ್ತೇನೆ: ಇಂಥ ಪರಿಸ್ಥಿತಿಯಲ್ಲಿ ಅರ್ಕಾದಿ ಇವಾನೊವಿಚ್‌ಗೆ ಏನು ಮಾಡಲು ಸಾಧ್ಯವಿದ್ದಿತು? ತನ್ನ ಕೊರಳಿನ ಸುತ್ತ ಸುತ್ತಿದ್ದ ಮಫ್ಲರ್ ಅನ್ನು ಅವನಿನ್ನೂ ಅರ್ಧವಷ್ಟೆ ಬಿಚ್ಚಿದ್ದ! ನಿಜಕ್ಕೂ, ಕೆಲವು ವೇಳೆ ವಾಸ್ಯನ ಈ ಮಿತಿಮೀರಿದ ಉತ್ಸಾಹವನ್ನು ಕಂಡು ನನಗೇ ನಾಚಿಕೆಯಾಗುತ್ತೆ. ಅವನ ಹೃದಯ ಕರುಣೆಯಿಂದ ಕೂಡಿದುದು ಎಂಬುದನ್ನೇನೋ ಅದು ತೋರಿಸುತ್ತದೆ, ನಿಜ. ಆದರೆ... ಅದು ಎಡವಟ್ಟಿಗೆ ಸಿಕ್ಕಿಸುವಂತಹುದು, ಅನವಶ್ಯವಾದುದು!

ಕೊನೆಗೆ ಅವರಿಬ್ಬರೂ ಒಳ ಪ್ರವೇಶಿಸಿದರು. ಅರ್ಕಾದಿ ಇವಾನೊವಿಚ್‌ನ ಪರಿಚಯ ಮಾಡಿಕೊಂಡುದು ಲೀಸಂಕಳ ತಾಯಿಗೆ ಅತೀವ ಸಂತೋಷ ನೀಡಿತು. ಅವಳು ಅವನ ಬಗೆಗೆ ಬೇಕಾದಷ್ಟು ಕೇಳಿದ್ದಳು... ಎಂದು ಅವಳಿನ್ನೂ ತನ್ನ ಮಾತನ್ನು ಮುಗಿಸಿರಲಿಲ್ಲ, "ಓಹ್" ಎಂಬ ಹಿಗ್ಗಿನ ಉದ್ಗಾರವೊಂದು ಕೋಣೆ ಯಲ್ಲಿ ಪ್ರತಿಧ್ವನಿಸಿ ಅವಳ ಮಾತನ್ನು ಮಧ್ಯಕ್ಕೇ ಮೊಟಕು ಮಾಡಿತು. ಓಹ್, ಎಂತಹ ಹಿಗ್ಗು! ಲೀಸಂಕ ಬಾನೆಟ್ ಮುಂದೆ ನಿಂತಿದ್ದಳು. ಅದರ ಮೇಲೆ ಸುತ್ತಿದ್ದ ಕಾಗದ ಅದನ್ನವಳಿಗೆ ಅನಿರೀಕ್ಷಿತವಾಗಿ ತೋರಿಸಿದ್ದಿತು. ಅವಳ ಮುದ್ದಾದ ಕೈಗಳು ಅತ್ಯಂತ ಅಕೃತ್ರಿಮತೆಯಿಂದ ಅವಳ ಎದೆಯ ಮೇಲೆ ಕಟ್ಟಿಕೊಂಡಿದ್ದವು. ತುಟಿ ಗಳ ಮೇಲೆ ಮುಗುಳ್ನಗೆ... ಅಬ್ಬಾ, ಇದಕ್ಕೂ ಹೆಚ್ಚು ಉತ್ತಮವಾದ ಬಾನೆಟ್ ಮದಾಮ್ ಲೆರೂರವರ ಬಳಿ ಇರಬಾರದಿತ್ತೆ!

ಆದರೆ ಇದಕ್ಕೂ ಉತ್ತಮವಾದ ಬಾನೆಟ್‌ಅನ್ನು ಎಲ್ಲಿ ಕಾಣುವುದು ಸಾಧ್ಯ? ಹಾಗಂದುಕೊಳ್ಳುವುದು ವಿಪರೀತವೇ! ಇದಕ್ಕೂ ಹೆಚ್ಚು ಉತ್ತಮವಾದ ಬಾನೆಟ್‌ಅನ್ನು ನೀವು ಎಲ್ಲಿ ಕಾಣುವಿರಿ? ನಾನು ಈ ಪ್ರಶ್ನೆಯನ್ನು ಗಂಭೀರ ವಾಗಿ ಕೇಳುತ್ತಿದ್ದೇನೆ. ಪ್ರೇಮಿಗಳ ಈ ಕೃತಘ್ನತೆ ನನ್ನನ್ನು ಕೋಪಾವಿಷ್ಟನನ್ನಾಗಿಯೂ ಮಾಡುತ್ತದೆ. ಅದು ವಾಸ್ತವವಾಗಿ ನನ್ನಲ್ಲಿ ಸ್ವಲ್ಪ ಬೇಗುದಿಯನ್ನೇ ಉಂಟು ಮಾಡಿದೆ. ಆದರೆ ನೀವೇ ನೋಡಿ. ನೋಡಿ, ಈ ಸೊಗಸಾದ ಬಾನೆಟ್‌ಗಿಂತ ಹೆಚ್ಚು ಉತ್ತಮವಾದುದು ಯಾವುದು ಇರುವುದಕ್ಕೆ ಸಾಧ್ಯ? ದಯವಿಟ್ಟು ನೋಡಿ... ಆದರೆ, ಇಲ್ಲ, ಇಲ್ಲ. ನನ್ನ ದೂರಿಗೆ ಆಸ್ಪದವೇ ಇಲ್ಲ. ಈಗ ಅವರೆಲ್ಲ ನನ್ನ ಅಭಿ ಪ್ರಾಯವನ್ನೇ ಹೊಂದಿದ್ದಾರೆ. ಅದು ಒಂದು ಕ್ಷಣ ಕಾಲದ ಭ್ರಾಂತಿಯಲ್ಲದೆ, ಚಿತ್ತಭ್ರಮಣೆಯಲ್ಲದೆ, ಭಾವದ ಅಸ್ವಸ್ಥತೆಯಲ್ಲದೆ, ಬೇರೇನೂ ಆಗಿರಲಿಲ್ಲ. ನಾನು ಅವರನ್ನು ಕ್ಷಮಿಸಲು ಸಿದ್ಧವಿದ್ದೇನೆ. ಆದರೆ, ನೋಡಿ... ಕ್ಷಮಿಸಿ, ನಾನಿನ್ನೂ ಬಾನೆಟ್‌ನ ವಿಷಯವನ್ನೇ ಹೇಳುತ್ತಿದ್ದೇನೆ; ಅದೊಂದು ನವಿರಾದ ರೇಷ್ಮೆ ಬಲೆ

ಯಿಂದ ಮಾಡಿದ ಬಾನೆಟ್ ಆಗಿತ್ತು. ಗರಿಯಷ್ಟು ಹಗುರ. ಅದಕ್ಕೆ ಅಗಲವಾದ ಲಘು ತಿಳಿಗೆಂಪಿನ ರಿಬ್ಬನ್ ಇತ್ತು. ಕಸೂತಿಯಿಂದ ಸಿಂಗರಿಸಲಾಗಿತ್ತು. ಇದನ್ನು ಬಾನೆಟ್ಟಿನ ಮೇಲು ತುದಿಗೂ ಅದರ ಜರತಾರಿ ಅಂಚಿಗೂ ಮಧ್ಯೆ ಅಳವಡಿಸ ಲಾಗಿತ್ತು. ಹಿಂಭಾಗದಲ್ಲಿ ಉದ್ದವಾದ ಹಾಗೂ ಅಗಲವಾದ ರಿಬ್ಬನ್ನಿನ ಎರಡು ತುದಿಗಳು ಇಳಿ ಬಿದ್ದಿದ್ದವು. ಅವು ಕತ್ತಿನ ಹಿಂಭಾಗದಲ್ಲಿ ಸ್ವಲ್ಪ ಕೆಳಗಿನವರೆಗೂ ಬರುತ್ತಿದ್ದವು... ಬಾನೆಟ್‌ಅನ್ನೇ ತಲೆಯ ಮೇಲೆ ಸ್ವಲ್ಪ ಹಿಂದಕ್ಕೆ ಇರುವಂತೆ ತೊಡಬೇಕಾಗಿದ್ದಿತು; ದಯವಿಟ್ಟು ನೋಡಿ. ನೋಡಿ ನೀವೇ ಹೇಳಿ... ಓಹ್ ಹಾಗೋ, ನೀವು ನೋಡುತ್ತಿಲ್ಲ!... ನಿಮಗೆ ಆಸಕ್ತಿ ಇದ್ದಂತಿಲ್ಲ! ನೀವು ಬೇರೆಯೇ ದಿಕ್ಕಿನಲ್ಲಿ ನೋಡುತ್ತಿದ್ದೀರ. ಎರಡು ದೊಡ್ಡ ಮುತ್ತಿನಂಥ ಕಣ್ಣೀರಿನ ಹನಿಗಳು ಕಲ್ಲಿದ್ದಲಷ್ಟು ಕಪ್ಪಗಿನ ಒಂದು ಜೊತೆ ಕಣ್ಣುಗಳಲ್ಲಿ ಇದ್ದಕ್ಕಿದ್ದಂತೆ ಕಾಣಿಸಿಕೊಂಡು ಉದ್ದವಾದ ರೆಪ್ಪೆಕೂದಲುಗಳ ಮೇಲೆ ಒಂದು ಘಳಿಗೆ ಅದುರುತ್ತ ನಿಂತಿದ್ದು, ಅನಂತರ ಗಾಳಿಯ ಬುರುಗಿನೊಳಕ್ಕೆ ಬೀಳುತ್ತಿದ್ದುದನ್ನು ನೀವು ಗಮನಿಸು ತ್ತಿದ್ದೀರೇನೋ. ಮದಾಮ್ ಲೆರೂರವರ ಈ ಕಲಾಕೃತಿ ನವಿರಾದ ರೇಷ್ಮೆ ನೂಲಿ ನಿಂದಲ್ಲ ಈ ಗಾಳಿಯ ಬುರುಗಿನಿಂದಲೇ ಮಾಡಲಾಗಿದ್ದಿತೆಂದೇ ಹೇಳಬಹುದಿತ್ತು... ನಾನು ಮತ್ತೆ ತೊಂದರೆಗೀಡಾದೆ: ಆ ಕಣ್ಣೀರ ಹನಿಗಳು ಈ ಬಾನೆಟ್‌ಗಾಗಿ ಅಲ್ಲವೇ ಅಲ್ಲ ಎಂದೇ ಕಂಡುಬರುತ್ತೆ!... ಓಹ್ ಇಲ್ಲ! ನನ್ನ ಅಭಿಪ್ರಾಯದಲ್ಲಿ ಅಂಥ ವಸ್ತುವನ್ನು ಭಾವಶೂನ್ಯವಾದ ರೀತಿಯಲ್ಲಿ ಕೊಡಬೇಕು. ಆಗಷ್ಟೆ ಅದನ್ನು ಸೂಕ್ತವಾಗಿ ಮೆಚ್ಚಲಾಗುತ್ತೆ. ನಾನಂತೂ, ನಾನು ಒಪ್ಪಿಕೊಳ್ಳಲೇ ಬೇಕು, ಸಂಪೂರ್ಣವಾಗಿ ಆ ಬಾನೆಟ್‌ನ ಸಮರ್ಥಕ!

ಅವರೆಲ್ಲ ಮೇಜಿನ ಸುತ್ತ ಕುಳಿತುಕೊಂಡರು – ವಾಸ್ಯ ಲೀಸಂಕಳ ಪಕ್ಕ ದಲ್ಲಿ, ತಾಯಿ ಅರ್ಕಾದಿ ಇವಾನೊವಿಚ್‌ನ ಪಕ್ಕದಲ್ಲಿ. ಎಲ್ಲರೂ ಸರಸ ಸಂಭಾ ಷಣೆಗಳಲ್ಲಿ ತೊಡಗಿದರು. ಅರ್ಕಾದಿ ಇವಾನೊವಿಚ್‌ನು ಎಲ್ಲರ ಪರಿಚಯವನ್ನೂ ಚೆನ್ನಾಗಿ ಪಡೆದುಕೊಂಡ. ನಾನದಕ್ಕೆ ಅವನಿಗೆ ಪ್ರಶಸ್ತಿ ನೀಡಲೇ ಬೇಕು. ನಿಜಕ್ಕೂ. ನಾನು ಅದನ್ನು ಅವನಿಂದ ನಿರೀಕ್ಷಿಸಿಯೇ ಇರಲಿಲ್ಲ. ವಾಸ್ಯನ ಬಗೆಗೆ ಒಂದೆರಡು ಮಾತು ಆಡಿದನಂತರ ಅವನು ಅತ್ಯಂತ ಕುಶಲತೆಯಿಂದ ಸಂಭಾಷಣೆಯನ್ನು ಅವನ ದಾತೃ ಯೂಲಿಯಾನ್ ಮಸ್ತಾಕೊವಿಚ್‌ರ ಕಡೆಗೆ ತಿರುಗಿಸಿದ. ಎಷ್ಟು ಬುದ್ಧಿವಂತಿಕೆಯಿಂದ ಮಾತನಾಡಿದನೆಂದರೆ ಈ ವಿಷಯದ ಮೇಲೆಯೇ ಒಂದು ಗಂಟೆ ಮಾತನಾಡಿದರೂ ನಿಜವಾಗಲೂ ಯಾರಿಗೂ ಬೇಸರವಾಗಲಿಲ್ಲ. ವಾಸ್ಯ ನಿಗೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಸಂಬಂಧಿಸಿದಂಥ ಯೂಲಿಯಾನ್ ಮಸ್ತಾಕೊವಿಚ್‌ರ ಕೆಲವು ವೈಚಿತ್ರ್ಯಗಳನ್ನು ಎಂತಹ ಬುದ್ಧಿವಂತಿಕೆ ಹಾಗೂ ಜಾಣ್ಮೆಯಿಂದ ತಿಳಿಸಿದನೆಂದರೆ, ಅದನ್ನು ಗಮನಿಸುವುದೇ ಸೊಗಸಾಗಿದ್ದಿತು. ಏನೇ

ಆಗಲಿ ಲೀಸಂಕಳ ತಾಯಿ ಸುಪ್ರಸನ್ನಳಾದಳು, ಸುಪ್ರೀತಳಾದಳು. ಅದನ್ನು ಅವಳು ತಾನೇ ಒಪ್ಪಿಕೊಂಡಳು. ವಾಸ್ಯನನ್ನು ಪಕ್ಕಕ್ಕೆ ಕರೆದು, ಅವನ ಮಿತ್ರ ಬಹು ಸೊಗಸಾದ ಅತ್ಯಂತ ಸಭ್ಯ ಯುವಕ, ಅಷ್ಟೇ ಅಲ್ಲ ಅವನು ಎಂತಹ ಗಂಭೀರನಾದ ಶಾಂತ ಸ್ವಭಾವದ ಯುವಕ, ಎಂಬುದನ್ನು ಅತ್ಯಂತ ಮೆಚ್ಚಿಕೆ ಯಿಂದ ತಿಳಿಸಿದಳು. ಅವಳ ಮೆಚ್ಚಿಕೆಯ ಮಾತುಗಳನ್ನು ಕೇಳಿ ವಾಸ್ಯ ಗಹಗಹಿಸಿ ನಕ್ಕ. ಈ ಗಂಭೀರನಾದ ಆರ್ಕಾಷನೇ ಕೇವಲ ಅರ್ಧ ಗಂಟೆಯ ಮುನ್ನ ತನ್ನನ್ನು ಹಾಸಿಗೆಯ ಮೇಲೆ ಎಳೆದು ಬೀಳಿಸಿ ಹೇಗೆ ಮಲ್ಲಯುದ್ಧ ನಡೆಸಿದ್ದನೆಂಬುದನ್ನು ಅವನು ನೆನಪಿಗೆ ತಂದುಕೊಂಡ! ಅನಂತರ ಲೀಸಂಕಳ ತಾಯಿಯು ವಾಸ್ಯ ನಿಗೆ ಯಾರ ಗಮನವನ್ನೂ ಸೆಳೆಯದಂತೆ ಮೆಲ್ಲಗೆ ಪಕ್ಕದ ಕೋಣೆಗೆ ಬರ ಬೇಕೆಂದು ಸಂಜ್ಞೆ ಮಾಡಿ ತಿಳಿಸಿದಳು. ಹಾಗೆ ಮಾಡಿ ಅವಳು ಲೀಸಂಕಳಿಗೆ ಸಂಬಂಧಿ ಸಿದಂತೆ ಸ್ವಲ್ಪ ಅನ್ಯಾಯ ಮಾಡುತ್ತಿದ್ದಳೆಂದೇ ಹೇಳಬೇಕು: ಅವಳು ಹೃದಯ ತುಂಬಿ ಬಂದುದರಿಂದಾಗಿ ತಡೆದುಕೊಳ್ಳಲಾಗದೆ ಲೀಸಂಕಳ ಒಂದು ಗುಟ್ಟನ್ನು ರಟ್ಟು ಮಾಡುತ್ತಿದ್ದಳು, ಲೀಸಂಕಳು ವಾಸ್ಯನಿಗಾಗಿ ಹೊಸ ವರುಷಕ್ಕೆಂದು ಸಿದ್ಧ ಗೊಳಿಸುತ್ತಿದ್ದ ಬಳುವಳಿಯನ್ನು ಕದ್ದು ನೋಡಲು ಅವಕಾಶ ಮಾಡಿಕೊಟ್ಟಳು. ಅದೊಂದು ಹಣ ಇಟ್ಟುಕೊಳ್ಳುವ ಚರ್ಮದ ಚಪ್ಪಟೆ ಚೀಲವಾಗಿತ್ತು. ಅದಕ್ಕೆ ಮಣಿಗಳಿಂದಲೂ ಚಿನ್ನದ ಎಳೆಗಳಿಂದಲೂ ಕಸೂತಿ ಹಾಕಲಾಗಿತ್ತು. ಸುಂದರವಾದ ವಿನ್ಯಾಸವಿದ್ದಿತು. ಒಂದು ಪಕ್ಕದಲ್ಲಿ ಜಿಂಕೆಯ ಚಿತ್ರವಿದ್ದಿತು. ಶೀಘ್ರವಾಗಿ ಓಡು ತ್ತಿರುವಂತೆ ಎಷ್ಟು ಜೀವಂತವಾಗಿ ಸಹಜವಾಗಿ ಇದ್ದಿತು ಅದು! ಇನ್ನೊಂದು ಕಡೆ ಒಬ್ಬ ಸುಪ್ರಸಿದ್ಧ ಜನರಲ್ಲನ ಚಿತ್ರವಿದ್ದಿತು. ಅದನ್ನೂ ತುಂಬ ಸಮರ್ಪಕ ವಾಗಿ ಮಾಡಲಾಗಿದ್ದಿತು. ಮೂಲಕ್ಕೆ ತುಂಬ ಚೆನ್ನಾಗಿ ಹೊಂದುವಂತೆ ಒಪ್ಪ ನೀಡಲಾಗಿತ್ತು. ವಾಸ್ಯನಿಗೆ ಎಷ್ಟು ಪರಮಾನಂದವಾಯಿತೆಂಬುದನ್ನು ನಾನು ಹೇಳುವ ಆವಶ್ಯಕತೆ ಇಲ್ಲ. ಈ ಮಧ್ಯೆ ಡ್ರಾಯಿಂಗ್ ರೂಮಿನಲ್ಲೂ ಸಮಯ ವನ್ನು ವ್ಯರ್ಥ ಮಾಡಲಿಲ್ಲ. ಲೀಸಂಕ ನೇರವಾಗಿ ಆರ್ಕಾದಿ ಇವಾನೊವಿಚ್‌ನ ಬಳಿಗೆ ಹೋದಳು. ಅವನೆರಡೂ ಕೈಗಳನ್ನು ತನ್ನ ಕೈಗಳಲ್ಲಿ ಹಿಡಿದುಕೊಂಡು ಅವ ನಿಗೆ ಯಾವುದಕ್ಕಾಗಿಯೋ ಧನ್ಯವಾದ ಹೇಳಿದಳು. ವಿಷಯ ಅದೇ ಪ್ರಶಸ್ತ ವಾಸ್ಯನಿಗೆ ಸಂಬಂಧಿಸಿದ್ದಿತೆಂಬುದನ್ನು ಆರ್ಕಾದಿ ಕೊನೆಗೆ ಅರ್ಥಮಾಡಿಕೊಂಡ. ನಿಜಕ್ಕೂ, ಲೀಸಂಕಳು ತುಂಬ ಭಾವಭರಿತಳಾಗಿದ್ದಳು. ಆರ್ಕಾದಿ ಇವಾನೊವಿಚ್ ತನ್ನ ಭಾವಿ ಪತಿಯ ಎಂತಹ ನೈಜ ಮಿತ್ರನಾಗಿದ್ದನೆಂಬುದನ್ನು, ಎಷ್ಟು ಪ್ರೀತಿ ಸುತ್ತಿದ್ದನೆಂಬುದನ್ನು, ಹೇಗೆ ಅವನ ಮೇಲೆ ನಿಗಾ ಇಟ್ಟು ಪ್ರತಿ ಹೆಜ್ಜೆಯಲ್ಲೂ ಅವನಿಗೆ ಸ್ತುತ್ಯಾರ್ಹ ಸಲಹೆಯೊಂದಿಗೆ ಮಾರ್ಗದರ್ಶನ ನೀಡುತ್ತಿದ್ದನೆಂಬುದನ್ನು, ಅವಳು ಕೇಳಿ ತಿಳಿದಿದ್ದಳು. ಅವನಿಗೆ ವಂದನೆ ಸಲ್ಲಿಸದೆ ಇರುವುದು ಅವಳಿಗೆ ಸಾಧ್ಯ

ವಿರಲಿಲ್ಲ. ತನ್ನಲ್ಲಿ ತುಂಬಿ ಬಂದಿದ್ದ ಕೃತಜ್ಞತೆಯ ಭಾವನೆಯನ್ನು ಅವಳು ತಡೆ ಹಿಡಿದುಕೊಳ್ಳದಾಗಿದ್ದಳು. ಅರ್ಕಾದಿ ಇವಾನೊವಿಚ್ ತನ್ನನ್ನೂ, ವಾಸ್ಯನನ್ನು ಪ್ರೀತಿಸುವಷ್ಟೇ ಅಲ್ಲದಿದ್ದರೂ ಅದರ ಅರ್ಧದಷ್ಟಾದರೂ ಪ್ರೀತಿಸುವಂತಾಗುವನೆಂದು ಅವಳು ಆಶಿಸಿದಳು. ಅನಂತರ ಅವಳು ವಾಸ್ಯನ ಬಗೆಗೆ ಅನೇಕಾನೇಕ ಪ್ರಶ್ನೆಗಳನ್ನು ಕೇಳಿದಳು. ಅವನು ಆರೋಗ್ಯದ ಕಡೆಗೆ ಸಾಕಷ್ಟು ಗಮನ ಕೊಡುತ್ತಿದ್ದಾನೆಯೇ ಎಂದು ಕೇಳಿದಳು. ಬೇಗ ಉದ್ರಿಕ್ತನಾಗುವ ವಾಸ್ಯನ ವಿಚಿತ್ರ ಸ್ವಭಾವದ ಬಗೆಗೆ, ಜನರಿಗೆ ಹಾಗೂ ಜೀವನಕ್ಕೆ ಸಂಬಂಧಿಸಿ ಅವನ ಅಪರಿಪೂರ್ಣ ತಿಳಿವಳಿಕೆಯ ಬಗೆಗೆ, ಅಂಜಿಕೆ ವ್ಯಕ್ತಪಡಿಸಿದಳು. ತಾನು ಅವನನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಳ್ಳುವುದಾಗಿಯೂ, ಅವನನ್ನು ಗಾಢವಾಗಿ ಪ್ರೀತಿಸುವುದಾಗಿಯೂ, ಅವನ ಭವಿತವ್ಯದ ಮೇಲೆ ಗಮನ ಇರಿಸುವುದಾಗಿಯೂ ತಿಳಿಸಿದಳು. ಅರ್ಕಾದಿ ಇವಾನೊವಿಚ್ ತಮ್ಮನ್ನು ಬಿಟ್ಟುಬಿಡದೆಯೇ, ತಮ್ಮಲ್ಲೇ ವಾಸಿಸುವನೆಂಬ ಆಶಯವನ್ನೂ ಅವಳು ವ್ಯಕ್ತಪಡಿಸಿದಳು.

"ನಾವು ಮೂವರೂ ಒಬ್ಬರಂತೆ ಇರೋಣ !" ಅವಳು ಅತಿಮುಗ್ಧ ಆನಂದಾತಿರೇಕದಿಂದ ಉದ್ಗರಿಸಿದಳು.

ಅಷ್ಟು ಹೊತ್ತಿಗೆ ಅವರು ಹೊರಡುವ ಸಮಯವಾಯಿತು. ಇನ್ನೂ ಇರಬೇಕೆಂದೇನೋ ಅವರನ್ನು ಒತ್ತಾಯ ಮಾಡಲಾಯಿತು. ಆದರೆ ಸಾಧ್ಯವಿಲ್ಲವೆಂದು ವಾಸ್ಯ ದೃಢವಾಗಿ ಹೇಳಿದ. ಅರ್ಕಾದಿ ಇವಾನೊವಿಚ್‌ನೂ ಅವನ ಅಭಿಪ್ರಾಯವನ್ನೇ ಸಮರ್ಥಿಸಿದ. ಏಕೆ ಅಷ್ಟು ಬೇಗ ಹೋಗಬೇಕು, ಎಂದು ಅವರನ್ನು ಸಹಜವಾಗಿಯೇ ಕೇಳಲಾಯಿತು. ಯೂಲಿಯಾನ್ ಮಸ್ತಾಕೊವಿಚ್‌ರು ವಾಸ್ಯಗೆ ಒಂದು ಸಣ್ಣ ತುರ್ತಿನ, ಮುಖ್ಯವಾದ ಹಾಗೂ ಬೇಸರದ ಕೆಲಸ ನೀಡಿದ್ದರೆಂದೂ, ಅದನ್ನು ನಾಡಿದ್ದು ಬೆಳಿಗ್ಗೆಯ ಒಳಗೇ ಮಾಡಿ ಮುಗಿಸಿ ಒಪ್ಪಿಸಬೇಕಿದ್ದಿತೆಂದೂ, ಕೆಲಸವು ಮುಗಿಯುವ ಘಟ್ಟ ತಲುಪುವುದು ದೂರವಿರಲಿ, ಬಹಳ ಬಹಳ ಹಿಂದೆ ಉಳಿದು ಬಿಟ್ಟಿದೆಯೆಂದೂ, ಅವರಿಗೆ ತಕ್ಷಣವೇ ತಿಳಿಸಲಾಯಿತು. ಅದನ್ನು ಕೇಳಿ ಲೀಸಂಕಳ ತಾಯಿ ಓಹ್ ಎಂದು ಬಾಯಿ ತೆರೆದು ಶ್ವಾಸ ಎಳೆದುಕೊಂಡಳು. ಲೀಸಂಕಳೇ ಎಷ್ಟು ಗಾಬರಿಗೊಂಡಳೆಂದರೆ ವಾಸ್ಯನನ್ನು ನಿಜಕ್ಕೂ ಹೊರಗಟ್ಟಿದಳು. ಆದರೂ ಇದರಿಂದ ಅವರ ವಿದಾಯದ ಚುಂಬನಕ್ಕೇನೂ ಬಾಧಕವಾಗಲಿಲ್ಲ. ಅದು ಶೀಘ್ರ ಹ್ರಸ್ವ ಚುಂಬನವಾಗಿದ್ದಿತು, ಆದರೂ ಹೆಚ್ಚು ಆತ್ಮೀಯತೆಯಿಂದ ಹೆಚ್ಚು ತೀವ್ರತೆಯಿಂದ ಕೂಡಿದ್ದಿತು. ಕೊನೆಗೂ ಅವರು ಹೊರಟರು. ಇಬ್ಬರು ಮಿತ್ರರೂ ಮನೆಯ ಕಡೆಗೆ ಧಾವಿಸಿದರು.

ಬೀದಿಗೆ ಬಂದ ಕ್ಷಣವೇ ಅವರು ತಮ್ಮ ಭಾವನೆಗಳನ್ನು ಪರಸ್ಪರರಿಗೆ ತೋಡಿಕೊಳ್ಳತೊಡಗಿದರು. ಆದರೆ ಅದು ಇರಬೇಕಾದದ್ದು ಹಾಗೆಯೇ ಎನ್ನಿ. ಅರ್ಕಾದಿ

ಇವಾನೊವಿಚ್‌ನು ಲೀಸಂಕಳನ್ನು ಬಹಳವಾಗಿ ಇಷ್ಟಪಟ್ಟಿದ್ದ! ತನ್ನ ಈ ಅಂತ ರಂಗವನ್ನು ಹೇಳಿಕೊಳ್ಳಲು ವಾಸ್ಯ ಅಲ್ಲದೆ, ಮರ್ತ್ಯರಲ್ಲೆಲ್ಲ ಅತ್ಯಂತ ಭಾಗ್ಯಶಾಲಿಯಾದ ಆ ವಾಸ್ಯ ಅಲ್ಲದೆ, ಬೇರಾರು ಯೋಗ್ಯ ವ್ಯಕ್ತಿ? ಅವನು ಮಾಡಿದ್ದು ಅದನ್ನೇ. ಸ್ವಲ್ಪವೂ ಮನದಳುಕಿಲ್ಲದೆ ಅವನು ತಕ್ಷಣವೇ ತನ್ನೆಲ್ಲ ಅಂತರಂಗವನ್ನೂ ವಾಸ್ಯನ ಮುಂದೆ ತೋಡಿಕೊಂಡ. ವಾಸ್ಯನಿಗೆ ಅದು ತುಂಬ ರಂಜಕವೆನಿಸಿತು. ಅವನು ತುಂಬ ಹರ್ಷಿತನಾದ. ಇವೆಲ್ಲ ಒಳ್ಳೆಯದಕ್ಕೇ, ಈಗ ತಾವು ಹಿಂದಿಗಿಂತ ಹೆಚ್ಚು ನಿಕಟ ಮಿತ್ರರಾಗುವರು, ಎಂದೂ ಅವನು ಹೇಳಿದ. "ನೀನು ನನ್ನ ಅಂತ ರಂಗವನ್ನು ಸರಿಯಾಗಿ ತಿಳಿದುಕೊಂಡೆ ಕಣೋ, ವಾಸ್ಯ" ಅರ್ಕಾದಿ ಇವಾನೊವಿಚ್ ಹೇಳಿದ. "ಹೌದು! ನಾನು ಅವಳನ್ನು ನಿನ್ನನ್ನು ಪ್ರೀತಿಸುವಂತೆಯೇ ಪ್ರೀತಿಸುತ್ತೇನೆ! ಅವಳು ನಿನ್ನ ರಕ್ಷಕ ದೇವತೆಯಂತೆಯೇ ನನ್ನ ರಕ್ಷಕ ದೇವತೆಯೂ ಆಗುವಳು, ಏಕೆಂದರೆ ನಿನ್ನ ಸುಖಸಂತೋಷ ನನ್ನ ಮೇಲೂ ತನ್ನ ಕಾಂತಿ ಬೀರುವುದು, ತನ್ನ ಕಿರಣಗಳಿಂದ ನನ್ನನ್ನೂ ಹಿತಗೊಳಿಸುವುದು. ಅವಳು ನನ್ನ ಭಾಗ್ಯ ದೇವತೆಯೂ ಆಗುವಳು, ವಾಸ್ಯ. ನನ್ನ ಸುಖಸಂತೋಷ ಅವಳ ಕೈಯಲ್ಲಿ ಇರುವುದು. ಅವಳು ನಿನಗೂ ನನಗೂ ಒಂದೇ ರೀತಿ ಆಜ್ಞೆ ನೀಡಲಿ. ನನ್ನ-ನಿನ್ನ ಸ್ನೇಹ ನನ್ನ-ಅವಳ ಸ್ನೇಹವೂ ಹೌದು. ಈಗ ನೀವಿಬ್ಬರೂ ನನಗೆ ಬೇರೆಯಾಗದಂತೆ ಬೆಸೆದುಕೊಂಡಿದ್ದೀರಿ; ಇದುವರೆವಿಗೂ ನನಗೆ ನೀನೊಬ್ಬನೇ ಇದ್ದೆ. ಈಗ ನನಗೆ ನಿನ್ನಂತೆಯೇ ಇಬ್ಬರು ಆದಂತಾಯಿತು...." ಅರ್ಕಾದಿ ಭಾವಭರಿತನಾಗಿ ಮಾತು ಮುಂದುವರಿಸದಾದ. ವಾಸ್ಯ ತನ್ನ ಮಿತ್ರನ ಮಾತುಗಳನ್ನು ಕೇಳಿ ಗಾಢವಾಗಿ ಹೃದಯ ಸ್ಪಂದಿತನಾದ. ಅವನು ಅರ್ಕಾದಿಯಿಂದ ಇಂತಹ ಮಾತುಗಳನ್ನು ಕೇಳುವುದಾಗಿ ಎಂದೂ ನಿರೀಕ್ಷಿಸಿರಲಿಲ್ಲ. ಅರ್ಕಾದಿ ಉಜ್ವಲ ಭಾಷಣಕಾರನೇನೂ ಆಗಿರಲಿಲ್ಲ, ಕನಸುಗಾರನೂ ಆಗಿರಲಿಲ್ಲ. ಆದರೂ ಈಗ ಇದ್ದಕ್ಕಿದ್ದಂತೆ ಅತ್ಯಂತ ಆನಂದದ, ಅತ್ಯಂತ ಉಜ್ವಲವಾದ, ಅತ್ಯಂತ ಸುಖದಾಯಕವಾದ ಹಗಲುಗನಸುಗಳನ್ನು ನೇಯತೊಡಗಿದ್ದಾನೆ! "ಓಹ್! ನಿಮ್ಮಿಬ್ಬರನ್ನೂ ಹೇಗೆ ನೋಡಿಕೊಳ್ಳುತ್ತೇನೆ ಗೊತ್ತ, ಹೇಗೆ ಪ್ರೀತಿಸುತ್ತೇನೆ ಗೊತ್ತ" ಎಂದು ಅವನು ಮತ್ತೆ ಮಾತನಾಡತೊಡಗಿದ. "ಮೊದಲನೆಯದಾಗಿ, ವಾಸ್ಯ, ನಿನ್ನೆಲ್ಲ ಮಕ್ಕಳಿಗೂ, ನಿನ್ನ ಪ್ರತಿಯೊಂದು ಮಗುವಿಗೂ, ನಾನು ಆಶ್ರಯದಾತನಾಗುತ್ತೇನೆ; ಎರಡನೆಯದಾಗಿ, ವಾಸ್ಯ, ನಾವು ಭವಿಷ್ಯತ್ತಿನ ಬಗೆಗೆ ಯೋಚಿಸಬೇಕು. ನಾವು ಸ್ವಲ್ಪ ಪೀಠೋಪಕರಣಗಳನ್ನು ಕೊಳ್ಳಬೇಕು, ಒಂದು ಮನೆಯನ್ನು ಬಾಡಿಗೆಗೆ ತೆಗೆದುಕೊಳ್ಳಬೇಕು, ನೀನೂ ಅವಳೂ ನಾನೂ ನಮ್ಮ ಬೆಚ್ಚಗಿನ ಖಾಸಗಿ ಕೋಣೆಗಳನ್ನು ಹೊಂದಿರಬೇಕು. ವಾಸ್ಯ, ನಾಳೆಯೇ ಹೋಗಿ 'ಮನೆ ಬಾಡಿಗೆಗೆ ಇದೆ' ಬೋರ್ಡುಗಳನ್ನು ನೋಡಿಕೊಂಡು ಬರುತ್ತೇನೆ. ಮೂರು... ಇಲ್ಲ, ಎರಡು ಕೋಣೆಗಳು ಸಾಕು. ಹೆಚ್ಚಿಗೆ ಬೇಡ. ಯೋಚನೆ

ಮಾಡಿ ನೋಡಿದರೆ, ನಾನು ಇವತ್ತು ಸ್ವಲ್ಪ ಮುನ್ನ ಹುಚ್ಚು ಮಾತು ಆಡಿದೆ, ವಾಸ್ಯ. ನಮ್ಮ ಬಳಿ ಸಾಕಷ್ಟು ಹಣ ಇರುತ್ತೆ, ಹೆದರಬೇಡ! ಅವಳ ಮುದ್ದಾದ ಕಣ್ಣುಗಳನ್ನು ನೋಡಿದ ಕೂಡಲೇ ನನಗೆ ಗೊತ್ತಾಯಿತು, ನಮ್ಮ ಬಳಿ ಸಾಕಷ್ಟು ಹಣ ಇರುತ್ತೆ ಅಂತ. ಎಲ್ಲವೂ ಅವಳಿಗಾಗಿ! ಹುಂ, ಎಷ್ಟು ಕಷ್ಟಪಟ್ಟು ಕೆಲಸ ಮಾಡುವೆವು! ಈಗ, ವಾಸ್ಯ, ನಾವು ತೊಂದರೆ ಏನೂ ಇಲ್ಲದೆ ಇಪ್ಪತ್ತೈದು ರೂಬಲ್ಲುಗಳಿಗೆ ಬಾಡಿಗೆ ಮನೆ ತೆಗೆದುಕೊಳ್ಳಬಹುದು. ಮನೆ ಇದ್ದರಾಯಿತು, ಎಲ್ಲ ಇದ್ದ ಹಾಗೆ ಕಣೋ! ಚೆನ್ನಾದ ಕೋಣೆಗಳು... ಹಾಗಿದ್ದರೆ, ಗೊತ್ತ, ಹೃದಯ ಹಗುರವಾಗಿರುತ್ತೆ, ಕನಸುಗಳು ಸ್ವರ್ಗಸುಖ ನೀಡುವಂತಿರುತ್ತವೆ! ಎರಡನೆಯದಾಗಿ, ಲೀಸಂಕ ನಮ್ಮಿಬ್ಬರಿಗೂ ಖಜಾಂಚಿಯಾಗಿರುತ್ತಾಳೆ. ಒಂದು ಕೊಪೆಕ್ಕೂ ಹಾಳಾಗೊಲ್ಲ! ಇನ್ನು ಮೇಲೆ ನಾನು ಎಂದಾದರೂ ಬಾರ್‌ಗೆ ಹೋಗ್ತೀನಿ ಅಂದುಕೊಂಡೆಯಾ? ನನ್ನನ್ನು ಏನಂತ ತಿಳಿದುಕೊಂಡಿದೀಯ? ಪ್ರಾಣ ಹೋದರೂ ಹೋಗೊಲ್ಲ! ಆಮೇಲೆ ನಮಗೆ ಬಡ್ತಿ ಸಿಗುತ್ತೆ. ಬಹುಮಾನದ ಹಣವೂ ಬರುತ್ತೆ, ಏಕೆಂದರೆ ನಾವು ಉತ್ಸಾಹದಿಂದ ಕೆಲಸ ಮಾಡುತ್ತೇವೆ. ಅಬ್ಬಾ, ಎಷ್ಟು ಕಷ್ಟಪಟ್ಟು ಕೆಲಸ ಮಾಡುತ್ತೇವೆ, ಗೊತ್ತ! ನೇಗಿಲಿಗೆ ಕಟ್ಟಿದ ಎತ್ತುಗಳು ನೆಲ ಉಳುವಂತೆ! ಯೋಚನೆ ಮಾಡಿ ನೋಡು" ಎಂದಾಗ ಅರ್ಕಾದಿ ಇವಾನೊವಿಚ್‌ನ ಧ್ವನಿ ಮಿತಿಮೀರಿದ ಆನಂದದಿಂದ ಕಂಪಿಸಿತು. "ಇದ್ದಕ್ಕಿದ್ದಂತೆ ಇಪ್ಪತ್ತೈದು ಅಥವಾ ಮೂವತ್ತು ರೂಬಲ್ ಬಂತು ಅಂತ ಇಟ್ಟುಕೋ!... ಪ್ರತಿ ಸಾರಿ ಬಹುಮಾನ ಹಣ ಬಂದಾಗಲೂ ಒಂದು ಬಾನೆಟ್, ಇಲ್ಲವೇ ಒಂದು ಸ್ಕಾರ್ಫ್, ಅಥವಾ ಕಾಲುಚೀಲ, ಅಥವಾ ಇನ್ನೇನಾದರೂ! ಅವಳು ನನಗೆ ಒಂದು ಮಫ್ಲರ್ ಹೆಣೆದು ಕೊಡಲೇ ಬೇಕು. ನೋಡು ಇದು ಎಷ್ಟು ಹೊಲಸಾಗಿದೆ – ಹಳದಿಯಾಗಿ ಅಸಹ್ಯವಾಗಿದೆ. ಇವತ್ತು ಇದು ನನಗೆ ಎಷ್ಟು ಬೇಜಾರು ಮಾಡಿತು! ನೀನೂ ಎಂಥ ಒಳ್ಳೆಯವನೋ ವಾಸ್ಯ, ನಾನು ಕೊರಳ ಮೇಲೆ ಇನ್ನೂ ಈ ನೊಗ ಹೊತ್ತಿದ್ದಾಗಲೇ ಲೀಸಂಕಳಿಗೆ ನನ್ನ ಪರಿಚಯ ಮಾಡಿಕೊಟ್ಟೆಯಲ್ಲ.., ಅದು ಹೋಗಲಿ! ಈಗ ಮುಖ್ಯವಾದುದು: ನೋಡು, ಬೆಳ್ಳಿಯ ಚಾಕುಚಮಚಗಳ ವಿಷಯವನ್ನು ನಾನೇ ನೋಡಿಕೊಳ್ಳುತ್ತೇನೆ! ನಿಮಗೆ ನಾನು ಒಂದು ಸಣ್ಣ ಬಳುವಳಿ ಕೊಡಬೇಕಲ್ಲವೇ. ಬೇಡ ಅನ್ನಕೂಡದು. ಅದು ಆತ್ಮಗೌರವದ ಪ್ರಶ್ನೆ! ...ಹೇಗಿದ್ದರೂ ನನಗೆ ಬಹುಮಾನದ ಹಣ ಬರದೆ ಏನೂ ಹೋಗುವುದಿಲ್ಲವಲ್ಲ! ಅವರು ಅದನ್ನು ನನ್ನ ಬದಲು ಸ್ಕೊರಹೋದವ್‌ನಿಗೆ ಕೊಡುತ್ತಾರೆಯೆ? ಆ ಹಕ್ಕಿಯ ಜೇಬಿನಲ್ಲಿ ಹಣ ಹಳಸಬೇಕಾಗಿಲ್ಲ! ಇಲ್ನೋಡು ನಾನು ನಿಮಗೆ ಕೆಲವು ಬೆಳ್ಳಿ ಚಮಚಗಳನ್ನೂ ಕೆಲವು ಒಳ್ಳೆಯ ಚಾಕುಗಳನ್ನೂ ಕೊಂಡುಕೊಡುತ್ತೇನೆ. ಬೆಳ್ಳಿ ಚಾಕುಗಳಲ್ಲ, ಆದರೆ ತುಂಬ ಚೆನ್ನಾದ ಚಾಕುಗಳು.

ಆಮೇಲೆ ಒಂದು ವೇಸ್‌ಕೋಟು ಕೊಂಡುಕೊಳ್ಳುತ್ತೇನೆ. ಅದು ನನಗಾಗಿ. ನಾನು ನಿನ್ನ ಮದುವೆಯಲ್ಲಿ ನಿನ್ನ ಜೊತೆಗಿರುವ ಗೆಳೆಯನಾಗಿರುತ್ತೇನೆ, ನಿನಗೆ ಗೊತ್ತಲ್ಲ! ಏನಿದ್ದರೂ ಈಗ ನೀನು ಸ್ವಲ್ಪ ಕಷ್ಟಪಡಬೇಕು. ನಿನ್ನನ್ನೇ ಅಂಕೆಯಲ್ಲಿರಿಸಿಕೋಬೇಕು. ನಾನು ನಿನ್ನ ಮೇಲೆ ಕಾವಲು ನಿಲ್ಲುತ್ತೇನೆ, ಕೈಯಲ್ಲಿ ಕೋಲು ಹಿಡಿದು. ಇವತ್ತು ರಾತ್ರಿ, ನಾಳೆ ರಾತ್ರಿ. ಇಡೀ ರಾತ್ರಿ. ನೀನು ಸತ್ತು ಸುಣ್ಣವಾಗುವವರೆಗೂ ಕೆಲಸ ಮಾಡುವಂತೆ ಮಾಡುತ್ತೇನೆ. ಅಂತೂ ನೀನು ಅದನ್ನು ಹೇಗಾದರೂ ಮಾಡಿ ಮುಗಿಸಬೇಕು! ಬೇಗ ಮುಗಿಸಿ ಬಿಡು! ಆಮೇಲೆ ನಾವು ಮತ್ತೆ ಸಂಜೆ ಹೊರಗೆ ಹೋಗೋಣ. ಇಬ್ಬರಿಗೂ ತುಂಬ ಸಂತೋಷವಾಗುತ್ತೆ. ಲಾಟೊ (ಅದೃಷ್ಟದ ಆಟ)ದ ಚೀಟಿ ಎತ್ತೋಣ! ಸಂಜೆ ಒಟ್ಟಿಗೆ ಕೂರೋಣ – ಅಬ್ಬಾ, ಎಂಥ ಸಂತೋಷ! ಅಯ್ಯೋ, ಈಗ ಏನು ಮಾಡೋದು, ನಾನು ನಿನಗೆ ಯಾವ ರೀತಿಯಲ್ಲೂ ಸಹಾಯ ಮಾಡಲಾರೆನಲ್ಲ, ನನಗೆ ದುಃಖವಾಗುತ್ತಿದೆ. ನಿನ್ನ ಪರವಾಗಿ ನಾನೇ ಕೂತು ಎಲ್ಲ ಬರೆದು ಮುಗಿಸುವುದಕ್ಕೆ ಸಾಧ್ಯವಾದರೆ ನನಗೆ ಸಂತೋಷವೇ. ನೀನೂ ನಾನೂ ಒಂದೇ ರೀತಿ ಬರೆಯಬಾರದೇಕೆ?"

"ಹೌದು" ವಾಸ್ಯ ಹೇಳಿದ. "ಹೌದು. ನಾನು ಬೇಗಬೇಗ ಕೆಲಸ ಮಾಡಬೇಕು. ಈಗ ಸುಮಾರು ಹನ್ನೊಂದು ಗಂಟೆ ಅಂತ ಕಾಣುತ್ತೆ. ಬೇಗ ಹೋಗಬೇಕು... ಕೆಲಸಕ್ಕೆ!" ಹಾಗೆನ್ನುತ್ತ ವಾಸ್ಯ ಅದುವರೆವಿಗೂ ಅರ್ಕಾದಿಯ ನಿರರ್ಗಳವಾದ ವಾಕ್ಪ್ರವಾಹವನ್ನು ನಸುನಗುತ್ತಲೋ ಅಥವಾ ಒಂದೆರಡು ಕುತೂಹಲದ ಮಾತುಗಳನ್ನಾಡುತ್ತಲೋ ಕೇಳುತ್ತಿದ್ದವನು, ಅತ್ಯಂತ ಹೃತ್ಪೂರ್ವಕ ಉತ್ಸಾಹದಿಂದಿದ್ದವನು, ಇದ್ದಕ್ಕಿದ್ದಂತೆ ಕುಗ್ಗಿದವನಂತಾದ, ಮೌನನಾದ, ಬೀದಿಯಲ್ಲಿ ಬಹುಮಟ್ಟಿಗೆ ಓಡುವವನಂತೆ ದಾಪುಗಾಲು ಹಾಕಿಕೊಂಡು ಹೊರಟ. ಯಾವುದೋ ಪೀಡಕ ಯೋಚನೆಯು ಅವನ ಜ್ವಲಂತ ಮನಸ್ಸನ್ನು ಇದ್ದಕ್ಕಿದ್ದಂತೆ ಮಂಜಿನಂತೆ ಹೆಪ್ಪುಗಟ್ಟಿಸಿದಂತೆ, ಅವನ ಹೃದಯ ಇದ್ದಕ್ಕಿದ್ದಂತೆ ಅತಿದೈನ್ಯವಾದಂತೆ ಕಂಡುಬಂದಿತು.

ಅದು ಅರ್ಕಾದಿಯನ್ನು ಸಾಕಷ್ಟು ಚಿಂತೆಗೆ ಈಡುಮಾಡಿತು. ಅವನ ಕಳವಳದ ಪ್ರಶ್ನೆಗಳಿಗೆ ವಾಸ್ಯನಿಂದ ಉತ್ತರಗಳೇ ಬರಲಿಲ್ಲ. ಒಂದೆರಡು ಮಾತುಗಳಲ್ಲಷ್ಟೆ ಉತ್ತರಿಸುತ್ತಿದ್ದ, ಇಲ್ಲವೇ ಬಹು ವೇಳೆ ಅಸಂಬದ್ಧ ಉದ್ಗಾರಗಳನ್ನೆತ್ತುತ್ತಿದ್ದ.

"ಏನು, ವಾಸ್ಯ, ಏನಾಯಿತೋ ನಿನಗೆ?" ಕೊನೆಗೆ ಅರ್ಕಾದಿ ಕೂಗಿ ಕೇಳಿದ, ಬಿರು ನಡಿಗೆಯಲ್ಲಿ ಹೋಗುತ್ತಿದ್ದ ವಾಸ್ಯನೊಂದಿಗೆ ಕಷ್ಟಪಟ್ಟುಕೊಂಡು ಸಮ ಹೆಜ್ಜೆ ಹಾಕುತ್ತ. "ಅದು ನಿನ್ನನ್ನು ಇಷ್ಟೊಂದು ಚಿಂತೆಗೆ ಒಳಪಡಿಸಿತೇನೋ?"

"ಓಹ್, ಸುಮ್ಮನೆ ವಟವಟ ಮಾತನಾಡಬೇಡವೋ" ವಾಸ್ಯ ತುಸು ರೇಗಿದವನಂತೆ ಉತ್ತರಿಸಿದ.

"ಹೋಗಲಿ ಬಿಡೋ, ವಾಸ್ಯ. ಧೈರ್ಯಗೆಡಬೇಡವೋ" ಅರ್ಕಾದಿ ಹೇಳಿದ. "ನೀನು ಎಷ್ಟೋ ಸಾರಿ ಎಷ್ಟೊಂದನ್ನು ಎಷ್ಟು ಸ್ವಲ್ಪ ಕಾಲದಲ್ಲೇ ಬರೆದು ಮುಗಿಸಿದುದನ್ನು ನಾನೇ ನೋಡಿದೀನಿ... ಏಕೆ ಚಿಂತೆಯೋ? ನಿನಗೆ ಅದಕ್ಕೆ ಒಂದು ಒಳುವಳಿ ಬೇರೆ ಬಂದಿದೆ! ಬೇಕಾದರೆ ನೀನು ಪ್ರಯತ್ನಿಸಿ ಹೆಚ್ಚು ಬೇಗನೆಯೂ ಬರೆಯಬಹುದು. ಅವರೇನೂ ನೀನು ಬರೆದುದನ್ನು ಅಂದವಾದ ಬರವಣಿಗೆಯ ಪುಸ್ತಕಗಳಿಗಾಗಿ ಕಲ್ಲಚ್ಚು ಮಾಡುವುದಿಲ್ಲ, ನಿನಗೆ ಗೊತ್ತಲ್ಲ! ಹೇಗೋ ನೀನು ನಿಭಾಯಿಸುತ್ತೀಯ ಕಣೋ! ಆದರೆ ಈಗ ಏನಾಗಿದೆ ಎಂದರೆ ನೀನು ಭಾವೋದ್ರಿಕ್ತನಾಗಿದ್ದೀಯ, ಆಲೋಚನಾಪರನಾಗಿದ್ದೀಯ. ಅದು ನಿನ್ನ ಕೆಲಸವನ್ನು ಹೆಚ್ಚು ನಿಧಾನವನ್ನಾಗಿ ಮಾಡುತ್ತೆ." ವಾಸ್ಯ ಏನನ್ನೋ ತುಟಿಯೊಳಗೇ ಪಿಸುಗುಟ್ಟಿದ. ಇಬ್ಬರೂ ನರಕ್ಷೋಭೆಗೊಳಗಾದ ಸ್ಥಿತಿಯಲ್ಲಿ ಮನೆಗೆ ಓಡಿದರು.

"ವಾಸ್ಯ ಕೂಡಲೇ ಕೆಲಸಕ್ಕೆ ಕುಳಿತ. ಭಾವಾವೇಶ ತಗ್ಗಿದ ಅರ್ಕಾದಿ ಇವಾನೊವಿಚ್ ಸದ್ದಿಲ್ಲದಂತೆ ಮೇಲುಡುಪುಗಳನ್ನೆಲ್ಲ ಕಳಚಿ ಹಾಸಿಗೆಯ ಮೇಲೆ ಬಿದ್ದುಕೊಂಡ, ಇಡೀ ಕಾಲವೂ ವಾಸ್ಯನ ಮೇಲೆಯೇ ತನ್ನ ನೋಟ ನೆಟ್ಟು. ಒಂದು ರೀತಿಯ ವಿಚಿತ್ರ ಭಯ ಅವನನ್ನು ಆವರಿಸಿತು. "ಇವನಿಗೇನಾಗಿದೆ?" ಎಂದು ವಾಸ್ಯನ ಬಿಳಚಿಕೊಂಡಿದ್ದ ಮುಖ, ಮಿರುಗುವ ಕಣ್ಣು ಹಾಗೂ ಪ್ರತಿಯೊಂದು ಚಲನೆಯಲ್ಲೂ ಕಾಣಬರುತ್ತಿದ್ದ ಕಾತುರವನ್ನು ಗಮನಿಸುತ್ತ ತನ್ನನ್ನು ತಾನೇ ಕೇಳಿಕೊಂಡ. "ಇವನ ಕೈಯೂ ನಡುಗುತ್ತಿದೆ... ಓಹ್, ಏನು ಬಂತಪ್ಪಾ, ನಿಜಕ್ಕೂ! ಬಹುಶಃ ಒಂದೆರಡು ಗಂಟೆ ನಿದ್ರೆಮಾಡು ಅಂತ ನಾನು ಇವನಿಗೆ ಸಲಹೆ ಮಾಡಲೆ? ಕೊನೆಯ ಪಕ್ಷ ನಿದ್ರೆಯಲ್ಲಾದರೂ ಅವನು ಆ ಉದ್ರೇಕದ ಸ್ಥಿತಿಯನ್ನು ಕಳೆದುಕೊಳ್ಳಬಹುದು." ವಾಸ್ಯ ಆಗಷ್ಟೆ ಒಂದು ಪುಟ ಬರೆದು ಮುಗಿಸಿದ್ದ. ತಲೆ ಎತ್ತಿ ಅರ್ಕಾದಿಯತ್ತ ಕ್ಷಣಕಾಲ ನೋಡಿದ. ತಕ್ಷಣವೇ ತಲೆ ತಗ್ಗಿಸಿ ಮತ್ತೆ ಗರಿಲೇಖನಿಯನ್ನು ಎತ್ತಿಕೊಂಡ.

"ಏಯ್, ವಾಸ್ಯ" ಅರ್ಕಾದಿ ಇದ್ದಕ್ಕಿದ್ದಂತೆ ಹೇಳಿದ. "ನೀನು ಸ್ವಲ್ಪ ನಿದ್ರೆ ಮಾಡಿದರೆ ಒಳ್ಳೆಯದಲ್ಲವೇನೋ? ನೋಡು, ನಿನಗೆ ಜ್ವರ ಬಂದ ಹಾಗೆ ಇದೆ."

ವಾಸ್ಯ ಅರ್ಕಾದಿಯತ್ತ ಬೇಸರಗೊಂಡವನಂತೆ, ಕೋಪಗೊಂಡವನಂತೆಯೂ ಸಹ, ನೋಡಿದ. ಯಾವ ಉತ್ತರವನ್ನೂ ಹೇಳಲಿಲ್ಲ.

"ಇಲ್ಲಿ ಕೇಳು, ವಾಸ್ಯ. ನಿನಗೆ ನೀನೇ ಏನು ಮಾಡಿಕೊಳ್ಳುತ್ತ ಇದ್ದೀಯೋ?"

ವಾಸ್ಯ ಕೂಡಲೇ ಎಚ್ಚತ್ತ.

"ಬಹುಶಃ ನಾವು ಸ್ವಲ್ಪ ಟೀ ಕುಡಿದರೆ ಹೇಗೋ, ಅರ್ಕಾಷ?" ಅವನೆಂದ.

"ಏಕೆ? ಏತಕ್ಕಾಗಿ?"

"ಅದು ನನ್ನನ್ನು ಸ್ವಲ್ಪ ಚುರುಕು ಮಾಡುತ್ತೆ. ನಿದ್ರೆ ಮಾಡುವುದಕ್ಕೆ ನನಗೆ ಇಷ್ಟವಿಲ್ಲ. ಇಲ್ಲ, ನಾನು ನಿದ್ರೆ ಮಾಡೋಲ್ಲ! ಬರೀತಾನೇ ಇರ್ತೀನಿ. ಟೀ ಕುಡಿಯುವಾಗ ಸ್ವಲ್ಪ ವಿರಾಮ ತೆಗೆದುಕೊಳ್ಳುತ್ತೇನೆ. ಆಮೇಲೆ ಕೆಲಸ ಸುಲಭವಾಗಿ ಸಾಗುತ್ತೆ."

"ಸರಿಯಾಗಿ ಹೇಳಿದೆ ಕಣೋ, ವಾಸ್ಯ. ಸೊಗಸಾಗಿ ಹೇಳಿದೆ! ನೀನು ಸ್ವಲ್ಪ ವಿರಾಮ ತೆಗೆದುಕೋ ಅಂತ ನಾನೇ ಸಲಹೆ ಮಾಡೋಣ ಅಂತಿದ್ದೆ. ನೀನು ಅದೇ ಮಾತುಗಳನ್ನೇ ಹೇಳಿದೆ. ನನಗೇ ಟೀ ಯೋಚನೆ ಏಕೆ ಹೊಳೆಯಲಿಲ್ಲ? ಆದರೆ ಏನು ಗೊತ್ತ? ಮಾವ್ರ ಮಲಗಿ ಬಿಟ್ಟಿದಾಳೆ ಕಣೋ. ನೀನು ಏನು ಕೊಟ್ಟರೂ ಅವಳು ಏಳುವ ಮಾತೇ ಇಲ್ಲ."

"ಹ್ಮ್."

"ಹಾಳಾಗಿ ಹೋಗಲಿ! ಯೋಚಿಸಬೇಡ!" ಅರ್ಕಾದಿ ಇವಾನೊವಿಚ್ ಹೇಳಿದ, ಹಾಸಿಗೆ ಮೇಲಿನಿಂದ ನೆಲಕ್ಕೆ ಬರಿಗಾಲಿನಲ್ಲೇ ನೆಗೆದು ನಿಂತು. "ನಾನೇ ಸಮೊವಾರ್ ಅನ್ನು ಅಣಿ ಮಾಡುತ್ತೇನೆ. ಇದೇನು ಮೊದಲನೆಯ ಸಾರಿಯೆ ನಾನು ಮಾಡುತ್ತಿರೋದು?"

ಅರ್ಕಾದಿ ಇವಾನೊವಿಚ್ ಅಡಿಗೆ ಮನೆಗೆ ಧಾವಿಸಿ ಸಮೊವಾರ್‌ಅನ್ನು ಅಣಿ ಮಾಡುವ ಕಾರ್ಯದಲ್ಲಿ ನಿರತನಾದ. ಈ ಮಧ್ಯೆ ವಾಸ್ಯ ಬರೆಯುತ್ತಲೇ ಇದ್ದ. ಅವನು ಇಡೀ ರಾತ್ರಿ ಬರೆಯುವಂತೆ ನೆರವಾಗಲು ಅರ್ಕಾದಿ ಇವಾನೊವಿಚ್ ಎಲ್ಲಿಯವರೆಗೆ ಹೋದನೆಂದರೆ, ಪುನಃ ತನ್ನೆಲ್ಲ ಬಟ್ಟೆಯನ್ನೂ ಹಾಕಿಕೊಂಡು ರೊಟ್ಟಿ ಅಂಗಡಿಗೂ ಹೋಗಿ ಬಂದ. ಕಾಲು ಗಂಟೆಯನಂತರ ಸಮೊವಾರ್ ಮೇಜಿನ ಮೇಲಿತ್ತು, ಇಬ್ಬರೂ ಟೀ ಕುಡಿಯಲು ಕುಳಿತರು. ಆದರೆ ಸಂಭಾಷಣೆ ಸೊರಗಿತ್ತು. ವಾಸ್ಯ ಇನ್ನೂ ಯಾವುದೋ ಆಲೋಚನೆಯಲ್ಲೇ ಮಗ್ನನಾಗಿದ್ದ.

"ನಾಳೆ ನಾನು ಅವರ ಮನೆಗೆಲ್ಲ ಹೋಗಿ ಹೊಸ ವರುಷದ ಶುಭಾಶಯ ಹೇಳಿ ಬರಬೇಕು..." ವಾಸ್ಯ ಕೊನೆಗೆ ಹೇಳಿದ, ತನ್ನನ್ನು ವರ್ತಮಾನ ಕಾಲಕ್ಕೆ ಪುನಃ ತಂದುಕೊಂಡವನಂತೆ.

"ಹೋಗಲೇ ಬೇಕೂಂತ ಏನೂ ಇಲ್ಲವಲ್ಲ."

"ಇಲ್ಲ ಕಣೋ. ಹೋಗಲೇ ಬೇಕು" ವಾಸ್ಯ ಹೇಳಿದ.

"ಬೇಡ ಕಣೋ. ಬೇಕಾದರೆ ಎಲ್ಲ ಕಡೆಯೂ ನಾನೇ ಹೋಗಿ ನಿನ್ನ ಹಸ್ತಾಕ್ಷರ ಹಾಕಿ ಬರುತ್ತೇನೆ... ನೀನೇಕೆ ಹೋಗಬೇಕು? ನೀನು ನಾಳೆಯೂ ಈ ಬರವಣಿಗೆಯ ಕೆಲಸ ಮಾಡುವುದು ಒಳ್ಳೆಯದು. ನಾನು ಹೇಳ್ತೀನಿ ಕೇಳು. ನೀನು ಮುಂಜಾನೆ ಐದು ಗಂಟೆಯವರೆಗೂ ಬರೆಯುತ್ತಿರಬೇಕು. ಆಮೇಲೆ ನಿದ್ರೆ ಹೋಗಬಹುದು. ನೀನು ನಿದ್ರೆ ಮಾಡದೆ ಹೋದರೆ ನಾಳೆ ಹೇಗೆ ವಿಕಾರವಾಗಿ

ಕಾಣಿಸುತ್ತೀಯ ಅನ್ನೋದನ್ನು ಯೋಚನೆ ಮಾಡು! ನಾನು ಎಂಟು ಗಂಟೆಗೆ ಸರಿಯಾಗಿ ಎಬ್ಬಿಸುತ್ತೇನೆ."

"ಆದರೆ ನೀನು ನನ್ನ ಹಸ್ತಾಕ್ಷರ ಹಾಕಿದರೆ ಸರಿಹೋಗುತ್ತೇನೋ" ವಾಸ್ಯ ಹೇಳಿದ, ಅವನ ಸಲಹೆಗೆ ಒಪ್ಪಲು ಅರ್ಧ ಮನಸ್ಸು ಮಾಡಿದವನಂತೆ.

"ಯಾಕಾಗೊಲ್ಲ? ಎಲ್ಲರೂ ಹಾಗೇ ಮಾಡುತ್ತಾರೆ!"

"ನನಗೇನೋ ಹೆದರಿಕೇನೇ ಕಣೋ. ನಿಜಕ್ಕೂ."

"ಯಾತಕ್ಕೆ ಹೆದರಬೇಕೋ? ಯಾತಕ್ಕೆ?"

"ಇತರರಿಗೆ ಹಾಗೆ ಮಾಡಿದರೆ ಪರವಾಗಿಲ್ಲ. ಆದರೆ ಯೂಲಿಯಾನ್ ಮಸ್ತಾಕೊವಿಚ್ ನನ್ನ ದಾತೃ, ಅರ್ಕಾಷ. ನನ್ನ ಹಸ್ತಾಕ್ಷರ ಬೇರೆ ರೀತಿಯಲ್ಲಿದೆ ಅಂತ ಅವರು ಗಮನಿಸಿಬಿಟ್ಟರೆ?"

"ಅವರು ಅದನ್ನೆಲ್ಲ ಗಮನಿಸುತ್ತಾರಾ! ಹುಂ. ನೀನಿದೀಯಲ್ಲ, ವಾಸ್ಯ. ನಿನ್ನ ತರಹ ಇನ್ನೊಬ್ಬರಿಲ್ಲವೋ! ಅವರು ಅದನ್ನು ಗಮನಿಸುವುದಾದರೂ ಹೇಗೆ ಸಾಧ್ಯವೋ? ನಿನಗೆ ಗೊತ್ತಿಲ್ಲವೇನೋ ನಾನು ನಿನ್ನ ಹಸ್ತಾಕ್ಷರವನ್ನು ಯಾವತ್ತೂ ತುಂಬ ಚೆನ್ನಾಗಿಯೇ ಹಾಕಬಲ್ಲೆ ಅಂತ. ನಿನ್ನ ತರಹಾನೇ ಅದೇ ಝುಳಪಿ ನೊಂದಿಗೆ ಹಾಕುತ್ತೇನೆ. ಸತ್ಯವಾಗಿಯೂ, ಹಾಗೆಯೇ ಮಾಡುತ್ತೇನೆ. ಆಗ ಯಾರಿಗೆ ತಾನೆ ವ್ಯತ್ಯಾಸ ಗೊತ್ತಾಗಲು ಸಾಧ್ಯ?"

ವಾಸ್ಯ ಏನೂ ಹೇಳದೆ ಟೀಯನ್ನು ಬೇಗ ಬೇಗ ಕುಡಿದ... ಆಮೇಲೆ ಸಂದೇಹಿಸುವವನಂತೆ ತಲೆ ಆಡಿಸಿದ.

"ಪ್ರಿಯ ವಾಸ್ಯ! ಓಹ್, ನಮಗೇನಾದರೂ ಅದನ್ನು ಮಾಡಲು ಸಾಧ್ಯವಾದರೆ! ವಾಸ್ಯ. ಆದರೆ ಏನೋ ಇದು? ನೀನು ನನ್ನನ್ನು ನಿಜಕ್ಕೂ ಗಾಬರಿಯಾಗುವಂತೆ ಮಾಡುತ್ತಿದ್ದೀಯ! ನಿನಗೆ ಗೊತ್ತ. ನಾನೀಗ ಮಲಗುವುದಿಲ್ಲ, ವಾಸ್ಯ, ಮಲಗುವುದಿಲ್ಲ. ಎಲ್ಲಿ ತೋರಿಸು, ಇನ್ನೂ ಎಷ್ಟು ಉಳಿದಿದೆ?"

ವಾಸ್ಯ ಅವನತ್ತ ಎಂಥ ನೋಟ ಬೀರಿದನೆಂದರೆ ಅರ್ಕಾದಿ ಇವಾನೊವಿಚ್‌ನ ಹೃದಯ ಕುಸಿಯಿತು. ಅವನು ಏನು ಹೇಳಬೇಕು ಅಂದುಕೊಂಡಿದ್ದನೋ ಅದನ್ನು ಹೇಳದಾದ.

"ವಾಸ್ಯ! ಏನು ವಿಷಯ? ಏನದು? ಯಾಕೋ ಹೀಗೆ ಕಾಣಿಸುತ್ತಿದೀಯ?"

"ಅರ್ಕಾದಿ, ನಾನೇ ನಾಳೆ ಹೋಗಿ ಯೂಲಿಯಾನ್ ಮಸ್ತಾಕೊವಿಚ್‌ರಿಗೆ ಗೌರವ ಸಲ್ಲಿಸಬೇಕು ಕಣೋ. ಅದೇ ಸರಿ ಅಂತ ನನಗೆ ನಿಜಕ್ಕೂ ಅನಿಸುತ್ತೆ."

"ಸರಿ, ಹೋಗುವಂತೆ ಕಣೋ" ಅರ್ಕಾದಿ ಹೇಳಿದ, ಅವನತ್ತವೇ ಕಾತರಪೂರ್ವಕವಾಗಿ ಅನಿಶ್ಚಯತೆಯಿಂದಲೂ ವ್ಯಾಕುಲದಿಂದಲೂ ದಿಟ್ಟಿಸಿ ನೋಡುತ್ತ.

"ಇಲ್ಲಿ ಕೇಳು, ವಾಸ್ಯ. ಬೇಗ ಬೇಗ ಬರೆ. ನಾನೇನೂ ನಿನಗೆ ಕೆಟ್ಟ ಸಲಹೆ

ಕೊಡುತ್ತಿದ್ದೀನಿ ಅಂದುಕೋ ಬೇಡ. ನಾನು ಪ್ರಮಾಣ ಮಾಡಿ ಹೇಳ್ತೀನೆ, ನಾನೆಂದಿಗೂ ನಿನಗೆ ಕೇಡು ಬಯಸೋದಿಲ್ಲ! ನೀನೇ ಜ್ಞಾಪಿಸಿಕೋ. ಯೂಲಿಯಾನ್ ಮಸ್ತಾಕೊವಿಚ್‌ರೇ ಎಷ್ಟು ಸಾರಿ ಹೇಳಿಲ್ಲ, ನಿನ್ನ ಬರವಣಿಗೆಯಲ್ಲಿ ಅವರು ತುಂಬ ಇಷ್ಟಪಡುವ ಅಂಶವೆಂದರೆ ಅದರ ಸ್ಫುಟತೆ, ಅಂತ. ಸ್ಕೋರಪ್ಲ್ಯೋಖಿನ್‌ರಷ್ಟೆ ಅಕ್ಷರಗಳು ಎದ್ದು ಕಾಣುವಂತೆ ಅಂದವಾಗಿ ಇರಬೇಕು, ಅಂದ ಬರವಣಿಗೆಯು ಕಾಪಿ ಪುಸ್ತಕದಲ್ಲಿರುವಂತೆ ಇರಬೇಕು ಅಂತ ಬಯಸುವುದು. ಅವರ ಉದ್ದೇಶ, ಆಮೇಲೆ ಅದರಿಂದ ಹೇಗಾದರೂ ಒಂದು ಹಾಳೆ ಹರಿದುಕೊಂಡು ಮನೆಗೆ ತಗೊಂಡು ಹೋಗಿ ಮಕ್ಕಳಿಗೆ ಕಾಪಿ ಮಾಡಲು ಕೊಡುವುದು – ಅವರಿಗೆ ಒಂದಿಷ್ಟು ಕಾಪಿ ಪುಸ್ತಕ ಕೊಂಡುಕೊಡಲು ತಮ್ಮ ಕೈಲಾಗದೇನೋ ಅನ್ನುವಂತೆ. ಮೂರ್ಖರು! ಆದರೆ ಯೂಲಿಯಾನ್ ಮಸ್ತಾಕೊವಿಚ್‌ರು ಹೇಳೋದೆಲ್ಲ, ಕೇಳೋದೆಲ್ಲ – ಸ್ಫುಟತೆ, ಸ್ಫುಟತೆ ಹಾಗೂ ಸ್ಫುಟತೆ! ಇನ್ನೇನು ಬೇಕು? ನಿಜಕ್ಕೂ, ವಾಸ್ಯ, ನಿನ್ನ ಜೊತೆಗೆ ಹೇಗೆ ಮಾತನಾಡಬೇಕೂಂತಲೇ ಗೊತ್ತಾಗುತ್ತಿಲ್ಲ... ನನಗೇಕೋ ಗಾಬರಿಯಾಗುತ್ತಿದೆ... ನೀನು ನಿನ್ನ ಈ ಜೋಲುಮುಖದಿಂದ ನನ್ನನ್ನು ಕೊಲ್ಲುತ್ತಿದೀಯ."

"ಪರವಾಗಿಲ್ಲ, ಪರವಾಗಿಲ್ಲ!" ಹಾಗೆಂದು ಹೇಳಿ ವಾಸ್ಯ ತನ್ನ ಕುರ್ಚಿಯಲ್ಲಿ ಬಳಲಿ ಬೆಂಡಾದವನಂತೆ ಕುಸಿದು ಕುಳಿತ. ಅರ್ಕಾದಿಗೆ ತುಂಬ ಗಾಬರಿಯಾಯಿತು.

"ನೀರು ಬೇಕೇನೋ? ವಾಸ್ಯ, ವಾಸ್ಯ!"

"ಏನೂ ಬೇಡವೋ. ನೀನು ಚಿಂತಿಸಬೇಡ" ವಾಸ್ಯ ಹೇಳಿದ, ತನ್ನ ಕೈಯನ್ನು ತಲೆಗೆ ಒತ್ತಿಹಿಡಿದುಕೊಂಡು. "ನನಗೆಲ್ಲ ಸರಿಯಾಗಿದೆ ಕಣೋ. ಒಂದು ರೀತಿಯ ವ್ಯಸನವಾಯಿತು ಅಷ್ಟೆ, ಅರ್ಕಾದಿ. ಯಾಕೇಂತ ನನಗೇ ಗೊತ್ತಿಲ್ಲ. ಇಲ್ಲಿ ಕೇಳು. ಬೇರೆ ಯಾವುದಾದರೂ ವಿಷಯ ಮಾತನಾಡೋ. ನನಗೆ ಅದರ ಜ್ಞಾಪಕ ಮಾಡಬೇಡ..."

"ಸಮಾಧಾನ ಮಾಡಿಕೊಳ್ಳೋ, ದಮ್ಮಯ್ಯ, ಸಮಾಧಾನ ಮಾಡಿಕೊಳ್ಳೋ, ವಾಸ್ಯ! ನೀನು ಮುಗಿಸ್ತೀಯ ಕಣೋ, ಖಂಡಿತವಾಗಿಯೂ ಮುಗಿಸ್ತೀಯ! ಮುಗಿಸದೆ ಇದ್ದರೂ, ಏನಂತೆ? ಅದೇನೂ ಮಹಾಪರಾಧವಲ್ಲ, ನಿನಗೆ ಗೊತ್ತೇ ಇದೆ!"

"ಅರ್ಕಾದಿ" ಎಂದ ವಾಸ್ಯ. ಅವನ ನೋಟ ಎಷ್ಟು ಅರ್ಥಪೂರ್ಣವಾಗಿದ್ದಿತೆಂದರೆ, ಅರ್ಕಾದಿಗೆ ಈಗ ನಿಜಕ್ಕೂ ತುಂಬ ಗಾಬರಿಯಾಯಿತು. ಏಕೆಂದರೆ ಹಿಂದೆಂದೂ ವಾಸ್ಯ ಅಷ್ಟು ಭಯಭೀತನಾಗಿ ಪಲ್ಲಟಗೊಂಡಿರಲಿಲ್ಲ. "ನಾನು ಹಿಂದಿದ್ದಂತೆ ಒಬ್ಬನೇ ಇದ್ದಿದ್ದರೆ... ಇಲ್ಲ, ಇಲ್ಲ, ಅದನ್ನಲ್ಲ ನಾನು ಹೇಳಬೇಕೂಂತ ಇದ್ದುದು. ನಾನು ನಿನಗೆ ಎಷ್ಟೋ ಸಾರಿ ಹೇಳಬೇಕೂಂತ ಅಂದುಕೊಂಡೆ, ಗೆಳೆಯನಂತೆ

ನಿನ್ನಲ್ಲಿ ನನ್ನ ಒಳಮನಸ್ಸನ್ನು ತೋಡಿಕೋಬೇಕೂಂತ ಅಂದುಕೊಂಡೆ. ಆದರೆ ನಿನಗೇಕೆ ತೊಂದರೆ ಕೊಡಬೇಕು? ನೋಡು, ಅರ್ಕಾದಿ. ಕೆಲವರಿಗೆ ಮಹತ್ಕಾರ್ಯ ಮಾಡುವ ಸಾಮರ್ಥ್ಯ ಇರುತ್ತೆ. ಇತರರು ನನ್ನಂತೆ ಸಣ್ಣ ಪುಟ್ಟ ಕೆಲಸಗಳಲ್ಲೇ ತೃಪ್ತರಾಗುತ್ತಾರೆ. ಈಗ ನೋಡು, ಕೃತಜ್ಞತೆ ಮೆಚ್ಚಿಕೆ ತೋರಿಸಬೇಕೂಂತ ನಿನ್ನಿಂದ ನಿರೀಕ್ಷಿಸಿರಲಾಗುತ್ತೆ, ಆದರೆ ನಿನ್ನ ಕೈಲಿ ಅದನ್ನು ಮಾಡಲು ಆಗುವುದಿಲ್ಲ. ಆಗ?"

"ವಾಸ್ಯ! ನೀನು ಹೇಳೋದು ನನಗೆ ಅರ್ಥವೇ ಆಗುತ್ತಿಲ್ಲ!"

"ನಾನೆಂದೂ ಕೃತಘ್ನನಾಗಿಲ್ಲ" ವಾಸ್ಯ ಮೃದುವಾಗಿ ಮಾತು ಮುಂದು ವರಿಸಿದ, ತನ್ನಲ್ಲಿ ತಾನೇ ಚರ್ಚಿಸುತ್ತಿರುವಂತೆ. "ಆದರೆ ನನ್ನ ಭಾವನೆಗಳನ್ನೆಲ್ಲ ನಾನು ವ್ಯಕ್ತಪಡಿಸಲಾರದೆ ಹೋದರೆ, ಆಗ ಏನಾಗುತ್ತೇಂದರೆ...ನಾನು ನಿಜಕ್ಕೂ ಕೃತಘ್ನ ಅಂತಲೇ ಕಂಡುಬರುತ್ತೆ, ಅರ್ಕಾದಿ. ಅದೇ ನನ್ನನ್ನು ಕೊಲ್ಲುತ್ತಿರುವುದು!"

"ಓಹ್, ಸಾಕು ಸುಮ್ಮನಿರೋ! ನಿನ್ನ ಕೃತಜ್ಞತೆ ಎಲ್ಲ ನೀನು ಈ ಕೆಲಸ ವನ್ನು ಕಾಲಕ್ಕೆ ಸರಿಯಾಗಿ ಮುಗಿಸುತ್ತೀಯೋ ಅಥವಾ ಇಲ್ಲವೋ ಅನ್ನೋ ದರ ಮೇಲೆಯೇ ಅವಲಂಬಿಸಿರುತ್ತದೆಯೇ? ನೀನು ಏನು ಹೇಳುತ್ತಿದ್ದೀಯೋ ಯೋಚನೆ ಮಾಡಿ ನೋಡೊ, ವಾಸ್ಯ! ನಿನ್ನ ಕೃತಜ್ಞತೆಗೆ ಅದೊಂದೇ ಸಾಕ್ಷಿಯೇ?"

ವಾಸ್ಯ ಮತ್ತೆ ಹೆಚ್ಚಿಗೆ ಏನೂ ಹೇಳಲಿಲ್ಲ. ಇದ್ದಕ್ಕಿದ್ದಂತೆ ಅರ್ಕಾದಿಯ ಕಡೆಗೆ ತಿಳಿಗಣ್ಣಿನಿಂದ ನೋಡತೊಡಗಿದ. ಅವನ ಆ ಅನಿರೀಕ್ಷಿತ ತರ್ಕದಿಂದ ತನ್ನೆಲ್ಲ ಸಂದೇಹಗಳೂ ನಿವಾರಣೆಯಾದವೇನೋ ಅನ್ನುವಂತೆ. ಮುಗುಳ್ನಕ್ಕ ಕೂಡ. ಆದರೆ ಕೂಡಲೇ ಮತ್ತೆ ಅದೇ ಆಲೋಚನಾಮಗ್ನ ಭಾವ ತಳೆದ. ಅವನ ಮುಗುಳ್ನಗೆ ಅವನೆಲ್ಲ ಭೀತಿಗಳ ಕೊನೆ ಎಂದೂ, ವಾಸ್ಯನ ಮುಖದ ಮೇಲೆ ಮತ್ತೆ ಕಾಣಿಸಿಕೊಂಡ ಕಾತುರತೆಯ ನೋಟ ಹೆಚ್ಚು ಉತ್ತಮ ಮಾರ್ಗ ಹಿಡಿಯುವ ಅವನ ನಿರ್ಧಾರದ ಸಂಕೇತ ಎಂದೂ, ವ್ಯಾಖ್ಯಾನಿಸಿ ಅರ್ಕಾದಿ ತುಂಬ ಸಂತೋಷಗೊಂಡ.

"ಸರಿ, ಕಣೋ, ಅರ್ಕಾಷ. ನಿನಗೇನಾದರೂ ಮಧ್ಯದಲ್ಲಿ ಎಚ್ಚರವಾದರೆ, ನನ್ನ ಕಡೆಗೆ ಸ್ವಲ್ಪ ತಿರುಗಿ ನೋಡೋ" ವಾಸ್ಯ ಹೇಳಿದ. "ನಾನೇನಾದರೂ ನಿದ್ರೆ ಮಾಡಿಬಿಟ್ಟರೆ ಮುಂದೆ ತುಂಬ ಕಷ್ಟವಾಗುತ್ತೆ. ಸರಿ, ನಾನೀಗ ಕೆಲಸಕ್ಕೆ ಕುಳಿತೆ... ಅರ್ಕಾಷ?"

"ಮತ್ತೆ ಏನೋ?"

"ಏನೂ ಇಲ್ಲ. ನಾನು ಸುಮ್ಮನೆ, ನಾನು ಏನೂ ಇಲ್ಲ... ನಾನು ಅಂದು ಕೊಂಡೆ..."

ವಾಸ್ಯ ಕುಳಿತುಕೊಂಡ. ಹೆಚ್ಚಿಗೆ ಏನೂ ಹೇಳಲಿಲ್ಲ. ಅರ್ಕಾದಿ ಹಾಸಿಗೆಯ

ಮೇಲೆ ಮಲಗಿದ. ಅವರಲ್ಲಿ ಯಾರೂ ಕೊಲೋಮ್ನಗೆ ತಾವು ಹೋಗಿದ್ದುದರ ಬಗೆಗೆ ಒಂದು ಮಾತೂ ಆಡಲಿಲ್ಲ. ತಾವು ಅಲ್ಲಿಗೆ ಹೋದುದು ಸಕಾಲಿಕವಾಗಿ ರಲಿಲ್ಲ ಎಂಬುದನ್ನು ಮನಗಂಡು ಇಬ್ಬರೂ ಬಹುಶಃ ಸ್ವಲ್ಪ ತಪ್ಪಿತಸ್ಥ ಭಾವನೆ ಹೊಂದಿದ್ದರೇನೋ. ವಾಸ್ಯನ ಬಗೆಗೆ ದುಃಖಿಸುತ್ತಲೇ ಅರ್ಕಾದಿ ಇವಾನೊವಿಚ್ ಬೇಗನೆಯೇ ನಿದ್ರೆ ಹೋದ. ಎಚ್ಚೆತ್ತಾಗ, ಅವನಿಗೆ ಆಶ್ಚರ್ಯವಾಯಿತು – ಆಗಲೇ ಏಳು ಬಡಿದಿತ್ತು. ವಾಸ್ಯ ಕುರ್ಚಿಯಲ್ಲಿ ಕುಳಿತೇ ನಿದ್ರೆ ಹೋಗಿದ್ದ. ಕೈಯಲ್ಲಿ ಹಿಡಿದಿದ್ದ ಲೇಖನಿ ಹಾಗೇ ಇದ್ದಿತು. ನಿರ್ವರ್ಣನಾಗಿ, ಬಹಳ ಬಳಲಿದವನಂತೆ ಕಾಣುತ್ತಿದ್ದ. ಮೋಂಬತ್ತಿ ಕೊನೆಯವರೆಗೂ ಉರಿದು ಆರಿಹೋಗಿತ್ತು. ಅಡಿಗೆ ಮನೆಯಲ್ಲಿ ಮಾವ್ರ ಸಮೊವಾರ್‌ಅನ್ನು ಅಣಿಮಾಡುತ್ತಿದ್ದ ಶಬ್ದ ಕೇಳಿ ಬರುತ್ತಿತ್ತು.

"ವಾಸ್ಯ ! ವಾಸ್ಯ !" ಅರ್ಕಾದಿ ಗಾಬರಿಯಿಂದ ಕೂಗಿ ಕರೆದ. "ಯಾವಾಗ ನಿದ್ರೆ ಹೋದೆಯೋ ?"

ವಾಸ್ಯ ಕಣ್ಣು ತೆರೆದು ಜಿಗಿದು ಕುಳಿತ.

"ಅಯ್ಯೋ ದೇವರೇ !" ಎಂದು ಉಸಿರೆಳೆಯುತ್ತ ಉದ್ಗರಿಸಿದ. "ಕುರ್ಚಿ ಯಲ್ಲೇ ನಿದ್ರೆ ಹೋಗಿ ಬಿಟ್ಟೆ !"

ಅವನು ಕೂಡಲೇ ತನ್ನ ಕಾಗದಗಳ ಮೇಲೆರಗಿದ – ಎಲ್ಲವೂ ಸರಿಯಾಗಿದ್ದವು. ಅವುಗಳ ಮೇಲೆ ಮಸಿಯ ಗುರುತೂ ಇರಲಿಲ್ಲ, ಮೋಂಬತ್ತಿಯ ಜಿಡ್ಡೂ ಆಗಿ ರಲಿಲ್ಲ.

"ಸುಮಾರು ಆರು ಗಂಟೆಗೆ ನಿದ್ರೆ ಹೋದೆ ಅಂತ ಕಾಣುತ್ತೆ" ವಾಸ್ಯ ಹೇಳಿದ. "ರಾತ್ರಿ ಹೊತ್ತು ಎಷ್ಟು ಚಳಿಯೋ ! ಸ್ವಲ್ಪ ಟೀ ಕುಡಿಯೋಣ. ಆಮೇಲೆ ನನ್ನ ಕೆಲಸ ಮತ್ತೆ ಶುರು ಮಾಡ್ತೀನಿ."

"ನಿನಗೆ ಈಗ ಸ್ವಲ್ಪ ವಾಸಿಯೇನೋ ?"

"ಹೌದು, ಹೌದು. ನಾನೀಗ ಸರಿಯಾಗಿದೀನಿ, ತುಂಬ ಸರಿಯಾಗಿದೀನಿ..."

"ಹೊಸ ವರುಷದ ಶುಭಾಶಯ ಕಣೋ ನಿನಗೆ, ವಾಸ್ಯ !"

"ನಿನಗೂ ಶುಭಾಶಯ ಕಣೋ !"

ಇಬ್ಬರೂ ಅಪ್ಪಿಕೊಂಡರು. ವಾಸ್ಯನ ಗಲ್ಲ ಅದುರಿತು. ಕಣ್ಣುಗಳಲ್ಲಿ ನೀರು ತುಂಬಿ ಬಂದಿತು. ಅರ್ಕಾದಿ ಇವಾನೊವಿಚ್ ಮೌನದಿಂದಿದ್ದ; ಅವನಿಗೆ ವ್ಯಸನ ವಾಗಿತ್ತು. ಇಬ್ಬರೂ ಬೇಗ ಬೇಗ ಟೀ ಕುಡಿದರು...

"ಅರ್ಕಾದಿ ! ನಾನು ನಿರ್ಧಾರ ಮಾಡಿದೀನಿ ಕಣೋ – ನಾನೇ ಯೂಲಿಯಾನ್ ಮಸ್ತಾಕೊವಿಚ್‌ರ ಬಳಿಗೆ ಹೋಗುತ್ತೇನೆ."

"ಹೋಗು, ಅದರಲ್ಲೇನಂತೆ. ಆದರೆ ಅವರಿಗೆ ಅದೆಲ್ಲ ಎಲ್ಲಿ ಗಮನಕ್ಕೆ ಬರುತ್ತೋ ?"

"ಬರುತ್ತೋ ಬಿಡುತ್ತೋ. ನನ್ನ ಅಂತರಂಗ ಬಿಡೊಲ್ಲ."

"ಆದರೆ ಅವರಿಗಾಗಿಯೇ ತಾನೆ ನೀನಿಲ್ಲಿ ಕೂತಿರೋದು; ಅವರಿಗಾಗಿಯೇ ತಾನೆ ನೀನು ಚಿಂತಿಸಿ ಚಡಪಡಿಸುತ್ತಿರೋದು... ಸರಿ, ಬಿಡು ! ನೋಡೋ, ನಾನು ಇವತ್ತು ಅಲ್ಲಿಗೆ ಹೋಗ್ತಾ ಇದೀನಿ."

"ಎಲ್ಲಿಗೆ ?" ವಾಸ್ಯ ಕೇಳಿದ.

"ಆರ್ತೇಮ್ಯೆವ್‌ರ ಬಳಿಗೆ. ನಮ್ಮಿಬ್ಬರ ಪರವಾಗಿಯೂ ನಾನು ಅವರಿಗೆ ಹೊಸ ವರುಷದ ಶುಭಾಶಯ ಹೇಳುತ್ತೇನೆ."

"ಓಹ್, ನನ್ನ ಅತ್ಯಂತ ಪ್ರೀತಿಯ ಗೆಳೆಯ ! ಸರಿ, ನಾನು ಇಲ್ಲೇ ಇರ್ತೀನಿ. ನೀನು ಹೇಳಿದ್ದೇ ಸರಿ ಅಂತ ನನಗೆ ಕಾಣಿಸ್ತಿದೆ. ಎಷ್ಟೇ ಆಗಲಿ, ನಾನು ಕೆಲಸ ಮಾಡ್ತಾನೇ ಇರ್ತೀನಷ್ಟೆ. ಸೋಮಾರಿಯಾಗಿ ಕಾಲ ಕಳೆಯುತ್ತ ಇರುವುದಿಲ್ಲ ವಲ್ಲ ! ಒಂದ್ನಿಮಿಷ ತಾಳು. ಬೇಗ ಒಂದು ಚೀಟಿ ಬರೆದು ಕೊಡ್ತೇನೆ."

"ಬರಿ, ಬರಿ. ಬೇಕಾದಷ್ಟು ಸಮಯ ಇದೆ. ಅವಸರ ಮಾಡಬೇಡ. ನಾನಿನ್ನೂ ಮುಖ ತೊಳೆಯಬೇಕು, ಮುಖಕ್ಷೌರ ಮಾಡಿಕೋ ಬೇಕು, ಕೋಟನ್ನು ಬ್ರಷ್ಷಿನಿಂದ ಉಜ್ಜಬೇಕು. ಸರಿ ಕಣೋ, ವಾಸ್ಯ ! ನಾವು ಸುಖಸಂತೋಷಗಳಿಂದ ಇರಲಿರುವೆವು ! ಬಾ, ಒಮ್ಮೆ ಆಲಂಗಿಸಿಕೋ, ವಾಸ್ಯ !"

"ಓಹ್, ಸಂತೋಷದೀದ ಇರಲಿದ್ದರೆ..."

"ಮಾನ್ಯ ಷುಮ್ಕೋವ್ ಅನ್ನೋರು ಇಲ್ಲಿ ವಾಸಿಸುತ್ತಾರೆಯೇ ?" ಬಾಲಕನ ಧ್ವನಿಯೊಂದು ಮಹಡಿ ಮೆಟ್ಟಲಿನಿಂದ ಕೇಳಿಬಂದಿತು.

"ಹೌದು, ಮಗು, ಹೌದು" ಮಾವ್ರ ಹುಡುಗನನ್ನು ಒಳಕ್ಕೆ ಕರೆಯುತ್ತ ಹೇಳಿದಳು.

"ಯಾರದು ? ಏನದು ?" ವಾಸ್ಯ ಕುರ್ಚಿಯಿಂದ ಜಿಗಿದೆದ್ದು ಹಜಾರಕ್ಕೆ ಓಡುತ್ತ ಕೂಗಿ ಕೇಳಿದ. "ಪ್ಯೇತ್ಯೆನ್ಕ ನೀನಾ !"

"ನಮಸ್ಕಾರ. ನಿಮಗೆ ಹೊಸ ವರುಷದ ಶುಭಾಶಯ ಕೋರುತ್ತಿದ್ದೇನೆ, ವಾಸೀಲಿ ಪೆತ್ರೋವಿಚ್" ಸುಮಾರು ಹತ್ತು ವರ್ಷ ವಯಸ್ಸಿನ ಮುದ್ದಾದ ಒಬ್ಬ ಪುಟ್ಟ ಹುಡುಗ ಹೇಳಿದ. ಅವನ ಕರಿಗೂದಲನ್ನು ಗುಂಗುರುಗುಂಗುರಾಗಿ ಬಾಚಲಾಗಿತ್ತು. "ಅಕ್ಕ ನಿಮಗೆ ನಮಸ್ಕಾರ ತಿಳಿಸಿದ್ದಾಳೆ. ಅಮ್ಮನೂ ನಿಮಗೆ ಹೇಳೂಂತ ಹೇಳಿದಳು. ತನ್ನ ಪರವಾಗಿ ನಿಮಗೆ ಮುತ್ತಿಡಬೇಕೂಂತ ಅಕ್ಕ ನನಗೆ ಹೇಳಿದ್ದಾಳೆ".

ವಾಸ್ಯ ಆ ಸಂದೇಶವಾಹಕನನ್ನು ಅನಾಮತ್ತು ಮೇಲಕ್ಕೆತ್ತಿ ಹಾಗೆಯೇ ಗಾಳಿಯಲ್ಲಿರಿಸಿಕೊಂಡು, ಬಹುಮಟ್ಟಿಗೆ ಲೀಸಂಕಳ ತುಟಿಗಳಂತೆಯೇ ಇದ್ದ ಅವನ ತುಟಿಗಳ ಮೇಲೆ ದೀರ್ಘವಾದ ಮಧುರವಾದ ಭಾವಭರಿತವಾದ ಮುತ್ತಿಟ್ಟ.

ಅನಂತರ ಅವನನ್ನು ಅರ್ಕಾದಿಗೆ ಒಪ್ಪಿಸುತ್ತ "ಇವನಿಗೆ ಮುತ್ತು ಕೊಡು,

ಅರ್ಕಾದಿ !" ಎಂದು ಹೇಳಿದ. ಹುಡುಗ ನೆಲಕ್ಕೆ ತಾಕದೆಯೇ ವಾಸ್ಯನ ಕೈಯಿಂದ ಅರ್ಕಾದಿಯ ಪ್ರಬಲವಾದ ಕಾತುರವಾದ ಕೈಗಳಿಗೆ ಸಾಗಿಹೋದ.

"ಓಹ್, ಮುದ್ದು ಹುಡುಗ. ನಿನಗೆ ಸ್ವಲ್ಪ ಟೀ ಕೊಡಲಾ?"

"ಬೇಡ, ಧನ್ಯವಾದ. ನಾವು ಈಗಷ್ಟೆ ಕುಡಿದೆವು. ಇವತ್ತು ಬೇಗ ಎದ್ದೆವು. ಅವರೆಲ್ಲ ಚರ್ಚಿಗೆ ಪ್ರಾರ್ಥನೆಗೆ ಹೋಗಿದ್ದಾರೆ. ಅಕ್ಕ ನನ್ನ ತಲೆ ಬಾಚಿ ಎಣ್ಣೆ ಹಚ್ಚಿ ಗುಂಗುರು ಬರೋ ಹಾಗೆ ಮಾಡೋದರಲ್ಲೇ ಎರಡು ಗಂಟೆ ಕಳೆದಳು. ಆಮೇಲೆ ನನ್ನ ಮುಖ ತೊಳೆದು ಷರಾಯಿ ರಿಪೇರಿ ಮಾಡಿದಳು. ಯಾಕೆಂದರೆ ನಾನು ನಿನ್ನೆ ಬೀದಿಯಲ್ಲಿ ಸಾಷ್ಕ ಜೊತೆ ಆಡುತ್ತಾ ಷರಾಯಿಯನ್ನು ಹರಿದು ಬಿಟ್ಟಿದ್ದೆ. ನಾವು ಮಂಜಿನಿಂದ ಚೆಂಡುಗಳನ್ನು ಮಾಡಿ ಎಸೆದಾಡುತ್ತಿದ್ದೆವು."

"ಸರಿ, ಸರಿ, ಸರಿ !"

"ಆಮೇಲೆ ನನಗೆ ಬಟ್ಟೆ ಹಾಕಿ ನಿಮ್ಮನ್ನು ಕಾಣಬೇಕೂಂತ ಕಳಿಸಿದಳು. ಮತ್ತೆ ನನ್ನ ಕೂದಲು ಸರಿಪಡಿಸಿ, ಉಸಿರು ಸಿಕ್ಕಿಹಾಕಿಕೊಳ್ಳೋ ಹಾಗೆ ಮುತ್ತು ಕೊಡುತ್ತ ಹೇಳಿದಳು: 'ವಾಸ್ಯರವರನ್ನು ಹೋಗಿ ಕಾಣು. ಅವರಿಗೆ ಹೊಸ ವರುಷದ ಶುಭಾಶಯ ತಿಳಿಸು. ಸುಖದಿಂದಿದ್ದಾರಾ, ಚೆನ್ನಾಗಿ ನಿದ್ರೆ ಮಾಡಿದರಾ, ಕೇಳು...' ನಿಮ್ಮನ್ನು ಕೇಳಬೇಕೂಂತ ಇನ್ನೂ ಏನೋ ಹೇಳಿದಳು – ಓಹ್, ಹೌದು. ಆ ಕೆಲಸ ಮುಗಿಸಿದಿರಾ, ನಿನ್ನೆ ನೀವು ಅಷ್ಟು... ಏನು ಅವಳು ಹೇಳಿದ್ದು... ಓಹ್ ಇಲ್ಲಿದೆ ಅವಳು ಹೇಳಿದ್ದನ್ನು ಬರೆದಿಟ್ಟಿದ್ದೇನೆ" ಎಂದು ಹುಡುಗ ಜೇಬಿನಿಂದ ಒಂದು ತುಂಡು ಕಾಗದ ತೆಗೆದು ಓದಿದ: "ಹೌದು, ಅಷ್ಟು ಕಾತುರರಾಗಿದ್ದಿರಲ್ಲ, ಅದು."

"ಮುಗಿಸ್ತೀನಿ ! ಮುಗಿಸೇ ಮುಗಿಸ್ತೀನಿ ! ಹಾಗಂತ ಹೇಳು. ಖಂಡಿತ ಮುಗಿಸ್ತೀನಿ, ನನ್ನಾಣೆಗೂ !"

"ಆಮೇಲೆ... ಓಹ್, ಮರೆತೇ ಬಿಟ್ಟಿದ್ದೆ ! ಅಕ್ಕ ನಿಮಗೆ ಒಂದು ಪುಟ್ಟ ಕಾಗದವನ್ನೂ ಒಂದು ಬಳುವಳಿಯನ್ನೂ ಕೊಟ್ಟಿದ್ದಾಳೆ. ನಾನೊಬ್ಬ ಹೋಗಿ ಹೋಗಿ, ಅದನ್ನೇ ಮರೆತೆ !"

"ದೇವರು ಒಳ್ಳೆಯದು ಮಾಡಲಿ ! ಓಹ್, ಎಂಥ ಮುದ್ದು ಹುಡುಗನೋ ನೀನು ! ಎಲ್ಲಿ... ಎಲ್ಲದು ? ಇದೋ ! ನೋಡು ಏನು ಬರೆದಿದಾಳೆ. ನನ್ನ ಚಿನ್ನ, ನನ್ನ ರಾಣಿ. ನಿಂಗೊತ್ತ, ನಿನ್ನೆ ನಾನು ನನಗಾಗಿ ಅವಳು ಮಾಡುತ್ತಿರೋ ಒಂದು ಪುಟ್ಟ ಹಣದ ಚೀಲ ನೋಡಿದೆ. ಅದಿನ್ನೂ ಮುಗಿದಿಲ್ಲ. ಆದ್ದರಿಂದ ತನ್ನ ಕೂದಲಿನ ಒಂದು ಮುಂಗುರುಳನ್ನೇ ಕಳಿಸುತ್ತಿರುವುದಾಗಿ ಹೇಳುತ್ತಾಳೆ. ಹಣದ ಚೀಲವನ್ನು ಆಮೇಲೆ ಕಳಿಸುವಳಂತೆ. ನೋಡಿದೆಯಾ, ಅರ್ಕಾಷ, ನೋಡಿದೆಯಾ !"

ಪರಮಾನಂದದಿಂದ ಅಸಂಬದ್ಧ ಶಬ್ದಗಳನ್ನು ಮಾಡುತ್ತ ವಾಸ್ಯ ಅರ್ಕಾದಿ

ಇವಾನೊವಿಚ್‌ಗೆ ಜಗತ್ತಿನಲ್ಲೇ ಅತ್ಯಂತ ಪ್ರಶಸ್ತವಾದ, ಅತ್ಯಂತ ಕಪ್ಪಾದ ಒಂದು ಮುಂಗುರುಳನ್ನು ತೋರಿಸಿದ. ಆಮೇಲೆ ಅದನ್ನು ಭಾವಭರಿತನಾಗಿ ಚುಂಬಿಸಿ, ತನ್ನ ಹೃದಯಕ್ಕೆ ಅತ್ಯಂತ ಸಮೀಪದಲ್ಲಿ, ತನ್ನ ಕೋಟಿನ ಒಳಜೇಬಿನಲ್ಲಿ ಇರಿಸಿ ಕೊಂಡ.

"ವಾಸ್ಯ ! ನಾನು ಅದಕ್ಕಾಗಿ ಒಂದು ಸಣ್ಣ ಸಂಪುಟ ಮಾಡಿಸುತ್ತೇನೆ ಕಣೋ !" ಅರ್ಕಾದಿ ಇವಾನೊವಿಚ್ ದೃಢ ನಿರ್ಧಾರದೊಂದಿಗೆ ಹೇಳಿದ.

"ಇವತ್ತು ನಮ್ಮ ಮನೇಲಿ ಸುಟ್ಟ ಕರುವಿನ ಮಾಂಸದ ಅಡಿಗೆ. ನಾಳೆ ಮಿದು ಳಿನಿಂದ ಮಾಡುತ್ತಾರೆ. ಅಮ್ಮ ಬಿಸ್ಕತ್ತನ್ನೂ ಮಾಡ್ತೀನಿ ಅಂತ ಹೇಳಿದಾಳೆ... ಅಂಬಲಿಯನ್ನು ಮಾಡೋದಿಲ್ಲ" ಎಂದ ಹುಡುಗ ತನ್ನ ವಿವರಣೆಯನ್ನು ಹೇಗೆ ಮುಗಿಸುವುದು ಅತ್ಯುತ್ತಮ ಎಂದು ಯೋಚಿಸಲು ಒಂದು ಕ್ಷಣ ತಡೆದು.

"ಅಬ್ಬಾ, ಎಂಥ ಒಳ್ಳೆಯ ಹುಡುಗ !" ಅರ್ಕಾದಿ ಇವಾನೊವಿಚ್ ಹೇಳಿದ. "ವಾಸ್ಯ, ನೀನೇ ಮರ್ತ್ಯರಲ್ಲೆಲ್ಲ ಅತ್ಯಂತ ಭಾಗ್ಯಶಾಲಿ !"

ಹುಡುಗ ಟೀ ಕುಡಿದು ಮುಗಿಸಿದ, ವಾಸ್ಯ ಕೊಟ್ಟ ಚೀಟಿಯನ್ನು ಜೇಬಿ ನಲ್ಲಿಟ್ಟುಕೊಂಡ, ಸಾವಿರ ಸಾರಿ ಮುದ್ದಿಸಲ್ಪಟ್ಟು, ಯಾವತ್ತಿನಂತೆ ಸಂತೋಷದಿಂದ ಕುಣಿಯುತ್ತ ಮನೆಗೆ ಹೊರಟ.

"ನೋಡಿದೆಯೇನಪ್ಪ" ಅರ್ಕಾದಿ ಇವಾನೊವಿಚ್ ತುಂಬ ಸಮಾಧಾನ ಗೊಂಡವನಂತೆ ಹೇಳಿದ. "ನೋಡಿದೆಯಾ, ಎಂಥ ಅದೃಷ್ಟ, ನೋಡಿದೆಯಾ? ಆಗೋದೆಲ್ಲ ಒಳಿತಿಗಾಗಿಯೇ. ದುಃಖಪಡಬೇಡ, ಧೈರ್ಯಗೆಡಬೇಡ, ನೇರವಾಗಿ ಮುಂದಕ್ಕೆ ನುಗ್ಗು ! ಮುಗಿಸು, ವಾಸ್ಯ, ಮುಗಿಸು ! ನಾನು ಎರಡು ಗಂಟೆಗೆ ಬರ್ತೀನಿ. ಮೊದಲು ಅರ್ತೇಮ್ಯೆವ್‌ರ ಬಳಿಗೆ ಹೋಗುತ್ತೇನೆ. ಆಮೇಲೆ ಯೂಲಿ ಯಾನ್ ಮಸ್ತಾಕೊವಿಚ್‌ರಲ್ಲಿಗೆ."

"ಸರಿಯಪ್ಪ, ಹೋಗಿ ಬಾ, ಹೋಗಿ ಬಾ... ಓಹ್, ಆಗೋದಿದ್ದಿದ್ದರೆ !... ಸರಿ ಹಾಗಾದರೆ, ಹೋಗು" ವಾಸ್ಯ ಹೇಳಿದ. "ನಾನು ಯೂಲಿಯಾನ್ ಮಸ್ತಾ ಕೊವಿಚ್‌ರ ಬಳಿಗೆ ಹೋಗುವುದಿಲ್ಲ ಅಂತ ಖಂಡಿತವಾಗಿ ನಿರ್ಧರಿಸಿದ್ದೇನೆ."

"ಹೋಗಿ ಬರ್ತೀನಿ !"

"ತಾಳು, ಒಂದ್ನಿಮಿಷ ತಾಳು. ಅವರಿಗೆ ಹೇಳು... ಸರಿ, ನಿನಗೆ ಏನು ಸರಿ ಅಂತ ತೋರುತ್ತೋ ಅದನ್ನು ಹೇಳು. ಅವಳಿಗೆ ಮುತ್ತು ಕೊಡು... ಆ ಎಲ್ಲ ವಿಷಯವನ್ನೂ ನನಗೆ ಆಮೇಲೆ ಹೇಳುವಿಯಂತೆ, ಎಲ್ಲವನ್ನೂ."

"ನೋಡಿದೆಯಾ, ನೋಡಿದೆಯಾ – ಎಲ್ಲ ಗೊತ್ತೇ ಇದೆ. ತಿಳಿಯೋದು ಏನು ! ನಿನ್ನ ಸುಖ ನಿನ್ನನ್ನು ಅಷ್ಟೊಂದು ಅಲ್ಲಾಡಿಸಿದೆ ! ಅದೂ ಅಷ್ಟು ಅನಿರೀ ಕ್ಷಿತವಾಗಿ ಬಂದುದು... ನಿನ್ನೆಯಿಂದ ನೀನು ನೀನೇ ಆಗಿಲ್ಲ. ನಿನ್ನೆಯ ಭಾವೋ

ದ್ರೇಕದಿಂದ ನೀನಿನ್ನೂ ಸಮುಸ್ಥಾಯಿಗೆ ಬಂದೇ ಇಲ್ಲ. ಸರಿ, ಸಾಕು ಕಣೋ! ಹತೋಟಿಗೆ ತಂದುಕೊಳ್ಳೋ, ವಾಸ್ಯ! ಹೋಗಿ ಬರ್ರೀನಿ!"

ಮಿತ್ರರು ಕೊನೆಗೆ ಅಗಲಿದರು. ಆ ಬೆಳಿಗ್ಗೆಯೆಲ್ಲ ಅರ್ಕಾದಿ ಇವಾನೊವಿಚ್ ಅನ್ಯಮನಸ್ಕನಾಗಿದ್ದ, ವಾಸ್ಯನ ಬಗೆಗೇ ಯೋಚಿಸುತ್ತಿದ್ದ. ವಾಸ್ಯನ ದುರ್ಬಲವಾದ, ಸುಲಭವಾಗಿ ಪ್ರೇರಣೆಗೊಳಗಾಗುವ ಸ್ವಭಾವ ಅವನಿಗೆ ಗೊತ್ತಿತ್ತು. "ಹೌದು, ಅವನ ಸಂತೋಷವೇ ಅವನನ್ನು ಕ್ಷೋಭೆಗೊಳಿಸಿರುವುದು. ನನ್ನ ಎಣಿಕೆ ತಪ್ಪಿಲ್ಲ" ಎಂದು ತನಗೆ ತಾನೇ ಹೇಳಿಕೊಂಡ. "ದೇವರೇ! ಅವನು ನನ್ನನ್ನೂ ನಿರುತ್ಸಾಹಕ್ಕೆ ತಳ್ಳಿದ್ದಾನಲ್ಲ! ಸಣ್ಣಪುಟ್ಟ ವಿಷಯಗಳನ್ನೂ ಹೇಗೆ ಭಾರಿ ದುರಂತಗಳನ್ನಾಗಿ ಮಾಡುತ್ತಾನೆ! ಅಬ್ಬಾ, ಎಂಥ ಉದ್ವೇಗ ಸ್ವಭಾವದವನು! ಆಹ್! ಅವನನ್ನು ಪಾರು ಮಾಡಲೇ ಬೇಕು! ಪಾರು ಮಾಡಲೇ ಬೇಕು!" ಅರ್ಕಾದಿ ಇವಾನೊವಿಚ್ ಮಣಗುಟ್ಟಿದ, ತನ್ನ ಸ್ವಂತ ಹೃದಯದಲ್ಲೇ ತಮ್ಮ ಸಣ್ಣ ಕೌಟುಂಬಿಕ ತೊಂದರೆಗಳನ್ನು ಪರಿಣಾಮದಲ್ಲಿ ಯಾವ ಮಹತ್ವವನ್ನೂ ಹೊಂದಿರದಂಥ ವಿಷಯಗಳನ್ನು, ಭಾರಿ ಅನರ್ಥಗಳನ್ನಾಗಿ ತಾನೇ ಆಗಲೇ ಉತ್ಪ್ರೇಕ್ಷಿಸಿದ್ದನೆಂಬುದನ್ನು ಸ್ಪಷ್ಟವಾಗಿಯೇ ಮನಗಾಣದೆ. ಯೂಲಿಯಾನ್ ಮಸ್ತಾಕೊವಿಚ್‌ರ ಮನೆ ತಲುಪಿದಾಗ ಆಗಲೇ ಹನ್ನೊಂದು ಗಂಟೆಯಾಗಿತ್ತು. ಮುಂದುಗಡೆಯ ಹಜಾರದಲ್ಲಿ ಒಂದು ಮೇಜಿನ ಮೇಲೆ ಮಸಿಯ ಕಲೆಗಳಿಂದ ತುಂಬಿದ್ದ, ಗೀಚಲಾಗಿದ್ದ, ಒಂದು ಕಾಗದದ ಹಾಳೆಯನ್ನು ಇರಿಸಲಾಗಿತ್ತು. ಇದರಲ್ಲಿ ಯೂಲಿಯಾನ್ ಮಸ್ತಾಕೊವಿಚ್‌ರಿಗೆ ಹೊಸ ವರುಷದ ದಿನ ಗೌರವ ಸಲ್ಲಿಸಲು ಬಂದವರೆಲ್ಲ ಸಹಿ ಮಾಡಿದ್ದರು. ಅರ್ಕಾದಿ ಇವಾನೊವಿಚ್ ಬಂದುದೂ ಈ ದೀರ್ಘ ಪಟ್ಟಿಗೆ ತನ್ನ ವಿನೀತ ಹೆಸರನ್ನು ಸೇರಿಸಲೋಸುಗ. ಆದರೆ ಆ ಪಟ್ಟಿಯಲ್ಲಿ ವಾಸ್ಯ ಷುಮ್ಕೋವ್‌ನ ಸ್ವಂತ ಸಹಿಯನ್ನೂ ಕಂಡು ಅವನಿಗೆ ಮಹದಾಶ್ಚರ್ಯವಾಯಿತು. ಅದು ಅವನನ್ನು ದಿಗ್ಭ್ರಮೆಗೊಳಿಸಿತು. "ಇವನಿಗೆ ಏನು ಆಗುತ್ತಿದೆ?" ಎಂದು ಯೋಚಿಸಿದ. ಸ್ವಲ್ಪ ಸಮಯದ ಹಿಂದಷ್ಟೆ ಆಶಾಭಾವನೆಯಿಂದ ವಿಜೃಂಭಿಸುತ್ತಿದ್ದ ಅರ್ಕಾದಿ ಇವಾನೊವಿಚ್ ಈ ಮನೆಯಿಂದ ಹೊರಗೆ ಹೊರಟಾಗ ಕುಗ್ಗಿದ ಮನಸ್ಸಿನವನಾಗಿದ್ದ. ನಿಜಕ್ಕೂ ದುರಂತ ಸಮೀಪಿಸುತ್ತಿದ್ದಿತು, ಆದರೆ ಎಲ್ಲಿಂದ? ಯಾವ ದುರಂತ?

ಅವನು ಮಂಕು ಕವಿದ ಮನಸ್ಸಿನೊಂದಿಗೆ ಕೊಲೋಮ್ನ ತಲುಪಿದ. ಮೊದಲು ಅವನ ಗಮನ ಅಲೆದಾಡುತ್ತಿದ್ದಿತು. ಆದರೆ ಲೀಸಂಕಳೊಂದಿಗೆ ಮಾತುಕತೆ ನಡೆಸಿದ ಮೇಲೆ ವಾಸ್ಯನ ಬಗೆಗೆ ಅವನಲ್ಲಿ ಭಯ ನಿಜಕ್ಕೂ ಹೆಚ್ಚಿತು. ಆ ಮನೆಯಿಂದ ಹೊರಬಿದ್ದು ಬೀದಿ ತಲುಪಿದಾಗ ಅವನ ಕಣ್ಣಂಚಿನಲ್ಲಿ ಆಗಲೇ ನೀರು ತುಂಬಿ ಬಂದಿತ್ತು. ಮನೆಯ ಕಡೆಗೆ ಓಡುತ್ತ ಹೋದ. ನೇವಾ ನದಿಯ ದಡದ ಮೇಲೆ ವಾಸ್ಯನನ್ನೇ ಸಂಧಿಸಿದ. ಅವನೂ ಓಡುತ್ತಿದ್ದ.

"ಎಲ್ಲಿಗೆ ಹೊರಟಿಯೋ?" ಅರ್ಕಾದಿ ಇವಾನೊವಿಚ್ ಕೇಳಿದ.

ಅಪರಾಧ ಮಾಡುತ್ತಿದ್ದಾಗಲೇ ಸಿಕ್ಕಿಬಿದ್ದ ಅಪರಾಧಿಯಂತೆ ವಾಸ್ಯ ತಾನು ಹೋಗುತ್ತಿದ್ದ ಮಾರ್ಗದಲ್ಲಿ ನಿಂತ.

"ಸುಮ್ಮನೆ ಹೊರಗೆ ಬಂದೆ ಕಣೋ. ಸ್ವಲ್ಪ ಸ್ವಚ್ಛ ಗಾಳಿ ಸೇವಿಸೋಣ ಅಂತ".

"ಹಾಗೋ. ಅಂತೂ ನಿನಗೆ ತಡೆದುಕೊಳ್ಳುವುದಕ್ಕಾಗಲಿಲ್ಲ. ಕೊಲೋಮ್ನ ಕಡೆಗೆ ಹೊರಟಿದ್ದೀಯ, ಅಲ್ಲವೇ? ಓಹ್, ವಾಸ್ಯ, ವಾಸ್ಯ! ಅಲ್ಲವೋ, ನೀನು ಯೂಲಿಯಾನ್ ಮಸ್ತಾಕೊವಿಚ್‌ರ ಮನೆಗೆ ಏಕೆ ಹೋಗಬೇಕಿತ್ತೋ!"

ವಾಸ್ಯ ಏನೂ ಹೇಳಲಿಲ್ಲ. ಆಮೇಲೆ ಗಾಳಿಯಲ್ಲಿ ಕೈ ಆಡಿಸುತ್ತ ಹೇಳಿದ:

"ಅರ್ಕಾದಿ! ನನಗೆ ಏನು ಆಗುತ್ತಿದೆಯೋ ನನಗೇ ತಿಳಿಯದು ಕಣೋ! ನಾನು..."

"ಸರಿ, ಕಣೋ, ವಾಸ್ಯ, ಸರಿ! ಅದು ಏನು ಅನ್ನೋದು ನನಗೆ ಗೊತ್ತು. ಸ್ವಲ್ಪ ಸಮಾಧಾನ ಮಾಡಿಕೊಳ್ಳೊ! ನಿನ್ನೆಯ ಘಟನೆಗಳನಂತರ ನೀನು ಇನ್ನೂ ಉದ್ರಿಕ್ತನಾಗಿಯೇ ಇದ್ದೀಯ, ಕ್ಷೋಭೆಗೊಂಡಿದ್ದೀಯ! ನಿಜಕ್ಕೂ, ಅದನ್ನು ಸಹಿಸಿಕೊಂಡಿರುವುದು ಅಷ್ಟು ಕಷ್ಟವೇನೋ? ಅಲ್ಲವೋ, ಎಲ್ಲರೂ ನಿನ್ನನ್ನು ಪ್ರೀತಿಸುತ್ತಾರೆ, ಎಲ್ಲರೂ ನಿನಗಾಗಿ ತಮ್ಮ ಶಕ್ತಿಮೀರಿ ಸಹಾಯ ಮಾಡುತ್ತಿದ್ದಾರೆ, ನಿನ್ನ ಕೆಲಸವೂ ಚೆನ್ನಾಗಿ ಸಾಗುತ್ತಿದೆ, ನೀನು ಸಧ್ಯದಲ್ಲೇ ಅದನ್ನು ಮುಗಿಸಲಿರುವೆ, ಖಂಡಿತ ಮುಗಿಸಲಿರುವೆ, ನನಗೆ ಗೊತ್ತು. ನೀನು ಏನನ್ನೋ ಕಲ್ಪಿಸಿಕೊಳ್ಳುತ್ತಿದ್ದೀಯ, ಮನಸ್ಸಿಗೆ ಏನೋ ಒಂದು ರೀತಿಯ ಭೀತಿ ಹಚ್ಚಿಕೊಂಡಿದೀಯ."

"ಇಲ್ಲವೋ. ಏನೂ ಇಲ್ಲ ಕಣೋ."

"ನಿನಗೆ ಹಿಂದಿನ ಒಂದು ಪ್ರಸಂಗ ಜ್ಞಾಪಕ ಇದೆಯಾ, ವಾಸ್ಯ. ಆಗ ನಿನಗೆ ಏನಾಯಿತು ಜ್ಞಾಪಕ ಮಾಡಿಕೋ. ನಿನಗೆ ಕೆಲಸದಲ್ಲಿ ಮೊದಲ ಅಧಿಕಾರ ಪದವಿ ಬಂದಾಗ ಏನಾಯಿತು ಜ್ಞಾಪಕ ಮಾಡಿಕೋ. ನೀನು ಸಂತೋಷ ಕೃತಜ್ಞತೆಗಳಿಂದ ನಿನ್ನ ಉತ್ಸಾಹವನ್ನು ಇಮ್ಮಡಿಗೊಳಿಸಿಕೊಂಡೆ, ಒಂದು ಇಡೀ ವಾರ ಕೆಲಸವನ್ನೆಲ್ಲ ಹಾಳು ಮಾಡಿಕೊಂಡೆ. ಈಗ ಆಗುತ್ತಿರುವುದೂ ಅದೇ."

"ಹೌದು, ಹೌದು, ಅರ್ಕಾದಿ. ಆದರೆ ಈಗ ಇದು ಬೇರೆ. ಆ ಹಿಂದಿನದು ಅಲ್ಲವೇ ಅಲ್ಲ."

"ಆದರೆ ಹೇಳೋ, ಇದು ಹೇಗೋ ಬೇರೆ? ಬಹುಶಃ ನಿನಗೆ ಕೊಟ್ಟಿರುವ ಕೆಲಸ ಅಷ್ಟು ತುರ್ತಿನದು ಅಲ್ಲವೇ ಅಲ್ಲವೇನೋ. ನೀನು ಸುಮ್ಮನೇ ನಿನ್ನನ್ನು ಕೊಂದುಕೊಳ್ಳುತ್ತಿದ್ದೀಯ..."

"ಸರಿ ಕಣೋ. ಸರಿ ಕಣೋ. ಬಾರೋ."

"ಈಗ ಹೋಗ್ತಿರೋದು ಕೊಲೋಮ್ನಗಲ್ಲ, ಮನೆಗೆ ತಾನೆ?"

"ಹೌದು ಕಣೋ. ನನಗೆ ಅಲ್ಲಿಗೆ ಹೋಗೋಕೆ ಹೇಗೆ ಸಾಧ್ಯ? ನಾನು ನನ್ನ ಮನಸ್ಸು ಬದಲಿಸಿದ್ದೇನೆ. ನೀನಿಲ್ಲದೆ ನನಗೆ ಒಬ್ಬನೇ ಇರುವುದಕ್ಕೆ ಆಗಲಿಲ್ಲ, ಅಷ್ಟೆ. ಈಗ ನೀನು ಬಂದೆಯಲ್ಲ, ನಾನು ಬರೆಯೋಕೆ ಕೂರುತೀನಿ. ಬಾ, ಹೋಗೋಣ."

ಇಬ್ಬರೂ ಮಾತಾಡದೆ ಸ್ವಲ್ಪ ದೂರ ಹೋದರು. ವಾಸ್ಯ ಬೇಗ ಬೇಗ ಹೋಗುತ್ತಿದ್ದ.

"ನೀನು ಅವರ ಬಗೆಗೆ ಏನೂ ಪ್ರಶ್ನೆ ಕೇಳಲೇ ಇಲ್ಲ, ಯಾಕೋ?" ಅರ್ಕಾದಿ ಇವಾನೊವಿಚ್ ಕೇಳಿದ.

"ಓಹ್, ಹೌದು ಕಣೋ. ಹೇಳೋ, ಪ್ರಿಯ ಅರ್ಕಾಷ, ಹೇಳೋ!"

"ಏನೋ, ವಾಸ್ಯ, ನೀನು ಎಂದಿನಂತೆ ಇಲ್ಲವೇ ಇಲ್ಲವಲ್ಲೋ!"

"ಪರವಾಗಿಲ್ಲ ಕಣೋ. ಪರವಾಗಿಲ್ಲ. ಹೇಳು, ಎಲ್ಲವನ್ನೂ ಹೇಳು, ಅರ್ಕಾಷ!" ವಾಸ್ಯ ಬೇಡಿಕೊಂಡ, ಇನ್ನೂ ಹೆಚ್ಚಿನ ವಿವರಣೆಗಳಿಂದ ತಪ್ಪಿಸಿಕೊಳ್ಳಲು ಇಚ್ಛಿಸುತ್ತಿರುವನೇನೋ ಎಂಬಂತೆ. ಅರ್ಕಾದಿ ಇವಾನೊವಿಚ್ ಬಿಸುಸುಯ್ದ. ವಾಸ್ಯ ನನ್ನು ನೋಡಿದಂತೆ ಅವನು ಸಂಪೂರ್ಣವಾಗಿ ದಿಗ್ಭ್ರಾಂತನಾದ ಭಾವನೆ ಪಡೆದ.

ವಾಸ್ಯ ಅರ್ಕಾದಿಯ ಮಾತುಗಳನ್ನು ಕೇಳುತ್ತಿದ್ದಂತೆ ನಿಜಕ್ಕೂ ಸ್ವಲ್ಪ ಉತ್ಸಾಹಗೊಂಡ. ಸಂಭಾಷಣೆಯಲ್ಲೂ ಆಸಕ್ತಿ ತೋರಿದ. ಇಬ್ಬರೂ ಊಟ ಮಾಡಿದರು. ಲೀಸಂಕಳ ತಾಯಿ ಅರ್ಕಾದಿ ಇವಾನೊವಿಚ್‌ಗೆ ಜೇಬು ತುಂಬ ಬಿಸ್ಕತ್ತು ಕೊಟ್ಟಿದ್ದಳು. ಇಬ್ಬರು ಮಿತ್ರರೂ ಅದನ್ನು ತಿನ್ನುತ್ತ ಕುಳಿತು ಗೆಲುವು ತಂದುಕೊಂಡರು. ಊಟವಾದ ಮೇಲೆ ಸ್ವಲ್ಪ ಹೊತ್ತು ನಿದ್ರೆ ಮಾಡುವುದಾಗಿ ವಾಸ್ಯ ಮಾತು ಕೊಟ್ಟ. ಆಮೇಲೆ ಇಡೀ ರಾತ್ರಿ ಕುಳಿತು ಬರೆಯಬಹುದಾಗಿತ್ತು. ಹಾಗೆಯೇ ಅವನು ಹಾಸಿಗೆಯ ಮೇಲೆ ಮಲಗಿದ ಕೂಡ. ಅರ್ಕಾದಿ ಇವಾನೊವಿಚ್‌ಗೆ ಅಂದು ಬೆಳಿಗ್ಗೆ ಯಾರೋ ಸಂಜೆ ಟೀಗೆ ಬರಬೇಕೆಂದು ಆಹ್ವಾನ ನೀಡಿದ್ದರು. ಅದನ್ನು ನಿರಾಕರಿಸಲು ಅವನಿಗೆ ಸಾಧ್ಯವಿರಲಿಲ್ಲ. ಹಾಗಾಗಿ ಮಿತ್ರರು ಮತ್ತೆ ಬೇರೆಯಾದರು. ಸಾಧ್ಯವಾದಷ್ಟೂ ಬೇಗ, ಎಂಟು ಗಂಟೆಗೆಲ್ಲ, ಬಂದು ಬಿಡುವುದಾಗಿ ಅರ್ಕಾದಿ ಮಾತುಕೊಟ್ಟ. ಮನೆಯಿಂದ ಹೊರಗೆ ಇದ್ದ ಆ ಮೂರು ಗಂಟೆಗಳು ಅವನಿಗೆ ಮೂರು ವರ್ಷಗಳಂತೆ ಕಂಡುಬಂದವು. ಕೊನೆಗೆ ಅವನು ಹೇಗೋ ಅವರಿಂದ ಬಿಡಿಸಿಕೊಂಡು ಮನೆಗೆ, ವಾಸ್ಯನ ಬಳಿಗೆ, ಧಾವಿಸಿ ಬಂದ. ಕೋಣೆಯಲ್ಲಿ ಕತ್ತಲು ತುಂಬಿತ್ತು. ವಾಸ್ಯ ಮನೆಯಲ್ಲಿರಲಿಲ್ಲ. ಮಾವ್ರಳನ್ನು ಕೇಳಿದ. ತುಂಬ ಹೊತ್ತು ಬರೀತಿದ್ರು, ಒಂದು ಘಳಿಗೆಯೂ ನಿದ್ರೆ ಮಾಡಲಿಲ್ಲ, ಆಮೇಲೆ ಕೋಣೆಯಲ್ಲೇ ಅತ್ತಿಂದಿತ್ತ ಅಡ್ಡಾಡತೊಡಗಿದರು, ಒಂದು ಗಂಟೆ ಮುಂಚೆ ಹೊರಗೆ ಹೋದರು, ಅರ್ಧ ಗಂಟೆಯಲ್ಲಿ ವಾಪಸು ಬರುವುದಾಗಿ ಹೇಳಿ ಹೋದರು, ಎಂದು ಅವಳು

ತಿಳಿಸಿದಳು. "'ಅರ್ಕಾದಿ ಇವಾನೊವಿಚ್ ಬಂದಾಗ, ನಾನು ವಾಯುಸೇವನೆಗೆ ಹೊರಗೆ ಹೋಗಿದ್ದೇನೆ ಅಂತ ಹೇಳು' ಅಂದರು ಅವರು. ಅದನ್ನೇ ಮೂರು ನಾಲ್ಕು ಬಾರಿ ಹೇಳಿದರು" ಎಂದು ಮಾವ್ರ ಮಾತು ಮುಗಿಸಿದಳು.

"ಅರ್ತೇಮ್ಯೆವ್‌ರ ಮನೆಗೆ ಹೋಗಿದ್ದಾನೆ!" ಅರ್ಕಾದಿ ಇವಾನೊವಿಚ್ ಅಂದುಕೊಂಡು ತಲೆ ಕೊಡಹಿದ.

ಒಂದು ನಿಮಿಷದ ನಂತರ ಹಠಾತ್ತನೆ ನೆಗೆದು ನಿಂತ. ಯಾವುದೋ ಆಸೆ ಅವನ ಉತ್ಸಾಹವನ್ನು ಉಕ್ಕಿಸಿತ್ತು. ಬಹುಶಃ ವಾಸ್ಯ ಬರವಣಿಗೆಯನ್ನು ಮುಗಿಸಿರಬೇಕು. ಹೌದು ಅದೇ ಇರಬೇಕು, ಎಂದು ಅವನು ಅಂದುಕೊಂಡ. ತಡೆದುಕೊಂಡಿರಲಾಗಲಿಲ್ಲ, ಅಲ್ಲಿಗೆ ಹೊರಟುಬಿಟ್ಟಿದ್ದಾನೆ. ಆದರೆ ಮತ್ತೊಮ್ಮೆ ಯೋಚಿಸಿದಾಗ, ಹಾಗಿಲ್ಲವೇನೋ ಅನಿಸಿತು ಅವನಿಗೆ. ಬರೆದು ಮುಗಿಸಿದ್ದರೂ ನನಗಾಗಿ ಕಾಯುತ್ತಿರಲಿಲ್ಲವೇ. ನೋಡೋಣ, ಎಷ್ಟು ಕೆಲಸ ಮಾಡಿ ಮುಗಿಸಿದ್ದಾನೆ!

ಮೋಂಬತ್ತಿ ಹಚ್ಚಿಸಿ ವಾಸ್ಯನ ಮೇಜಿನ ಬಳಿಗೆ ಕುತೂಹಲದಿಂದ ಹೋದ. ಕೆಲಸವೇನೋ ಮುಂದುವರಿದಿತ್ತು. ಹೆಚ್ಚಿಗೆ ಉಳಿದಿದ್ದಂತೆ ಕಾಣಲಿಲ್ಲ. ಅರ್ಕಾದಿ ಇವಾನೊವಿಚ್ ಇನ್ನಷ್ಟು ಪರಿಶೋಧಿಸ ಹೊರಟಿದ್ದ, ಆಗ ವಾಸ್ಯ ಇದ್ದಕ್ಕಿದ್ದಂತೆ ಒಳಬಂದ.

"ಓಹ್! ನೀನಾಗಲೇ ಬಂದು ಬಿಟ್ಟೆಯಾ?" ಅವನು ಕೂಗಿ ಹೇಳಿದ, ಹೆದರಿಕೆಯಿಂದ ಬೆಚ್ಚಿಬಿದ್ದವನಂತೆ.

ಅರ್ಕಾದಿ ಇವಾನೊವಿಚ್ ಪ್ರತ್ಯುತ್ತರ ಹೇಳಲಿಲ್ಲ. ಅವನು ವಾಸ್ಯನನ್ನು ಯಾವ ಪ್ರಶ್ನೆ ಕೇಳಲೂ ಹೆದರಿದ್ದ. ವಾಸ್ಯ ಮತ್ತೆ ಏನನ್ನೂ ಹೇಳದೆ ತಲೆ ತಗ್ಗಿಸಿಕೊಂಡು ತನ್ನ ಕಾಗದಗಳನ್ನೆಲ್ಲ ಜೋಡಿಸಿಕೊಳ್ಳತೊಡಗಿದ. ಕೊನೆಗೊಮ್ಮೆ ಅವರಿಬ್ಬರ ದೃಷ್ಟಿಗಳೂ ಸಂಧಿಸಿದವು. ವಾಸ್ಯನ ಕಣ್ಣುಗಳಲ್ಲಿ ಎಂತಹ ಯಾಚಿಸುವ, ಬೇಡಿಕೊಳ್ಳುವ, ಹಿಂಡಿದ ಭಾವನೆ ಇದ್ದಿತೆಂದರೆ ಅದನ್ನು ಕಂಡ ಅರ್ಕಾದಿ ಬೆದರಿದ. ಅವನ ಹೃದಯ ಕಂಪಿಸಿತು, ಭಾವ ತುಂಬಿ ಹರಿಯಿತು.

"ವಾಸ್ಯ, ನನ್ನ ಪ್ರಿಯ ಸೋದರ, ಏನು ವಿಷಯ? ಏನಾಗಿದೆಯೋ ನಿನಗೆ?" ಅವನ ಬಳಿಗೆ ಧಾವಿಸಿ ಹೋಗಿ ತನ್ನ ತೋಳುಗಳಲ್ಲಿ ಅವನನ್ನು ಅಪ್ಪಿ ಹಿಡಿದ. "ಹೇಳೋ, ಎಲ್ಲವನ್ನೂ ಹೇಳೋ. ನನಗೆ ನೀನಾಗಲೀ ನಿನ್ನ ಈ ಬೇಗುದಿಗೆ ಕಾರಣವಾಗಲೀ ತಿಳಿಯುತ್ತಲೇ ಇಲ್ಲ. ಹತಭಾಗ್ಯ ಹುತಾತ್ಮನಂತಿದ್ದೀಯಲ್ಲೋ, ಏನದು ಹೇಳು? ಎಲ್ಲವನ್ನೂ ಪೂರ್ಣವಾಗಿ ಸತ್ಯವಾಗಿ ಹೇಳು. ಖಂಡಿತವಾಗಿಯೂ, ಕೆಲಸ ಮುಗಿದಿಲ್ಲ ಎನ್ನುವುದಷ್ಟೆ ಕಾರಣವಾಗಿರಲಾರದು..."

ವಾಸ್ಯ ಅವನಿಗೇ ಅಂಟಿಕೊಂಡು ನಿಂತ. ಒಂದು ಮಾತನ್ನೂ ಆಡದಾಗಿದ್ದ. ಅವನ ಉಸಿರು ಗಂಟಲಲ್ಲೇ ಸಿಕ್ಕಿಕೊಂಡಂತಿದ್ದಿತು.

"ಪರವಾಗಿಲ್ಲ ಕಣೋ, ವಾಸ್ಯ. ಮುಗಿಸದೆ ಹೋದರೆ ಏನು ಕೊಳ್ಳೆಹೋಯಿತು? ನಿನ್ನ ವರ್ತನೆಯೇ ನನಗೆ ಅರ್ಥವಾಗುತ್ತಿಲ್ಲ. ಹೇಳು, ಏನು ನಿನ್ನನ್ನು ಕಾಡಿಸುತ್ತಿರುವುದು? ನೋಡು, ಬೇಕಾದರೆ ನಿನ್ನ ಸಲುವಾಗಿ ನಾನು... ಓಹ್, ದೇವರೇ, ದೇವರೇ!" ಹಾಗೆಂದು ಮಾತನಾಡುತ್ತಲೇ ಅವನು ಕೋಣೆಯೊಳಗೆ ಸುತ್ತು ಹಾಕಿದ, ಕೈಗೆ ಸಿಕ್ಕಿದುದನ್ನು ಹಿಡಿದುಕೊಳ್ಳುತ್ತಿದ್ದ, ವಾಸ್ಯನ ರೋಗಕ್ಕೆ ತಕ್ಷಣ ಪರಿಹಾರ ಹುಡುಕುತ್ತಿದ್ದಾನೋ ಎಂಬಂತೆ. "ನಾನೇ ನಾಳೆ ಯೂಲಿಯಾನ್ ಮಸ್ತಾಕೊವಿಚ್‌ರನ್ನು ಹೋಗಿ ಕಾಣುತ್ತೇನೆ. ನಾನು ಅವರನ್ನು ಕೇಳಿಕೊಳ್ಳುತ್ತೇನೆ, ನಿನಗೆ ಇನ್ನೊಂದು ದಿವಸ ಕೊಡಬೇಕೆಂದು ಬೇಡಿಕೊಳ್ಳುತ್ತೇನೆ. ಅವರಿಗೆ ಎಲ್ಲವನ್ನೂ ವಿವರಿಸಿ ಹೇಳುತ್ತೇನೆ, ಎಲ್ಲವನ್ನೂ ಹೇಳುತ್ತೇನೆ – ಇದೇ ನಿನಗೆ ಇಷ್ಟೊಂದು ವೇದನೆ ಉಂಟುಮಾಡುತ್ತಿದೆ, ಎನ್ನುವುದಾದರೆ."

"ದಮ್ಮಯ್ಯ ಬೇಡವೋ!" ವಾಸ್ಯ ಕೂಗಿ ಹೇಳಿದ, ಸುಣ್ಣದಂತೆ ಬಿಳಚಿಕೊಂಡು. ಅವನು ಬಹುಮಟ್ಟಿಗೆ ಮೂರ್ಛೆ ಹೋದಂತೆಯೇ ಆದ.

"ವಾಸ್ಯ! ವಾಸ್ಯ!.."

ವಾಸ್ಯ ಮತ್ತೆ ಪ್ರಜ್ಞೆ ಪಡೆದುಕೊಂಡ. ಅವನ ತುಟಿಗಳು ಅದುರುತ್ತಿದ್ದವು. ಏನೋ ಹೇಳಲು ಯತ್ನಿಸಿದ. ಆದರೆ ಅರ್ಕಾದಿಯ ಕೈಯನ್ನು ಮೌನವಾಗಿಯೇ ಸೆಳವಿಗೆ ಸಿಕ್ಕಿದವನಂತೆ ಅವುಕಿದ. ಅವನ ಕೈ ತಣ್ಣಗಿದ್ದಿತು. ಅರ್ಕಾದಿ ಅವನ ಮುಂದೆ ನಿಂತ, ಕಳವಳ ಯಾತನೆಗಳಿಂದ ಕೂಡಿದ ನಿರೀಕ್ಷೆಯಿಂದ ತುಂಬಿ. ವಾಸ್ಯ ಮತ್ತೆ ತನ್ನ ಕಣ್ಣುಗಳನ್ನು ಮೇಲೆತ್ತಿ ಅವನನ್ನು ನೋಡಿದ.

"ವಾಸ್ಯ! ಅಯ್ಯೋ, ದೇವರೇ! ವಾಸ್ಯ! ನೀನು ನನ್ನ ಹೃದಯವನ್ನು ಒಡೆಯುತ್ತಿದ್ದೀಯ ಕಣೋ, ನನ್ನ ಗೆಳೆಯ, ನನ್ನ ಪ್ರಿಯ ಮಿತ್ರ."

ವಾಸ್ಯನ ಕಣ್ಣುಗಳಿಂದ ನೀರು ಬುಗ್ಗೆಬುಗ್ಗೆಯಾಗಿ ಉಕ್ಕತೊಡಗಿತು. ಅವನು ಅರ್ಕಾದಿಯ ಎದೆಯ ಮೇಲೆ ಒರಗಿದ.

"ನಾನು ನಿನಗೆ ಮೋಸ ಮಾಡಿದೆ ಕಣೋ, ಅರ್ಕಾದಿ!" ಅವನೆಂದ. "ನಾನು ನಿನಗೆ ಮೋಸಮಾಡಿದೀನಿ. ಕ್ಷಮಿಸೋ, ಕ್ಷಮಿಸೋ! ನಾನು ನಿನ್ನ ಸ್ನೇಹಕ್ಕೆ ದ್ರೋಹ ಬಗೆದಿದ್ದೇನೆ!"

"ಯಾಕೋ, ವಾಸ್ಯ, ಏನೋ ಅದು? ಏನೋ ಅದು ನಿನ್ನನ್ನು ಕಾಡಿಸುತ್ತಿರೋದು?" ಅರ್ಕಾದಿ ಭಯಗ್ರಸ್ತನಾಗಿ ಕೇಳಿದ.

"ಇಲ್ಲಿ ನೋಡು!..."

ಹತಾಶೆಯ ಭಾವ ವ್ಯಕ್ತಪಡಿಸುತ್ತ ವಾಸ್ಯ ತನ್ನ ಮೇಜಿನ ಡ್ರಾಯರ್ ಹೊರಗೆಳೆದು ಅದರಿಂದ ಅವನು ನಕಲು ಮಾಡುತ್ತಿದ್ದ ಪುಸ್ತಕದಂತಯೇ ಇದ್ದ ಆರು ಭಾರಿ ದಪ್ಪ ನೋಟುಪುಸ್ತಕಗಳನ್ನು ತೆಗೆದು ಮೇಜಿನ ಮೇಲೆಸೆದ.

"ಏನದು ?"

"ಇದೇ ನಾನು ನಾಡಿದ್ದರ ಒಳಗೆ ಮುಗಿಸಬೇಕಾದದ್ದು. ಇನ್ನೂ ಕಾಲು ಭಾಗವನ್ನೂ ಮಾಡಿಲ್ಲ. ನನ್ನ ಕೇಳಬೇಡಪ್ಪ... ಯಾಕೆ ಹೀಗಾಯಿತು ಅಂತ ನನ್ನ ಕೇಳಬೇಡ !" ವಾಸ್ಯ ಹೇಳುತ್ತ ಹೋದ, ತನ್ನನ್ನು ಕಾಡಿಸುತ್ತಿದ್ದ ವಿಷಯದ ಕಡೆಗೆ ತಿರುಗಿ. "ಅರ್ಕಾದಿ, ನನ್ನ ಗೆಳೆಯ ! ನನಗೇ ಗೊತ್ತಿಲ್ಲ ನಾನು ಏನು ಮಾಡು ತ್ತಿದ್ದೆ ಅಂತ ! ಕನಸಿನಿಂದ ಹೊರಗೆ ಬರುತ್ತಿದ್ದೇನೆ ಅಂತ ಕಾಣಿಸುತ್ತಿದೆ ನನಗೆ ! ಇಡೀ ಮೂರು ವಾರ ವ್ಯರ್ಥವಾಗಿ ಕಳೆದೆ. ನಾನು ಸುಮ್ಮನೆ... ನಾನು... ಸುಮ್ಮನೆ ಅವಳನ್ನು ನೋಡೋದಕ್ಕೆ ಅಂತ ಹೊರಟುಹೋಗುತ್ತಿದ್ದೆ. ನನ್ನ ಹೃದಯ ನೋಯು ತ್ತಿತು , ನಾನು ತಳಮಳಿಸುತ್ತಿದ್ದೆ... ಅನಿಶ್ಚಯತೆಯಿಂದ... ಒಂದು ಪದವನ್ನೂ ಬರೆಯುವುದಕ್ಕೆ ಆಗುತ್ತಿರಲಿಲ್ಲ. ಆದರ ಕಡೆಗೆ ಯೋಚನೆಯನ್ನೇ ಹರಿಸಲಿಲ್ಲ. ಈಗಷ್ಟೆ ನನ್ನ ಬಾಳಿನಲ್ಲಿ ಸುಖದ ಅರುಣೋದಯವಾಗುತ್ತಿರುವಾಗ ನಾನು ಎಚ್ಚತ್ತಿದ್ದೇನೆ."

"ವಾಸ್ಯ" ಅರ್ಕಾದಿ ಇವಾನೊವಿಚ್ ದೃಢವಾಗಿ ಹೇಳಿದ. "ವಾಸ್ಯ, ನಾನು ನಿನ್ನನ್ನು ಉಳಿಸುತ್ತೇನೆ. ನನಗೆಲ್ಲ ಅರ್ಥವಾಯಿತು. ಇದು ತಮಾಷೆಯ ಕಾರ್ಯವೇ ನಲ್ಲ ನಾನು ನಿನ್ನನ್ನು ಉಳಿಸುತ್ತೇನೆ ! ಇಲ್ಲಿ ಕೇಳು, ನನ್ನ ಮಾತು ಕೇಳು. ನಾನು ನಾಳೆ ಯೂಲಿಯಾನ್ ಮಸ್ತಾಕೊವಿಚ್‌ರನ್ನು ಹೋಗಿ ಕಾಣುತ್ತೇನೆ. ತಲೆ ಆಡಿಸಬೇಡ. ಕೇಳು ! ನಾನು ಅವರಿಗೆ ಇಡೀ ಕಥೆಯನ್ನು ಹೇಳುತ್ತೇನೆ. ನಾನು ಅಂದುಕೊಂಡ ರೀತಿಯಲ್ಲಿ ಮಾಡೋದಕ್ಕೆ ನನಗೆ ಬಿಡು... ನಾನವರಿಗೆ ಸ್ಪಷ್ಟವಾಗಿ ತಿಳಿಸುತ್ತೇನೆ... ನಾನು ಏನು ಬೇಕಾದರೂ ಮಾಡ್ತೀನಿ !.. ನೀನು ಎಷ್ಟು ದುಃಖತಪ್ತನಾಗಿದ್ದೀಯ, ಎಷ್ಟು ಕಳವಳ ಪಡುತ್ತಿದ್ದೀಯ ಅನ್ನೋದನ್ನು ನಾನು ಅವರಿಗೆ ಹೇಳುತ್ತೇನೆ."

"ಬೇಡವೋ. ಹಾಗಂದು ನೀನು ಈಗಲೂ ನನ್ನನ್ನು ಕೊಲ್ಲುತ್ತಿದ್ದೀಯ, ನಿನಗೆ ಗೊತ್ತ ?" ವಾಸ್ಯ ಉಸುರಿದ. ಅವನ ರಕ್ತ ಹೆದರಿಕೆಯಿಂದ ಹೆಪ್ಪುಗಟ್ಟಿದಂತಾಗಿತ್ತು.

ಅರ್ಕಾದಿ ಇವಾನೊವಿಚ್ ನಿಸ್ತೇಜನಾದ. ಆದರೆ ಬೇಗನೆಯೇ ಸ್ತಿಮಿತಕ್ಕೆ ಬಂದು ಥಟ್ಟನೆ ನಗತೊಡಗಿದ.

"ಅಷ್ಟೇ ಏನೋ ? ಇದಷ್ಟೇನಾ ?" ಅವನೆಂದ. "ಏಯ್, ವಾಸ್ಯ, ವಾಸ್ಯ, ನಿನಗೆ ನಾಚಿಕೆಯಾಗೊಲ್ಲವೇನೋ ? ನನ್ನ ಮಾತು ಕೇಳು. ನನಗೆ ಗೊತ್ತು, ನಾನು ನಿನಗೆ ನೋವುಂಟುಮಾಡುತ್ತಿದ್ದೀನಿ ಅಂತ. ಆದರೆ ನೋಡು, ನಾನು ನಿನ್ನನ್ನು ಅರ್ಥಮಾಡಿಕೊಂಡಿದೀನಿ. ನೀನು ಏನು ಅನುಭವಿಸುತ್ತಿದೀಯಾ ಅನ್ನೋದು ನನಗೆ ಗೊತ್ತು. ಅಬ್ಬಾ, ಈಗ ನಾವು ಐದು ವರ್ಷಗಳಿಂದ ಒಟ್ಟಿಗೇ ವಾಸ ಮಾಡು ತ್ತಿದ್ದೇವೆ, ನಿನಗೆ ಗೊತ್ತಿದೆ ! ನೀನು ಕರುಣಾಳು, ಸೌಮ್ಯ. ಆದರೆ ತುಂಬ ದುರ್ಬಲ,

ಕ್ಷಮಿಸಲಾಗದಷ್ಟು ದುರ್ಬಲ! ನಿನಗೆ ಗೊತ್ತ, ಲಿಸವೇತ ಮಿಖಾಯ್ಲೊವ್ನಳೂ ಆಗಲೇ ಇದನ್ನು ಗಮನಿಸಿದ್ದಾಳೆ. ಅಲ್ಲದೆ ನೀನೊಬ್ಬ ಕನಸುಗಾರ. ಅದೂ ಒಳ್ಳೆಯದೇನಲ್ಲ. ಅದರಿಂದ ತಲೆ ಕೆಟ್ಟುಹೋಗಬಹುದು ಕಣೋ. ಇಲ್ಲಿ ಕೇಳು, ನೀನು ಏನು ಇಷ್ಟಪಡುತ್ತೀಯ ಅನ್ನೋದು ನನಗೆ ಗೊತ್ತು. ಉದಾಹರಣೆಗೆ, ನೀನು ಮದುವೆಯಾಗಲಿರುವೆ ಅನ್ನುವ ವಿಷಯ ತಿಳಿದು ಯೂಲಿಯಾನ್ ಮಸ್ತಾಕೊವಿಚ್‌ರು ಆನಂದಪರವಶರಾಗಬೇಕು, ತಮ್ಮ ಈ ಆನಂದದಲ್ಲಿ ಸಂತೋಷ ನರ್ತನ ಕೂಟವೊಂದನ್ನೂ ಏರ್ಪಡಿಸಬೇಕು, ಅಂತ ನೀನು ಬಯ ಸುತ್ತೀಯ. ತಾಳು, ಸ್ವಲ್ಪ ತಾಳು! ಹುಬ್ಬು ಗಂಟಿಕ್ಕಬೇಡ. ನಾನು ಇನ್ನೂ ಮೊದಲ ಮಾತು ಹೇಳುತ್ತಿದ್ದಾಗಲೇ ನೀನು ಯೂಲಿಯಾನ್ ಮಸ್ತಾಕೊವಿಚ್‌ರ ಪರವಾಗಿ ನನ್ನ ಮೇಲೆ ಎರಗುತ್ತಿದ್ದೀಯಲ್ಲ! ಹೋಗಲಿ, ಅವರನ್ನು ಬಿಟ್ಟು ಬಿಡುತ್ತೇನೆ. ನೀನು ಅವರನ್ನು ಎಷ್ಟು ಗೌರವಿಸುತ್ತೀಯೋ ನಾನೂ ಅಷ್ಟೇ ಗೌರವಿಸುತ್ತೇನೆ, ಗೊತ್ತ. ಆದರೆ ನಾನು ಹೇಳಿದುದು ತಪ್ಪು ಅಂತ ನೀನು ನನಗೆ ತೋರಿಸಿಕೊಡು ನೋಡೋಣ. ನೀನು ಮದುವೆಯಾಗಲಿರುವಾಗ ಈ ಜಗತ್ತಿ ನಲ್ಲಿ ಅಸಂತುಷ್ಟರಾದವರು ಯಾರೂ ಇರಬಾರದೆಂದೇ ನೀನು ಇಚ್ಛಿಸುತ್ತೀಯೆ. ಹಾಗೆ ನಾನು ಭಾವಿಸಕೂಡದೆಂದು ನೀನು ನಿಷೇಧಿಸಲಾರೆ. ನಾನು, ನಿನ್ನ ಅತ್ಯು ತ್ತಮ ಗೆಳೆಯನಾದ ನಾನು, ಇದ್ದಕ್ಕಿದ್ದಂತೆ ಒಂದು ಲಕ್ಷ ರೂಬಲ್‌ಗಳ ಬಂಡವಾಳ ಪಡೆಯುವಂತಾಗಬೇಕು ಅನ್ನೋದು ನಿನ್ನ ಬಯಕೆ. ಇದನ್ನು ನೀನು ಒಪ್ಪಿ ಕೊಳ್ಳಲೇ ಬೇಕು ಕಣೋ. ಜಗತ್ತಿನಲ್ಲಿರುವ ಎಲ್ಲ ಶತ್ರುಗಳೂ, ಅವರು ಯಾರೇ ಆಗಿರಲಿ, ಇದ್ದಕ್ಕಿದ್ದಂತೆ ಯಾವ ಕಾರಣವೂ ಇಲ್ಲದೆ ತಮ್ಮ ಭಿನ್ನಾಭಿಪ್ರಾಯ ಗಳನ್ನು ಪರಿಹರಿಸಿಕೊಳ್ಳಬೇಕು, ಸಂತೋಷದಿಂದ ನಡುದಾರಿಯಲ್ಲೇ ಪರಸ್ಪರ ರನ್ನು ಆಲಂಗಿಸಿಕೊಳ್ಳಬೇಕು, ನಿನ್ನನ್ನು ಕಾಣಲು ನಿನ್ನ ಮನೆಗೂ ಬರಬೇಕು, ಅಂತ ನೀನು ಬಯಸುತ್ತೀಯ. ಇದನ್ನೂ ನೀನು ಅಲ್ಲಗಳೆಯಲಾರೆ! ಓಹ್, ನನ್ನ ಗೆಳೆಯ! ನನ್ನ ಪ್ರೀತಿಯ ಗೆಳೆಯ! ನಾನೇನೂ ನಿನ್ನನ್ನು ಗೇಲಿ ಮಾಡು ತ್ತಿಲ್ಲ. ನಾನು ಹೇಳುತ್ತಿರುವುದೆಲ್ಲ ಸತ್ಯವಾದ ಮಾತು. ನೀನು ಇದನ್ನೇ ಅಲ್ಲಿ ದಿದ್ದರೂ ಇಂತಹುದನ್ನೇ ನನಗೆ ತುಂಬ ಹಿಂದೆಯೇ ತೋರಿಸಿಕೊಟ್ಟೆ. ನೀನೇ ಸ್ವತಃ ಸಂತೋಷದಲ್ಲಿರುವುದರಿಂದ, ಎಲ್ಲರೂ, ಒಬ್ಬರನ್ನೂ ಬಿಡದೆ ಎಲ್ಲರೂ, ಕೂಡಲೇ ಸಂತೋಷಿತರಾಗಬೇಕು, ಅನ್ನುವುದು ನಿನ್ನ ಇಚ್ಛೆ. ಒಬ್ಬನೇ ಸಂತೋಷ ದಿಂದಿರುವುದು ನಿನಗೆ ಕಷ್ಟವಾಗಿ, ಯಾತನೆಯದಾಗಿ ಕಂಡುಬರುತ್ತೆ! ಆದ್ದರಿಂದಲೇ ನೀನು ನಿನ್ನ ಸಂತೋಷಕ್ಕೆ ಅರ್ಹನಾಗಿರಲೋಸುಗ ನಿನ್ನ ಶಕ್ತಿಮೀರಿ ಯತ್ನಿ ಸುತ್ತಿದ್ದೀಯ. ಏನಾದರೂ ವೀರೋಚಿತ ಕಾರ್ಯ ಮಾಡುವ ಮೂಲಕ ಬಹುಶಃ ನಿನ್ನ ಅಂತರಂಗದ ಕ್ಲೇಶ ಪರಿಹರಿಸಲು ಯತ್ನಿಸುತ್ತಿದ್ದೀಯ. ಆದ್ದರಿಂದ ನಿನ್ನ

ಉತ್ಸಾಹ ಬುದ್ಧಿಶಕ್ತಿ... ಸರಿ, ಬಹುಶಃ ನೀನು ಹೇಳುವಂತೆ ಕೃತಜ್ಞತೆ... ತೋರಿಸ ಬೇಕಾಗಿದ್ದ ಕಡೆ ನೀನು ಇದ್ದಕ್ಕಿದ್ದಂತೆ ಅಸಡ್ಡೆ ತೋರಿರುವ ಕಾರಣ, ನಿನ್ನನ್ನು ನೀನೇ ಹಿಂಸಿಸಿಕೊಳ್ಳಲು ನೀನು ಸಿದ್ಧವಿರುವುದನ್ನು ನಾನು ಅರ್ಥಮಾಡಿ ಕೊಳ್ಳುತ್ತೇನೆ. ಯೂಲಿಯಾನ್ ಮಸ್ತಾಕೊವಿಚ್‌ರು ನಿನ್ನಲ್ಲಿರಿಸಿದ್ದ ಭರವಸೆಯನ್ನು ನೀನು ಸಮರ್ಥಿಸಲು ವಿಫಲನಾಗಿರುವುದನ್ನು ಕಂಡು ಹುಬ್ಬು ಗಂಟಿಕ್ಕುವರು, ಕೋಪಗೊಳ್ಳುವರು ಕೂಡ, ಎಂದು ಭಾವಿಸಿಕೊಂಡು ನೀನು ತುಂಬ ವಿಷಾದ ಪಡುತ್ತಿದ್ದೀಯ. ನೀನು ನಿನ್ನ ದಾತೃ ಎಂದು ಪರಿಗಣಿಸಿದಂಥವರಿಂದಲೇ ಈಗ ನಿಂದನೆ ದೂಷಣೆ ಕೇಳಲಿರುವುದಾಗಿ ಭಾವಿಸುವುದು ನಿನ್ನ ಮನಸ್ಸಿಗೆ ದುಃಖ ಉಂಟುಮಾಡಿದೆ – ಅದೂ ಇಂತಹ ಘಳಿಗೆಯಲ್ಲಿ, ನಿನ್ನ ಹೃದಯವು ಆನಂದ ದಿಂದ ತುಂಬಿ ತುಳುಕುತ್ತಿರುವಾಗ, ನಿನ್ನ ಕೃತಜ್ಞತೆಯನ್ನು ಯಾರ ಮೇಲೆ ಹೊರಡು ಹೊಯ್ಯಬೇಕೆಂದು ನೀನು ತಿಳಿಯದೆ ಇರುವಾಗ! ಇದು ಹೀಗೆ, ಅಲ್ಲವಾ? ಹೌದೋ, ಅಲ್ಲವೋ?"

ಈ ಕೊನೆಯ ಮಾತುಗಳನ್ನು ಹೇಳುತ್ತಿದ್ದಂತೆ ಅರ್ಕಾದಿ ಇವಾನೊವಿಚ್‌ನ ಧ್ವನಿ ಕಂಪಿಸಿತು. ಅವನು ಮೌನನಾದ, ಆಳವಾಗಿ ಉಸಿರೆಳೆದುಕೊಂಡ.

ವಾಸ್ಯ ತನ್ನ ಮಿತ್ರನತ್ತ ಅಕ್ಕರೆಯಿಂದ ನೋಡಿದ. ಅವನ ತುಟಿಗಳ ಮೇಲೆ ಮುಗುಳ್ನಗೆಯೊಂದು ಮಿಂಚಿತು.

ನಿಜಕ್ಕೂ ಆಶಾಕಿರಣವೊಂದು ಅವನ ಮುಖ ಲಕ್ಷಣಗಳನ್ನೆಲ್ಲ ಬೆಳಗುವಂತೆ ಕಂಡುಬಂದಿತು.

"ಸರಿ, ಹಾಗಾದರೆ. ಈಗ ನನ್ನ ಮಾತು ಕೇಳು" ಅರ್ಕಾದಿ ಮತ್ತೆ ಮಾತು ಮುಂದುವರಿಸಿದ, ಆಸೆಯಿಂದ ಹೆಚ್ಚು ಸ್ಫೂರ್ತಿಗೊಂಡವನಂತೆ. "ನೀನು ಯೂಲಿ ಯಾನ್ ಮಸ್ತಾಕೊವಿಚ್‌ರ ವಿಶ್ವಾಸವನ್ನು ಕಳೆದುಕೊಳ್ಳಬೇಕೆಂದೇನೂ ನಾವು ಇಚ್ಛಿಸುವುದಿಲ್ಲ. ಹಾಗೆ ಇಚ್ಛಿಸುತ್ತೇವೇನೋ? ಅದೇಯೇನು ನಿನ್ನ ಸಮಸ್ಯೆ? ಅದಾದರೆ, ಹಾಗಾದರೆ ನಾನು" ಅರ್ಕಾದಿ ಚಿಮ್ಮಿ ಕಾಲ ಮೇಲೆ ನಿಂತು ಹೇಳಿದ, "ನಾನು ನಿನಗಾಗಿ ನನ್ನನ್ನೇ ಬಲಿಕೊಡುತ್ತೇನೆ ಕಣೋ. ನಾಳೆ ನಾನು ಯೂಲಿಯಾನ್ ಮಸ್ತಾಕೊವಿಚ್‌ರ ಬಳಿಗೆ ಹೋಗುತ್ತೇನೆ. ನನ್ನ ಜೊತೆ ನೀನು ವಾದ ಮಾಡ ಬೇಡ! ವಾಸ್ಯ, ನೀನು ನಿನ್ನ ಒಂದು ಸಣ್ಣ ತಪ್ಪನ್ನೇ ಮಹಾ ಅಪರಾಧವನ್ನಾಗಿ ಕಂಡುಕೊಳ್ಳುತ್ತಿದ್ದೀಯ. ಆದರೆ ಯೂಲಿಯಾನ್ ಮಸ್ತಾಕೊವಿಚ್‌ರು ತುಂಬ ಉದಾರಿ, ದಯಾಳು. ಅಲ್ಲದೆ ಅವರೇನೂ ನಿನ್ನಂತಲ್ಲ! ವಾಸ್ಯ, ಅವರು ನಮ್ಮ ಮಾತು ಕೇಳುತ್ತಾರೆ, ನಮ್ಮನ್ನು ತೊಂದರೆಯಿಂದ ಬಿಡುಗಡೆ ಮಾಡುತ್ತಾರೆ. ಈಗ ನಿನಗೆ ಭಯ ನಿವಾರಣೆಯಾಯಿತೆ?"

ಕಣ್ಣೀರು ಕರೆಯುತ್ತ ವಾಸ್ಯ ಅರ್ಕಾದಿಯ ಕೈಯನ್ನು ಅವುಕಿದ.

"ಚಿಂತಿಸಬೇಡ, ಅರ್ಕಾದಿ, ಚಿಂತಿಸಬೇಡ" ಅವನೆಂದ. "ಈಗ ವಿಷಯ ತೀರ್ಮಾನವಾಯಿತು. ನಾನು ಮುಗಿಸಿಲ್ಲ, ಆದರೇನಂತೆ? ನಾನು ಮುಗಿಸಿಲ್ಲ, ಅಷ್ಟೇ ಇನ್ನೇನು ಹೇಳೋದಿದೆ. ನೀನು ಹೋಗಬೇಕಾದ ಆವಶ್ಯಕತೆಯೇ ಇಲ್ಲ. ನಾನೇ ಅವರಿಗೆ ಎಲ್ಲವನ್ನೂ ಹೇಳುತ್ತೇನೆ. ನಾನೇ ಹೋಗಿ ನೋಡುತ್ತೇನೆ. ನಾನೀಗ ಶಾಂತನಾಗಿದ್ದೇನೆ, ಸಮಾಧಾನನಾಗಿದ್ದೇನೆ. ಆದರೆ ನೀನು ಮಾತ್ರ ದಯ ವಿಟ್ಟು ಹೋಗಬೇಡ... ಆಮೇಲೆ, ಕೇಳು..."

"ವಾಸ್ಯ, ಓಹ್ ನನ್ನ ಪ್ರಿಯ ಮಿತ್ರ!" ಅರ್ಕಾದಿ ಇವಾನೊವಿಚ್ ಆನಂದ ದಿಂದ ಕೂಗಿ ಹೇಳಿದ. "ನೀನು ಆಡಿದ ಮಾತುಗಳನ್ನೇ ನಾನು ಆಡಿದೆ. ನೀನು ಸಮಾಧಾನ ಮಾಡಿಕೊಂಡೆ, ಸ್ವತಃ ಯೋಚನೆ ಮಾಡಿ ತೀರ್ಮಾನಕ್ಕೆ ಬಂದೆ ಅನ್ನುವುದು ನನಗೆ ಸಂತೋಷ ನೀಡಿದೆ. ಆದರೆ ನಿನಗೆ ಏನೇ ಆಗಲಿ, ಎಂಥದೇ ಆಗಲಿ, ನಾನು ನಿನ್ನ ಜೊತೆಗೆ ಇದ್ದೇನೆ ಅನ್ನುವುದನ್ನು ಮರೆಯಬೇಡ! ನಾನು ಯೂಲಿಯಾನ್ ಮಸ್ತಾಕೊವಿಚ್‌ರಿಗೆ ಏನು ಹೇಳಿಬಿಡುತ್ತೇನೋ ಎಂದು ನೀನು ಭಯಪಡುವಂತೆ ಕಾಣಿಸುತ್ತೆ. ಸರಿ, ನಾನು ಅವರಿಗೆ ಏನೂ ಹೇಳುವುದೇ ಇಲ್ಲ. ನೀನೇ ಅವರಿಗೆ ಹೇಳು. ಹಾಗಾದರೆ ನಾಳೆ ನೀನು ಅವರ ಬಳಿಗೆ ಹೋಗುವೆ... ಅಥವಾ, ಇಲ್ಲ, ನಾಳೆ ಬೇಡ. ನಾಳೆ ಮನೆಯಲ್ಲೇ ಇದ್ದು ಬರಿ, ಗೊತ್ತಾಯಿತಾ? ನಾನು ಹೋಗಿ ನಿನಗೆ ಕೊಟ್ಟಿರುವ ಕೆಲಸ ಎಂತಹುದು, ತುರ್ತಿನದೇ ಇಲ್ಲವೇ, ಸಕಾಲದಲ್ಲಿ ಮುಗಿಸಬೇಕೇ ಅಥವಾ ತಡವಾಗಬಹುದೇ, ತಡವಾದರೆ ಪರಿಣಾಮ ಏನು, ಎಲ್ಲವನ್ನೂ ಕಂಡುಹಿಡಿಯುತ್ತೇನೆ. ಆಮೇಲೆ ನಿನ್ನ ಬಳಿಗೆ ಬೇಗ ಬರು ತ್ತೇನೆ. ಏನು? ಗೊತ್ತಾಯಿತಾ? ಆಶಾ ಜ್ಯೋತಿ ಇನ್ನೂ ಮಿಣುಗುತ್ತಿದೆ. ನಿನಗೆ ಕೊಟ್ಟಿರುವ ಕೆಲಸ ತುರ್ತಿನದಲ್ಲ ಅಂತ ಭಾವಿಸಿಕೋ – ನಾವು ಗೆಲ್ಲಲು ಸಾಧ್ಯ ವಿದೆ. ಯೂಲಿಯಾನ್ ಮಸ್ತಾಕೊವಿಚ್‌ರು ಏನೂ ಹೇಳದೇ ಇರಬಹುದು, ಆಗ ಎಲ್ಲ ಬಚಾವಾದಂತೆ."

ವಾಸ್ಯ ತಲೆಯನ್ನು ಸಂದೇಹದಿಂದ ಆಡಿಸಿದ. ಆದರೆ ಅವನ ಕೃತಜ್ಞತಾಪೂರ್ಣ ನೋಟ ತನ್ನ ಮಿತ್ರನ ಮುಖವನ್ನು ಬಿಟ್ಟುಹೋಗಲೇ ಇಲ್ಲ.

"ಸಾಕು, ಸಾಕು! ನನಗೆ ತುಂಬ ನಿಶ್ಶಕ್ತಿಯಾಗಿದೆ. ನಾನು ತುಂಬ ಬಳಲಿ ದ್ದೇನೆ" ಅವನು ಒಂದೇ ಉಸಿರಿನಲ್ಲಿ ಹೇಳಿದ. "ಅದರ ಬಗೆಗೆ ಈಗ ಯೋಚನೆ ಮಾಡಲೂ ನನಗೆ ಇಷ್ಟವಿಲ್ಲ. ಬೇರೆ ಯಾವುದಾದರೂ ವಿಷಯ ಮಾತನಾಡೋಣ. ನೋಡು, ಈಗ ನಾನು ಹೆಚ್ಚಿಗೆ ಏನೂ ಬರೆಯೋಕೆ ಹೋಗೊಲ್ಲ. ಒಂದೆರಡು ಪುಟ ಬರೆದು, ಯಾವುದಾದರೂ ಸರಿಯಾದ ಸ್ಥಳದಲ್ಲಿ ನಿಲ್ಲಿಸುತ್ತೇನೆ. ಅದು ಸರಿ ಕಣೋ... ನಾನು ತುಂಬ ಸಮಯದಿಂದ ನಿನ್ನನ್ನು ಕೇಳಬೇಕೂಂತ ಇದ್ದೆ! ನೀನು ನನ್ನನ್ನು ಹೇಗೆ ಇಷ್ಟು ಚೆನ್ನಾಗಿ ತಿಳಿದಿದ್ದೀಯ?"

ವಾಸ್ಯನ ಕಣ್ಣುಗಳಿಂದ ಹರಿದು ಬಂದ ಕಂಬನಿ ಅರ್ಕಾದಿಯ ಕೈಯ ಮೇಲೆ ಬಿದ್ದಿತು.

"ವಾಸ್ಯ, ನಾನು ನಿನ್ನನ್ನು ಎಷ್ಟು ಇಷ್ಟಪಡುತ್ತೀನಿ ಅನ್ನುವುದು ನಿನಗೆ ತಿಳಿದಿದ್ದರೆ ನೀನು ಈ ಪ್ರಶ್ನೆ ಕೇಳುತ್ತಿರಲಿಲ್ಲ ಕಣೋ !"

"ಹೌದು, ಹೌದು, ಅರ್ಕಾದಿ ! ನನಗದು ಗೊತ್ತಿಲ್ಲ, ಏಕೆಂದರೆ.... ಏಕೆಂದರೆ ನೀನು ಯಾಕೆ ನನ್ನನ್ನು ಇಷ್ಟು ಇಷ್ಟಪಡುವಂತಾಗಿದ್ದೀಯೋ ನನಗೆ ತಿಳಿಯದು ! ಓಹ್, ಅರ್ಕಾದಿ. ನಿನ್ನ ಈ ಪ್ರೀತಿಯೇ ನನ್ನನ್ನು ಕೊಲ್ಲುತ್ತಿದ್ದಿತು, ಅನ್ನುವುದು ನಿನಗೆ ಗೊತ್ತೆ? ನಾನು ಎಷ್ಟು ಸಾರಿ, ಅದರಲ್ಲೂ ಮಲಗಿ ನಿನ್ನ ಬಗೆಗೆ ಯೋಚಿಸಿದಾಗ (ಏಕೆಂದರೆ ನಾನು ನಿದ್ರೆ ಮಾಡಲು ಹೋದಾಗಲೆಲ್ಲ ನಿನ್ನ ಬಗೆಗೇ ಯೋಚಿಸುತ್ತೇನೆ), ಕಣ್ಣೀರು ಸುರಿಸಿದ್ದೇನೆಂಬುದು ನಿನಗೆ ಗೊತ್ತೆ? ನನ್ನ ಹೃದಯ ಹಿಂಡಿದಂತಾಗುತ್ತಿತ್ತು, ಏಕೆಂದರೆ.... ಏಕೆಂದರೆ, ನೀನು ನನ್ನನ್ನು ಇಷ್ಟೊಂದು ಪ್ರೀತಿಸುತ್ತಿರುವೆ, ಆದರೆ ನಾನು ಅದಕ್ಕೆ ನನ್ನ ಕೃತಜ್ಞತೆಯ ಭಾವನೆಗಳನ್ನು ವ್ಯಕ್ತಪಡಿಸಲು, ನಿನಗೆ ಧನ್ಯವಾದ ಸಲ್ಲಿಸಲು, ಯಾವ ಮಾರ್ಗವೂ ಇಲ್ಲವಲ್ಲ, ಎಂದು."

"ನೋಡಿದಿಯಾ, ನೀನು ಎಂಥವನು, ವಾಸ್ಯ, ನೋಡಿದೆಯಾ? ನೋಡಿದೆಯಾ ಎಷ್ಟು ಕ್ಷೋಭೆಗೊಂಡಿದ್ದೀಯ ನೀನು, ಈಗ?" ಅರ್ಕಾದಿ ಹೇಳಿದ, ಹಿಂದಿನ ದಿನ ಬೀದಿಯಲ್ಲಿ ನಡೆದ ಆ ಘಟನೆಯನ್ನು ನೆನಪಿಸಿಕೊಂಡು ಅವನ ಹೃದಯದಿಂದ ರಕ್ತ ಚಿಮ್ಮುವಂತಾಯಿತು.

"ಸರಿಯಪ್ಪ, ಅರ್ಕಾದಿ. ನಾನು ಸಮಾಧಾನ ಮಾಡಿಕೊಳ್ಳಬೇಕು ಅಂತ ನೀನು ಇಷ್ಟಪಡುತ್ತೀಯ. ಆದರೆ ನಾನು ನನ್ನ ಜೀವಮಾನದಲ್ಲೇ ಇಷ್ಟು ಸಂತೋಷದಿಂದ, ಶಾಂತಿಯಿಂದ ಇದ್ದುದಿಲ್ಲ ! ನಿನಗೆ ಗೊತ್ತಾ?... ಕೇಳು, ನಾನು ಎಲ್ಲವನ್ನೂ ನಿನಗೆ ಹೇಳಲು ಇಷ್ಟಪಡುತ್ತೀನಿ, ಆದರೆ ನಿನ್ನನ್ನು ಎಲ್ಲಿ ವ್ಯಸನಕ್ಕೆ ಒಳಪಡಿಸುತ್ತೀನೋ ಅಂತ ನನಗೆ ಯಾವತ್ತೂ ಅಂಜಿಕೆ... ನೀನೇ ಸದಾಕಾಲವೂ ನಿನ್ನನ್ನು ಕ್ಷೋಭೆಗೊಳಪಡಿಸಿಕೊಂಡು ನನ್ನ ಮೇಲೆ ಎಗರಾಡುತ್ತಿದ್ದೀಯ. ಅದು ನನ್ನನ್ನು ಗಾಬರಿಗೊಳಿಸುತ್ತೆ... ನೋಡು, ನಾನೀಗ ಹೇಗೆ ನಡುಗುತ್ತಿದ್ದೇನೆ ! ಯಾಕೆ ಅನ್ನೋದೆ ನನಗೆ ಗೊತ್ತಿಲ್ಲ. ಈಗ ನೋಡು ಇದನ್ನೇ ನಾನು ನಿನಗೆ ಹೇಳಬಯಸುವುದು. ಇದಕ್ಕೆ ಮುನ್ನ ನಾನು ನನ್ನನ್ನೇ ತಿಳಿದಿರಲಿಲ್ಲ ಅಂತ ಕಂಡುಬರುತ್ತೆ. ಹೌದು, ಬೇರೆ ಎಲ್ಲರನ್ನೂ ನಾನು ನಿನ್ನೆಯಷ್ಟೆ ತಿಳಿಯುವಂತಾದೆ. ನಾನು ಭಾವಶೂನ್ಯನಾಗಿದ್ದೆ, ಜ್ಞಾನಶೂನ್ಯನಾಗಿದ್ದೆ, ಅರ್ಕಾದಿ. ನನ್ನ ಹೃದಯ... ನನ್ನೊಳಗೆ ಗಡುಸಾಗಿದ್ದಿತು. ನೋಡು, ಈ ಜಗತ್ತಿನಲ್ಲಿ ನಾನು ಯಾರಿಗೂ ಎಂದೂ ಯಾವ ರೀತಿಯ ಉಪಕಾರವನ್ನೂ ಮಾಡಿಲ್ಲವೆಂದೇ ನನಗನಿಸಿತು. ಏಕೆಂದರೆ ಉಪಕಾರ ಮಾಡಲು ನಾನು ಅಸಮರ್ಥನಾಗಿದ್ದೆ. ನನ್ನ ಈ ರೂಪೇ ಅಪ್ರಿಯವಾದುದಾಗಿದೆ.

ಆದರೂ ಎಲ್ಲರೂ ನನಗೆ ಕರುಣೆಯನ್ನೇ ತೋರಿದ್ದಾರೆ! ಎಲ್ಲರಿಗಿಂತ ಮೊದಲು – ನೀನು! ನಾನು ಇದನ್ನು ಕಾಣಲಿಲ್ಲ ಅಂದುಕೊಂಡೆಯಾ. ಸುಮ್ಮನೆ ಮೌನ ದಿಂದ ಇದ್ದೆ, ಅಷ್ಟೆ!"

"ವಾಸ್ಯ, ಸಾಕು ಮಾಡೋ!"

"ಯಾಕೋ, ಅರ್ಕಾಷ? ಯಾಕೋ? ನಾನು ಸುಮ್ಮನೆ..." ವಾಸ್ಯ ಉಕ್ಕು ತ್ತಿದ್ದ ಕಣ್ಣೀರಿನ ಮಧ್ಯೆ ಕಷ್ಟದಿಂದ ಹೇಳಿದ. "ನಾನು ನಿನಗೆ ನಿನ್ನೆ ಯೂಲಿಯಾನ್ ಮಸ್ತಾಕೊವಿಚ್‌ರ ವಿಷಯ ಹೇಳಿದೆನಲ್ಲ. ನೋಡು, ಅವರು ಎಷ್ಟು ಕಟ್ಟು ನಿಟ್ಟು, ಎಷ್ಟು ನಿಷ್ಠುರರು ಅನ್ನೋದು ನಿನಗೂ ಗೊತ್ತು, ನನಗೂ ಗೊತ್ತು. ನಿನ್ನಲ್ಲೂ ಎಷ್ಟೋ ಸಾರಿ ತಪ್ಪು ಕಂಡುಹಿಡಿದಿದ್ದಾರೆ. ಆದರೂ ನನ್ನ ಜೊತೆ ಮಾತ್ರ ನಿನ್ನೆ ಸಂತೋಷದಿಂದ ಇದ್ದರು, ವಿಶ್ವಾಸದಿಂದ ಇದ್ದರು. ಬೇರೆ ಎಲ್ಲರಿಂದಲೂ ವಿವೇಕದಿಂದಲೇ ಮುಚ್ಚಿರಿಸಿರುವಂಥ ತಮ್ಮ ಹೃದಯದ ಕಾರುಣ್ಯವನ್ನು ಅವರು ನನಗೆ ತೆರೆದು ತೋರಿಸಿದರು."

"ಅಂದರೆ ಏನು ಅರ್ಥವೋ, ವಾಸ್ಯ! ನೀನು ನಿನ್ನ ಸಂತೋಷಕ್ಕೆ ಅರ್ಹ ಅನ್ನೋದನ್ನಷ್ಟೆ ಅದು ತೋರಿಸುತ್ತದೆ."

"ಓಹ್, ಅರ್ಕಾಷ! ಈ ಕೆಲಸವನ್ನು ಎಲ್ಲವನ್ನೂ ಮುಗಿಸಬೇಕೆಂದು ನಾನು ಎಷ್ಟು ಬಯಸಿದ್ದೆ! ಇಲ್ಲ, ನನಗೆ ಗೊತ್ತು, ನಾನು ನನ್ನ ಸ್ವಂತ ಸುಖವನ್ನೇ ಹಾಳು ಮಾಡಿಕೊಳ್ಳುತ್ತಿದ್ದೇನೆ! ನನಗೇನೋ ಹಾಗೆಂದು ಮುನ್ನರಿವು ಆಗುತ್ತಿದೆ. ಓಹ್ ಇಲ್ಲ, ಅದರಿಂದಾಗಿ ಅಲ್ಲ" ವಾಸ್ಯ ಹೇಳಿದ, ಅರ್ಕಾದಿ ಮೇಜಿನ ಮೇಲಿದ್ದ ತುರ್ತು ಕೆಲಸದ ನೋಟುಪುಸ್ತಕಗಳ ರಾಶಿಯತ್ತ ಬೀರಿದ ಓರೆನೋಟವನ್ನು ತಡೆಹಿಡಿ ಯುತ್ತ. "ಅದೇನೂ ಅಲ್ಲ. ಅದಷ್ಟು ಕಾಗದಗಳ ಕಂತೆ ಅಷ್ಟೆ... ಹೊಲಸು! ಅದು ತೀರ್ಮಾನವಾದ ವಿಷಯ. ನಾನು... ಅರ್ಕಾಷ, ನಾನು ಇವತ್ತು ಅಲ್ಲಿಗೆ ಹೋಗಿದ್ದೆ ಕಣೋ, ಅವರ ಮನೆಗೆ. ಆದರೆ ಒಳಗೆ ಹೋಗಲಿಲ್ಲ, ಗೊತ್ತಾ. ಮನಸ್ಸು ತುಂಬ ಖಿನ್ನವಾಗಿತ್ತು, ಕಟುವಾಗಿತ್ತು! ಬಾಗಿಲ ಹೊರಗೇ ಸ್ವಲ್ಪ ಹೊತ್ತು ನಿಂತು ಬಂದು ಬಿಟ್ಟೆ. ಅವಳು ಪಿಯಾನೋ ನುಡಿಸುತ್ತಿದ್ದಳು. ಕೇಳಿದೆ. ಆದರೆ ನೋಡೋ, ಅರ್ಕಾದಿ" ಎಂದು ಅವನು ತನ್ನ ಧ್ವನಿಯನ್ನು ತಳಮು ಟ್ಟಕ್ಕಿಳಿಸುತ್ತ, "ಒಳಗೆ ಹೋಗುವ ಧೈರ್ಯ ನನಗೆ ಬರಲಿಲ್ಲವೋ."

"ಅಲ್ಲವೋ, ವಾಸ್ಯ, ಏನಾಗಿದೆಯೋ ನಿನಗೆ? ನನ್ನನ್ನು ಯಾಕೆ ಹಾಗ ನೋಡ್ತಿ ದೀಯೋ?"

"ಏನಂದೆ? ಓಹ್, ಏನೂ ಇಲ್ಲ! ನನಗೆ ಯಾಕೋ ತುಂಬ ನಿಶ್ಶಕ್ತಿ ಆದಂತೆ ಕಾಣುತ್ತಿದೆ, ನನ್ನ ಕಾಲು ನಡುಗುತ್ತಿದೆ. ರಾತ್ರಿಯೆಲ್ಲ ಎದ್ದು ಕೂತಿದ್ದೆನಲ್ಲ, ಅದಕ್ಕಿರಬೇಕು. ಈಗ ನನ್ನ ಕಣ್ಣಿನ ಮುಂದೆ ಎಲ್ಲ ಹಸುರಾಗಿ ಕಾಣಿಸುತ್ತಿದೆ. ಇಲ್ಲಿ, ಇಲ್ಲಿ..."

ಅವನು ತನ್ನ ಕೈಯನ್ನು ತನ್ನ ಹೃದಯಕ್ಕೆ ಅದುಮಿ ಹಿಡಿದ. ಮೂರ್ಛೆ ಹೋದ.

ವಾಸ್ಯ ಮತ್ತೆ ಪ್ರಜ್ಞೆ ಪಡೆದುಕೊಂಡಾಗ ಅರ್ಕಾದಿ ಬಲವಂತದ ಕ್ರಮಗಳನ್ನು ಕೈಗೊಳ್ಳಲು ಸಿದ್ಧನಾಗಿದ್ದ. ವಾಸ್ಯನನ್ನು ಹಾಸಿಗೆಯಲ್ಲಿ ಮಲಗಿಸಲು ಯತ್ನಿಸಿದ. ಆದರೆ ವಾಸ್ಯ ಪೂರ್ಣವಾಗಿ ನಿರಾಕರಿಸಿದ, ಅತ್ತ. ಕೈ ಕೈ ಹಿಸುಕಿಕೊಂಡ. ಅವನು ಬರೆಯ ಬಯಸಿದ್ದ. ಎರಡು ಪುಟಗಳನ್ನು ಬರೆಯುವ ನಿರ್ಧಾರ ಮಾಡಿದ್ದ. ಅವನನ್ನು ಮತ್ತಷ್ಟು ಕೆರಳಿಸದಿರಲೆಂದು ಅರ್ಕಾದಿ ಅವನನ್ನು ಬರೆಯಲು ಬಿಟ್ಟುಕೊಟ್ಟ.

"ನೋಡು" ವಾಸ್ಯ ಹೇಳಿದ ತನ್ನ ಕುರ್ಚಿಯ ಮೇಲೆ ಕೂರುತ್ತ. "ನೋಡು, ನನಗೊಂದು ವಿಚಾರ ಹೊಳೆಯುತ್ತಿದೆ. ನಮಗೆ ಇನ್ನೂ ಆಸೆ ಇದೆ ಕಣೋ."

ಹಾಗೆಂದು ಅವನು ಅರ್ಕಾದಿಯನ್ನು ನೋಡುತ್ತ ಮುಗುಳ್ನಕ್ಕ. ಅವನ ನಿಸ್ತೇಜ ಮುಖ ವಾಸ್ತವವಾಗಿ ಆಶಾಕಿರಣವೊಂದರಿಂದ ಬೆಳಗಿದಂತೆ ಕಂಡುಬಂದಿತು.

"ಇಲ್ಲಿ ಕೇಳು. ನಾನು ಮಾಡಿದ್ದು ಕೆಲಸದ ಒಂದು ಭಾಗವನ್ನಷ್ಟೇ ಅವರಿಗೆ ತೆಗೆದುಕೊಂಡು ಹೋಗಿ ಕೊಡುವುದು. ಉಳಿದ ಕಾಗದಗಳೆಲ್ಲ ಸುಟ್ಟು ಹೋದವು, ಅಥವಾ ಒದ್ದೆಯಾಗಿ ಹೋದವು, ಅಥವಾ ಕಳೆದು ಹೋದವು ಅಂತ ಏನಾದರೂ ಸುಳ್ಳು ಹೇಳಿ ಬಿಡುತ್ತೇನೆ... ಅಥವಾ ನಾನು ಮುಗಿಸಿಲ್ಲ ಅಂತಾನೇ ಹೇಳುತ್ತೇನೆ. ನನಗೆ ಸುಳ್ಳು ಹೇಳಲು ಆಗುವುದಿಲ್ಲ. ಅವರಿಗೆ ಎಲ್ಲವನ್ನೂ ನಾನೇ ವಿವರಿಸಿ ಹೇಳುತ್ತೇನೆ. ಏನು ಗೊತ್ತ? ಎಲ್ಲವನ್ನೂ ವಿವರಿಸಿ ಹೇಳುತ್ತೇನೆ. ಅದು ಹೀಗಾಯಿತು, ನನಗೆ ಮುಗಿಸುವುದಕ್ಕೆ ಆಗಲಿಲ್ಲ, ಅಂತ ಹೇಳುತ್ತೇನೆ... ನನ್ನ ಪ್ರೇಮದ ವಿಷಯವನ್ನೂ ಹೇಳುತ್ತೇನೆ. ಎಷ್ಟೇ ಆಗಲಿ ಅವರೂ ಮೊನ್ನೆಮೊನ್ನೆಯಷ್ಟೆ ಮದುವೆಯಾದವರು. ನನ್ನನ್ನು ಅರ್ಥಮಾಡಿಕೊಳ್ಳುತ್ತಾರೆ. ನಾನು ಎಲ್ಲವನ್ನೂ ತುಂಬ ಗೌರವದೊಂದಿಗೆ ಸದ್ದಿಲ್ಲದೆ ಮಾಡುತ್ತೇನೆ. ಅವರು ನನ್ನ ಕಣ್ಣೀರು ನೋಡುತ್ತಾರೆ. ಅದು ಅವರ ಮನಸ್ಸನ್ನು ಕರಗಿಸುತ್ತೆ."

"ಸರಿ, ಹಾಗೇ ಮಾಡು. ಅವರ ಬಳಿಗೆ ಹೋಗಿ ವಿವರಿಸಿ ತಿಳಿಸು... ಆದರೆ ಅಳುವ ಆವಶ್ಯಕತೆಯೇ ಇಲ್ಲ ಕಣೋ ! ಯಾತಕ್ಕೆ ಅಳಬೇಕು ? ನಿಜಕ್ಕೂ, ವಾಸ್ಯ, ನೀನು ನನ್ನನ್ನೂ ತುಂಬ ಗಾಬರಿಗೊಳಿಸಿಬಿಟ್ಟೆ."

"ಹೌದು, ನಾನು ಹೋಗುತ್ತೇನೆ, ಹೋಗುತ್ತೇನೆ. ಈಗ ಬರೆಯಲು ಬಿಡು, ಅರ್ಕಾಷ, ಬರೆಯಲು ಬಿಡು. ನಾನು ಯಾರಿಗೂ ತೊಂದರೆ ಕೊಡೋಲ್ಲ. ಬರೆಯಲು ಅವಕಾಶ ಕೊಡು !"

ಅರ್ಕಾದಿ ಹಾಸಿಗೆಯ ಮೇಲೆ ಹೋಗಿ ಮಲಗಿದ. ಅವನಿಗೆ ವಾಸ್ಯನ ಮಾತಿ

ನಲ್ಲಿ ನಂಬಿಕೆ ಇಲ್ಲ. ಸ್ವಲ್ಪವೂ ನಂಬಿಕೆ ಇಲ್ಲ. ವಾಸ್ಯ ಏನು ಬೇಕಾದರೂ ಮಾಡುವ ಸ್ಥಿತಿಯಲ್ಲಿದ್ದ. ಆದರೆ ಹೋಗಿ ಕ್ಷಮೆ ಕೇಳುವುದು – ಯಾತಕ್ಕಾಗಿ? ಹೇಗೆ? ಅದು ಮುಖ್ಯ ವಿಷಯವಲ್ಲ. ಮುಖ್ಯ ವಿಷಯವೆಂದರೆ, ವಾಸ್ಯ ತನ್ನ ಕರ್ತವ್ಯ ವನ್ನು ಮಾಡುವುದರಲ್ಲಿ ವಿಫಲನಾಗಿದ್ದ. ಅವನು ತನ್ನ ಬಗ್ಗೆಯೇ ಅಪರಾಧದ ಭಾವನೆ ಹೊಂದಿದ್ದ. ತನ್ನ ನಕ್ಷತ್ರ ಅದೃಷ್ಟದ್ದು. ಆದರೆ ತಾನು ಅದಕ್ಕೆ ಕೃತಘ್ನ ನಾಗಿದ್ದಾನೆ, ಎಂದವನು ಭಾವಿಸಿದ್ದ. ಅವನು ತನಗೆ ಲಭಿಸಿದ್ದ ಸುಖಸಂತೋ ಷದ ಭಾರದ ಕೆಳಗೆ ಸಿಕ್ಕಿ ನಜ್ಜುಗುಜ್ಜಾಗಿದ್ದ, ದಿಗ್ಭ್ರಾಂತನಾಗಿದ್ದ. ತಾನು ಅದಕ್ಕೆ ಅನರ್ಹನೆಂದು ಪರಿಗಣಿಸಿದ್ದ. ತನ್ನ ಅನರ್ಹತೆಯ ಬಗೆಗೇ ಹೇಳುತ್ತ ಹೋಗು ವುದಕ್ಕೆ ಅವನು ಒಂದು ನೆಪವನ್ನಷ್ಟೆ ಕಂಡುಕೊಂಡಿದ್ದ. ನಿನ್ನೆಯ ಅನಿರೀಕ್ಷಿತ ಘಟನೆಗಳಿಂದ ಕ್ಷೋಭೆಗೊಂಡಿದ್ದ ಅವನಿನ್ನೂ ಸಮಾಧಾನ ಸ್ಥಿತಿಗೆ ಬಂದಿರಲಿಲ್ಲ. "ಹೌದು, ಈಗಾಗಿರುವುದು ಅದೇಯೇ!" ಅರ್ಕಾದಿ ಇವಾನೊವಿಚ್ ಅಂದು ಕೊಂಡ. ಅವನನ್ನು ಉಳಿಸಲೇ ಬೇಕು. ಅವನು ತನ್ನೊಂದಿಗೇ ಸರಿಹೊಂದಿಸಿ ಕೊಳ್ಳುವಂತೆ ಮಾಡಬೇಕು. ಅವನು ತನ್ನ ಸ್ವಂತ ಚರಮಗೀತೆಯನ್ನು ಹಾಡು ತ್ತಿದ್ದಾನೆ." ಅವನು ಹೀಗೆಯೇ ತುಂಬ ಹೊತ್ತು ಯೋಚಿಸಿದ. ಕೊನೆಗೆ, ಬೆಳಿಗ್ಗೆ ಆಗುತ್ತಿದ್ದಂತೆಯೇ ತಾನು ಯೂಲಿಯಾನ್ ಮಸ್ತಾಕೊವಿಚ್‌ರ ಬಳಿಗೆ ಹೋಗಿ ಅವರಿಗೆ ಎಲ್ಲವನ್ನೂ ವಿವರಿಸಿ ತಿಳಿಸಬೇಕು, ಎಂಬ ತೀರ್ಮಾನಕ್ಕೆ ಬಂದ.

ವಾಸ್ಯ ಕುಳಿತು ಬರೆಯುತ್ತಿದ್ದ. ಬಳಲಿದ್ದ ಅರ್ಕಾದಿ ಇವಾನೊವಿಚ್ ವಿಷಯ ವನ್ನು ಮತ್ತೆ ಪರ್ಯಾಲೋಚಿಸಬೇಕೆಂದು ಹಾಸಿಗೆಯ ಮೇಲೆ ಒರಗಿದ, ಹಾಗೆಯೇ ನಿದ್ದೆ ಹೋಗಿಬಿಟ್ಟ. ಎದ್ದಾಗ ಆಗಲೇ ಬೆಳಗಾಗಿತ್ತು.

"ಅಯ್ಯೋ, ಹಾಳಾದವನೇ! ಮತ್ತೆ!" ಅವನು ಹೇಳಿದ, ಇನ್ನೂ ಬರೆಯು ವುದರಲ್ಲೇ ತೊಡಗಿದ್ದ ವಾಸ್ಯನತ್ತ ನೋಡುತ್ತ.

ಅರ್ಕಾದಿ ಅವನ ಬಳಿಗೆ ಓಡಿದ, ಅವನನ್ನು ತನ್ನ ಕೈಗಳಿಂದ ಹಿಡಿದೆತ್ತಿ ಬಲವಂತವಾಗಿ ಹಾಸಿಗೆಯ ಮೇಲೆ ಮಲಗಿಸಿದ. ವಾಸ್ಯ ಮುಗುಳ್ನಕ್ಕ. ಅವನ ಕಣ್ಣುಗಳು ನಿಶ್ಶಕ್ತಿಯಿಂದ ಮುಚ್ಚಿದವು. ಅವನಿಗೆ ಮಾತನಾಡಲೂ ಆಗುತ್ತಿರ ಲಿಲ್ಲ.

"ನಾನೂ ಮಲಗೋಣ ಅಂದುಕೊಂಡೇ ಇದ್ದೆ" ಅವನೆಂದ. "ನೋಡೋ, ಅರ್ಕಾದಿ. ನನಗೊಂದು ವಿಚಾರ ಬಂದಿದೆ. ನಾನು ಮುಗಿಸುತ್ತೇನೆ ಕಣೋ. ಈಗ ಸ್ವಲ್ಪ ಬೇಗ ಬೇಗ ಬರೆಯೋ ಹಾಗೆ ಕೈ ಕುದುರಿದೆ. ಈಗ ಹೆಚ್ಚಿಗೆ ಕುಳಿತಿರಲು ಸಾಧ್ಯವಿರುತ್ತಿರಲಿಲ್ಲ ಅನ್ನು. ಎಂಟು ಗಂಟೆಗೆ ಸರಿಯಾಗಿ ಎಬ್ಬಿಸಿಬಿಡು."

ಅವನ ಕೊನೆಯ ಮಾತುಗಳು ಕೇಳಿಸಲಾಗದಷ್ಟು ದುರ್ಬಲವಾಗಿದ್ದವು. ಅವನು ಗಾಢ ನಿದ್ರೆ ಹೋದ.

"ಮಾವ್ರಾ !" ಎಂದು ಟೀ ತೆಗೆದುಕೊಂಡು ಬಂದ ಅವಳಿಗೆ ಅರ್ಕಾದಿ ಪಿಸು ಮಾತಿನಲ್ಲಿ ಹೇಳಿದ: "ಅವನು ಇನ್ನೊಂದು ಗಂಟೆಗೆ ಎಬ್ಬಿಸಿಬಿಡು ಅಂತ ಹೇಳಿದಾನೆ. ಆದರೆ ಖಂಡಿತವಾಗಿಯೂ ಕೂಡದು! ಅವನು ಬೇಕಾದರೆ ಹತ್ತು ಗಂಟೆ ಮಲ ಗಿರಲಿ, ಎಬ್ಬಿಸಬೇಡ. ತಿಳಿಯಿತಾ?"

"ತಿಳಿಯಿತು, ಸ್ವಾಮಿ ಎಬ್ಬಿಸೊಲ್ಲ."

"ಅಡಿಗೆ-ಗಿಡಗೆ ಏನೂ ಮಾಡುವುದಕ್ಕೆ ಹೋಗಬೇಡ. ಸೌದೆ ತಂದು ಆ ಕಡೆ ಈ ಕಡೆ ಇಟ್ಟು ಶಬ್ದ ಮಾಡಬೇಡ. ಹಾಗೇನಾದರೂ ಮಾಡಿದರೆ ಭಾರಿ ತೊಂದರೆಯೇ ಆಗುತ್ತೆ! ಅವನು ಎದ್ದು ನನ್ನ ವಿಷಯ ಕೇಳಿದರೆ, ನಾನು ಆಫೀ ಸಿಗೆ ಹೋಗಿದೀನಿ ಅಂತ ಹೇಳು, ತಿಳಿಯಿತಾ?"

"ತಿಳಿಯಿತು, ಸ್ವಾಮಿ. ಹಾಗೆಯೇ ಹೇಳ್ತೀನಿ. ಅವರು ಬೇಕಾದಷ್ಟು ಕಾಲ ನಿದ್ರೆ ಮಾಡಲಿ, ನನಗೇನಂತೆ. ನಮ್ಮ ಯಜಮಾನರು ಚೆನ್ನಾಗಿ ನಿದ್ರೆ ಮಾಡ ಬೇಕು ಅನ್ನೋದೇ ನನ್ನ ಇಷ್ಟ. ನಾನು ಅವರ ವಸ್ತುಗಳ ಮೇಲೆ ಚೆನ್ನಾಗಿ ನಿಗಾ ಇಟ್ಟಿರುತ್ತೇನೆ. ನಾನು ಮೊನ್ನೆ ಲೋಟ ಒಡೆದು ಹಾಕಿದೆ ಅಂತ ನೀವು ಬಯ್ದಿರಲ್ಲ, ಅದು ನಾನು ಒಡೆದಿದ್ದಲ್ಲ, ಬೆಕ್ಕು. ಅದು ಹೇಗೆ ಒಡೀತೋ ನನಗೆ ಗೊತ್ತಿಲ್ಲ. ಶನಿ ಬೆಕ್ಕೇ, ಹಾಳಾಗಿ ಹೋಗು ಅಂದೆ."

"ಷ್‌ಷ್ ! ಮುಚ್ಚು ಬಾಯಿ. ಮಾತನಾಡಬೇಡ !"

ಅರ್ಕಾದಿ ಇವಾನೊವಿಚ್ ಮಾವ್ರಳನ್ನು ಅಡಿಗೆಮನೆಯ ಒಳಕ್ಕೆ ಹೋಗು ವಂತೆ ಹೇಳಿ, ಬೀಗದ ಕೈಯನ್ನು ಇಸಿದುಕೊಂಡು ಬೀಗ ಹಾಕಿದ. ಆಮೇಲೆ ಅವನು ತನ್ನ ಆಫೀಸಿಗೆ ಹೋದ. ಹೋಗುತ್ತ ಮಾರ್ಗದಲ್ಲಿ, ಯೂಲಿಯಾನ್ ಮಸ್ತಾ ಕೊವಿಚ್‌ರನ್ನು ಸಂಧಿಸುವ ಅತ್ಯುತ್ತಮ ವಿಧಾನ ಯಾವುದು, ಸಂಧಿಸುವುದು ಸರಿಯೇ ಅಥವಾ ನನ್ನದು ಪ್ರತಿಷ್ಠೆ ಎಂದು ತಿಳಿದುಕೊಳ್ಳುತ್ತಾರೋ, ಎಂದು ಚಿಂತಿಸಿದ. ಆಫೀಸಿಗೆ ಹೋದಾಗ ಅವನಿಗೆ ಪುಕ ಪುಕ ಅನಿಸುತ್ತಿತ್ತು. ಅಂಜುತ್ತಲೇ, ದೊಡ್ಡ ಸಾಹೇಬರು ಬಂದಿದಾರಾ ಎಂದು ವಿಚಾರಿಸಿದ. ಇನ್ನೂ ಬಂದಿಲ್ಲ, ಅಂದು ಬರುವುದೇ ಇಲ್ಲ, – ಎಂದು ಅವನಿಗೆ ತಿಳಿಸಲಾಯಿತು. ಅರ್ಕಾದಿ ಇವಾ ನೊವಿಚ್ ಕೂಡಲೇ ಅವರ ಮನೆಗೆ ಹೋಗಲು ಬಯಸಿದ. ಆದರೆ ಅವರು ಆಫೀಸಿಗೆ ಬಂದಿಲ್ಲ ಅಂದರೆ ಮನೆಯಲ್ಲೇ ಯಾವುದೋ ತುರ್ತಿನ ಕೆಲಸದಲ್ಲಿ ನಿರತರಾಗಿರುತ್ತಾರೆ, ಎಂದು ಅವನಿಗೆ ಥಟ್ಟನೆ ಸರಿಯಾದ ವಿಚಾರ ಹೊಳೆಯಿತು. ಹಾಗಾಗಿ ಅವನು ಆಫೀಸಿನಲ್ಲೇ ಉಳಿದ. ಸಮಯ ನಿಧಾನವಾಗಿ ಕೊನೆಯಿಲ್ಲ ದಂತೆ ಎಳೆದುಕೊಂಡು ಹೋಗುತ್ತಿದ್ದಂತೆ ಅವನಿಗೆ ಅನಿಸಿತು. ಷುಮ್ಕೋವ್‌ಗೆ ನೀಡಲಾಗಿದ್ದ ಕೆಲಸದ ಬಗೆಗೆ ಸುದ್ದಿ ಸಂಗ್ರಹಿಸಲು ಅವನು ಗುಟ್ಟಾಗಿ ಯತ್ನಿಸಿದ. ಅದರ ಬಗೆಗೆ ಯಾರಿಗೂ ಏನೂ ತಿಳಿದಿರಲಿಲ್ಲ. ಯೂಲಿಯಾನ್ ಮಸ್ತಾಕೊವಿಚ್‌ರು

ಷುವ್ಕೋವ್‌ಗೆ ವಿಶೇಷ ಕೆಲಸ ನೀಡಿದ್ದರು ಎಂದಷ್ಟೆ ಅವರು ತಿಳಿದಿದ್ದರು. ಆದರೆ ಅದು ಎಂತಹ ಕೆಲಸವಾಗಿದ್ದಿತು ಎಂಬುದನ್ನು ಯಾರೂ ಹೇಳದಾಗಿದ್ದರು. ಕೊನೆಗೆ ಮೂರು ಗಂಟೆ ಹೊಡೆಯಿತು. ಅರ್ಕಾದಿ ಇವಾನೊವಿಚ್ ಮನೆಗೆ ಧಾವಿಸಿದ. ಹೋಗುತ್ತಿದ್ದಾಗ ಹಜಾರದಲ್ಲಿ ಗುಮಾಸ್ತನೊಬ್ಬ ಅವನನ್ನು ತಡೆದು ನಿಲ್ಲಿಸಿ, ವಾಸೀಲಿ ಪಿತ್ರೋವಿಚ್ ಷುವ್ಕೋವ್ ಹನ್ನೆರಡು ಗಂಟೆಯ ಸುಮಾರಿನಲ್ಲಿ ಆಫೀಸಿಗೆ ಬಂದಿದ್ದನೆಂದೂ, ಅರ್ಕಾದಿ ಇವಾನೊವಿಚ್ ಆಫೀಸಿನಲ್ಲಿದ್ದಾನೆಯೇ, ಯೂಲಿಯಾನ್ ಮಸ್ತಾಕೊವಿಚ್‌ರು ಬಂದಿದ್ದಾರೆಯೇ ಎಂದೂ, ಕೇಳಿದನೆಂದು ಹೇಳಿದ. ಇದನ್ನು ಕೇಳಿದ ಕೂಡಲೇ ಅರ್ಕಾದಿ ಇವಾನೊವಿಚ್ ಗಾಡಿಯೊಂದನ್ನು ಬಾಡಿಗೆಗೆ ತೆಗೆದುಕೊಂಡು ಮನೆಗೆ ಶೀಘ್ರವಾಗಿ ಹೋದ. ಅವನು ಗಾಬರಿಯಿಂದ ತಬ್ಬಿಬ್ಬಾಗಿದ್ದ.

ಷುವ್ಕೋವ್ ಮನೆಯಲ್ಲೇ ಇದ್ದ. ಅವನು ತುಂಬ ಕ್ಷೋಭೆಗೊಂಡವನಂತೆ ಕೋಣೆಯಲ್ಲಿ ಶತಪಥ ತಿರುಗುತ್ತಿದ್ದ. ಅರ್ಕಾದಿ ಇವಾನೊವಿಚ್‌ನನ್ನು ಕಂಡ ಕೂಡಲೇ ತನ್ನನ್ನು ಸಮಾಧಾನ ಸ್ಥಿತಿಗೆ ತಂದುಕೊಳ್ಳಲು, ಶಾಂತನಾಗಲು ಯತ್ನಿಸಿದ. ತನ್ನ ಕ್ಷೋಭೆಯನ್ನೆ ಮುಚ್ಚಿಡಲು ಯತ್ನಿಸಿದ. ಮಾತನಾಡದೆ ಬರೆಯುವ ಕೆಲಸಕ್ಕೆ ಕುಳಿತ. ತನ್ನ ಮಿತ್ರನ ಪ್ರಶ್ನೆಗಳನ್ನು ತಪ್ಪಿಸಲು ಬಯಸಿದ್ದಂತೆ ಅವನು ಕಂಡುಬಂದ. ಪ್ರಶ್ನೆಗಳಿಂದ ಅವನು ರೋಸಿ ಹೋಗಿದ್ದ. ತಾನು ಯಾವುದೋ ತೀರ್ಮಾನಕ್ಕೆ ಬಂದಿದ್ದ. ಅದನ್ನು ತನ್ನಲ್ಲೇ ಇರಿಸಿಕೊಳ್ಳಲು ನಿರ್ಧರಿಸಿದ್ದ. ಏಕೆಂದರೆ ಗೆಳೆತನವೂ ಇನ್ನೆಷ್ಟು ಮಾತ್ರವೂ ನಂಬಲು ಅರ್ಹವಲ್ಲ ಎಂದು ಅವನಿಗೆ ಅನಿಸಿತ್ತು. ಇದು ಅರ್ಕಾದಿಯನ್ನು ಬೆರಗಾಗಿಸಿತು. ಅವನ ಹೃದಯವು ವೇದನೆಯ ಚುಚ್ಚುವ ನೋವಿನಿಂದ ಚಡಪಡಿಸಿತು. ಕೈಗೆ ಸಿಕ್ಕಿದ ಯಾವುದೋ ಪುಸ್ತಕವನ್ನು ತೆಗೆದುಕೊಂಡು ಹಾಸಿಗೆಯ ಮೇಲೆ ಕುಳಿತ. ಆದರೆ ತನ್ನ ನತದೃಷ್ಟ ಸ್ನೇಹಿತನಿಂದ ದೃಷ್ಟಿಯನ್ನು ಕೀಳಲಿಲ್ಲ. ಆದರೆ ವಾಸ್ಯ ಮೊಂಡುತನದಿಂದ ಮೌನವಾಗಿಯೇ ಇದ್ದ. ಬರೆಯುತ್ತಲೇ ಇದ್ದ. ತಲೆ ಎತ್ತಿ ನೋಡಲೂ ಇಲ್ಲ. ಹೀಗೆ ಹಲವಾರು ಗಂಟೆಗಳು ಕಳೆದವು. ಅರ್ಕಾದಿಯ ಬೇಗುದಿ ಉನ್ನತ ಸ್ಥಾಯಿಗೇರಿತು. ಕೊನೆಗೆ ಸುಮಾರು ಹತ್ತು ಗಂಟೆಯಾಗಿದ್ದಾಗ ವಾಸ್ಯ ತನ್ನ ತಲೆ ಎತ್ತಿ ಅರ್ಕಾದಿಯತ್ತ ಮಂಕಾದ ಬಿರುನೋಟ ಬೀರಿದ. ಅರ್ಕಾದಿ ಚಲಿಸಲಿಲ್ಲ. ಎರಡು ಮೂರು ನಿಮಿಷ ಕಳೆಯಿತು. ವಾಸ್ಯ ಜಡವಾಗಿ ಕುಳಿತಿದ್ದ. "ವಾಸ್ಯ !" ಅರ್ಕಾದಿ ಕೂಗಿದ. ವಾಸ್ಯ ಓಗೊಡಲಿಲ್ಲ. "ವಾಸ್ಯ !" ಅವನು ಮತ್ತೆ ಕೂಗಿದ, ಹಾಸಿಗೆಯ ಮೇಲಿನಿಂದ ನೆಗೆದು ನಿಂತು. "ವಾಸ್ಯ, ಏನಾಯಿತೋ ನಿನಗೆ ? ಏನೋ ಇದು ?" ಅವನ ಬಳಿಗೆ ಓಡಿ ಹೋಗುತ್ತ ಕೇಳಿದ. ವಾಸ್ಯ ತಲೆ ಎತ್ತಿ ಮತ್ತೆ ಅದೇ ಮಂಕಾದ ಬಿರುನೋಟದಿಂದ ಅವನತ್ತ ನೋಡಿದ. "ಇವನು ಸಿಕ್ಷೇಪ್ಷಿತನಾಗಿದ್ದಾನೆ !"

ಅರ್ಕಾದಿ ಅಂದುಕೊಂಡ. ಹೆದರಿ ನಡುಗಿದ. ನೀರಿನ ಪಾತ್ರೆ ತೆಗೆದುಕೊಂಡು ವಾಸ್ಯನನ್ನು ಕುರ್ಚಿಯಲ್ಲೇ ಎತ್ತರವಾಗಿ ಕುಳಿತುಕೊಳ್ಳುವಂತೆ ಎಳೆದು ಹಿಡಿದು ಕೊಂಡು ಅವನ ತಲೆಯ ಮೇಲೆ ಸ್ವಲ್ಪ ನೀರು ಹಾಕಿದ, ಕೆನ್ನೆಗಳನ್ನು ಒದ್ದೆ ಮಾಡಿದ, ಅವನ ಕೈಗಳನ್ನು ತನ್ನ ಕೈಗಳ ಮಧ್ಯೆ ಇರಿಸಿಕೊಂಡು ಉಜ್ಜಿದ. ವಾಸ್ಯ ಪ್ರಜ್ಞೆ ಪಡೆದುಕೊಂಡ. "ವಾಸ್ಯ ! ವಾಸ್ಯ !" ಎಂದು ಅರ್ಕಾದಿ ಕೂಗಿ ಕರೆದ, ಕಂಬನಿಯನ್ನು ತಡೆ ಹಿಡಿಯಲಾಗದೆ. "ವಾಸ್ಯ, ನಿನ್ನ ಜೀವನವನ್ನು ಹಾಳು ಮಾಡಿ ಕೊಳ್ಳಬೇಡ, ಕಣೋ. ನೆನಪಿನಲ್ಲಿಡು, ನೆನಪಿನಲ್ಲಿಡು !" ಅವನಿಗೆ ಇನ್ನೂ ಹೆಚ್ಚು ಹೇಳಲಾಗಲಿಲ್ಲ. ತನ್ನ ತೋಳುಗಳಲ್ಲಿ ಅವನನ್ನು ಒತ್ತಿಹಿಡಿದುಕೊಂಡ. ವಾಸ್ಯನ ಮುಖದ ಮೇಲೆ ಏನೋ ನೋವಿನ ಭಾವನೆ ಮಿಂಚಿ ಮರೆಯಾಯಿತು. ಅವನು ತನ್ನ ಹಣೆಯನ್ನು ಉಜ್ಜಿಕೊಂಡು ತಲೆಯನ್ನು ಅದು ಸಿಡಿಯಬಹುದೇನೋ ಎಂದು ಅಂಜಿದವನಂತೆ ತನ್ನೆರಡೂ ಕೈಗಳಿಂದ ಬಿಗಿಯಾಗಿ ಹಿಡಿದುಕೊಂಡ.

"ನನಗೆ ಏನಾಗುತ್ತಿದೆಯೋ ನನಗೇ ಗೊತ್ತಿಲ್ಲ !" ಅವನೆಂದ ಕೊನೆಗೆ. "ಬಹುಶಃ ನಾನು ನನ್ನನ್ನೇ ಮಿತಿಮೀರಿದ ತುಯ್ತಕ್ಕೆ ಗುರಿಪಡಿಸಿಕೊಂಡೆನೆಂದು ನನಗ ನಿಸುತ್ತೆ. ಓಹ್, ಪರವಾಗಿಲ್ಲ ಕಣೋ, ಅರ್ಕಾದಿ. ಅಷ್ಟೊಂದು ಏನೂ ಹೆದರಿ ಕೊಳ್ಳಬೇಡ !" ಅವನೆಂದ ಅರ್ಕಾದಿಯತ್ತ ವ್ಯಸನದಿಂದ ತುಂಬಿದ ಬಳಲಿದ ಕಣ್ಣುಗಳಿಂದ ನೋಡುತ್ತ. "ಯೋಚನೆ ಮಾಡೋಕೆ ಏನೂ ಕಾರಣವಿಲ್ಲ ಕಣೋ !"

"ವಾಸ್ಯ, ನೀನು ನನ್ನನ್ನು ಸಮಾಧಾನ ಮಾಡ್ತಿದೀಯ !" ಅರ್ಕಾದಿ ಹೇಳಿದ. ಅವನ ಹೃದಯ ಒಡೆಯುವಂತೆ ಡಬಡಬನೆ ಬಡಿದುಕೊಳ್ಳುತ್ತಿತ್ತು. "ವಾಸ್ಯ" ಅವನೆಂದ ಕೊನೆಗೆ. "ಮಲಗಿಕೊಳ್ಳೋ ಸ್ವಲ್ಪ ನಿದ್ರೆ ಮಾಡೋಕೆ ಯತ್ನಿಸೋ. ಏನಂತಿ ? ಅನವಶ್ಯವಾಗಿ ನಿನ್ನನ್ನೇ ಹಿಂಸಿಸಿಕೊಳ್ಳಬೇಡವೋ. ಆಮೇಲೆ ಬೇಕಾ ವರೆ ಮತ್ತೆ ಕೆಲಸ ಮಾಡುವಿಯಂತೆ."

"ಆಗಲಿ, ಆಗಲಿ" ವಾಸ್ಯ ಪದೇಪದೇ ಹೇಳಿದ. "ನೀನು ಹೇಳಿದ ಹಾಗೆಯೇ ಆಗಲಿ. ನಾನು ಮಲಗಿಕೊಳ್ಳುತ್ತೇನೆ. ಸರಿ. ಹೌದು, ನೋಡು ನಾನು ಮುಗಿಸ ಬೇಕೂಂತ ಇದ್ದೆ, ಆದರೆ ಈಗ ಮನಸ್ಸು ಬದಲಿಸಿದ್ದೇನೆ. ಹೌದು..."

ಅರ್ಕಾದಿ ಅವನನ್ನು ಹಾಸಿಗೆಯ ಬಳಿಗೆ ಎಳೆದೊಯ್ದ.

"ಇಲ್ಲಿ ಕೇಳು, ವಾಸ್ಯ" ಅವನೆಂದ ದೃಢವಾದ ಸ್ವರದಲ್ಲಿ. "ಈ ವಿಷಯ ವನ್ನು ನಾವು ಕೊನೆಯದಾಗಿ ತೀರ್ಮಾನಿಸಬೇಕು, ಕಣೋ ! ಹೇಳು, ಏನು ನಿನ್ನ ಮನಸ್ಸನ್ನು ಕಾಡಿಸುತ್ತಿರೋದು ?"

"ಓಹ್ !" ವಾಸ್ಯ ತನ್ನ ನಿಶ್ಶಕ್ತ ಕೈಯನ್ನೊಮ್ಮೆ ಗಾಳಿಯಲ್ಲಿ ಆಡಿಸಿ ಮುಖ ವನ್ನು ಅತ್ತ ತಿರುಗಿಸಿದ.

"ಸಾಕು ಕಣೋ, ವಾಸ್ಯ, ಸಾಕು ! ನೀನು ಹೇಳಲೇ ಬೇಕು ! ನನಗೆ ನಿನ್ನ

ಕೊಲೆಗಾರನಾಗುವ ಇಚ್ಛೆಯಿಲ್ಲ. ನಾನು ಇನ್ನೂ ಹೆಚ್ಚು ಕಾಲ ಸುಮ್ಮನಿರಲಾರೆ. ನೀನು ನನಗೆ ನಿನ್ನ ಮನಸ್ಸನ್ನು ಕೊರೆಯುತ್ತಿರುವುದನ್ನೆಲ್ಲ ಮೊದಲು ಹೇಳಿದ ಹೊರತು ನಿನಗೆ ನಿದ್ರೆ ಮಾಡಲು ಆಗುವುದಿಲ್ಲ, ನನಗೆ ಗೊತ್ತು."

"ನಿನ್ನಿಷ್ಟ, ನಿನ್ನಿಷ್ಟ" ಎಂದ ವಾಸ್ಯ ಒಗಟು ಮಾತನಾಡುವವನಂತೆ.

"ಪರವಾಗಿಲ್ಲ, ಮಾತು ಕೇಳುವಂತಾದ" ಅಂದುಕೊಂಡ ಅರ್ಕಾದಿ ಇವಾನೊವಿಚ್.

"ನನ್ನ ಮಾತು ಕೇಳು, ವಾಸ್ಯ" ಅವನೆಂದ. "ನಾನು ಏನು ಹೇಳಿದೆ ಅನ್ನೋದನ್ನು ಜ್ಞಾಪಕದಲ್ಲಿಟ್ಟುಕೋ. ನಾನು ನಾಳೆ ನಿನ್ನನ್ನು ರಕ್ಷಿಸುತ್ತೇನೆ. ನಾಳೆ ನಿನ್ನ ಗತಿಯನ್ನು ನಿನಗಾಗಿ ತೀರ್ಮಾನಿಸುತ್ತೇನೆ! ಓಹ್, ನಾನೇನು ಹೇಳಿದೆ: ಗತಿ! ನೀನು ನನ್ನನ್ನು ಎಷ್ಟು ಹೆದರಿಸಿಬಿಟ್ಟಿದ್ದೀಯ ಅಂದರೆ ನಾನೂ ನಿನ್ನ ರೀತಿಯಲ್ಲೇ ಮಾತನಾಡುವುದಕ್ಕೆ ಶುರು ಮಾಡಿದೀನಿ. ಗತಿ, ನಿಜಕ್ಕೂ! ಅದೆಲ್ಲ ಶುದ್ಧ ಹೊಲಸು, ಅರ್ಥವಿಲ್ಲದ್ದು! ಯೂಲಿಯಾನ್ ಮಸ್ತಾಕೊವಿಚ್‌ರ ಅನುಗ್ರಹವನ್ನು, ಅಥವಾ ನೀನು ಹೀಗೆ ಹೇಳಬಯಸುವುದಾದರೆ, ಅವರ ವಿಶ್ವಾಸವನ್ನು ಕಳೆದುಕೊಳ್ಳಲು ನಿನಗೆ ಇಷ್ಟವಿಲ್ಲ, ಅಷ್ಟೇ ಅಲ್ಲವೇ ಸಮಸ್ಯೆ? ನೀನೇನೂ ಕಳೆದುಕೊಳ್ಳುವುದಿಲ್ಲ. ನೀನೇ ನೋಡುವಿಯಂತೆ. ನಾನು... ನಾನು..."

ಅರ್ಕಾದಿ ಇವಾನೊವಿಚ್ ಇನ್ನೂ ಹೆಚ್ಚು ಮಾತನಾಡುತ್ತಲೇ ಹೋಗುವವನಿದ್ದ, ಆದರೆ ವಾಸ್ಯ ಅವನ ಮಾತನ್ನು ಮೊಟಕು ಮಾಡಿದ. ಅವನು ಹಾಸಿಗೆಯಿಂದೆದ್ದು ಅರ್ಕಾದಿಯನ್ನು ಅಪ್ಪಿಕೊಂಡ, ಮುದ್ದಾಡಿದ.

"ಬೇಡ, ಬೇಡ" ಅವನೆಂದ ಸಣ್ಣಗೆ. "ಬೇಡ. ಹೆಚ್ಚಿಗೆ ಹೇಳಬೇಡ!" ಹಾಗೆಂದು ಅವನು ಮತ್ತೆ ಮುಖವನ್ನು ಗೋಡೆಯ ಕಡೆಗೆ ತಿರುಗಿಸಿದ.

"ಅಯ್ಯೋ, ದೇವರೇ!" ಅರ್ಕಾದಿ ತನ್ನಲ್ಲೇ ಹೇಳಿಕೊಂಡ. "ಅಯ್ಯೋ ದೇವರೇ! ಇದೇನು? ಇವನು ಸಂಪೂರ್ಣವಾಗಿ ನಷ್ಟವಾದಂತೆ ಕಾಣಿಸುತ್ತಾನೆ. ಏನು ಮಾಡಬೇಕೂಂತ ತೀರ್ಮಾನಿಸಿದ್ದಾನೋ? ತನ್ನನ್ನು ತಾನೇ ಕೊಂದುಕೊಳ್ಳುತ್ತಾನೆ!"

ಅರ್ಕಾದಿ ಅವನತ್ತ ಹತಾಶನಾಗಿ ನೋಡಿದ.

"ಇವನು ಕಾಯಿಲೆಯಾದರೂ ಬಿದ್ದರೆ" ಅಂದುಕೊಂಡ ಅರ್ಕಾದಿ. "ಅದೇ ಹೆಚ್ಚು ಉತ್ತಮ ಅನಿಸುತ್ತೆ. ಕಾಯಿಲೆಯೊಂದಿಗೆ ಅವನ ಕಾತುರತೆ ಎಲ್ಲ ಕೊನೆಗಾಣುತ್ತೆ. ಆ ಹೊತ್ತಿಗೆ ವಿಷಯ ತುಂಬ ತೃಪ್ತಿಕರವಾದ ರೀತಿಯಲ್ಲಿ ತೀರ್ಮಾನವಾಗಿರುತ್ತೆ. ಓಹ್, ನಾನೇನು ಹುಚ್ಚು ಮಾತನಾಡುತ್ತಿದ್ದೇನೆ! ಓಹ್, ಭಗವಂತ!"

ಈ ಮಧ್ಯೆ ವಾಸ್ಯನಿಗೆ ಜೋಂಪು ಹಿಡಿದಿದ್ದಂತೆ ಕಂಡುಬಂದಿತು. ಅರ್ಕಾದಿ

ಇವಾನೊವಿಚ್‌ನಿಗೆ ಸಮಾಧಾನವಾಯಿತು. "ಒಳ್ಳೆಯ ಸೂಚನೆ" ಅವನೆಂದು ಕೊಂಡ. ವಾಸ್ಯನ ಪಕ್ಕದಲ್ಲೇ ಇಡೀ ರಾತ್ರಿ ಕುಳಿತಿರಬೇಕೆಂದು ಅವನು ನಿರ್ಧರಿಸಿದ. ವಾಸ್ಯ ಹಾಸಿಗೆಯಲ್ಲಿ ಚಡಪಡಿಸುತ್ತಿದ್ದ. ಪದೇ ಪದೇ ಮಗ್ಗಲು ಬದಲಿಸುತ್ತಿದ್ದ, ಹೊರಳಾಡುತ್ತಿದ್ದ, ನರಕ್ಷೋಭೆಗೊಂಡವನಂತೆ ಮೈಯನ್ನು ಸೆಟೆದುಕೊಳ್ಳು ವಂತೆ ಮಾಡುತ್ತಿದ್ದ. ಒಂದು ಘಳಿಗೆ ಕಣ್ಣು ಬಿಟ್ಟ. ಕೊನೆಗೆ ದಣಿವೇ ಮೇಲುಗೈ ಪಡೆಯಿತು. ಅವನು ಗಾಢ ನಿದ್ರೆ ಹೋದಂತೆ ಕಂಡುಬಂದ. ಆಗ ಮುಂಜಾನೆ ಎರಡು ಗಂಟೆಯಾಗಿತ್ತು. ಅರ್ಕಾದಿ ಇವಾನೊವಿಚ್‌ನೂ ಕುರ್ಚಿಯಲ್ಲಿ ಕುಳಿತೇ ಮೊಳಕೈಯನ್ನು ಮೇಜಿನ ಮೇಲೆ ಊರಿಕೊಂಡು ನಿದ್ರೆ ಹೋದ.

ಅವನ ನಿದ್ರೆ ಚಂಚಲವಾಗಿತ್ತು, ವಿಚಿತ್ರವಾಗಿತ್ತು. ತಾನು ನಿದ್ರೆ ಮಾಡು ತ್ತಲೇ ಇರಲಿಲ್ಲವೆಂದೂ ವಾಸ್ಯ ಹಿಂದಿನಂತೆಯೇ ಹಾಸಿಗೆಯಲ್ಲೇ ಮಲಗಿದ್ದು ದಾಗಿಯೂ ಅವನು ಕಲ್ಪಿಸಿಕೊಂಡ. ಆದರೆ ಎಷ್ಟು ವಿಚಿತ್ರ! ವಾಸ್ಯ ನಿದ್ರೆ ಮಾಡುತ್ತಿರುವುದಾಗಿ ಸೋಗು ಹಾಕುತ್ತಿದ್ದನಷ್ಟೆ, ವಾಸ್ತವವಾಗಿ ತನಗೆ ಮೋಸ ಮಾಡುತ್ತಿದ್ದಾನೆ, ಜಾಗರೂಕತೆಯಿಂದ ಎದ್ದು ತನ್ನನ್ನೇ ಕಿರಿದು ಕಣ್ಣುಗಳಿಂದ ಗಮನಿಸುತ್ತ ಮೇಜಿನತ್ತ ಕದ್ದು ಹೋಗುತ್ತಿದ್ದ, ಎಂದು ಅವನಿಗೆ ಕಂಡು ಬಂದಿತು. ಸುಡುವಂಥ ನೋವು ಅರ್ಕಾದಿಯ ಹೃದಯವನ್ನು ಭೇದಿಸಿತು. ವಾಸ್ಯ ತನ್ನನ್ನು ಇನ್ನೆಷ್ಟು ಮಾತ್ರವೂ ನಂಬುತ್ತಿಲ್ಲ, ತನ್ನಿಂದ ಏನನ್ನೋ ಮುಚ್ಚಿ ಇರಿಸುತ್ತಿದ್ದಾನೆ, ಎಂಬುದನ್ನು ಕಂಡು ಅವನು ಘಾಸಿಗೊಂಡ, ದುಃಖಿತನಾದ, ವ್ಯಸನಪಟ್ಟ. ಅವನು ವಾಸ್ಯನತ್ತ ಕೂಗಲು ಯತ್ನಿಸಿದ, ತನ್ನ ತೋಳುಗಳಲ್ಲಿ ಅವನನ್ನು ಹಿಡಿದುಕೊಂಡು ಹಾಸಿಗೆಗೆ ಮತ್ತೆ ಕರೆತರಲು ಯತ್ನಿಸಿದ. ಆದರೆ ವಾಸ್ಯ ಕೂಗಿಕೊಂಡ. ಅಯ್ಯೋ, ಇದೇನು ತಾನು ವಾಸ್ಯನ ಮೃತದೇಹವನ್ನು ಹಾಸಿಗೆಗೆ ತಂದು ಮಲಗಿಸುತ್ತಿದ್ದೇನಲ್ಲ ಎಂಬ ಭಾವನೆ ಅರ್ಕಾದಿಗಾಯಿತು. ಅರ್ಕಾದಿಯ ಹಣೆಯ ಮೇಲೆ ತಣ್ಣಗಿನ ಬೆವರ ಹನಿಗಳು ಮೂಡಿದವು. ಅವನ ಹೃದಯ ಹುಚ್ಚುಹುಚ್ಚಾಗಿ ಬಡಿದುಕೊಳ್ಳತೊಡಗಿತು. ಕಣ್ಣು ತೆರೆದ. ಚೆನ್ನಾಗಿ ಎಚ್ಚರಗೊಂಡ. ವಾಸ್ಯ ಮೇಜಿನ ಮುಂದೆ ಕುಳಿತು ಬರೆಯುತ್ತಿದ್ದುದು ಅವನಿಗೆ ಕಂಡುಬಂದಿತು.

ತನ್ನ ಕಣ್ಣುಗಳನ್ನೇ ತಾನು ನಂಬಲಾಗದೆ ಅರ್ಕಾದಿ ಹಾಸಿಗೆಯತ್ತ ನೋಡಿದ. ವಾಸ್ಯ ಅಲ್ಲಿರಲಿಲ್ಲ. ಅರ್ಕಾದಿ ಗಾಬರಿಯಿಂದ ಜಿಗಿದುನಿಂತ. ಅವನು ಇನ್ನೂ ತನ್ನ ಕನಸಿನ ಗುಂಗಿನಲ್ಲಿಯೇ ಇದ್ದ. ವಾಸ್ಯ ಕದಲಲಿಲ್ಲ. ಬರೆಯುತ್ತಲೇ ಇದ್ದ. ಆದರೆ ವಾಸ್ಯ ಕೈಯಲ್ಲಿ ಹಿಡಿದು ಕಾಗದದ ಮೇಲೆ ಆಡಿಸುತ್ತಿದ್ದ ಗರಿಲೇಖನಿಯಲ್ಲಿ ಮಸಿಯೇ ಇರಲಿಲ್ಲ, ಅವನು ಬರೆದು ತಿರುವಿ ಹಾಕುತ್ತಿದ್ದ ಪುಟಗಳು ಸಂಪೂರ್ಣ ವಾಗಿ ಖಾಲಿಯಾಗಿದ್ದವು, ಶುಭ್ರವಾಗಿದ್ದವು, ಅವನು ಕೆಲಸವನ್ನು ಮುಗಿಸಲೋ

ಸುಗ ಅವಸರ ಅವಸರದಿಂದ ಕೈ ಆಡಿಸುತ್ತಿದ್ದ. ತನ್ನ ಕೆಲಸವನ್ನು ತುಂಬ ದಕ್ಷತೆಯಿಂದ ಹಾಗೂ ಯಶಸ್ವಿಯಾಗಿ ನೆರವೇರಿಸುತ್ತಿದ್ದನೋ ಎಂಬಂತೆ, ಎಂಬುದನ್ನು ಅರ್ಕಾದಿ ಥಟ್ಟನೆ ಗಮನಿಸಿ ಭಯಭ್ರಾಂತನಾದ. "ಇಲ್ಲ, ಇದು ಮೂರ್ಛೆ ರೋಗವಲ್ಲ" ಅರ್ಕಾದಿ ಇವಾನೊವಿಚ್ ಅಂದುಕೊಂಡ. ಅವನ ಇಡೀ ಶರೀರ ಕಂಪಿಸಿತು. "ವಾಸ್ಯ, ವಾಸ್ಯ, ನನ್ನ ಜೊತೆ ಮಾತನಾಡು!" ಎಂದು ಅವನು ವಾಸ್ಯನ ಭುಜವನ್ನು ಭದ್ರವಾಗಿ ಹಿಡಿದು ಕೂಗಿ ಹೇಳಿದ. ಆದರೆ ವಾಸ್ಯ ಮಾತನಾಡಲೇ ಇಲ್ಲ. ತನ್ನ ಒಣಗಿದ್ದ ಗರಿಲೇಖನಿಯಿಂದ ಬರೆಯುತ್ತಲೇ ಇದ್ದ.

"ಕೊನೆಗೂ ನಾನು ಬೇಗ ಬೇಗ ಬರೆಯುತ್ತಿದ್ದೇನೆ" ಅವನು ಅರ್ಕಾದಿಯತ್ತ ನೋಡದೆಯೇ ಮಣಗುಟ್ಟಿದ.

ಅರ್ಕಾದಿ ವಾಸ್ಯನ ಕೈಯನ್ನು ಹಿಡಿದು ಗರಿಲೇಖನಿಯನ್ನು ಕಿತ್ತು ತೆಗೆದ.

ವಾಸ್ಯ ನರಳಿದ. ಕೈಯನ್ನು ಕೆಳಗೆ ಚೆಲ್ಲಿ ಅರ್ಕಾದಿಯ ಕಡೆಗೆ ಕಣ್ಣುಗಳನ್ನು ಎತ್ತಿದ. ಆಮೇಲೆ ಬಳಲಿ ವ್ಯಗ್ರಗೊಂಡ ಭಾವನೆಯೊಂದಿಗೆ ಕೈಯಿಂದ ಹಣೆಯನ್ನು ಉಜ್ಜಿಕೊಂಡ, ತನ್ನ ಇಡೀ ದೇಹದ ಮೇಲೆ ಬಿದ್ದು ಕೆಳಕ್ಕೆ ಅವುಕುತ್ತಿದ್ದಂಥ ಯಾವುದೋ ಸೀಸದಂತೆ ಭಾರವಾದ ತೂಕವನ್ನು ಪಕ್ಕಕ್ಕೆ ತಳ್ಳಿಹಾಕುತ್ತಿದ್ದಾನೇನೋ ಎಂಬಂತೆ. ಆಮೇಲೆ ತನ್ನ ತಲೆಯನ್ನು ನಿಧಾನವಾಗಿ ಆಲೋಚನಾಮಗ್ನನಾಗಿ ತನ್ನ ಎದೆಯ ಮೇಲಕ್ಕೆ ತಗ್ಗಿಸಿದ.

"ವಾಸ್ಯ! ವಾಸ್ಯ!" ಅರ್ಕಾದಿ ಇವಾನೊವಿಚ್ ಹತಾಶೆಯಿಂದ ಕೂಗಿದ. "ವಾಸ್ಯ!"

ಒಂದು ನಿಮಿಷವಾದ ಮೇಲೆ ವಾಸ್ಯ ಅವನತ್ತ ತಲೆಯೆತ್ತಿ ನೋಡಿದ. ಅವನ ದೊಡ್ಡ ನೀಲಿ ಕಣ್ಣುಗಳು ಕಂಬನಿಯಿಂದ ತುಂಬಿದ್ದವು. ಅವನ ವಿವರ್ಣವಾದ ಸೌಮ್ಯವಾದ ಮುಖವು ಅನಂತ ಅಳಲನ್ನು ವ್ಯಕ್ತಪಡಿಸುತ್ತಿದ್ದಿತು. ಅವನು ಏನೋ ಪಿಸುಗುಟ್ಟಿದ.

"ಏನು? ಏನು ಹೇಳಿದೆ?" ಅರ್ಕಾದಿ ಅವನ ಮೇಲೆ ಬಾಗಿ ಕೇಳಿದ.

"ನಾನೇನು ತಪ್ಪು ಮಾಡಿದ್ದೇನೆ? ನಾನೇನು ತಪ್ಪು ಮಾಡಿದ್ದೇನೆ, ಈ ಅವಸ್ಥೆಯನ್ನು ಅನುಭವಿಸುವುದಕ್ಕೆ?" ವಾಸ್ಯ ಪಿಸುಗುಟ್ಟುತ್ತಿದ್ದ. "ಯಾತಕ್ಕಾಗಿ? ಇದಕ್ಕೆ ಪಾತ್ರನಾಗಲು ನಾನೇನು ಮಾಡಿದೆ?"

"ವಾಸ್ಯ! ಮಾತಾಡೋ! ಯಾತಕ್ಕೋ ಭಯ, ವಾಸ್ಯ, ಯಾತಕ್ಕೆ ಇಷ್ಟು ಭಯಪಡುತ್ತಿದ್ದೀಯೋ?" ಅರ್ಕಾದಿ ಹತಾಶನಾಗಿ ಕೈ ಹಿಸುಕಿಕೊಳ್ಳುತ್ತ ಕೇಳಿದ.

"ನನ್ನನ್ನೇಕೆ ಸೈನ್ಯಕ್ಕೆ ಕಳುಹಿಸುತ್ತಿದ್ದಾರೆ?" ವಾಸ್ಯ ಹೇಳಿದ, ತನ್ನ ಮಿತ್ರನ ಕಣ್ಣುಗಳನ್ನೇ ನೇರವಾಗಿ ನೋಡುತ್ತ. "ಯಾತಕ್ಕಾಗಿ? ನಾನೇನು ಮಾಡಿದ್ದೇನೆ?"

ಅರ್ಕಾದಿಯ ಮೈ ನವಿರೆದ್ದಿತು. ಅವನು ನಂಬಲು ನಿರಾಕರಿಸಿದ. ಸಂಪೂರ್ಣವಾಗಿ ನಜ್ಜುಗುಜ್ಜಾದಂತೆ ಆದ.

ಆದರೆ ಒಂದು ಕ್ಷಣದಲ್ಲೇ ಚೇತರಿಸಿಕೊಂಡ. "ಪರವಾಗಿಲ್ಲ. ಕಳೆದು ಹೋಗುತ್ತೆ" ಎಂದು ತನಗೇ ಹೇಳಿಕೊಂಡ. ಅವನ ಮುಖ ಬಿಳಚಿಕೊಂಡಿತ್ತು. ರಕ್ತರಹಿತ ತುಟಿಗಳು ಅದುರುತ್ತಿದ್ದವು. ಬೇಗ ಬಟ್ಟೆ ಹಾಕಿಕೊಂಡ. ಓಡಿ ಹೋಗಿ ವೈದ್ಯರನ್ನು ಕರೆತರಲು ಬಯಸಿದ್ದ. ಇದ್ದಕ್ಕಿದ್ದಂತೆ ವಾಸ್ಯ ಅವನನ್ನು ಕೂಗಿ ಕರೆದ. ಅರ್ಕಾದಿ ಅವನ ಬಳಿಗೆ ಹಾರಿ ಹೋಗಿ, ತನ್ನಿಂದ ಕಿತ್ತುಕೊಳ್ಳುತ್ತಿರುವ ಮಗುವನ್ನು ಬಿಡದಂತೆ ಭದ್ರವಾಗಿ ಹಿಡಿದುಕೊಳ್ಳುವ ತಾಯಿಯಂತೆ, ಅವನನ್ನು ತನ್ನೆದೆಗೆ ಭದ್ರವಾಗಿ ಹಿಡಿದುಕೊಂಡ.

"ಅರ್ಕಾದಿ, ಅರ್ಕಾದಿ, ಯಾರಿಗೂ ಹೇಳಬೇಡ! ಕೇಳಿಸ್ತಾ, ನನ್ನ ಪಾಡು ನನ್ನದು! ನಾನೊಬ್ಬನೇ ಅನುಭವಿಸುತ್ತೇನೆ."

"ಯಾಕೋ, ವಾಸ್ಯ, ಸಮಾಧಾನ ಮಾಡಿಕೊಳ್ಳೋ. ಏನು ಹೇಳುತ್ತಿದ್ದೀಯಾ, ಯೋಚನೆ ಮಾಡಿ ನೋಡು!"

ವಾಸ್ಯ ನಿಟ್ಟುಸಿರು ಬಿಟ್ಟ. ಕಣ್ಣೀರು ಅವನ ಕೆನ್ನೆಗಳ ಮೂಲಕ ನಿಧಾನವಾಗಿ ಹರಿಯತೊಡಗಿತು.

"ಅವರು ಅವಳನ್ನೇಕೆ ಕೊಲ್ಲಬೇಕು? ಯಾತಕ್ಕಾಗಿ? ಅವಳದೇನು ತಪ್ಪು?" ಅವನು ಹಿಂಸೆಗೊಳಗಾದ ಹೃದಯವಿದ್ರಾವಕ ಧ್ವನಿಯಲ್ಲಿ ಮಣಗುಟ್ಟಿದ. "ಅಪರಾಧ ನನ್ನದು. ನನ್ನ ಅಪರಾಧ!..."

ಒಂದು ಘಳಿಗೆ ಮೌನದಿಂದಿದ್ದ.

"ಹೋಗಿ ಬರುತ್ತೇನೆ, ನನ್ನ ಪ್ರಿಯತಮೆ, ಹೋಗಿ ಬರುತ್ತೇನೆ!" ಅವನು ಪಿಸುಗುಟ್ಟಿದ, ತನ್ನ ಬಡಪಾಯಿ ತಲೆಯನ್ನು ಆಡಿಸುತ್ತ. ಅರ್ಕಾದಿ ನಡುಗಿದ, ಬೆಚ್ಚಿಬಿದ್ದ, ವೈದ್ಯರನ್ನು ಕರೆತರಲು ಹೊರಗೆ ಧಾವಿಸಲು ತಿರುಗಿದ. "ಹೋಗೋಣ! ಸಮಯವಾಯಿತು!" ವಾಸ್ಯ ಕೂಗಿ ಹೇಳಿದ, ಅರ್ಕಾದಿಯ ಹಠಾತ್ ಚಲನೆಯಿಂದ ಎಚ್ಚೆತ್ತವನಂತೆ. "ಹೋಗೋಣ ನಡೆಯಪ್ಪ, ಹೋಗೋಣ; ನಾನು ಸಿದ್ಧ! ನೀನು ನನ್ನನ್ನು ಕರೆದುಕೊಂಡು ಹೋಗು!" ಅವನು ಮಾತು ನಿಲ್ಲಿಸಿ ಅರ್ಕಾದಿಯತ್ತ ನೊಂದ ಹಾಗೂ ವಿಶ್ವಾಸರಹಿತವಾದ ನೋಟ ಬೀರಿದ.

"ವಾಸ್ಯ, ನನ್ನ ಹಿಂದೆ ಬರಬೇಡವೋ, ದಮ್ಮಯ್ಯ! ನಾನು ವಾಪಸ್ಸು ಬರುತ್ತೇನೆ. ಇಲ್ಲೇ ಕಾದಿರು. ಒಂದು ನಿಮಿಷದಲ್ಲೇ ಬಂದು ಬಿಡುತ್ತೇನೆ. ಕೂಡಲೇ ಬಂದು ಬಿಡುತ್ತೇನೆ" ಅರ್ಕಾದಿ ಇವಾನೊವಿಚ್ ಕೂಗಿ ಹೇಳಿದ, ತನ್ನ ತಲೆಯನ್ನು ಕಳೆದುಕೊಂಡವನಂತೆ. ಟೋಪಿಯನ್ನು ಕೈಯಲ್ಲಿ ಹಿಡಿದುಕೊಂಡು ವೈದ್ಯರಿಗಾಗಿ ಓಡಿದ. ವಾಸ್ಯ ನಮ್ರನಾಗಿ ಕುಳಿತ. ಅವನು ಸಾಧುವಾಗಿದ್ದ, ನಮ್ರನಾಗಿದ್ದ. ಅವನ ಕಣ್ಣುಗಳಷ್ಟೆ ಒಂದು ರೀತಿಯ ಹತಾಶ ನಿರ್ಧಾರದಿಂದ ಬೆಳಗುತ್ತಿದ್ದವು. ಮೇಜಿನ ಮೇಲೆ ಬಿಚ್ಚಿದ ಚಾಕುವೊಂದಿದ್ದಿತೆಂಬುದನ್ನು ನೆನಪಿಗೆ ತಂದುಕೊಂಡ

ಅರ್ಕಾದಿ ಮತ್ತೆ ಮನೆಗೆ ಬಂದು ಅದನ್ನು ತನ್ನ ಜೇಬಿನಲ್ಲಿರಿಸಿಕೊಂಡ. ತನ್ನ ನತದೃಷ್ಟ ಮಿತ್ರನತ್ತ ಕೊನೆಯ ಬಾರಿಗೆ ನೋಡಿದ, ಆಮೇಲೆ ಮನೆಯಿಂದ ಹೊರಗೆ ಧಾವಿಸಿ ಹೊರಟ.

ಆಗಲೇ ಏಳು ಗಂಟೆಯಾಗಿತ್ತು. ಬೆಳಗಿನ ಸೂರ್ಯ ಆಗಲೇ ಬಹಳ ಹಿಂದೆಯೇ ಕೋಣೆಯ ಕತ್ತಲನ್ನು ಹೊಡೆದೋಡಿಸಿದ್ದ.

ಅರ್ಕಾದಿಗೆ ಯಾರೊಬ್ಬ ವೈದ್ಯರೂ ಸಿಗಲಿಲ್ಲ. ಒಂದು ಇಡೀ ಗಂಟೆ ಸುತ್ತಾಡಿದ. ಈ ಮನೆಯಲ್ಲಿ ವೈದ್ಯರಿದ್ದಾರೆಯೇ, ಈ ಮನೆಯಲ್ಲಿ ವೈದ್ಯರಿದ್ದಾರೆಯೇ ಎಂದು ವಿಚಾರಿಸುತ್ತ ಹೋದಾಗ ಕಾವಲುಗಾರರು ನೀಡಿದ ವಿಳಾಸಗಳಿಗೆಲ್ಲ ಹೋಗಿ ನೋಡಿದ. ವೈದ್ಯರೆಲ್ಲ ಆಗಲೇ ತಮ್ಮ ಬೆಳಗಿನ ಸರದಿಯಲ್ಲಿ ರೋಗಿಗಳನ್ನು ನೋಡಲು ಹೊರಟುಹೋಗಿದ್ದರು, ಇಲ್ಲವೇ ತಮ್ಮವೇ ಕೆಲಸಕಾರ್ಯಗಳಲ್ಲಿ ನಿರತರಾಗಿದ್ದರು. ಒಬ್ಬರೇ ಒಬ್ಬ ವೈದ್ಯರು ಈ ವೇಳೆಯಲ್ಲಿ ರೋಗಿಗಳನ್ನು ನೋಡಲು ಸಿದ್ಧರಾಗಿದ್ದುದನ್ನು ಕೊನೆಗೂ ಅವನು ಕಂಡುಹಿಡಿದ. ಆದರೆ ಆ ವೈದ್ಯರು ಮೊದಲು ತಮ್ಮ ಸೇವಕನನ್ನೇ ಪ್ರಶ್ನಿಸಿದರು. ಅವನು ಅವರಿಗೆ ನಿಫಿದ್ಯೇವಿಚ್‌ನ ವಿವರಗಳನ್ನೆಲ್ಲ ತಿಳಿಸಿದ. ಅವನನ್ನು ಯಾರು ಕಳುಹಿಸಿದ್ದರು, ಯಾರು ಮತ್ತು ಏಕೆ, ಯಾವ ಕಾಯಿಲೆ, ಎಂದೆಲ್ಲ ವಿವರಗಳನ್ನು ಕೇಳಿದರು. ಬೆಳಿಗ್ಗೆ ಬಂದ ಈ ಭೇಟಿಕಾರ ಹೇಗೆ ಕಾಣಿಸುತ್ತಾನೆ, ಎಂದೂ ಅವರು ಕೇಳಿದರು. ಇದರ ಫಲವಾಗಿ ಅವರು ಅವನನ್ನು ಕಾಣಲು ಸಾಧ್ಯವಿಲ್ಲವೆಂದು ಹೇಳಿದರು. ಬೇರೆ ಕಡೆಗೆ ಹೋಗಿ ರೋಗಿಯನ್ನು ನೋಡಲು ತಮಗೆ ಬಿಡುವಿಲ್ಲವೆಂದು ಹೇಳಿದರು. ಈ ರೀತಿಯ ರೋಗಿಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕೆಂದು ತಿಳಿಸಿದರು.

ಮನ ನೊಂದು, ಆಶ್ಚರ್ಯಚಕಿತನಾಗಿ, ತನ್ನ ಯತ್ನಗಳೆಲ್ಲ ಈ ರೀತಿಯಲ್ಲಿ ಕೊನೆಗಾಣುವುವೆಂದು ಎಂದೂ ನಿರೀಕ್ಷಿಸದಿದ್ದ ಅರ್ಕಾದಿ ಎಲ್ಲವನ್ನೂ ಬಿಟ್ಟುಕೊಟ್ಟು, ಜಗತ್ತಿನ ಎಲ್ಲ ವೈದ್ಯರನ್ನೂ ಬಿಟ್ಟುಕೊಟ್ಟು, ವಾಸ್ಯನ ಬಗೆಗೆ ಕಾತುರಗೊಂಡವನಾಗಿ ಮನೆಯ ಕಡೆಗೆ ಓಡಿದ. ಮನೆಯೊಳಕ್ಕೆ ನುಗ್ಗಿದ. ಮಾವ್ರಳು ಯಾವ ರೀತಿಯಲ್ಲೂ ತಲ್ಲಣಗೊಂಡಿರದಂತೆ, ಕಸಗುಡಿಸುತ್ತಿದ್ದಳು, ಒಲೆಯನ್ನು ಹೊತ್ತಿಸಲು ಸಿದ್ಧಗೊಳಿಸುತ್ತಿದ್ದಂತೆ, ಕಸಗುಡಿಸುತ್ತಿದ್ದಳು, ಕಟ್ಟಿಗೆ ಒಡೆಯುತ್ತಿದ್ದಳು. ಅವನು ಕೋಣೆಯೊಳಕ್ಕೆ ಹೋದ. ವಾಸ್ಯನ ಸುಳಿವೇ ಇರಲಿಲ್ಲ. ಅವನು ಹೊರಟುಹೋಗಿದ್ದ.

"ಎಲ್ಲಿಗೆ? ಎಲ್ಲಿ? ಎಲ್ಲಿಗೆ ಹೋಗಿರಬಹುದು ಈ ದೌರ್ಭಾಗ್ಯ?" ಅರ್ಕಾದಿ ಆಶ್ಚರ್ಯಪಟ್ಟ. ಅವನ ರಕ್ತ ಭಯದಿಂದ ತಣ್ಣಗಾಯಿತು. ಮಾವ್ರಳನ್ನು ಕೇಳಿದ. ಅವಳಿಗೆ ಏನೂ ಗೊತ್ತಿರಲಿಲ್ಲ, ಏನನ್ನೂ ಕಂಡಿರಲಿಲ್ಲ, ಅವನು ಹೊರಗೆ ಹೋಗುವುದನ್ನು ನೋಡಿಯೂ ಇರಲಿಲ್ಲ, ದೇವರು ಅವನನ್ನು ಕಾಪಾಡಲಿ. ನಿಫಿದ್ಯೇ

ವಿಚ್ ಕೊಲೋಮ್ನಾಗೆ ಧಾವಿಸಿದ. ವಾಸ್ಯ ಅಲ್ಲಿರಬಹುದೆಂದು ಅವನಿಗೆ ಏಕೆ ಅನ್ನಿಸಿತೋ, ದೇವರೇ ಬಲ್ಲ.

ಅವನು ಆ ಸ್ಥಳ ತಲುಪಿದಾಗ ಆಗಲೇ ಒಂಬತ್ತು ದಾಟಿತ್ತು. ಅವನನ್ನು ಕಂಡು ಅವರು ಆಶ್ಚರ್ಯಗೊಂಡರು. ಅವರಿಗೆ ಏನೂ ತಿಳಿದಿರಲಿಲ್ಲ. ಅವನು ಅವರ ಮುಂದೆ ಗಾಬರಿಗೊಂಡು ಆತಂಕಗೊಂಡವನಾಗಿ ನಿಂತ. ವಾಸ್ಯ ಎಲ್ಲಿ ಎಂದು ಕೇಳಿದ. ಹಿರಿಯಾಕೆಯ ಕಾಲುಗಳು ಬಿದ್ದು ಹೋದವು. ಅವಳು ಸೋಫಾದ ಮೇಲೆ ಕುಸಿದಳು. ಗಾಬರಿಯಿಂದ ನಡುಗುತ್ತ ಲೀಸಂಕ ಏನು ಜರುಗಿತು ಎಂಬು ದನ್ನು ಹೇಳುವಂತೆ ಅವನನ್ನು ಕೇಳಿದಳು. ಹೇಳುವುದು ಏನಿದೆ? ಅರ್ಕಾದಿ ಇವಾನೊವಿಚ್ ಆ ಕ್ಷಣದಲ್ಲೇ ಹುಟ್ಟಿಸಿದ ಕಥೆಯೊಂದನ್ನು ಹೇಳಿ ಅವರ ಪ್ರಶ್ನೆ ಯನ್ನು ನಿವಾರಿಸಿದ. ಆದರೆ ಅವರು ಅದನ್ನು ನಂಬಲಿಲ್ಲವೆನ್ನಿ. ಅನಂತರ ಅವನು ಬಾಧೆಗೊಳಗಾದ ಭಾವಪರವಶರಾಗಿದ್ದ ಅವರನ್ನು ಬಿಟ್ಟು ತನ್ನ ಆಫೀಸಿಗೆ ಸಕಾಲದಲ್ಲಿ ಹಾಜರಿರಲು ಮತ್ತು ಅವರಿಗೆ ಎಲ್ಲ ವಿಷಯ ತಿಳಿಸಿ ಅವರು ಸೂಕ್ತ ಕ್ರಮ ಕೈಗೊಳ್ಳುವಂತೆ ಮಾಡಲು, ಧಾವಿಸಿದ. ವಾಸ್ಯನು ಬಹುಶಃ ಯೂಲಿ ಯಾನ್ ಮಸ್ತಾಕೊವಿಚ್‌ರ ಮನೆಗೆ ಹೋಗಿರಬಹುದೆಂಬ ವಿಚಾರ ಅವನಿಗೆ ಹೊಳೆಯಿತು. ಅದು ತುಂಬ ಸಂಭವವಾಗಿದ್ದಿತು! ಅರ್ತೇಮ್ಯೆವ್‌ರ ವಿಷಯ ಯೋಚಿಸುವ ಮುನ್ನವೇ ಅವನಿಗೆ ಈ ವಿಚಾರ ಹೊಳೆದಿದ್ದಿತು. ದೊಡ್ಡ ಸಾಹೇಬರ ಮನೆಯ ಮುಂದೆ ಹೋಗುತ್ತಿದ್ದಾಗ ಅವನು ಬಂಡಿಯವನನ್ನು ನಿಲ್ಲಿಸುವಂತೆ ಹೇಳಿದ. ಆದರೆ ಕೂಡಲೇ ಮುಂದುವರಿಯುವಂತೆ ಆಜ್ಞಾಪಿಸಿದ. ಆಫೀಸಿನಲ್ಲಿ ಈ ವಿಷಯ ಏನಾದರೂ ತಿಳಿದಿದ್ದಿತೆ ಎನ್ನುವುದನ್ನು ಮೊದಲು ಕಂಡುಹಿಡಿ ಯಲು ಅವನು ನಿರ್ಧರಿಸಿದ. ಅನಂತರ, ವಾಸ್ಯ ಅಲ್ಲಿಗೆ ಹೋಗಿರದೆ ಇದ್ದರೆ, ತಾನು ದೊಡ್ಡ ಸಾಹೇಬರ ಬಳಿಗೆ ಸ್ವತಃ ಹೋಗುವನು, ಕೊನೆಯಪಕ್ಷ ವಾಸ್ಯನ ಬಗೆಗೆ ವರದಿ ಮಾಡುವವನಾಗಿಯಾದರೂ ಸರಿ. ಏನೇ ಆಗಲಿ, ಯಾರಾದರೂ ವರದಿ ಮಾಡಲೇ ಬೇಕಿದ್ದಿತಷ್ಟೆ!

ಅವನು ಆಫೀಸಿನಲ್ಲಿ ಹಜಾರ ಪ್ರವೇಶಿಸಿದನೋ ಇಲ್ಲವೋ ಅವನ ಯುವ ಸಹೋದ್ಯೋಗಿಗಳೆಲ್ಲ, ಬಹುಮಟ್ಟಿಗೆ ಪದವಿಯಲ್ಲಿ ಅವನಿಗೆ ಸಮಾನರಾದವರು, ಅವನ ಸುತ್ತ ಮುತ್ತಿಕೊಂಡು ವಾಸ್ಯನ ಬಗೆಗೆ ಪ್ರಶ್ನೆಗಳ ಸುರಿಮಳೆ ಕರೆದರು. ವಾಸ್ಯನಿಗೆ ಬುದ್ಧಿ ಕೆಟ್ಟು ಹೋಗಿದೆ. ತಾನು ತನ್ನ ಕರ್ತವ್ಯದಲ್ಲಿ ಅಸಡ್ಡೆ ತೋರಿ ದುದರಿಂದ ತನ್ನನ್ನು ಸೈನ್ಯಕ್ಕೆ ಕಳುಹಿಸಲಿರುವರೆಂಬ ಹುಚ್ಚು ಹಿಡಿದಿದೆ ಅವನಿಗೆ, ಎಂದು ಎಲ್ಲರೂ ಒಂದೇ ಬಾರಿಗೆ ಅರ್ಕಾದಿಗೆ ಹೇಳಿದರು. ಅರ್ಕಾದಿ ಇವಾನೊವಿಚ್ ಎಲ್ಲ ಕಡೆಗೂ ತಿರುಗಿ ಉತ್ತರ ಹೇಳಿದ, ಅಥವಾ ಯಾರಿಗೂ ಯಾವ ನಿರ್ದಿಷ್ಟ ಉತ್ತರವನ್ನೂ ನೀಡಲಿಲ್ಲ ಎಂದೇ ನಾನು ಹೇಳಬೇಕು. ಅವನು ತಳ್ಳಿಕೊಂಡು

ಒಳ ಕೋಣೆಗಳಿಗೆ ಹೋದ. ವಾಸ್ಯನು ಯೂಲಿಯಾನ್ ಮಸ್ತಾಕೊವಿಚ್‌ರ ಬಳಿ ಇರುವನೆಂದೂ, ಎಲ್ಲರೂ ಅಲ್ಲಿಗೇ ಹೋಗಿದ್ದಾರೆಂದೂ, ಎಸ್ಪೆರ್ ಇವಾನೊವಿಚ್‌ರೂ, ಅಲ್ಲಿಗೆ ಹೋಗಿದ್ದಾರೆಂದೂ, ಮಾರ್ಗಮಧ್ಯೆ ಅವನಿಗೆ ತಿಳಿಸಲಾಯಿತು. ಇದು ಅವನನ್ನು ನಿಲ್ಲುವಂತೆ ಮಾಡಿತು. ಅವನು ಎಲ್ಲಿಗೆ ಹೋಗುತ್ತಿದ್ದ, ಅವನಿಗೆ ಏನು ಬೇಕಿದ್ದಿತು ಎಂದು ಅವನ ಹಿರಿಯ ಅಧಿಕಾರಿಯೊಬ್ಬರು ಅವನನ್ನು ಕೇಳಿದರು. ತನ್ನೊಂದಿಗೆ ಮಾತನಾಡಿದವರ ಮುಖವನ್ನೂ ಗುರುತಿಸದೆಯೇ ಅವನು ವಾಸ್ಯನ ಬಗೆಗೆ ಏನೋ ಗೊಣಗಿ ನೇರವಾಗಿ ದೊಡ್ಡ ಸಾಹೇಬರ ಕೋಣೆಯ ಕಡೆಗೆ ನಡೆದ. ಒಳಗಡೆಯಿಂದ ಯೂಲಿಯಾನ್ ಮಸ್ತಾಕೊವಿಚ್‌ರ ಧ್ವನಿ ಕೇಳ ಬರುತ್ತಿತ್ತು. "ಎಲ್ಲಿಗೆ ಹೋಗುತ್ತಿದ್ದೀಯ?" ಯಾರೋ ಬಾಗಿಲ ಬಳಿ ಕೇಳಿದರು. ಅರ್ಕಾದಿ ಇವಾನೊವಿಚ್ ಬಹುಮಟ್ಟಿಗೆ ಧೈರ್ಯ ಕಳೆದುಕೊಂಡ. ಹಿಂದಿರುಗಲಿದ್ದ, ಆಗ ಹಠಾತ್ತನೆ ಅವನು ತನ್ನ ನತದೃಷ್ಟ ವಾಸ್ಯನನ್ನು ಅರೆತೆರೆದ ಬಾಗಿಲಿನ ಮೂಲಕ ಕಂಡ. ಅವನು ಬಾಗಿಲನ್ನು ಅಗಲವಾಗಿ ತೆರೆಯುವಂತೆ ತಳ್ಳಿ ಒಳಗೆ ಹೋದ. ಕೋಣೆಯಲ್ಲಿ ಗೊಂದಲ ದಿಗ್ಭ್ರಾಂತಿ ರಾಜ್ಯಭಾರ ಮಾಡುತ್ತಿದ್ದವು. ಯೂಲಿಯಾನ್ ಮಸ್ತಾಕೊವಿಚ್‌ರು ತುಂಬ ಕಳವಳಕ್ಕೊಳಗಾಗಿದ್ದಂತೆ ಕಂಡು ಬರುತ್ತಿದ್ದರು. ಹೆಚ್ಚು ಮುಖ್ಯರಾದ ವ್ಯಕ್ತಿಗಳು ಅವರಿಗೆ ಸಮೀಪದಲ್ಲೇ ಪಕ್ಕದಲ್ಲಿ ನಿಂತಿದ್ದರು. ವಿಷಯ ಚರ್ಚಿಸುತ್ತ ಅವರು ಯಾವುದೇ ತೀರ್ಮಾನಕ್ಕೆ ಬರದಾಗಿದ್ದರು. ವಾಸ್ಯ ಬೇರೆಯಾಗಿ ನಿಂತಿದ್ದ. ಅವನನ್ನು ಕಂಡಾಗ ಅರ್ಕಾದಿಯ ಹೃದಯ ಕುಸಿಯಿತು. ವಾಸ್ಯ ಅಟೆನ್‌ಷನ್ ಭಂಗಿಯಲ್ಲಿ ಸೆಟೆದು ನಿಂತಿದ್ದ. ಅವನ ಮುಖ ಕಳೆಗುಂದಿತ್ತು. ತಲೆಯನ್ನು ಎತ್ತಿ ನಿಂತಿದ್ದ. ಅವನು ಯೂಲಿಯಾನ್ ಮಸ್ತಾಕೊವಿಚ್‌ರ ಕಣ್ಣುಗಳನ್ನೇ ದಿಟ್ಟಿಸಿ ನೋಡುತ್ತಿದ್ದ. ನಿಫಿದ್ಯೇವಿಚ್‌ನ ಆಗಮನವನ್ನು ತಕ್ಷಣವೇ ಗಮನಿಸಲಾಯಿತು. ಅವರಿಬ್ಬರೂ ಒಟ್ಟಿಗೇ ವಾಸಿಸುತ್ತಿದ್ದರು ಎಂಬುದನ್ನು ತಿಳಿದಿದ್ದ ಯಾರೋ ಅವನು ಬಂದ ಸಂಗತಿಯನ್ನು ದೊಡ್ಡ ಸಾಹೇಬರಿಗೆ ತಿಳಿಸಿದರು. ಅರ್ಕಾದಿಯನ್ನು ಅವರ ಬಳಿಗೆ ಕರೆದೊಯ್ಯಲಾಯಿತು. ಅವನು ಯೂಲಿಯಾನ್ ಮಸ್ತಾಕೊವಿಚ್‌ರತ್ತ ನೋಡಿದ, ತನಗೆ ಹಾಕಲಾಗುವ ಎಲ್ಲ ಪ್ರಶ್ನೆಗಳಿಗೂ ಉತ್ತರ ಹೇಳಲು ಸಿದ್ಧನಾದ. ಆದರೆ ಅವರ ಮುಖದ ಮೇಲೆ ಪ್ರಾಮಾಣಿಕವಾದ ಕರುಣೆ ಒಡೆದು ಮೂಡಿದ್ದುದನ್ನು ಕಂಡಾಗ ಅರ್ಕಾದಿ ಮಗುವಿನಂತೆ ಬಿಕ್ಕಿ ಬಿಕ್ಕಿ ಅಳತೊಡಗಿದ. ಅಷ್ಟೇ ಅಲ್ಲ, ತನ್ನ ಆ ಮೇಲಧಿಕಾರಿಯ ಕೈಯನ್ನು ಹಿಡಿದುಕೊಂಡು ಅದನ್ನು ತನ್ನ ಕಣ್ಣಿನವರೆಗೆ ಕೊಂಡೊಯ್ದು ಅದನ್ನು ತನ್ನ ಕಣ್ಣೀರಿನಿಂದ ತೋಯಿಸಿದ. ಯೂಲಿಯಾನ್ ಮಸ್ತಾಕೊವಿಚ್‌ರವರೇ ತಮ್ಮ ಕೈಯನ್ನು ಅವಸರದಿಂದ ಹಿಂದಕ್ಕೆ ತೆಗೆದುಕೊಂಡು ಕೊಡವಿಕೊಳ್ಳುವ ಒತ್ತಾಯಕ್ಕೊಳಗಾದರು. "ಸಾಕು ಮಾಡೋ, ತಮ್ಮ, ಸಾಕು ಮಾಡು.

ನೀನು ಸಹೃದಯಿ ಅನ್ನುವುದು ನನಗೆ ಕಾಣುತ್ತಿದೆ." ಅರ್ಕಾದಿ ಬಿಕ್ಕಳಿಸಿ ಅಳುತ್ತ ಸುತ್ತಮುತ್ತ ನಿಂತಿದ್ದವರೆಲ್ಲರತ್ತವೂ ಕ್ಷಮೆ ಯಾಚನೆಯ ದೃಷ್ಟಿ ಬೀರಿದ. ತನ್ನ ಬಡಪಾಯಿ ಪಾಸ್ಯನ ಬಗೆಗೆ ಎಲ್ಲರೂ ಸೋದರ ಪ್ರೇಮದ ಭಾವನೆ ಹೊಂದಿದ್ದರು, ಎಲ್ಲರೂ ಅವನಿಗಾಗಿ ವಿಲಪಿಸುತ್ತಿದ್ದರು, ತಳಮಳಿಸುತ್ತಿದ್ದರು, ಎಂದು ಅವನು ನಂಬಿದ್ದ. "ಆದರೆ, ಇದಕ್ಕೇನು ಕಾರಣ? ಅವನಿಗೆ ಯಾಕೆ ಹೀಗಾಯಿತು?" ಯೂಲಿಯಾನ್ ಮಸ್ತಾಕೊವಿಚ್ ಕೇಳಿದರು. "ಅವನಿಗೆ ಬುದ್ಧಿ ಸ್ವಾಧೀನ ಏಕೆ ತಪ್ಪಿತು?"

"ಕೃ-ತ-ಜ್ಞ-ತೆ-ಯಿಂದ!" ಎಂದಷ್ಟೆ ಅರ್ಕಾದಿ ಹೇಳಬಲ್ಲವನಿದ್ದ.

ಅವನ ಉತ್ತರ ಎಲ್ಲರನ್ನೂ ದಿಗ್ಭ್ರಾಂತಿಗೊಳಿಸಿತು. ಅದು ವಿಚಿತ್ರವಾಗಿ ನಂಬಲಾಗದಂತೆ ಕಂಡುಬಂದಿತು: ಕೃತಜ್ಞತೆಯಿಂದ ಯಾರಾದರೂ ಬುದ್ಧಿ ಕೆಡಿಸಿ ಕೊಳ್ಳುವುದು ಸಾಧ್ಯವೇ? ಅರ್ಕಾದಿ ತನಗೆ ಸಾಧ್ಯವಾದಷ್ಟೂ ಹೆಚ್ಚು ಉತ್ತಮ ವಾಗಿ ಅರ್ಥವಾಗುವಂತೆ ವಿವರಿಸಿದ.

"ಅಯ್ಯೋ, ದೇವರೇ! ಎಂಥ ದುಃಖದ ಸಂಗತಿ!" ಯೂಲಿಯಾನ್ ಮಸ್ತಾಕೊವಿಚ್ ಕೊನೆಗೆ ಹೇಳಿದರು. "ಅವನಿಗೆ ಕೊಡಲಾಗಿದ್ದ ಕೆಲಸ ಮುಖ್ಯ ವಾದುದೂ ಆಗಿರಲಿಲ್ಲ, ತುರ್ತಿನದೂ ಆಗಿರಲಿಲ್ಲ. ವಿನಾ ಕಾರಣ ಜೀವನವೊಂದು ಹಾಳಾಯಿತಲ್ಲ! ಓಹ್, ಸರಿ. ಅವನನ್ನು ಕರೆದುಕೊಂಡು ಹೋಗಿ!" ಹಾಗಂದು ಯೂಲಿಯಾನ್ ಮಸ್ತಾಕೊವಿಚ್ ಮತ್ತೊಮ್ಮೆ ಅರ್ಕಾದಿ ಇವಾನೊವಿಚ್‌ನ ಕಡೆಗೆ ತಿರುಗಿ ಇಡೀ ಕಥೆಯನ್ನು ಮತ್ತೆ ಹೇಳುವಂತೆ ಕೇಳಿದರು. "ಅವನು ಕೇಳ್ತಾನೆ" ಅವರು ವಾಸ್ಯನತ್ತ ಬೊಟ್ಟು ಮಾಡುತ್ತ ಹೇಳಿದರು: "ಇದೆಲ್ಲವನ್ನೂ ಯಾರೋ ಒಬ್ಬ ಹುಡುಗಿಗೆ ತಿಳಿಸಬಾರದು, ಅಂತ ಹೇಳುತ್ತಾನಲ್ಲ. ಯಾರು ಆ ಹುಡುಗಿ, ಅವನು ಮದುವೆಯಾಗಲು ನಿಶ್ಚಯಮಾಡಿಕೊಂಡಿರುವವಳೇ?"

ಅರ್ಕಾದಿ ಪರಿಸ್ಥಿತಿಯನ್ನು ವಿವರಿಸತೊಡಗಿದ. ಈ ಮಧ್ಯೆ ವಾಸ್ಯ ಯಾವುದೋ ಆಲೋಚನೆಯಲ್ಲಿ ಮಗ್ನನಾದಂತೆ ಕಂಡುಬಂದ. ಮುಖ್ಯವಾದ, ಅಗತ್ಯವಾದ, ಆ ಘಳಿಗೆಯಲ್ಲಿ ಅವಶ್ಯವಾಗಿದ್ದ ಏನನ್ನೋ ಜ್ಞಾಪಕಕ್ಕೆ ತಂದುಕೊಳ್ಳಲು ಕಷ್ಟ ಪಟ್ಟು ಯತ್ನಿಸುತ್ತಿದ್ದಂತೆ ಕಂಡುಬಂದ. ಆಗೊಮ್ಮೆ ಈಗೊಮ್ಮೆ ಅವನು ತನ್ನ ಕಣ್ಣುಗಳಲ್ಲಿ ಸಂಕಟ ಸೂಚಿಸುತ್ತ ತನ್ನ ಸುತ್ತಮುತ್ತ ನೋಡುತ್ತಿದ್ದ, ತನಗೆ ಮರೆತು ಹೋಗಿದ್ದ ಆ ವಿಷಯವನ್ನು ಯಾರಾದರೂ ನೆನಪಿಗೆ ತರುವರೇನೋ ಎಂದು ಆಶಿಸುತ್ತಿರುವವನಂತೆ. ಅವನ ನೋಟ ಅರ್ಕಾದಿ ಇವಾನೊವಿಚ್‌ನ ಮೇಲೆ ಬಿದ್ದಿತು. ಇದ್ದಕ್ಕಿದ್ದಂತೆ ಅವನ ಕಣ್ಣುಗಳಲ್ಲಿ ಆಶಾಂಕುರ ಮೂಡಿದಂತೆ ಕಂಡುಬಂದಿತು. ಅವನು ನಡೆಯತೊಡಗಿದ. ಎಡ ಹೆಜ್ಜೆ ಮೊದಲು ಮುಂದಿಟ್ಟು ಮೂರು ಹೆಜ್ಜೆ ಮುಂದುವರಿದು ನಿಂತ, ಎಷ್ಟು ಸಾಧ್ಯವೋ ಅಷ್ಟು ಚುರುಕಾಗಿ,

ಮೇಲಧಿಕಾರಿಯ ಆಜ್ಞೆ ಕೇಳಿಕೊಳ್ಳಲು ಬಂದ ಸೈನಿಕನು ಅಟೆನ್‌ಷನ್ ಭಂಗಿಯಲ್ಲಿ ನಿಲ್ಲುವಂತೆ. ನಿಲ್ಲುವಾಗ ಸೈನಿಕನಂತೆ ಇವನೂ ತನ್ನ ಬಲ ಪಾದದ ಹಿಮ್ಮಡಿಯಿಂದ ಶಬ್ದಮಾಡಿ ನಿಂತ. ಎಲ್ಲರೂ ಇದನ್ನು ಗಮನಿಸುತ್ತ ಮುಂದೇನಾಗುವುದೋ ಎನ್ನುವುದಕ್ಕಾಗಿಯೇ ಕಾದು ನಿಂತರು.

"ನನಗೆ ಶಾರೀರಿಕ ದೋಷ ಒಂದಿದೆ, ಮಹಾ ಸ್ವಾಮಿ. ನಾನು ಕುಳ್ಳ. ನನಗೆ ಶಕ್ತಿ ಸಾಲದು. ಮಿಲಿಟರಿ ಸೇವೆಗೆ ನಾನು ಅಯೋಗ್ಯ" ಎಂದು ಅವನು ಮಾತುಗಳನ್ನು ಜಗ್ಗಿ ಜಗ್ಗಿ ಎಳೆಯುತ್ತ ಆಡಿದ.

ಇದನ್ನು ಕೇಳಿ ಕೋಣೆಯಲ್ಲಿದ್ದವರೆಲ್ಲರ ಹೃದಯವೂ ಹಿಂಡಿದಂತಾಯಿತು. ಎಷ್ಟೆಲ್ಲ ದೃಢವಾಗಿದ್ದರೂ, ಯೂಲಿಯಾನ್ ಮಸ್ತಾಕೊವಿಚ್‌ರವರೂ ಕಣ್ಣೀರು ಸುರಿಸುವಂತಾದರು. "ಇವನನ್ನು ಕರೆದುಕೊಂಡು ಹೋಗಿ" ಎಂದವರು ಕೈ ಆಡಿಸುತ್ತ ಸೂಚಿಸಿದರು.

"ಮಾರ್ಚಿಂಗ್ ಆರ್ಡರ್‍ಸ್ !" ವಾಸ್ಯ ಕೆಳದನಿಯಲ್ಲಿ ಹೇಳಿದ. ಹಿಮ್ಮಡಿಯ ಮೇಲೆ ತಟಕ್ಕನೆ ತಿರುಗಿ ಶಿಸ್ತು ನಡಿಗೆಯಲ್ಲಿ ಕೊಠಡಿಯಿಂದ ಹೊರಗೆ ಹೋದ. ಅವನ ದುಸ್ಥಿತಿಗಾಗಿ ಮರುಗುತ್ತಿದ್ದವರೆಲ್ಲರೂ ಅವನ ಹಿಂದೆಯೇ ಧಾವಿಸಿ ಹೋದರು. ಅರ್ಕಾದಿಯೂ ಎಲ್ಲರ ಹಿಂದೆ ಒತ್ತಿಕೊಂಡು ಹೋದ. ಆಸ್ಪತ್ರೆಗೆ ಕರೆದೊಯ್ಯಲು ಆಂಬುಲೆನ್ಸ್ ಬರುವುದಕ್ಕಾಗಿ ನಿರೀಕ್ಷಿಸುತ್ತ ಅವರು ಅವನನ್ನು ಕಾಯುವ ಕೋಣೆಯಲ್ಲಿ ಕುಳ್ಳಿರಿಸಿದರು. ಅವನು ಮೌನನಾಗಿ ಕುಳಿತ. ಯಾವುದೋ ಆಲೋಚನೆಯಲ್ಲಿ ತುಂಬ ಮಗ್ನನಾಗಿರುವಂತೆ ಕಂಡುಬಂದ. ತಾನು ಗುರುತು ಹಿಡಿದವರೆಲ್ಲರಿಗೂ ಅವನು ವಿದಾಯ ಹೇಳುತ್ತಿದ್ದಾನೋ ಎಂಬಂತೆ ತಲೆದೂಗುತ್ತಿದ್ದ. ಬಾಗಿಲಿನತ್ತವೇ ಆಗಾಗ್ಗೆ ನೋಡುತ್ತಿದ್ದ, "ಹೊರಡು" ಅನ್ನುವ ಮಾತನ್ನು ಕೇಳಲು ಸಿದ್ಧನಾಗಿ. ಜನರು ಗುಂಪಾಗಿ ಅವನ್ನ ಸುತ್ತ ಒತ್ತಿ ನಿಂತಿದ್ದರು. ಎಲ್ಲರೂ ತಲೆ ಕೊಡವುತ್ತಿದ್ದರು, ಎಲ್ಲರೂ ಅವನ ದುರ್ಗತಿಗಾಗಿ ವಿಷಾದಿಸುತ್ತಿದ್ದರು. ವಾಸ್ಯನ ಕಥೆ ಆ ಹೊತ್ತಿಗೆ ಎಲ್ಲರಿಗೂ ತಿಳಿದಿದ್ದಿತು. ಅದನ್ನು ಕೇಳಿ ಎಲ್ಲರೂ ವಿಸ್ಮಿತರಾದರು. ಕೆಲವರು ಅದರ ಬಗೆಗೇ ಚರ್ಚೆ ನಡೆಸಿದರು, ಕೆಲವರು ಮರುಕ ವ್ಯಕ್ತಪಡಿಸಿ ವಾಸ್ಯನನ್ನು ಹೊಗಳಿದರು. ಎಂತಹ ವಿನೀತನಾದ ಸದ್ದುಗದ್ದಲವಿಲ್ಲದ ವ್ಯಕ್ತಿಯಾಗಿದ್ದ, ಎಂತಹ ಭರವಸೆಯ ಯುವಕನಾಗಿದ್ದ, ಎಂದು ಅವರು ಹೇಳಿದರು. ಎಷ್ಟು ಕಷ್ಟಪಟ್ಟು ಅಭ್ಯಾಸ ಮಾಡುತ್ತಿದ್ದ, ಎಂತಹ ವಿಚಾರಶೀಲ ಮನಸ್ಸು ಅವನದು, ತನ್ನ ಕೆಲಸವನ್ನು ಸುಧಾರಿಸಿಕೊಳ್ಳಲು ಎಷ್ಟು ಪ್ರಯತ್ನ ಪಟ್ಟಿದ್ದ, ಎಂದೂ ಹೇಳಿದರು. "ಸ್ವಂತ ಯತ್ನದಿಂದ ಅವನು ಕೆಳಸ್ಥಿತಿಯಿಂದ ಮೇಲಕ್ಕೆ ಬಂದಿದ್ದ" ಎಂದು ಯಾರೋ ಹೇಳಿದರು. ಯೂಲಿಯಾನ್ ಮಸ್ತಾಕೊವಿಚ್‌ರು ವಾಸ್ಯನನ್ನು ತುಂಬ ಇಷ್ಟಪಡುತ್ತಿದ್ದರು ಎಂದೂ ಹೇಳ

ಲಾಯಿತು. ಮಿಲಿಟರಿ ಸೇವೆಗೆ ಕಳುಹಿಸಲ್ಪಡುವ ಭೀತಿ ಏಕೆ ವಾಸ್ಯನ ಮನಸ್ಸನ್ನು ಹೊಕ್ಕು ಅವನನ್ನು ಪಲ್ಲಟಗೊಳಿಸಿದ್ದಿತೆಂಬುದಕ್ಕೂ ಕೆಲವರು ವಿವರಣೆಗಳನ್ನು ನೀಡಿದರು. ಆ ಬಡಪಾಯಿ ತೀರ ಈಚೆಗಿನವರೆಗೂ ಮಿಲಿಟರಿ ಸೇವೆಗೆ ಬದ್ಧವಾದ ಕೆಳದರ್ಜೆಗೆ ಸೇರಿದ್ದ. ಅವನ ಪ್ರತಿಭೆ, ವಿನಯ, ಅಪರೂಪವೆನ್ನುವ ಸಾಧು ಸ್ವಭಾವ ಇವುಗಳನ್ನು ಮೆಚ್ಚಿದ ಯೂಲಿಯಾನ್ ಮಸ್ತಾಕೊವಿಚ್‌ರ ಮಧ್ಯಸ್ಥಿಕೆಯ ಫಲವಾಗಿ ಅವನು ಮೇಲು ದರ್ಜೆಗೆ ಏರಿಸಲ್ಪಟ್ಟಿದ್ದ, ಎಂದವರು ಹೇಳಿದರು. ಸ್ವಲ್ಪದರಲ್ಲಿ, ಅಲ್ಲಿ ವ್ಯಕ್ತಪಡಿಸಲಾಗುತ್ತಿದ್ದ ಅಭಿಪ್ರಾಯಗಳೂ ವ್ಯಾಖ್ಯಾನಗಳೂ ಭಿನ್ನಭಿನ್ನವಾಗಿದ್ದವು. ವಾಸ್ಯನ ಸಹೋದ್ಯೋಗಿಗಳಲ್ಲೊಬ್ಬ, ತುಂಬ ಕುಳ್ಳಾದ ಒಬ್ಬ ವ್ಯಕ್ತಿ, ಈ ಪ್ರಸಂಗದಿಂದ ಅತಿಪ್ರಭಾವಿತರಾದವರಲ್ಲಿ ವಿಶೇಷವಾಗಿ ಎದ್ದುಕಾಣುವಂತಿದ್ದ. ಅವನು ತುಂಬ ಎಳೆಯವನೇನೂ ಆಗಿರಲಿಲ್ಲ. ಅವನಿಗೆ ಸುಮಾರು ಮೂವತ್ತು ವಯಸ್ಸಾಗಿತ್ತು. ಅವನು ಶವದ ಮೇಲೆ ಹೊದಿಸುವ ಬಟ್ಟೆಯಷ್ಟು ಬಿಳಚಿಕೊಂಡಿದ್ದ. ಅವನ ಇಡೀ ದೇಹ ನಡುಗುತ್ತಿತ್ತು. ಅವನು ವಿಚಿತ್ರ ರೀತಿಯ ನಗೆ ನಗುತ್ತಿದ್ದ – ಬಹುಶಃ, ಆಘಾತಗೊಳಿಸುವಂತಹ ಘಟನೆ ಅಥವಾ ಭೀಕರ ದೃಶ್ಯವೊಂದು ಹೊರಗೆ ನಿಂತು ನೋಡುವವನಿಗೆ ಭೀತಿ ಕಾರಕವಾಗಿಯೂ ಅದೇ ಹೊತ್ತಿನಲ್ಲಿ ಆಕರ್ಷಕವಾಗಿಯೂ ಕಂಡುಬರುವುದು ಸಹಜ, ಎಂಬ ಕಾರಣದಿಂದಾಗಿ. ಅವನು ವಾಸ್ಯನ ಸುತ್ತ ನಿಂತಿದ್ದ ಜನರ ಹಿಂಬದಿಯಲ್ಲಿ ಒಂದು ಕಡೆಯಿಂದ ಒಂದು ಕಡೆಗೆ ಓಡಾಡುತ್ತಿದ್ದ. ಕುಳ್ಳಾಗಿದ್ದುದರಿಂದ ಬೆರಳ ತುದಿಗಳ ಮೇಲೆ ನಿಂತು ನೋಡಲು ಯತ್ನಿಸುತ್ತಿದ್ದ. ಕಂಡವರ ಕೋಟಿನ ಗುಂಡಿಗಳನ್ನು – ಅಂದರೆ ಹಾಗೆ ಹಿಡಿದುಕೊಳ್ಳಲು ಅವನಿಗೆ ಹಕ್ಕಿದ್ದಂಥ ಜನರ ಗುಂಡಿಗಳನ್ನು – ಹಿಡಿದುಕೊಂಡು ತಿರುಚುತ್ತಿದ್ದ. ತನಗೆ ಇದಕ್ಕೆಲ್ಲ ಕಾರಣ ಗೊತ್ತಿದ್ದಿತೆಂದೂ, ಅದೇನೂ ಸಾಮಾನ್ಯವಲ್ಲ ಆದರೆ ಗುರುತರವಾದ ವಿಷಯವೇ ಆಗಿದ್ದಿತೆಂದೂ, ಅದನ್ನು ಸರಿಪಡಿಸಲು ಏನಾದರೂ ಮಾಡಲೇ ಬೇಕಿದ್ದಿತೆಂದೂ, ಪದೇಪದೇ ಹೇಳುತ್ತಿದ್ದ. ಆಮೇಲೆ ಅವನು ಮತ್ತೆ ಮೆಟ್ಟಿಂಗಾಲು ನಿಲ್ಲುತ್ತಿದ್ದ, ತನ್ನ ಮಾತು ಕೇಳುತ್ತಿದ್ದವರ ಕಿವಿಯಲ್ಲಿ ಪಿಸುಗುಟ್ಟುತ್ತಿದ್ದ, ಒಂದೆರಡು ಬಾರಿ ತಲೆದೂಗುತ್ತಿದ್ದ, ಮತ್ತೆ ಇನ್ನೊಂದು ಕಡೆಗೆ ಓಡುತ್ತಿದ್ದ. ಕೊನೆಗೆ ಎಲ್ಲವೂ ಮುಗಿಯಿತು. ಒಬ್ಬ ಸಹಾಯಕ ವೈದ್ಯರೂ ಒಬ್ಬ ಸೇವಕನೂ ಆಸ್ಪತ್ರೆಯಿಂದ ಬಂದರು. ಅವರು ವಾಸ್ಯನ ಬಳಿಗೆ ಹೋಗಿ, ಹೊರಡುವ ಹೊತ್ತಾಯಿತೆಂದು ಹೇಳಿದರು. ಅವನು ಬೇಗ ನೆಗೆದು ನಿಂತು ಅವರನ್ನು ಹಿಂಬಾಲಿಸಿ ಹೊರ ಹೊರಟ. ಹೆಗಲ ಮೇಲಿನಿಂದ ಹಿಂದಕ್ಕೆ ಆಗಾಗ್ಗೆ ನೋಡುತ್ತಲೇ ಇದ್ದ. ಅವನು ಯಾರಿಗಾಗಿಯೋ ಕಣ್ಣುಗಳಿಂದಲೇ ಹುಡುಕುತ್ತಿದ್ದ. "ವಾಸ್ಯ ! ವಾಸ್ಯ !" ಅರ್ಕಾದಿ ಇವಾನೊವಿಚ್ ಬಿಕ್ಕಳಿಸಿ ಅಳುತ್ತ ಕೂಗಿ ಕರೆದ. ವಾಸ್ಯ ನಿಂತ. ಅರ್ಕಾದಿ ಜನರ ಮಧ್ಯೆ ಜಾಗ

ಬಿಡಿಸಿಕೊಂಡು ಅವನ ಬಳಿಗೆ ಹೇಗೋ ಹೋಗಿ ತಲುಪಿದ. ಅವರಿಬ್ಬರೂ ಪರಸ್ಪರರತ್ತ ಧಾವಿಸಿ ಆಲಂಗಿಸಿಕೊಂಡರು. ಅದು ಅವರ ಕೊನೆಯ ಆಲಿಂಗನವಾಗಿದ್ದಿತು. ಇಬ್ಬರೂ ಸ್ವಲ್ಪ ಹೊತ್ತು ಬಿಗಿಯಾಗಿ ಅಪ್ಪಿಕೊಂಡೇ ನಿಂತಿದ್ದರು. ಅವರನ್ನು ನೋಡಿದ ಎಲ್ಲರಿಗೂ ದುಃಖ ಉಮ್ಮಳಿಸಿ ಬಂದಿತು. ಯಾವ ದುಃಖ ದೇವತೆ ಅವರ ಕಣ್ಣುಗಳಿಂದ ಕಂಬನಿ ಕರೆಯುತ್ತಿದ್ದಿತು? ಅವರು ಏಕೆ ಅಳುತ್ತಿದ್ದರು? ಏನು ಈ ಅನಾಹುತ? ಅವರೇಕೆ ಪರಸ್ಪರ ಅರ್ಥಮಾಡಿಕೊಂಡಿರಲಿಲ್ಲ?...


"ಹುಂ. ತಗೋ ಇದನ್ನು! ನನಗಾಗಿ ಇಟ್ಟಿರು" ಷುಮ್ಕೋವ್ ಹೇಳಿದ, ಅರ್ಕಾದಿಯ ಕೈಯೊಳಕ್ಕೆ ಮಡಿಸಿದ ಕಾಗದದ ತುಂಡೊಂದನ್ನು ತುರುಕುತ್ತ. "ನನ್ನ ಹತ್ತಿರ ಇದ್ದರೆ ಅವರು ತಗೊಂಡು ಬಿಡುತ್ತಾರೆ. ಆಮೇಲೆ ನನಗೆ ತಂದು ಕೊಡು, ದಯವಿಟ್ಟು; ನನಗಾಗಿ ಇಟ್ಟುಕೊಂಡಿರು...." ವಾಸ್ಯ ಇನ್ನೂ ಮಾತು ಮುಗಿಸಿರಲಿಲ್ಲ, ಆಗ ಯಾರೋ ಅವನನ್ನು ಕರೆದರು. ಅವನು ಬೇಗಬೇಗ ಮೆಟ್ಟಿಲಿಳಿದು ಹೋದ, ಎಲ್ಲರಿಗೂ ತಲೆದೂಗಿ ವಿದಾಯ ಹೇಳುತ್ತ. ಅವನ ಮುಖದಲ್ಲಿ ಹತಾಶೆ ಮೂಡಿತ್ತು. ಕೊನೆಗೆ ಅವರು ಅವನನ್ನು ಆಂಬುಲೆನ್ಸ್‌ನಲ್ಲಿ ಕೂರಿಸಿಕೊಂಡು ಕರೆದುಕೊಂಡು ಹೋದರು. ಅರ್ಕಾದಿ ಬೇಗನೆ ಕಾಗದವನ್ನು ಬಿಚ್ಚಿ ನೋಡಿದ. ಅದರಲ್ಲಿ ಲೀಸಳ ಕಪ್ಪು ಮುಂಗುರುಳಿದ್ದಿತು. ವಾಸ್ಯ ಅದನ್ನು ಎಂದೂ ಬಿಟ್ಟೇ ಇರುತ್ತಿರಲಿಲ್ಲ. ಅರ್ಕಾದಿಯ ಕಣ್ಣುಗಳಿಂದ ಕೊರೆಯುವ ಕಂಬನಿ ಉಕ್ಕಿ ಬಂದಿತು. "ಆಹ್, ಹತಭಾಗ್ಯ ಲೀಸಾ!"

ಆಫೀಸು ಕೆಲಸ ಮುಗಿದನಂತರ ಅವನು ಕೊಲೋಮ್ನ ಕಡೆಗೆ ಹೊರಟ. ಅಲ್ಲಿ ಏನು ಜರುಗಿತೋ ಅದು ವರ್ಣನಾತೀತ. ಪೇತ್ಯ ಕೂಡ, ಪುಟ್ಟ ಪೇತ್ಯ ಕೂಡ, ಆ ಒಳ್ಳೆಯ ದಯಾಳುವಾದ ವಾಸ್ಯನಿಗೆ ಏನಾಗಿದ್ದಿತೆಂಬುದು ಅರ್ಥವಾಗದಿದ್ದರೂ, ಒಂದು ಮೂಲೆಗೆ ಹೋಗಿ ಮುಖ ಮುಚ್ಚಿಕೊಂಡು ತನ್ನ ಎಳೆಯ ಹೃದಯದ ಅಂತರಾಳದಿಂದ ಬಿಕ್ಕಿ ಬಿಕ್ಕಿ ಅತ್ತ. ಅರ್ಕಾದಿ ತನ್ನ ಮನೆಗೆ ಹಿಂದಿರುಗಲು ಹೊರಟಾಗ ಆಗಲೇ ಮುತ್ಸಂಜೆಯಾಗಿತ್ತು. ನೇವಾ ನದಿಯ ಸಮೀಪ ಬಂದಾಗ ಒಂದು ಘಳಿಗೆ ನಿಂತು ಆ ನದಿಯ ಪ್ರವಾಹವನ್ನು ದೂರದಲ್ಲಿ ಮಸುಕಾಗಿ ಕಾಣುವವರೆಗೂ ದಿಟ್ಟಿಸಿ ನೋಡಿದ. ಘನಹಿಮ ಕವಿದು ಮಸುಕಾಗಿದ್ದ ಅದು ಇದ್ದಕ್ಕಿದ್ದಂತೆ, ಮಬ್ಬಾಗಿದ್ದ ದಿಗಂತದಾಚೆ ನಿಧಾನವಾಗಿ ಮುಳುಗುತ್ತಿದ್ದ ರಕ್ತಗೆಂಪಿನ ಸೂರ್ಯನ ಕೊನೆಯ ಕಡುಗೆಂಪಿನ ಕಾಂತಿಯಿಂದ ಬೆಳಗಿತು. ಕತ್ತಲು ನಗರದ ಮೇಲೆ ಕವಿಯುತ್ತಿದ್ದಿತು. ಸೂರ್ಯನ ಅಗಲಿಕೆಯ ಪ್ರತಿಫಲನದಲ್ಲಿ ನೇವಾ ನದಿಯ – ಮೇರೆಯೇ ಇರದಂತಿದ್ದ, ಘನೀಭವಿಸಿದ ಮಂಜಿನಿಂದ ಉಬ್ಬಿದಂತಿದ್ದ ನೇವಾ ನದಿಯ – ಇಡೀ ಹರಹು ಗಡ್ಡೆಕಟ್ಟಿದ ಮಂಜಿನ

ಬೆಳ್ಳಿ ಸೂಜಿಗಳಿಂದ ಹರಡಿ ಹಂಚಲ್ಪಟ್ಟ ಅಸಂಖ್ಯಾತ ಕಿಡಿಗಳಿಂದ ಮಿರುಗುತ್ತಿದ್ದಿತು. ಖರತ್ವವು ಸೊನ್ನೆಗಿಂತ ಇಪ್ಪತ್ತು ಡಿಗ್ರಿ ಕೆಳಕ್ಕೆ ಇಳಿದಿದ್ದಿರಬೇಕು. ಕಷ್ಟಪಟ್ಟು ಬಂಡಿಗಳನ್ನು ಎಳೆದುಕೊಂಡು ಹೋಗುತ್ತಿದ್ದ ಕುದುರೆಗಳ ಹೊಳ್ಳೆಗಳಿಂದಲೂ, ಅವಸರ ಅವಸರವಾಗಿ ಹೋಗುತ್ತಿದ್ದ ಪಾದಚಾರಿಗಳ ಮೂಗುಗಳಿಂದಲೂ ಘನೀಭೂತವಾದ ಆವಿ ಹೊರಬರುತ್ತಿದ್ದಿತು. ತೆಳುವಾದ ಗಾಳಿ ಅತ್ಯಲ್ಪ ಶಬ್ದಕ್ಕೂ ಕಂಪಿಸುತ್ತಿದ್ದಿತು. ನದಿಯ ಇಕ್ಕೆಲಗಳಲ್ಲೂ ಮನೆಗಳ ಮಾಳಿಗೆಗಳ ಮೇಲಿನಿಂದ ಧೂಮಸ್ತಂಭಗಳು ದೈತ್ಯಾಕಾರವಾಗಿ ಎದ್ದು ನಿಂತಿದ್ದವು. ಅವು ಶೀತಲ ಆಗಸದಲ್ಲಿ ಮೇಲೇರಿ ಹೋಗುತ್ತಿದ್ದವು. ಏರುತ್ತಿದ್ದಂತೆ ಅವು ಸುರುಳಿಸುತ್ತಿಕೊಳ್ಳುತ್ತಿದ್ದವು, ಬಿಚ್ಚಿಕೊಳ್ಳುತ್ತಿದ್ದವು. ಹಳೆಯ ಮನೆಗಳ ಮೇಲೆ ಹೊಸ ಮನೆಗಳು ಬರುತ್ತಿದ್ದಂತೆ, ಗಾಳಿಯಲ್ಲಿ ಒಂದು ಹೊಸ ನಗರ ರೂಪುಗೊಳ್ಳುತ್ತಿದ್ದಂತೆ, ಕಾಣುತ್ತಿದ್ದಿತು. ಈ ಮುಸ್ಸಂಜೆಯ ಹೊತ್ತಿನಲ್ಲಿ, ಈ ಎಲ್ಲ ಜಗತ್ತೂ, ಅದರೆಲ್ಲ ನಿವಾಸಿಗಳೂ, ಸಬಲರೂ ದುರ್ಬಲರೂ, ಅವರೆಲ್ಲ ಮನೆಮಠಗಳೂ, ದರಿದ್ರರ ಅನಾಥಾಲಯಗಳಾಗಲೀ ಜಗತ್ತಿನ ಬಲಿಷ್ಠರ ಥಳಥಳಿಸುವ ಅರಮನೆಗಳಾಗಲೀ, ಎಲ್ಲವೂ ಒಂದು ಮಹಾಭ್ರಾಂತಿಯಂತೆ, ಇಂದ್ರಜಾಲದಂತೆ, ಭ್ರಮೆಯಂತೆ, ಒಂದು ಕನಸಿನಂತೆ, ಕಾಣುತ್ತಿದ್ದವು. ಅವು ಕ್ಷಣಕಾಲ ಕಂಡು ಕಣ್ಮರೆಯಾಗಿ, ಕಪ್ಪು ನೀಲಿ ಆಗಸದತ್ತ ಹೋಗುತ್ತ ಧೂಮದಲ್ಲಿ ಲೀನವಾಗುವಂತೆ ಕಂಡುಬರುತ್ತಿದ್ದವು. ವಿಚಿತ್ರ ಆಲೋಚನೆಗಳು ಹತಭಾಗ್ಯ ವಾಸ್ಯನ ದುಃಖತಪ್ತ ಮಿತ್ರನ ಮನಸ್ಸನ್ನು ಮುಸುಕಿದವು. ಅವನು ಬೆಚ್ಚಿಬಿದ್ದ. ಯಾವುದೋ ಪ್ರಬಲವಾದ ಹಾಗೂ ಅದುವರೆವಿಗೂ ಅನುಭವಿಸದಿದ್ದಂಥ ಭಾವದಿಂದ ಇದ್ದಕ್ಕಿದ್ದಂತೆ ಹುಟ್ಟಿದ ಬಿಸಿರಕ್ತದ ಹೊನಲು ಅವನ ಹೃದಯವನ್ನು ತುಂಬಿತು. ಈಗಷ್ಟೆ ಈ ಎಲ್ಲ ಅನರ್ಥವನ್ನು, ತನ್ನ ಪಾಲಿಗೆ ಬಂದ ಸುಖವನ್ನು ಸಹಿಸಲಾಗದೆ ಹೋದ ತನ್ನ ನತದೃಷ್ಟ ಮಿತ್ರ ವಾಸ್ಯನ ಬುದ್ಧಿಯನ್ನು ಯಾವುದು ಪಲ್ಲಟಗೊಳಿಸಿದ್ದಿತೆಂಬುದನ್ನು, ಅರ್ಥಮಾಡಿಕೊಳ್ಳಲು ಅವನಿಗೆ ಸಾಧ್ಯವಾಗಿದ್ದಿತೆಂದು ಕಂಡುಬಂದಿತು. ಅವನ ತುಟಿಗಳು ಅದುರಿದವು, ಕಣ್ಣುಗಳು ಪ್ರಜ್ವಲಿಸಿದವು. ಅವನ ಮುಖ ನಿಸ್ತೇಜವಾಯಿತು. ಆ ಸಮಯದಲ್ಲಿ ಅವನು ತೆರೆಯನ್ನು ಸೀಳಿಕೊಂಡು ಆಚೆ ಇರುವ ಹೊಸ ಜಗತ್ತಿಗೆ ಹೋಗುವಂತೆ ಕಂಡುಬಂದಿತು.....

ಅವನು ವಿಷಣ್ಣನಾದ, ಮಂಕು ಕವಿದವನಂತಾದ. ತನ್ನ ಗೆಲವನ್ನೆಲ್ಲ ಕಳೆದುಕೊಂಡ. ತನ್ನ ಹಳೆಯ ಮನೆಯನ್ನು ದ್ವೇಷಿಸುವಂತಾದ. ಹೊಸ ಮನೆಗೆ ನಿವಾಸ ಬದಲಿಸಿದ. ಅನಂತರದ ದಿನಗಳಲ್ಲಿ ಅವನಿಗೆ ಕೊಲೋಮ್ನಾಗೆ ಹೋಗಲು ಆಗಲೇ ಇಲ್ಲ. ಹೋಗಲು ಇಷ್ಟವೂ ಇರಲಿಲ್ಲ. ಎರಡು ವರ್ಷಗಳಾದ ಮೇಲೊಮ್ಮೆ ಅವನು ಲೀಸಂಕಳನ್ನು ಚರ್ಚಿನಲ್ಲಿ ಸಂಧಿಸಿದ್ದ. ಅವಳಿಗಾಗಲೇ ಮದುವೆಯಾಗಿತ್ತು.

ಅವಳ ಹಿಂದೆ ದಾದಿಯೊಬ್ಬಳು ಒಂದು ಮಗುವನ್ನು ಎತ್ತಿಕೊಂಡು ನಡೆದಿದ್ದಳು. ಅರ್ಕಾದಿಯೂ ಲೀಸಂಕಳೂ ಸ್ವಲ್ಪ ಹೊತ್ತು ಮಾತನಾಡಿದರು. ಸಾಧ್ಯವಾದಷ್ಟೂ ಕಾಲ ಹಳೆಯ ಘಟನೆಗಳನ್ನು ಸ್ಮರಿಸದೆ ಇರಲು ಯತ್ನಿಸಿದರು. ತಾನು ಸುಖವಾಗಿದ್ದಾಳೆ, ಬಡವಳಾಗೇನೂ ಇಲ್ಲ, ಪತಿ ಒಳ್ಳೆಯವನು, ತನ್ನನ್ನು ಪ್ರೀತಿಸುತ್ತಾನೆ, ಎಂದು ಲೀಸ ಅವನಿಗೆ ಹೇಳಿದಳು. ಆದರೆ ಇದ್ದಕ್ಕಿದ್ದಂತೆ ಮಾತಿನ ಮಧ್ಯದಲ್ಲಿ ಅವಳ ಕಣ್ಣುಗಳು ಕಂಬನಿಗೂಡಿದವು, ಅವಳ ಧ್ವನಿ ಕುಗ್ಗಿತು. ಪಕ್ಕಕ್ಕೆ ತಿರುಗಿ ಚರ್ಚಿನ ಮುಖ ಮಂಟಪದಲ್ಲೇ ಮಂಡಿಯೂರಿ ಕುಳಿತಳು, ತನ್ನ ದುಃಖವನ್ನು ಜಗತ್ತಿನಿಂದ ಮರೆಮಾಚಲೋಸುಗ....



# ಸಾಧು ಸ್ವಭಾವದವಳು

## ಒಂದು ಭ್ರಾಂತ್ಯಾತ್ಮಕ ಕಥೆ

# ಲೇಖಕರ ಟಿಪ್ಪಣಿ

ಈ ಸಾರಿ ನಾನು ನನ್ನ 'ದಿನಚರಿ'ಯನ್ನು, ಅದರ ಎಂದಿನ ರೂಪದಲ್ಲಿ ನೀಡುವ ಬದಲು ಒಂದು ನೀಳ್ಗತೆಯನ್ನು ನೀಡುತ್ತಿರುವುದಕ್ಕೆ ಓದುಗರು ನನ್ನನ್ನು ಕ್ಷಮಿಸುವರೆಂದು ಭಾವಿಸಿದ್ದೇನೆ. ಆದರೆ ಈ ನೀಳ್ಗತೆಯ ಬರವಣಿಗೆಯೇ ನಿಜಕ್ಕೂ ತಿಂಗಳಿನ ಬಹುಭಾಗವನ್ನು ತೆಗೆದುಕೊಂಡುಬಿಟ್ಟಿದೆ. ಏನೇ ಆದರೂ, ನಾನು ಓದುಗರ ಕ್ಷಮೆ ಯಾಚಿಸುತ್ತೇನೆ.

ಈಗ ಕಥೆಯ ಕುರಿತೇ ಕೆಲವು ಮಾತುಗಳು. ನಾನು ಇದನ್ನು ಭ್ರಾಂತ್ಯಾತ್ಮಕ ಕಥೆ ಎಂದು ಕರೆದಿದ್ದೇನೆ. ಆದರೆ ಇದೊಂದು ತುಂಬ ವಾಸ್ತವಿಕವೇ ಆದುದೆಂದು ನಾನು ಸ್ವತಃ ಪರಿಗಣಿಸುತ್ತೇನೆ. ನಿಜ, ಇದರಲ್ಲಿ, ಅಂದರೆ ಈ ಕಥೆಯ ರಚನೆಯಲ್ಲೇ, ಭ್ರಾಂತ್ಯಾತ್ಮಕವಾದ ಒಂದಂಶವಿದೆ. ಇದಕ್ಕೆ ವಿವರಣೆ ನೀಡುವುದು ಆವಶ್ಯಕವೆಂದು ನಾನು ಭಾವಿಸುತ್ತೇನೆ.

ಸತ್ಯಸಂಗತಿ ಎಂದರೆ, ಇದು ಒಂದು ಕಥಾ ನಿರೂಪಣೆಯೂ ಅಲ್ಲ, ಟಿಪ್ಪಣಿಗಳ ಒಂದು ಸಂಕಲನವೂ ಅಲ್ಲ. ಒಬ್ಬ ಗೃಹಸ್ಥ ಇದ್ದಾನೆ, ಅವನ ಮಡದಿ ಕೆಲವೇ ಗಂಟೆಗಳ ಮುನ್ನವಷ್ಟೆ ಕಿಟಕಿಯಿಂದ ಹೊರ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ, ಎಂಬ ಪ್ರಸಂಗವನ್ನು ಕಲ್ಪಿಸಿಕೊಳ್ಳಿ. ಅವಳ ಶರೀರವನ್ನು ಮೇಜಿನ ಮೇಲೆ ಇರಿಸಲಾಗಿದೆ. ಅವನು ಗಾಬರಿಗೊಂಡಿದ್ದಾನೆ. ತನ್ನ ಯೋಚನೆಗಳನ್ನು ವ್ಯವಸ್ಥೆಗೊಳಿಸಿಕೊಳ್ಳುವುದರಲ್ಲಿ ಇನ್ನೂ ಯಶಸ್ವಿಯಾಗಿಲ್ಲ. ಕೋಣೆಯಲ್ಲಿ ಶತಪಥ ತಿರುಗುತ್ತಿದ್ದಾನೆ. ಏನು ಜರುಗಿದ್ದಿತೋ ಅದನ್ನು ಅರ್ಥಮಾಡಿಕೊಂಡು "ತನ್ನ ಯೋಚನೆಗಳನ್ನು ಒಂದು ಕೇಂದ್ರಬಿಂದುವಿನಲ್ಲಿ ಒಂದುಗೂಡಿಸಲು" ಯತ್ನಿಸುತ್ತಿದ್ದಾನೆ. ಈ ವ್ಯಕ್ತಿ ದೃಢವಾಗಿ ಬೇರೂರಿದ ರೋಗಭ್ರಾಂತಿಗೆ ಒಳಗಾದವನೆಂದು, ಸ್ವಗತ ಮಾತನಾಡುವ ಸ್ವಭಾವದವನೆಂದು, ಮೊದಲೇ ಹೇಳಿಬಿಡಬೇಕು. ಹಾಗಾಗಿ ಅವನು ಈಗ ತನ್ನಲ್ಲಿ ತಾನೇ ಮಾತನಾಡಿಕೊಳ್ಳುತ್ತಿದ್ದಾನೆ, ಏನು ಜರುಗಿದ್ದಿತೋ ಅದನ್ನೆಲ್ಲ ಪುನರಾಲೋಚಿಸಿ, ಎಲ್ಲವನ್ನೂ ತಿಳಿದುಕೊಳ್ಳಲು ಯತ್ನಿಸುತ್ತಿದ್ದಾನೆ. ಅವನ ಆಲೋ

ಚನೆಗಳಲ್ಲಿ ಹೊರ ನೋಟಕ್ಕೆ ಸುಸಾಂಗತ್ಯ ಇರುವುದಾಗಿ ಕಂಡುಬಂದರೂ ಅವನು ಬಹುವೇಳೆ ತರ್ಕದಲ್ಲೂ ಭಾವನೆಗಳಲ್ಲೂ ತನ್ನನ್ನು ತಾನೇ ವಿರೋಧಿಸಿಕೊಳ್ಳು ತ್ತಾನೆ. ಅವನು ತನ್ನನ್ನು ಸಮರ್ಥಿಸಿಕೊಳ್ಳುತ್ತಾನೆ, ಅವಳನ್ನು ನಿಂದಿಸುತ್ತಾನೆ. ಆಮೇಲೆ ಅನಗತ್ಯ ವಿವರಣೆಗಳನ್ನೂ ನೀಡ ಹೋಗುತ್ತಾನೆ. ಅವನ ವಿವರಣೆ ಗಳಲ್ಲಿ ಹೃದಯ ಹಾಗೂ ಮನೋವಿಚಾರಗಳ ಒರಟುತನವಿದೆ. ಅದರ ಜೊತೆಗೇ ಗಾಢ ಭಾವನೆಗಳೂ ಇವೆ. ಅವನು ಎಲ್ಲ ಗತ ಘಟನೆಗಳನ್ನೂ ಸ್ವಲ್ಪ ಸ್ವಲ್ಪವಾಗಿ ನೆನಪಿಸಿಕೊಂಡು "ತನ್ನ ಯೋಚನೆಗಳನ್ನು ಒಂದು ಬಿಂದುವಿನ ಸುತ್ತ ಕೇಂದ್ರೀ ಕರಿಸುತ್ತಾನೆ." ಅವನು ಜ್ಞಾಪಕಕ್ಕೆ ತಂದುಕೊಂಡ ನೆನಪುಗಳ ಮಾಲೆಯು ಅವನನ್ನು ಕೊನೆಗೆ ಸತ್ಯದ ಬಳಿಗೆ ಅನಿವಾರ್ಯವಾಗಿ ಕರೆದೊಯ್ಯುತ್ತದೆ. ಈ ಸತ್ಯವು ಅವನ ಹೃನ್ಮನಗಳನ್ನು ಅನಿವಾರ್ಯವಾಗಿ ಉದಾತ್ತಗೊಳಿಸುತ್ತದೆ. ಕೊನೆ ಸಮೀಪಿಸಿ ದಂತೆ ಅವನ ಕಥಾ ನಿರೂಪಣೆಯ ಧಾಟಿಯೇ ಬದಲಾಗುತ್ತದೆ, ಆರಂಭದ ವಿಸಂಗತತೆಯಿಂದ ಭಿನ್ನವಾಗುತ್ತದೆ. ಆ ಬಡಪಾಯಿಗೆ ಸತ್ಯ ಸುಸ್ಪಷ್ಟವಾಗಿ ಹಾಗೂ ನಿರ್ದಿಷ್ಟವಾಗಿ ಕಂಡುಬರುತ್ತದೆ – ಕೊನೆಯ ಪಕ್ಷ ಅವನಿಗೆ ತಿಳಿಯಲು ಸಾಲುವಷ್ಟು ಸ್ಪಷ್ಟವಾಗಿ.

ಇಷ್ಟು ಇದರ ಕಥಾವಸ್ತು. ಕಥೆ ಹೇಳುವುದೇ ಕೆಲವು ಗಂಟೆ ತೆಗೆದುಕೊಳ್ಳು ತ್ತದೆನ್ನಿ. ಅವನು ಬಿಟ್ಟುಬಿಟ್ಟು ಹೇಳುತ್ತಾನೆ. ಅದು ರೂಪದಲ್ಲಿ ಸುಸಂಬದ್ಧ ವಾಗಿಲ್ಲ, ಏಕೆಂದರೆ, ಅವನು ಇಲ್ಲವೇ ತನ್ನೊಂದಿಗೆ ತಾನೇ ವಾದ ಮಾಡುತ್ತಾನೆ, ಇಲ್ಲವೇ ಯಾವುದೋ ಅದೃಶ್ಯಶ್ರೋತೃವನ್ನುದ್ದೇಶಿಸಿ, ನ್ಯಾಯಮೂರ್ತಿಯನ್ನು ದ್ದೇಶಿಸಿಯೋ ಎಂಬಂತೆ, ಹೇಳುತ್ತಾನೆ. ಆದರೆ ನಿಜ ಜೀವನದಲ್ಲಿ ಯಾವತ್ತೂ ಹೀಗೆಯೇ ಇರುತ್ತದೆ. ಶೀಘ್ರಲಿಪಿಕಾರನೊಬ್ಬ ಅವನು ಹೇಳಿದುದನ್ನೆಲ್ಲ ಕೇಳಿಸಿ ಕೊಂಡು ಬರೆದಿಟ್ಟಿದ್ದಿದ್ದರೆ ಅದು ನನ್ನ ನಿರೂಪಣೆಯಷ್ಟೂ ಸಲೀಸಾಗಿರುತ್ತಿರಲಿಲ್ಲ, ಒಪ್ಪ ಹೊಂದಿರುತ್ತಿರಲಿಲ್ಲ. ಆದರೆ ಮಾನಸಿಕ ಕ್ರಮಾನುಗತಿಯಂತೂ ಬಹುಶಃ ಒಂದೇ ಆಗಿರುತ್ತಿದ್ದಿತೆಂದೇ ನನ್ನ ನಂಬಿಕೆ. ಈ ಶೀಘ್ರಲಿಪಿಕಾರನ (ಇವನ ಟಿಪ್ಪಣಿ ಗಳಿಗೇ ನಾನು ಕಥೆಯ ರೂಪ ಕೊಟ್ಟಿರುವುದು) ಕುರಿತ ಊಹೆಯನ್ನೇ ನಾನು ನನ್ನ ಕಥೆಯಲ್ಲಿ "ಭ್ರಾಂತ್ಯಾತ್ಮಕ" ಎಂದು ಕರೆದಿರುವುದು.ಇಂತಹ ಭ್ರಾಂತ್ಯಾ ತ್ಮಕ ನಿರೂಪಣೆಗಳಿಗೆ ಈ ಮುನ್ನವೂ ಸಾಹಿತ್ಯದಲ್ಲಿ ಅವಕಾಶ ನೀಡಲಾಗಿದೆಯೆನ್ನಿ. ಉದಾಹರಣೆಗೆ, ವಿಕ್ಟರ್ ಹ್ಯೂಗೋ ತಮ್ಮ ಮೇರುಕೃತಿ 'ಮರಣಶಿಕ್ಷೆಗೊಳ ಗಾದವನ ಕೊನೆಯ ದಿನ'ದಲ್ಲಿ ಬಹುಮಟ್ಟಿಗೆ ಇದೇ ಮಾಧ್ಯಮವನ್ನೇ ಬಳಸಿ ಕೊಂಡಿದ್ದಾರೆ. ಯಾವುದೇ ಶೀಘ್ರಲಿಪಿಕಾರನ ಪಾತ್ರವನ್ನು ಅವರು ಚಿತ್ರಿಸಿಲ್ಲ ವಾದರೂ, ಮರಣದಂಡನೆಗೊಳಗಾದ ವ್ಯಕ್ತಿಯೊಬ್ಬ ಈ ಭೂಮಿಯ ಮೇಲಿನ ತನ್ನ ಕೊನೆಯ ದಿನದಂದು ಅಷ್ಟೆ ಅಲ್ಲ, ಕೊನೆಯ ಗಂಟೆ, ವಾಸ್ತವವಾಗಿ ಕೊನೆಯ

ನಿಮಿಷದಲ್ಲೂ ಟಿಪ್ಪಣಿ ಬರೆಯುಬಲ್ಲವನಿದ್ದ (ಅದಕ್ಕೆ ಸಾಲುವಷ್ಟು ಸಮಯ ಹೊಂದಿದ್ದ) ಎಂದು ಕಲ್ಪಿಸಿಕೊಳ್ಳುವ ಮೂಲಕ ತಮ್ಮ ನಿರೂಪಣೆಯನ್ನು ಹೆಚ್ಚು ನಂಬಲನರ್ಹವಾದುದನ್ನಾಗಿ ಮಾಡಿದ್ದಾರೆ. ಆದರೆ ಈ ಭ್ರಾಂತ್ಯಾತ್ಮಕವಾದ ಪರಿಸ್ಥಿತಿಯನ್ನು ಅವರು ತರದೆ ಹೋಗಿದ್ದರೆ ಅವರ ಈ ಕೃತಿ – ಅವರ ಎಲ್ಲ ಗ್ರಂಥಗಳಲ್ಲೂ ಅತ್ಯಂತ ವಾಸ್ತವಿಕವಾದ ಹಾಗೂ ಅತ್ಯಂತ ಸತ್ಯವತ್ತಾದ ಈ ಕೃತಿ – ರಚಿತವಾಗದೆಯೇ ಹೋಗುತ್ತಿದ್ದಿತು.

# ಅಧ್ಯಾಯ ಒಂದು

## I
## ನಾನು ಯಾರಾಗಿದ್ದೆ, ಅವಳು ಯಾರಾಗಿದ್ದಳು

...ಎಲ್ಲಿಯವರೆಗೆ ಅವಳು ಇಲ್ಲೇ ಇರುತ್ತಾಳೋ ಅಲ್ಲಿಯವರೆಗೆ ಎಲ್ಲ ಇನ್ನೂ ಬಳ್ಳೆಯದೇ – ಪ್ರತಿ ನಿಮಿಷವೂ ನಾನು ಹೋಗಿ ಅವಳನ್ನು ನೋಡಬಹುದು. ಆದರೆ ನಾಳೆ ಅವರು ಅವಳನ್ನು ಒಯ್ದು ಬಿಡುವರು. ಆಮೇಲೆ ನಾನು ಒಬ್ಬನೇ ಏನು ಮಾಡಲಿ? ಅವಳೀಗ ಹಜಾರದಲ್ಲಿದ್ದಾಳೆ, ಮೇಜಿನ ಮೇಲೆ. ಅವರು ಎರಡು ಕಾರ್ಡ್‌ಟೇಬಲ್‌ಗಳನ್ನು ಜೋಡಿಸಿ ಅವಳ ಶರೀರವನ್ನು ಇರಿಸಿದ್ದಾರೆ. ಶವದಾನಿ ನಾಳೆ ಸಿದ್ಧವಾಗುವುದು, ತುಂಬ ತುಂಬ ಬಿಳಿ ಶವದಾನಿ. ಓಹ್, ನಾನು ವಿಷಯ ಬಿಟ್ಟು ಹೋಗುತ್ತಿದ್ದೇನೆ... ನಾನು ಸುಮ್ಮನೆ ಶತಪಥ ತಿರುಗುತ್ತಲೇ ಇದ್ದೇನೆ, ಇದೆಲ್ಲ ಏನು ಅನ್ನುವುದನ್ನು ನನಗೇ ಸ್ಪಷ್ಟಪಡಿಸಿಕೊಳ್ಳಲು. ಈಗಾಗಲೇ ಆರು ಗಂಟೆಗಳಿಂದ ಯತ್ನಿಸುತ್ತಿದ್ದೇನೆ, ಆದರೆ ಯೋಚನೆಗಳನ್ನು ಕೇಂದ್ರೀಕರಿಸಲೇ ಆಗುತ್ತಿಲ್ಲ. ಮುಖ್ಯ ವಿಷಯವೆಂದರೆ, ನಾನು ಆ ಕಡೆಯಿಂದ ಈ ಕಡೆಗೆ, ಈ ಕಡೆಯಿಂದ ಆ ಕಡೆಗೆ, ಓಡಾಡುತ್ತಲೇ ಇದ್ದೇನೆ... ಅದು ಹೀಗೆ ಜರುಗಿತು. ನಾನು ಸುಮ್ಮನೆ ಘಟನೆಗಳ ಕ್ರಮಾವಳಿಯನ್ನು ನೀಡುತ್ತೇನೆ. (ಓಹ್, ಕ್ರಮಾವಳಿ !) ಮಹಾಶಯರೇ, ನೀವೇ ಕಾಣುವಂತೆ ನಾನೇನೂ ಸಾಹಿತಿಯಲ್ಲ. ಪರವಾಗಿಲ್ಲ. ನನಗೆ ತಿಳಿದ ರೀತಿಯಲ್ಲಿ ನಿರೂಪಿಸುತ್ತೇನೆ. ಆದರೆ ಗಾಬರಿಗೊಳಿಸುವ ಅಂಶವೆಂದರೆ, ನಾನು ಎಲ್ಲವನ್ನೂ ತಿಳಿದಿದ್ದೇನೆ, ಅನ್ನುವುದು !

ಸರಿ, ನೀವು ತಿಳಿಯ ಬಯಸುವಿರಾದರೆ, ಅಂದರೆ ಎಲ್ಲವನ್ನೂ ಆರಂಭದಿಂದ ತಿಳಿಯ ಬಯಸುವಿರಾದರೆ, ಕೇಳಿ ಹೇಳುತ್ತೇನೆ – ಅವಳು ತಾನೊಬ್ಬ ಶಿಕ್ಷಕಿ, ಕೆಲಸ ಹುಡುಕುತ್ತಿದ್ದಾಳೆ, ಎಲ್ಲಿಗಾದರೂ ಪ್ರಯಾಣ ಮಾಡಲು ಅಭ್ಯಂತರವಿಲ್ಲ, ಖಾಸಗಿಯಾಗಿ ಪಾಠ ಹೇಳಿಕೊಡಲು ಸಿದ್ಧ, ಎಂದು ಮುಂತಾಗಿ 'ಗೋಲಸ್' ('ಧ್ವನಿ') ಪತ್ರಿಕೆಯಲ್ಲಿ ಜಾಹೀರಾತು ನೀಡಲೋಸುಗ ಹಣಕ್ಕಾಗಿ ತನ್ನ ಸಾಮಾನುಗಳನ್ನು ಅಡವಿಡಲು ನನ್ನ ಬಳಿಗೆ ಬಂದಳು. ಅದು ಅತ್ಯಾರಂಭ. ಆಗ ನಾನು ಸಹಜವಾಗಿಯೇ ಅವಳನ್ನು ಅದೇ ರೀತಿಯ ಉದ್ದೇಶದಿಂದ ಬರುತ್ತಿದ್ದ ಇತರ

ರಿಂದ ಪ್ರತ್ಯೇಕಿಸಿ ನೋಡಲಿಲ್ಲ. ಅವಳು ಸುಮ್ಮನೆ ಇತರ ಎಲ್ಲರಂತೆಯೇ ಬರುತ್ತಿದ್ದಳು. ಅಷ್ಟೇ. ಆದರೆ ತರುವಾಯ ನಾನು ಅವಳನ್ನು ಪ್ರತ್ಯೇಕಿಸಿ ನೋಡಿದೆ. ಅವಳು ಎಷ್ಟು ತೆಳುವಾಗಿದ್ದಳು, ಎಷ್ಟು ಚೆಲುವಾಗಿದ್ದಳು. ಮಧ್ಯಮ ಎತ್ತರ. ನನ್ನ ಜೊತೆ ವ್ಯವಹರಿಸುವಾಗ ಯಾವಾಗಲೂ ಪಡಪಟ್ಟಾಗಿ, ಪೇಚಿಗೆ ಸಿಕ್ಕಿಬಿದ್ದವಳಂತೆ, ವರ್ತಿಸುತ್ತಿದ್ದಳು. (ಅಪರಿಚಿತರೆಲ್ಲರೊಂದಿಗೂ ಅವಳು ಹಾಗೆಯೇ ವರ್ತಿಸುತ್ತಿದ್ದಳೆಂದು ನನಗನಿಸುತ್ತೆ. ನಾನು ಅವಳಿಗೆ ಇತರ ಯಾವ ಮನುಷ್ಯನಂತೆಯೇ ಇದ್ದೆ, ಅಂದರೆ ಮನುಷ್ಯನನ್ನಾಗಿ ತೆಗೆದುಕೊಂಡಾಗ, ಒತ್ತೆಯ ವ್ಯಾಪಾರಿಯಾಗಲ್ಲ). ಹಣ ಪಡೆದುಕೊಂಡ ಕೂಡಲೇ ತಿರುಗಿ ಹೊರಟುಹೋಗುತ್ತಿದ್ದಳು. ಒಂದು ಮಾತನ್ನೂ ಆಡುತ್ತಿರಲಿಲ್ಲ. ಇತರರಾದರೆ ವಾದ ಮಾಡುತ್ತಿದ್ದರು, ಸ್ವಲ್ಪ ಹೆಚ್ಚಿಗೆ ಹಣ ಕೊಡಿ ಎಂದು ಕೇಳುತ್ತಿದ್ದರು, ಚೌಕಾಶಿ ಮಾಡುತ್ತಿದ್ದರು. ಆದರೆ ಇವಳು ಎಷ್ಟು ಕೊಟ್ಟರೆ ಅಷ್ಟಕ್ಕೆ ಒಪ್ಪಿಕೊಳ್ಳುತ್ತಿದ್ದಳು. ...ನಾನು ಗೊಂದಲಗೊಳಿಸುತ್ತಿದ್ದೇನೆ ಅನಿಸುತ್ತೆ... ಓಹ್, ಹೌದು. ನನ್ನ ಮನಸ್ಸನ್ನು ಆಕರ್ಷಿಸಿದ ಮೊದಲ ಸಂಗತಿಯೆಂದರೆ, ಅವಳು ತರುತ್ತಿದ್ದ ವಸ್ತುಗಳು: ಚಿನ್ನದ ಮುಲಾಮು ಹಾಕಿದ ಬೆಳ್ಳಿ ಹತ್ತಕಡಕುಗಳು, ಕೆಲಸಕ್ಕೆ ಬಾರದ ಪುಟ್ಟ ಲಾಕೆಟ್ – ಎಲ್ಲ ಅಗ್ಗದ ಥಳುಕುಪಳುಕಿನ ವಸ್ತುಗಳು. ಅವು ಕೆಲಸಕ್ಕೆ ಬಾರದವು ಎಂಬುದನ್ನು ಅವಳು ತಿಳಿದಿದ್ದಳು, ಆದರೆ ಅವು ಅವಳಿಗೆ ಪ್ರಶಸ್ತವಾಗಿದ್ದವೆಂದು ಅವಳ ಮುಖಭಾವ ತೋರಿಸುತ್ತಿದ್ದಿತು. ನಿಜಕ್ಕೂ ಅವಳ ತಂದೆ ತಾಯಿ ಅವಳಿಗಾಗಿ ಬಿಟ್ಟು ಹೋದ ವಸ್ತುಗಳೆಲ್ಲ ಅಷ್ಟೆ ಆಗಿದ್ದವು ಎಂಬುದನ್ನು ಅನಂತರ ನಾನು ತಿಳಿದೆ. ಒಮ್ಮೆಯಷ್ಟೆ ನಾನು ಅವಳು ತಂದ ವಸ್ತುಗಳನ್ನು ತಿರಸ್ಕಾರದಿಂದ ಕಂಡೆ. ನಾನು, ನೋಡಿ, ಎಂದೂ ನನ್ನ ಗಿರಾಕಿಗಳು ತರುವ ಸಾಮಾನುಗಳನ್ನು ತಿರಸ್ಕಾರದಿಂದ ಕಾಣುವುದಿಲ್ಲ. ನಾನು ಅವರ ಜೊತೆಗೆ ಯಾವಾಗಲೂ ಸಭ್ಯನಾಗಿ ವರ್ತಿಸುತ್ತೇನೆ – ಹೆಚ್ಚು ಮಾತನಾಡುವುದಿಲ್ಲ, ವಿನಯದಿಂದಿರುತ್ತೇನೆ, ಕಟ್ಟುನಿಟ್ಟಾಗಿರುತ್ತೇನೆ. "ಕಟ್ಟುನಿಟ್ಟು, ಕಟ್ಟುನಿಟ್ಟು, ಮತ್ತೆ ಕಟ್ಟುನಿಟ್ಟು." ಆದರೆ ಒಮ್ಮೆ ಅವಳು ಮೊಲದ ತುಪ್ಪುಳದ ಒಂದು ಹಳೆಯ ನಡುವಂಗಿಯ ಚೂರುಪಾರುಗಳನ್ನು (ಅಕ್ಷರಶಃ ಚೂರುಪಾರುಗಳು) ನನ್ನ ಬಳಿಗೆ ತರುವ ದಾರ್ಷ್ಟ್ಯ ತೋರಿದಳು. ನಾನು ಅವಳನ್ನು ಗೇಲಿ ಮಾಡುವಂತೆ ಏನನ್ನಾದರೂ ಹೇಳುವ ಪ್ರೇರಣೆಗೊಳಗಾದೆ. ಅಬ್ಬಾ, ಅವಳು ಹೇಗೆ ಕೋಪಗೊಂಡಳು ! ಕನಸು ಕಾಣುವಂತಿದ್ದ ಅವಳ ನೀಲಿ ಬೊಗಸೆ ಕಣ್ಣುಗಳು ಹೇಗೆ ಇದ್ದಕ್ಕಿದ್ದಂತೆ ಕಿಡಿ ಕಾರುವಂತಾದವು ! ಅವಳು ಒಂದು ಮಾತನ್ನೂ ಆಡಲಿಲ್ಲ. ತನ್ನ "ಚೂರುಪಾರು"ಗಳನ್ನೆಲ್ಲ ಎತ್ತಿಕೊಂಡು ಹೊರಟುಹೋದಳು. ಆಗಲೇ ನಾನು ಅವಳನ್ನು ಮೊದಲ ಬಾರಿಗೆ ನಿರ್ದಿಷ್ಟವಾಗಿ ಗಮನಿಸಿದುದು ಮತ್ತು ಅವಳ ಬಗೆಗೆ ಏನೋ ಯೋಚಿಸಿದುದು,

ಅಂದರೆ ನಿರ್ದಿಷ್ಟ ರೀತಿಯಲ್ಲಿ ಏನೋ ಯೋಚಿಸಿದುದು. ಓಹ್, ಹೌದು, ನನ್ನ ಮನಸ್ಸಿನ ಮೇಲಾದ ಇನ್ನೂ ಒಂದು ಪರಿಣಾಮ, ಅಥವಾ ಹೀಗೆ ಹೇಳಬಹುದಾದರೆ, ಪ್ರಧಾನ ಪರಿಣಾಮ, ಎಲ್ಲ ಪರಿಣಾಮಗಳ ಸಂಯೋಜಿತ ಪರಿಣಾಮ, ನನಗೆ ಜ್ಞಾಪಕಕ್ಕೆ ಬರುತ್ತಿದೆ. ಅದೆಂದರೆ, ಅವಳು ತುಂಬ ಎಳೆಯವಳಾಗಿದ್ದಳು ಎಂಬುದು. ಕೇವಲ ಹದಿನಾಲ್ಕು ವಯಸ್ಸಾಗಿದ್ದಂತೆ ಕಂಡುಬರುತ್ತಿದ್ದಳು. ಆದರೂ ಅವಳಿಗಾಗಲೇ ಹದಿನಾರು, ಹದಿನಾರಕ್ಕೆ ಮೂರು ತಿಂಗಳಷ್ಟೆ ಕಮ್ಮಿ, ಆಗಿದ್ದಿತು. ಅದನ್ನಲ್ಲ ನಾನು ಹೇಳಬೇಕೆಂದಿದ್ದುದು. ಅದಲ್ಲ ಆ ಸಂಯೋಜಿತ ಪರಿಣಾಮ. ಅವಳು ಮತ್ತೆ ಮಾರನೆಯ ದಿನ ಬಂದಳು. ಅವಳು ತನ್ನ ಮೊಲದ ತುಪ್ಪುಳದ ನಡುವಂಗಿಯನ್ನು ದೊಬ್ರೊನ್ರಾವೊವ್ ಹಾಗೂ ಮೋಸೆರ್‌ರವರಲ್ಲಿಗೆ ತೆಗೆದುಕೊಂಡು ಹೋಗಿದ್ದಳು, ಆದರೆ ಅವರಿಬ್ಬರೂ ಚಿನ್ನದ ವಸ್ತುಗಳನ್ನು ಬಿಟ್ಟು ಬೇರೇನನ್ನೂ ತೆಗೆದುಕೊಳ್ಳುತ್ತಿರಲಿಲ್ಲ, ಆದ್ದರಿಂದ ಅವರು ಅವಳೊಂದಿಗೆ ಮಾತನಾಡಲೂ ಸಿದ್ಧರಿರಲಿಲ್ಲ, ಎಂದು ನಾನು ಅನಂತರ ತಿಳಿದುಕೊಂಡೆ. ಅದಕ್ಕೆ ವಿರುದ್ಧವಾಗಿ ನಾನಾದರೋ ಒಮ್ಮೆ ಅವಳಿಂದ ಪ್ರಶಸ್ತ ಶಿಲೆಯ ಉಬ್ಬು ಕೆತ್ತನೆ ಕೃತಿಯೊಂದನ್ನೂ•(ಅದೂ ತೀರ ಕೀಳು ಮಟ್ಟದ್ದು) ಸ್ವೀಕರಿಸಿದ್ದೆ. ಅನಂತರ ಅದರ ಬಗೆಗೆ ಯೋಚಿಸಿದಾಗ ನನ್ನ ಕ್ರಿಯೆಯೇ ನನ್ನನ್ನು ಆಶ್ಚರ್ಯಗೊಳಿಸಿತು. ನಾನೂ ಚಿನ್ನ ಬೆಳ್ಳಿ ಬಿಟ್ಟು ಬೇರೇನನ್ನೂ ಸ್ವೀಕರಿಸುತ್ತಿರಲಿಲ್ಲ. ಆದರೂ ಅವಳ ಪ್ರಸಂಗದಲ್ಲಿ ನಾನು ಉಬ್ಬು ಕೆತ್ತನೆ ಕೃತಿಯನ್ನು ಸ್ವೀಕರಿಸುವ ಮಟ್ಟಕ್ಕೆ ಇಳಿದಿದ್ದೆ. ಆಗಲೇ ಎರಡನೆಯ ಬಾರಿಗೆ ನಾನು ಅವಳ ಬಗೆಗೆ ಯೋಚಿಸಿದುದು – ನನಗೆ ಚೆನ್ನಾಗಿ ನೆನಪಿದೆ.

ಈ ಬಾರಿ ಬಂದಾಗ, ಅಂದರೆ ಮೋಸೆರ್ ಬಳಿಗೆ ಹೋದನಂತರ ನನ್ನ ಬಳಿಗೆ ಬಂದಾಗ, ಅವಳು ಒಂದು ಆಂಬರ್‌ನಲ್ಲಿ ಮಾಡಿದ್ದ ಚುಟ್ಟಾಹಿಡಿಕೆಯನ್ನು ತಂದಿದ್ದಳು. ಅಂತಹುದನ್ನು ಇಷ್ಟಪಡುವವರಿಗೆ ಅದು ಕಳಪೆಯದೇನೂ ಆಗಿರಲಿಲ್ಲ. ಆದರೆ ಮತ್ತೆ ನಮ್ಮಂಥ ಜನರಿಗೆ ಅದು ನಿಷ್ಪ್ರಯೋಜಕವಾಗಿದ್ದಿತು, ಏಕೆಂದರೆ, ನಾವು ಚಿನ್ನದ ವ್ಯವಹಾರವನ್ನಷ್ಟೆ ನಡೆಸುತ್ತಿದ್ದುದು. ಅದು ಅವಳ ಬಂಡಾಯದ ಮಾರನೆಯ ದಿನವಾಗಿದ್ದುದರಿಂದ ನಾನವಳನ್ನು ನಿಷ್ಠುರವಾಗಿಯೇ ಕಂಡೆ. ನನ್ನಲ್ಲಿ, ನಿಷ್ಠುರವೆಂದರೆ ನೀರಸತೆ ಎಂದರ್ಥ. ಆದರೂ ಅವಳಿಗೆ ಆ ಪದಾರ್ಥಕ್ಕೆ ಬದಲಾಗಿ ಎರಡು ರೂಬಲ್ಲುಗಳನ್ನು ನೀಡಿದಾಗ, ಸ್ವಲ್ಪ ಸಿಡುಕಿನಲ್ಲಿದ್ದಂತೆ "ಇದನ್ನು ನಿಮಗಾಗಿಯಷ್ಟೆ ಮಾಡುತ್ತಿದ್ದೇನೆ, ಮೋಸೆರ್ ಎಂದಿಗೂ ನಿಮ್ಮಿಂದ ಇಂತಹ ವಸ್ತುಗಳನ್ನು ಸ್ವೀಕರಿಸುವುದಿಲ್ಲ" ಎಂದು ಹೇಳದೆ ಇರದಾದೆ. ನಿಮಗಾಗಿ ಎಂಬ ಪದವನ್ನು ನಾನು ವಿಶೇಷವಾಗಿ, ಹಾಗೂ ಒಂದು ನಿರ್ದಿಷ್ಟ ಅರ್ಥದಲ್ಲೂ ಸಹ, ಒತ್ತಿಹೇಳಿದೆ. ನಾನು ರೇಗಿದ್ದೆ. ನಿಮಗಾಗಿ ಎಂದು

ಹೇಳಿದಾಗ ಅವಳು ಮತ್ತೆ ಕೋಪಗೊಂಡಳು, ಆದರೆ ಏನನ್ನೂ ಹೇಳಲಿಲ್ಲ. ಅವಳು ಹಣವನ್ನು ನನ್ನ ಕಡೆಗೆ ಎಸೆಯಲಿಲ್ಲ, ಆದರೆ ತೆಗೆದುಕೊಂಡಳು – ಇದೇ ಬಡತನ ನೋಡಿ! ಓಹ್, ಹೇಗೆ ಕೋಪಗೊಂಡಿದ್ದಳು ಅವಳು! ನಾನವಳ ಸ್ವಾಭಿಮಾನಕ್ಕೆ ಪೆಟ್ಟುಕೊಟ್ಟಿದ್ದೆ, ನನಗೆ ಗೊತ್ತಿತ್ತು. ಅವಳು ಹೊರಟುಹೋದ ಮೇಲೆ ನಾನು ಇದ್ದಕ್ಕಿದ್ದಂತೆ ನನ್ನನ್ನೇ ಕೇಳಿಕೊಂಡೆ: ಅವಳ ಮೇಲೆ ನನ್ನ ದಿಗ್ವಿಜಯದ ಯೋಗ್ಯತೆ ಎರಡು ರೂಬಲ್ ಆಗಿದ್ದಿತೆ? ಹ-ಹ್ಹ-ಹ್ಹಾ! ಈ ಪ್ರಶ್ನೆಯನ್ನು ನಾನು ಎರಡು ಬಾರಿ ನನಗೇ ಹಾಕಿಕೊಂಡೆನೆಂದು ನನಗೆ ಜ್ಞಾಪಕ – "ಅದರ ಯೋಗ್ಯತೆ ಅಷ್ಟಾಗಿತ್ತೆ? ಅದರ ಯೋಗ್ಯತೆ ಅಷ್ಟಾಗಿತ್ತೆ?" ನಗುತ್ತ ನಾನು ಹೌದೆಂದು ಉತ್ತರ ನೀಡಿಕೊಂಡೆ. ಅದರಿಂದ ಅಮಿತಾನಂದಗೊಂಡೆ. ಆದರೆ ಆ ಆನಂದದಲ್ಲಿ ಮಾತ್ಸರ್ಯವಿರಲಿಲ್ಲ. ನನಗೊಂದು ಉದ್ದೇಶವಿದ್ದಿತು, ನನ್ನ ಕ್ರಿಯೆ ಉದ್ದೇಶಪೂರ್ವಕವಾಗಿದ್ದಿತು. ನಾನು ಅವಳನ್ನು ಪರೀಕ್ಷಿಸಬಯಸಿದ್ದೆ. ಏಕೆಂದರೆ ಇದ್ದಕ್ಕಿದ್ದಂತೆ ನನ್ನ ಮನಸ್ಸು ಅವಳಿಗೆ ಸಂಬಂಧಿಸಿ ಒಂದು ನಿರ್ದಿಷ್ಟ ದಿಕ್ಕಿನಲ್ಲಿ ಕೆಲಸ ಮಾಡತೊಡಗಿದ್ದಿತು. ಅದು ಅವಳ ಬಗೆಗೆ ನನ್ನ ಮೂರನೆಯ ನಿರ್ದಿಷ್ಟ ಯೋಚನೆಯಾಗಿದ್ದಿತು.

....ಸರಿ, ಅಲ್ಲಿಂದಾಚೆಗೆ ಹೀಗೆಯೇ ಅದು ಪ್ರಾರಂಭವಾದುದು. ಅವಳ ಬಗೆಗೆ ಎಲ್ಲವನ್ನೂ ಕಂಡುಹಿಡಿಯಲು ನಾನು ತಕ್ಷಣವೇ ಸದ್ದಿಲ್ಲದೆ ಪ್ರಯತ್ನ ಮಾಡಿದೆ, ಎಂದು ಬೇರೆ ಹೇಳಬೇಕಾಗಿಲ್ಲ. ಅವಳು ಬರುವುದಕ್ಕಾಗಿಯೇ ವಿಶೇಷ ಅಸಹನೆಯಿಂದ ಕಾದೆ. ಅವಳು ಬೇಗನೆಯೇ ಮತ್ತೆ ಬರಲಿರುವಳೆಂಬ ಭಾವನೆ ನನ್ನಲ್ಲಿತ್ತು. ಅವಳು ಬಂದೇ ಬಂದಳು. ಆಗ ನಾನು ಅವಳೊಂದಿಗೆ ಅತ್ಯಂತ ಮರ್ಯಾದೆಯಿಂದ ಸಂತಸದ ಸಂಭಾಷಣೆ ನಡೆಸಿದೆ. ನೋಡಿ, ನಾನು ಉತ್ತಮ ರೀತಿಯಲ್ಲೇ ಬೆಳೆದು ಬಂದಿದ್ದೆ. ನನ್ನ ನಡವಳಿಕೆಯೂ ಚೆನ್ನಾಗಿತ್ತು. ಹುಂ... ಆಗಲೇ ನಾನು ಗಮನಿಸಿದ್ದು ಅವಳು ಸೌಮ್ಯ, ಸಾಧು ಸ್ವಭಾವದವಳು, ಎಂದು. ಸೌಮ್ಯರಾದವರೂ ಸಾಧು ಸ್ವಭಾವದವರೂ ತೀರ ಅಲ್ಪ ಪ್ರತಿರೋಧ ಶಕ್ತಿ ಹೊಂದಿರುತ್ತಾರೆ. ಅವರು ತಮ್ಮ ಸಂಕೋಚವನ್ನು ಬಿಟ್ಟು ಕೊಡದೆ ಹೋದರೂ ಸಂಭಾಷಣೆಯನ್ನು ತಪ್ಪಿಸಿಕೊಳ್ಳುವುದು ಅವರ ಕೈಲಿ ಆಗುವುದೇ ಇಲ್ಲ. ಮೊಟಕಾಗಿ ಉತ್ತರಿಸುತ್ತಾರೆ, ಆದರೆ ಉತ್ತರವನ್ನಂತೂ ನೀಡುತ್ತಾರೆ. ನೀವು ಹೆಚ್ಚು ಕೇಳಿದಷ್ಟೂ ಹೆಚ್ಚು ಹೇಳುತ್ತಾರೆ. ಮುಖ್ಯ ವಿಷಯ ಸಂಭಾಷಣೆಯನ್ನು ನಡೆಸುತ್ತಲೇ ಹೋಗುವುದು, ನೀವು ಅದರಲ್ಲಿ ಆಸಕ್ತಿ ಹೊಂದಿದ್ದರೆ, ಅಷ್ಟೆ. ಆ ಸಂದರ್ಭದಲ್ಲಿ ಅವಳು ಸಹಜವಾಗಿಯೇ ತನ್ನ ಬಗೆಗೇ ಏನೂ ಹೇಳಲಿಲ್ಲ. ಅನಂತರವಷ್ಟೆ ನಾನು 'ಗೋಲಸ್' ಪತ್ರಿಕೆಯ ಜಾಹೀರಾತು ಮತ್ತೆಲ್ಲ ಇತರ ವಿಷಯುಗಳ ಬಗೆಗೂ ಕಂಡುಹಿಡಿದದ್ದು. ಅವಳು ತನ್ನ ಕೊನೆಯ ಸಾಧನ ಸಂಪತ್ತನ್ನೂ

ಆಗ ಜಾಹೀರಾತುಗಳನ್ನು ನೀಡುವುದಕ್ಕೆ ಬಳಸುತ್ತಿದ್ದಳು. ಮೊದಮೊದಲು ಅವಳು ಈ ಜಾಹೀರಾತುಗಳನ್ನು ಸ್ವಲ್ಪ ಸೊಕ್ಕಿನ ಮಾತುಗಳಲ್ಲೇ ಬರೆಯು ತ್ತಿದ್ದಳು: "ಶಿಕ್ಷಕಿಯೊಬ್ಬಳು ಕೆಲಸ ಹುಡುಕುತ್ತಿದ್ದಾಳೆ, ಎಲ್ಲಿಗಾದರೂ ಪ್ರಯಾಣ ಮಾಡಲು ಸಿದ್ಧ, ನಿಮ್ಮ ಷರತ್ತುಗಳನ್ನು ತಿಳಿಸಿ ಕಾಗದ ಹಾಕಿ." ಆಮೇಲೆ ಅವು ಗಳ ಧಾಟಿಯನ್ನು ಬದಲಿಸಿದಳು: "ಯಾವುದೇ ಕೆಲಸ ತೆಗೆದುಕೊಳ್ಳಲೂ ಸಿದ್ಧ, ಶಿಕ್ಷಕಿ, ಜೊತೆಗಾರ್ತಿ, ಮನೆವಾರ್ತೆ, ರೋಗಿಗಳಿಗೆ ಶುಶ್ರೂಷೆ ಮಾಡುವ ದಾದಿ, ಹೊಲಿಗೆ, ಯಾವ ಕೆಲಸಕ್ಕೂ ಸಿದ್ಧ" ಇತ್ಯಾದಿ, ಇತ್ಯಾದಿ, ಮಾಮೂಲೀ ಕಥೆ. ಜಾಹೀರಾತಿನ ಪದಗಳನ್ನು ಕ್ರಮೇಣ ಬದಲಿಸುತ್ತ ಹೋದಳು. ಕೊನೆಗೆ ಅವಳು ಹತಾಶೆಯ ಸಮೀಪದಲ್ಲಿದ್ದಾಗ ಅವಳ ಜಾಹೀರಾತು ಹೀಗಿದ್ದಿತು: "ಸಂಬಳ ವನ್ನೇನೂ ನಿರೀಕ್ಷಿಸುವುದಿಲ್ಲ. ಊಟವಷ್ಟೆ ಸಾಕು." ಇಷ್ಟಾದರೂ, ಇಲ್ಲ, ಅವ ಳಿಗೆ ಕೆಲಸ ಸಿಗಲೇ ಇಲ್ಲ. ಆಗ ನಾನು ಅವಳನ್ನು ಕೊನೆಯ ಪರೀಕ್ಷೆಗೆ ಗುರಿ ಪಡಿಸಲು ನಿರ್ಧರಿಸಿದೆ. ಆ ದಿನದ 'ಗೋಲಸ್' ಪತ್ರಿಕೆಯನ್ನು ತೆಗೆದುಕೊಂಡು ನಾನು ಈ ಕೆಳಗಿನಂತೆ ತಿಳಿಸುತ್ತಿದ್ದ ಜಾಹೀರಾತೊಂದನ್ನು ಅವಳಿಗೆ ತೋರಿಸಿದೆ: "ಯಾವ ಕುಟುಂಬ ಬಂಧನಗಳೂ ಇಲ್ಲದ ಯುವ ಮಹಿಳೆಯೊಬ್ಬಳು, ಎಳೆಯ ವಯಸ್ಸಿನ ಮಕ್ಕಳ ಮೇಲ್ವಿಚಾರಕಿಯಾಗಿ ಕೆಲಸ ಹುಡುಕುತ್ತಿದ್ದಾಳೆ. ವಯಸ್ಸಾದ ವಿಧುರರ ಮನೆಯಾದರೆ ಹೆಚ್ಚು ಉತ್ತಮ. ಮನೆಗೆಲಸಗಳನ್ನೂ ಕೈಗೊಳ್ಳುವಳು."

"ನೋಡಿ ಈ ಜಾಹೀರಾತನ್ನು. ಬೆಳಿಗ್ಗೆ ಇದು ಪ್ರಕಟವಾಗಿದೆ, ಬಹುಶಃ ಅಂದೇ ರಾತ್ರಿಯೊಳಗೇ ಕೆಲಸ ದೊರೆತಿರಬಹುದು ! ಇದೀಗ ಜಾಹೀರಾತು ನೀಡುವ ವಿಧಾನ !"

ಅವಳು ರೇಗಿದಳು. ಅವಳ ಕಣ್ಣುಗಳು ಮತ್ತೆ ಪ್ರಜ್ವಲಿಸಿದವು. ತಿರುಗಿ ಕೂಡಲೇ ಹೊರಗೆ ಹೊರಟುಬಿಟ್ಟಳು. ನನಗದು ತುಂಬ ಇಷ್ಟವಾಯಿತು. ಆದರೆ ನಾನಾಗಲೇ ಅವಳೊಂದಿಗೆ, ಸಾಕಷ್ಟು ವಿಶ್ವಾಸ ಬೆಳೆಸಿಕೊಂಡಿದ್ದೆ ಮತ್ತು ದಿಟ್ಟತನದಿಂದ ಕೂಡಿದ್ದೆ – ಬೇರೆ ಯಾರು ಅವಳ ಆ ಚುಟ್ಟಾಹಿಡಿಕೆಗಳಂಥ ವಸ್ತುಗಳನ್ನು ಸ್ವೀಕರಿಸುತ್ತಾರೆ. ಈಗ ಆ ಚುಟ್ಟಾಹಿಡಿಕೆಗಳೂ ಅವಳಲ್ಲಿ ಮುಗಿದು ಹೋಗಿದ್ದವು. ನನ್ನ ಎಣಿಕೆ ಸರಿಯಾಗಿತ್ತು. ಎರಡು ದಿನಗಳನಂತರ ಅವಳು ನನ್ನ ಬಳಿಗೆ ಮತ್ತೆ ಬಂದಳು. ತುಂಬ ನಿಸ್ತೇಜಳಾಗಿ, ಕ್ಷೋಭೆಗೊಂಡವಳಾಗಿ ಕಾಣುತ್ತಿದ್ದಳು. ಮನೆಯಲ್ಲಿ ಯಾವುದೋ ತೊಂದರೆಗೆ ಸಿಕ್ಕಿಬಿದ್ದಿದ್ದಳೆಂದು ನಾನು ಊಹಿಸಿದೆ. ನಿಜಕ್ಕೂ ಅವಳು ತೊಂದರೆಯಲ್ಲಿದ್ದಳು. ಆ ತೊಂದರೆ ಏನು ಎಂಬು ದನ್ನು ನಾನು ನೇರವಾಗಿಯೇ ವಿವರಿಸುತ್ತೇನೆ. ಆದರೆ ಅದಕ್ಕೆ ಮೊದಲು ನಾನು ಹೇಗೆ ಆಗ ಇದ್ದಕ್ಕಿದ್ದಂತೆ ಆಡಂಬರದೊಂದಿಗೆ ವರ್ತಿಸುತ್ತ ಅವಳ ದೃಷ್ಟಿಯಲ್ಲಿ ನನ್ನ ಅಂತಸ್ತನ್ನು ಹೆಚ್ಚಿಸಿಕೊಂಡೆ ಎಂಬುದನ್ನು ನಾನು ನೆನಪಿಗೆ ತರಬಯಸು

ತ್ತೇನೆ. ನಾನು ಅದನ್ನು ಸಮಯಸ್ಫೂರ್ತಿಯಿಂದ ಪ್ರಚೋದಿತನಾಗಿ [illegible] ಏನಾಯಿತು ಅಂದರೆ, ಆ ದಿನ ಅವಳು ತನ್ನ ಆ ದೇವರ ಚಿತ್ರಫಲಕವನ್ನು ಒತ್ತೆ ಇಡಲು ತಂದಳು (ತರಲು ನಿರ್ಧರಿಸಿದಳು)... ಆಹ್, ಕೇಳಿ, ಕೇಳಿ! ಈಗ ನಾನು ಅದನ್ನು ಸರಿಯಾಗಿ ಹೇಳುತ್ತೇನೆ. ಮೊದಲು ನಾನು ಎಲ್ಲವನ್ನೂ ಗೊಂದಲ ಮಾಡಿಬಿಟ್ಟಿದ್ದೆ. ನಾನು ಏನು ಹೇಳುವುದು ಅಂದರೆ, ನಾನು ಅದೆಲ್ಲವನ್ನೂ ವಿವರ ವಾಗಿ, ಸಣ್ಣಪುಟ್ಟ ವಿವರಗಳನ್ನೂ ಸಹ, ನೆನಪಿಗೆ ತರಬಯಸುತ್ತೇನೆ. ನಾನು ನನ್ನ ಯೋಚನೆಗಳನ್ನು ಏಕತ್ರಗೊಳಿಸಲು ಯತ್ನಿಸುತ್ತಲೇ ಇದ್ದೇನೆ, ಆದರೂ ಆಗುತ್ತಿಲ್ಲ. ಆ ಸಣ್ಣಪುಟ್ಟ ಅಂಶಗಳೇ, ಆ ಸಣ್ಣಪುಟ್ಟ ವಿಷಯಗಳೇ ಗೊಂದಲಕ್ಕೆ ಕಾರಣ.

ಅದು ಏಸುವಿನೊಂದಿಗಿರುವ ಪವಿತ್ರ ಕನ್ಯೆಯ ಚಿತ್ರಫಲಕವಾಗಿದ್ದಿತು. ಮನೆಯ ಹಳೆಯ ಚಿತ್ರಫಲಕವಾಗಿದ್ದಿತು. ಅದರ ಬೆಳ್ಳಿಯ ಉಬ್ಬುಗಳಿಗೆ ಚಿನ್ನದ ಮುಲಾಮು ಹಾಕಲಾಗಿತ್ತು. ಅದರ ಮೌಲ್ಯ ಸುಮಾರು ಆರು ರೂಬಲ್ ಆಗಿದ್ದಿತೆಂದು ಹೇಳ ಬಹುದು. ಈ ಚಿತ್ರಫಲಕ ಅವಳಿಗೆ ತುಂಬ ಬೇಕಾಗಿದ್ದುದು ಆಗಿದ್ದಿತೆಂಬುದನ್ನು ನಾನು ಕಾಣಬಲ್ಲವನಿದ್ದೆ, ಏಕೆಂದರೆ, ಅವಳು ಅದನ್ನು ಅದು ಇದ್ದ ಹಾಗೆಯೇ ಉಬ್ಬು ಆವರಣಗಳನ್ನು ತೆಗೆಯದೆಯೇ ಪೂರ್ಣವಾಗಿ ಅಡವು ಇಡಲು ಬಯ ಸಿದ್ದಳು. ನಾನು ಹೇಳಿದೆ: "ನೀವು ಉಬ್ಬು ಆವರಣಗಳನ್ನು ಇಲ್ಲಿ ಬಿಟ್ಟು ಚಿತ್ರ ಫಲಕವನ್ನು ಮನೆಗೆ ಕೊಂಡೊಯ್ಯಿರಿ, ಪರವಾಗಿಲ್ಲ. ಚಿತ್ರಫಲಕವನ್ನು ಯಾಕೆ ಅಡವು ಇಡಬೇಕು."

"ಯಾಕೆ, ಅದನ್ನು ತೆಗೆದುಕೊಳ್ಳುವುದು ನಿಷಿದ್ಧವೇ?"

"ನಿಷಿದ್ಧವೇನಿಲ್ಲ. ಸುಮ್ಮನೆ ಹಾಗೇ ನಾನು ಅಂದುಕೊಂಡೆ, ಬಹುಶಃ ನಿಮಗೆ..."

"ಸರಿ ಹಾಗಾದರೆ. ಉಬ್ಬು ಆವರಣಗಳನ್ನು ತೆಗೆದು ಇರಿಸಿಕೊಳ್ಳಿ."

"ಇಲ್ಲ, ನೋಡಿ. ನಾನು ಯಾವುದನ್ನೂ ತೆಗೆಯುವುದಿಲ್ಲ. ನಾನು ಉಬ್ಬು ಆವರಣಗಳೊಂದಿಗೆ ಇಡೀ ಚಿತ್ರಫಲಕವನ್ನೇ ಅಲ್ಲಿ ನೋಡಿ, ನನ್ನ ಚಿತ್ರಫಲಕಗಳ ಆ ಅಲಮಾರಿನಲ್ಲಿ ದೇವರ ದೀಪದ ಹಿಂದೆ ಇರಿಸುತ್ತೇನೆ (ನಾನು ವ್ಯಾಪಾರ ಪ್ರಾರಂಭಿಸಿದಂದಿನಿಂದ ಯಾವತ್ತೂ ದೇವರ ಮುಂದೆ ದೀಪ ಹಚ್ಚಿಟ್ಟಿರುತ್ತಲೇ ಇದ್ದೆ). ನಿಮಗೆ ಸುಮ್ಮನೆ, ಕೇವಲ ಸುಮ್ಮನೆಯಾಗಷ್ಟೆ, ಹತ್ತು ರೂಬಲ್ ಕೊಡು ತ್ತೇನೆ."

"ನನಗೆ ಹತ್ತು ಬೇಡ. ಐದಾದರೆ ಸಾಕು. ಖಂಡಿತ ಹಣ ಹಿಂದಿರುಗಿಸಿ ಅದನ್ನು ಬಿಡಿಸಿಕೊಳ್ಳುತ್ತೇನೆ."

"ಯಾಕೆ ಹತ್ತು ಬೇಡವೇ? ಚಿತ್ರಫಲಕಕ್ಕೆ ಅಷ್ಟು ಬೆಲೆ ಇದೆ" ನಾನು

ಹೇಳಿದೆ, ಅವಳ ಕಣ್ಣುಗಳು ಮತ್ತೆ ಪ್ರಜ್ವಲಿಸುತ್ತಿದ್ದುದನ್ನು ಗಮನಿಸಿ. ಅವಳು ಏನೂ ಹೇಳಲಿಲ್ಲ. ನಾನು ಅವಳಿಗೆ ಐದು ರೂಬಲ್ ಕೊಟ್ಟೆ.

"ಕಷ್ಟ ಬಂತು ಅಂತ ಯಾರನ್ನೂ ದ್ವೇಷಿಸಬೇಡಿ" ನಾನೆಂದೆ. "ನಾನೇ ಇಂಥ ಕಷ್ಟದಲ್ಲಿದ್ದೆ. ಬಹುಶಃ ಇದಕ್ಕೂ ಹೆಚ್ಚಿನ ಕಷ್ಟದಲ್ಲೇ ಇದ್ದೆ ಎನ್ನಬೇಕು. ಈಗ ನೋಡಿ ಹೇಗಿದ್ದೇನೆ... ಇದೆಲ್ಲ ಆಗ ನಾನು ಪಟ್ಟ ಕಷ್ಟದ ಫಲ..."

"ಆದ್ದರಿಂದಲೇ ಈಗ ನೀವು ಸಮಾಜದ ಮೇಲೆ ಸೇಡು ತೀರಿಸಿಕೊಳ್ಳುತ್ತಿದ್ದೀರಿ, ಅಲ್ಲವೇ ?" ಅವಳು ನನ್ನ ಮಾತಿನ ಮಧ್ಯೆಯೇ ಇದ್ದಕ್ಕಿದ್ದಂತೆ ಈ ಚುಚ್ಚು ಮಾತನ್ನು ಆಡಿದಳು. ಆದರೆ ಆ ಮಾತಿನಲ್ಲಿ ಮೊನಚು ಏನೂ ಇರಲಿಲ್ಲ. (ನಾನು ಹೇಳುವುದು, ಒಟ್ಟಿನಲ್ಲಿ ಅದರಲ್ಲಿ ಕಪಟ ಕುಯುಕ್ತಿ ಏನೂ ಇರಲಿಲ್ಲ, ಏಕೆಂದರೆ, ಅವಳು ಆಗ ನನ್ನನ್ನು ಇದೇ ವೃತ್ತಿಯ ಇತರ ಜನರ ಗುಂಪಿನಿಂದ ಪ್ರತ್ಯೇಕಿಸಿ ನೋಡುತ್ತಿರಲಿಲ್ಲ. ಆದ್ದರಿಂದ ಅವಳ ಮಾತುಗಳಲ್ಲಿ ಮೊನಚು ಏನೂ ಇರಲಿಲ್ಲವೆಂದೇ ಹೇಳಬೇಕು). "ಆಹಾ !" ಎಂದು ನಾನು ನನ್ನಲ್ಲೇ ಹೇಳಿಕೊಂಡೆ. "ನೀನು ಈ ತರಹದವಳೋ. ನಿನ್ನ ಸ್ವಭಾವಕ್ಕೆ ಈಗ ಹೊಸ ಹೊಸ ರಂಗು ಬರುತ್ತಿದೆ."

"ನೋಡಿ" ಎಂದು ನಾನು ಬೇಗನೆಯೇ ಅರ್ಥವಿನೋದದಿಂದ ಅರ್ಥನಿಗೂಢತೆಯಿಂದ ಹೇಳಿದೆ. "ಕೇಡು ಮಾಡಲು ಬಯಸುವ, ಆದರೆ ಒಳಿತನ್ನೇ ಮಾಡುತ್ತಿರುವ ಆ ಸಮಷ್ಟಿಯ ಒಂದು ಭಾಗದ ಭಾಗ ನಾನು."

ಅವಳು ಥಟಕ್ಕನೆ ನನ್ನತ್ತ ಭಾರಿ ಕುತೂಹಲದ ನೋಟ ಬೀರಿದಳು. ಅದು ಬಹುಮಟ್ಟಿಗೆ ಮಗುವಿನಂತಹ ನೋಟವಾಗಿದ್ದಿತು.

"ಒಂದು ನಿಮಿಷ ತಾಳಿ... ಇವು ಯಾರ ಮಾತುಗಳು? ಎಲ್ಲಿ ಬರುತ್ತೆ? ಎಲ್ಲೋ ನಾನಿದನ್ನು ಕೇಳಿದ್ದೇನೆ..."

"ನಿಮ್ಮ ಬುದ್ಧಿಯನ್ನೇನೂ ತಿಣುಕಬೇಡಿ. ಇದನ್ನು ಹೇಳಿದ್ದು ಮೆಫಿಸ್ಟಾಫಿಲಿಸ್. ಫೌಸ್ಟ್‌ನ ಮುಂದೆ ಈ ಮಾತುಗಳನ್ನಾಡಿದ. ನೀವು 'ಫೌಸ್ಟ್' ಓದಿದ್ದೀರ?"

"ಅಷ್ಟು ಗಮನವಿಟ್ಟು ಓದಿಲ್ಲ..."

"ಅಂದರೆ ಓದೇ ಇಲ್ಲ ಅಂತ. ಓದಬೇಕು. ಆದರೆ ನಿಮ್ಮ ತುಟಿಗಳು ಮತ್ತೆ ತಿರಸ್ಕಾರ ಸೂಚಿಸುವಂತೆ ಡೊಂಕಾಗುತ್ತಿರುವುದು ನನಗೆ ಕಂಡುಬರುತ್ತಿದೆ. ಆದರೆ ನಾನು ನನ್ನನ್ನು ಮೆಫಿಸ್ಟಾಫಿಲಿಸನೆಂದು ನಿಮ್ಮ ಮುಂದೆ ವರ್ಣಿಸಿಕೊಂಡು ಒತ್ತೆಯ ವ್ಯಾಪಾರಿಯಾಗಿ ನನ್ನ ಪಾತ್ರವನ್ನು ಮರೆಮಾಚಲು ಯತ್ನಿಸುವಷ್ಟು ಉತ್ತಮಾಭಿರುಚಿರಹಿತನೆಂದು ದಯವಿಟ್ಟು ಭಾವಿಸಬೇಡಿ. ಒತ್ತೆಯ ವ್ಯಾಪಾರಿ ಯಾವತ್ತೂ ಒತ್ತೆಯ ವ್ಯಾಪಾರಿಯೇ. ಅದು ನನಗೆ ಚೆನ್ನಾಗಿ ಗೊತ್ತು."

"ನೀವೊಬ್ಬ ವಿಚಿತ್ರ ವ್ಯಕ್ತಿ, ನಿಜಕ್ಕೂ... ನಾನು ಅಂಥದು ಏನನ್ನೂ ಹೇಳಲೇ ಇಲ್ಲ..."

"ನೀವೊಬ್ಬ ಸುಶಿಕ್ಷಿತ ವ್ಯಕ್ತಿ ಎಂದು ನಾನು ನಿರೀಕ್ಷಿಸಿರಲಿಲ್ಲ" ಎಂದು ಅವಳು

ಹೇಳ ಬಯಸಿದ್ದುದು. ಆದರೆ ಹಾಗೆ ಹೇಳಲಿಲ್ಲವಷ್ಟೆ. ಆದರೆ ಅವಳ ಮನಸ್ಸಿನಲ್ಲಿ ಆ ವಿಚಾರ ಇದ್ದಿತೆಂದು ನಾನು ತಿಳಿದಿದ್ದೆ. ಅವಳು ಆಶ್ಚರ್ಯಚಕಿತಳಾದಳು.

"ನೋಡಿ, ಜೀವನದಲ್ಲಿ ವೃತ್ತಿ ಏನೇ ಆದರೂ, ಒಳ್ಳೆಯದನ್ನು ಮಾಡಬೇಕೆನ್ನುವವರು ಮಾಡಲೇ ಬಹುದು. ನಾನು ಅಂಥವನ್ನು ಅಂತ ಏನೂ ಹೇಳಿಕೊಳ್ಳುತ್ತಿಲ್ಲ. ನಾನಾದರೋ ಕೆಟ್ಟುದು ಬಿಟ್ಟು ಬೇರೇನನ್ನೂ ಮಾಡುತ್ತಿಲ್ಲ. ಆದರೆ...."

"ಹೌದು, ಹೌದು. ಯಾವುದೇ ಸ್ಥಿತಿಯಲ್ಲಿದ್ದರೂ ಒಳ್ಳೆಯದನ್ನು ಮಾಡ ಬಯಸುವವರು ಮಾಡಲೇ ಬಹುದು" ಅವಳೆಂದಳು ನನ್ನತ್ತ ಚಂಚಲದ ಸ್ಫೂರ್ತಿಯುತ ನೋಟ ಬೀರುತ್ತ. "ಹೌದು. ಯಾವುದೇ ಸ್ಥಿತಿಯಲ್ಲಿದ್ದರೂ ಸರಿ" ಎಂದು ಇದ್ದಕ್ಕಿದ್ದಂತೆ ಮತ್ತೂ ಹೇಳಿದಳು. ಓಹ್, ಆ ಎಲ್ಲ ಘಳಿಗೆಗಳನ್ನೂ ನಾನು ಎಷ್ಟು ಚೆನ್ನಾಗಿ ನೆನಪಿನಲ್ಲಿಟ್ಟಿದ್ದೇನೆ! ಯುವ ಜನರು, ನಮ್ಮ ಪ್ರಿಯ ಯುವ ಜನರು, ಏನನ್ನಾದರೂ ತುಂಬ ಬುದ್ಧಿವಂತಿಕೆಯ ಹಾಗೂ ಸ್ಫೂರ್ತಿಯ ಮಾತು ಹೇಳ ಬಯಸಿದಾಗ ಅವರ ಮುಖಗಳು ಅದನ್ನು ತುಂಬ ಪ್ರಾಮಾಣಿಕವಾಗಿ ಹಾಗೂ ಮುಗ್ಧತೆಯಿಂದ ವ್ಯಕ್ತಪಡಿಸುತ್ತವೆ, ಎಂದೂ ನಾನು ಹೇಳಬಯಸುತ್ತೇನೆ. "ನೋಡಿ, ನಾನು ನಿಮಗೆ ಈಗ ಬುದ್ಧಿವಂತಿಕೆಯ ಹಾಗೂ ಸ್ಫೂರ್ತಿಯ ಮಾತು ಹೇಳುತ್ತಿದ್ದೇನೆ" ಎಂದು ಅವು ತಿಳಿಸುತ್ತವೆ. ಇದು ನನ್ನಂಥ ಜನರಲ್ಲಿ ದುರಹಂಕಾರದಿಂದೇನೂ ಹುಟ್ಟುವುದಿಲ್ಲ. ಯುವಜನರು ಅದಕ್ಕೆಲ್ಲ ತುಂಬ ಮೌಲ್ಯ ನೀಡುತ್ತಾರೆ, ಅದನ್ನೆಲ್ಲ ನಂಬುತ್ತಾರೆ ಹಾಗೂ ಗೌರವಿಸುತ್ತಾರೆ, ನೀವೂ ಅದನ್ನು ಅವರಷ್ಟೆ ಗೌರವಿಸುತ್ತೀರೆಂದು ಕಲ್ಪಿಸಿಕೊಳ್ಳುತ್ತಾರೆ, ಎಂಬುದನ್ನು ನೀವು ಕಾಣಬಹುದು. ಆಹ್, ಪ್ರಾಮಾಣಿಕತೆ! ಅದು ಅವರ ಅತ್ಯಂತ ನಿಜವಾದ ಆಯುಧ. ಅವಳಲ್ಲಿ ಇದು ಅತ್ಯಂತ ಮೋಹಕವಾಗಿದ್ದಿತು!

ನಾನು ಅದನ್ನೆಲ್ಲ ನೆನಪಿನಲ್ಲಿಟ್ಟಿದ್ದೇನೆ, ಏನನ್ನೂ ಮರೆತಿಲ್ಲ. ಅವಳು ಹೊರ ಹೋದ ಮೇಲೆ ನಾನು ತಕ್ಷಣವೇ ಮನಸ್ಸಿನಲ್ಲಿ ನಿರ್ಧಾರ ಮಾಡಿದೆ. ಅದೇ ದಿನ ನಾನು ನನ್ನ ಪರಿಶೋಧನೆಗಳನ್ನು ಪೂರೈಸುವ ಮತ್ತು ಅವಳ ಜೀವನದ ಉಳಿದೆಲ್ಲ ಪ್ರಸಕ್ತ ರಹಸ್ಯಗಳನ್ನೂ ಕಂಡುಹಿಡಿಯುವ ಕಾರ್ಯ ಕೈಕೊಂಡೆ. ಇದಕ್ಕೆ ಮುನ್ನಿನ ರಹಸ್ಯಗಳನ್ನೆಲ್ಲ ನಾನು ಆ ಕಾಲದಲ್ಲಿ ಅವರ ಸೇವಕಿಯಾಗಿದ್ದ ಲುಕೇರ್ಯಳಿಂದ ತಿಳಿದಿದ್ದೆ. ಅದಕ್ಕೆ ಕೆಲವು ದಿನಗಳ ಹಿಂದೆ ನಾನವಳಿಗೆ ಲಂಚ ನೀಡಿದ್ದೆ. ಆ ರಹಸ್ಯಗಳು ಎಷ್ಟು ತಲ್ಲಣಗೊಳಿಸುವಂತಿದ್ದವೆಂದರೆ, ಅವಳ ಸ್ವಂತ ಪರಿಸ್ಥಿತಿಯೋ ಅಷ್ಟು ಭೀಕರವಾಗಿದ್ದಾಗ ಅವಳು ಹೇಗೆ ನಗಬಲ್ಲವಳಿದ್ದಳು, ಮೆಫಿಸ್ಟಾಫಿಲಿಸ್‌ನ ಮಾತುಗಳ ಬಗೆಗೆ ಅಷ್ಟು ಕುತೂಹಲ ತೋರಬಲ್ಲವಳಿದ್ದಳು, ಎಂಬುದನ್ನು ನಾನು ಅರ್ಥಮಾಡಿಕೊಳ್ಳಲಾರೆ. ಆದರೆ ಅದೇ ಯೌವನ! ನಾನು ಆಗ ಅವಳ ಬಗೆಗೆ ಹೀಗೆಯೇ ಹೆಮ್ಮೆ ಆನಂದಗಳಿಂದ ಯೋಚಿಸಿದೆ. ಏಕೆಂದರೆ ಇದ

ರಲ್ಲೂ ಔದಾರ್ಯವಿದ್ದಿತು, "ನಾನು ವಿನಾಶದ ಅಂಚಿನಲ್ಲಿರಬಹುದು, ಆದರೆ ಗ್ಯೋಥೇರವರ ಮಹಾ ಮಾತುಗಳು ಜ್ವಲಂತವಾದವುಗಳು" ಎಂದು ಹೇಳುವಂತಿದ್ದಿತು. ಯೌವನದೊಂದಿಗೆ ಯಾವತ್ತೂ ಔದಾರ್ಯ ಹೋಗುತ್ತದೆ. ಅದು ಸ್ವಲ್ಪವೇ ಪ್ರಮಾಣದಲ್ಲಿರಬಹುದು, ಅಥವಾ ತಪ್ಪಾಗಿ ಅನ್ವಯವಾಗಿರಬಹುದು. ಆದರೆ ಅಂತೂ ಇರುತ್ತದೆ. ನಾನು ಅವಳನ್ನು, ಅವಳನ್ನಷ್ಟೆ, ಮನಸ್ಸಿನಲ್ಲಿಟ್ಟುಕೊಂಡು ಹೇಳುತ್ತಿರುವುದು. ಮುಖ್ಯ ವಿಷಯವೆಂದರೆ ನಾನಾಗಲೇ ಅವಳನ್ನು ನನ್ನವಳನ್ನಾಗಿ ಭಾವಿಸಿಕೊಂಡಿದ್ದೆ ಮತ್ತು ನನ್ನ ಪ್ರಭಾವದ ಬಗೆಗೆ ಯಾವ ಸಂಶಯವೂ ಇರಲಿಲ್ಲ. ನಿಮಗೆ ಗೊತ್ತೆ, ನೀವು ಎಷ್ಟು ಮಾತ್ರವೂ ಸಂದೇಹ ಹೊಂದಿರದೆ ಇದ್ದಾಗಿನ ಭಾವನೆಯೇ ಅತ್ಯಂತ ಮಧುರವಾದ ಭಾವನೆಯಾಗಿರುತ್ತದೆ.

ಓಹ್, ನಾನು ಏನು ಹೇಳ ಹೊರಟೆ? ಹೀಗೆಯೇ ಹೇಳುತ್ತ ಹೋದರೆ ನನ್ನ ಯೋಚನೆಗಳನ್ನು ಏಕತ್ರಗೊಳಿಸುವುದು ಯಾವಾಗ? ಓಹ್, ಅವಸರಿಸು, ಅವಸರಿಸು. ಅಮುಖ್ಯ ವಿಷಯಗಳನ್ನು ಬಿಡು... ಓಹ್, ದೇವರೇ!

# II
# ವಿವಾಹದ ಪ್ರಸ್ತಾಪ

ನಾನು ಅವಳ ಬಗೆಗೆ ಕಂಡುಹಿಡಿದ ರಹಸ್ಯಗಳನ್ನು ಸ್ಥೂಲವಾಗಿ ವಿವರಿಸುತ್ತೇನೆ: ಅವಳ ತಂದೆ ತಾಯಿ ಸುಮಾರು ಮೂರು ವರ್ಷಗಳ ಹಿಂದೆ ತೀರಿಕೊಂಡಿದ್ದರು. ಅವಳು ಯಾರೋ ನಿಷ್ಪ್ರಯೋಜಕ ಚಿಕ್ಕಮ್ಮಂದಿರ ವಶದಲ್ಲಿದ್ದಳು. ಅವರನ್ನು ನಿಷ್ಪ್ರಯೋಜಕ ಎನ್ನುವುದು ತುಂಬ ಸೌಮ್ಯ. ಒಬ್ಬಳು ವಿಧವೆ. ಕುಟುಂಬ ದೊಡ್ಡದು – ಆರು ಮಕ್ಕಳು, ಪುಟ್ಟ ಪುಟ್ಟವು. ಇನ್ನೊಬ್ಬಳು ಅವಿವಾಹಿತ ಹೆಂಗಸು, ಮುದುಕಿ, ಕೆಟ್ಟವಳು. ಇಬ್ಬರೂ ಕೆಟ್ಟವರೇ. ಅವಳ ತಂದೆ ಪೌರ ಸೇವೆಯಲ್ಲಿದ್ದರು. ಗುಮಾಸ್ತರಷ್ಟೆ. ಕುಲೀನ ಪದವಿಯನ್ನು ಅವರಿಗೆ ವೈಯಕ್ತಿಕ ಪ್ರಶಸ್ತಿಯಾಗಿ ನೀಡಲಾಗಿದ್ದಿತು, ಅಷ್ಟೆ. ಒಂದು ಮಾತಿನಲ್ಲಿ: ಇವೆಲ್ಲ ನನಗೆ ಅನುಕೂಲವಾಗಿಯೇ ಇದ್ದವು. ಅವರಿಗೆ ಸಂಬಂಧಿಸಿದಂತೆ ನಾನು, ಹೀಗೆ ಹೇಳುವುದಾದರೆ, ಉನ್ನತ ಪ್ರಪಂಚದವನಾಗಿದ್ದೆ. ಎಷ್ಟೇ ಆಗಲಿ ನಾನು ಒಂದು ಪ್ರಖ್ಯಾತ ರೆಜಿಮೆಂಟಿನ ನಿವೃತ್ತ ಜೂನಿಯರ್ ಕ್ಯಾಪ್ಟನ್ ಆಗಿದ್ದೆ. ಜನ್ಮತಃ ಕುಲೀನ. ನನಗೆ ಸ್ವತಂತ್ರ ಆದಾಯವಿದ್ದಿತು. ಒತ್ತೆ ವ್ಯಾಪಾರದ ಬಗೆಗೆ ಹೇಳುವುದಾದರೆ, ಅವಳ ಚಿಕ್ಕಮ್ಮಂದಿರು ಅದರ ಬಗೆಗೆ ಗೌರವವನ್ನೇ ಹೊಂದಿದ್ದರು. ಅವಳ ಚಿಕ್ಕಮ್ಮಂದಿರು

ಅವಳನ್ನು ಈಗ ಮೂರು ವರ್ಷಗಳಿಂದಲೂ ದಾಸ್ಯದಲ್ಲಿರಿಸಿದ್ದರು. ಆದರೂ ಅವಳು ಹೇಗೋ ಶಾಲಾಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಳು. ಅವಳು ಹೇಗೋ ಅದನ್ನು ನಿಭಾಯಿಸಿದ್ದಳು. ಕ್ರೂರ ಮನೆಗೆಲಸಗಳಿಂದ ಹೇಗೋ ಬಿಡುವು ಮಾಡಿಕೊಂಡು ಓದು ಮುಗಿಸಿದ್ದಳು. ಅಂದರೆ ಅವಳು ಹೆಚ್ಚು ಉತ್ತಮವಾದ ಹಾಗೂ ಉದಾತ್ತವಾದ ಜೀವನಕ್ಕಾಗಿ ಹಂಬಲಿಸುತ್ತಿದ್ದಳು ಎಂಬುದನ್ನು ಅದು ಖಂಡಿತವಾಗಿಯೂ ಸಾಧಿಸುತ್ತಿದ್ದಿತು! ಆದರೆ ನಾನು ಅವಳನ್ನು ವಿವಾಹವಾಗಲು ಬಯಸಿದುದಕ್ಕೆ ಕಾರಣ... ಇದು ಆಮೇಲೆ... ಪರವಾಗಿಲ್ಲ ತಾನೆ? ಅವಳು ತನ್ನ ಚಿಕ್ಕಮ್ಮನ ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದಳು, ಅವರ ಬಟ್ಟೆ ಹೊಲಿಯುತ್ತಿದ್ದಳು, ಕೊನೆಕೊನೆಯಲ್ಲಿ ಅವಳು ಅವರ ಬಟ್ಟೆ ಒಗೆಯುತ್ತಿದ್ದಳಷ್ಟೆ ಅಲ್ಲ, ಅವಳ ಶ್ವಾಸಕೋಶಗಳ ಆ ದುಸ್ಥಿತಿಯಲ್ಲೂ, ನೆಲವನ್ನು ಉಜ್ಜಿ ಸ್ವಚ್ಛಗೊಳಿಸಲೂ ಬೇಕಾಗಿದ್ದಿತು! ಸರಳವಾಗಿ ಹೇಳುವುದಾದರೆ, ಅವರು ವಾಸ್ತವವಾಗಿ ಅವಳನ್ನು ಸಿಕ್ಕಾಪಟ್ಟೆ ಶೋಷಿಸುತ್ತಿದ್ದರು, ಹೊಡೆಯುತ್ತಿದ್ದರು, ಅವಳನ್ನು ಇಟ್ಟುಕೊಳ್ಳುವುದಕ್ಕೆ ಇಷ್ಟವಿಲ್ಲದವರಂತೆ ವರ್ತಿಸುತ್ತಿದ್ದರು. ಕೊನೆಗೆ ಅವರು ಅವಳನ್ನು ಮಾರಲು ಬಯಸಿದ್ದರು. ಉಹ್! ನಾನು ಆ ಹೊಲಸು ವಿವರಗಳನ್ನೆಲ್ಲ ಬಿಟ್ಟುಬಿಡುತ್ತೇನೆ. ಅವಳು ಅನಂತರ ನನಗೆ ಅದರ ಬಗೆಗೆ ಎಲ್ಲ ಹೇಳಿದಳು. ಅವರ ಮನೆಯ ಪಕ್ಕದಲ್ಲಿದ್ದ ದಡಿಯ ವ್ಯಾಪಾರಗಾರನೊಬ್ಬ ಇವೆಲ್ಲವನ್ನೂ ಒಂದು ವರ್ಷದಿಂದ ಗಮನಿಸುತ್ತಿದ್ದ. ಅವನೇನೂ ಸಾಮಾನ್ಯ ವ್ಯಾಪಾರಗಾರನಾಗಿರಲಿಲ್ಲ: ಅವನಿಗೆ ಎರಡು ದಿನಸಿ ಅಂಗಡಿಗಳಿದ್ದವು. ಆಗಲೇ ಇಬ್ಬರು ಹೆಂಡತಿಯರನ್ನು ಸಮಾಧಿ ಮಾಡಿ ಈಗ ಮೂರನೆಯವಳಿಗಾಗಿ ಹುಡುಕುತ್ತಿದ್ದ. "ಅವಳು ಸಾಧುವಾಗಿದ್ದಾಳೆ, ಬಡತನದಲ್ಲಿ ಬೆಳೆದಿದ್ದಾಳೆ. ಅಲ್ಲದೆ ನಾನು ನನ್ನ ಅನಾಥ ಮಕ್ಕಳ ಸಲುವಾಗಿಯಷ್ಟೆ ಮದುವೆಯಾಗುತ್ತಿದ್ದೇನೆ" ಎಂದು ಅವನು ತರ್ಕಿಸಿದ. ಅದೇನೋ ನಿಜವೇ. ಅವನಿಗೆ ಮಕ್ಕಳೂ ಇದ್ದರು, ಅವರನ್ನು ನೋಡಿಕೊಳ್ಳುವುದಕ್ಕೆ ಒಬ್ಬರು ಬೇಕಾಗಿಯೂ ಇದ್ದರು. ಅವನು ಅವರಲ್ಲಿ ವಿವಾಹ ಪ್ರಾರ್ಥನೆ ಮಾಡಿದ. ಚಿಕ್ಕಮ್ಮಂದಿರು ಒಪ್ಪಿದರು. ಅವನೂ ಅವಳ ಚಿಕ್ಕಮ್ಮಂದಿರೂ ಏರ್ಪಾಟು ಮಾಡತೊಡಗಿದರು (ಅಂದಹಾಗೇ, ಅವನಿಗೆ ವಯಸ್ಸು ಐವತ್ತು ಆಗಿತ್ತು). ಅವಳು ತೀವ್ರವಾಗಿ ಹೆದರಿದಳು. ಆಗಲೇ ಅವಳು ನನ್ನ ಬಳಿಗೆ 'ಗೋಲಸ್' ಪತ್ರಿಕೆಯಲ್ಲಿ ತನ್ನ ಜಾಹೀರಾತುಗಳಿಗಾಗಿ ಹಣಕ್ಕಾಗಿ ಬರತೊಡಗಿದುದು. ಕೊನೆಗೆ ಅವಳು ಯೋಚನೆ ಮಾಡಲು ಸಮಯ, ಸ್ವಲ್ಪವಾದರೂ ಸರಿಯೆ ಸಮಯ, ನೀಡಬೇಕೆಂದು ತನ್ನ ಚಿಕ್ಕಮ್ಮಂದಿರನ್ನು ಬೇಡಿಕೊಂಡಳು. ಅವರು ಒಪ್ಪಿ ಒಂದು ಘಳಿಗೆ, ಒಂದೇ ಘಳಿಗೆಯಷ್ಟು ಸಮಯ ನೀಡಿದರು. ಎರಡು ಘಳಿಗೆ ನೀಡಲೂ ನಿರಾಕರಿಸಿದರು. ಅವಳ ಬಾಳನ್ನು ಸಂಕಟಕರವನ್ನಾಗಿ ಮಾಡಿದ್ದರು: "ನಮಗೇ

ತಿನ್ನಲು ಇಲ್ಲದಿರುವಾಗ ಇವಳಿಗೆ ಬೇರೆ ಊಟ ಹಾಕಬೇಕು." ಇವನ್ನೆಲ್ಲ ನಾನು ಆಗಲೇ ತಿಳಿದಿದ್ದೆ. ಅಂದು, ಬೆಳಗಿನ ಆ ಸಂಭಾಷಣೆಯನಂತರ, ನಾನು ನಿರ್ಧಾರ ಮಾಡಿದೆ. ಸಂಜೆ ಆ ಅಂಗಡಿಕಾರ ಅವಳನ್ನು ಕಾಣಲು ಬಂದ, ಅಂಗಡಿಯಿಂದ ಐವತ್ತು ಕೊಪೆಕ್ಕಿಗೆ ಒಂದು ಪೌಂಡ್ ಬರುವ ಮಿಠಾಯಿ ತಂದಿದ್ದ. ಅವಳು ಅಲ್ಲಿ ಅವನ ಜೊತೆ ಕುಳಿತಿದ್ದಳು. ನಾನು ಲುಕೇರ್ಯಳನ್ನು ಅಡಿಗೆಮನೆಯಿಂದ ಹೊರಗೆ ಕರೆದು, ನಾನು ಅವಳಿಗೆ (ಆ ಹುಡುಗಿಗೆ) ತುರ್ತಾಗಿ ಏನೋ ಹೇಳ ಬೇಕಾಗಿದೆಯೆಂದೂ ಅವಳಿಗಾಗಿ (ಆ ಹುಡುಗಿಗಾಗಿ) ಹೊರಗಡೆ ಗೇಟಿನ ಬಳಿ ಕಾಯುತ್ತಿದ್ದೇನೆಂದೂ ಅವಳ (ಆ ಹುಡುಗಿಯ) ಬಳಿ ಹೋಗಿ ಕಿವಿಯಲ್ಲಿ ಮೆಲ್ಲಗೆ ಹೇಳಬೇಕೆಂದು ಅವಳಿಗೆ (ಲುಕೇರ್ಯಳಿಗೆ) ತಿಳಿಸಿದೆ. ನಾನು ಸಂತೃಪ್ತಿ ಯಿಂದ ಕೂಡಿದ್ದೆ. ಒಟ್ಟಿನಲ್ಲಿ ನಾನು ಆ ಇಡೀ ದಿನ ಸಂತೃಪ್ತಿಯಿಂದಿದ್ದೆ.

ಅಲ್ಲೇ, ಆ ಗೇಟಿನ ಬಳಿಯೇ, ಲುಕೇರ್ಯಳ ಸಮ್ಮುಖದಲ್ಲೇ, ನಾನು ಅವಳಿಗೆ – ನಾನು ಕರೆದುದರಿಂದಾಗಿ ಆಗಲೇ ಅವಳಿಗೆ ಆಗಿದ್ದ ಆಶ್ಚರ್ಯಕ್ಕೆ ಮತ್ತಷ್ಟು ಆಶ್ಚರ್ಯ ಸೇರಿಸಿ – ಅವಳು ಒಪ್ಪುವುದಾದಲ್ಲಿ ನಾನು ಸಂತಸಿತನಾಗುತ್ತೇನೆ, ಗೌರವಿತನಾಗುತ್ತೇನೆ, ಎಂದು ತಿಳಿಸಿದೆ... ಆಮೇಲೆ ಗೇಟಿನ ಬಳಿಯೇ ಹಾಗೆ ವಿವಾಹ ಪ್ರಸ್ತಾಪ ಮಾಡುತ್ತಿದ್ದ ನನ್ನ ರೀತಿಯನ್ನು ಕಂಡು ಆಶ್ಚರ್ಯಗೊಳ್ಳಬಾ ರದೆಂದು ನಾನು ಅವಳಿಗೆ ಹೇಳಿದೆ. ನಾನೊಬ್ಬ ಮುಚ್ಚುಮರೆ ಇಲ್ಲದ ಮನುಷ್ಯ, ಪರಿಸ್ಥಿತಿಯೆಲ್ಲ ನನಗೆ ಚೆನ್ನಾಗಿ ತಿಳಿದಿದೆ, ಎಂದು ತಿಳಿಸಿದೆ. ನಾನು ಮುಚ್ಚು ಮರೆ ಇಲ್ಲದಂತಿದ್ದೆ, ಅದೇನೂ ಸುಳ್ಳಲ್ಲ. ಹೋಗಲಿ, ಅದು ಹಾಳಾಗಲಿ... ನನ್ನ ಮಾತು ಸಭ್ಯವಾಗಿದ್ದಿತಷ್ಟೇ ಅಲ್ಲ – ಅದು ನನ್ನ ಉತ್ತಮ ಶಿಕ್ಷಣಕ್ಕೆ ಸಾಕ್ಷಿಯಾ ಗಿದ್ದಿತು – ಅನನ್ಯ ರೀತಿಯದೂ ಆಗಿದ್ದಿತು. ಅದೇ ಮುಖ್ಯ ವಿಷಯ. ಹೌದು, ಅದನ್ನು ಒಪ್ಪಿಕೊಳ್ಳುವುದರಲ್ಲಿ ತಪ್ಪೇನಿದೆ? ನನ್ನ ಯೋಗ್ಯತೆಯನ್ನು ನಾನೇ ತೀರ್ಮಾನಿಸ ಬಯಸುತ್ತೇನೆ, ಹಾಗೆಯೇ ತೀರ್ಮಾನಿಸುತ್ತೇನೆ. ನಾನು ನನ್ನ ವಿಷಯದಲ್ಲೇ ಪರ ವಿರೋಧ ಎರಡನ್ನೂ ಹೇಳಬೇಕು, ಹಾಗೆಯೇ ಹೇಳು ತ್ತೇನೆ. ಇದು ಮೂರ್ಖತನ, ನನಗೆ ಗೊತ್ತು. ಆದರೆ ಅನೇಕ ದಿನಗಳನಂತರವೂ ಅದನ್ನು ಜ್ಞಾಪಕಕ್ಕೆ ತಂದುಕೊಂಡಾಗ ನನಗೆ ಆನಂದವೇ ಆಯಿತು. ನಾನು ವಿಶೇಷ ಪ್ರತಿಭಾವಂತನಾಗಲೀ ಬುದ್ಧಿಶಾಲಿಯಾಗಲೀ ಅಲ್ಲ, ವಿಶೇಷವಾದ ದಯಾಳುವೂ ಅಲ್ಲವೇನೋ, ನಾನು ಒಂದು ರೀತಿಯ ಅಗ್ಗದ ಅಹಂಭಾವಿ (ನನಗೆ ಈ ಮಾತು ಚೆನ್ನಾಗಿ ನೆನಪಿದೆ, ಅದು ನಾನು ಅವರ ಮನೆಗೆ ಹೋಗುವಾಗ ದಾರಿಯಲ್ಲಿ ಹೊಳೆಯಿತು, ನನಗೆ ತುಂಬ ಇಷ್ಟವಾಯಿತು), ಇತರ ವಿಷಯುಗಳಿಗೆ ಸಂಬಂಧಿ ಸಿಯೂ ನನ್ನಲ್ಲಿ ಅಹಿತವಾದ ಅನೇಕ ಅಂಶಗಳಿರುವುದು ಸಾಧ್ಯ, ಎಂದು ನಾನು ಅವಳಿಗೆ ಮುಚ್ಚುಮರೆಯಿಲ್ಲದೆ, ನಿಸ್ಸಂಕೋಚವಾಗಿ ಹೇಳಿದೆ. ಇದೆಲ್ಲವನ್ನೂ

ನಾನು ಒಂದು ವಿಚಿತ್ರ ರೀತಿಯ ಸೊಕ್ಕಿನಿಂದ ಹೇಳಿದೆ – ಅಂಥ ವಿಷಯಗಳನ್ನು ಹೇಗೆ ಹೇಳಲಾಗುತ್ತದೆಂಬುದನ್ನು ನಾವೆಲ್ಲ ತಿಳಿದೇ ಇದ್ದೇವೆ. ನನ್ನ ಈ ನ್ಯೂನತೆ ಗಳನ್ನೆಲ್ಲ ಹೇಳಿಕೊಂಡನಂತರ ನನ್ನ ಉತ್ತಮಾಂಶಗಳನ್ನು ಪಟ್ಟಿ ಮಾಡುವುದನ್ನು ಸಹಿಸುವಷ್ಟು ಉತ್ತಮಾಭಿರುಚಿಯೂ ನನ್ನಲ್ಲಿ ಸಾಕಷ್ಟು ಇದ್ದಿತೆಂಬುದನ್ನು ನಾನು ಹೇಳಬೇಕಾಗಿಯೇ ಇಲ್ಲ. "ಈ ನ್ಯೂನತೆಗಳನ್ನು ಹೋಗಲಾಡಿಸುವಂತೆ ನನ್ನಲ್ಲಿ ಇಂತಹ ಇಂತಹ ಸದ್ಗುಣಗಳಿವೆ" ಎಂದು ಹೇಳುವಂತೆ. ಅವಳು ಇನ್ನೂ ತುಂಬ ಹೆದರಿದ್ದಳೆಂದು ನಾನು ಕಂಡುಕೊಂಡೆ, ಆದರೆ ನನ್ನ ಮಾತಿನ ರಭಸವನ್ನೇನೂ ಕಮ್ಮಿ ಮಾಡಲಿಲ್ಲ. ತದ್ವಿರುದ್ಧವಾಗಿ, ಅವಳು ಹೆದರಿದ್ದಳೆಂಬುದನ್ನು ಕಂಡು ಕೊಂಡ ನಾನು ನನ್ನ ಮಾತನ್ನು ಬೇಕಂತಲೇ ಇನ್ನೂ ಹೆಚ್ಚು ನಿಷ್ಠುರವನ್ನಾಗಿ ಮಾಡಿದೆ. ನನ್ನ ಮನೆಯಲ್ಲಿ ಅವಳಿಗೆ ಸಾಕಷ್ಟು ಉಣ್ಣಲೇನೋ ಇರುತ್ತದೆ, ಆದರೆ ಸೊಗಸಿನ ಉಡುಪುಗಳು, ರಂಗಮಂದಿರಗಳು, ನೃತ್ಯ ಕೂಟಗಳು ಇವು ಗಳು ಮಾತ್ರ ಇಲ್ಲ, ನಾನು ನನ್ನ ಗುರಿ ಸಾಧಿಸಿಕೊಂಡನಂತರ ಬಹುಶಃ ಅವುಗಳ ಬಗೆಗೆ ಯೋಚಿಸಬಹುದು, ಎಂದು ನಾನು ನೇರವಾಗಿಯೇ ಹೇಳಿಬಿಟ್ಟೆ. ನನ್ನ ಈ ನಿಷ್ಠುರ ವಾಗ್ಧೋರಣೆಯಿಂದ ಪ್ರಭಾವಿತನಾಗಿ ಹಾಗೆಯೇ ಮಾತನಾಡುತ್ತ ಹೋದೆ. ನಾನು ಅಂತಹ ವೃತ್ತಿ ಹೊಂದಿದ್ದರೂ – ಒತ್ತೆಯ ಅಂಗಡಿ ಇಟ್ಟುಕೊಂಡಿದ್ದರೂ – ನನಗೆ ಬೇರೆಯೇ ಒಂದು ಧ್ಯೇಯವಿದ್ದಿತು, ಕೆಲವು ಪರಿಸ್ಥಿತಿಗಳಿಂದಾಗಿ ಆ ವೃತ್ತಿ ಹಿಡಿದಿದ್ದೆ, ಎಂಬುದನ್ನೂ, ನಾನು ಸಾಧ್ಯವಾದಷ್ಟೂ ಅಚಿಂತಿತವೆನ್ನುವಂತೆ ಹೇಳಿದೆ... ಅದನ್ನು ಹೇಳಲು ನನಗೆ ಹಕ್ಕಿದ್ದಿತು: ನನಗೆ ಒಂದು ಧ್ಯೇಯವೂ ಇದ್ದಿತು, ಕೆಲವು ಪರಿಸ್ಥಿತಿಗಳೂ ಇದ್ದವು. ಸ್ವಲ್ಪ ತಾಳಿ, ಮಹಾಶಯರೇ, ನಾನು ಒತ್ತೆಯ ಅಂಗ ಡಿಯನ್ನು ಬೇರೆ ಯಾರಿಗಿಂತ ಹೆಚ್ಚಾಗಿ ನನ್ನ ಇಡೀ ಜೀವಮಾನ ದ್ವೇಷಿಸಿದ್ದೇನೆ. ತನ್ನ ಬಗೆಗೇ ಮುಸುಕಿನ ಮಾತುಗಳಲ್ಲಿ ಹೇಳಿಕೊಳ್ಳುವುದು ನಿಜಕ್ಕೂ ಅವಿವೇಕ ವಾದರೂ, ನಾನು ನಿಜಕ್ಕೂ "ಸಮಾಜದ ಮೇಲೆ ಸೇಡು ತೀರಿಸಿಕೊಳ್ಳುತ್ತಿದ್ದೆ." ನಿಜಕ್ಕೂ, ನಿಜಕ್ಕೂ, ನಿಜಕ್ಕೂ ! ಆದ್ದರಿಂದ ನಾನು "ಸಮಾಜದ ಮೇಲೆ ಸೇಡು ತೀರಿಸಿಕೊಳ್ಳುತ್ತಿದ್ದೇನೆ" ಎಂದು ಅವಳು ಆ ಬೆಳಿಗ್ಗೆ ಚುಚ್ಚು ಮಾತನಾಡಿದುದು ಅನ್ಯಾಯವಾಗಿದ್ದಿತು. ಅಂದರೆ, ನೋಡಿ, ನಾನು ಅವಳಿಗೆ ಬಿಚ್ಚು ಮನಸ್ಸಿನಿಂದ "ಹೌದು, ನಾನು ಸಮಾಜದ ಮೇಲೆ ಸೇಡು ತೀರಿಸಿಕೊಳ್ಳುತ್ತಿದ್ದೇನೆ" ಎಂದು ಹೇಳಿದ್ದಿದ್ದರೆ ಅವಳು ಅಂದು ಬೆಳಿಗ್ಗೆ ನಕ್ಕಂತೆಯೇ ನಕ್ಕುಬಿಡುತ್ತಿದ್ದಳು ಮತ್ತು ಆ ಮಾತು ನಿಜಕ್ಕೂ ಅವಿವೇಕದ್ದಾಗಿ ಕಂಡುಬರುತ್ತಿದ್ದಿತು. ಅಲ್ಲದೆ, ನಾನು ಇಲ್ಲಿ ಒಂದು ಅಸ್ಪಷ್ಟ ಸೂಚನೆ ನೀಡಿ, ಅಲ್ಲಿ ಒಂದು ನಿಗೂಢವಾದ ವಾಕ್ಯ ಹೇಳಿ ಅವಳ ಕಲ್ಪನೆಯನ್ನು ಕೊಳ್ಳಬಹುದಿತ್ತೆಂಬುದನ್ನು ಕಂಡುಕೊಂಡೆ. ಅಷ್ಟೇ ಅಲ್ಲದೆ, ಆ ಹೊತ್ತಿಗೆ ನನಗೆ ಆಗಲೇ ಯಾವ ಅಂಜಿಕೆಯೂ ಇರಲಿಲ್ಲ. ಆ ದಡಿಯ ಅಂಗಡಿ

ಕಾರ ಅವಳಿಗೆ ನನಗಿಂತ ಹೆಚ್ಚು ಅಸಹ್ಯದವನಾಗಿದ್ದ ಮತ್ತು ಅವಳ ಪಾಲಿಗೆ ಗೇಟಿನ ಬಳಿ ನಿಂತ ನಾನು ಅವಳ ವಿಮೋಚಕನಾಗಿದ್ದೆ, ಎಂಬುದನ್ನು ನಾನು ತಿಳಿದಿದ್ದೆ. ಇದನ್ನು ನಾನು ಹೇಗಾದರೂ ಅರ್ಥಮಾಡಿಕೊಂಡಿದ್ದೆನೋ. ಓ, ತುಚ್ಛತೆ ಯನ್ನು ಮನುಷ್ಯ ವಿಶೇಷವಾಗಿ ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಾನೆ. ಆದರೆ ನನ್ನದು ತುಚ್ಛತನವಾಗಿದ್ದಿತೆ? ಮನುಷ್ಯನನ್ನು ಹೇಗೆ ತೀರ್ಮಾನಿಸುವುದು? ಆಗಲೂ ನಾನು ಅವಳನ್ನು ಪ್ರೀತಿಸುತ್ತಿರಲಿಲ್ಲವೇ?

ತಾಳಿ, ತಾಳಿ. ನಾನು ಆಗ ಅವಳಿಗೆ ಆಶ್ರಯದಾತನಾಗಿರುವೆನೆಂಬ ಸೂಚನೆ ಯನ್ನು ಕೂಡ ಸಹಜವಾಗಿಯೇ ನೀಡಲಿಲ್ಲ. ಓಹ್, ಇಲ್ಲ. ತದ್ವಿರುದ್ಧವಾಗಿ, "ನಾನು ನಿಮಗೆ ಋಣಿ ನೀವಲ್ಲ" ಎಂದೇ ನಾನವಳಿಗೆ ಹೇಳಿದೆ. ನಾನು ವಾಸ್ತವ ವಾಗಿ ಅದನ್ನು ಮಾತುಗಳಲ್ಲಿ ಹೇಳಿದೆ. ಹಾಗೆ ಹೇಳದಿರಲು ನನಗೆ ಸಾಧ್ಯವಿ ರಲಿಲ್ಲ. ಅದು ಅವಿವೇಕವಾಗಿ ಕಂಡಿದ್ದಿರಬಹುದು, ಏಕೆಂದರೆ ನಾನು ಅವಳ ಮುಖದಲ್ಲಿ ಒಂದು ಕ್ಷಣ ಭಾವ ಬದಲಾದುದನ್ನು ಗಮನಿಸಿದೆ. ಆದರೆ ಒಟ್ಟಿ ನಲ್ಲಿ ನಾನೇ ಗೆದ್ದಿದ್ದೆ. ತಾಳಿ, ಈ ಎಲ್ಲ ಹೊಲಸನ್ನೂ ನಾನು ನೆನಪಿಸಿಕೊಳ್ಳು ತ್ತಿರುವಾಗ, ಹಲ್ಕಾತನದ ಆ ಕೊನೆಯ ತುಣುಕನ್ನೂ ನೆನಪಿಸಿಕೊಳ್ಳಲು ಅವ ಕಾಶ ನೀಡಿ. ನಾನು ಅಲ್ಲಿ ನಿಂತಿದ್ದಾಗ ಈ ಕೆಳಗಿನ ಭಾವನೆ ನನ್ನ ಮನಸ್ಸಿನಲ್ಲಿ ಸುಳಿದು ಹೋಗುತ್ತಿತ್ತು: "ನಾನು ಎತ್ತರವಾಗಿದ್ದೇನೆ, ದೃಢಕಾಯನಾಗಿದ್ದೇನೆ, ಸುಶಿಕ್ಷಿತನಾ ಗಿದ್ದೇನೆ, ಜಂಭಕ್ಕಾಗಿ ಹೇಳುತ್ತಿಲ್ಲ, ನನ್ನ ರೂಪವೂ ಚೆನ್ನಾಗಿದೆ." ಇಂಥ ಯೋಚನೆ ಗಳು ನನ್ನ ಮಿದುಳನ್ನು ಉದ್ರೇಕಿಸುತ್ತಿದ್ದವು. ಅವಳು ಅಲ್ಲಿಯೇ, ಗೇಟಿನ ಬಳಿಯೇ, "ಆಗಲಿ" ಎಂದಳು ಎಂದು ಬೇರೆ ಹೇಳಬೇಕಾಗಿಲ್ಲ. ಆದರೆ... ಒಂದು ಅಂಶವನ್ನು ನಾನಿಲ್ಲಿ ಹೇಳಲೇ ಬೇಕು; ಅವಳು ಗೇಟಿನ ಬಳಿಯೇ ಬಹಳ ಹೊತ್ತು ಯೋಚಿಸುತ್ತ ನಿಂತಿದ್ದು ಅನಂತರವಷ್ಟೆ "ಆಗಲಿ" ಎಂದು ಹೇಳಿದಳು. ಅವಳು ಎಷ್ಟು ಆಲೋಚನಾಮಗ್ನಳಾಗಿದ್ದಳೆಂದರೆ, ನಾನು "ಸರಿಯೋ?" ಎಂದು ಕೇಳು ವವನಿದ್ದೆ. ಆದರೆ ನಾನು ನನ್ನ ದರ್ಪವನ್ನು ನನ್ನ ಮಾತಿನ ಧಾಟಿಯಿಂದ ಹೊರ ಗಿರಿಸದಾಗಿದ್ದೆ. ಹಾಗಾಗಿ "ಸರಿಯೋ, ಹಾಗಾದರೆ?" ಎಂದು ಕೇಳಿದೆ.

"ತಾಳಿ. ನಾನು ಯೋಚಿಸುತ್ತಿದ್ದೇನೆ."

ಅವಳ ಮುದ್ದಾದ ಮುಖವು ಎಷ್ಟು ಗಂಭೀರವಾಗಿದ್ದಿತೆಂದರೆ, ನಾನು ಆಗಲೂ ಅವಳ ಮನಸ್ಸಿನಲ್ಲಿ ಏನಾಗುತ್ತಿದ್ದಿತೆಂಬುದನ್ನು ತಿಳಿಯಬಲ್ಲವನಿದ್ದೆ! ಆದರೆ ನಾನು, "ಏನು ನನ್ನ ಹಾಗೂ ಆ ಅಂಗಡಿಕಾರನ ಮಧ್ಯೆ ಇವಳು ಆಯ್ಕೆ ಮಾಡು ತ್ತಿರಬಹುದೇ?" ಎಂದು ಭಾವಿಸಿ, ವ್ಯಗ್ರಗೊಂಡೆ. ಓಹ್, ಆಗ ನಾನು ಏನನ್ನೂ ಅರ್ಥಮಾಡಿಕೊಳ್ಳಲಿಲ್ಲ. ಏನನ್ನೂ, ಏನನ್ನೂ, ಅರ್ಥಮಾಡಿಕೊಳ್ಳಲಿಲ್ಲ. ಇಂದಿನ ವರೆಗೂ ಅರ್ಥಮಾಡಿಕೊಳ್ಳಲಿಲ್ಲ. ನಾನು ಹೋಗಲು ತಿರುಗಿದಾಗ ಲುಕೇರ್ಯ

ನನ್ನ ಹಿಂದೆಯೇ ಓಡಿಬಂದು ಏದುಸಿರುಬಿಡುತ್ತ, "ನೀವು ನಮ್ಮ ಪ್ರೀತಿಯ ಹುಡುಗಿಯ ಕೈ ಹಿಡಿಯಲು ಮುಂದೆ ಬಂದಿರುವುದಕ್ಕಾಗಿ ದೇವರು ನಿಮಗೆ ಅನುಗ್ರಹಿಸುವವನು, ಮಹಾ ಸ್ವಾಮಿ. ಆದರೆ ಇದನ್ನು ಮಾತ್ರ ನೀವು ಅವಳಿಗೆ ಹೇಳಬೇಡಿ. ಅವಳಿಗೆ ತುಂಬ ಸ್ವಾಭಿಮಾನ" ಎಂದು ಹೇಳಿದುದು ನನಗೆ ನೆನಪಿನಲ್ಲಿದೆ.

ಓಹ್, ಸ್ವಾಭಿಮಾನಿ, ಹೌದು ! ನನಗೆ ಸ್ವಾಭಿಮಾನಿಗಳಾದ ಪುಟ್ಟ ಹುಡುಗಿಯರೇ ಇಷ್ಟ. ಸ್ವಾಭಿಮಾನಿಗಳು ವಿಶೇಷವಾಗಿ ಒಳ್ಳೆಯವರಾಗಿರುತ್ತಾರೆ, ಯಾವಾಗೆಂದರೆ. ಯಾವಾಗ ನೀವು ಅವರ ಮೇಲೆ ನಿಮ್ಮ ಪ್ರಭಾವದ ಬಗೆಗೆ ಇನ್ನಿಷ್ಟು ಮಾತ್ರವೂ ಸಂಶಯ ಹೊಂದಿಲ್ಲದಿರುವಾಗ, ಅಲ್ಲವೇ ? ಓಹ್, ನಾನು ಎಂಥ ನೀಚ ಅಸಭ್ಯ ಮನುಷ್ಯ ! ಓಹ್, ನನಗೆ ಅದು ಆಗ ಎಂಥ ಸಂತೋಷ ನೀಡಿತು ! ಅವಳು ಅಲ್ಲಿ ಆ ಗೇಟಿನ ಬಳಿ ನಿಂತು ನನಗೆ ಸಾಕಷ್ಟು ದಿಗ್ಭ್ರಾಂತಿಗೊಳಿಸುವಂತೆ "ಆಗಲಿ" ಎಂದು ನನಗೆ ಹೇಳುವ ಮುನ್ನ ಗಾಢವಾದ ಆಲೋಚನೆ ಮಾಡುತ್ತಿದ್ದಾಗ, ಅವಳು ವಾಸ್ತವವಾಗಿ ಏನು ಯೋಚನೆ ಮಾಡುತ್ತಿದ್ದಿರಬಹುದು, ಎಂಬುದು ನಿಮಗೆ ಗೊತ್ತೆ ? "ನನಗೆ ಇಲ್ಲಿಯೂ ಸಂಕಟವೇ ಅಲ್ಲಿಯೂ ಸಂಕಟವೇ ಆಗಿರುವುದರಿಂದ, ತುಂಬ ಹೆಚ್ಚು ಸಂಕಟವಾದುದನ್ನೇ, ಆ ದಡಿಯ ಅಂಗಡಿಕಾರನನ್ನೇ, ಆಯ್ಕೆ ಮಾಡಿಕೊಳ್ಳುವುದು ಅತ್ಯುತ್ತಮವಲ್ಲವೇ ? ಅವನು ಕುಡಿದಾಗ ಬೇಕಾದರೆ ನನಗೆ ಸಾಯುವವರೆಗೂ ಹೊಡೆಯಲಿ. ಎಷ್ಟು ಬೇಗ ಸತ್ತರೆ ಅಷ್ಟೂ ಒಳ್ಳೆಯದೇ." ಅಲ್ಲವೇ ? ನೀವೇ ಹೇಳಿ. ಅವಳು ಹೀಗೆ ಯೋಚಿಸುತ್ತಿದ್ದಿರಬಹುದೇ ?

ಆದರೆ ಈಗಲೂ ನನಗದು ಅರ್ಥವಾಗುತ್ತಿಲ್ಲ. ಈಗಲೂ ನನಗೆ ಏನೂ ಅರ್ಥವಾಗುತ್ತಿಲ್ಲ ! ಎರಡು ಅನಿಷ್ಟಗಳ ಮಧ್ಯೆ ತಾನು ಅತ್ಯಂತ ಹೆಚ್ಚಿನ ಅನಿಷ್ಟವನ್ನೇ, ಆ ಅಂಗಡಿಕಾರನನ್ನೇ, ಆಯ್ಕೆ ಮಾಡಿಕೊಳ್ಳಬೇಕು, ಎಂದು ಅವಳು ಯೋಚಿಸುತ್ತಿದ್ದಿರಬಹುದೆಂದು ನಾನು ಈಗಷ್ಟೆ ಹೇಳಿದೆನಲ್ಲವೇ. ಆದರೆ ನಮ್ಮಲ್ಲಿ ಯಾರು ಅವಳಿಗೆ ಅತ್ಯಂತ ಹೆಚ್ಚಿನ ಅನಿಷ್ಟವಾಗಿ ಕಂಡುಬಂದಿರಬಹುದು – ಅಂಗಡಿಕಾರನೇ ಅಥವಾ ನಾನೇ ? ಅಂಗಡಿಕಾರನೇ ಅಥವಾ ಗ್ಯೋಥೆಯನ್ನು ಉದ್ಧರಿಸುತ್ತಿರುವ ಒತ್ತೆಯ ವ್ಯಾಪಾರಿಯೇ ? ಅದೀಗ ಪ್ರಶ್ನೆ. ಎಂಥ ಪ್ರಶ್ನೆ ? ನಿಮಗೆ ಅಷ್ಟೂ ಅರ್ಥವಾಗುವುದಿಲ್ಲವೇ ? ನೋಡಿ, ಉತ್ತರ ಆ ಮೇಜಿನ ಮೇಲೆ ಮಲಗಿದೆ, ಮತ್ತೆ ನೀವು ಹೇಳುತ್ತೀರ, ಪ್ರಶ್ನೆ ! ಮತ್ತೆ ನನ್ನನ್ನು ಪೀಡಿಸುತ್ತೀರ. ಮುಖ್ಯ ವಿಷಯ ನಾನು ಅಲ್ಲವೇ ಅಲ್ಲ... ಅಂದಹಾಗೆ, ಮುಖ್ಯ ವಿಷಯ ನಾನೇ ಅಲ್ಲವೇ ಎಂಬುದೆಲ್ಲ ಈಗ ನನಗೆ ಯಾಕೆ ? ಅದು ನಾನು ಎಷ್ಟು ಮಾತ್ರವೂ ನಿರ್ಧರಿಸಲಾಗದಂಥ ವಿಷಯ. ನಿದ್ರೆ ಮಾಡುವುದು ಹೆಚ್ಚು ಉತ್ತಮವಾವೇನೋ. ತಲೆ ನೋಯುತ್ತಿದೆ....

# III
# ಮಾನವರಲ್ಲೆಲ್ಲ ಅತ್ಯಂತ ಉದಾರಿಯಾದವ, ಆದರೆ ನನಗೇ ಅದರಲ್ಲಿ ನಂಬಿಕೆ ಇಲ್ಲ

ನಿದ್ರೆ ಮಾಡಲಾಗಲಿಲ್ಲ. ಹೌದು, ಎಲ್ಲಿ ಬಂತು, ಈ ನಾಡಿ ಮಿದುಳಿನಲ್ಲಿ ಇಷ್ಟೊಂದು ಗಟ್ಟಿಯಾಗಿ ಕುಟ್ಟುತ್ತಿರುವಾಗ. ಈ ಎಲ್ಲ ಹೊಲಸನ್ನೂ ಈ ಎಲ್ಲ ನೀಚತನವನ್ನೂ ನನ್ನದನ್ನಾಗಿ ಮಾಡಿಕೊಳ್ಳಬೇಕು. ಓಹ್, ನೀಚತನ! ನಾನು ಆಗ ಅವಳನ್ನು ಪಾರು ಮಾಡಿದಂಥ ನೀಚತನ! ಖಂಡಿತವಾಗಿಯೂ ಅವಳು ನನ್ನ ಕ್ರಿಯೆಯನ್ನು ಅರ್ಥಮಾಡಿಕೊಳ್ಳಬೇಕಿದ್ದಿತು, ಮೆಚ್ಚಬೇಕಿದ್ದಿತು, ಅಲ್ಲವೇ? ನಾನು ಇನ್ನೂ ಅನೇಕ ಸಂತಸಕರ ಭಾವನೆಗಳಲ್ಲೂ ತೊಡಗಿದೆ. ಉದಾಹರಣೆಗೆ, ಅವಳಿಗೆ ಕೇವಲ ಹದಿನಾರು ವಯಸ್ಸು, ನನಗೆ ನಲವತ್ತೊಂದು. ಈ ಅಂತರ ನನ್ನನ್ನು ಆಕರ್ಷಿಸಿತು. ಅದು ಸಂತೃಪ್ತಿ ನೀಡಿತು, ಅತ್ಯಂತ ಹೆಚ್ಚಿನ ಸಂತೃಪ್ತಿ ನೀಡಿತು.

ನಾನು ನನ್ನ ವಿವಾಹ à l'anglaise * ಆಗಿರಬೇಕೆಂದು ಬಯಸಿದೆ. ಅಂದರೆ ಕೇವಲ ನಾವಿಬ್ಬರು, ಇಬ್ಬರು ಸಾಕ್ಷಿಗಳು. ಅವರಲ್ಲಿ ಲುಕೇರ್ಯ ಒಬ್ಬಳಾಗಿರಬೇಕು. ಆಮೇಲೆ ನೇರವಾಗಿ ರೈಲಿನಲ್ಲಿ ಮಾಸ್ಕೋಗೆ ಪ್ರಯಾಣ (ಅಂದಹಾಗೇ ನನಗೆ ಅಲ್ಲಿ ಮಾಡಬೇಕಾದ ಸ್ವಲ್ಪ ಕೆಲಸವೂ ಇದ್ದಿತು). ಬಹುಶಃ ಒಂದು ಹೋಟಲಿನಲ್ಲಿ ಹದಿನೈದು ದಿವಸವೋ ಏನೋ ಇರುವುದು. ಅವಳು ಇದಕ್ಕೆ ಆಕ್ಷೇಪ ಎತ್ತಿದಳು. ಅವಳು ಇದಕ್ಕೆ ಅವಕಾಶ ನೀಡುವುದಿಲ್ಲ, ವಿವಾಹವಾಗುವವನು ವಧುವಿನ ತಾಯಿತಂದೆಯರಲ್ಲಿಗೆ ಭೇಟಿ ನೀಡುವ ಪದ್ಧತಿಯಂತೆ ನಾನು ಅವಳ ಚಿಕ್ಕಮ್ಮಂದಿರಲ್ಲಿಗೆ ಭೇಟಿ ನೀಡುವಂತೆ ಒತ್ತಾಯಿಸಿದಳು. ನಾನು ಅವಳ ಈ ಕೇಳಿಕೆಗೆ ಮನ್ನಣೆ ನೀಡಿದೆ. ಆ ಚಿಕ್ಕಮ್ಮಂದಿರೂ ತಮಗೆ ಲಭಿಸಬೇಕಾಗಿದ್ದುದನ್ನು ಪಡೆದುಕೊಂಡರು. ನಾನು ಆ ಮುದುಕಿಯರಿಗೆ ಒಬ್ಬೊಬ್ಬರಿಗೂ ಒಂದೊಂದು ನೂರು ರೂಬಲ್ ಕೊಟ್ಟೆ, ಇನ್ನೂ ಹೆಚ್ಚು ಕೊಡುವುದಾಗಿ ಮಾತು ಕೊಟ್ಟೆ. ಈ ಇಡೀ ವ್ಯವಹಾರದ ನೀಚತನದಿಂದ ಅವಳು ಕೋಪಗೊಳ್ಳದಿರಲೆಂದು ನಾನು ಇದೆಲ್ಲವನ್ನೂ ಅವಳಿಗೆ ತಿಳಿಸಲಿಲ್ಲವೆನ್ನಿ. ಆ ಚಿಕ್ಕಮ್ಮಂದಿರು ತಕ್ಷ

---

*ಇಂಗ್ಲೀಷ್ ಮಾದರಿ (ಫ್ರೆಂಚ್).

ಣವೇ ಸಾಧುವಾದರು, ಸೌಮ್ಯರಾದರು. ಅವಳ ವಿವಾಹದ ಉಡುಗೆತೊಡುಗೆ ಗಳ ಬಗೆಗೂ ನಾವು ವಾದ ಮಾಡಿದೆವು. ಅವಳ ಬಳಿ ವಸ್ತ್ರಾಭರಣಗಳೇನೂ ಇರಲಿಲ್ಲ, ಏನೇನೂ ಇರಲಿಲ್ಲ. ಆದರೆ ಏನೂ ಬೇಡವೆಂದೇ ಅವಳ ವಾದ. ಅದು ಸರಿಯಾದುದಲ್ಲ ಎಂದು ನಾನು ಅವಳಿಗೆ ಮನಗಾಣಿಸುವುದರಲ್ಲಿ ಯಶಸ್ವಿ ಯಾದೆ. ನಾನೇ ಅವುಗಳನ್ನೆಲ್ಲ ಒದಗಿಸಿದೆ. ಏಕೆಂದರೆ ನಾನಲ್ಲದೆ ಬೇರೆ ಯಾರು ಮಾಡಬೇಕಿದ್ದಿತು? ಓಹ್, ಚಿಂತೆ ಇಲ್ಲ. ಆದರೆ ಆ ಸಮಯದಲ್ಲಿ ನಾನು ಅವ ಳಿಗೆ ನನ್ನ ಕೆಲವು ವಿಚಾರಗಳನ್ನೂ ತಿಳಿಸಿದೆ, ಕೊನೆಯಪಕ್ಷ ಅವಳಿಗೆ ಅವುಗಳ ಬಗೆಗೆ ಒಂದು ಸ್ವಲ್ಪ ಸುಳಿವು ನೀಡಲೆಂದು. ಬಹುಶಃ ನಾನು ಈ ವಿಷಯದಲ್ಲಿ ಸ್ವಲ್ಪ ಅವಸರಿಸಿದೆನೋ ಏನೋ. ಮುಖ್ಯ ವಿಷಯವೆಂದರೆ, ಆದಿಯಿಂದಲೂ ಅವಳು ತನ್ನ ಭಾವೋತ್ಕರ್ಷವನ್ನು ಅಂಕೆಯಲ್ಲಿರಿಸಲು ಯತ್ನಿಸಿದರೂ, ತನ್ನ ಪ್ರೇಮವನ್ನು ನನಗೆ ಆನಂದೋತ್ಸಾಹಗಳಿಂದಲೇ ನೀಡಿದಳು. ಸಂಜೆ ಅವಳನ್ನು ಕಾಣಲು ಹೋದಾಗ ನನ್ನನ್ನು ಅತ್ಯಾಸಕ್ತಿಯಿಂದ ಬರಮಾಡಿಕೊಂಡಳು, ಸಂತೋ ಷದಿಂದ ಹರಟೆ ಹೊಡೆದಳು (ಮೋಹಕ, ಮುಗ್ಧ ಹರಟೆ!). ತನ್ನ ಬಾಲ್ಯ ಹಾಗೂ ಶೈಶವ, ತನ್ನ ತಾಯಿತಂದೆಯರ ಮನೆ, ತನ್ನ ತಾಯಿ ತಂದೆ, ಎಲ್ಲ ವಿಷಯಗಳನ್ನೂ ತಿಳಿಸಿದಳು. ಆದರೆ ನಾನು ಅವಳೆಲ್ಲ ಆ ಆನಂದೋತ್ಸಾಹಗಳನ್ನೂ ತಕ್ಷಣವೇ ಭಂಗ ಮಾಡಿದೆ. ನನ್ನ ಉದ್ದೇಶವೂ ಅದೇ ಆಗಿದ್ದಿತು. ನಾನು ಅವಳ ಆನಂದೋತ್ಸಾಹಗಳಿಗೆ ಮೌನದ ಪ್ರತಿಕ್ರಿಯೆ ತೋರಿದೆ. ಕೃಪಾಪೂರ್ಣವಾದ ಮೌನ, ಎನ್ನಿ.... ಆದರೂ ನಮ್ಮ ಸ್ವಭಾವಗಳು ಬೇರೆ ಬೇರೆ, ನಾನೊಂದು ಒಗಟಾಗಿದ್ದೆ, ಎಂಬುದನ್ನು ಅವಳು ಬೇಗನೆಯೇ ಅರಿತಳು. ಒಂದು ಒಗಟಾಗಿರ ಬೇಕು ಎಂದೇ ನಾನೂ ಬಹುಮಟ್ಟಿಗೆ ಯತ್ನಿಸುತ್ತಿದ್ದುದು. ನನ್ನ ಅವಿವೇಕದ ಮನೋಧರ್ಮವನ್ನೆಲ್ಲ ಆ ಉದ್ದೇಶ ಸಾಧನೆಗಾಗಿಯೇ ಏರ್ಪಡಿಸಿಕೊಂಡಿದ್ದೆ. ಮೊಟ್ಟಮೊದಲನೆಯದಾಗಿ – ನಿಷ್ಠುರತೆ. ಮದುವೆಯಾಗುವವರೆಗೂ ನಾನು ಈ ನಿಷ್ಠುರ ಮನೋಧರ್ಮವನ್ನು ಉಳಿಸಿಕೊಂಡಿದ್ದೆ. ಸ್ವಲ್ಪದರಲ್ಲಿ ಹೇಳುವು ದಾದರೆ, ಆಗ ನನಗೆ ಸಂಪೂರ್ಣವಾಗಿ ತೃಪ್ತಿಯಾಗಿದ್ದರೂ, ನಾನು ಒಂದು ಇಡೀ ವ್ಯವಸ್ಥೆಯನ್ನೇ ರೂಪಿಸಿದೆ. ಓಹ್, ಅದು ನನ್ನ ಯತ್ನವಿಲ್ಲದೆಯೇ ರೂಪುಗೊಂ ಡಿತು. ಆದರೆ ನಾನು ಬೇರೆ ರೀತಿ ವರ್ತಿಸಲು ಸಾಧ್ಯವೇ ಇರಲಿಲ್ಲ. ನಾನು ಅಂತಹ ವ್ಯವಸ್ಥೆಯನ್ನು ರೂಪಿಸುವ ಒತ್ತಾಯಕ್ಕೆ ಒಳಗಾಗಿದ್ದೆ. ಅದಕ್ಕೆ ಒಂದು ಅತ್ಯ ಸಾಧಾರಣ ಪರಿಸ್ಥಿತಿ ಕಾರಣವಾಗಿದ್ದಿತು. ಆದರೆ – ನಿಜಕ್ಕೂ, ನಾನೇಕೆ ನನ್ನ ಮೇಲೆಯೇ ಅಪವಾದಗಳನ್ನು ಹೊರಿಸಿಕೊಳ್ಳುತ್ತಿದ್ದೇನೆ? ನಾನು ರೂಪುಗೊಳಿಸಿದ ಆ ವ್ಯವಸ್ಥೆ ಸರಿಯಾದುದೇ ಆಗಿದ್ದಿತು. ಇಲ್ಲ, ಇಲ್ಲಿ ಕೇಳಿ. ನೀವು ವ್ಯಕ್ತಿಯೊಬ್ಬನ ಮೇಲೆ ತೀರ್ಪು ನೀಡಬೇಕಾದರೆ ಪರಿಸ್ಥಿತಿಗಳನ್ನು ತಿಳಿದಿರಬೇಕು... ಇಲ್ಲಿ ಕೇಳಿ.

ಹೇಗೆ ಪ್ರಾರಂಭಿಸಬೇಕೋ ನನಗೆ ತಿಳಿಯದು. ಏಕೆಂದರೆ ಇದೆಲ್ಲ ತುಂಬ ಕಷ್ಟವಾದುದು. ನಿಮ್ಮನ್ನು ನೀವೇ ಸಮರ್ಥಿಸಿಕೊಳ್ಳಬೇಕಾದರೆ – ಅದು ಕಷ್ಟವೇ. ನೋಡಿ, ಅದು ಹೀಗಿದ್ದಿತು: ಯುವಕರು, ಉದಾಹರಣೆಗೆ, ಹಣವನ್ನು ದ್ವೇಷಿಸುತ್ತಾರೆ. ಆದ್ದರಿಂದ ನಾನು ತಕ್ಷಣವೇ ಹಣವನ್ನು ತುಂಬ ಹೊಗಳತೊಡಗಿದೆ. ಹಣ ಕೂಡಿಸುವ ಬಗೆಗೆ ಒತ್ತಿ ಹೇಳಿದೆ. ನಾನು ಅದನ್ನು ಎಷ್ಟು ಪರಿಣಾಮಕಾರಿಯಾಗಿ ಮಾಡಿದೆನೆಂದರೆ ಅವಳು ಹೆಚ್ಚುಹೆಚ್ಚು ಮೌನಳಾದಳು. ತನ್ನ ದೊಡ್ಡ ಕಣ್ಣುಗಳನ್ನು ವಿಶಾಲವಾಗಿ ತೆರೆದುಕೊಂಡು ಕೇಳಿದಳು, ನೋಡಿದಳು, ಮೌನಳಾದಳು. ನೋಡಿ, ಯುವಜನರು ಉದಾರ ಹೃದಯಿಗಳಾಗಿರುತ್ತಾರೆ, ಅಂದರೆ ಒಳ್ಳೆಯ ಯುವಜನರು ಉದಾರ ಹೃದಯಿಗಳಾಗಿರುತ್ತಾರೆ, ಉದ್ರೇಕ ಸ್ವಭಾವದವರಾಗಿರುತ್ತಾರೆ ಅಂತ ನಾನು ಹೇಳುವುದು. ಆದರೆ ಅವರಿಗೆ ಸಹನೆ ಇರುವುದಿಲ್ಲ. ಏನಾದರೂ ಸರಿ ಅವರ ನಿರೀಕ್ಷೆಗೆ ಕಮ್ಮಿಯಾದರೆ ಅವರು ಬೇಗ ತಿರಸ್ಕರಿಸತೊಡಗುತ್ತಾರೆ. ನನಗೆ ವಿಶಾಲ ಮನಸ್ಕತೆ ಬೇಕಿತ್ತು. ನಾನು ವಿಶಾಲ ಮನಸ್ಕತೆಯನ್ನು ಅವಳ ಹೃದಯದಲ್ಲಿ, ಅವಳ ಹೃತ್ಪೂರ್ವಕ ದೃಷ್ಟಿಕೋನದಲ್ಲಿ ನೆಡಬಯಸಿದ್ದೆ, ಗೊತ್ತಾಯಿತೆ? ನಾನೊಂದು ಕೀಳು ಉದಾಹರಣೆ ಕೊಡುತ್ತೇನೆ. ನಾನು ಒತ್ತೆವ್ಯಾಪಾರ ಮಾಡುತ್ತಿದ್ದುದೇಕೆಂದು ಅವಳಿಗೆ ಹೇಗೆ ವಿವರಿಸಿ ಹೇಳಬೇಕಿದ್ದಿತು? ನಾನು ಸಹಜವಾಗಿಯೇ ಅದನ್ನು ತಕ್ಷಣವೇ ಹೇಳಿಬಿಡಲಿಲ್ಲ. ಏಕೆಂದರೆ, ಹಾಗೆ ಮಾಡಿದ್ದರೆ ನಾನು ಅದನ್ನು ಇಟ್ಟುಕೊಂಡಿರುವುದಕ್ಕೆ ನೆಪ ಹೇಳುತ್ತಿದ್ದೆನೆಂದು ಕಂಡುಬರುತ್ತಿದ್ದಿತು. ಆದ್ದರಿಂದ ನಾನು ಹೆಮ್ಮೆಯ ಮೌನದ ಮನೋಧರ್ಮ ತಳೆದೆ. ನಾನು ವಾಸ್ತವವಾಗಿ ಮೌನದಿಂದ ಮಾತನಾಡಿದೆ. ಇದರಲ್ಲಿ ನಾನು ಸಿದ್ಧಹಸ್ತ. ಇಡೀ ಜೀವಮಾನ ಮೌನದಲ್ಲಿ ಮಾತನಾಡುತ್ತ ಕಳೆದಿದ್ದೇನೆ. ನಾನು ಮೌನದಿಂದಲೇ ಒಬ್ಬಂಟಿಗನಾಗಿಯೇ ಇಡೀ ನಾಟಕದ ಮೂಲಕ ಸಾಗಿ ಬಂದಿದ್ದೇನೆ. ಓಹ್, ನಾನೂ ದುಃಖವನ್ನು ಅನುಭವಿಸಿ ಕಂಡಿದ್ದೇನೆ. ನನ್ನನ್ನು ಎಲ್ಲರೂ ತೊರೆದಿದ್ದಾರೆ. ತೊರೆದಿದ್ದಾರೆ ಹಾಗೂ ಮರೆತಿದ್ದಾರೆ. ಯಾರೂ, ಯಾರೂ, ಈ ವಿಷಯವನ್ನು ತಿಳಿದಿಲ್ಲ. ಹಾಗಿರುವಾಗ ಇದ್ದಕ್ಕಿದ್ದಂತೆ ಈ ಹದಿನಾರರ ಹುಡುಗಿ ಬಂದು ನನ್ನ ಬಗೆಗೆ ಯಾರೋ ಹಲ್ಕಾ ಜನರು ಆಡಿದ ವದಂತಿಗಳನ್ನು ಕೇಳಿಕೊಂಡು, ನನ್ನ ಬಗೆಗೆ ಎಲ್ಲ ತಿಳಿದಿರುವುದಾಗಿ ನಂಬುತ್ತಾಳೆ, ನಿಜವಾಗಿ ಮುಖ್ಯವಾದ ವಿಷಯಗಳೆಲ್ಲವೂ ನನ್ನ ಈ ಎದೆಯೊಳಗೇ ಭದ್ರವಾಗಿ ಮುಚ್ಚಿಕೊಂಡಿರುವಾಗ! ನಾನು ಮೌನದಿಂದಿದ್ದೆ, ಇಡೀ ಕಾಲವೂ ನಿನ್ನೆಯವರೆಗೂ ಮೌನದಿಂದಲೇ ಇದ್ದೆ. ಯಾಕೆ ಹಾಗಿದ್ದೆ? ಹೆಮ್ಮೆಯ ಕಾರಣದಿಂದ. ನಾನು ಏನನ್ನೂ ಹೇಳದೆಯೇ ನನ್ನ ವಿಷಯವನ್ನು ಅವಳೇ ಸ್ವತಃ ತಿಳಿಯಲೆಂದು ನಾನು ಬಯಸಿದ್ದೆ. ಖಂಡಿತ,

ಆ ಹಲ್ಕಾ ಜನರ ಕಟ್ಟುಕಥೆಗಳಿಂದ ತಿಳಿಯಲೆಂದಲ್ಲ. ನಾನು ಎಂತಹ ಮನುಷ್ಯ ನಾಗಿದ್ದೆ ಎಂಬುದನ್ನು ಅವಳೇ ಸ್ವತಃ ಕಂಡುಕೊಳ್ಳಲಿ, ನನ್ನನ್ನು ಅರ್ಥಮಾಡಿ ಕೊಳ್ಳಲಿ, ಎಂದು ನಾನು ಬಯಸಿದ್ದೆ. ನಾನು ಅವಳನ್ನು ನನ್ನ ಮನೆಗೆ ಕರೆ ತರುತ್ತಿದ್ದುದರಿಂದ ಅವಳು ನನ್ನನ್ನು ಸಂಪೂರ್ಣವಾಗಿ [ಗೌರವಿಸಬೇಕೆಂದು ನಾನು ಬಯಸಿದ್ದೆ. ನನ್ನ ಕಷ್ಟಕೋಟಲೆಗಳಿಗಾಗಿ ಅವಳು ನನ್ನ ಮುಂದೆ ಭಯ ಗ್ರಸ್ತಳಾಗಿ ನಿಲ್ಲಬೇಕೆಂದು ನಾನು ಬಯಸಿದ್ದೆ – ಅದು ನನಗೆ ಸಲ್ಲತಕ್ಕುದ್ದಾಗಿದ್ದಿತು. ಓಹ್, ನಾನು ಯಾವತ್ತೂ ಹೆಮ್ಮೆಯಿಂದಲೇ ಇದ್ದೇನೆ. ಎಲ್ಲ ಬೇಕು, ಇಲ್ಲವೇ ಏನೂ ಬೇಡ, ಎಂದೇ ನಾನು ಯಾವತ್ತೂ ಬಯಸಿದ್ದೇನೆ. ನಾನು ಸುಖದಲ್ಲಿ ಅರೆಕೊರೆಗಳನ್ನು ನಿರಾಕರಿಸಿ ಪೂರ್ಣವನ್ನು ಬಯಸಿದ ಕಾರಣದಿಂದಲೇ, "ನನ್ನ ಯೋಗ್ಯತೆಯನ್ನು ನೀನೇ ಕಂಡುಕೋ, ನೀನೇ ಮೆಚ್ಚು" ಎನ್ನುವಂತಹ ಮನೋ ಧರ್ಮವನ್ನು ತಳೆಯುವ ಒತ್ತಾಯಕ್ಕೊಳಗಾದೆ. ಏಕೆಂದರೆ, ನಾನೇ ವಿವರಣೆ ಗಳನ್ನು ಕೊಡುತ್ತ ಹೋಗಿದ್ದಲ್ಲಿ, ನನ್ನನ್ನು ಗೌರವಿಸುವಂತೆ ಅವಳನ್ನು ಪ್ರೇರಿ ಸುತ್ತ, ಅವಳ ಮುಂದೆ ಹಲ್ಲು ಕಿರಿಯುತ್ತ, ಬೇಡಿಕೊಳ್ಳುತ್ತ ಹೋಗಿದ್ದಲ್ಲಿ, ಭಿಕ್ಷೆ ಬೇಡಿದಂತೆಯೇ ಆಗುತ್ತಿದ್ದಿತು, ಎಂದು ನೀವು ಒಪ್ಪಿಕೊಳ್ಳಲೇ ಬೇಕು. ಹೋಗಲಿ ಬಿಡಿ, ಆ ಎಲ್ಲ ವಿಷಯಗಳನ್ನೂ ಈಗೇಕೆ ಹೇಳಲು ಹೋಗಬೇಕು !

ಅವಿವೇಕ, ಅವಿವೇಕ ಹಾಗೂ ಅವಿವೇಕ ! ಯುವಜನರಲ್ಲಿ ಕಾಣಬರುವ ಔದಾರ್ಯ ಮೋಹಕವಾಗಿಯೇನೋ ಇರುತ್ತದೆ, ಆದರೆ ಎಷ್ಟು ಮಾತ್ರವೂ ಬೆಲೆ ಇಲ್ಲದ್ದು, ಎಂಬುದನ್ನು ನಾನು ಆಗ ಅವಳಿಗೆ ಕೆಲವೇ ಮಾತುಗಳಲ್ಲಿ ಮುಚ್ಚು ಮರೆ ಇಲ್ಲದೆ ಹಾಗೂ ನಿರ್ದಯದಿಂದ (ನಿರ್ದಯ ಎಂಬ ಮಾತನ್ನು ನಾನು ಒತ್ತಿಹೇಳುತ್ತೇನೆ) ವಿವರಿಸಿ ತಿಳಿಸಿದೆ. ಯಾಕೆ ಅದು ಬೆಲೆ ಇಲ್ಲದ್ದು ? ಯಾಕೆಂದರೆ ಅದು ಅಗ್ಗವಾಗಿ ಪಡೆದುಕೊಂಡದ್ದು, ಜೀವನವನ್ನು ಪ್ರಾರಂಭಿಸುವ ಮುನ್ನವೇ ಅವರಿಗೆ ಕೊಡಲಾದದ್ದು. ಅದು, ಹೀಗೆ ಹೇಳುವುದಾದರೆ, "ಜೀವನದ ಮೊದಲ ಭಾವನೆಗಳ"ಲ್ಲದೆ ಬೇರೇನೂ ಆಗಿರಲಿಲ್ಲ. ಆದರೆ ಅವರು ಮೊದಲು ಅದನ್ನು ಆಚರಣೆಯಲ್ಲಿ ತರುವುದನ್ನು ನಾನು ಕಾಣಬಯಸುತ್ತೇನೆ. ಅಗ್ಗದ ಔದಾರ್ಯ ಯಾವತ್ತೂ ಸುಲಭವೇ. ಪ್ರಾಣಾರ್ಪಣೆ ಮಾಡುವುದೂ ಅಗ್ಗವೇ, ಏಕೆಂದರೆ, ಅದು ಯುವರಕ್ತ ಹಾಗೂ ಉತ್ಸಾಹ ಹೊರಹೊಮ್ಮಲು ದಾರಿ ಹುಡುಕು ವುದು ಬಿಟ್ಟು ಬೇರೇನೂ ಅಲ್ಲ; ಉದಾರವಾದುದನ್ನು ಏನಾದರೂ ಮಾಡಬೇಕೆಂಬ ಉತ್ಕಟಾಕಾಂಕ್ಷೆ ಬಿಟ್ಟು ಬೇರೇನೂ ಅಲ್ಲ. ಓಹ್, ಇಲ್ಲ. ನಿಮ್ಮ ಔದಾರ್ಯವನ್ನು ಕಾರ್ಯದಲ್ಲಿ, ಕಷ್ಟಕರವಾದ, ಕಂಡರಿಯದ, ಕೇಳರಿಯದ ಕಾರ್ಯದಲ್ಲಿ, ಯಾವ ವೈಭವವೂ ಇಲ್ಲದೆ ನಿಂದೆ ಮಹಾತ್ಯಾಗಗಳಷ್ಟೆ ಇರುವ, ಕೀರ್ತಿಯ ಒಂದು ಹನಿಯೂ ಇರದ, ಕಾರ್ಯದಲ್ಲಿ, ಮಾಡಿ ತೋರಿಸಲು ಯತ್ನಿಸಿ. ಪರಿಶುದ್ಧತೆ

ಯಿಂದ ಬೆಳಗುತ್ತಿರುವ ನೀವು, ಪ್ರಾಮಾಣಿಕತೆಯಲ್ಲಿ ಜಗತ್ತಿನಲ್ಲೇ ಸರಿಸಾಟಿ ಇಲ್ಲದಂಥ ನೀವು, ಜಗತ್ತಿನ ಮುಂದೆ ಒಬ್ಬ ಹಲ್ಕಾ ವ್ಯಕ್ತಿಯಾಗಿ ತೋರಿಸಲ್ಪಟ್ಟಾಗ, ನಿಮ್ಮ ಔದಾರ್ಯವನ್ನು ಕಾರ್ಯದಲ್ಲಿ ಮಾಡಿ ತೋರಿಸಲು ಯತ್ನಿಸುವುದನ್ನು ನಾನು ಕಾಣಬಯಸುತ್ತೇನೆ. ಆಗ ನೀವು ಹಿಮ್ಮೆಟ್ಟುವುದು ಖಂಡಿತ. ಮತ್ತೆ ನಾನು – ನನ್ನ ಇಡೀ ಜೀವನ ಮಾಡಿದುದು ಅಂತಹ ಕಾರ್ಯವನ್ನೇ. ಅವಳು ಮೊದಲು ನನ್ನೊಂದಿಗೆ ವಾದಿಸಿದಳು, ಓಹ್, ಎಷ್ಟು ಉದ್ರಿಕ್ತವಾಗಿ. ಆಮೇಲೆ ಮಾತು ಕಮ್ಮಿ ಮಾಡತೊಡಗಿದಳು, ಸಂಪೂರ್ಣವಾಗಿ ಮೌನವಾದಳು. ಕಣ್ಣುಗಳನ್ನು ಭಯಂಕರವಾಗಿ ಅಗಲವಾಗಿ ತೆರೆದಿರಿಸಿಕೊಂಡು ನನ್ನ ಮಾತುಗಳನ್ನು ಕೇಳತೊಡಗಿದಳು. ಎಂತಹ ಅಗಲವಾದ ಲಕ್ಷ್ಯವಿಟ್ಟು ನೋಡುವ ಕಣ್ಣುಗಳು. ಮತ್ತೆ... ಮತ್ತೆ, ಅಷ್ಟೇ ಅಲ್ಲದೆ, ನಾನು ಇದ್ದಕ್ಕಿದ್ದಂತೆ ಅವಳ ಮುಖದ ಮೇಲೆ ಒಂದು ಮುಗುಳ್ನಗೆಯನ್ನು ಕಂಡೆ, ಅಪನಂಬಿಕೆಯ, ಮೌನದ, ಕೆಟ್ಟ ಮುಗುಳ್ನಗೆ. ನಾನು ಅವಳನ್ನು ನನ್ನ ಮನೆಗೆ ಕರೆತಂದಾಗ ಅವಳ ಮುಖದ ಮೇಲೆ ಆ ಮುಗುಳ್ನಗೆ ಇದ್ದಿತು. ಅವಳಿಗೆ ಹೋಗಲು ಬೇರೆ ಯಾವುದೂ ಮಾರ್ಗ ಇರಲಿಲ್ಲ ಎಂಬುದೂ ನಿಜವಾಗಿತ್ತು....

# IV
# ಎಲ್ಲ ಯೋಜನೆಗಳೇ, ಯೋಜನೆಗಳೇ

ನಮ್ಮಿಬ್ಬರಲ್ಲಿ ಯಾರು ಆಗ ಮೊದಲು ಪ್ರಾರಂಭಿಸಿದುದು?

ಯಾರೂ ಇಲ್ಲ. ತಾನೇ ಪ್ರಾರಂಭವಾಯಿತು, ಮೊದಲ ಹೆಜ್ಜೆಯಿಂದಲೂ. ಅವಳನ್ನು ನನ್ನ ಮನೆಗೆ ಕರೆತಂದಾಗ ನಾನು ನಿಷ್ಠುರದ ಮನೋಭಾವ ತೋರಿದೆ ಎಂದು ನಾನಾಗಲೇ ನಿಮಗೆ ಹೇಳಿದೆನಷ್ಟೆ. ಆದರೆ ಅನಂತರ ನಾನು ಕೂಡಲೇ ಈ ನಿಷ್ಠುರ ಭಾವವನ್ನು ತಗ್ಗಿಸಿದೆ. ಒತ್ತೆಯ ಅಂಗಡಿಯಲ್ಲಿ ಅವಳು ನನ್ನ ಬದಲಿಗೆ ಕೆಲಸ ಮಾಡಬೇಕು, ಸಾಮಾನುಗಳನ್ನು ಒತ್ತೆಗೆ ಪಡೆದುಕೊಂಡು ಹಣ ನೀಡಬೇಕು, ಎಂದು ಮದುವೆಗೆ ಮುನ್ನವೇ ನಾನು ಅವಳಿಗೆ ವಿವರಿಸಿ ತಿಳಿಸಿದ್ದೆ. ಅದಕ್ಕೆ ಅವಳು ಆಗ ಯಾವ ಆಕ್ಷೇಪಣೆಯನ್ನೂ ಎತ್ತಿರಲಿಲ್ಲ (ಇದನ್ನು ಗಮನಿಸಿ). ಅಷ್ಟೇ ಅಲ್ಲ ಅವಳು ಈ ಕೆಲಸವನ್ನು ಅತ್ಯುತ್ಸಾಹದಿಂದಲೇ ನಿರ್ವಹಿಸಿದಳು. ಸಹಜವಾಗಿಯೇ, ಕೋಣೆಗಳೂ, ಪೀಠೋಪಕರಣಗಳೂ ಎಲ್ಲ ಬದ

ಲಾಗದೆಯೇ ಉಳಿದಿದ್ದವು. ನಮ್ಮ ಮನೆಯಲ್ಲಿ ಎರಡು ಕೋಣೆಗಳಿದ್ದವು. ಒಂದು ದೊಡ್ಡ ಮುಂಕೋಣೆ. ಇದರಲ್ಲೇ ಒಂದು ಅಡ್ಡ ತೆರೆ ಹಾಕಿ ಒತ್ತೆಯ ಅಂಗಡಿ ಯನ್ನೂ ವ್ಯವಸ್ಥೆಗೊಳಿಸಲಾಗಿತ್ತು. ಮತ್ತೊಂದೂ ದೊಡ್ಡ ಕೋಣೆಯೇ. ಅದು ನಮ್ಮ ಮಲಗುವ ಹಾಗೂ ವಾಸದ ಕೋಣೆಯಾಗಿದ್ದಿತು. ಪೀಠೋಪಕರಣಗಳು ಹೆಚ್ಚಾಗಿ ಇರಲಿಲ್ಲ. ಅವಳ ಚಿಕ್ಕಮ್ಮಂದಿರ ಮನೆಯ ಪೀಠೋಪಕರಣಗಳೇ ಎಷ್ಟೋ ಉತ್ತಮವಾಗಿದ್ದವು. ನನ್ನ ದೇವರ ಮಂದಾಸನವೂ ಅದರ ಮುಂದಿನ ದೀಪವೂ ಒತ್ತೆಯ ಅಂಗಡಿಯಿದ್ದ ಮುಂಕೋಣೆಯಲಿದ್ದಿತು. ನಮ್ಮ ವಾಸದ ಕೋಣೆಯಲ್ಲಿ ನನ್ನ ಪುಸ್ತಕದ ಬೀರುವಿದ್ದಿತು. ಅದರಲ್ಲಿ ನನ್ನ ಕೆಲವು ಪುಸ್ತಕ ಗಳಿದ್ದವು. ಅಲ್ಲಿಯೇ ನನ್ನ ಪೆಠಾರಿಯೂ ಇದ್ದಿತು. ಅದರ ಬೀಗದ ಕೈಗಳನ್ನು ನಾನು ಯಾವಾಗಲೂ ನನ್ನೊಟ್ಟಿಗೇ ಇಟ್ಟುಕೊಂಡಿದ್ದೆ. ಇವಲ್ಲದೆ ಅಲ್ಲಿ ಹಾಸಿಗೆ, ಮೇಜುಗಳು ಹಾಗೂ ಕುರ್ಚಿಗಳೂ ಇದ್ದವೆನ್ನಿ. ನಮ್ಮ ಊಟಕ್ಕೆ, ಅಂದರೆ ಅವಳ, ನನ್ನ, ಹಾಗೂ ಲುಕೇರ‍್ಯಳ (ಇವಳನ್ನು ನಾನು ಆ ಚಿಕ್ಕಮ್ಮಂದಿರಿಂದ ನನ್ನ ಕಡೆಗೆ ಸೆಳೆದುಕೊಂಡಿದ್ದೆ) ಊಟಕ್ಕೆ ದಿನಕ್ಕೆ ಒಂದು ರೂಬಲ್ ಅಷ್ಟೆ ನೀಡುವುದು, ಹೆಚ್ಚಿಗಿಲ್ಲ, ಎಂದು ನಾನು ಅವಳಿಗೆ ಮದುವೆಗೆ ಮುನ್ನವೇ ತಿಳಿಸಿದ್ದೆ. ನಾನು ಮೂರು ವರ್ಷಗಳಲ್ಲಿ ಮೂವತ್ತು ಸಾವಿರ ಉಳಿಸಬೇಕಾಗಿದ್ದಿತೆಂದೂ ಅದನ್ನು ಮಾಡಲು ಇದೊಂದೇ ಮಾರ್ಗವಾಗಿದ್ದಿತೆಂದೂ, ನಾನು ವಿವರಿಸಿದ್ದೆ. ಅವಳು ಯಾವ ಆಕ್ಷೇಪಣೆಯನ್ನೂ ಎತ್ತಿರಲಿಲ್ಲ. ಆದರೆ ನಾನೇ ಈ ಭತ್ಯವನ್ನು ಮೂವತ್ತು ಕೊಪೆಕ್ಕುಗಳಷ್ಟು ಹೆಚ್ಚಿಸಿದ್ದೆ. ರಂಗಮಂದಿರಕ್ಕೆ ಸಂಬಂಧಿಸಿಯೂ ಹೀಗೆಯೇ ಇದ್ದಿತು. ರಂಗಮಂದಿರಕ್ಕೆ ಹೋಗುವ ಪ್ರಶ್ನೆಯನ್ನು ಎತ್ತಲೇ ಕೂಡದೆಂದು ನಾನು ವಿವಾಹಕ್ಕೆ ಮುನ್ನ ತಿಳಿಸಿದ್ದೆ. ಆದರೂ ನಾನೇ ಅನಂತರ ತಿಂಗಳಿಗೊಮ್ಮೆ ಹೋಗುವುದಕ್ಕೆ ಅವಕಾಶ ನೀಡಿದೆ, ಅದೂ ಉತ್ತಮ ತರಗತಿಗೆ, ಮುನ್‌ಸಾಲಿನ ಕುರ್ಚಿಗಳಿಗೆ. ನಾವು ಮೂರು ಬಾರಿ ಹೋದೆವು, 'ಸುಖದ ಬೆಂಬೆತ್ತಿ' ಹಾಗೂ 'ಹಾಡುವ ಹಕ್ಕಿಗಳು' ಪ್ರದರ್ಶನಗಳನ್ನು ಕಂಡೆವು, ಅಂತ ನನ್ನ ಭಾವನೆ (ಓಹ್, ಹೋಗಲಿ ಬಿಡಿ, ಹೋಗಲಿ ಬಿಡಿ !). ನಾವು ರಂಗಮಂದಿರಕ್ಕೆ ಹೋಗುವಾಗಲೂ ಮೌನ, ಹಿಂದಿರುಗುವಾಗಲೂ ಮೌನ. ಆದರೆ ಯಾಕೆ, ಯಾಕೆ ನಾವು ಆರಂಭ ದಿಂದಲೂ ಈ ಮೌನವನ್ನು ಆಶ್ರಯಿಸಿದ್ದೆವು? ಮೊದಮೊದಲು ಜಗಳಗಳೇನೂ ಇರಲಿಲ್ಲ, ನಿಮಗೇ ಗೊತ್ತಿದೆ. ಆದರೂ ಮೌನ ತಳೆದಿದ್ದೆವು. ಆರಂಭದಲ್ಲಿ ಅವಳು ನನ್ನತ್ತ ಒಂದು ರೀತಿಯ ಕಳ್ಳತನದಲ್ಲಿ ನೋಡುತ್ತಿದ್ದಳು, ಎಂದು ನನ್ನ ನೆನಪು. ನಾನು ಅದನ್ನು ಗಮನಿಸಿದ ಕೂಡಲೇ ನಮ್ಮ ಮೌನದ ಮೇಲೆಯೇ ಒತ್ತು ಹಾಕಿದೆ. ನಿಜ, ನಾನೇ ಈ ಮೌನವನ್ನು ಅತಿಯಾಗಿ ಆಚರಿಸಿದುದು, ಅವಳಲ್ಲ. ಅವಳ ಮಟ್ಟಿಗೆ ಹೇಳುವುದಾದರೆ, ಅವಳು ನನ್ನ ತೋಳ ತೆಕ್ಕೆಯೊಳಕ್ಕೆ ಬಂದಾಗ

ಒಂದೆರಡು ಭಾವಾವೇಶದ ಮಾತುಗಳನ್ನಾಡಿದ್ದಳು. ಆದರೆ ಆ ಭಾವಾವೇಶಗಳು ವಿಕಾರವಾಗಿ ಉನ್ಮಾದದಿಂದ ಕೂಡಿದ್ದುದರಿಂದ ಮತ್ತು ನಾನು ಅವಳ ಕಡೆಯಿಂದ ಘನವಾದ ಹಾಗೂ ಗೌರವಪೂರ್ಣವಾದ ಸುಖ ಬಯಸಿದ್ದುದರಿಂದ, ನಿರುತ್ಸಾಹದಿಂದಲೇ ಪ್ರತಿಕ್ರಿಯೆ ತೋರಿದೆ. ನಾನು ಮಾಡಿದುದು ಸರಿಯಾಗಿಯೇ ಇದ್ದಿತು, ಏಕೆಂದರೆ ಈ ಭಾವಾವೇಶಗಳನಂತರ ಮಾರನೆಯ ದಿನವೇ ಜಗಳ ಅನುಸರಿಸಿಕೊಂಡು ಬರುತ್ತಿದ್ದಿತು.

ಅಂದರೆ ಜಗಳಗಳೇ ಆಗುತ್ತಿರಲಿಲ್ಲ, ಆದರೆ ಮತ್ತೆ ಮೌನ ನೆಲಸುತ್ತಿತ್ತು, ಅವಳ ಮುಖಭಾವದಲ್ಲಿ ಹೆಚ್ಚು ಹೆಚ್ಚು ಸೊಕ್ಕು ಕಂಡುಬರುತ್ತಿದ್ದಿತು. “ಬಂಡಾಯ ಹಾಗೂ ಸ್ವಾತಂತ್ರ್ಯ”–ಈ ಅರ್ಥವನ್ನೇ ಅದು ನೀಡುತ್ತಿದ್ದುದು. ಆದರೆ ಅದನ್ನು ಹೇಗೆ ಸಾಧಿಸಿಕೊಳ್ಳಬೇಕು ಎನ್ನುವುದು ಅವಳಿಗೆ ತಿಳಿದಿರಲಿಲ್ಲ. ಹೌದು, ಅವಳ ಸಾಧು ಸ್ವಭಾವದ ಮುಖಭಾವವು ಹೆಚ್ಚು ಹೆಚ್ಚು ಸೊಕ್ಕಿನ ರೂಪ ತಳೆಯತೊಡಗಿತು. ನಿಜಕ್ಕೂ, ನಾನು ಅವಳಿಗೆ ಹೇಳಿಕೆಯ ವ್ಯಕ್ತಿಯಾಗತೊಡಗಿದ್ದೆ; ನಾನು ಅದನ್ನು ಗಮನವಿತ್ತು ಅಭ್ಯಸಿಸಿದೆ, ಗೊತ್ತ. ಅನಂತರ ಅವಳ ಭಾವಾವೇಶಗಳು ಅವಳನ್ನು ಮೈಮರೆಯುವಂತೆ ಮಾಡುತ್ತಿದ್ದವು ಎಂಬುದರಲ್ಲಿ ಸಂದೇಹವಿರಲಿಲ್ಲ. ಉದಾಹರಣೆಗೆ, ಅವಳ ವಿವಾಹಪೂರ್ವ ಬಾಳು ಎಂತಹುದಾಗಿದ್ದಿತು–ಕೇವಲ ಹೊಲಸು, ಸಂಕಟ, ನೆಲ ಉಜ್ಜುವುದು ಇತ್ಯಾದಿ. ಆದರೆ ಈಗ ಅವಳು ಇದ್ದಕ್ಕಿದ್ದಂತೆ ನಮ್ಮ ಬಡತನವನ್ನು ಜರಿಯತೊಡಗಿದುದು ಹೇಗೆ ಸಾಧ್ಯವಾಯಿತು? ವಾಸ್ತವವಾಗಿ ನಮ್ಮದೇನೂ ಬಡತನವಾಗಿರಲಿಲ್ಲವೆಂಬುದನ್ನು ನೀವು ಕಾಣಬೇಕು. ಅದು ಮಿತವ್ಯಯವಾಗಿದ್ದಿತು. ಎಲ್ಲಿ ಅವಶ್ಯವೋ ಅಲ್ಲಿ ಭೋಗವೂ ಇದ್ದಿತು–ಉದಾಹರಣೆಗೆ, ಬಟ್ಟೆಬರೆಗಳಲ್ಲಿ, ಸ್ವಚ್ಛತೆಯಲ್ಲಿ. ಪತಿಯ ಸ್ವಚ್ಛತೆ ಪತ್ನಿಗೆ ಮೆಚ್ಚಿಕೆಯಾಗುತ್ತದೆಂದು ನಾನು ಯಾವತ್ತೂ ಕಲ್ಪಿಸಿಕೊಂಡಿದ್ದೆ. ಆದರೆ ಅವಳು ಜರಿಯುತ್ತಿದ್ದುದು ಬಡತನವನ್ನಲ್ಲ ಆದರೆ ನನ್ನಲ್ಲಿದ್ದಿತೆಂದು ಆರೋಪಿಸಲಾದ ಜಿಪುಣತನವನ್ನು. “ಓಹೋ, ಇವರಿಗೊಂದು ಧ್ಯೇಯ ಬೇರೆ ಇದೆ! ಇವರು ತಮ್ಮ ಚಾರಿತ್ರ್ಯಶಕ್ತಿಯನ್ನು ಪ್ರದರ್ಶಿಸಿಕೊಳ್ಳುತ್ತಿದ್ದಾರೆ” ಎನ್ನುತ್ತಿದ್ದಳು. ಅವಳೇ ಇದ್ದಕ್ಕಿದ್ದಂತೆ ನಮ್ಮ ರಂಗಮಂದಿರ ಭೇಟಿಗಳನ್ನು ರದ್ದುಮಾಡಿದಳು. ಅವಳ ಜರಿಯುವ ಭಾವವು ಹೆಚ್ಚು ಹೆಚ್ಚು ಎದ್ದು ಕಾಣುವಂತಾಯಿತು... ನಾನು ಅಷ್ಟೂ ಹೆಚ್ಚು ಮೌನನಾದೆ, ಹೆಚ್ಚು ಮೌನನಾದೆ.

ಆಗಲಿ, ನಾನೇಕೆ ನನಗೇ ನೆಪಗಳನ್ನು ಹೇಳಿಕೊಳ್ಳಬೇಕು? ವಿಷಯದ ಮುಖ್ಯಭಾಗ ಒತ್ತೆಯ ಅಂಗಡಿಯಾಗಿದ್ದಿತು. ಆದರೆ ಇಲ್ಲಿ ನೋಡಿ, ಹೆಂಗಸೊಬ್ಬಳು, ಅದರಲ್ಲೂ ಹದಿನಾರು ವರ್ಷ ವಯಸ್ಸಿನ ಯುವತಿ, ಗಂಡಸಿನ ಸಂಕಲ್ಪಕ್ಕೆ ಸಂಪೂರ್ಣವಾಗಿ ಅಧೀನಳಾಗದೆ ಇರುವುದು ಸಾಧ್ಯವಿಲ್ಲ, ಎಂಬುದು ನನಗೆ ಗೊತ್ತಿತ್ತು.

ಹೆಂಗಸರಲ್ಲಿ ತನ್ನತನವಿಲ್ಲ. ಅದು ಸ್ವಯಂವೇದ್ಯ. ಅದು ಈಗಲೂ ನನಗೆ ಸುಸ್ಪಷ್ಟ. ಅವಳು ಆ ಮೇಜಿನ ಮೇಲೆ ಅಲ್ಲಿ ಮಲಗಿದ್ದರೂ ಏನಂತೆ? ಸತ್ಯ ಸತ್ಯವೇ. ಮಿಲ್‌ರವರೇ ಈ ವಿಷಯದಲ್ಲಿ ಏನೂ ಮಾಡಲಾಗಲಿಲ್ಲ. ಪ್ರೇಮಾಸಕ್ತ ಮಹಿಳೆ ಯೊಬ್ಬಳು, ಓಹ್, ಪ್ರೇಮಾಸಕ್ತ ಮಹಿಳೆಯೊಬ್ಬಳು ತಾನು ಪ್ರೀತಿಸುವ ಮನುಷ್ಯನ ದುರ್ಗುಣಗಳನ್ನು, ಅವನ ಅಪರಾಧಗಳನ್ನೂ ಸಹ, ಪೂಜಿಸುತ್ತಾಳೆ. ಅವನೇ ತನ್ನ ಅಪರಾಧಗಳಿಗೆ ಅಂಥ ಸಮರ್ಥನೆಗಳನ್ನು ಎಂದೂ ಯೋಚಿ ಸಿಯೇ ಇರುವುದಿಲ್ಲ, ಆದರೆ ಅವಳು ಅವುಗಳನ್ನು ಅವನಿಗೆ ಹುಡುಕಿಕೊಡು ತ್ತಾಳೆ. ಅದು ಔದಾರ್ಯ ಸರಿ, ಆದರೆ ಸ್ವೋಪಜ್ಞತೆಯಲ್ಲ. ಈ ಸ್ವೋಪಜ್ಞ ತೆಯ ಅಭಾವವೇ ಮಹಿಳೆಯರ ವಿನಾಶಕ್ಕೆ ಕಾರಣ. ಅಲ್ಲಿ ಮೇಜಿನ ಮೇಲೆ ಮಲ ಗಿರುವ ಅದರತ್ತ ನೀವು ಬೊಟ್ಟು ಮಾಡಿ ತೋರಿಸಿದರೇನಂತೆ, ಹೌದು ನಾನು ಮತ್ತೆ ಹೇಳುತ್ತೇನೆ, ಏನಂತೆ? ಏನು, ಆ ಮೇಜಿನ ಮೇಲಿರುವ ಅದರಲ್ಲಿ ಏನಾ ದರೂ ಸ್ವೋಪಜ್ಞತೆ ಇದೆಯೇ? ಓಹ್! ಓಹ್!

ಕೇಳಿ. ಅವಳ ಪ್ರೇಮದ ಬಗೆಗೆ ನನಗೆ ಆಗ ಖಾಚಿತ್ಯವಿದ್ದಿತು. ಅವಳು ಓಡೋಡಿ ಬಂದು ನನ್ನ ಕೊರಳ ಸುತ್ತ ತನ್ನ ಬಾಹುಗಳನ್ನು ಬಳಸಿ ತರಲಿಲ್ಲವೇ? ಆದ್ದರಿಂದ ಅವಳು ನನ್ನನ್ನು ಪ್ರೀತಿಸುತ್ತಿದ್ದಳು, ಅಥವಾ – ಅವಳು ಪ್ರೀತಿಸ ಬಯಸಿದ್ದಳು. ಹೌದು, ಅದು ಹಾಗೆಯೇ – ಅವಳು ಪ್ರೀತಿಸಬಯಸಿದ್ದಳು, ಯಾರನ್ನಾದರೂ ಪ್ರೀತಿಸಲು ಹಂಬಲಿಸುತ್ತಿದ್ದಳು. ಅದಕ್ಕೂ ಹೆಚ್ಚಾಗಿ, ಇಲ್ಲಿ ಯಾವ ರೀತಿಯ ಅಪರಾಧವೂ ಸ್ಪಷ್ಟವಾಗಿ ಕಾಣಬರುತ್ತಿರಲಿಲ್ಲ. ಆದ್ದರಿಂದ ಅವಳು ಯಾವುದೇ ನೆಪಗಳನ್ನು ಹುಡುಕಬೇಕಾಗಿರಲಿಲ್ಲ. ಒತ್ತೆಯ ವ್ಯಾಪಾರಿ ಎಂದು ನೀವು ಹೇಳುತ್ತೀರ, ಎಲ್ಲರೂ ಹೇಳುತ್ತಾರೆ. ನಾನೊಬ್ಬ ಒತ್ತೆಯ ವ್ಯಾಪಾ ರಿಯಾಗಿದ್ದರೆ ಏನಂತೆ? ಮಾನವರಲ್ಲೆಲ್ಲ ಅತ್ಯಂತ ಉದಾರಿಯಾದವ ಒಬ್ಬ ಒತ್ತೆಯ ವ್ಯಾಪಾರಿಯಾಗಬೇಕಾದರೆ, ಸ್ಪಷ್ಟವಾಗಿಯೇ ಕಾರಣಗಳಿದ್ದಿರಬೇಕು. ನೋಡಿ, ಮಹಾಶಯರೇ, ಕೆಲವು ವಿಚಾರಗಳಿರುತ್ತವೆ... ಅಂದರೆ, ನೋಡಿ, ಕೆಲವು ವಿಚಾರಗಳು ಮಾತುಗಳಲ್ಲಿ ವ್ಯಕ್ತಪಡಿಸಲಾದರೆ, ನಿಮಗೆ ಭಾರಿ ಅವಿವೇಕ ದವಾಗಿ ಕಂಡುಬರುತ್ತವೆ. ನೀವು ನಾಚಿಕೆಯಿಂದ ಕುಗ್ಗುತ್ತೀರ. ಏಕೆ? ಯಾವ ಕಾರಣಕ್ಕೂ ಇಲ್ಲ. ಏಕೆಂದರೆ, ನಾವೆಲ್ಲ ಹೊಲಸೆದ್ದು ಹೋಗಿದ್ದೇವೆ, ಸತ್ಯ ನಮಗೆ ಅಪಥ್ಯ. ಅಥವಾ ಬೇರೆ ಏತಕ್ಕೋ ನನಗೆ ತಿಳಿಯದು. ನಾನು ಈಗಷ್ಟೆ "ಮಾನವ ರಲ್ಲೆಲ್ಲ ಅತ್ಯಂತ ಉದಾರಿಯಾದವ" ಎಂದು ಹೇಳಿದೆ. ಇದು ತಮಾಷೆಯಾಗಿ ಕಾಣುತ್ತೆ, ಆದರೂ ಆದರೂ ಅದು ನಿಜಕ್ಕೂ ಹಾಗಿದ್ದಿತು. ಅದು ಸತ್ಯ, ಸತ್ಯಸ್ಯ ಸತ್ಯ, ನೋಡಿ. ಹೌದು, ನನಗೆ ಆಗ ಏನಾದರೊಂದು ಭದ್ರತೆಯನ್ನು ಹೊಂದಲು ಬಯಸುವ, ಈ ಒತ್ತೆಯ ಅಂಗಡಿಯನ್ನು ತೆರೆಯುವ, ಹಕ್ಕು ಹೊಂದಿದ್ದೆ.

"ನೀವು ನನ್ನನ್ನು ಪಕ್ಕಕ್ಕೆ ತಳ್ಳಿ ಹಾಕಿದ್ದೀರಿ, ನೀವು – ಅಂದರೆ ಜನರು – ನಿಮ್ಮ ತಿರಸ್ಕಾರದ ಮೌನದಿಂದ ನನ್ನನ್ನು ದೂರ ಅಟ್ಟಿದ್ದೀರಿ. ನಾನು ಭಾವಪೂರ್ಣ ಆವೇಗದಿಂದ ನಿಮಗೆ ಮನವಿ ಮಾಡಿಕೊಂಡಾಗ, ನೀವು ನನ್ನ ಜೀವಮಾನ ಪೂರ್ತಿ ನೆನಪಿಡುವಂಥ ಅವಹೇಳನದಿಂದ ಉತ್ತರಿಸಿದಿರಿ. ಆದ್ದರಿಂದ ನಾನು ನಿಮ್ಮಿಂದ ದೂರ ಸರಿದು ನನ್ನ ಸುತ್ತ ಗೋಡೆ ಕಟ್ಟಿಕೊಳ್ಳುವುದು, ಮೂವತ್ತು ಸಾವಿರ ರೂಬಲ್‌ಗಳನ್ನು ಉಳಿಸಿಕೊಳ್ಳುವುದು, ಎಲ್ಲೋ ಕ್ರಿಮಿಯಾದಲ್ಲಿ ದಕ್ಷಿಣ ಸಮುದ್ರ ತೀರದಲ್ಲಿ, ಪರ್ವತಗಳ ಹಾಗೂ ದ್ರಾಕ್ಷಿವನಗಳ ಮಧ್ಯೆ, ಈ ಮೂವತ್ತು ಸಾವಿರ ರೂಬಲ್‌ಗಳಿಂದ ಕೊಂಡ ನನ್ನ ಸ್ವಂತ ಎಸ್ಟೇಟಿನಲ್ಲಿ ನನ್ನ ದಿನಗಳನ್ನು ಕಳೆಯುವುದು, ಅದಕ್ಕೂ ಹೆಚ್ಚಾಗಿ ನಿಮ್ಮೆಲ್ಲರಿಂದ ದೂರವಿದ್ದರೂ ಯಾರ ಬಗೆಗೂ ಮಾತ್ಸರ್ಯವಿಲ್ಲದೆ, ನನ್ನ ಆತ್ಮದಲ್ಲಿ ಒಂದು ನಿಷ್ಕಳಂಕ ಧ್ಯೇಯವನ್ನಿಟ್ಟುಕೊಂಡು, ನಾನು ಪ್ರೀತಿಸುವ ಹೆಂಗಸು ನನ್ನ ಹೃದಯಕ್ಕೆ ಸಮೀಪವಾಗಿರುವಂತೆ ನನ್ನ ಕುಟುಂಬದೊಂದಿಗೆ – ದೈವೇಚ್ಛೆಯಿದ್ದಲ್ಲಿ – ನೆರೆಯ ಹಳ್ಳಿಗರಿಗೆ ಸಹಾಯ ಮಾಡುತ್ತ ನನ್ನ ದಿನಗಳನ್ನು ಕಳೆಯುವುದು, ಸಮರ್ಥನೀಯವೇ."
ನನ್ನ ಬಗೆಗೇ ಇದೆಲ್ಲವನ್ನೂ ಈಗ ಹೇಳುವುದು ಸರಿಯೆನ್ನಿ. ಆದರೆ ಇದನ್ನೇ ಆಗ ಅವಳ ಮುಂದೆ ದೊಡ್ಡದು ಮಾಡಿ ಹೇಳಿದ್ದರೆ ಅತ್ಯಂತ ಭಾರಿ ತಪ್ಪಾಗುತ್ತಿದ್ದಿತಲ್ಲವೇ ? ಆದ್ದರಿಂದಲೇ ಆ ಹೆಮ್ಮೆಯ ಮೌನ. ಆದ್ದರಿಂದಲೇ ನಾವು ಮೌನದಿಂದ ಜೀವಿಸುತ್ತಿದ್ದೆವು. ಇದನ್ನವಳು ಅರ್ಥಮಾಡಿಕೊಳ್ಳಬಲ್ಲವಳಿದ್ದಳೆ ? ಹದಿನಾರರ ಹರಯ, ಯೌವನದ ಮೊದಲುಬ್ಬರ – ನನ್ನೆಲ್ಲ ಸಮರ್ಥನೆಗಳೂ, ನನ್ನ ಸಂಕಟಗಳೂ ಅವಳಿಗೆ ಏನು ಅರ್ಥವಾಗುತ್ತಿದ್ದವು ? ಮುಚ್ಚುಮರೆ ಇಲ್ಲದಿರುವಿಕೆ, ಪ್ರಪಂಚಜ್ಞಾನ ಇಲ್ಲದಿರುವಿಕೆ, ತಾರುಣ್ಯದ ಅಗ್ಗದ ಮನೋನಂಬಿಕೆಗಳು, "ಉದಾತ್ತ ಹೃದಯ"ರ ಬಗೆಗೆ ಅರೆಕುರುಡುತನ, ಆದರೆ ಈ ಪ್ರಸಂಗದಲ್ಲಿ ನಿರ್ಧಾರಕ ಅಂಶ ಒತ್ತೆಯ ಅಂಗಡಿ, ನೋಡಿದಿರಾ ! (ಆದರೆ ನನ್ನ ಒತ್ತೆಯ ಅಂಗಡಿಯಲ್ಲಿ ನಾನು ಧೂರ್ತನಾಗಿದ್ದೆನೆ ? ಅದನ್ನು ಹೇಗೆ ನಡೆಸುತ್ತಿದ್ದೆ ಅನ್ನುವುದನ್ನು ಅವಳು ಕಾಣಲಿಲ್ಲವೇ ? ನಾನು ಎಂದಾದರೂ ಅನ್ಯಾಯದ ವ್ಯವಹಾರಗಳನ್ನು ನಡೆಸಿದ್ದೆನೆ ?) ಓಹ್, ಈ ಜಗತ್ತಿನಲ್ಲಿ ಸತ್ಯ ಎಷ್ಟು ಭೀಕರವಾದುದು ! ಈ ಪ್ರಿಯತಮೆ, ಈ ಸಾಧು ಸ್ವಭಾವದ ಯುವತಿ, ಈ ಸ್ವರ್ಗಸುಂದರಿ – ಇವಳೊಬ್ಬ ಪೀಡಕಳಾಗಿದ್ದಳು, ಅವಳು ನನ್ನ ಆತ್ಮವನ್ನು ನಿರ್ದಯದಿಂದ ಹಿಂಸಿಸಿದಳು. ಇದನ್ನು ಹೇಳದಿದ್ದರೆ ನಾನು ನನಗೇ ಅನ್ಯಾಯಮಾಡಿಕೊಳ್ಳುತ್ತಿದ್ದೆ. ನಾನು ಅವಳನ್ನು ಪ್ರೀತಿಸಲಿಲ್ಲ ಎಂದು ನೀವು ಭಾವಿಸುತ್ತೀರ ? ನಾನು ಅವಳನ್ನು ಪ್ರೀತಿಸಲಿಲ್ಲ ಎಂದು ಯಾರು ಹೇಳಬಲ್ಲರು ? ನೋಡಿ, ಅದೊಂದು ವಿಕಟ ವಿಧಿಯ ಅಣಕ ಹಾಗೂ ಪ್ರಕೃತಿಯ ವಿಡಂಬನೆ. ನಾವು ಶಾಪಗ್ರಸ್ತರು. ಒಟ್ಟಿನಲ್ಲಿ ಪುರುಷರ

(ನಿರ್ದಿಷ್ಟವಾಗಿ ನನ್ನ) ಜೀವನ ಶಾಪಕ್ಕೆ ಒಳಗಾಗಿದೆ. ನಾನು ಎಲ್ಲೋ ತಪ್ಪು ಮಾಡಿದೆ ಎಂದು ಈಗ ನಾನು ಅರ್ಥಮಾಡಿಕೊಂಡಿದ್ದೇನೆ. ಎಲ್ಲೋ ಏನೋ ತಪ್ಪಾಯಿತು. ಎಲ್ಲವೂ ಸ್ಪಷ್ಟವಾಗಿತ್ತು. ನನ್ನ ಯೋಜನೆ ನೀಲಾಕಾಶದಷ್ಟು ತಿಳಿಯಾಗಿದ್ದಿತು: "ನಿಷ್ಠುರವಾಗಿ ಹೆಮ್ಮೆಯಿಂದಿರುವುದು; ಯಾರದೇ ನೈತಿಕ ಬೆಂಬಲ ಅಥವಾ ಸಮಾಧಾನದ ಅಗತ್ಯವಿರದ, ಮೌನದಿಂದ ಸಂಕಟ ಅನುಭವಿಸಿಕೊಂಡಿರುವ, ವ್ಯಕ್ತಿಯಾಗಿರುವುದು." ಅದು ನಿಜಕ್ಕೂ ಹಾಗಿದ್ದಿತು. ಇಲ್ಲ, ನಾನು ಸೋಗು ಹಾಕುತ್ತಿರಲಿಲ್ಲ, ಇಲ್ಲ! "ಇದರಲ್ಲಿ ಔದಾರ್ಯವಿದ್ದಿತು ಎಂಬುದನ್ನು ಅವಳು ಅನಂತರ ತಾನೇ ಕಾಣುವಳು. ಆದರೆ ಇನ್ನೂ ಕಂಡಿರಲಿಲ್ಲ. ಕಂಡ ಮೇಲೆ ಅದನ್ನು ಹತ್ತು ಪಟ್ಟು ಹೆಚ್ಚು ಮೆಚ್ಚುವಳು, ಕ್ಷಮೆಯಾಚಿಸುತ್ತ ಕೈಗಳನ್ನು ಎದೆಯ ಮೇಲೆ ಅಡ್ಡ ಇರಿಸಿಕೊಂಡು ಮಣ್ಣುಮುಕ್ಕುವಳು." ಇಷ್ಟು ನನ್ನ ಯೋಜನೆಯಾಗಿದ್ದಿತು. ಆದರೆ ನಾನು ಗಮನಕ್ಕೆ ತಂದುಕೊಳ್ಳದ ಅಥವಾ ಮಾಡಲು ಮರೆತ ಏನೋ ಇದ್ದಿರಬೇಕು. ನಾನು ಮಾಡಬೇಕಾಗಿದ್ದ ಆದರೆ ಮಾಡದೆ ಹೋದ ಏನೋ ಇದ್ದಿತು. ಆದರೆ ಸಾಕು, ಸಾಕು. ಈಗ ನಾನು ಯಾರ ಕ್ಷಮೆ ಕೋರಬೇಕು? ಒಮ್ಮೆ ಅದು ಮುಗಿಯಿತೆಂದರೆ, ಮುಗಿಯಿತು. ಧೈರ್ಯ ತಂದುಕೋ ಮನುಷ್ಯ, ಹೆಮ್ಮೆಯಿಂದಿರು! ನೀನು ದೋಷಾರ್ಹನಲ್ಲ!

ಸರಿ. ನಾನು ಸತ್ಯವನ್ನು ಹೇಳುತ್ತೇನೆ. ಸತ್ಯವನ್ನು ಎದುರಿಸಲು ನಾನು ಹಿಂಜರಿಯುವುದಿಲ್ಲ: ಅವಳೇ ತಪ್ಪಿತಸ್ಥಳು, ಅವಳೇ ತಪ್ಪಿತಸ್ಥಳು!

# V
# ಸಾಧು ಸ್ವಭಾವದವಳ ಬಂಡಾಯ

ಅಂಗಡಿಯಲ್ಲಿ ಹಣವನ್ನು ತನಗಿಷ್ಟ ಬಂದಂತೆ ಕೊಡುವುದು, ಒತ್ತೆಗೆ ತಂದ ವಸ್ತುಗಳಿಗೆ ಅತಿಹೆಚ್ಚು ಬೆಲೆ ಕಟ್ಟುವುದು – ಹೀಗೆ ಅವಳು ಇದ್ದಕ್ಕಿದ್ದಂತೆ ಮಾಡ ತೊಡಗಿದುದು ನಮ್ಮ ಜಗಳಗಳಿಗೆ ನಾಂದಿಯಾಯಿತು. ಈ ವಿಷಯದ ಮೇಲೆ ಅವಳು ಒಂದೆರಡು ಬಾರಿ ನನ್ನೊಂದಿಗೆ ವಾಸ್ತವವಾಗಿ ವಾದಿಸಿದಳು ಕೂಡ. ನಾನು ನನ್ನ ಪಟ್ಟನ್ನೇ ಹಿಡಿದೆ. ಆಗಲೇ ಈ ಕ್ಯಾಪ್ಟನ್ನನ ವಿಧವೆ ಬಂದುದು.

ವೃದ್ಧೆಯೊಬ್ಬಳು, ಒಬ್ಬ ಕ್ಯಾಪ್ಟನ್ನನ ವಿಧವೆ, ತನ್ನ ದಿವಂಗತ ಪತಿ ತನಗೆ

ಬಳುವಳಿಯಾಗಿ ಕೊಟ್ಟಿದ್ದ, ಸಾಮಾನ್ಯ ರೀತಿಯ ನೆನಪಿನ ವಸ್ತು, ಒಂದು ಪುಟ್ಟ ಲಾಕೆಟನ್ನು ಒತ್ತೆ ಇಡಲು ಬಂದಳು. ನಾನು ಅವಳಿಗೆ ಮೂವತ್ತು ರೂಬಲ್ ಕೊಟ್ಟೆ. ಲಾಕೆಟನ್ನು ಜಾಗರೂಕತೆಯಿಂದ ಇರಿಸಿರಬೇಕೆಂದು ಅವಳು ಅಳುತ್ತ ಕುಂಯಿಗುಡುತ್ತ ನನ್ನನ್ನು ಪ್ರಾರ್ಥಿಸಿದಳು. ಖಂಡಿತ ಜಾಗರೂಕತೆಯಿಂದ ಇರಿಸಿರಲಾಗುವುದು, ಎಂದು ನಾನೆಂದೆ. ಆಮೇಲೆ ಐದು ದಿನಗಳನಂತರ ಅವಳು ಇದ್ದಕ್ಕಿದ್ದಂತೆ ಬಂದು ಒಂದು ಕೈಬಳೆಯನ್ನು ನೀಡಿ ತನ್ನ ಲಾಕೆಟಿನ ಬದಲಿಗೆ ಅದನ್ನಿಟ್ಟುಕೊಂಡು ಲಾಕೆಟನ್ನು ಹಿಂದಿರುಗಿಸುವಂತೆ ಕೇಳಿದಳು. ಆ ಕೈಬಳೆಗೆ ಎಂಟು ರೂಬಲ್‌ಗಳ ಬೆಲೆಯೂ ಇರಲಿಲ್ಲ. ನಾನು ನಿರಾಕರಿಸಿದೆ, ತೀರ ಸಹಜವಾಗಿಯೇ. ನನ್ನ ಹೆಂಡತಿಯು ಕಣ್ಣು ಸನ್ನೆ ಅವಳಿಗೆ ಏನೋ ಹೇಳಿರಬೇಕು, ಏಕೆಂದರೆ ನಾನು ಹೊರಗೆ ಹೋಗಿದ್ದಾಗ ಅವಳು ಬಂದು ಆ ಕೈಬಳೆ ಕೊಟ್ಟು ತನ್ನ ಲಾಕೆಟನ್ನು ಇಸಿದುಕೊಂಡು ಹೋದಳು.

ಅದೇ ದಿನ ಈ ವಿಷಯ ತಿಳಿದ ನಾನು ನನ್ನ ಹೆಂಡತಿಯೊಂದಿಗೆ ಮೃದುವಾಗಿ, ಆದರೆ ದೃಢವಾಗಿ ಹಾಗೂ ವಿವೇಕಯುತವಾಗಿ ಮಾತನಾಡಿದೆ. ಅವಳು ಮಂಚದ ಮೇಲೆ ಕುಳಿತು ನೆಲವನ್ನೇ ದಿಟ್ಟಿಸಿ ನೋಡುತ್ತ ತನ್ನ ಬಲ ಪಾದದಿಂದ ರತ್ನಗಂಬಳಿಯ ಮೇಲೆ ಟಪಟಪ ಸದ್ದು ಮಾಡುತ್ತಿದ್ದಳು (ಅದು ಅವಳ ಒಂದು ಅಭ್ಯಾಸವಾಗಿತ್ತು). ಅವಳ ತುಟಿಗಳ ಮೇಲೆ ಒಂದು ಕೇಡಿನ ಮುಗುಳ್ನಗೆ ಮೂಡಿತು. ಆಗ, ನನ್ನ ಧ್ವನಿಯನ್ನು ಎತ್ತದೆಯೇ ನಾನು, ಹಣ ನನ್ನದು, ನನ್ನ ಸ್ವಂತ ಅಭಿಪ್ರಾಯಕ್ಕೆ ನನಗೆ ಹಕ್ಕಿದೆ, ಎಂದು ಶಾಂತವಾಗಿಯೇ ಹೇಳಿದೆ. ಅವಳು ನನ್ನ ಮನೆಯಲ್ಲಿ ಪಾಲ್ಗೊಳ್ಳಬೇಕೆಂದು ನಾನು ಮೊದಲು ಸಲಹೆ ಮಾಡಿದಾಗ ನಾನು ಅವಳಿಂದ ಏನನ್ನೂ ಮುಚ್ಚಿಡಲಿಲ್ಲವೆಂಬುದನ್ನು ಅವಳೂ ಚೆನ್ನಾಗಿ ತಿಳಿದಿದ್ದಳು, ಎಂದೂ ತಿಳಿಸಿದೆ.

ತಕ್ಷಣವೇ ಅವಳು ಜಿಗಿದು ನಿಂತಳು, ಮೈ ಉದ್ದ ಕಂಪಿಸುತ್ತ. ನೀವು ನಂಬುತ್ತೀರೋ ಇಲ್ಲವೋ, ಇದ್ದಕ್ಕಿದ್ದಂತೆ ನನ್ನನ್ನು ರೋಷದಿಂದ ನೋಡುತ್ತ ಪಾದ ಕುಟ್ಟತೊಡಗಿದಳು. ಅವಳೊಂದು ಕಾಡು ಮೃಗದಂತಾಗಿದ್ದಳು. ಅದೊಂದು ಆವೇಶವಾಗಿದ್ದಿತು. ಅವಳು ಆವೇಶಗೊಂಡ ಕಾಡು ಮೃಗದಂತಾಗಿದ್ದಳು. ನಾನು ಆಶ್ಚರ್ಯದಿಂದ ಮೂಕನಾಗಿದ್ದೆ. ಅಂತಹ ಭಾವಸ್ಫೋಟವನ್ನು ನಾನೆಂದೂ ನಿರೀಕ್ಷಿಸಿರಲಿಲ್ಲ. ಆದರೆ ನಾನು ಸಮಯಸ್ಫೂರ್ತಿಯನ್ನು ಕಳೆದುಕೊಳ್ಳಲಿಲ್ಲ. ಸ್ವಲ್ಪವೂ ಕದಲಲಿಲ್ಲ ಕೂಡ. ಮತ್ತೊಮ್ಮೆ ಅಷ್ಟೇ ಶಾಂತವಾದ ಧ್ವನಿಯಲ್ಲಿ, ಇನ್ನು ಮುಂದೆ ನನ್ನ ವ್ಯಾಪಾರದಲ್ಲಿ ಕೈಹಾಕಲು ಅವಳಿಗೆ ಅವಕಾಶ ನೀಡುವುದಿಲ್ಲ ಎಂದು ನೇರವಾಗಿ ಹೇಳಿದೆ. ಅವಳು ನನ್ನ ಮುಖದ ಮುಂದೆಯೇ ಗಟ್ಟಿಯಾಗಿ ನಕ್ಕು ಹೊರಗೆ ಹೋದಳು.

ಮನೆಯನ್ನು ಬಿಟ್ಟು ಹೋಗಲೂ ಅವಳಿಗೆ ಹಕ್ಕಿರಲಿಲ್ಲ ಎಂಬುದೂ ಇಲ್ಲಿ ಮುಖ್ಯವಾದ ವಿಷಯ. ನನ್ನ ಜೊತೆ ಅಲ್ಲದೆ ಒಂದು ಹೆಜ್ಜೆಯನ್ನೂ ಹೊರಗೆ ಇರಿಸಬಾರದೆಂದು ಮದುವೆಗೆ ಮುಂಚೆಯೇ ನಾನು ಷರತ್ತು ಹಾಕಿದ್ದೆ. ಸಂಜೆ ಹೊತ್ತಿಗೆ ಅವಳು ಮನೆಗೆ ಹಿಂದಿರುಗಿದಳು. ನಾನು ಒಂದು ಮಾತನ್ನೂ ಆಡಲಿಲ್ಲ.

ಮಾರನೆಯ ದಿನ ಬೆಳಗಾಗುತ್ತಿದ್ದಂತೆಯೇ ಅವಳು ಹೊರಗೆ ಹೋದಳು. ಮತ್ತೆ ಅದರ ಮಾರನೆಯ ದಿನವೂ ಹೊರಗೆ ಹೋದಳು. ನಾನು ಒತ್ತೆಯ ಅಂಗಡಿಗೆ ಬೀಗ ಹಾಕಿ ಅವಳ ಚಿಕ್ಕಮ್ಮಂದಿರನ್ನು ಕಾಣಲು ಹೋದೆ. ಮದುವೆ ಯಾದನಂತರ ನಾನು ಕೂಡಲೇ ಅವರೊಂದಿಗೆ ಎಲ್ಲ ಸಂಬಂಧಗಳನ್ನೂ ಕಡಿದುಹಾಕಿದ್ದೆ. ಅವರನ್ನು ಆಹ್ವಾನಿಸಿಯೂ ಇರಲಿಲ್ಲ, ಅವರ ಮನೆಗೆ ಭೇಟಿ ಯನ್ನೂ ನೀಡಿರಲಿಲ್ಲ. ಅವಳು ಅಲ್ಲಿಗೆ ಹೋಗಿರಲಿಲ್ಲವೆಂದಷ್ಟೆ ತಿಳಿದುಬಂದಿತು. ಅವರು ನನ್ನ ಮಾತನ್ನು ತುಂಬ ಕುತೂಹಲದಿಂದ ಕೇಳಿ, ನನ್ನ ಮುಖದ ಮೇಲೆಯೇ ಗಹಗಹಿಸಿ ನಕ್ಕರು. "ನಿಮಗೆ ಸರಿಯಾದ್ದೇ ಆಯಿತು" ಅವರೆಂದರು. ಆದರೆ ನಾನು ಅವರ ನಗೆಯನ್ನು ನಿರೀಕ್ಷಿಸಿದ್ದೆ. ಕಾಲಹರಣ ಮಾಡದೆ ನಾನು ಕೂಡಲೇ ಆ ಕಿರಿಯ ಚಿಕ್ಕಮ್ಮನಿಗೆ, ಅವಿವಾಹಿತೆಗೆ, ನೂರು ರೂಬಲ್ ಲಂಚಕೊಡು ವುದಾಗಿ ಹೇಳಿದೆ, ಇಪ್ಪತ್ತೈದು ರೂಬಲ್ ಮುಂಗಡವಾಗಿ ಕೊಟ್ಟೆ. ಎರಡು ದಿನಗಳನಂತರ ಅವಳು ನನ್ನ ಬಳಿಗೆ ಬಂದು ಹೇಳಿದಳು: "ಯೆಫಿಮೊವಿಚ್ ಎಂಬ ಸೈನ್ಯಾಧಿಕಾರಿ ಈ ವ್ಯವಹಾರದಲ್ಲಿ ಕೂಡಿದ್ದಾನೆ. ನಿಮ್ಮ ಹಳೆಯ ರೆಜಿ ಮೆಂಟಿನಲ್ಲಿ ಅವನು ಲೆಫ್ಟಿನೆಂಟ್ ಆಗಿದ್ದನಂತೆ." ನಾನು ಬೆರಗಾದೆ. ಈ ಯೆಫಿ ಮೊವಿಚ್ ನನ್ನ ರೆಜಿಮೆಂಟಿನಲ್ಲೂ ನನಗೆ ತುಂಬ ಹಾನಿ ಮಾಡಿದ್ದ. ಸುಮಾರು ಒಂದು ತಿಂಗಳ ಹಿಂದೆ ಗಿರಾಕಿಯ ಸೋಗು ಹಾಕಿಕೊಂಡು ನನ್ನ ಅಂಗಡಿಗೆ ಒಂದಲ್ಲ ಎರಡು ಬಾರಿ ಬರುವ ಸೊಕ್ಕು ತೋರಿದ್ದ. ನನ್ನ ಪತ್ನಿಯೊಂದಿಗೆ ಅವನು ಹರಟೆ ಹೊಡೆಯುತ್ತ ನಗುತ್ತಿದ್ದುದೂ ನನಗೆ ನೆನಪಿನಲ್ಲಿದೆ. ನಾನು ಕೂಡಲೇ ಅವನ ಬಳಿಗೆ ಹೋಗಿ, ನನ್ನ ಮತ್ತು ನನ್ನ ಪತ್ನಿಯ ನಡುವೆ ಆಗಲೇ ಮನ ಸ್ತಾಪ ಬಂದಿದ್ದುದರಿಂದಾಗಿ, ಅವನು ಮತ್ತೆ ನನ್ನ ಅಂಗಡಿಯ ಕಡೆಗೆ ಮುಖ ತೋರಿಸುವ ಸಾಹಸ ಮಾಡಬಾರದೆಂದು ಎಚ್ಚರಿಕೆ ನೀಡಿದೆ. ಆದರೆ ಅಂತಹುದು ಏನಾದರೂ ಆಗಿದ್ದಿತೆಂಬ ಸುಳಿವೂ ನನಗಾಗ ಬರಲಿಲ್ಲ. ಅವನೊಬ್ಬ ಭಂಡ ಮನುಷ್ಯ ಎಂದಷ್ಟೆ ನಾನು ಬಗೆದಿದ್ದೆ. ಆದರೆ ಈಗ ಅವಳ ಚಿಕ್ಕಮ್ಮ ನನಗೆ ಒಂದು ಹೊಸ ಸುದ್ದಿಯನ್ನೇ ತಂದಳು, ನನ್ನ ಪತ್ನಿ ಅವನೊಂದಿಗೆ ಆಗಲೇ ಭೇಟಿ ಗೊತ್ತು ಪಡಿಸಿಕೊಂಡಿದ್ದಾಳೆಂದು ತಿಳಿಸಿದಳು. ಈಗ ಈ ಎಲ್ಲ ವ್ಯವಹಾರವೂ ಈ ಚಿಕ್ಕ ಮ್ಮಂದಿರ ಒಬ್ಬ ಹಳೆಯ ಸ್ನೇಹಿತೆ, ಒಬ್ಬ ವಿಧವೆ, ಅದರಲ್ಲೂ ಒಬ್ಬ ಕರ್ನಲ್‌ನ ವಿಧವೆ ಯೂಲಿಯ ಸಮ್ಸೋನೊವ್ನಳ ಕೈಲಿದ್ದಿತೆಂದೂ ಅವಳು

ಹೇಳಿದಳು. "ಅವಳ ಬಳಿಗೇ ನಿನ್ನ ಹೆಂಡತಿ ಹೋಗುತ್ತಿರುವುದು" ಎಂದು ನನಗೆ ಹೇಳಲಾಯಿತು.

ಈ ಭಾಗವನ್ನು ನಾನು ಹ್ರಸ್ವ ಮಾಡುತ್ತೇನೆ. ಅದಕ್ಕೆಲ್ಲ ನನಗೆ ಮುನ್ನೂರು ರೂಬಲ್ ಖರ್ಚಾಯಿತು. ಆದರೆ ಪಕ್ಕಾ ವ್ಯವಸ್ಥೆ ಮಾಡಲಾಯಿತು. ಎರಡು ದಿನಗಳನಂತರ ನನ್ನ ಪತ್ನಿಯು ಯೆಫಿಮೊವಿಚ್‌ನೊಂದಿಗೆ ತನ್ನ ಮೊದಲ ಆತ್ಮೀಯ ಭೇಟಿ ನಡೆಸಲಿದ್ದಾಗ ನಾನು ಪಕ್ಕದ ಕೋಣೆಯ ಬಾಗಿಲ ಹಿಂಭಾಗದಲ್ಲಿ ನಿಂತು ಅವರ ಮಾತನ್ನೆಲ್ಲ ಕೇಳಿಸಿಕೊಳ್ಳಬೇಕೆಂದು ವ್ಯವಸ್ಥೆ ಮಾಡಲಾಯಿತು. ಈ ಮಧ್ಯೆ, ಈ ಭೇಟಿಗೆ ಹಿಂದಿನ ದಿನ ನಮ್ಮ ಮನೆಯಲ್ಲೇ ಒಂದು ರಂಪ ನಡೆಯಿತು. ಹ್ರಸ್ವವಾಗಿದ್ದರೂ ಅದು ನನಗೆ ಅತ್ಯಂತ ಮಹತ್ವದ್ದಾಗಿದ್ದಿತು.

ಅವಳು ಸಂಜೆಗೆ ಮುಂದು ಮನೆಗೆ ಹಿಂದಿರುಗಿದಳು, ಮಂಚದ ಮೇಲೆ ಕುಳಿತು ಪಾದದಿಂದ ರತ್ನಕಂಬಳಿ ಕುಟ್ಟುತ್ತ ನನ್ನತ್ತ ಅಣಕಿಸುವ ನೋಟ ಬೀರಿದಳು. ಆ ಇಡೀ ಕಳೆದ ತಿಂಗಳು, ಅಥವಾ ಆ ಇಡೀ ಕಳೆದ ಎರಡು ವಾರ, ಅವಳು ಸಂಪೂರ್ಣವಾಗಿ ತನ್ನ ಸ್ವಭಾವಕ್ಕೆ ತಕ್ಕಂತೆ ಇರಲಿಲ್ಲ ಎಂಬ ವಿಚಾರ ಇದ್ದಕ್ಕಿದ್ದಂತೆ, ಅವಳನ್ನು ನೋಡುತ್ತಿದ್ದಂತೆ, ನನ್ನ ತಲೆಗೆ ಹೊಳೆಯಿತು. ಅವಳು ತನ್ನ ಸ್ವಭಾವಕ್ಕೆ ತೀರ ವಿರುದ್ಧವಾಗಿಯೇ ವರ್ತಿಸುತ್ತಿದ್ದಳು, ಒಂದು ಉಗ್ರ ಸ್ವರೂಪದ ಪ್ರಾಣಿಯಾಗಿ, ದುರಾಕ್ರಮಣಕಾರಿಯಾಗಿ, ಕದನ ಕುತೂಹಲಿಯಾಗಿ, ನಾಚಿಕೆಗೇಡಿನ ಎಂದು ಹೇಳಲಾಗದಿದ್ದರೂ ಸ್ತಿಮಿತ ತಪ್ಪಿದ ಪ್ರಾಣಿಯಾಗಿ, ವರ್ತಿಸುತ್ತಿದ್ದಳು, ಎಂದೇ ನಾನು ಹೇಳಬೇಕು. ಕದನ ಕುತೂಹಲಿಯಾದ ಪ್ರಾಣಿ. ಆದರೆ ಅವಳ ಸಾಧು ಸ್ವಭಾವವಷ್ಟೆ ಅದಕ್ಕೆ ಅಡ್ಡಿಯಾಗಿದ್ದಿತು. ಅವಳಂತಹವರು ಉನ್ಮತ್ತರಾದಾಗ, ಎಲ್ಲ ಮಿತಿಗಳನ್ನೂ ಮೀರಿದ್ದರೂ, ಅವರು ತಮ್ಮನ್ನು ತಾವೇ ಅಂತಹ ಕಾರ್ಯಕ್ಕೆ ಬಲಾತ್ಕರಿಸಿಕೊಳ್ಳುತ್ತಿದ್ದಾರೆ, ತಮ್ಮನ್ನು ತಾವೇ ಒತ್ತಾಯಿಸಿಕೊಳ್ಳುತ್ತಿದ್ದಾರೆ, ಅಷ್ಟೆ ಎಂದೂ, ತಮ್ಮ ಪಾತಿವ್ರತ್ಯ ಹಾಗೂ ಮಾನ ಮರ್ಯಾದೆಗಳ ವಿರುದ್ಧ ವಿಫಲ ಹೋರಾಟ ನಡೆಸುತ್ತಿದ್ದಾರೆ ಎಂದೂ, ನೀವು ಕಂಡುಕೊಳ್ಳಬಲ್ಲಿರಿ. ಆದ್ದರಿಂದಲೇ ಸಾಧು ಸ್ವಭಾವದವರು ಕೆಲವು ವೇಳೆ ಮಿತಿ ಮೀರಿ ಹೋಗುವ ಅನಿಷ್ಟಕ್ಕೆ ಒಳಗಾಗಬಹುದಾಗಿರುತ್ತಾರೆ. ಹಾಗಾಗಿ ನಾವು ಏನನ್ನು ಕಾಣುತ್ತೇವೋ ಅದನ್ನು ನಂಬಲು ನಮ್ಮ ಬುದ್ಧಿ ನಿರಾಕರಿಸುತ್ತದೆ. ಇದಕ್ಕೆ ವಿರುದ್ಧವಾಗಿ, ನೀತಿಭ್ರಷ್ಟತೆಯು ಅಭ್ಯಾಸವಾಗಿ ಬಿಟ್ಟಿರುವ ಹೆಂಗಸೊಬ್ಬಳು ತನ್ನ ಭಾವಸ್ಫೋಟವನ್ನು ಯಾವಾಗಲೂ ತಗ್ಗಿಸುತ್ತಾಳೆ, ಅದನ್ನು ಹೆಚ್ಚು ಹೊಲಸನ್ನಾಗಿ ಮಾಡುತ್ತಾಳೆ ಆದರೆ ಸಭ್ಯತೆಯ ಸೋಗನ್ನು ಉಳಿಸಿಕೊಂಡಿರುತ್ತಾಳೆ. ಅದು ನಿಮ್ಮ ಮೇಲೆ ಸವಾಲು ಹಾಕಲಾಗದಂತಹ ಸರ್ವೋಚ್ಚತೆ ಸಾಧಿಸುವುದಕ್ಕೆ ಹಾರೈಸುತ್ತದೆ.

"ನೀವು ದ್ವಂದ್ವಯುದ್ಧ ಮಾಡಲಾಗದಂಥ ಹೇಡಿಯಾಗಿದ್ದುದರಿಂದ ನಿಮ್ಮನ್ನು ನಿಮ್ಮ ರೆಜಿಮೆಂಟಿನಿಂದ ಒದ್ದೋಡಿಸಲಾಯಿತು, ಎಂಬುದು ನಿಜವೇ ?" ಅವಳು ಇದ್ದಕ್ಕಿದ್ದಂತೆ ಕೇಳಿದಳು. ಅವಳ ಕಣ್ಣುಗಳು ಕಿಡಿ ಕಾರುತ್ತಿದ್ದವು.

"ನಿಜ. ಸೈನ್ಯಾಧಿಕಾರಿಗಳ ಸಭೆಯು ನನ್ನನ್ನು ರೆಜಿಮೆಂಟ್ ಬಿಟ್ಟು ಹೋಗುವಂತೆ ಕೇಳಿಕೊಂಡಿತು. ಆದರೆ ವಾಸ್ತವವಾಗಿ ನಾನು ಅದಕ್ಕೂ ಮುನ್ನವೇ ನನ್ನ ರಾಜೀನಾಮೆ ಕೊಟ್ಟಿದ್ದೆ."

"ನಿಮ್ಮನ್ನು ಹೇಡಿಯೆಂದು ಒದ್ದೋಡಿಸಿದರಾ !"

"ಹೌದು, ಅವರ ತೀರ್ಪು ನನ್ನನ್ನು ಹೇಡಿಯೆಂದೇ ಹೇಳಿತು. ಆದರೆ ನಾನು ಆ ದ್ವಂದ್ವಯುದ್ಧವನ್ನು ನಡೆಸಲು ನಿರಾಕರಿಸಿದುದಕ್ಕೆ ಕಾರಣ ನಾನು ಹೇಡಿಯಾಗಿದ್ದೆ ಎಂಬುದಲ್ಲ, ಆದರೆ ನಾನು ಅವರ ಆ ದಬ್ಬಾಳಿಕೆಯ ತೀರ್ಪಿಗೆ ವಿಧೇಯನಾಗಿ, ಅವಹೇಳನಕ್ಕೊಳಗಾದೆನೆಂದು ನಾನೇ ಪರಿಗಣಿಸಿಕೊಳ್ಳದಿದ್ದಾಗ ಯಾರ ಮೇಲೋ ದ್ವಂದ್ವಯುದ್ಧದ ಸವಾಲು ಹಾಕಲು ಬಯಸಿರಲಿಲ್ಲ, ಎಂಬುದು. ಅಂತಹ ದಬ್ಬಾಳಿಕೆಯನ್ನು ಧಿಕ್ಕರಿಸಿ ಅದರಿಂದ ಬರುವ ಪರಿಣಾಮಗಳನ್ನೆಲ್ಲ ಒಪ್ಪಿಕೊಳ್ಳುವುದಕ್ಕೆ, ಈ ಜಗತ್ತಿನಲ್ಲಿ ಯಾವುದೇ ದ್ವಂದ್ವಯುದ್ಧ ಹೋರಾಡುವುದಕ್ಕಿಂತ ಹೆಚ್ಚು ಧೈರ್ಯ ಬೇಕಾಗಿರುತ್ತದೆ, ನಾನು ನಿಮಗೆ ಖಾತರಿಯಿಂದ ಹೇಳಬಲ್ಲೆ" ಎಂದೂ ನಾನು ಹೇಳದಿರದಾದೆ.

ನಾನು ಆ ಮಾತುಗಳನ್ನು ಹೇಳದಿರದಾದೆ. ನನ್ನನ್ನು ನಾನೇ ಸಮರ್ಥಿಸಿಕೊಳ್ಳಲು ಯತ್ನಿಸುತ್ತಿರುವಂತೆ ಅವು ಕಂಡುಬಂದವು. ಈ ರೀತಿಯ ಹೊಸ ತೇಜೋವಧೆಯೇ ಅವಳಿಗೆ ಬೇಕಾಗಿದ್ದುದು. ಅವಳು ಮಾತ್ಸರ್ಯದಿಂದ ನಕ್ಕಳು.

"ಅದಾದ ಮೇಲೆ ಮೂರು ವರ್ಷ ನೀವು ಸೇಂಟ್ ಪೀಟರ್ಸ್‌ಬರ್ಗ್‌ನ ಬೀದಿಗಳಲ್ಲಿ ಭಿಕ್ಷಾಟನೆ ಮಾಡುತ್ತ ಅಲೆದಾಡಿದಿರಿ, ರಾತ್ರಿ ವೇಳೆಯಲ್ಲಿ ಬಿಲಿಯರ್ಡ್ಸ್ ಆಟದ ಟೇಬಲ್ಲುಗಳ ಕೆಳಗೆ ಮಲಗುತ್ತಿದ್ದಿರಿ, ಎಂಬುದು ನಿಜವೆ ?"

"ನಾನು ಸೇನ್ನಾಯ ಚೌಕದಲ್ಲೂ ವ್ಯಾಜೇಮ್‌ಸ್ಕಿ ಧರ್ಮಛತ್ರದಲ್ಲೂ ಆಶ್ರಯ ಪಡೆದುಕೊಂಡಿದ್ದೆ. ಹೌದು, ಅದು ನಿಜ. ರೆಜಿಮೆಂಟಿನಿಂದ ಹೊರಬಂದ ಮೇಲೆ ನಾನು ತುಂಬ ಅವಮಾನ ಹಾಗೂ ದುರವಸ್ಥೆಯನ್ನು ಅನುಭವಿಸಿದೆ. ಆದರೆ ಎಂದೂ ನೈತಿಕವಾಗಿ ಅವನತಿಗೊಳ್ಳಲಿಲ್ಲ. ಏಕೆಂದರೆ ಆಗಲೂ ನಾನೇ ಮೊದಲಿಗೆ ನನ್ನ ಕ್ರಿಯೆಗಳಿಗಾಗಿ ವ್ಯಥೆಪಟ್ಟೆ. ಅದು ಕೇವಲ ನನ್ನ ಸಂಕಲ್ಪದ ಹಾಗೂ ಮನಸ್ಸಿನ ಅವನತಿಯಾಗಿದ್ದಿತು. ಅದಕ್ಕೆ ನನ್ನ ಹತಾಶ ಸ್ಥಿತಿಯೇ ಕಾರಣವಾಗಿದ್ದಿತು. ಆದರೆ ಅದು ಮುಗಿಯಿತು..."

"ಓಹ್, ಹೌದು. ಈಗ ನೀವೊಬ್ಬ ದೊಡ್ಡಮನುಷ್ಯರು – ಒಬ್ಬ ಧನಾಧಿಪತಿ !"

ಅದು ನನ್ನ ಒತ್ತೆಯ ಅಂಗಡಿಗೆ ಉಲ್ಲೇಖ. ಆದರೆ ನಾನು ಆಗಲೇ ನನ್ನ ಮೇಲೆ ಹತೋಟಿ ಏರ್ಪಡಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದೆ. ಅವಳು ನನ್ನಿಂದ ಹೆಚ್ಚು ವಿವರಣೆಗಳನ್ನು ಹೊರಡಿಸಿ ನನ್ನನ್ನು ಮತ್ತಷ್ಟು ತೇಜೋವಧೆಗೆ ಒಳ ಪಡಿಸಲು ಹಂಬಲಿಸುತ್ತಿದ್ದಳೆಂಬುದನ್ನು ನಾನು ಕಂಡುಕೊಂಡೆ. ಹಾಗಾಗಿ ನಾನು ಅವಳಿಗೆ ಆ ಸಂತೋಷವನ್ನು ನೀಡಲಿಲ್ಲ. ಅತ್ಯಂತ ಅನುಕೂಲವಾಗುವಂತೆ ಆ ಸಮಯಕ್ಕೆ ಸರಿಯಾಗಿ ಒಬ್ಬ ಗಿರಾಕಿ ಬಂದರು. ನಾನು ಅವರಲ್ಲಿಗೆ ಮುಂಕೋಣೆಗೆ ಹೋದೆ. ಅಲ್ಲಿಂದ ಒಂದು ಗಂಟೆ ಆದ ಮೇಲೆ ಅಂತ ಕಾಣಿಸುತ್ತೆ, ಅವಳು ಇದ್ದಕ್ಕಿದ್ದಂತೆ ಹೊರಗೆ ಹೋಗುವ ಉಡುಪು ತೊಟ್ಟು ಕಾಣಿಸಿಕೊಂಡಳು. ನನ್ನ ಬಳಿಗೆ ಬಂದು ಹೇಳಿದಳು:

"ಆದರೂ, ನೀವು ಈ ಯಾವ ವಿಷಯವನ್ನೂ ನನಗೆ ಮದುವೆಗೆ ಮುಂಚೆ ಹೇಳಲೇ ಇಲ್ಲ, ಅಲ್ಲವೇ?"

ನಾನು ಉತ್ತರ ಹೇಳಲಿಲ್ಲ. ಅವಳು ಹೊರ ಹೋದಳು.

ಮಾರನೆಯ ದಿನ, ವ್ಯವಸ್ಥೆಗೊಳಿಸಿದಂತೆ, ನಾನು ಅಲ್ಲಿ ಪಕ್ಕದ ಕೋಣೆಯ ಬಾಗಿಲಿನ ಹಿಂದೆ ನಿಂತಿದ್ದೆ,• ನನ್ನ ಹಣೆಯುಬರಹ ತೀರ್ಮಾನವಾಗುವುದನ್ನು ಕೇಳಲು ನಿಂತಿದ್ದೆ. ನನ್ನ ಜೇಬಿನಲ್ಲಿ ಒಂದು ರಿವಾಲ್ವರ್ ಇದ್ದಿತು. ಅವಳು ಮೇಜಿನ ಬಳಿ ಕುಳಿತಿದ್ದಳು, ಭೇಟಿಗಾಗಿ ಅಲಂಕಾರ ಮಾಡಿಕೊಂಡು ಬಂದಿದ್ದಳು. ಯೆಫಿಮೊವಿಚ್ ಅವಳ ಮುಂದೆ ಠೀವಿಯಿಂದ ಅಡ್ಡಾಡುತ್ತ ಬಿನ್ನಾಣದಿಂದ ಮಾತನಾಡುತ್ತಿದ್ದ. ಆಗ ಏನು ಜರುಗಿತು? ಏನಂತೀರಿ, ನಾನು ಕಲ್ಪಿಸಿಕೊಂಡಿದ್ದ ರೀತಿಯಲ್ಲೇ, ಏನು ಜರುಗಲಿರುವುದು ಎಂದು ಊಹಿಸಿದ್ದ ರೀತಿಯಲ್ಲೇ ಎಲ್ಲ ಜರುಗಿತು (ಇದನ್ನು ಹೇಳಿಕೊಳ್ಳಲು ನನಗೆ ಹೆಮ್ಮೆ ಎನಿಸುತ್ತದೆ). ಆದರೆ ನಾನದನ್ನು ಕಲ್ಪಿಸಿಕೊಂಡಿದ್ದೆ ಅಥವಾ ಊಹಿಸಿದ್ದೆ ಎಂಬುದು ನನಗಾಗ ಗೊತ್ತಿರಲಿಲ್ಲ. ನಾನು ನನ್ನ ವಿಚಾರವನ್ನು ಸ್ಪಷ್ಟವಾಗಿ ತಿಳಿಸುತ್ತಿದ್ದೇನೆಯೋ ಇಲ್ಲವೋ, ನನಗೆ ತಿಳಿಯದು.

ಆಗ ಇದು ಜರುಗಿತು. ನಾನು ಅಲ್ಲಿ ಒಂದು ಇಡೀ ಗಂಟೆ ನಿಂತು ಕೇಳಿದೆ. ಒಂದು ಇಡೀ ಗಂಟೆ ನಾನು, ಅತ್ಯಂತ ಉದಾತ್ತಳೂ ಪರಿಶುದ್ಧಳೂ ಆದ ಒಬ್ಬ ಹೆಂಗಸಿಗೂ, ಸಮಾಜದ ವ್ಯಭಿಚಾರಿಯೂ ಮಂದಬುದ್ಧಿಯೂ ಆದ ಶುದ್ಧ ನೀಚ ಆತ್ಮವುಳ್ಳ ಒಬ್ಬ ಹಲ್ಕಾ ವ್ಯಕ್ತಿಗೂ ನಡುವೆ ನಡೆದ ಮಾತಿನ ದ್ವಂದ್ವ ಯುದ್ಧವನ್ನು ವೀಕ್ಷಿಸಿದೆ. ಆ ಮುಗ್ಧಳಾದ, ಸಾಧುವಾದ, ಏಕಾಂಗಿಯಾದ ಅವಳು ಇಷ್ಟೆಲ್ಲವನ್ನೂ ಎಲ್ಲಿ ಕಲಿತಿದ್ದಳು ಎಂದು ನಾನು ವಿಸ್ಮಯಗೊಂಡು ಆಲೋಚಿಸಿದೆ. ವಿಲಕ್ಷಣ ನಡತೆಯ ಬಗೆಗೆ ಒಂದು ಪರಿಹಾಸ್ಯ ನಾಟಕ ಬರೆಯಲು ಹೊರಟ ಅತ್ಯಂತ ಬುದ್ಧಿವಂತ ಲೇಖಕನೂ, ಚುಚ್ಚು ಮಾತುಗಳ, ಮುಗ್ಧ ನಗೆಯ, ದುರ್ಗುಣದ ಬಗೆಗೆ ಸದ್ಗುಣದ ಪವಿತ್ರ ತಿರಸ್ಕಾರದ, ಈ ದೃಶ್ಯವನ್ನು ಕಲ್ಪಿಸಿ

ಕೊಳ್ಳಲು ಅಸಮರ್ಥನಾಗುತ್ತಿದ್ದ. ಎಂಥ ವಾಗ್ವೈಖರಿ, ಎಂಥ ಪ್ರತಿವಾದ, ಎಂಥ ಚುರುಕು ಬುದ್ಧಿ ! ಅವಳು ಅವನನ್ನು ಖಂಡಿಸಿದುದರಲ್ಲಿ ಎಂಥ ಸತ್ಯ ವಿದ್ದಿತು ! ಅದೇ ಹೊತ್ತಿನಲ್ಲಿ ಅವಳಲ್ಲಿ ನಿಜಕ್ಕೂ ಎಂತಹ ಯುವತಿಸಹಜ ಅಕೃ ತ್ರಿಮತೆ ಇದ್ದಿತು ! ಅವನು ತನ್ನ ಪ್ರೇಮ ಹೇಳಿಕೊಂಡಾಗ, ಹಾವಭಾವಗಳಲ್ಲಿ ತೊಡಗಿದಾಗ ಹಾಗೂ ಪ್ರೀತಿಯ ಪ್ರಸ್ತಾಪ ಮಾಡಿದಾಗ ಅವಳು ಹೇಗೆ ಅವನ ಮುಖಭಂಗ ಮಾಡುವಂತೆ ನಕ್ಕಳು. ತನ್ನ ಒರಟು ದಾಳಿಗೆ ಯಾವ ಪ್ರತಿ ರೋಧವೂ ಇರುವುದಿಲ್ಲವೆಂದೆಣಿಸಿ ಅವನು ಬಂದಿದ್ದ. ಈಗ ಸಂಪೂರ್ಣವಾಗಿ ಉತ್ಸಾಹರಹಿತನಾದ. ಅದು ಅವಳ ಚೆಲ್ಲಾಟವಷ್ಟೆ ಎಂದು ನಾನು ಮೊದಲು ಭಾವಿಸಿದ್ದಿರಬಹುದು. “ಮಾನಮರ್ಯಾದೆ ಇಲ್ಲದ ಆದರೆ ಕುಶಾಗ್ರಮತಿಯುಳ್ಳ ಹೆಂಗಸೊಬ್ಬಳು ತನ್ನ ಬಗೆಗೇ ಮೌಲ್ಯ ಹೆಚ್ಚಿಸಿಕೊಳ್ಳಲು ತೊಡಗಿರುವ ಚೆಲ್ಲಾಟ.” ಆದರೆ, ಹಾಗಲ್ಲ. ಸತ್ಯ ಎದ್ದು ಕಾಣುವಂತಿತ್ತು, ಸೂರ್ಯನಂತೆ ಪ್ರಜ್ವಲಿಸುತ್ತಿತ್ತು. ಸಂದೇಹಕ್ಕೆ ಅವಕಾಶವೇ ಇರಲಿಲ್ಲ. ಅವಳು ನನ್ನ ಬಗೆಗೆ ಕಲ್ಪಿಸಿಕೊಂಡಿದ್ದಂಥ ಆತುರದ ದ್ವೇಷವಷ್ಟೆ, ಅನುಭವವಿಲ್ಲದ ಅವಳನ್ನು ಈ ಭೇಟಿ ಏರ್ಪಡಿಸಿ ಕೊಳ್ಳುವಂತೆ ಪ್ರೇರಿಸಿದ್ದಿತು. ಆದರೆ ವಾಸ್ತವಿಕವನ್ನು ಎದುರಿಸಬೇಕಾಗಿ ಬಂದಾಗ ಅವಳ ಕಣ್ಣಿನಿಂದ ಪರೆ ಕಳಚಿಬಿದ್ದಿತ್ತು. ತನ್ನ ಕೈಲಾದಷ್ಟೂ ನನ್ನನ್ನು ಅವಹೇಳನ ಮಾಡಲು ಮಾರ್ಗಕ್ಕಾಗಿ ಅವಳು ಹುಡುಕಾಡುತ್ತಿದ್ದಳು ಅಷ್ಟೆ. ಆದರೆ ಅವಳು ಮಾಡ ಹೊರಟಿದ್ದ ಕಾರ್ಯದ ಹೊಲಸುತನ ಅವಳನ್ನು ಆ ಕಾರ್ಯದಿಂದ ಹಿಮ್ಮೆಟ್ಟಿಸಿದ್ದಿತು. ಅಷ್ಟೊಂದು ಪರಿಶುದ್ಧಳಾದ, ಮುಗ್ಧಳಾದ ಹೆಂಗಸೊಬ್ಬಳು, ಒಂದು ಆದರ್ಶವನ್ನು ಇಟ್ಟುಕೊಂಡಿದ್ದ ಹೆಂಗಸೊಬ್ಬಳು ಯೆಫಿಮೊವಿಚ್ ಅಥವಾ ಮತ್ತಾವುದೇ ಉಚ್ಚ ಸಮಾಜದ ಕೊಳಕು ವ್ಯಕ್ತಿಗಳ ಕಡೆಗೆ ಆಕರ್ಷಿತಳಾಗಲು ಸಾಧ್ಯವೇ ? ಅವನು ಅವಳನ್ನು ತನ್ನತ್ತ ನಗುವಂತಷ್ಟೆ ಮಾಡಿದ. ಅವಳ ಅಂತ ರಾತ್ಮದಲ್ಲಿ ಕುದಿಯುತ್ತಿದ್ದುದೆಲ್ಲ ಹೊರಬಂದಿದ್ದವು ಮತ್ತು ಕೋಪವು ಅವಳ ಹೃದಯದಿಂದ ವ್ಯಂಗ್ಯವನ್ನು ಹೊರಹೊಮ್ಮಿಸಿದ್ದಿತು. ಈ ಕಾಳಗದ ಕೊನೆಯಲ್ಲಿ ಆ ನಕಲಿಶ್ಯಾಮ ಸಂಪೂರ್ಣವಾಗಿ ದಿಗ್ಭ್ರಾಂತನಾಗಿ, ಯಾವ ಉತ್ತರವನ್ನೂ ಕೊಡಲಾಗದೆ ಮುಖ ಸಿಂಡರಿಸಿಕೊಂಡು ಅಲ್ಲಿ ಕುಳಿತಿದ್ದ, ಎಂದು ನಾನು ಪುನಶ್ಚರಿ ಸುತ್ತೇನೆ. ಸೇಡು ತೀರಿಸಿಕೊಳ್ಳುವ ಕ್ಷುದ್ರ ಬಯಕೆಯಿಂದ ಅವನು ಅವಳನ್ನು ಅವಹೇಳನ ಮಾಡಹೋಗುವನೇನೋ ಎಂದೂ ನಾನು ಅಂಜಿದ್ದೆ. ನಾನು ಮತ್ತೊಮ್ಮೆ ಹೇಳುತ್ತೇನೆ: ನಾನು ಈ ದೃಶ್ಯವನ್ನು ಬಹುಮಟ್ಟಿಗೆ ಆಶ್ಚರ್ಯ ಚಕಿತನಾಗದೆಯೇ ಕೇಳಿದೆ, ಎಂದು ಹೇಳಲು ನನಗೆ ಹೆಮ್ಮೆ ಎನಿಸುತ್ತದೆ. ಅದು ನಾನು ಆಗಲೇ ತಿಳಿದಿದ್ದುದನ್ನೇ ಎದುರಿಸುತ್ತಿದ್ದಂತಿದ್ದಿತು. ನಾನು ಅಂತಹು ವನ್ನು ಎದುರಿಸಲೆಂದೇ ಅಲ್ಲಿಗೆ ಹೋಗಿದ್ದೆನೇನೋ ಎನ್ನುವಂತಿತ್ತು. ನಾನು

ಅಲ್ಲಿಗೆ ಯಾವುದರಲ್ಲೂ ನಂಬಿಕೆ ಇಲ್ಲದೆ, ಯಾವ ಆಪಾದನೆಗಳನ್ನೂ ನಂಬದೆ, ಹೋಗಿದ್ದೆ. ನನ್ನ ಜೇಬಿನಲ್ಲಿ ಒಂದು ರಿವಾಲ್ವರ್ ಇಟ್ಟುಕೊಂಡು ಹೋಗಿದ್ದರೂ, ನಾನು ಆಪಾದನೆಗಳನ್ನು ನಂಬಿರಲಿಲ್ಲವೆಂಬುದೇ ಸತ್ಯವಾಗಿದ್ದಿತು. ನಾನು ಅವಳ ಬಗೆಗೆ ಬೇರೆ ರೀತಿಯಲ್ಲಿ ಯೋಚಿಸುವುದು ಸಾಧ್ಯವಿದ್ದಿತೆ? ಹಾಗಾದರೆ ನಾನೇಕೆ ಅವಳನ್ನು ಪ್ರೀತಿಸಿದೆ, ಅವಳನ್ನು ಅಷ್ಟು ಪ್ರೀತಿಯಿಂದ ಕಾಣುತ್ತಿದ್ದೆ, ಅವಳನ್ನು ಏಕೆ ಮದುವೆಯಾದೆ? ಓಹ್, ಹೌದು, ಆ ದೃಶ್ಯವು ಅವಳು ನನ್ನನ್ನು ಎಷ್ಟು ದ್ವೇಷಿಸುತ್ತಿದ್ದಳು ಎಂಬುದನ್ನು ಚೆನ್ನಾಗಿ ಮನದಟ್ಟು ಮಾಡಿಕೊಟ್ಟಿತು. ಅದು ಅವಳ ಪರಿಶುದ್ಧತೆಯ ಬಗೆಗೂ ನನಗೆ ಅಷ್ಟೇ ಮನದಟ್ಟು ಮಾಡಿಕೊಟ್ಟಿತು. ನಾನು ಬಾಗಿಲು ತೆರೆಯುವ ಮೂಲಕ ಆ ದೃಶ್ಯಕ್ಕೆ ಹಠಾತ್ತನೆ ಕೊನೆ ಕಾಣಿಸಿದೆ. ಯೆಫಿಮೊವಿಚ್ ನೆಗೆದು ನಿಂತ. ನಾನು ಅವಳ ಕೈ ಹಿಡಿದು ನನ್ನೊಡನೆ ಬರುವಂತೆ ಆಹ್ವಾನಿಸಿದೆ. ಯೆಫಿಮೊವಿಚ್‌ನು ಚಿತ್ರಸ್ತಿಮಿತ ತಂದುಕೊಂಡು ಇದ್ದಕ್ಕಿದ್ದಂತೆ ಗಹಗಹಿಸಿ ನಗತೊಡಗಿದ.

"ಓಹ್, ನಾನು ವಿವಾಹದ ಪವಿತ್ರ ಹಕ್ಕುಗಳ ಮೇಲೆ ಅತಿಕ್ರಮಣ ನಡೆಸುವುದಿಲ್ಲ! ಅವಳನ್ನು ಕೊಂಡೊಯ್ಯಿರಿ, ಕೊಂಡೊಯ್ಯಿರಿ! ಮತ್ತೆ ನಿಮಗೆ ಗೊತ್ತೆ" ಎಂದವನು ನನ್ನ ಹಿಂದೆ ಕೂಗಿ ಹೇಳಿದ: "ಸಭ್ಯನಾದವ ನಿಮ್ಮೊಂದಿಗೆ ದ್ವಂದ್ವಯುದ್ಧ ಮಾಡಕೂಡದಾದರೂ, ನಿಮ್ಮ ನಾರೀಮಣಿಯ ಬಗೆಗೆ ಗೌರವವಿರುವುದರಿಂದ ನಾನು ನಿಮ್ಮೊಡನೆ ದ್ವಂದ್ವಯುದ್ಧ ಮಾಡಲು ಸಿದ್ಧ.... ಅಂದರೆ, ನೀವು ಆ ಅಪಾಯ ಎದುರಿಸಬಲ್ಲಿರಾದರೆ..."

"ನಿಮಗೆ ಕೇಳಿಸಿತೆ ಅವನು ಹೇಳಿದ್ದು?" ನಾನು ಅವಳನ್ನು ಬಾಗಿಲ ಬಳಿ ಒಂದು ಘಳಿಗೆ ತಡೆದು ನಿಲ್ಲಿಸಿ ಕೇಳಿದೆ.

ಅದಾದ ಮೇಲೆ ಮನೆಗೆ ಬರುವವರೆಗೂ ನಾನು ಒಂದು ಮಾತನ್ನೂ ಆಡಲಿಲ್ಲ, ನಾನವಳನ್ನು ಕೈ ಹಿಡಿದೇ ಕರೆದೊಯ್ದೆ. ಅವಳೂ ಅದಕ್ಕೆ ಪ್ರತಿಭಟಿಸಲಿಲ್ಲ. ತದ್ವಿರುದ್ಧವೇ ಆಗಿದ್ದಿತು. ಅವಳು ನನ್ನ ವರ್ತನೆಯಿಂದ ಭಾರಿ ಪ್ರಭಾವಿತಳಾಗಿದ್ದಳು, ಆದರೆ ನಾವು ಮನೆ ತಲುಪುವವರೆಗಷ್ಟೆ. ಒಮ್ಮೆ ಮನೆ ತಲುಪಿದೆವೋ ಇಲ್ಲವೋ, ಅವಳು ಕುರ್ಚಿಯೊಂದರ ಮೇಲೆ ನನ್ನನ್ನೇ ದಿಟ್ಟಿಸಿ ನೋಡುತ್ತ ಕುಳಿತಳು. ಅವಳು ತುಂಬ ನಿಸ್ತೇಜಳಾಗಿದ್ದಳು. ಅವಳ ತುಟಿಗಳು ಜರಿಯುವಂತೆ ಬಾಗಿದ್ದರೂ ಅವಳ ನೋಟ ಈಗ ಗಂಭೀರವಾಗಿದ್ದಿತು, ದೃಢ ಧಿಕ್ಕಾರ ಸೂಚಿಸುತ್ತಿತ್ತು. ನಾನು ಅವಳನ್ನು ನನ್ನ ರಿವಾಲ್ವರಿನಿಂದ ಹೊಡೆದು ಕೊಲ್ಲಲಿದ್ದೇನೆಂದು ಅವಳು ಆ ಮೊದಲ ಕೆಲವು ಕ್ಷಣಗಳಲ್ಲಿ ಪ್ರಾಮಾಣಿಕವಾಗಿ ನಂಬಿದ್ದಳು. ಆದರೆ ನಾನು ಅದನ್ನು ಒಂದು ಮಾತೂ ಆಡದೆ ಹೊರತೆಗೆದು ಮೇಜಿನ ಮೇಲಿಟ್ಟೆ. ಅವಳು ನನ್ನತ್ತವೂ ರಿವಾಲ್ವರಿನತ್ತವೂ ದಿಟ್ಟಿಸಿ ನೋಡಿದಳು. (ಇದನ್ನು

ಗಮನಿಸಿ: ಅವಳು ಆಗಲೇ ರಿವಾಲ್ವರಿನ ವಿಷಯ ಎಲ್ಲ ತಿಳಿದಿದ್ದಳು. ನಾನು ನನ್ನ ಒತ್ತೆಯ ಅಂಗಡಿ ತೆರೆದ ದಿನವೇ ಅದನ್ನು ಕೊಂಡು ಗುಂಡು ತುಂಬಿ ಇರಿಸಿದ್ದೆ. ನಾನು ಭಾರಿ ಕಾವಲುನಾಯಿಗಳನ್ನಾಗಲೀ ಬಲಶಾಲಿಗಳಾದ ಕಾಲಾಳುಗಳನ್ನಾಗಲೀ, ಮೋಸೆರ್‌ರು ಇರಿಸಿಕೊಂಡಿದ್ದಂತೆ, ಇರಿಸಿಕೊಳ್ಳುವುದರ ವಿರೋಧವಿದ್ದೆ. ನನ್ನ ಅಡಿಗೆಯವಳೇ ಗಿರಾಕಿಗಳನ್ನು ನೋಡಿ ಒಳಬಿಡುತ್ತಾಳೆ. ನಾನು ಗುಂಡು ತುಂಬಿದ ರಿವಾಲ್ವರನ್ನು ಹತ್ತಿರದಲ್ಲೇ ಇಟ್ಟುಕೊಂಡಿರುತ್ತಿದ್ದೆ, ಏಕೆಂದರೆ, ನಮ್ಮ ವ್ಯಾಪಾರದಲ್ಲಿ ಪ್ರಸಂಗ ಬಂದರೆ ನಮ್ಮನ್ನು ನಾವೇ ರಕ್ಷಿಸಿಕೊಳ್ಳಲು ಏನಾದರೊಂದು ಸಾಧನವನ್ನು ಇರಿಸಿಕೊಂಡೇ ಇರಬೇಕು. ಅವಳು ಮೊದಲು ನಮ್ಮ ಮನೆಗೆ ಬಂದಾಗ ರಿವಾಲ್ವರಿನ ಬಗೆಗೆ ತುಂಬ ಕುತೂಹಲ ತೋರಿದಳು. ಅದು ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ವಿವರಿಸಿ ತಿಳಿಸಿ ಒಂದು ಬಾರಿ ಗುರಿಯತ್ತ ಗುಂಡು ಹಾರಿಸುವಂತೆಯೂ ಒತ್ತಾಯಿಸಿದ್ದೆ. ಇದೆಲ್ಲವನ್ನೂ ಗಮನದಲ್ಲಿರಿಸಿರಿ.) ಅವಳ ಬೆದರಿದ ನೋಟವನ್ನು ನಿರ್ಲಕ್ಷಿಸಿ ನಾನು ಹಾಸಿಗೆಯ ಮೇಲೆ ಮಲಗಿದೆ ಉಡುಪನ್ನು ಅರ್ಧಂಬರ್ಧ ಬಿಚ್ಚಿದ್ದಂತೆಯೇ. ನನಗೆ ತುಂಬ ಸುಸ್ತಾಗಿತ್ತು. ಆಗಲೇ ಹನ್ನೊಂದರ ಸಮೀಪವಾಗಿತ್ತು. ಅವಳು ಚಲಿಸದೆಯೇ ಸುಮಾರು ಒಂದು ಗಂಟೆ ಕುಳಿತಿದ್ದು ಅನಂತರ ಮೋಂಬತ್ತಿಯನ್ನು ಉರುವಿ ಆರಿಸಿ ತಾನೂ ಉಡುಪು ಕಳಚದೆಯೇ ಗೋಡೆಗೆ ಸಮೀಪ ಸೋಫಾದ ಮೇಲೆ ಮಲಗಿದಳು. ಅದೇ ಮೊದಲ ಬಾರಿಗೆ ಅವಳು ನನ್ನ ಜೊತೆ ಹಾಸಿಗೆಯಲ್ಲಿ ಮಲಗಲು ಬರಲಿಲ್ಲ – ಇದನ್ನೂ ಗಮನದಲ್ಲಿರಿಸಿರಿ....

# VI
# ಒಂದು ಭಯಂಕರ ನೆನಪು

ಈಗ ಆ ಭಯಂಕರ ನೆನಪು...

ಬೆಳಿಗ್ಗೆ ನಾನು ಎಚ್ಚೆತ್ತಾಗ ಆಗಲೇ ಏಳು ಗಂಟೆ ಮೀರಿದ್ದಿರಬೇಕು, ಏಕೆಂದರೆ ಕೋಣೆ ಬಹುಮಟ್ಟಿಗೆ ಬೆಳಕಿನಿಂದ ತುಂಬಿತ್ತು. ನಾನು ಒಮ್ಮೆಗೇ ಸಂಪೂರ್ಣವಾಗಿ ಎಚ್ಚರಗೊಂಡಿದ್ದೆ. ನನ್ನೆಲ್ಲ ಇಂದ್ರಿಯಗಳೂ ಚುರುಕಾಗಿದ್ದವು. ನಾನು ಕಣ್ಣು ತೆರೆದೆ. ಅವಳು ಮೇಜಿನ ಮುಂದೆ ರಿವಾಲ್ವರ್ ಹಿಡಿದುಕೊಂಡು ನಿಂತಿದ್ದಳು. ನಾನು ಎಚ್ಚೆತ್ತಿದ್ದೇನೆ, ಅವಳನ್ನು ಗಮನಿಸುತ್ತಿದ್ದೇನೆ, ಅನ್ನುವುದನ್ನು ಅವಳು ತಿಳಿದಿರಲಿಲ್ಲ. ಇದ್ದಕ್ಕಿದ್ದಂತೆ ಅವಳು ಕೈಯಲ್ಲಿ ರಿವಾಲ್ವರ್ ಹಿಡಿದುಕೊಂಡು

ನನ್ನತ್ತ ಬರತೊಡಗಿದುದನ್ನು ನಾನು ಕಂಡೆ. ನಾನು ಬೇಗ ಕಣ್ಣು ಮುಚ್ಚಿಕೊಂಡೆ, ಗಾಢ ನಿದ್ರೆಯಲ್ಲಿದ್ದೆನೆಂದು ಸೋಗು ಹಾಕಿದೆ.

ಅವಳು ಹಾಸಿಗೆಯ ಬಳಿ ಬಂದು ನನ್ನ ಮೇಲೆ ಬಾಗಿ ನಿಂತಳು. ನಾನು ಪ್ರತಿಯೊಂದನ್ನೂ ಕೇಳಿದೆ. ಕೋಣೆಯಲ್ಲಿ ಸಂಪೂರ್ಣ ನೀರವತೆ ಇದ್ದಿತು. ಆದರೆ ನಾನು ಆ ನೀರವತೆಯನ್ನೂ ಕೇಳಬಲ್ಲವನಿದ್ದೆ. ಒಂದು ನರ ತಿರುಚಿ ನಾನು ಕಣ್ಣು ತೆರೆಯುವ ಒತ್ತಾಯಕ್ಕೊಳಗಾದೆ. ಅವಳು ನನ್ನನ್ನೇ ಬಾಗಿ ನೋಡುತ್ತಿದ್ದಳು, ನನ್ನ ಕಣ್ಣುಗಳಲ್ಲೇ ಕಣ್ಣಿಟ್ಟು ನೋಡುತ್ತಿದ್ದಳು. ರಿವಾಲ್ವರ್ ಆಗಲೇ ನನ್ನ ಹಣೆಗೆ ಸಮೀಪವಾಗಿದ್ದಿತು. ನಮ್ಮ ದೃಷ್ಟಿಗಳು ಸಂಧಿಸಿದವು. ನಾವು ವಿನಿಮಯ ಮಾಡಿಕೊಂಡ ನೋಟ ಒಂದು ಕ್ಷಣಕ್ಕೂ ಕಮ್ಮಿ ಕಾಲವಷ್ಟೆ ಇದ್ದಿತು. ನಾನು ನನ್ನ ಕಣ್ಣುಗಳನ್ನು ಮತ್ತೆ ಬಲವಂತವಾಗಿ ಮುಚ್ಚಿಕೊಂಡೆ. ನನಗೆ ಏನೇ ಆಗಬಹುದಾದರೂ ಸರಿಯೆ, ಮತ್ತೆ ಕಣ್ಣು ತೆರೆಯಬಾರದು ಮತ್ತು ಕದಲಬಾರದು ಎಂದು ನನ್ನ ಆತ್ಮಶಕ್ತಿಯನ್ನೆಲ್ಲ ಕೂಡಿಸಿಕೊಂಡು ನಾನು ಆ ಕ್ಷಣದಲ್ಲೇ ನಿರ್ಧರಿಸಿದೆ.

ಒಮ್ಮೊಮ್ಮೆ ಹೀಗಾಗುತ್ತೆ – ಮನುಷ್ಯನೊಬ್ಬ ಗಾಢ ನಿದ್ರೆಯಲ್ಲಿದ್ದರೂ ಇದ್ದಕ್ಕಿದ್ದಂತೆ ಕಣ್ಣು ತೆರೆಯುತ್ತಾನೆ, ಒಂದು ಕ್ಷಣ ತಲೆಯನ್ನೂ ಎತ್ತುತ್ತಾನೆ, ಕೋಣೆಯ ಸುತ್ತ ನೋಡುತ್ತಾನೆ, ಆಮೇಲೆ ತಲೆಯನ್ನು ಎಚ್ಚರಗೊಳ್ಳದೆಯೇ ಮತ್ತೆ ದಿಂಬಿನ ಮೇಲಿರಿಸುತ್ತಾನೆ, ಯಾವುದನ್ನೂ ಜ್ಞಾಪಕದಲ್ಲಿರಿಸಿಕೊಳ್ಳದೆಯೇ ನಿದ್ರೆ ಹೋಗುತ್ತಾನೆ. ನಾನು ಅವಳ ದೃಷ್ಟಿ ಸಂಧಿಸಿದನಂತರ, ರಿವಾಲ್ವರ್ ನನ್ನ ಹಣೆಯ ಮೇಲಿದ್ದುದನ್ನು ಕಂಡನಂತರ, ನನ್ನ ಕಣ್ಣುಗಳನ್ನು ತಕ್ಷಣವೇ ಮುಚ್ಚಿಕೊಂಡು ಮತ್ತೆ ಗಾಢ ನಿದ್ರೆಯಲ್ಲಿರುವವನಂತೆ ನಿಶ್ಚಲನಾಗಿ ಮಲಗಿದ್ದುದರಿಂದ, ನಾನು ನಿಜವಾಗಲೂ ನಿದ್ರೆ ಮಾಡುತ್ತಿದ್ದೆ, ಏನನ್ನೂ ಕಂಡಿರಲಿಲ್ಲ, ಎಂದೇ ಅವಳು ಖಂಡಿತ ಭಾವಿಸಲು ಸಾಧ್ಯವಿದ್ದಿತು; ಅಲ್ಲದೆ ಅಂತಹ ಘಳಿಗೆಯಲ್ಲಿ, ನಾನು ಏನು ಕಂಡೆನೋ ಅದನ್ನು ಕಂಡನಂತರವೂ, ಕಣ್ಣುಗಳನ್ನು ಮತ್ತೆ ಮುಚ್ಚಿಕೊಂಡಿದ್ದೆ. ಎಚ್ಚರದಿಂದ ಇದ್ದಿದ್ದರೆ ಹಾಗೆ ಮಾಡುವುದು ನಂಬಲಸಾಧ್ಯವಾಗಿದ್ದಿತು.

ಹೌದು, ಅದು ನಂಬಲಸಾಧ್ಯವಾಗಿದ್ದಿತು. ಆದರೂ, ಅವಳು ನಿಜವನ್ನು ಊಹಿಸಿರಬಹುದು – ಅದೇ ಕ್ಷಣದಲ್ಲೇ ನನ್ನ ಮನಸ್ಸಿನಲ್ಲಿ ಈ ವಿಚಾರವೂ ಹೊಳೆಯಿತು. ಅಬ್ಬಾ, ಆ ಕ್ಷಣಕ್ಕೂ ಕಮ್ಮಿ ಕಾಲದಲ್ಲಿ ನನ್ನ ಮನಸ್ಸಿನಲ್ಲಿ ಎಂಥ ಭಾವನೆಗಳ ಹಾಗೂ ವಿಚಾರಗಳ ಬಿರುಗಾಳಿಯೇ ಸುಳಿದು ಹೋಯಿತು. ಮಾನವ ಚಿಂತನೆಯ ವಿದ್ಯುಚ್ಛಕ್ತಿಗೆ ಪ್ರಶಂಸೆ ಸಲ್ಲಲಿ! ಆ ಪ್ರಸಂಗದಲ್ಲಿ, (ನನಗನ್ನಿಸಿತು) ಅವಳು ಸತ್ಯಾಂಶವನ್ನು ಊಹಿಸಿ ನಾನು ನಿದ್ರೆ ಮಾಡುತ್ತಿಲ್ಲವೆಂದು ತಿಳಿದಿದ್ದರೆ, ನಾನು ಸಾವನ್ನು ಸಂಧಿಸಲು ಸಿದ್ಧವಿರುವುದನ್ನು ಕಂಡು ಅವಳ ಜಂಘಾಬಲ ಉಡುಗಿ ಹೋಗುತ್ತಿದ್ದಿತು, ಅವಳ ಕೈ ಗುರಿ ತಪ್ಪುತ್ತಿದ್ದಿತು. ಈ ಹೊಸ ಆಶ್ಚ

ರ್ಯಾಗೊಳಿಸುವಂಥ ತಿಳಿವಳಿಕೆಯಿಂದ ಬಹುಶಃ ಅವಳ ಅದಕ್ಕೆ ಮುನ್ನಿನ ನಿರ್ಧಾರ ಪುಡಿಪುಡಿಯಾಗುವುದು. ಭಾರಿ ಎತ್ತರದಿಂದ ಕೆಳಕ್ಕೆ ನೋಡಿದಾಗ ನಮ್ಮ ಕಾಲ ಕೆಳಗಿನ ಪ್ರಪಾತಕ್ಕೆ ನಾವು ವಿರೋಧಿಸಲಾಗದಂತೆ ಎಳೆಯಲ್ಪಡುತ್ತೇವೆಂದೇ ಸಾಮಾನ್ಯ ವಾಗಿ ಹೇಳಲಾಗುತ್ತೆ. ಅನೇಕ ಆತ್ಮಹತ್ಯೆಗಳೂ ಕೊಲೆಗಳೂ ಸಾಮಾನ್ಯವಾಗಿ ರಿವಾಲ್ವರನ್ನು ಕೈಗೆತ್ತಿಕೊಂಡಿದ್ದಾಯಿತಲ್ಲ ಎಂಬ ಕಾರಣದಿಂದಾಗಿಯೇ ವಾಸ್ತವ ವಾಗಿ ನಡೆಯುತ್ತವೆ, ಎಂದೇ ನನ್ನ ನಂಬಿಕೆ. ಅದು ಇನ್ನೊಂದು ಪ್ರಪಾತವಿ ದ್ದಂತೆ, 45 ಡಿಗ್ರಿಯ ಇಳಿಜಾರು. ಇದರ ಹತ್ತಿರ ಬಂದವನಿಗೆ ಇದರ ಮೂಲಕ ಜಾರಿಕೊಂಡು ಹೋಗದೆ ಇರಲು ಸಾಧ್ಯವೇ ಇಲ್ಲ. ಯಾವುದೋ ಅದಮ್ಯ ಶಕ್ತಿ ಅವನನ್ನು ರಿವಾಲ್ವರಿನ ಸನ್ನೆಕೀಲನ್ನು ಎಳೆಯುವಂತೆ ಒತ್ತಾಯಿಸುತ್ತದೆ. ಆದರೆ ಈ ಪ್ರಸಂಗದಲ್ಲಿ, ನಾನು ಎಲ್ಲವನ್ನೂ ಕಂಡಿದ್ದೆ, ಎಲ್ಲವನ್ನೂ ತಿಳಿದಿದ್ದೆ, ಅವಳ ಕೈಯಲ್ಲಿ ಸಾವಿಗೆ ಈಡಾಗಲು ಮೌನದಿಂದ ಕಾಯುತ್ತಿದ್ದೆ, ಎಂಬ ಮನ ವರಿಕೆ ಬಹುಶಃ ಅವಳನ್ನು ಈ ಇಳಿಜಾರಿನಲ್ಲಿ ಜಾರಿ ಬೀಳದಂತೆ ಉಳಿಸಬಹುದು, ಎಂದು ನಾನು ಭಾವಿಸಿದ್ದೆ.

ಇನ್ನೂ ಎಲ್ಲವೂ ಮೌನವಾಗಿಯೇ ಇದ್ದಿತು. ಆಗ ಇದ್ದಕ್ಕಿದ್ದಂತೆ ತಣ್ಣಗಿನ ಉಕ್ಕಿನ ಮೂತಿ ನನ್ನ ಕೂದಲ ಸಮೀಪ ಹಣೆಯನ್ನು ಸ್ಪರ್ಶಿಸಿದಂತೆ ನನಗನಿಸಿತು. ನಾನು ತಪ್ಪಿಸಿಕೊಳ್ಳುವೆನೆಂದು ಖಂಡಿತವಾಗಿಯೂ ಆಸೆ ಇಟ್ಟುಕೊಂಡಿದ್ದೆನೆ, ಎಂದು ನೀವು ಕೇಳುವಿರಿ. ನಾನು ದೇವರ ಮುಂದೆ ನಿಂತು ಹೇಳುವವನಂತೆ ಹೇಳು ತ್ತೇನೆ: ನನಗೆ ಒಂದು ಚೂರು ಆಸೆಯೂ ಇರಲಿಲ್ಲ. ನನಗೆ ಉಳಿಯಲು ಇದ್ದ ಅವಕಾಶ ಬಹುಶಃ ನೂರಕ್ಕೆ ಒಂದಾಗಿದ್ದಿತು. ಹಾಗಾದರೆ ನಾನೇಕೆ ಸಾಯಲು ಸಿದ್ಧನಾಗಿದ್ದೆ? ಈಗ ನಾನು ನಿಮ್ಮನ್ನು ಕೇಳುತ್ತೇನೆ: ನಾನು ಬಹುವಾಗಿ ಪ್ರೀತಿ ಸುತ್ತಿದ್ದ ವ್ಯಕ್ತಿಯೇ ನನ್ನೆದುರು ರಿವಾಲ್ವರ್ ಹಿಡಿದು ನಿಂತಿರುವಾಗ ನಾನು ಬದುಕಿದ್ದು ಏನು ಪ್ರಯೋಜನವಿದ್ದಿತು? ಅಲ್ಲದೆ, ಆ ಘಳಿಗೆಯಲ್ಲಿ ನಮ್ಮಿಬ್ಬರ ನಡುವೆ ಯಾರು ಹೆಚ್ಚು ಉತ್ತಮವೆಂಬುದರ ಬಗೆಗೆ ಹೋರಾಟ ನಡೆದಿದ್ದಿತು, ಭಯಂಕರವಾದ ಜೀವನ್ಮರಣ ದ್ವಂದ್ವ ಹೋರಾಟ ನಡೆದಿದ್ದಿತು, ಹೇಡಿತನಕ್ಕಾಗಿ ತನ್ನ ಸಂಗಾತಿಗಳಿಂದ ಹೊರದೂಡಲ್ಪಟ್ಟಿದ್ದ ನಿನ್ನೆಯ ಆ ಹೇಡಿಯೇ ನಡೆಸು ತ್ತಿದ್ದ ದ್ವಂದ್ವ ಹೋರಾಟ ನಡೆದಿದ್ದಿತು, ಎಂಬುದನ್ನು ನಾನು ನನ್ನೆಲ್ಲ ಜೀವಶಕ್ತಿ ಯೊಂದಿಗೂ ಅರಿತಿದ್ದೆ. ನನಗದು ತಿಳಿದಿತ್ತು, ಅವಳಿಗೂ ಅದು ತಿಳಿದಿತ್ತು, ಅಂದರೆ ನಾನು ನಿದ್ದೆ ಮಾಡುತ್ತಿರಲಿಲ್ಲವೆಂಬುದನ್ನು ಅವಳೂ ತಿಳಿದಿದ್ದರೆ.

ಬಹುಶಃ ಇದೆಲ್ಲವೂ ಏನೂ ಇರಲಿಲ್ಲವೇನೋ, ಅಥವಾ ನಾನು ಆ ಕಾಲ ದಲ್ಲಿ ಈ ಭಾವನೆಗಳನ್ನೆಲ್ಲ ಹೊಂದಿಯೇ ಇರಲಿಲ್ಲವೇನೋ, ಆದರೂ ಅದೆಲ್ಲವೂ ಹಾಗೆಯೇ ಇದ್ದಿರಬೇಕು, ಉಪಪ್ರಜ್ಞೆಯಲ್ಲಾದರೂ ಇದ್ದಿರಬೇಕು. ಏಕೆಂದರೆ

ಅನಂತರ ನಾನು ನನ್ನ ಜೀವನದ ಪ್ರತಿ ಘಳಿಗೆಯಲ್ಲೂ ಅದರ ಬಗೆಗೇ ಯೋಚಿಸುತ್ತಿದ್ದೆ.

ನೀವು ಮತ್ತೆ ಕೇಳುತ್ತೀರಿ: ಆ ಪಾತಕವೆಸಗದಂತೆ ನಾನೇಕೆ ಅವಳನ್ನು ಕಾಪಾಡಲಿಲ್ಲ? ಓಹ್, ನಾನು ಅನಂತರ ಪ್ರತಿಬಾರಿ ಆ ಘಳಿಗೆಯನ್ನು ನನ್ನ ಬೆನ್ನುದ್ದಕ್ಕೂ ಶೀತಲ ಕಂಪನದೊಂದಿಗೆ ನೆನಸಿಕೊಂಡ ಹಾಗೂ ನನಗೆ ನಾನೇ ಈ ಪ್ರಶ್ನೆಯನ್ನು ಸಹಸ್ರಾರು ಬಾರಿ ಹಾಕಿಕೊಂಡಿದ್ದೇನೆ. ಆದರೆ ಆಗ ನನ್ನ ಆತ್ಮವು ವಿಷಣ್ಣ ಹತಾಶೆಯಲ್ಲಿ ಮುಳುಗಿದ್ದಿತು: ನಾನೇ ನಾಶವಾಗುತ್ತಲಿದ್ದೆ, ಆದ್ದರಿಂದ ಬೇರೆ ಯಾರನ್ನೇ ಆಗಲಿ ಉಳಿಸುವ ಸಾಧ್ಯತೆ ಎಲ್ಲಿತ್ತು? ಆ ಕಾಲದಲ್ಲಿ ನಾನು ಯಾರನ್ನೇ ಆಗಲಿ ಉಳಿಸುವ ಬಯಕೆ ಹೊಂದಿದ್ದೆನೇ ಅಥವಾ ಇಲ್ಲವೇ ಎಂಬುದನ್ನು ನೀವು ಹೇಗೆ ಬಲ್ಲಿರಿ? ಆಗ ನನ್ನಲ್ಲಿ ಯಾವ ಭಾವನೆ ಇದ್ದಿರಬಹುದು ಎಂಬುದನ್ನು ಯಾರು ಬಲ್ಲರು?

ಆದರೆ ನನ್ನ ಇಂದ್ರಿಯಗಳು ಸಚೇತನವಾಗಿದ್ದವು. ಕೆಲವು ಸೆಕೆಂಡುಗಳು ಕಳೆದವು. ಮರಣ ಮೌನ ನೆಲಸಿದ್ದಿತು. ಆದರೂ ಅವಳು ನನ್ನ ಮೇಲೆ ಬಾಗಿಯೇ ನಿಂತಿದ್ದಳು. ಆಗ ಇದ್ದಕ್ಕಿದ್ದಂತೆ ನಾನು ಭರವಸೆಯಿಂದ ನಡುಗಿದೆ. ಬೇಗನೆ ಕಣ್ಣು ತೆರೆದೆ. ಅವಳು ಕೋಣೆಯಲ್ಲಿರಲಿಲ್ಲ ನಾನು ಹಾಸಿಗೆಯಿಂದ ಎದ್ದೆ. ನಾನು ಗೆದ್ದಿದ್ದೆ, ಅವಳು ಸದಾ ಕಾಲಕ್ಕೂ ಸೋತಿದ್ದಳು!

ಬೆಳಗಿನ ಉಪಾಹಾರಕ್ಕಾಗಿ ಹೊರಗೆ ಬಂದೆ. ನಾವು ಯಾವತ್ತೂ ನಮ್ಮ ಬೆಳಗಿನ ಉಪಾಹಾರವನ್ನು ಮುಂಕೋಣೆಯಲ್ಲಿ ತೆಗೆದುಕೊಳ್ಳುತ್ತಿದ್ದೆವು. ಅವಳೇ ಯಾವತ್ತೂ ಟೀ ಹಾಕಿಕೊಡುತ್ತಿದ್ದಳು. ನಾನು ಮೌನದಿಂದ ಕುಳಿತು ಅವಳು ಕೊಟ್ಟ ಟೀ ಲೋಟವನ್ನು ತೆಗೆದುಕೊಂಡೆ. ಐದು ನಿಮಿಷದನಂತರ ಅವಳತ್ತ ನೋಡಿದೆ. ಅವಳು ಭಯ ಹುಟ್ಟಿಸುವಷ್ಟು ಬಿಳಚಿಕೊಂಡಿದ್ದಳು, ಹಿಂದಿನ ರಾತ್ರಿ ಇದ್ದುದಕ್ಕಿಂತ ಹೆಚ್ಚು ಬಿಳಚಿಕೊಂಡಿದ್ದಳು, ನನ್ನತ್ತವೇ ನೋಡುತ್ತಿದ್ದಳು. ಆಮೇಲೆ ಇದ್ದಕ್ಕಿದ್ದಂತೆ, ನಾನು ಅವಳನ್ನು ನೋಡುತ್ತಿದ್ದೇನೆ ಎಂಬುದನ್ನು ಕಂಡುಕೊಂಡ ಮೇಲೆ ಅವಳ ನಿರ್ವರ್ಣ ತುಟಿಗಳು ನಿಸ್ತೇಜ ಮುಗುಳ್ನಗೆಯೊಂದರೊಂದಿಗೆ ಅದುರಿದವು. ಅವಳ ಕಣ್ಣುಗಳು ಏನೋ ಪ್ರಶ್ನೆಯನ್ನು ಅಂಜುತ್ತ ಕೇಳುತ್ತಿದ್ದವು. ನಾನಂದುಕೊಂಡೆ: "ಇವಳು ಇನ್ನೂ ಸಂಶಯದಲ್ಲಿರುವಂತಿದೆ, ಅವರಿಗೆ ಗೊತ್ತೆ, ಅವರು ಕಂಡರೆ, ಎಂದು ಆಶ್ಚರ್ಯಪಡುತ್ತಿರುವಂತಿದೆ." ನಾನು ಮುಖ ಬೇರೆ ಕಡೆಗೆ ತಿರುಗಿಸಿ ಉದಾಸೀನತೆಯಿಂದ ನೋಡುತ್ತ ಕುಳಿತೆ. ಉಪಾಹಾರವಾದನಂತರ ಅಂಗಡಿಗೆ ಬೀಗ ಹಾಕಿ ಮಾರುಕಟ್ಟೆಗೆ ಹೋದೆ, ಒಂದು ಕಬ್ಬಿಣದ ಮಂಚವನ್ನೂ ಒಂದು ಅಡ್ಡತೆರೆಯನ್ನೂ ಕೊಂಡೆ. ಹಿಂದಿರುಗಿ, ಮಂಚವನ್ನು ಮುಂಕೋಣೆಯಲ್ಲಿ ಹಾಕಿಸಿ ಅಡ್ಡತೆರೆಯಿಂದ ಮರೆ ಮಾಡಿಸಿದೆ. ಆ ಹಾಸಿಗೆ

ಅವಳಿಗಾಗಿ. ಆದರೆ ನಾನು ಒಂದು ಮಾತನ್ನೂ ಹೇಳಲಿಲ್ಲ. ಮಾತುಗಳು ಅನವಶ್ಯವಾಗಿದ್ದವು, ಏಕೆಂದರೆ ಈ ಹಾಸಿಗೆಯೇ, ನಾನು ಎಲ್ಲವನ್ನೂ ಕಂಡಿದ್ದೆ, ಎಲ್ಲವನ್ನೂ ತಿಳಿದಿದ್ದೆ ಎಂಬುದನ್ನೂ, ಅದರಲ್ಲಿ ಯಾವ ಸಂಶಯವೂ ಇರಲಿಲ್ಲ ಎಂಬುದನ್ನೂ, ಅವಳಿಗೆ ತಿಳಿಸುತ್ತಿದ್ದಿತು. ನಾನು ಮಲಗಲು ಹೋದಾಗ ಎಂದಿನಂತೆ ರಿವಾಲ್ವರನ್ನು ಮೇಜಿನ ಮೇಲೆಯೇ ಬಿಟ್ಟಿದ್ದೆ. ಅಂದು ರಾತ್ರಿ ಅವಳು ಮೌನದಿಂದ ತನ್ನ ಹೊಸ ಹಾಸಿಗೆಯಲ್ಲಿ ಮಲಗಿದಳು. ನಮ್ಮ ವಿವಾಹ ವಿಚ್ಛೇದನವಾಗಿದ್ದಿತು. ಅವಳನ್ನು "ಪರಾಭವಗೊಳಿಸಲಾಗಿದ್ದಿತು, ಆದರೆ ಕ್ಷಮಿಸಲಾಗಿರಲಿಲ್ಲ." ಅಂದು ರಾತ್ರಿ ಅವಳು ಚಿತ್ತಭ್ರಮೆಯಿಂದ ಅಸಂಬದ್ಧವಾಗಿ ಮಾತನಾಡುತ್ತಿದ್ದಳು, ಕೂಗಾಡುತ್ತಿದ್ದಳು. ಬೆಳಿಗ್ಗೆಯ ಹೊತ್ತಿಗೆ ಅವಳಿಗೆ ತೀವ್ರ ಜ್ವರ ಬಂದಿತ್ತು. ಅವಳು ಆರು ವಾರ ಕಾಯಿಲೆ ಮಲಗಿದಳು.

# ಅಧ್ಯಾಯ ಎರಡು

## I
## ಹೆಮ್ಮೆಯ ಕನಸು

ತಾನು ಇನ್ನೆಷ್ಟು ಮಾತ್ರವೂ ನನ್ನೊಂದಿಗೆ ಇರುವುದಿಲ್ಲವೆಂದೂ, ತನ್ನ ಒಡತಿಯು ಸಮಾಧಿಯಾದ ಕೂಡಲೇ ಹೊರಟುಹೋಗಲಿರುವಳೆಂದೂ ಲುಕೇರ್ಯ ನನಗೆ ಈಗಷ್ಟೆ ಹೇಳಿದಳು. ನಾನು ಈಗ ಐದು ನಿಮಿಷಗಳಿಂದ ದೇವರ ಮುಂದೆ ಮಂಡಿಯೂರಿ ಕುಳಿತು ಪ್ರಾರ್ಥನೆ ಮಾಡುತ್ತಿದ್ದೇನೆ. ಒಂದು ಗಂಟೆ ಪ್ರಾರ್ಥನೆ ಮಾಡಬೇಕೆಂದು ಬಯಸಿದ್ದೆ, ಆದರೆ ಯೋಚನೆಗಳು ನನ್ನ ಮನಸ್ಸನ್ನು ಮುತ್ತುತ್ತಿವೆ. ಎಲ್ಲವೂ ಜುಗುಪ್ಸೆ ಹುಟ್ಟಿಸುವಂತಹ ಯೋಚನೆಗಳೇ. ನನ್ನ ಮನಸ್ಸೂ ರೋಗಗ್ರಸ್ತವಾಗಿದೆ. ಪ್ರಾರ್ಥನೆ ಮಾಡಿ ಏನು ಪ್ರಯೋಜನ... ಅದು ಪಾಪಕರ, ಅಷ್ಟೆ. ನನಗೆ ನಿದ್ರೆ ಬರುತ್ತಿಲ್ಲದಿರುವುದೂ ವಿಚಿತ್ರವೇ. ವಿಪತ್ತು, ಘೋರ ವಿಪತ್ತು, ಉಂಟಾದಾಗ, ಮೊದಲ ಅತ್ಯಂತ ಉಗ್ರ ದುಃಖದ ಆವೇಶ ಇಳಿದನಂತರ, ಯಾರೇ ಆಗಲಿ ಯಾವತ್ತೂ ನಿದ್ರಿಸಬಯಸುತ್ತಾರೆ. ಮರಣಶಿಕ್ಷೆಗೊಳಗಾದ ಜನ ಕೊನೆಯ ರಾತ್ರಿ ಅತ್ಯಂತ ಗಾಢವಾಗಿ ನಿದ್ರಿಸುತ್ತಾರೆಂದು ಹೇಳಲಾಗುತ್ತೆ. ಆದರೆ ಅದು ಸರಿಯಾದುದೇ, ಸಹಜವೇ. ಇಲ್ಲದಿದ್ದರೆ ವಿಪತ್ತಿನ ಆಘಾತವನ್ನು ಸಹಿಸಲು ಆಗುವುದಿಲ್ಲ. ನಾನು ಸೋಫಾದ ಮೇಲೆ ಮೈ ಚಾಚಿದೆ. ಆದರೆ ನಿದ್ರೆಯೋ ಬರದು...

...ಅವಳು ಕಾಯಿಲೆ ಮಲಗಿದ್ದ ಆರು ವಾರಗಳೂ ನಾವು – ಲುಕೇರ್ಯ, ನಾನು ಹಾಗೂ ನಾನು ಗೊತ್ತು ಮಾಡಿದ್ದ ಆಸ್ಪತ್ರೆಯ ಒಬ್ಬ ನುರಿತ ದಾದಿ – ಹಗಲೂ ರಾತ್ರಿ ಅವಳ ಶುಶ್ರೂಷೆ ಮಾಡಿದೆವು. ನಾನು ಎಷ್ಟು ಖರ್ಚು ಮಾಡಲೂ ಹಿಂದೆಗೆಯಲಿಲ್ಲ. ಅವಳಿಗಾಗಿ ಹಣ ಖರ್ಚುಮಾಡುವುದು ನನಗೆ ಆನಂದವನ್ನೇ ನೀಡಿತು. ಡಾ. ಶ್ರೇದೆರ್‌ರನ್ನು ಮನೆಗೆ ಕರೆತಂದೆ. ಒಮ್ಮೊಮ್ಮೆ ಬಂದಾಗಲೂ

ಹತ್ತು ರೂಬಲ್ ಕೊಟ್ಟೆ. ಅವಳಿಗೆ ಪ್ರಜ್ಞೆ ಬಂದ ಮೇಲೆ ಅವಳ ಕಣ್ಣಿಗೆ ಬೀಳ ದಂತಿರಲು ಯತ್ನಿಸಿದೆ. ಆದರೆ ಅದನ್ನೆಲ್ಲ ಏಕೆ ವಿವರಿಸಬೇಕು, ಹೇಳಿ? ಅವಳು ಎದ್ದು ಓಡಾಡುವಂತಾದಾಗ ನನ್ನ ಕೋಣೆಗೆ ಬಂದು ಮೌನದಿಂದ ಮೂಕಳಾಗಿ, ಅವಳಿಗಾಗಿಯೇ ನಾನು ಕೊಂಡು ತಂದಿರಿಸಿದ್ದ ಮೇಜಿನ ಮುಂದೆ ಬೇರೆಯಾಗಿ ಕುಳಿತಳು. ಹೌದು, ನಿಜ, ನಾವು ಪರಸ್ಪರರಿಗೆ ಒಂದು ಮಾತನ್ನೂ ಹೇಳಲಿಲ್ಲ. ಆಮೇಲೆ ಮಾತನಾಡತೊಡಗಿದೆವು, ಆದರೆ ಅವೆಲ್ಲ ಮಾಮೂಲೀ ಮಾತುಗಳಾ ಗಿದ್ದವು. ನನ್ನ ಮೌನ ಉದ್ದೇಶಪೂರಿತವಾಗಿದ್ದಿತು. ಆದರೆ ಅವಳೂ ಹೆಚ್ಚಿಗೆ ಏನೂ ಹೇಳಬೇಕಾಗಲಿಲ್ಲವಲ್ಲ ಎಂದು ಸಂತೋಷಪಟ್ಟಿದ್ದಳೆಂದೇ ನಾನು ಕಂಡು ಕೊಂಡೆ. ಅದು ಅವಳಿಗೆ ಸಹಜವಾಗಿದ್ದಿತೆಂದು ನಾನು ಭಾವಿಸಿದೆ. “ಅವಳು ಸಂಪೂರ್ಣವಾಗಿ ಭಾವದ ಹೊರೆಯ ಕೆಳಗೆ ಹೂತುಹೋಗಿದ್ದಂತಿದ್ದಳು, ಪರಾಭವಗೊಂಡಿದ್ದಳು. ಆದ್ದರಿಂದ ಅವಳಿಗೆ ಹಳೆಯದೆಲ್ಲವನ್ನೂ ಮರೆಯಲು ಮತ್ತು ಮತ್ತೆ ಸರಿಹೊಂದಿಕೊಳ್ಳಲು ಸಹಜವಾಗಿಯೇ ಅವಕಾಶ ನೀಡಬೇಕು” ಎಂದು ನಾನಂದು ಕೊಂಡೆ. ಹೀಗೆ ನಾವು ಮೌನದಲ್ಲೇ ಜೀವನ ನಡೆಸಿದೆವು. ಆದರೆ ನಾನು ಪ್ರತಿ ನಿಮಿಷವನ್ನೂ ಭವಿಷ್ಯತ್ತಿಗಾಗಿ ನನ್ನನ್ನು ಸಿದ್ಧಗೊಳಿಸಿಕೊಳ್ಳುವುದರಲ್ಲಿ ಕಳೆದೆ. ಅವಳೂ ಅದನ್ನೇ ಮಾಡುತ್ತಿದ್ದಳೆಂದು ನಾನು ಬಗೆದೆ. ಅವಳು ಆಗ ಯಾವುದರ ಬಗೆಗೆ ಯೋಚಿಸುತ್ತಿದ್ದಳು ಎಂದು ಊಹಿಸ ಯತ್ನಿಸುವುದರಲ್ಲೇ ನಾನು ಪರಮಾನಂದ ಪಡೆದುಕೊಂಡೆ.

ಮತ್ತೊಂದು ವಿಷಯ: ಅವಳು ಕಾಯಿಲೆ ಮಲಗಿದ್ದಾಗ ನಾನು ಎಷ್ಟು ಪರಿತಪಿಸಿದೆ ಎನ್ನುವುದನ್ನು ಯಾರೂ ತಿಳಿಯರೆನ್ನಿ. ಆದರೆ ನಾನು ಮೌನದಿಂದಲೇ ಪರಿತಪಿಸಿದೆ. ನನ್ನ ದುಃಖ ಗೋಳಾಟಗಳನ್ನು ನಾನು ನನ್ನ ಎದೆಯಲ್ಲೇ ಅದು ಮಿಟ್ಟೆ. ಲುಕೇರ್ಯ ಕೂಡ ಅವುಗಳನ್ನು ಕೇಳಬಾರದೆಂದು ನಾನು ಹಾಗೆ ಮಾಡಿದೆ. ಇವೆಲ್ಲವನ್ನೂ ತಿಳಿಯದೆಯೇ ಅವಳು ಸಾಯುವಳೆಂದು ನಾನು ಭಾವಿಸಿರಲಿಲ್ಲ, ಹಾಗೆಂದು ಊಹಿಸಲೂ ನನಗೆ ಸಾಧ್ಯವಿರಲಿಲ್ಲ, ಆದರೂ, ಅವಳ ಪ್ರಾಣಕ್ಕೆ ಇನ್ನೆಷ್ಟು ಮಾತ್ರವೂ ಅಪಾಯವಿಲ್ಲವೆಂದಾದಾಗ, ಅವಳು ಗುಣಮುಖಳಾಗ ತೊಡಗಿದಾಗ, ನಾನು ಬಹು ಬೇಗ ಹಾಗೂ ತುಂಬ ಪರಿಣಾಮಕಾರಿಯಾಗಿ ನನ್ನ ಮನಶ್ಶಾಂತಿಯನ್ನು ಪಡೆದುಕೊಂಡೆ. ಇದು ನನಗೆ ಚೆನ್ನಾಗಿ ಜ್ಞಾಪಕವಿದೆ. ಅದಕ್ಕೂ ಹೆಚ್ಚಾಗಿ, ನಾನು ನಮ್ಮ ಭವಿಷ್ಯತ್ತನ್ನು ಸಾಧ್ಯವಾದಷ್ಟೂ ದೂರಕ್ಕೆ ಮುಂದೂಡಲು ನಿರ್ಧರಿಸಿದೆ. ಈ ಮಧ್ಯೆ ಎಂದಿನಂತೆಯೇ ಮುಂದುವರಿಸಲು ತೀರ್ಮಾನಿಸಿದೆ. ಹೌದು, ಆಗ ನನಗೆ ಒಂದು ತುಂಬ ವಿಚಿತ್ರವಾದ ಹಾಗೂ ಅಸಾ ಮಾನ್ಯವಾದ ಅನುಭವ ಉಂಟಾಯಿತು, ಅದನ್ನು ಬೇರೆ ಹೇಗೆ ಕರೆಯಬೇಕೋ

ನನಗೆ ತಿಳಿಯದು. ನಾನು ಅವಳ ಮೇಲೆ ವಿಜಯ ಸಾಧಿಸಿದ್ದೆ. ಆ ತಿಳಿವಳಿಕೆಯೇ ನನಗೆ ಸಂಪೂರ್ಣ ತೃಪ್ತಿ ನೀಡುವಂತೆ ಕಂಡುಬಂದಿತು. ಹೀಗೆ ನಾವು ಇಡೀ ಚಳಿ ಗಾಲವನ್ನು ಕಳೆದೆವು. ಓಹ್ ಹೌದು, ನಾನು ತೃಪ್ತನಾಗಿದ್ದೆ, ಹಿಂದೆಂದಿಗಿಂತ ಹೆಚ್ಚು ತೃಪ್ತನಾಗಿದ್ದೆ. ಇಡೀ ಚಳಿಗಾಲ ಇದು ಹೀಗೆಯೇ ಇದ್ದಿತು.

ನೋಡಿ, ನನ್ನ ಜೀವನದಲ್ಲಿ ಒಂದು ಭಯಂಕರ ಪ್ರಸಂಗ ಅಲ್ಲಿಯವರೆಗೂ, ಅಂದರೆ ನನ್ನ ಪತ್ನಿಯ ದುರಂತದ ದಿನದವರೆಗೂ, ನನ್ನ ಮೇಲೆ ಪ್ರತಿ ದಿನವೂ ಪ್ರತಿ ಗಂಟೆಯೂ ಭಾರಿ ಒತ್ತಡ ಹಾಕುತ್ತಿದ್ದಿತು. ಅದೇ, ನನ್ನ ಒಳ್ಳೆಯ ಹೆಸರು ನಷ್ಟವಾದ ಹಾಗೂ ನನ್ನನ್ನು ರೆಜಿಮೆಂಟಿನಿಂದ ತೆಗೆದುಹಾಕಿದ ಪ್ರಸಂಗವಾಗಿ ದ್ದಿತು. ಸ್ಥೂಲವಾಗಿ ಹೇಳುವುದಾದರೆ, ನಾನು ದಬ್ಬಾಳಿಕೆಯ ಅನ್ಯಾಯಕ್ಕೆ ಬಲಿಯಾಗಿದ್ದೆ. ನಿಜ, ನನ್ನ ಸಂಗಾತಿಗಳು ನನ್ನನ್ನು ಇಷ್ಟಪಡುತ್ತಿರಲಿಲ್ಲ, ಏಕೆಂದರೆ, ನನ್ನೊಂದಿಗೆ ಏಗುವುದು ಅವರಿಗೆ ಕಷ್ಟವಾಗಿದ್ದಿತು. ಅಥವಾ, ಬಹುಶಃ ನಾನ ವರಿಗೆ ವಿಚಿತ್ರವಾಗಿ ಕಂಡುಬಂದುದು ಅದಕ್ಕೆ ಕಾರಣವಾಗಿದ್ದಿರಬಹುದು. ಆದರೆ ಇದೆಲ್ಲ ಕೆಲವು ವೇಳೆ ಹೇಗಾಗುತ್ತೆ ಎಂಬುದು ನಿಮಗೆ ಗೊತ್ತೇ ಇದೆ. ನೀವು ತುಂಬ ಪ್ರಿಯವಾದುದೆಂದು ಭಾವಿಸುವ, ಇಷ್ಟಪಡುವ ಹಾಗೂ ಗೌರವಿಸುವ ವಸ್ತುವು ವಿನಾ ಕಾರಣ ನಿಮ್ಮ ಸಂಗಾತಿಗಳ ಗುಂಪಿನ ನಗೆಗೆ ಮೂಲವಾಗುತ್ತದೆ. ಓಹ್, ನನ್ನನ್ನು ಯಾರೂ ಎಂದೂ ಇಷ್ಟಪಟ್ಟಿರಲಿಲ್ಲ; ಶಾಲೆಯಲ್ಲೂ ಸಹ. ಎಲ್ಲೆಲ್ಲೂ ಮತ್ತು ಯಾವತ್ತೂ ನನ್ನನ್ನು ಯಾರೂ ಇಷ್ಟಪಟ್ಟಿಲ್ಲ. ಲುಕೇರ್‍ಯಳು ಸಹ ನನ್ನನ್ನು ಇಷ್ಟಪಡುತ್ತಿಲ್ಲ. ಸೈನ್ಯ ರೆಜಿಮೆಂಟಿನಲ್ಲಿ ಏನು ಜರುಗಿತೋ ಅದಕ್ಕೆ ನನ್ನ ಬಗೆಗಿನ ಈ ಅಪ್ರೀತಿಯೇ ಕಾರಣವಾಗಿದ್ದರೂ, ಪರ್ಯವಸಾನವು ನಿಸ್ಸಂದೇಹವಾಗಿಯೂ ಆಕಸ್ಮಿಕವಾಗಿದ್ದಿತು. ನಾನು ಇದನ್ನು ಹೇಳುತ್ತಿದ್ದೇನೇಕೆಂದರೆ, ಕೇವಲ ಕುರುಡು ಆಕಸ್ಮಿಕದಿಂದ, ಮೋಡಗಳಂತೆ ಚದುರಬಹುದಾಗಿದ್ದಂಥ ಪರಿ ಸ್ಥಿತಿಗಳ ದುರದೃಷ್ಟ ಸಮೂಹದಿಂದ, ನಾಶಗೊಳ್ಳುವುದಕ್ಕಿಂತ ಹೆಚ್ಚು ಅಸಹ ನೀಯವಾದುದು, ಹೆಚ್ಚು ಕೆರಳಿಸುವಂತಹುದು ಬೇರೆ ಇರಲಾರದು. ಬುದ್ಧಿ ಶಕ್ತಿಯುಳ್ಳ ಪ್ರಾಣಿಗಂತೂ ಅದು ಅಪಮಾನ ಮಾಡುವಂತಹುದು. ಆಗ ಈ ಕೆಳಗಿನದು ಜರುಗಿತು.

ಒಂದು ರಾತ್ರಿ, ರಂಗಮಂದಿರದಲ್ಲಿ, ನಾನು ನಾಟಕದ ಎರಡು ಅಂಕಗಳ ನಡುವಿನ ವಿರಾಮ ವೇಳೆಯಲ್ಲಿ ಉಪಾಹಾರದ ಅಂಗಡಿಗೆ ಹೋಗಿದ್ದೆ. ಅ---ವ್ ಹೆಸರಿನ ಒಬ್ಬ ಹುಸಾರ್* ಒಳಗೆ ಬಂದು, ನಮ್ಮ ರೆಜಿಮೆಂಟಿನ ಕ್ಯಾಪ್ಟನ್ ಬೆಜೂಮ್‌ತ್ಸೆವ್ ಮೊಗಸಾಲೆಯಲ್ಲಿ ಗಲಾಟೆ ಮಾಡುತ್ತಿದ್ದನೆಂದೂ ಅವನು "ಕುಡಿತದ ಅಮಲಿ

---

*ರಾಹುತ ಸೇನೆಯ ಸಿಪಾಯಿ. – ಸಂ.

ನಲ್ಲಿದ್ದಂತೆ ಕಾಣುತ್ತಿದ್ದ"ನೆಂದೂ, ತನ್ನ ಇನ್ನಿಬ್ಬರು ಹುಸಾರ್ ಮಿತ್ರರಿಗೆ ಗಟ್ಟಿಯಾಗಿ, ಅಲ್ಲಿದ್ದ ಇತರೆಲ್ಲ ಸೈನ್ಯಾಧಿಕಾರಿಗಳಿಗೂ ನಾಗರಿಕರಿಗೂ ಕೇಳಿಸುವಂತೆ, ಹೇಳತೊಡಗಿದ. ಇತರರು ಈ ಸಂಭಾಷಣೆಯನ್ನು ಮುಂದುವರಿಸಲಿಲ್ಲ. ಏನೇ ಆಗಲೀ ಅವನು ಹೇಳಿದುದು ನಿಜವಾಗಿರಲಿಲ್ಲ, ಏಕೆಂದರೆ, ಕ್ಯಾಪ್ಟನ್ ಬೆಜೂಮ್ತ್ಸೆವ್ ಕುಡಿದೂ ಇರಲಿಲ್ಲ, ಅವನು ಮಾಡುತ್ತಿದ್ದನೆಂದು ಹೇಳಲಾದ ತೊಂದರೆಯು ತೊಂದರೆಯೂ ಆಗಿರಲಿಲ್ಲ. ಹುಸಾರರು ಬೇರೆ ಯಾವುದೋ ವಿಷಯ ಮಾತನಾಡತೊಡಗಿದರು. ಹಾಗಾಗಿ ವಿಷಯ ಅಲ್ಲಿಗೇ ಮುಕ್ತಾಯವಾಯಿತು. ಆದರೆ ಮಾರನೆಯ ಬೆಳಿಗ್ಗೆ ಈ ಕಥೆ ಹೇಗೋ ನಮ್ಮ ರೆಜಿಮೆಂಟಿನಲ್ಲಿ ಪ್ರಸಾರವಾಗತೊಡಗಿತು. ಹುಸಾರ್ ಅ---ವ್ ಕ್ಯಾಪ್ಟನ್ ಬೆಜೂಮ್ತ್ಸೆವ್ ಬಗೆಗೆ ಅಷ್ಟು ಸೊಕ್ಕಿನಿಂದ ಮಾತನಾಡಿದಾಗ ಅಲ್ಲಿದ್ದ ನಮ್ಮ ರೆಜಿಮೆಂಟಿನ ಏಕೈಕ ವ್ಯಕ್ತಿಯಾಗಿದ್ದ ನಾನು ಕೂಡಲೇ ಆ ಹುಸಾರನ ಬಳಿಗೆ ಹೋಗಿ ಛೀಮಾರಿ ಹಾಕಿ ಅವನ ಬಾಯಿ ಮುಚ್ಚಿಸಬೇಕಾಗಿದ್ದಿತೆಂದು ನಮ್ಮ ಸೈನ್ಯಾಧಿಕಾರಿಗಳೆಲ್ಲ ತಕ್ಷಣವೇ ಹೇಳತೊಡಗಿದರು. ಆದರೆ ಯಾವ ಕಾರಣಕ್ಕಾಗಿ ನಾನು ಹಾಗೆ ಮಾಡಬೇಕಿತ್ತು ? ಆ ಹುಸಾರನು ಬೆಜೂಮ್ತ್ಸೆವ್‌ನ ಬಗೆಗೆ ದ್ವೇಷ ಹೊಂದಿದ್ದರೆ, ಅದು ಅವರ ಸ್ವಂತ ಖಾಸಗಿ ವ್ಯವಹಾರ, ನಾನೇಕೆ ಮಧ್ಯೆ ಹೋಗಬೇಕು ? ಆದರೆ ಈ ನಮ್ಮ ಸೈನ್ಯಾಧಿಕಾರಿಗಳಿಗೆ ಅದು ಖಾಸಗಿ ವ್ಯವಹಾರವಾಗಿ ಕಾಣಲಿಲ್ಲ, ಆದರೆ ಇಡೀ ರೆಜಿಮೆಂಟಿಗೆ ಸಂಬಂಧಿಸಿದ ವ್ಯವಹಾರವಾಗಿ ಕಾಣಿಸಿತು. ಅಲ್ಲಿದ್ದ ನಾನು ಈ ರೆಜಿಮೆಂಟಿನ ಏಕೈಕ ಪ್ರತಿನಿಧಿಯಾಗಿದ್ದುದರಿಂದ, ಅಲ್ಲಿದ್ದ ಇತರ ಸೈನ್ಯಾಧಿಕಾರಿಗಳೂ ನಾಗರಿಕರೂ ನನ್ನ ಮನೋಧರ್ಮವನ್ನು ತಮ್ಮ ಸ್ವಂತ ಅಥವಾ ತಮ್ಮ ರೆಜಿಮೆಂಟಿನ ಗೌರವದ ಬಗೆಗೇ ಗಮನ ನೀಡದಂತಹ ಸೈನ್ಯಾಧಿಕಾರಿಗಳನ್ನು ನಮ್ಮ ರೆಜಿಮೆಂಟ್ ಮನ್ನಿಸಿ ಸಹಿಸಿಕೊಂಡಿರುತ್ತದೆಂಬುದಕ್ಕೆ ಸಾಕ್ಷಿಯನ್ನಾಗಿ ತೆಗೆದುಕೊಳ್ಳುವ ಸಾಧ್ಯತೆ ಇದ್ದಿತು, ಎಂದು ಈ ಸೈನ್ಯಾಧಿಕಾರಿಗಳಿಗೆ ಈಗ ಕಂಡುಬಂದಿತು. ನಾನು ಅವರ ತರ್ಕವನ್ನು ಒಪ್ಪದಾದೆ. ಇಷ್ಟು ತಡವಾದರೂ ಸರಿಯೆ, ಈಗಲಾದರೂ ಆ ಹುಸಾರ್ ಅ---ವ್‌ನನ್ನು ಸಾಂಪ್ರದಾಯಿಕವಾಗಿ ದ್ವಂದ್ವಯುದ್ಧಕ್ಕೆ ಕರೆಯುವ ಮೂಲಕ ನಾನು ಇನ್ನೂ ಸರಿಪಡಿಸುವ ಸಾಧ್ಯತೆ ಇದೆಯೆಂದು ನನಗೆ ಹೇಳಲಾಯಿತು. ನಾನು ಹಾಗೆ ಮಾಡಲು ನಿರಾಕರಿಸಿದೆ. ಕೋಪ ಬಂದು ನಾನು ಸೊಕ್ಕಿನಿಂದಲೇ ನಿರಾಕರಿಸಿದೆ. ಅದಾದ ಮೇಲೆ ನಾನು ಕೂಡಲೇ ನನ್ನ ರಾಜೀನಾಮೆ ನೀಡಿದೆ. ಇದೇ ಆ ಕಥೆಯ ಸಾರಾಂಶ. ನಾನು ನನ್ನ ಹೆಮ್ಮೆಯನ್ನು ಉಳಿಸಿಕೊಂಡಿದ್ದೆ. ಆದರೆ ನನ್ನ ಚೈತನ್ಯ ಉಡುಗಿ ಹೋಗಿದ್ದಿತು. ನನ್ನ ಸಂಕಲ್ಪಶಕ್ತಿಯನ್ನೂ ವಿವೇಚನೆಯ ಶಕ್ತಿಯನ್ನೂ ನಾನು ಕಳೆದುಕೊಂಡೆ. ಅದೇ ಹೊತ್ತಿಗೆ ಸರಿಯಾಗಿ ಮಾಸ್ಕೋದಲ್ಲಿದ್ದ ನನ್ನ ತಂಗಿಯ ಗಂಡ

ನಮ್ಮ ಅಲ್ಪ ಸ್ವಲ್ಪ ಬಂಡವಾಳವನ್ನೂ ನನ್ನ ಸ್ವಂತ ಪಾಲನ್ನೂ ಸಹ, ಪೋಲು ಮಾಡಿ ಮುಗಿಸಿದ್ದ. ನಿಜ ನನ್ನ ಪಾಲು ತುಂಬ ಸಣ್ಣದಾಗಿದ್ದಿತು. ಆದರೂ ಈಗ ನಾನು ಕೈಯಲ್ಲಿ ಒಂದು ಕಾಸೂ ಇಲ್ಲದೆ ಬೀದಿ ಪಾಲಾದೆ. ನಾನು ಯಾವುದಾದರೂ ಕೆಲಸ ತೆಗೆದುಕೊಳ್ಳಬಹುದಿತ್ತು, ಆದರೆ ತೆಗೆದುಕೊಳ್ಳಲಿಲ್ಲ. ಸೈನ್ಯಾಧಿಕಾರಿಯ ಭವ್ಯ ಸಮವಸ್ತ್ರ ತೊಟ್ಟನಂತರ ಈಗ ಸಾಧಾರಣ ರೈಲ್ವೇಮನ್ ಕೋಟು ತೊಟ್ಟು ಎಲ್ಲರ ಮುಂದೂ ಕಾಣಿಸಿಕೊಳ್ಳಲು ನನ್ನ ಮನಸ್ಸು ಒಪ್ಪಲಿಲ್ಲ. ಆದ್ದರಿಂದ, ನಾಚಿಕೆ ಆಗಬೇಕೆಂದಿದ್ದಲ್ಲಿ ನಾಚಿಕೆಯೇ ಆಗಲಿ; ಅವಮಾನ ಆಗಬೇಕೆಂದಿದ್ದಲ್ಲಿ ಅವಮಾನವೇ ಆಗಲಿ; ಅಧಃಪತನವಾಗಬೇಕೆಂದಿದ್ದಲ್ಲಿ ಅಧಃಪತನವೇ ಆಗಲಿ. ಆಗಲಿ, ಎಷ್ಟು ಕೀಳು ಮಟ್ಟದ್ದಾದರೆ ಅಷ್ಟೂ ಉತ್ತಮ – ಹೀಗಿದ್ದಿತು ನನ್ನ ಆಯ್ಕೆ. ಮುಂದಿನ ಮೂರು ವರ್ಷಗಳ ನನ್ನ ನೆನಪುಗಳು ತುಂಬ ವಿಷಣ್ಣವಾದವು. ಅವುಗಳಲ್ಲಿ, ನಾನು ನಿರ್ಗತಿಕರ ವ್ಯಾಜೇಮ್‌ಸ್ಕಿ ಧರ್ಮಶಾಲೆಯಲ್ಲಿದ್ದುದೂ ಬರುತ್ತದೆ. ಒಂದೂವರೆ ವರ್ಷದ ಹಿಂದೆ ನನ್ನ ಅಜ್ಜಿ, ಒಬ್ಬ ಶ್ರೀಮಂತ ಮುದುಕಿ, ಮಾಸ್ಕೋದಲ್ಲಿ ತೀರಿಹೋದಳು. ಅವಳು ತೀರ ಅನಿರೀಕ್ಷಿತವಾಗಿ ತನ್ನ ಉಯಿಲಿನಲ್ಲಿ ಇತರರ ಜೊತೆಗೆ ನನ್ನ ಹೆಸರನ್ನೂ ನೆನಪಿಗೆ ತಂದುಕೊಂಡು, ನನಗೆ ಮೂರು ಸಾವಿರ ರೂಬಲ್‌ಗಳನ್ನು ಬಿಟ್ಟು ಹೋದಳು. ನಾನು ವಿಷಯವನ್ನೆಲ್ಲ ಪರಿಶೀಲಿಸಿ ಅಲ್ಲೇ ಆಗಲೇ ನಿರ್ಧಾರ ಕೈಕೊಂಡೆ. ನಾನು ಒತ್ತೆಯ ಅಂಗಡಿ ಇಡಲು ನಿರ್ಧರಿಸಿದೆ, ಏಕೆಂದರೆ, ಆಗ ನಾನು ನನ್ನ ಗತ ಜೀವನದ ಬಗೆಗೆ ಯಾವುದೇ ಸಮರ್ಥನೆಗಳನ್ನೂ ಎಂದೂ ಮಾಡಬೇಕಾಗಿರಲಿಲ್ಲ. ಹಣ, ಒಂದು ಮನೆ, ಹಳೆಯ ಸ್ಮರಣೆಗಳಿಂದ ದೂರವಾದ ಒಂದು ಹೊಸ ಜೀವನ – ಇದೇ ನನ್ನ ಯೋಜನೆಯಾಗಿದ್ದಿತು. ಆದರೂ ನನ್ನ ವಿಷಣ್ಣ ಗತ ಜೀವನವೂ, ನಾನು ನನ್ನ ಗೌರವವನ್ನೂ ಒಳ್ಳೆಯ ಹೆಸರನ್ನೂ ಪುನಃ ಪಡೆದುಕೊಳ್ಳಲಾಗದಂತೆ ಕಳೆದುಕೊಂಡಿದ್ದುದೂ ನನ್ನನ್ನು ಪ್ರತಿ ಗಂಟೆಯೂ ಪ್ರತಿ ನಿಮಿಷವೂ ಕಾಡಿಸುತ್ತಿದ್ದಿತು. ಅನಂತರ ನಾನು ವಿವಾಹವಾದೆ. ಅದು ಆಕಸ್ಮಿಕವೋ ಅಲ್ಲವೋ ನನಗೆ ತಿಳಿಯದು. ಆದರೂ ನಾನು ಅವಳನ್ನು ನನ್ನ ಮನೆಗೆ ಕರೆತಂದಾಗ ಒಬ್ಬ ಗೆಳತಿಯನ್ನೇ ತಂದಂತೆ ಭಾವಿಸಿದೆ, ಏಕೆಂದರೆ ನನಗೊಬ್ಬ ಗೆಳತಿ ತುಂಬ ಅವಶ್ಯವಾಗಿದ್ದಳು. ಆದರೆ ಆ ಗೆಳತಿಯನ್ನು ಮೊದಲು ಸಿದ್ಧಗೊಳಿಸಬೇಕಿದ್ದಿತು, ರೂಪುಗೊಳಿಸಬೇಕಿದ್ದಿತು, ಪರಾಭವಗೊಳಿಸಬೇಕಿದ್ದಿತು ಕೂಡ, ಎಂಬುದನ್ನು ನಾನು ಸ್ಪಷ್ಟವಾಗಿ ಕಂಡುಕೊಂಡೆ. ಪೂರ್ವಭಾವಿ ಸಿದ್ಧತೆಗಳಿಲ್ಲದೆ ನಾನು ಆ ಪೂರ್ವಾಗ್ರಹಪೀಡಿತಳಾದ ಹದಿನಾರು ವರ್ಷ ವಯಸ್ಸಿನ ಮಗುವಿಗೆ ಏನನ್ನೇ ಆಗಲಿ ವಿವರಿಸಿ ತಿಳಿಸುವುದು ಸಾಧ್ಯವಿದ್ದಿತೆ? ಉದಾಹರಣೆಗೆ, ರಿವಾಲ್ವರಿಗೆ ಸಂಬಂಧಿಸಿದ ಆ ಭೀಕರ ಅನಾಹುತ ಇರದೆ ಹೋಗಿದ್ದಿದ್ದರೆ ಮತ್ತು ಅದು ಅಷ್ಟು ಅನುಕೂಲವಾಗಿ ಸಹಾಯ ಒದ

ಗಿಸದೆ ಹೋಗಿದ್ದಿದ್ದರೆ, ನಾನು ಹೇಡಿಯಲ್ಲ, ನನ್ನ ರೆಜಿಮೆಂಟ್ ನನ್ನ ಮೇಲೆ ಅನ್ಯಾಯವಾಗಿ ಹೇಡಿಯ ಅಪವಾದ ಹೊರಿಸಿತು, ಎಂಬುದನ್ನು ಅವಳಿಗೆ ಸಾಧಿಸಿ ತೋರಲು ಸಾಧ್ಯವಾಗುತ್ತಿದ್ದಿತೆ? ಆ ಅನಾಹುತ ತುಂಬ ಸಕಾಲಿಕವಾಗಿದ್ದಿತು. ರಿವಾಲ್ವರನ್ನು ನನ್ನ ಹಣೆಗೆ ಒಡ್ಡಿದ್ದಾಗ ನಾನು ತೋರಿದ ಆತ್ಮಸಂಯಮವು ನನ್ನೆಲ್ಲ ಖಿನ್ನ ಗತಬಾಳಿಗೂ ನನ್ನ ಪ್ರತೀಕಾರವಾಗಿದ್ದಿತು. ಬೇರೆ ಯಾರೂ ಅದನ್ನು ಎಂದಿಗೂ ತಿಳಿಯದೆ ಹೋಗುತ್ತಿದ್ದರೂ ಅವಳು ತಿಳಿದಿದ್ದಳು. ಅದೇ ನನಗೆ ಸಾಕಾಗಿದ್ದಿತು. ಏಕೆಂದರೆ ಅವಳೇ ನನಗೆ ಎಲ್ಲ ಆಗಿದ್ದಳು, ನನ್ನ ಕನಸುಗಳಲ್ಲಿ ನನ್ನ ಭವಿಷ್ಯತ್ತು ನನಗಾಗಿ ನೀಡಿದ್ದ ಎಲ್ಲ ಭರವಸೆಯಾಗಿದ್ದಳು! ನಾನು ನನಗಾಗಿ ಸಿದ್ಧಗೊಳಿಸುತ್ತಿದ್ದ ಏಕೈಕ ವ್ಯಕ್ತಿಯಾಗಿದ್ದಳು ಅವಳು. ನನಗೆ ಬೇರೆ ಯಾರೂ ಬೇಕಾಗಿರಲಿಲ್ಲ. ಈಗ ಅವಳು ಎಲ್ಲವನ್ನೂ ತಿಳಿದಿದ್ದಳು: ತಾನು ನನ್ನ ಶತ್ರುಗಳ ಸಾಲು ಸೇರಿಕೊಳ್ಳುವುದರಲ್ಲಿ ಅನ್ಯಾಯವಾಗಿ ಅವಸರಿಸಿದ್ದಳೆಂಬುದನ್ನಂತೂ ಕೊನೆಯಪಕ್ಷ ಅವಳು ತಿಳಿದಿದ್ದಳು. ಈ ಚಿಂತನೆಯು ನನಗೆ ಅತ್ಯಾನಂದ ನೀಡಿತು. ಅವಳು ಇನ್ನೆಂದಿಗೂ ನನ್ನನ್ನು ಹಲ್ಕಾ ವ್ಯಕ್ತಿಯನ್ನಾಗಿ ಭಾವಿಸಲು ಸಾಧ್ಯವಿರಲಿಲ್ಲ. ಬಹುಶಃ ವಿಚಿತ್ರ ವ್ಯಕ್ತಿಯೆಂದು ಭಾವಿಸುತ್ತಿದ್ದಳೇನೋ. ಆದರೆ ಈ ವಿಚಾರವೂ ನನಗೆ ಅಷ್ಟೇನೂ ಅತೃಪ್ತಿ ನೀಡಲಿಲ್ಲ, ಆ ಘಟನೆ ಜರುಗಿದನಂತರ. ವಿಚಿತ್ರ ಸ್ವಭಾವವೇನೂ ದುರ್ಗುಣವಲ್ಲ, ಅದಕ್ಕೆ ವಿರುದ್ಧವೇ. ಏಕೆಂದರೆ ಅದು ಕೆಲವು ವೇಳೆ ಮಹಿಳೆಯರಿಗೆ ಇಷ್ಟವಾಗುತ್ತದೆ. ಸ್ವಲ್ಪದರಲ್ಲಿ ಹೇಳುವುದಾದರೆ, ನಾನು ಘಟನೆಯ ವಿವರಣೆಯನ್ನು ಬೇಕಂತಲೇ ಮುಂದೂಡಿದೆ. ಆಗ ಏನು ಜರುಗಿದ್ದಿತೋ ಅದು ನನ್ನ ಮನಸ್ಸಿಗೆ ಆ ಘಳಿಗೆಯಲ್ಲಿ ಶಾಂತಿ ನೀಡುವುದಕ್ಕೆ ಸಾಕುಬೇಕಾದಷ್ಟಾಗಿದ್ದಿತು. ಅದು ನನ್ನ ಕನಸುಗಳನ್ನು ಹೆಣೆಯುವುದಕ್ಕೆ ಸಮೃದ್ಧ ಸಾಮಗ್ರಿ ಹಾಗೂ ಕಾಣ್ಕೆಗಳನ್ನು ಒದಗಿಸಿದ್ದಿತು. ನನ್ನ ಲೋಪವೆಂದರೆ, ನಾನೊಬ್ಬ ಕನಸುಗಾರ. ನನಗೆ ಸಾಕಷ್ಟು ಸಾಮಗ್ರಿ ಸಿಕ್ಕಿದ್ದಿತು. ಇನ್ನು ಅವಳ ವಿಷಯ – ಅವಳು ಕಾಯಲಿ ಎಂದೇ ನಾನು ಯೋಚಿಸಿದೆ.

ಹೀಗೆ ಇಡೀ ಚಳಿಗಾಲ ಯಾವುದನ್ನೋ ನಿರೀಕ್ಷಿಸುತ್ತಿರುವ ಸ್ಥಿತಿಯಲ್ಲಿ ಕಳೆಯಿತು. ಅವಳು ತನ್ನ ಮೇಜಿನ ಬಳಿ ಕುಳಿತಾಗ ನಾನು ಅವಳನ್ನೇ ಕದ್ದು ನೋಡುತ್ತ ಆನಂದ ತಳೆಯುತ್ತಿದ್ದೆ. ಹಗಲು ಹೊತ್ತು ಅವಳು ಮನೆಗೆಲಸದಲ್ಲಿ ತೊಡಗಿರುತ್ತಿದ್ದಳು, ಸಂಜೆ ಹೊತ್ತು ಕೆಲವು ವೇಳೆ ನನ್ನ ಪುಸ್ತಕದ ಕಪಾಟಿನಿಂದಲೇ ಪುಸ್ತಕಗಳನ್ನು ತೆಗೆದುಕೊಂಡು ಓದುತ್ತಿದ್ದಳು. ನನ್ನ ಪುಸ್ತಕಗಳ ಆಯ್ಕೆಯೂ ನನ್ನ ಬಗೆಗೆ ಉತ್ತಮ ಅಭಿಪ್ರಾಯ ಮೂಡಿಸಿದ್ದಿರಬಹುದು. ಅವಳು ಹೊರಗೆ ಹೋಗುತ್ತಲೇ ಇರಲಿಲ್ಲ. ನಾನೇ ಅವಳನ್ನು ಪ್ರತಿದಿನವೂ ಸಂಜೆ ಊಟವಾದ ಮೇಲೆ,

ಕತ್ತಲಾಗುವ ಮುನ್ನ ವಾಯುಸಂಚಾರ ಕರೆದೊಯ್ಯುತ್ತಿದ್ದೆ. ಆಗ ನಾವು ಹಿಂದಿ ನಷ್ಟು ಮೌನವಾಗೇನೂ ಇರುತ್ತಿರಲಿಲ್ಲ. ನಾವು ಮೌನದಿಂದಿರಲಿಲ್ಲ, ಆದರೆ ಸಂತಸವಾದ ಮಾತುಕತೆಗಳಲ್ಲಿ ತೊಡಗಿರುತ್ತಿದ್ದೆವು ಎಂದು ಕಂಡುಬರುವಂತೆ ಮಾಡಲು ನಾನು ಯತ್ನಿಸುತ್ತಿದ್ದೆ. ಆದರೆ ನಾನು ಈ ಮುನ್ನ ಆಗಲೇ ಹೇಳಿರು ವಂತೆ, ನಮ್ಮಿಬ್ಬರಲ್ಲಿ ಯಾರೂ ತುಂಬ ಮನಬಿಚ್ಚಿ ಮಾತನಾಡಲು ಬಯಸು ತ್ತಿರಲಿಲ್ಲ. ನಾನು ಉದ್ದೇಶಪೂರ್ವಕವಾಗಿಯೇ ಹಾಗಿದ್ದೆ ಮತ್ತು ಅವಳ ಮಟ್ಟಿಗೆ ಹೇಳುವುದಾದರೆ, ಅವಳಿಗೆ ಸ್ವಲ್ಪ "ಸಮಯ ಕೊಡಬೇಕು" ಎಂದು ನಾನಂದು ಕೊಂಡಿದ್ದೆ. ನಾನು ಅವಳತ್ತ ಕಳ್ಳನೋಟ ಬೀರಿ ಆನಂದಿಸುತ್ತಿದ್ದಾಗಲೇ ಅವಳೇ ನನ್ನನ್ನು ನೋಡುತ್ತಿದ್ದುದನ್ನು ನಾನೆಂದೂ ಕಂಡಿರಲಿಲ್ಲವೆಂಬುದು ಚಳಿಗಾಲದ ಕೊನೆಯವರೆಗೂ ಎಂದೂ ನನಗೆ ಹೊಳೆಯಲೇ ಇಲ್ಲ. ಇದು ಸೋಜಿಗವೆನ್ನಿ. ಅಂಜಿಕೆಯಿಂದ ಅವಳು ನನ್ನತ್ತ ನೋಡುತ್ತಿಲ್ಲ, ಎಂದು ನಾನು ಬಗೆದೆ. ಅಲ್ಲದೆ ಕಾಯಿಲೆಯನಂತರ ಅವಳು ತುಂಬ ಅಂಜಿದವಳಾಗಿ, ತುಂಬ ಸಾಧುವಾಗಿ, ತುಂಬ ದುರ್ಬಲಳಾಗಿ ಕಾಣುತ್ತಿದ್ದಳು. ಇಲ್ಲ, ನಾನು ಸಮಯ ಕಾಯಬೇಕು. ಆಮೇಲೆ ಅವಳು ಇದ್ದಕ್ಕಿದ್ದಂತೆ "ಒಂದು ದಿನ ತಾನೇ ನನ್ನ ಬಳಿಗೆ ಬರುವಳು."

ಈ ಯೋಚನೆ ನನಗೆ ತುಂಬ ಆಕರ್ಷಕವಾಗಿ ಕಂಡುಬಂದಿತು. ಆಗೊಮ್ಮೆ ಈಗೊಮ್ಮೆ ನಾನು ನನ್ನ ಮನಸ್ಸನ್ನೂ ಚೈತನ್ಯವನ್ನೂ ನನಗವಳು ಅನ್ಯಾಯ ಮಾಡಿದ್ದಾಳೆ ಎಂದು ಭಾವಿಸಿಕೊಳ್ಳುವ ಮಟ್ಟಕ್ಕೆ ಕಾವೇರಿಸಿಕೊಳ್ಳುತ್ತಿದ್ದೆ, ಎಂದೂ ನಾನು ಇಲ್ಲಿ ಸೇರಿಸಬೇಕು. ಇದು ಸ್ವಲ್ಪ ಕಾಲದವರೆಗೆ ಇರುತ್ತಿತ್ತು. ಆದರೆ ದ್ವೇಷ ಮಾತ್ರ ಎಂದೂ ಬೆಳೆದು ನನ್ನ ಹೃದಯದಲ್ಲಿ ಬೇರೂರದಾಗಿದ್ದಿತು. ಅದು ಕೇವಲ ಆಟವಲ್ಲದೆ ಬೇರೇನೂ ಅಲ್ಲವೆಂದು ನಾನೇ ಭಾವಿಸಿದ್ದೆ. ಎಂದೂ ಎಂದೂ ನಾನವಳನ್ನು ಪಾತಕಿಯನ್ನಾಗಿ ಭಾವಿಸದಾಗಿದ್ದೆ. ಅವಳಿಗೆ ಪ್ರತ್ಯೇಕವಾದ ಮಂಚ ಹಾಗೂ ಅಡ್ಡತೆರೆಯನ್ನು ಕೊಂಡು ನಮ್ಮ ವಿವಾಹವನ್ನು ವಿಚ್ಛೇದಿ ಸಿದಾಗಲೂ ನನಗೆ ಅಂತಹ ಭಾವನೆ ಇರಲಿಲ್ಲ. ನಾನು ಅವಳ ಅಪರಾಧವನ್ನು ಲಾಘವವಾಗಿ ಎಣಿಸಿದುದು ಆದಕ್ಕೆ ಕಾರಣವಲ್ಲ. ಇಲ್ಲ. ಹಾಸಿಗೆಯನ್ನು ಕೊಳ್ಳು ವುದಕ್ಕೆ ಮುನ್ನವೇ, ಮೊದಲಿನಿಂದಲೂ ನಾನು ಅವಳನ್ನು ಸಂಪೂರ್ಣವಾಗಿ ಕ್ಷಮಿಸುವ ಉದ್ದೇಶ ಹೊಂದಿದ್ದುದು ಅದಕ್ಕೆ ಕಾರಣವಾಗಿದ್ದಿತು. ಒಂದು ಮಾತಿ ನಲ್ಲಿ, ಅದು ನನ್ನ ಸ್ವಭಾವಕ್ಕೆ ಅಸಹಜವಾಗಿದ್ದಿತು. ಏಕೆಂದರೆ ನೀತಿ ನ್ಯಾಯಗಳಿಗೆ ಸಂಬಂಧಿಸಿ ನಾನೊಬ್ಬ ಅತಿ ನಿಷ್ಠುರ ತೀರ್ಪುಗಾರ. ಅವಳು ನನಗೆ ಎಷ್ಟು ಪರಾ ಭವಗೊಂಡವಳಂತೆ, ಎಷ್ಟು ವಿನೀತಗೊಳಿಸಲ್ಪಟ್ಟವಳಂತೆ, ಎಷ್ಟು ನಜ್ಜುಗುಜ್ಜು ಮಾಡಲ್ಪಟ್ಟವಳಂತೆ ಕಂಡುಬಂದಳೆಂದರೆ, ನಾನು ಅವಳ ತೇಜೋಭಂಗ ಮಾಡಿದ ವಿಚಾರವನ್ನು ನಿಜಕ್ಕೂ ಇಷ್ಟಪಡುತ್ತಿದ್ದರೂ, ಕೆಲವು ವೇಳೆ ಅವಳ ಸ್ಥಿತಿಯನ್ನು

ಕಂಡು ತುಂಬ ಮರುಗುತ್ತಿದ್ದೆ. ನಮ್ಮ ನಡುವೆ ಈ ಅಸಮಾನತೆ ಇದ್ದ ವಿಚಾರ ನನಗೆ ಇಷ್ಟವಾಗಿತ್ತು.

ಆ ಚಳಿಗಾಲದಲ್ಲಿ ನಾನು ಹಲವಾರು ಸತ್ಕಾರ್ಯಗಳನ್ನೆಸಗಿದೆ. ಎರಡು ಸಾಲಗಳನ್ನು ರದ್ದುಗೊಳಿಸಿದೆ. ಒತ್ತೆಯಾಗಿ ಏನನ್ನೂ ತೆಗೆದುಕೊಳ್ಳದೆಯೇ ಒಬ್ಬ ಬಡ ಹೆಂಗಸಿಗೆ ಸಾಲ ನೀಡಿದೆ. ನನ್ನ ಪತ್ನಿಗೆ ಈ ವಿಷಯವನ್ನೇನೂ ಹೇಳ ಲಿಲ್ಲ. ನಾನು ಆ ಸತ್ಕಾರ್ಯಗಳನ್ನೆಸಗಿದಾಗ, ಹೇಗಿದ್ದರೂ ಅವಳು ಕಂಡುಕೊಳ್ಳು ತ್ತಾಳೆ, ಎಂಬ ವಿಚಾರ ನನ್ನ ಮನಸ್ಸಿನಲ್ಲೆಂದೂ ಇರಲೇ ಇಲ್ಲ. ಆದರೆ ಆ ಹೆಂಗಸು ನನಗೆ ವಂದಿಸಲು ಬಂದಳು, ನನ್ನ ಮುಂದೆ ಕಾಲೂರಿ ನಮಸ್ಕರಿಸುವವರೆಗೂ ಹೋದಳು. ಈ ಮೂಲಕ ಅವಳು ಕಂಡುಕೊಂಡಳು. ಆ ಹೆಂಗಸಿಗೆ ಸಂಬಂಧಿಸಿದ ವಿಷಯವನ್ನು ತಿಳಿದುದು ಅವಳಿಗೆ ನಿಜಕ್ಕೂ ಸಂತೋಷ ನೀಡಿದ್ದಿತೆಂದೇ ನಾನು ಕಲ್ಪಿಸಿಕೊಂಡೆ.

ವಸಂತ ಬರುತ್ತಿದ್ದಿತು. ಆಗಲೇ ಏಪ್ರಿಲ್ ತಿಂಗಳ ಮಧ್ಯಭಾಗವಾಗಿದ್ದಿತು. ಮನೆಗಳ ಕಿಟಕಿಗಳಿಂದ ಚಳಿಗಾಲದ ಚೌಕಟ್ಟುಗಳನ್ನು ತೆಗೆದು ಹಾಕಲಾಗು ತ್ತಿತ್ತು. ಸೂರ್ಯನು ನಮ್ಮ ನಿಶ್ಶಬ್ದ ಕೋಣೆಗಳನ್ನು ತನ್ನ ಉಜ್ವಲ ಕಿರಣಾವಳಿ ಗಳಿಂದ ಬೆಳಗುತ್ತಿದ್ದನು. ಆದರೆ ನನ್ನ ಕಣ್ಣುಗಳ ಮುಂದಿನ ಪರದೆ ಮಾತ್ರ ಹಾಗೆಯೇ ಇದ್ದಿತು ಮತ್ತು ನನ್ನ ವಿವೇಕವನ್ನು ಕುರುಡಾಗಿಸಿದ್ದಿತು. ಮಾರಕ ವಾದ ಭಯಂಕರವಾದ ಪರದೆ! ಆದರೆ ಅದು ಹೇಗಾಯಿತೋ ತಿಳಿಯದು, ಪರದೆ ಇದ್ದಕ್ಕಿದ್ದಂತೆ ಕಳಚಿ ಬಿದ್ದಿತು ಮತ್ತು ನಾನು ಒಮ್ಮೆಗೇ ಎಲ್ಲವನ್ನೂ ಕಂಡೆ, ಎಲ್ಲವನ್ನೂ ಅರಿತೆ. ಅದು ಆಕಸ್ಮಿಕವಾಗಿದ್ದಿತೇ, ಅದು ಅಂತಿಮ ದಿನವಾಗಿದ್ದಿತೇ, ಅಥವಾ ಕಿಟಕಿಯಿಂದ ತೂರಿ ಬರುತ್ತಿದ್ದ ಸೂರ್ಯ ಕಿರಣವೊಂದು ನನ್ನ ಮಂಕು ಕವಿದಿದ್ದ ಬುದ್ಧಿಯನ್ನು ಚಿಂತಿಸುವಂತೆ ಅರ್ಥಮಾಡಿಕೊಳ್ಳುವಂತೆ ಕಿಡಿಗೂಡಿಸಿ ದ್ದಿತೇ? ಇಲ್ಲ, ಅದು ಚಿಂತೆಯೂ ಆಗಿರಲಿಲ್ಲ, ಅರಿವೂ ಆಗಿರಲಿಲ್ಲ. ಅದು ಬಹು ಮಟ್ಟಿಗೆ ನಿರ್ಜೀವವಾಗಿದ್ದಂಥ ನರವೊಂದು ತಟಕ್ಕನೆ ಸ್ಪಂದಿಸಿ ತುಯ್ದು ಪುನಃ ಜೀವ ಪಡೆದುಕೊಂಡು ನನ್ನ ಇಡೀ ಮಂಕು ಬಡಿದಿದ್ದ ಆತ್ಮವನ್ನೂ ನನ್ನ ಪೈಶಾ ಚಿಕ ಹೆಮ್ಮೆಯನ್ನೂ ಪ್ರಜ್ವಲಿಸುವಂತೆ ಮಾಡಿದುದಾಗಿದ್ದಿತು. ಅದೊಂದು ಭಾರಿ ಸಂಘಟ್ಟನೆಯಂತಿದ್ದಿತು. ಅದು ಹಠಾತ್ತನೆ ಹಾಗೂ ಅನಿರೀಕ್ಷಿತವಾಗಿ ಸಂಭವಿ ಸಿತು. ಅದು ಜರುಗಿದ್ದು ಸೂರ್ಯಾಸ್ತಮದ ಮುನ್ನ, ಅಪರಾಹ್ನ ಐದರ ಹೊತ್ತಿ ನಲ್ಲಿ....

## II
# ಪರದೆ ಹಠಾತ್ತನೆ ಕಳಚಿತು

ಎಲ್ಲವನ್ನೂ ಹೇಳುವುದಕ್ಕೆ ಮುನ್ನ ಎರಡು ಮಾತು. ಒಂದು ತಿಂಗಳ ಹಿಂದೆ ನಾನು ಅವಳಲ್ಲಿ ಒಂದು ವಿಚಿತ್ರ ರೀತಿಯ ಆಲೋಚನಾಪರತೆಯನ್ನು ಕಂಡೆ. ಅದು ಕೇವಲ ಮೌನವಾಗಿರಲಿಲ್ಲ. ಈಗ ಅದು ಆಲೋಚನಾಪರತೆಯಾಗಿದ್ದಿತು. ಅದನ್ನೂ ನಾನು ಇದ್ದಕ್ಕಿದ್ದಂತೆ ಗಮನಿಸಿದೆ. ಅವಳು ಹೊಲಿಯುತ್ತ ತಲೆ ತಗ್ಗಿಸಿ ಕೊಂಡು ಕುಳಿತಿದ್ದಳು. ನಾನು ಅವಳನ್ನೇ ನೋಡುತ್ತಿದ್ದೆನೆಂದು ಅವಳಿಗೆ ತಿಳಿದಿರಲಿಲ್ಲ. ಆಗ, ಅವಳು ತುಂಬ ತೆಳುವಾಗಿ ಬಡಕಲಾಗಿದ್ದಾಳೆ, ಅವಳ ಮುಖ ನಿಸ್ತೇಜವಾಗಿದೆ, ಅವಳ ತುಟಿಗಳು ರಕ್ತರಹಿತವಾಗಿವೆ, ಎಂದು ನನಗೆ ಥಟ್ಟನೆ ಹೊಳೆಯಿತು. ಇವೆಲ್ಲವೂ ಮತ್ತು ಅವಳ ಆಲೋಚನಾಪರತೆಯೂ ನನಗೆ ಭಯಂಕರವಾದ ಆಘಾತ ನೀಡಿತು. ಅದಕ್ಕೆ ಮುನ್ನ ನಾನವಳ ಒಣಕೆಮ್ಮನ್ನು, ಬಹುಮಟ್ಟಿಗೆ ರಾತ್ರಿ ವೇಳೆಯಲ್ಲಿ, ಕೇಳಿದ್ದೆ. ನಾನು ಕೂಡಲೇ ಎದ್ದು ಅವಳಿಗೆ ಏನನ್ನೂ ತಿಳಿಸದೆಯೇ ಡಾ. ಫ್ರೇದೆರ್‌ರನ್ನು ಕರೆಯಲು ಹೋದೆ.

ಡಾಕ್ಟರ್ ಮಾರನೆಯ ದಿನ ಬಂದರು. ಅವಳಿಗೆ ತುಂಬ ಆಶ್ಚರ್ಯವಾಯಿತು. ಡಾಕ್ಟರರನ್ನೂ ನನ್ನನ್ನೂ ನೋಡತೊಡಗಿದಳು.

"ಆದರೆ ನಾನು ಆರೋಗ್ಯವಾಗಿಯೇ ಇದ್ದೇನಲ್ಲ" ಅವಳು ಅಸ್ಪಷ್ಟವಾದ ಕಿರುನಗೆಯೊಂದಿಗೆ ಹೇಳಿದಳು.

ಫ್ರೇದೆರ್‌ರು ಅವಳನ್ನು ಕೂಲಂಕಷ ವೈದ್ಯಕೀಯ ಪರೀಕ್ಷೆಗೇನೂ ಒಳಪಡಿಸಲಿಲ್ಲ (ಈ ವೈದ್ಯಕೀಯ ಜನರು ಕೆಲವು ವೇಳೆ ಅಹಂಕಾರದ ಅಸಡ್ಡೆ ತೋರುತ್ತಾರೆ). ನನ್ನನ್ನು ಪಕ್ಕದ ಕೋಣೆಗೆ ಕರೆದುಕೊಂಡು ಹೋಗಿ, ಅದು ಕೇವಲ ಅವಳ ಹಳೆಯ ಕಾಯಿಲೆಯ ಪರಿಣಾಮವಷ್ಟೆ, ವಸಂತ ಋತು ಬಂದಾಗ ಅವಳನ್ನು ಸಮುದ್ರ ತೀರಕ್ಕೆ, ಅಥವಾ ಅದು ಸಾಧ್ಯವಿಲ್ಲದಿದ್ದರೆ, ಸುಮ್ಮನೆ ಗ್ರಾಮಾಂತರಕ್ಕೆ ಕರೆದೊಯ್ದರೆ, ಎಲ್ಲ ಸರಿಹೋಗುತ್ತದೆ, ಎಂದಷ್ಟೆ ಹೇಳಿದರು. ಅದು ನಿಶ್ಶಕ್ತಿ ಅಥವಾ ಅಂಥದೇ ಏನೋ ಎಂದಲ್ಲದೆ ಅವರು ಬೇರೇನೂ ಹೇಳಲಿಲ್ಲ. ಡಾಕ್ಟರ್ ಹೊರಟುಹೋದ ಮೇಲೆ ಅವಳು ನನ್ನತ್ತ ಹೆದರಿಕೆ ಹುಟ್ಟಿಸುವಷ್ಟು ಗಂಭೀರವಾದ ರೀತಿಯಲ್ಲಿ ನೋಡುತ್ತ ಹೇಳಿದಳು:

"ನಾನು ಸಂಪೂರ್ಣವಾಗಿ, ಸಂಪೂರ್ಣವಾಗಿ, ಆರೋಗ್ಯವಾಗಿದ್ದೇನೆ."

ಹೀಗೆ ಹೇಳಿ ಅವಳು ತಕ್ಷಣವೇ ಕೆಂಪೇರಿದಳು, ಸ್ಪಷ್ಟವಾಗಿಯೇ ನಾಚಿಕೆಯಿಂದ. ಅದು ನಾಚಿಕೆಯೇ ಆಗಿರಬೇಕು. ಓಹ್, ನನಗೆ ಈಗ ಅದೆಲ್ಲ ಅರ್ಥವಾಗು

ತ್ತಿದೆ. ಇನ್ನೂ ಅವಳ ಪತಿಯೇ ಆಗಿದ್ದ ನಾನು ಅವಳ ಬಗೆಗೆ ಇನ್ನೂ ಅವಳ ನಿಜವಾದ ಪತಿಯಾಗಿದ್ದೇನೋ ಎಂಬಂತೆ ಚಿಂತಿಸುತ್ತಿದ್ದುದನ್ನು ಕಂಡು ಅವಳಿಗೆ ನಾಚಿಕೆಯಾಗಿದ್ದಿತು. ಆದರೆ ನಾನದನ್ನು ಆಗ ಅರ್ಥಮಾಡಿಕೊಳ್ಳಲಿಲ್ಲ. ಅವಳು ಕೆಂಪೇರಿದುದಕ್ಕೆ ದೈನ್ಯ ಕಾರಣವೆಂದು ಭಾವಿಸಿದೆ (ಪರದೆ !).

ಆಮೇಲೆ, ಅದಾದ ಒಂದು ತಿಂಗಳನಂತರ, ಏಪ್ರಿಲ್‌ನಲ್ಲಿ ಒಂದು ದಿನ ಅಪ ರಾಹ್ನ ಸುಮಾರು ಐದರ ವೇಳೆಯಲ್ಲಿ, ಉಜ್ವಲವಾದ ಸೂರ್ಯನ ಬಿಸಿಲಿನ್ನೂ ಇದ್ದಾಗ, ನಾನು ನನ್ನ ಮೇಜಿನ ಬಳಿ ಕುಳಿತು ಲೆಕ್ಕ ಪರಿಶೀಲಿಸುತ್ತಿದ್ದೆ. ಅವಳು ನಮ್ಮ ಕೋಣೆಯಲ್ಲಿ ತನ್ನ ಮೇಜಿನ ಬಳಿಯೇ ಕುಳಿತು ಹೊಲಿಯುತ್ತಿದ್ದಳು. ಆಗ ಇದ್ದಕ್ಕಿದ್ದಂತೆ ನಾನು ಕೇಳಿದೆ, ಅವಳು.... ಹಾಡುತ್ತಿರುವುದನ್ನು, ತುಂಬ ತುಂಬ ಮೃದುವಾಗಿ ಹಾಡುತ್ತಿರುವುದನ್ನು. ಆ ಹೊಸ ಘಟನೆಯು ನನ್ನ ಮೇಲೆ ತಡಬಡಾಯಿಸುವಂಥ ಪರಿಣಾಮ ಬೀರಿತು. ಇಂದಿಗೂ ನಾನದನ್ನು ವಿವರಿಸಿ ತಿಳಿಸಲಾರೆ. ಅದುವರೆವಿಗೂ ನಾನು ಅವಳು ಹಾಡಿದ್ದುದನ್ನೇ ಕೇಳಿರಲಿಲ್ಲ. ತುಂಬ ಆರಂಭದಲ್ಲಿ, ನಾನವಳನ್ನು ಮೊದಲು ನನ್ನ ಮನೆಗೆ ಕರೆತಂದಾಗ, ರಿವಾಲ್ವ ರಿನಿಂದ ಗುರಿ ಹೊಡೆಯುವ ಅಭ್ಯಾಸ ಮಾಡುತ್ತ ನಮ್ಮನ್ನು ರಂಜಿಸಿಕೊಳ್ಳಲು ಇನ್ನೂ ಸಾಧ್ಯವಿದ್ದಿದ್ದಾಗ, ಬಹುಶಃ ಅವಳ ಹಾಡನ್ನು ಕೇಳಿದ್ದೇನೇನೋ. ಆಗ ಅವಳ ಕಂಠ ಅನುರಣಿಸುವಂತೆ ದೃಢವಾಗಿತ್ತು, ಮತ್ತು ತುಂಬ ನಿಜವಲ್ಲದಿದ್ದರೂ ಅದರಲ್ಲಿ ಅತ್ಯಂತ ಸಂತಸದಾಯಕವಾದ ಹಾಗೂ ಆರೋಗ್ಯಕರವಾದ ಧ್ವನಿ ಇದ್ದಿತು. ಈಗ ಅವಳ ಹಾಡು ಎಷ್ಟು ಮರುಕ ಹುಟ್ಟಿಸುವಂತಿದ್ದಿತು – ಓಹ್, ಅವಳೇನೂ ದುಃಖದ ಹಾಡನ್ನು ಹಾಡುತ್ತಿರಲಿಲ್ಲ (ಅದು ಯಾವುದೋ ಪ್ರೇಮ ಗೀತೆಯಾಗಿದ್ದಿತು). ಅವಳ ಧ್ವನಿಯಲ್ಲಿ ಭಂಗಗೊಂಡ ಕಳೆಗುಂದಿದ ಏನೋ ಅಂಶವಿದ್ದಿತು – ಅವಳ ಧ್ವನಿ ಹಾಡಿನೊಂದಿಗೆ ಏಗಲಾರದಾಗಿ ಇದ್ದಿತೇನೋ ಎಂಬಂತೆ, ಹಾಡೇ ಅಸ್ವಸ್ಥ ಹಾಡಾಗಿದ್ದಿತೇನೋ ಎಂಬಂತೆ. ಅವಳು ಮಂದ್ರ ಸ್ಥಾಯಿಯಲ್ಲೇ ಹಾಡುತ್ತಿದ್ದಳು. ತಾರಕಕ್ಕೇರಿದಾಗ ಅವಳ ಧ್ವನಿ ಮುರಿದು ಬಿದ್ದಿತು – ಎಂಥ ಬಡಪಾಯಿ ಪುಟ್ಟ ಧ್ವನಿ, ಎಷ್ಟು ಮರುಕ ಹುಟ್ಟಿಸುವಂತೆ ಮುರಿದು ಬಿದ್ದಿದ್ದಿತು. ಅವಳು ಗಂಟಲನ್ನು ಸರಿಪಡಿಸಿಕೊಂಡು ಮತ್ತೆ ಮೆಲ್ಲಗೆ ಮೆಲ್ಲಗೆ ಸ್ವಲ್ಪ ಸ್ವಲ್ಪ ಹಾಡತೊಡಗಿದಳು...

ನಾನು ಪ್ರಕ್ಷೋಭೆಗೊಂಡುದನ್ನು ಕಂಡು ಜನ ನಗಬಹುದು, ಆದರೆ ನಾನು ಏಕೆ ಅಷ್ಟು ಪ್ರಕ್ಷೋಭೆಗೊಂಡಿದ್ದೆ ಎಂಬುದನ್ನು ಯಾರೂ ಎಂದೂ ಅರ್ಥಮಾಡಿ ಕೊಳ್ಳರು. ಇಲ್ಲ, ನಾನು ಆಗ ಅವಳ ಬಗೆಗೆ ಇನ್ನೂ ಮರುಕ ಹೊಂದಿರಲಿಲ್ಲ. ಅದು ಸಂಪೂರ್ಣವಾಗಿ ಬೇರೆಯೇ ಆದ ಭಾವನೆಯಾಗಿದ್ದಿತು. ಮೊದಲು, ಕೊನೆಯ ಪಕ್ಷ ಮೊಟ್ಟಮೊದಲು, ನಾನು ದಿಗ್ಭ್ರಾಂತನಾದೆ, ತುಂಬ ಆಶ್ಚರ್ಯಪಟ್ಟೆ, ತುಂಬ

ವಿಚಿತ್ರವಾಗಿ ಆಶ್ಚರ್ಯಪಟ್ಟೆ. ಆ ಭಾವನೆ ಹಿತಕರವಾದುದಾಗಿರಲಿಲ್ಲ, ಬಹು ಮಟ್ಟಿಗೆ ಪ್ರತೀಕಾರ ಸ್ವರೂಪದ್ದಾಗಿತ್ತು. "ಏನು, ಹಾಡುವುದೇ ! ನನ್ನ ಮುಂದೆ ! ನಾನು ಇಲ್ಲಿದ್ದೇನೆ ಅನ್ನುವುದನ್ನು ಅವಳು ಮರೆತೇ ಬಿಟ್ಟಿರಲು ಸಾಧ್ಯವೇ ?"

ನಾನು ಎಲ್ಲಿದ್ದೆನೋ ಅಲ್ಲೇ ಕುಳಿತಿದ್ದೆ. ತುಂಬ ಭಾವಪೂರಿತನಾಗಿದ್ದೆ. ಆಮೇಲೆ ಎದ್ದು ನಿಂತು, ಟೋಪಿಯನ್ನೆತ್ತಿಕೊಂಡು ಹೊರ ಹೊರಟೆ, ನಾನು ಏನು ಮಾಡು ತ್ತಿದ್ದೇನೆ ಎಂಬುದನ್ನು ತಿಳಿಯದೆಯೇ. ಅಂದರೆ ನಾನು ಎಲ್ಲಿಗೆ ಮತ್ತು ಏತಕ್ಕೆ ಹೊರಟೆ ಎಂಬುದನ್ನು ತಿಳಿಯದೆಯೇ. ಮುಂಕೋಣೆಯಲ್ಲಿ ಲುಕೇರ್ಯ ನನಗೆ ಓವರ್‌ಕೋಟು ಹಾಕಿಕೊಳ್ಳಲು ಸಹಾಯ ಮಾಡಿದಳು.

"ಅವಳು ಹಾಡುತ್ತಾಳೆಯೇ ?" ನಾನು ಲುಕೇರ್ಯಳನ್ನು ಅನ್ಯಮನಸ್ಕನಾಗಿ ಕೇಳಿದೆ. ಅವಳಿಗೆ ನನ್ನ ಪ್ರಶ್ನೆ ಅರ್ಥವಾಗಲಿಲ್ಲ. ಅರ್ಥವಾಗದವಳಂತೆ ನನ್ನನ್ನು ದಿಟ್ಟಿಸಿ ನೋಡಿದಳು. ಆದರೆ ಆಗಿನ ಸ್ಥಿತಿಯಲ್ಲಿ ನನ್ನನ್ನು ಅರ್ಥಮಾಡಿಕೊಳ್ಳು ವುದು ಯಾರಿಗೇ ನಿಜಕ್ಕೂ ಕಷ್ಟವಾಗಿದ್ದಿತು.

"ಇದೇ ಮೊದಲ ಸಾರಿಯೇ ಅವಳು ಹಾಡುತ್ತಿರುವುದು ?"

"ಇಲ್ಲ. ನೀವು ಹೊರಗೆ ಹೋದಾಗ ಕೆಲವು ವೇಳೆ ಹಾಡುತ್ತಾಳೆ" ಲುಕೇರ್ಯ ಉತ್ತರಿಸಿದಳು.

ನನಗೆ ಎಲ್ಲವೂ ಜ್ಞಾಪಕವಿದೆ. ನಾನು ಮೆಟ್ಟಿಲಿಳಿದು ಮನೆಯಿಂದ ಹೊರಗೆ ಹೋದೆ. ಬೀದಿಯಲ್ಲಿ ಗೊತ್ತುಗುರಿ ಇಲ್ಲದೆ ಅಡ್ಡಾಡಿದೆ. ಮೂಲೆಗೆ ಬಂದು ಅಲ್ಲೇ ನಿಂತೆ. ಶೂನ್ಯದತ್ತ ದಿಟ್ಟಿಸಿ ನೋಡಿದೆ. ಜನ ನನ್ನ ಪಕ್ಕದಲ್ಲಿ ನನ್ನನ್ನು ತಳ್ಳಿಕೊಂಡೇ ಹೋಗಿಬರುತ್ತಿದ್ದರು. ಆದರೆ ನಾನು ಅವೆಲ್ಲಕ್ಕೂ ಅಚೇತನನಾಗಿದ್ದೆ. ಒಂದು ಕುದುರೆ ಗಾಡಿಯನ್ನು ಕರೆದು ಪೊಲೀಸ್ ಸೇತುವೆಯ ಬಳಿಗೆ ಕರೆದೊಯ್ಯು ವಂತೆ ಗಾಡಿ ಹೊಡೆಯುವವನಿಗೆ ಹೇಳಿದೆ. ಯಾಕೆ ಹಾಗೆ ಹೇಳಿದೆನೋ ತಿಳಿ ಯದು. ಆಮೇಲೆ ಇದ್ದಕ್ಕಿದ್ದಂತೆ ಮನಸ್ಸು ಬದಲಿಸಿ ಗಾಡಿಯಿಂದಿಳಿದು ಚಾಲಕ ನಿಗೆ ಇಪ್ಪತ್ತು ಕೊಪೆಕ್ ಇನಾಮು ನೀಡಿದೆ.

"ಇದು, ನೀನು ತೊಂದರೆ ತೆಗೆದುಕೊಂಡುದಕ್ಕಾಗಿ" ನಾನೆಂದೆ, ಅವನತ್ತ ಮೂರ್ಖತನದ ನಗೆ ಬೀರುತ್ತ. ನನ್ನ ಹೃದಯದಲ್ಲಿ ಒಂದು ವಿಚಿತ್ರ ಭಾವಾ ವೇಶ ಉಕ್ಕೇರುತ್ತಿದ್ದಿತು.

ನಾನು ಮನೆಯ ಕಡೆಗೆ ತಿರುಗಿದೆ. ಹೆಜ್ಜೆಗಳನ್ನು ಅವಸರ ಅವಸರವಾಗಿ ಇಟ್ಟೆ. ಅವಳ ಆ ಭಂಗಗೊಂಡ ಸಂಗೀತ ಸ್ವನ ಮತ್ತೆ ನನ್ನ ಹೃದಯದಲ್ಲಿ ಅನು ರಣಿಸಿತು. ಅದು ನನಗೆ ಉಸಿರು ಕಟ್ಟಿಸುವಂತಿದ್ದಿತು. ಪರದೆ ಕಳಚಿ ಬೀಳುತ್ತಿತ್ತು, ಕಳಚಿ ಬೀಳುತ್ತಿತ್ತು, ಕಳಚಿ ಬೀಳುತ್ತಿತ್ತು. ನನ್ನ ಮುಂದೆಯೇ ಅವಳು ಹಾಡಿದ ಳೆಂದರೆ, ಅವಳು ನನ್ನ ಬಗೆಗೆ ಮರೆತಿದ್ದಳು ಎಂದರ್ಥ – ಅದೇ ನನಗೆ ಅಷ್ಟು

ಸ್ಪಷ್ಟವಾಗಿದ್ದುದು ಹಾಗೂ ಭೀತಿಕಾರಕವಾಗಿದ್ದುದು. ಅದು ನನ್ನ ಹೃದಯಕ್ಕೆ ತಿಳಿದಿದ್ದಿತು. ಆದರೆ ನನ್ನ ಹೃದಯ ಭಾವಾವೇಶದಿಂದ ತುಂಬಿತ್ತು. ಅದು ಅಂಜಿಕೆಗಿಂತ ಹೆಚ್ಚು ಶಕ್ತಿಶಾಲಿಯಾಗಿದ್ದಿತು.

ಓಹ್, ವಿಧಿವಿಲಾಸ! ನಾನು ನನ್ನ ಹೃದಯದಲ್ಲಿ ಈ ಭಾವಾವೇಶವನ್ನು ಇಡೀ ಚಳಿಗಾಲ ಒಯ್ದಿದ್ದೆನೇನೋ. ಅದರಲ್ಲಿ ಬೇರೆ ಏನೂ ಇರಲು ಸಾಧ್ಯವಿರಲಿಲ್ಲ. ಆದರೆ ನಾನೇ ಇಡೀ ಚಳಿಗಾಲ ಎಲ್ಲಿ ಹೋಗಿದ್ದೆ? ನಾನು ನನ್ನ ಆತ್ಮದೊಂದಿಗೆ ಒಂದಾಗಿ ಇದ್ದೆನೆ? ನಾನು ತಾಳ್ಮೆಗೆಟ್ಟು ಓಡುತ್ತೋಡುತ್ತ ಮೆಟ್ಟಲು ಹತ್ತಿ ಹೋದೆ. ಆದರೆ ನಾನು ಅಂಜುತ್ತಂಜುತ್ತ ಹೋದೆನೋ ಅಥವಾ ಧೈರ್ಯದಿಂದಲೇ ಹೋದೆನೋ ಹೇಳಲಾರೆ. ನನಗೆ ಜ್ಞಾಪಕವಿರುವುದೆಲ್ಲ, ನೆಲ ತೂಗಾಡುತ್ತಿದ್ದಂತೆ ಕಂಡುಬಂದಿತು, ನಾನು ನದಿಯೊಂದರ ಮೇಲೆ ತೇಲಿಕೊಂಡು ಹೋಗುತ್ತಿದ್ದೆನೋ ಎಂಬಂತೆ. ಕೋಣೆಯೊಳಗೆ ಹೋದೆ. ಅವಳು ಕುಳಿತು ಹಿಂದಿನಂತೆ ತಲೆ ತಗ್ಗಿಸಿಕೊಂಡು ಹೊಲಿಗೆ ಹೊಲಿಯುತ್ತಿದ್ದಳು. ಆದರೆ ಹಾಡುತ್ತಿರಲಿಲ್ಲ. ಅವಳು ತಲೆ ಎತ್ತಿ ನನ್ನತ್ತ ಕುತೂಹಲರಹಿತ ಕ್ಷಣನೋಟ ಬೀರಿದಳು. ಅದು ಯಾರಾದರೂ ಕೋಣೆಯೊಳಕ್ಕೆ ಬಂದಾಗ ಸಹಜವಾಗಿಯೇ ಯಾವ ವಿಶಿಷ್ಟಾರ್ಥವೂ ಇಲ್ಲದೆಯೇ ನೋಡುವಂಥ ಕೇವಲ ಪ್ರತಿಕ್ರಿಯಾ ನೋಟವಾಗಿದ್ದಿತು.

ನಾನು ಅವಳ ಬಳಿಗೆ ನೇರವಾಗಿ ಹೋಗಿ ಅವಳ ಪಕ್ಕದಲ್ಲೇ ಒತ್ತಿ ಕುಳಿತೆ. ನಾನು ಹುಚ್ಚುಹಿಡಿದವನಂತಾಗಿದ್ದೆ. ಅವಳು ನನ್ನತ್ತ ಬೇಗ ಅಂಜಿಕೆ ಎನ್ನುವಂತಹ ನೋಟದಿಂದ ನೋಡಿದಳು. ನಾನು ಅವಳ ಕೈ ಹಿಡಿದುಕೊಂಡೆ. ಅವಳಿಗೆ ಏನು ಹೇಳಿದೆನೋ ಅಥವಾ ಏನು ಹೇಳಬೇಕೆಂದು ಅಂದುಕೊಂಡಿದ್ದೆನೋ, ನನಗೆ ಜ್ಞಾಪಕವಿಲ್ಲ. ಏಕೆಂದರೆ ನಾನಾಗ ನನ್ನ ಗದ್ಗದ ದನಿಯ ಮೇಲೆ ಅಂಕೆ ಇರಿಸಿಕೊಳ್ಳದಾಗಿದ್ದೆ. ಆದರೆ ಆಗ ನನಗೆ ಏನು ಹೇಳಬೇಕೋ ಗೊತ್ತಾಗಲಿಲ್ಲ, ಸುಮ್ಮನೆ ಏದುಸಿರು ಬಿಟ್ಟೆ.

"ಮಾತನಾಡೋಣ... ಗೊತ್ತೆ... ಏನಾದರೂ ಹೇಳು" ನಾನು ಇದರಂಥದೇ ಏನೋ ಅರ್ಥಶೂನ್ಯವಾದುದನ್ನು ಮಣಗುಟ್ಟಿದೆ. ಆದರೆ, ಓಹ್, ಆಗ ನಾನು ವಿವೇಕಯುತನಾಗಿರಲು ಸಾಧ್ಯವಿದ್ದಿತೆ?

ಅವಳು ಮತ್ತೆ ನಡುಗಿದಳು, ನನ್ನಿಂದ ಹಿಮ್ಮೆಟ್ಟಿದಳು, ಭೀತಳಾಗಿ ನನ್ನನ್ನೇ ದುರುಗುಟ್ಟಿಕೊಂಡು ನೋಡಿದಳು. ಆಮೇಲೆ ಇದ್ದಕ್ಕಿದ್ದಂತೆ ಅವಳ ಕಣ್ಣುಗಳಲ್ಲಿ ನಿಷ್ಠುರ ಆಶ್ಚರ್ಯ ವ್ಯಕ್ತಪಟ್ಟಿತು. ಹೌದು, ಅದು ಆಶ್ಚರ್ಯವಾಗಿದ್ದಿತು, ಅದು ನಿಷ್ಠುರವಾಗಿದ್ದಿತು. ಅವಳು ನನ್ನನ್ನು ಬಿರುಗಣ್ಣುಗಳಿಂದ ನೋಡಿದಳು. ಅವಳ ನಿಷ್ಠುರ ಭಾವ, ಅವಳ ನಿಷ್ಠುರ ಆಶ್ಚರ್ಯ ನನ್ನ ಮೇಲೆ ಭಾರಿ ಪ್ರಹಾರ

ನೀಡಿತು. "ಓಹ್, ಹಾಗೋ. ನೀವು ನನ್ನ ಪ್ರೀತಿ ಬಯಸುತ್ತೀರಾ? ಪ್ರೀತಿ?" ಎಂದು ಅವಳ ಆಶ್ಚರ್ಯಕರ ನೋಟ ಕೇಳುವಂತಿದ್ದಿತು. ಆದರೆ ಅವಳು ಒಂದು ಮಾತೂ ಆಡಲಿಲ್ಲ. ನಾನು ಅದನ್ನೆಲ್ಲ, ಎಲ್ಲವನ್ನೂ, ಅವಳ ಮುಖದಲ್ಲೇ ಕಂಡೆ. ನನ್ನ ಇಡೀ ದೇಹ ಬುಡಮಟ್ಟ ಕದಲಿತು. ನಾನು ಅವಳ ಕಾಲ ಮೇಲೆ ಬಿದ್ದೆ. ಹೌದು, ಅವಳ ಕಾಲ ಮೇಲೆ ಬಿದ್ದೆ. ಅವಳು ಬೇಗ ಜಿಗಿದು ನಿಂತಳು. ನಾನು ಅವಳೆರಡೂ ಕೈಗಳನ್ನು ಭದ್ರವಾಗಿ ಹಿಡಿದುಕೊಂಡು ನನ್ನ ಶಕ್ತಿಯನ್ನೆಲ್ಲ ಉಪ ಯೋಗಿಸಿಕೊಂಡು ಅವಳನ್ನು ಅಲ್ಲೇ ನಿಲ್ಲಿಸಿದೆ.

ಓಹ್, ನಾನು ನನ್ನ ಹತಾಶೆಯ ಸ್ಥಿತಿಯನ್ನು ಮನಗಂಡಿದ್ದೆ, ಚೆನ್ನಾಗಿ ಮನಗಂಡಿದ್ದೆ! ಆದರೆ ನೀವು ನಂಬುತ್ತೀರೋ ಇಲ್ಲವೋ, ನನ್ನ ಹೃದಯದಲ್ಲಿನ ಆನಂದದ ಆವೇಶ ಎಷ್ಟು ಸಹಿಸಲಾಗದಷ್ಟು ತೀವ್ರವಾಗಿದ್ದಿತೆಂದರೆ ನಾನು ಸತ್ತು ಹೋಗುವೆನೇನೋ ಎಂದು ಭಾವಿಸಿದೆ. ನಾನು ಆನಂದದ ಆವೇಶದಲ್ಲಿ ಹಾಗೂ ಸಂತೋಷದಲ್ಲಿ ಅವಳ ಪಾದಗಳಿಗೆ ಮುತ್ತಿಟ್ಟೆ. ಹೌದು, ಸಂತೋಷ ದಲ್ಲಿ. ಆ ಸಂತೋಷಕ್ಕೆ ಮೇರೆಯೇ ಇರಲಿಲ್ಲ, ಆಳತೆಯೇ ಇರಲಿಲ್ಲ. ಇದು, ನನ್ನ ಆ ಹತಾಶ ಸ್ಥಿತಿಯಲ್ಲಿ ನನಗೆ ಎಷ್ಟು ಅಲ್ಪ ಭರವಸೆ ಇದ್ದಿತೆಂಬುದನ್ನು ನಾನು ಮನಗಂಡಿದ್ದಾಗ್ಯೂ! ನಾನು ಅತ್ತೆ, ಏನೋ ಹೇಳಲು ಯತ್ನಿಸಿದೆ, ಆದರೆ ಮಾತುಗಳೇ ಹೊರಡಲಿಲ್ಲ. ಇದ್ದಕ್ಕಿದ್ದಂತೆ, ಅವಳ ದಿಗಿಲು ಹಾಗೂ ಆಶ್ಚ ರ್ಯದ ಮುಖಭಾವ ಬದಲಿ ಕಾತುರ ಕಳವಳ ಮೂಡಿತು, ಒಂದು ಉಗ್ರ ಪ್ರಶ್ನೆ ಮೂಡಿತು. ಅವಳೀಗ ನನ್ನತ್ತ ವಿಚಿತ್ರವಾಗಿ, ಉನ್ಮತ್ತಳಾಗಿಯೂ ಸಹ, ನೋಡಿದಳು. ಅವಳು ಏನನ್ನೋ ಅರ್ಥಮಾಡಿಕೊಳ್ಳಲು ತಾಳ್ಮೆಗೆಟ್ಟಿದ್ದಳು. ಅದೇ ಹೊತ್ತಿನಲ್ಲಿ ಅವಳು ಮುಗುಳ್ನಕ್ಕಳು. ನಾನು ಅವಳ ಪಾದಗಳಿಗೆ ಮುತ್ತಿ ಡುತ್ತಿದ್ದುದನ್ನು ಕಂಡು ಅವಳು ತುಂಬ ನಾಚಿದಳು, ಬೇಗ ತನ್ನ ಪಾದಗಳನ್ನು ಹಿಂದಕ್ಕೆ ಎಳೆದುಕೊಂಡಳು. ಆದರೆ ನಾನು ತಕ್ಷಣವೇ ಅವಳ ಪಾದಗಳು ಇದ್ದ ಆ ನೆಲಕ್ಕೇ ಮುತ್ತಿಡತೊಡಗಿದೆ. ಅವಳು ಅದನ್ನು ಕಂಡು ಇದ್ದಕ್ಕಿದ್ದಂತೆ ನಗ ತೊಡಗಿದಳು, ಏಕೆಂದರೆ, ಅವಳು ನಾಚಿದ್ದಳು (ನಾಚಿದ್ದಾಗ ಯಾರೇ ಆಗಲಿ ಹೀಗೆ ನಗುತ್ತಾರೆಂಬುದನ್ನು ನೀವು ಬಲ್ಲಿರಿ). ಅವಳು ಉನ್ಮಾದಪೀಡಿತಳಾಗುತ್ತಿ ದ್ದಳು, ನಾನದನ್ನು ಕಂಡೆ. ಅವಳ ಕೈಗಳು ಸೆಳೆತಕ್ಕೊಳಗಾಗಿದ್ದವು – ಆದರೆ ನಾನದರ ಯೋಚನೆಯನ್ನೇ ಮಾಡಲಿಲ್ಲ. ನಾನು ಅವಳನ್ನು ಪ್ರೀತಿಸುತ್ತೇನೆ, ಮಂಡಿಯೂರಿ ಕುಳಿತ ನಾನು ಮೇಲೆ ಏಳುವುದೇ ಇಲ್ಲ, ಎಂದು ಮಣಗುಟ್ಟುತ್ತಲೇ ಹೋದೆ. "ನಿಮ್ಮ ಗೌನಿನ ಅಂಚಿಗೆ ಮುತ್ತಿಡಲು ಅವಕಾಶ ನೀಡಿ... ನಿಮ್ಮನ್ನು ಇದೇ ರೀತಿ ನನ್ನ ಇಡೀ ಜೀವಮಾನ ಆರಾಧಿಸಲು ಅವಕಾಶ ನೀಡಿ..." ನನಗೆ ತಿಳಿಯದು, ನನಗೆ ಜ್ಞಾಪಕವಿಲ್ಲ – ಅವಳು ಇದ್ದಕ್ಕಿದ್ದಂತೆ ಗದ್ಗದಿಸಿ ಅಳುತ್ತ ನಡುಗತೊಡ

ಗಿದಳು; ಅವಳು ಭಯಂಕರ ಉನ್ಮಾದಾವಸ್ಥೆ ತಲುಪಿದ್ದಳು. ನಾನವಳನ್ನು ಭೀತಿಗೊಳಿಸಿದ್ದೆ.

ನಾನು ಅವಳನ್ನು ಅವಳ ಹಾಸಿಗೆಗೆ ಎತ್ತಿಕೊಂಡು ಹೋಗಿ ಮಲಗಿಸಿದೆ. ಉನ್ಮಾದಾವಸ್ಥೆ ಕಳೆದ ಮೇಲೆ ಅವಳು ಎದ್ದು ಕುಳಿತಳು. ತುಂಬ ದುಃಖಾಕ್ರಾಂತಳಾದಂತೆ ಕಂಡುಬಂದಳು. ನನ್ನ ಕೈಗಳನ್ನು ಹಿಡಿದುಕೊಂಡು ಶಾಂತಗೊಳ್ಳುವಂತೆ ನನ್ನನ್ನು ಬೇಡಿಕೊಂಡಳು. "ಬೇಡಿ. ನಿಮ್ಮನ್ನು ಅಷ್ಟೊಂದು ಹಿಂಸಿಸಿಕೊಳ್ಳಬೇಡಿ. ಬೇಡಿ !" ಎಂದು ಮತ್ತೆ ಅಳತೊಡಗಿದಳು. ನಾನು ಆ ಇಡೀ ಸಂಜೆ ಅವಳ ಪಕ್ಕವನ್ನು ಬಿಟ್ಟು ಹೋಗಲೇ ಇಲ್ಲ. ಅವಳನ್ನು ಬುಲೋನ್‌ಗೆ, ಸಮುದ್ರತೀರಕ್ಕೆ, ಕರೆದೊಯ್ಯುವುದಾಗಿ ಹೇಳಿದೆ. ಈಗಲೇ, ಈ ಕೂಡಲೇ, ಇನ್ನು ಹದಿನೈದು ದಿನಗಳೊಳಗೇ ಅಲ್ಲಿಗೆ ಕರೆದೊಯ್ಯುವುದಾಗಿ ಹೇಳಿದೆ. ಅವಳ ದನಿ ತುಂಬ ಕುಗ್ಗಿದ್ದಿತೆಂದೂ ನಾನು ಅದನ್ನು ಅಂದು ಕೇಳಿದ್ದೆನೆಂದೂ, ಅವಳಿಗೆ ಹೇಳಿದೆ. ನನ್ನ ಒತ್ತೆಯ ಅಂಗಡಿಯನ್ನು ಮುಚ್ಚಿಬಿಡುವೆ, ದೊಬ್ರನ್ರಾವೊವ್‌ಗೆ ಮಾರಿಬಿಡುವೆ, ಎಲ್ಲವೂ ಹೊಸದಾಗಿ ಪ್ರಾರಂಭವಾಗುವುದು, ಆದರೆ ಮುಖ್ಯ ವಿಷಯ ಬುಲೋನ್, ಬುಲೋನ್, ಅವಳು ನನ್ನ ಮಾತುಗಳನ್ನೆಲ್ಲ ಕೇಳಿದಳು. ಆದರೆ ಇನ್ನೂ ಭಯಗ್ರಸ್ತಳಾಗಿಯೇ ಇದ್ದಳು. ಹೆಚ್ಚು ಹೆಚ್ಚು ಭಯಪಡತೊಡಗಿದಳು. ಆದರೆ ನನಗೆ ಮುಖ್ಯವಾದುದು ಅದಾಗಿರಲಿಲ್ಲ. ನಾನು ಮತ್ತೆ ಅವಳ ಪಾದಗಳ ಮೇಲೆ ಬೀಳಬೇಕೆಂದು, ಅವಳ ಪಾದಸ್ಪರ್ಶವಾಗಿದ್ದ ನೆಲಕ್ಕೆ ಮುತ್ತಿಡಬೇಕೆಂದು, ಅವಳನ್ನು ಆರಾಧಿಸಬೇಕೆಂದು, ಹೆಚ್ಚು ಹೆಚ್ಚು ತಡೆಯಲಾಗದಂತೆ ಇಷ್ಟಪಡತೊಡಗಿದೆ. "ನಾನು ನಿಮ್ಮಿಂದ ಹೆಚ್ಚಿಗೆ ಏನನ್ನೂ ಕೇಳುವುದಿಲ್ಲ" ಎಂದು ನಾನು ಪದೇಪದೇ ಹೇಳತೊಡಗಿದೆ. "ನಿಮಗೆ ಇಷ್ಟವಿಲ್ಲದಿದ್ದರೆ ಉತ್ತರಿಸಬೇಡಿ. ನನ್ನನ್ನು ಸಂಪೂರ್ಣವಾಗಿ ಉಪೇಕ್ಷಿಸಿ. ಆದರೆ ನಿಮ್ಮನ್ನು ದೂರದಿಂದ ನೋಡುತ್ತಿರುವುದಕ್ಕಷ್ಟೆ ನನಗೆ ಅವಕಾಶ ನೀಡಿ. ನನ್ನನ್ನು ನಿಮ್ಮ ವಸ್ತುವನ್ನಾಗಿ, ನಿಮ್ಮ ನಾಯಿಯನ್ನಾಗಿ ಮಾಡಿಕೊಳ್ಳಿ...." ಅವಳು ಅತ್ತಳು.

"ನೀವು ನನ್ನನ್ನು ಹಾಗೆಯೇ ಬಿಟ್ಟುಬಿಡುವಿರೆಂದು ಭಾವಿಸಿದ್ದೆ" – ಈ ಮಾತುಗಳು ಅವಳ ಬಾಯಿಯಿಂದ ಎಷ್ಟು ಅನಾಯಾಸವಾಗಿ ಬಂದವೆಂದರೆ ತಾನು ಆ ಮಾತುಗಳನ್ನು ಆಡಿದಳೆಂದು ಬಹುಶಃ ಅವಳಿಗೇ ತಿಳಿದಿರಲಿಕ್ಕಿಲ್ಲ. ಆದರೂ ಅವು ಅತ್ಯಂತ ಮಹತ್ವದ ಹಾಗೂ ಮಾರಕವಾದ ಪದಗಳಾಗಿದ್ದವು. ಅವುಗಳ ಅರ್ಥ ನನಗೆ ಅಂದು ಸಂಜೆ ಬೇರಾವುದಕ್ಕಿಂತ ಹೆಚ್ಚು ನಿರ್ದಾಕ್ಷಿಣ್ಯವಾಗಿ ಸ್ಪಷ್ಟವಾಗಿದ್ದಿತು. ಆ ಮಾತುಗಳು ನನ್ನ ಎದೆಗೆ ತಿವಿದ ಚೂರಿಯಂತಿದ್ದವು. ಅವು ನನಗೆ ಎಲ್ಲವನ್ನೂ ವಿವರಿಸಿ ತಿಳಿಸಿದವು. ಆದರೆ ಅವಳು ಅಲ್ಲಿ ನನ್ನ ಪಕ್ಕದಲ್ಲಿದ್ದುದರಿಂದ, ನಾನವಳನ್ನು ನೋಡಲು ಸಾಧ್ಯವಿದ್ದುದರಿಂದ, ನಾನು ಭರವಸೆಯಿಂದ

ತಡೆಯಲಾಗದಂತೆ ಆಕರ್ಷಿತನಾಗಿದ್ದೆ, ನಾನು ಪರಮಾನಂದಭರಿತನಾಗಿದ್ದೆ. ಓಹ್, ಅಂದು ಸಂಜೆ ನಾನು ಅವಳನ್ನು ಸಂಪೂರ್ಣವಾಗಿ ಬಳಲಿಸಿದ್ದೆ. ನನಗದು ತಿಳಿದಿತ್ತು. ಆದರೂ ಇಡೀ ಕಾಲ ನನ್ನ ಮನಸ್ಸಿನಲ್ಲಿದ್ದ ಏಕೈಕ ಯೋಚನೆಯೆಂದರೆ, ಕೂಡಲೇ ನಾನು ಎಲ್ಲವನ್ನೂ ಭಿನ್ನವಾಗಿ ಕಾಣುವಂತೆ ಮಾಡುವೆನು ಎಂಬುದಾಗಿದ್ದಿತು. ಕೊನೆಗೆ, ರಾತ್ರಿ ವೇಳೆಗೆ, ಅವಳು ಸಂಪೂರ್ಣವಾಗಿ ಬಳಲಿ ಬೆಂಡಾಗಿದ್ದಂತೆ ಕಂಡು ಬಂದಳು. ನಿದ್ರೆಮಾಡಲು ಯತ್ನಿಸುವಂತೆ ನಾನವಳನ್ನು ಕೇಳಿಕೊಂಡೆ. ಅವಳು ತಕ್ಷಣವೇ ಮಲಗಿ, ಗಾಢ ನಿದ್ರೆಗೊಳಗಾದಳು. ಅವಳು ನಿದ್ರೆಯಲ್ಲೇ ಸನ್ನಿಹಿಡಿದವಳಂತೆ ಮಾತನಾಡಬಹುದೆಂದು ನಾನು ಹೆದರಿದ್ದೆ. ಅವಳು ಉನ್ಮತ್ತಳಾದವಳಂತೇನೋ ಇದ್ದಳು, ಆದರೆ ತುಂಬ ಅಲ್ಪ ಪ್ರಮಾಣ ದಲ್ಲಷ್ಟೆ. ನಾನು ಬಹುಮಟ್ಟಿಗೆ ಪ್ರತಿ ನಿಮಿಷವೂ ಅವಳ ಬಳಿಗೆ ಹೋಗಿ ಬರು ತ್ತಿದ್ದೆ. ಮನೆ ಜೋಡು ಹಾಕಿಕೊಂಡಿದ್ದಂತೆಯೇ ಮೆಟ್ಟಂಗಾಲಿನಲ್ಲಿ ಹೋಗಿ ಅವಳನ್ನು ನೋಡಿಕೊಂಡು ಬರುತ್ತಿದ್ದೆ. ನತದೃಷ್ಟಳಾದ ನಮ್ಮೆದಿಗೆಟ್ಟಿದ್ದ ಅವಳಿ ಗಾಗಿ ನಾನು ಕೊಂಡಿದ್ದ ಮೂರು ರೂಬಲ್‌ಗಳ ದರಿದ್ರ ಕಬ್ಬಿಣದ ಮಂಚದ ಮೇಲೆ ಮಲಗಿದ್ದ ಅವಳನ್ನು ಕಂಡು ನಾನು ಅಪಾರ ಯಾತನೆಯಿಂದ ಕೈಕೈ ಹಿಸುಕಿಕೊಂಡೆ. ಅವಳ ಪಕ್ಕದಲ್ಲಿ ಮಂಡಿಯೂರಿ ಕುಳಿತೆ, ಆದರೆ ಅವಳು ಮಲಗಿ ದ್ದಾಗ (ಅವಳ ಇಚ್ಛೆಗೆ ವಿರುದ್ಧವಾಗಿ !) ಅವಳ ಪಾದಗಳಿಗೆ ಮುತ್ತಿಡುವ ಸಾಹಸ ಮಾಡದಾದೆ. ದೇವರ ಚಿತ್ರಫಲಕಗಳ ಮುಂದೆ ಪ್ರಾರ್ಥನೆ ಮಾಡಲು ಮಂಡಿ ಯೂರಿ ಕುಳಿತೆ ಆದರೆ ಮತ್ತೆ ನೆಗೆದು ನಿಂತೆ. ಲುಕೇರ್ಯ ನನ್ನ ಮೇಲೆ ಕಣ್ಣಿಟ್ಟಿ ದ್ದಳು. ಆಗಾಗ್ಗೆ ಅಡಿಗೆಮನೆಯಿಂದ ಬಂದು ನೋಡುತ್ತಿದ್ದಳು. ನಾನು ಅವಳ ಬಳಿಗೆ ಹೋಗಿ ಮಲಗುವಂತೆ ತಿಳಿಸಿದೆ, ನಾಳೆಯಿಂದ ಆರಂಭಿಸಿ ಎಲ್ಲವೂ ಸಂಪೂರ್ಣವಾಗಿ ಬೇರೆ ರೀತಿಯಲ್ಲಿರಲಿರುವುದು, ಎಂದು ಹೇಳಿದೆ.

ನಾನು ಅದರಲ್ಲಿ ನಂಬಿಕೆಯನ್ನೂ ಇಟ್ಟಿದ್ದೆ, ಕುರುಡಾಗಿ, ಆವೇಶದಿಂದ ಹಾಗೂ ಅತಿಯಾಗಿ ನಂಬಿದ್ದೆ. ಓಹ್, ನನ್ನಲ್ಲಿ ತುಂಬಿ ತುಳುಕುತ್ತಿದ್ದ ಆಗಿನ ಉತ್ಸಾಹ ! ನಾಳೆ ಬರುವುದಕ್ಕಾಗಿಯೇ ನಾನು ಕಾದಿದ್ದೆ. ದುರದೃಷ್ಟದ ಸೂಚನೆ ಗಳು ಕಾಣಬರುತ್ತಿದ್ದರೂ ನಾನು ಯಾವುದೇ ರೀತಿಯ ದೌರ್ಭಾಗ್ಯ ಆಗಬಹು ದೆಂಬುದನ್ನು ನಂಬಲಿಲ್ಲ. ಪರದೆ ಕಳಚಿ ಬಿದ್ದಿದ್ದರೂ ಆಗ ನನ್ನಲ್ಲಿ ವಿವೇಕ ಇನ್ನೂ ಸಂಪೂರ್ಣವಾಗಿ ಹಿಂದಿರುಗಿರಲಿಲ್ಲ. ಬಹಳ ಬಹಳ ಕಾಲದವರೆಗೂ, ಇವತ್ತಿನ ವರೆಗೂ, ಅದು ಹಿಂದಿರುಗಲೇ ಇಲ್ಲ. ಇಂದಷ್ಟೆ ಅದು ಹಿಂದಿರುಗಿತು. ಆದರೆ ಇದಕ್ಕೆ ಮುಂಚೆ ಬರಲು ಅದಕ್ಕೆ ಹೇಗೆ ಸಾಧ್ಯವಿದ್ದಿತು ? ಆಗ ಅವಳು ಜೀವಂತ ವಾಗಿದ್ದಳು, ನನ್ನ ಮುಂದೆಯೇ ಇದ್ದಳು, ನಾನು ಅವಳ ಪಕ್ಕದಲ್ಲೇ ಇದ್ದೆ. "ಅವಳು ಎಚ್ಚರಗೊಂಡ ಮೇಲೆ ನಾನು ಅವಳಿಗೆ ಇದೆಲ್ಲವನ್ನೂ ತಿಳಿಸುತ್ತೇನೆ. ಅವಳು

ಎಲ್ಲವನ್ನೂ ಸರಿಯಾಗಿ ಕಂಡುಕೊಳ್ಳುವಳು" – ಇದು ಆಗ ನನ್ನ ಮನಸ್ಸಿನಲ್ಲಿದ್ದ ಸರಳವಾದ ಸ್ಪಷ್ಟವಾದ ವಿಚಾರವಾಗಿದ್ದಿತು. ಆದ್ದರಿಂದ ನಾನು ಉತ್ಸಾಹಿತನಾಗಿದ್ದೆ. ಬುಲೋನ್‌ಗೆ ಪ್ರವಾಸ ಹೋಗುವುದು ನನ್ನ ಮನಸ್ಸಿನಲ್ಲಿದ್ದ ಬಹುಮುಖ್ಯ ವಿಚಾರವಾಗಿದ್ದಿತು. ಬುಲೋನ್ – ಇದೇ ಎಲ್ಲ, ಬುಲೋನ್ ಯಾವುದೋ ತೀರ್ಮಾನಕ್ಕೆ ಕೀಲಿಕೈ, ಎಂದು ಯಾವ ಕಾರಣಕ್ಕೋ ನಾನು ಕಲ್ಪಿಸಿಕೊಂಡಿದ್ದೆ. "ಬುಲೋನ್‌ಗೆ, ಬುಲೋನ್‌ಗೆ !..." ನಾನು ಬೆಳಗಾಗಲೆಂದೇ ತಾಳ್ಮೆಗೆಟ್ಟು ಕಾದೆ.

# III
# ಚೆನ್ನಾಗಿಯೇ ತಿಳಿಯುತ್ತೇನೆ

ಇದು ಜರುಗಿದ್ದು ಕೆಲವೇ ದಿನಗಳ ಹಿಂದಷ್ಟೆ, ಐದು ದಿನಗಳು, ಕೇವಲ ಐದು ದಿನಗಳ ಹಿಂದೆ – ಕಳೆದ ಮಂಗಳವಾರ ! ಇಲ್ಲ, ಇಲ್ಲ, ನನಗೆ ಇನ್ನಷ್ಟು ಸ್ವಲ್ಪ ಸಮಯವಷ್ಟೆ ಸಿಕ್ಕಿದ್ದರೆ, ಅವಳು ಇನ್ನು ಸ್ವಲ್ಪ ಕಾಲವಷ್ಟೆ ಕಾದಿದ್ದರೆ, ನಾನು ಈ ಮಂಕನ್ನೆಲ್ಲ ಹೋಗಲಾಡಿಸುತ್ತಿದ್ದೆ, ಅವಳು ಶಾಂತಳಾಗುತ್ತಿದ್ದಳು. ಹೌದು, ಅವಳು ಶಾಂತಳಾಗಿದ್ದಳಲ್ಲ ! ಮಾರನೆಯ ದಿನವೇ ಅವಳಲ್ಲಿ ಇನ್ನೂ ದಿಗ್ಭ್ರಾಂತಿ ಇದ್ದರೂ, ನಾನು ಹೇಳಿದುದನ್ನು ಆಗಲೇ ಮುಗುಳ್ನಗೆಯೊಂದಿಗೆ ಕೇಳಿದಳು... ದಿಗ್ಭ್ರಾಂತಿ – ಅಥವಾ ಅದು ನಾಚಿಕೆಯಾಗಿದ್ದಿತೇ ? – ಅದೇ ಆಗ, ಆ ಇಡೀ ಐದು ದಿನಗಳೂ, ಅವಳಲ್ಲಿದ್ದ ಮುಖ್ಯ ಲಕ್ಷಣವಾಗಿದ್ದಿತು. ಅವಳು ಹೆದರಿಯೂ ಇದ್ದಳು, ತುಂಬ ಹೆದರಿದ್ದಳು. ನಾನದನ್ನು ಅಲ್ಲಗಳೆಯುವುದಿಲ್ಲ. ನಾನು ಹುಚ್ಚು ಹುಚ್ಚಾಗಿ ವಿರೋಧಾಭಾಸಗಳನ್ನು ಮಾಡುವುದಿಲ್ಲ. ಅವಳು ಹೆದರಿದ್ದಳು. ಆದರೆ ಹೆದರದೆ ಇರಲು ಹೇಗೆ ಸಾಧ್ಯವಿದ್ದಿತು ? ಬಹಳ ಕಾಲದ ಹಿಂದೆಯೇ ನಾವು ಪರಸ್ಪರ ಪರಕೀಯರಾಗಿ ಬಿಟ್ಟಿದ್ದೆವು, ಪರಸ್ಪರರಿಗೆ ಅಷ್ಟು ಹೊಂದಿಕೊಳ್ಳದಂತಾಗಿದ್ದೆವು. ಈಗ ಇದ್ದಕ್ಕಿದ್ದಂತೆ ಇದೆಲ್ಲ... ಆದರೆ ನಾನು ಅವಳ ಅಂಜಿಕೆಯನ್ನು ಉಪೇಕ್ಷಿಸಿದೆ, ಏಕೆಂದರೆ ನಾನು ನಮ್ಮ ಹೊಸ ಬಾಳಿನ ಭವ್ಯ ನೋಟದ ಕೋರೈಸುವ ಬೆಳಕಿನಿಂದ ಬೇರೇನನ್ನೂ ಕಾಣದಂತಾಗಿದ್ದೆ !... ನಿಜ, ನಾನು ತಪ್ಪು ಮಾಡಿದೆ, ಅದು ನಿರ್ವಿವಾದವಾದ ಸತ್ಯಸಂಗತಿ. ಒಂದಲ್ಲ, ಹಲವಾರು ತಪ್ಪು ಮಾಡಿರಬಹುದು. ಮಾರನೆಯ ದಿನವೇ (ಬುಧವಾರ) ಅವಳು ಎದ್ದ ಕೂಡಲೇ, ತಕ್ಷಣವೇ ನಾನೊಂದು ತಪ್ಪು ಮಾಡಿದೆ. ನಾನು ಕೂಡಲೇ ಅವಳಲ್ಲಿ ಸಖ್ಯ ಬೆಳೆಸಲು ಹೋದೆ. ನಾನು ಅವಸರಿಸಿದೆ, ತುಂಬ ಅವಸರಿಸಿದೆ. ಆದರೆ ನನ್ನ ತಪ್ಪೊಪ್ಪಿಸುವ ಆವಶ್ಯಕತೆ ಇದ್ದಿತು. ಅದನ್ನು ಮಾಡುವುದು ಅಗತ್ಯ

ವಾಗಿದ್ದಿತು. ಅದು ತಪ್ಪೊಪ್ಪಿಗೆಯಷ್ಟೆ ಆಗಿರಲಿಲ್ಲವೆನ್ನಿ. ನಾನು ಏನನ್ನೂ ಮುಚ್ಚಿಡಲಿಲ್ಲ, ನನ್ನ ಜೀವಮಾನವೆಲ್ಲ ನನ್ನಿಂದಲೇ ಮುಚ್ಚಿರಿಸಿಕೊಂಡಿದ್ದಂಥ ವಿಷಯಗಳನ್ನೂ ನಾನವಳಿಗೆ ತಿಳಿಸಿದೆ. ಆ ಚಳಿಗಾಲದಾದ್ಯಂತವೂ ನಾನು ಅವಳ ಪ್ರೇಮದ ಬಗೆಗೆ ಭರವಸೆ ಹೊಂದಿದ್ದೆ ಹಾಗೂ ಬೇರಾವ ಯೋಚನೆಯನ್ನೂ ಮಾಡಲಿಲ್ಲ, ಎಂಬುದನ್ನು ನಾನವಳಿಗೆ ಬಿಚ್ಚು ಮನಸ್ಸಿನಿಂದ ಹೇಳಿದೆ. ನನ್ನ ಸಂಕಲ್ಪಶಕ್ತಿ ಹಾಗೂ ವಿವೇಕಜ್ಞಾನ ನಷ್ಟವಾದುದರ ಫಲವಾಗಿಯಷ್ಟೆ ನಾನು ಆ ಒತ್ತೆಯ ಅಂಗಡಿ ಇಟ್ಟಿದ್ದೆ, ಎಂಬುದನ್ನೂ ನಾನವಳಿಗೆ ಸ್ಪಷ್ಟಪಡಿಸಿದೆ. ಅದು ನನ್ನದೇ ರೀತಿಯ ಆತ್ಮಖಂಡನೆ ಹಾಗೂ ಆತ್ಮಪ್ರಶಂಸೆ ಆಗಿದ್ದಿತು. ಅಂದು ರಂಗಮಂದಿರದ ಉಪಾಹಾರ ಅಂಗಡಿಯಲ್ಲಿ, ನನ್ನ ಮಿತಿಮೀರಿದ ಸಂವೇದನಾ ಶೀಲತೆಯಿಂದಾಗಿ ನಾನು ನಿಜಕ್ಕೂ ಹೇಡಿಯಾಗಿದ್ದೆ, ಎಂದೂ ನಾನವಳಿಗೆ ಹೇಳಿದೆ. ಆಗಿನ ಪರಿಸ್ಥಿತಿ ನನ್ನನ್ನು ಹಿಂಜರಿಯುವಂತೆ ಮಾಡಿತು. ನಾನು ಕೂಡಲೇ ಮುಂದೆ ಹೋಗಿ ಆ ಹುಸಾರನೊಡನೆ ವಾಗ್ವಾದದಲ್ಲಿ ತೊಡಗಿದ್ದರೆ ನಾನು ಮೂರ್ಖನಾಗಿ ಕಾಣಿಸುತ್ತಿದ್ದೆನಲ್ಲವೇ, ಎಂಬ ವಿಚಾರ ನನ್ನನ್ನು ಹಿಂಜರಿಯು ವಂತೆ ಮಾಡಿತು. ನನ್ನನ್ನ ಹೆದರಿಸಿದ್ದು ದ್ವಂದ್ವಯುದ್ಧವಲ್ಲ, ಆದರೆ ಎಲ್ಲಿ ಮೂರ್ಖನಾಗಿ ಕಾಣಿಸಿಕೊಂಡು ಬಿಡುತ್ತೇನೋ, ಎಂಬ ವಿಚಾರ. ಅನಂತರ ಅದನ್ನು ಒಪ್ಪಿಕೊಳ್ಳುವುದಕ್ಕೆ ತುಂಬ ತಡವಾಗಿತ್ತು. ಹಾಗಾಗಿ ನಾನು ಎಲ್ಲ ರನ್ನೂ ಸಂಕಟಕ್ಕೊಳಪಡಿಸಿದೆ, ಅವಳನ್ನೂ ಸಂಕಟಕ್ಕೊಳಪಡಿಸಿದೆ. ಅವಳನ್ನು ಸಂಕಟಕ್ಕೊಳಪಡಿಸಲೆಂದೇ ನಾನು ಅವಳನ್ನು ವಿವಾಹವಾದೆ, ಎಂದು ಮುಂತಾಗಿ ನಾನು ವಿಪರೀತ ಜ್ವರವಿದ್ದಾಗ ಮಾತನಾಡುವವನಂತೆ ಮಾತನಾಡಿದೆ. ಅವಳು ನನ್ನ ಕೈಗಳನ್ನು ತಾನೇ ತನ್ನ ಕೈಗಳಲ್ಲಿ ಹಿಡಿದುಕೊಂಡು ನನ್ನ ಮಾತು ನಿಲ್ಲಿಸು ವಂತೆ ಕೇಳಿಕೊಂಡಳು. "ನೀವು ಉತ್ಪ್ರೇಕ್ಷೆ ಮಾಡುತ್ತಿದ್ದೀರ... ನೀವು ನಿಮ್ಮನ್ನೇ ಹಿಂಸಿಸಿಕೊಳ್ಳುತ್ತಿದ್ದೀರ" ಎಂದು ಅವಳು ಮತ್ತೆ ಅಳತೊಡಗಿದಳು. ಮತ್ತೆ ಅದು ಅವಳು ಮೂರ್ಛೆಗೊಂಡಂಥ ಸ್ಥಿತಿಯಲ್ಲಿ ಕೊನೆಗಂಡಿತು. ಹಳೆಯದಾವು ದನ್ನೂ ನೆನಪಿಗೆ ತರಬಾರದೆಂದು, ಅಂತಹುದೇನನ್ನೂ ಹೇಳ ಹೋಗಬಾರ ದೆಂದೂ ಅವಳು ನನ್ನನ್ನು ಬೇಡಿಕೊಳ್ಳುತ್ತಲೇ ಇದ್ದಳು.

ನಾನು ಅವಳ ಮನವಿಯ ಕಡೆಗೆ ಸ್ವಲ್ಪವೂ ಗಮನ ನೀಡಲಿಲ್ಲ. ವಸಂತ, ಬುಲೋನ್ ! ಅಲ್ಲಿ ನಮ್ಮ ಸೂರ್ಯ, ಅಲ್ಲಿ ನಮ್ಮ ಹೊಸ ಸೂರ್ಯ – ಇದು ಬಿಟ್ಟು ನಾನು ಬೇರಾವ ಮಾತನ್ನೂ ಆಡದಾಗಿದ್ದೆ. ನಾನು ಒತ್ತೆಯ ಅಂಗಡಿಯನ್ನು ಮುಚ್ಚಿ ವ್ಯಾಪಾರವನ್ನು ದೊಬ್ರನ್ರಾವೊವ್‌ಗೆ ವಹಿಸಿಕೊಟ್ಟೆ. ನಮ್ಮಲ್ಲಿರುವುದ ನ್ನೆಲ್ಲ, ನನ್ನ ಅಜ್ಜಿ ನನಗಾಗಿ ಬಿಟ್ಟು ಹೋದ ಮೂಲಧನ ಮೂರು ಸಾವಿರ ರೂಬಲ್‌ಗಳನ್ನು ಬಿಟ್ಟು ಉಳಿದುದೆಲ್ಲವನ್ನೂ, ಬಡಬಗ್ಗರಿಗೆ ಹಂಚಿಬಿಡೋಣವೇ,

ಅದು ಅವಳಿಗೆ ಇಷ್ಟವಾಗುವುದೇ, ಎಂದು ನಾನು ಅವಳನ್ನು ಇದ್ದಕ್ಕಿದ್ದಂತೆ ಕೇಳಿದೆ. ಆ ಮೂರು ಸಾವಿರ ರೂಬಲ್ ನಾವು ಬುಲೋನ್‌ಗೆ ಪ್ರವಾಸ ಹೋಗುವುದಕ್ಕೆ ಮತ್ತು ಹಿಂದಿರುಗಿದ ಮೇಲೆ ಹೊಸ ಬಾಳು ಪ್ರಾರಂಭಿಸುವುದಕ್ಕೆ ಸಾಕಾಗುತ್ತದೆ. ಹಿಂದಿರುಗಿದ ಮೇಲೆ ನಾವು ನಮ್ಮ ಜೀವನೋಪಾಯಕ್ಕೆ ಕೆಲಸ ಮಾಡೋಣ, ಎಂದು ನಾನು ಸೂಚಿಸಿದೆ. ನಾವು ಹಾಗೆಯೇ ನಿರ್ಧರಿಸಿದೆವು, ಏಕೆಂದರೆ ಅವಳು ನನ್ನ ಸಲಹೆಗೆ ಪ್ರತಿಯಾಗಿ ಏನೂ ಹೇಳಲಿಲ್ಲ... ಕೇವಲ ಮುಗುಳ್ನಕ್ಕಳು. ನನ್ನ ಮನಸ್ಸಿಗೆ ನೋವಾಗಬಾರದೆಂಬ ಔಚಿತ್ಯ ಜ್ಞಾನ ಅವಳಲ್ಲಿ ಆ ಮುಗುಳ್ನಗೆಯನ್ನು ಪ್ರೇರಿಸಿದ್ದಿರಬೇಕು. ನಾನು ಅವಳಿಗೆ ಆಯಾಸಗೊಳಿಸುವಂತಿದ್ದೆನೆಂಬುದನ್ನು ಖಂಡಿತ ಕಂಡುಕೊಂಡೆ. ಅದನ್ನು ಕಾಣದಷ್ಟು ಮೂರ್ಖ ಅಥವಾ ಸ್ವಾರ್ಥಿ ನಾನಾಗಿದ್ದೆನೆಂದು ದಯವಿಟ್ಟು ಭಾವಿಸಬೇಡಿ. ನಾನು ಎಲ್ಲವನ್ನೂ ಕಂಡೆ, ಕೊನೆಯ ಸಣ್ಣಪುಟ್ಟ ವಿವರದವರೆಗೂ, ಎಲ್ಲವನ್ನೂ ಕಂಡೆ. ಎಲ್ಲವನ್ನೂ ತುಂಬ ಚೆನ್ನಾಗಿಯೇ ಕಂಡೆ, ತಿಳಿದುಕೊಂಡೆ. ನನ್ನೆಲ್ಲ ಹತಾಶೆಯೂ ಕಾಣುವಂತೆ ನಿಂತಿದ್ದಿತು!

ನಾನು ಅವಳಿಗೆ ನನ್ನ ಬಗೆಗೂ ಅವಳ ಬಗೆಗೂ ಎಲ್ಲವನ್ನೂ ಹೇಳಿದೆ. ಲುಕೇರ್ಯಳ ಬಗೆಗೂ ಹೇಳಿದೆ. ನಾನು ಅತ್ತಿದ್ದೆನೆಂದು ನಾನವಳಿಗೆ ಹೇಳಿದೆ.... ಓಹ್, ನಾನು ಹೇಗೆ ಸಂಭಾಷಣೆಯನ್ನು ಬದಲಿಸಿದೆ. ಕೆಲವು ಸಂಗತಿಗಳನ್ನು ಅವಳು ನೆನಪಿಗೆ ತಂದುಕೊಳ್ಳದಿರಲೆಂದು ಹಾಗೆ ಮಾಡಿದೆ. ಒಂದೆರಡು ಬಾರಿ ಅವಳ ಮುಖದಲ್ಲಿ ಗೆಲುವೂ ಕಂಡುಬಂದಿತು. ನನಗೆ ಜ್ಞಾಪಕವಿದೆ, ಚೆನ್ನಾಗಿ ಜ್ಞಾಪಕವಿದೆ! ನಾನು ಏನನ್ನೂ ಕಾಣಲಿಲ್ಲ, ಏನನ್ನೂ ನೋಡಲಿಲ್ಲ ಎಂದೇಕೆ ಹೇಳುತ್ತೀರಿ? ಇದು ಸಂಭವಿಸದೆ ಇದ್ದಿದ್ದರೆ ಎಲ್ಲವನ್ನೂ ಪುನರುಜ್ಜೀವನಗೊಳಿಸಲಾಗುತ್ತಿದ್ದಿತು. ಏಕೆಂದರೆ ಅವಳು ನನಗೆ ಹೇಳಿದಳು – ಮೊನ್ನೆಯಷ್ಟೆ, ನಮ್ಮ ಸಂಭಾಷಣೆಯು ಸಾಹಿತ್ಯದ ಕಡೆಗೆ ಹಾಗೂ ಚಳಿಗಾಲದಲ್ಲಿ ಅವಳು ಓದಿದ್ದ ಪುಸ್ತಕಗಳ ಕಡೆಗೆ ತಿರುಗಿದಾಗ – ಅವಳು ಗ್ರೆನಾಡಾದ ಆರ್ಕಿಬಿಷಪ್‌ನೊಂದಿಗೆ ಜಿಲ್ ಬ್ಲಾಸ್‌ನ ದೃಶ್ಯದ ಬಗೆಗೆ ಹೇಳಿದಳು, ಅದನ್ನು ನೆನಸಿಕೊಂಡು ನಕ್ಕಳು. ಅವಳ ನಗೆ ಎಷ್ಟು ಮಧುರವಾಗಿ ಮುಗ್ಧವಾಗಿದ್ದಿತು. ಅವಳು ನನ್ನ ವಧುವಾಗಿ ನಿಶ್ಚಿತವಾಗಿದ್ದ ಆ ದಿನಗಳಲ್ಲಿದ್ದಂತೆಯೇ (ಓ, ಕ್ಷಣಭಂಗುರ!); ನಾನು ಎಷ್ಟು ಸಂತಸಿತನಾಗಿದ್ದೆ! ಆದರೆ ಆರ್ಕಿಬಿಷಪ್‌ನ ಬಗೆಗೆ ಅವಳು ಹೇಳಿದುದು ನನ್ನ ಮನಸ್ಸಿಗೆ ಬಲವಾಗಿ ಚುಚ್ಚಿತು. ಅಂದರೆ ಆ ಚಳಿಗಾಲದಲ್ಲಿ ನಮ್ಮ ಮಧ್ಯೆ ವಿರಸ ಉಂಟಾಗಿ ಅವಳು ಏಕಾಂಗಿಯಾಗಿದ್ದರೂ ಸಾಹಿತ್ಯಕೃತಿಯನ್ನು ಓದಿ ಆನಂದಿಸುವಷ್ಟು ಸಂತೋಷದಿಂದ ನೆಮ್ಮದಿಯಿಂದ ಇದ್ದಳು, ಅಂದಾಯಿತು. ಅಂದರೆ, ಅವಳು ಆಗಾಗಲೇ ಮನಶ್ಶಾಂತಿ ಪಡೆದುಕೊಳ್ಳತೊಡಗಿದ್ದಳು, ನಾನು ಅವಳನ್ನು ಹಾಗೆಯೇ ಬಿಟ್ಟುಬಿಡುವೆನೆಂದು ನಂಬತೊಡಗಿದ್ದಳು, ಅಂದಾಯಿತು. "ನೀವು ನನ್ನನ್ನು ಹಾಗೆಯೇ

ಬಿಟ್ಟು ಬಿಡುವಿರೆಂದು ಭಾವಿಸಿದ್ದೆ" – ಈ ಮಾತನ್ನೇ ಅಲ್ಲವೇ ನನಗೆ ಅವಳು ಮಂಗಳವಾರದಂದು ಹೇಳಿದ್ದು. ಓಹ್, ಅದು ಹತ್ತು ವರ್ಷದ ಹುಡುಗಿಗೆ ತಕ್ಕುದಾದ ಭಾವನೆಯಾಗಿತ್ತು! ಅವಳು ಅದನ್ನು ನಂಬಿದ್ದಳು, ಎಲ್ಲವೂ ನಿಜಕ್ಕೂ ಹಾಗೆಯೇ ಇದ್ದುಬಿಡುವುದೆಂದು ನಂಬಿದ್ದಳು. ಅಂದರೆ ಅವಳು ತನ್ನ ಮೇಜಿನ ಬಳಿ, ನಾನು ನನ್ನ ಮೇಜಿನ ಬಳಿ, ಇಬ್ಬರೂ ಹಾಗೆಯೇ ಅರವತ್ತನೆಯ ವಯಸ್ಸಿನವರೆಗೂ ಇದ್ದುಕೊಂಡು ಹೋಗುವುದು, ಹಾಗಂದುಕೊಂಡಿದ್ದಾಗ ಇದ್ದಕ್ಕಿದ್ದಂತೆ ನಾನು ಬರುತ್ತೇನೆ, ಗಂಡ. ಮತ್ತೆ ಈ ಗಂಡನಿಗೆ ಬೇಕು ಪ್ರೀತಿ! ಓಹ್, ಎಂಥ ತಪ್ಪು ತಿಳಿವಳಿಕೆ ನನ್ನದು, ಓಹ್, ಎಂಥ ಮೌಢ್ಯ!

ನಾನು ಮಾಡಿದ ಮತ್ತೊಂದು ತಪ್ಪೆಂದರೆ, ನಾನವಳನ್ನು ಅತ್ಯಾನಂದಭರಿತನಾಗಿ ನೋಡಿದ್ದು. ನಾನು ನನ್ನ ಭಾವಾವೇಶವನ್ನು ಅಂಕೆಯಲ್ಲಿ ಇರಿಸಿಕೊಳ್ಳಬೇಕಾಗಿತ್ತು. ಏಕೆಂದರೆ ಆ ಭಾವಾವೇಶ ಅವಳನ್ನು ಭೀತಿಗೊಳಿಸಿತು. ಆದರೆ ನೋಡಿ, ನಾನು ನನ್ನ ಭಾವಾವೇಶವನ್ನು ಅಂಕೆಯಲ್ಲಿ ಇರಿಸಿಕೊಂಡೇ ಇದ್ದೆ – ಒಮ್ಮೆ ಮಾಡಿದನಂತರ ನಾನು ಮತ್ತೆ ಅವಳ ಪಾದಗಳನ್ನು ಎಂದೂ ಚುಂಬಿಸಲಿಲ್ಲ. ನಾನೊಬ್ಬ... ಹುಂ, ನಾನೊಬ್ಬ ಗಂಡ ಎಂಬುದನ್ನು ನಾನೆಂದೂ ಸೂಚ್ಯವಾಗಿ ಕೂಡ ತೋರಿಸಲಿಲ್ಲ. ಅಂಥ ಭಾವನೆ ನನ್ನ ಮನಸ್ಸಿನಿಂದ ತುಂಬ ದೂರವೇ ಉಳಿದಿತ್ತು. ನಾನು ಮಾಡಿದುದೆಲ್ಲ, ಅವಳನ್ನು ಆರಾಧಿಸಿದುದು. ಆದರೆ ನಾನು ಸಂಪೂರ್ಣವಾಗಿ ಮೂಕನಂತಿರಲು ಸಾಧ್ಯವಿರಲಿಲ್ಲ, ಏನನ್ನಾದರೂ ಹೇಳದೆ ಇರಲು ಸಾಧ್ಯವಿರಲಿಲ್ಲ! ನಾನು ಕೂಡಲೇ ಹೋಗಿ, ಅವಳೊಂದಿಗೆ ಸಂಭಾಷಣೆ ನನಗೆ ತುಂಬ ಆನಂದ ನೀಡಿತೆಂದೂ, ನಾನು ಅವಳನ್ನು ನನಗಿಂತ ಅನುಪಮವಾಗಿ ಹೆಚ್ಚು ಓದಿದ ಹಾಗೂ ಸುಶಿಕ್ಷಿತಳಾದ ವ್ಯಕ್ತಿಯೆಂದು ಪರಿಗಣಿಸುತ್ತೇನೆಂದೂ, ತಿಳಿಸಿದೆ. ಅವಳು ನಾಚಿ ಕಡುಗೆಂಪಾದಳು ಮತ್ತು ನಾನು ಉತ್ಪ್ರೇಕ್ಷಿಸುತ್ತಿದ್ದೇನೆಂದು ಲಜ್ಜೆಯಿಂದ ಹೇಳಿದಳು. ಆಮೇಲೆ ಅಂದು ಬಾಗಿಲ ಹಿಂದೆ ನಿಂತು ಅವಳ ವಾಕ್‌ಯುದ್ಧವನ್ನು, ಆ ಮೃಗೀಯ ವ್ಯಕ್ತಿಯೊಂದಿಗೆ ಅವಳ ಮುಗ್ಧ ವಾಕ್ ಯುದ್ಧವನ್ನು, ಕೇಳಿದಾಗ ನಾನು ಅವಳನ್ನು ಎಷ್ಟು ಮೆಚ್ಚಿಕೊಂಡೆ, ಅವಳ ಬುದ್ಧಿಶಕ್ತಿಯನ್ನೂ ಅವಳ ಉಜ್ವಲ ವಾಕ್ಚಾತುರ್ಯವನ್ನೂ ಅದರೊಂದಿಗೆ ಸಾಮರಸ್ಯವಾಗಿ ಬೆರೆತಿದ್ದ ಮಗುವಿನಂಥ ಅಕೃತ್ರಿಮತೆಯನ್ನೂ ಹೇಗೆ ಮೆಚ್ಚಿಕೊಂಡೆ, ಎಂಬುದನ್ನೂ, ಮೂರ್ಖನಾದ ನಾನು ಥಟ್ಟನೆ ಹೇಳಿಬಿಟ್ಟೆ. ಅವಳ ಮೈ ಉದ್ದ ಕಂಪನವಾದಂತೆ ಕಂಡುಬಂದಿತು. ನಾನು ಉತ್ಪ್ರೇಕ್ಷಿಸುತ್ತಿದ್ದೇನೆಂದು ಅವಳು ಮತ್ತೆ ಮಣಗುಟ್ಟಿದಳು. ಆದರೆ ಇದ್ದಕ್ಕಿದ್ದಂತೆ ಅವಳ ಮುಖದ ಮೇಲೆ ಒಂದು ಛಾಯೆ ಹಾದು ಹೋಯಿತು. ಅವಳು ತನ್ನ ಮುಖವನ್ನು ಕೈಗಳಲ್ಲಿ ಹುದುಗಿಸಿಕೊಂಡು ಬಿಕ್ಕಳಿಸಿ ಅತ್ತಳು. ಅದನ್ನು ಸಹಿಸಿಕೊಂಡಿರಲು ನನ್ನ ಕೈಲಾಗಲಿಲ್ಲ.

ನಾನು ಮತ್ತೆ ಅವಳ ಮುಂದೆ ಮಂಡಿಯೂರಿ ಕುಳಿತು ಅವಳ ಪಾದಗಳನ್ನು ಚುಂಬಿಸತೊಡಗಿದೆ. ಮತ್ತೊಮ್ಮೆ ಎಲ್ಲವೂ ಕಳೆದ ಮಂಗಳವಾರದಂದು ಆದಂತೆಯೇ ಭಾವೋನ್ಮಾದದಲ್ಲಿ, ಮೂರ್ಛೆಯಲ್ಲಿ, ಕೊನೆಗಂಡಿತು. ಇದು ಜರುಗಿದ್ದು ಕಳೆದ ರಾತ್ರಿ. ಮತ್ತೆ ಬೆಳಿಗ್ಗೆ....

ಬೆಳಿಗ್ಗೆ ? ಓಹ್, ಹುಚ್ಚ, ಆ ಬೆಳಿಗ್ಗೆ ಇಂದೇ. ಸ್ವಲ್ಪ ಕಾಲದ ಹಿಂದಷ್ಟೆ. ತೀರ ಸ್ವಲ್ಪ ಕಾಲ !

ಕೇಳಿ, ಅರ್ಥಮಾಡಿಕೊಳ್ಳಲು ಯತ್ನಿಸಿ. ಇಂದು ಬೆಳಿಗ್ಗೆ ಉಪಾಹಾರ ತೆಗೆದುಕೊಳ್ಳಲು ಸಂಧಿಸಿದಾಗ (ಕಳೆದ ರಾತ್ರಿಯ ಭಾವೋನ್ಮಾದದನಂತರ, ತಿಳಿದಿರಲಿ) ಅವಳು ತನ್ನ ಸಮಾಧಾನಚಿತ್ತದಿಂದ ನನ್ನನ್ನು ಆಶ್ಚರ್ಯಗೊಳಿಸಿದಳು. ನೋಡಿದಿರಾ ? ನಾನಾದರೋ ಇಡೀ ರಾತ್ರಿ ಎಚ್ಚರವಾಗಿಯೇ ಇದ್ದೆ, ಕಳೆದ ಸಂಜೆ ನಮ್ಮ ಮಧ್ಯೆ ಏನು ಜರುಗಿದ್ದಿತೋ ಅದರ ಕಾರಣದಿಂದಾಗಿ ಅಂಜಿಕೆಯಿಂದ ನಡುಗುತ್ತ. ಮತ್ತೆ ಇವಳು ನೋಡಿ, ಇದ್ದಕ್ಕಿದ್ದಂತೆ ನೇರವಾಗಿ ನನ್ನ ಮುಂದೆ ಬಂದು ಬೇಡಿಕೊಳ್ಳುವವಳಂತೆ ಕೈ ಜೋಡಿಸಿ ನಿಂತು (ಸ್ವಲ್ಪ ಕಾಲದ ಹಿಂದಷ್ಟೆ, ತೀರ ಸ್ವಲ್ಪ ಕಾಲದ ಹಿಂದೆ !), ತಾನೊಬ್ಬ ಪಾತಕಿಯೆಂದೂ, ತನಗದು ತಿಳಿದಿದೆಯೆಂದೂ, ತನ್ನ ಪಾಪಕೃತ್ಯ ತನ್ನನ್ನು ಚಳಿಗಾಲದಾದ್ಯಂತ ಕಾಡಿಸಿದ್ದಿತೆಂದೂ, ಆಗಲೂ ಕಾಡಿಸುತ್ತಿದ್ದಿತೆಂದೂ.... ತಾನು ನನ್ನ ಔದಾರ್ಯವನ್ನು ಬಹಳವಾಗಿ ಮೆಚ್ಚಿಕೊಂಡಿದ್ದಳೆಂದೂ, "ನಾನು ನಿಮಗೆ ನಿಷ್ಠಾವಂತ ಪತ್ನಿಯಾಗಿ ಇರುವೆನು, ನಿಮ್ಮನ್ನು ಗೌರವಿಸುವೆನು" ಎಂದೂ ಹೇಳಿದಳು. ನಾನು ಚಂಗನೆ ನಿಂತು ಅವಳನ್ನು ಅತ್ಯಾವೇಶದಿಂದ ಆಲಂಗಿಸಿಕೊಂಡೆ, ಚುಂಬಿಸಿದೆ. ಅವಳ ಮುಖವನ್ನು, ತುಟಿಗಳನ್ನು, ಪತಿಯೊಬ್ಬನು ದೀರ್ಘ ಕಾಲ ಅಗಲಿದನಂತರ ತನ್ನ ಪತ್ನಿಯನ್ನು ಚುಂಬಿಸುವಂತೆ, ಚುಂಬಿಸಿದೆ. ಆಮೇಲೆ ನಾನು ಯಾಕಾದರೂ ಹೊರಗೆ ಹೋದೆನೋ. ಎರಡು ಗಂಟೆಗಳಷ್ಟೆ ಹೊರಗೆ ಹೋಗಿದ್ದೆ... ವೀಸಾ, ನಮ್ಮ ಪಾಸ್‌ಪೋರ್ಟುಗಳು.... ಓಹ್, ದೇವರೇ ! ಐದು ನಿಮಿಷ, ಕೇವಲ ಐದು ನಿಮಿಷ ಮುಂಚೆ ಬಂದಿದ್ದಿದ್ದರೆ... ನಮ್ಮ ಗೇಟಿನ ಮುಂದೆ ಜನರ ಆ ಗುಂಪು, ನನ್ನತ್ತ ಅವರ ಬಿರುನೋಟ... ಓಹ್, ದೇವರೇ !

ಲುಕೇರ್ರ್ಯ ಹೇಳುತ್ತಾಳೆ (ಓಹ್, ನಾನೀಗ ಲುಕೇರ್ರ್ಯಳನ್ನು ಎಂದಿಗೂ ಹೋಗಲು ಬಿಡುವುದಿಲ್ಲ. ಅವಳಿಗೆ ಎಲ್ಲ ಗೊತ್ತು. ಏಕೆಂದರೆ ಅವಳು ಚಳಿಗಾಲವೆಲ್ಲ ನಮ್ಮೊಟ್ಟಿಗೇ ಇದ್ದಳು. ಅವಳು ನನಗೆ ಅದರ ಬಗೆಗೆ ಎಲ್ಲವನ್ನೂ ಹೇಳುವಳು), ಲುಕೇರ್ರ್ಯ ಹೇಳುತ್ತಾಳೆ – ನಾನು ಹೊರಗೆ ಹೋದ ಮೇಲೆ, ಹಿಂದಿರುಗಿದುದಕ್ಕೆ ಇಪ್ಪತ್ತು ನಿಮಿಷಗಳ ಮುನ್ನವಷ್ಟೆ, ಅವಳು ನಮ್ಮ ಕೋಣೆಗೆ ತನ್ನ ಒಡತಿಯನ್ನು ಏನೋ ಕೇಳಲು ಹೋದಳು, ಏನು ಅನ್ನುವುದು ನನಗೆ ಜ್ಞಾಪಕವಿಲ್ಲ, ತನ್ನ ಒಡತಿಯ

ಚಿತ್ರಫಲಕ (ಪವಿತ್ರ ಕನ್ಯೆಯ ಆ ಚಿತ್ರಫಲಕ) ಮಂದಾಸನದ ಮೇಲಿನಿಂದ ಒಡತಿಯ ಮುಂದೆ ಮೇಜಿನ ಮೇಲಿದ್ದುದನ್ನು ನೋಡಿದಳು, ಅವಳ ಒಡತಿ ಆಗಷ್ಟೆ ಅದರ ಮುಂದೆ ಪ್ರಾರ್ಥನೆ ಮಾಡುತ್ತಿದ್ದಳೋ ಎಂಬಂತೆ. "ಏನ್ರಮ್ಮ, ಇದೇನು ಅಮ್ಮಾವ್ರೇ !" ಲುಕೇರ್ರ್ಯ ಕೇಳಿದ್ದಳು. "ಏನೂ ಇಲ್ಲ, ಲುಕೇರ್ರ್ಯ. ಹೋಗು. ಓಹ್, ತಾಳು, ಲುಕೇರ್ರ್ಯ" ಹಾಗೆ ಹೇಳಿ ಅವಳು ಲುಕೇರ್ರ್ಯಳ ಬಳಿಗೆ ಬಂದು ಚುಂಬಿಸಿದ್ದಳು. "ಸೌಖ್ಯವಾಗಿದ್ದೀರಾ, ಅಮ್ಮಾವ್ರೇ "ಲುಕೇರ್ರ್ಯ ಕೇಳಿದ್ದಳು. "ಹೌದಮ್ಮ, ಲುಕೇರ್ರ್ಯ." "ಯಜಮಾನರು ಇದಕ್ಕೆ ತುಂಬ ಮುನ್ನವೇ ನಿಮ್ಮ ಬಳಿಗೆ ಬಂದು ನಿಮ್ಮ ಕ್ಷಮೆ ಕೋರಬೇಕಿತ್ತು... ದೇವರ ದಯ, ಈಗಲಾದರೂ ನೀವು ಒಂದಾದಿರಲ್ಲ..." ಅವಳ ಒಡತಿ ವಿಚಿತ್ರ ಮುಗುಳುನಗೆ ನಗುತ್ತ ಹೇಳಿದ್ದಳು: "ಒಳ್ಳೆಯದು, ಲುಕೇರ್ರ್ಯ. ಈಗ ಹೋಗು, ಲುಕೇರ್ರ್ಯ." ಆ ಮುಗುಳುನಗೆ ಎಷ್ಟು ವಿಚಿತ್ರವಾಗಿದ್ದಿತೆಂದರೆ, ಹತ್ತು ನಿಮಿಷಗಳನಂತರ ಲುಕೇರ್ರ್ಯ ಮತ್ತೊಮ್ಮೆ ತನ್ನ ಒಡತಿಯನ್ನು ನೋಡಲು ಆ ಕೋಣೆಗೆ ಹೋದಳು. "ಅಲ್ಲಿ ಅವರು ಕಿಟಕಿಗೆ ಸಮೀಪವಾಗಿ ಗೋಡೆಗೆ ಒರಗಿ ನಿಂತಿದ್ದರು. ಅವರ ತಲೆ ಗೋಡೆಗೆ ಆನಿಸಿ ಇರಿಸಿದ್ದ ಅವರ ಕೈ ಮೇಲೆ ಒತ್ತಿ ಇದ್ದಿತು. ಅವರು ಅಲ್ಲಿ ನಿಂತು ಯೋಚಿಸುತ್ತಿದ್ದರು. ಆಲೋಚನೆಯಲ್ಲೇ ಎಷ್ಟು ತಲ್ಲೀನ ರಾಗಿದ್ದರೆಂದರೆ ನಾನು ಕೋಣೆಯ ಒಳಗೆ ಹೋಗಿ ಬಾಗಿಲ ಬಳಿ ನಿಂತು ಅವ ರನ್ನೇ ನೋಡುತ್ತ ನಿಂತುದು ಅವರಿಗೆ ಕೇಳಿಸಲೇ ಇಲ್ಲ. ಅವರು ಮುಗುಳುನ ಗುತ್ತಿದ್ದಂತೆ, ಅಲ್ಲಿ ನಿಂತು ಯೋಚಿಸುತ್ತ ಮುಗುಳು ನಗುತ್ತಿದ್ದಂತೆ, ನನಗೆ ಕಂಡು ಬಂದಿತು. ಇನ್ನೊಮ್ಮೆ ಅವರತ್ತ ದೃಷ್ಟಿ ಹಾಯಿಸಿ, ತಿರುಗಿ ಸದ್ದಿಲ್ಲದೆ ಹೊರಟು ಹೋದೆ, ಅದರ ಬಗೆಗೇ ಯೋಚಿಸುತ್ತ. ಆಗ ಇದ್ದಕ್ಕಿದ್ದಂತೆ ಅವರು ಕಿಟಕಿಯ ಬಾಗಿಲು ತೆರೆದ ಶಬ್ದ ಕೇಳಿಬಂದಿತು. ಹೊರಗೆ ತುಂಬ ಚಳಿ ಇದೆ, ಬಾಗಿಲು ತೆರೆದರೆ ಶೀತವಾದೀತು, ಎಂದು ಎಚ್ಚರಿಸಲು ನಾನು ಮತ್ತೆ ಅವರ ಬಳಿಗೆ ಹೋದೆ. ಆಗ ಅವರು ಕಿಟಕಿಯ ಚೌಕಟ್ಟಿನ ಮೇಲೆ ಎದ್ದು ನಿಲ್ಲುತ್ತಿ ರುವುದನ್ನು ಕಂಡೆ. ಅವರು ತೆರೆದ ಕಿಟಕಿಯ ಅಂಚಿನಲ್ಲಿ ಇಡೀ ಉದ್ದ ನಿಂತಿದ್ದರು. ಅವರ ಬೆನ್ನು ನನ್ನ ಕಡೆಗಿದ್ದಿತು. ಅವರ ಕೈಯಲ್ಲಿ ದೇವರ ಚಿತ್ರಫಲಕವಿದ್ದಿತು. ನನ್ನ ಹೃದಯ ಕುಸಿಯಿತು. "ಅಮ್ಮಾವ್ರೇ, ಅಮ್ಮಾವ್ರೇ !" ಎಂದು ನಾನು ಕೂಗಿದೆ. ಅವರು ನನ್ನ ಕೂಗನ್ನು ಕೇಳಿಸಿಕೊಂಡರು, ನನ್ನ ಕಡೆಗೆ ತಿರುಗುವ ಹಾಗೆ ಮಾಡಿದರು, ಆದರೆ ತಿರುಗಲಿಲ್ಲ. ಒಂದು ಹೆಜ್ಜೆ ಮುಂದಿಟ್ಟು, ಚಿತ್ರಫಲಕವನ್ನು ಎದೆಗೆ ಅವುಚಿ ಇಟ್ಟುಕೊಂಡು – ಕಿಟಕಿಯಿಂದ ಹೊರಕ್ಕೆ ಹಾರಿದರು !"

ನಾನು ಗೇಟಿನ ಬಳಿಗೆ ಬಂದಾಗ ಅವಳ ಶರೀರ ಇನ್ನೂ ಬೆಚ್ಚಗಿದ್ದಿತು ಎಂಬು ದಷ್ಟೆ ನನಗೆ ಜ್ಞಾಪಕ, ಅಲ್ಲಿ ನಿಂತಿದ್ದವರೆಲ್ಲ ನನ್ನನ್ನೇ ದಿಟ್ಟಿಸಿ ನೋಡುತ್ತಿದ್ದರು. ಅವರೆಲ್ಲ ಕೂಗಾಡುತ್ತಿದ್ದರು, ಆದರೆ ಈಗ ನನ್ನನ್ನು ಕಂಡಕೂಡಲೇ ಮೌನವಾ

ದರು, ನನಗೆ ದಾರಿ ಬಿಟ್ಟು ಕೊಟ್ಟರು. ಮತ್ತೆ ಅವಳು, ಅವಳು ನೆಲದ ಮೇಲೆ ಅಲ್ಲಿದ್ದಳು, ಚಿತ್ರಫಲಕದೊಂದಿಗೆ. ನಾನು ಮೌನದಿಂದ ಅವಳ ಬಳಿಗೆ ಹೋದೆ, ತುಂಬ ಹೊತ್ತು ನೋಡುತ್ತ ನಿಂತೆ, ಎನ್ನುವುದು ಕಪ್ಪು ಮಬ್ಬಿನ ಮೂಲಕ ನನಗೆ ಜ್ಞಾಪಕಕ್ಕೆ ಬರುತ್ತಿದೆ. ಜನರೆಲ್ಲ ನನ್ನ ಸುತ್ತ ಮುತ್ತಿದರು, ಏನನ್ನೋ ಹೇಳುತ್ತಿದ್ದರು. ಲುಕೇರ್ಯಳೂ ಅಲ್ಲಿದ್ದಳು. ಆದರೆ ನಾನು ಅವಳನ್ನು ಕಾಣಲಿಲ್ಲ. ತಾನು ನನ್ನ ಜೊತೆಗೆ ಮಾತನಾಡಿದೆ ಎಂದು ಅವಳು ಹೇಳುತ್ತಾಳೆ. ನನಗೆ ವ್ಯಕ್ತಿಯೊಬ್ಬ ಹೇಳಿದುದಷ್ಟೆ ಜ್ಞಾಪಕ. "ಅವಳು ಬೊಗಸೆಯಷ್ಟು ರಕ್ತ ಕಾರಿದಳು, ಬೊಗಸೆಯಷ್ಟೇ, ಬೊಗಸೆಯಷ್ಟೇ !" ಎಂದು ಅವನು ಒಂದೇ ಸಮನಾಗಿ ಕೂಗಿ ಹೇಳುತ್ತಿದ್ದ. ನನ್ನ ಮುಂದಿದ್ದ ಕಲ್ಲು ಚಪ್ಪಡಿಗಳ ಮೇಲೆ ಸುರಿದಿದ್ದ ರಕ್ತವನ್ನು ತೋರಿಸಿದ. ನಾನು ಆ ರಕ್ತವನ್ನು ನನ್ನ ಬೆರಳಿನಿಂದ ಮುಟ್ಟಿದೆ ಎಂದು ನಾನಂದು ಕೊಂಡಿದ್ದೇನೆ. ಬೆರಳಿನ ಮೇಲೆ ರಕ್ತದ ಕಲೆ ಆಯಿತು. ನಾನು ಅದನ್ನೇ ದಿಟ್ಟಿಸಿ ನೋಡಿದೆ (ಇದು ನನಗೆ ಜ್ಞಾಪಕವಿದೆ). ಅದೇ ಹೊತ್ತಿನಲ್ಲಿ ಅವನು "ಬೊಗಸೆ ಯಷ್ಟೇ, ಬೊಗಸೆಯಷ್ಟೇ !" ಎಂದು ಕೂಗಿ ಹೇಳುತ್ತಲೇ ಇದ್ದ.

"ಬೊಗಸೆಯಷ್ಟು ಆದರೇನಂತೆ, ಏನಂತೆ ?" ಎಂದು ನಾನು ಗಟ್ಟಿಯಾಗಿ ಕಿರುಚುತ್ತ ನನ್ನ ಕೈಗಳನ್ನು ಮೇಲಕ್ಕೆತ್ತಿ ಅವನತ್ತ ಧಾವಿಸಿದೆ, ಎಂದು ಅವರು ಹೇಳುತ್ತಾರೆ....

ಓಹ್, ಇದು ಹುಚ್ಚು, ಹುಚ್ಚು ! ತಪ್ಪು ತಿಳಿವಳಿಕೆ ! ನಂಬಲಾಗದು ! ಅಸಾಧ್ಯ !

# IV
# ಐದು ನಿಮಿಷದಷ್ಟು ತಡ

ಅಲ್ಲವೇ ? ಇದು ನಂಬಲಾಗದುದಲ್ಲವೇ ? ಇಂತಹುದು ಸಾಧ್ಯ ಎಂದು ಯಾರಾದರೂ ಹೇಳಬಲ್ಲರೇ ? ಈ ಹೆಂಗಸು ಸತ್ತುದೇಕೆ, ಏತಕ್ಕಾಗಿ ?

ಓಹ್, ನನ್ನನ್ನು ನಂಬಿ, ನನಗೆ ಗೊತ್ತಿದೆ. ಆದರೆ ಅವಳು ಸತ್ತಳೇಕೆ ? ಅದು ಪ್ರಶ್ನೆಯಾಗಿಯೇ ಉಳಿದಿದೆ. ಅವಳು ನನ್ನ ಪ್ರೇಮದಿಂದ ಭಯಭ್ರಾಂತಳಾ ದಳು. ನನ್ನ ಪ್ರೇಮವನ್ನು ಒಪ್ಪಿಕೊಳ್ಳಬೇಕೆ, ಒಪ್ಪಿಕೊಳ್ಳಬಾರದೆ ಎಂದು ಅವಳು ತನ್ನನ್ನೇ ಶ್ರದ್ಧೆಯಿಂದ ಕೇಳಿಕೊಂಡಳು. ಆದರೆ ಆ ಪ್ರಶ್ನೆಯನ್ನವಳು ಬಗೆ ಹರಿಸದಾದಳು. ಸಾವನ್ನು ಆರಿಸಿಕೊಂಡಳು. ನನಗೆ ಗೊತ್ತು, ನನಗೆ ಗೊತ್ತು.

ತಲೆ ಕೆಡಿಸಿಕೊಳ್ಳುವುದರಲ್ಲಿ ಪ್ರಯೋಜನವಿಲ್ಲ. ಅವಳು ತುಂಬ ಮಾತು ಕೊಟ್ಟು ಬಿಟ್ಟಿದ್ದಳು. ಅವುಗಳನ್ನು ಉಳಿಸಿಕೊಳ್ಳಲು ತನಗೆ ಸಾಧ್ಯವಾಗದೆಂದು ಹೆದರಿಕೆ ಯಾಯಿತು. ಅದು ಸ್ಪಷ್ಟ. ಇಲ್ಲೊ ಚಿಂತಿಸಲು ಭಯಂಕರವಾದಂಥ ಕೆಲವು ಪರಿಗಣನೆಗಳಿವೆ.

ಯಾವ ಕಾರಣಕ್ಕಾಗಿ ಅವಳು ಸತ್ತಳು? ಪ್ರಶ್ನೆ ಉಳಿದೇ ಇದೆ. ಈ ಪ್ರಶ್ನೆ ನನ್ನ ತಲೆ ತಿನ್ನುತ್ತಿದೆ. ಅವಳಿಗೆ ಅದು ಇಷ್ಟವಾಗಿದ್ದಿದ್ದರೆ, ಎಲ್ಲವನ್ನೂ ಹಾಗೆಯೇ ಬಿಟ್ಟುಬಿಡಬೇಕೆಂದು ಬಯಸಿದ್ದಿದ್ದರೆ, ನಾನು ಅವಳನ್ನು ಹಾಗೆಯೇ ಬಿಟ್ಟುಬಿಡುತ್ತಿದ್ದೆ. ನಾನು ಬಿಟ್ಟುಬಿಡುವೆನೆಂದು ಅವಳು ನಂಬಲಿಲ್ಲ, ಅದೇ ಬಂದದ್ದು! ಇಲ್ಲ, ಇಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ. ಅದು ಕಾರಣವಲ್ಲವೇ ಅಲ್ಲ. ಅದಕ್ಕೆ ಕಾರಣವೆಂದರೆ – ನನಗೆ ಸಂಬಂಧಿಸಿ ಎಲ್ಲವೂ ಪ್ರಾಮಾಣಿಕವಾಗಿ ಇರಬೇಕಿದ್ದಿತು, ಅವಳು ಪ್ರೀತಿಸಿದ್ದೇ ಆದರೆ ನನ್ನನ್ನು ಎಲ್ಲ ರೀತಿಗಳಲ್ಲೂ ಪ್ರೀತಿಸಬೇಕಾಗಿದ್ದಿತು. ಆ ಅಂಗಡಿಕಾರನನ್ನು ಪ್ರೀತಿಸುವಂತೆ ಪ್ರೀತಿಸುವುದಲ್ಲ. ಆ ಅಂಗಡಿಕಾರ ಬಯಸಿದ ರೀತಿಯ ಪ್ರೇಮಕ್ಕೆ ಒಪ್ಪಿಕೊಳ್ಳಲು ಅವಳ ಪಾತಿವ್ರತ್ಯ ಹಾಗೂ ಪರಿಶುದ್ಧತೆ ಅಡ್ಡಿಬಂದಿತು. ನನ್ನನ್ನು ಮೋಸಪಡಿಸಲು ಅವಳು ಸಿದ್ಧವಿರಲಿಲ್ಲ. ಅರ್ಧ ಪ್ರೇಮವನ್ನು, ಕಾಲು ಪ್ರೇಮವನ್ನು ನಿಜವಾದ ಪ್ರೇಮ ವನ್ನಾಗಿ ತೋರ್ಪಡಿಸುತ್ತ ನನ್ನನ್ನು ವಂಚಿಸಲು ಅವಳು ನಿರಾಕರಿಸಿದಳು. ಅವಳು ಅತಿ ಪ್ರಾಮಾಣಿಕಳಾಗಿದ್ದಳು, ಅದೇ ಬಂದದ್ದು. ಒಮ್ಮೆ ನಾನು ಅವಳ ಹೃದಯದಲ್ಲಿ ಔದಾರ್ಯವನ್ನು ಹುಟ್ಟು ಹಾಕಲು ಯತ್ನಿಸಿದೆ, ನೆನಪಿದೆಯೇ? ಅವಿವೇಕ ವಿಚಾರ.

ಅವಳು ನನ್ನನ್ನು ಗೌರವಿಸಿದ್ದಳೇ ಅಥವಾ ಇಲ್ಲವೇ ಅನ್ನುವುದನ್ನು ತಿಳಿಯಲು ನಾನು ತುಂಬ ಕುತೂಹಲಿಯಾಗಿದ್ದೇನೆ. ಅವಳು ನನ್ನನ್ನು ತುಚ್ಛೀಕರಿಸುತ್ತಿದ್ದಳೆ ಅಥವಾ ಇಲ್ಲವೇ, ನನಗೆ ತಿಳಿಯದು. ನನ್ನನ್ನು ತುಚ್ಛೀಕರಿಸುತ್ತಿದ್ದಳೆಂದೇನೂ ನಾನು ಭಾವಿಸುವುದಿಲ್ಲ. ಆ ಚಳಿಗಾಲದ ತಿಂಗಳುಗಳಲ್ಲಿ ಅವಳು ನನ್ನನ್ನು ತುಚ್ಛೀ ಕರಿಸುತ್ತಾಳೆ ಎಂಬ ವಿಚಾರ ಒಮ್ಮೆಯೂ ನನಗೆ ಹೊಳೆಯದಿದ್ದುದು ವಿಚಿತ್ರ, ಅಲ್ಲವೇ? ಇದಕ್ಕೆ ವಿರುದ್ಧವಾದ ವಿಚಾರವೇ ಸರಿಯೆಂದು ನಾನು ಸಂಪೂರ್ಣವಾಗಿ ಮನಗಂಡಿದ್ದೆ – ಅವಳು ನನ್ನತ್ತ ಆ ನಿಷ್ಠುರ ಆಶ್ಚರ್ಯದಿಂದ ನೋಡಿದ ಘಳಿಗೆ ಯವರೆಗೂ. ಅದು ನಿಷ್ಠುರವಾಗಿತ್ತು, ನಿಜಕ್ಕೂ. ಆಗಲೇ ನನಗೆ ಇದ್ದಕ್ಕಿದ್ದಂತೆ ಹೊಳೆದುದು, ಅವಳು ನನ್ನನ್ನು ತುಚ್ಛೀಕರಿಸುತ್ತಾಳೆಂದು. ನಾನದನ್ನು ಅರ್ಥ ಮಾಡಿಕೊಂಡೆ, ಬದಲಿಸಲಾಗದಂತೆ, ಸದಾ ಕಾಲಕ್ಕೂ, ಸದಾ ಕಾಲಕ್ಕೂ. ಆಹ್, ಅವಳು ನನ್ನನ್ನು ತುಚ್ಛೀಕರಿಸಿದರೇನಂತೆ, ಬದುಕಿದ್ದಿದ್ದರೆ ಅವಳ ಉಳಿದ ಜೀವಮಾನ ಪೂರ್ತಿಯೂ ತುಚ್ಛೀಕರಿಸುತ್ತಿದ್ದರೇನಂತೆ! ಸ್ವಲ್ಪ ಕಾಲದ ಹಿಂದಷ್ಟೆ ಅವಳು

ಓಡಾಡುತ್ತಿದ್ದಳು, ಮಾತನಾಡುತ್ತಿದ್ದಳು. ಕಿಟಕಿಯಿಂದ ಹೊರಕ್ಕೆ ಹೇಗೆ ಹಾರಿದಳು, ನನಗೆ ಸ್ವಲ್ಪವೂ ಅರ್ಥವಾಗುತ್ತಿಲ್ಲ. ಐದು ನಿಮಿಷದ ಹಿಂದಾದರೂ ಹೀಗಾಗುವುದೆಂದು ಊಹಿಸಲು ನನಗೆ ಸಾಧ್ಯವಿದ್ದಿತೆ? ನಾನು ಲುಕೇರ್ರ್ಯಳನ್ನು ಕರೆದೆ. ಈಗ ಅವಳನ್ನು ಹೋಗಲು ಎಂದಿಗೂ ಬಿಡುವುದಿಲ್ಲ. ಯಾಕಂತೆ ಬಿಡಬೇಕು!

ಓಹ್, ಅಷ್ಟೆಲ್ಲ ವಿರಸ ಉಂಟಾಗಿದ್ದರೂ ನಾವು ಒಂದು ಸಮಾಧಾನಕ್ಕೆ ಬರಬಹುದಿತ್ತು. ಚಳಿಗಾಲದಲ್ಲಿ ನಾವು ಪರಸ್ಪರರಿಂದ ಬಹುದೂರ ಸರಿದಿದ್ದೆವು ನಿಜ, ಆದರೆ ಖಂಡಿತ ಮತ್ತೆ ಅಭ್ಯಾಸ ಮಾಡಿಕೊಳ್ಳಬಹುದಿತ್ತು, ಅಲ್ಲವೇ? ನಾವು ಮಿತ್ರರಾಗಿ ಹೊಸ ಬಾಳು ಪ್ರಾರಂಭಿಸಲು ಏಕೆ ಸಾಧ್ಯವಿರಲಿಲ್ಲ? ನಾನು ಉದಾತ್ತನಾಗಿದ್ದೆ, ಅವಳೂ ಹಾಗೆಯೇ ಇದ್ದಳು – ನೋಡಿದಿರಾ ನಮ್ಮ ನಡುವೆ ಒಂದು ಕೊಂಡಿ! ಇನ್ನೂ ಕೆಲವು ಮಾತುಗಳು, ಎರಡು ದಿನ, ಹೆಚ್ಚಿಗಿಲ್ಲ, ಅವಳು ಎಲ್ಲವನ್ನೂ ಅರ್ಥಮಾಡಿಕೊಳ್ಳಲಿದ್ದಳು.

ದುಃಖದ ಸಂಗತಿಯೆಂದರೆ, ಅದು ಕೇವಲ ಆಕಸ್ಮಿಕವಾಗಿದ್ದಿತು – ಒಂದು ಸಾಮಾನ್ಯವಾದ, ಕ್ರೂರವಾದ, ಅರ್ಥರಹಿತವಾದ ಆಕಸ್ಮಿಕ. ಅದೇ ದುಃಖದ ಸಂಗತಿ! ಐದು ನಿಮಿಷ, ನಾನು ಐದು ನಿಮಿಷವಷ್ಟೆ ತಡವಾಗಿದ್ದೆ! ಐದು ನಿಮಿಷ ಮುಂಚೆ ಬಂದಿದ್ದಿದ್ದರೆ, ಆ ಘಳಿಗೆ ಚಲಿಸುವ ಮೋಡದಂತೆ ಸರಿದು ಹೋಗುತ್ತಿದ್ದಿತು, ಅವಳ ತಲೆಯನ್ನು ಮತ್ತೆಂದೂ ಪ್ರವೇಶಿಸುತ್ತಿರಲಿಲ್ಲ. ಅವಳು ಎಲ್ಲವನ್ನೂ ಅರ್ಥಮಾಡಿಕೊಳ್ಳುವುದರೊಂದಿಗೆ ಅದೆಲ್ಲ ಕೊನೆಗಾಣುತ್ತಿದ್ದಿತು. ಆದರೆ ಈಗ, ಮತ್ತೆ, ಖಾಲಿ ಕೋಣೆಗಳು, ಹಾಗೂ ನಾನು ಒಬ್ಬಂಟಿಗನಾಗಿ. ಅಲ್ಲಿ ನೋಡಿ. ಗಡಿಯಾರದ ಆ ಲೋಲಕ. ಯಾವುದರ ಬಗೆಗೂ ಎಷ್ಟು ಮಾತ್ರವೂ ಕಾಳಜಿ ಅಥವಾ ಕರುಣೆ ಇಲ್ಲದಂತೆ ಅತ್ತಿಂದಿತ್ತ ತೂಗಾಡುತ್ತ ಟಿಕ್-ಟಿಕ್ ಅನ್ನುತ್ತ ಹೋಗುತ್ತಿದೆ. ಬೇರೆ ಯಾರೂ ಇಲ್ಲ – ಅದೇ ದುಃಖ!

ನಾನು ತಿರುಗಾಡುತ್ತಿದ್ದೇನೆ, ಅತ್ತಿಂದಿತ್ತ ಎಲ್ಲ ಕಡೆಯೂ ತಿರುಗಾಡುತ್ತಿದ್ದೇನೆ. ನೀವು ಹೇಳಿಕೊಡಬೇಕಾದುದೇ ಇಲ್ಲ, ಅದು ನನಗೇ ಗೊತ್ತು. ನಾನು ಆಕಸ್ಮಿಕವನ್ನು, ಐದು ನಿಮಿಷ ತಡವಾದುದನ್ನು, ದೂರುತ್ತಿರುವುದು ವಿಚಿತ್ರವೆಂದು ನೀವು ಭಾವಿಸುತ್ತೀರಿ. ಆದರೆ ಅದು ಸ್ವಯಂಸ್ಪಷ್ಟ. ಇದನ್ನು ಪರಿಗಣಿಸಿ: ಅವಳು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆಂದು ಒಂದು ಚೀಟಿಯನ್ನೂ ಬರೆದಿಟ್ಟು ಹೋಗಿಲ್ಲ, ಎಲ್ಲರೂ ಮಾಡುವಂತೆ. ಲುಕೇರ್ರ್ಯಳ ಮೇಲೆ ಸಂಶಯ ಬರಬಹುದೆಂದು ಅವಳಿಗೆ ಖಂಡಿತ ಹೊಳೆದಿರುತ್ತಿದ್ದಿತು. "ನಿನೊಬ್ಬಳೆ ಅವಳ ಬಳಿ ಇದ್ದುದು, ನೀನು ಹೋಗಿ ಅವಳನ್ನು ಕಿಟಕಿಯಿಂದ ಆಚೆಗೆ ತಳ್ಳಿದ್ದೀಯ" ಅನ್ನುವಂತೆ. ನಿರಪರಾಧಿಯಾಗಿದ್ದರೂ ಅವರು ಅವಳನ್ನು ಕೋರ್ಟಿಗೆ ಎಳೆಯುತ್ತಿದ್ದರು, ಅಂಗಳದ ಆ ನಾಲ್ವರು ತಾವು ತಮ್ಮ ಪಾರ್ಶ್ವ ಕಿಟಕಿಗಳ ಮೂಲಕವೋ ಕೆಳಗಿನಿಂದಲೋ ಕಣ್ಣಾರೆ ಕಂಡುದನ್ನು

ಹೇಳದೆ ಹೋಗಿದ್ದರೆ. ಅವಳು ದೇವರ ಚಿತ್ರಫಲಕವನ್ನು ಕೈಯಲ್ಲಿ ಹಿಡಿದು ಕೊಂಡು ಕಿಟಕಿಯ ಹೊಸ್ತಿಲ ಮೇಲೆ ನಿಂತು ಕೆಳಕ್ಕೆ ಹಾರಿದುದನ್ನು ಸ್ವತಃ ಕಂಡಿದ್ದರು. ಆದರೆ ಅದೂ ಕೇವಲ ಆಕಸ್ಮಿಕವೇ, ನೋಡಿ, ಆ ಜನ ಅಲ್ಲಿದ್ದುದು, ತಾವೇ ಸ್ವತಃ ಕಂಡುದು. ಇಲ್ಲ, ಅದು ಕೇವಲ ಒಂದು ಘಳಿಗೆಯ ನಿರ್ಧಾರವಾಗಿದ್ದಿತು, ವಿವರಿಸಲಾಗದಂತಹ ಒಂದು ಘಳಿಗೆಯ ನಿರ್ಧಾರವಾಗಿದ್ದಿತು. ಮನಸ್ಸಿನ ಆವೇಗ ಹಾಗೂ ಕಲ್ಪನೆ! ಅವಳು ತುಂಬ ಹೊತ್ತು ಕುಳಿತು ಪ್ರಾರ್ಥನೆ ಮಾಡುತ್ತಿದ್ದರೇನಂತೆ ಮಹಾ? ಸಾಯುವುದಕ್ಕೆ ಮುನ್ನ ಮಾಡುತ್ತಿದ್ದ ಪ್ರಾರ್ಥನೆ ಎಂದೇನೂ ಅದು ಅವಶ್ಯಕವಾಗಿಯೇ ಅರ್ಥ ನೀಡುವುದಿಲ್ಲ. ಈ ಇಡೀ ಘಟನೆ ಜರುಗುವುದಕ್ಕೆ ಹತ್ತು ನಿಮಿಷಗಳಿಗಿಂತ ಹೆಚ್ಚು ಕಾಲವೇನೂ ಹಿಡಿದಿರಲಾರದು. ಅವಳು ಗೋಡೆಗೆ ಒರಗಿನಿಂತು ಕೈ ಮೇಲೆ ತಲೆ ಆಸರಿಸಿ ಹಿಡಿದು ಮುಗುಳು ನಕ್ಕ ಆ ಒಂದು ನಿಮಿಷದೊಳಗೇ ಅವಳು ಆತ್ಮಹತ್ಯೆಯ ನಿರ್ಧಾರ ಕೈಕೊಂಡಿರಬಹುದು. ಆ ವಿಚಾರ ಅವಳ ಮನಸ್ಸಿನಲ್ಲಿ ಮಿಂಚಿನಂತೆ ಹೊಳೆದಿರಬೇಕು, ಮನಸ್ಸಿನಲ್ಲಿ ಬಿರುಗಾಳಿ ಎಬ್ಬಿಸಿರಬೇಕು, ಅವಳು ಅದನ್ನು ಸಹಿಸಿಕೊಂಡಿರಲಾರದೆ ಹೋಗಿರಬೇಕು.

ಅದೊಂದು ಆಕಸ್ಮಿಕ ಘಟನೆಯಾಗಿತ್ತು. ನೀವು ಏನೇ ಹೇಳಿ, ಅದು ಸುಸ್ಪಷ್ಟ. ನನ್ನ ಜೊತೆ ಇನ್ನೂ ಜೀವನ ನಡೆಸಬಹುದಿತ್ತು. ಅವಳ ರಕ್ತಹೀನತೆ ಅದಕ್ಕೆ ಕಾರಣವಿರಬಹುದೇ? ಬಹುಶಃ ಅವಳ ಕೇವಲ ರಕ್ತಹೀನತೆಯಾಗಿದ್ದಿತೆ, ಕೇವಲ ಜೀವ ಶಕ್ತಿಯ ದೌರ್ಬಲ್ಯವಾಗಿದ್ದಿತೆ? ಆ ಚಳಿಗಾಲ ಅವಳನ್ನು ಬಳಲಿಸಿ ಬೆಂಡು ಮಾಡಿತ್ತು. ಅದು ನಿಜ...

ನಾನು ತುಂಬ ತಡ ಮಾಡಿದೆ!!!

ಶವದಾನಿಯಲ್ಲಿ ಅವಳು ಎಷ್ಟು ಸಣ್ಣದಾಗಿ ತೆಳುವಾಗಿ ಕಾಣಿಸುತ್ತಾಳೆ, ಅವಳ ಮೂಗು ಎಷ್ಟು ಚೂಪಾಗಿದೆ! ಅವಳ ರೆಪ್ಪೆಗೂದಲುಗಳು ಅವಳ ಕೆನ್ನೆಗಳ ಮೇಲಿನ ಸಣ್ಣ ಬಾಣಗಳಂತಿವೆ. ಅವಳು ಬಿದ್ದಿರುವ ರೀತಿಯೋ – ಏನೂ ಮುರಿದಿಲ್ಲ, ಏನೂ ಜಜ್ಜಿ ಹೋಗಿಲ್ಲ. ಆ ಒಂದು "ಬೊಗಸೆಯಷ್ಟು ರಕ್ತ" ಅಷ್ಟೆ. ಅಂದರೆ ಒಂದು ಚಮಚದಷ್ಟು. ಆಂತರಿಕ ರಕ್ತ ಸ್ರಾವ. ಒಂದು ವಿಚಿತ್ರ ಯೋಚನೆ ಬರುತ್ತಿದೆ – ಇವಳನ್ನು ಸಮಾಧಿ ಮಾಡದೆ ಇದ್ದರೆ ಹೇಗೆ? ಏಕೆಂದರೆ, ಅವಳನ್ನು ಕರೆದುಕೊಂಡು ಹೋಗಿಬಿಟ್ಟರೆ... ಆಗ... ಓಹ್, ಇಲ್ಲ, ಅವಳನ್ನು ಕರೆದುಕೊಂಡು ಹೋಗುವುದಕ್ಕೆ ಬಿಡುವುದು ಸಾಧ್ಯವಿಲ್ಲ! ಅವಳನ್ನು ಕರೆದುಕೊಂಡು ಹೋಗಲೇಬೇಕು, ಎನ್ನುವುದನ್ನು ನಾನು ಮನಗಾಣುತ್ತೇನೆನ್ನಿ. ನಾನು ಹುಚ್ಚನೂ ಅಲ್ಲ, ಉನ್ಮತ್ತನಾಗಿ ಮಾತನಾಡುತ್ತಲೂ ಇಲ್ಲ. ತದ್ವಿರುದ್ಧವಾಗಿ, ನನ್ನ ವಿಚಾರಶಕ್ತಿ ಹಿಂದೆಂದೂ ಇಷ್ಟು ನಿಚ್ಚಳವಾಗಿದ್ದುದಿಲ್ಲ. ಆದರೆ ಅದು ಹೇಗೆ ಸಾಧ್ಯ? ಮತ್ತೆ ಮನೆಯಲ್ಲಿ ಯಾರೂ ಇರುವುದಿಲ್ಲ; ಮತ್ತೆ ಆ ಎರಡು ಕೋಣೆಗಳು, ಮತ್ತೆ


ನಾನು ಒಬ್ಬನೇ ಒತ್ತೆಯ ಅಂಗಡಿಯಲ್ಲಿ! ನಾನು ಉನ್ಮತ್ತನಾಗಿ ಮಾತನಾಡುತ್ತಿದ್ದೇನೆ, ಉನ್ಮತ್ತನಾಗಿ ಮಾತನಾಡುತ್ತಿದ್ದೇನೆ, ಇದು ಉನ್ಮಾದ, ನಿಜಕ್ಕೂ! ನಾನು ಅವಳನ್ನು ತುಂಬ ಸಂಕಟಪಡುವಂತೆ ಮಾಡಿದೆ, ಅದೇ ಕಾರಣ.

ಈಗ ನಿಮ್ಮ ಕಾನೂನುಗಳಿಂದ ನನಗೇನು? ನಿಮ್ಮ ಆಚಾರವ್ಯವಹಾರಗಳು, ನಿಮ್ಮ ನೀತಿ ನಿಯಮಗಳು, ನಿಮ್ಮ ಜೀವನ, ನಿಮ್ಮ ರಾಜ್ಯ, ನಿಮ್ಮ ಮತ, ಇವುಗಳಿಂದ ನನಗೇನು ಪ್ರಯೋಜನ? ನಿಮ್ಮ ನ್ಯಾಯಾಧೀಶರು ನನ್ನ ಮೇಲೆ ತೀರ್ಪು ನೀಡಲಿ, ನನ್ನನ್ನು ಕೋರ್ಟಿಗೆ ನಿಮ್ಮ ಸಾರ್ವಜನಿಕ ನ್ಯಾಯಾಲಯಕ್ಕೆ ಕರೆದೊಯ್ಯಲಿ. ನಾನು ಎಲ್ಲವನ್ನೂ ಧಿಕ್ಕರಿಸುತ್ತೇನೆಂದು ಹೇಳುತ್ತೇನೆ. ನ್ಯಾಯಾಧೀಶರು ಕೂಗಿ ಹೇಳುತ್ತಾರೆ: "ನಿಶ್ಶಬ್ದ, ಆಫೀಸರ್!" ನಾನು ಪ್ರತಿಯಾಗಿ ಕೂಗಿ ಹೇಳುತ್ತೇನೆ: "ನನ್ನನ್ನು ವಿಧೇಯನಾಗಿರುವಂತೆ ಮಾಡಲು ನಿಮಗೆ ಏನು ಅಧಿಕಾರ? ವಿಷಣ್ಣ ಮೌಢ್ಯ ನನಗೆ ಅತ್ಯಂತ ಪ್ರೀತಿಪಾತ್ರವಾದುದನ್ನು ಏಕೆ ನಾಶ ಮಾಡಿತು? ಈಗ ನನಗೆ ನಿಮ್ಮ ಕಾನೂನುಗಳಿಂದ ಏನು ಪ್ರಯೋಜನ? ನಾನು ನಿಮ್ಮಿಂದೆಲ್ಲ ದೂರ ಸರಿಯುತ್ತೇನೆ!" ಓಹ್, ನನಗೆ ಎಲ್ಲಾ ಒಂದೇ!

ಅವಳು ಕುರುಡಾಗಿದ್ದಾಳೆ, ಕುರುಡಾಗಿದ್ದಾಳೆ! ಸತ್ತಿದ್ದಾಳೆ. ಕೇಳಲಾರಳು. ನೀನು ವಾಸಿಸಲು ನಿನಗಾಗಿ ಒಂದು ಸ್ವರ್ಗವನ್ನೇ ನಿರ್ಮಿಸಲಿದ್ದೆ, ನಿನಗೆ ತಿಳಿಯದು. ಏಕೆಂದರೆ ನನ್ನ ಹೃದಯದಲ್ಲೇ ಒಂದು ಸ್ವರ್ಗವಿದ್ದಿತು. ನಾನು ಅದರೆಲ್ಲ ವೈಭವವನ್ನೂ ನಿನ್ನ ಮೇಲೆ ಮಳೆಗರೆಯುತ್ತಲಿದ್ದೆ. ನೀನು ನಿನ್ನ ಪ್ರೇಮವನ್ನು ನನಗೆ ಧಾರೆ ಎರೆದುಕೊಡುತ್ತಿರಲಿಲ್ಲ ಎಂದೇ ಇಟ್ಟುಕೊಳ್ಳೋಣ. ಪರವಾಗಿಲ್ಲ, ಅದರಿಂದ ಏನಂತೆ? ಎಲ್ಲವೂ ಹಾಗೆಯೇ ಉಳಿಯುತ್ತಿದ್ದಿತು, ಹಾಗೆಯೇ ಇದ್ದುಕೊಂಡೇ ಮುಂದುವರಿಯುತ್ತಿತ್ತು. ನೀನು ನನ್ನೊಂದಿಗೆ ಒಬ್ಬ ಸ್ನೇಹಿತನೊಂದಿಗೆ ಮಾತನಾಡುವಂತೆ ಮಾತನಾಡುತ್ತಿದ್ದೆ; ನಾವು ನಮ್ಮ ಮಾತುಕತೆಗಳಲ್ಲೇ ಆನಂದಿಸುತ್ತಿದ್ದೆವು, ಒಟ್ಟಿಗೇ ನಗುತ್ತಿದ್ದೆವು, ಪರಸ್ಪರರ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತ ಸಂತೋಷಿಸುತ್ತಿದ್ದೆವು, ಅಷ್ಟೆ. ಹಾಗೆ ಅದು ಇರಲಿದ್ದಿತು. ನೀನು ಬೇರೆ ಯಾರನ್ನೋ ಪ್ರೀತಿಸುವಂತಾಗುವುದಿದ್ದರೂ – ಪರವಾಗಿರಲಿಲ್ಲ, ಪರವಾಗಿರಲಿಲ್ಲ! ನೀನು ಅವನ ಜೊತೆ ನಡೆಯುತ್ತ ನಲಿದಾಡುತ್ತಿದ್ದೆ, ನಾನು ಬೀದಿಯ ಆ ಕಡೆ ನಿಂತು ನಿನ್ನನ್ನೇ ನೋಡುತ್ತ ಸಂತೋಷಿಸುತ್ತಿದ್ದೆ... ಓಹ್, ಏನಾಗಿದ್ದರೂ ಪರವಾಗಿರುತ್ತಿರಲಿಲ್ಲ. ಅವಳು ತನ್ನ ಕಣ್ಣುಗಳನ್ನು ತೆರೆಯುವಂತಾದಲ್ಲಿ, ಒಮ್ಮೆಯಾದರೂ ತೆರೆಯುವಂತಾದಲ್ಲಿ! ಒಂದು ಕ್ಷಣವಷ್ಟೆ, ಕೇವಲ ಒಂದು ಕ್ಷಣ! ಅವಳು ಇಂದು ಬೆಳಿಗ್ಗೆ ನನ್ನ ಮುಂದೆ ನಿಂತು ನನಗೆ ನಿಷ್ಠಾವಂತಳಾದ ಪತ್ನಿಯಾಗಿ ಇರುವುದಾಗಿ ಪ್ರಮಾಣ ಮಾಡಿ ಹೇಳಿದಾಗ ನನ್ನನ್ನು ನೋಡಿದ ರೀತಿಯಲ್ಲೇ ನನ್ನನ್ನು ನೋಡು

ವಂತಾದಲ್ಲಿ ! ಓಹ್, ಆ ಒಂದು ಕ್ಷಣನೋಟದಲ್ಲೇ ಅವಳು ಎಲ್ಲವನ್ನೂ ಅರ್ಥ ಮಾಡಿಕೊಂಡು ಬಿಡುತ್ತಿದ್ದಳು.

ಶೂನ್ಯ ! ಓಹ್, ಪ್ರಕೃತಿ ! ಜನ ಈ ಗ್ರಹದ ಮೇಲೆ ಒಂಟಿಯಾಗಿದ್ದಾರೆ – ಅದೇ ಖೇದಕರವಾದುದು. "ಈ ಹೊಲದಲ್ಲಿ ಯಾರಾದರೂ ಜೀವಂತರಾದವರು ಇದ್ದಾರೆಯೇ !" ಎಂದು ಕೇಳುತ್ತಾನೆ ರಷ್ಯನ್ ಪವಾಡ ಕಥೆಯೊಂದರ ನಾಯಕ ಪಾತ್ರ. ನಾನೇನೂ ಯಾವ ಪವಾಡ ಕಥೆಯ ನಾಯಕನಾಗಿರದಿದ್ದರೂ, ನಾನೂ ಅದೇ ರೀತಿ ಕೇಳುತ್ತೇನೆ, ಆದರೆ ಯಾರೂ ಉತ್ತರ ಕೊಡುವುದೇ ಇಲ್ಲ. ಸೂರ್ಯನು ಈ ಬ್ರಹ್ಮಾಂಡಕ್ಕೆ ಚೇತನ ನೀಡುತ್ತಾನೆಂದು ಹೇಳುತ್ತಾರೆ. ಆದರೆ ಸೂರ್ಯ ಉದಯಿಸಿದ್ದಾನೆ, ಮತ್ತೆ ನೋಡಿ – ಅದು ಸತ್ತಿಲ್ಲವೇ ? ಎಲ್ಲವೂ ಸತ್ತಿದೆ. ಸತ್ತವರು ಎಲ್ಲೆಲ್ಲೂ ಬಿದ್ದಿದ್ದಾರೆ. ಕೇವಲ ಒಬ್ಬಂಟಿಗ ಜನರು – ಸುತ್ತಮುತ್ತ, ಎಲ್ಲ ನೀರವತೆ. ನಾವು ವಾಸಿಸುತ್ತಿರುವುದು ಇಂತಹ ಜಗತ್ತೇ. "ಜನರೇ, ಪರಸ್ಪರ ಪ್ರೀತಿಸಿ" – ಯಾರು ಅದನ್ನು ಹೇಳಿದ್ದು ? ಯಾರ ವೇದವಾಕ್ಯ ಇದು ? ಗಡಿಯಾರದ ಲೋಲಕ ಭಾವಶೂನ್ಯವಾಗಿ, ಭಯಂಕರವಾಗಿ ಕ್ಲಿಕ್‌ಕ್ಲಿಕ್ ಶಬ್ದ ಮಾಡುತ್ತಿದೆ. ರಾತ್ರಿ, ಎರಡು ಗಂಟೆ. ಅವಳ ಪಾದರಕ್ಷೆಗಳು ಅವಳ ಹಾಸಿಗೆಯ ಪಕ್ಕದಲ್ಲೇ ಇವೆ, ಅವಳಿಗಾಗಿ ಕಾಯುತ್ತಿವೆಯೋ ಎಂಬಂತೆ.... ಇಲ್ಲ, ಗಂಭೀರವಾಗಿಯೂ, ನಾಳೆ ಅವಳನ್ನು ಅವರು ಕರೆದೊಯ್ದಾಗ, ನನ್ನ ಗತಿ ಏನು ?



# ವಿಚಿತ್ರ ವ್ಯಕ್ತಿಯೊಬ್ಬನ ಕನಸು

## ಒಂದು ಭ್ರಾಂತ್ಯಾತ್ಮಕ ಕಥೆ

# I

ನಾನೊಬ್ಬ ವಿಚಿತ್ರ ವ್ಯಕ್ತಿ. ನನ್ನನ್ನು ಅವರೀಗ ಹುಚ್ಚ ಎಂದು ಕರೆಯುತ್ತಾರೆ. ನಾನು ಅವರಿಗೆ ಹಿಂದಿನಂತೆಯೇ ವಿಚಿತ್ರವಾಗಿ ಕಾಣಿಸದೆ ಹೋಗಿದ್ದರೆ, ಈ ಹುಚ್ಚ ಎಂಬುದು ಬಡತಿಯೇ ಆಗುತ್ತಿತ್ತು. ಆದರೆ ಈಗ ನಾನಾಗಲೇ ಇವನ್ನೆಲ್ಲ ಮನಸ್ಸಿಗೆ ಹಚ್ಚಿಕೊಳ್ಳುತ್ತಿಲ್ಲ. ಈಗ ನನಗೆ ಅವರೆಲ್ಲರೂ ಪ್ರಿಯರಾದವರೇ, ಅವರು ನನ್ನನ್ನು ಗೇಲಿ ಮಾಡಿಕೊಂಡು ನಗುತ್ತಿದ್ದಾಗಲೂ. ನಿಜಕ್ಕೂ, ನಿರ್ದಿಷ್ಟವಾಗಿ ಆಗ, ಅವರು ನನಗೆ ವಿಶೇಷವಾಗಿ ಪ್ರಿಯರಾದವರು ಆಗಿರುತ್ತಾರೆ. ನಾನೂ ಅವರೊಂದಿಗೇ ನಗಬಹುದಾಗಿತ್ತು, ಅಂದರೆ ನನ್ನನ್ನೇ ಗೇಲಿ ಮಾಡಿಕೊಂಡಲ್ಲ, ನಾನವರನ್ನು ಪ್ರೀತಿಸುತ್ತೇನೆ ಎಂಬ ಕಾರಣದಿಂದ. ಅವರನ್ನು ಗಮನಿಸುತ್ತ ನಾನು ವಿಷಾದಭರಿತನಾಗದಿದ್ದರೆ ನಗುತ್ತೇನೆ. ನನಗೆ ವಿಷಾದವಾಗಲು ಕಾರಣವೆಂದರೆ, ಅವರಿಗೆ ನಿಜ ತಿಳಿಯದು ಆದರೆ ನನಗೆ ತಿಳಿದಿದೆ, ಎಂಬುದು. ಓಹ್, ಒಬ್ಬನೇ ನಿಜವನ್ನು ಅರಿತಿರುವುದು ಎಷ್ಟು ಕಷ್ಟ! ಆದರೆ ಅವರು ಇದನ್ನು ಅರ್ಥಮಾಡಿಕೊಳ್ಳರು! ಇಲ್ಲ, ಅರ್ಥಮಾಡಿಕೊಳ್ಳರು.

ನಾನು ವಿಚಿತ್ರ ವ್ಯಕ್ತಿಯಾಗಿ ಕಾಣಬರುತ್ತಿದ್ದುದು ಹಿಂದೆ ನನಗೆ ಮನನೋಯಿಸುತ್ತಿದ್ದಿತು. ಇಲ್ಲ, ಕಾಣಬರುತ್ತಿದ್ದೆ ಅಂತಲ್ಲ, ಆದರೆ ನಿಜಕ್ಕೂ ಹಾಗೆಯೇ ಇದ್ದೆ. ನಾನು ಯಾವತ್ತೂ ವಿಚಿತ್ರ ವ್ಯಕ್ತಿಯಾಗಿಯೇ ಇದ್ದುಕೊಂಡು ಬಂದಿದ್ದೇನೆ. ಇದನ್ನು ನಾನು ಹುಟ್ಟಿದಾಗಿನಿಂದಲೂ ತಿಳಿದಿರುವೆನೆಂದೇ ನನಗನಿಸುತ್ತದೆ. ನನಗೆ ಏಳು ವರ್ಷವಾಗಿದ್ದಾಗಲೇ ನಾನದನ್ನು ಮನಗಂಡೆನೆಂದು ನನ್ನ ನಂಬಿಕೆ. ನಾನು ಶಾಲೆಗೆ ಹೋದೆ, ಆಮೇಲೆ ವಿಶ್ವವಿದ್ಯಾಲಯಕ್ಕೆ ಹೋದೆ. ಆದರೇನಂತೆ? ನಾನು ಹೆಚ್ಚು ಓದಿದಷ್ಟೂ ನಾನು ವಿಚಿತ್ರ ವ್ಯಕ್ತಿಯಾಗಿದ್ದೇನೆಂಬುದನ್ನು ಅಷ್ಟೂ ಹೆಚ್ಚು ಮನಗಾಣುವಂತಾದೆ. ಆದ್ದರಿಂದ ನನ ಮಟ್ಟಿಗೆ, ವಿಶ್ವವಿದ್ಯಾಲಯದ ವಿಜ್ಞಾನದ ಅಂತಿಮ ಅರ್ಥವೆಲ್ಲ, ನಾನು ಅದನ್ನು ಹೆಚ್ಚು ಹೆಚ್ಚು ಅಭ್ಯಸಿಸಿದಂತೆ, ನಾನು ನಿಜಕ್ಕೂ ವಿಚಿತ್ರ ವ್ಯಕ್ತಿಯಾಗಿದ್ದೆ ಎಂಬುದನ್ನು ಸಾಧಿಸಿ ನನಗೆ ತೋರಿಸಿಕೊಡುವುದಷ್ಟೆ ಆಗಿದ್ದಿತು. ಜೀವನವೂ ನನಗೆ ಅದನ್ನೇ ತಿಳಿಸಿಕೊಟ್ಟಿತು. ಒಂದೊಂದು

ವರ್ಷ ಕಳೆದಂತೆಯೂ ನಾನು ಎಷ್ಟು ವಿಚಿತ್ರ ವ್ಯಕ್ತಿಯಾಗಿದ್ದೆ ಎಂಬ ನನ್ನ ಮನವರಿಕೆಯು ಎಲ್ಲ ರೀತಿಯಲ್ಲೂ ಹೆಚ್ಚು ಹೆಚ್ಚಾಗಿ ಬೆಳೆಯಿತು. ಎಲ್ಲರೂ ಸದಾ ಕಾಲವೂ ನನ್ನನ್ನು ಗೇಲಿ ಮಾಡುತ್ತಿದ್ದರು. ಆದರೆ ನಾನು ವಿಚಿತ್ರ ವ್ಯಕ್ತಿಯಾಗಿದ್ದೆ ಎಂಬುದನ್ನು ಜಗತ್ತಿನಲ್ಲಿ ಬೇರಾರಿಗಿಂತ ಹೆಚ್ಚಾಗಿ ನಾನೇ ಬಹು ಚೆನ್ನಾಗಿ ತಿಳಿದಿದ್ದೆ, ಎಂಬುದನ್ನು ಅವರಲ್ಲಿ ಯಾರೂ ತಿಳಿದೂ ಇರಲಿಲ್ಲ, ಊಹಿಸಿಯೂ ಇರಲಿಲ್ಲ. ಇದನ್ನು ಅವರು ತಿಳಿದಿರಲಿಲ್ಲ ಎಂಬ ಅಂಶವೇ ನನಗೆ ಹೆಚ್ಚು ಮನನೋಯಿಸುತ್ತಿದ್ದುದು. ಆದರೆ ಅದಕ್ಕೆ ತಪ್ಪು ಸಂಪೂರ್ಣವಾಗಿ ನನ್ನದೇ. ನಾನು ಯಾವಾಗಲೂ ಎಷ್ಟು ಹೆಮ್ಮೆಯಿಂದ ಕೂಡಿರುತ್ತಿದ್ದೆನೆಂದರೆ, ಯಾರ ಮುಂದೂ ಎಂದೂ ನಾನು ಈ ವಾಸ್ತವಾಂಶವನ್ನು ಒಪ್ಪಿಕೊಳ್ಳಲು ಬಯಸುತ್ತಿರಲಿಲ್ಲ. ವರ್ಷಗಳುರುಳಿದಂತೆ ನನ್ನ ಹೆಮ್ಮೆಯೂ ನನ್ನಲ್ಲಿ ಹೆಚ್ಚಾಗುತ್ತ ಹೋಯಿತು. ನಾನು ವಿಚಿತ್ರ ವ್ಯಕ್ತಿಯಾಗಿದ್ದೆನೆಂದು ಯಾರ ಮುಂದಾದರೂ ಒಪ್ಪಿಕೊಂಡುಬಿಟ್ಟಿದ್ದರೆ ಅಂದೇ ರಾತ್ರಿ ನಾನು ನನ್ನ ತಲೆಗೆ ಗುಂಡಿಟ್ಟುಕೊಳ್ಳುತ್ತಿದ್ದೆನೆಂದೇ ನನ್ನ ನಂಬಿಕೆ. ಈ ತಿಳಿವಳಿಕೆಯನ್ನು ನನ್ನಲ್ಲೇ ಇಟ್ಟುಕೊಳ್ಳಲಾಗದೇ ಯಾವುದೇ ದುರ್ಬಲ ಘಳಿಗೆಯಲ್ಲಿ ನನ್ನ ಸಂಗಾತಿಗಳಿಗೆ ಎಲ್ಲಿ ಅದನ್ನು ತಿಳಿಸಿಬಿಡುತ್ತೇನೋ ಎಂಬ ಅಂಜಿಕೆಯಿಂದ ನನ್ನ ಕಿಶೋರಾವಸ್ಥೆಯಲ್ಲಿ ನಾನು ಎಂತಹ ಚಿತ್ರಹಿಂಸೆ ಪಡುತ್ತಿದ್ದೆ! ಯುವಕನಾಗಿ ಬೆಳೆದಾಗ ನಾನು ವರ್ಷಗಳುರುಳಿದಂತೆ ನನ್ನ ಈ ಭೀಕರ ನ್ಯೂನತೆಯ ಬಗೆಗೆ ಹೆಚ್ಚು ಹೆಚ್ಚು ತಿಳಿಯುವಂತಾದೆ. ಆದಾಗ್ಯೂ ಯಾವ ಕಾರಣಕ್ಕೋ ನಾನು ಸ್ವಲ್ಪ ಶಾಂತಿಯಿಂದಲೇ ಇದ್ದೆ. ಹೌದು, ಯಾವ ಕಾರಣಕ್ಕೋ, ಏಕೆಂದರೆ ಇದುವರೆವಿಗೂ ನಾನದಕ್ಕೆ ಸ್ಪಷ್ಟ ಕಾರಣ ತಿಳಿಯಲು ಅಸಮರ್ಥನಾಗಿದ್ದೇನೆ. ಬಹುಶಃ ನನಗೆ ಎಲ್ಲದಕ್ಕಿಂತ ಅನಂತವಾಗಿ ಮೇಲಿದ್ದ ಯಾವುದೋ ವಿಷಯದ ಬಗೆಗೆ ನನ್ನ ಆತ್ಮದಲ್ಲಿ ಹೆಚ್ಚು ಹೆಚ್ಚಾಗಿ ಕೂಡಿಕೊಳ್ಳುತ್ತಿದ್ದ ಹತಾಶೆಯ ವಿಷಣ್ಣತೆಯೇ ಅದಕ್ಕೆ ಕಾರಣವಾಗಿರಬಹುದು. ಈ ಜಗತ್ತಿನಲ್ಲಿ ಎಲ್ಲೆಡೆಯೂ ಎಲ್ಲಾ ಒಂದೇ ಎಂಬ ನಂಬಿಕೆ ನನ್ನಲ್ಲಿ ಹೆಚ್ಚು ಹೆಚ್ಚಾಗಿ ಬೆಳೆಯುತ್ತಿದ್ದುದೇ ಆ ಯಾವುದೋ ವಿಷಯವಾಗಿದ್ದಿತು. ಇದು ಹೀಗೆಂದು ನಾನು ಬಹಳ ಹಿಂದೆಯೇ ಊಹಿಸತೊಡಗಿದ್ದೆ. ಆದರೆ ಇದ್ದಕ್ಕಿದ್ದಂತೆ ಕಳೆದ ವರ್ಷ ಒಂದು ದಿನ ನನಗೆ ಇದರ ಬಗೆಗೆ ದೃಢ ಮನವರಿಕೆಯಾಯಿತು. ಜಗತ್ತು ಅಸ್ತಿತ್ವದಲ್ಲಿರದೆ ಇದ್ದರೂ, ಎಲ್ಲೂ ಏನೂ ಇರದೇ ಇದ್ದರೂ, ನನಗೆ ಎಲ್ಲಾ ಒಂದೇ, ಎಂದು ನಾನು ಇದ್ದಕ್ಕಿದ್ದಂತೆ ಮನಗಂಡೆ. ನನಗಿಂತ ಹಿಂದೆ ಏನೂ ಇರಲಿಲ್ಲ ಎಂದು ನಾನು ನನ್ನೆಲ್ಲ ಇರವಿನೊಂದಿಗೆ ತಿಳಿಯಲು ಹಾಗೂ ಭಾವಿಸಲು ಪ್ರಾರಂಭಿಸಿದೆ. ಮೊದಲು ನನಗೆ ನನಗಿಂತ ಹಿಂದೆ ತುಂಬ ಏನೋ ಇದ್ದಿತು ಎಂದು ತೋರಿತು. ಆದರೆ ಅನಂತರ, ನನಗಿಂತ ಹಿಂದೆ ಏನೂ ಇರಲಿಲ್ಲ, ನನಗೆ ಹಾಗೆಂದು ಯಾವ ಕಾರ

ಣಕ್ಕೋ ತೋರಿತಷ್ಟೆ, ಎಂದು ನಾನು ಮನಗಂಡೆ. ಹಿಂದಷ್ಟೆ ಅಲ್ಲ ಮುಂದೆಯೂ, ಯಾವತ್ತೂ ಏನೂ ಇರುವುದಿಲ್ಲ, ಎಂದು ನಾನು ಕ್ರಮೇಣ ಮನಗಂಡೆ. ಆಗಲೇ ನಾನು ಇದ್ದಕ್ಕಿದ್ದಂತೆ ಜನರ ವಿಷಯದಲ್ಲಿ ಕೋಪಗೊಳ್ಳುತ್ತಿದ್ದುದನ್ನು ನಿಲ್ಲಿಸಿ ದುದು. ನಾನು ಅವರನ್ನು ಇನ್ನೆಷ್ಟು ಮಾತ್ರವೂ ಗಮನಿಸದಾದೆನೆನ್ನಿ. ಇದು ಅತ್ಯಂತ ಸಣ್ಣಪುಟ್ಟ ವಿಷಯಗಳಲ್ಲೂ ಕಾಣಿಸಿಕೊಂಡಿತು. ಉದಾಹರಣೆಗೆ, ಬೀದಿಯಲ್ಲಿ ಹೋಗುತ್ತಿದ್ದಂತೆ ನಾನು ಜನರಿಗೆ ಡಿಕ್ಕಿ ಹೊಡೆಯುತ್ತಿದ್ದೆ. ಯಾವುದೋ ಆಲೋ ಚನೆಯಲ್ಲಿ ಮೈಮರೆತು ಹಾಗೆ ಮಾಡುತ್ತಿದ್ದೆನೆಂದೇನೂ ಅಲ್ಲ. ಏಕೆಂದರೆ ಆಲೋ ಚನೆ ಮಾಡಲು ಏನಿದ್ದಿತು? ನಾನು ಆ ಹೊತ್ತಿಗೆ ಆಲೋಚನೆ ಮಾಡುವುದನ್ನೇ ಸಂಪೂರ್ಣವಾಗಿ ಬಿಟ್ಟುಕೊಟ್ಟಿದ್ದೆ. ನನಗೆ ಎಲ್ಲಾ ಒಂದೇ ಆಗಿತ್ತು. ಯಾವುದೇ ಸಮಸ್ಯೆಗಳನ್ನೂ ನಾನು ಪರಿಹರಿಸಲಿಲ್ಲ. ಇಲ್ಲ, ಒಂದನ್ನೂ ಪರಿಹರಿಸಲಿಲ್ಲ. ಅವೂ ಎಷ್ಟೊಂದು ಇದ್ದವು. ಆದರೆ ನನಗೆ ಈಗ ಎಲ್ಲಾ ಒಂದೇ ಆಗಿತ್ತು. ಎಲ್ಲ ಸಮಸ್ಯೆಗಳೂ ಹಿನ್ನೆಲೆಗೆ ಸರಿದವು.

ನಾನು ನಿಜವನ್ನು ಅರಿತುದು ತುಂಬ ಕಾಲದನಂತರ. ಕಳೆದ ನವಂಬರ್‌ನಲ್ಲಿ. ಸರಿಯಾಗಿ ಹೇಳುವುದಾದರೆ ನವಂಬರ್ 3ರಂದು ನಾನು ನಿಜವನ್ನು ಅರಿತೆ. ಅಂದಿನಿಂದ ನಾನು ನನ್ನ ಜೀವನದ ಪ್ರತಿಯೊಂದು ಘಳಿಗೆಯನ್ನೂ ನೆನಪಿನಲ್ಲಿ ಟ್ಟಿದ್ದೇನೆ. ಅದು ಜರುಗಿದುದು ಕತ್ತಲೆ ಕವಿದ ರಾತ್ರಿಯಲ್ಲಿ. ಅಂದು ಹಿಂದೆಂದೂ ಇರದಿದ್ದಷ್ಟು ಕಗ್ಗತ್ತಲೆ ಮುಸುಕಿತ್ತು. ನಾನು ಮನೆಗೆ ಹಿಂದಿರುಗುತ್ತಿದ್ದೆ. ಸಮಯ ಹತ್ತು ಗಂಟೆಯಾಗಿತ್ತು. ಯಾವ ಸಮಯವೂ ಆ ಸಮಯದಷ್ಟು ವಿಷಣ್ಣ ವಾಗಿರಲಾರದು ಎಂದು ನಾನು ಯೋಚಿಸುತ್ತಿದ್ದುದು ನನಗೆ ಜ್ಞಾಪಕ. ಭೌತಿಕ ವಾಗಿಯೂ ಅದು ಹಾಗೆಯೇ ಇದ್ದಿತು. ಇಡೀ ದಿನ ಮಳೆ ಹುಯ್ಯುತ್ತಿತ್ತು. ಅತ್ಯಂತ ಶೀತದಿಂದ ಕೂಡಿದ, ಅತ್ಯಂತ ವಿಷಣ್ಣಗೊಳಿಸುವಂಥ ಮಳೆ. ಅದು ಅಶುಭ ಸೂಚಕವಾದ ಮಳೆಯೂ ಆಗಿತ್ತು. ನನಗೆ ಜ್ಞಾಪಕವಿರುವಂತೆ, ಸ್ಪಷ್ಟವಾಗಿಯೇ ಜನರಿಗೆ ಶತ್ರುವಾದಂಥ ಮಳೆಯಾಗಿದ್ದಿತು. ಹತ್ತು ಗಂಟೆಯಾದ ಮೇಲೆ ಮಳೆ ಇದ್ದಕ್ಕಿದ್ದಂತೆ ನಿಂತಿತು. ಭೀಕರವಾದ ಆರ್ದ್ರವತೆ ಉಂಟಾಯಿತು. ಅದು ಮಳೆ ಬರುತ್ತಿದ್ದಾಗ ಇದ್ದುದಕ್ಕಿಂತ ಹೆಚ್ಚು ಚಳಿಯಿಂದಲೂ ತೇವದಿಂದಲೂ ಕೂಡಿ ದ್ದಿತು. ಎಲ್ಲ ವಸ್ತುಗಳಿಂದಲೂ, ದಾರಿಗೆ ಹಾಸಿದ್ದ ಪ್ರತಿಯೊಂದು ಕಲ್ಲುಗುಂಡಿ ನಿಂದಲೂ, ಸಂದಿಗೊಂದಿಗಳ ಪ್ರತಿಯೊಂದು ಕಗ್ಗತ್ತಲ ಮೂಲೆಗಳಿಂದಲೂ ಆವಿ ಎದ್ದು ಬರುತ್ತಿತ್ತು. ಗ್ಯಾಸ್‌ಲೈಟುಗಳೆಲ್ಲ ಆರಿಹೋದರೇ ಎಷ್ಟೋ ಚೆನ್ನಾ ಗಿರುತ್ತದೆ ಎಂದು ನಾನು ಇದ್ದಕ್ಕಿದ್ದಂತೆ ಭಾವಿಸಿಕೊಂಡೆ. ಏಕೆಂದರೆ, ಇವೆಲ್ಲವನ್ನೂ ಎತ್ತಿತೋರಿಸುತ್ತ ಗ್ಯಾಸ್‌ಲೈಟು ನಮ್ಮನ್ನು ಹೆಚ್ಚು ವಿಷಣ್ಣರನ್ನಾಗಿ ಮಾಡು ತ್ತಿದ್ದಿತು. ಅಂದು ಹಗಲಿನಲ್ಲಿ ನಾನು ಸರಿಯಾಗಿ ಊಟ ಮಾಡಿರಲಿಲ್ಲ. ಸಂಜೆಯಾ

ಗುತ್ತಿದ್ದಂತೆಯೇ ನನ್ನ ಪರಿಚಿತ ಎಂಜಿನಿಯರ್ ಒಬ್ಬರ ಮನೆಗೆ ಹೊರಟು ಹೋಗಿದ್ದೆ. ಅಲ್ಲಿ ಅವರ ಇನ್ನಿಬ್ಬರು ಮಿತ್ರರೂ ಇದ್ದರು. ನಾನು ಇಡೀ ಕಾಲ ಮೌನದಿಂದ ಕುಳಿತಿದ್ದೆ. ಅದರಿಂದ ಅವರಿಗೆ ಬೇಸರ ತಂದೆನೆಂದೇ ಕಾಣುತ್ತೆ. ಅವರು ಯಾವುದೋ ವಿಷಯದ ಬಗೆಗೆ ಅತ್ಯುತ್ಸಾಹದಿಂದ ಮಾತನಾಡುತ್ತಿದ್ದರು. ಇದ್ದಕ್ಕಿದ್ದಂತೆ ಅವರ ಸಂಭಾಷಣೆ ಕಾವೇರಿತು. ಆದರೆ ಅವರಿಗೆ ಅದೆಲ್ಲ ಒಂದೇ ಆಗಿದ್ದಿತೆಂಬುದನ್ನು ನಾನು ಕಂಡೆ. ಸುಮ್ಮನೆ ಹಾಗೇ ಕೋಪಗೊಂಡಿದ್ದರಷ್ಟೆ. ನಾನು ಅದನ್ನು ಕೂಡಲೇ ಹೇಳಿಯೇ ಬಿಟ್ಟೆ: "ಮಹನೀಯರೇ, ನಾನು ಹೇಳುತ್ತೇನೆ ಕೇಳಿ, ನೀವು ಇಷ್ಟೆಲ್ಲ ಕೋಪಗೊಂಡರೂ, ನಿಮಗೆ ಎಲ್ಲಾ ಒಂದೇ." ನನ್ನ ಮಾತು ಕೇಳಿ ಅವರೇನೂ ಕೋಪಗೊಳ್ಳಲಿಲ್ಲ. ಸುಮ್ಮನೆ ನನ್ನನ್ನು ನೋಡುತ್ತ ನಕ್ಕರು. ಯಾಕೆಂದರೆ ನಾನು ಆ ಮಾತನ್ನು ಯಾವ ಕುಟುಕೂ ಇಲ್ಲದೆ ಸುಮ್ಮನೆ ಹಾಗೇ ಹೇಳಿದ್ದೆ. ಏಕೆಂದರೆ ನನಗೆ ಎಲ್ಲಾ ಒಂದೇ ಆಗಿತ್ತು. ನನಗೆ ಎಲ್ಲಾ ಒಂದೇ ಆಗಿತ್ತೆಂಬುದನ್ನು ಅವರೂ ಕಂಡುಕೊಂಡರು. ಅದು ಅವರನ್ನು ನಗುವಂತೆ ಮಾಡಿತ್ತು.

ಮನೆಗೆ ಹಿಂದಿರುಗುತ್ತ ನಾನು ಗ್ಯಾಸ್‌ಲೈಟುಗಳ ಬಗೆಗೆ ಯೋಚಿಸುತ್ತ ಮೇಲಕ್ಕೆ ಕತ್ತೆತ್ತಿ ಆಕಾಶದತ್ತ ನೋಡಿದೆ. ಆಕಾಶ ಭೀಕರವಾಗಿ ಕಪ್ಪಾಗಿತ್ತು. ಆದರೆ ನಾನು ಛಿದ್ರಛಿದ್ರವಾದ ಮೋಡಗಳನ್ನೂ ಅವುಗಳ ನಡುವಿನ ಅಗಾಧವಾದ ಕಪ್ಪು ಹಳ್ಳಪ್ರದೇಶಗಳನ್ನೂ ಸ್ಪಷ್ಟವಾಗಿ ಕಾಣಬಲ್ಲವನಿದ್ದೆ. ಆ ಹಳ್ಳಪ್ರದೇಶಗಳೊಂದರಲ್ಲಿ ಒಂದು ಸಣ್ಣ ನಕ್ಷತ್ರ ಮಿನುಗುತ್ತಿರುವುದನ್ನು ನಾನು ಹಠಾತ್ತನೆ ಗಮನಿಸಿದೆ, ಅದನ್ನೇ ದಿಟ್ಟಿಸಿ ನೋಡಲು ನಿಂತೆ. ಏಕೆಂದರೆ, ಆ ಪುಟ್ಟ ನಕ್ಷತ್ರ ನನಗೊಂದು ವಿಚಾರ ತಿಳಿಸಿತು, ಅಂದು ರಾತ್ರಿ ನಾನು ಆತ್ಮಹತ್ಯೆ ಮಾಡಿಕೊಳ್ಳಲಿದ್ದೆ ಎಂದು ತಿಳಿಸಿತ್ತು. ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ನಾನು ಎರಡು ತಿಂಗಳ ಹಿಂದೆಯೇ ನಿರ್ಧರಿಸಿದ್ದೆ. ಬಡವನಾಗಿದ್ದರೂ ಒಂದು ಸೊಗಸಾದ ರಿವಾಲ್ವರ್ ಕೊಂಡಿದ್ದೆ. ಅದೇ ದಿನ ಅದಕ್ಕೆ ಗುಂಡುಗಳನ್ನೂ ತುಂಬಿದ್ದೆ. ಆಗಲೇ ಎರಡು ತಿಂಗಳುಗಳು ಕಳೆದಿವೆ. ಆದರೆ ರಿವಾಲ್ವರ್ ನನ್ನ ಮೇಜಿನ ಡ್ರಾಯರ್‌ನಲ್ಲೇ ಉಳಿದಿದೆ. ನನ್ನ "ಎಲ್ಲಾ ಒಂದೇ" ಮಾನೋಭಾವ ಆಗ ಎಷ್ಟು ಪ್ರಬಲವಾಗಿದ್ದಿತೆಂದರೆ, ನಾನು ಆ ಮನೋಭಾವವು ಸ್ವಲ್ಪ ಕಮ್ಮಿ ಪ್ರಬಲವಾದ ಕಾಲದಲ್ಲಿ ಆ ಕಾರ್ಯ ಈಡೇರಿಸಲು ಅಂತಹ ಘಳಿಗೆಯನ್ನು ಆರಿಸಿಕೊಳ್ಳಲು ಬಯಸಿದ್ದೆ. ಯಾಕೋ, ನನಗೆ ತಿಳಿಯದು. ಹೀಗೆ ಈಗ ಎರಡು ತಿಂಗಳಿಂದಲೂ ಪ್ರತಿ ರಾತ್ರಿಯೂ ನಾನು ಆತ್ಮಹತ್ಯೆ ಮಾಡಿಕೊಳ್ಳುವ ವಿಚಾರವನ್ನು ತಲೆಯಲ್ಲಿಟ್ಟುಕೊಂಡು ಮನೆಗೆ ಹೋಗಿದ್ದೆ. ಆ ಸರಿಯಾದ ಘಳಿಗೆ ಬರುವುದಕ್ಕಾಗಿಯೇ ಕಾಯುತ್ತಿದ್ದೆ. ಈಗ

ಈ ನಕ್ಷತ್ರವು ಆ ವಿಚಾರವನ್ನು ತಿಳಿಸಿತು. ಅದು ಇಂದು ರಾತ್ರಿಯೇ ಆಗ ಬೇಕೆಂದು ನಾನು ನಿರ್ಧಾರ ಮಾಡಿದೆ. ಆ ಪುಟ್ಟ ನಕ್ಷತ್ರ ಏಕೆ ನನಗೆ ಆ ವಿಚಾರ ತಿಳಿಸಿತೋ ನನಗೆ ತಿಳಿಯದು.

ನಾನು ಅಲ್ಲಿ ಆಕಾಶವನ್ನೇ ದಿಟ್ಟಿಸಿ ನೋಡುತ್ತ ನಿಂತಿದ್ದಾಗ ಇದ್ದಕ್ಕಿದ್ದಂತೆ ಈ ಪುಟ್ಟ ಹುಡುಗಿ ನನ್ನ ಬಳಿ ಬಂದು ನನ್ನ ತೋಳನ್ನು ಹಿಡಿದೆಳೆದಳು. ಬೀದಿ ಆಗಲೇ ನಿರ್ಜನವಾಗಿದ್ದಿತು. ಒಬ್ಬ ನರಪಿಳ್ಳೆಯೂ ಹತ್ತಿರದಲ್ಲಿ ಎಲ್ಲೂ ಕಾಣ ಬರುತ್ತಿರಲಿಲ್ಲ. ಸ್ವಲ್ಪ ದೂರದಲ್ಲಿ ಕುದುರೆ ಬಂಡಿಯೊಂದು ನಿಂತಿತ್ತು. ಚಾಲಕ ಅದರಲ್ಲೇ ಮಲಗಿ ಗೊರಕೆ ಹೊಡೆಯುತ್ತಿದ್ದ. ಹುಡುಗಿಗೆ ಸುಮಾರು ಎಂಟು ವಯಸ್ಸಾಗಿರಬೇಕು. ಆ ಚಳಿ ಹವೆಯಲ್ಲಿ ಅವಳು ತೊಟ್ಟಿದ್ದುದೆಲ್ಲ ಒಂದು ಹರಕಲು ಹತ್ತಿ ಬಟ್ಟೆ, ತಲೆಯ ಸುತ್ತ ಒಂದು ಕರ್ಚೀಫು. ಅವಳು ತೋಯ್ದು ತೊಪ್ಪೆಯಾಗಿದ್ದಳು. ನನ್ನ ಗಮನಕ್ಕೆ ವಿಶೇಷವಾಗಿ ಬಂದುದು ಅವಳ ನೆನೆದು ಮುದ್ದೆಯಾಗಿದ್ದ ಹರಿದ ಪಾದರಕ್ಷೆ. ಈಗಲೂ ನನಗೆ ಅವುಗಳ ಜ್ಞಾಪಕವಿದೆ. ಅವಳು ಇದ್ದಕ್ಕಿದ್ದಂತೆ ನನ್ನ ಮೊಳಕೈ ಹಿಡಿದು ನನ್ನನ್ನು ಎಲ್ಲಿಗೋ ಎಳೆಯ ತೊಡಗಿದಳು. ಅವಳೇನೂ ಅಳುತ್ತಿರಲಿಲ್ಲ, ಆದರೆ ತುಣುಕು ಮಾತುಗಳನ್ನು ಬಿಟ್ಟು ಬಿಟ್ಟು ಆಡುತ್ತಿದ್ದಳು. ಅವುಗಳನ್ನು ಸರಿಯಾಗಿ ಉಚ್ಚರಿಸಲು ಅವಳಿಗಾಗುತ್ತಿರಲಿಲ್ಲ, ಏಕೆಂದರೆ ಅವಳು ಮೈಯುದ್ದ ನಡುಗುತ್ತಿದ್ದಳು, ಜ್ವರ ಬಂದಿದ್ದಿತೇನೋ ಎಂಬಂತೆ. ಏನೋ ಅವಳನ್ನು ದಿಗಿಲುಗೊಳಿಸಿತ್ತು. ಅವಳು ಹತಾಶೆಯಿಂದ ಕೂಗಿ ಹೇಳುತ್ತಿದ್ದಳು: "ಅಮ್ಮ, ಅಮ್ಮ!" ನಾನು ಅವಳ ಕಡೆಗೆ ತಿರುಗುವುದರಲ್ಲಿದ್ದೆ, ಆದರೆ ಒಂದು ಮಾತನ್ನೂ ಆಡದೆ ನನ್ನ ದಾರಿ ಹಿಡಿದು ಹೊರಟೆ. ಅವಳು ನನ್ನ ಹಿಂದೆಯೇ ಓಡಿ ಬರುತ್ತ ನನ್ನನ್ನು ಹಿಡಿದು ಎಳೆದಳು. ಅವಳ ಧ್ವನಿಯಲ್ಲಿ ಎಂತಹ ವಿಚಿತ್ರ ಶಬ್ದವಿದ್ದಿತೆಂದರೆ, ತುಂಬ ಗಾಬರಿಗೊಂಡ ಮಕ್ಕಳುಗಳಲ್ಲಿ ಅದು ಹತಾಶೆ ಎಂಬ ಅರ್ಥ ನೀಡುತ್ತಿದ್ದಿತು. ನನಗೆ ಅಂತಹ ಶಬ್ದದ ಪರಿಚಯವಿದೆ. ಅವಳ ಮಾತುಗಳಲ್ಲಿ ಸುಸಂಬದ್ಧತೆ ಇರದಿದ್ದರೂ, ಅವಳ ತಾಯಿ ಎಲ್ಲೋ ಸಾಯುತ್ತ ಮಲಗಿದ್ದಾಳೆ ಎಂದೋ, ಅಥವಾ ಅವರು ಬಹುಶಃ ಬೇರೆ ಯಾವುದೋ ವಿಪತ್ತಿಗೊಳಗಾಗಿದ್ದಾರೆ ಎಂದೋ, ಅವಳು ಹೇಳುತ್ತಿದ್ದಳೆಂಬುದನ್ನು ನಾನು ಅರ್ಥಮಾಡಿಕೊಂಡೆ. ತನ್ನ ತಾಯಿಗೆ ಸಹಾಯ ಮಾಡಲು ಯಾರನ್ನಾದರೂ ಅಥವಾ ಏನನ್ನಾದರೂ ಕಂಡುಕೊಳ್ಳಲು ಅವಳು ಬೀದಿಗೆ ಓಡಿ ಬಂದಿದ್ದಳು. ಆದರೆ ನಾನು ಅವಳ ಜೊತೆ ಹೋಗಲಿಲ್ಲ. ತದ್ವಿರುದ್ಧವಾಗಿ, ಅವಳನ್ನು ಅಟ್ಟಬೇಕೆಂದೇ ನನಗೆ ಇದ್ದಕ್ಕಿದ್ದಂತೆ ಅನಿಸಿತು. ಯಾರಾದರೂ ಪೊಲೀಸ್‌ಮನ್‌ನನ್ನು ಹೋಗಿ ಹುಡುಕುವಂತೆ ನಾನವಳಿಗೆ ಹೇಳಿದೆ. ಆದರೆ ಅವಳು ಕೈ ಜೋಡಿಸಿ ಬೇಡಿಕೊಳ್ಳುತ್ತ, ಬಿಕ್ಕಳಿಸಿ ಅಳುತ್ತ, ಏದುಸಿರು ಬಿಡುತ್ತ, ನನ್ನ ಪಕ್ಕದಲ್ಲೇ ಓಡಿ

ಬಂದಳು. ನನ್ನನ್ನು ಬಿಡಲೆಂದು ನನಗನಿಸಿತು. ಆಗಲೇ ನಾನು ಅವಳ ಕಡೆಗೆ ತಿರುಗಿ ನೆಲವನ್ನು ಪಾದದಿಂದ ಕುಟ್ಟಿ ಹೋಗುತ್ತೀಯೋ ಇಲ್ಲವೋ ಎಂದು ಗದರಿಸಿ ಹೇಳಿದುದು. ಅವಳು ಅಳುತ್ತ ಹೇಳಿದುದೆಲ್ಲ: "ಸ್ವಾಮಿ, ಸ್ವಾಮಿ !" ಆಮೇಲೆ ಇದ್ದಕ್ಕಿದ್ದಂತೆ ನನ್ನನ್ನು ಬಿಟ್ಟು ಬೀದಿಯ ಅತ್ತಕಡೆಗೆ ಓಡಿ ಹೋದಳು. ಅಲ್ಲಿ ಮತ್ತೊಬ್ಬರು ಯಾರೋ ಹೋಗುತ್ತಿದ್ದರು. ಅವಳು ನನ್ನಿಂದ ಅವರ ಬಳಿಗೇ ಓಡಿ ಹೋಗಿರಬೇಕು.

ನಾನು ನನ್ನ ಐದನೆಯ ಮಹಡಿಗೆ ಮೆಟ್ಟಲುಗಳನ್ನು ಹತ್ತಿ ಹೋದೆ. ನಾನು ವಾಸಕ್ಕಾಗಿ ಕೊಠಡಿಗಳನ್ನು ಬಾಡಿಗೆಗೆ ಕೊಡುವ ಮನೆಯೊಂದರಲ್ಲಿ ವಾಸಿಸುತ್ತಿದ್ದೆ. ನನ್ನದು ಒಂದು ಬಡಕಲು ಪುಟ್ಟ ಕೋಣೆ. ಅದರಲ್ಲಿ ಒಂದೇ ಒಂದು ಮೇಲಟ್ಟದ ಅರೆವೃತ್ತಾಕಾರದ ಕಿಟಕಿ. ಒಳಗಿದ್ದ ಪೀಠೋಪಕರಣಗಳೆಂದರೆ – ಮೇಣಗಪಟ ಹೊದಿಸಿದ್ದ ಒಂದು ಸೋಫಾ, ಎರಡು ಕುರ್ಚಿಗಳು, ಒಂದು ಮೇಜು, ಅದರ ಮೇಲೆ ಕೆಲವು ಪುಸ್ತಕಗಳು, ಒಂದು ಆರಾಮಕುರ್ಚಿ. ಆರಾಮ ಕುರ್ಚಿ ತುಂಬ ತುಂಬ ಹಳೆಯದಾಗಿತ್ತು, ಆದರೂ ವಾಲ್ಟೇರ್ ಮಾದರಿಯ ಆರಾಮಕುರ್ಚಿಯಾಗಿತ್ತು. ನಾನು ಒಳಗೆ ಹೋದವನೇ ಮೋಂಬತ್ತಿಯನ್ನು ಹಚ್ಚಿಟ್ಟು ನನ್ನನ್ನು ಆಲೋಚನೆಗೆ ವಶಪಡಿಸಿಕೊಂಡು ಕುಳಿತೆ. ನನ್ನ ಪಕ್ಕದ ಕೋಣೆ ಒಂದು ನಿಜವಾದ ಹುಚ್ಚರಮನೆ. ಮೊನ್ನೆಯಿಂದಲೂ ಅಲ್ಲಿ ಕೋಲಾಹಲ ನಡೆಯುತ್ತಿದೆ. ಅಲ್ಲಿ ವಾಸಿಸುತ್ತಿರುವವನು ಒಬ್ಬ ನಿವೃತ್ತ ಕ್ಯಾಪ್ಟನ್. ಅವನಿಗೆ ಅತಿಥಿಗಳು ಬೇರೆ ಆರು ಮಂದಿ. ಎಲ್ಲರೂ ಬಾಳ್ಗಡಲಿನಿಂದ ಹೊರಹಾಕಲ್ಪಟ್ಟವರು. ವೋಡ್ಕಾ ಕುಡಿಯುವುದು, ಹಳೆಯ ಇಸ್ಪೀಟು ಪ್ಯಾಕೊಂದರಿಂದ ಷ್ಟಾಸ್ ಆಟ ಆಡುವುದು. ಹಿಂದಿನ ರಾತ್ರಿ ಭಾರಿ ಜಗಳವೇ ನಡೆದಿತ್ತು. ಅವರಲ್ಲಿ ಇಬ್ಬರಂತೂ ಒಬ್ಬರ ಕೂದಲನ್ನು ಒಬ್ಬರು ಹಿಡಿದುಕೊಂಡು ಬಹಳ ಹೊತ್ತು ಜಗ್ಗಾಡಿದ್ದರು. ಮನೆಯ ಯಜಮಾನಿ ಅವರ ವಿರುದ್ಧ ದೂರು ನೀಡ ಬಯಸಿದ್ದಳು. ಆದರೆ ಅವಳಿಗೆ ಕ್ಯಾಪ್ಟನ್ನನ ಹೆದರಿಕೆ. ಆ ಮನೆಯಲ್ಲಿ ಬಾಡಿಗೆಗಿದ್ದ ಮತ್ತೊಬ್ಬ ಏಕೈಕ ನಿವಾಸಿಯೆಂದರೆ ಒಬ್ಬ ಸಣಕಲಾದ ಪುಟ್ಟ ಮಹಿಳೆ. ಒಬ್ಬ ಸೈನ್ಯಾಧಿಕಾರಿಯ ಪತ್ನಿ. ನಗರಕ್ಕೆ ಹೊಸದಾಗಿ ಬಂದಿದ್ದಳು. ಅವಳಿಗೆ ಮೂರು ಸಣ್ಣ ಮಕ್ಕಳು. ಇಲ್ಲಿಗೆ ಬಂದಂದಿನಿಂದ ಅವರೆಲ್ಲರಿಗೂ ಕಾಯಿಲೆ. ಆ ಹೆಂಗಸಿಗೂ ಮಕ್ಕಳಿಗೂ ಕ್ಯಾಪ್ಟನ್ನನನ್ನು ಕಂಡರೆ ಭಾರಿ ಭಯ. ರಾತ್ರಿಯೆಲ್ಲ ಅಂಜಿಕೆಯಿಂದ ನಡುಗುತ್ತ ಪ್ರಾರ್ಥನೆ ಮಾಡುತ್ತ ಕಳೆಯುತ್ತಾರೆ. ಕೊನೆಯ ಮಗುವಂತೂ ಒಮ್ಮೆ ಭಯದಿಂದ ಮೂರ್ಛೆ ಹೋಗಿತ್ತು. ಕ್ಯಾಪ್ಟನ್ – ಇದು ಸತ್ಯಸಂಗತಿ ಎಂದು ನನಗೆ ಗೊತ್ತು – ನೆವ್‌ಸ್ಕಿ ಬೀದಿಯಲ್ಲಿ ಕೆಲವು ವೇಳೆ ಜನರನ್ನು ತಡೆದು ನಿಲ್ಲಿಸಿ ಭಿಕ್ಷೆ ಬೇಡುತ್ತಾನೆ. ಅವನಿಗೆ ಎಲ್ಲೂ ಕೆಲಸ ಕೊಡುತ್ತಿಲ್ಲ. ಆದರೆ ವಿಚಿತ್ರವೆನ್ನುವಂತೆ

(ಈ ಕಾರಣಕ್ಕಾಗಿಯೇ ನಾನಿದನ್ನೆಲ್ಲ ಹೇಳುತ್ತಿರುವುದು), ಅವನಿಲ್ಲಿ ವಾಸಿಸುತ್ತಿರುವ ಈ ಇಡೀ ತಿಂಗಳು ಒಮ್ಮೆಯೂ ಅವನು ನನ್ನಲ್ಲಿ ಯಾವುದೇ ರೀತಿಯ ಅಸಮಾಧಾನ ಅಥವಾ ಕೋಪ ಹುಟ್ಟಿಸಿಲ್ಲ. ನಾನು ಸಹಜವಾಗಿಯೇ ಮೊದಲಿನಿಂದಲೂ ಅವನ ಸಹವಾಸ ತೊರೆದಿದ್ದೆ. ಅವನೂ ನಾವು ಸಂಧಿಸಿದ ಮೊದಲ ಬಾರಿಯೇ ನನ್ನನ್ನು ಬೇಸರ ಹಿಡಿಸುವವನೆಂದು ಭಾವಿಸಿದ್ದ. ಅವರು ತಮ್ಮ ಕೋಣೆಯಲ್ಲಿ ಎಷ್ಟೇ ಜೋರಾಗಿ ಕೂಗಿಕೊಳ್ಳಲಿ, ಅವರು ಎಷ್ಟೇ ಮಂದಿ ಇರಲಿ – ನನಗೆ ಯಾವಾಗಲೂ ಎಲ್ಲಾ ಒಂದೇ. ಇಡೀ ರಾತ್ರಿ ಕುಳಿತಿರುತ್ತೇನೆ. ಪ್ರಾಮಾಣಿಕವಾಗಿ ಹೇಳುತ್ತೇನೆ – ಅವರ ಒಂದು ಶಬ್ದವನ್ನೂ ಕೇಳಿಸಿಕೊಳ್ಳುವುದಿಲ್ಲ. ಅಷ್ಟು ಸಂಪೂರ್ಣವಾಗಿ ನಾನವರನ್ನು ಮರೆತಿರುತ್ತೇನೆ. ನನಗೆ ನೋಡಿ ಪ್ರತಿ ರಾತ್ರಿಯೂ ಮುಂಜಾನೆಯಾಗುವವರೆಗೂ ನಿದ್ರೆಯೇ ಬರುವುದಿಲ್ಲ. ಈಗ ಒಂದು ವರ್ಷದಿಂದ ಇದು ಹೀಗೆ. ಆರಾಮಕುರ್ಚಿಯಲ್ಲಿ ಏನೂ ಮಾಡದೆ ಕುಳಿತು ಇಡೀ ರಾತ್ರಿ ಕಳೆಯುತ್ತೇನೆ. ಹಗಲಿನಲ್ಲಷ್ಟೆ ನಾನು ಓದುವುದು. ರಾತ್ರಿ ಹೊತ್ತು ಸುಮ್ಮನೆ ಕುಳಿತಿರುತ್ತೇನೆ, ಯೋಚನೆಯನ್ನೂ ಮಾಡದೆ. ನನ್ನ ಆಲೋಚನೆಗಳು ಅಸ್ಪಷ್ಟ, ಅಲೆದಾಡುತ್ತಿರುತ್ತವೆ. ನಾನು ಅವುಗಳನ್ನು ಅಲೆದಾಡಲು ಬಿಡುತ್ತೇನೆ. ಪ್ರತಿ ರಾತ್ರಿಯೂ ಮೋಂಬತ್ತಿ ಕೊನೆಯವರೆಗೂ ಉರಿದು ಆರುತ್ತೆ. ಎಂದಿನಂತೆ ಇಂದೂ ನಾನು ಶಾಂತನಾಗಿ ನನ್ನ ಆರಾಮಕುರ್ಚಿಯಲ್ಲಿ ಕುಳಿತೆ. ರಿವಾಲ್ವರನ್ನು ಹೊರ ತೆಗೆದು ನನ್ನ ಮುಂದೆ ಮೇಜಿನ ಮೇಲೆ ಇರಿಸಿದೆ. ಮೇಜಿನ ಮೇಲೆ ಇರಿಸಿದಂತೆ ನನ್ನನ್ನು ನಾನೇ "ಖಂಡಿತವೇ ?" ಎಂದು ಕೇಳಿಕೊಂಡು "ಖಂಡಿತ" ಎಂದು ಉತ್ತರ ಹೇಳಿಕೊಂಡೆನೆಂಬುದು ನನಗೆ ಜ್ಞಾಪಕ. ಅಂದರೆ, ನಾನು ನನ್ನನ್ನೇ ಕೊಂದುಕೊಳ್ಳುವೆ. ಅಂದು ರಾತ್ರಿ ನಾನು ಖಂಡಿತ ನನ್ನನ್ನು ಕೊಂದುಕೊಳ್ಳುವೆ ಎಂದೇನೋ ತಿಳಿದಿದ್ದೆ. ಆದರೆ ಅದನ್ನು ಮಾಡುವ ಮುನ್ನ ಮೇಜಿನ ಮುಂದೆಯೇ ಇನ್ನೂ ಎಷ್ಟು ಹೊತ್ತು ಕುಳಿತಿರುತ್ತಿದ್ದೆ ಎಂಬುದು ನನಗೆ ತಿಳಿದಿರಲಿಲ್ಲ. ಆ ಪುಟ್ಟ ಹುಡುಗಿ ಇರದೆ ಇದ್ದಿದ್ದರೆ ನಾನು ನಿಶ್ಚಿತವಾಗಿಯೂ ನನ್ನನ್ನು ಕೊಂದುಕೊಳ್ಳುತ್ತಿದ್ದೆ.

## II

ನೋಡಿ, ಅದು ಹೇಗೇಂದರೆ – ನನಗೆ ಎಲ್ಲಾ ಒಂದೇ ಆಗಿದ್ದರೂ – ನಾನು ಸಂವೇದನಾಶೀಲನಾಗಿಯೇ ಇದ್ದೆ, ಉದಾಹರಣೆಗೆ, ನೋವಿನ ಬಗೆಗೆ. ಯಾರಾದರೂ ನನಗೆ ಹೊಡೆದರೆ ನನಗೆ ನೋವಾಗುತ್ತಿತ್ತು. ನೈತಿಕವಾಗಿಯೂ ಅದು ಹಾಗೆಯೇ ಇದ್ದಿತು. ತುಂಬ ಹೃದಯವಿದ್ರಾವಕವಾದುದು ಏನಾದರೂ ಜರುಗಿದರೆ ನನಗೆ ಮರುಕ ಉಂಟಾಗುತ್ತಿತ್ತು – ಜೀವನದಲ್ಲಿ ನನಗೆ ಇನ್ನೂ ಎಲ್ಲಾ ಒಂದೇ

ಆಗಿರದಿದ್ದ ಆ ಹಿಂದಿನ ಕಾಲದಲ್ಲಿ ಉಂಟಾಗುತ್ತಿದ್ದಂತೆಯೇ. ಅಂದು ಸಂಜೆಯೂ ನನಗೆ ಮರುಕ ಉಂಟಾಗಿತ್ತು. ಖಂಡಿತ, ನಾನು ಕಷ್ಟದಲ್ಲಿದ್ದ ಆ ಮಗುವಿಗೆ ಸಹಾಯ ಮಾಡಬೇಕಿತ್ತು. ಆದರೆ ಏಕೆ ಮಾಡಲಿಲ್ಲ? ನನಗೆ ಹೊಳೆದ ಒಂದು ವಿಚಾರದ ಕಾರಣದಿಂದಾಗಿ. ಅವಳು ನನ್ನ ಕೋಟನ್ನು ಹಿಡಿದು ಎಳೆಯುತ್ತ ಕರೆಯುತ್ತಿದ್ದಾಗ ನನ್ನ ಮುಂದೆ ಒಂದು ಸಮಸ್ಯೆ ಎದ್ದು ನಿಂತಿತು. ನಾನು ಅದನ್ನು ಪರಿಹರಿಸದಾಗಿದ್ದೆ. ಸಮಸ್ಯೆಯೇನೋ ಸರಳವಾಗಿತ್ತು ಆದರೆ ಅದು ನನ್ನನ್ನು ಕೋಪಗೊಳಿಸಿತ್ತು. ನಾನು ಕೋಪಗೊಂಡೆನೇಕೆಂದರೆ, ಅಂದು ರಾತ್ರಿಯೇ ಆತ್ಮಹತ್ಯೆ ಮಾಡಿಕೊಳ್ಳಬೇಕೆಂಬುದು ಖಂಡಿತವಾಗಿದ್ದಾಗ ನಾನು ಜಗತ್ತಿನಲ್ಲಿ ಯಾವುದೇ ವಿಷಯಕ್ಕೆ ಸಂಬಂಧಿಸಿಯೂ ಹಿಂದೆಂದಿಗಿಂತ ಕಮ್ಮಿ ಚಿಂತಿಸಬೇಕಾಗಿದ್ದಿತು. ಹಾಗಾದರೆ ನಾನು ಆ ಪುಟ್ಟ ಹುಡುಗಿಗಾಗಿ ನಿಜಕ್ಕೂ ಚಿಂತಿಸಿದೆ, ನಿಜಕ್ಕೂ ದುಃಖಿಸಿದೆ ಎಂಬ ಭಾವನೆಯನ್ನು ಇದ್ದಕ್ಕಿದ್ದಂತೆ ಪಡೆದುದೇಕೆ? ನಾನವಳ ಬಗೆಗೆ ತುಂಬ ದುಃಖಿತನಾಗಿದ್ದೆ, ನನ್ನ ದುಃಖ ನನ್ನ ಆಗಿನ ಸ್ಥಿತಿಯಲ್ಲಿ ವಿಚಿತ್ರವಾಗಿ ಮನೋವೇಧಕವಾಗಿದ್ದಿತು, ಅಸಂಗತವಾಗಿದ್ದಿತು ಎಂಬುದು ನನಗೆ ಜ್ಞಾಪಕವಿದೆ. ನನ್ನಲ್ಲಿ ಉಂಟಾಗಿದ್ದ ಆ ಕ್ಷಣಿಕ ಭಾವನೆಯ ಬಗೆಗೆ ನಾನು ನಿಜಕ್ಕೂ ಹೆಚ್ಚು ಉತ್ತಮ ವಿವರಣೆ ಕೊಡಲಾರೆ. ಆದರೆ ಆ ಭಾವನೆ ನಾನು ನನ್ನ ಕೋಣೆಯನ್ನು ತಲುಪಿ ಕುರ್ಚಿಯ ಮೇಲೆ ಕುಳಿತನಂತರವೂ ನನ್ನಲ್ಲಿ ಉಳಿದಿದ್ದಿತು. ಅದು ನನ್ನನ್ನು ಬಹಳ ಕಾಲದಿಂದ ಬೇರೆ ಯಾವುದೇ ಭಾವನೆಯೂ ಕೆರಳಿಸಿದ್ದುದಕ್ಕಿಂತ ಹೆಚ್ಚು ಕೆರಳಿಸಿತು. ಒಂದು ವಾದದನಂತರ ಮತ್ತೊಂದು. ನಾನು ಮನುಷ್ಯನಾಗಿದ್ದು ಇನ್ನೂ ಶೂನ್ಯನಾಗಿರದಿದ್ದಲ್ಲಿ, ಶೂನ್ಯದ ಸಮೀಪ ಹೋಗಿರದಿದ್ದಲ್ಲಿ, ನಾನಿನ್ನೂ ಜೀವಂತನಾಗಿದ್ದೆ, ಆದ್ದರಿಂದ ದುಃಖಿಪಡಲು, ಕೋಪಗೊಳ್ಳಲು ಹಾಗೂ ನನ್ನ ಕಾರ್ಯಗಳಿಗಾಗಿ ನಾಚಿಕೆಪಡಲು ಸಮರ್ಥನಾಗಿದ್ದೆ. ಸರಿಯೇ. ಆದರೆ ಇನ್ನು ಕೆಲವೇ ಗಂಟೆಗಳಲ್ಲಿ ನಾನು ಆತ್ಮಹತ್ಯೆ ಮಾಡಿಕೊಳ್ಳಲಿದ್ದರೆ, ಆ ಹುಡುಗಿಯನ್ನು ಕಟ್ಟಿಕೊಂಡು ನನಗೇನು, ಅವಮಾನದ ಬಗೆಗಾಗಲೀ ಅಥವಾ ಈ ಜಗತ್ತಿನಲ್ಲಿ ಬೇರಾವುದರ ಬಗೆಗೇ ಆಗಲಿ, ನಾನೇಕೆ ಚಿಂತಿಸಬೇಕು? ನಾನು ಶೂನ್ಯನಾಗಲಿರುವೆ, ಸಂಪೂರ್ಣವಾಗಿ ಶೂನ್ಯನಾಗಲಿರುವೆ. ಆ ಹುಡುಗಿಗಾಗಿ ಮರುಕಪಡುವ ಹಾಗೂ ನನ್ನ ನೀಚಕಾರ್ಯಕ್ಕಾಗಿ ಅವಮಾನ ಪಡುವ ನನ್ನ ಸಾಮರ್ಥ್ಯವು, ನಾನು ಬೇಗನೆಯೇ ಸಂಪೂರ್ಣವಾಗಿ ಶೂನ್ಯನಾಗುತ್ತೇನೆ, ಆದ್ದರಿಂದ ನನಗೆ ಸಂಬಂಧಿಸಿ ಏನೂ ಅಸ್ತಿತ್ವದಲ್ಲಿರುವುದಿಲ್ಲ ಎಂಬ ಖಚಿತವಾದ ವಿಷಯದಿಂದ ಸ್ವಲ್ಪವೂ ಪ್ರಭಾವಿತವಾಗದಿರಲು ಸಾಧ್ಯವಿದ್ದಿತೆ? ನಾನು ಆ ಬಡಪಾಯಿ ಮಗುವಿನ ಕಡೆಗೆ ತಿರುಗಿ ಕಾಲು ಕುಟ್ಟಿ ಮೃಗೀಯವಾಗಿ ಗದರಿಸಿದುದಕ್ಕೆ ಕಾರಣ – "ದುಃಖ ಪಡುವುದು ದೂರವಿರಲಿ, ನಾನೀಗ ಅಮಾನುಷ ನೀಚಕೃತ್ಯ ಮಾಡಲೂ ಸಾಧ್ಯವಿದೆ, ಏಕೆಂದರೆ ಇನ್ನೆರಡು

ಗಂಟೆಗಳಲ್ಲಿ ಎಲ್ಲ ಮರೆಯಾಗುವುದು" ಎಂದು ಸಮರ್ಥಿಸುವುದೇ ಆಗಿದ್ದಿತು. ನಾನು ಏಕೆ ಗದರಿಸಿದೆ ಎಂಬುದಕ್ಕೆ ಇದೇ ಕಾರಣ ಎಂದು ನಾನು ಹೇಳಿದಲ್ಲಿ ನೀವು ನಂಬುವಿರಾ? ಅವಕ್ಕೆ ಅದೇ ಕಾರಣವಾಗಿದ್ದಿತೆಂಬ ಬಗೆಗೆ ನನಗೀಗ ಬಹುಮಟ್ಟಿಗೆ ಖಾಚಿತ್ಯವಿದೆ. ಆಗಿನಿಂದಾಚೆಗೆ ಜೀವನವೂ ಜಗತ್ತೂ ನನ್ನ ಮೇಲೆಯೇ ಅವಲಂಬಿತವಾಗಿದ್ದವೇನೋ ಎಂದೇ ನನಗೆ ಸ್ಪಷ್ಟವಾಗಿ ಕಂಡುಬಂದಿದ್ದಿತು. ಜಗತ್ತು ನನಗೊಬ್ಬನಿಗಾಗಿಯೇ ವಿಶೇಷವಾಗಿ ಮಾಡಲ್ಪಟ್ಟಿದ್ದಿತೆಂದು ಕಂಡುಬಂದಿತೆಂದೇ ನಾನು ಹೇಳಬೇಕು. ನಾನು ನನ್ನನ್ನೇ ಕೊಂದುಕೊಂಡರೆ ಜಗತ್ತೇ ಇರುವುದಿಲ್ಲ, ಕೊನೆಯ ಪಕ್ಷ ನನಗೆ ಸಂಬಂಧಿಸಿಯಂತೂ ಇರುವುದಿಲ್ಲ. ನಾನು ಹೋದ ಮೇಲೆ ಯಾರಿಗೂ ಏನೂ ನಿಜಕ್ಕೂ ಉಳಿದಿರುವುದಿಲ್ಲವೆಂಬ ಸಾಧ್ಯತೆಯ ಬಗೆಗೆ ಏನೂ ಹೇಳಬೇಕಾಗಿಯೇ ಇಲ್ಲ. ನನ್ನ ಜಾಗೃತಿಯು ಮಂಕಾದ ಘಳಿಗೆಯಲ್ಲೇ ಇಡೀ ಜಗತ್ತೂ, ನನ್ನ ಜಾಗೃತಿಯ ಕೇವಲ ಒಂದು ಉಪಾಧಿಯಾದ ಇಡೀ ಜಗತ್ತೂ, ತಕ್ಷಣವೇ ಮಂಕಾಗುವುದು, ಮರೀಚಿಕೆಯಂತೆ ಅಳಿಸಿಹೋಗುವುದು ಮತ್ತು ಎಷ್ಟು ಮಾತ್ರವೂ ಇರುವುದಿಲ್ಲ. ಏಕೆಂದರೆ, ನಮ್ಮ ಈ ಎಲ್ಲ ಜಗತ್ತೂ ಮತ್ತು ಈ ಎಲ್ಲ ಜನರೂ, ಕೇವಲ ನನ್ನ ಭಾಗವೇ, ನಾನೇ, ಆಗಿರಲಿಕ್ಕೂ ಸಾಧ್ಯ. ಅಲ್ಲಿ ಕುಳಿತು ನಾನು ಈ ರೀತಿ ವಿಚಾರ ಮಾಡಿದಂತೆ, ನನ್ನ ಮನಸ್ಸನ್ನು ಮುತ್ತುತ್ತಿದ್ದ ಈ ಎಲ್ಲ ಹೊಸ ಸಮಸ್ಯೆಗಳಿಗೂ ಸಂಪೂರ್ಣವಾಗಿ ಭಿನ್ನವಾದ ತಿರುವನ್ನು ಕೊಟ್ಟು ಕೆಲವು ಪರಿಪೂರ್ಣವಾದ ಹೊಸ ವಿಚಾರಗಳನ್ನು ಕಲ್ಪಿಸಿಕೊಂಡೆ, ಎಂದು ನನಗೆ ಜ್ಞಾಪಕ. ಉದಾಹರಣೆಗೆ, ಈ ಕೆಳಗಿನಂತಹ ಒಂದು ವಿಚಿತ್ರ ಭಾವನೆ ನನ್ನ ಮನಸ್ಸಿಗೆ ಬಂದಿತು: ನಾನು ಒಂದು ಕಾಲದಲ್ಲಿ ಚಂದ್ರಗ್ರಹದಲ್ಲೋ ಕುಜ ಗ್ರಹದಲ್ಲೋ ವಾಸಿಸುತ್ತಿದ್ದೆ, ಅಲ್ಲಿ ಕಲ್ಪನಾತೀತವಾದಂಥ ಅತ್ಯಂತ ಅಸಹ್ಯಕರವಾದ ಹಾಗೂ ತುಚ್ಛವಾದ ಅಪರಾಧವೊಂದನ್ನು ಎಸಗಿದ್ದೆ, ಅದಕ್ಕಾಗಿ ಕನಸಿನಲ್ಲಷ್ಟೆ, ದುಸ್ವಪ್ನದಲ್ಲಷ್ಟೆ ಊಹಿಸಲು ಸಾಧ್ಯವಾದಂಥ ತುಚ್ಛೀಕಾರ ಹಾಗೂ ಅವಮಾನವನ್ನು ಅನುಭವಿಸುವಂತೆ ಮಾಡಲಾಗಿದ್ದಿತು, ಎಂದು ಊಹಿಸಿಕೊಳ್ಳಿ. ಅನಂತರ ನಾನು ಈ ಭೂಮಿಯ ಮೇಲೆ, ಆ ಬೇರೊಂದು ಗ್ರಹದಲ್ಲಿ ನಾನು ಮಾಡಿದ್ದ ಪಾಪಕಾರ್ಯದ ವಾಸನೆ ನನ್ನ ಪ್ರಜ್ಞೆಯಲ್ಲಿ ಇನ್ನೂ ಜೀವಂತವಾಗಿದ್ದಾಗಲೇ, ಕಾಣಿಸಿಕೊಂಡೆ, ಎಂದೂ ಊಹಿಸಿಕೊಳ್ಳಿ. ಅಲ್ಲದೆ, ನನಗೆ ಮತ್ತೆ ಅಲ್ಲಿಗೆ ಹಿಂದಿರುಗುವುದು ಎಂದೂ, ಯಾವ ಸಂದರ್ಭದಲ್ಲೂ ಸಾಧ್ಯವಿಲ್ಲ ಎಂದು ತಿಳಿದಿದ್ದಾಗ, ನಾನು ಈ ಭೂಮಿಯ ಮೇಲಿನಿಂದ ಚಂದ್ರನತ್ತ ನೋಡಿದಾಗ – ನನಗೆ ಎಲ್ಲಾ ಒಂದೇ ಆಗಿರುತ್ತಿತ್ತೋ ಅಥವಾ ಇಲ್ಲವೋ? ಆ ಅಪರಾಧಕ್ಕಾಗಿ ನಾನು ಅವಮಾನದ ಭಾವನೆ ಪಡೆಯುತ್ತಿದ್ದೆನೋ ಅಥವಾ ಇಲ್ಲವೋ? ಆದರೆ ನನ್ನ ಮುಂದೆ ಆಗಲೇ ರಿವಾಲ್ವರ್ ಇದ್ದುದರಿಂದ, ಮತ್ತು ಅದು ಜರುಗುವುದು

ಖಂಡಿತ ಎಂದು ನನ್ನೆಲ್ಲ ಇರವಿನೊಂದಿಗೆ ನಾನು ತಿಳಿದಿದ್ದುದರಿಂದ, ಈ ಎಲ್ಲ ಪ್ರಶ್ನೆಗಳೂ ಅಪ್ರಯೋಜಕವೂ ಅನಾವಶ್ಯಕವೂ ಆಗಿದ್ದವು. ಆದರೂ ಈ ಪ್ರಶ್ನೆ ಗಳು ನನ್ನನ್ನು ಉದ್ರಿಕ್ತನನ್ನಾಗಿ ಮಾಡಿದವು, ಉನ್ಮತ್ತನನ್ನಾಗಿ ಮಾಡಿದವು. ಅವುಗಳಿಗೆ ಏನಾದರೊಂದು ಪರಿಹಾರ ಕಂಡುಹಿಡಿಯುವ ಮುನ್ನ ಸಾಯುವುದು ಸಾಧ್ಯವಿಲ್ಲವೆಂದೇ ನನಗೆ ಕಂಡುಬಂದಿತು. ಸ್ವಲ್ಪದರಲ್ಲಿ ಹೇಳುವುದಾದರೆ, ಆ ಪುಟ್ಟ ಹುಡುಗಿ ನನ್ನ ಪ್ರಾಣವನ್ನು ಉಳಿಸಿದ್ದಳು, ಏಕೆಂದರೆ, ಪರಿಹಾರವಾಗದೆ ಇದ್ದ ಆ ಪ್ರಶ್ನೆಗಳು ನನ್ನ ಆತ್ಮಹತ್ಯೆಯ ಕಾರ್ಯವನ್ನು ಮುಂದೆ ಹಾಕಿದ್ದವು. ಈ ಮಧ್ಯೆ ಕ್ಯಾಪ್ಟನ್ನನ ಕೋಣೆಯಲ್ಲೂ ಗದ್ದಲ ಕಮ್ಮಿಯಾಗತೊಡಗಿದ್ದಿತು. ಅವರು ಇಸ್ಪೀಟು ಆಟ ಮುಗಿಸಿ ಮಲಗಲು ಸಿದ್ಧರಾಗುತ್ತಿದ್ದರು. ಗೊಣಗಾಡುತ್ತ, ನಿದ್ರೆಯ ಮಂಪ ರಿನಲ್ಲೇ ತಮ್ಮ ಪರಸ್ಪರ ಬಯ್ದಾಟಗಳನ್ನು ಕೊನೆಗಾಣಿಸುತ್ತಲಿದ್ದರು. ಆಗಲೇ ನಾನು ನನ್ನ ಕುರ್ಚಿಯಲ್ಲೇ, ಮೇಜಿನ ಮುಂದೇ, ಇದ್ದಕ್ಕಿದ್ದಂತೆ ನಿದ್ರೆ ಹೋದುದು. ಇಂತಹುದು ನನಗೆ ಹಿಂದೆಂದೂ ಆಗಿರಲಿಲ್ಲ. ನನಗೇ ಅರಿವಿಲ್ಲದಂತೆಯೇ ನಾನು ನಿದ್ರೆಹೋಗಿದ್ದೆ. ಕನಸುಗಳು, ನಮಗೆಲ್ಲ ತಿಳಿದಿರುವಂತೆ, ಅತ್ಯಂತ ವಿಚಿತ್ರವಾದ ಸಂಗತಿಗಳು. ಒಂದು ಕನಸು ಅತ್ಯಂತ ಸ್ಪಷ್ಟವಾಗಿದ್ದು ಕಲ್ಪನೆಗೂ ಮೀರಿದಷ್ಟು ನಿಷ್ಕೃಷ್ಟತೆಯಿಂದ ಕೂಡಿದ್ದು ಪ್ರತಿಯೊಂದು ಸಣ್ಣಪುಟ್ಟ ಅಂಶಗಳನ್ನೂ ಅತ್ಯಂತ ವಿವರಗಳೊಂದಿಗೆ ತೋರಿಸಿದಲ್ಲಿ, ಇನ್ನೊಂದು ಕನಸು ನಿಮ್ಮನ್ನು ಕಾಲ ದೇಶಗಳ ಮೂಲಕ ಎಷ್ಟು ಶೀಘ್ರವಾಗಿ ಕೊಂಡೊಯ್ಯುತ್ತದೆಂದರೆ, ಆ ಹಾರಾಟ ನಿಮ್ಮ ಗಮನಕ್ಕೇ ಬಂದಿರುವುದಿಲ್ಲ. ಕನಸುಗಳಿಗೆ ಬಯಕೆಯೇ ನಿರ್ದೇಶಕ, ವಿಚಾರಶಕ್ತಿಯಲ್ಲ. ಅವುಗಳು ಹೃದಯದಿಂದ ನಿರ್ದೇಶಿಸಲ್ಪಡುತ್ತವೆ, ತಲೆಯಿಂದಲ್ಲ, ಎಂದೇ ನನಗೆ ಕಂಡುಬರುತ್ತೆ. ಆದರೂ ಕನಸುಗಳಲ್ಲಿ ನನ್ನ ವಿಚಾರಶಕ್ತಿಯು ಕೆಲವು ವೇಳೆ ನನ್ನ ಮೇಲೆ ಎಂತಹ ಅತ್ಯದ್ಭುತ ಕುತಂತ್ರಗಳನ್ನು ಪ್ರಯೋಗ ಮಾಡುತ್ತದೆ! ನಿದ್ರೆಯಲ್ಲಿದ್ದಾಗ ನನ್ನ ವಿಚಾರಶಕ್ತಿ ಒಳಗಾಗುವ ಅನುಭವ ತೀರ ನಂಬಲಾಗ ದಂತಿರುತ್ತದೆ. ಒಂದು ಉದಾಹರಣೆ ನೀಡುತ್ತೇನೆ. ನನ್ನ ಸೋದರ ತೀರಿಹೋಗಿ ಈಗಾಗಲೇ ಐದು ವರ್ಷಗಳಾಗಿವೆ. ನಾನು ಕೆಲವು ವೇಳೆ ಅವನ ಬಗೆಗೆ ಕನಸು ಕಾಣುತ್ತೇನೆ. ಅವನು ನನ್ನ ವ್ಯವಹಾರಗಳಲ್ಲಿ ಕ್ರಿಯಾಶೀಲ ಆಸಕ್ತಿ ವಹಿಸುತ್ತಿದ್ದಾನೆ, ನಾವು ಪರಸ್ಪರ ತುಂಬ ಪ್ರೀತಿಸುತ್ತಿದ್ದೇವೆ, ಎಂದು ನಾನು ಕನಸಿನಲ್ಲಿ ಕಾಣುತ್ತೇನೆ. ಆದರೂ ಈ ಕನಸು ಕಾಣುತ್ತಿರುವ ಇಡೀ ಕಾಲವೂ, ನನ್ನ ಸೋದರ ಸತ್ತು ಮಣ್ಣುಪಾಲಾಗಿ ಎಷ್ಟೋ ಕಾಲವಾಗಿದೆ ಎಂಬುದನ್ನು ನಾನು ಸಂಪೂರ್ಣವಾಗಿ ಚೆನ್ನಾಗಿ ತಿಳಿದೇ ಇರುತ್ತೇನೆ. ಸತ್ತು ಹೋಗಿದ್ದರೂ ಅವನು ಇನ್ನೂ ನನ್ನ ಪಕ್ಕ ದಲ್ಲೇ ಇದ್ದಾನೆ, ನನ್ನ ವಿಷಯಗಳಲ್ಲಿ ಕಾಳಜಿ ವಹಿಸುತ್ತಿದ್ದಾನೆ, ಎಂಬುದು ನನಗೆ ಆಶ್ಚರ್ಯ ಉಂಟುಮಾಡುವುದಿಲ್ಲವೇಕೆ? ನನ್ನ ವಿಚಾರಶಕ್ತಿಯು ಇವೆಲ್ಲಕ್ಕೂ ಅಷ್ಟು

ಮನಃಪೂರ್ತಿಯಾಗಿ ಹೊಂದಿಕೊಳ್ಳುತ್ತದೇಕೆ? ಇದು ಇಷ್ಟು ಸಾಕು. ನನ್ನ ಕನಸಿಗೆ ಹಿಂದಿರುಗುತ್ತೇನೆ. ಹೌದು, ನವಂಬರ್ 3ರ ನನ್ನ ಕನಸಿಗೆ. ಎಷ್ಟೇ ಆಗಲಿ, ಅದು ಕನಸಷ್ಟೆ, ಬೇರೇನೂ ಅಲ್ಲ, ಎಂದು ಅವರೆಲ್ಲ ನನ್ನನ್ನು ಈಗ ಪೀಡಿಸುತ್ತಾರೆ. ಆದರೆ ಅದು ಕನಸೋ ಅಲ್ಲವೋ, ನನಗೆ ಯಾವ ವ್ಯತ್ಯಾಸವನ್ನೂ ಮಾಡದು, ಏಕೆಂದರೆ ಅದು ನನಗೆ ನಿಜವನ್ನು ತೋರಿಸಿಕೊಟ್ಟಿತು. ಏಕೆಂದರೆ ನೀವು ಅದನ್ನು ಒಮ್ಮೆ ತಿಳಿದಿರೆಂದರೆ, ಒಮ್ಮೆ ಕಂಡಿರೆಂದರೆ, ಅದೇ ನಿಜ ಎಂಬುದನ್ನು ನೀವು ತಿಳಿಯುವಿರಿ. ನೀವು ಕನಸು ಕಾಣುತ್ತಿರಿ ಇಲ್ಲವೇ ಎಚ್ಚರದಿಂದಿರಿ, ಅದೇ ನಿಜ, ಬೇರೆ ಯಾವುದೂ ಇಲ್ಲ, ಇರಲು ಸಾಧ್ಯವೂ ಇಲ್ಲ, ಎಂಬುದನ್ನು ತಿಳಿಯುವಿರಿ. ಸರಿ, ಕನಸು ಎಂದೇ ಇಟ್ಟುಕೊಳ್ಳಿ. ಆಗಲಿ ಕನಸೇ ಆಗಿರಲಿ. ಆದರೆ ನೀವೆಲ್ಲ ಅಷ್ಟೊಂದು ಹಾಡಿಹೊಗಳುವಂಥ ಜೀವನವನ್ನು ನಾನು ಕೊನೆಗಾಣಿಸ ಬಯಸಿದ್ದೆ ಎಂಬ ಸತ್ಯಾಂಶ ಸತ್ಯಾಂಶವಾಗಿಯೇ ಇರುತ್ತದೆ. ಆದರೆ ನನ್ನ ಕನಸಾದರೋ, ನನ್ನ ಕನಸು – ಓಹ್, ನನ್ನ ಕನಸು ನನಗೆ ಹೊಸತಾದ, ಮಹೋನ್ನತವಾದ, ಭವ್ಯವಾದ, ಶಕ್ತಿಯುತವಾದ ಜೀವನವನ್ನು ತೋರಿಸಿಕೊಟ್ಟಿತು!

ಕೇಳಿ, ಹಾಗಾದರೆ.

## III

ನನಗೆ ಅರಿವಿಲ್ಲದಂತೆಯೇ ನಾನು ನಿದ್ರೆ ಹೋದೆ, ಎಚ್ಚರವಾಗಿದ್ದಾಗ ಯಾವ ವಿಷಯಗಳ ಕುರಿತು ಚಿಂತಿಸುತ್ತಿದ್ದೆನೋ ಆ ಚಿಂತನೆಯನ್ನೇ ಮುಂದುವರಿಸುತ್ತ ನಿದ್ರೆ ಹೋದೆ, ಎಂದು ನಾನು ಹೇಳಿದೆನಲ್ಲವೇ. ನಾನು ರಿವಾಲ್ವರನ್ನು ಕೈಗೆತ್ತಿಕೊಂಡು ಎದೆಗೆ ಒತ್ತಿ ಇರಿಸಿಕೊಂಡೆನೆಂದು ಕನಸು ಕಂಡೆ. ಎದೆಗೆ, ತಲೆಗಲ್ಲ. ಆದರೆ ನಾನು ತಲೆಗಷ್ಟೆ, ಅದೂ ಬಲ ಗಂಡಸ್ಥಲಕ್ಕೆ, ಗುಂಡಿಟ್ಟು ಕೊಂದುಕೊಳ್ಳಬೇಕೆಂದು ಖಂಡಿತವಾಗಿ ನಿರ್ಧರಿಸಿದ್ದೆ. ರಿವಾಲ್ವರನ್ನು ಎದೆಗೆ ಒತ್ತಿ ಇರಿಸಿಕೊಂಡು ನಾನು ಒಂದೆರಡು ಘಳಿಗೆ ಕಾದೆ. ಆಮೇಲೆ ಇದ್ದಕ್ಕಿದ್ದಂತೆ ನನ್ನ ಮೋಂಬತ್ತಿಯೂ, ಮೇಜೂ, ನನ್ನ ಮುಂದಿದ್ದ ಗೋಡೆಯೂ ಎಲ್ಲ ತೂಗಾಡತೊಡಗಿದವು. ನಾನು ಬೇಗನೆಯೇ ಚಾಪನ್ನು ಎಳೆದೆ.

ಕನಸುಗಳಲ್ಲಿ ನೀವು ಕೆಲವು ವೇಳೆ ಭಾರಿ ಎತ್ತರದಿಂದ ಕೆಳಕ್ಕೆ ಬೀಳುತ್ತೀರ, ಅಥವಾ ನಿಮ್ಮನ್ನು ತಿವಿಯಲಾಗುತ್ತಿದೆ ಇಲ್ಲವೇ ಹೊಡೆಯಲಾಗುತ್ತಿದೆ ಎಂದು ಭಾವಿಸುತ್ತೀರ. ಆದರೆ ನಿಮಗೆ ನೋವಿನ ಭಾವನೆ ಏನೂ ಆಗುವುದಿಲ್ಲ, ನೀವೇ ಶರೀರವನ್ನು ಥಟಕ್ಕನೆ ಸೆಳೆದುಕೊಂಡು ಮಂಚದ ಕಾಲಿಗೆ ತಗುಲಿಸಿಕೊಂಡು

ವಾಸ್ತವವಾಗಿ ನೋವು ಮಾಡಿಕೊಂಡರೆ ಹೊರತು. ಆಗಲೇನೋ ನಿಮಗೆ ನೋವಿನ ಭಾವನೆಯಾಗುತ್ತದೆ ಮತ್ತು ಅದು ನಿಮ್ಮನ್ನು ಎಚ್ಚರಗೊಳಿಸುವುದು ಬಹು ಮಟ್ಟಿಗೆ ಖಚಿತ. ನನ್ನ ಕನಸಿನಲ್ಲೂ ಹಾಗೆಯೇ ಆಯಿತು: ನನಗೆ ನೋವಿನ ಭಾವನೆಯೇನೂ ಆಗಲಿಲ್ಲ, ಆದರೆ ಗುಂಡುಹೊಡೆದ ಶಬ್ದದಿಂದಾಗಿ ನನ್ನ ಇಡೀ ಇರುವಿಕೆಯೇ ಕುಲುಕಲ್ಪಟ್ಟಂತೆ ಕಂಡುಬಂದಿತು. ಕೂಡಲೇ ಎಲ್ಲವೂ ಆರಿಹೋಯಿತು. ನನ್ನ ಸುತ್ತಮುತ್ತ ಎಲ್ಲ ಭಯಂಕರ ಕತ್ತಲು ತುಂಬಿತು. ನಾನು ಕುರುಡನಾದಂತೆ ಮೂಕನಾದಂತೆ ಕಂಡುಬಂದೆ. ತುಂಬ ಗಡುಸಾದ ಯಾವುದರ ಮೇಲೆಯೋ ಮಲಗಿದ್ದೆ, ಕೈಕಾಲು ನೀಡಿ ಬೆನ್ನಿನ ಮೇಲೆ ಮಲಗಿದ್ದೆ. ಏನನ್ನೂ ಕಾಣುತ್ತಿರಲಿಲ್ಲ. ಅತ್ಯಂತ ಸ್ವಲ್ಪ ಚಲನೆಯನ್ನು ಮಾಡಲೂ ಅಸಮರ್ಥನಾಗಿದ್ದೆ. ನನ್ನ ಸುತ್ತಮುತ್ತ ಧ್ವನಿಗಳೂ, ಕಾಲ ಸಪ್ಪಳಗಳೂ ಕೇಳಿಬಂದವು. ಕ್ಯಾಪ್ಟನ್ನನ ತಗ್ಗಿದ ಗುರುಗುಟ್ಟುವ ಶಬ್ದ, ಮನೆಯ ಯಜಮಾನಿಯ ಕೀರಲು ಕೂಗಾಟವೂ ಕೇಳಿಬಂದವು. ಆಮೇಲೆ ಇದ್ದಕ್ಕಿದ್ದಂತೆ ಮತ್ತೆ ಎಲ್ಲ ಶೂನ್ಯ. ಈಗ ಅವರು ನನ್ನನ್ನು ಶವದಾನಿಯಲ್ಲಿರಿಸಿ ಕರೆದೊಯ್ಯುತ್ತಿದ್ದಾರೆ. ಮುಚ್ಚಳಕ್ಕೆ ಮೊಳೆ ಬಡಿಯಲಾಗಿದೆ. ಶವದಾನಿಯು ಅತ್ತಿಂದಿತ್ತ ತೂಗಾಡುತ್ತಿರುವುದನ್ನು ನಾನು ಭಾವಿಸಬಲ್ಲವನಾಗಿದ್ದೇನೆ. ನಾನು ಅದರ ಬಗೆಗೆ ಯೋಚಿಸುತ್ತಿದ್ದಂತೆ, ಇದ್ದಕ್ಕಿದ್ದಂತೆ, ಮೊಟ್ಟಮೊದಲ ಬಾರಿಗೆ ನನಗೆ ನಾನು ಸತ್ತಿದ್ದೇನೆ, ಸಂಪೂರ್ಣವಾಗಿ ಸತ್ತಿದ್ದೇನೆ, ಎಂಬ ವಿಚಾರ ಹೊಳೆಯಿತು. ಅದು ನನಗೆ ತಿಳಿದಿತ್ತು. ಸಂಶಯವೇ ಇರಲಿಲ್ಲ. ನನಗೆ ನೋಡಲು ಅಥವಾ ಚಲಿಸಲು ಆಗುತ್ತಿರಲಿಲ್ಲ. ಆದರೂ ನಾನು ಭಾವಿಸಬಲ್ಲವನಿದ್ದೆ, ವಿಚಾರ ಮಾಡಬಲ್ಲವನಿದ್ದೆ. ಆದರೆ ಬೇಗನೆಯೇ ನಾನು ನನ್ನನ್ನು ಅದಕ್ಕೆ ಸರಿಹೊಂದಿಸಿಕೊಂಡೆ ಮತ್ತು ಕನಸುಗಳಲ್ಲಿ ಸಾಮಾನ್ಯವಾಗಿ ಮಾಡಲಾಗುವಂತೆ, ವಾಸ್ತವಾಂಶವನ್ನು ಆಕ್ಷೇಪಣೆಯೊಡ್ಡದೆ ಒಪ್ಪಿಕೊಂಡೆ.

ಈಗ ಅವರು ನನ್ನ ಸಮಾಧಿಯ ಮೇಲೆ ಮಣ್ಣು ಹಾಕುತ್ತಿದ್ದಾರೆ. ಎಲ್ಲರೂ ಹೊರಟು ಹೋದರು. ನಾನು ಒಬ್ಬನೇ ಆದೆ. ಸಂಪೂರ್ಣವಾಗಿ ಒಬ್ಬನೇ ಆದೆ. ನಾನು ಚಲಿಸಲಿಲ್ಲ. ಹೂಳಿದರೆ ಹೇಗಿರುತ್ತೆ ಎಂದು ಊಹಿಸಿಕೊಳ್ಳುತ್ತಿದ್ದಾಗಲೆಲ್ಲ ನಾನು ಸಾಮಾನ್ಯವಾಗಿ ಯಾವಾಗಲೂ ಸಮಾಧಿಯೊಂದಿಗೆ ಒಂದೇ ಒಂದು ಸಂವೇದನೆಯನ್ನು — ಅದು ಶೀತದಿಂದ ಕೂಡಿರುತ್ತದೆ, ಥಂಡಿಯಾಗಿರುತ್ತದೆ ಎಂಬ ಸಂವೇದನೆಯನ್ನು – ಜೊತೆಗೂಡಿಸುತ್ತಿದ್ದೆ. ಈಗಲೂ ನಾನು ತುಂಬ ಚಳಿಯಾದ ಭಾವನೆ ಪಡೆದೆ. ಕಾಲ ಬೆರಳ ತುದಿಗಳೇ ಹೆಚ್ಚು ಶೀತಕ್ಕೊಳಗಾಗಿದ್ದುವು. ಅದಷ್ಟೆ ಸಂವೇದನೆ ನನಗಾದುದು.

ನಾನಲ್ಲಿ ಮಲಗಿದ್ದೆ. ವಿಚಿತ್ರವೆನ್ನುವಂತೆ, ಏನನ್ನೂ ನಿರೀಕ್ಷಿಸಲಿಲ್ಲ. ಸತ್ತವರಿಗೆ ನಿರೀಕ್ಷಿಸಲು ಏನೂ ಇರುವುದಿಲ್ಲ ಎಂಬ ವಾಸ್ತವಾಂಶಕ್ಕೆ ನನ್ನನ್ನು ನಾನೇ ಒಳ

ಪಡಿಸಿಕೊಂಡೆ. ಆದರೆ ಅಲ್ಲಿ ಥಂಡಿಯಾಗಿತ್ತು. ನಾನಲ್ಲೇ ಎಷ್ಟು ಕಾಲ ಮಲ ಗಿದ್ದೆನೋ – ಒಂದು ಗಂಟೆಯೋ, ಒಂದು ದಿನವೋ ಅಥವಾ ಅನೇಕ ದಿನಗಳೋ ನನಗೆ ತಿಳಿಯದು. ಇದ್ದಕ್ಕಿದ್ದಂತೆ ಶವದಾನಿಯ ಮುಚ್ಚಳದಿಂದ ಸ್ರವಿಸಿದ್ದ ನೀರಿನ ಹನಿಯೊಂದು ನನ್ನ ಮುಚ್ಚಿದ್ದ ಎಡಗಣ್ಣಿನ ಮೇಲೆ ಬಿದ್ದಿತು. ಒಂದು ನಿಮಿಷದ ನಂತರ ಮತ್ತೊಂದು ಹನಿ. ಇನ್ನೊಂದು ನಿಮಿಷದನಂತರ ಮೂರನೆಯ ಹನಿ, ಹೀಗೆಯೇ ಕ್ರಮಬದ್ಧವಾದ ಒಂದು ನಿಮಿಷದ ಅಂತರಗಳಲ್ಲಿ ನೀರಿನ ಹನಿಗಳು ಬೀಳತೊಡಗಿದವು. ನನ್ನ ಹೃದಯದಲ್ಲಿ ಕೋಪ ಉಕ್ಕೇರಿ ಬಂತು. ಇದ್ದಕ್ಕಿದ್ದಂತೆ ನನಗೆ ಶಾರೀರಕವಾಗಿ ನೋವೂ ಉಂಟಾಯಿತು. "ಅದು ನನ್ನ ಗಾಯವಾಗಿರಬೇಕು" ಎಂದು ನಾನಂದುಕೊಂಡೆ. "ನಾನು ಗುಂಡು ಹೊಡೆದುಕೊಂಡದ್ದು, ಗುಂಡು ಅಲ್ಲಿದೆ..." ನೀರು ಹನಿಯುತ್ತಲೇ ಇತ್ತು, ನಿಮಿಷಕ್ಕೆ ಒಂದು ಹನಿಯಂತೆ, ನನ್ನ ಮುಚ್ಚಿದ ಕಣ್ಣಿನ ಮೇಲೆ ನೇರವಾಗಿ. ನಾನು ಇದ್ದಕ್ಕಿದ್ದಂತೆ ಪ್ರಾರ್ಥನೆ ಮಾಡತೊಡಗಿದೆ. ಮಾತುಗಳಿಂದಲ್ಲ, ಏಕೆಂದರೆ ನಾನು ನಿಶ್ಚೇಷ್ಟಿತನಾಗಿ ಮಲಗಿದ್ದೆ. ಆದರೆ ನನ್ನ ಇಡೀ ಇರುವಿಕೆಯಿಂದ ಪ್ರಾರ್ಥನೆ ಮಾಡಿದೆ. ನನಗೆ ಏನೇನು ಆಗುತ್ತಿದ್ದಿತೋ ಅವೆಲ್ಲವುಗಳಿಗೂ ಒಡೆಯನಾಗಿದ್ದಂಥ ಆ ಶಾಸಕನಿಗೆ ಪ್ರಾರ್ಥನೆ ಮಾಡಿದೆ:

"ನೀನು ಯಾರೇ ಆಗಿರಬಹುದು. ಆದರೆ ನೀನು ಅಸ್ತಿತ್ವದಲ್ಲಿ ಇದ್ದುದೇ ಆದಲ್ಲಿ, ಈಗ ಇಲ್ಲಿರುವುದಕ್ಕಿಂತ ಹೆಚ್ಚು ವಿವೇಕಯುತವಾದ ವ್ಯವಸ್ಥೆ ಇದ್ದುದೇ ಆದಲ್ಲಿ, ಇಲ್ಲೂ ಅಂತಹ ವ್ಯವಸ್ಥೆ ಇರುವಂತೆ ಮಾಡು. ಆದರೆ ನನ್ನ ಅವಿವೇಕದ ಆತ್ಮಹತ್ಯೆಗಾಗಿ ನೀನು ನನ್ನ ಮೇಲೆ ಸೇಡು ತೀರಿಸಿಕೊಳ್ಳುತ್ತಿದ್ದರೆ, ನನ್ನ ಬರಲಿರುವ ಇರುವಿಕೆಯಲ್ಲಿ ಕುರೂಪಿತನ ಹಾಗೂ ಅಸಂಬದ್ಧತೆಯನ್ನು ಉಂಟು ಮಾಡುವುದಿದ್ದರೆ, ನೀನು ನನಗೆ ನೀಡಬಹುದಾದ ಯಾವುದೇ ಚಿತ್ರಹಿಂಸೆಯೂ ನಾನು ಯಾವತ್ತೂ ಮಿಲಿಯಾಂತರ ವರ್ಷಗಳ ಹಿಂಸಾನುಭವದ ಮೂಲಕ ಮೌನದಲ್ಲೇ ಭಾವಿಸಲಿರುವ ತುಚ್ಛೀಕಾರಕ್ಕೆ ಹೋಲಿಕೆಯಾಗಲಾರದು, ಎಂಬುದನ್ನು ತಿಳಿದಿರು !"

ನಾನು ಹೀಗೆ ಪ್ರಾರ್ಥಿಸಿ ಮೌನನಾದೆ. ಒಂದು ಇಡೀ ನಿಮಿಷ ಗಾಢ ಮೌನ ವಿದ್ದಿತು. ಅನಂತರ ಮತ್ತೊಂದು ಹನಿ ಬಿದ್ದಿತು. ಆದರೆ ಈಗ ಎಲ್ಲ ಬದಲಾಗಲಿರುವುದು ಎಂದು ನಾನು ಅನಂತವಾದ ಹಾಗೂ ಪ್ರಗಾಢವಾದ ನಂಬಿಕೆಯಿಂದ ತಿಳಿದಿದ್ದೆ. ಆಗ ಇದ್ದಕ್ಕಿದ್ದಂತೆ ನನ್ನ ಸಮಾಧಿ ತೆರೆಯಿತು. ಅಂದರೆ, ಮಣ್ಣನ್ನು ಅಗೆದು ಸಮಾಧಿಯನ್ನು ತೆರೆಯಲಾಯಿತೆ ಎಂಬುದು ನನಗೆ ತಿಳಿಯದು. ಆದರೆ ಕಪ್ಪಾದ ವಿಚಿತ್ರವಾದ ಜೀವಿಯೊಂದು ನನ್ನನ್ನು ಎತ್ತಿಕೊಂಡು ಅಂತರಿಕ್ಷಕ್ಕೆ ಒಯ್ದಿತು. ನನಗೆ ಇದ್ದಕ್ಕಿದ್ದಂತೆ ಪುನಃ ದೃಷ್ಟಿ ಬಂದಿತು. ಗಾಢ ರಾತ್ರಿಯಾಗಿತ್ತು.

ಎಂದೂ, ಎಂದೂ ಅಂತಹ ಕಗ್ಗತ್ತಲು ಇದ್ದುದಿಲ್ಲ! ನಾವು ಅಂತರಿಕ್ಷದಲ್ಲಿ ಹಾರಿ ಹೋಗುತ್ತಿದ್ದೆವು. ಭೂಮಿ ಆಗಲೇ ನಮ್ಮ ಹಿಂದೆ ತುಂಬ ದೂರ ಹೋಗಿದ್ದಿತು. ನನ್ನನ್ನು ಒಯ್ಯುತ್ತಿದ್ದ ಜೀವಿಯನ್ನು ನಾನೇನೂ ಕೇಳಲಿಲ್ಲ. ಸುಮ್ಮನೆ ಕಾದೆ. ನನಗೆ ಹೆಮ್ಮೆ ಎನಿಸಿತ್ತು. ನನಗೆ ಹೆದರಿಕೆಯಾಗಿರಲಿಲ್ಲವೆಂದು ನಂಬಿಕೆ ತಂದುಕೊಂಡೆ. ನನಗೆ ಹೆದರಿಕೆಯಾಗಿರಲಿಲ್ಲವೆಂದುಕೊಂಡುದು ನನ್ನ ಬಗೆಗೇ ಮೆಚ್ಚಿಗೆ ನೀಡಿತ್ತು. ಈ ಮೆಚ್ಚಿಗೆಯ ಭಾವನೆ ನನ್ನ ಉಸಿರು ಕಟ್ಟಿಸುವಂತಿದ್ದಿತು. ನಾವು ಎಷ್ಟು ಹೊತ್ತು ಹಾರಿ ಹೋದೆವೊ ನಾನು ಹೇಳಲಾರೆ, ಊಹಿಸುವ ಸಾಹಸವನ್ನೂ ಮಾಡಲಾರೆ. ಪ್ರತಿಯೊಂದೂ ಸಾಮಾನ್ಯವಾಗಿ ಕನಸಿನಲ್ಲಾಗುವ ರೀತಿಯಲ್ಲೇ ಜರುಗುತ್ತಿದ್ದಿತು. ಕನಸುಗಳಲ್ಲಿ ನೀವು ಕಾಲ ದೇಶಗಳ ಪರಿಗಣನೆಯಿಲ್ಲದೆ, ಜೀವನದ ಹಾಗೂ ವಿಚಾರಶಕ್ತಿಯ ಯಾವುದೇ ನಿಯಮಗಳ ಪರಿಗಣನೆಯಿಲ್ಲದೆ, ಹಾರಿ ಹೋಗುತ್ತೀರ. ನಿಮ್ಮ ಹೃದಯ ಎಲ್ಲಿ ನಿಲ್ಲಬೇಕೆಂದು ಬಯಸುತ್ತದೋ ಅಲ್ಲಿ ನಿಲ್ಲುತ್ತೀರ. ಹೀಗೆ ಅಂತರಿಕ್ಷದಲ್ಲಿ ಹಾರಿ ಹೋಗುತ್ತಿದ್ದಾಗ ಇದ್ದಕ್ಕಿದ್ದಂತೆ ಆ ಕಗ್ಗತ್ತಲಲ್ಲಿ ಒಂದು ಸಣ್ಣ ನಕ್ಷತ್ರ ನನ್ನ ದೃಷ್ಟಿಗೆ ಬಿದ್ದುದು ನನಗೆ ಜ್ಞಾಪಕ. "ಇದು ಸಿರಿಯಸ್ (ಲುಬ್ಧಕ) ನಕ್ಷತ್ರವಾಗಿರಬಹುದೇ?" ಎಂಬ ಪ್ರಶ್ನೆ ಕೇಳದೆ ಇರದಾದೆ, ಏನನ್ನೂ ಕೇಳಬಾರದೆಂದು ಅಪೇಕ್ಷಿಸಿದ್ದರೂ. "ಇಲ್ಲ. ನೀನು ಮನೆಗೆ ಹಿಂದಿರುಗುತ್ತಿದ್ದಾಗ ಮೋಡಗಳ ನಡುವೆ ಕಂಡೆಯಲ್ಲ, ಅದೇ ನಕ್ಷತ್ರ ಇದು" ಎಂದು ನನ್ನನ್ನು ಒಯ್ಯುತ್ತಿದ್ದ ಜೀವಿ ಹೇಳಿತು. ಆ ಜೀವಿ ಸ್ವಲ್ಪಮಟ್ಟಿಗೆ ಮನುಷ್ಯನನ್ನೇ ಹೋಲುತ್ತಿದ್ದಿತೆಂಬುದು ನನಗೆ ತಿಳಿದಿತ್ತು. ವಿಚಿತ್ರವೆನ್ನುವಂತೆ ನನಗೆ ಆ ಜೀವಿಯ ಬಗೆಗೆ ಪ್ರೀತಿ ಇರಲಿಲ್ಲ, ಬದಲು ಗಾಢವಾದ ದ್ವೇಷ ಭಾವನೆ ಇದ್ದಿತು. ನಾನು ಸಂಪೂರ್ಣ ನಾಸ್ತಿತ್ವವನ್ನು ನಿರೀಕ್ಷಿಸಿದ್ದೆ, ಆ ಯೋಚನೆಯಿಂದಲೇ ನನ್ನನ್ನು ಕೊಂದುಕೊಂಡಿದ್ದೆ. ಆದರೆ ಈಗ ನಾನು ಒಬ್ಬ ಜೀವಿಯ ಕೈಗಳಲ್ಲಿದ್ದೆ. ನಿಜ, ಮಾನವ ವ್ಯಕ್ತಿಯ ಕೈಗಳಲ್ಲಲ್ಲ, ಆದರೆ ಒಬ್ಬ ಜೀವಿಯ ಕೈಗಳಲ್ಲಿ. ಆ ಜೀವಿ ಇದ್ದಿತು, ಅಸ್ತಿತ್ವದಲ್ಲಿದ್ದಿತು. "ಅಂದರೆ ಪರದಲ್ಲೂ ಜೀವವಿದೆ ಎಂಬುದನ್ನು ಇದು ತೋರಿಸುತ್ತದಷ್ಟೆ" ಎಂದು ನಾನು ಕನಸುಗಳ ಆ ವಿಚಿತ್ರ ಲಾಘವತೆಯಿಂದ ಅಂದುಕೊಂಡೆ. ಆದರೆ ನನ್ನ ಚೈತನ್ಯ ಶಕ್ತಿ ನನ್ನಲ್ಲಿ ಗಂಭೀರತೆಯೊಂದಿಗೇ ಉಳಿದಿದ್ದಿತು. "ನಾನು ಮತ್ತೆ ಇರಲೇ ಬೇಕಾದರೆ," ಎಂದು ನಾನು ಅಂದುಕೊಂಡೆ, "ಬೇರೆ ಯಾರೋ ಒಬ್ಬರ ಸಂಕಲ್ಪದ ಕಾರಣದಿಂದಾಗಿ ಜೀವದಿಂದಿರಬೇಕಾದರೆ ಮತ್ತು ಅದನ್ನು ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ ಅನ್ನುವುದಾದರೆ, ಹಾಗೆಯೇ ಆಗಲಿ, ಆದರೆ ಸೋಲುವುದು, ತೇಜೋವಧೆಗೆ ಈಡಾಗುವುದು ನನಗೆ ಇಷ್ಟವಿಲ್ಲ!" "ನೋಡು, ನಿನ್ನನ್ನು ಕಂಡರೆ ನನಗೆ ಹೆದರಿಕೆ. ಅದಕ್ಕಾಗಿಯೇ ನೀನು ನನ್ನನ್ನು ತುಚ್ಛವಾಗಿ ಕಾಣುತ್ತೀಯೆ" ನಾನು ಹಠಾತ್ತನೆ ನನ್ನ ಸಹಯಾತ್ರಿಗೆ

ಹೇಳಿದೆ, ನನ್ನ ದೈನ್ಯತೆಯ ಮಾತುಗಳನ್ನು ಹಿಡಿದಿರಿಸಲಾಗದೆ. ಆ ಮಾತುಗಳೇ ನನ್ನ ಅಂಜಿಕೆಯ ದ್ಯೋತಕವಾಗಿದ್ದವು, ನನ್ನ ಹೃದಯದಲ್ಲಾಗಿದ್ದ ತೇಜೋವಧೆಯ ಚುಚ್ಚುನೋವಿನ ದ್ಯೋತಕವಾಗಿದ್ದವು. ನನ್ನ ಮಾತಿಗೆ ಉತ್ತರ ಬರಲಿಲ್ಲ. ಆದರೆ ನನ್ನನ್ನು ತುಚ್ಛವಾಗಿ ಕಾಣಲಾಗುತ್ತಿಲ್ಲ ಎಂಬುದನ್ನು ನಾನು ಒಮ್ಮೊಂದೊಮ್ಮೆಗೇ ಅರಿತೆ. ನನ್ನನ್ನು ಪರಿಹಾಸ್ಯ ಮಾಡುತ್ತಲೂ ಇರಲಿಲ್ಲ, ನನ್ನ ಬಗೆಗೆ ಮರುಕ ತೋರುತ್ತಲೂ ಇರಲಿಲ್ಲ. ನಮ್ಮ ಯಾನಕ್ಕೆ ಒಂದು ಉದ್ದೇಶವಿದ್ದಿತು, ನಿಗೂಢ ವಾದ, ವಿಚಿತ್ರವಾದ, ನನಗೊಬ್ಬನಿಗಷ್ಟೆ ಸಂಬಂಧಿಸಿದ, ಒಂದು ಉದ್ದೇಶವಿದ್ದಿತು, ಎಂಬುದನ್ನು ನಾನು ತಿಳಿದೆ. ನನ್ನ ಹೃದಯದಲ್ಲಿ ಹೆದರಿಕೆ ಹೆಚ್ಚುತ್ತ ಹೋಯಿತು. ನನ್ನ ಮೌನ ಸಹಯಾತ್ರಿ ನನಗೆ ಸದ್ದಿಲ್ಲದೆ ಆದರೆ ಯಾತನಾಪೂರ್ಣವಾಗಿ ಏನನ್ನೋ ತಿಳಿಸುತ್ತಿದ್ದಿತು. ಅದು ನನ್ನನ್ನು ಭೇದಿಸಿಕೊಂಡು ತಲುಪುತ್ತಿದ್ದಿತು ಎಂದು ಹೇಳ ಬಹುದು. ನಾವು ಆ ಕಪ್ಪಾದ, ಅಪರಿಚಿತವಾದ ಅಂತರಿಕ್ಷದಲ್ಲಿ ಹಾರುತ್ತ ಹೋದೆವು. ನನ್ನ ಕಣ್ಣುಗಳು ನೋಡುವುದಕ್ಕೆ ಒಗ್ಗಿಕೊಂಡಿದ್ದಂಥ ನಕ್ಷತ್ರ ಪುಂಜಗಳನ್ನು ಈಗ ನಾನು ಇನ್ನೆಷ್ಟು ಮಾತ್ರವೂ ಕಾಣಲಿಲ್ಲ. ಅನಂತ ಅಂತರಿಕ್ಷದಲ್ಲಿ ಕೆಲವು ನಕ್ಷತ್ರಗಳಿವೆ, ಅವುಗಳ ಬೆಳಕು ಭೂಮಿ ತಲುಪಲು ಸಹಸ್ರಾರು ಕೋಟ್ಯಾಂತರ ವರ್ಷಗಳೇ ಬೇಕಾಗುತ್ತವೆ, ಎಂಬುದನ್ನು ನಾನು ತಿಳಿದಿದ್ದೆ. ಬಹುಶಃ ನಾವು ಆಗಲೇ ಆ ಪ್ರದೇಶಗಳಲ್ಲಿ ಹಾದಿ ಹೋಗುತ್ತಿದ್ದೆವೇನೋ. ನಾನು ಯಾತಕ್ಕಾಗಿಯೋ ಕಾದೆ, ಹಿಂಸೆಗೊಳಗಾಗಿದ್ದ ನನ್ನ ಹೃದಯ ಭಯಂಕರ ಬೇಗುದಿಗೆ ಗುರಿಯಾಗಿದ್ದಿತು. ಕೂಡಲೇ ಚಿರ ಪರಿಚಿತವಾಗಿದ್ದ ಹಾಗೂ ಉಚ್ಚಮಟ್ಟದ ಭಾವನೆಯೊಂದರಿಂದ ನಾನು ಬೆಚ್ಚುಬಿದ್ದೆ – ನಾನು ಇದ್ದಕ್ಕಿದ್ದಂತೆ ನಮ್ಮ ಸೂರ್ಯನನ್ನು ಕಂಡೆ! ಅದು ನಮ್ಮ ಸೂರ್ಯನಾಗಿರಲು, ನಮ್ಮ ಭೂಮಿಗೆ ಜನ್ಮವಿತ್ತ ಸೂರ್ಯನಾಗಿರಲು, ಸಾಧ್ಯವಿರಲಿಲ್ಲ, ನಾವು ನಮ್ಮ ಸೂರ್ಯನಿಂದ ಬಹು ದೂರ ಹೋಗಿದ್ದೆವು, ಎಂಬು ದನ್ನು ನಾನು ತಿಳಿದಿದ್ದೆ. ಆದರೂ ಈ ಸೂರ್ಯನೂ ನಮ್ಮ ಸೂರ್ಯನಂತೆಯೇ ಇದ್ದ, ನಮ್ಮದರ ಒಂದು ಪ್ರತಿರೂಪ, ಅದರ ಅವಳಿ, ಎಂದು ನನ್ನ ಇಡೀ ಇರು ವಿಕೆ ನನಗೆ ಹೇಳಿತು. ನನ್ನ ಆತ್ಮವು ಮಧುರವಾದ ಕಳಕಳಿಸುವ ಪರಮಾನಂದ ದಿಂದ ವಿಜೃಂಭಿಸಿತು. ಈ ಸುಪರಿಚಿತ ಬೆಳಕಿನ ಆಕರ, ನನಗೆ ಹಿಂದೆ ಜೀವ ನೀಡಿದ್ದ ಅದೇ ಬೆಳಕು, ನನ್ನ ಹೃದಯದಲ್ಲೊಂದು ಅನುರಣನವನ್ನುಂಟುಮಾಡಿತು ಮತ್ತು ಅದನ್ನು ಪುನರುಜ್ಜೀವನಗೊಳಿಸಿತು. ನನ್ನನ್ನು ಹೂಳಲಾದನಂತರ ಅದೇ ಮೊದಲ ಬಾರಿಗೆ ನಾನು ಜೀವದ, ಹಿಂದಿದ್ದ ಅದೇ ಜೀವದ, ಅನುಭವ ಪಡೆದೆ.

"ಆದರೆ ಇದು ಸೂರ್ಯನಾದರೆ, ನಮ್ಮ ಸೂರ್ಯನಂತಹುದೇ ಸೂರ್ಯನಾ ದರೆ, ಭೂಮಿ ಎಲ್ಲಿ?" ನಾನು ಕೂಗಿ ಕೇಳಿದೆ. ನನ್ನ ಸಹಯಾತ್ರಿ ನನಗೆ ಕತ್ತ

ಲಲ್ಲಿ ಪಚ್ಚೆಯಂತೆ ಮಿರುಗುತ್ತಿದ್ದ ನಕ್ಷತ್ರವೊಂದನ್ನು ತೋರಿಸಿತು. ನಾವು ಅದರ ತ್ತವೇ ನೇರವಾಗಿ ಹಾರಿ ಹೋಗುತ್ತಿದ್ದೆವು.

"ಇಂತಹ ಪ್ರತಿರೂಪಗಳು ಈ ಬ್ರಹ್ಮಾಂಡದಲ್ಲಿ ಸಾಧ್ಯವೇ? ಇದೇ ನಿಸರ್ಗ ನಿಯಮವೇ? ಆ ನಕ್ಷತ್ರವು ಭೂಮಿಯಾಗಿದ್ದರೆ, ಅದು ನಮ್ಮಂತಹ ಭೂಮಿಯೇ ಆಗಿರುವುದು ಸಾಧ್ಯವೇ?.. ಸರಿಯಾಗಿ ನಮ್ಮಂತಹುದೇ – ದುಸ್ಥಿತಿಯಲ್ಲಿರುವ, ಬಡಪಾಯಿಯಾದ, ಆದರೆ ಪ್ರಿಯವಾದ ಚಿರ ಒಲವಿನ ಭೂಮಿಯಾಗಿರ ಬಹುದೇ? ಇದೂ ತನ್ನ ಅತ್ಯಂತ ಕೃತಘ್ನರಾದ ಮಕ್ಕಳಲ್ಲೂ ನಮ್ಮ ಸ್ವಂತ ಭೂಮಿ ಪ್ರೇರಿಸುವಂತೆಯೇ ಅಷ್ಟೇ ಮಾರ್ಮಿಕವಾದ ಪ್ರೀತಿಯನ್ನು ಪ್ರೇರಿ ಸುವಂಥ ಭೂಮಿಯಾಗಿರಬಹುದೇ?" ನಾನು ಕೂಗಿ ಹೇಳಿದೆ, ನಾನು ತ್ಯಜಿಸಿದ್ದ ಆ ಪ್ರಿಯವಾದ ಹಳೆಯ ಭೂಮಿಯ ಬಗೆಗೆ ಪರಮಾನಂದಭರಿತವಾದ ಅಪ ರಿಮಿತವಾದ ಪ್ರೇಮದಿಂದ ತುಂಬಿ ಕಂಪಿಸುತ್ತ. ನಾನು ನನ್ನ ಕೀಳು ವರ್ತನೆಯಿಂದ ಘಾಸಿಗೊಳಿಸಿದ್ದ ಆ ಬಡಪಾಯಿ ಪುಟ್ಟ ಹುಡುಗಿಯ ದೃಶ್ಯ ನನ್ನ ಮುಂದೆ ಹಾದು ಹೋಯಿತು.

"ನೀನು ಎಲ್ಲವನ್ನೂ ಕಾಣುವೆ" ನನ್ನ ಸಹಯಾತ್ರಿ ನನಗೆ ಹೇಳಿತು. ನಾನು ಅದರ ಮಾತುಗಳಲ್ಲಿ ಒಂದು ವಿಚಿತ್ರ ರೀತಿಯ ದುಃಖವನ್ನು ಕಂಡೆ. ಆದರೆ ನಾವಾಗಲೇ ಆ ಗ್ರಹವನ್ನು ಶೀಘ್ರವಾಗಿ ಸಮೀಪಿಸುತ್ತಿದ್ದೆವು. ಹತ್ತಿರ ಹೋದಂತೆ ಅದರ ಗಾತ್ರ ಬೆಳೆಯುತ್ತ ಹೋಯಿತು. ನಾನಾಗಲೇ ಅದರಲ್ಲಿ ಸಾಗರಗಳನ್ನೂ ಯೂರೋಪಿನ ರೂಪುರೇಷೆಯನ್ನೂ ಗುರುತಿಸಬಲ್ಲವನಿದ್ದೆ. ಇದ್ದ ಕ್ಕಿದ್ದಂತೆ ನನ್ನ ಹೃದಯದಲ್ಲಿ ಮಹೋನ್ನತವಾದ ಹಾಗೂ ಪವಿತ್ರವಾದ ಅಸೂ ಯೆಯ ಭಾವನೆ ಭುಗಿಲೆದ್ದಿತು. "ಇಂತಹ ಪ್ರತಿರೂಪ ಹೇಗೆ ಇರಲು ಸಾಧ್ಯ ಮತ್ತು ಯಾತಕ್ಕಾಗಿ ಇರಬೇಕು? ನಾನು ಹಿಂದೆ ಬಿಟ್ಟುಬಂದಂಥ ಆ ಒಂದೇ ಭೂಮಿಯನ್ನಷ್ಟೆ ಪ್ರೀತಿಸುತ್ತೇನೆ, ಪ್ರೀತಿಸಬಲ್ಲೆ. ಕೃತಘ್ನನಾಗಿ ನಾನು ನನ್ನ ಎದೆಗೆ ಗುಂಡಿಟ್ಟುಕೊಂಡು ನನ್ನ ಜೀವಜ್ಯೋತಿಯನ್ನು ನಂದಿಸಿದಾಗ ನನ್ನ ರಕ್ತದಿಂದ ತೋಯಿಸಿದಂಥ ಆ ಭೂಮಿಯನ್ನಷ್ಟೆ ಪ್ರೀತಿಸಬಲ್ಲೆ. ಹಿಂದೆ ಬಿಟ್ಟರೂ ನಾನು ಅದನ್ನು ಪ್ರೀತಿಸುವುದನ್ನು ಎಂದಿಗೂ ಎಂದಿಗೂ ಬಿಟ್ಟಿಲ್ಲ. ನಾನು ಅದನ್ನು ಬಿಟ್ಟು ಬಂದ ರಾತ್ರಿ ಅದನ್ನು ಹಿಂದೆಂದಿಗಿಂತ ಹೆಚ್ಚು ಮಾರ್ಮಿಕವಾಗಿ ಪ್ರೀತಿ ಸುತ್ತಿದ್ದೆನೆಂದೇ ನಾನು ಅಂದುಕೊಂಡಿದ್ದೇನೆ. ಈ ಹೊಸ ಭೂಮಿಯಲ್ಲೂ ಸಂಕಟ ಉಂಟೆ? ನಮ್ಮ ಭೂಮಿಯ ಮೇಲೆ ನಾವು ಸಂಕಟದಿಂದಷ್ಟೆ, ಸಂಕಟದ ಮೂಲ ಕವಷ್ಟೆ ನಿಜಕ್ಕೂ ಪ್ರೀತಿಸಬಲ್ಲೆವು. ನಾವು ಬೇರೆ ಯಾವ ರೀತಿಯಲ್ಲೂ ಪ್ರೀತಿಸ ಲಾರೆವು, ಬೇರೆ ಯಾವ ರೀತಿಯ ಪ್ರೇಮವನ್ನೂ ತಿಳಿಯೆವು. ಪ್ರೇಮಿಸುವು ದಾದಲ್ಲಿ ನನಗೆ ಸಂಕಟ ಬೇಕು. ನಾನು ಈ ಘಳಿಗೆಯಲ್ಲಿ, ನಾನು ಹಿಂದೆ ಬಿಟ್ಟಂಥ

ಆ ಏಕೈಕ ಭೂಮಿಯನ್ನಷ್ಟೆ ಚುಂಬಿಸಲು ಬಯಸುತ್ತೇನೆ, ಅದಕ್ಕಾಗಿ ಹಾತೊರೆ ಯುತ್ತೇನೆ, ಅದಕ್ಕಾಗಿ ಅಳುತ್ತೇನೆ. ಬೇರೆ ಯಾವುದೇ ಭೂಮಿಯೂ ನನಗೆ ಬೇಡ, ಅದರ ಮೇಲಿನ ಜೀವನಕ್ಕೆ ನನ್ನ ಧಿಕ್ಕಾರ!"...

ಆದರೆ ನನ್ನ ಸಹಯಾತ್ರಿ ಆಗಲೇ ನನ್ನನ್ನು ಬಿಟ್ಟು ಹೋಗಿತ್ತು. ಇದು ಹೇಗಾಯಿತೋ ನನಗೆ ತಿಳಿಯದು – ನಾನು ಇದ್ದಕ್ಕಿದ್ದಂತೆ ಈ ಬೇರೆ ಭೂಮಿಯ ಮೇಲೆ ಬಂದಿದ್ದೆ. ಹಗಲಾಗಿತ್ತು. ಸೂರ್ಯನ ಉಜ್ವಲವಾದ ಬೆಳಕಿದ್ದಿತು. ಸ್ವರ್ಗದಲ್ಲಿನ ದಿನದಷ್ಟು ಸೊಗಸಾಗಿತ್ತು ಆ ದಿನ. ನಮ್ಮ ಭೂಮಿಯ ಮೇಲೆ ಗ್ರೀಕ್ ಆರ್ಕಿಪೆಲಾಗೋ* ಎಂದು ಹೇಳಿಸಿಕೊಳ್ಳುವಂಥ ಆ ದ್ವೀಪಸ್ತೋಮಗಳೊಂದರಲ್ಲಿ ನಾನಿದ್ದೆನೆಂದು ನನ್ನ ನಂಬಿಕೆ. ಅಥವಾ ಆರ್ಕಿಪೆಲಾಗೋ ಪಕ್ಕದಲ್ಲಿರುವ ತೀರದ ಮೇಲೆ ಎಲ್ಲೋ ಪ್ರಧಾನ ಭೂಭಾಗದಲ್ಲಿ ಇದ್ದಿರಬಹುದು. ಇಲ್ಲೂ ಎಲ್ಲವೂ ನಮ್ಮ ಭೂಮಿಯ ಮೇಲಿದ್ದಂತೆಯೇ ಇದ್ದವು. ಆದರೆ ಎಲ್ಲವೂ ಹಬ್ಬದ ಹೊಳಪಿನ ಉಡುಗೆ ತೊಟ್ಟಂತೆ ಕಂಡುಬರುತ್ತಿದ್ದವು, ಕೊನೆಗೂ ಸಾಧಿಸಿದಂಥ ಮಹೋನ್ನತ ಪವಿತ್ರ ದಿಗ್ವಿಜಯದ ಕೀರ್ತಿಯಿಂದ ಬೆಳಗುತ್ತಿದ್ದವು. ಸೌಮ್ಯವಾದ ಪಚ್ಚೆ ಹಸುರಿನ ಸಮುದ್ರವು ಮುಚ್ಚುಮರೆ ಇಲ್ಲದ, ದೃಗ್ಗೋಚರವಾದ, ಬಹುಮಟ್ಟಿಗೆ ಬುದ್ಧಿಪೂರ್ವಕವಾದ ಪ್ರೀತಿಯಿಂದ ತನ್ನ ತೀರದ ಮೈ ತೊಳೆಯುತ್ತಿದ್ದಿತು. ಎತ್ತರವಾದ ಸುಂದರವಾದ ಮರಗಳು ಮೈ ತುಂಬ ಹೂವು ಮುಡಿದುಕೊಂಡು ಭವ್ಯವಾಗಿ ನಿಂತಿದ್ದವು. ಅವುಗಳ ಪುಟ್ಟ ಅಸಂಖ್ಯಾತ ಎಲೆಗಳು ತಮ್ಮ ಮೃದುವಾದ, ಸಂತೈಸುವಂತಹ ಮರ್ಮರ ಧ್ವನಿಯಿಂದ ನನ್ನನ್ನು ಸ್ವಾಗತಿಸುತ್ತಿದ್ದವು – ಇದರ ಬಗೆಗೆ ನನಗೆ ಖಾತರಿ ಇದೆ. ಅವು ನನ್ನನ್ನು ಕಂಡು ಲಲ್ಲೆವಾತುಗಳನ್ನು ನುಡಿಯುತ್ತಿದ್ದಂತೆ ಕಂಡುಬರುತ್ತಿದ್ದಿತು. ಹುಲ್ಲುಗಾವಲು ಉಜ್ವಲವಾದ ಪರಿಮಳಪೂರಿತವಾದ ಹೂವುಗಳಿಂದ ಪ್ರಕಾಶಿಸುತ್ತಿದ್ದಿತು. ಹಕ್ಕಿಗಳು ಗಾಳಿಯಲ್ಲಿ ಚಿಲಿಪಿಲಿ ಗುಟ್ಟುತ್ತ ಹಾರಾಡುತ್ತಿದ್ದವು. ನನ್ನನ್ನು ಕಂಡು ಹೆದರದೆಯೇ ಅವು ನನ್ನ ಹೆಗಲ ಮೇಲೆ, ಕೈ ಮೇಲೆ ಬಂದು ಕುಳಿತುಕೊಂಡವು, ತಮ್ಮ ಮುದ್ದಾದ ಕಂಪಿಸುವ ರೆಕ್ಕೆಗಳಿಂದ ನನ್ನ ಮೇಲೆ ಸಂತಸದಿಂದ ಬಡಿಯುತ್ತಿದ್ದವು. ಕೊನೆಯದಾಗಿ ನಾನು ಈ ಸುಖದ ನಾಡಿನ ಜನರನ್ನು ಕಂಡೆ, ಅವರನ್ನು ತಿಳಿಯುವಂತಾದೆ. ಅವರೇ ನನ್ನ ಬಳಿಗೆ ಬಂದರು, ನನ್ನ ಸುತ್ತ ಮುತ್ತಿಕೊಂಡರು, ನನಗೆ ಮುತ್ತಿಟ್ಟರು. ಸೂರ್ಯನ ಮಕ್ಕಳು, ತಮ್ಮದೇ ಸೂರ್ಯನ ಮಕ್ಕಳು – ಓಹ್, ಅವರು ಎಷ್ಟು ಚೆಲುವಾಗಿದ್ದರು! ನಮ್ಮ ಗ್ರಹದಲ್ಲಿ ಮನುಷ್ಯನಲ್ಲಿ ನಾನೆಂದೂ

---

*ಗ್ರೀಸಿಗೂ ಏಷ್ಯಾ ಮೈನರಿಗೂ ಮಧ್ಯೆ ಇರುವ ಈಜಿಯನ್ ಸಮುದ್ರದಲ್ಲಿನ ದ್ವೀಪಸ್ತೋಮ. – ಸಂ.

ಇಂತಹ ಚೆಲುವನ್ನು ಕಂಡುದಿಲ್ಲ. ನಮ್ಮ ಅತ್ಯಂತ ಕಿರಿಯ ಮಕ್ಕಳಲ್ಲಷ್ಟೆ ಬಹುಶಃ ಈ ಚೆಲುವಿನ ಅತ್ಯಂತ ದೂರದ ಹಾಗೂ ಅತ್ಯಂತ ಅಸ್ಪಷ್ಟವಾದ ಪ್ರತಿಬಿಂಬ ವನ್ನು ಪತ್ತೆಹಚ್ಚಲು ಸಾಧ್ಯ. ಈ ಸಂತಸಭರಿತರಾದ ಜನರ ಕಣ್ಣುಗಳು ತಿಳಿಯಾದ ಬೆಳಕಿನಿಂದ ಬೆಳಗುತ್ತಿದ್ದವು. ಅವರ ಮುಖಗಳು ಪ್ರಶಾಂತತೆಯಾಗಿ ಪರಿಪಕ್ವಗೊಂಡಂಥ ಸಪಸದ್ವಿವೇಕ ಹಾಗೂ ಬುದ್ಧಿಶಕ್ತಿಯಿಂದ ಕಾಂತಿಗೊಂಡಿ ದ್ದವು. ಆದರೆ ಅವರ ಮುಖಭಾವ ಗೆಲುವಾಗಿದ್ದಿತು. ಅವರ ಮಾತುಗಳೂ ಧ್ವನಿ ಗಳೂ ಶಿಶುಸಹಜ ಆನಂದದಿಂದ ಅನುರಣಿಸುತ್ತಿದ್ದವು. ಓಹ್, ನಾನು ಅವರ ಮುಖಗಳನ್ನು ಕಂಡಕೂಡಲೇ ಅವರೆಲ್ಲರನ್ನೂ, ಎಲ್ಲರನ್ನೂ ತಕ್ಷಣವೇ ಅರ್ಥ ಮಾಡಿಕೊಂಡೆ ! ಇದು ಪಾಪದಿಂದ ಕಲುಷಿತವಾಗಿರದಂಥ ಭೂಮಿಯಾಗಿ ದ್ದಿತು. ಇಲ್ಲಿ ವಾಸಿಸುತ್ತಿರುವ ಜನರು ಪಾಪ ಮಾಡಿರದಿದ್ದಂಥ ಜನರಾಗಿದ್ದರು; ಇಡೀ ಮಾನವಕುಲದ ಪುರಾಣಕಥೆಗಳು ಹೇಳುವಂತೆ ನಮ್ಮ ಪೂರ್ವೀಕರು ಪಾಪವನ್ನು ಅರಿಯುವುದಕ್ಕೆ ಮುನ್ನ ಒಂದು ಕಾಲದಲ್ಲಿ ಜೀವಿಸುತ್ತಿದ್ದಂಥ ನಂದನ ವನವನ್ನು ಹೋಲುವಂಥ ನಾಡಿನಲ್ಲಿ ಇವರು ಜೀವಿಸುತ್ತಿದ್ದರು. ಒಂದೇ ವ್ಯತ್ಯಾ ಸವೆಂದರೆ ಈ ಇಡೀ ಭೂಮಿಯೇ ಒಂದು ಭಾರಿ ನಂದನವನವಾಗಿದ್ದಿತು. ಸಂತೋಷ ದಿಂದ ನಗುತ್ತ ಈ ಜನ ನನ್ನನ್ನು ಆಲಂಗಿಸಿಕೊಂಡರು, ಮೈದಡವಿ ಮುದ್ದಾ ಡಿದರು. ನನ್ನನ್ನು ತಮ್ಮೊಂದಿಗೆ ಕರೆದೊಯ್ದರು. ಅವರಲ್ಲಿ ಒಬ್ಬೊಬ್ಬರೂ ನನಗೆ ನೆಮ್ಮದಿ ಸೌಖ್ಯ ಒದಗಿಸಲು ಉತ್ಸುಕರಾಗಿದ್ದರು. ಯಾವ ವಿಷಯಕ್ಕೆ ಸಂಬಂಧಿ ಸಿಯೂ ನನ್ನನ್ನು ಪ್ರಶ್ನಿಸಲಿಲ್ಲ. ಅವರಿಗೆ ಎಲ್ಲ ತಿಳಿದಿದ್ದಂತೆ ಕಂಡುಬಂದಿತು. ನನ್ನ ಮುಖದ ಮೇಲಿನಿಂದ ಸಂಕಟವನ್ನು ಹೊಡೆದೋಡಿಸಲು ಅವರು ಕಾತುರರಾಗಿದ್ದರು.

## IV

ನೋಡಿ, ನಾನು ಮತ್ತೆ ಹೇಳುತ್ತೇನೆ. ಇದು ಕನಸಷ್ಟೆ ಆಗಿದ್ದರೂ ಆಗಿರಲಿ ! ಆ ಮುಗ್ಧ ಸುಂದರ ಜನರಿಂದ ಪ್ರೀತಿಸಲ್ಪಟ್ಟ ಆ ಸಂವೇದನೆಯು ನನ್ನೊಟ್ಟಿಗೆ ಯುಗಯುಗಾಂತರಗಳವರೆಗೆ ಇರಲಿರುವುದು. ಈಗಲೂ ನಾನು ಅವರ ಪ್ರೇಮ ನನ್ನ ಮೇಲೆ ವರ್ಷಿಸುತ್ತಿರುವುದರ ಭಾವನೆ ಪಡೆಯಬಲ್ಲವನಾಗಿದ್ದೇನೆ. ನಾನು ಅವರನ್ನು ಕಣ್ಣಾರೆ ಕಂಡಿದ್ದೇನೆ, ಅವರನ್ನು ತಿಳಿದಿದ್ದೇನೆ. ಈ ಬಗೆಗೆ ನನಗೆ ಸಂಪೂರ್ಣ ಮನವರಿಕೆಯಾಗಿದೆ. ನಾನವರನ್ನು ಪ್ರೀತಿಸಿದ್ದೇನೆ. ಅನಂತರ ಅವರಿಗಾಗಿ ಸಂಕಟ ಪಟ್ಟಿದ್ದೇನೆ. ಓಹ್, ಅನೇಕ ವಿಷಯಗಳಿಗೆ ಸಂಬಂಧಿಸಿ ಅವರನ್ನು ಅರ್ಥಮಾಡಿ ಕೊಳ್ಳುವುದು ನನಗೆ ಎಂದಿಗೂ ಸಾಧ್ಯವಾಗುವುದಿಲ್ಲ ಎಂಬುದನ್ನು ನಾನು

ಮೊದಲಿನಿಂದಲೇ ಮನಗಂಡೆ. ಉದಾಹರಣೆಗೆ, ಅಷ್ಟೊಂದೆಲ್ಲ ತಿಳಿದೂ ಅವರು ನಮ್ಮ ವಿಜ್ಞಾನವನ್ನೇ ಹೊಂದಿರಲಿಲ್ಲ ಎಂಬುದು ಆಧುನಿಕ ರಷ್ಯನ್ ಪ್ರಗತಿಶೀಲನಾದ ಹಾಗೂ ಸೇಂಟ್ ಪೀಟರ್ಸ್‌ಬರ್ಗ್‌ನ ನಿರ್ಭಾಗ್ಯ ಪ್ರಜೆಯಾದ ನನಗೆ ವಿವರಿಸಲಸಾಧ್ಯವಾಗಿ ಕಂಡುಬಂದಿತು. ಆದರೆ ಅವರ ತಿಳಿವಳಿಕೆಯು ನಮ್ಮ ಸೂಕ್ಷ್ಮಾವಲೋಕನಗಳಿಗಿಂತ ಭಿನ್ನವಾದ ಸೂಕ್ಷ್ಮಾವಲೋಕನಗಳಿಂದ ಸಿರಿವಂತಗೊಳಿಸಲ್ಪಟ್ಟಿದ್ದಿತು, ಉದ್ದೀಪನಗೊಳಿಸಲ್ಪಟ್ಟಿದ್ದಿತು ಎಂಬುದನ್ನೂ, ಅವರ ಆಸೆ ಆಕಾಂಕ್ಷೆಗಳು ನಮ್ಮ ಆಸೆಆಕಾಂಕ್ಷೆಗಳಿಂದ ತುಂಬ ಭಿನ್ನವಾಗಿದ್ದವೆಂಬುದನ್ನೂ, ನಾನು ಬೇಗನೆಯೇ ಮನಗಂಡೆ. ಅವರು ಏನನ್ನೂ ಬಯಸುತ್ತಿರಲಿಲ್ಲ ಮತ್ತು ಸಂತೃಪ್ತರಾಗಿದ್ದರು. ನಾವು ಜೀವನದ ಆಳವನ್ನು ಹೊಕ್ಕು ಶೋಧಿಸಲು ಯತ್ನಿಸುವಂತೆ ಅವರು ಜೀವನವನ್ನು ತಿಳಿಯಲು ಯತ್ನಿಸುತ್ತಿರಲಿಲ್ಲ, ಏಕೆಂದರೆ, ಅವರ ಜೀವನ ಪರಿಪೂರ್ಣವಾಗಿದ್ದಿತು. ಅವರ ಜ್ಞಾನವು ನಮ್ಮ ವಿಜ್ಞಾನಕ್ಕಿಂತ ಹೆಚು ಸೂಕ್ಷ್ಮವಾದುದೂ ಹೆಚ್ಚು ಪ್ರಗಾಢವಾದುದೂ ಆಗಿದ್ದಿತು, ಏಕೆಂದರೆ, ನಮ್ಮ ವಿಜ್ಞಾನ ಜೀವನದ ಅರ್ಥವನ್ನು ವಿವರಿಸಲು ಯತ್ನಿಸುತ್ತದೆ. ವಿಜ್ಞಾನವೇ ಇತರರಿಗೆ ಹೇಗೆ ಬಾಳಬೇಕು ಎಂಬುದನ್ನು ಬೋಧಿಸಲು, ಜೀವನದ ಆಳವನ್ನರಿಯಲು ಯತ್ನಿಸುತ್ತದೆ. ಆದರೆ ಅವರಾದರೋ ವಿಜ್ಞಾನದ ನೆರವಿಲ್ಲದೆಯೇ ಹೇಗೆ ಜೀವನ ನಡೆಸಬೇಕೆಂಬುದನ್ನು ಅರಿತಿದ್ದರು. ನಾನದನ್ನು ಕಂಡೆ, ಆದರೆ ಅವರ ಆ ಜ್ಞಾನವನ್ನು ಅರ್ಥಮಾಡಿಕೊಳ್ಳಲು ಅಸಮರ್ಥನಾದೆ. ಅವರು ನನಗೆ ತಮ್ಮ ಮರಗಿಡಗಳನ್ನು ತೋರಿಸಿದರು. ಆದರೆ ಅವರು ಅವುಗಳ ಬಗೆಗೆ ಹೊಂದಿದ್ದ ಆ ಗಾಢ ಪ್ರೇಮವನ್ನು ಅರ್ಥಮಾಡಿಕೊಳ್ಳಲು ನಾನು ವಿಫಲನಾದೆ. ಅವರು ತಮ್ಮಂಥ ಜೀವಿಗಳೊಂದಿಗೇ ಮಾತನಾಡುತ್ತಿದ್ದರೇನೋ ಎಂಬಂತೆ ಆ ಮರಗಿಡಗಳತ್ತ ನೋಡುತ್ತಿದ್ದರು. ಅಲ್ಲದೆ ನೋಡಿ, ನಾನು ಹೀಗೆ ಹೇಳಿದರೆ ತಪ್ಪು ಹೇಳುತ್ತಿಲ್ಲವೆಂದೇ ನನ್ನ ಭಾವನೆ – ಅವರು ಆ ಮರಗಿಡಗಳೊಂದಿಗೆ ನಿಜಕ್ಕೂ ಮಾತನಾಡುತ್ತಿದ್ದರು ! ಹೌದು, ಅವರು ಅವುಗಳ ಭಾಷೆಯನ್ನು ಕಂಡುಕೊಂಡಿದ್ದರು. ಮರಗಿಡಗಳು ಅವರ ಮಾತುಗಳನ್ನು ಅರ್ಥಮಾಡಿಕೊಳ್ಳುತ್ತಿದ್ದವೆಂಬುದನ್ನು ನಾನು ಮನಗಂಡೆ. ಇಡೀ ಪ್ರಕೃತಿಯ ಬಗೆಗೂ ಅವರ ಮನೋಧರ್ಮ ಇದೇ ಆಗಿದ್ದಿತು. ಕಾಡುಪ್ರಾಣಿಗಳು ಅವರೊಂದಿಗೆ ಶಾಂತಿಯಿಂದ ವಾಸಿಸುತ್ತಿದ್ದವು. ಎಂದೂ ಅವರ ಮೇಲೆ ಬೀಳುತ್ತಿರಲಿಲ್ಲ. ಆ ಜನರು ತಮ್ಮ ಬಗೆಗೆ ಹೊಂದಿದ್ದ ಪ್ರೇಮದಿಂದ ಪರವಶವಾಗಿ ಆ ಪ್ರಾಣಿಗಳು ಅವರನ್ನು ಪ್ರೀತಿಸುತ್ತಿದ್ದವು. ಅವರು ನನಗೆ ಅನೇಕ ನಕ್ಷತ್ರಗಳನ್ನು ತೋರಿಸಿ ಅವುಗಳ ಬಗೆಗೆ ಏನೇನೋ ಹೇಳಿದರು. ನನಗೆ ಅವೊಂದೂ ಅರ್ಥವಾಗಲಿಲ್ಲ. ಆದರೆ ಅವರು ಆ ಆಕಾಶಸ್ಥ ಕಾಯಗಳೊಂದಿಗೆ ಬಾಂಧವ್ಯವನ್ನು, ಮಾನಸಿಕ ಬಾಂಧವ್ಯವಷ್ಟೆ ಅಲ್ಲ ಜೀವಂತ ಬಾಂಧ

ವ್ಯವನ್ನು, ಹೊಂದಿದ್ದರೆಂಬ ಬಗೆಗೆ ನನಗೆ ಖಾತರಿ ಇದೆ. ಓಹ್, ಇಲ್ಲ, ನಾನು ಅವರನ್ನು ಅರ್ಥಮಾಡಿಕೊಳ್ಳಬೇಕೆಂದು ಆ ಜನರು ನನ್ನನ್ನೇನೂ ಒತ್ತಾಯಿಸಲಿಲ್ಲ. ಆದರೂ ಅವರು ನನ್ನನ್ನು ಪ್ರೀತಿಸುತ್ತಿದ್ದರು. ಆದರೆ ಅವರೂ ನನ್ನನ್ನು ಎಂದೂ ಅರ್ಥಮಾಡಿಕೊಳ್ಳರೆಂಬುದನ್ನು ನಾನು ತಿಳಿದಿದ್ದೆ. ಆದ್ದರಿಂದ ನಾನು ನಮ್ಮ ಭೂಮಿಯ ಬಗೆಗೆ ಅವರಿಗೆ ಏನೂ ಹೇಳಲು ಹೋಗಲಿಲ್ಲ. ಅವರು ವಾಸಿಸುತ್ತಿದ್ದ ಆ ಭೂಮಿಗೆ ನಾನು ಮುತ್ತಿಟ್ಟೆ ಅಷ್ಟೆ ಮತ್ತು ಮಾತುಗಳಿಲ್ಲದೆ ಅವರನ್ನು ಆರಾಧಿಸಿದೆ. ಅವರೂ ಅದನ್ನು ಕಂಡುಕೊಂಡರು ಮತ್ತು ತಮ್ಮನ್ನು ಆರಾಧಿಸಲು ಬಿಟ್ಟುಕೊಟ್ಟರು. ನನ್ನ ಆರಾಧನೆಯಿಂದ ಅವರಿಗೆ ನಾಚಿಕೆಯಾದಂತೇನೂ ಕಾಣಲಿಲ್ಲ, ಏಕೆಂದರೆ ಅವರ ಪ್ರೇಮವೇ ಭಾರಿಯದಾಗಿದ್ದಿತು. ಭಾವಪರವಶನಾಗಿ ಕಣ್ಣೀರು ಸುರಿಸುತ್ತ ನಾನು ನನ್ನ ಭಾವಕ್ಕೆ ಪ್ರತಿಯಾಗಿ ಅವರು ಅನಂತ ಪ್ರೇಮ ತೋರುವರೆಂದು ನನ್ನ ಅಂತರಂಗದಲ್ಲಿ ಆನಂದದ ನಿಶ್ಚಯತೆ ಹೊಂದಿದ್ದು ಕೆಲವು ವೇಳೆ ಅವರ ಪಾದಗಳಿಗೆ ಮುತ್ತಿಟ್ಟಾಗಲೂ ಅವರು ನನಗಾಗಿ ಯಾವ ಮನೋಯಾತನೆಯನ್ನೂ ಪಡಲಿಲ್ಲ. ನಾನು ಕೆಲವು ವೇಳೆ ದಿಗ್ಭ್ರಾಂತಿಗೊಂಡು ನನ್ನನ್ನೇ ಕೇಳಿಕೊಂಡೆ: ಇದು ಹೇಗೆ ಸಾಧ್ಯ – ನನ್ನಂಥ ಯಃಕಶ್ಚಿತ್ ಮನುಷ್ಯನನ್ನು ಇವರು ಎಂದೂ ಅವಹೇಳನ ಮಾಡಲೇ ಇಲ್ಲ, ನನ್ನಂಥ ಮನುಷ್ಯನಲ್ಲಿ ಇವರು ಎಂದೂ ಅಸೂಯೆ ಅಥವಾ ಈರ್ಷೆಯ ಭಾವನೆಯನ್ನು ಕೆರಳಿಸಲೇ ಇಲ್ಲ? ನಾನೊಬ್ಬ ಸಹಜ ಜಂಭಗಾರ, ಸುಳ್ಳುಗಾರ. ಅವರ ಬಗೆಗೆ ನಾನು ಪ್ರೇಮಭಾವ ಹೊಂದಿದ್ದೆ ಎಂಬ ಕಾರಣದಿಂದಾಗಿಯಾದರೂ ಸರಿಯೇ, ಅವರ ಮನಸ್ಸಿನ ಮೇಲೆ ಪ್ರಭಾವ ಬೀರಲೋಸುಗ ನಾನು ನನ್ನೆಲ್ಲ ಸಂಪಾದಿತ ಜ್ಞಾನದ ಬಗೆಗೆ – ಅದರ ಬಗೆಗೆ ಅವರಿಗೆ ಸಹಜವಾಗಿಯೇ ಎಳ್ಳಷ್ಟೂ ತಿಳಿದಿರಲಿಲ್ಲ – ಅವರಿಗೆ ತಿಳಿಸಲು ಹೋಗಲಿಲ್ಲವೇಕೆ ಎಂದು ನಾನು ನನ್ನನ್ನೇ ಪದೇ ಪದೇ ಕೇಳಿಕೊಂಡೆ. ಅವರು ಮಕ್ಕಳಂತೆ ಸದಾ ಹಸನ್ಮುಖಿಗಳಾಗಿರುತ್ತಿದ್ದರು, ಉಲ್ಲಾಸದಿಂದಿರುತ್ತಿದ್ದರು. ಅವರು ತಮ್ಮ ಸುಂದರ ವನಗಳಲ್ಲೂ ತೋಪುಗಳಲ್ಲೂ ತಮ್ಮ ಇಂಪಾದ ಹಾಡುಗಳನ್ನು ಹಾಡುತ್ತ, ಲಘು ಆಹಾರ ಸೇವಿಸುತ್ತ ಅಡ್ಡಾಡುತ್ತಿದ್ದರು. ತಮ್ಮ ಮರಗಳ ಹಣ್ಣುಗಳು, ತಮ್ಮ ವನಗಳ ಜೇನುತುಪ್ಪ, ತಮ್ಮ ಪ್ರೀತಿಯ ಪ್ರಾಣಿಗಳ ಹಾಲು – ಇವೇ ಅವರ ಆಹಾರ. ತಿನ್ನಲು ಹಾಗೂ ಉಡಲು ಅವರು ಅತ್ಯಲ್ಪವಷ್ಟೆ ಶ್ರಮಿಸುತ್ತಿದ್ದರು. ಅವರಲ್ಲೂ ಪ್ರೀತಿಪ್ರಣಯಗಳಿದ್ದವು, ಮಕ್ಕಳಿಗೂ ಜನ್ಮ ಕೊಡುತ್ತಿದ್ದರು. ಆದರೆ ನಾನು ಎಂದೂ ಅವರಲ್ಲಿ ಕ್ರೂರ ಭೋಗಾಸಕ್ತಿಯನ್ನು ಕಾಣಲಿಲ್ಲ. ನಮ್ಮ ಭೂಮಿಯಲ್ಲಾದರೋ ಪ್ರತಿಯೊಬ್ಬರೂ ಇದಕ್ಕೆ ಬಲಿಯಾಗಿರುತ್ತಾರೆ. ಇದೇ ನಮ್ಮ ಭೂಮಿಯ ಮೇಲೆ ಮಾನವಕುಲದ ಬಹುಮಟ್ಟಿಗೆ ಎಲ್ಲ ಪಾಪಗಳ ಏಕೈಕ ಮೂಲವಾಗಿದೆ. ಅವರು ತಮಗೆ ಹುಟ್ಟಿದ

ಮಕ್ಕಳನ್ನು ತಮ್ಮ ಪರಮ ಸುಖದ ಹೊಸ ಪಾಲುದಾರರನ್ನಾಗಿ ಸ್ವಾಗತಿಸುತ್ತಿದ್ದರು. ಅವರ ನಡುವೆ ಜಗಳಗಳಾಗಲೀ ದ್ವೇಷಾಸೂಯೆಗಳಾಗಲೀ ಇರಲಿಲ್ಲ. ಅವರಿಗೆ ಈ ಪದಗಳ ಅರ್ಥವೇ ತಿಳಿದಿರಲಿಲ್ಲ. ಅವರ ಮಕ್ಕಳು ಅವರೆಲ್ಲರ ಮಕ್ಕಳಾಗಿದ್ದರು, ಏಕೆಂದರೆ ಅವರೆಲ್ಲ ಒಂದೇ ಕುಟುಂಬದವರಂತಿದ್ದರು. ಸಾವು ಇದ್ದರೂ ರೋಗ ಅಪರೂಪವಾಗಿದ್ದಿತು. ಅವರ ಮುಪ್ಪಿನ ಜನರು ಶಾಂತಿಯಿಂದ ಪ್ರಾಣತ್ಯಾಗ ಮಾಡುತ್ತಿದ್ದರು. ಅವರು ತಾವು ಯಾರಿಂದ ಅಗಲಿ ಹೋಗುತ್ತಿದ್ದರೋ ಅವರಿಗೆಲ್ಲ ಆಶೀರ್ವದಿಸುತ್ತ ಅವರತ್ತ ಮುಗುಳ್ನಗುತ್ತ ದೀರ್ಘ ನಿದ್ರೆಯಲ್ಲಿ ಮಲಗಿದವರಂತೆ ಅಸು ನೀಗುತ್ತಿದ್ದರು. ತಮ್ಮನ್ನು ಬೀಳ್ಕೊಡಲು ತಮ್ಮ ಸುತ್ತ ನಿಂತಿದ್ದವರೆಲ್ಲರ ಮಂದಹಾಸ ಮುಗುಳುನಗೆಗಳನ್ನು ತಮ್ಮೊಂದಿಗೆ ಒಯ್ಯುತ್ತಿದ್ದರು. ಅಂತಹ ಘಳಿಗೆಗಳಲ್ಲಿ ದುಃಖವನ್ನಾಗಲೀ ಕಣ್ಣೀರನ್ನಾಗಲೀ ನಾನು ಕಾಣಲಿಲ್ಲ. ಪ್ರೇಮವು ಹರ್ಷೋನ್ಮಾದವೆನ್ನುವ ಮಟ್ಟಕ್ಕೆ ವೃದ್ಧಿಗೊಂಡಿರುತ್ತಿದ್ದಿತಷ್ಟೆ. ಆದರೆ ಈ ಹರ್ಷೋನ್ಮಾದವೂ ನಿರುದ್ವಿಗ್ನವಾಗಿದ್ದಿತು, ಧ್ಯಾನಪರವಾಗಿದ್ದಿತು, ಪರಿಪೂರ್ಣವಾಗಿದ್ದಿತು. ಅವರು ತಮ್ಮ ಮೃತ ಜನರೊಂದಿಗೆ, ಅವರ ಮರಣದನಂತರವೂ, ಸಂಪರ್ಕ ಇರಿಸಿಕೊಂಡಿದ್ದರೇನೋ ಎನ್ನುವಂತಿದ್ದಿತು. ಭೂಮಿಯೊಂದಿಗೆ ಅವರ ಸಂಪರ್ಕವನ್ನು ಸಾವು ಕಡಿದು ಹಾಕಿರಲಿಲ್ಲವೇನೋ ಎನ್ನುವಂತಿದ್ದಿತು. ಜೀವ ಚಿರಂತನವಾದುದು ಎಂಬುದರಲ್ಲಿ ಅವರು ನಂಬಿಕೆ ಇರಿಸಿದ್ದರೇ ಎಂದು ನಾನು ಅವರನ್ನು ಕೇಳಿದಾಗ ನನ್ನ ಪ್ರಶ್ನೆ ಅವರಿಗೆ ಅರ್ಥವಾಗಲೇ ಇಲ್ಲ. ಏಕೆಂದರೆ ಅದರಲ್ಲಿ ಅವರ ನಂಬಿಕೆ ಸ್ಪಷ್ಟವಾಗಿಯೇ ಎಷ್ಟು ನಿಸ್ಸಂಶಯವಾಗಿದ್ದಿತೆಂದರೆ, ಅದು ಅವರಿಗೆ ಯಾವ ಸಮಸ್ಯೆಯನ್ನೂ ಉಂಟುಮಾಡಿರಲಿಲ್ಲ. ಅಲ್ಲಿ ದೈವಮಂದಿರಗಳಿರಲಿಲ್ಲ. ಆದರೆ ಅವರು ಇಡೀ ಬ್ರಹ್ಮಾಂಡದೊಂದಿಗೆ ಜೀವಂತವಾದ, ನಿಕಟವಾದ ಹಾಗೂ ಸತತವಾದ ಸಂಬಂಧ ಇಟ್ಟುಕೊಂಡಿದ್ದರು. ಅವರ ಮಧ್ಯೆ ಜಾತಿಮತಗಳಿರಲಿಲ್ಲ. ಬದಲು ತಮ್ಮ ಭೂಮಿಯ ಮೇಲಿನ ಆನಂದವು ತನ್ನ ಭೂಸ್ವರೂಪದ ಅಂತಿಮ ಪ್ರಮಾಣದವರೆಗೂ ಪರಿಪೂರ್ಣಗೊಂಡಾಗ, ತಾವೆಲ್ಲರೂ – ಜೀವಂತವಾಗಿರುವವರು ಹಾಗೂ ಮೃತರಾದವರು ಎಲ್ಲರೂ – ಇಡೀ ಬ್ರಹ್ಮಾಂಡದೊಂದಿಗೆ ಇನ್ನೂ ಹೆಚ್ಚು ನಿಕಟ ಸಂಪರ್ಕ ಹೊಂದಲಿರುವರು, ಎಂಬ ದೃಢ ಪರಿಜ್ಞಾನ ಹೊಂದಿದ್ದರು. ಅವರು ಆ ದಿನಕ್ಕಾಗಿ ಉತ್ಸುಕತೆಯಿಂದ ಇದಿರು ನೋಡುತ್ತಿದ್ದರು, ಆದರೆ ಅದಕ್ಕಾಗಿ ತಾಳ್ಮೆಗೆಡುತ್ತಿರಲಿಲ್ಲ ಅಥವಾ ಗೀಳು ಹಿಡಿದವರಂತೆ ಹಂಬಲಿಸುತ್ತಿರಲಿಲ್ಲ. ಅವರು ಆಗಲೇ ಆ ಭಾವಿ ಸ್ಥಿತಿಯ ಮುನ್ನರಿವನ್ನು ತಮ್ಮ ಹೃದಯದಲ್ಲಿ ಹೊಂದಿದ್ದರು ಮತ್ತು ಅದನ್ನು ಪರಸ್ಪರ ಹಂಚಿಕೊಳ್ಳುತ್ತಿದ್ದರು, ಎಂದೇ ಕಂಡುಬರುತ್ತಿತ್ತು. ರಾತ್ರಿ ಮಲಗುವ ಮುನ್ನ ಅವರು ಮೇಳಗಾಯನದಲ್ಲಿ ಭಾಗವಹಿಸುತ್ತಿ

ದ್ದರು. ಈ ಗಾಯನದಲ್ಲಿ ಎಲ್ಲರ ಧ್ವನಿಗಳೂ ನಿಜವಾದ ಹಾಗೂ ಪರಮಾನಂದ ಕರವಾದ ಸಾಮರಸ್ಯದಲ್ಲಿ ಮೇಳಗೊಳ್ಳುತ್ತಿದ್ದವು. ಅವರ ಹಾಡುಗಳು ಅಂದಿನ ದಿನ ಅವರಿಗೆ ನೀಡಿದ್ದ ಎಲ್ಲ ಸುಖಾನುಭವಗಳ ಬಗೆಗೂ ತಿಳಿಸುತ್ತಿದ್ದವು. ಅವರು ಆ ದಿನವನ್ನು ಪವಿತ್ರವೆಂದು ಗೌರವಿಸಿ ಅದಕ್ಕೆ ವಿದಾಯ ಹೇಳುತ್ತಿದ್ದರು. ಅವರು ಪ್ರಕೃತಿ, ಭೂಮಿ, ಸಮುದ್ರ ಹಾಗೂ ವನಗಳನ್ನು ಪವಿತ್ರವೆಂದು ಗೌರವಿಸುತ್ತಿದ್ದರು. ಅವರು ಪರಸ್ಪರರ ಬಗೆಗೂ ಗೀತೆಗಳನ್ನು ರಚಿಸುವುದನ್ನು ಇಷ್ಟಪಡುತ್ತಿದ್ದರು, ಮಕ್ಕಳಂತೆ ಪರಸ್ಪರರನ್ನು ಹೊಗಳುತ್ತಿದ್ದರು. ಅವು ಅತ್ಯಂತ ಸರಳವಾದ ಹಾಡುಗಳಾಗಿರುತ್ತಿದ್ದವು. ಆದರೆ ಅವು ಹೃದಯದಾಳದಿಂದ ಬರುತ್ತಿದ್ದವು ಮತ್ತು ಇತರ ಹೃದಯಗಳನ್ನು ವಿಚಲಗೊಳಿಸುತ್ತಿದ್ದವು. ಹಾಡುಗಳಷ್ಟೇ ಏಕೆ? ಅವರೆಲ್ಲ ಜೀವನವೂ ಪರಸ್ಪರರನ್ನು ಮೆಚ್ಚುವುದರಲ್ಲೇ ಕಳೆಯುತ್ತಿದ್ದಿತು. ಅದು ಒಂದು ರೀತಿಯ ಪರಸ್ಪರ ಸಾರ್ವತ್ರಿಕ ಸಂಪೂರ್ಣ ಮೋಹ ಪರವಶತೆಯಾಗಿದ್ದಿತು. ಆದರೆ ಗಂಭೀರ ಶೈಲಿಯ ವಿಜೃಂಭಣೆಯ ಅವರ ಇತರ ಕೆಲವು ಹಾಡುಗಳು ನನಗೆ ಅರ್ಥವಾಗಲೇ ಇಲ್ಲ. ಪದಗಳು ಅರ್ಥವಾದರೂ ಇಡೀ ಹಾಡುಗಳ ಅರ್ಥ ನನಗೆ ತಿಳಿಯಲೇ ಇಲ್ಲ. ಅದು ನನ್ನ ಬುದ್ಧಿಶಕ್ತಿಗೆ ಮೀರಿದುದಾಗಿ ಕಂಡುಬಂದಿತು. ಆದರೂ ನನ್ನ ಹೃದಯ ಸಹಜಪ್ರವೃತ್ತಿಯೊಂದಿಗೆ ಆ ಹಾಡುಗಳಿಗೆ ಹೆಚ್ಚು ಹೆಚ್ಚು ಓಗೊಡುವಂತಾಯಿತು. ನಾನು ಅದನ್ನು ಬಹಳ ಹಿಂದೆಯೇ ಮುಂಗಂಡಿದ್ದೆನೆಂದು ನಾನು ಬಹುವೇಳೆ ಅವರಿಗೆ ತಿಳಿಸಿದೆ. ನಾನಲ್ಲಿ ಕಾಣುತ್ತಿದ್ದ ಆ ಎಲ್ಲ ಸುಖಸಂತೋಷಗಳೂ ನಾನು ನಮ್ಮ ಸ್ವಂತ ಗ್ರಹದ ಮೇಲಿದ್ದಾಗಲೇ ನನ್ನನ್ನು ಅವಕ್ಕಾಗಿ ಹಂಬಲಿಸುವಂತೆ ಮಾಡಿದ್ದವೆಂದೂ, ಈ ಹಂಬಲವು ಕೆಲವು ವೇಳೆ ಸಹಿಸಲಾಗದಂಥ ದುಃಖದ ಮಟ್ಟಕ್ಕೆ ಏರುತ್ತಿದ್ದಿತೆಂದೂ ನಾನವರಿಗೆ ತಿಳಿಸಿದೆ. ನಾನು ಅವೆಲ್ಲವುಗಳನ್ನೂ ಅವುಗಳ ಮಹಿಮೆಯನ್ನೂ ನಾನು ನನ್ನ ಹೃದಯದ ಕನಸುಗಳಲ್ಲೂ ನನ್ನ ಮನಸ್ಸಿನ ಕಾಣ್ಕೆಗಳಲ್ಲೂ ಮುಂಗಂಡಿದ್ದೆ; ಬಹುವೇಳೆ ನಾನು ನಮ್ಮ ಭೂಮಿಯ ಮೇಲೆ ಸೂರ್ಯಾಸ್ತವನ್ನು ಕಣ್ಣೀರು ಕರೆಯದೆ ನೋಡದಾಗಿದ್ದೆ.... ನಮ್ಮ ಭೂಮಿ ಮೇಲಿನ ಜನರ ಬಗೆಗೆ ನನ್ನ ದ್ವೇಷವು ಯಾವತ್ತೂ ದುಃಖದಲ್ಲಿ ಕೊನೆಗಾಣುತ್ತಿದ್ದಿತು: ಅವರನ್ನು ಪ್ರೀತಿಸದೆ ದ್ವೇಷಿಸುವುದು ನನಗೆ ಸಾಧ್ಯವಾಗುತ್ತಿರಲಿಲ್ಲವೇಕೆ, ಅವರನ್ನು ಕ್ಷಮಿಸದೆ ಇರಲು ಸಾಧ್ಯವಾಗುತ್ತಿರಲಿಲ್ಲವೇಕೆ, ಅವರಿಗಾಗಿ ನಾನು ಹೊಂದಿದ್ದ ಪ್ರೇಮದಲ್ಲಿ ದುಃಖವೂ ಬೆರೆತಿದ್ದಿತೇಕೆ; ಅವರನ್ನು ದ್ವೇಷಿಸದೆಯೇ ಪ್ರೀತಿಸುವುದು ನನಗೆ ಸಾಧ್ಯವಾಗುತ್ತಿರಲಿಲ್ಲವೇಕೆ? – ಇವನ್ನೆಲ್ಲ ನಾನವರಿಗೆ ಆಗಾಗ್ಗೆ ತಿಳಿಸಿದೆ. ಅವರು ನನ್ನ ಮಾತುಗಳನ್ನೇನೋ ಕೇಳಿದರು ಆದರೆ ಏನನ್ನೂ ಗ್ರಹಿಸದಾಗಿದ್ದರೆಂಬುದನ್ನು ನಾನು ಕಂಡುಕೊಂಡೆ. ಆದರೆ ನಾನು ಹೇಳಿದುದಕ್ಕೆ ನನಗೇನೂ ದುಃಖವಾಗಲಿಲ್ಲ.

ಏಕೆಂದರೆ ನಾನು ಹಿಂದೆ ಬಿಟ್ಟ ಜನರಿಗಾಗಿ ನನ್ನಲ್ಲಿದ್ದ ದುಃಖದ ಇಡೀ ತೀವ್ರತೆಯನ್ನು ಅವರು ಸಂಪೂರ್ಣವಾಗಿ ಮೆಚ್ಚಿಕೊಂಡಿದ್ದರೆಂಬುದನ್ನು ನಾನು ತಿಳಿದಿದ್ದೆ. ಅವರು ತಮ್ಮ ಪ್ರೀತಿಯಿಂದ ಕೂಡಿದ ವಾತ್ಸಲ್ಯಪೂರ್ಣವಾದ ನೋಟದಿಂದ ನನ್ನನ್ನು ನೋಡಿದಾಗ, ನನ್ನ ಹೃದಯವೂ ಅವರ ಹೃದಯಗಳಂತೆಯೇ ಅಷ್ಟೇ ಮುಗ್ಧವಾದುದಾಗಿ, ಅಷ್ಟೇ ಸತ್ಯವತ್ತಾದುದಾಗಿ ಆದ ಭಾವನೆ ನನಗಾಗುತ್ತಿದ್ದಿತು. ಅದು ನನಗೆ ಸಾಕಾಗಿದ್ದಿತು. ನಾನವರನ್ನು ಅರ್ಥಮಾಡಿಕೊಳ್ಳಲಾಗದಿದ್ದುದು ನನಗೆ ದುಃಖವನ್ನೇನೂ ಉಂಟುಮಾಡುತ್ತಿರಲಿಲ್ಲ. ಜೀವನ ತುಂಬಿ ಬಂದಂತಾಗಿ ನಾನು ಅವಾಕ್ಕಾಗುತ್ತಿದ್ದೆ. ಅವರನ್ನು ಮೌನದಿಂದಷ್ಟೆ ಆರಾಧಿಸ ಬಲ್ಲವನಾಗುತ್ತಿದ್ದೆ.

ಓಹ್, ನಾನೀಗ ಹೇಳುತ್ತಿರುವ ಈ ಎಲ್ಲ ವಿವರಗಳನ್ನೂ ಕನಸಿನಲ್ಲಿ ಕಾಣುವುದು ಯಾರಿಗೂ ಸಾಧ್ಯವಿಲ್ಲ, ಕನಸಿನಲ್ಲಿ ನಾನು ನನ್ನ ಸ್ವಂತ ಹೃದಯವೇ ತನ್ನ ಉನ್ಮಾದದ ಸ್ಥಿತಿಯಲ್ಲಿ ಗ್ರಹಿಸಿದಂಥ ಕೆಲವು ಅಂಶಗಳ ಕೇವಲ ಒಂದು ಸಂವೇದನೆಯನ್ನಲ್ಲದೆ ಬೇರೇನನ್ನೂ ಕಾಣಲು ಹಾಗೂ ಭಾವಿಸಲು ಸಾಧ್ಯವಿರಲಿಲ್ಲ, ಇನ್ನು ಆ ವಿವರಗಳಿಗೆ ಸಂಬಂಧಿಸಿ ಹೇಳುವುದಾದರೆ, ನಾನವನ್ನೆಲ್ಲ ಎಚ್ಚರಗೊಂಡ ಮೇಲೆ ಜೋಡಿಸಿದ್ದೇನೆ – ಎಂದು ಹೇಳುತ್ತ ಎಲ್ಲರೂ ಈಗ ನನ್ನನ್ನು ಗೇಲಿಮಾಡುತ್ತಾರೆ. ಅದು ನಿಜಕ್ಕೂ ಹಾಗಿರುವುದೂ ಸಾಧ್ಯ ಎಂದು ನಾನು ಒಪ್ಪಿಕೊಂಡಾಗ – ಓಹ್ ದೇವರೇ, ಅವರೆಲ್ಲ ಹೇಗೆ ನನ್ನನ್ನು ಪರಿಹಾಸ್ಯ ಮಾಡಿದರು, ನನ್ನ ಖರ್ಚಿನಲ್ಲಿ ಎಷ್ಟು ಆನಂದ ಪಟ್ಟರು ! ಹೌದು, ನಿಜ, ನಾನು ನನ್ನ ಕನಸಿನ ಕೇವಲ ಸಂವೇದನೆಯ ವಶಕ್ಕೊಳಗಾಗಿದ್ದೆ, ಅದಷ್ಟೆ ನನ್ನ ಗಾಯಗೊಂಡ, ರಕ್ತ ಸುರಿಸುತ್ತಿದ್ದ ಹೃದಯದಲ್ಲಿ ಉಳಿದುಕೊಂಡಿದ್ದಿತು. ನಿಜವಾದ ಮೂರ್ತಿ ಹಾಗೂ ರೂಪಗಳ ಬಗೆಗೆ, ಅಂದರೆ ನಾನು ನನ್ನ ಕನಸಿನಲ್ಲಿ ನಿಜಕ್ಕೂ ಕಂಡಂಥವುಗಳ ಬಗೆಗೆ ಹೇಳುವುದಾದರೆ, ಅವು ಸಾಮರಸ್ಯದಲ್ಲಿ, ಮೋಹಕತೆಯಲ್ಲಿ, ಸೌಂದರ್ಯದಲ್ಲಿ ಎಷ್ಟು ಪರಿಪೂರ್ಣವಾಗಿದ್ದವೆಂದರೆ, ಎಷ್ಟು ಸತ್ಯವತ್ತಾಗಿದ್ದವೆಂದರೆ, ಎಚ್ಚೆತ್ತ ಮೇಲೆ ಅವುಗಳನ್ನು ವಿವರಿಸಲು ಸಹಜವಾಗಿಯೇ ನನ್ನ ದುರ್ಬಲ ಮಾತುಗಳು ಅಸಮರ್ಥವಾದವು. ಅವು ನನ್ನ ಮನಸ್ಸಿನಲ್ಲಿ ಅಸ್ಪಷ್ಟವಾಗುವುದು ಖಂಡಿತವಿದ್ದಿತು. ಆದ್ದರಿಂದ ಎಚ್ಚೆತ್ತನಂತರ ನಾನು ವಿವರಗಳನ್ನು ನನಗೇ ತಿಳಿಯದಂತೆಯೇ ಆದರೂ ಸರಿಯೆ, ಜೋಡಿಸುವ ಒತ್ತಾಯಕ್ಕೆ ನಿಜಕ್ಕೂ ಒಳಗಾಗಿರಬಹುದು. ಅವುಗಳನ್ನು ನಾನು ವಿರೂಪಗೊಳಿಸಿರಲೂ ಬಹುದು, ಅದರಲ್ಲೂ ವಿಶೇಷವಾಗಿ ನಾನು ಅವುಗಳಲ್ಲಿ ಸ್ವಲ್ಪವನ್ನಾದರೂ ಸರಿಯೆ ಬೇಗ ತಿಳಿಸಲು ಉತ್ಸುಕನಾಗಿದ್ದುದರಿಂದ, ಆತುರದಲ್ಲಿದ್ದುದರಿಂದ. ಆದರೆ ಅದೆಲ್ಲ ಹೀಗೆಯೇ ಇದ್ದಿತು ಎಂಬುದನ್ನು ನಾನು ಸಂದೇಹಿಸುವುದು ಹೇಗೆ ಸಾಧ್ಯ?

ಅದರ ನಾನು ಈಗ ಹೇಳುತ್ತಿರುವುದಕ್ಕಿಂತ ಬಹುಶಃ ಸಾವಿರಾರು ಪಟ್ಟು ಹೆಚ್ಚು ಉತ್ತಮವಾಗಿ ಹೆಚ್ಚು ಉಜ್ವಲವಾಗಿ ಹಾಗೂ ಹೆಚ್ಚು ಸಂತಸಕರವಾಗಿ ಇದ್ದಿತೇನೋ? ಅದು ಕನಸೇ ಎಂದು ಇಟ್ಟುಕೊಂಡರೂ, ಇವೆಲ್ಲ ಇರದೆ ಇರುವುದಕ್ಕೆ ಸಾಧ್ಯವೇ ಇಲ್ಲ. ನಿಮಗೆ ಗೊತ್ತೆ, ನಾನು ನಿಮಗೊಂದು ಗುಟ್ಟು ಹೇಳುತ್ತೇನೆ: ಅದು ಕನಸೇ ಆಗಿರದೆ ಇರುವುದೂ ಸಾಧ್ಯ! ಏಕೆಂದರೆ ಆಮೇಲೆ ಏನೋ ಒಂದು ಘಟನೆ ಜರುಗಿತು. ಅದು ಎಷ್ಟು ಭಯಂಕರವಾಗಿ ಸತ್ಯವಾಗಿದ್ದಿತೆಂದರೆ, ಅದು ಯಾರಿಗೂ ಎಂದೂ ಕನಸಿನಲ್ಲೂ ಬರಲು ಸಾಧ್ಯವಿಲ್ಲ. ನನ್ನ ಹೃದಯ ಆ ಕನಸನ್ನು ಕಲ್ಪಿಸಿಕೊಂಡಿತು ಎಂದು ಒಪ್ಪಿಕೊಂಡರೂ, ನನಗೆ ಅನಂತರ ಅನುಭವಕ್ಕೆ ಬಂದಂಥ ಆ ಭೀತಿಕಾರಕ ವಾಸ್ತವಿಕತೆಯನ್ನು ಕಲ್ಪಿಸಿಕೊಳ್ಳಲು ನನ್ನ ಹೃದಯವೊಂದಕ್ಕೇ ಸಾಧ್ಯವಾಗುತ್ತಿದ್ದಿತೆ? ನಾನೊಬ್ಬನೇ ಅದನ್ನು ಕಲ್ಪಿಸುವುದು ಹೇಗೆ ಸಾಧ್ಯವಿದ್ದಿತು, ಆ ಕನಸನ್ನು ಪ್ರೇರಿಸಲು ನನ್ನ ಹೃದಯಕ್ಕೆ ಹೇಗೆ ಸಾಧ್ಯವಿದ್ದಿತು? ನನ್ನ ಪೊಳ್ಳು ಹೃದಯವೂ ನನ್ನ ದರಿದ್ರ ಚಂಚಲ ಚಿತ್ತವೂ ಸತ್ಯದ ಅಂತಹ ದಿವ್ಯದರ್ಶನ ಕಾಣುವ ಮಟ್ಟಕ್ಕೆ ಏರುವುದು ಖಂಡಿತ ಸಾಧ್ಯವಿರಲಿಲ್ಲ! ಓಹ್, ನೀವೇ ತೀರ್ಮಾನಿಸಿ: ನಾನು ಅದನ್ನು ಇದುವರೆವಿಗೂ ಮುಚ್ಚಿಟ್ಟಿದ್ದೆ, ಆದರೆ ಈಗ ಆ ಸತ್ಯವನ್ನೂ ಹೊರಗೆಡಹುತ್ತೇನೆ. ಸತ್ಯಾಂಶವೆಂದರೆ, ನಾನು... ನಾನು ಅವರೆಲ್ಲರನ್ನೂ ಭ್ರಷ್ಟಗೊಳಿಸಿದೆ!

## V

ಹೌದು, ಹೌದು. ನಾನು ಅವರೆಲ್ಲರನ್ನೂ ಕೊನೆಯಲ್ಲಿ ಭ್ರಷ್ಟಗೊಳಿಸಿದೆ! ಅದು ಹಾಗಾಗಲು ಹೇಗೆ ಸಾಧ್ಯವಿದ್ದಿತೋ ನನಗೆ ತಿಳಿಯದು. ಆದರೆ ನಾನು ಹಾಗೆ ಮಾಡಿದೆ ಅನ್ನುವುದಂತೂ ನನಗೆ ಚೆನ್ನಾಗಿ ಜ್ಞಾಪಕವಿದೆ. ನನ್ನ ಕನಸು ಸಹಸ್ರಾರು ವರ್ಷಗಳ ಕಾಲವ್ಯಾಪ್ತಿಯನ್ನು ಕ್ರಮಿಸಿತ್ತು, ನನ್ನಲ್ಲಿ ಒಟ್ಟಿನ ಮೇಲಿನ ಒಂದು ಭಾವನೆಯನ್ನಷ್ಟೆ ಹಿಂದುಳಿಸಿದ್ದಿತು. ಅಧಃಪತನಕ್ಕೆ ನಾನೇ ಕಾರಣ ಎಂಬುದನ್ನಷ್ಟೆ ನಾನು ಬಲ್ಲೆ. ಬಹು ಕ್ರೂರ ಸ್ವಭಾವದ ಕೂದಲ ಹುಳುವಿನಂತೆ, ಇಡೀ ದೇಶದಲ್ಲೆಲ್ಲ ವ್ಯಾಪಿಸುವಂಥ ಪ್ಲೇಗಿನ ರೋಗಾಣುವಿನಂತೆ, ನಾನು ಆ ಸಂತಸದ ನಾಡಿನಾದ್ಯಂತ ಸೋಂಕನ್ನು ಹರಡಿದೆ. ನಾನು ಅಲ್ಲಿಗೆ ಹೋಗುವ ಮುನ್ನ ಆ ನಾಡು ಪಾಪರಹಿತವಾಗಿದ್ದಿತು. ನಾನು ಅಲ್ಲಿಗೆ ಹೋದ ಮೇಲೆ ಅವರು ಸುಳ್ಳು ಹೇಳುವುದನ್ನು ಕಲಿತರು, ಸುಳ್ಳು ಹೇಳುವುದನ್ನು ಪ್ರೀತಿಸತೊಡಗಿದರು, ಸುಳ್ಳುಗಳ ಸೌಂದರ್ಯವನ್ನು ಮೆಚ್ಚತೊಡಗಿದರು. ಓಹ್, ಅದು ತೀರ ಮುಗ್ಧವಾದ ರೀತಿಯಲ್ಲಿ, ನಗೆ ಹುಡುಗಾಟಿಕೆ ಹಾಗೂ ತಮಾಷೆಯ ಪ್ರೀತಿಯೊಂದಿಗೆ,

ಪ್ರಾರಂಭವಾಗಿರಬಹುದು. ಅಥವಾ ಸುಳ್ಳಿನ ರೋಗಾಣುವು ಅವರ ಹೃದಯ ಗಳೊಳಕ್ಕೆ ಪ್ರವಿಸಿಕೊಂಡು ಹೋಗಿ ಅವರಿಗೆ ನಿಜಕ್ಕೂ ಮೆಚ್ಚುವಂತಾಗಿರ ಬಹುದು. ಅದಾದ ಕೂಡಲೇ ಭೋಗಾಸಕ್ತಿ ಹುಟ್ಟಿಕೊಂಡಿತು. ಭೋಗಾಸಕ್ತಿ ಯಿಂದ ಅಸೂಯೆ, ಅಸೂಯೆಯಿಂದ ಕ್ರೌರ್ಯ... ಓಹ್, ನನಗೆ ಗೊತ್ತಿಲ್ಲ, ನನಗೆ ಜ್ಞಾಪಕವಿಲ್ಲ, ಆದರೆ ಬೇಗನೆಯೇ, ಬಹು ಬೇಗನೆಯೇ ಅಲ್ಲಿ ಮೊಟ್ಟಮೊದಲ ಬಾರಿಗೆ ರಕ್ತಪಾತವಾಯಿತು. ಅವರು ದಿಗ್ಭ್ರಾಂತರಾದರು, ಭಯಭ್ರಾಂತರಾದರು. ಪ್ರತ್ಯೇಕಗೊಳ್ಳತೊಡಗಿದರು, ಬೇರೆ ಬೇರೆ ದಾರಿಗಳಲ್ಲಿ ಹೋಗತೊಡಗಿದರು. ಅವರು ಬೇರೆ ಬೇರೆ ಕೂಟಗಳನ್ನು ಸ್ಥಾಪಿಸಿಕೊಂಡರು. ಆದರೆ ಈ ಕೂಟಗಳು ಪರಸ್ಪರ ವೈರಭಾವ ತಳೆದಿದ್ದವು. ನಿಂದೆ, ಪರಸ್ಪರ ದೂಷಣೆಗಳು ಪ್ರಾರಂಭ ವಾದವು. ಅವರು ನಾಚಿಕೆಯನ್ನು ತಿಳಿಯುವಂತಾದರು, ಅದನ್ನು ಒಂದು ಸದ್ಗುಣವನ್ನಾಗಿ ಮಾಡಿಕೊಂಡರು. ಅವರು ಅಹಂಭಾವದ ಅರ್ಥವನ್ನೂ ತಿಳಿದು ಕೊಂಡರು. ಪ್ರತಿಯೊಂದು ಕೂಟವೂ ತನ್ನದೇ ಧ್ವಜವನ್ನು ಹಾರಿಸಿತು. ಅವರು ತಮ್ಮ ಪ್ರಾಣಿಗಳ ಬಗೆಗೆ ಕ್ರೌರ್ಯದಿಂದ ವರ್ತಿಸತೊಡಗಿದರು. ಅವು ಅವರಿಂದ ದೂರ ಸರಿದು ಕಾಡುಗಳನ್ನು ಸೇರಿಕೊಂಡು ಅವರಿಗೆ ಶತ್ರುಗಳಾಗಿ ಪರಿವರ್ತಿತ ವಾದವು. ಸಂಪತ್ತಿನ ಹಂಚಿಕೆಗಾಗಿ, ಸಾರ್ವಭೌಮತ್ವಕ್ಕಾಗಿ, ವೈಯಕ್ತಿಕ ಪ್ರಾಮು ಖ್ಯಕ್ಕಾಗಿ, ನಿನ್ನದು ನನ್ನದುಗಳಿಗಾಗಿ, ಹೋರಾಟ ಪ್ರಾರಂಭವಾಯಿತು. ಅವರೀಗ ಬೇರೆ ಬೇರೆ ಭಾಷೆಗಳನ್ನು ಮಾತನಾಡತೊಡಗಿದರು. ಅವರು ದುಃಖದ ರುಚಿ ಕಂಡರು, ದುಃಖವನ್ನು ಪ್ರೀತಿಸುವಂತಾದರು. ಅವರು ಸಂಕಟಕ್ಕಾಗಿ ಹಂಬಲಿಸ ತೊಡಗಿದರು. ಸಂಕಟದ ಮೂಲಕವಷ್ಟೆ ಸತ್ಯವನ್ನು ಸಾಧಿಸಲು ಸಾಧ್ಯವೆಂದು ಹೇಳಿದರು. ಆಮೇಲೆ ವಿಜ್ಞಾನವನ್ನು ಜಾರಿಗೆ ತರಲಾಯಿತು. ಅವರು ಕೆಟ್ಟ ತನವನ್ನು ಕಲಿತನಂತರ ಭ್ರಾತೃತ್ವ ಹಾಗೂ ಮಾನವತೆಯ ಬಗೆಗೆ ಮಾತನಾಡ ತೊಡಗಿದರು, ಆ ಪ್ರಕಲ್ಪನೆಗಳ ಅರ್ಥವನ್ನು ತಿಳಿದುಕೊಂಡರು. ಪಾಪಕೃತ್ಯ ಗಳನ್ನು ಎಸಗತೊಡಗಿದಾಗ ಅವರು ನ್ಯಾಯ ನಿಯಮಗಳ ವಿಚಾರವನ್ನು ಆವಿಷ್ಕರಿಸಿದರು. ನ್ಯಾಯ ರಕ್ಷಣೆಗಾಗಿ ಅವರು ಬೃಹತ್ ಕಾನೂನು ಸಂಹಿತೆ ಗಳನ್ನು ಏರ್ಪಡಿಸಿಕೊಂಡರು. ಈ ಸಂಹಿತೆಗಳಿಗೆ ಭದ್ರತೆಯನ್ನು ಒದಗಿಸಲೋ ಸುಗ ಶಿರಚ್ಛೇದಕ ಯಂತ್ರವನ್ನು ಸ್ಥಾಪಿಸಿದರು. ತಾವು ಏನನ್ನು ಕಳೆದುಕೊಂಡಿ ದ್ದರು ಎಂಬ ಬಗೆಗೆ ಅವರಿಗೆ ಅಸ್ಪಷ್ಟ ನೆನಪಷ್ಟೆ ಇದ್ದಿತು. ಒಂದು ಕಾಲದಲ್ಲಿ ತಾವು ಮುಗ್ಧರಾಗಿದ್ದರು, ಸಂತಸದಿಂದ ಕೂಡಿದ್ದರು ಎಂಬುದನ್ನು ಅವರು ನಂಬಲೂ ನಿರಾಕರಿಸಿದರು. ತಾವು ಒಂದು ಕಾಲದಲ್ಲಿ ಅಷ್ಟೊಂದು ಸಂತಸದಿಂದ ಇದ್ದರು ಎಂಬ ವಿಚಾರವೇ ಅವರನ್ನು ನಗುವಂತೆ ಮಾಡಿತು ಮತ್ತು ಅವರು ಅದನ್ನು ಒಂದು ಕನಸು ಎಂದು ಕರೆದರು. ಅವರು ಆ ಸ್ಥಿತಿಯನ್ನು ಪ್ರತಿಮೆಗಳಲ್ಲಿ ಅಥವಾ

ಸ್ಪಷ್ಟ ರೂಪಗಳಲ್ಲಿ ಕಲ್ಪಿಸಿಕೊಂಡು ಕಾಣಲೂ ಅಸಮರ್ಥರಾದರು. ಆದರೆ ಅವರು ತಮ್ಮ ಹಿಂದಿನ ಸುಖದ ಬಾಳುವೆಯಲ್ಲಿ ಎಲ್ಲ ನಂಬಿಕೆ ಕಳೆದುಕೊಂಡು ಅದನ್ನೊಂದು ರಮ್ಯಕಥೆ ಎಂದು ಕರೆದರೂ, ವಿಚಿತ್ರವೆನ್ನುವಂತೆ ಅಥವಾ ಪವಾಡಾತ್ಮಕವೆನ್ನುವಂತೆ ಮುಗ್ಧ ಸಂತಸ ಸ್ಥಿತಿಯನ್ನು ಮತ್ತೆ ಪಡೆದುಕೊಳ್ಳಲು ಎಷ್ಟು ಬಯಸಿದರೆಂದರೆ, ಮಕ್ಕಳಂತೆ ತಮ್ಮ ಈ ಹೃತ್ಪೂರ್ವಕ ಬಯಕೆಗೆ ವಶರಾದರು ಮತ್ತು ಈ ಬಯಕೆಗೆ ದೈವತ್ವವನ್ನಾರೋಪಿಸಿ ಅಸಂಖ್ಯಾತ ದೈವಮಂದಿರಗಳನ್ನು ಸ್ಥಾಪಿಸಿದರು, ತಮ್ಮ ಸ್ವಂತ ವಿಚಾರಕ್ಕೇ ಅಥವಾ ತಮ್ಮ "ಬಯಕೆ"ಗೇ ಪ್ರಾರ್ಥನೆ ಸಲ್ಲಿಸತೊಡಗಿದರು. ಅದು ಎಂದಿಗೂ ಸತ್ಯವಾಗಲಾರದು ಅಥವಾ ಅವರ ಪ್ರಾರ್ಥನೆಯನ್ನು ಎಂದಿಗೂ ಈಡೇರಿಸಲಾಗದು ಎಂಬುದನ್ನು ಚೆನ್ನಾಗಿ ತಿಳಿದೂ ಅವರು ಅದನ್ನು ಕಣ್ಣೀರು ಸುರಿಸುತ್ತ ಆರಾಧಿಸತೊಡಗಿದರು, ಪೂಜಿಸತೊಡಗಿದರು. ಆದರೂ ಅವರು ಕಳೆದುಕೊಂಡಿದ್ದ ಆ ಮುಗ್ಧ ಸಂತಸ ಜಗತ್ತನ್ನು ಅವರಿಗೆ ಹಿಂದಿರುಗಿಸುವುದು ಸಾಧ್ಯವಾದುದೇ ಆದಲ್ಲಿ, ಅಥವಾ ಯಾರಾದರೊಬ್ಬರು ಅವರಿಗೆ ಆ ಜಗತ್ತನ್ನು ಒಂದು ಕ್ಷಣ ಮತ್ತೆ ತೋರಿಸಿ ಅವರು ಅದಕ್ಕೆ ಹಿಂದಿರುಗಲು ಬಯಸುವರೇ ಎಂದು ಕೇಳಿದ್ದಲ್ಲಿ ಅವರು ಬಹುಶಃ ನಿರಾಕರಿಸುತ್ತಿದ್ದರು. ಅವರು ನನಗೆ ಹೇಳಿದರು: "ನಾವು ಮೋಸದವರಾಗಿ, ಕೆಡುಕಿನವರಾಗಿ, ಅನ್ಯಾಯದವರಾಗಿ ಇದ್ದರೂ ಪರವಾಗಿಲ್ಲ, ಆದರೆ ನಾವು ಹಾಗೆಂದು ಬಲ್ಲೆವು, ನಾವು ಅದಕ್ಕಾಗಿ ರೋದಿಸುತ್ತೇವೆ, ನಮ್ಮನ್ನು ಸಂಕಟಕ್ಕೆ ಗುರಿಪಡಿಸಿಕೊಳ್ಳುತ್ತೇವೆ. ನಾವು ನಮ್ಮ ಮೇಲೆಯೇ ಮಾಡಿಕೊಳ್ಳುವ ಶಿಕ್ಷೆಯು, ನಮ್ಮ ಮೇಲೆ ವಿಚಾರಣೆ ನಡೆಸಲಿರುವ ಆ ಕರುಣಾಳು ನ್ಯಾಯಮೂರ್ತಿಯು – ಈತನ ಹೆಸರನ್ನು ನಾವು ತಿಳಿಯೆವು – ನೀಡಲಿರುವ ಶಿಕ್ಷೆಗಿಂತ ಬಹುಶಃ ಹೆಚ್ಚು ಕಠಿಣವಾಗಿರುತ್ತದೆ. ಆದರೆ ನಮ್ಮ ಬಳಿ ಈಗ ವಿಜ್ಞಾನವಿದೆ. ಅದರ ಮೂಲಕ ನಾವು ಮತ್ತೊಮ್ಮೆ ಸತ್ಯವನ್ನು ಹುಡುಕಿ ಕಂಡುಹಿಡಿಯುವೆವು. ಈ ಬಾರಿ ನಾವು ಅದನ್ನು ಬುದ್ಧಿಪೂರ್ವಕವಾಗಿ ಅರ್ಥಮಾಡಿಕೊಳ್ಳುವೆವು. ಜ್ಞಾನವು ಭಾವನೆಗಿಂತ ಹೆಚ್ಚು ಉಚ್ಚವಾದುದು, ಜೀವನ ಪ್ರಜ್ಞೆ ಜೀವನಕ್ಕಿಂತ ಹೆಚ್ಚು ಉಚ್ಚವಾದುದು. ವಿಜ್ಞಾನವು ನಮಗೆ ವಿವೇಕವನ್ನು ಕೊಡುವುದು, ವಿವೇಕವು ನಿಯಮಗಳನ್ನು ನಿರ್ಧರಿಸುವುದು, ಸುಖದ ನಿಯಮಗಳ ತಿಳಿವಳಿಕೆಯು ಸುಖಕ್ಕಿಂತ ಹೆಚ್ಚು ಉಚ್ಚವಾದುದು." ಅವರು ನನಗೆ ಇದನ್ನೇ ಹೇಳಿದುದು. ಇದನ್ನು ಹೇಳಿದ ಮೇಲೆ ಅವರಲ್ಲಿ ಒಬ್ಬೊಬ್ಬನೂ ತನ್ನನ್ನು ಇತರೆಲ್ಲರಿಗಿಂತ ಹೆಚ್ಚು ಪ್ರೀತಿಸಿಕೊಳ್ಳತೊಡಗಿದ. ಅವನು ಬೇರೆ ರೀತಿ ಮಾಡಲು ಸಾಧ್ಯವೂ ಇರಲಿಲ್ಲ. ಪ್ರತಿಯೊಬ್ಬನೂ ತನ್ನ ಅಹಂಅನ್ನು ಎಷ್ಟು ಜಾಗರೂಕತೆಯಿಂದ ಕಾಪಾಡಿಕೊಳ್ಳುತ್ತಿದ್ದನೆಂದರೆ, ಅವನು ಇತರರ ಅಹಂಅನ್ನು ಅಲ್ಪಗಾಣಿಸುವತ್ತವೇ ಹಾಗೂ

ತೇಜೋವಧೆಗೀಡು ಮಾಡುವತ್ತವೇ ತನ್ನೆಲ್ಲ ಯತ್ನಗಳನ್ನೂ ನಿರ್ದೇಶಿಸುತ್ತಿದ್ದ: ಇದೇ ಅವನ ಜೀವನದ ಧ್ಯೇಯಕಾರ್ಯವಾಯಿತು. ಗುಲಾಮಗಿರಿ ಬಂದಿತು. ಸ್ವಯಮೇಚ್ಛೆಯ ಗುಲಾಮಗಿರಿಯೂ ಬಂದಿತು. ದುರ್ಬಲರು ಮನಃಪೂರ್ವಕ ವಾಗಿಯೇ ಸಬಲರಿಗೆ ತಮ್ಮನ್ನು ಅಧೀನಪಡಿಸಿಕೊಂಡರು. ತಮಗಿಂತ ಹೆಚ್ಚು ದುರ್ಬಲರಾದವರನ್ನು ಮರ್ದಿಸಲು ಅವರಿಗೆ ನೆರವಾಗಲೆಂದಷ್ಟೆ ಈ ದುರ್ಬಲರು ಸಬಲರಿಗೆ ತಮ್ಮನ್ನು ಅಧೀನಪಡಿಸಿಕೊಂಡುದು. ಋಜು ಮಾರ್ಗದವರೂ ಕೆಲ ವರಿದ್ದರು. ಅವರು ಈ ಜನರ ಬಳಿಗೆ ಬಂದು ಕಣ್ಣೀರು ಕರೆಯುತ್ತ ಆ ಜನರ ಅಹಂಕಾರದ ಬಗೆಗೆ, ಅವರು ನಾಚಿಕೆಯ, ಸಾಮರಸ್ಯದ ಹಾಗೂ ಮಿತಿಮೇರೆಗಳ ಎಲ್ಲ ಭಾವನೆಯನ್ನೂ ಕಳೆದುಕೊಂಡಿದ್ದುದರ ಬಗೆಗೆ, ತಿಳಿಸಿದರು. ಆದರೆ ಇದ ಕ್ಕಾಗಿ ಆ ಋಜುಮಾರ್ಗಿಗಳನ್ನು ಗೇಲಿ ಮಾಡಲಾಯಿತು, ಅವರ ಮೇಲೆ ಕಲ್ಲು ತೂರಲಾಯಿತು. ದೈವಮಂದಿರಗಳ ಹೊಸ್ತಿಲುಗಳು ಪವಿತ್ರ ರಕ್ತದಿಂದ ತೋಯ್ದುವು. ಎಲ್ಲರನ್ನೂ ಮತ್ತೊಮ್ಮೆ ಹೇಗೆ ಅತ್ಯುತ್ತಮವಾಗಿ ಐಕ್ಯಗೊಳಿಸುವುದು ಎಂದು ಯೋಜಿಸತೊಡಗಿದ ಜನರು ಕಾಣಿಸಿಕೊಂಡರು. ಪ್ರತಿಯೊಬ್ಬನೂ ತನ್ನನ್ನೇ ಇತರೆಲ್ಲರಿಗೂ ಮೀರಿ ಪ್ರೀತಿಸಿಕೊಂಡು ಹೋಗಬೇಕು, ಅದೇ ಹೊತ್ತಿನಲ್ಲಿ ಅವನು ಇತರರಿಗೆ ಅಡ್ಡಿಯಾಗಿರಬಾರದು – ಈ ರೀತಿಯಲ್ಲಿ ಎಲ್ಲರನ್ನೂ ಒಂದು ಗೂಡಿಸಲು ಅವರು ಹವಣಿಸಿದರು. ಹೀಗೆ ಎಲ್ಲರೂ ಸಾಮರಸ್ಯವೆನ್ನುವಂಥ ಸಮಾಜದಲ್ಲಿ ಒಟ್ಟಾಗಿ ಬಾಳಬೇಕು ಎಂಬುದು ಅವರ ಮತ. ಈ ವಿಚಾರದ ಹಿತದೃಷ್ಟಿಯಿಂದ ಮಹಾಯುದ್ಧಗಳನ್ನು ಹೂಡಲಾಯಿತು. ಅದೇ ಕಾಲದಲ್ಲಿ, ಯುದ್ಧದಲ್ಲಿ ತೊಡಗಿದ್ದ ಯೋಧರೆಲ್ಲರೂ ವಿಜ್ಞಾನ ವಿವೇಕ ಹಾಗೂ ಆತ್ಮ ರಕ್ಷಣೆಯ ಸಹಜಪ್ರವೃತ್ತಿಗಳು ಕೊನೆಯಲ್ಲಿ ಮಾನವಕುಲವನ್ನು ಹೊಂದಾಣಿಕೆಯ ಹಾಗೂ ವಿವೇಕಯುತವಾದ ಸಮಾಜದಲ್ಲಿ ಒಂದುಗೂಡುವಂತೆ ಬಲಾತ್ಕರಿ ಸುವುವು ಎಂದು ದೃಢವಾಗಿ ನಂಬಿದ್ದರು. ಈ ಮಧ್ಯೆ ಈ ಪ್ರಕ್ರಿಯೆಯನ್ನು ತ್ವರಿತಗೊಳಿಸಲೋಸುಗ "ಬುದ್ಧಿವಂತ"ರಾದ ಜನ ತಮ್ಮ ವಿಚಾರವನ್ನು ನಂಬ ದಂತಹವರನ್ನು ಮತ್ತು "ಅವಿವೇಕಿಗಳನ್ನು" ಸಾಧ್ಯವಾದಷ್ಟೂ ಬೇಗ ನಾಶ ಗೊಳಿಸಲು ಯತ್ನಿಸಿದರು. ತಮ್ಮ ವಿಚಾರದ ದಿಗ್ವಿಜಯಕ್ಕೆ ಆ ಅವಿವೇಕಿಗಳು ಅಡ್ಡಿಯಾಗಬಾರದೆಂಬುದು "ಬುದ್ಧಿವಂತ" ಜನರ ಭಾವನೆಯಾಗಿದ್ದಿತು. ಆದರೆ ಆತ್ಮರಕ್ಷಣೆಯ ಸಹಜಪ್ರವೃತ್ತಿಯು ಬೇಗನೆಯೇ ದುರ್ಬಲಗೊಳ್ಳತೊಡಗಿತು. ತಮ್ಮ ಅಹಂಕಾರಕ್ಕೆ ಅಥವಾ ವಿಷಯಲಂಪಟತ್ವಕ್ಕೆ ಮಾರುಹೋದ ಜನರು, ಎಲ್ಲವೂ ಬೇಕು, ಇಲ್ಲದಿದ್ದರೆ ಏನೂ ಬೇಡ ಎಂದು ಖಡಾಖಂಡಿತವಾಗಿ ಕೇಳತೊಡ ಗಿದರು. ಎಲ್ಲವನ್ನೂ ಪಡೆದುಕೊಳ್ಳಲು ಅವರು ಪಾತಕಗಳನ್ನೆಸಗತೊಡಗಿದರು, ಅದರಲ್ಲಿ ವಿಫಲರಾದರೆ ಆತ್ಮಹತ್ಯೆ ಮಾಡಿಕೊಳ್ಳತೊಡಗಿದರು. ಅನಂತರ ಶೂನ್ಯ

ತೆಯಲ್ಲಿ ಚಿರಶಾಂತಿ ಪಡೆದುಕೊಳ್ಳಲೋಸುಗ ಅಸ್ತಿತ್ವರಾಹಿತ್ಯದ ಹಾಗೂ ಸ್ವಯಂ ವಿನಾಶದ ಪಂಥವುಳ್ಳ ಮತಧರ್ಮಗಳನ್ನು ಜಾರಿಗೆ ತರಲಾಯಿತು. ಈ ಜನ ಕೊನೆಗೆ ತಮ್ಮ ಅವಿವೇಕದ ಶ್ರಮದಿಂದ ಬಳಲಿದರು. ಅವರ ಮುಖಗಳ ಮೇಲೆ ಸಂಕಟದ ಛಾಯೆ ಆವರಿಸಿತು. ಸಂಕಟವೇ ಸೌಂದರ್ಯ, ಸಂಕಟಪಡುವುದರಲ್ಲೇ ವಿವೇಕ ಇರುವುದು ಎಂದವರು ಘೋಷಿಸಿದರು. ಅವರು ತಮ್ಮ ಹಾಡುಗಳಲ್ಲಿ ದುಃಖ ಸಂಕಟಗಳನ್ನು ಹೊಗಳಿದರು. ನಾನು ಅವರ ಮಧ್ಯೆ ನಡೆದಾಡಿದೆ, ಅವರು ದುಸ್ಥಿತಿಗೆ ಇಳಿದುದಕ್ಕಾಗಿ ನನ್ನ ಕೈ ಹಿಸುಕಿಕೊಂಡೆ, ಅವರಿಗಾಗಿ ಕಣ್ಣೀರು ಸುರಿಸಿದೆ. ಅವರ ಬಗೆಗೆ ನನ್ನ ಪ್ರೇಮ ಈಗ ಬಹುಶಃ ಅವರು ಮುಗ್ಧರಾಗಿ ಚೆಲುವಾಗಿದ್ದಾಗ, ಅವರ ಮುಖಗಳು ಯಾವ ರೀತಿಯ ಸಂಕಟವನ್ನೂ ತೋರಿಸದೆ ಇದ್ದಾಗ ನಾನು ಅವರ ಬಗೆಗೆ ಹೊಂದಿದ್ದ ಪ್ರೇಮಕ್ಕಿಂತ ಇನ್ನೂ ಹೆಚ್ಚಾಗಿದ್ದಿತು. ಅವರು ಕಲುಷಿತಗೊಳಿಸಿದ ಆ ಭೂಮಿಯನ್ನು ನಾನು ಅದು ಸ್ವರ್ಗವಾಗಿದ್ದಾಗ ಪ್ರೀತಿಸುತ್ತಿದ್ದುದಕ್ಕಿಂತ ಹೆಚ್ಚು ಪ್ರೀತಿಸತೊಡಗಿದೆ, ಅದರಲ್ಲೀಗ ದುಃಖವಿದ್ದಿತು ಎಂಬ ಏಕೈಕ ಕಾರಣದಿಂದ. ಅಯ್ಯೋ, ನಾನು ಯಾವತ್ತೂ ದುಃಖ ವೇದನೆಯನ್ನೇ ಹೆಚ್ಚು ಇಷ್ಟಪಟ್ಟಿದ್ದೇನೆ. ಆದರೆ ಅದು ನನಗೆ, ನನಗಷ್ಟೆ ಸಂಬಂಧಿಸಿದುದಾಗಲಷ್ಟೆ. ಅವರಿಗೆ ಸಂಬಂಧಿಸಿದಾಗ ನಾನು ಮರುಕದಿಂದ ಅತ್ತೆ. ನಾನು ಹತಾಶೆಯಿಂದ ಅವರತ್ತ ನನ್ನ ಕೈಗಳನ್ನು ಎತ್ತಿಹಿಡಿದೆ, ನನ್ನನ್ನೇ ತೆಗಳಿಕೊಂಡೆ, ಶಪಿಸಿಕೊಂಡೆ, ದ್ವೇಷಿಸಿಕೊಳ್ಳತೊಡಗಿದೆ. ನಾನೇ ಅದನ್ನೆಲ್ಲ ಮಾಡಿದುದು, ನಾನೇ ಮಾಡಿದುದು; ನಾನೇ ಅವರಲ್ಲಿಗೆ ಈ ಭ್ರಷ್ಟಾಚಾರ, ಕೇಡಿಗತನ ಹಾಗೂ ಮೋಸದ ವಿಷಾಣುವನ್ನು ತಂದುದು, ಎಂದು ಅವರಿಗೆ ಹೇಳಿದೆ. ನನ್ನನ್ನು ಶಿಲುಬೆಗೇರಿಸಬೇಕೆಂದು ನಾನವರನ್ನು ಬೇಡಿಕೊಂಡೆ. ಶಿಲುಬೆಯನ್ನು ಹೇಗೆ ತಯಾರಿಸಬೇಕೆಂಬುದನ್ನೂ ಅವರಿಗೆ ತಿಳಿಸಿಕೊಟ್ಟೆ. ನನ್ನನ್ನು ನಾನೇ ಕೊಂದುಕೊಳ್ಳುವ ಶಕ್ತಿ ನನಗಿರಲಿಲ್ಲ, ಅದನ್ನು ನಾನು ಮಾಡದಾಗಿದ್ದೆ. ಆದರೆ ನಾನು ಅವರ ಕೈಯಿಂದ ಸಂಕಟಕ್ಕೊಳಗಾಗ ಬಯಸಿದ್ದೆ, ಸಂಕಟಕ್ಕೊಳಗಾಗಲು ನಾನು ಹಂಬಲಿಸಿದೆ, ಈ ಸಂಕಟದಲ್ಲಿ ನನ್ನ ರಕ್ತ ತೊಟ್ಟುತೊಟ್ಟಾಗಿ ಹರಿದು ಹೋಗಬೇಕೆಂದು ಹಂಬಲಿಸಿದೆ. ಆದರೆ ಅವರು ನನ್ನ ಮಾತು ಕೇಳಿ ನಕ್ಕರು, ಅಷ್ಟೆ. ಕೊನೆಗೆ ನನ್ನನ್ನು ಒಬ್ಬ ಸಾಧು ಸ್ವಭಾವದ ಭ್ರಾಂತನೆಂದು ಪರಿಗಣಿಸತೊಡಗಿದರು. ಅವರು ನನ್ನನ್ನು ದೋಷಮುಕ್ತನನ್ನಾಗಿ ಮಾಡಿದರು, ತಾವು ಏನನ್ನು ಅಪೇಕ್ಷಿಸಿದ್ದರೋ ಅದನ್ನೇ ಪಡೆದರೆಂದೂ, ತಾವು ಈಗ ಏನನ್ನು ಪಡೆದರೋ ಅದು ಬೇರೆ ಆಗಿರಲು ಸಾಧ್ಯವಿರಲಿಲ್ಲವೆಂದೂ, ತಿಳಿಸಿದರು. ಕೊನೆಗೆ ಅವರು, ನಾನು ಅವರಿಗೆ ಅಪಾಯಕಾರಿಯಾಗುತ್ತಿದ್ದೇನೆಂದೂ, ಸುಮ್ಮನಿರದಿದ್ದರೆ ನನ್ನನ್ನು ಹುಚ್ಚರ ಮನೆಯಲ್ಲಿ ಬೀಗ ಹಾಕಿ ಇರಿಸುವರೆಂದೂ, ಘೋಷಿಸಿದರು. ಇದನ್ನು

ಕೇಳಿ ದುಃಖ ನನ್ನ ಹೃದಯವನ್ನು ಎಷ್ಟು ಉಗ್ರವಾಗಿ ಅಡರಿತೆಂದರೆ, ನನಗೆ ಉಸಿರಾಡಲೇ ಆಗದಂತಾಯಿತು. ನಾನು ಸಾಯುತ್ತಿದ್ದೇನೆಂದು ನನಗೆ ಭಾಸವಾಯಿತು. ಅನಂತರ.... ಆಗಲೇ ನಾನು ಎಚ್ಚರಗೊಂಡುದು.

* * *

ಆಗಲೇ ಬೆಳಕಾಗಿತ್ತು, ಆದರೆ ಇನ್ನೂ ಅರುಣೋದಯ ಆಗಿರಲಿಲ್ಲ. ಆಗ ಆರು ಗಂಟೆಯ ಸಮೀಪವಾಗಿದ್ದಿತಷ್ಟೆ. ನಾನು ಆರಾಮಕುರ್ಚಿಯಲ್ಲಿ ಎಚ್ಚರಗೊಂಡೆ. ಮೋಂಬತ್ತಿ ಉರಿದು ಹೋಗಿತ್ತು. ಕ್ಯಾಪ್ಟನ್ನನ ಕೋಣೆಯಲ್ಲೂ ಮೌನ ನೆಲಸಿತ್ತು. ನಮ್ಮ ಮನೆಗೆ ಅಪರೂಪವಾದಂಥ ಮೌನ ರಾಜ್ಯಭಾರ ನಡೆಸಿದ್ದಿತು. ನಾನು ತಕ್ಷಣವೇ ಬೆರಗಾಗಿ ಜಿಗಿದು ನಿಂತೆ. ಹಿಂದೆಂದೂ ನನಗೆ ಇದರ ದೂರ ಹೋಲಿಕೆ ಹೊಂದಿರುವಂತಹ ಯಾವ ಅನುಭವವೂ ಉಂಟಾಗಿರಲಿಲ್ಲ. ಉದಾಹರಣೆಗೆ, ಕುರ್ಚಿಯಲ್ಲಿ ಕುಳಿತೇ ನಿದ್ರೆ ಹೋಗುವಂತಹ ನಿಜಕ್ಕೂ ಮುಖ್ಯವಲ್ಲದ ಸಣ್ಣ ಪುಟ್ಟ ವಿವರಗಳಲ್ಲೂ ಸಹ ಯಾವುದೂ ಜರುಗಿರಲಿಲ್ಲ. ಇದ್ದಕ್ಕಿದ್ದಂತೆ, ಇಂದ್ರಿಯಜ್ಞಾನವನ್ನು ಮತ್ತೆ ಪಡೆದುಕೊಂಡು ನಾನು ನಿಂತಂತೆ, ನನ್ನ ರಿವಾಲ್ವರ್ ನನ್ನ ಮುಂದೆ ಎಲ್ಲ ಸಿದ್ಧವಾಗಿ ಗುಂಡು ತುಂಬಿಕೊಂಡು ಇದ್ದುದು ಕಂಡುಬಂದಿತು. ಬೇಗ ಅದನ್ನು ಪಕ್ಕಕ್ಕೆ ತಳ್ಳಿದೆ. ಓಹ್, ನನಗೀಗ ಜೀವನ ಬೇಕು, ಜೀವನ! ನಾನು ನನ್ನ ಕೈಗಳನ್ನೆತ್ತಿ ನಿತ್ಯಸತ್ಯವನ್ನು ಪ್ರಾರ್ಥಿಸಿಕೊಂಡೆ. ಅಥವಾ ಅತ್ತೆ ಎಂದೇ ಹೇಳಬೇಕು, ಏಕೆಂದರೆ ನನ್ನೆಲ್ಲ ಇರುವಿಕೆಯೂ ಹರ್ಷೋನ್ಮಾದದ ಮಟ್ಟಕ್ಕೆ, ಅಗಾಧ ಹರ್ಷೋನ್ಮಾದದ ಮಟ್ಟಕ್ಕೆ, ಏರಿಸಲ್ಪಟ್ಟಿದ್ದಿತು. ಹೌದು, ನಾನು ಜೀವಿಸಬಯಸಿದ್ದೆ, ಜೀವನದ ಪ್ರಚಾರ ಮಾಡಬಯಸಿದ್ದೆ! ತಕ್ಷಣವೇ ಈಗಲೇ ಪ್ರಾರಂಭಿಸಿ ಇಡೀ ಜೀವಮಾನ ಪ್ರಚಾರ ಮಾಡ ಬಯಸಿದ್ದೆ. ನಾನು ಪ್ರಚಾರ ಮಾಡುವೆನು, ಪ್ರಚಾರ ಮಾಡಬೇಕು – ಏನನ್ನು? ಸತ್ಯವನ್ನು. ಏಕೆಂದರೆ ನಾನದನ್ನು ಕಂಡಿದ್ದೆ, ಸ್ವಂತ ಕಣ್ಣುಗಳಿಂದ ಕಂಡಿದ್ದೆ, ಅದರೆಲ್ಲ ವೈಭವವನ್ನು ಕಂಡಿದ್ದೆ.

ಹಾಗಾಗಿ ನಾನು ಅಂದಿನಿಂದ ಪ್ರಚಾರ ನಡೆಸುತ್ತಿದ್ದೇನೆ. ಅಷ್ಟೇ ಅಲ್ಲ. ನನ್ನನ್ನು ನೋಡಿ ಗೇಲಿಮಾಡುವವರೇ ಈಗ ನನಗೆ ಬೇರೆಲ್ಲರಿಗಿಂತ ಹೆಚ್ಚು ಪ್ರಿಯರಾಗಿದ್ದಾರೆ. ಇದು ಯಾಕೆ ಹೀಗೋ ನನಗೆ ತಿಳಿಯದು. ನಾನು ವಿವರಿಸಲಾರೆನು ಕೂಡ. ಆದರೆ ಅದು ಹಾಗಿರಲಿ. ನಾನಾಗಲೇ ದಾರಿ ತಪ್ಪುತ್ತಿದೇನೆಂದು ಅವರು ಹೇಳುತ್ತಾರೆ. ಅಂದರೆ ನಾನು ಈಗ ಅಷ್ಟೊಂದು ತೀವ್ರವಾಗಿ ದಾರಿ ತಪ್ಪುತ್ತಿದ್ದರೆ ನನಗೆ ಮುಂದೆ ಹೇಗೆ ಹೋಗಲು ಸಾಧ್ಯ? ನಿಜ, ನಾನು ದಾರಿ ತಪ್ಪುತ್ತಿದ್ದೇನೆ, ಮುಂದುವರಿದಂತೆ ಇನ್ನೂ ಹೆಚ್ಚು ತಪ್ಪಬಹುದು. ನಾನು ನಿಜಕ್ಕೂ ತಪ್ಪುವೆನು,

ಅತ್ಯುತ್ತಮವಾಗಿ ಹೇಗೆ ಪ್ರಚಾರ ಮಾಡಬೇಕು ಎನ್ನುವುದನ್ನು, ಅಂದರೆ ಯಾವ ಮಾತುಗಳಿಂದ ಮತ್ತು ಯಾವ ಕೃತಿಗಳಿಂದ ಪ್ರಚಾರ ಮಾಡಬೇಕು ಎನ್ನುವುದನ್ನು ತಿಳಿಯುವ ಮುನ್ನ ಅನೇಕ ಬಾರಿ ದಾರಿ ತಪ್ಪುವೆನು, ಎನ್ನುವುದರಲ್ಲಿ ಸಂಶಯವಿಲ್ಲ, ಏಕೆಂದರೆ ಅದೊಂದು ಅತ್ಯಂತ ಕಷ್ಟಕರವಾದ ಕಾರ್ಯ. ಅದೆಲ್ಲ ನನಗೆ ಈಗಲೂ ಹಗಲ ಬೆಳಕಿನಷ್ಟು ಸ್ಪಷ್ಟವಾಗಿದೆ, ನೋಡಿ. ಆದರೆ, ಹೇಳಿ, ಯಾರು ತಾನೆ ದಾರಿ ತಪ್ಪುವುದಿಲ್ಲ? ಆದರೂ ಎಲ್ಲರೂ ಅದೇ ವಸ್ತುವಿನತ್ತವೇ ಹೋಗುತ್ತಿದ್ದಾರೆ, ಕೊನೆಯ ಪಕ್ಷ ಎಲ್ಲರೂ ಅದಕ್ಕಾಗಿಯೇ ಪ್ರಯತ್ನಪಡುತ್ತಾರೆ. ಎಲ್ಲರೂ – ಪ್ರಾಜ್ಞನಿಂದ ಹಿಡಿದು ಅತ್ಯಂತ ಕೀಳು ಪುಂಡನವರೆಗೂ, ಎಲ್ಲರೂ – ಅದಕ್ಕಾಗಿಯೇ ಪ್ರಯತ್ನಿಸುತ್ತಿದ್ದಾರೆ. ಆದರೆ ಎಲ್ಲರೂ ಬೇರೆಬೇರೆ ಮಾರ್ಗಗಳನ್ನು ಹಿಡಿಯುತ್ತಾರಷ್ಟೆ. ಈ ಸತ್ಯ ಹಳತಾದುದು, ಆದರೆ ಇಲ್ಲಿ ಹೊಸತಾದುದೊಂದಿದೆ: ನಾನು ಅಷ್ಟೊಂದು ಭಾರಿ ತಪ್ಪು ಮಾಡಲಾರೆ, ನೋಡಿ. ಏಕೆಂದರೆ ನಾನು ನಿಜವನ್ನು ಕಂಡಿದ್ದೇನೆ. ಈ ಭೂಮಿಯ ಮೇಲೆ ವಾಸಿಸಿಕೊಂಡಿರುವ ಸಾಮರ್ಥ್ಯವನ್ನು ಕಳೆದುಕೊಳ್ಳದೆಯೇ ಜನ ಸುಂದರವಾಗಿರಲು ಸಂತಸದಿಂದಿರಲು ಸಾಧ್ಯ – ಇದನ್ನು ನಾನು ಕಂಡಿದ್ದೇನೆ, ತಿಳಿದಿದ್ದೇನೆ. ದುಷ್ಟತನ ಮನುಷ್ಯನ ಸಹಜ ಸ್ಥಿತಿ ಎಂದು ನಾನು ನಂಬಲಾರೆ, ನಂಬುವುದಿಲ್ಲ. ಆದರೂ ನನ್ನ ಈ ಮನೋನಂಬಿಕೆಯೇ ಅವರೆಲ್ಲ ನನ್ನನ್ನು ಕಂಡು ನಗುವಂತೆ ಮಾಡಿದೆ. ಆದರೆ ನಾನು ಈ ಮನೋನಂಬಿಕೆಯನ್ನು ಹೊಂದಿರದೆ ಇರಲು ಹೇಗೆ ಸಾಧ್ಯ? ನಾನು ನಿಜವನ್ನು ಕಂಡಿದ್ದೇನೆ. ಅದೇನೂ ನನ್ನ ಕಲ್ಪನೆಯ ಅಥವಾ ನನ್ನ ಮನಸ್ಸಿನ ಭ್ರಾಂತಿಯಲ್ಲ. ನಾನದನ್ನು ಕಂಡಿದ್ದೇನೆ, ಕಂಡಿದ್ದೇನೆ. ಅದರ ಜೀವಂತ ಸ್ವರೂಪವು ನನ್ನ ಆತ್ಮವನ್ನು ಸದಾಕಾಲಕ್ಕೂ ಸೆರೆಹಿಡಿದಿರಿಸಿದೆ. ನಾನದನ್ನು ಎಷ್ಟು ಪರಿಪೂರ್ಣ ಸ್ಥಿತಿಯಲ್ಲಿ ಕಂಡಿದ್ದೇನೆಂದರೆ, ಅದು ಮನುಷ್ಯರ ಮಧ್ಯೆ ಇರಲಾರದು ಎಂದು ನಂಬಲು ನಾನು ನಿರಾಕರಿಸುತ್ತೇನೆ. ಆದ್ದರಿಂದ ನಾನು ದಾರಿ ತಪ್ಪುವುದು ಹೇಗೆ ಸಾಧ್ಯ? ಒಂದೆರಡು ಬಾರಿ ಅತ್ತ ಇತ್ತ ಸರಿದು ಹೋಗಬಹುದೆನ್ನಿ. ಕೆಲವು ವೇಳೆ ನಾನು ಬಹುಶಃ ಇತರರ ಮಾತುಗಳನ್ನು ಬಳಸಿ ಮಾತನಾಡಬಹುದು. ಆದರೆ ಹೆಚ್ಚು ಕಾಲ ಹಾಗೆ ಮಾಡಲಾರೆ. ನಾನು ಏನನ್ನು ಕಂಡೆನೋ ಅದರ ಜೀವಂತ ಪ್ರತಿಮೆ ಯಾವತ್ತೂ ನನ್ನೊಂದಿಗೆ ಇರಲಿರುವುದು, ಅದು ನನ್ನನ್ನು ಯಾವತ್ತೂ ತಿದ್ದುವುದು ಮತ್ತು ಸರಿಯಾದ ದಾರಿಯಲ್ಲಿರಿಸುವುದು. ನಾನು ಶಕ್ತಿ ಸಾಮರ್ಥ್ಯಗಳಿಂದ ತುಂಬಿದ್ದೇನೆ. ನಾನು ಪ್ರಚಾರ ಮಾಡುತ್ತಲೇ ಹೋಗುವೆನು – ಸಾವಿರ ವರ್ಷಗಳವರೆಗಾದರೂ ಸರಿಯೆ. ನಿಮಗೆ ಗೊತ್ತೆ, ನಾನು ಅವರನ್ನೆಲ್ಲ ಭ್ರಷ್ಟಗೊಳಿಸಿದ್ದೆ ಎಂಬ ವಾಸ್ತವಾಂಶವನ್ನು ಮೊದಲು ಮುಚ್ಚಿಡ ಬಯಸಿದ್ದೆ, ಆದರೆ ಅದು ತಪ್ಪಾಗಿದ್ದಿತು – ಆಗಲೇ ಮೊದಲನೆಯ ತಪ್ಪು, ನೋಡಿ! ನಾನು ಸುಳ್ಳು

ಹೇಳುತ್ತಿದ್ದೆ ಎಂದು ನಿಜ ನನ್ನ ಕಿವಿಯಲ್ಲಿ ಉಸುರಿತು. ನಿಜ ನನ್ನನ್ನು ಉಳಿಸಿತು, ನನಗೆ ಮಾರ್ಗದರ್ಶನ ಮಾಡಿತು. ಆದರೆ ಭೂಮಿಯ ಮೇಲೆ ಸ್ವರ್ಗವನ್ನು ಹೇಗೆ ನಿರ್ಮಿಸುವುದು ಎಂಬುದನ್ನು ನಾನರಿಯೆ, ಏಕೆಂದರೆ ಅದನ್ನು ಹೇಗೆ ಮಾತುಗಳಲ್ಲಿ ತಿಳಿಸಬೇಕೆಂಬುದು ನನಗೆ ಗೊತ್ತಿಲ್ಲ. ಎಚ್ಚರವಾದ ಕೂಡಲೇ ಮಾತುಗಳೆಲ್ಲ, ಕೊನೆಯ ಪಕ್ಷ ಅತ್ಯಂತ ಮುಖ್ಯವಾದ, ಅತ್ಯಗತ್ಯವಾದ, ಮಾತು ಗಳು, ಕಳೆದುಹೋದವು. ಪರವಾಗಿಲ್ಲ. ನಾನು ನನ್ನದೇ ರೀತಿಯಲ್ಲಿ ಮುಂದು ವರಿಯುತ್ತೇನೆ, ಅವಿಶ್ರಾಂತವಾಗಿ ಪ್ರಚಾರ ಮಾಡುತ್ತೇನೆ, ಏಕೆಂದರೆ ನಾನದನ್ನು ನನ್ನ ಕಣ್ಣಿನಿಂದಲೇ ಕಂಡಿದ್ದೇನೆ, ನಾನು ಕಂಡುದನ್ನು ವಿವರಿಸಲು ನನ್ನ ಕೈಲಾ ಗದಿದ್ದರೂ. ನನ್ನನ್ನು ಗೇಲಿ ಮಾಡುವಂಥವರು ಇದನ್ನು ಅರ್ಥಮಾಡಿಕೊಳ್ಳರು. ಅವರು ಹೇಳುತ್ತಾರೆ: "ಅದೊಂದು ಕನಸಷ್ಟೆ, ಹುಚ್ಚು ಮಾತು, ಮನೋ ವಿಕಲ್ಪ" ಎಹ್, ಇದು ಬುದ್ಧಿವಂತಿಕೆಯೇ? ಮತ್ತೆ ತಮ್ಮ ಬಗೆಗೇ ಎಷ್ಟೊಂದು ಜಂಭ! ಕನಸು, ಎಂದು ಅವರು ಹೇಳುತ್ತಾರೆ. ಆದರೆ ಕನಸು ಎಂದರೇನು? ನಮ್ಮ ಜೀವನವೇ ಒಂದು ಕನಸಲ್ಲವೇ? ನಾನು ಇನ್ನೂ ಮುಂದೆ ಹೋಗಿ ಹೇಳು ತ್ತೇನೆ: ಅದು ಎಂದಿಗೂ, ಎಂದಿಗೂ, ನಿಜವಾಗುವುದೇ ಬೇಡ, ಸ್ವರ್ಗ ಎಂದೂ ಉಂಟಾಗದಿರುವುದೇ ಬೇಡ (ಎಷ್ಟೇ ಆಗಲಿ, ನಾನೂ ಇದನ್ನು ತಿಳಿದಿದ್ದೇನೆ), ಏನೇ ಆಗಲಿ, ನಾನು ಪ್ರಚಾರ ಮಾಡುತ್ತಲೇ ಹೋಗುತ್ತೇನೆ. ಆದರೂ ಅದನ್ನು ಎಷ್ಟು ಸರಳವಾಗಿ ಮಾಡಲು ಸಾಧ್ಯ: ಒಂದೇ ದಿನದಲ್ಲಿ, ಒಂದೇ ಗಂಟೆಯಲ್ಲಿ ಎಲ್ಲವೂ ಕೂಡಲೇ ಸರಿಯಾಗಬಹುದು! ಮುಖ್ಯವಾಗಿ, ಪ್ರತಿಯೊಬ್ಬರೂ ಇತರರನ್ನು, ತಮ್ಮನ್ನು ಪ್ರೀತಿಸಿಕೊಳ್ಳುವಂತೆಯೇ, ಪ್ರೀತಿಸಬೇಕು. ಅದೇ ಮುಖ್ಯ ವಾದ ಸಂಗತಿ. ಅಷ್ಟೆ. ಬೇರೆ ಏನೂ ಇಲ್ಲ. ಬೇರೆ ಏನೂ ಎಷ್ಟು ಮಾತ್ರವೂ ಅವ ಶ್ಯವಿಲ್ಲ. ಆ ಕ್ಷಣದಲ್ಲೇ ಹೇಗೆ ಜೀವಿಸಬೇಕು ಅನ್ನುವುದನ್ನು ಕಂಡುಕೊಳ್ಳುವಿರಿ. ಇದು ಹಳೆಯ ಸತ್ಯವಲ್ಲದೆ ಬೇರೇನೂ ಅಲ್ಲ. ಇದನ್ನು ಆಗಲೇ ಕೋಟ್ಯಾಂತರ ಸಾರಿ ಪದೇಪದೇ ಹೇಳಲಾಗಿದೆ, ಓದಲಾಗಿದೆ. ಆದರೂ ಅದು ಬೇರು ಬಿಟ್ಟಿಲ್ಲ! "ಜೀವನಪ್ರಜ್ಞೆ, ಜೀವನಕ್ಕಿಂತ ಹೆಚ್ಚು ಉಚ್ಚವಾದುದು, ಸುಖದ ನಿಯಮಗಳ ತಿಳಿವಳಿಕೆಯು ಸುಖಕ್ಕಿಂತ ಹೆಚ್ಚು ಉಚ್ಚವಾದುದು" – ಇದರ ವಿರುದ್ಧವೇ ನಾವು ಹೋರಾಡಬೇಕಾಗಿರುವುದು! ನಾನು ಹೋರಾಡಲಿರುವೆ. ಎಲ್ಲರೂ ಬಯಸಿ ದುದೇ ಆದಲ್ಲಿ, ಎಲ್ಲವೂ ಈ ಕೂಡಲೇ ಸರಿಯಾಗುವುದು ಸಾಧ್ಯ.

* * *

ಇನ್ನು ಆ ಪುಟ್ಟ ಹುಡುಗಿಯ ವಿಷಯ ಹೇಳುವುದಾದರೆ, ನಾನು ಅವಳನ್ನು ಪತ್ತೆಹಚ್ಚಿದೆ... ನಾನು ನನ್ನ ದಾರಿಯನ್ನು ಹಿಡಿದೇ ಹೋಗುವೆ! ಹೌದು, ಹೋಗುವೆ!

"ಈ ಭೂಮಿಯ ಮೇಲೆ ವಾಸಿಸಿಕೊಂಡಿರುವ ಸಾಮರ್ಥ್ಯವನ್ನು ಕಳೆದುಕೊಳ್ಳದೆಯೇ ಜನ ಸುಂದರವಾಗಿರಲು ಸಂತಸದಿಂದಿರಲು ಸಾಧ್ಯ – ಇದನ್ನು ನಾನು ಕಂಡಿದ್ದೇನೆ, ತಿಳಿದಿದ್ದೇನೆ. ದುಷ್ಟತನ ಮನುಷ್ಯನ ಸಹಜ ಸ್ಥಿತಿ ಎಂದು ನಾನು ನಂಬಲಾರೆ, ನಂಬುವುದಿಲ್ಲ" – 'ವಿಚಿತ್ರ ವ್ಯಕ್ತಿಯೊಬ್ಬನ ಕನಸು' ಎಂಬ ಕಥೆಯಿಂದ ತೆಗೆದುಕೊಂಡಿರುವ ಫ್ಯೋದರ್ ದಸ್ತಯೇವ್‌ಸ್ಕಿಯವರ ಈ ಮಾತುಗಳು, ಈ ಸಂಕಲನದ ಪುಟಗಳಲ್ಲಿ ವ್ಯಕ್ತಗೊಳ್ಳುವ ಈ ಮಹಾನ್ ಸಾಹಿತಿಯ ಲೋಕ ಮನೋಧರ್ಮವನ್ನು ಅತ್ಯಂತ ಯಥಾವತ್ತಾಗಿ ಹಾಗೂ ಸಂಪೂರ್ಣವಾಗಿ ತಿಳಿಸುತ್ತವೆ. ಈ ಸಂಕಲನವು 'ಬಡ ಜನರು', 'ಶ್ವೇತ ರಾತ್ರಿಗಳು', 'ಪುಕ್ಕಲು ಹೃದಯಿ,' 'ಸಾಧು ಸ್ವಭಾವದವಳು,' 'ವಿಚಿತ್ರ ವ್ಯಕ್ತಿಯೊಬ್ಬನ ಕನಸು' ಎಂಬ ಕಥೆಗಳನ್ನು ಒಳಗೊಂಡಿದೆ. ಇವು ಈ ಲೇಖಕರ ಈ ಬಗೆಯ ರಚನೆಗಳಲ್ಲಿ ಉತ್ತಮವಾದವು. ಇಲ್ಲಿ ನೀಡಿರುವ ಕಥೆಗಳು ದಸ್ತಯೇವ್‌ಸ್ಕಿಯವರ ಸೃಜನಾತ್ಮಕ ಕಾರ್ಯಾವಧಿಯೆಲ್ಲವನ್ನೂ (1846-1880) ಆವರಿಸುತ್ತವೆ. ಇವು ಈ ಮಹಾನ್ ಲೇಖಕರ ಪ್ರತಿಭೆಯ ವಿವಿಧ ಮುಖಗಳ ದರ್ಶನ ಮಾಡಿಸುತ್ತವೆ.

ಈ ಗ್ರಂಥವು ರಷ್ಯನ್ ಫೆಡರೇಷನ್ನ ಖ್ಯಾತ ಕಲಾವಿದ ಅಂದ್ರೇಯ್ ಗೊಂಚರೋವ್‌ರವರು ರಚಿಸಿರುವ ಚಿತ್ರಗಳನ್ನೂ ಒಳಗೊಂಡಿದೆ.

ರಾದುಗ ಪ್ರಕಾಶನ
ಮಾಸ್ಕೋ